ಮನುಷ್ಯ ಜಾತಿ
ತಾನೊಂದೆ ವಲಂ

ಡಾ. ಪರಮೇಶ್ವರಿ ಮೃತ್ಯುಂಜಯ ಹಿರೇಮಠ

ಶಿವಾಗಮಗಳು ಮತ್ತು ವಚನ ಸಾಹಿತ್ಯ



ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು

ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮
ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ
ಭಗವತ್ಪಾದರು ಬಾಳೆಹೊನ್ನೂರು - ದತ್ತಿ ಪ್ರಕಟಣೆ

ಶಿವಾಗಮಗಳು ಮತ್ತು ವಚನ ಸಾಹಿತ್ಯ

ಡಾ. ಪರಮೇಶ್ವರಿ ಮೃತ್ಯುಂಜಯ ಹಿರೇಮಠ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦೦೧೮

SHIVAGAMAGALU MATTHU VACHANA SAAHITYA- a Study on Shivagamas and Vachana literature in Kannada by **Dr. Parameshwari Mruthyunjaya Hiremath** & published by **Kannada Sahitya Parishattu**, Pampa Mahakavi Road, Chamarajapete, Bengaluru - 560018 : Pages : 686 + xix : Rs. 400=00 : **2015**

ಪ್ರಥಮ ಮುದ್ರಣ : ೨೦೧೫
ಪ್ರತಿಗಳು : ೧೦೦೦
ಬೆಲೆ : ನಾಲ್ಕುನೂರು ರೂಪಾಯಿಗಳು

ಮುಖಪುಟ ವಿನ್ಯಾಸ : ಅಪಾರ

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಶತಮಾನೋತ್ಸವವನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಿಕೊಳ್ಳುತ್ತಿದೆ. ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯೆಂದು ಮೆಚ್ಚುಗೆಗೆ ಪಾತ್ರವಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ-ಅಕ್ಷರ-ಕ್ರಿಯೆಗಳ ಮೂಲಕ ಸ್ಪಂದಿಸುತ್ತಿದೆ.

ನಾಡಿನುದ್ದಗಲಕ್ಕೂ ಸಾಹಿತ್ಯ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಪರಿಷತ್ತು ಕನ್ನಡ ಭಾಷೆ-ಸಂಸ್ಕೃತಿ ಬೆಳವಣಿಗೆಗೆ ಶ್ರಮಿಸುತ್ತಾ ಬಂದಿದೆ. ಪುಸ್ತಕ ಪ್ರಕಟಣೆಯು ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ-(ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲುಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ. ಈ ಕಾರ್ಯದಲ್ಲಿ ದತ್ತಿದಾನಿಗಳೂ ಪರಿಷತ್ತಿನೊಂದಿಗೆ ಕೈಜೋಡಿಸಿದ್ದಾರೆ.

ಈ ಕೃತಿಯು ಬಾಳೆಹೊನ್ನೂರಿನ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ದತ್ತಿನಿಧಿ ಪ್ರಕಟಣೆಯಾಗಿರುತ್ತದೆ. ಪೂಜ್ಯಶ್ರೀಗಳ ಸಾಹಿತ್ಯ ಸೇವೆಗಾಗಿ ನಾನು ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಡಾ. ಪರಮೇಶ್ವರಿ ಮೃತ್ಯುಂಜಯ ಹಿರೇಮಠ ಅವರು ತಮ್ಮ ಈ ಕೃತಿಯನ್ನು ದತ್ತಿ ಪ್ರಕಟಣೆಗೆ ನೀಡಿ ಉಪಕರಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು. ಈ ವಿದ್ವತ್ ಗ್ರಂಥವನ್ನು ಓದುಗರು ಆದರದಿಂದ ಸ್ವೀಕರಿಸಿರುವರೆಂದು ನಂಬಿರುತ್ತೇನೆ.

ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟದ ಸಿಬ್ಬಂದಿಗೆ ಹಾಗೂ ಈ ಪ್ರಕಟಣೆಗೆ ಸಹಕರಿಸಿದ ಪ್ರಕಟಣಾ ಸಮಿತಿಯ ಎಲ್ಲ ಸದಸ್ಯರಿಗೆ ನನ್ನ ಕೃತಜ್ಞತೆಗಳು.

ದಿನಾಂಕ : ೦೮-೦೬-೨೦೧೫

ಪುಂಡಲೀಕ ಹಾಲಂಬಿ
ಅಧ್ಯಕ್ಷರು

॥ ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು ॥



ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗಾವತಾರ

॥ ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು ॥

ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮
ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ
ಶಿವಾಚಾರ್ಯ ಭಗವತ್ಪಾದರು
ಬಾಳೆಹೊನ್ನೂರು – ೫೭೭ ೧೧೨

ಶುಭಾಶೀರ್ವಾದ ಸಂದೇಶ

ಭಾರತ ಪುಣ್ಯಭೂಮಿ, ಧರ್ಮದರ್ಶನಗಳ ನೆಲೆಬೀಡು. ಧರ್ಮ, ಸಂಸ್ಕೃತಿ ಮತ್ತು ಪರಂಪರೆಗೆ ಹೆಚ್ಚು ಮಹತ್ವ ಕೊಟ್ಟ ನಾಡಿದು. ಹಲವಾರು ಮತ, ಧರ್ಮ ಮತ್ತು ಸಂಪ್ರದಾಯ ಪರಂಪರೆಗಳನ್ನು ಇಲ್ಲಿ ಕಾಣಬಹುದು. ವೀರಶೈವ ಧರ್ಮ ಅತ್ಯಂತ ಪ್ರಾಚೀನವಾದ ಧರ್ಮ. ವೀರಶೈವ ಧರ್ಮದ ಆದರ್ಶ ಮೌಲ್ಯಗಳು ಎಲ್ಲರಿಗೂ ದಾರಿದೀಪ. ಸಕಲರ ಬಾಳಿಗೂ ಬೆಳಕನ್ನು ತೋರಿದ ಕೀರ್ತಿ ವೀರಶೈವ ಧರ್ಮಕ್ಕೆ ಸಲ್ಲುತ್ತದೆ.



ಪರಶಿವನ ಪಂಚಮುಖಗಳಿಂದ ಆವಿರ್ಭವಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರು ವೀರಶೈವ ಧರ್ಮವನ್ನು ಭೂಮಂಡಲದಲ್ಲಿ ಸ್ಥಾಪಿಸಿದರು. ವಿಶ್ವಬಂಧುತ್ವ ಸಾರಿದ ವೀರಶೈವ ಧರ್ಮ ಸಿದ್ಧಾಂತವನ್ನು ಕೊಟ್ಟ ಕೀರ್ತಿ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ. ಗಂಡು ಹೆಣ್ಣು, ಉಚ್ಚ ನೀಚ ಮತ್ತು ಬಡವ ಬಲ್ಲಿದ ಎನ್ನದೇ ಎಲ್ಲರಿಗೂ ಧಾರ್ಮಿಕ ಸಂಸ್ಕಾರ ಕಲಿಸಿಕೊಟ್ಟ ಕೀರ್ತಿ ಆಚಾರ್ಯ ಪರಂಪರೆಗೆ ಸಲ್ಲುತ್ತದೆ.

ವೀರಶೈವ ಧರ್ಮದ ಬೇರುಗಳು ಶಿವಾಗಮಗಳಲ್ಲಿವೆ. ಇಪ್ಪತ್ತೆಂಟು ಶಿವಾಗಮಗಳಲ್ಲಿ ವೀರಶೈವ ಧರ್ಮದ ವೈಶಿಷ್ಟ್ಯತೆಯನ್ನು ಕಾಣಬಹುದು. ಶಿವಾಗಮಗಳು ವೀರಶೈವ ಧರ್ಮದ ದಾರ್ಶನಿಕ ತತ್ವ ಸಿದ್ಧಾಂತಗಳನ್ನು ಸಮಗ್ರವಾಗಿ ಪ್ರತಿಪಾದಿಸುವ ಅಮೂಲ್ಯ ಕೃತಿಗಳು. ಶಿವಾಗಮಗಳ ಉತ್ತರ ಭಾಗದಲ್ಲಿ ಶಿವಜ್ಞಾನದ ಬೆಳಕನ್ನು ಕಾಣಬಹುದು. ಶಿವಾಗಮಗಳು ವಚನ ಸಾಹಿತ್ಯದ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿವೆ. ಶಿವಾಗಮಗಳ ಆಳವಾದ ಅಧ್ಯಯನ ಮಾಡಿದವರಿಗೆ ವೀರಶೈವ ಧರ್ಮದ ಸಮಗ್ರತೆ ಮತ್ತು ವೈಶಿಷ್ಟ್ಯತೆ ಕಾಣಲು ಸಾಧ್ಯ. ಹಲವಾರು ವಿದ್ವಾಂಸರು ಶಿವಾಗಮಗಳ ಸಾಹಿತ್ಯದ ಮೇಲೆ ಹೊಸಬೆಳಕು ಮೂಡಿಸಿದ್ದನ್ನು ನೋಡಬಹುದು.

"ಶಿವಾಗಮಗಳು ಮತ್ತು ವಚನ ಸಾಹಿತ್ಯ" ಈ ವಿಷಯದಲ್ಲಿ ಬಾಗಲಕೋಟ ಜಿಲ್ಲೆ ಬದಾಮಿ ತಾಲ್ಲೂಕು ಗುಳೇದಗುಡ್ಡದ ಡಾ॥ ಪರಮೇಶ್ವರಿ ಮೃತ್ಯುಂಜಯ್ಯ ಹಿರೇಮಠ ಅವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಆಳವಾದ ಸಂಶೋಧನಾ ಅಧ್ಯಯನ ಮಾಡಿ ಈ ಉತ್ಕೃಷ್ಟ ಪ್ರಬಂಧ ರಚಿಸಿದ್ದಾರೆ. ಶಿವಾಗಮಗಳು ಮತ್ತು ವಚನ ಸಾಹಿತ್ಯದ ಮೇಲೆ ತೌಲನಿಕ ಅಧ್ಯಯನ ಮಾಡಿ ಧಾರ್ಮಿಕ, ಸಾಮಾಜಿಕ, ಸೈದ್ಧಾಂತಿಕ ಮತ್ತು ಮಹಿಳಾ ಪರ ಚಿಂತನಗಳನ್ನು ಈ ಕೃತಿಯಲ್ಲಿ ಕಾಣಬಹುದು. ೬೮೦ ಪುಟಗಳ ಸುದೀರ್ಘವಾದ ಪ್ರಬಂಧದಲ್ಲಿ ವೀರಶೈವ ಧರ್ಮ ಸಂಸ್ಕೃತಿಯ ಆದರ್ಶ ಮೌಲ್ಯಗಳ ಬಗೆಗೆ ಬೆಳಕು ಬೀರುವ ಮಹತ್ಕಾರ್ಯ ಮಾಡಿದ್ದನ್ನು ಕಂಡು ಅತ್ಯಂತ ಸಂತೋಷವನ್ನು ಉಂಟುಮಾಡುತ್ತದೆ.

ಈ ಅಪೂರ್ವ ಕೃತಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಮತ್ತು ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಪೀಠ ಕೊಡಮಾಡಿದ ದತ್ತಿ ನಿಧಿಯಲ್ಲಿ ಪ್ರಕಟಗೊಂಡಿರುವುದು ಅತ್ಯಂತ ಸಂತೋಷವನ್ನು ತಂದಿದೆ. ಇದಕ್ಕಾಗಿ ಶ್ರಮಿಸಿದ ಕೃತಿಕಾರರಿಗೂ ಮತ್ತು ಪ್ರಕಾಶಕರಿಗೂ ಶುಭ ಹಾರೈಕೆಗಳು.

ಪರಮದಯಾಳು ಶ್ರೀ ಪಾರ್ವತೀ ಪರಮೇಶ್ವರರು ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯರು ಸರ್ವರಿಗೂ ಮಂಗಲಪರಂಪರೆಯನ್ನು ಅನುಗ್ರಹಿಸಲಿ.

ಶುಭಾಶೀರ್ವಾದಗಳೊಂದಿಗೆ,

ಶ್ರೀ ರಂಭಾಪುರೀ ಜಗದ್ಗುರುಗಳು,
ಬಾಳೆಹೊನ್ನೂರು,
ಮಲಯಾಚಲ ತಪೋಭೂಮಿ
ಶ್ರೀ ಜಗದ್ಗುರು ರಂಭಾಪುರೀ
ವೀರಸಿಂಹಾಸನ ಮಹಾ ಸಂಸ್ಥಾನಪೀಠ.

ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ, ಬಾಳೆಹೊನ್ನೂರು

ಅಧ್ಯಕ್ಷರ ನುಡಿ

ವಿಶ್ವದಲ್ಲಿ ಭಾರತ ಸಾಂಸ್ಕೃತಿಕ ಕ್ಷೇತ್ರದ ಜಗದ್ಗುರು. ಆಧ್ಯಾತ್ಮದ ತೊಟ್ಟಿಲು. ಧರ್ಮ-ದರ್ಶನಗಳ ಉಗಮ ಸ್ಥಾನ. ಹಲವು ಧರ್ಮಗಳಿಗೂ, ಅಲ್ಲದೆ, ಮತ-ಪಂಥ-ಪಂಗಡ-ಆಚಾರ-ವಿಚಾರವನ್ನು ಪಾಲಿಸುವವರಿಗೂ ಇದು ಆಶ್ರಯ ತಾಣ. ಸರ್ವಸಮಾನತೆಯ ಶಾಂತಿಭೂಮಿ. ಇಲ್ಲಿ ಹಲವು ಪುಣ್ಯ ಪುರುಷರು ಜ್ಞಾನಿಗಳು ದಾರ್ಶನಿಕರು ಋಷಿಪುಂಗವರು ಜನ್ಮವೆತ್ತಿ ತಮ್ಮ ಆಧ್ಯಾತ್ಮದ ದಿವ್ಯ ಜ್ಞಾನದ ಪ್ರಭೆಯನ್ನು ಧಾರೆಯೆರೆದಿದ್ದಾರೆ. ಅವುಗಳ ಕ್ರೋಢೀಕರಣದ ಮಹಾಸಂಪತ್ತೇ ವೇದಾಗಮಗಳು. ಇವು ಭಾರತೀಯ ಭವ್ಯ ಪರಂಪರೆಯ ಮೂಲ ಆಕರಗಳು. ವೇದಗಳ ಆಧಾರವಾಗಿ ಹಿಂದೂಧರ್ಮ ಬೆಳೆದಿದೆ. ಅದರಂತೆಯೇ ಆಗಮಗಳ ಆಧಾರವನ್ನು ಪಡೆದು ಶೈವಧರ್ಮವು ಇಲ್ಲಿ ಪ್ರಗಲ್ಭಗೊಂಡಿದೆ. ಶಿವನನ್ನೆ ಅವರು ಆರಾಧ್ಯ ದೈವತನಾಗಿ ಮಾಡಿ, ಆತನ ನಾಮವನ್ನು ಜಪಿಸಿದರು. ಶೈವರಲ್ಲಿ ಕೆಲ ಪಂಗಡಗಳುಂಟು. ಅಂತೆಯೇ, ವೀರಶೈವವು ಅವನನ್ನೇ ಆರಾಧಿಸಲ್ಪಡುವ, ಶೈವ ಧರ್ಮದ ಸ್ವತಂತ್ರ ಶಿಖರವಾಗಿ ಮೆರೆದ ವಿಶ್ವಮಾನೀಯ ಧರ್ಮ. ಇಲ್ಲಿ ವಿಶ್ವಮಾನ್ಯ ಮೌಲ್ಯಗಳನ್ನು ಗುರುತಿಸಬಹುದು. ಸಾರ್ವತ್ರಿಕ ಧರ್ಮದ ಛಾಯೆಯೂ ಕೂಡಾ ಬೆಳಕು ಕಂಡಿದೆ. ಅದು ಸಾಮಾಜೋದಾರ್ಶನಿಕ ಗುಣಗಳನ್ನು ಒಳಗೊಂಡಿದೆ. ಆದಾಗ್ಯೂ ತನ್ನದೇ ಆದ ವೈಶಿಷ್ಟ್ಯಗಳನ್ನು ಒಳಗೊಂಡ ಲೋಕಪೂಜ್ಯ ಪ್ರಾಚೀನ ಧರ್ಮವಿದು.

ಶೈವ-ವೀರಶೈವ ಧರ್ಮ-ದರ್ಶನಗಳ ಕುರಿತಾಗಿ ವಿಪುಲವಾದ ಮಾಹಿತಿ ನಮಗೆ ಲಭ್ಯವಾಗುವುದು ಶಿವಾಗಮಗಳಲ್ಲಿ. ಇವುಗಳು ಪಠ್ಯಪುಸ್ತಕಗಳಂತೆ ಕಾರ್ಯನಿರ್ವಹಿಸಿ, ಪ್ರೇರಕವಾಗಿ, ಪೋಷಕವಾಗಿ ವೀರಶೈವಕ್ಕೆ ಬೆನ್ನೆಲುಬಾಗಿವೆ. ಶೈವ ಸಂಪ್ರದಾಯಕ್ಕೆ ಮೀಸಲಾದ ಗ್ರಂಥಗಳಿವು. ತಾಯಿ ಬೇರಿನಂತೆ ಕಾರ್ಯ ನಿರ್ವಹಿಸಿದ ಕೃತಿಗಳಿವು. ಇವುಗಳ ಕುರಿತು ಆಗಾಗ್ಗೆ ಹೊಸ ಹೊಸ ಸಂಶೋಧನೆಗಳು ಬೆಳಕು ಚೆಲ್ಲಿವೆ, ಚೆಲ್ಲಬೇಕು. ಕೆಲ ಸಂಶೋಧನೆಗಳು ನಡೆದಿವೆ ಇನ್ನೂ ನಡೆಯುತ್ತಲೂ ಇವೆ. ಶಿವಾಗಮಗಳಲ್ಲಿಯ ವಿಚಾರಗಳನ್ನು ಶೋಧಿಸಿ ಪರಿಷ್ಕರಿಸುವ ಕೆಲಸ ಆಗಬೇಕು. ಅವುಗಳು ಸಾರುವ ಸತ್ಯಗಳು ದೇಶ-ಕಾಲಾತೀತವಾದವುಗಳು. ಹೀಗಾಗಿ ಅವು ಸಾರ್ವಕಾಲೀಕ ಸತ್ಯಗಳಾಗಿ ಪರಿಣಮಿಸಿವೆ. ಇಪ್ಪತ್ತೆಂಟು ಶಿವಾಗಮಗಳು ವೀರಶೈವ ಸಂಸ್ಕೃತಿಯ ಅನಾವರಣ ಮಾಡುವ ಜ್ಞಾನ ಸಂಪತ್ತುಗಳೆಂಬುದನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ಪ್ರತಿಪಾದಿಸಿದೆ.

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥

ಶಿವಾಗಮಗಳ ಪೂರ್ವಭಾಗದ (ಮೊದಲರ್ಧ) ವಿಚಾರಗಳು ಶೈವ ಸಂಸ್ಕೃತಿಯನ್ನು ಅನಾವರಣಗೊಳಿಸಿದರೆ, ಉತ್ತರಭಾಗವು (ನಂತರದರ್ಧ) ವೀರಶೈವ ಮತಕ್ಕೆ ಮೀಸಲಾಗಿದೆ. ಅಲ್ಲದೆ, ವೀರಶೈವ ಸಂಸ್ಕೃತಿಯು ಉಳಿದೆಲ್ಲ ಮತಗಳಿಗಿಂತಲೂ ಶ್ರೇಷ್ಠವೆಂಬುದನ್ನು ಅದಕ್ಕೆ ಸಾದೃಶವಾದ ಮತ ಲೋಕದಲ್ಲಿ ಇರುವುದಿಲ್ಲವೆಂಬ ಉತ್ಪ್ರೇಕ್ಷೆಯ ಮಾತನ್ನು ಕೂಡಾ ನಾವು ಪಾರಮೇಶ್ವರ ಆಗಮದಲ್ಲಿ ಕಾಣಬಹುದು. **ನ ವೀರಶೈವ ಸದೃಶಂ ಮತಮಸ್ತಿ ಜಗತ್ರಯೇ। ಸರ್ವಭೋಗಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಂ॥** ಶಿವಸಾಯುಜ್ಯವನ್ನುಂಟು ಮಾಡುವಲ್ಲಿ ಸದಾನುಕೂಲವಾಗುವ ಮಾರ್ಗವನ್ನು ಬೋಧಿಸಿದೆ ಎಂದು ಸಮರ್ಥಿಸಿಕೊಂಡಿದೆ.

ಅಂತೆಯೇ 'ಆಗಮ' ವೆಂಬ ಶಬ್ದದ ವ್ಯುತ್ಪತ್ತಿಯು ಬಹು ಅರ್ಥಪೂರ್ಣ. **ಆಗತಂ ಶಿವವಕ್ತ್ರೇಭ್ಯೋ ಗತಂ ಚ ಗಿರಿಜಾನನೇ ಮತಂ ಚ ವಾಸುದೇವಸ್ಯ ತಸ್ಮಾದಾಗಮ ಉಚ್ಯತೇ** ಪರಶಿವನ ಪಂಚಮುಖಗಳಿಂದ ಬಂದುದೇ ಆಗಮ. ಅದು ಶಿವನವಾಣಿ– ಶಿವಾಮೃತ. ಆ ಸಂದೇಶವನ್ನು ಪಾರ್ವತಿಗೆ ಉಪದೇಶಿಸಿದನೆಂಬುದು ಕೂಡಾ ಅಷ್ಟೇ ಮಹತ್ವದ್ದು. ಇವುಗಳು ಅಂತರಂಗದ ಜ್ಞಾನವನ್ನು ನೀಡುವ ಬೆಳಕಿನ ಕಿರಣಗಳು ಮತ್ತು ಜ್ಞಾನ ಅಡಕವಾಗುವ, ಪರಿಸಮಾಪ್ತಗೊಳಿಸುವ ಅಂಶಗಳೆಂಬ ಅರ್ಥವನ್ನು ಪಡೆದುಕೊಂಡಿವೆ. ಪ್ರಸ್ತುತ ಸಂಶೋಧನ ಕೃತಿಯಲ್ಲಿ ಆಗಮೋಕ್ತ ವೀರಶೈವ ನಿಲುವುಗಳನ್ನು ವಚನೋಕ್ತ ನಿಲುವುಗಳೊಂದಿಗೆ ತೌಲನಿಕವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಗ್ರಂಥ ಕರ್ತೃ ಮಾಡಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ ಶಿವಶರಣರು ವೀರಶೈವ ಸಂಸ್ಕೃತಿಗೆ ಮಹಾನ್ ಕೊಡುಗೆಯನ್ನೆ ನೀಡಿದ್ದಾರೆ. ಅವರು ಜನರಾಡುವ ಕನ್ನಡ ಭಾಷೆಯಲ್ಲಿ ಧರ್ಮ–ಆಧ್ಯಾತ್ಮ–ದರ್ಶನದ ವಿಚಾರಗಳನ್ನು ಲೋಕಕ್ಕೆ ನೀಡಬೇಕೆಂಬ ಭಾವನೆಯಿಂದ, ಸಂಸ್ಕೃತ ಭಾಷೆಯ ಮೇಧಾವಿಗಳಾದ ಕೆಲ ಶರಣರು, ವೇದ–ಆಗಮ ಮುಂತಾದ ಗ್ರಂಥಗಳನ್ನು ಅವಲೋಕಿಸಿ ವಚನಗಳ ರೂಪದಲ್ಲಿ ಲೋಕಾರ್ಪಣೆ ಮಾಡಿದ್ದು ಇತಿಹಾಸ. ಅವುಗಳು ಜನರಾಡುವ ಭಾಷೆಯಲ್ಲಿ ರಚನೆಗೊಂಡ ಕಾರಣ ಶರವೇಗದಲ್ಲಿ ಹೆಚ್ಚು ಪ್ರಚಾರವನ್ನು ಪಡೆದವು. ಯಾವುದೇ ವಿಚಾರಗಳು ಜನರ ನುಡಿಮಾಧ್ಯಮದ ಮೂಲಕ ಹೊರಬಂದಾಗ ಹೊಸ ರೂಪವನ್ನು, ಹೆಚ್ಚು ಪ್ರಚಾರ–ಪ್ರಸಾರವನ್ನು ಪಡೆಯಲು ಸಾಧ್ಯವಾಗುವದೆಂಬುದಕ್ಕೆ ವಚನಗಳೇ ಸಾಕ್ಷಿ.

ಅಂತೆಯೇ, ಶರಣರ ವಚನಗಳು ಹೇಗೆ ಶಿವಾಗಮಗಳ ವಿಚಾರಗಳಿಗೆ ಹತ್ತಿರವಾಗಿ ದಾರ್ಶನಿಕ, ಧಾರ್ಮಿಕ, ತಾತ್ವಿಕ, ಸಾಮಾಜಿಕ, ಸ್ತ್ರೀಪರ ಚಿಂತನೆಗಳನ್ನು ಮಾಡಿವೆ ಎಂಬ ಅಧ್ಯಯನವನ್ನು ಈ ಶೋಧ ಕೃತಿಯಲ್ಲಿ ಡಾ. ಪರಮೇಶ್ವರಿ ಮೃತ್ಯುಂಜಯ ಹಿರೇಮಠ ಅವರು ಮಾಡಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ **ಶಿವಾಗಮಗಳು ಮತ್ತು ವಚನ ಸಾಹಿತ್ಯ**ವೆಂಬ ತೌಲನಿಕ ಅಧ್ಯಯನ ಸಂಶೋಧನ ಮಹಾಪ್ರಬಂಧವನ್ನು ಅರ್ಪಿಸಿ ಪಿಎಚ್.ಡಿ. ಪದವಿಯನ್ನು ಪಡೆದವರಾಗಿದ್ದಾರೆ. ಅವರು ತುಂಬಾ ಶ್ರಮವಹಿಸಿ ಸುಮಾರು ೬೮೦ ಪುಟಗಳ

ಸುದೀರ್ಘ ಬರವಣಿಗೆಯ ಮೂಲಕ, ಬಹುತೇಕ ಎಲ್ಲ ವಿಷಯಗಳನ್ನು ಒಳಗೊಳ್ಳುವಂತೆ ತಮ್ಮ ಕಾರ್ಯವನ್ನು ನಿಭಾಯಿಸಿದ್ದಾರೆ. ಸಂಶೋಧನೆ ಕಾರ್ಯ ಆಲದ ಮರದಂತೆ ಅದಕ್ಕೆ ಕೊನೆ ಎಂಬುದೇ ಇಲ್ಲ. ಹಾಗೇ ಮುಂದೇ ಸಾಗಲೇಬೇಕು. ಮತ್ತೆ ಸಂಶೋಧನ ವ್ಯಾಸಂಗಕ್ಕೆ ತೊಡಗಿದಾಗ ಮತ್ತು ಹೊಸ ವಿಷಯ ಲಭ್ಯವಾಗಬಹುದು. ಇದೊಂದು ಉತ್ತಮವಾದ ಕೃತಿ. ವೀರಶೈವ ಧರ್ಮ-ದರ್ಶನಕ್ಕೆ ನೀಡಿದ ವಿಶಿಷ್ಟ ಕೊಡುಗೆ. ಅವರ ಶ್ರಮ ಸಾರ್ಥಕವಾಗಿದೆ. ಅವರ ಮಹತ್ಕಾರ್ಯವನ್ನು ಗಮನಿಸಿ, ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ವೀರಸೋಮೇಶ್ವರ ಜಗದ್ಗುರುಗಳು, ಈ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿಗೆ, ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠದಿಂದ ಕೊಡಮಾಡಿದ ದತ್ತಿ ನಿಧಿಯಿಂದ ಪ್ರಕಟಗೊಳಿಸಲು ಅಪ್ಪಣೆ ಕೊಡಿಸಿದ್ದು ವಿಶೇಷ. ಇದಕ್ಕಾಗಿ ಶ್ರಮಿಸಿದ ಸರ್ವರಿಗೂ ಈ ಕೃತಿಯ ಲೇಖಕರಿಗೂ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಆಡಳಿತ ಮಂಡಳಿಗೂ ಶುಭವನ್ನು ಕೋರುತ್ತೇವೆ.

ಡಾ.ಕೊಟ್ಟೂರ ಬಸವೇಶ್ವರ ಶಿವಾಚಾರ್ಯರು
ಜುಕ್ತಿಹಿರೇಮಠ,

ನಿವೇದನೆ

ಪ್ರಸ್ತುತ **"ಶಿವಾಗಮಗಳು ಮತ್ತು ವಚನ ಸಾಹಿತ್ಯ"** ಎಂಬ ಈ ಗ್ರಂಥವು ಡಾಕ್ಟರೇಟ ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಸಂಶೋಧನಾ ಮಹಾಪ್ರಬಂಧ. ಗುರುಹಿರಿಯರ ಕೃಪಾಶೀರ್ವಾದ ಹಾಗೂ ಮಾರ್ಗದರ್ಶನದ ಫಲವಾಗಿ ಮೂಡಿಬಂದ ಈ ನನ್ನ ಸಂಶೋಧನಾ ಮಹಾಪ್ರಬಂಧವನ್ನು ನೋಡಿ ತುಂಬಾ ಹರ್ಷಿತರಾದ ಬಾಳೆಹೊನ್ನೂರಿನ **ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು** ತಮ್ಮ ದತ್ತಿನಿಧಿಯಿಂದಲೇ ಈ ಗ್ರಂಥವನ್ನು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟನೆ ಮಾಡಿಸುವುದರ ಜೊತೆಗೆ ತಮ್ಮ ಕೃಪಾಶೀರ್ವಾದದ ನುಡಿಗಳಿಂದ ಈ ಕೃತಿಗೆ ಧನ್ಯತೆಯನ್ನು ತಂದಿತ್ತು ನನ್ನನ್ನು ಕೃತಾರ್ಥರನ್ನಾಗಿಸಿದ್ದಾರೆ. ನಿರಂತರ ಧರ್ಮಜಾಗೃತಿಯ ಹರಿಕಾರರು, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಗತಿಪರ ಕಾರ್ಯಗಳ ಮಹಾನ್ ನೇತಾರರೂ, ಶ್ರೀ ಪೀಠದ ಘನತೆ, ಗೌರವ ಪರಂಪರೆಗಳನ್ನು ನೂರ್ಮಡಿಸಿದ ಶ್ರೀ ಮಹಾಸನ್ನಿಧಿಯವರಿಗೆ ನನ್ನ ಅನಂತಾನಂತ ಭಕ್ತಿಪೂರ್ವಕ ಪ್ರಣಾಮಗಳು.

ಈ ಗ್ರಂಥದ ಪ್ರಕಟನಾ ಕಾರ್ಯದಲ್ಲಿ ಅನೇಕ ಉಪಯುಕ್ತ ಸಲಹೆ ಸೂಚನೆ ಹಾಗೂ ಮಾರ್ಗದರ್ಶನಗೈಯುವುದರೊಂದಿಗೆ ತಮ್ಮ ಅಮೂಲ್ಯವಾದ ಅಧ್ಯಕ್ಷೀಯ ನುಡಿಗಳ ಮೂಲಕ ಶುಭಹಾರೈಸಿದ ಶ್ರೀಪೀಠದ ಶ್ರೀಮದ್ ವೀರಶೈವ ಸದ್ಬೋಧನ ಸಂಸ್ಥೆಯ ಅಧ್ಯಕ್ಷರೂ, ಕರ್ನಾಟಕ ವಿಶ್ವವಿದ್ಯಾಲಯದ ತತ್ವಶಾಸ್ತ್ರ ವಿಭಾಗದ ಪ್ರಾಧ್ಯಾಪಕರೂ ಹಾಗೂ ಮುಖ್ಯಸ್ಥರೂ ಆಗಿರುವ ಪರಮಪೂಜ್ಯ **ಡಾ. ಕೊಟ್ಟೂರ ಬಸವೇಶ್ವರ ಶಿವಾಚಾರ್ಯರು ಜುಕ್ತಿಹಿರೇಮಠ** ಅವರಿಗೆ ಭಕ್ತಿಪೂರ್ವಕ ಪ್ರಣಾಮಗಳು.

ಕನ್ನಡ ನಾಡುನುಡಿಯ ಸಂರಕ್ಷಣೆಯನ್ನು ತನ್ನ ಮೂಲೋದ್ದೇಶವನ್ನಾಗಿಸಿಕೊಂಡು ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಸುಸಂದರ್ಭದಲ್ಲಿ ಈ ನನ್ನ ಸಂಶೋಧನಾ ಮಹಾಪ್ರಬಂಧವನ್ನು ಗ್ರಂಥರೂಪದಲ್ಲಿ ಪ್ರಕಟಗೊಳಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ನಾನು ಸದಾ ಚಿರಋಣಿಯಾಗಿದ್ದೇನೆ. ಕರ್ನಾಟಕದಾದ್ಯಂತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸುತ್ತಾ ಅನೇಕ ಪುಸ್ತಕಗಳನ್ನು ಪ್ರಕಟನೆಗೈದು ಕನ್ನಡ ಸಾಹಿತ್ಯವನ್ನು ನಾಡಿನ ಮೂಲೆಮೂಲೆಗಳಿಗೆ ಹಬ್ಬಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಾಧನೆ ಅವಿಸ್ಮರಣೀಯವಾದುದು. ಕಾರಣ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೂ, ಸಮಸ್ತ ಕಾರ್ಯನಿರ್ವಾಹಕ ಬಳಗಕ್ಕೂ ನನ್ನ ತುಂಬು ಹೃದಯದ ವಂದನೆಗಳು.

ಧಾರ್ಮಿಕ ಮನೋವೃತ್ತಿಯವರೂ, ಧರ್ಮಾಭಿಮಾನಿಗಳೂ ಆದ ನನ್ನ ತಂದೆಯವರ ಆಶಯದಂತೆ ವೀರಶೈವ ಧರ್ಮದ ಬಗ್ಗೆಯೇ ಅಧ್ಯಯನ ಮಾಡಬೇಕೆಂಬುದು ನನ್ನ ಬಯಕೆಯಾಗಿತ್ತು. ಕಾರಣ ಸ್ವಗ್ರಾಮ ಗುಳೇದಗುಡ್ಡದ ಅಮರೇಶ್ವರ ಶ್ರೀಮಠಕ್ಕೆ ಆಗಮಿಸಿದ ಶ್ರೀಮದ್‌ಕಾಶಿ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ದರ್ಶನಕ್ಕೆ ಹೋದಾಗ ಅವರಿಗೆ ನನ್ನ ಬಯಕೆಯನ್ನು ಬಿನ್ನಯಿಸಿದೆ. ಅವರು ತುಂಬಾ

ಸಂತೋಷಗೊಂಡು ವೀರಶೈವ ಧರ್ಮದ ಹಿನ್ನಲೆಯಲ್ಲಿ "ಶಿವಾಗಮಗಳು ಮತ್ತು ವಚನಸಾಹಿತ್ಯದ ತೌಲನಿಕ ಅಧ್ಯಯನ" ಕೈಕೊಳ್ಳಲು ಸೂಚಿಸಿದರು. ಹೀಗಾಗಿ ಅದೇ ವಿಷಯದ ಬಗ್ಗೆ ಸಂಶೋಧನೆ ಕೈಕೊಳ್ಳಬೇಕೆಂದು ನಿರ್ಧರಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ವೀರಣ್ಣ ರಾಜೂರವರ ಸಲಹೆಯ ಮೇರೆಗೆ ಡಾ. ಬಿ. ವ್ಹಿ. ಯಕ್ಕುಂಡಿಮಠರವರ ಮಾರ್ಗದರ್ಶನದಲ್ಲಿ ಅಧ್ಯಯನವನ್ನು ಪ್ರಾರಂಭಿಸಿ ಕಾರ್ಯಪ್ರವೃತ್ತಳಾದೆ.

ಈ ಅಧ್ಯಯನದ ಆರಂಭದಿಂದ ಅಂತ್ಯದವರೆಗೂ ಸೂಕ್ತ ಸಲಹೆ, ಮಾರ್ಗದರ್ಶನ ಹಾಗೂ ಅಧ್ಯಯನಕ್ಕೆ ಪೂರಕವಾದ ಗ್ರಂಥಗಳನ್ನು ನೀಡಿ ಪ್ರೋತ್ಸಾಹಿಸಿದ **ವಿದ್ಯಾವಾರಿಧಿ ಶ್ರೀಮದ್ ಕಾಶಿ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಗೂ ಹಾಗೂ ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ. ಸಿದ್ಧರಾಮ ಶಿವಾಚಾರ್ಯ ಮಹಾಸ್ವಾಮಿಗಳಿಗೂ** ನನ್ನ ಅನಂತಾನಂತ ಭಕ್ತಿಪೂರ್ವಕ ಪ್ರಣಾಮಗಳು. ಅಧ್ಯಾಯಗಳ ವಿನ್ಯಾಸವನ್ನು ರೂಪಿಸುವಲ್ಲಿ ನೆರವಾದ ಕೆರೂರ ಚರಂತಿಮಠದ ಶ್ರೀ ಷ.ಬ್ರ.ಡಾ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳಿಗೂ ನನ್ನ ಅನಂತ ವಂದನೆಗಳು.

ಈ ಸಂಶೋಧನಾ ಕಾರ್ಯಕ್ಕೆ ಮಾರ್ಗದರ್ಶಕರಾಗಲು ಸಂತೋಷದಿಂದ ಸಮ್ಮತಿಸಿ, ಅಧ್ಯಯನ ಪ್ರಗತಿಯಲ್ಲಿ ಸಂದರ್ಭೋಚಿತವಾಗಿ ಸಲಹೆ, ಸೂಚನೆಗಳನ್ನು ನೀಡಿ ಸಹಕರಿಸಿ, ಅಧ್ಯಯನದ ಯಶಸ್ಸಿಗೆ ಕಾರಣೀಭೂತರಾದ ಶಾಂತಿ-ಸೌಜನ್ಯಗಳ ಸಹನಾಮೂರ್ತಿಗಳಾದ **ಡಾ. ಬಿ. ವ್ಹಿ. ಯಕ್ಕುಂಡಿಮಠ** ಗುರುಗಳಿಗೆ ನನ್ನ ಹೃತ್ಪೂರ್ವಕ ನಮನಗಳು.

ಸಂಸ್ಕೃತ ಶ್ಲೋಕಗಳ ಅರ್ಥವನ್ನು ವಿವರಿಸಿ, ಅಧ್ಯಯನದುದ್ದಕ್ಕೂ ಸೂಕ್ತ ಸಲಹೆ ನೀಡಿ ಬರವಣಿಗೆ ಕಾರ್ಯವನ್ನು ಪರಿಶೀಲನೆ ಮಾಡಿದ ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ನಿವೃತ್ತ ಮುಖ್ಯಸ್ಥರೂ, ರಾಷ್ಟ್ರಪ್ರಶಸ್ತಿ ಪುರಸ್ಕೃತರೂ, ಮೈಸೂರು ವಿಶ್ವವಿದ್ಯಾಲಯದ ಸಂಸ್ಕೃತ ಅಧ್ಯಯನ ಪೀಠದಿಂದ ಗೌರವ ಡಿ.ಲಿಟ್ ಪದವಿ ಪುರಸ್ಕೃತರೂ ಆದ 'ಶಿವಕವಿ' **ಡಾ. ಮಲ್ಲಿಕಾರ್ಜುನ ಪರಡ್ಡಿ**ಯವರಿಗೆ ಹಾಗೂ ಮಾತೃಪ್ರೀತಿ ತೋರಿದ ಅವರ ಧರ್ಮಪತ್ನಿಯವರಿಗೂ ನಾನು ಚಿರಋಣಿಯಾಗಿದ್ದೇನೆ.

ಧಾರವಾಡದ ಉಪನ್ಯಾಸ ಕಾರ್ಯಕ್ರಮವೊಂದರಲ್ಲಿ ದೈವಯೋಗವೆಂಬಂತೆ ಭೇಟಿಯಾದ ಶ್ರೀಮದ್ ವೀರಶೈವ ಸದ್ಬೋಧನ ಸಂಸ್ಥೆಯ ಪ್ರಸಾರಾಂಗದ ನಿರ್ದೇಶಕರಾದ, ಕನ್ನಡ ಭಾಷಾವಿಜ್ಞಾನದಲ್ಲಿ ಅಪ್ರತಿಮ ಪ್ರತಿಭೆಯನ್ನು ಹೊಂದಿದ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಸಾಹಿತ್ಯ, ಸಂಸ್ಕೃತಿ, ಸಂಶೋಧನೆಯ ಕುರಿತು ಅನೇಕ ಪ್ರಶಸ್ತಿಗಳಿಂದ ಪುರಸ್ಕೃತಗೊಂಡ **ಡಾ. ಸಂಗಮೇಶ ಸವದತ್ತಿಮಠ**ರವರು ಈ ಗ್ರಂಥದ ಪ್ರಕಟನಾ ಕಾರ್ಯದ ಸಂಪೂರ್ಣ ಹೊಣೆ ಹೊತ್ತು ಅನೇಕ ಮೌಲಿಕವಾದ ಸಲಹೆಗಳನ್ನಿತ್ತು ಸೂಕ್ತ ಮಾರ್ಗದರ್ಶನಗೈದ ಪಿತೃಸ್ವರೂಪಿಗಳಾದ ಅವರಿಗೆ ಹಾಗೂ ಮಾತೃಪ್ರೀತಿ ತೋರಿದ ಅವರ ಸಹಧರ್ಮಿಣಿಯವರಿಗೂ ನನ್ನ ಭಕ್ತಿಪೂರ್ವಕ ಅನಂತ ವಂದನೆಗಳು.

ಆಗಮಗಳ ಹಸ್ತಪ್ರತಿ ವೀಕ್ಷಣೆ, ಪ್ರಕಟಿತ ಆಗಮಗಳ ಸಂಗ್ರಹಣೆ ಹಾಗೂ ಪೂರಕ ಗ್ರಂಥಗಳ ಸಂಗ್ರಹಣೆಗಾಗಿ ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥೆ ಹಾಗೂ ಜ.ಚ.ನಿ. ಅಧ್ಯಯನ ಪೀಠ ಮತ್ತು ಸಂಶೋಧನಾ ಸಂಸ್ಥೆ, ಮೈಸೂರಿನ ಪ್ರಾಚ್ಯಸಂಶೋಧನಾಲಯ ಹಾಗೂ ಪಂಚಾಚಾರ್ಯ ಪ್ರೆಸ್, ಬೆಳಗಾಂವಿಯ ರುದ್ರಾಕ್ಷಿಮಠ, ಪಾಂಡಿಚೇರಿಯ ಫ್ರೆಂಚ್ ಇನ್‌ಸ್ಟ್ಯೂಟ್‌ನ 'ಫ್ರಾನ್ಸ್ ಓರಿಯಂಟಲ್ ರಿಸರ್ಚ ಸೆಂಟರ್' ಹಾಗೂ 'ಅರೋವಿಲ್ಲೆ' ಮುಂತಾದ ಸ್ಥಳಗಳಿಗೆ ಸಂದರ್ಶನವಿತ್ತಾಗ, ಅಲ್ಲಿ ನನಗೆ ಸಹಕಾರವಿತ್ತ ಎಲ್ಲ ಮಹನೀಯರಿಗೂ ಹಾಗೂ ಬೆಂಗಳೂರ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಎಂ. ಶಿವಕುಮಾರ ಸ್ವಾಮಿಗಳಿಗೂ, 'ಫ್ರಾನ್ಸ್ ಓರಿಯಂಟಲ್ ರಿಸರ್ಚಸೆಂಟರ್'ನ ಡಾ. ಟಿ. ಗಣೇಶನ್‌ರವರಿಗೂ ನನ್ನ ವಂದನೆಗಳು.

ಮುಖ್ಯವಾಗಿ ಈ ಸಂಶೋಧನಾ ಕಾರ್ಯಕ್ಕೆ ಕಾರಣೀಭೂತರಾದ ಆಧಾರಸ್ತಂಭಗಳೆಂದರೆ ನನ್ನ ತಂದೆಯವರಾದ ವೇದಮೂರ್ತಿ ಶ್ರೀ ಮೃತ್ಯುಂಜಯ್ಯಾ ಬಸಯ್ಯಾ ಹಿರೇಮಠ ಹಾಗೂ ತಾಯಿಯವರಾದ ಶ್ರೀಮತಿ ನೀಲಗಂಗವ್ವಾ ಮೃ. ಹಿರೇಮಠರವರು. ನನ್ನ ಅಧ್ಯಯನದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡು, ನನಗೆ ಎದುರಾದ ಅನೇಕ ಸಮಸ್ಯೆಗಳನ್ನು ಪರಿಹರಿಸಿ, ತುಂಬು ಹೃದಯದ ಪ್ರೀತಿ ಹಾಗೂ ಧೈರ್ಯವನ್ನಿತ್ತ ಅವರನ್ನು ಎಷ್ಟು ಸ್ಮರಿಸಿದರೂ ಕಡಿಮೆಯೇ.

ನನ್ನ ಸಂಶೋಧನೆಯ ಎಲ್ಲ ಹಂತಗಳಲ್ಲಿಯೂ ನನಗೆ ಪ್ರೇರಕಶಕ್ತಿಯಾಗಿ ನಿಂತು, ಗ್ರಂಥ ರಚನಾ ಕಾರ್ಯದಲ್ಲಿ ಸಹಕರಿಸಿದ ನನ್ನ ಪತಿಯಾದ ಶ್ರೀ ವೀರಭದ್ರಯ್ಯ ಚಂ. ಹೊಸಮಠರವರನ್ನು ಈ ಸಂದರ್ಭದಲ್ಲಿ ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತೇನೆ.

ಅಧ್ಯಯನ ಕಾರ್ಯಕ್ಕೆ ಹಲವು ತೊಂದರೆಗಳನ್ನಿತ್ತರೂ ತಮ್ಮ ಮುಗ್ಧ ನಡೆನುಡಿಯಿಂದ ಆಯಾಸವನ್ನು ಮರೆಸಿದ ನನ್ನ ಪುಟ್ಟ ಮಕ್ಕಳಾದ ವಿಶ್ವೇಶ್ವರ ಮತ್ತು ವಿಶ್ವಜಿತ್‌ರನ್ನು ಈ ಸಂದರ್ಭದಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಈ ಸಂಶೋಧನಾ ಕಾರ್ಯಕ್ಕೆ ಅತ್ಯಂತ ಸಹಕಾರ ನೀಡಿದ ಶಿಕ್ಷಕ ಪರಂಪರೆಯನ್ನುಳ್ಳ ಮನೆತನವಾದ ಮಹಾಲಿಂಗಪೂರದ ನನ್ನ ಅತ್ತೆಯವರಾದ ಶ್ರೀಮತಿ ಅನ್ನಪೂರ್ಣದೇವಿಯವರಿಗೂ, ಮಾವನವರಾದ ಶ್ರೀ ಚಂದ್ರಶೇಖರಯ್ಯ ವೀ. ಹೊಸಮಠವರಿಗೂ, ಅಜ್ಜಿಯವರಾದ ಶ್ರೀಮತಿ ಭಾಗೀರಥಿಬಾಯಿಯವರಿಗೂ, ಕಿರಿಯ ಅತ್ತೆಯವರೂ ಹಾಗೂ ವಿದ್ಯಾಗುರುಗಳೂ ಆದ ಶ್ರೀಮತಿ ಗಿರಿಜಾದೇವಿ ಗಂ. ಹಿರೇಮಠರವರಿಗೂ ಹಾಗೂ ಹಿರಿಯ ಅತ್ತೆಯವರಾದ ಶ್ರೀಮತಿ ಶಾಂತಾದೇವಿ ಪ. ಹಿರೇಮಠರವರಿಗೂ, ಚಿಕ್ಕಪ್ಪನವರಾದ ಶ್ರೀ ವಿಶ್ವನಾಥಸ್ವಾಮಿ ಬ. ಹಿರೇಮಠ ಹಾಗೂ ಸಹಧರ್ಮಿಣಿ ಶ್ರೀಮತಿ ಅನಸೂಯಾರವರಿಗೂ, ಅಣ್ಣನವರಾದ ಶ್ರೀ ಮಲಕಯ್ಯಾ ಹಿರೇಮಠ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಮಹಾನಂದಾರವರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಮರ್ಪಿಸುತ್ತೇನೆ. ಗ್ರಂಥ ಸಂಗ್ರಹಣಾ ಕಾರ್ಯದಲ್ಲಿ ಸಹಕರಿಸಿ, ಪ್ರೋತ್ಸಾಹವಿತ್ತ ಮೈದುನನಾದ ಶ್ರೀ ಮಹಾಲಿಂಗಯ್ಯಾ ಚಂ. ಹೊಸಮಠ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ವಿಜಯಲಕ್ಷ್ಮಿಯವರನ್ನು ಹೃತ್ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ. ಅಲ್ಲದೇ ನನಗೆ ಎದುರಾದ ಅನೇಕ ಸಮಸ್ಯೆಗಳನ್ನು ಪರಿಹರಿಸಿ

ಸಹಾಯಗೈದು ಪ್ರೋತ್ಸಾಹಿಸಿದ ಶ್ರೀಯುತ ವಿರುಪಾಕ್ಷಯ್ಯನವರು ಗವಯ್ಯಾ ಮಠಪತಿ ಸಾ॥ಬಾಗಲಕೋಟ ಹಾಗೂ ಅವರ ಧರ್ಮಪತ್ನಿಯವರಿಗೆ ನಾನು ಚಿರಋಣಿಯಾಗಿದ್ದೇನೆ. ಆತ್ಮೀಯವಾಗಿ ಮನೆಯ ಕಾರ್ಯಗಳನ್ನು ನಿರ್ವಹಿಸಿದ ಶ್ರೀಮತಿ ಈಶ್ವರಮ್ಮ ಮಂಟೂರವರಿಗೂ ಅನಂತ ಕೃತಜ್ಞತೆಗಳು.

ಸಂಶೋಧನಾ ಕಾರ್ಯವನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸಿದ ಗುಳೇದಗುಡ್ಡದ ಭಂಡಾರಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಎಲ್ಲ ಗುರುವೃಂದಕ್ಕೂ, ಬಾಗಲಕೋಟೆಯ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಎಲ್ಲ ಮಹನೀಯರಿಗೂ, ಅಕ್ಕನಬಳಗ ಬಾಗಲಕೋಟದ ಸಮಸ್ತ ಮಂಡಳಿಗೂ, ಹಾಗೂ ಶ್ರೀಯುತ ಎ. ಎಸ್. ಪಾವಟೆ ಗುರುಗಳಿಗೂ ನನ್ನ ಅನಂತ ಧನ್ಯವಾದಗಳು. ಅಧ್ಯಯನ ಕಾರ್ಯಕ್ಕೆ ಸಹಕರಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆಯ ಉಪನಿರ್ದೇಶಕರಿಗೂ, ನಾನು ಕಾರ್ಯನಿರ್ವಹಿಸುತ್ತಿರುವ ಸರಕಾರಿ ಪ್ರೌಢಶಾಲೆ ಸೀಮಿಕೇರಿ (ಪು.ಕೇ)ಯ ಮುಖ್ಯೋಪಾಧ್ಯಾಯರು ಹಾಗೂ ಎಲ್ಲ ಶಿಕ್ಷಕವೃಂದಕ್ಕೂ, ಸಿಬ್ಬಂದಿ ಬಳಗಕ್ಕೂ ನನ್ನ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ಅಧ್ಯಯನ ಕಾರ್ಯಕ್ಕೆ ಪ್ರೋತ್ಸಾಹವನ್ನಿತ್ತ ಗುಳೇದಗುಡ್ಡದ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರದ ಸಮಸ್ತ ಸದ್ಭಕ್ತರೂ ಗುರುಹಿರಿಯರಿಗೂ ಮತ್ತು ಮಹಾಲಿಂಗಪೂರದ ಎಲ್ಲ ಬಂಧುಗಳಿಗೂ ನನ್ನ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ಮಹಾಪ್ರಬಂಧವನ್ನು ಅಚ್ಚುಕಟ್ಟಾಗಿ ಗಣಕಯಂತ್ರದಲ್ಲಿ ಅಳವಡಿಸಿ, ಬೆರಳಚ್ಚು ಕಾರ್ಯವನ್ನು ಅತ್ಯಂತ ಶೀಘ್ರವಾಗಿ ಪೂರೈಸಿ ಕೊಟ್ಟ ಶ್ರೀ ಮುರಿಗೇಶ ಅ. ಶೇಖಾ, ವಚನಾ ಗ್ರಾಫಿಕ್ಸ್, ಗುಳೇದಗುಡ್ಡ ಹಾಗೂ ಶ್ರೀ ಶಿವಕುಮಾರ ಬ. ಭಾವಿಕಟ್ಟಿಯವರಿಗೂ, ಹಾಗೂ ಮುದ್ರಣ ಕಾರ್ಯವನ್ನು ಅಚ್ಚುಕಟ್ಟಾಗಿ ಪೂರೈಸಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರ ಇವರಿಗೂ ಹಾಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹಲವು ವಿಧದಲ್ಲಿ ಸಹಾಯ ಸಹಕಾರ ನೀಡಿದವರಿಗೆಲ್ಲ ನನ್ನ ವಂದನೆಗಳು.

ಡಾ. ಪರಮೇಶ್ವರಿ ಮೃತ್ಯುಂಜಯ ಹಿರೇಮಠ

ಪರಿವಿಡಿ

ಶಿವಾಗಮಗಳು ಮತ್ತು ವಚನ ಸಾಹಿತ್ಯ

ಅಧ್ಯಾಯ–೧

ಪ್ರಸ್ತಾವನೆ

ವಿಶ್ವಮಾನ್ಯ ಮೌಲ್ಯಗಳನ್ನು ಹೊಂದಿದ ವೀರಶೈವ ಧರ್ಮವು ಅತ್ಯಂತ ಪ್ರಾಚೀನ ಧರ್ಮವಾಗಿದ್ದು ಐದುಸಾವಿರ ವರ್ಷಗಳ ಹಿಂದಿನ ಹರಪ್ಪ ಮೊಹೆಂಜೋದಾರೋ ನಾಗರಿಕತೆಯ ಕಾಲದಲ್ಲಿಯೇ ಇಷ್ಟಲಿಂಗಧಾರಣೆ ಹಾಗೂ ಶಿವಯೋಗವನ್ನು ನಾವು ಕಾಣಬಹುದು ಎಂದು ಪ್ರಾಚ್ಯ ಸಂಶೋಧಕರಾದ ಸರ್‌ಜಾನ್ ಮಾರ್ಶಲ್‌ರವರು, ನ್ಯಾಯಮೂರ್ತಿಗಳಾದ ಟಿ.ಎನ್. ಮಲ್ಲಪ್ಪನವರು ಐತಿಹಾಸಿಕ ನಿದರ್ಶನಗಳೊಂದಿಗೆ ಸ್ಪಷ್ಟಪಡಿಸಿದ್ದಾರೆ.

ಕ್ರಿ.ಶ. ೧೯೦೪ ರಲ್ಲಿ ಸಮಾವೇಶಗೊಂಡ ಅಖಿಲ ಭಾರತ ವೀರಶೈವ ಮಹಾಸಭೆಯು 'ವೀರಶೈವ ಧರ್ಮ'ವು ಅತ್ಯಂತ ಪ್ರಾಚೀನಧರ್ಮವೆಂದು ಸರ್ವಾನುಮತದಿಂದ ಒಪ್ಪಿಕೊಂಡಿದೆ. ಈ ಸಂದರ್ಭದಲ್ಲಿ ಸ್ವೀಕರಿಸಲಾದ ಪ್ರಪ್ರಥಮ ನಿರ್ಣಯದಂತೆ– "ವೀರಶೈವ ಮತವು ನಿಗಮಾಗಮೋಪನಿಷದ್ ಭಾಷ್ಯ ಪ್ರತಿಪಾದಿತ ತತ್ವದಿಂದ ಅನಾದಿ ಸಂಸಿದ್ಧವಾಗಿದೆ." ಎಂದು ಖಂಡಿತವಾಗಿ ಹೇಳಿದೆ. ಈ ನಿರ್ಣಯವನ್ನು ಸ್ವೀಕರಿಸುವ ಕಾಲಕ್ಕೆ ಚಿಂತಿಸಿದ ಅನೇಕ ಪಂಡಿತರ ಮಂಡನೆಗಳೂ ವೈಚಾರಿಕವಾಗಿವೆ ಹಾಗೂ ಪ್ರಮಾಣಬದ್ಧವಾಗಿವೆ.

ಶ್ರೀ ತೋಂಟದ ಸಿದ್ಧಲಿಂಗಯತಿಗಳು ತಮ್ಮ ವಚನದಲ್ಲಿ – "ಅನಾದಿವಿಡಿದು ಬಂದ ಗುರು, ಅನಾದಿವಿಡಿದು ಬಂದ ಲಿಂಗ, ಅನಾದಿವಿಡಿದು ಬಂದ ಜಂಗಮ, ಅನಾದಿವಿಡಿದು ಬಂದ ಗುರುಶಿಷ್ಯ ಸಂಬಂಧ, ಅನಾದಿವಿಡಿದು ಬಂದ ಪಾದೋದಕ ಪ್ರಸಾದ, ಅನಾದಿವಿಡಿದು ಬಂದ ಭಕ್ತಿ ಜ್ಞಾನ ವೈರಾಗ್ಯ, ಅನಾದಿ ಸಂಸಿದ್ಧವಾದ ವೀರಶೈವಾಚಾರ ಸಂಪತ್ತು, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ." ಎಂದು ವೀರಶೈವಾಚಾರ ಸಂಪತ್ತು ಪ್ರಾಚೀನವಾದುದು. ಇದು ಅನಾದಿವಿಡಿದು ಬಂದಿದೆ ಎಂಬುದನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ.

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥

ಎಂದು ಶಿವಾಗಮೋತ್ತರ ಭಾಗವೇ ವೀರಶೈವ ಚಾರಿತ್ರ್ಯಪಥದ ಮೊದಲ ಮೈಲುಗಲ್ಲಾಗಿದ್ದು, ಶಿವಾಗಮಗಳೇ ವೀರಶೈವದ ಧಾರ್ಮಿಕ ಮತ್ತು ದಾರ್ಶನಿಕ ತತ್ವಗಳನ್ನು ಅತ್ಯಂತ ಸಮಗ್ರವಾಗಿ ಪ್ರತಿಪಾದಿಸುವ ಮೂಲ ಆಕರಗಳೆಂದು ಸಿದ್ಧಾಂತ ಶಿಖಾಮಣಿಯು ಉಲ್ಲೇಖಿಸುತ್ತದೆ.

ಮೂಲತಃ ಸಿದ್ಧಾಂತವೆಂದು ಕರೆಯಲ್ಪಡುವ ಈ ೨೮ ಶಿವಾಗಮಗಳ ಉತ್ತರಭಾಗದಲ್ಲಿ ಪರಶಿವನೇ ವೀರಶೈವ ಸಿದ್ಧಾಂತವನ್ನು ಉಪದೇಶಿಸಿರುತ್ತಾನೆ. ಶಿವನಿಂದ ಉಪದಿಷ್ಟವಾದ ಈ ವೀರಶೈವ ಸಿದ್ಧಾಂತವನ್ನೇ ಮೂಲ ಆಧಾರವನ್ನಾಗಿರಿಸಿಕೊಂಡು

ಅನಂತರದ ಕಾಲದಲ್ಲಿ ರಚಿತವಾದ ಸಿದ್ಧಾಂತ ಶಿಖಾಮಣಿ, ಶ್ರೀಕರಭಾಷ್ಯ, ಕ್ರಿಯಾಸಾರ ಮುಂತಾದ ಎಲ್ಲ ವೀರಶೈವ ಪರವಾದ ಗ್ರಂಥಗಳು ರಚಿಸಲ್ಪಟ್ಟಿವೆ. ಇದಕ್ಕೆ ವಚನ ಸಾಹಿತ್ಯವೂ ಹೊರತಾಗಿಲ್ಲ ಎಂದು ಡಾ.ಆರ್.ಸಿ.ಹಿರೇಮಠ, ಡಾ. ಎಮ್. ಶಿವಕುಮಾರ ಸ್ವಾಮಿಗಳು, ಡಾ.ಮಲ್ಲಿಕಾರ್ಜುನ ಪರಡ್ಡಿಯವರು, ವಿದ್ವಾನ್ ಕೋ.ರಂ. ಬಸವರಾಜು ರವರು ಮುಂತಾದ ಮಹನೀಯರು ವಿಶ್ಲೇಷಿಸಿದ್ದಾರೆ.

ಶ್ರೀ ಶಿ.ಶಿ. ಬಸವನಾಳರವರು ತಮ್ಮ ವೀರಶೈವ ತತ್ವಪ್ರಕಾಶ ಗ್ರಂಥದಲ್ಲಿ, "ಶ್ರೀಮದ್ ಬಸವಾದಿ ಪ್ರಮಥರ ವಚನ ಸಿದ್ಧಾಂತವನ್ನು ಬಗೆಗೊಟ್ಟು ನೋಡಿದರೆ ವಚನಗಳು ಕಾಮಿಕಾದ್ಯಾಗಮಗಳ ಜ್ಞಾನಕಾಂಡವನ್ನೇ ಮುಂದುವರೆಸುತ್ತಾ ಸಮಗ್ರತೆಯನ್ನುಂಟು ಮಾಡಿವೆ."ಎಂದು ಅಭಿಪ್ರಾಯ ಪಟ್ಟಿರುವರು.

ಶ್ರೀ ತ. ಸು. ಶಾಮರಾಯರು 'ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ'- "೨೮ ಶೈವಾಗಮಗಳು ಸಚ್ಚಿದಾನಂದ ಸ್ವರೂಪಿಯಾದ ಶಿವನನ್ನು ಕುರಿತು ಜ್ಞಾನ, ಶಿವಾದ್ವೈತವನ್ನು ಬೋಧಿಸುತ್ತವೆ; ಈ ಆಗಮೋಕ್ತವಾದ ಶಿವಾದ್ವೈತವನ್ನು ಸಾರ ಹೊರಟರು ವಚನಕಾರರು. ಆದ್ದರಿಂದ ವಚನ ವಾಙ್ಮಯವನ್ನು 'ಕನ್ನಡದ ಶೈವಾಗಮ'ಗಳೆಂದು ಕರೆದು ಗೌರವಿಸಲಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥೆಯವರು 'ವೇದಾಗಮಗಳು ಮತ್ತು ಶಿವಶರಣರು' ಎಂಬ ಶೀರ್ಷಿಕೆಯಡಿಯಲ್ಲಿ ಎರಡು ಚರ್ಚಾಸತ್ರಗಳನ್ನು ಏರ್ಪಡಿಸಿ ಬಸವಣ್ಣನವರ, ಅಲ್ಲಮಪ್ರಭುಗಳ, ಸಿದ್ಧರಾಮೇಶ್ವರ, ಚೆನ್ನಬಸವಣ್ಣ, ಉರಿಲಿಂಗಪೆದ್ದಿಗಳು, ಆದಯ್ಯ, ಬಾಲಸಂಗಯ್ಯ, ಅಕ್ಕಮಹಾದೇವಿ, ಹಡಪದ ಅಪ್ಪಣ್ಣ, ಪ್ರಸಾದಿ ಭೋಗಣ್ಣ, ಚಂದಿಮರಸ, ಸಕಳೇಶ ಮಾದರಸ, ಮಡಿವಾಳ ಮಾಚಿದೇವ, ಹಾವಿನಹಾಳ ಕಲ್ಲಯ್ಯ ಮುಂತಾದ ಶಿವಶರಣರ ವಚನಗಳಲ್ಲಿ ಕಂಡುಬರುವ ಸಂಸ್ಕೃತ ಸೂಕ್ತಿಗಳನ್ನು ಆಧರಿಸಿ ಡಾ.ಬಸವಲಿಂಗ ಸೊಪ್ಪಿಮಠ, ಡಾ.ಎಸ್. ವಿದ್ಯಾಶಂಕರ, ಡಾ.ಎಚ್.ಗಂಗಾಧರನ್, ಡಾ.ಎಸ್.ಎಮ್.ಹಿರೇಮಠ, ಡಾ.ಸಂಗಮೇಶ ಸವದತ್ತಿಮಠ, ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ, ವಿದ್ವಾನ್ ಕೋ.ರಂ.ಬಸವರಾಜು, ಪ್ರೊ.ಆರ್.ರಾಚಪ್ಪ, ಡಾ.ಸಿ.ಯು. ಉಮಾದೇವಿ, ಡಾ.ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು, ಡಾ.ಸಿ. ಶಿವಕುಮಾರಸ್ವಾಮಿಗಳು, ಡಾ.ಎಸ್.ಎಮ್. ವೃಷಭೇಂದ್ರ ಸ್ವಾಮಿಗಳು, ಡಾ.ಜುಕ್ತಿಮಠ ಸ್ವಾಮಿಗಳು, ಡಾ.ಬಿ.ಆರ್.ಹಿರೇಮಠ ಮುಂತಾದ ವಿದ್ವಾಂಸರು ಪ್ರಬಂಧವನ್ನು ಮಂಡಿಸಿದ್ದಾರೆ. ಈ ಎರಡು ಚರ್ಚಾಸತ್ರಗಳ ಎಲ್ಲ ವಿದ್ವಾಂಸರ ಒಮ್ಮತದ ವಿಚಾರವೇನೆಂದರೆ ಸಂಸ್ಕೃತ ಭಾಷಾಬದ್ಧವಾದ ಶಿವಾಗಮಗಳಲ್ಲಿಯ ವೀರಶೈವ ಸಿದ್ಧಾಂತವನ್ನು ಅಧ್ಯಯನ ಮಾಡಿದ ಬಸವಾದಿ ಶಿವಶರಣರು ಅವುಗಳಲ್ಲಿಯ ಜನಪರವಾದ ಹಾಗೂ ಸರ್ವರ ಅಭ್ಯುದಯಕ್ಕೆ ಕಾರಣವಾಗುವ ತತ್ವಗಳನ್ನು ಗಮನಿಸಿಯೇ ಅವುಗಳನ್ನು ಸ್ವೀಕರಿಸಿ, ಸ್ವಾನುಭವದ ಮೂಲಕ ಪರಿಶೋಧಿಸಿ, ಅಂದಿನ ಸಾಮಾಜಿಕ ಸ್ವಾಸ್ಥ್ಯಕ್ಕೆ ಸರಿಯೆನಿಸದ ಅಂಶವನ್ನು ತೆಗೆದು, ಉತ್ತಮವಾದುದನ್ನು ಅಂಗೀಕರಿಸಿ, ತಮ್ಮ ವಚನಗಳ ಮೂಲಕ ಅತ್ಯಂತ ಸತ್ವಯುತವಾಗಿ ಪ್ರತಿಪಾದಿಸಿದರು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕಾರಣ ಶಿವಾಗಮೋಕ್ತ ಸಿದ್ಧಾಂತವೇ ಶಿವಶರಣರಿಗೆ ಪ್ರೇರಣೆಯಾಗಿದೆಯೇ? ಶಿವಾಗಮೋಕ್ತ ವೀರಶೈವಕ್ಕೂ ಮತ್ತು ವಚನೋಕ್ತ ವೀರಶೈವಕ್ಕೂ ಸಾಮ್ಯ ವೈಷಮ್ಯಗಳೇನಾದರೂ ಇವೆಯೇ? ಶಿವಾಗಮಗಳ ಪ್ರಭಾವ ವಚನಗಳ ಮೇಲೆ ಎಷ್ಟರಮಟ್ಟಿಗೆ ಆಗಿದೆ? ಹಾಗೂ ಶಿವಾಗಮಗಳಿಂದ ಪ್ರಭಾವಿತರಾದರೂ ಯಾವ ದೃಷ್ಟಿಯಿಂದ ವಿಭಿನ್ನರಾಗಿ ವಚನಕಾರರು ಮುನ್ನಡೆದಿದ್ದಾರೆ? ಎಂದು ವಿಸ್ತೃತವಾಗಿ ಪರಿಶೀಲಿಸುವ ಉದ್ದೇಶದಿಂದ ವೀರಶೈವ ಧರ್ಮದ ಹಿನ್ನಲೆಯಲ್ಲಿ ಈ ಎರಡು ಬೃಹತ್ ಸಾಹಿತ್ಯಗಳ ಸಂಶೋಧನೆಯನ್ನು ಕೈಕೊಳ್ಳಲಾಗಿದೆ. ಅಲ್ಲದೇ ಕನ್ನಡ ಸಾಹಿತ್ಯವು ವೈವಿಧ್ಯಮಯವೂ, ವ್ಯಾಪಕವೂ ಆದ ಸಾಹಿತ್ಯ ಪ್ರಕಾರವಾಗಿದ್ದು ಕನ್ನಡ ಸಾಹಿತ್ಯ ಸಂಶೋಧನೆಯಲ್ಲಿ ಕವಿ-ಕೃತಿಗಳ ಬಗೆಗೆ, ಭಾಷೆಗಳ ಬಗೆಗೆ, ಕಾವ್ಯಸೌಂದರ್ಯದ ಬಗೆಗೆ, ಜನಪದ ಸಂಸ್ಕೃತಿಯ ಬಗೆಗೆ ಅಧ್ಯಯನ ನಡೆದಷ್ಟು ಎರಡು ಕೃತಿಗಳ ತೌಲನಿಕ ಅಧ್ಯಯನ ನಡೆದಿರುವದು ಬಹಳ ಕಡಿಮೆಯೆಂದೇ ಹೇಳಬಹುದು. ಇಂತಹ ತೌಲನಿಕ ಅಧ್ಯಯನಗಳಿಂದ ಒಂದು ಸಾಹಿತ್ಯದಿಂದ ಇನ್ನೊಂದು ಸಾಹಿತ್ಯ ಪಡೆದಿರುವ ಪ್ರಭಾವ, ಪ್ರೇರಣೆ, ಅನುಕರಣೆ ಅಥವಾ ಅವುಗಳ ಹೋಲಿಕೆ, ವೈಶಿಷ್ಟ್ಯ, ಅದರದೇ ಆದ ಸ್ವಂತಿಕೆ ಹಾಗೂ ಎರಡು ಕವಿಗಳಲ್ಲಿದ್ದ ಕಾವ್ಯ ಕೌಶಲ್ಯ, ಪ್ರತಿಭೆ, ಆಯಾ ಪ್ರಾದೇಶಿಕ ಭಾಷೆಯ ಶೈಲಿ ಮುಂತಾದವು ಬೆಳಕಿಗೆ ಬರುತ್ತವೆ. ಇದರಿಂದ ಇಂತಹ ಸಂಶೋಧನಾತ್ಮಕ ಅಧ್ಯಯನ ಅಗತ್ಯವೆನಿಸಿತು.

ಶಿವಾಗಮಗಳನ್ನು ಶೈವಾಗಮಗಳೆಂದೂ, ದಿವ್ಯಾಗಮಗಳೆಂದೂ, ಸಿದ್ಧಾಂತಾಗಮ ಗಳೆಂದೂ ಕರೆಯುವ ರೂಢಿಯಿದೆ. ಇವು ಕಾಮಿಕಾದಿ ವಾತುಲಾಂತ ೨೮ ಆಗಮಗಳೆಂದು ಸುಪ್ರಸಿದ್ಧವಾಗಿವೆ. ವೀರಶೈವ ಕೌಸ್ತುಭದಲ್ಲಿ ೨೮ ಶಿವಾಗಮಗಳಿಗೆ ೩೦೮ ಉಪಾಗಮಗಳಿರುವುದನ್ನು ಉಲ್ಲೇಖಿಸಲಾಗಿದೆ. ಇದರಿಂದ ಶಿವಾಗಮ ಸಾಹಿತ್ಯದ ವ್ಯಾಪ್ತಿ ಹಾಗೂ ಗಾತ್ರಗಳ ಕಲ್ಪನೆ ಉಂಟಾಗುತ್ತದೆ. ಆದರೆ ಕೆಲವು ಮೂಲ ಶಿವಾಗಮಗಳು ಮತ್ತು ಕೆಲವು ಉಪಾಗಮಗಳು ಮಾತ್ರ ಉಪಲಬ್ಧವಾಗಿದ್ದು ಅವು ಕೂಡಾ ಸಮಗ್ರವಾಗಿ ದೊರೆಯುವುದಿಲ್ಲ. ಮೂಲಾಗಮಗಳಲ್ಲಾಗಲೀ, ಉಪಾಗಮಗಳಲ್ಲಾಗಲೀ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ, ಜ್ಞಾನಪಾದವೆಂದು ನಾಲ್ಕು ನಾಲ್ಕು ಪಾದಗಳಿರುತ್ತವೆ. ಉಪಲಬ್ಧವಾದ ಕೆಲವು ಶಿವಾಗಮಗಳಲ್ಲಿ ನಾಲ್ಕು ಪಾದಗಳು ದೊರೆಯುವುದಿಲ್ಲ. ಇನ್ನೊಂದು ವಿಚಾರವೆಂದರೆ ಶಿವಾಗಮಗಳು ಪೂರ್ವ ಮತ್ತು ಉತ್ತರವೆಂದು ಎರಡೆರಡು ಭಾಗಗಳನ್ನು ಹೊಂದಿದ್ದು, ಕೆಲವು ಶಿವಾಗಮಗಳ ಪೂರ್ವಭಾಗ ಮಾತ್ರ ಮತ್ತು ಕೆಲವು ಶಿವಾಗಮಗಳ ಉತ್ತರ ಭಾಗ ಮಾತ್ರ ಉಪಲಬ್ಧವಾಗಿವೆ. ಆದರೆ ಶಿವಾಗಮಗಳ ಪೂರ್ವ ಭಾಗದಲ್ಲಿ ಶೈವಮತವು ಹಾಗೂ ಉತ್ತರ ಭಾಗದಲ್ಲಿ ವೀರಶೈವ ಮತವು ಪ್ರತಿಪಾದಿಸಲ್ಪಟ್ಟಿದೆ.

ವೀರಶೈವ ಧರ್ಮದ ಹಿನ್ನೆಲೆಯಲ್ಲಿ ಶಿವಾಗಮ ಹಾಗೂ ವಚನ ಸಾಹಿತ್ಯವನ್ನು ಅಧ್ಯಯನ ಮಾಡುವದು ಪ್ರಬಂಧದ ಉದ್ದೇಶವಾಗಿದ್ದರಿಂದ ಉತ್ತರಭಾಗವು ಉಪಲಬ್ಧವಾಗಿರುವ ಶಿವಾಗಮಗಳಾದ ಕಾರಣಾಗಮ, ಸೂಕ್ಷ್ಮಾಗಮ, ಸುಪ್ರಭೇದಾಗಮ, ಸ್ವಾಯಂಭುವಾಗಮ, ವೀರಾಗಮ, ಮಕುಟಾಗಮ, ಚಂದ್ರಜ್ಞಾನಾಗಮ,

ಪಾರಮೇಶ್ವರಾಗಮ, ವಾತುಲಶುದ್ಧಾಗಮ, ದೇವಿಕಾಲೋತ್ತರಾಗಮ, ಪಾಶುಪತಾಗಮಗಳನ್ನು ಅಧ್ಯಯನಕ್ಕಾಗಿ ಆಯ್ದುಕೊಂಡಿದ್ದು, ಇವುಗಳನ್ನು ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರಿಂದ ಪ್ರಕಟಗೊಂಡ ೧೫ ಸಮಗ್ರ ವಚನ ಸಂಪುಟಗಳೊಂದಿಗೆ ತೌಲನಿಕವಾಗಿ ಇಲ್ಲಿ ಅಭ್ಯಸಿಸಲಾಗಿದೆ.

ಪ್ರಸ್ತುತ 'ಶಿವಾಗಮಗಳು ಮತ್ತು ವಚನಸಾಹಿತ್ಯ' ಎಂಬ ಕೃತಿಯಲ್ಲಿ ವಿಷಯವನ್ನು ಅನುಕೂಲತೆಗಾಗಿ ಎಂಟು ಅಧ್ಯಾಯಗಳಲ್ಲಿ ವಿಭಾಗಿಸಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪವನ್ನು ಚರ್ಚಿಸಲಾಗಿದೆ.

'ಶಿವಾಗಮ ವಾಙ್ಮಯ ಪರಿಚಯ' ಎಂಬ ಎರಡನೆಯ ಅಧ್ಯಾಯದಲ್ಲಿ ಆಗಮದ ಅರ್ಥ, ಪ್ರಧಾನ ಶಿವಾಗಮಗಳು, ಉಪಾಗಮಗಳು, ಶಿವಾಗಮಗಳ ರಚನಾ ತಂತ್ರ, ಸ್ವರೂಪ, ವಿಷಯ ವಸ್ತು, ವಿವಿಧ ಶಾಸ್ತ್ರಗ್ರಂಥಗಳ ಮೇಲೆ ಶಿವಾಗಮಗಳ ಪ್ರಭಾವ, ಹಾಗೂ ಪ್ರಕಟಿತಗೊಂಡ ಶಿವಾಗಮಗಳ ಮತ್ತು ಉಪಾಗಮಗಳ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಡಲಾಗಿದೆ.

ಶಿವಾಗಮ ಮತ್ತು ವಚನಸಾಹಿತ್ಯದ ತೌಲನಿಕ ಅಧ್ಯಯನವನ್ನು ದಾರ್ಶನಿಕ ಚಿಂತನ, ಧಾರ್ಮಿಕ ಚಿಂತನ, ತಾತ್ವಿಕ ಚಿಂತನ, ಸಾಮಾಜಿಕ ಚಿಂತನ, ಹಾಗೂ ಸ್ತ್ರೀಪರ ಚಿಂತನೆ ಎಂದು ವಿಭಾಗಿಸಲಾಗಿದ್ದು ಒಂದೊಂದು ಅಧ್ಯಾಯದಲ್ಲಿ ಹಲವು ಉಪವಿಭಾಗಗಳನ್ನಾಗಿ ಮಾಡಿ ಅವುಗಳ ಕುರಿತು ಚರ್ಚಿಸಲಾಗಿದೆ.

ಶಿವಾಗಮಗಳು ಮತ್ತು ವಚನ ಸಾಹಿತ್ಯ : ದಾರ್ಶನಿಕ ಚಿಂತನದಲ್ಲಿ ಸೃಷ್ಟಿಯ ಉಗಮ, ಪತಿ-ಪಶು-ಪಾಶತತ್ವದ ಬಗ್ಗೆ ಶಿವಾಗಮಗಳು ಮತ್ತು ವಚನ ಸಾಹಿತ್ಯದಲ್ಲಿ ಪ್ರತಿಪಾದಿತವಾದ ವಿಚಾರವನ್ನು ತೌಲನಿಕವಾಗಿ ಚರ್ಚಿಸಲಾಗಿದೆ.

ಶಿವಾಗಮಗಳು ಮತ್ತು ವಚನ ಸಾಹಿತ್ಯ : ಧಾರ್ಮಿಕ ಚಿಂತನದಲ್ಲಿ ವೀರಶೈವರ ದೈನಂದಿನ ಆಚರಣೆಗಳು ಹಾಗೂ ವೀರಶೈವರ ಧಾರ್ಮಿಕ ಸಂಸ್ಕಾರಗಳಾದ ದೀಕ್ಷೆ, ಶಿವಮೇಧ ವಿಧಿ (ಅಂತ್ಯೇಷ್ಟಿವಿಧಿ)ಗಳ ಕುರಿತು ತೌಲನಿಕವಾಗಿ ಸಮೀಕರಿಸಲಾಗಿದೆ.

ಶಿವಾಗಮಗಳು ಮತ್ತು ವಚನ ಸಾಹಿತ್ಯ : ತಾತ್ವಿಕ ಚಿಂತನದಲ್ಲಿ ವೀರಶೈವ ಸಿದ್ಧಾಂತದ ಪ್ರಮುಖ ತತ್ವತ್ರಯಗಳಾದ ಅಷ್ಟಾವರಣ, ಪಂಚಾಚಾರ ಮತ್ತು ಷಟಸ್ಥಲಗಳನ್ನು ಶಿವಾಗಮಗಳು ಮತ್ತು ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

ಶಿವಾಗಮಗಳು ಮತ್ತು ವಚನ ಸಾಹಿತ್ಯ: ಸಾಮಾಜಿಕ ಚಿಂತನದಲ್ಲಿ ಸಾಮಾಜಿಕ ಮೌಲ್ಯಗಳಾದ ಜಾತಿಭೇದ ನಿರಾಕರಣೆ, ಸಮಾನ ಗೌರವ, ಭ್ರಾತೃತ್ವ ಮನೋಭಾವ, ಶಾಂತಿಯುತ ಸಹಬಾಳ್ವೆ, ದಾನ, ದಾಸೋಹ, ಕಾಯಕ, ಅತಿಥಿ ಸತ್ಕಾರ, ಅನಾಥರ ಪೋಷಣೆ, ಲೋಕಹಿತ ಕಾರ್ಯ, ಅಹಿಂಸೆ, ಸಾರ್ಥಕ ಬದುಕು ಮುಂತಾದವುಗಳ ಕುರಿತು ಶಿವಾಗಮಗಳು ಮತ್ತು ವಚನಸಾಹಿತ್ಯದಲ್ಲಿ ನಿರೂಪಿಸಲಾದ ವಿಚಾರಗಳ

ಬಗ್ಗೆ ತೌಲನಿಕವಾಗಿ ಸಮೀಕರಿಸಲಾಗಿದೆ.

ಶಿವಾಗಮಗಳು ಮತ್ತು ವಚನ ಸಾಹಿತ್ಯ: ಸ್ತ್ರೀಪರ ಚಿಂತನ ಅಧ್ಯಾಯದಲ್ಲಿ ಶಿವಾಗಮಗಳಲ್ಲಿಯ ಮಹಿಳಾಪರವಾದ ಸಕಾರಾತ್ಮಕ ಚಿಂತನೆಯನ್ನು ಹಾಗೂ ಧಾರ್ಮಿಕವಾಗಿ, ಸಾಮಾಜಿಕವಾಗಿ ಮಹಿಳೆಗೆ ನೀಡಿದ ಪ್ರಾಧಾನ್ಯತೆಯನ್ನು ಚರ್ಚಿಸಲಾಗಿದ್ದು, ಶಿವಾಗಮಗಳ ಈ ಸ್ತ್ರೀಪರವಾದ ವೈಚಾರಿಕ ಧೋರಣೆಯೇ ವಚನಕಾರರ ಮಹಿಳಾ ಸಮಾನತಾಂದೋಲನಕ್ಕೆ ಪ್ರೇರಕವಾದ ಬಗ್ಗೆ ನಿರೂಪಿಸಲಾಗಿದೆ.

ಸಮಾರೋಪದಲ್ಲಿ ಎಲ್ಲ ವಿಷಯಗಳನ್ನು ಸಮೀಕರಿಸಿ ಸಂಕ್ಷೇಪಗೊಳಿಸಲಾಗಿದೆ.

ಅನುಬಂಧ ೧ ರಲ್ಲಿ ಶಿವಾಗಮಗಳ ಉಕ್ತಿಗಳನ್ನು ಪ್ರಮಾಣಕ್ಕಾಗಿ ಉದ್ಧರಿಸಿರುವ ವಚನಗಳು, **ಅನುಬಂಧ ೨** ರಲ್ಲಿ ಆಗಮ ಪದದ / ಆಗಮಗಳ ಹೆಸರನ್ನು ಉಲ್ಲೇಖಿಸಿರುವ ವಚನಗಳು, **ಅನುಬಂಧ ೩ ರಲ್ಲಿ** ಏಕೋತ್ತರ ಶತಸ್ಥಲ ಎಂಬ ಉಲ್ಲೇಖವಿರುವ ಆಗಮ ಶ್ಲೋಕಗಳು, **ಅನುಬಂಧ ೪** ರಲ್ಲಿ ಕೆಲವು ಸಂಖ್ಯಾ ವಿಶಿಷ್ಟ ಪದಗಳ ಅರ್ಥಗಳು, **ಅನುಬಂಧ ೫** ರಲ್ಲಿ ಗ್ರಂಥಋಣವನ್ನು ಕೈಕೊಳ್ಳಲಾಗಿದೆ.

ಅಧ್ಯಾಯ– ೨

ಶಿವಾಗಮ ವಾಙ್ಮಯ ಪರಿಚಯ

- ಆಗಮದ ಅರ್ಥ, ನಿಷ್ಪತ್ತಿ ಮತ್ತು ವ್ಯಾಖ್ಯೆಗಳು
- ಪ್ರಧಾನ ಶಿವಾಗಮಗಳು, ಉಪಾಗಮಗಳು
- ಶಿವಾಗಮಗಳು ಗುರು ಪರಂಪರಾಗತವಾಗಿ ನಡೆದು ಬಂದ ಬಗೆ
- ಶಿವಾಗಮಗಳ ರಚನಾ ತಂತ್ರ, ಸ್ವರೂಪ, ವಿಷಯ ವಸ್ತು,
- ಶಿವಾಗಮಗಳ ಉಗಮಕ್ಕೆ ಪ್ರೇರಣೆ,
- ಶಿವಾಗಮಗಳ ರಚನಾ ಕಾಲ,
- ವಿವಿಧ ಶಾಸ್ತ್ರಗ್ರಂಥಗಳ ಮೇಲೆ ಶಿವಾಗಮಗಳ ಪ್ರಭಾವ:
    - ಶಿವಾಗಮಗಳು ಮತ್ತು ಉಪನಿಷತ್ತು
    - ಶಿವಾಗಮಗಳು ಮತ್ತು ಭಗವದ್ಗೀತೆ
    - ಶಿವಾಗಮಗಳು ಮತ್ತು ಸ್ಮೃತಿ
    - ಶಿವಾಗಮಗಳು ಮತ್ತು ಪುರಾಣ
    - ಶಿವಾಗಮಗಳು ಮತ್ತು ಸಾಂಖ್ಯ
- ಶಿವಾಗಮಗಳ ಅನುಪಲಬ್ಧತ್ವದ ವಿಚಾರ
- ಪ್ರಕಟಿತ ಶಿವಾಗಮಗಳ ಮತ್ತು ಉಪಾಗಮಗಳ ಪರಿಚಯ

ಅಧ್ಯಾಯ– ೨

ಶಿವಾಗಮ ವಾಙ್ಮಯ ಪರಿಚಯ

ಭಾರತವು ವಿಶ್ವವ್ಯಾಪಕ ಕೀರ್ತಿ ಪಡೆದಿದ್ದು ತನ್ನಲ್ಲಿಯ ಆಧ್ಯಾತ್ಮಿಕ ಸಂಸ್ಕೃತಿಯ ಪ್ರಭಾವದಿಂದಲೇ! ಭಾರತೀಯರು ಮೊದಲಿನಿಂದಲೂ ಭೌತಿಕ ಕೃಷಿಯೊಡನೆ ಆಧ್ಯಾತ್ಮಿಕ ಕೃಷಿಯಲ್ಲಿ ತೊಡಗಿಕೊಂಡವರಾಗಿದ್ದವರು. ಭಾರತದ ಹೆಸರೇ ಸೂಚಿಸುವಂತೆ "ಭಾಯಾಂ ರತಃ ಭಾರತಃ"[೧] ಅರ್ಥಾತ್ 'ಭಾ' ಎಂದರೆ 'ಜ್ಞಾನ', 'ರತ' ಎಂದರೆ 'ಆಸಕ್ತವಾಗಿರುವದು' ಎಂದು ಅರ್ಥಪೂರ್ಣ ಮಾಡಿಕೊಂಡಿರುವದು. ಇಂಥ ಅಮೂಲ್ಯವಾದ ಭಾರತೀಯ ಸಂಸ್ಕೃತಿ ಮತ್ತು ತತ್ವಶಾಸ್ತ್ರದ ಮಹತ್ವಪೂರ್ಣ ಅಂಗವಾದ ಶಿವಾಗಮ ಸಾಹಿತ್ಯವು ಅತ್ಯಂತ ಪ್ರಗತಿಪರ ಸಾಹಿತ್ಯವಾಗಿದ್ದು ತನ್ನ ಸತ್ವಪೂರ್ಣವಾದ ಮೌಲಿಕ ವಿಚಾರಗಳಿಂದ ಶತಶತಮಾನಗಳಿಂದ ಬೆಳೆದು ಬಂದಿದೆ.

ಪ್ರಸ್ತುತ ಇಲ್ಲಿ ಆಗಮ ಎಂದಾಗ ಶಿವಾಗಮ(ಶೈವಾಗಮ)ಗಳೆಂದೇ ಅರ್ಥ. ಯಾಕೆಂದರೆ ಆಗಮ ಶಬ್ದದ ಅರ್ಥ ವ್ಯಾಪ್ತಿಯಲ್ಲಿ ವೈಷ್ಣವಾಗಮಗಳು, ಶಾಕ್ತಾಗಮಗಳು, ಬೌದ್ಧಾಗಮಗಳು, ಜೈನಾಗಮಗಳಷ್ಟೆ ಅಲ್ಲದೇ ವೇದ ಸಾಹಿತ್ಯವೂ[೨] ಆಗಮ ಶಬ್ದದ ಅರ್ಥ ವ್ಯಾಪ್ತಿಯಲ್ಲಿ ಸೇರಿಕೊಳ್ಳುತ್ತವೆ. ಆದ್ದರಿಂದ ಇಲ್ಲಿ ಆಗಮಗಳು ಎಂದರೆ ಶಿವಾಗಮಗಳು ಎಂದು ಸೀಮಿತಾರ್ಥದಲ್ಲಿ ಬಳಸಲಾಗಿದೆ. ಶಿವಾಗಮ (ಶೈವಾಗಮ)ಗಳನ್ನು ದಿವ್ಯಾಗಮಗಳೆಂದೂ, ಸಿದ್ಧಾಂತಾಗಮಗಳೆಂದೂ ಕರೆಯುವ ರೂಢಿಯಿದೆ. ಇವು ಕಾಮಿಕಾದಿ ವಾತುಲಾಂತ ೨೮ ಆಗಮಗಳೆಂದು ಸುಪ್ರಸಿದ್ಧವಾಗಿವೆ. ಹಾಗಾದರೆ ಆಗಮವೆಂದರೇನು? ಆಗಮಗಳ ಉತ್ಪತ್ತಿ ಹೇಗಾಯಿತು? ಎಂಬುದರ ಸಂಕ್ಷಿಪ್ತ ವಿವರ ಇಂತಿದೆ.

೨.೧ ಆಗಮದ ಅರ್ಥ ಮತ್ತು ಪದ ನಿಷ್ಪತ್ತಿ

'ಆಙ' ಉಪಸರ್ಗ ಪೂರ್ವಕವಾದ 'ಗಮ್ಲೃ–ಗತೌ' ಧಾತುವಿನಿಂದ 'ಆಗಮ' ಶಬ್ದವು ನಿಷ್ಪನ್ನವಾಗಿದೆ.[೩] 'ಅಙ' ಉಪಸರ್ಗವು 'ಪರಂಪರೆ' ಎಂಬ ಅರ್ಥವನ್ನು ಕೊಡುತ್ತದೆ. 'ಯೇ ಗತ್ಯರ್ಥಾಃ ಧಾತವಃ ತೇ ಜ್ಞಾನಾರ್ಥಾಃ' ಎಂಬ ಸಂಸ್ಕೃತ ವ್ಯಾಕರಣದ ನಿಯಮದಂತೆ ಎಲ್ಲಾ ಗತ್ಯರ್ಥಕ ಧಾತುಗಳೂ ಜ್ಞಾನದ ಅರ್ಥವನ್ನು ನೀಡುವುದರಿಂದ 'ಗಮಲೃ' ಧಾತುವಿಗೂ ಜ್ಞಾನದ ಅರ್ಥವು ಸಿದ್ಧಿಸುತ್ತದೆ.

ಹೀಗೆ 'ಆಗಮ' ವೆಂದರೆ 'ಪರಂಪರಾಗತವಾದ ಜ್ಞಾನ'. ಪರಂಪರೆಯಿಂದ

---

೧. ವಿಶ್ವಪ್ರಭೆ, ಸಂಪುಟ ೩, ಸಂ – ಜಿ. ಎಚ್. ಹನ್ನೆರಡುಮಠ, ೧೯೯೧, ಪುಟ ೩೦೯

೨. ವೇದ ಸಾಹಿತ್ಯಕ್ಕೂ ಸಹಿತ ಆಗಮವೆಂದು ಹೇಳುವದನ್ನು ದಿವಾಕರ ರಂಗರಾಯರು ವಚನ ಶಾಸ್ತ್ರ ರಹಸ್ಯ ಗ್ರಂಥದಲ್ಲಿ ಬರೆದಿದ್ದಾರೆ.

೩. ಚಂದ್ರಜ್ಞಾನಾಗಮ, ಸಂ–ಎಂ. ಶಿವಕುಮಾರಸ್ವಾಮಿಗಳು, ೨೦೦೨ – ಮುನ್ನುಡಿ ಪುಟ–xi

ಪರಿಷ್ಕೃತವಾಗಿ ಬಂದ ಜ್ಞಾನ, ಅಂತಹ ಜ್ಞಾನವು ಸಂಗ್ರಹಿಸಲ್ಪಟ್ಟಿರುವ ಗ್ರಂಥರಾಶಿ ಕೂಡಾ 'ಆಗಮ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.[೪]

'ಆಗತಂ ಗತಂ ಮತಂ ಚ ಆಗಮಃ' –ಎಂಬ 'ಆಗಮ' ಶಬ್ದದ ಅಕ್ಷರ ನಿರ್ವಚನದಂತೆ 'ಆ' ಎಂದರೆ 'ಆಗತಂ'–ಬಂದದ್ದು, 'ಗ' ಎಂದರೆ 'ಗತಂ'– ತಲುಪಿದ್ದು, 'ಮ' ಎಂದರೆ 'ಮತಂ'–ಸಮ್ಮತವಾದದ್ದು ಎಂದರ್ಥ. ಆಗಮಗಳು ಆಪ್ತವಾಕ್ಯಗಳು: ಪರಮ ಆಪ್ತನಾದ ಶಿವನ ವಾಕ್ಯಗಳು : ಗಿರಿಜೆಗಾಗಿ ಉಕ್ತವಾದವುಗಳು: ವಾಸುದೇವನಿಂದ ಆಚರಿತವಾದವುಗಳು.

ಆಗತಂ ಪಂಚವಕ್ತ್ರಾತ್ತು ಗತಂ ಚ ಗಿರಿಜಾನನೇ
ಮತಂ ಚ ವಾಸುದೇವಸ್ಯ ತಸ್ಮಾದಾಗಮ ಉಚ್ಯತೇ[೫]

ಈ ನಿರ್ವಚನದಂತೆ ಶಿವನ ಪಂಚಮುಖಗಳಿಂದ ಆಗತ (ಬಂದದ್ದು) ಗಿರಿಜೆಯಲ್ಲಿ 'ಗತ' (ಸ್ವೀಕರಿಸಲ್ಪಟ್ಟಿದ್ದು) 'ಮ' ಕಾರವು ವಾಸುದೇವನಿಗೆ ಸಮ್ಮತವಾದದ್ದೆಂದು ಸೂಚಿಸುತ್ತದೆ. ಹೀಗೆ ಪರಮಾತ್ಮನಿಂದ ಪ್ರಣೀತವಾಗಿ ಪಾರ್ವತಿಗೆ ಉಪದೇಶಿಸಲ್ಪಟ್ಟು ಪರಂಪರೆಯಿಂದ ಪರಿಷ್ಕೃತವಾಗಿ ಪ್ರಾಪ್ತವಾದುದು ಆಗಮವೆಂಬ ಶಾಸ್ತ್ರ.

ಸಾಮಾನ್ಯವಾಗಿ ಶೈವ ಶಾಸ್ತ್ರಕ್ಕೆ 'ಆಗಮ' ಎಂದೂ, ಶಾಕ್ತ ಶಾಸ್ತ್ರಕ್ಕೆ 'ತಂತ್ರ' ಎಂಬ ಪ್ರಯೋಗ ಕಂಡು ಬರುತ್ತದೆ. ಆದರೆ ಆಗಮಗಳು ಸಮಸ್ತ ವಿಷಯವನ್ನು ವ್ಯಾಪಕವಾಗಿ ಮತ್ತು ಕ್ರಮಬದ್ಧವಾಗಿ ನಿರೂಪಿಸುವ ತಾತ್ವಿಕ ಗ್ರಂಥಗಳಾಗಿದ್ದುದರಿಂದ ಇವುಗಳನ್ನು ತಂತ್ರಗಳೆಂದೂ ಕೆಲವೆಡೆ ಸಂಬೋಧಿಸಲಾಗಿದೆ. 'ವಿಷ್ಣು ಸಂಹಿತೆ'[೬] ಯಲ್ಲಿ ಸಹ "ಎಲ್ಲ ಜನರನ್ನು ಭಯದಿಂದ ರಕ್ಷಿಸುವದು ಮತ್ತು ಸಕಲಾರ್ಥವನ್ನು ಪೂರೈಸುತ್ತದೆಂಬ" ಕಾರಣಕ್ಕಾಗಿ ಇವನ್ನು 'ತಂತ್ರ' ಎಂದು ಹೇಳಲಾಗಿದೆ. ಕಾರಣ ಸೂಕ್ಷ್ಮಾಗಮಕ್ಕೆ 'ಸೂಕ್ಷ್ಮತಂತ್ರ' ವೆಂದೂ ಅಜಿತಾಗಮಕ್ಕೆ 'ಅಜಿತ ತಂತ್ರ' ವೆಂದೂ ಸಹ ಕರೆಯುತ್ತಾರೆ.

ಒಟ್ಟಾರೆ ಆಗಮಗಳು ಪರಂಪರೆಯಿಂದ ಪರಿಷ್ಕೃತವಾಗಿ ಸಾಗಿಬಂದ ಜ್ಞಾನರಾಶಿಗಳಾಗಿದ್ದು, ಭಾರತೀಯ ಸಂಸ್ಕೃತಿ ಮತ್ತು ಆತ್ಮಜ್ಞಾನದ ವಿಶ್ವಕೋಶಗಳಾಗಿವೆ.

---

೪. ಶೈವಾಗಮಗಳಲ್ಲಿ ವೀರಶೈವ, ಸಂ-- ಎಂ. ಶಿವಕುಮಾರಸ್ವಾಮಿಗಳು, – ೨೦೦೨ ಮುನ್ನುಡಿ ಪುಟ–xi

೫. ತಂತ್ರ ಸಮುಚ್ಚಯ ಭಾಗ–೧ ಪೀಠಿಕೆ, ಪುಟ–೨ Trivendrum Sanskrit Series No-151. Trivendrum

೬ ಸರ್ವೇsರ್ಥಾ ಯೇನ ತನ್ಯಂತೇ ಅತ್ರ್ಯಂತೇ ಚ ಭಯಾಜ್ಜನಾಃ। ಇತಿ ತಂತ್ರಸ್ಯ ತಂತ್ರತ್ವಂತಂತ್ರಜ್ಞಾಃ ಪರಿಚಕ್ಷತೇ । ವಿಷ್ಣುಸಂಹಿತೆ II 10 Ed.by Maha Mahopadhyaya T. Ganapatisastri, Pub. by Trivendrum Sanskrit Series-Lxxx.

ವ್ಯಾಖ್ಯೆಗಳು

ಆಗಮಗಳ ಉತ್ಪತ್ತಿ, ಅವು ಬೆಳೆದು ಬಂದ ಬಗೆ ಮತ್ತು ಅವುಗಳು ಒಳಗೊಂಡ ವಿಷಯ ವಸ್ತುವನ್ನು ಕುರಿತು ಅನೇಕ ಆಧ್ಯಾತ್ಮಿಕ ಗ್ರಂಥಗಳಲ್ಲಿ ಹಾಗೂ ಸ್ವತಃ ಆಗಮಗಳಲ್ಲಿಯೇ ಉಲ್ಲೇಖ ದೊರಕುತ್ತದೆ.

ಆಗಮಗಳ ಉತ್ಪತ್ತಿ ಕುರಿತು :

೧. **"ಆಗತಂ ಶಿವವಕ್ತ್ರಾತ್ತು ಗತಂ ಚ ಗಿರಿಜಾಮುಖೇ**
ಮತಂ ಶ್ರೀ ವಾಸುದೇವಸ್ಯ ಆಗಮಸ್ತೇನ ಕೀರ್ತಿತಃ॥"– ಭಾಸ್ಕರೀ[೭]

ಅರ್ಥಾತ್ – ಶಿವನ ಮುಖಾರವಿಂದದಿಂದ ಹೊರಬಂದು ಪಾರ್ವತಿಗೆ ಹೇಳಲ್ಪಟ್ಟಿದ್ದು ಮತ್ತು ವಾಸುದೇವನಿಗೆ-ಸಮ್ಮತವಾದದ್ದು ಆಗಮವೆಂದು ಕರೆಯಲ್ಪಡುವದು.

ತಾತ್ಪರ್ಯ– ಶಿವನಿಂದ ಪಾರ್ವತಿಗೆ ಬೋಧಿಸಲ್ಪಟ್ಟ ಜ್ಞಾನರಾಶಿಯೇ ಆಗಮಗಳು.

೨. **"ಸೃಷ್ಟಿ ಕಾಲೇ ಮಹೇಶಾನಃ ಪುರುಷಾರ್ಥ ಪ್ರಸಿದ್ಧಯೇ।**
ವಿಧತ್ತೇ ವಿಮಲಂ ಜ್ಞಾನಂ ಪಂಚಸ್ರೋತೋಽಭಿಲಕ್ಷಿತಮ್॥[೮]
– ಮೃಗೇಂದ್ರಾಗಮ

ಅರ್ಥಾತ್ – ಸೃಷ್ಟಿಯ ಆರಂಭದಲ್ಲಿ ಪರಮೇಶ್ವರನು ಭುಕ್ತಿ ಮುಕ್ತ್ಯಾತ್ಮಕ ಪುರುಷಾರ್ಥ ಸಂಪತ್ತಿಗೋಸ್ಕರ ತನ್ನ ಮುಖಗಳಾದ ಸದ್ಯೋಜಾತಾದಿ ಪಂಚಮಂತ್ರ ಪ್ರವಾಹಗಳಿಂದ ವಿಮಲ ಜ್ಞಾನವನ್ನು ದಿವ್ಯಾಗಮರೂಪವಾದುದನ್ನಾಗಿ ಮಾಡುತ್ತಾನೆ.

ತಾತ್ಪರ್ಯ– ಪರಶಿವನು ತನ್ನಲ್ಲಿ ನಿತ್ಯಸಿದ್ಧವಾದ ವಿಮಲ ಜ್ಞಾನವನ್ನು ಸೃಷ್ಟಿಯ ಮೂಲಾರಂಭದಲ್ಲಿ ನಾದರೂಪದಿಂದ ಪ್ರಕಾಶಗೊಳಿಸಿ ಬಳಿಕ ಅಧಿಕಾರಾವಸ್ಥೆಯನ್ನು ತಳೆದು ಅದನ್ನೇ ಸದಾಶಿವಾದಿ ಸ್ವರೂಪದಲ್ಲಿ ಶಬ್ದರೂಪದಿಂದ ಅಭಿವ್ಯಕ್ತಿಗೊಳಿಸಿದುದೇ ಆಗಮ.

೩. **'ಆಗಮಗಳು ಪರಮಾತ್ಮನ ವಾಣಿ ಆದಕಾರಣ ಅವುಗಳಿಗೆ ನಿತ್ಯವಾದ ಅಸ್ಥಿತ್ವವಿದೆ.**
–ಕೆ.ಸಿ. ಪಾಂಡೆ[೯]

---

೭. ಭಾಸ್ಕರಾಚಾರ್ಯರಿಂದ ರಚಿತವಾದ ಭಾಸ್ಕರಿ ಎಂಬ ಗ್ರಂಥದ ಎರಡನೆಯ ಭಾಗ ಪುಟ ೮೫

೮. ಮೃಗೇಂದ್ರಾಗಮ ಉಪೋದ್ಘಾತ ಪ್ರಕರಣ ಪದ್ಯ ೨೧ ಪುಟ ೪೭ Ed.by Vidwan N. Krishna Shastri and Vyakaran Siromani K.M. Balasubramanya Shastri. Pub. by. Saivagama Shiddanata Paripalana Sangha Devakottai Madras 1928.

೯. ಶಿವಾಗಮ ಸೌರಭ, ಸಂ– M. G. ನಂಜುಂಡಾರಾಧ್ಯ, ಪುಟ ೧೪, ೧೯೮೬

೪. "ಅನೇನ ಅವಗಮ್ಯತೇ ಸರ್ವಮಿತ್ಯಾಗಮಃ। – ಆಗಮ ಪರಿಜ್ಞಾನ.[೧೦]

ಅರ್ಥಾತ್ – ಯಾವ ಜ್ಞಾನದಿಂದ ಎಲ್ಲವೂ ತಿಳಿಯಲ್ಪಡುತ್ತದೆಯೋ ಅದೇ ಆಗಮ.

ತಾತ್ಪರ್ಯ– ಆಗಮಗಳು ಪರಶಿವನ ಮುಖದಿಂದ ಹೊರಟ ಸ್ಪಷ್ಟವಾಣಿಗಳಾಗಿದ್ದು ಸರ್ವಜೀವರಿಗೂ ವಿಮಲಜ್ಞಾನವನ್ನು ಒದಗಿಸುವುದರ ಮೂಲಕ ಸರ್ವವಿಷಯಗಳ ಸ್ವರೂಪವನ್ನರುಹುವವು. ಇಲ್ಲಿ ಯಾವುದೇ ಅರ್ಥ ನಿರ್ಣಯದ ಸಂದೇಹಕ್ಕೆಡೆಯೇ ಇಲ್ಲ. ಇವು ಧರ್ಮದ ಸಾಧನಾ ಪ್ರಮಾಣಗಳಾಗಿದ್ದು ದಿವ್ಯಜ್ಞಾನವನ್ನೊಳಗೊಂಡ ಬದುಕಿನ ವಿಧಾನವನ್ನು ಅರಹುತ್ತವೆ.

ಆಗಮಗಳು ಬೆಳೆದು ಬಂದ ಬಗೆ :

೫. "ಆಗಮೋ ನಾಮ ಆ ಮಹೇಶ್ವರಾತ್ ಗುರು ಪಾರಂ ಪರ್ಯಾಗತಂ ಶಾಸ್ತ್ರಂ"– ಪಾಶುಪತಸೂತ್ರ[೧೧]

ಅರ್ಥಾತ್ – ಆಗಮಗಳು ಶಿವನಿಂದ ಪ್ರಾಪ್ತವಾಗಿ ಅನಂತರ ಗುರು ಶಿಷ್ಯ ಪರಂಪರೆಯ ಮೂಲಕ ಬಂದ ಶಾಸ್ತ್ರಗಳಾಗಿವೆ.

ತಾತ್ಪರ್ಯ– ಈಶ್ವರನಿಂದ ಮನುಷ್ಯರವರೆಗೆ ಬೋಧಕಬೋಧ್ಯ ಪರಂಪರಾಪದ್ಧತಿಯಿಂದ ಬಂದವುಗಳಾಗಿರುವುದರಿಂದ ಇವುಗಳಿಗೆ ಆಗಮಗಳೆಂದು ಕರೆಯುವರು.

೬. "ಶಿವಂ ಶಿವಜ್ಞಾನಾತ್ಮಕಮವಬೋಧರೂಪಂ ಪರಮಶಿವೇ ವಿದ್ಯತೇ।
ಶಾಬ್ದರೂಪಂತು ಶಬ್ದರೂಪಾತ್ವಮೇವ ಪರಮಾತ್ಮ ಕಾರಣಕಃ ಪರಮೇಶ್ವರ :
ಸೃಷ್ಠಿಕಾಲೇಸ್ವಾತ್ಮನಿ ವಿದ್ಯಮಾನಮವ ಬೋಧರೂಪಮೇವ ಶಬ್ಧರೂಪಂ ಕೃತ್ವಾ
ಸರ್ವಾನುಜಿಘೃಕ್ಷಯಾ ಗುರು ಪರಂಪರಯಾ ಯೋಗ್ಯೇಷು ಪ್ರವರ್ತಯತಿ॥[೧೨]

– ಶಿವಯೋಗ ವರ್ಣನ.

ಅರ್ಥಾತ್–ಸೃಷ್ಟಿಯ ಸಮಯದಲ್ಲಿ ಶಿವನು ಈ ಅತ್ಯುತ್ತಮ ಜ್ಞಾನವನ್ನು ಪಡೆಯಲರ್ಹರಾದವರನ್ನು ಉದ್ಬೋಧಗೊಳಿಸುತ್ತಾನೆ. ಅವರಿಗೆ ಶಿವನಿಂದ ಪ್ರಾಪ್ತವಾದ ಜ್ಞಾನವು ನಂತರ ಗುರು ಶಿಷ್ಯ ಪರಂಪರೆಯ ಮೂಲಕ ಸಾಗಿ ಬಂದ ಶಾಸ್ತ್ರವೇ ಆಗಮ.

---

೧೦. ಆಗಮ ಪರಿಜ್ಞಾನ ಅಥವಾ ಪ್ರಭುತಿಲಕ ಪುಟ ೯೭ By Sambhulinga Sivacharya pub. By Pandit Kashinatha Shastri Mysore 1930.

೧೧. ಪಾಶುಪತ ಸೂತ್ರ ಕೌಂಡಿನ್ಯ ಭಾಷ್ಯ ಸಹಿತ (ಕರ್ನಾಟಕ ಕಲಾಕುಲಶೈವರ ಇತಿಹಾಸ ಗ್ರಂಥದಲ್ಲಿ ಉದ್ಧೃತ ಪುಟ ೭ By Kapatarala Krushnaraya, Pub. By Kannada Research Institute Karnaaka Univerisity Dharwad.

೧೨. ಶಿವಯೋಗವರ್ಣನ ಪುಟ ೧ Manuscript No. R. 16809 Government Oriental Manusript Library Madras

೭. **"ಶೈವಾಗಮಗಳು ದೈವೇಚ್ಛೆಗೆ ಅನುಗುಣವಾಗಿ ವ್ಯಕ್ತವಾಗುತ್ತವೆ ಅಥವಾ ಪುನರ್ವ್ಯಕ್ತವಾಗುತ್ತವೆ." – ತ್ರಿಕಸಿದ್ಧಾಂತ.**[೧೩]

೮. **"ಆಗಮ ಸಿದ್ಧಕೃತಃ" – ಚಕ್ರಧರನ ಸೂತ್ರಪಾಠ**

ಅರ್ಥಾತ್ – ಆಗಮಗಳು ಸಿದ್ಧರಿಂದ ರಚಿಸಲ್ಪಟ್ಟವುಗಳು.

ತಾತ್ಪರ್ಯ– ಗುರುಶಿಷ್ಯ ಪರಂಪರೆಯ ಮೂಲಕ ವಾಙ್ಮಯರೂಪದಲ್ಲಿ ಪ್ರವಹಿಸಿದ ದಿವ್ಯಜ್ಞಾನವನ್ನು ಕಾಲಾನಂತರ ಸಿದ್ಧಪುರುಷರು ಗ್ರಾಂಥಿಕ ರೂಪದಲ್ಲಿ ರಚಿಸಿದರು. ಐತಿಹಾಸಿಕ ದೃಷ್ಟಿಯಿಂದಲೂ ಈ ಮಾತು ನಿಜ. ಸಿದ್ಧ ಪುರುಷರ ಸಂಖ್ಯೆಯು ಇಷ್ಟಿತ್ತೆಂದು ಹೇಳುವದು ಹೇಗೆ ಅಸಾಧ್ಯವೋ ಹಾಗೆಯೇ ಆಗಮಗಳು ಇಂತಹ ಕಾಲದಲ್ಲೇ ರಚಿಸಲ್ಪಟ್ಟವುಗಳೆಂದು ಹೇಳುವದೂ ಕಷ್ಟ.

ಈ ಮೇಲಿನ ಎಲ್ಲಾ ವ್ಯಾಖ್ಯೆಗಳನ್ನು ಅನುಲಕ್ಷಿಸಲಾಗಿ ಆಗಮಗಳೆಂದರೆ ಶಿವನಿಂದ ಪಾರ್ವತಿಗೆ ಬೋಧಿಸಲ್ಪಟ್ಟ ದಿವ್ಯಜ್ಞಾನರಾಶಿಗಳಾಗಿವೆ. ಸೃಷ್ಟಿಯ ಉಗಮಕಾಲದಲ್ಲಿ ಶಿವನು ಸದಾಶಿವಾದಿ ಸ್ವರೂಪದಲ್ಲಿ ಈ ಅತ್ಯುತ್ತಮ ಜ್ಞಾನವನ್ನು ಪಡೆಯಲರ್ಹ ರಾದವರನ್ನು ಉದ್ಬೋಧಗೊಳಿಸಿ ಅವರಿಗೆ ತನ್ನ ಸದ್ಯೋಜಾತಾದಿ ಪಂಚಮುಖಗಳಿಂದ ಶಬ್ದರೂಪದಿಂದ ಈ ದಿವ್ಯಜ್ಞಾನವನ್ನು ಬೋಧಿಸುತ್ತಾನೆ. ಹೀಗೆ ಶಿವನಿಂದ ಈ ದಿವ್ಯಜ್ಞಾನವನ್ನು ಪಡೆದ ಜ್ಞಾನಿಗಳು ಅದನ್ನು ತಮ್ಮ ಶಿಷ್ಯರಿಗೆ ಬೋಧಿಸಿದರು. ನಂತರ ಈ ಬೋಧ್ಯರೇ ಬೋಧಕರಾಗಿ ತಮ್ಮ ಶಿಷ್ಯರಿಗೆ ಈ ದಿವ್ಯಜ್ಞಾನವನ್ನು ಬೋಧಿಸಿದರು. ಹೀಗೆ ಗುರುಶಿಷ್ಯ ಪರಂಪರೆಯ ಮೂಲಕ ವಾಙ್ಮಯ ರೂಪದಲ್ಲಿ ಪ್ರವಹಿಸಿದ ಈ ಜ್ಞಾನವನ್ನು ಕಾಲಾನಂತರ ಸಿದ್ಧಪುರುಷರು ಗ್ರಾಂಥಿಕ ರೂಪದಲ್ಲಿ ರಚಿಸಿದರು. ಹೀಗೆ ಪರಂಪರೆಯಿಂದ ಪರಿಷ್ಕೃತವಾಗಿ ಬಂದ ಜ್ಞಾನ ಹಾಗೂ ಅಂತಹ ಜ್ಞಾನವು ಸಂಗ್ರಹಿಸಲ್ಪಟ್ಟಿರುವ ಗ್ರಂಥರಾಶಿಯು ಕೂಡಾ 'ಆಗಮ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ಆಗಮಗಳು ಒಳಗೊಂಡ ವಿಷಯ ವಸ್ತು :

೯. "ಆಗಚ್ಛಂತಿ ಬುದ್ದಿಮಾರೋಹನ್ತಿ ಯಸ್ಮಾದಭ್ಯುದಯ
ನಿಃಶ್ರೇಯಸೋ ಪಾಯಃ ಸ ಅಗಮಃ। - ತತ್ವವೈಶಾರದೀ.[೧೪]

---

೧೩. ಅಭಿನವಗುಪ್ತ An Historical & Philosophical Study ಪುಟ ೬೯-೭೦ by Dr. ಕೆ.ಸಿ.ಪಾಂಡೆ M.A., Ph.D. M.O.L. Shastri, Pub by. Chowkhamba Sanskrit Series Benaras City 1935.

೧೪. ತತ್ವ ವೈಶಾರದೀ ೧-೭ By Vacaspati Misra (ಶಿವಾಗಮ ಸೌರಭ ಸಂಪಾದಕ ಆಸ್ಥಾನ ವಿದ್ವಾನ್ ಎಮ್. ಜಿ. ನಂಜುಂಡಾರಾಧ್ಯ ಅಗಮ ಶಬ್ದದ ನಿರ್ವಚನ-ಲೇಖನದ ಪುಟ ೧೩ ರಲ್ಲಿ ಉದ್ಧೃತ Pub. By Sri Nidumamidi Srishaila Mahaphita Parakashan Bangalore 1986 Feb, 16.

ಅರ್ಥಾತ್ – ಆಗಮಗಳು ಅಭ್ಯುದಯದ ಮಾರ್ಗವನ್ನು ನಿಃಶ್ರೇಯಸ್ಸಿನ ಮಾರ್ಗವನ್ನೂ ಉಪದೇಶಿಸುತ್ತವೆ.

ತಾತ್ಪರ್ಯ– ಅಭ್ಯುದಯವೆಂದರೆ ಐಹಿಕ ಸುಖದ ಉತ್ಕರ್ಷ ಮತ್ತು ನಿಃಶ್ರೇಯಸ್ಸು ಎಂದರೆ ಆತ್ಮಿಕ ಉನ್ನತಿ ಎಂದರ್ಥ. ಆಗಮಗಳಲ್ಲಿ ಆದಿ ಭೌತಿಕ ಸುಖವನ್ನು ಪ್ರಾಪ್ತಿ ಮಾಡಿಕೊಳ್ಳುವುದರೊಂದಿಗೆ ಆತ್ಮಿಕಾನಂದವನ್ನು ಪಡೆಯುವ ಮಾರ್ಗವು ಬೋಧಿಸಲ್ಪಟ್ಟಿದೆ. ಕಾರಣ ಯಾವ ಶಾಸ್ತ್ರದಿಂದ ಮಾನವನಿಗೆ ಭೋಗ ಮತ್ತು ಮೋಕ್ಷದ ಉಪಾಯಗಳು ಬುದ್ಧಿಯಲ್ಲಿ ಬರುತ್ತವೆಯೋ ಅದು ಆಗಮಶಾಸ್ತ್ರ.

೧೦. "ಏತತ್ತೇ ಶಿವ ಸದ್ಭಾವಃ ಶಿವವಕ್ತ್ರಾದ್ವಿನಿಃಸೃತಃ। ಗುಹ್ಯಾದ್ ಗುಹ್ಯತರಂ ಗುಹ್ಯಂ ಗ್ರಹೀತವ್ಯಂ ಪ್ರಯತ್ನತಃ।[೧೫] **–ಕಾಲೋತ್ತರಾಗಮ**

ಅರ್ಥಾತ್ – ಶಿವಭಾವವನ್ನು ಅನುಗ್ರಹಿಸುವ ಶಿವನ ಮುಖಗಳಿಂದ ಹೊರಹೊಮ್ಮಿದ ಅತ್ಯಂತ ಗೂಢವಾದ ಈ ಜ್ಞಾನವನ್ನು ಪ್ರಯತ್ನ ಪೂರ್ವಕವಾಗಿ ಗ್ರಹಿಸಬೇಕು.

ತಾತ್ಪರ್ಯ– ಆಗಮಗಳು ಗೂಢತತ್ವಗಳನ್ನು, ಗರ್ಭಿತಾರ್ಥವನ್ನು, ಗೌಪ್ಯ ವೈಭವವನ್ನು, ತತ್ವಾರ್ಥಗಳ ಬೆಡಗನ್ನು ಭಾವಪೂರ್ಣವಾಗಿ ಬಿತ್ತರಿಸುತ್ತವೆ. ಆಗಮಗಳಲ್ಲಿ ಗರ್ಭಿತಭಾವಗಳದ್ದೇ ಒಂದು ವೈಭವ. ಸೈದ್ಧಾಂತಿಕ ಅರ್ಥಗೌರವವಂತೂ ಅತ್ಯಂತ ಮನೋಜ್ಞವಾಗಿ ಮೂಡಿಬಂದಿವೆ.

೧೧. "ಅಥಾತ್ಮ ಮಲ ಸಂತಾನ ಪಶುತ್ವ ವಿನಿವೃತ್ತಯೇ ।
ವ್ಯಕ್ತಯೇ ಚ ಶಿವತ್ವಸ್ಯ ಶಿವಜ್ಞಾನಂ ಪ್ರವರ್ತತೇ॥[೧೬] **– ಸ್ವಾಯಂಭುವಾಗಮ**

ಅರ್ಥಾತ್ – ಆತ್ಮ ಮಲದ ಸಂತಾನವೆಂಬ ಪಶುತ್ವವನ್ನು ನಿವಾರಿಸಲು ಮತ್ತು ಶಿವತ್ವವನ್ನು ಬೋಧಿಸಲು ಈ ಶಿವಜ್ಞಾನ ಪ್ರವರ್ತವಾಗಿದೆ.

ತಾತ್ಪರ್ಯ– ಆತ್ಮರ ಆಣವಾದಿ ಮಲತ್ರಯವು ತೊಲಗಿ ಪಶುತ್ವ (ಜೀವಭಾವ) ನಿವೃತ್ತಿಯೂ ಶಿವತ್ವಾಭಿವ್ಯಕ್ತಿಯೂ ಸಿದ್ಧಿಸಲೋಸುಗವೇ ಶಿವಜ್ಞಾನವು ಆಗಮವಾಗಿ ಪ್ರವರ್ತಿತವಾಗಿದೆ.

೧೨." ಕಾಮಿಕಾದೀನಿ ತಂತ್ರಾಣಿ ಸಿದ್ಧಾಂತ ಇತಿ ಕೀರ್ತಿತ ః।[೧೭] **– ಕಾರಣಾಗಮ**

---

೧೫. ಕಾಲೋತ್ತರಾಗಮ ಪುಟ ೨೯ Manuscript No. 14444 Government Oriental Manuscript Library Madras.

೧೬. ಸ್ವಯಂಭುವಾಗಮವು (ಆಗಮ ಪರಿಜ್ಞಾನ ಅಥವಾ ಪ್ರಭಾತಿಲಕದಲ್ಲಿ ಉದ್ಧತ, ಶಂಭುಲಿಂಗ ಶಿವಾಚಾರ್ಯ ವಿರಚಿತ ಪುಟ ೩೮ ಪ್ರ ಃ ಪಂಡಿತ ಕಾಶಿನಾಥ ಶಾಸ್ತ್ರೀ ಮೈಸೂರ ೧೯೩೦)

೧೭. ಕಾರಣಾಗಮ ಭಾಗ –೧ ಷಟಲ ೨೬ ಪದ್ಯ ೬೦ Ed. by Shanmukha Sundara Mudaliyar Madras (Two parts) 1900 –1902

ಅರ್ಥಾತ್ – ಕಾಮಿಕ ಮುಂತಾದ ತಂತ್ರಗಳನ್ನು ಸಿದ್ಧಾಂತವೆಂದು ಹೇಳಲಾಗಿದೆ.

ತಾತ್ಪರ್ಯ– ದಿವ್ಯಾಗಮ ವಾಙ್ಮಯದಲ್ಲಿ ಜ್ಞಾನ, ಜ್ಞೇಯ, ಸಾಧನ, ಸಾಧ್ಯಾದಿ ವಿಷಯಗಳು ಸಕ್ರಮವಾಗಿಯೂ, ನಿರ್ಣಿತವಾಗರ್ಥರೂಪವಾಗಿಯೂ ಅತ್ಯಂತ ಸ್ಫುಟವಾಗಿಯೂ ವಿವರಿಸಲ್ಪಡುವುದರಿಂದ ಅವು ಸಿದ್ಧಾಂತವೆಂಬ ಅನ್ವರ್ಥನಾಮ ಹೊಂದಿವೆ.

೧೩. **"ಆಗಮಾ ಬಹುಧಾ ಪ್ರೋಕ್ತಾಃ ಸಮಸ್ತಾರ್ಥಾವಬೋಧಕಾಃ ।**[೧೮]

– ಸೂಕ್ಷ್ಮಾಗಮ

ಅರ್ಥಾತ್– ಆಗಮಗಳು ಎಲ್ಲಾ ಅರ್ಥವನ್ನೂ ಒಳಗೊಂಡಿದ್ದು ಆಧ್ಯಾತ್ಮ ತತ್ವವನ್ನು ಬೋಧಿಸುತ್ತವೆ.

ತಾತ್ಪರ್ಯ– ಅಪಾರವಾದ ಆಗಮರಾಶಿಯಲ್ಲಿ ವಿವರಿಸದೇ ಇರುವ ವಿಷಯಗಳೇ ಇಲ್ಲ, ಇಹ ಮತ್ತು ಪರಕ್ಕೆ ಬೇಕಾದ ಹಿತೋಕ್ತಿಗಳು, ಧರ್ಮ ದರ್ಶನಗಳು, ಮಂತ್ರ ತಂತ್ರಗಳು, ತ್ಯಾಗ–ಭೋಗ ಯೋಗಗಳು, ಶಿಲ್ಪ, ಚಿತ್ರ, ಸಂಗೀತ, ಜ್ಯೋತಿಷ್ಯ, ಕೃಷಿ... ಒಟ್ಟಾರೆ ಆಗಮಗಳು ಭಾರತೀಯ ಆತ್ಮಜ್ಞಾನದ ವಿಶ್ವಕೋಶಗಳಾಗಿವೆ.

ಈ ಮೇಲಿನ ಎಲ್ಲಾ ವ್ಯಾಖ್ಯೆಗಳನ್ನು ಅನುಲಕ್ಷಿಸಲಾಗಿ ಆಗಮಗಳು ವಿಮಲಜ್ಞಾನವನ್ನು ಹಾಗೂ ಗುಹ್ಯಾದ್ ಗುಹ್ಯತರವಾದ ಶಿವಜ್ಞಾನವನ್ನೊಳಗೊಂಡ ಶಾಸ್ತ್ರಗಳಾಗಿದ್ದು, ಇವು ಮಾನವನಿಗೆ ಅಭ್ಯುದಯದ ಮಾರ್ಗವನ್ನು ಬೋಧಿಸುವ ಹಾಗೂ ನಿಃಶ್ರೇಯಸ್ಸಿನ ಪ್ರಾಪ್ತಿಯನ್ನುರುಹುವ ಸಿದ್ಧಾಂತಗಳಾಗಿವೆ ಎಂಬುದು ವೇದ್ಯವಾಗುತ್ತದೆ.

೨.೨ ಪ್ರಧಾನ ಶಿವಾಗಮಗಳು

ಕಾಮಿಕಂ ಯೋಗಜಂ ಚೈವ ಕಾರಣಂ ಅಜಿತಂ ತಥಾ
ದೀಪ್ತಂ ಸೂಕ್ಷ್ಮಂ ಸಹಸ್ರಂ ಚ ಅಂಶುಮಾನ್ ಸುಪ್ರಭೇದಕಂ
ವಿಜಯಂ ಚೈವ ನಿಃಶ್ವಾಸಂ ಸ್ವಯಂಭುವಮಥಾನಲಂ
ವೀರಂ ಚ ರೌರವಂ ಚೈವ ಮಕುಟಂ ವಿಮಲಂ ತಥಾ
ಚಂದ್ರಜ್ಞಾನಂ ಚ ಬಿಂಬಂ ಚ ಪ್ರೋದ್ಗೀತಂ ಲಲಿತಂ ತಥಾ।
ಸಿದ್ಧಂ ಸಂತಾನ ಸರ್ವೋಕ್ತಂ ಪಾರಮೇಶ್ವರ ಮೇವಚ ।
ಕಿರಣಂ ವಾತುಲಂ ಚೈವ ಅಷ್ಟಾವಿಂಶತಿ ಸಂಹಿತಾಃ।[೧೯]

---

೧೮. ಸೂಕ್ಷ್ಮಾಗಮ ಕ್ರಿಯಾಪಾದ ಪ್ರಥಮ ಪಟಲ ಶ್ಲೋಕ ೧೨ ಪುಟ ೩ (Edited by M. Shivakumar Swami Pub. by Veerashaiva Anusandhana Samsthan Bangalore, 2001)

೧೯. ಸುಪ್ರಭೇದಾಗಮ ತಂತ್ರಾವತಾರ ಪಟಲ (೩ ರಿಂದ ೬)

ಶಿವಾಗಮಗಳು ಕಾಮಿಕಾದಿ ವಾತುಲ ಪರ್ಯಂತ ೨೮ ಎಂದು ಪ್ರಸಿದ್ಧವಾಗಿವೆ. ಇವುಗಳಿಗೆ ಶೈವ ಸಿದ್ಧಾಂತ ಸಂಹಿತೆಗಳೆಂಬ ಹೆಸರೂ ಉಂಟು. ಕಾರಣಾಗಮ, ಸುಪ್ರಭೇದಾಗಮ, ವಿವೇಕ ಚಿಂತಾಮಣಿ, ಶಿವತತ್ವ ರತ್ನಾಕರ ಗ್ರಂಥಗಳಲ್ಲಿ ಪ್ರಧಾನ ಶಿವಾಗಮಗಳ ಹೆಸರು ಹೀಗೆ ಉಕ್ತವಾಗಿವೆ.

೧. ಕಾಮಿಕ	೧೧. ವಿಜಯ	೨೧. ಲಲಿತ
೨. ಯೋಗಜ	೧೨. ನಿಶ್ವಾಸ	೨೨. ಪ್ರೋದ್ಗೀತ
೩. ಅಚಿಂತ್ಯ	೧೩. ಸ್ವಾಯಂಭುವ	೨೩. ಸಿದ್ಧ
೪. ಕಾರಣ	೧೪. ಅನಲ	೨೪. ಸಂತಾನ
೫. ಅಜಿತ	೧೫. ವೀರ	೨೫. ಸರ್ವೋತ್ತರ
೬. ದೀಪ್ತ	೧೬. ರೌರವ	೨೬. ಪಾರಮೇಶ್ವರ
೭. ಸೂಕ್ಷ್ಮ	೧೭. ಮಕುಟ	೨೭. ಕಿರಣ
೮. ಸಹಸ್ರ	೧೮. ವಿಮಲ	೨೮. ವಾತುಲ
೯. ಅಂಶುಮಾನ್	೧೯. ಚಂದ್ರಜ್ಞಾನ	
೧೦. ಸುಪ್ರಭೇದ	೨೦. ಬಿಂಬ	

ನಿಷ್ಕಲ ಪರಶಿವನು ಪಂಚ ಮಂತ್ರಾತ್ಮಕ ಸದಾಶಿವರೂಪ ಸ್ವೀಕರಿಸಿ, ಜಗತ್ ಸೃಜಿಸಿ, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಪಂಚಮುಖ ತಳೆದು, ಈ ಪಂಚ ಮುಖಗಳಿಂದ ವಿಮಲಜ್ಞಾನವನ್ನು ಪ್ರವಹಿಸಿದನು. ಹೇಗೆಂದರೆ –

> ಕಾಮಿಕಾಧ್ಯಾಜಿತಾನ್ತಾಶ್ಚ ಸದ್ಯೋಜಾತ ಮುಖೋದ್ಭವಾಃ।
> ದೀಪ್ತಾದಿ ಸುಪ್ರಭೇದಾಖ್ಯಾ ವಾಮದೇವ ಮುಖೋದ್ಭವಾಃ।
> ವಿಜಯಾದ್ಯಾಸ್ತು ವೀರಾನ್ತಾಃ ಪಂಚೈತೇ ಘೋರವಕ್ತ್ರ ಜಾಃ।
> ರೌರವಾದ್ಯಾಸ್ತು ಬಿಂಬಾನ್ತಾಃ ಪುರುಷಾಖ್ಯಾನನ್ನೋದ್ಭವಾಃ।
> ಪ್ರೋದ್ಗೀತಾದ್ಯಷ್ಟತನ್ತ್ರಾಸ್ತು ಚೈಶಾನಾನಸಂಭವಾಃ।[೨೦]

ಎಂಬುದಾಗಿ ಕಾಮಿಕ–ಯೋಗಜ–ಚಿಂತ್ಯ–ಕಾರಣ–ಅಜಿತ ಎಂಬೈದು ಆಗಮಗಳು ಸದ್ಯೋಜಾತ ಮುಖದಿಂದಲೂ, ದೀಪ್ತ–ಸೂಕ್ಷ್ಮ–ಸಹಸ್ರ– ಅಂಶುಮಾನ್–ಸುಪ್ರಭೇದ ಎಂಬೈದು ಆಗಮಗಳು ವಾಮದೇವ ಮುಖದಿಂದಲೂ, ವಿಜಯ–ನಿಃಶ್ವಾಸ–ಸ್ವಾಯಂಭುವ–ಅನಲ–ವೀರ ಎಂಬೈದು ಆಗಮಗಳು ಅಘೋರ ಮುಖದಿಂದಲೂ, ರೌರವ–ಮಕುಟ–ವಿಮಲ–ಚಂದ್ರಜ್ಞಾನ–ಬಿಂಬ ಎಂಬೈದು ಆಗಮಗಳು ತತ್ಪುರುಷ ಮುಖದಿಂದಲೂ, ಪ್ರೋದ್ಗೀತ–ಲಲಿತ–ಸಿದ್ಧ–ಸಂತಾನ–ಸರ್ವೋತ್ತರ–ಪಾರಮೇಶ್ವರ–ಕಿರಣ–ವಾತುಲ ಎಂಬ ಎಂಟಾಗಮಗಳು ಈಶಾನ ಮುಖದಿಂದಲೂ ಪ್ರಕಟವಾದವು.

---

೨೦. ಶ್ರೀಶಂಭುಲಿಂಗ ಶಿವಾಚಾರ್ಯರ ಆಗಮಪರಿಜ್ಞಾನ ಗ್ರಂಥದ ಪುಟ ೨೬ ಪ್ರಕಟನೆ ೧೯೩೮

ಉಪಾಗಮಗಳು

ಶಿವಾಗಮ ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿ ಮಾತ್ರವಲ್ಲ ವಿಶ್ವಸಾಹಿತ್ಯದಲ್ಲಿಯೇ ಅತ್ಯಂತ ಬೃಹತ್ತಾದ ಸಾಹಿತ್ಯ. ಕಾಮಿಕಾದಿ ಸುಪ್ರಭೇದಾಂತಗಳಾದ ಹತ್ತು ಸಂಹಿತೆಗಳು ಶಿವಸಂಹಿತೆಗಳೆಂದು, ವಿಜಯಾದಿವಾತುಲಾಂತಗಳಾದ ಹದಿನೆಂಟು ಸಂಹಿತೆಗಳು ರುದ್ರಸಂಹಿತೆಗಳೆಂದು ಪ್ರಸಿದ್ಧವಾಗಿದೆ.

ವೀರಶೈವ ಕೌಸ್ತುಭದಲ್ಲಿ ೧೦ ಶಿವಾಗಮಗಳಿಗೆ ೧೫೮ ಉಪಾಗಮಗಳು ಮತ್ತು ೧೮ ರೌದ್ರಾಗಮಗಳಿಗೆ ೧೫೦ ಉಪಾಗಮಗಳಿರುವುದನ್ನು ಉಲ್ಲೇಖಿಸಲಾಗಿದೆ. ಅಲ್ಲದೇ ೨೮ ಶಿವಾಗಮಗಳಲ್ಲಿನ ಶ್ಲೋಕಗಳ ಒಟ್ಟು ಸಂಖ್ಯೆಯನ್ನು ಇದೇ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ.

ದಶಶತ ಸಹಸ್ರಾಯುತ ಲಕ್ಷಪ್ರಯುತ ಕೋಟಯಃ ಕ್ರಮಶಃ।
ಅರ್ಬುದ ವೃಂದ ಖರ್ವೋ ನಿಖರ್ವ ಮಹಾಪದ್ಮ ಕಂಬವಸ್ತೇಽಸ್ಮಾತ್।
ಜಲಾಧಿಶ್ಚಾಂತ್ಯಂ ಮಧ್ಯಂ ಪರಾರ್ಧಮಿತಿ ದಶ ಗುಣೋತ್ತರಂ ಸಂಜ್ಞಾಃ।
ಸಂಖ್ಯಾ ಯಾಸ್ಥಾನಾನಾಂ ವ್ಯವಹಾರಾರ್ಥಂ ಕೃತಾಃ ಪೂರ್ವೈರಿತಿ ಸ್ಮೃತಂ।[೨೧]

ಎಂದು ಶಿವಾಗಮಗಳ ಶ್ಲೋಕ ಸಂಖ್ಯೆಯನ್ನು ಅರುಹಿದ್ದಾರೆ.

ನಿಜಗುಣರು ೨೮ ಶಿವಾಗಮಗಳ ಶ್ಲೋಕ ಸಂಖ್ಯೆಯನ್ನು ಒಟ್ಟುಗೂಡಿಸಿ ೨ ಶಂಖ, ೧ ಪದ್ಮ, ೧ ಅರ್ಬುದ, ೧೯ ಕೋಟಿ, ೩೮ ಲಕ್ಷ, ೪೪ ಸಾವಿರ ಶ್ಲೋಕಗಳು (೨೦,೧೦,೦೦,೧೦,೧೯,೩೮,೪೪,೦೦೦) ಇವೆ ಎಂದು ತಿಳಿಸಿದ್ದಾರೆ.[೨೨] ಇನ್ನು ಉಪಾಂಗಗಳ(೨೦೮) ಶ್ಲೋಕಗಳು ಅವೆಷ್ಟೋ! ಅವು ಅಳತೆಗೋಲಿಗೆ ಸಿಕ್ಕುವಂತಿಲ್ಲ!

ಮಹಾಯಾತ್ರೆಯಲ್ಲಿ ೧೯೮ ಉಪಾಗಮಗಳನ್ನು ಪಟ್ಟಿ ಮಾಡಿದೆ. ಆದರೆ ವೀರಶೈವ ಕೌಸ್ತುಭವು ೩೦೮ ಉಪಾಗಮಗಳೆಂದು ಹೇಳಿರುವುದುಂಟು. ಇದರಿಂದ ಆಗಮಸಾಹಿತ್ಯದ ವ್ಯಾಪ್ತಿ ಹಾಗೂ ಗಾತ್ರಗಳ ಕಲ್ಪನೆ ಉಂಟಾಗುತ್ತದೆ.

ಪ್ರಧಾನ ಶಿವಾಗಮಗಳು, ಅದರಲ್ಲಿಯ ಶ್ಲೋಕ ಸಂಖ್ಯೆ ಮತ್ತು ಉಪಾಗಮಗಳನ್ನು ಕೆಳಗಿನಂತೆ ಪಟ್ಟಿಮಾಡಬಹುದು.[೨೩]

---

೨೧. ಶಿವಾಗಮಸೌರಭ,(೧೯೮೬) ಭಾಗ ೧, ಪುಟ ೧೦

೨೨. ವಿವೇಕ ಚಿಂತಾಮಣಿಯ ಎರಡನೆಯ ಪ್ರಕರಣ

೨೩. ಡಾ. ಆರ್.ಸಿ. ಹಿರೇಮಠರವರ ಮಹಾಯಾತ್ರೆ ಪುಟ ೨೮-೩೪ ಮತ್ತು ಶಿವಾಗಮಸೌರಭ,(೧೯೮೬) ಭಾಗ ೧, ಪುಟ ೮, ೯.

ಅ. ಸಂ	ಶಿವಾಗಮಗಳು	ಶ್ಲೋಕ ಸಂಖ್ಯೆ	ಉಪಾಗಮಗಳು
೧.	ಕಾಮಿಕ	ಪರಾರ್ಧ	ಉತ್ತರ, ಭೈರವೋತ್ತರ, ನಾರಸಿಂಹ
೨.	ಯೋಗಜ	ಒಂದುಲಕ್ಷ	ವೀಣಾಸಿರೋತ್ತರ, ತಾರಕ, ಸಾಂಖ್ಯ, ಶಾಂತಿ, ಆತ್ಮಯೋಗ
೩.	ಅಚಿಂತ್ಯ	ಒಂದು ಲಕ್ಷ	ಸುಚಿಂತ್ಯ, ಶುಭ, ವಾಮ, ಪಾಪನಾಶಕ, ಕರೋದ್ಭವ, ಅಮೃತ
೪.	ಕಾರಣ	ಒಂದುಕೋಟಿ	ಕಾರಣ, ಪಾವನ, ದೌರ್ಜನ್ಯ, ಮಹೇಂದ್ರ, ಭೀಮ, ಮರಣ, ಈಶಾನ
೫.	ಅಜಿತ	ಒಂದುಲಕ್ಷ	ಪ್ರಭೂತ / ಪ್ರಭುತ್ವ, ವೀರೋದ್ಭೂತ, ಪಾರ್ವತಿ, ಪದ್ಮಸಂಹಿತೆ
೬.	ದೀಪ್ತ	ಒಂದು ಲಕ್ಷ	ಅಮೇಯ, ಅಪ್ರತಿಮ, ಅಪ್ಯಾಗಮ, ಸಂಖ್ಯಾಗಮ, ಅಭಿತೈಜಸಾಗಮ, ಅದ್ಭುತ, ಆನಂದಾಗಮ, ಮಾಧವೋದ್ಭೂತ, ಅಕ್ಷಯ
೭.	ಸೂಕ್ಷ್ಮ	ಒಂದು ಪದ್ಮ	ಸೂಕ್ಷ್ಮಸಂಹಿತೆ
೮.	ಸಹಸ್ರ	ಒಂದು ಶಂಖ	ಅತೀತಾಗಮ, ಅಮಳಾಗಮ, ಶುದ್ಧಾಗಮ, ಅಪ್ರೇಯಾಗಮ, ಜ್ಯೋತಿರ್ಭವ, ಪ್ರಬುದ್ಧ, ವಿಬುದ್ಧ, ಹಸ್ತಾಗಮ, ಅಲಂಕಾರಾಗಮ, ಶುಭೋದಯಾಗಮ
೯.	ಅಂಶುಮಾನ್	ಹತ್ತುಲಕ್ಷ	ವಿದ್ಯಾಪುರಾಣ, ಭಾಸ್ಕರ, ನೀಲಲೋಹಿತ, ಭೂತತಂತ್ರ, ಆತ್ಮಾಲಂಕಾರ, ಕಾಶ್ಯಪಾಗಮ, ಗೌತಮಾಗಮ, ಬ್ರಹ್ಮಾಗಮ, ವಶಿಷ್ಠಾಗಮ, ಮಹೇಂದ್ರಾಗಮ, ಈಶಾನ್ಯೋತ್ತರಾಗಮ, ಪ್ರವರಣಾಗಮ
೧೦.	ವಿಜಯ	ಮೂರು ಕೋಟಿ	ವಿಜಯತಂತ್ರ, ಉದ್ಭವ ತಂತ್ರ, ಸೌಮ್ಯ ತಂತ್ರ, ಅಘೋರ ತಂತ್ರ, ಮೃತ್ಯುನಾಶಕ ತಂತ್ರ, ಕುಬೇರ ತಂತ್ರ, ವಿಮಲ ತಂತ್ರ, ಮಹಾಘೋರ ತಂತ್ರ

೧೧.	ಸುಪ್ರಭೇಧ	ಮೂರು ಕೋಟಿ	ಸುಬೋಧಾಗಮ, ಪ್ರಬೋಧಾಗಮ, ಬೋಧನಾಗಮ
೧೨.	ಸ್ವಾಯಂಭುವ	ಮೂರುವರೆ ಕೋಟಿ	ಸ್ವಯಂಭೂತ, ಪ್ರಜಾಪತಿಮತ, ಪದ್ಮತಂತ್ರ
೧೩.	ನಿಶ್ವಾಸ	ಒಂದುಕೋಟಿ	ಪೂರ್ವ ನಿಶ್ವಾಸ, ಉತ್ತರ ನಿಶ್ವಾಸ, ನಿಶ್ವಾಸ ಮುಖೋದಯ, ನಿಶ್ವಾಸ ನಯನ, ನಿಃಶ್ವಾಸ ಕಾರಕ, ಘೋರ ಸಂಹಿತೆ, ಸುಸಾಂಖ್ಯ, ಗುಹ್ಯ
೧೪.	ಅನಲ	ಮೂರುಲಕ್ಷ	ಆಗ್ನೇಯಾಗಮ, ವ್ಯೋಮ
೧೫.	ವೀರಾಗಮ	ಒಂದುಲಕ್ಷ	ಪ್ರಸ್ತಾರ ತಂತ್ರ, ಪಸ್ಪುರ ತಂತ್ರ, ಪ್ರಬೋಧಕ ತಂತ್ರ, ಬೋಧಕ ತಂತ್ರ, ಬೋಧಾ ತಂತ್ರ, ಅಮೋಹ ತಂತ್ರ, ಮೋಹಸಮಯ ತಂತ್ರ, ಶಕಟ ತಂತ್ರ, ಶಾಕಟ (ಸಕಲ) ತಂತ್ರ, ಹಲ (ಹಲಿ) ತಂತ್ರ, ವಿಲೇಖನ ತಂತ್ರ, ಭದ್ರತಂತ್ರ, ವೀರ (ವಿರಾಟ ತಂತ್ರ)
೧೬.	ರೌರವಾಗಮ	ಹತ್ತುಕೋಟಿ	ಕಾಲದಹನಾಗಮ, ರೌರವೋತ್ತರಾಗಮ, ಕೌಮಾರಾಗಮ, ಕಾಲಾಗಮ, ಮಹಾಕಾಲಾಗಮ, ಇಂದ್ರಾಗಮ
೧೭.	ಮಕುಟಾಗಮ	ಒಂದುಲಕ್ಷ	ಮಕುಟಾಗಮ, ಮಕುಟೋತ್ತರಾಗಮ
೧೮.	ವಿಮಲಾಗಮ	ಮೂರುಲಕ್ಷ	ಅನಂತ ಭೋಗಾಗಮ, ಅತಿ ಕ್ರಾಂತಾಗಮ, ಹೃದ್ದಾಮಾಗಮ, ಅವಿಕೃತಾಗಮ, ಉದ್ಭೂತಾಗಮ (ವಿಭೂತಾಗಮ), ಮಾರಣ ತಂತ್ರ, ಅಲಂಕೃತ, ಭೀರು, ರೌದ್ರ, ಅರ್ಚಿತ, ವೃಷಪಿಂಗ, ಸುದತ್ತ, ಸುಭದ್ರಕ, ಆಕ್ರಾಂತ, ಆರೇವ
೧೯	ಚಂದ್ರಜ್ಞಾನಾಗಮ	ಮೂರು ಕೋಟಿ	ಸ್ಥಿರಸಂಹಿತೆ, ಪ್ರಾಣಸಂಹಿತೆ, ಮಹತ್ ಸಂಹಿತೆ, ನಂದಿ ಸಂಹಿತೆ, ಏಕಪಾದಪುರಾಣ, ಶಂಕರಾಗಮ,

			ಶಿವಶಾಸನಾಗಮ,ಶ್ರೀಮುಖಾಗಮ, ಕಾಲಭೇದಾಗಮ, ಶಿವಭದ್ರಾಗಮ
೨೦	ಬಿಂಬ	ಒಂದು ಲಕ್ಷ	ಚತುರ್ಮುಖ ತಂತ್ರ, ಮಲಯ ತಂತ್ರ, ಮಹಾಯೋಗತಂತ್ರ, ಸಂಸ್ತೋಭಾಗಮ, ಪ್ರತಿಬಿಂಬಾಗಮ, ಆರ್ಥಾಲಂಕಾರಾಗಮ, ವಾಯವ್ಯ ತಂತ್ರ, ಕೌಟತಂತ್ರ, ತೃಟ ನೀಲಾಕಾರ, ತುಲಾವೃತ, ತುಲಾಯೋಗ, ಕುಟ್ಟಿಯ ತಂತ್ರ, ಸರ್ವಶೇಖರ, ಮಹಾವಿದ್ಯೆ, ಮಹಾಸಾರಾಗಮ
೨೧	ಪ್ರೋದ್ಗೀತಾಗಮ	ಮೂರುಲಕ್ಷ	ಕವಚಾಗಮ, ವರಾಹತಂತ್ರ, ಪಿಂಗಳಮತ, ಪಶುಬಂಧ, ದಂಡಧರತಂತ್ರ, ಕುಶತಂತ್ರ, ಧನುರ್ಧಾರಣತಂತ್ರ, ಶಿವಜ್ಞಾನ ತಂತ್ರ, ವಿಜ್ಞಾನ ತಂತ್ರ, ತ್ರಿಕಾಲಜ್ಞಾನತಂತ್ರ, ಆಯುರ್ವೇದ, ಧನುರ್ವೇದ, ಸರ್ಪದಂಷ್ಟ್ರಾವಿಭೇದ, ಸಂಗೀತ ತಂತ್ರ, ಭರಿತ ತಂತ್ರ , ಅತೋದ್ಯ ತಂತ್ರ,
೨೨	ಲಲಿತಾಗಮ	ಎಂಟುಲಕ್ಷ	ಲಲಿತ, ಲಲಿತೋತ್ತರಾಗಮ, ಕೌಮಾರ, ವಿಘ್ನೇಶ್ವರ,
೨೩	ಸಿದ್ಧಾಗಮ	ಐವತ್ತುಲಕ್ಷ	ಸಾರೋತ್ತರಾಗಮ, ದೇವೇಶೋತ್ತರಾಗಮ, ಕಾಲಭೇದಾಗಮ, ಶಶಿಮಂಡಲಾಗಮ,
೨೪	ಸಂತಾನಾಗಮ	ಅರವತ್ತು ಲಕ್ಷ	ಲಿಂಗಾಧ್ಯಕ್ಷ ತಂತ್ರ, ಸು(ಪು)ರಾಧ್ಯಕ್ಷ ತಂತ್ರ, ಶಂಕರ ತಂತ್ರ, ಮಹೇಶ್ವರಾಗಮ, ಅಸಂಖ್ಯ ತಂತ್ರ, ಅನಿಲಾಗಮ. ದ್ವಂದಾಗಮ,

೨೫.	ಸರ್ವೋತ್ತರಾಗಮ	ಎರಡು ಲಕ್ಷ	ಶಿವಧರ್ಮೋತ್ತರಾಗಮ, ತತ್ತ್ವೋತ್ತರಾಗಮ, ವಿಷಯೋತ್ತರಾಗಮ, ಸೌಮ್ಯ, ದೇವಿಪ್ರಣುತೆ
೨೬.	ಪಾರಮೇಶ್ವರಾಗಮ	ಹನ್ನೆರಡು ಲಕ್ಷ	ಮತಂಗತಂತ್ರ, ಯಕ್ಷಣೀತಂತ್ರ, ಪದ್ಮಾಗಮ ತಂತ್ರ, ಪಾಷ್ಕರ ತಂತ್ರ, ಸುಪ್ರಯೋಗ ತಂತ್ರ, ಹಂಸಾಗಮ, ಸಾಮಾನ್ಯಾಗಮ,
೨೭.	ಕಿರಣಾಗಮ	ಐದುಕೋಟಿ	ಗರುಡಾಗಮ, ನೈರುತ್ಯಾಗಮ, ನೀಲ ತಂತ್ರ, ರುದ್ರಾಕ್ಷಾಗಮ, ಭವಾಗಮ, ವೈಕ್ರಮಾಗಮ, ಬುದ್ಧಾಗಮ, ಪ್ರಭುದ್ಧಾಗಮ, ಕಾಲತಂತ್ರ,
೨೮.	ವಾತುಲ	ಒಂದುಲಕ್ಷ	ವಾತುಲೋತ್ತರ, ವಿಶ್ವಾತ್ಮಕ, ಕಾಲಜ್ಞಾನ, ಪುರೋಹಿತ, ಸರ್ವಾಗಮ, ಸರ್ವೇಷ್ಟಾಗಮ, ಶ್ರೇಷ್ಠಾಗಮ, ಶಿವದ್ವಂದ್ವ, ಶರ್ವಾತ್ಮಕ, ರುದ್ರ, ಮಹಾಮುಖ, ಶುದ್ಧಾಗಮ

ವೈದಿಕ ಸಾಹಿತ್ಯವನ್ನು ಸಹಸ್ರಾರು ವರ್ಷಗಳಿಂದ ಮೌಖಿಕವಾಗಿ ಕಾಪಾಡಿಕೊಂಡು ಬಂದು ಕೊನೆಗೆ ಲಿಪಿಯ ಕಲ್ಪನೆಯಾದ ಮೇಲೆ ಅವನ್ನು ಬರೆದು ಆ ಗ್ರಂಥವನ್ನು ಎಷ್ಟು ಜತನದಿಂದ ಕಾಪಾಡಿದರೋ ಹಾಗೆಯೇ ಶಿವಾಗಮ ಸಾಹಿತ್ಯದ ಯೋಗಕ್ಷೇಮ ನೋಡಿಕೊಂಡು ಬಂದಂತೆ ಕಾಣುವುದಿಲ್ಲ. ಈ ಆಗಮಧರ್ಮವು ಸಾಮಾನ್ಯ ಜನರ ಧರ್ಮಗಳಾದುದರಿಂದಲೇ ಆರ್ಯ ಸಂಸ್ಕೃತಿ ಇವುಗಳ ಕಡೆಗೆ ಗಮನ ಹರಿಸಿದಂತೆ ಕಾಣಲಿಲ್ಲ. ಆರ್ಯಧರ್ಮವು ಆಗಮಗಳ ಸಾರಸತ್ವವನ್ನೆಲ್ಲ ತನ್ನಲ್ಲಿ ಹೀರಿಕೊಂಡರೂ ಅವುಗಳ ಸುರಕ್ಷತೆಗೆ ಗಮನ ಹರಿಸದಿರುವುದು ಶೋಚನೀಯ. ಭಾರತೀಯ ಸಂಸ್ಕೃತಿಯಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದ ಶಿಲ್ಪ ಮೊದಲಾದ ಕಲೆಗಳ ಉಗಮಸ್ಥಾನವೆಂದರೆ ಶಿವಾಗಮಗಳೇ. ಜನನ, ಬಾಲ್ಯ, ವಿವಾಹ, ದೀಕ್ಷೆ, ಮರಣ ಮುಂತಾದ ಸಂಸ್ಕಾರಗಳ ವಿಧಿ ವಿಧಾನ ಕ್ರಮಗಳಿಗೆಲ್ಲ ಕೇಂದ್ರಸ್ಥಾನ ಆಗಮಗಳೇ. ಮಂತ್ರ ತಂತ್ರಗಳ ಮೂಲಸ್ಥಾನ ಆಗಮಗಳೇ. ಹೀಗಾಗಿ ಆಗಮಗಳು ಒಂದು ಕಾಲದಲ್ಲಿ ಅಖಂಡ ಭಾರತವನ್ನೆಲ್ಲ ವ್ಯಾಪಿಸಿದ್ದವು. ಅಂತೆಯೇ ಉತ್ತರದಿಂದ ದಕ್ಷಿಣದವರೆಗೂ, ಪೂರ್ವದಿಂದ ಪಶ್ಚಿಮದವರೆಗೂ ಆಗಮಪ್ರತಿಗಳು ಉಪಲಬ್ಧವಾಗುತ್ತವೆ.

೨.೩ ಗುರು ಪರಂಪರಾಗತ ಕ್ರಮದಲ್ಲಿ ಶಿವಾಗಮಗಳು ನಡೆದು ಬಂದ ಬಗೆ

ನಾದರೂಪತಯಾ ಪೂರ್ವಂ ಶಿವೇನಾವಿಷ್ಕೃತಃ ಪುನಃ।
ಸದಾಶಿವಾದಿರೂಪೇಣ ತೇನೈವಾಸೌ ಪೃಥಕ್ ಪೃಥಕ್॥
ಕಾಮಿಕಾದಿಪ್ರಭೇದೇನ ಶಿಷ್ಯೇಭ್ಯಃ ಸಂಪ್ರಕಾಶಿತಃ।

ಪರಶಿವನು ತನ್ನಲ್ಲಿ ನಿತ್ಯಸಿದ್ಧವಾದ ವಿಮಲಜ್ಞಾನವನ್ನು ಸೃಷ್ಟಿಯ ಮೂಲಾರಂಭದಲ್ಲಿ ನಾದರೂಪದಿಂದ ಪ್ರಕಾಶಗೊಳಿಸಿ, ಅದನ್ನೇ ಸದಾಶಿವಾದಿ ರೂಪದಿಂದ ದಶಶಿವರನ್ನೂ ಸೃಜಿಸಿ ಅಷ್ಟಾದಶರುದ್ರರನ್ನೂ ಉದ್ದೇಶಿಸಿ ಬೇರೆ ಬೇರೆಯಾಗಿ ಬೋಧಿಸಿದನು. ಕಾಮಿಕಾದಿ ಸುಪ್ರಭೇದಾಂತಗಳಾದ ಹತ್ತು ಸಂಹಿತೆಗಳಿಗೆ ಶಿವಸಂಹಿತೆಗಳೆಂದು, ವಿಜಯಾದಿ ವಾತುಲಾಂತಗಳಾದ ಹದಿನೆಂಟು ಸಂಹಿತೆಗಳು ಹದಿನೆಂಟು ಜನ ರುದ್ರರಿಗೆ ಬೋಧಿಸಲ್ಪಟ್ಟುದರಿಂದ ಅವು ರುದ್ರಸಂಹಿತೆಗಳೆಂದು ಪ್ರಸಿದ್ಧವಾಗಿದೆ.

ಈ ಹತ್ತು ಶಿವಭೇದದ ಶಿವಾಗಮಗಳಲ್ಲಿ ಪ್ರತಿಯೊಂದಕ್ಕೂ ಮೂರರಂತೆ ಮೂವತ್ತು ಜನರು, ಹದಿನೆಂಟು ರುದ್ರಾಗಮಗಳಲ್ಲಿ ಪ್ರತಿಯೊಂದಕ್ಕೆ ಇಬ್ಬರಂತೆ ಒಟ್ಟು ಮೂವತ್ತಾರು ಜನ ಬೋಧಾರರಿರುವರು. ಈ ಹೆಸರುಗಳು ಗಮನಾರ್ಹ ವಾಗಿವೆ. ಇವರನ್ನು ಶ್ರೋತಾರರೆಂದು ಹೇಳಲಾಗಿದೆ.[೨೫] ಅವರು–

ಶಿವಾಗಮಗಳು		ಶ್ರೋತಾರರು
೧. ಕಾಮಿಕಕ್ಕೆ	–	ಮಹೇಶ್ವರ → ತ್ರಿಶಲ → ಹರ
೨. ಚಿಂತ್ಯಾಗಮಕ್ಕೆ	–	ದೀಪ್ತ → ಗೋಪತಿ → ಅಂಬಿಕೆ
೩. ಯೋಗಜಾಗಮಕ್ಕೆ	–	ಶುದ್ಧ → ಭಸ್ಮ → ವಿಭೂತಿ
೪. ಕಾರಣಾಗಮಕ್ಕೆ	–	ಶರ್ವ→ ರುದ್ರ → ಪ್ರಜಾಪತಿ
೫. ಅಜಿತಾಗಮಕ್ಕೆ	–	ಸುಶಿವ→ ಶಿವ→ ಅಚ್ಯುತ
೬. ದೀಪ್ತಾಗಮಕ್ಕೆ	–	ಈಶ → ತ್ರಿಮೂರ್ತಿ → ಹುತಾಶನ
೭. ಸೂಕ್ಷ್ಮಾಗಮಕ್ಕೆ	–	ವೈಶ್ರವಣ→ ಸೂಕ್ಷ್ಮತಂತ್ರಜ್ಞ→ಪ್ರಭಂಜನ
೮. ಸಹಸ್ರಾಗಮಕ್ಕೆ	–	ಕಾಲ → ಭೀಮ → ಧರ್ಮ
೯. ಅಂಶುಮಾನಾಗಮಕ್ಕೆ	–	ಅಂಶು → ಉಗ್ರ → ರವಿ
೧೦. ಸುಪ್ರಭೇದಾಗಮಕ್ಕೆ	–	ಇಂದ್ರ → ಗಣಪತಿ → ಚಂದ್ರ
		ಹೀಗೆ ಮೂವತ್ತು ಜನರು, ಇನ್ನು ರುದ್ರಾಗಮಗಳಲ್ಲಿ
೧೧. ವಿಜಯಾಗಮಕ್ಕೆ	–	ಅನಾದಿ → ಪರಮೇಶ್ವರ
೧೨. ನಿಶ್ವಾಸಾಗಮಕ್ಕೆ	–	ದಶಾರ್ಣ → ಗಿರಿಜೆ

೨೪. ಶ್ರೀ ಶಂಭುಲಿಂಗ ಶಿವಾಚಾರ್ಯರ ಆಗಮ ಪರಿಜ್ಞಾನ ಕೃತಿಯಲ್ಲಿನ ಪುಟ ೨೨

೨೫. ಶಿವಾಗಮ ಸೌರಭ, ಭಾಗ ೧ ಪುಟ ೭

೧೩. ಸ್ವಯಂಭುವಾಗಮಕ್ಕೆ – ನಿಧನ → ಪದ್ಮೋದ್ಭುತ
೧೪. ಆಗ್ನೇಯಾಗಮಕ್ಕೆ – ವ್ಯೋಮ → ಅಗ್ನಿ
೧೫. ವೀರಾಗಮಕ್ಕೆ – ವೀರ → ತಂತ್ರಜ್ಞ
೧೬. ರೌರವಾಗಮಕ್ಕೆ – ನಂದಿ → ಮಹೇಶ್ವರ
೧೭. ಮಕುಟಾಗಮಕ್ಕೆ – ಶಿವ → ಮಹಾದೇವ
೧೮. ವಿಮಲಾಗಮಕ್ಕೆ – ಸರ್ವಾತ್ಮದೇವ → ವೀರಭದ್ರ
೧೯. ಚಂದ್ರಜ್ಞಾನಾಗಮಕ್ಕೆ– ವಸಂತ → ಬೃಹಸ್ಪತಿ
೨೦. ಬಿಂಬಾಗಮಕ್ಕೆ – ಪ್ರಶಾಂತ → ದಧೀಚಿ
೨೧. ಪ್ರೋದ್ಗೀತಾಗಮಕ್ಕೆ – ಶೂಲಿ → ಕವಚ
೨೨. ಲಲಿತಾಗಮಕ್ಕೆ – ಲಯಾಖ್ಯ → ರುದ್ರಭೈರವ
೨೩. ಸಿದ್ಧಾಗಮಕ್ಕೆ – ವೀರಭದ್ರ → ಚಂಡೀಶ್ವರ
೨೪. ಸಂತಾನಾಗಮಕ್ಕೆ – ಶಿವನಿಷ್ಠ → ಸನಾತನರು
೨೫. ಶರ್ವಾಗಮಕ್ಕೆ – ಸಾಮವೇದ → ನೃಸಿಂಹ
೨೬. ಪಾರಮೇಶ್ವರಕ್ಕೆ – ಶ್ರೀದೇವಿ → ಬೋಧನೆಯರು
೨೭. ಕಿರಣಾಗಮಕ್ಕೆ – ದೇವಪೇತ → ಸಂವರ್ಧನ
೨೮. ವಾತುಳಾಗಮಕ್ಕೆ – ಶಿವ → ಮಹಾಕಾಳ

ಹೀಗೆ ಶಿವಭೇದದ ಹತ್ತು ಆಗಮಗಳನ್ನು ಹತ್ತುಮಂದಿ ಶಿವರು ಮತ್ತೆ ಹತ್ತು ಮಂದಿಗೆ ಉಪದೇಶಿಸುತ್ತಾರೆ ಅವರೂ ಕೂಡಾ ಇತರ ಹತ್ತು ಜನರಿಗೆ ಉಪದೇಶಿಸುತ್ತಾರೆ ಎಂಬುದು ಗುರು ಪರಂಪರೆಯ ಕ್ರಮ. ಹೀಗೆ ಶಿವಭೇದದಲ್ಲಿ ಮೂವರು ಶ್ರೋತೃಗಳು. ಕಾಮಿಕವನ್ನು ಸದಾಶಿವನು ಪ್ರಣವನಿಗೆ, ಪ್ರಣವನು ತ್ರಿಕಾಲನಿಗೆ, ತ್ರಿಕಾಲನು ಹರನಿಗೆ ಉಪದೇಶಿಸುತ್ತಾನೆ. ಹೀಗೆ ಹದಿನೆಂಟು ರುದ್ರಾಗಮಗಳನ್ನು ಇಬ್ಬಿಬ್ಬರು ಶ್ರೋತೃಗಳಿಗೆ ಉಪದೇಶಿಸುತ್ತಾನೆ. ಇವರು ಮತ್ತೆ ದೇವತೆಗಳಿಗೆ, ಆ ದೇವತೆಗಳು ಋಷಿಗಳಿಗೆ, ಋಷಿಗಳು ಮಾನವರಿಗೆ ಪರಂಪರೆಯಿಂದ ಬೋಧಿಸುತ್ತಾ ಬಂದದ್ದೇ ಈ ಆಗಮ ಗ್ರಂಥರಾಶಿ.

೨.೪ ಶಿವಾಗಮಗಳ ರಚನಾ ತಂತ್ರ[೨೬]

ಆಗಮಗಳನ್ನು ಸಂವಾದಾತ್ಮಕ ತಂತ್ರದಲ್ಲಿ ರಚಿಸಲಾಗಿದೆ. ಈ ತಂತ್ರವು ಓದುಗರಲ್ಲಿ ಕುತೂಹಲವನ್ನು ಉಂಟುಮಾಡುತ್ತದೆ. ಆಗಮಗಳಲ್ಲಿ ಶಿವನನ್ನೇ ಉಪದೇಶಕನನ್ನಾಗಿ ಮಾಡಿ ಪಾರ್ವತಿ ಸ್ಕಂದರು ಇಲ್ಲಿ ಶ್ರೋತೃಗಳಾಗಿದ್ದಾರೆ. ವೇದ, ಉಪನಿಷತ್ತು, ಭಗವದ್ಗೀತೆ, ಭಾಗವತ, ಸಿದ್ಧಾಂತ ಶಿಖಾಮಣಿ, ಯೋಗವಾಶಿಷ್ಠ ಮೊದಲಾದ ಪವಿತ್ರ ಗ್ರಂಥಗಳಲ್ಲಿ ಈ ಸಂವಾದಾತ್ಮಕ ತಂತ್ರದ ಬಳಕೆಯನ್ನು

---

೨೬. ಶಿವಾಗಮಗಳಲ್ಲಿ ವೀರಶೈವ ಧರ್ಮ ಮತ್ತು ಸಂಸ್ಕೃತಿ – ಶ್ರೀ ಷಣ್ಮುಖಯ್ಯ ಅಕ್ಕೂರಮಠ, ಪುಟ ೯, ಪ್ರ–ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ

ಕಾಣಬಹುದಾಗಿದೆ.

ಆಗಮ ಸಾಹಿತ್ಯವು ಸಮೂಹ ಸೃಷ್ಟಿ. ಆಗಮಕಾರರು ಅನಾಮಧೇಯರು. ಹೆಸರನ್ನು ಬಯಸದ, ಕೀರ್ತಿಯನ್ನು ಆಶಿಸದ ನಿರ್ಲಿಪ್ತರು. ಜಗತ್ತಿಗೆ ಜ್ಞಾನದ ಭಂಡಾರವನ್ನೇ ನೀಡಿದ ಅಜ್ಞಾತ ದಾರ್ಶನಿಕ ಶಿವಾಚಾರ್ಯರು. ಭಾರತದ ಎಲ್ಲ ಮತಧರ್ಮದವರಿಗೂ ಆಗಮಗಳಿವೆ. ಆದರೆ ಅವುಗಳನ್ನು ರಚಿಸಿದವರ ಹೆಸರು ಮಾತ್ರ ಅಜ್ಞಾತವಾಗಿದೆ. ಎಲ್ಲಿಯೂ ತಮ್ಮ ಹೆಸರನ್ನು ಉಲ್ಲೇಖಿಸದೇ ಇವು ಶಿವನ ಉಪದೇಶವೆಂದು ಭಾವಿಸಿ ಸುಮ್ಮನಾದರು. ಇವು ಅವರ ದೈವೀ ಶ್ರದ್ಧೆಯ ಸಂಕೇತ ಹಾಗೂ ಅರ್ಪಿತ ಮನೋಭಾವಕ್ಕೆ ಸಾಕ್ಷಿ ಎಂದು ಹೇಳಬಹುದು.

ಆಗಮಗಳಲ್ಲಿ ಬರುವ ಶಿವನು ಪಾರ್ವತಿಗೆ, ಕುಮಾರನಿಗೆ ಬೋಧಿಸಿದ ವಿಚಾರವನ್ನು ತಾತ್ವಿಕ ಸಂಕೇತವೆಂದು ಭಾವಿಸಬೇಕು. ಆಗಮಗಳಲ್ಲಿ ಇಂಥ ಅನೇಕ ಸಂಕೇತಗಳಿವೆ. ಅವುಗಳಿಗೆ ವಿಶಿಷ್ಟವಾದ ಅರ್ಥಗಳಿವೆ. ಸಾಧಕರ ಸರ್ವಲೋಕ ಹಿತಾರ್ಥವೇ ಇವುಗಳ ಗುರಿಯಾಗಿದೆ.

ಶಿವಾಗಮಗಳ ಸ್ವರೂಪ

ಶಿವಾಗಮಗಳ ಸ್ವರೂಪವನ್ನು ಕೆಳದಿಯ ಅರಸ ಬಸವರಾಜರು ಶಿವತತ್ವರತ್ನಾಕರ ಎಂಬ ಗ್ರಂಥದಲ್ಲಿ

'ಅಯಂ ಜ್ಞಾನಕ್ರಿಯಾಯೋಗಚರ್ಯಾಭಿಃ ಸ್ಯಾತ್ ಚತುಷ್ಪದಂ'[೨೭]

ಶಿವಾಗಮವು ಜ್ಞಾನ, ಕ್ರಿಯಾ, ಯೋಗ, ಚರ್ಯೆ ಎಂಬ ನಾಲ್ಕು ಪಾದಗಳನ್ನೊಳಗೊಂಡು ಚತುಷ್ಪದವಾಗಿದೆ ಎಂದು ನಿರೂಪಿಸಿರುವರು. ಪಾರಮೇಶ್ವರಾಗಮದಲ್ಲಿ ಇವುಗಳ ವಿವರಣೆ ಈ ರೀತಿಯಾಗಿದೆ.

ಜ್ಞಾನಂ ಕ್ರಿಯಾ ಚ ಚರ್ಯಾ ಚ ಯೋಗಶ್ಚೇತಿ ನಗಾತ್ಮಜೇ ॥
ಚತುಷ್ಪಥಃ ಸಮಾಖ್ಯಾತಃ ಶಿವಧರ್ಮಃ ಸನಾತನಃ।
ಪಶುಪಾಶಪತಿಜ್ಞಾನಂ ಜ್ಞಾನಮಿತ್ಯಭಿಧೀಯತೇ ॥
ಷಡಧ್ವಶುದ್ಧಿವಿಧಿನಾ ಗುರ್ವಾದೀನಾಂ ಕ್ರಿಯೋಚ್ಯತೇ।
ವೀರಶೈವಪ್ರಯುಕ್ತಸ್ಯ ಶಿವೇನ ವಿಹಿತಸ್ಯ ಚ ॥
ಲಿಂಗಾರ್ಚಾದೇಃ ಸ್ವಧರ್ಮಸ್ಯ ಚರ್ಯಾಚರ್ಯೇತಿ ಕಥ್ಯತೇ ।
ತದುಕ್ತೇನೈವ ಮಾರ್ಗೇಣ ಶಿವಸುಸ್ಥಿತಚೇತಸಃ ॥
ವೃತ್ತ್ಯಂತರನಿರೋಧೋಽಯಂ ಸ ಯೋಗ ಇತಿ ಕಥ್ಯತೇ।[೨೮]

ಸನಾತನವಾದ ಶಿವಧರ್ಮವು ಜ್ಞಾನಪಾದ, ಕ್ರಿಯಾಪಾದ, ಚರ್ಯಾಪಾದ ಮತ್ತು ಯೋಗಪಾದವೆಂದು ನಾಲ್ಕು ಮಾರ್ಗಗಳುಳ್ಳದ್ದೆಂದು ಹೇಳಲ್ಪಟ್ಟಿದೆ. ಈ ನಾಲ್ಕು ಪಾದಗಳ ವಿವರಣೆಯನ್ನು ಪಾರಮೇಶ್ವರಾಗಮದಲ್ಲಿ ವಿಕಲ್ಪ ರೀತಿಯಲ್ಲಿ

೨೭. ಡಾ॥ ಆರ್. ಸಿ. ಹಿರೇಮಠರವರ ಮಹಾಯಾತ್ರೆ ಪುಟ ಸಂಖ್ಯೆ ೭೪

೨೮. ಪಾರಮೇಶ್ವರಾಗಮ, ೧೨ ನೇ ಪಟಲ,೪೬-೪೯ ನೇ ಶ್ಲೋಕ

ಹೇಳಲಾಗಿದೆ. ಮೊದಲು ಜ್ಞಾನಪಾದದ ವಿವರಣೆ ಬರುತ್ತದೆ. ಪಶು, ಪಾಶ ಮತ್ತು ಪತಿ ತತ್ತ್ವಗಳ ಜ್ಞಾನವೇ ಜ್ಞಾನಪಾದವೆಂದು ಕರೆಯಲ್ಪಡುತ್ತದೆ. ಗುರೂಪದೇಶದ ಪ್ರಯುಕ್ತ ಮಾಡಲ್ಪಡುವ ಷಡಧ್ವ ಶುದ್ಧಿಯ ವಿಚಾರವೇ ಕ್ರಿಯಾಪಾದವೆಂದು ಹೇಳಲ್ಪಡುತ್ತದೆ. ವೀರಶೈವನಿಗಾಗಿ ಹೇಳಿದಂತಹ ಲಿಂಗಾರ್ಚನರೂಪವಾದ ಸ್ವಧರ್ಮದ ಆಚರಣೆಯು ಚರ್ಯಾಪಾದವೆಂದು ಕರೆಯಲ್ಪಡುತ್ತದೆ. ಮನಸ್ಸಿನ ಇತರ ಪ್ರವೃತ್ತಿಗಳನ್ನು ನಿಯಂತ್ರಿಸಿ ಶಿವನಲ್ಲಿ ಮನಸ್ಸನ್ನು ನೆಲೆಗೊಳಿಸುವುದೇ ಯೋಗವೆಂದು ಹೇಳಲಾಗಿದೆ.

ಹೀಗೆ ಆಗಮುಗಳಲ್ಲಿಯ ವಿಷಯ ವಿಭಾಗವು ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಮತ್ತು ಜ್ಞಾನಪಾದವೆಂಬ ವ್ಯವಸ್ಥೆಯನ್ನು ಆಧರಿಸಿದೆ.

ಕ್ರಿಯಾಪಾದ : ಕ್ರಿಯಾಪಾದದ ಪೂರ್ವಭಾಗದಲ್ಲಿ ದೇವಾಲಯಗಳ, ಉಪಾಸ್ಯಮೂರ್ತಿಗಳ ಮತ್ತು ಉಪಾಸನಾ ಸಾಧನಗಳ ನಿರ್ಮಾಣ, ಪ್ರತಿಷ್ಠಾಪನೆಗಳ ನಿರೂಪಣೆಯಿರುತ್ತದೆ.

ದೇವಾಲಯ ನಿರ್ಮಾಣಕ್ಕೆ ಯೋಗ್ಯ ಭೂಮಿಯನ್ನು ನಿರ್ಧರಿಸಲು ಅನೇಕ ಭೂಪರೀಕ್ಷಾ ವಿಧಾನಗಳನ್ನು ಶಿವಾಗಮಗಳು ಹೇಳುತ್ತವೆ. ಉದಾಹರಣೆಗೆ ಮಂಡಿಯ ಮಟ್ಟ ಅಗಿದು, ಗುಂಡಿ ಮಾಡಿ, ಅದರಲ್ಲಿ ಸೂರ್ಯಾಸ್ತವಾದ ಮೇಲೆ ನೀರು ತುಂಬಿಸಬೇಕು. ಬೆಳಿಗ್ಗೆ ಎದ್ದು ನೋಡಿದಾಗ ನೀರು ಇನ್ನೂ ಇದ್ದರೆ ಉತ್ತಮ ಭೂಮಿ, ಬರೀ ಕೆಸರಿದ್ದರೆ ಮಧ್ಯಮ ಮತ್ತು ಒಣಗಿದ್ದರೆ ಅಧಮ. ಅಥವಾ ಗುಂಡಿಗೆ ಮಣ್ಣನ್ನು ತುಂಬಿ ನೀರೆರೆದು ಪುಷ್ಪವೊಂದನ್ನು ಮೇಲ್ಮುಖವಾಗಿ ನಿಲ್ಲಿಸಬೇಕು. ಬೆಳಗ್ಗೆ ನೋಡಿದಾಗ ಹೂವು ಬಲಗಡೆ ಹೊರಳಿದ್ದರೆ ಉತ್ತಮ, ಅಧೋಮುಖವಾಗಿದ್ದರೆ ಪ್ರಶಸ್ತವಲ್ಲ. ಅಥವಾ ಗುಂಡಿಯಲ್ಲಿ ಮಣ್ಣು ತುಂಬಿ, ಎಳ್ಳು ಅಥವಾ ಉದ್ದನ್ನು ಬಿತ್ತಿ ನೀರುಣಿಸಬೇಕು. ಮೂರು ರಾತ್ರಿಗಳಲ್ಲಿ ಮೊಳಕೆಗಳು ಬಂದರೆ ಆ ಭೂಮಿ ಉತ್ತಮ, ಐದು ರಾತ್ರಿಗಳಲ್ಲಿ ಮೊಳಕೆಗಳು ಬಂದರೆ ಮಧ್ಯಮ, ಏಳು ರಾತ್ರಿಗಳಲ್ಲಿ ಹಾಗಾದರೆ ಅಧಮ.

ಅನಂತರ ಕರ್ಷಣವಿಧಿ ಮತ್ತು ಶಂಕುಸ್ಥಾಪನೆ. ಅದಕ್ಕೆ ಉತ್ತರಾಯಣ ಶ್ರೇಷ್ಠ. ವ್ಯವಧಾನವಿಲ್ಲದಿದ್ದರೆ ದಕ್ಷಿಣಾಯಣದಲ್ಲೂ ಆಗಬಹುದು. ಶುಕ್ಲ ಪಕ್ಷದ ಶುಭದಿವಸದಲ್ಲಿ, ಒಳ್ಳೆ ಲಕ್ಷಣಗಳುಳ್ಳ ಬಿಳಿಯ ತರುಣ ಹೋರಿಗಳನ್ನು ಬೆಲ್ಲ–ಹಾಲಿನಿಂದ ಸಂತೃಪ್ತಗೊಳಿಸಿ, ಅವುಗಳ ಮೂಲಕ ನೇಗಿಲಿನಿಂದ ಆ ಭೂಮಿಯನ್ನು ಉಳಿಸಬೇಕು. ಹದಗೊಳಿಸಿದ ಭೂಮಿಯಲ್ಲಿ ಎಳ್ಳು, ಉದ್ದು, ಅವರೆ ಬೀಜಗಳನ್ನು ಬಿತ್ತಿಸಬೇಕು. ಮೊಳಕೆಯೊಡೆದು ಸ್ವಲ್ಪ ಬೆಳೆದ ಸಸ್ಯಗಳನ್ನು ಗೋಸಮೂಹ ಮೇಯ್ದು ತೃಪ್ತವಾಗಿ ಗೋಮಯ–ಗೋಮೂತ್ರವನ್ನು ವಿಸರ್ಜಿಸಿದಾಗ ಭೂಮಿಯು ಶುದ್ಧವಾಗುತ್ತದೆ. ಆ ಭೂಮಿಯಲ್ಲಿ ಶಂಕುಸ್ಥಾಪನೆಯನ್ನು ಮಾಡಬೇಕೆಂಬ ಪದ್ಧತಿಯು ವಿವರವಾಗಿ ಬರುತ್ತದೆ.

ದೇವಾಲಯಗಳನ್ನು ಮತ್ತು ಪ್ರತಿಮೆಗಳನ್ನು ರಚಿಸಲು ಬೇಕಾದ ಶಿಲೆಯ

ಲಕ್ಷಣಗಳನ್ನು ಶಿವಾಗಮಗಳು ವರ್ಣಿಸುತ್ತವೆ. ಶಿಲೆಗಳಲ್ಲಿ ಸ್ತ್ರೀ, ಪುಂ, ನಪುಂಸಕವೆಂದು ಮೂರು ವಿಧ. ಸ್ತ್ರೀ ಶಿಲೆಯು ತಾಳದ ನಾದದಂತಹ ಧ್ವನಿಯುಳ್ಳದ್ದು. ಸ್ತ್ರೀ ಪ್ರತಿಮೆಗಳಿಗೆ ಅದನ್ನು ಬಳಸಬೇಕು. ಘಂಟೆಯ ನಾದದಂತೆ ಧ್ವನಿಯುಳ್ಳದ್ದು ಪುಂಶಿಲೆ. ಧ್ವನಿ ಹೀನವಾದುದು ನಪುಂಸಕಶಿಲೆ. ಇವುಗಳಲ್ಲಿ ಪುಂಶಿಲೆಯಿಂದ ಲಿಂಗ ಮತ್ತು ಪುರುಷ ದೇವತಾಪ್ರತಿಮೆಗಳನ್ನು ರಚಿಸಬೇಕು. ಲಿಂಗದ ಪೀಠವನ್ನು ಮತ್ತು ಸ್ತ್ರೀದೇವತಾ ಮೂರ್ತಿಗಳನ್ನು ಸ್ತ್ರೀಶಿಲೆಯಿಂದ ಮಾಡಬೇಕು. ಪ್ರಾಸಾದ ಮುಂತಾದವುಗಳನ್ನು ನಪುಂಸಕಶಿಲೆಯಿಂದ ಮಾಡಬೇಕು. ಈ ನಿಯಮಗಳನ್ನು ಮೀರಿ ಮಾಡಿದ ಲಿಂಗ ಮತ್ತು ಇತರ ಪ್ರತಿಮೆಗಳಲ್ಲಿ ದೇವತಾಕಲೆ ನೆಲೆಗೊಳ್ಳುವುದಿಲ್ಲ. ಕಲೆಯಿಲ್ಲದ ಪ್ರತಿಮೆಯು ಪೂಜೆಗೆ ಅರ್ಹವಲ್ಲ.

ಮೂರ್ತಿಗಳು[೨೯] ಧ್ಯಾನ ಮತ್ತು ಮೋಕ್ಷಕ್ಕೆ ಸಾಧಕಗಳೆಂದು ವಿವರಿಸಿ, ಅಂತಹ ಮೂರ್ತಿಗಳನ್ನು ಹೇಗೆ ನಿರ್ಮಿಸಬೇಕೆಂಬುದರ ಬಗ್ಗೆ ಉಲ್ಲೇಖವಿದೆ. ಮೂರ್ತಿಗಳನ್ನು ಚಲ, ಅಚಲ, ಚಲಾಚಲವೆಂದು ಮೂರು ಪ್ರಕಾರವಾಗಿ ಹೇಳಲಾಗಿದೆ.[೩೦] ಮೂರ್ತಿಗಳು ಸಕಲವೆಂದೂ, ಲಿಂಗವು ನಿಷ್ಕಲವೆಂದೂ ಪರಿಗಣಿಸಲ್ಪಟ್ಟಿವೆ. ಲಿಂಗಪೀಠದ ಮೇಲೆ ವೃತ್ತಾಕಾರ ಅಥವಾ ಗೋಳಕಾಕಾರವಾಗಿರುವ ಮೇಲ್ಭಾಗವು ಹೊಂದಿಸಲ್ಪಟ್ಟಿರುತ್ತದೆ. ನಾಗರ, ದ್ರಾವಿಡ ಮತ್ತು ವೇಸರ ಎಂಬುದಾಗಿ ಪೀಠವು ಮೂರು ಪ್ರಕಾರವಾಗಿರುತ್ತದೆ. ಈಶ್ವರನ ಪಂಚವಿಂಶತಿಲೀಲೆಗೆ ಸಂಬಂಧಿಸಿದ ಇಪ್ಪತ್ತೈದು ಮೂರ್ತಿಗಳ[೩೧] ಬಗೆಗೆ ಮತ್ತು ಅವುಗಳನ್ನು ಯಾವ ಭಂಗಿಯಲ್ಲಿ ಎಷ್ಟೆಷ್ಟು ಪ್ರಮಾಣಗಳನ್ನಿಟ್ಟು ರಚಿಸಬೇಕೆಂಬುದರ ಬಗೆಗೆ ವಿವರಣೆಯಿದೆ.[೩೨] ಲಿಂಗಗಳನ್ನು ಕೂಡ ವ್ಯಕ್ತ, ಅವ್ಯಕ್ತ ಮತ್ತು ವ್ಯಕ್ತಾವ್ಯಕ್ತ ಎಂದು ಮೂರು ಭಾಗ ಮಾಡಿದ್ದಾರೆ. ಮೂರ್ತಿಗಳು ಎಷ್ಟೇ ಸುಂದರವಾಗಿದ್ದರೂ ಪ್ರತಿಷ್ಠಾ ವಿಧಿಯನ್ನು ನೆರವೇರಿಸಿದ ನಂತರವೇ ಅವು ಪೂಜಾರ್ಹವಾಗುವವು. ಪ್ರಧಾನದೇವತೆ ಮತ್ತು ಪರಿವಾರದೇವತೆಗಳನ್ನು ದೇವಾಲಯದ ಯಾವ ಯಾವ ಭಾಗದಲ್ಲಿ ಪ್ರತಿಷ್ಠಾಪಿಸಬೇಕೆಂಬುದರ ಬಗೆಗೂ ಈ ಪಾದದಲ್ಲಿ ವಿವರಣೆ ಕಂಡುಬರುವುದು.

ಶಿವಾಗಮಗಳ ಪೂರ್ವಭಾಗಗಳಲ್ಲಿ ಲಿಂಗ ಮುಂತಾದ ಮೂರ್ತಿಗಳ ಪ್ರತಿಷ್ಠಾಪನೆಯ ವಿಷಯವಲ್ಲದೆ ಅವುಗಳ ವಿವಿಧ ಉಪಚಾರ, ಪೂಜೆ ಮತ್ತು ಉತ್ಸವಗಳ ವಿವರಗಳು ಬರುತ್ತವೆ. ಪ್ರಸ್ತುತ ಅವುಗಳನ್ನು ಕೇವಲ ಹೆಸರಿಸಲಾಗಿದೆ:

ವಿವಿಧೋಪಚಾರ ಪೂಜೆ : ಪಂಚಾಮೃತಾಭಿಷೇಕ, ತೈಲಾಭ್ಯಂಗ, ಜಲಧಾರಾ, ಉಷ್ಣೋದಕ, ಸಹಸ್ರಧಾರಾಭಿಷೇಕ, ಧನುರ್ಮಾಸ–ಶಿವರಾತ್ರಿ–ನವರಾತ್ರಿ–ಗ್ರಹಣಾದಿಗಳ ವಿಶೇಷ ಪೂಜೆ, ಶಾಂತ್ಯಾದಿ ಹೋಮಗಳು, ಅಂಕುರಾರ್ಪಣಾದಿಗಳು.

---

೨೯. ಕಾರಣಾಗಮ, ಭಾಗ.೧, ಪಟಲ ೩.,

೩೦. ಸುಪ್ರಭೇದಾಗಮ, ಭಾಗ. ೨, ಪಟಲ ೨೩–೩೨

೩೧. ಕಾಮಿಕಾಗಮ ಭಾಗ ೨, ಪಟಲ ೪೩–೪೬

೩೨. ಕಾರಣಾಗಮ ಭಾಗ ೧, ಪಟಲ ೫೭–೧೦೧

ಉತ್ಸವಗಳು : ರಥೋತ್ಸವ, ದೋಲೋತ್ಸವ, ವಸಂತೋತ್ಸವ, ವಿಶೇಷೋತ್ಸವ, ವಿವಾಹೋತ್ಸವ, ಶಕ್ತ್ಯುತ್ಸವ ಇತ್ಯಾದಿಗಳು.

ಶಿವಾಗಮಗಳ **ಉತ್ತರ ಭಾಗ**ದಲ್ಲಿಯ ಕ್ರಿಯಾಪಾದದಲ್ಲಿ ಶೈವಭೇದಗಳು, ಅವುಗಳ ಲಕ್ಷಣಗಳು, ಭೂತಿ, ಭಸಿತ, ಭಸ್ಮ, ಕ್ಷಾರ, ರಕ್ಷೆ ಎಂಬ ವಿಭೂತಿಯ ಭೇದಗಳು, ವಿಭೂತಿಧಾರಣಾ ಸ್ಥಳಗಳು, ವಿಭೂತಿಧಾರಣಾ ಕ್ರಮ, ರುದ್ರಾಕ್ಷಧಾರಣೆಯ ಕ್ರಮ, ಫಲ ಮತ್ತು ಮಂತ್ರವಿಷಯ, ಸಿದ್ಧಾದಿಚಕ್ರವಿಷಯ, ಮಂತ್ರಾದಿ ಸಾಧನಗಳು, ಮಂತ್ರಪಲ್ಲವ ನ್ಯಾಸಾದಿಗಳು, ಮಂತ್ರಸಂಸ್ಕಾರಗಳು, ಪ್ರಣವವಿಚಾರ, ಮಂತ್ರಾನುಷ್ಠಾನ, ಮಂತ್ರೋನ್ಯಾಸಗಳು, ಜಪಮಂತ್ರಯೋಗ, ಶಿವಪಂಚಾಕ್ಷರಿ ಜಪ, ತರ್ಪಣಾದಿ ಸಂಖ್ಯೆ, ಅಂಗನ್ಯಾಸ ಮತ್ತು ಕರನ್ಯಾಸ ಭೇದಗಳು, ಜಪಕಾಲ, ಜಪಮಾಲಿಕಾ ಲಕ್ಷಣ, ಅಕ್ಷಮಾಲಾ ಫಲತಾರತಮ್ಯ, ಮಣಿಪರಿಮಾಣಾಧಿಗಳು, ಮಾಲಿಕಾರಚನಾದಿ ಮಂತ್ರಗಳು, ಜಪಾದಿಗಳ ಸ್ಥಾನಾದಿಗಳು, ಆಸನಬಂಧ ಭೇದಗಳು, ಪ್ರಾಣಾಯಾಮಯೋಗ, ಮಂತ್ರಾಂಗಗಳು, ನವಾವರಣಗಳು, ಧ್ಯಾನ ಲಕ್ಷಣ, ಧ್ಯಾನಕ್ರಮ, ಫಲಾಧಿಗಳು, ಶಿವಪೂಜಾ ವಿಷಯ, ಶಿವಲಿಂಗ ಸ್ವರೂಪ, ಶಿವಲಿಂಗ ಭೇದಗಳು, ಶಿವಪೂಜಾ ಸಾಮಗ್ರಿ, ಉಪಚಾರ ಸಂಗ್ರಹ, ಅಂತರಂಗ ಶಿವಾರ್ಚನ, ವೀರಶೈವ ಲಕ್ಷಣ, ವೀರಶೈವ ಭೇದಗಳು, ದೀಕ್ಷಾ ಕ್ರಮ, ಸಪ್ತವಿಧ ದೀಕ್ಷೆಗಳು, ವೀರಶೈವ ಶಿವಪೂಜಾ ಕರ್ಮಾನುಷ್ಠಾನ, ವೀರಶೈವ ಭಸ್ಮಧಾರಣ, ವೀರಶೈವ ಕಲಾನ್ಯಾಸ ಮತ್ತು ಷಡಂಗನ್ಯಾಸ, ಮಾತೃಕಾಕ್ಷರಾದಿನ್ಯಾಸ, ಷಟಸ್ಥಲ ವಿಷಯ, ಆಚಾರತ್ರಯ, ತ್ರಿವಿಧ ಗುರುಲಿಂಗ, ತ್ರಿವಿಧ ಶಿವಲಿಂಗ, ತ್ರಿವಿಧ ಜಂಗಮಲಿಂಗ ಹಾಗೂ ತ್ರಿವಿಧ ಮಹಾಲಿಂಗಗಳ ವಿವರಣೆ ಮತ್ತು ಆಯಾ ಸ್ಥಲಗಳ ಷಡ್ಭಕ್ತರು, ನಿರಾಭಾರಿ ವೀರಶೈವ ವಿಚಾರ ಮುಂತಾದವುಗಳು ಕ್ರಿಯಾಪಾದದಲ್ಲಿ ವ್ಯಕ್ತವಾಗಿರುವವು.

ಚರ್ಯಾಪಾದ : ಶಿವಾಗಮಗಳಲ್ಲಿಯ ಚರ್ಯಾಪಾದದ ಸ್ವರೂಪವನ್ನು ಕೆಳದಿಯ ಅರಸ ಬಸವರಾಜರು **ಶಿವತತ್ವರತ್ನಾಕರ** ಎಂಬ ಗ್ರಂಥದಲ್ಲಿ ಹೀಗೆ ನಿರೂಪಿಸಿರುವರು.

ಚರ್ಯಾಪಾದೇ ತು ಸರ್ವತ್ರ ಪವಿತ್ರಾರೋಪಣಂ ತಥಾ
ಪ್ರತಿಷ್ಠಾ ಚೈವ ದೇವಾನಾಂ ವ್ಯಕ್ತಾನಿ ಲಕ್ಷಣಾನಿ ಚ
ಪ್ರಾಯಶ್ಚಿತ್ತಕ್ರಿಯಾ ಚಾಪಿ ಸ್ಕಂಧಸಂಧ್ಯಾದಿಲಕ್ಷ್ಮ ಚ
ಲಕ್ಷ್ಮಣಂ ಜಪಮಾಲಾನಾಮಂತ್ಯೇಷ್ಟ್ಯಾದಿ ಕ್ರಮಾ ಅಪಿ [೩೩]
ಏವಂ ಚತುರ್ಷು ಪಾದೇಷು ಪ್ರತಿಪಾದ್ಯಾರ್ಥ ಈರಿತಂ।

ಚರ್ಯಾಪಾದದಲ್ಲಿ ಎಲ್ಲೆಡೆ ಪವಿತ್ರಾರೋಪಣ ಕಂಡು ಬರುತ್ತದೆ. ದೇವತೆಗಳ ವಿಗ್ರಹಲಕ್ಷಣ ಹಾಗೂ ಅವುಗಳ ಪ್ರತಿಷ್ಠಾಪನೆ, ಪ್ರಾಯಶ್ಚಿತ್ತ ಕ್ರಿಯೆ ಸ್ಕಂದಸಂಧ್ಯಾದಿ ವಿಷಯಗಳು ಜಪಮಾಲೆಯ ಲಕ್ಷಣ, ಅಂತ್ಯೇಷ್ಟಿಗಳ ಕ್ರಮ ಇವೆಲ್ಲ ಚರ್ಯಾಪಾದದಲ್ಲಿ ಉಕ್ತವಾಗಿವೆ ಎಂದು ನಿರೂಪಿಸಿರುವರು.

೩೩. ಡಾ॥ ಆರ್. ಸಿ. ಹಿರೇಮಠರವರ ಮಹಾಯಾತ್ರೆ ಪುಟ ಸಂಖ್ಯೆ ೭೫

ಚರ್ಯಾಪಾದದ **ಪೂರ್ವಭಾಗದಲ್ಲಿ** ನಿತ್ಯೋತ್ಸವ, ಮಹೋತ್ಸವಾದಿಗಳು, ಸಕಲಾಶ್ರಮಲಕ್ಷಣಗಳು ಪ್ರತಿಪಾದಿತವಾಗಿವೆ. ಮಾನವನ ಜೀವನವನ್ನು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬುದಾಗಿ ನಾಲ್ಕು ವಿಭಾಗಗಳನ್ನಾಗಿ ನಿರೂಪಿಸಿ, ಪ್ರತಿಯೊಂದು ಅವಸ್ಥೆಯಲ್ಲಿ ಮಾಡಬೇಕಾದ ಅವಶ್ಯ ಕರ್ತವ್ಯಗಳ ಬಗೆಗೆ ವಿವರಣೆಯಿರುವುದಷ್ಟೇ ಅಲ್ಲದೆ ಗೋತ್ರಾದಿಗಳ ಬಗೆಗೂ ವಿವರಣೆಯಿದೆ. ಅಲ್ಲದೆ ಅಗ್ನಿಕಾರ್ಯ, ಅರ್ಚನಾಂಗ – ನಿತ್ಯೋತ್ಸವ, ನೈಮಿತ್ತಿಕ ಮಹೋತ್ಸವಗಳು ಮತ್ತು ಸ್ನಪನ, ವಿಶೇಷ ಪೂಜೆ, ವ್ರತ ಮುಂತಾದವುಗಳ ವರ್ಣನೆಗಳು ಬರುತ್ತವೆ. ಮಾನವನು ಪ್ರತಿದಿವಸ ಮಾಡಬೇಕಾದ ಕ್ರಿಯೆಗಳನ್ನು ವಿವರಿಸಲಾಗಿದೆ. ದೇವತೆಗಳನ್ನು ಪ್ರತಿದಿವಸ ಅರ್ಚಿಸುವ ವಿಧಾನವನ್ನೂ, ವಿಶೇಷ ಸಂದರ್ಭಗಳಲ್ಲಿ ಪೂಜಿಸುವ ವಿಧಾನಗಳನ್ನೂ, ನಿತ್ಯೋತ್ಸವ ಮತ್ತು ಮಹೋತ್ಸವಾದಿಗಳನ್ನೂ ಶಿವಾಗಮಗಳು ಪೂರ್ಣವಾಗಿ ವಿವರಿಸುವವು.

ಚರ್ಯಾಪಾದದ ಉತ್ತರಭಾಗದಲ್ಲಿ ನಿತ್ಯ ನೈಮಿತ್ತಕವಾದ ಆಚರಣೆಗಳು ಅಂದರೆ ಶೌಚ – ಆಚಮನಾದಿ ನಿತ್ಯ ಕರ್ಮಗಳು, ಭಕ್ತಿ–ಮುಕ್ತಿ ಸಾಧನವಾದ ಶಿವಾರ್ಚನೆಗಳು ವರ್ಣಿಸಲ್ಪಟ್ಟಿವೆ. ಶಿವಾಗಮಗಳು ಬಾಹ್ಯ ಮತ್ತು ಆಂತರಿಕಶುದ್ಧಿ ಹೊಂದುವ ವಿಧಾನವನ್ನು ತಿಳಿಸುತ್ತವೆ. ಬಾಹ್ಯಶುದ್ಧಿಯನ್ನು ಸ್ನಾನಾದಿಗಳಿಂದ ಹೊಂದಬಹುದು. ಕಾಮಿಕಾಗಮವು[೩೪] ವಾರುಣ, ಆಗ್ನೇಯ, ಮಂತ್ರ, ಮಾನಸ, ವಾಯವ್ಯ ಮತ್ತು ಮಹೇಂದ್ರ ಹೀಗೆ ಆರು ತೆರನಾದ ಸ್ನಾನಗಳನ್ನೂ, ಆಯಾ ಸ್ನಾನಗಳನ್ನು ಮಾಡುವ ಕಾಲದಲ್ಲಿ ಉಚ್ಚರಿಸಬೇಕಾದ ಮಂತ್ರಗಳನ್ನೂ, ದೇಹದ ವಿವಿಧ ಭಾಗಗಳಿಗೆ ಮಂತ್ರೋಚ್ಚಾರಣೆಯೊಡನೆ ಮಾಡುವ ವಿಭೂತಿಧಾರಣೆಯನ್ನೂ ವಿವರಿಸುತ್ತದೆ. ಬೇರೆ ಬೇರೆ ದೇವತೆಗಳು ಉಕ್ತವಾಗಿದ್ದರೂ ಶಿವನೇ ಪ್ರಧಾನ ದೇವತೆ, ಪಂಚಾಕ್ಷರಿ ಮಹಾಮಂತ್ರವೇ ಎಲ್ಲ ಮಂತ್ರಗಳಿಗಿಂತಲೂ ಮಿಗಿಲಾದುದು.

ವೈದಿಕ ವ್ರತಾಚರಣೆಗಳಲ್ಲಿ ಕಾಷ್ಠ (ಅರಣಿ)ಗಳನ್ನು ಮಥಿಸಿ, ಅಗ್ನಿಯನ್ನು ಹೊಂದುವಂತೆಯೇ, ಶಿವಾಗಮಗಳಲ್ಲೂ ಅಗ್ನಿಯನ್ನು ಹೊಂದಬೇಕು. ಆದರೆ ಶಿವಾಗಮಗಳು ಅಗ್ನಿಯನ್ನು ವೈದಿಕಾಗ್ನಿ, ಮಿಶ್ರಾಗ್ನಿ ಮತ್ತು ಶೈವಾಗ್ನಿ[೩೫] ಎಂದು ಮೂರು ಬಗೆಯಾಗಿ ವಿಂಗಡಿಸುವವು.

ಶಿವಾಗಮಗಳು ಸಂಸ್ಕಾರಗಳನ್ನು ಪ್ರತಿಪಾದಿಸುವವು. ಸುಪ್ರಭೇದಾಗಮವು ಹದಿನಾರು ಸಂಸ್ಕಾರಗಳನ್ನು ನಿರೂಪಿಸುವುದು. ಇಲ್ಲಿ ಪ್ರತಿಪಾದಿತವಾದ ಸಂಸ್ಕಾರಗಳು ಗೃಹ್ಯಸೂತ್ರಗಳಲ್ಲಿ ಉಕ್ತವಾದ ಸಂಸ್ಕಾರಗಳಿಗೆ[೩೬] ಕೆಲ ಅಂಶಗಳಲ್ಲಿ ಸಮಾನವಾಗಿ ಕಂಡುಬಂದರೂ, ಇಲ್ಲಿಯ ಪ್ರಧಾನದೇವತೆಯು ಶಿವನೆಂಬುದನ್ನೂ, ಈ ಸಂದರ್ಭಗಳಲ್ಲಿ ಉಪಯೋಗಿಸುವ ಮಂತ್ರವು ಶಿವಮಂತ್ರವೆಂಬುದನ್ನೂ ಮರೆಯಲಾಗದು.

---

೩೪. ಕಾಮಿಕಾಗಮ ಭಾಗ ೧, ಪಟಲ ೩

೩೫. ಕಾಮಿಕಾಗಮ ಭಾಗ ೧, ಪಟಲ ೮

೩೬. Hindu Samskara "By Dr. R. B. Pandey M.A. D. Litt.

ಉಪನಯನ[೩೭] ಮತ್ತು ದೀಕ್ಷೆಗಳು[೩೮] ಸಮಾನವೆಂಬಂತೆ ತೋರಿದರೂ ಅವುಗಳಿಗೆ ಅಂತರವಿದೆ. ಶಕ್ತಿವಿಶಿಷ್ಟಾದ್ವೈತದಂತೆ ಜೀವಿಗೆ ಮತ್ತು ಶಿವನಿಗೆ ಭೇದವನ್ನುಂಟು ಮಾಡುವುದೇ ಮಲತ್ರಯಗಳು. ಮಲತ್ರಯಗಳಿಂದ ಪರಿವೃತನಾದ ಮಾನವನನ್ನು ಶುದ್ಧನನ್ನಾಗಿ ಮಾಡಿ ಆತನಿಗೆ ಆಧ್ಯಾತ್ಮ ಸ್ವಾತಂತ್ರ್ಯವನ್ನಿತ್ತು ಶಿವಾದ್ವೈತ ಸಾಹಿತ್ಯವನ್ನು ಅಭ್ಯಸಿಸುವುದಕ್ಕೆ ದೀಕ್ಷೆಯು[೩೯] ಅನುವು ಮಾಡಿಕೊಡುವುದು. ಕಾಮಿಕಾಗಮ[೪೦] ಮತ್ತು ಸುಪ್ರಭೇದಾಗಮಗಳು[೪೧] ಸಮಯದೀಕ್ಷೆ ಮತ್ತು ನಿರ್ವಾಣದೀಕ್ಷೆಯನ್ನು ವಿಶದವಾಗಿ ವಿವರಿಸುವವು. ಗುರುವನ್ನು ಅರಸಿಕೊಂಡು ಬರುವಂಥ ಉತ್ತಮ ಶಿಷ್ಯನನ್ನು ಗುರುವು ಸ್ವೀಕರಿಸಿ, ವಿಧಿಪೂರ್ವಕವಾದ ಅರ್ಚನೆಗಳೊಡನೆ ಶಿಷ್ಯನ ಮಸ್ತಕದ ಮೇಲೆ ತನ್ನ ಹಸ್ತವನ್ನಿಟ್ಟು, ಆತನ ಮಲತ್ರಯಗಳು ಅಳಿಯುವಂತೆ ಅನುಗ್ರಹಿಸಿ, ಪ್ರಣವ ಪಂಚಾಕ್ಷರಿಯನ್ನು ಆತನ ಕರ್ಣದಲ್ಲಿ ಉಪದೇಶಿಸುವನು. ಅನಂತರವೇ ಶಿಷ್ಯನು ದೇವರನ್ನು ಅರ್ಚಿಸಲು ಮತ್ತು ಶೈವಧರ್ಮ ಸಾಹಿತ್ಯವನ್ನು ಅಭ್ಯಸಿಸಲು ಅರ್ಹನಾಗುವನು. ಇದೇ ಸಮಯದೀಕ್ಷೆ. ಈ ದೀಕ್ಷೆಯನ್ನು ಸ್ತ್ರೀಯರು ಮೊದಲ್ಗೊಂಡು ಎಲ್ಲರಿಗೂ ಅನುಗ್ರಹಿಸಬಹುದೆಂದು ಕೆಲವು ಗ್ರಂಥಗಳು[೪೨] ಪ್ರತಿಪಾದಿಸಿವೆ. ಮಾನವನು ಸಮಯದೀಕ್ಷೆಯಿಂದ ಪರಿಶುದ್ಧನಾಗಿ ಆಧ್ಯಾತ್ಮ ಪಥದಲ್ಲಿ ಪ್ರಗತಿ ಪಡೆದಾಗ ನಿರ್ವಾಣದೀಕ್ಷೆಯನ್ನು ಪಡೆಯಲು ಅರ್ಹನಾಗುವನು. ಭವಬಂಧನಗಳ ಮುಕ್ತಿಯೇ ನಿರ್ವಾಣದೀಕ್ಷೆಯ ಗುರಿ. ಈ ದೀಕ್ಷೆಯು ಆಧ್ವ ಮತ್ತು ಮಲಗಳಿಂದ ಮಾನವನನ್ನು ಪೂರ್ಣವಾಗಿ ಮುಕ್ತನನ್ನು ಮಾಡಿ ಆತನ ನಿಜಸ್ವರೂಪವನ್ನರಿಯಲು ಸಹಾಯಮಾಡುವುದು. ಶಿವಾಗಮಗಳಲ್ಲಿ ಮಹತ್ವಪೂರ್ಣವಾದ ದೀಕ್ಷೆಯ ಬಗೆಗೆ ಕೆಲವು ವ್ಯತ್ಯಾಸಗಳು ಕಂಡುಬಂದರೂ ಮುಖ್ಯ ಭಾಗಗಳಲ್ಲಿ ವ್ಯತ್ಯಾಸವಿಲ್ಲದೆ ಒಂದೇ ಅಭಿಪ್ರಾಯವನ್ನೊಳಗೊಂಡಿರುವವು. ಆಮರಣ ಪರ್ಯಂತ ಎಂಟು ಸಮಯಗಳನ್ನು ಆಚರಣೆಯಲ್ಲಿ ಅನುಷ್ಠಾನಕ್ಕೆ ತರಬೇಕೆಂದು ಶೈವಾಗಮಗಳು ವಿಧಿಸುತ್ತವೆ.

ಅಗ್ನಿಚಯನ, ಅಷ್ಟಕ, ಸಂಸ್ಕಾರ, ಸಪಿಂಡೀಕರಣ ಈ ಕ್ರಿಯೆಗಳಲ್ಲಿ ಸೂತ್ರ, ಸ್ಮೃತಿಶಾಸ್ತ್ರಗಳಿಗೆ ಮತ್ತು ಶಿವಾಗಮಗಳಿಗೆ ಸಮಾನವಾಗಿರುವ ಅಂಶಗಳು ಹಲವು ಕಂಡುಬಂದರೂ, ಅನೇಕ ಕ್ರಿಯೆಗಳಲ್ಲಿ ಭಿನ್ನತೆಯನ್ನು ಕೂಡ ಕಾಣಬಹುದು. ಮಾನವನು ಮೃತನಾದಾಗ ಹುಗಿಯಬಹುದು ಅಥವಾ ಸುಡಬಹುದು ಎಂದು

---

೩೭. Upanayana Samskara and its Significance according to Parashara Grhya Sutras Journal of Karnataka University, Humanities, Vol. IV. June 1960 by. H.P. Malledevaru.

೩೮. "ದೀಕ್ಷೆ" H.P. Malledevaru

೩೯ ತನುತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶೇತ್॥ ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯ ಮುಪಾದೀಶೇತ್

೪೦. ಕಾಮಿಕಾಗಮ ಭಾಗ. ೨, ಪಟಲಗಳು ೨೦–೨೩

೪೧. ಸುಪ್ರಭೇದಾಗಮ ಚರ್ಯಾಪಾದ, ಪಟಲ ೪

೪೨. 'ಈಶಾನ ಶಿವಗುರುದೇವ ಪದ್ಧತಿ' ಭಾ. ೩–೧೪೭

ಶಿವಾಗಮಗಳು ಹೇಳಿವೆ. ಆದರೆ ಲಿಂಗಧಾರಿಯಾದವರು ಲಿಂಗೈಕ್ಯರಾದಾಗ ಸುಡಬಾರದೆಂದೂ, ಸಮಾಧಿಮಾಡಬೇಕೆಂದೂ ಆಗಮಗಳು ಪ್ರತಿಪಾದಿಸಿವೆ.[೪೩]

ಯೋಗಪಾದ : ಯೋಗಪಾದೇ ತು ಷಟ್‌ತ್ರಿಂಶತ್ ತತ್ತ್ವಾನಿ ಚ ತದೀಶ್ವರಾಃ
ಇಚ್ಛತಾಮೈಹಿಕೀಂ ಸಿದ್ಧಿಮಣಿಮಾದೇಶ್ಚ ಸಂಭವಃ॥[೪೪] – ಶಿವತತ್ವರತ್ನಾಕರ

ಯೋಗಪಾದದಲ್ಲಿ ೩೬ ತತ್ತ್ವಗಳ, ಅವುಗಳ ಅಧಿದೇವತೆಗಳ ಹಾಗೂ ಐಹಿಕ ಸಿದ್ಧಿಯನ್ನು ಪೂರೈಸುವ ಅಣಿಮಾದಿಗಳ ವಿವರಣೆ ಬಂದಿದೆ. ಮೂಲಾಧಾರ ಮೊದಲಾದ ಚಕ್ರಸ್ಥಾನಗಳನ್ನು ಅವುಗಳ ಅವಸ್ಥೆಗಳನ್ನು ಇಲ್ಲಿ ವಿವರಿಸಲಾಗಿದೆ.

ಯೋಗಪಾದದಲ್ಲಿ ಪ್ರಾಣಾಯಾಮ, ಧ್ಯಾನ, ಧಾರಣ, ಸಮಾಧಿ ಮುಂತಾದ ಯೋಗ ಸಾಧನೆಯ ವಿವರಣೆ ಬರುತ್ತದೆ. ಯೋಗದ ವಿಷಯನ್ನು ನಿರೂಪಿಸುವುದಕ್ಕಾಗಿ ಶಿವಾಗಮಗಳಲ್ಲೆಲ್ಲ ಪ್ರತ್ಯೇಕ ಪಾದವಿದ್ದರೂ, ಲಭ್ಯವಿರುವ ಅನೇಕ ಶಿವಾಗಮಗಳಲ್ಲಿ ಈ ಪಾದವು ಲುಪ್ತವಾಗಿರುವದು. ಆದರೆ ಸುಪ್ರಭೇದಾಗಮ,[೪೫] ಮೃಗೇಂದ್ರಾಗಮ[೪೬] ಮೊದಲಾದ ಕೆಲವು ಆಗಮಗಳಲ್ಲಿ ಯೋಗದ ಬಗೆಗೆ ವಿವರಣೆಯಿದೆ. ಜೀವಾತ್ಮ ಮತ್ತು ಪರಮಾತ್ಮ ಇವರ ಐಕ್ಯವೇ ಯೋಗಶಾಸ್ತ್ರದ ಗುರಿ. ಯೋಗದಲ್ಲಿ ಸಿದ್ಧಿ ಹೊಂದಬೇಕಾದರೆ ತನುಮನಗಳ ಮೇಲೆ ಮಾನವನಿಗೆ ಸಂಪೂರ್ಣ ಪ್ರಭುತ್ವವಿರಬೇಕು. ಶರೀರ ಮತ್ತು ಇಂದ್ರಿಯಗಳನ್ನು ಇಡಾ, ಪಿಂಗಳಾ ಮತ್ತು ಸುಷುಮ್ನಾ ನಾಡಿಗಳ ಮೂಲಕ ಪರಿಶುದ್ಧಗೊಳಿಸಬೇಕು. ಅಶ್ವತ್ಥ ವೃಕ್ಷದ ಎಲೆಯಲ್ಲಿ ಅಸಂಖ್ಯಾತ ಗೆರೆಗಳು ಹೇಗೆ ಪಸರಿಸಿರುವುವೋ ಅಂತೆಯೇ ಮಾನವನ ಶರೀರದಲ್ಲೂ ಸುಮಾರು ೭೨,೦೦೦ ನಾಡಿಗಳಿರುವುವು.[೪೭] ಪ್ರಧಾನವಾದ ಮೂರು ನಾಡಿಗಳು, ಅಷ್ಟು ಪ್ರಧಾನವಲ್ಲದ ಹತ್ತು ನಾಡಿಗಳು, ದಶವಾಯುಗಳು ಶರೀರದ ಯಾವ ಯಾವ ಭಾಗಗಳಲ್ಲಿದ್ದು ಏನು ಕಾರ್ಯ ಮಾಡುತ್ತವೆಂಬುದರ ಬಗೆಗೂ ವಿವರಣೆಯಿದೆ.

ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞಾ ಈ ಆರು ಚಕ್ರಗಳ[೪೮] ಬಗೆಗೂ ಸಂಪೂರ್ಣ ನಿರೂಪಣೆಯನ್ನಿತ್ತು, ಯೋಗಸಾಧನೆಯಲ್ಲಿ ಸಿದ್ಧಿಗಳು ತಾವಾಗಿ ಕರಗತವಾದಾಗ ಸಾಧಕನು ಸಿದ್ಧಿಗಳನ್ನು ತ್ಯಜಿಸಿ ಶಿವನೊಡನೆ

---

೪೩. ಶಿವಲಿಂಗಧರೋ ವಿಪ್ರೋ ಪಿಪನ್ನಸ್ತಂನ ದಾಹಯೇತ್ । ಯದಿ ವಾ ದಾಹಯೇತ್ತಸ್ಯ ಬ್ರಹ್ಮಹತ್ಯಾ ಸದಾ ಭವೇತ್। ಗೃಹೀ ವಾSಥ ಯತಿರ್ವಾಪಿ ಲಿಂಗಧಾರೀ ತನುಂ ತ್ಯಜೇತ್। ನ ದಹೇತ್ತಸ್ಯ ದೇಹಂ ತು ಸಮಾಧೌ ಗೋಪಯೇತ್ ಸದಾ –ಚಂದ್ರಜ್ಞಾನಾಗಮ, ಚರ್ಯಾಪಾದ, ಪಟಲ ೧, ಶ್ಲೋಕ ೯–೧೨

೪೪. ಡಾ॥ ಆರ್. ಸಿ. ಹಿರೇಮಠರವರ ಮಹಾಯಾತ್ರೆ ಪುಟ ಸಂಖ್ಯೆ ೭೫

೪೫. ಸುಪ್ರಭೇದಾಗಮ, ಯೋಗಪಾದ, ಪಟಲ, ೧

೪೬ ಮೃಗೇಂದ್ರಾಗಮ, ಯೋಗಪಾದ, ಪಟಲ ೨

೪೭. ಸುಪ್ರಭೇದಾಗಮ, ಯೋಗಪಾದ, ಪಟಲ ೧, ಶ್ಲೋ. ೨.

೪೮. ಸುಪ್ರಭೇದಾಗಮ, ಯೋಗಪಾದ, ಪಟಲ ೧, ಶ್ಲೋ. ೨೯–೩೦

ಐಕ್ಯ ಹೊಂದಬೇಕೆಂದೂ ಶಿವಾಗಮಗಳು ನಿರ್ದೇಶಿಸಿವೆ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿಗಳ ಬಗೆಗೂ ದೀರ್ಘ ವಿವರಣೆಯಿದೆ. ಯೋಗನಿರತನಾದ ಸಾಧಕನಿಗೆ ಭೇರೀನಾದ ಮತ್ತು ಶಂಖನಾದ ಮೊದಲಾದ ನಾದಗಳು ಆಂತರಿಕವಾಗಿ ಕೇಳಿಬರುವವೆಂದೂ ಇವು ಪ್ರಗತಿಯ ಚಿಹ್ನೆಯೆಂದೂ ತಿಳಿಸಿವೆ.

ವಾತುಲಾಗಮ, ಸೂಕ್ಷ್ಮಾಗಮ, ಪಾರಮೇಶ್ವರಾಗಮ ಮೊದಲಾದ ಶಿವಾಗಮಗಳು ಲಿಂಗವನ್ನು ಪೂಜಿಸಿ, ಲಿಂಗದಲ್ಲಿ ನಿರ್ನಿಮೇಷ ದೃಷ್ಟಿಯಿಟ್ಟು ಧ್ಯಾನಮಗ್ನನಾಗುವುದೇ ಶಿವಯೋಗವೆಂದು, ಈ ಯೋಗವು ಬೇರೆ ಯೋಗಗಳಿಗಿಂತ ಪ್ರಶಸ್ತವೆಂದೂ ಪ್ರತಿಪಾದಿಸಿವೆ.

ಜ್ಞಾನಪಾದ : ಶಿವಾಗಮಗಳಲ್ಲಿಯ ಜ್ಞಾನಪಾದದ ಸ್ವರೂಪವನ್ನು ಕೆಳದಿಯ ಅರಸ ಬಸವರಾಜರು **ಶಿವತತ್ವರತ್ನಾಕರ ಎಂಬ ಗ್ರಂಥದಲ್ಲಿ** ಹೀಗೆ ನಿರೂಪಿಸಿರುವರು.

ಜ್ಞಾನಪಾದೇ ಮಹೇಶ್ವರಸ್ಯ ಸ್ವರೂಪಂ ಪ್ರತಿಪಾದ್ಯತೇ
ವಿಜ್ಞಾನ ಕಲ ನಾಮ್ನಶ್ಚ ಪ್ರಲಯಾಕಲಕಸ್ಯ ಚ
ಸಕಲಾಕಲನಾಮ್ನಶ್ಚ ಸ್ವರೂಪಾಣ್ಯಾತ್ಮನಾಮಪಿ
ಪಾಶಾನಾಮಪಿ ಪಂಚಾನಾಂ ಸ್ವರೂಪಮಪಿ ವಿಸ್ತರಾತ್
ಸೃಷ್ಟೇಃ ಪ್ರಕಾರ ಶಕ್ತೇಶ್ಚ ಸ್ವರೂಪಮಪಿ ವಿಸ್ಫುಟಮ್
ಪರಮೇಶ್ವರಮಾರಭ್ಯ ಭುವನಾನಾಂ ಪೃಥಕ್ ಪೃಥಕ್
ಇಯಂತೇ ಯೋಜನಾನೀತಿ ಪರಿಮಾಣ ಕ್ರಮಸ್ತಥಾ
ಭುವನಾನಾಂ ತದೀಶಾನಾಂ ರೂಪಮಪ್ಯವಿಶೇಷತಃ
ತತ್‌ತತ್‌ಪ್ರಲಯತಃ ಪಶ್ಚಾತ್ ಸೃಷ್ಟೇಶ್ಚಾಪಿ ಪ್ರವರ್ತನಂ
ಮಹಾವ್ರತಾದಿ ಶಾಸ್ತ್ರಾಣಾಂ ಪ್ರಮೇಯನಿಯಮಸ್ತಥಾ[೪೯]
ಏವಮಾದ್ಯಾನಿ ಬಹುಧಾ ಪ್ರತಿಪಾದ್ಯಾನಿ ತತ್ರ ಹಿ

ಜ್ಞಾನಪಾದದಲ್ಲಿ ಮಹೇಶ್ವರನ ಸ್ವರೂಪವು ನಿರೂಪಿತವಾಗಿದೆ. ವಿಜ್ಞಾನಕಲ, ಪ್ರಲಯಾಕಲ ಮತ್ತು ಸಕಲಾಕಲವೆಂಬ ಹೆಸರುಳ್ಳ ಆತ್ಮ ಸ್ವರೂಪಗಳು ಹಾಗೂ ಪಂಚ ಪಾಶಗಳ ಸ್ವರೂಪವು ವಿಸ್ತಾರವಾಗಿ ನಿರೂಪಿತವಾಗಿದೆ. ಸೃಷ್ಟಿಯ ವ್ಯುತ್ಪತ್ತಿಗೆ ಕಾರಣವಾದ ಶಕ್ತಿಯ ಸ್ವರೂಪವೂ ಇಲ್ಲಿ ಸ್ಫುಟಗೊಂಡಿದೆ. ಪರಮೇಶ್ವರನನ್ನು ಮೊದಲು ಮಾಡಿಕೊಂಡು ಎಲ್ಲ ಭುವನಗಳ ಅಳತೆಗಳನ್ನು ತೋರಿಸಲಾಗಿದೆ. ಭುವನಗಳ ಹಾಗೂ ಅವುಗಳೊಡೆಯನಾದ ಈಶ್ವರನ ವಿಶಿಷ್ಟ ರೂಪಗಳನ್ನೂ ಅವುಗಳ ಪ್ರಲಯದ ನಂತರ ಸೃಷ್ಟಿಪ್ರವರ್ತನವಾಗುವುದನ್ನೂ ವಿವರಿಸಲಾಗಿದೆ. ಮಹಾವ್ರತ ಮುಂತಾದ ಶಾಸ್ತ್ರಗಳ ಪ್ರಮೇಯ ಹಾಗೂ ನಿಯಮ ಮೊದಲಾದವುಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

---

೪೯. ಡಾ॥ ಆರ್. ಸಿ. ಹಿರೇಮಠರವರ ಮಹಾಯಾತ್ರೆ ಪುಟ ಸಂಖ್ಯೆ ೭೪

ಜ್ಞಾನಪಾದದಲ್ಲಿ ಶೈವದರ್ಶನದ ತತ್ವಶಾಸ್ತ್ರವು ಪ್ರತಿಪಾದಿತವಾಗಿದೆ. ಶೈವ ತತ್ವಶಾಸ್ತ್ರದಲ್ಲಿ ಪ್ರಧಾನವಾಗಿ ವಿವೇಚಿಸಬೇಕಾದ ಸಂಗತಿಗಳೆಂದರೆ ಪಶು, ಪತಿ, ಪಾಶ ಮತ್ತು ಸೃಷ್ಟಿ ಸ್ವರೂಪ ವಿಷಯಗಳು. ಪತಿ[೫೦] ಎಂದರೆ ಪ್ರಭು, ಪರಮಾತ್ಮ. ಪತಿಯು ನಿಷ್ಕಲ. ಶಿವಾಗಮಗಳು ಅವನನ್ನು ಈಶ್ವರ, ಸದಾಶಿವ, ಶಿವ, ಲಿಂಗ ಎಂದೂ ವರ್ಣಿಸಿವೆ. ಆತನಲ್ಲಿ ಶಕ್ತಿಯು ಅವಿನಾಭಾವ ಸಂಬಂಧದಿಂದ ಯಾವಾಗಲೂ ಇರುತ್ತದೆ. ಶಿವ-ಶಕ್ತಿಯರೇ ಸೃಷ್ಟಿ, ಸ್ಥಿತಿ, ಲಯ, ತಿರೋಭಾವ ಮತ್ತು ಅನುಗ್ರಹ ಈ ಪಂಚಕೃತ್ಯಗಳಿಗೆ ಕಾರಣರು. ಪಶುಗಳೆಂದರೆ ಆತ್ಮರುಗಳು.[೫೧] ಶಿವನಿಂದ ಭಿನ್ನರಾದ ಇವರು ಚೈತನ್ಯಯುಕ್ತರಾಗಿದ್ದರೂ ಅವರ ಚೈತನ್ಯವು ಮಲತ್ರಯ(ಪಾಶ)ದಿಂದ ಆವೃತವಾಗಿರುವುದು. ಮಲತ್ರಯದಿಂದ ಬದ್ಧರಾದ ಈ ಆತ್ಮರು ತಮ್ಮ ನಿಜಸ್ಥಿತಿಯನ್ನು ಮರೆತಿರುತ್ತಾರೆ. ಶ್ರೀಗುರುವಿನ ಅನುಗ್ರಹ ಪಡೆದು ದೀಕ್ಷೆ ಹೊಂದಿ, ಲಿಂಗಾಂಗ ಸಾಮರಸ್ಯದ ಮೂಲಕ ಮುಕ್ತಿ ಪಡೆಯಬಹುದೆಂದು ಶಿವಾಗಮಗಳು ಪ್ರತಿಪಾದಿಸಿವೆ.

ಶಿವಾಗಮಗಳ ವಿಷಯ ವಸ್ತು

'ಆಗಮಾ ಬಹುಧಾ ಪ್ರೋಕ್ತಾಃ ಸಮಸ್ತಾರ್ಥಾವಬೋಧಕಾಃ' ಎಂಬ ಸೂಕ್ಷ್ಮಾಗಮದ ಉಕ್ತಿಯಂತೆ ಆಗಮಗಳು ಅಖಿಲವಿದ್ಯೆಗಳಿಗೆ ಆಗರವಾಗಿವೆ. ಸಕಲಕಲೆಗಳಿಗೆ ಕೇಂದ್ರಗಳಾಗಿವೆ. ಅಪಾರವಾದ ಆಗಮ ರಾಶಿಯಲ್ಲಿ ವಿವರಿಸದೆ ಇರುವ ಆಧ್ಯಾತ್ಮ ದರ್ಶನದ ವಿಷಯವೇ ಇಲ್ಲ. ಭಾರತೀಯ ಎಲ್ಲ ಭಕ್ತಿಪಂಥಗಳಿಗೆ ಆಧಾರವಾದ ಉದಾರ ತತ್ವಗಳನ್ನೊಳಗೊಂಡ ಆಗಮಗಳನ್ನು ಭಾರತೀಯ ತತ್ವಜ್ಞಾನದ ವಿಶ್ವಕೋಶಗಳೆಂದೇ ಕರೆಯಬಹುದು.

ವಿವೇಕಚಿಂತಾಮಣಿ ಮೊದಲಾದ ಆರು ಶಾಸ್ತ್ರ ಗ್ರಂಥಗಳನ್ನು ಬರೆದು ಪ್ರಸಿದ್ಧರಾದ ಶ್ರೀ ನಿಜಗುಣ ಶಿವಯೋಗಿಗಳು ಶಿವಾಗಮಗಳ ವಿಷಯದಲ್ಲಿ ಹೀಗೆ ಅಭಿಪ್ರಾಯಪಟ್ಟಿರುವರು –

"ನೂರತೊಂಬತ್ತೆಂಟು ಭೇದಗಳುಳ್ಳ ಶಿವರುದ್ರಾಗಮಗಳೇ ಸದಾಶಿವನ ಪಂಚ ಮುಖಗಳಿಂದುದಯಿಸಿದವಾಗಿ "ಈಶಾನಸ್ಸರ್ವವಿದ್ಯಾನಾಮೀಶ್ವರಃ" ಎಂಬ ಶ್ರುತ್ಯರ್ಥದ ಅನುಸಾರವಾಗಿ ಅಷ್ಟಾದಶ ಮಹಾವಿದ್ಯೆಗಳುಂ ಅಷ್ಟಾದಶ ಉಪವಿದ್ಯೆಗಳುಂ, ಚತುಷ್ಷಷ್ಟಿ ತಂತ್ರಗಳಂ, ಚತುಷ್ಷಷ್ಟಿ ಉಪತಂತ್ರಗಳುಂ, ಇಹಪರ ತತ್ವಾರ್ಥ ಸರ್ವಸ್ವಮುಂ ಸಕಲ ಮತ, ಕುಲ, ಕರ್ಮ, ಧರ್ಮ, ಶಿಲ್ಪ, ವ್ಯಾಪಾರ ರಹಸ್ಯಮುಂ, ಶಿವಾಗಮದಿಂದಲೇ ಉಪದಿಷ್ಟಮಾಗಿ ಅನುಭವಸಿದ್ಧಮಪ್ಪುದರಿಂ **ಪ್ರಪಂಚವೆಲ್ಲಮುಂ ಶಿವಾಗಮಜ್ಞೇಯಮಾಗಿ ಜೀವಕೋಟಿಯೆಲ್ಲಮುಂ ಶೈವಮಕ್ಕುಂ॥**[೫೨]

ಅರ್ಥಾತ್ ಹದಿನೆಂಟು ಮಹಾವಿದ್ಯೆಗಳು, ಹದಿನೆಂಟು ಉಪವಿದ್ಯೆಗಳು,

---

೫೦. ಚಂದ್ರಜ್ಞಾನಾಗಮ ಪಟಲ ೧ ಶ್ಲೋ. ೧೦-೧೧

೫೧. ಶೈವಾಗಮ (Mss. No. 66684 Adyar Library Madras)

೫೨. ವಿವೇಕಚಿಂತಾಮಣಿ ಆಗಮಪಾದ ಪ್ರಕರಣ ೨

ಅರವತ್ನಾಲ್ಕು ವಿದ್ಯಾಕಲೆಗಳು, ಅರವತ್ನಾಲ್ಕು ತಂತ್ರಗಳು, ಉಪತಂತ್ರಗಳು ಆಗಮ ಗರ್ಭದಿಂದ ಬಂದವುಗಳು. ಇಹಪರ ತತ್ತ್ವಾರ್ಥಗಳು ಶಿಲ್ಪವಾಣಿಜ್ಯಾದಿಗಳು ಆಗಮದಿಂದಲೇ ಉಗಮವಾಗಿದೆ.

ವಾರಾಹಿತಂತ್ರವು ಆಗಮದ ಲಕ್ಷಣಗಳನ್ನು ಈ ಕೆಳಗಿನಂತೆ ಹೇಳಿದೆ.[೫೩]

ಸೃಷ್ಟಿಶ್ಚ ಪ್ರಲಯಶ್ಚೈವ ದೇವತಾನಾಂ ಯಥಾರ್ಚನಂ।
ಸಾಧನಂ ಚೈವ ಸರ್ವೇಷಾಂ ಪುರಶ್ಚರಣಮೇವಚ॥
ಷಟ್‌ಕರ್ಮ ಸಾಧನಂ ಚೈವ ಧ್ಯಾನಯೋಗಶ್ಚತುರ್ವಿಧಃ।
ಸಪ್ತಭಿರ್ಲಕ್ಷಣೈರ್ಯುಕ್ತಮಾಗಮಂ ತದ್ವಿದುರ್ಬುಧಾಃ॥

ಸೃಷ್ಟಿ, ಪ್ರಲಯ, ದೇವತಾರ್ಚನ, ಸರ್ವಸಾಧನ ಪುರಶ್ಚರಣವಿಧಿ, ಷಟ್‌ಕರ್ಮ(ಅಂದರೆ ಶಾಂತಿ ವಶೀಕರಣ, ಸ್ತಂಭನ, ವಿದ್ವೇಷಣ, ಉಚ್ಚಾಟಣ, ಮಾರಣ ಇವು ಷಟ್‌ಕರ್ಮಗಳು) ಧ್ಯಾನ, ಯೋಗ ಇವೆಲ್ಲವುಗಳು ಆಗಮಶಾಸ್ತ್ರದ ಲಕ್ಷಣಗಳು. ಆಗಮ ಶಾಸ್ತ್ರಗಳು ಮುಖ್ಯವಾಗಿ ಉಪಾಸನೆಗಾಗಿ ಹುಟ್ಟಿ ಬೆಳೆದಿದ್ದರೂ, ಅವುಗಳಲ್ಲಿ ಅನೇಕ ವಿಷಯಗಳ ಪ್ರತಿಪಾದನೆ ಇರುವುದು. ಜ್ಞಾನ, ಕ್ರಿಯಾ, ಚರ್ಯಾ ಮತ್ತು ಯೋಗವೆಂದು ನಾಲ್ಕು ಪಾದಗಳಿಂದ ಕೂಡಿರುವುದಂತೂ ಪ್ರಸಿದ್ಧವಿದೆ ಎಂದು ವಾರಾಹಿತಂತ್ರವು ಆಗಮದ ಲಕ್ಷಣಗಳನ್ನು ವಿವರಿಸಿದೆ.

ಹೊಂಬಳದ ಶಾಸನದಲ್ಲಿಯ ಉಲ್ಲೇಖದಂತೆ [೫೪]

ವ್ರತ ದೀಕ್ಷಾವಿಧಿ ಕುಂಡಮಂಡಳ ವಿಧಾನಂ ಲಿಂಗ ಪೀಠಕ್ರಮಂ।
ಪ್ರತಿಮಾದೂಷಣ ಶೋಷಣ ಭುವನಕೋಶಂ ವಾಸ್ತು ಭೂದೇವಸಂ॥
ಸೃತಿ ಭೂಭೇದಪರೀಕ್ಷೆ ದೇವನಿವಹ ಪ್ರಾಸಾದವೆಂಬಾಗಮ।
ಸ್ಥಿತವಿದ್ಯಾವಳಿವಾಮಶಕ್ತಿಮುನಿಯಿಂ ವಿಖ್ಯಾತಮಾಯ್ತುರ್ವ್ವಿಯೊಳ್
– ಇವೆಲ್ಲ ಆಗಮವಿದ್ಯೆಗಳು ಎಂದು ಅರುಹುತ್ತದೆ.

ಒಟ್ಟಿನಲ್ಲಿ ಆಗಮಶಾಸ್ತ್ರಗಳನ್ನು ಅಖಂಡ ಜ್ಞಾನಕೋಶವೆಂದು ಕರೆದರೆ ಅತಿಶಯೋಕ್ತಿಯಾಗಲಾರದು. ಪಶು–ಪಾಶ–ಪತಿ, ಕಾಂಕ್ಷೆ, ಕುಂಡಲಿನಿ, ಮಾಯೆ ಎಂಬ ೬ ಪದಾರ್ಥಗಳ ಪ್ರತಿಪಾದನೆ ಆಗಮಗಳಲ್ಲಿ ಉಂಟು. ಆತ್ಮನ ಪಶುತ್ವವನ್ನು ಕ್ಷಯಿಸಿ ಆತನಲ್ಲಿ ಪರಶಿವತತ್ವವನ್ನು ಅಭಿವ್ಯಕ್ತಗೊಳಿಸುವ ಕ್ರಿಯೆ ಆಗಮದಲ್ಲಿದೆ. ಮೋಕ್ಷಕ್ಕೆ ಅನುವಾಗುವ ಮಂತ್ರಾನುಷ್ಠಾನವು ಇಲ್ಲಿದೆ. ಇದನ್ನು ಸಾಧಿಸಲು ಅಗತ್ಯವಾದ ಯೋಗ ವಿಷಯವನ್ನು ಶಿವಾಗಮಗಳು ಸವಿಸ್ತಾರವಾಗಿ ಪ್ರತಿಪಾದಿಸುತ್ತವೆ. ಎಲ್ಲಕ್ಕೂ ಮಿಗಿಲಾಗಿ ಶಿವಾಗಮಗಳೇ

---

೫೩. ಪರಮಸಂಹಿತಾ, ಪೀಠಿಕೆ, ಪುಟ ೨೯, Edited and Tr. by S. Krishnaswamy Ayyanavar. Pub. by Gaekwad's Oriental series vol.No LXXXVI Baroda 1940

೫೪. ಕರ್ನಾಟಕ ಲಾಕುಳಶೈವರ ಇತಿಹಾಸ, ೨ ನೇ ಪ್ರಕರಣ, ಪುಟ ೭

ಭಕ್ತಿಯ ಕೇಂದ್ರಗಳಾಗಿವೆ. ಈ ಭಕ್ತಿಯೇ ವಾಸ್ತು, ಸಂಗೀತ, ನೃತ್ಯ, ಸಾಹಿತ್ಯಗಳಿಗೆ ಕೇಂದ್ರವಾಗಿರುವುದನ್ನು ಆಗಮಗಳಲ್ಲಿ ಕಂಡುಕೊಳ್ಳುತ್ತೇವೆ. ಇದರಲ್ಲಿ ಜ್ಞಾನಕಾಂಡಕ್ಕೆ ಸಂಬಂಧಪಟ್ಟ ವಿಷಯಗಳಲ್ಲದೆ ಶೈವ, ವೀರಶೈವರ ನಿತ್ಯನೈಮಿತ್ತಕಾಚರಣೆಯು, ದೀಕ್ಷೆ ಮುಂತಾದ ವಿಷಯಗಳು, ಭೂಗೋಲ, ಖಗೋಲ, ಜ್ಯೋತಿಷ್ಯ, ನೃತ್ಯ, ವಾದ್ಯ, ಸಂಗೀತ ಮುಂತಾದ ಅನೇಕ ವಿಷಯಗಳನ್ನು ಸಂಗ್ರಹಿಸಲಾಗಿದೆ. ಮಂತ್ರತಂತ್ರಗಳಂತೂ ಸರಿಯೇ. ಆಗಮಿಕ ಯೋಗವಂತೂ ಎಲ್ಲ ತಂತ್ರಗಳ ತಳಪದಿ; ಅದುವೆ ಕುಂಡಲಿನೀಯೋಗವು. ದೇಹದಲ್ಲಿಯ ಷಟ್‌ಚಕ್ರಗಳು, ಇಡಾ–ಪಿಂಗಳಾ–ಸುಷಮ್ನಾದಿ ನಾಡಿಗಳು, ಈ ನಾಡಿ ಮತ್ತು ಚಕ್ರಗಳಲ್ಲಿ ಅಕ್ಷರಗಳ ವರ್ಗೀಕರಣ, ಪರಮಾತ್ಮನ ಧ್ಯೇಯರೂಪಗಳು, ಧ್ಯಾನಧಾರಣಾ ಸಮಾಧಿ ಮುಂತಾದ ವಿಷಯಗಳು ಎಲ್ಲವೂ ಆಗಮ ಗ್ರಂಥಗಳಲ್ಲಿಯ ಸಾಮಾನ್ಯವಾದ ವಿಷಯಗಳು. ಕ್ರಿಯೆ, ಜ್ಞಾನ, ಚರ್ಯೆ ಮತ್ತು ಯೋಗಗಳನ್ನು ಪಾದ ಪಾದವಾಗಿ ಪ್ರತಿಪಾದಿಸಿದ ಪರಿಣತೆ ಶಿವಾಗಮ ಸಿದ್ಧಾಂತದ್ದು. ಕ್ರಿಯೆ–ಜ್ಞಾನಗಳಿಗೂ; ಆಚಾರ–ವಿಚಾರಗಳಿಗೂ, ಯೋಗ–ಶಿವಯೋಗಗಳಿಗೂ ತತ್ತ್ವ–ಸಿದ್ಧಾಂತಗಳಿಗೂ; ಮಂತ್ರ–ತಂತ್ರಗಳಿಗೂ ಆಗಮಗಳು ಪ್ರಮಾಣಗಳು. ಅರ್ಥಾತ್ ಶಿವಾಗಮಗಳು ಭಾರತೀಯ ಧರ್ಮ, ಸಾಹಿತ್ಯ ಕಲೆ, ಸಂಸ್ಕೃತಿಯ ಜ್ಞಾನ ಕೋಶಗಳಾಗಿವೆ.

ಶಿವಾಗಮ ಸಾಹಿತ್ಯವು 'ಶೈವ–ವೀರಶೈವ' ಸಂಸ್ಕೃತಿಯ ಗಂಗೋತ್ರಿ. ಶಿವಾಗಮಗಳು ಧರ್ಮಶಾಸ್ತ್ರಗಳಾಗಿದ್ದು, ಶೈವ–ವೀರಶೈವದ ಜ್ಞಾನಕೋಶಗಳು ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿವೆ.

ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್

ಎಂದು ಮಹಾಭಾರತವನ್ನು ಕುರಿತು ಹೇಳುವ ಮಾತು ಆಗಮ ಸಾಹಿತ್ಯಕ್ಕೂ ಅನ್ವಯಿಸಬಹುದು.

ಶಿವಾಗಮಗಳಲ್ಲಿ ಶೈವ, ವೀರಶೈವ ಎರಡೂ ತತ್ವಗಳಿವೆ. ಶಿವಾಗಮಗಳಲ್ಲಿ ಎರಡು ಸಂಸ್ಕೃತಿಗಳ ವಿಚಾರಧಾರೆಯನ್ನು ಕಾಣುತ್ತೇವೆ. ಪೂರ್ವಭಾಗದಲ್ಲಿ ದೇವಾಲಯದ ಸಂಸ್ಕೃತಿ, ಉತ್ತರ ಭಾಗದಲ್ಲಿ ಇಷ್ಟಲಿಂಗ ಸಂಸ್ಕೃತಿಯನ್ನು ಕಾಣುತ್ತೇವೆ.

ದೇಹೋ ದೇವಾಲಯಃ ಪ್ರೋಕ್ತಃ ಜೀವೋ ದೇವಃ ಸನಾತನಃ।
ತ್ಯಜೇದ ಜ್ಞಾನ – ನಿರ್ಮಾಲ್ಯಂ ಸೋಹಂ ಭಾವೇನ ಪೂಜಯೇತ್॥[೫೫]

ಎಂದು ಆಗಮವು ಜೀವವೇ ದೇವನು, ದೇಹವೇ ದೇವಾಲಯವೆಂದು ಸಾರುತ್ತದೆ. ಸಾಂಸ್ಕೃತಿಕ ಕೇಂದ್ರಗಳಾದ ದೇವಾಲಯಗಳ ಗುರಿ ಸಮಾಜ ಕಲ್ಯಾಣವಾಗಿದ್ದು ಮೂರ್ತಿ ಪೂಜೆಯು ದೈವೀಶಕ್ತಿಯ ಪ್ರಚಾರಕ್ಕಾಗಿ ಎಂಬ ಭಾವನೆ ಅಲ್ಲಿದೆ. ಸ್ಥಾವರ ಲಿಂಗಪೂಜೆ ಸಾಮಾಜಿಕ ಪೂಜೆಯಾಗಿದ್ದು ಅದು ದೈವೀಶಕ್ತಿ ಪ್ರಚಾರಕಷ್ಟೆ ಸಾಧನೆಯಾಗುತ್ತದೆ. ಅದರಿಂದ ಆತ್ಮೋದ್ಧಾರವಾಗಲಿ, ಮನಸ್ಸಿನ ಏಕಾಗ್ರತೆಯಾಗಲಿ, ಸಿದ್ಧಿಯಾಗಲು ಸಾಧ್ಯವಿಲ್ಲ.

೫೫. ಸೂಕ್ಷ್ಮಾಗಮ, ಕ್ರಿಯಾಪಾದ, ಅಷ್ಟಮ ಪಟಲ ಶ್ಲೋಕ ಸಂಖ್ಯೆ ೨೭

ಕಾರಣ ಆತ್ಮನ ಕುರುಹಾಗಿ, ಅನಿಷ್ಟ ನಿವಾರಕವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಅವನವನ ಇಷ್ಟಾನುಸಾರವಾಗಿ ಇಷ್ಟಲಿಂಗವನ್ನು ಪೂಜೆಗೈಯಲು ತಿಳಿಸಲಾಗಿದೆ. ಇದನ್ನು ಆಗಮಕಾರರು ಜಂಗಮಲಿಂಗವೆಂದು ಕರೆಯುತ್ತಾರೆ. ಕಾರಣ ಆಗಮಗಳು ಪೂರ್ವಭಾಗದಲ್ಲಿ ಸಮಾಜಮುಖಿಯಾಗಿ ಚಿಂತನೆಗೈಯ್ದಿದ್ದರೆ, ಉತ್ತರಭಾಗದಲ್ಲಿ ವೈಯಕ್ತಿಕ ಆತ್ಮೋನ್ನತಿಯ ಮಾರ್ಗಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿವೆ.

ಶೈವ ಪ್ರಭೇದಗಳು

ವಸ್ತುತಃ ಆಗಮಗಳ ಉತ್ತರ ಭಾಗದಲ್ಲಿ ಅನೇಕ ಪ್ರಕಾರದ ಶೈವ ಪ್ರಭೇದಗಳು ಹೇಳಲ್ಪಟ್ಟಿವೆ. ಈ ಶೈವಪ್ರಭೇದಗಳ ವಿಷಯದಲ್ಲಿ ಆಗಮಗಳು ಒಮ್ಮತಾಭಿಪ್ರಾಯವನ್ನು ಹೊಂದಿಲ್ಲ. ಅಲ್ಲದೇ ಇವು ಶೈವಭೇದಗಳನ್ನು ಸಕ್ರಮವಾಗಿ ವಿವರಿಸದೆ ಸಂದರ್ಭಸೂಚ್ಯವಾಗಿ ಹೇಳಿವೆ. ಪಾರಮೇಶ್ವರಾಗಮದಲ್ಲಿ ವೀರ–ಅನಾದಿ–ಆದಿ–ಅನು–ಮಹಾ–ಯೋಗ–ಜ್ಞಾನ ಎಂದು ಸಪ್ತವಿಧ ಶೈವಗಳು,[೫೬] ಚಂದ್ರಜ್ಞಾನಾಗಮದಲ್ಲಿ ಅನಾದಿ–ಆದಿ–ಪೂರ್ವ–ಮಿಶ್ರ–ಶುದ್ಧ–ಮಾರ್ಗ–ಸಾಮಾನ್ಯ–ವೀರ ಎಂಬುದಾಗಿ ಎಂಟು ಪ್ರಕಾರದ ಶೈವ ಪ್ರಭೇದಗಳು,[೫೭] ಸೂಕ್ಷ್ಮಾಗಮದಲ್ಲಿ ಅನಾದಿ–ಆದಿ–ಮಹಾ–ಅನು–ಪ್ರವರ–ಅಂತ್ಯ–ಸಾಮಾನ್ಯ–ಮಿಶ್ರ–ಶುದ್ಧ–ವೀರ ಎಂಬುದಾಗಿ ಹತ್ತು ಪ್ರಕಾರದ ಶೈವಪ್ರಭೇದಗಳು[೫೮] ಹೇಳಲ್ಪಟ್ಟಿವೆ. ವಾತುಲ ಶುದ್ಧಾಗಮದಲ್ಲಿ[೫೯] ಸಾಮಾನ್ಯ–ಮಿಶ್ರ–ಶುದ್ಧ–ವೀರ ಎಂಬ ನಾಲ್ಕು ಪ್ರಕಾರದ ಶೈವಪ್ರಭೇದಗಳು ಹೇಳಲ್ಪಟ್ಟಿವೆ. ಇದಲ್ಲದೆ ವೀರಾಗಮದಲ್ಲಿ ಇವುಗಳ ಸಂಖ್ಯೆ ಇನ್ನಷ್ಟು ಬೆಳೆದು ಶುದ್ಧ–ಕ್ರಿಯಾ–ರೂಪ–ಮಿಶ್ರಮಾರ್ಗಣ–ಮಾರ್ದವ–ತಾಂತ್ರ್ಯ–ಉನ್ಮತ್ತ–ಸ್ವರ–ಗುಣ–ಬಿಂಬ–ಭಕ್ತ–ಕರ್ಮಕ್ರಿಯಾ – ಮಠ–ಆತಿಥ್ಯ–ಲಾಕ್ಷಣಿಕ–ವ್ರತ–ಪಾಕಕ್ರಿಯಾ–ಅನುಕೂಲ–ಪ್ರತಿಕೂಲ–ಕರ–ವಿಭೂತಿ–ದೀಕ್ಷಾ–ಮಂತ್ರ–ಆಚಾರ–ಜಾತಿ–ಕ್ರಿಯೋಪಾಧಿ–ಭೋಗ–ಮಹಾತ್ಮ ಎಂಬ ಇಪ್ಪತ್ತೆಂಟು ಬಗೆಯ ಶೈವ ಪ್ರಭೇದಗಳು[೬೦] ಹೇಳಲ್ಪಟ್ಟಿವೆ. ಈ ಎಲ್ಲ ಶೈವಗಳಲ್ಲಿ ವೀರಶೈವವೇ ಅತ್ಯಂತ ಶ್ರೇಷ್ಠವಾದುದು ಎಂಬ ಪ್ರತಿಪಾದನೆ ಆಗಮಗಳಲ್ಲಿದೆ.[೬೧]

ವೀರಶೈವ ಪ್ರಭೇದಗಳು

ಸಾಮಾನ್ಯವಾಗಿ ಎಲ್ಲ ಶಿವಾಗಮಗಳಲ್ಲೂ ವೀರಶೈವದ ಮೂರು ಭೇದಗಳು ಉಕ್ತವಾಗಿರುವುದು ಕಂಡುಬರುತ್ತದೆ. ಅಲ್ಲದೆ ಅವುಗಳ ಲಕ್ಷಣಗಳು ಸಹ ಒಂದೇ

---

೫೬. ಪಾ. ಆ. ಪಟಲ ೧, ಶ್ಲೋಕ ೧೪–೧೬

೫೭. ಚಂ. ಆ. ಕ್ರಿಯಾಪಾದ ಪಟಲ ೧೦ ಶ್ಲೋಕ ೬–೩೪

೫೮. ಸೂ. ಆ. ಕ್ರಿಯಾಪಾದ ೭, ಶ್ಲೋಕ ೪–೩೦

೫೯. ವಾತುಲ ಶುದ್ಧಾಗಮ ಮಂತ್ರಕೀಲ ಪಟಲ (೧೦ ನೇ ಪಟಲ)

೬೦. ವೀರಾಗಮ ಉತ್ತರಭಾಗ ಶೈವ ಪಟಲ

೬೧. ಪಾರಮೇಶ್ವರಾಗಮ ಪಟಲ ೧೫, ಶ್ಲೋಕ ೨೯–೩೦

ವಿಧವಾಗಿವೆ. ಚಂದ್ರಜ್ಞಾನಾಗಮ, ಸೂಕ್ಷ್ಮಾಗಮ ಮತ್ತು ವಾತುಲಾಗಮಗಳಲ್ಲಿ ಕ್ರಮವಾಗಿ ವೀರಶೈವ ಭೇದಗಳು ಹೇಳಲ್ಪಟ್ಟಿವೆ. ಆದರೆ ಪಾರಮೇಶ್ವರಾಗಮದಲ್ಲಿ ಇವುಗಳ ಕ್ರಮಾಗತ ವಿವೇಚನೆ ಇಲ್ಲ. ಆದರೆ ನಿರಾಭಾರಿ ವೀರಶೈವ ಶಿವಯೋಗಿಯ ವರ್ಣನೆಯಿದೆ. ವೀರಶೈವದಲ್ಲಿ ಮೂರು ಪ್ರಭೇದಗಳನ್ನು ಆಗಮಗಳಲ್ಲಿ ಹೇಳಲಾಗಿದ್ದು ಅವು ೧. ಸಾಮಾನ್ಯ ವೀರಶೈವ ೨. ವಿಶೇಷ ವೀರಶೈವ ಹಾಗೂ ೩. ನಿರಾಭಾರಿ ವೀರಶೈವ. ಅವುಗಳ ಲಕ್ಷಣಗಳು ಹೀಗಿವೆ.

೧. ಸಾಮಾನ್ಯ ವೀರಶೈವ

ಇಷ್ಟಾದಿಲಿಂಗತ್ರಿತಯಸ್ಯೈಕೀಭಾವೇನ ಚಾರ್ಚನಮ್ ॥
ಗುರೌ ಮಾಹೇಶ್ವರೇ ಸ್ವೇಷ್ಟಲಿಂಗೇ ಚ ಸಮಭಾವನಾ ॥
ತ್ರಿಕಾಲಂ ಲಿಂಗಪೂಜಾ ಚ ಸಂಭವದ್ಭಿಃ ಪದಾರ್ಥಕೈಃ।
ಸಾಮಾನ್ಯವೀರಶೈವಸ್ಯ ಧರ್ಮೋಽಯಂ ಪರಿಕೀರ್ತಿತಃ॥ [೬೨]

ಇಷ್ಟ-ಪ್ರಾಣ-ಭಾವಲಿಂಗಗಳನ್ನು ಏಕೋ ಭಾವದಿಂದ ಅರ್ಚಿಸಿ ಗುರು, ಲಿಂಗ, ಜಂಗಮರಲ್ಲಿ ಸಮಭಾವ ಹೊಂದಿ ತ್ರಿಕಾಲ ಶಿವಪೂಜೆಯನ್ನು ದೊರೆತಷ್ಟು ಹೂ-ಪತ್ರೆ ಮೊದಲಾದ ಪೂಜಾಪರಿಕರಗಳಿಂದ ಪೂಜಿಸಿ, ಸಂತುಷ್ಟನಾಗಿರುವವನು ಸಾಮಾನ್ಯ ವೀರಶೈವ.

೨. ವಿಶೇಷ ವೀರಶೈವ

ವಿಶೇಷಧರ್ಮಾನುಷ್ಠಾನಾದ್ ವಿಶೇಷಶ್ಚ ಸ ಏವ ಹಿ ॥
ಏಕಂ ಮಾಹೇಶ್ವರಂ ವಾಪಿ ದ್ವಾ ವಾ ತ್ರೀನ್ ಪ್ರತಿವಾಸರಮ್।
ಭೋಜಯಿತ್ವಾ ತಚ್ಛೇಷಂ ಭುಂಜೀಯಾದಪ್ರಮಾದತಃ॥
ಷಟ್‌ಕಾಲಂ ಲಿಂಗಪೂಜಾ ಚ ನಿಯತೈಸ್ತು ಪದಾರ್ಥಕೈಃ ॥
ದ್ರೋಣಪುಷ್ಪಂ ಬಿಲ್ವಪತ್ರಂ ಕರವೀರಮಥಾಪಿ ವಾ।
ಮಲ್ಲಿಕೋತ್ಪಲಪುನ್ನಾಗಜಾತ್ಯಾದಿಕುಸುಮಾನಿ ವಾ ॥
ಏಷ್ವೇಕಂ ತ್ರೀಣಿ ದ್ವೌ ವಾಪಿ ಹ್ಯರ್ಪಯೇನ್ನಿಯಮಾನ್ವಿತಃ।
ಏವಂ ಚರಿಷ್ಯೇ ನಿಯಮಾನಹಮಾಪ್ರಾಣಸಂಚರಾತ್ ॥
ನಾನ್ಯಥಾ ಬಿಭೃಯಾಂ ಪ್ರಾಣಾನಿತಿ ಯೋ ನಿಯಮಃ ಸ್ಮೃತ। [೬೩]
ಇತ್ಯಾದಿ ನಿಯಮೈರ್ಯುಕ್ತೋ ವಿಶೇಷ ಇತಿ ಕಥ್ಯತೇ ॥

ವಿಶೇಷ ವೀರಶೈವನ ಧರ್ಮಾಚರಣೆ ವಿಶಿಷ್ಟವಾದುದು. ಪ್ರತಿದಿನ ಇಷ್ಟಲಿಂಗ ಪೂಜೆಯ ನಂತರ ಒಬ್ಬರು-ಇಬ್ಬರು ಇಲ್ಲವೆ ಮೂವರು ಜಂಗಮರಿಗೆ ತಪ್ಪದೆ

---

೬೨. ಚಂದ್ರಜ್ಞಾನಾಗಮ ಕ್ರಿಯಾಪಾದ ೧೦, ಶ್ಲೋಕ ಸಂಖ್ಯೆ ೩೬-೩೭

೬೩. ಚಂದ್ರಜ್ಞಾನಾಗಮ ಕ್ರಿಯಾಪಾದ ೧೦, ಶ್ಲೋಕ ಸಂಖ್ಯೆ ೩೭-೪೧

ಪ್ರಸಾದ ಮಾಡಿಸಿ, ಶೇಷಪ್ರಸಾದವನ್ನು ಸೇವಿಸುವುದು ಮತ್ತು ಪ್ರತಿದಿನ ತಪ್ಪದೆ ದಿನಕ್ಕೆ ಆರು ವೇಳೆಯಲ್ಲಿ ಇಷ್ಟಲಿಂಗವನ್ನು ಪೂಜಿಸುವುದು, ಬಿಲ್ವಪತ್ರ, ಕರವೀರ, ಮಲ್ಲಿಕಾ, ಉತ್ಪಲ, ಪುನ್ನಾಗ ಮೊದಲಾದ ವಿವಿಧ ಪುಷ್ಪಗಳಲ್ಲಿ ಒಂದು, ಎರಡು ಅಥವಾ ಮೂರು ಪುಷ್ಪಗಳನ್ನು ನಿಯಮದಂತೆ ಅರ್ಪಿಸಿ ಪೂಜಿಸಬೇಕು. ಜೀವನಪರ್ಯಂತ ನಿತ್ಯ ನಿಯಮಗಳನ್ನು ಪಾಲನೆ ಮಾಡಬೇಕು. ವ್ರತ ಲೋಪವಾದರೆ ಪ್ರಾಣತ್ಯಾಗ ಮಾಡಲು ಸಿದ್ಧನಾಗಬೇಕು. ಇವನೇ ವಿಶೇಷ ವೀರಶೈವ.

೩. ನಿರಾಭಾರಿ ವೀರಶೈವ

ಸರ್ವ ಸಂಸಾರ ಸೌಖ್ಯಾಣಿ ತ್ಯಕ್ತ್ವಾ ಚಿತ್ತಂ ಶಿವೇ ಲಯೇತ್।
ದಂಡ ಕೌಪೀನ ಕಾಷಾಯ ಜಟಾ ವಲ್ಕಲ ಧಾರಕಃ
ಮುಂಡೀ ವಾ ಶಿವಚಿಹ್ನಾನಿ ಧಾರಯೇದಜಿನಾದಿಕಂ
ಭಿಕ್ಷಾಶೀ ನಿಯತಾಹಾರಃ ಸುಖ ಸಂಸಾರವರ್ಜಿತಃ
ನಿರಾಭಾರೀತಿ ವಿಜ್ಞೇಯಃ ಸ ಏವ ಪರಮಃ ಶಿವಃ ॥[೭೪]

ನಿರಾಭಾರಿ ವೀರಶೈವನು ತುರಿಯಾಶ್ರಮಸೇರಿ ಹುಟ್ಟಿನಿಂದ ಬಂದ ಚಾತುರ್ವಣದ ಕಟ್ಟನ್ನು ಮೀರಿದವನು. ಈತನು ಚಂದನ ವನಿತಾದಿ ವಿಷಯ ಸುಖಗಳನ್ನು ತಿರಸ್ಕರಿಸಿ, ಪರಶಿವನಲ್ಲಿ ಮನಸ್ಸನ್ನು ನೆಲೆಗೊಳಿಸಿ ಸರ್ವಸಂಗ ಪರಿತ್ಯಾಗಿಯಾಗಿರುತ್ತಾನೆ. ದಂಡ, ಕೌಪೀನ, ಕಾವಿಬಟ್ಟೆ, ಜಡೆ, ಯೋಗದಂಡ, ಕಮಂಡಲಗಳನ್ನು ಧರಿಸಿ ದಿಗಂಬರನಾಗಿ, ತಾನಾಗಿ ಬಂದ ಆಹಾರವನ್ನು ಸೇವಿಸುತ್ತಾ ನಿರ್ಜನ ಪ್ರದೇಶದಲ್ಲಿ ವಾಸಿಸುತ್ತಾ ಪಟ್ಟಣದಲ್ಲಿ ಐದುರಾತ್ರಿ, ಗ್ರಾಮದಲ್ಲಿ ಮೂರುರಾತ್ರಿ, ಹಳ್ಳಿಯಲ್ಲಿ ಒಂದು ರಾತ್ರಿ ವಾಸಮಾಡುತ್ತಾ, ಜಗತ್ತನ್ನು ಹುಲ್ಲಿಗೆ ಸಮವೆಂದು ಭಾವಿಸಿ ಲೌಕಿಕಾಚಾರವನ್ನು ತ್ಯಜಿಸಿರುತ್ತಾನೆ. ಈತನಿಗೆ ಪ್ರವರ ಗೋತ್ರಗಳ ಹಂಗಿಲ್ಲ. ಸೂತ್ರ ವರ್ಣಗಳ ಗೋಜಿಲ್ಲ. ಸಹಜ ಲೀಲೆಯಿಂದ ತಾನೇ ಬ್ರಹ್ಮನೆಂದು ಭಾವಿಸಿ, ಅಹಂಕಾರ ಮಮಕಾರ ವರ್ಜಿತನಾಗಿರುತ್ತಾನೆ. ಪೂರ್ವಾಶ್ರಮದ ತಾಯಿ-ತಂದೆ, ಬಂಧು-ಬಳಗಗಳನ್ನು ತ್ಯಜಿಸಿರುತ್ತಾನೆ. ಕಾರಣರಹಿತನೂ, ಕಳಂಕವಿಲ್ಲದವನೂ, ವಿಕಲ್ಪವಿಲ್ಲದವನೂ, ರಾಗ ದ್ವೇಷಾದಿಗಳಿಲ್ಲದವನೂ ಆಗಿರುತ್ತಾನೆ. ಕರ್ಮಕಾಂಡಿಗಳಾದ ಗೃಹಸ್ಥರ ಮನೆಗಳಲ್ಲಿ ಶುಭಾಶುಭ ಕಾರ್ಯಗಳಲ್ಲಿ ಮತ್ತು ಶವಸಂಸ್ಕಾರ ಸಮಯದಲ್ಲಿ ಬಂದು, ಒಂದುದಿನ ಮಾತ್ರವಿದ್ದು ಮೂರು ಮನೆ ಭಿಕ್ಷೆ ಬೇಡಿ ಸೇವಿಸಬೇಕು. ಪಲ್ಲಕ್ಕಿ, ಕುದುರೆ, ಮೊದಲಾದ ವಾಹನಗಳನ್ನೇರದೇ ಪಾದಾಚಾರಿಯಾಗಿ ಸಂಚರಿಸಬೇಕು. ಒಪ್ಪತ್ತು ಭೋಜನ ಮಾಡುತ್ತಾ ವೈರಾಗ್ಯ ಶೀಲನಾಗಿರಬೇಕು.

ಅವನಿಗೆ ವಿದ್ಯೆಯೇ ಸತಿ, ಸಂತೋಷವೇ ಮಗ, ವೈರಾಗ್ಯವೇ ಬಂಧು, ಕ್ಷಮೆಯೇ ಸೇವಕರು, ಶಾಂತಿಯೇ ಮಿತ್ರ, ಭಕ್ತಿಯೇ ತಾಯಿ, ಸದಾಚಾರವೇ ತಂದೆ, ಸತ್ಯವೇ

---

೭೪. ವಾತುಲಶುದ್ಧಾಗಮ ಮಂತ್ರಕೀಲ ಪಟಲ ಶ್ಲೋಕ ಸಂಖ್ಯೆ ೪೬-೪೮

ಮಗಳು, ಶ್ರದ್ಧೆಯೇ ಸೊಸೆ, ಮೈತ್ರಿ–ಕರುಣಾ–ಉಪೇಕ್ಷೆ ಎಂಬ ಸದ್ಗುಣಗಳೇ ಮೊಮ್ಮಕ್ಕಳು, ಜ್ಞಾನವೇ ಶರೀರ, ವಿಚಾರವೇ ಕ್ಷೇತ್ರ, ಅಹಿಂಸೆಯೇ ದಾಸಿ, ನಂಬುಗೆಯೇ ದಾಸ, ಧರ್ಮವೇ ವಾಹನ, ಆಚಾರವೇ ಧರ್ಮ, ಮುಕ್ತಿಯೇ ಗಮ್ಯಸ್ಥಾನವೆಂಬ ವಿಚಾರವು ಅವನಿಗೆ ದೃಢಪಟ್ಟಿರುತ್ತದೆ. ಅಂತರಂಗದಲ್ಲಿ ಸಮತೆಯೇ ಜೋಳಿಗೆ, ಶಿವಜ್ಞಾನವೇ ದಂಡ, ದಯೆಯೇ ಕಮಂಡಲು, ವೈರಾಗ್ಯವೇ ಭಿಕ್ಷಾಪಾತ್ರೆ, ಕ್ಷಮೆಯೇ ಭಸ್ಮದಗಟ್ಟಿ. ಈ ವಿರಕ್ತನು ಲೌಕಿಕ ವಿಷಯಗಳನ್ನು ತ್ಯಜಿಸಿರಬೇಕು. ಇಂಥ ವಿರಕ್ತನು ಇತರರಿಂದ ಪೂಜಿಸಲ್ಪಟ್ಟರೂ ಹೆಮ್ಮ ಪಡದೇ, ನಿಂದಿಸಿದರೂ ಖಿನ್ನನಾಗದೇ ಸಮಸ್ಥಿತಿಯಲ್ಲಿರಬೇಕು. ಪಂಚಾಚಾರ್ಯರನ್ನು ಪಿತೃಭಾವದಿಂದ ಆರಾಧಿಸಬೇಕು. ಜ್ಯೋತಿ ಮುಟ್ಟಿದ ಪ್ರಣತೆ ಜ್ಯೋತಿಯೇ ಆಗುವಂತೆ ಸೋಹಂ ಭಾವದಿಂದ ಲಿಂಗವನ್ನೆ ಅಂಗವೆಂದು ಭಾವಿಸಿದವನು ಅತ್ಯಾಶ್ರಮಿಗಳಲ್ಲಿ ಶ್ರೇಷ್ಠನೆನಿಸುತ್ತಾನೆ.[೬೫]

ಹೀಗೆ ಪಾಶುಪತಾಗಮ ಹಾಗೂ ಪಾರಮೇಶ್ವರಾಗಮ ಮತ್ತು ಇತರ ಶೈವಾಗಮಗಳಲ್ಲಿ ವೀರಶೈವದ ಭೇದಗಳನ್ನು ವರ್ಣಿಸಲಾಗಿದೆ.

೨.೫ ಆಗಮಗಳ ಉಗಮಕ್ಕೆ ಪ್ರೇರಣೆ

ಆಗಮಗಳ ಉಗಮದ ಬಗೆಗೆ ಕೆಲವು ಊಹೆಗಳು ಪ್ರತಿಪಾದಿತವಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳು ಮೂರು. ಆಗಮಗಳು ವೇದಜನ್ಯವಾದವು. ಅರಣ್ಯಕಗಳಿಂದ ಉದ್ಭವಿಸಿ ಮುಂದೆ ಅಭಿವೃದ್ಧಿ ಪಡೆದಿವೆ ಎಂಬುದು ಮೊದಲನೆ ಅಭಿಪ್ರಾಯವಾದರೆ, ಆಗಮಗಳು ಉಪನಿಷತ್ತುಗಳನ್ನು ಅರ್ಥೈಸಿ ಅವುಗಳ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತವೆ ಎಂಬುದು ಎರಡನೇ ಅಭಿಮತವಾಗಿದೆ. ಮೂರನೇ ಅಭಿಪ್ರಾಯದಂತೆ ಆಗಮಗಳು ಇಂದು ಉಪಲಬ್ಧವಿಲ್ಲದ ತಮಿಳಿನ ನಾಯನ್ಮಾರ್ ಸಾಹಿತ್ಯದ ಸಂಸ್ಕೃತಾನುವಾದ ಎಂಬುದಾಗಿದೆ. ಈ ಊಹೆಗಳ ಸತ್ಯಾಸತ್ಯತೆಯನ್ನು ಪರಾಮರ್ಶಿಸಲಾಗಿ ಅದರ ವಿವೇಚನೆ ಇಂತಿದೆ –

ಮೊದಲನೆಯ ಅಭಿಪ್ರಾಯದಂತೆ ಆಗಮಗಳು ವೇದದ ಉದ್ದೇಶವನ್ನು ಸಾಧಿಸಲು ಪರಂಪರೆಯಲ್ಲಿ ಮೂಡಿಬಂದಿವೆ. ವೇದಗಳಲ್ಲಿ ಬಂದಿರುವ ಮಂತ್ರಗಳಿಗೆ ಋಷಿ, ದೇವತೆ, ಛಂದಸ್ಸು, ಪಲ್ಲವ ಮುಂತಾದವುಗಳನ್ನು ಸೂಚಿಸಿ ಆಗಮಗಳು ಆಯಾ ಮಂತ್ರಗಳ ಅನುಷ್ಠಾನವನ್ನು ಬೋಧಿಸುತ್ತವೆ. ವೇದಗಳಲ್ಲಿ ಸಂಕ್ಷೇಪವಾಗಿ, ಸೂತ್ರರೂಪವಾಗಿ ಬಂದದ್ದನ್ನೂ ಆಗಮಗಳು ವಿಸ್ತರಿಸಿ ವಿವರಿಸುತ್ತವೆ. ವೇದ ಮಂತ್ರಗಳು ಫಲಪ್ರದವಾಗಬೇಕಾದರೆ ಅನುಷ್ಠಾನ ಬೇಕು. ಆಗಮಗಳು ಈ ಮಂತ್ರಗಳ ಅನುಷ್ಠಾನ ವಿಧಾನವನ್ನು ನಿರೂಪಿಸುತ್ತವೆ. ವೇದಮಂತ್ರಗಳು ಸತ್ಫಲವನ್ನು ನೀಡಬೇಕಾದರೆ ಅವು ಸ್ವಾಧೀನವಾಗಬೇಕು. ಅವು ಸ್ವಾಧೀನವಾಗಲು ಪುನಶ್ಚರಣವಿಧಿಯು ಅವಶ್ಯಕ. ಪುನಶ್ಚರಣದಲ್ಲಿ ಜಪ, ಹೋಮ, ತರ್ಪಣ, ಅಭಿಷೇಕ ಮತ್ತು ಹೃದಯವೆಂಬ ಪಂಚಾಂಗೋಪಾಸನೆ ಬರುತ್ತವೆ. ಪ್ರತಿ ಮಂತ್ರಕ್ಕೂ ನಮಃ–ಸ್ವಾಹಾ–ವೌಷಟ್–

---

೬೫. ಪಾಶುಪತಾಗಮ ಪ್ರಥಮ ಪಟಲ ಶ್ಲೋಕ ಸಂ. ೧೩೭–೧೪೫, ೧೫೮–೧೯೯

ಹುಂ ಫಟ್ ಎಂಬ ಪಲ್ಲವಗಳು, ಅಂಗನ್ಯಾಸ, ಕರನ್ಯಾಸ, ದಿಗ್ಬಂಧನ ಮುಂತಾದವು ಬೇಕು. ಈ ಎಲ್ಲಾ ವಿಚಾರಗಳು ಆಗಮಗಳಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುವುದರಿಂದ ವೇದ ಮಂತ್ರಗಳ ಅನುಷ್ಠಾನವು ಸಾಧ್ಯವಾಗಿದೆ. ಕಾರಣ ಅವು ವೇದ ಜನ್ಯ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವರು.

ಕೆಲವು ಆಗಮಗಳಂತೂ ತಾವು ಪ್ರತಿಪಾದಿಸಿರುವ ಸಿದ್ಧಾಂತಗಳು ವೇದಸಾರ ವೆಂದು ಕಂಠೋಕ್ತವಾಗಿ ಸಾರಿರುವುದೂ ಉಂಟು. ಉದಾಹರಣೆಗೆಂದು ಒಂದೆರಡನ್ನು ಇಲ್ಲಿ ಉಲ್ಲೇಖಿಸಬಹುದು.[೬೬]

'ಸಿದ್ಧಾಂತೋ ವೇದಸಾರತ್ವಾತ್' –ಸುಪ್ರಭೇದಾಗಮ

'ವೇದಾಂತಾರ್ಥಮಿದಂ ಶಾಸ್ತ್ರಂ ಸಿದ್ಧಾಂತಂ ಪರಮಂಮತಂ' – ಮಕುಟಾಗಮ

ಆದರೆ ಹೀಗೆ ಉಲ್ಲೇಖಿತವಾಗಿದ್ದರೂ **ಆಗಮಗಳ ಉಗಮವನ್ನು** ಕುರಿತು ಇಷ್ಟು ಸುಲಭವಾಗಿ ಅವು **ವೇದ ಜನ್ಯವೆಂದು ಹೇಳಿಬಿಡುವಂತಿಲ್ಲ.**

ಏಕೆಂದರೆ ವೇದಾಗಮಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿ ಪುಣ್ಯ ಪ್ರಾಪ್ತಿಯು ವೇದ ಮಾರ್ಗ ಹಾಗೂ ಆಗಮ ಪಥ ಎರಡಕ್ಕೆ ಒಂದೇ ಉದ್ದೇಶವಾದರೂ ಅವು ಹಿಡಿದ ಹಾದಿ ಬೇರೆ ಬೇರೆ ಎಂಬುದು ವೇದ್ಯವಾಗುವದು.

ವೈದಿಕ ಧರ್ಮದ ಮೂಲ ಕರ್ಮಕಾಂಡದಲ್ಲಿದೆ. ಆದರೆ ಆಗಮಿಕ ಧರ್ಮದ ಸೆಲೆನೆಲೆ ಇರುವುದು ಭಕ್ತಿ–ಕ್ರಿಯೆ–ಯೋಗದಲ್ಲಿ ಇದೆ. ವೈದಿಕ ಧರ್ಮವು ಯಜ್ಞ ಸಂಸ್ಕೃತಿಯಾಗಿದ್ದು, ಯಜ್ಞ ಯಾಗಾದಿಗಳಿಗೆ ಪ್ರಾಧಾನ್ಯವಿತ್ತಿದೆ. ಆದರೆ ಆಗಮಿಕ ಧರ್ಮವು ಶಿವಸಂಸ್ಕೃತಿಯಾಗಿದ್ದು, ಮೂರ್ತಿ ಹಾಗೂ ಇಷ್ಟಲಿಂಗ ಪೂಜೆಗೆ ಪ್ರಾಧಾನ್ಯತೆಯನ್ನಿತ್ತಿದೆ. ವೈದಿಕ ದೇವತೆಗಳು ಪ್ರಕೃತಿಯ ಅನಂತ ಶಕ್ತಿಗಳು. ಆ ಶಕ್ತಿಗಳಿಗೆ ವಿಗ್ರಹ ರೂಪವೇ ಇಲ್ಲ. ಆದರೆ ಆಗಮಿಕ ದೇವತೆಗಳೆಲ್ಲ ಸಗುಣ ದೇವತೆಗಳು. ಅವಕ್ಕೆ ವಿಗ್ರಹ ರೂಪಗಳುಂಟು. ವೈದಿಕ ಯಜ್ಞ ಯಾಗಾದಿಗಳು ನದಿಯ ದಡದಲ್ಲಿ ಇಲ್ಲವೇ ವನಾಂತರ ಪ್ರದೇಶದಲ್ಲಿ ನಡೆಯುತ್ತಿದ್ದವು. ಆದರೆ ಆಗಮ ಧರ್ಮದಂತೆ ದೇವ ಪೂಜೆಯು ದೇವ ಮಂದಿರದಲ್ಲಿ ನಡೆಯುತ್ತದೆ. ವೈದಿಕ ಧರ್ಮದಂತೆ ದೇವತೆಗಳಿಗೆ ಹವಿಸ್ಸು ಅಗ್ನಿಯ ಮುಖಾಂತರವೇ ಸಮರ್ಪಿತವಾಗುತ್ತದೆ. ಆದರೆ ಆಗಮಧರ್ಮದಲ್ಲಿ ಸಗುಣ ದೇವತಾ ಪೂಜೆಯು ಆರಾಧ್ಯ, ಆರಾಧಕರ ನಡುವೆ ನೇರ ನಡೆಯುತ್ತದೆ. ವೈದಿಕ ಧರ್ಮವು ಬಹುದೇವತಾರಾಧನೆಯನ್ನು ಪ್ರತಿಪಾದಿಸುತ್ತದೆ. ಇಲ್ಲಿನ ಪ್ರತಿದೇವತೆ ವಿಭಿನ್ನಕಾರ್ಯ ವೈಖರಿ ಹೊಂದಿದ್ದು ಪ್ರತಿಯೊಂದು ದೇವತೆಯನ್ನು ವಿಶಿಷ್ಟ ಉದ್ದೇಶಕ್ಕಾಗಿ ಪ್ರಾರ್ಥಿಸಲಾಗುತ್ತದೆ. ಆದರೆ ಶಿವಾಗಮಿಕ ಧರ್ಮ ಏಕದೇವತಾರಾಧನೆಯನ್ನು ಪ್ರತಿನಿಧಿಸುತ್ತಿದ್ದು ಸರ್ವ ಇಷ್ಟಾರ್ಥ ಸಿದ್ಧಿಗಾಗಿ ಒಂದೇ ದೇವತೆಯಲ್ಲಿ ಪ್ರಾರ್ಥಿಸಲಾಗುವುದು. ವೈದಿಕ ಸಂಪ್ರದಾಯವು ಕೇವಲ ಯಾಗದಲ್ಲಿ ಹವಿಸ್ಸನ್ನು ಸಮರ್ಪಿಸುವ ಒಂದೇ

---

೬೬ ಡಾ. ಆರ್. ಸಿ. ಹಿರೇಮಠರವರ ಮಹಾಯಾತ್ರೆ ಕೃತಿಯ ಪುಟ ೭೬ ರಲ್ಲಿ

ವಿಧವಾದ ಪೂಜಾಕ್ರಮವನ್ನು ಹೊಂದಿದೆ. ಆದರೆ ಆಗಮಿಕ ಸಂಪ್ರದಾಯವು ದೇವರ ಅಭಿಷೇಕ, ಅಲಂಕಾರ, ನೈವೇದ್ಯ ಸಮರ್ಪಣೆ, ಮಹಾಮಂಗಳಾರತಿಯಂತಹ ಆಗಮೋಕ್ತ ಪೂಜಾವಿಧಿಯನ್ನು ಅನುಸರಿಸುತ್ತದೆ. ವೇದಗಳಲ್ಲಿ ಧಾರ್ಮಿಕ ಸಂಸ್ಕಾರಗಳಾದ ಉಪನಯನ ಮುಂತಾದವು ತ್ರಿವರ್ಣಿಯರೆನಿಸುವ ಬ್ರಾಹ್ಮಣ, ಕ್ಷತ್ರೀಯ, ಮತ್ತು ವೈಶ್ಯರಿಗೆ ಮಾತ್ರ ಮೀಸಲಾಗಿದ್ದವು. ಮಿಕ್ಕವರಿಗೆ ವೈದಿಕ ಧರ್ಮದ ಬಾಗಿಲು ಮುಚ್ಚಿಬಿಟ್ಟಿದ್ದಿತು. ಆದರೆ ಆಗಮಧರ್ಮವು ಅತೀವರ್ಣಾಶ್ರಮ ತತ್ವವನ್ನು ಪ್ರತಿಪಾದಿಸುತ್ತಾ ದೀಕ್ಷೆಯ ಮೂಲಕ ಎಲ್ಲ ಜಾತಿ, ಮತ, ಪಂಥಗಳ ಭೇದವಿಲ್ಲದೆ ಸರ್ವರಿಗೂ ಬಾಗಿಲು ತೆರೆದಿಟ್ಟಿತು. ವೈದಿಕ ಸಂಪ್ರದಾಯದ ಆಚರಣೆಗಳಿಂದ ಸ್ತ್ರೀಯರನ್ನು ಹೊರಗಿಡಲಾಗಿದೆ. ಆದರೆ ಆಗಮಿಕ ಧರ್ಮದಲ್ಲಿ ಸ್ತ್ರೀಯರಿಗೂ ಸಮಾನ ಪ್ರಾಶಸ್ತ್ಯ ನೀಡಲಾಗಿದೆ. ಅಲ್ಲದೇ ವೈದಿಕ ಧರ್ಮದಲ್ಲಿ ಯೋಗದ ಪ್ರಸ್ತಾಪವೇ ಇಲ್ಲ. ಆದರೆ ಆಗಮಗಳಲ್ಲಿ ಯೋಗದ ಅನುಸಂಧಾನ ತತ್ವ ವಿವೇಚನೆ ವಿಫುಲವಾಗಿ ಬರುತ್ತದೆ.

ಈ ವಿಹಂಗಮ ನೋಟದಿಂದ ಇವೆರಡೂ ಪರಂಪರೆಗಳು ಬೇರೆ ಬೇರೆ ಹಾದಿಯಲ್ಲಿ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿದ್ದು ಕಂಡುಬರುತ್ತದೆ. ಶಿವಾಗಮ ಸೌರಭ ಗ್ರಂಥದ ಮುನ್ನುಡಿಯಲ್ಲಿ ಪ್ರತಿಪಾದಿಸಿದಂತೆ ವೈದಿಕ ವಾಙ್ಮಯದ ಮೊದಲ ಹಂತದಲ್ಲೇ ಆ ಕಾಲಕ್ಕೆ ಮೊದಲೇ ಆಗಮವೆಂದು (ತಂತ್ರವೆಂದು) ನಿರ್ದೇಶಿಸಬಹುದಾದ ಮನೋಧರ್ಮವೂ, ಪ್ರಯೋಗವೂ, ಅನುಷ್ಠಾನ ಪ್ರಕಾರಗಳೂ ಇದ್ದವು ಎಂಬುದು ತಿಳಿದು ಬರುತ್ತದೆ. "ವಾತರಶನ" ಮುನಿಗಳೂ, ಅರುಣರೂ, ಕೇಶಿಗಳೂ, ವಾಲಖಿಲ್ಯರೂ, ವೈಖಾನಸರೂ, ಆ ಕಾಲಕ್ಕಾಗಲೇ ಇದ್ದರು. ಇವರ ಉಲ್ಲೇಖಗಳು ಸ್ಪಷ್ಟವಾಗಿವೆ. ಇವರು ಮೆಚ್ಚಿಕೊಂಡು ಹಿಡಿದ ಸಂಪ್ರದಾಯವನ್ನೇ ಇಂದು ಆಗಮಮಾರ್ಗ ಅಥವಾ ತಾಂತ್ರಿಕ ಮಾರ್ಗ ಎಂದು ಗುರುತಿಸಬಹುದೆಂದು ಅಭಿಪ್ರಾಯ ಪಟ್ಟಿರುವರು. ಕಾರಣ ಆಗಮಗಳು ವೇದ ಜನ್ಯವೆಂಬ ಅಭಿಪ್ರಾಯವನ್ನು ನಿಃಸಂಧಿಗ್ಧವಾಗಿ ಪುರಸ್ಕರಿಸಲಾಗದು.

ಇನ್ನು ಯಜ್ಞಯಾಗಾದಿಗಳಿಗೆ ವೇದ ಮಂತ್ರಗಳನ್ನು ಅನ್ವಯ ಮಾಡಿಕೊಂಡು ಸಿದ್ಧವಾದವು ಬ್ರಾಹ್ಮಣಗಳೆಂಬ ಭಾಗಗಳು ಈ ಬ್ರಾಹ್ಮಣಗಳ ಕಾಲಾನುಕ್ರಮ ಪರಿವರ್ತನೆಯೇ ಆಗಮಗಳೆಂದು ತೋರುತ್ತದೆ[೬೭] ಎಂಬ ಪ್ರೋ ಎಸ್. ಕೆ. ರಾಮಚಂದ್ರರಾವ್ ಅವರ ಅಭಿಮತ. ಈ ಅಭಿಪ್ರಾಯವನ್ನು ಪರಿಶೀಲಿಸಲಾಗಿ–

ಯಜ್ಞಯಾಗಾದಿಗಳ ಕರ್ಮಗಳನ್ನು ಪೂರೈಸುವ ವಿಧಿವಿಧಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವುದೇ ಬ್ರಾಹ್ಮಣಗಳ ಉದ್ದೇಶವಾಗಿದೆ. ಆದರೆ ಶಿವಧರ್ಮನಿರೂಪಣೆಯೇ ಶಿವಾಗಮ ವಾಙ್ಮಯದ ಮುಖ್ಯಗುರಿ. ಸ್ವಾನುಭೂತಿಯುಳ್ಳ ಸರ್ವೋತ್ಕೃಷ್ಟ ಶಿವಧರ್ಮವನ್ನು ಸಿದ್ಧಾಂತಿಕರಿಸುವುದೇ ಆಗಮಗಳ ದಿವ್ಯ ಧ್ಯೇಯವಾಗಿದೆ. ಇನ್ನು ಬ್ರಾಹ್ಮಣಗಳ ಕರ್ಮಕಾಂಡದಲ್ಲಿ ಹಿಂಸೆಯೇ ಅಧಿಕ. ಆದರೆ ಆಗಮಗಳು ಜೀವ ಹಿಂಸೆಯ ಕರ್ಮಗಳನ್ನು ಅಲ್ಲಗಳೆದು ಜೀವಕಲ್ಯಾಣ ಕ್ರಿಯೆಗಳನ್ನು ಎತ್ತಿಹಿಡಿದು

೬೭. ಆರ್. ಸಿ. ಹಿರೇಮಠರವರ ಮಹಾಯಾತ್ರೆ ಕೃತಿಯ ಪುಟ ೭೬ ರಲ್ಲಿ

ಬಿತ್ತರಿಸಿದ ಸಾಹಿತ್ಯವಾಗಿದೆ. ಬ್ರಾಹ್ಮಣಗಳಲ್ಲಿ ಯಜ್ಞಯಾಗಾದಿಗಳ ವಿಧಿವಿಧಾನಗಳನ್ನು ವಿದ್ಯುಕ್ತವಾಗಿ ಆಚರಿಸಿದರೆ ಫಲಪ್ರಾಪ್ತಿ; ವಿಧಿತಪ್ಪಿದರೆ ಫಲಂನಾಸ್ತಿ; ಈ ಭಾವನೆ ಬೇರೂರಿ ವಿಧಿವಿಧಾನಗಳನ್ನು ನಿರ್ದೇಶಿಸುತ್ತಿದ್ದ ಪುರೋಹಿತನಿಗೆ ಅಗ್ರಸ್ಥಾನ ನೀಡಿವೆ. ಆದರೆ ಆಗಮಗಳು ಪ್ರತಿಯೊಬ್ಬರು ಅಂಗ ಲಿಂಗಗಳ ಮುಖಾಂತರ ತಂತಮ್ಮ ಅರ್ಚನಾದಿ ಸಾಧನಗಳನ್ನು ಸ್ವತಂತ್ರವಾಗಿ ಮಾಡಿಕೊಂಡು ತಂತಮ್ಮ ಅಭ್ಯುದಯ ಶ್ರೇಯಗಳನ್ನು ಸಾಧಿಸುವ ಮಾರ್ಗವನ್ನು ಶಿವಾಗಮಗಳು ಬೋಧಿಸುತ್ತದೆ. ಇಲ್ಲಿ ಪ್ರತಿ ವ್ಯಕ್ತಿಗೂ ಅಗ್ರಸ್ಥಾನ.

ಕಾರಣ ಆಗಮಗಳಲ್ಲಿ ಏಕದೇವತಾರಾಧನೆಯೇ ಪ್ರಮುಖವಾಗಿದ್ದು ಆಂತರಿಕ ಪೂಜೆಗೆ ಪ್ರಾಶಸ್ತ್ಯವಿರುವುದರಿಂದ ಇವು ಬ್ರಾಹ್ಮಣಗಳ ಕಾಲಾನುಕ್ರಮ ಪರಿವರ್ತನೆ ಎಂಬ ವಾದವನ್ನು ಪರೀಕ್ಷೆಗೊಳಪಡಿಸಬೇಕು.

ಬ್ರಾಹಣ, ಆರಣ್ಯಕ, ಸೂತ್ರಗಳಂತೆ ಆಗಮಗಳು ವೇದಗಳ ಅಂಗಗಳೇ ಆಗಿದ್ದರೆ ಅವಕ್ಕೆ ಈ ವಿಶಿಷ್ಟಸ್ಥಾನ ಹೇಗೆ ಮತ್ತು ಏಕೆ ಪ್ರಾಪ್ತವಾಗುತ್ತಿದ್ದೀತು? ವೇದದೊಡನೆ ಆಗಮ ಶಬ್ದವು ಇಷ್ಟು ಸರಳವಾಗಿ ಸಹಜವಾಗಿ ನಾಡು ನುಡಿಯಲ್ಲಿ ಜನಿಸಿ ಬೆಳೆದು ಬಂದಿರುವುದೇಕೆ? ಆದುದರಿಂದ ಮೊದಲು ಆಗಮ ಮತ್ತು ವೇದಗಳು ಎರಡು ಸ್ವತಂತ್ರ ಸಮಾನಾಂತರ ಪ್ರಣಾಳಿಕೆಗಳು ಅಸ್ಥಿತ್ವದಲ್ಲಿದ್ದರಬೇಕು ಎಂದು ತೀರ್ಮಾನಿಸಲು ಅವಕಾಶವಿದೆ.

ಎರಡನೆಯ ಊಹೆಯ ಪ್ರಕಾರ: ಆಗಮಗಳು ಉಪನಿಷತ್ತುಗಳನ್ನು ಅರ್ಥೈಯಿಸಿ ಅವುಗಳ ಸಿದ್ಧಾಂತವನ್ನು ಪ್ರತಿಪಾದಿಸುತ್ತವೆ ಎಂಬ ಅಭಿಪ್ರಾಯವನ್ನು ಪರಿಶೀಲಿಸಲಾಗಿ –

ಕರ್ಮಕಾಂಡದ ತಾಂಡವದಲ್ಲಿ ದೇವತೆಗಳು ಕಣ್ಮರೆಯಾಗುತ್ತಿರುವಾಗ ಈ ಬ್ರಾಹ್ಮಣಗಳ ಮಧ್ಯದಲ್ಲಿಯೇ ಉಪನಿಷತ್ತುಗಳು ಉದಯವಾದವು. ಋಷಿಗಳು ಅರಣ್ಯದಲ್ಲಿ ಧ್ಯಾನಾಸಕ್ತರಾಗಿ ಸೃಷ್ಟಿಯ ರಹಸ್ಯವನ್ನು ಕಂಡುಹಿಡಿಯಲು ಧ್ಯಾನಮಗ್ನರಾಗಿರುವಾಗ ಕೆಲವು ದರ್ಶನಗಳನ್ನು ಕಂಡರು. ಅವೇ ಉಪನಿಷತ್ತುಗಳು.

ಒಂದು ಕಡೆಗೆ ಜ್ಞಾನ ಮಾರ್ಗವನ್ನು ಪ್ರತಿಪಾದಿಸುವ ಉಪನಿಷತ್ತುಗಳ ಉದಯವಾದರೆ ಇನ್ನೊಂದು ಕಡೆಗೆ ಕ್ರಿಯಾಜ್ಞಾನ ಸಮುಚ್ಚಯವನ್ನು ಬೋಧಿಸುವ ಆಗಮಗಳು ಉದಯವಾದವು. ಉಪನಿಷತ್ತುಗಳ ಸ್ನಿಗ್ಧ ಗಂಭೀರೋಕ್ತಿಗಳನ್ನು ವಿಶದಪಡಿಸಲು ಆಗಮಗಳು ಜನಿಸಿದವೆಂದು ಕೆಲವರ ತರ್ಕ. ಇದು ಸತ್ಯಕ್ಕೆ ದೂರವಾದುದೆನಿಸುತ್ತದೆ. ಉಪನಿಷತ್ ಕಾಲದಲ್ಲಿ ಕೆಲವು ಆಗಮಗಳು ಹುಟ್ಟಿರಬಹುದು. ಆದರೆ ಉಪನಿಷದರ್ಥವನ್ನು ವಿಶದೀಕರಣಕ್ಕಾಗಿ ಅಲ್ಲ. ಆಗಮಗಳ ಪರಿವಿಡಿಯೇ ಇದಕ್ಕೆ ಆಧಾರವಾಗಬಲ್ಲದು.

ಏಕೆಂದರೆ ಉಪನಿಷತ್ತು ಪರಬ್ರಹ್ಮದ ನಿರಾಕಾರ ಸ್ವರೂಪಕ್ಕೆ ಪ್ರಾಧಾನ್ಯವಿತ್ತಿದೆ. ಆದರೆ ಆಗಮಗಳು ಪರಬ್ರಹ್ಮದ ನಿರಾಕಾರದೊಡನೆ ಸಾಕಾರ ಸ್ವರೂಪವನ್ನೂ

ಒಪ್ಪಿಕೊಂಡಿವೆ. ಏಕೆಂದರೆ ಭಕ್ತಿ ಮಾರ್ಗಕ್ಕೆ ಸಾಕಾರರೂಪ ಅವಶ್ಯವೆನಿಸಿದೆ. ಇನ್ನು ಉಪನಿಷತ್ತುಗಳು ಪ್ರಾಪಂಚಿಕ ಜೀವನಕ್ಕಿಂತಲೂ ಪಾರಮಾರ್ಥಿಕವಾದ ಅಂತರಂಗದ ಅರಿವಿನ ಬಗೆಗೆ ಹೆಚ್ಚಿನ ಮಹತ್ವವನ್ನಿತ್ತಿವೆ. ಆದರೆ ಆಗಮಗಳು ಪಾರಮಾರ್ಥ ಮತ್ತು ಭೌತಿಕ ಪ್ರಪಂಚವನ್ನು ಸಮನ್ವಯತೆ ಹಾಗೂ ಆನಂದಮಯ ದೃಷ್ಟಿಯಿಂದ ಕಂಡು ಅದನ್ನೂ ಪರಮಾನಂದ ಸಾಗರವನ್ನಾಗಿ ಪರಿವರ್ತಿಸಿವೆ. ಉಪನಿಷತ್ತುಗಳು ಜಗತ್ತು ಮಿಥ್ಯ ಎಂಬ ಪರಿಕಲ್ಪನೆಯನ್ನು ಹೆಚ್ಚಾಗಿ ಪ್ರತಿಪಾದಿಸುತ್ತವೆ. ಆದರೆ ಆಗಮಗಳಲ್ಲಿ ಜಗತ್ತು ಪರಶಿವಶಕ್ತಿ ಸ್ವರೂಪವೇ ಆಗಿರುವದರಿಂದ ಅದು ಸತ್ಯ ಎಂದು ಪ್ರತಿಪಾದಿಸಲಾಗಿದೆ. ಉಪನಿಷತ್ತುಗಳಲ್ಲಿ ಅಹಂ ಬ್ರಹ್ಮಾಸ್ಮಿ ತತ್ತ್ವಪ್ರತಿಪಾದನೆ ಹೆಚ್ಚಾಗಿ ಕಂಡುಬರುತ್ತದೆ. ಆದರೆ ಆಗಮದಲ್ಲಿ ದ್ವೈತ, ದ್ವೈತಾದ್ವೈತ ಹಾಗೂ ಶಕ್ತಿವಿಶಿಷ್ಟಾದ್ವೈತ ತತ್ತ್ವಪ್ರತಿಪಾದನೆ ಕಂಡುಬರುತ್ತದೆ. ಉಪನಿಷತ್ತುಗಳಲ್ಲಿ ಮಾಯೆ ಎಂಬುದು ಭ್ರಮೆ, ಅವಾಸ್ತವಿಕ ಮುಂತಾದ ಅರ್ಥಗಳಲ್ಲಿ ಇದೆ. ಆದರೆ ಆಗಮಗಳಲ್ಲಿ ಮಾಯೆ ಎಂದರೆ ಪರಬ್ರಹ್ಮ ಶಕ್ತಿ ಅದರಿಂದಲೇ ಸೃಷ್ಟಿಯ ಉತ್ಪತ್ತಿ ಅಂತೆಯೇ ಸೃಷ್ಟಿ ಸತ್ಯವಾದುದು ಎಂದು ಪ್ರತಿಪಾದಿಸಿವೆ. ಉಪನಿಷತ್ತುಗಳು ಮೋಕ್ಷ ಸಾಧನೆಗಾಗಿ ಕರ್ಮಸನ್ಯಾಸವನ್ನು ಒಪ್ಪಿಕೊಂಡಿದ್ದು, ಇದಕ್ಕೆ ಅಗತ್ಯವಾದ ಜ್ಞಾನವನ್ನು ತಪಸ್ಸಿನ ಮೂಲಕ ಸಾಧಿಸುವುದನ್ನು ವಿವರಿಸಿವೆ. ಕಾರಣ ಉಪನಿಷತ್ತುಗಳಲ್ಲಿ ಧಾರ್ಮಿಕ ಆಚರಣೆಗಳು ಕಡಿಮೆ. ಆದರೆ ಆಗಮಗಳು ಮೋಕ್ಷ ಸಾಧನೆಗಾಗಿ ಭಕ್ತಿ ಮಾರ್ಗವನ್ನು ಬೋಧಿಸಿದ್ದು, ಈ ಭಕ್ತಿ ಮಾರ್ಗದಲ್ಲಿ ಭಕ್ತನು ತನ್ನದೆಲ್ಲವನ್ನೂ ದೇವರಿಗೆ ಅರ್ಪಿಸುವ ವಿಧಾನವು ಅಡಗಿದೆ. ಕಾರಣ ಧಾರ್ಮಿಕ ಆಚರಣೆಗಳು ಹೆಚ್ಚಾಗಿ ಕಂಡುಬರುತ್ತವೆ. ಉಪನಿಷತ್ತುಗಳ ಜ್ಞಾನಮಾರ್ಗವು ಕಷ್ಟದಾಯಕವೂ ಮತ್ತು ಸಾಮಾನ್ಯ ಜನಗಳ ಬುದ್ಧಿಯ ಮಿತಿಗೆ ನಿಲುಕುವಂತಹುದಲ್ಲ. ಆದರೆ ಆಗಮಗಳ ಭಕ್ತಿಮಾರ್ಗ ಎಲ್ಲರಿಗೂ ಸುಲಭ ಸಾಧ್ಯವಾದುದು.

ಈ ವಿಹಂಗಮ ನೋಟದಿಂದ ಆಗಮಗಳು ಉಪನಿಷತ್ತುಗಳನ್ನು ಅರ್ಥೈಸಿ ಅವುಗಳ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತವೆ ಎಂಬ ಅಭಿಪ್ರಾಯವನ್ನು ಅಲ್ಲಗಳೆಯಬಹುದು.

ಮೂರನೆಯ ವಾದ ಕೇವಲ ಊಹೆಯೆಂದು ಅದನ್ನು ನೇರವಾಗಿ ತಿರಸ್ಕರಿಸಿ ಬಿಡಬಹುದು. ಇಂತಹ ಅನೇಕ ಊಹೆಗಳು ತಮಿಳುನಾಡಿನಲ್ಲಿ ಉದ್ಭವಿಸಿವೆ. ಎಲ್ಲ ಭಾರತೀಯ ಭಾಷೆಗಳಿಗೆ ತಮಿಳೇ ಮೂಲ. ತಮಿಳು ಸಾಹಿತ್ಯ ಅನೇಕ ಸಹಸ್ರ ವರ್ಷಗಳ ಪರಂಪರೆಯುಳ್ಳದ್ದು. ಇಂತಹ ಕಲ್ಪನಾತೀತವಾದ ಅಸಂಗತ, ಅನೈತಿಹಾಸಿಕ ಊಹೆಗಳನ್ನು ನಂಬುವುದು ಕಷ್ಟ. ಕಾರಣ ಮೂರನೆಯ ವಾದವನ್ನು ಕೈಬಿಡಬಹುದು.

ಹಾಗಾದರೆ **ಆಗಮಗಳ ಉಗಮಕ್ಕೆ ಪ್ರೇರಣೆ** ಏನು? ಎಂಬುದನ್ನು ಕುರಿತು ಶಿವಾಗಮ ಸೌರಭ ಗ್ರಂಥದ ಪೀಠಿಕಾಭಾಗದಲ್ಲಿ ಪ್ರತಿಪಾದಿಸಿದಂತೆ ಕ್ರಿಸ್ತಪೂರ್ವ ೨೦೦೦ ವರ್ಷಗಳಷ್ಟು ಹಿಂದಿನ ಮೊಹೆಂಜೋದಾರೋ-ಹರಪ್ಪಾ ಉತ್ಖನನದಲ್ಲಿ ದೊರೆತ ಪಳೆಯುಳಿಕೆಗಳು ಬಹು ಮಹತ್ವದ್ದಾದವು.

ಸರ್ ಜಾನ್ ಮಾರ್ಷಲ್ ಮೊಹೆಂಜೊದಾರೋ ಸಂಸ್ಕೃತಿಯ ಹಾಗೂ ಅಲ್ಲಿನವರ ಉಪಾಸನಾ ಪದ್ಧತಿ ಕುರಿತು ಅಧ್ಯಯನ ಕೈಕೊಂಡಿದ್ದು, ಅಂದಿನ ಸಂಸ್ಕೃತಿಯು ಇಂದಿನ ಲಿಂಗಾಯತ ಸಂಸ್ಕೃತಿಯ ಕುರುಹುಗಳನ್ನು ಹೋಲುವುದಾಗಿ ಅಭಿಪ್ರಾಯ ತಳೆದಿದ್ದಾರೆ.[೬೮] ಮೊಹೆಂಜೋದಾರೋ ಹರಪ್ಪಾ ಉತ್ಖನನಗಳಲ್ಲಿ ಕೆಲವು ಲಿಂಗಗಳು ದೊರೆತಿವೆ. ಅವುಗಳಲ್ಲಿ ಕೆಲವು ಗಾತ್ರದಲ್ಲಿ ದೊಡ್ಡವಾಗಿ ಸ್ಥಾವರಲಿಂಗಗಳನ್ನೂ, ಕೆಲವು ಚಿಕ್ಕದಾಗಿ ದೇಹದಲ್ಲಿ ಧಾರಣಮಾಡುವ ಲಿಂಗಗಳನ್ನೂ ಹೋಲುತ್ತಿವೆ ಎಂದು ತಿಳಿಸಿರುವರು.[೬೯] ಹಿರಿಯ ಲಿಂಗಗಳು ಸ್ಥಾವರಲಿಂಗಗಳಾಗಿ ಪೂಜೆಗೊಳ್ಳುತ್ತಿರಬೇಕು. ಕಿರಿಯ ಲಿಂಗಗಳನ್ನು ಈಗಿನ ಲಿಂಗಾಯತರಂತೆ ಆಗಿನ ಶೈವರು ತಮ್ಮ ಅಂಗದ ಮೇಲೆ ಧರಿಸುತ್ತಿರಬೇಕೆಂದು ಅವರು ಅಭಿಮತವಿತ್ತಿರುವರು. ಆ ಶೈವರು ಲಿಂಗಾಯತರೇ ಎಂದು ಮಾರ್ಶಲ್ ಅವರು ಅದೇ ಗ್ರಂಥದ ೬೧ ನೆಯ ಪುಟದ ಅಡಿ ಟಿಪ್ಪಣಿಯಲ್ಲಿ ಸ್ಪಷ್ಟಪಡಿಸಿರುವರು. ಇದರಿಂದ ಶೈವಧರ್ಮ ಹಾಗೂ ಲಿಂಗಧಾರಣೆಯ ಪ್ರಾಚೀನತೆ ಸ್ಪಷ್ಟವಾಗುತ್ತದೆ.

ಆಗಮಗಳಲ್ಲಿ ಶಿವಯೋಗಕ್ಕೆ ಹೆಚ್ಚಿನ ಮಹತ್ವವಿತ್ತಿದ್ದಾರೆ. ಇದನ್ನು ಸಿಂಧೂ ಸಂಸ್ಕೃತಿ ಸಭ್ಯತೆಗಳಲ್ಲಿ ಮೊದಲಿಗೆ ಕಾಣುತ್ತೇವೆ. 'ಅಲೆಸಾ' ಮತ್ತು 'ಆ ಸಾವಿಸಾ' ಎಂಬ ಲೇಖಕರು Vedic Age ಗ್ರಂಥದಲ್ಲಿ; "ನಾಸಿಕಾಗ್ರದಲ್ಲಿ ಲಕ್ಷ್ಯವಿಟ್ಟ ಧ್ಯಾನಾಸಕ್ತಯೋಗಿ ಅಥವಾ ಯೋಗೀಶ್ವರ ಸಿಂಧೂ ಜನಾಂಗದವರ ಆರಾಧ್ಯ ದೈವ ಉಪಾಸನಾ ಮೂರ್ತಿ"ಯೆಂದು ಹೇಳಿರುವುದು ಗಮನಾರ್ಹವಾಗಿದೆ. ಇದೇ ಅಭಿಪ್ರಾಯ 'ಪ್ರೋ' ಅವರದೂ ಆಗಿದೆ. (Indian Culture)

ಮುಖ್ಯವಾಗಿ ತ್ರಿಣೇತ್ರ, ತ್ರಿಶೂಲ, ಪಶುಪತಿ, ಮಹಾಯೋಗಿ, ಯೋಗಿಶ್ವರ, ಊರ್ಧ್ವಕೇತು, ಅರ್ಧನಾರೀಶ್ವರ–ಇವೇ ಮುಂತಾದ ಸಂಕೇತಗಳ ವಿಗ್ರಹಗಳನ್ನು ಫಾದರ್ ಹೆರಾಸ್‌ರು "The joined life of the three great Gods the devine Triad" ಎಂಬ ಬರಹದಲ್ಲಿ ವಿಶ್ಲೇಷಿಸಿದ್ದಾರೆ. ಈ ವಿಗ್ರಹಗಳು ಯೋಗಾರೂಢನಾದ ಶಿವನ ಪ್ರತಿಮೆಯನ್ನು ಹೋಲುವುದರಿಂದ ಯೋಗ, ಬ್ರಹ್ಮಚರ್ಯಗಳ ಕಲ್ಪನೆ ಆ ಕಾಲದಲ್ಲಿ ರೂಢವಾಗಿದ್ದಿತೆಂದು ಊಹಿಸಿರುವರು.

ಆಗಮಗಳಲ್ಲಿ ಪ್ರತಿಪಾದನೆಗೊಂಡ ಷಟ್‌ಸ್ಥಲಗಳಿಗೆ ಮೂಲ ಷಟ್‌ಚಕ್ರಗಳು, ನವಚಕ್ರಗಳು ನವಲಿಂಗ ಸಕೀಲ ಎಲ್ಲದಕ್ಕೂ ಶಿವಯೋಗವೇ ತಳಹದಿಯಾಗಿರುವ ಮೂಲವನ್ನು ಮೊಹೆಂಜೊದಾರೊ ಸಂಸ್ಕೃತಿಯಲ್ಲಿ ಕಾಣುತ್ತೇವೆ. ಇಲ್ಲಿನ ಪೂಜೆ ಉಪಾಸನೆಗಳೇ ದ್ರಾವಿಡ ಸಂಸ್ಕೃತಿಯ ಕುರುಹುಗಳಾಗಿವೆ. ದ್ರಾವಿಡರು ಆರ್ಯರಂತೆ ಹೊರಗಿನ ನೈಸರ್ಗಿಕ ವಸ್ತುಗಳನ್ನು ಆರಾಧಿಸದೆ, ಹೆಚ್ಚಾಗಿ ಅಂತರ್ಮುಖಿಗಳಾಗಿ ಪೂಜೆಗೈಯ್ಯುತ್ತಿದ್ದುದು ಕಂಡು ಬರುತ್ತದೆ. 'ದರ್ಶನ' (Seeing) 'ಮನನ' (thinking) ಹಾಗೂ 'ಧ್ಯಾನ' (Meditation) ಇವು ದ್ರಾವಿಡರ ಉಪಾಸನಾ ವೈಶಿಷ್ಟ್ಯಗಳಾಗಿವೆ.

---

೬೮. ಡಾ. ಆರ್. ಸಿ. ಹಿರೇಮಠರವರ ಮಹಾಯಾತ್ರೆ ಕೃತಿಯ ಪುಟ ೨೪ ರಲ್ಲಿ

೬೯. ಡಾ. ಆರ್. ಸಿ. ಹಿರೇಮಠರವರ ಮಹಾಯಾತ್ರೆ ಕೃತಿಯ ಪುಟ ೨೪ ರಲ್ಲಿ

ಕಾರಣ ಶೈವಧರ್ಮದ ಇತಿಹಾಸವು ಮೊಹೆಂಜೋದಾರೋ - ಹರಪ್ಪಾ ಸಂಸ್ಕೃತಿಯ ಕಾಲದವರೆಗೆ ಅಥವಾ ಅದಕ್ಕೂ ಪೂರ್ವದವರೆಗೆ ಹೋಗುತ್ತದೆಯೆಂದು ಸರ್‌ಜಾನ್ ಮಾರ್ಶಲ್ ಅವರು ಅಭಿಪ್ರಾಯವಿತ್ತಿರುವುದು ಬಹು ಮಹತ್ವವಾದುದು. ಜಗತ್ತಿನಲ್ಲಿ ಇದುವರೆಗೂ ಜೀವಂತವಾಗಿರುವ ಪ್ರಾಚೀನ ಧರ್ಮಗಳಲ್ಲಿ ಶೈವಧರ್ಮವು ಅತ್ಯಂತ ಪ್ರಾಚೀನತಮವಾದುದೆಂಬ ಅಭಿಪ್ರಾಯವನ್ನು ಇತ್ತಿರುವರು. ಕೀಫ್ ಮತ್ತು ಫ್ರೀಲ್ಕರವರು ಲಿಂಗ ಪೂಜಾ ಪದ್ಧತಿಗಳು ಸಿಂಧೂ ಸಂಸ್ಕೃತಿಯ ಗಡಿಗಳನ್ನು (ಲಯಗಳನ್ನೂ) ದಾಟಿ, ಮೆಡಿಟರೇನಿಯನ್‌ದವರೆಗೂ ಪ್ರಸಾರಗೊಂಡಿದ್ದವು ಎಂದು ಹೇಳುತ್ತಾರೆ. ಬಹುಶಃ ವ್ಯಾಪಾರ-ವಣಿಕ ಸಂಬಂಧಗಳು, ಪರಸ್ಪರ ಸಂಸ್ಕೃತಿಗಳ ಪ್ರಸಾರ-ಪ್ರಭಾವಕ್ಕೆ ಕಾರಣವಾಗಿರುವುದರಿಂದ ಈ ವ್ಯಾಪ್ತಿ ಅಸಂಭವವೇನೂ ಆಗಿ ತೋರುವುದಿಲ್ಲ. ಋಗ್ವೇದದಲ್ಲಿನ 'ಫಣಿಗಣರು' ದ್ರಾವಿಡ ಜನಾಂಗದವರ ಸೂಚಕರಾಗಿದ್ದು, ಇವರು ವಣಿಕ ಜನರಾಗಿದ್ದು, ಲಿಂಗಾಯತ ಸಂಸ್ಕೃತಿಯ ಪ್ರಸರಣಕ್ಕೆ ಕಾರಣರಾಗಿರಲೂಬಹುದು.

ಹರಪ್ಪ ಮೆಹೆಂಜೊದಾರೋ ಕಣಿವೆಯಲ್ಲಿ ದೊರೆತಿರುವ ಹಲವು ಬಗೆಯ ಶಿವಲಿಂಗಗಳ ಚಿತ್ರಗಳನ್ನು ಶಿವಾಂಕ (ಪು. ೪೫೨) ದಲ್ಲಿ ಪ್ರಕಟಿಸಲಾಗಿದೆ. ಅಂಥ ಶಿವಲಿಂಗಗಳು, ಪಶುಪತಿ ಮುಂತಾದ ಮೂರ್ತಿಗಳನ್ನು ಸಿದ್ಧಪಡಿಸಬೇಕಾದರೆ ಶಿಲ್ಪಶಾಸ್ತ್ರವು ಇದ್ದಿರಬೇಕು. ಅಷ್ಟೇ ಅಲ್ಲದೆ ಅಂಥ ಮೂರ್ತಿಗಳಿಗೆ ಪ್ರಾಣಪ್ರತಿಷ್ಠಾಪನಾದಿಗಳನ್ನು ಮಾಡಿ ಅವುಗಳನ್ನು ಪೂಜಾಯೋಗ್ಯಗಳನ್ನಾಗಿ ಮಾಡುವ ಆಗಮ ಶಾಸ್ತ್ರಗಳನ್ನು ಮತ್ತು ಅವನ್ನು ಬೋಧಿಸುವ ಆಗಮಿಕಾಚಾರ್ಯರ ಅಸ್ತಿತ್ವವನ್ನು ಬೇರೆ ಹೇಳಬೇಕಾಗಿಲ್ಲ.

ಎರಡನೆಯದಾಗಿ ಸೈಂಧವ ಮನೆಗಳಲ್ಲಿ ಪೀಠಗಳ ಮೇಲಿಟ್ಟು ಅರ್ಚಿಸುವ ಸ್ಥಾವರಲಿಂಗಗಳೂ, ಶರೀರದ ಮೇಲೆ ಧಾರಣಮಾಡಿಕೊಳ್ಳುವ ಇಷ್ಟಲಿಂಗಗಳೂ ಇದ್ದುದರಿಂದ ಶೈವ ಮತ್ತು ವೀರಶೈವ ಸಂಸ್ಕೃತಿ ಬಳಕೆಯಲ್ಲಿದ್ದವೆಂಬುದು ಅನುಮಾನ ಪ್ರಮಾಣದಿಂದ ಸಿದ್ಧವಾಗುತ್ತದೆ.

ಆದರೆ ಸೈಂಧವ ಸಂಸ್ಕೃತಿಯ ವಿಶಾಲವಾದ ಅಂದಿನ ನಗರಗಳಲ್ಲಿ ಸಾರ್ವಜನಿಕ ದೇವಾಲಯವಿದ್ದುದರ ಒಂದಾದರೂ ಸುಳಿವು ಇಲ್ಲವೆಂದು ಹೇಳಿರುವುದರಿಂದ ಅಂದಿನ ಜನರ ದೇವತಾರಾಧನೆ ಪದ್ಧತಿಯು ಕೇವಲ ವೈಯಕ್ತಿಕವೂ, ಮನೆಗಳಿಗೆ ಮಾತ್ರ ಸೀಮಿತವೂ ಆಗಿದ್ದಿತೆಂದು ಸ್ಪಷ್ಟವಾಗುತ್ತದೆ. ಮೇಲಾಗಿ ಇಂದು ಭಾರತದಾದ್ಯಂತ ವ್ಯಾಪಿಸಿರುವ ಸ್ವಯಂಭುಲಿಂಗ ಮತ್ತು ಜ್ಯೋತಿರ್ಲಿಂಗ ಮುಂತಾದ ಸಾರ್ವಜನಿಕ ದೇವಾಲಯಗಳ ರಚನೆಯು ಅನಂತರ ಕಾಲಗಳಲ್ಲಿ ಆರಂಭವಾಗಿ, ತತ್ಸಂಬಂಧವಾದ ಆಗಮಶಾಸ್ತ್ರಗಳೂ ಸಿದ್ಧವಾಗಿರಬೇಕೆಂದು ಊಹಿಸಿದರೆ ತಪ್ಪಾಗದು.[೨೦]

ಭಾರತದ ಮೂಲ ನಿವಾಸಿಗಳಲ್ಲಿ ಮುಖ್ಯರಾದವರು ವ್ರಾತ್ಯರು. ಈ ವ್ರಾತ್ಯರ

೨೦. ಶಿವಾಗಮ ಸೌರಭ ಪೀಠಿಕಾ ಭಾಗದ ೧೨ ನೇ ಪುಟ

ಕುರಿತು ಮಾನ್ಯ ಚೌಧರಿಯವರು ಪ್ರಬಂಧವನ್ನು ಪ್ರಕಟಿಸಿದ್ದು ಅದರಲ್ಲಿ ಉಲ್ಲೇಖಗಳು ಈ ರೀತಿಯಾಗಿವೆ.

ಮೊದಲನೆಯದಾಗಿ ಅವರು ಮಾಡಿರುವ ವ್ರಾತ್ಯಪದ ನಿರ್ವಚನವು 'ವ್ರಾತ್ಯ' ಮತ್ತು "ಪಶುಪತಿ" ಎಂಬ ಪದಗಳಿಗಿರುವ ಅರ್ಥಸಾಮ್ಯವನ್ನು ದೃಢಪಡಿಸಿದೆ.

ವ್ರಾತ್ಯ ಎಂದರೆ ಸಂಸ್ಕಾರವಿಲ್ಲದವರು ಎಂಬುದಕ್ಕೆ ಶ್ರೀಶಂಕರರು ನೀಡಿರುವ "ಅವರು ಪ್ರಕೃತಿಯಿಂದಲೇ ಶುದ್ಧರಾದವರು" ಎಂಬ ವಿವರಣೆ ತುಂಬಾ ಮಹತ್ವದ್ದಾಗಿದೆ. "ವ್ರಾತ್ಯರು ಬ್ರಾಹ್ಮಣೇತರರು, ಪ್ರಾಚೀನ ಶಿವೋಪಾಸಕರು, ಯೋಗಿಗಳ ಸಂಪ್ರದಾಯಕ್ಕೆ ಸೇರಿದವರು. ಕರ್ಮ ಮಾಡದವರು, ಯಾಗ ಮಾಡದವರು, ಲಿಂಗಪೂಜಾಸಕ್ತರು ಮತ್ತು ಅನ್ಯವ್ರತಧಾರಿಗಳು" ಎಂದು ಅವರಿಗಿರುವ ವಿಶೇಷಣಗಳು ವ್ರಾತ್ಯ ಪಾಶುಪತರಲ್ಲಿದ್ದ ವಿಶಿಷ್ಟ ಗುಣಗಳನ್ನೇ ಸಮರ್ಥಿಸುತ್ತವೆ ಎಂದರೆ ವ್ರಾತ್ಯರಿಗೆ ಪಾಶುಪತ ವ್ರತವೇ ಮುಖ್ಯ. ಅವರು ಆರ್ಯರಂತೆ ಅಸ್ಥಿರವಾದ ಸ್ವರ್ಗಸ್ವರಾಜ್ಯಸಾಧಕವಾದ ಪಶುಹಿಂಸಾತ್ಮಕ ಯಜ್ಞಯಾಗಾದಿ ಕರ್ಮಗಳನ್ನು ಮಾಡತಕ್ಕವರಲ್ಲ. ಬದಲಾಗಿ ಅವರು ಲಿಂಗಯೋಗ ನಿರತರಾಗಿ ಶಿವ ಸಾಮರಸ್ಯರೂಪವಾದ ಶಾಶ್ವತ ಮುಕ್ತಿಯನ್ನು ಬಯಸುವವರು.

ಇನ್ನು ವ್ರಾತ್ಯರ ಬಗೆಗೆ ಹೇಳಿರುವ ಮತ್ತೊಂದು ಮುಖ್ಯ ವಿಷಯವು ಅವರ ಭಾಷೆ ಕಲೆ, ವಿಜ್ಞಾನ ಮುಂತಾದವುಗಳಿಗೆ ಸಂಬಂಧಿಸಿದ್ದು. ಆರ್ಯರು ಸಿಂಧೂ ಕಣಿವೆ ಕಾಲಿಡುವ ಮುನ್ನ ಅಲ್ಲಿ ನೆಲೆಸಿದ್ದ ಆದಿ ನಿವಾಸಿಗಳು ಸುಸಂಸ್ಕೃತರಾಗಿದ್ದರು. ಅವರ ಮತಾಚರಣೆಗಳು, ತತ್ವಜ್ಞಾನ, ವಾಸ್ತುಶಿಲ್ಪ, ಕಲೆ, ನಾಟ್ಯ, ಸಂಗೀತ ಮತ್ತು ಸಾಹಿತ್ಯಗಳು ಅವರಲ್ಲಿ ಸಾಕಷ್ಟು ಬೆಳೆದಿದ್ದವು ಎಂಬುದು ಅಂದಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಆಗಮಗಳಲ್ಲಿ ಅಭಿವ್ಯಕ್ತವಾಗಿವೆ. ಮೇಲಾಗಿ ವ್ರಾತ್ಯರಲ್ಲಿ ಜಾತಿ ಪದ್ಧತಿ ಇರಲಿಲ್ಲ. ಅವರು ಸಮಾಜದಲ್ಲಿ ಹಿಂದುಳಿದಿದ್ದ ಆದಿ ಜನಾಂಗಗಳನ್ನು ಸಂಸ್ಕರಿಸಿ ತಮ್ಮಲ್ಲಿ ಸೇರಿಸಿಕೊಂಡು ಒಂದು "ಸಾಂಸ್ಕೃತಿಕ ಗಣರಾಜ್ಯ"ವನ್ನೇ ಸ್ಥಾಪಿಸಿದ್ದರು. "ಇದರಿಂದ ಶೈವಮತವು ಒಂದು ಜನಪ್ರಿಯ ಮತವಾಯಿತು." ಎಂಬ ಮಾತುಗಳು ಸಿಂಧೂ ನಿವಾಸಿಗಳ ಸಾಂಸ್ಕೃತಿಕ ಪ್ರಗತಿಗೆ ನಿದರ್ಶನ ಎಂದು ಉಲ್ಲೇಖಿಸಿದ್ದಾರೆ.[೭೧]

ಒಟ್ಟಿನಲ್ಲಿ ಶೈವಧರ್ಮದ ಪ್ರಾಚೀನತೆ ಸರ್‌ಜಾನ್ ಮಾರ್ಷಲ್‌ರವರ ಅಭಿಮತದಂತೆ ಹರಪ್ಪ ಮೋಹೆಂಜೋದಾರೋ ಕಾಲದವರೆಗೆ (ಕ್ರಿ. ಪೂ. ೩೦೦೦) ಹೋಗುತ್ತದೆ. ಸೈಂಧವ ಸಂಸ್ಕೃತಿಯಲ್ಲಿ ಕಂಡು ಬರುವ ಶೈವ ಮತ್ತು ವೀರಶೈವದ ಕುರುಹುಗಳು, ಮೂರ್ತಿಪೂಜೆ, ಉಪಾಸನಾ ವಿಧಿಗಳು, ಪಶುಪತಿ ಹಾಗೂ ಶಿವ–ಶಕ್ತಿಗಳ ಪರಿಕಲ್ಪನೆ, ಇಷ್ಟಲಿಂಗ ಪೂಜೆ, ಶಿವಯೋಗ ಹಾಗೂ ಮೂಲ ನಿವಾಸಿಗಳಾದ ವ್ರಾತರ ವಿವರಣೆ ಮುಂತಾದವು ಆಗಮಗಳಲ್ಲಿ ಪ್ರತಿಪಾದಿತವಾದ ವಿಷಯಗಳಿಗೆ ಪೂರಕವಾಗಿವೆ. ಕಾರಣ ಸೈಂಧವ ಸಂಸ್ಕೃತಿಯೇ ಆಗಮಿಕ ಸಂಸ್ಕೃತಿಯಾಗಿದ್ದು ಇದೇ ಆಗಮಗಳ ಉಗಮಕ್ಕೆ ಪ್ರೇರಣೆಯಾಗಿರಬಹುದು.

---

೭೧. ಶಿವಾಗಮ ಸೌರಭ ಪೀಠಿಕಾ ಭಾಗದ ೨೯ ನೇ ಪುಟ

೨.೬ ಶಿವಾಗಮಗಳ ರಚನಾ ಕಾಲ

ಆಗಮಗಳ ಕಾಲನಿರ್ಣಯವನ್ನು ಮಾಡಿದವರಲ್ಲಿ ಕರ್ನಾಟಕದ ಕೆಲ ವಿದ್ವಾಂಸರು ಇದ್ದಾರೆ. ಈ ಕಾರ್ಯ ಮಾಡಿದ ವಿದ್ವಾಂಸರಲ್ಲಿ ಕೆಲ ಹೆಸರುಗಳು ಇಂತಿವೆ. ಸಿದ್ಧರಾಮಪ್ಪ ಪಾವಟೆ, ಪ್ರೊ.ಎಂ.ಅರ್. ಸಾಖರೆ, ಡಾ. ಎಸ್.ಸಿ. ನಂದಿಮಠ, ಶ್ರೀ ಶಂಭುಲಿಂಗ ಶಿವಾಚಾರ್ಯರು, ರಂ. ರಾ. ದಿವಾಕರ, ಎಂ. ಈ. ನಂಜುಂಡಾರಾಧ್ಯ, ಡಾ. ಎಚ್. ಪಿ. ಮಲ್ಲೇದೇವರು, ಡಾ. ಪಿ. ಜಿ. ಹಳಕಟ್ಟಿ, ಕಾಶೀನಾಥ ಶಾಸ್ತ್ರಿ ಮೊದಲಾದವರು. ಇವರೆಲ್ಲರೂ ಪ್ರಾಚೀನ ಸಂಸ್ಕೃತ ಶಾಸ್ತ್ರ ಸಾಹಿತ್ಯ, ಪುರಾಣೇತಿಹಾಸ ಮತ್ತು ಶಾಸನಗಳನ್ನು ಈ ಕಾರ್ಯದಲ್ಲಿ ಬಳಸಿಕೊಂಡಿದ್ದಾರೆ.

ಆಗಮಗಳ ಕಾಲವನ್ನು ನಿರ್ಣಯಾತ್ಮಕವಾಗಿ ಹೇಳುವದು ಬಹುಶಃ ಯಾರಿಗೂ ಸಾಧ್ಯವಿಲ್ಲ. ಉಪಲಬ್ಧವಾದ ಆಗಮಗಳು ಒಂದೇ ಕಾಲದಲ್ಲಿ ಸಂಗ್ರಹಿಸಲ್ಪಟ್ಟವುಗಳಲ್ಲ. ಅವು ಪರಂಪರೆಯಲ್ಲಿ ಬೆಳೆಯುತ್ತಾ ಪರಿಷ್ಕೃತವಾಗುತ್ತಾ ಬಂದವುಗಳು ಎಂಬ ವಿಷಯವು ನಿರ್ವಿವಾದ.

ಭಾಷೆಯ ದೃಷ್ಟಿಯಿಂದ ನೋಡಿದಾಗ ಆಗಮಗಳು ವೇದಗಳ ಕಾಲಕ್ಕಿಂತ ಅರ್ವಾಚೀನ ಕಾಲಕ್ಕೆ ಸೇರಿದವುಗಳೆಂಬುದು ಸ್ಪಷ್ಟ. ಆಗಮಗಳಲ್ಲಿ ನಿರೂಪಿಸಲ್ಪಟ್ಟ ಆಚಾರ ವಿಚಾರಗಳನ್ನು ನೋಡಿದರೆ ಅವುಗಳ ಕಾಲ ಅಷ್ಟು ಪ್ರಾಚೀನವೆಂದು ಹೇಳಲಾಗದಿದ್ದರೂ ಆಗಮಿಕ ಸಂಸ್ಕೃತಿಯು ಮಾತ್ರ ಪ್ರಾಚೀನವೆಂದು ಒಪ್ಪಬೇಕಾಗುತ್ತದೆ.

ಭಾಷೆಯ ದೃಷ್ಟಿಯಿಂದ ಆಗಮಗಳು ಪಾಣಿನಿಯ (ಕ್ರಿ.ಪೂ೭೦೦) ಅನಂತರ ಕಾಲಕ್ಕೆ ಸೇರಿದವುಗಳು. ಆದರೆ ಕ್ರಿ.ಪೂ ೨೦೦ ಕ್ಕೆ ಸೇರಿದ್ದವೆಂದು ತಿಳಿದ ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟ ಪಾಂಚರಾತ್ರಗಮೋಕ್ತ ಪೂಜಾ ಪದ್ಧತಿ ಮತ್ತು ಕ್ರಿ.ಪೂ. ೫೦೦ ಕ್ಕೆ ಸೇರಿದ್ದೆಂದು ಹೇಳಲಾದ ಭಗವದ್ಗೀತೆಯಲ್ಲಿ ಪಾಂಚರಾತ್ರಾಗಮೋಕ್ತ ವಾಸುದೇವ ಮಹತ್ವವು ಆಗಮಾರಂಭ ಕಾಲವನ್ನು ಸೂಚಿಸುತ್ತದೆ. ಈ ಕಾಲ ಇನ್ನಷ್ಟು ಹಿಂದಕ್ಕೆ ಹೋಗಬಹುದು. ವಿಶೇಷವಾಗಿ ಶಿವಾಗಮಗಳ ಸಂಸ್ಕೃತಿಯು ಇನ್ನೂ ಹಿಂದಕ್ಕೆ ಸೈಂಧವ ಸಂಸ್ಕೃತಿಯ ಕಾಲದವರೆಗೂ ಹೋಗಬಹುದು.

ಪಾಂಚರಾತ್ರಾಗಮಗಳಲ್ಲಿ ಶಿವಾಗಮಗಳ ಪ್ರಸ್ತಾಪವಿರುವದು. ಆದರೆ ವೈಷ್ಣವಾಗಮಗಳ ಉಲ್ಲೇಖವು ಶಿವಾಗಮಗಳಲ್ಲಿ ಇಲ್ಲದಿರುವುದರಿಂದ ಶಿವಾಗಮಗಳು ವೈಷ್ಣವಾಗಮಗಳಿಗಿಂತ ಹಿಂದಿನವು ಎಂಬ ಅಭಿಪ್ರಾಯವಿದೆ.[೭೨]

ಪ್ರಾಚೀನ ಕೃತಿಗಳ ಮೇಲೆ ಶಿವಾಗಮಗಳ ಪ್ರಭಾವವನ್ನು ವಿವಿಧ ವಿದ್ವಾಂಸರು ಕೆಲವು ಆಧಾರಗಳಿಂದ ಪ್ರತಿಪಾದಿಸಿದ್ದಾರೆ. ಅವುಗಳನ್ನು ವೀಕ್ಷಿಸಲಾಗಿ ಶಿವಾಗಮಗಳ ರಚನಾಕಾಲದ ಬಗ್ಗೆ ಮಾಹಿತಿ ದೊರಕುವದು. ಅದರ ಪರಿಶೀಲನೆ ಇಂತಿದೆ.

---

೭೨. ಡಾ. ಎಸ್. ಸಿ. ನಂದಿಮಠ, ಶಿವಾನುಭವ, ಸಂ. ೭, ಸಂ.೧, ಏಪ್ರಿಲ್ ೧೯೩೧

೨.೭ ವಿವಿಧ ಶಾಸ್ತ್ರಗ್ರಂಥಗಳು ಹಾಗೂ ಶಿವಾಗಮಗಳು

೧. ಶಿವಾಗಮಗಳು ಮತ್ತು ವೇದ

ಭಾರತೀಯ ಪರಂಪರೆಯಲ್ಲಿ ವೇದ ಮತ್ತು ಆಗಮಗಳೆರಡಕ್ಕೂ ಸಮಾನವಾದ ಪ್ರಾಶಸ್ತ್ಯ. ಎರಡಕ್ಕೂ ಈಶ್ವರನೇ ಮೂಲ ಕರ್ತೃ. ಸಮಾನ ಕರ್ತೃತ್ವವಿರುವುದರಿಂದ ಎರಡಕ್ಕೂ ಸಮಾನ ಪ್ರಾಮಾಣ್ಯ. ಶ್ರೀಪತಿ ಪಂಡಿತರು ಉಲ್ಲೇಖಿಸಿರುವ ಸ್ಮೃತಿಯೊಂದು ವೇದ ಆಗಮಗಳ ಏಕ ಕರ್ತೃತ್ವವನ್ನು ಹೀಗೆ ಸಾರುತ್ತದೆ.

ವಿಮರ್ಶಾರೂಪಿಣೀ ಶಕ್ತಿಃ ಶಿವಸ್ಯ ಪರಮಾತ್ಮನಃ ।
ನಿಗಮಾಗಮರೂಪಾ ಸ್ಯಾತ್ ಸರ್ವತತ್ವ ಪ್ರಕಾಶಿನೀ।[೭೩]

ಎಲ್ಲಾ ತತ್ವಗಳ ಪ್ರಕಾಶವಾದ ಪರಶಿವನ ವಿಮರ್ಶಾ ಶಕ್ತಿಯೇ ನಿಗಮ (ವೇದ) ಮತ್ತು ಆಗಮಗಳ ರೂಪವನ್ನು ಧರಿಸಿತು.

ವೇದಗಳನ್ನು ಪರಬ್ರಹ್ಮನ ಉಸಿರೆಂದು ಹೇಳುವಂತೆ ಆಗಮಗಳನ್ನು ಪರಶಿವನ ವಾಣಿ ಎಂದು ಕರೆಯುವರು. ಒಂದು ಉಸಿರು; ಇನ್ನೊಂದು ವಾಣಿ, ಉಸಿರು ಅರ್ಥಾಭಿವ್ಯಕ್ತಿಯಲ್ಲಿ ವ್ಯಂಜಕ ಗುಣ ಪಡೆದಿದ್ದರೆ, ವಾಣಿ ಅರ್ಥಾಭಿವ್ಯಕ್ತಿಯಲ್ಲಿ ಸ್ಪಷ್ಟವಾಗಿರುತ್ತದೆ. ಆದುದರಿಂದ ಉಸಿರು – ವಾಣಿ ಎಂಬ ಪದಗಳನ್ನು ಅನುಕ್ರಮವಾಗಿ ವೇದ– ಆಗಮಗಳಿಗೆ ಬಳಸಲಾಗಿದೆ.

ವೇದವಾಕ್ಯಗಳು ಅಸ್ಪಷ್ಟವಾಗಿರುವುದರಿಂದಲೇ ಅದರ ಅರ್ಥ ನಿರ್ಣಯ ಮಾಡ ಹೊರಟ ಶಂಕರ ಮುಂತಾದ ಮಹಾನ್ ಆಚಾರ್ಯರಿಗೇ ಸಂದೇಹಗಳುಂಟಾಗಿ ಅದ್ವೈತ ಮತ್ತು ದ್ವೈತ ಮುಂತಾದ ಭೇದಗಳಾಗಲು ಕಾರಣವಾಯಿತು! ಆದರೆ ಆಗಮಗಳು ಪರಶಿವನ ಮುಖದಿಂದ ಹೊರಟ ಸ್ಪಷ್ಟವಾಣಿ. ಆಗಮಗಳಲ್ಲಿ ಆ ಬಗೆಯ ಅರ್ಥ ಸಂದೇಹಕ್ಕೆ ಎಡೆಯೇ ಇಲ್ಲ.

ವೇದ ಆಗಮಗಳೆರಡೂ ಪರಶಿವನಿಂದಲೇ ರಚಿತವಾಗಿದ್ದರೆ ಹೀಗೇಕೆ ಎರಡು ಸಾಹಿತ್ಯ ಪ್ರಕಾರಗಳು ರಚಿತವಾದವು? ಎಂಬ ಸಂಶಯ ಬರುವುದು ಸಹಜ. ಆದರೆ ವೇದಗಳು ಕೇವಲ ಮೇಲ್ವರ್ಗದ ಜನಾಂಗಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿದ್ದರಿಂದ ಎಲ್ಲ ವರ್ಗದ ಜನರ ಅಭ್ಯುದಯ ಮತ್ತು ಅಭ್ಯಾಸಕ್ಕಾಗಿ ಆಗಮಗಳು ರಚಿತವಾದವು. ಕಾರಣ ಆಗಮಗಳು ವೇದಗಳಲ್ಲಿ ಪ್ರತಿಪಾದಿತವಾದ ವಿಷಯ ವಸ್ತುವಿನ ಜೊತೆಗೆ ಸರ್ವಜನಾಂಗದ ಆಧ್ಯಾತ್ಮಿಕ ಉನ್ನತಿಗೆ ಪೂರಕವಾದ ಉನ್ನತ ಮಟ್ಟದ ಸಿದ್ಧಾಂತವನ್ನು ಪ್ರತಿಪಾದಿಸುತ್ತವೆ.

ವೇದ ಮತ್ತು ಆಗಮಗಳ ಸಮಾನ ಪ್ರಾಮಾಣ್ಯದ ಬಗ್ಗೆ ಶ್ರೀಕಂಠ ಶಿವಾಚಾರ್ಯರು "ವಯಂ ತು ವೇದಾಗಮಯೋಃ ಭೇದಂ ನ ಪಶ್ಯಾಮಃ" ಎಂದು ಹೇಳಿ ಬ್ರಹ್ಮ ಪ್ರಣವ

೭೩. ಶ್ರೀಕರ ಭಾಷ್ಯ ,ಪ್ರಾಚ್ಯ ಸಂಶೋಧನಾ ಸಂಸ್ಥೆ (ಓ.ಆರ್.ಐ) ಮೈಸೂರು ೧.೧.೨

ಪಂಚಾಕ್ಷರೀ ಪ್ರಸಾದ ಮುಂತಾದ ಮಂತ್ರಗಳಿಗೆ, ಪತಿ –ಪಶು– ಪಾಶ ಎಂಬ ತತ್ತ್ವತ್ರಯಕ್ಕೆ, ಭಸ್ಮೋದ್ಧೂಲನ– ತ್ರಿಪುಂಡ್ರಧಾರಣೆ ರುದ್ರಾಕ್ಷಧಾರಣ, ಲಿಂಗಪೂಜೆ ಮುಂತಾದ ಮುಖ್ಯ ಧರ್ಮಗಳಿಗೆ ಹಾಗೂ ಎಲ್ಲ ವ್ಯವಹಾರಗಳಿಗೆ ವೇದ ಆಗಮಗಳೆರಡೂ ಸಮ ಪ್ರಮಾಣವೆನಿಸಿವೆ."[೭೪] ಎಂದು ಸಮರ್ಥಿಸಿದ್ದಾರೆ. ಇದನ್ನೇ ಶಿವಯೋಗಿ ಶಿವಾಚಾರ್ಯರು

> ವೇದೈಕದೇಶವರ್ತಿಭ್ಯಃ ಸಾಂಖ್ಯಾದಿಭ್ಯೋ ಮಹಾಮುನೇ।
> ಸರ್ವವೇದಾನುಸಾರಿತ್ವಾಚ್ಛೈವತಂತ್ರಂ ವಿಶಿಷ್ಯತೇ॥
> ಶೈವತಂತ್ರಮಿತಿ ಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಮ್।
> ಸರ್ವವೇದಾರ್ಥರೂಪತ್ವಾತ್ ಪ್ರಮಾಣಂ ವೇದವತ್ಸದಾ॥[೭೫]

ವೇದದ ಒಂದೊಂದು ಭಾಗದಲ್ಲಿ ಬರುವ ಸಾಂಖ್ಯ, ಯೋಗ, ಮಿಮಾಂಸ, ನ್ಯಾಯ ಮುಂತಾದ ಶಾಸ್ತ್ರಗಳು ವೇದದ ದ್ವೈತ ಸಿದ್ಧಾಂತವನ್ನಾಗಲಿ ಅಥವಾ ಅದ್ವೈತ ಸಿದ್ಧಾಂತವನ್ನಾಗಲಿ ಒಂದನ್ನೇ ಪ್ರತಿಪಾದಿಸುತ್ತವೆ. ಆದರೆ ಶಿವಾಗಮ ಶಾಸ್ತ್ರಗಳು ದ್ವೈತ ಹಾಗೂ ಅದ್ವೈತ ಸಿದ್ಧಾಂತಗಳನ್ನು ಸಮನ್ವಯಿಸಿಕೊಂಡು ಸಕಲಾರ್ಥವನ್ನು ಸಾರುವದರಿಂದ ಇವು ಸಮಸ್ತ ವೇದಾರ್ಥವೇ ಆಗಿದ್ದು ಯಾವಾಗಲೂ ವೇದದಂತೆ ಪ್ರಮಾಣವಾಗಿವೆ ಎಂದು ಹೇಳಿದ್ದಾರೆ.

ವೇದ ಮತ್ತು ಆಗಮಗಳೆರಡೂ ಅಪೌರುಷೇಯ ಪುರಾತನರಾದ ಋಷಿಗಳು ಸತ್ತ್ವೋದ್ರೇಕದ ಸ್ಥಿತಿಯಲ್ಲಿದ್ದಾಗ ಸಾಕ್ಷಾತ್ಕರಿಸಿಕೊಂಡ ಸತ್ಯ ತತ್ವಗಳು. ಅವುಗಳ ಸಂಕಲನಗಳೇ ವೇದಗಳು. ಹಾಗೆಯೇ ಪರಮೇಶ್ವರನ ಅನುಗ್ರಹಕ್ಕೆ ಪಾತ್ರರಾದ ಜ್ಞಾನಿಗಳಿಗೆ ಗೋಚರವಾಗಿ ಪರಂಪರೆಯಲ್ಲಿ ಬಂದ ಜ್ಞಾನವೇ ಆಗಮವಾಯಿತು.

ಮದರಾಸಿನಲ್ಲಿ ಪ್ರಕಟವಾಗುತ್ತಿದ್ದ "ಸಿದ್ಧಾಂತ ದೀಪಿಕೆ" ಎಂಬ ಆಂಗ್ಲ ಮಾಸಪತ್ರಿಕೆಯ ೭ನೆಯ ಭಾಗ (೧೯೦೬–೧೯೦೭ ನೇ ಇಸ್ವಿ)ದ ೧೪೭ ನೆಯ ಪುಟದಲ್ಲಿ ಹೀಗೆ ಬರೆಯಲ್ಪಟ್ಟಿರುವುದು– "ಶಿವಜ್ಞಾನ ಸಿದ್ಧಿಯಾರ್" ಎಂಬ ಹೆಸರುಳ್ಳ ಅರುಲನಂದಿ ಶಿವಾಚಾರ್ಯರು ಮಾಡಿರುವ ತಮಿಳು ಗ್ರಂಥದ ೮ನೆಯ ಸೂತ್ರದ ೧೩–೧೫ ನೆಯ ಪದ್ಯಗಳ ಅರ್ಥವು ಹೀಗೆ ಇರುತ್ತದೆ:

The only real books are the Vedas and Saivagamas. All other books are derived from these. These two books were eternally revealed by the Perfect God. Of these the Vedas are general and given out for all. The Agamas are special and revealed for the benefit of the blessed and they contain the essential truth of the

೭೪. ಶ್ರೀಕಂಠ ಭಾಷ್ಯ ೨,೨,೨೭

೭೫. ಸಿದ್ಧಾಂತಶಿಖಾಮಣಿ, ಪಂಚಾಚಾರ್ಯರ ಪ್ರೇಸ್. ಮೈಸೂರ ೫. ೭–೮

Veda and Vedanta. Hence all other books are purva paksha and the Saivagamas alone form the Siddhanta.

ಈ ಉಲ್ಲೇಖದಂತೆ ವೇದಗಳು ಮತ್ತು ಶಿವಾಗಮಗಳು ಮಾತ್ರ ನಿಜವಾದ (ಮೂಲ) ಪುಸ್ತಕಗಳು. ಇತರ ಪುಸ್ತಕಗಳೆಲ್ಲವೂ ಇವುಗಳಿಂದ ಹುಟ್ಟಿವೆ. ಈ ಎರಡೂ ಭಾಗಗಳು ಪೂರ್ವದಲ್ಲಿ ಮಹಾದೇವನಿಂದ ಬಂದವುಗಳು. ಇವುಗಳಲ್ಲಿ ವೇದಗಳು ಸಾಮಾನ್ಯವಾದವು; ಎಲ್ಲರ ಶ್ರೇಯಸ್ಸಿಗಾಗಿ ಪ್ರಕಟವಾದ ಆಗಮಗಳು ವಿಶೇಷ ಗ್ರಂಥಗಳು. ಇವು ಆ ಮಹಾದೇವನ ದಯೆಯನ್ನು ಪಡೆದವರ ಉಪಯೋಗಕ್ಕಾಗಿ ಪ್ರಕಟವಾದವುಗಳು. ಈ ಆಗಮಗಳು ವೇದ ಮತ್ತು ವೇದಾಂತಗಳ ಸಾರವಾದ ನಿಜತತ್ವವನ್ನು ಒಳಗೊಂಡಿವೆ; ಆದ್ದರಿಂದ ಇತರ ಪುಸ್ತಕಗಳು ಪೂರ್ವಪಕ್ಷವಾದರೆ ಶಿವಾಗಮಗಳೇ ಸಿದ್ಧಾಂತ (ನಿರ್ಣಯ) ರೂಪವಾಗಿವೆ.

ಕಾಕಬೋಡಾಮಣಿ ಎಂಬ ತಂತ್ರವು ಆಗಮಗಳು ವೇದಗಳಿಗಿಂತ ಶ್ರೇಷ್ಠವಾದವೆಂಬುದನ್ನು ಹೀಗೆ ಸ್ಪಷ್ಟಪಡಿಸುತ್ತದೆ. 'ವೇದಾನಾಂ ಚವಯೋಽರ್ಥೇನನ ಸಿದ್ಧಿಸ್ತೇನ ಜಾಯತೇ'[೭೬] ಇದಲ್ಲದೇ ಕುಲಾರ್ಣವ ತಂತ್ರ ಮತ್ತು ಬ್ರಹ್ಮಜ್ಞಾನ ತಂತ್ರ ಇವುಗಳು ಆಗಮಗಳ ಘನತೆ ಗೌರವಗಳು ವೇದಗಳಿಗಿಂತಲೂ ಅಧಿಕತರವಾಗಿವೆಯೆಂದು ಕೆಳಗಿನಂತೆ ಅಭಿಪ್ರಾಯವಿತ್ತಿವೆ.

ವೇದ ಶಾಸ್ತ್ರ ಪುರಾಣಾನಿ ಸಾಮನ್ಯಗಣಿಕಾ ಇವ
ಯಾ ಪುನಶ್ಯಾಂಭವೀ ವಿದ್ಯಾ ಗುಪ್ತಾಕುಲವಧೂರಿವ
ಪ್ರಕಾಶೇ ಪ್ರಾಣಹಾನಿಃ ಸ್ಯಾತ್ ಸತ್ಯಂ ನ ಸಂಶಯಃ[೭೭]

ವೇದ ಶಾಸ್ತ್ರ ಪುರಾಣಗಳನ್ನು ಗಣಿಕಾ ಸ್ತ್ರೀಯರಿಗೂ, ಆಗಮಗಳನ್ನು ಗುಪ್ತ ಕುಲವಧುವಿಗೂ ಹೋಲಿಸಿರುವುದು ಆಶ್ಚರ್ಯವೆನಿಸುವಂತಿದೆ. ಅಂದರೆ ವೇದ ಶಾಸ್ತ್ರ ಪುರಾಣಗಳು ಹೆಚ್ಚು ಪ್ರಕಟವಾಗಿ ವಾಚಾಳಿಯಾಗಿದ್ದವು ಆದರೆ ಆಗಮಗಳು ಗುಪ್ತವಾಗಿ ಮೌನವಾಗಿರುತ್ತಿದ್ದವು ಎಂದರ್ಥವಾಗುತ್ತದೆ. ಇದರಿಂದ ಆಗಮಗಳ ಪವಿತ್ರ ಪ್ರಾಮಾಣ್ಯ ಒಂದುಕಾಲಕ್ಕೆ ಅಭಾದಿತವಾಗಿದ್ದುದು ಸ್ಪಷ್ಟವಾಗುತ್ತದೆ.

೨.೭.೧ ಶಿವಾಗಮಗಳು ಮತ್ತು ಉಪನಿಷತ್ತು

'Agamic literature is as ancient as the vedic and surely for anterior to the smriti literature'.

ಆಗಮಿಕ ಸಾಹಿತ್ಯವು ವೈದಿಕ ಸಾಹಿತ್ಯದಷ್ಟೇ ಪ್ರಾಚೀನವಾದದ್ದು. ಸ್ಮೃತಿ ಸಾಹಿತ್ಯಕ್ಕಿಂತ ಬಹಳ ಹಿಂದಿನದು ಎಂದು ಹೇಳಿರುವದು ಐತಿಹಾಸಿಕ ಸತ್ಯ. ಪ್ರಾಚೀನವಾದ ಶಿವಾಗಮಗಳು ಉಪನಿಷತ್ತುಗಳ ಮೇಲೆ ಪ್ರಭಾವ ಬೀರಿವೆ.

೭೬. ಡಾ. ಆರ್. ಸಿ. ಹಿರೇಮಠರವರ ಮಹಾಯಾತ್ರೆ ಕೃತಿಯ ಪುಟ ೭೯ ರಲ್ಲಿ
೭೭. ಡಾ. ಆರ್. ಸಿ. ಹಿರೇಮಠರವರ ಮಹಾಯಾತ್ರೆ ಕೃತಿಯ ಪುಟ ೭೯ ರಲ್ಲಿ

The shivagamas display a high standard of philosophy and their influence can be traced in the Brahma sutra and also upon Yogasutra.

ಶಿವಾಗಮಗಳು ಬ್ರಹ್ಮಸೂತ್ರ ಮತ್ತು ಯೋಗಸೂತ್ರಗಳಂಥಹ ಗ್ರಂಥಗಳ ಮೇಲೆ ಪ್ರಭಾವ ಬೀರಬಲ್ಲ ಗ್ರಂಥಗಳಾಗಿದ್ದವೆಂಬ ಮಾತು ಗಮನಾರ್ಹವಾಗಿದೆ. ವ್ಯಕ್ತಿ ಸೃಷ್ಟಿಯ ಕಾಲದಲ್ಲಿ ಮೂರು ತತ್ತ್ವಗಳು ಹೇಗೆ ಮಿಲಿತವಾದುವೆಂಬುದನ್ನು ಛಾಂದೋಗ್ಯೋಪನಿಷತ್ತು ತಿಳಿಸುತ್ತದೆ. ಆದರೆ ಪಂಚೀಕರಣದ ವಿಷಯವನ್ನು ಎತ್ತುವುದೇ ಇಲ್ಲ. ವಿವರಣೆ ದೂರ ಉಳಿಯಿತು. ಈ ವಿವರ ತೈತ್ತಿರೀಯ ಉಪನಿಷತ್ತಿನಲ್ಲಿ ಬರುತ್ತದೆ. ಅಲ್ಲಿಯೂ ಮನಸ್ಸು, ಬುದ್ಧಿ, ಗುಣ ಇತ್ಯಾದಿಗಳ ವಿವರ ಕಾಣಬರುವುದಿಲ್ಲ. ಆದರೆ ಶಿವಾಗಮಗಳು ಮಾತ್ರ ಸೃಷ್ಟಿಯ ಉಗಮ, ವಿಕಾಸಗಳನ್ನು ಪೂರ್ತಿಯಾಗಿ ವಿವರಿಸುತ್ತವೆ. ಉದಾಹರಣೆಗೆಂದು ಪೌಷ್ಕರಾಗಮದ ಮೊದಲಿನ ಆರುಪಟಲಗಳನ್ನು ನೋಡಬಹುದು. ಶಿವಾಗಮಗಳ ಪರಿಜ್ಞಾನವಿಲ್ಲದೆ ಶ್ವೇತಾಶ್ವತರೋಪನಿಷತ್ತಿನ ಅರ್ಥವನ್ನು ಪೂರ್ತಿಯಾಗಿ ಮಾಡಿಕೊಳ್ಳಲು ಸಾಧ್ಯವಾಗದು ಎಂಬುದನ್ನು ಹಲವು ಉಲ್ಲೇಖಗಳೊಂದಿಗೆ ಡಾ. ಆರ್. ಸಿ. ಹಿರೇಮಠರವರು[೭೮] ವಿವರಿಸಿರುವರು.

ವೀರಶೈವ ತತ್ವಪ್ರಕಾಶ ಗ್ರಂಥದಲ್ಲಿ ಶ್ರೀ ಶಿ.ಶಿ.ಬಸವನಾಳರವರು ಶ್ವೇತಾಶ್ವೇತರೋಪನಿಷತ್ತಿನ ೫ ನೇ ಅಧ್ಯಾಯದಲ್ಲಿ ಪ್ರತಿಪಾದಿತವಾದ ವಿಷಯದ ಮೇಲೆ ಮೃಗೇಂದ್ರಾಗಮ, ವಿಶ್ವಸಾರೋತ್ತರಾಗಮ, ಸ್ವಾಯಂಭುವಾಗಮ, ರೌರವಾಗಮಗಳ ಮಾಯಾದಿತತ್ವವು ಪ್ರಭಾವ ಬೀರಿರುವುದನ್ನು ಅನೇಕ ಶ್ಲೋಕಗಳ ಉಲ್ಲೇಖದೊಂದಿಗೆ ವಿವರಿಸಿ[೭೯] ಶ್ವೇತಾಶ್ವತರೋಪನಿಷತ್ತಿನಲ್ಲಿ ಶಿವಸಿದ್ಧಾಂತದ ಕುರುಹುಗಳು ಕಂಡು ಬರುವುದರಿಂದ ಶಿವಾಗಮಗಳು ಅತೀ ಪ್ರಾಚೀನವಾದುವೆಂದು ಅರಿಕೆಯಾಗದಿರದೆಂದು ಅಭಿಪ್ರಾಯ ಮಂಡಿಸಿರುವರು.

೨.೭.೨ ಶಿವಾಗಮಗಳು ಮತ್ತು ಭಗವದ್ಗೀತೆ[೮೦]

ಭಗವದ್ಗೀತೆ ಮತ್ತು ಶಿವಾಗಮಗಳನ್ನು ಅನುಲಕ್ಷಿಸಲಾಗಿ ಅವುಗಳಲ್ಲಿ ವಿಶೇಷ ಸಾಮ್ಯ ಕಂಡು ಬರುತ್ತದೆ. ಅನೇಕ ಶ್ಲೋಕಗಳು ಇವೆರಡೂ ಗ್ರಂಥಗಳಲ್ಲಿ ನೂರಾರು ಕಡೆಗೆ ಕಂಡು ಬರುತ್ತವೆ. ಬಹು ಸಂಖ್ಯೆಯ ಶ್ಲೋಕಗಳಲ್ಲಿ ಒಂದೆರಡು ಶಬ್ದ ಬಿಟ್ಟರೆ ಮಿಕ್ಕದೆಲ್ಲ ಒಂದೇ ತೆರನಾಗಿವೆ. ಅವುಗಳು ಇಂತಿವೆ.

---

೭೮. ಡಾ. ಆರ್. ಸಿ. ಹಿರೇಮಠರವರ ಮಹಾಯಾತ್ರೆ ಕೃತಿಯ ಪುಟ ೫೭ ರಲ್ಲಿ

೭೯. ವೀರಶೈವ ತತ್ವಪ್ರಕಾಶ ಸಂ. ಶಿ. ಶಿ. ಬಸವನಾಳ ಲಿಂಗರಾಜ ಕಾಲೇಜ, ಬೆಳಗಾಂ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ ೧೯೪೧ ಪುಟ ೪೮

೮೦. ಡಾ. ಆರ್. ಸಿ. ಹಿರೇಮಠರವರ ಮಹಾಯಾತ್ರೆ ಪುಟ ೪೬–೬೬ ರಲ್ಲಿ ಹಾಗೂ ಶಿವಾಗಮಸೌರಭದ ಅನುಭಂದ ೩, ಪುಟ ೫೪–೬೭ ರಲ್ಲಿ ,ಮತ್ತು Shivagamas – S.D.Pavate, Part 2, page 41–56ರಲ್ಲಿಯ ವಿಷಯವನ್ನು ಕ್ರೋಢೀಕರಿಸಿ ಪ್ರತಿಪಾದಿಸಲಾಗಿದೆ.

ಭಗವದ್ಗೀತೆ			ಶಿವಾಗಮಗಳು			
ಅಧ್ಯಾಯ	ಶ್ಲೋಕಸಂಖ್ಯೆ	ಶ್ಲೋಕ	ಶಿವಾಗಮ	ಪಟಲ	ಶ್ಲೋಕಸಂಖ್ಯೆ	ಶ್ಲೋಕ
೨	೨೦	ನ ಜಾಯತೇ ಮ್ರಿಯತೇ ವಾ ಕದಾಚಿ ನ್ನಾಯಂ ಭೂತ್ವಾ ಭವಿತಾ ನ ಭೂಯಃ ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ	ಪಾರಮೇಶ್ವರಾಗಮ	೨೧	೫೭	ನ ಜಾಯತೇ ನ ಮ್ರಿಯತೇ ಕದಾಚಿನ್ನಾ ಯಂ ನ ಭೂತೋ ಭವಿತಾ ವಾ ನ ಭೂಯಃ ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ
೨	೩೯	ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ	ಪಾರಮೇಶ್ವರ	೧	೫೭	ಮಮ ಪ್ರಸಾದಾಯೋಗಜ್ಞಃ ಕರ್ಮಬಂಧಂ ಪ್ರಹಾಸ್ಯತಿ
೨	೪೫	ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋಭವಾರ್ಜನ	ಪಾರಮೇಶ್ವರ	೭	೨೫	ತ್ರೈಗುಣ್ಯವಿಷಯಾನ್ ದೇವಾನ್ ತ್ಯಕ್ತ್ವಾಲಿಂಗಂಚ ನಿರ್ಗುಣಂ
೨	೪೭	ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ಮಾ ಕರ್ಮಫಲಹೇತುರ್ಭೂ ಮಾ ತೇ ಸಂಗೋಸ್ತ್ವ ಕರ್ಮಣಿ	ಪಾರಮೇಶ್ವರ	೭	೪೪	ಕೃತ್ವಾ ವಾ ಕರ್ಮಸಫಲಮನಪೇತೋ ಮಹತ್ ಫಲಂ ನಿವೇಶಯೇಚ್ಛಿವೇ ಚಿತ್ತಂಸಂಯತಾನ್‌ಮಾನಿರಾಕುಲಃ
೨	೫೯	ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ	ದೇವೀಕಾಲೋತ್ತರಾಗಮ	ಜ್ಞಾನಾಚಾರಪಟಲ	೫೨	ಆಶರೀರಂ ಯದಾತ್ಮಾನಂ ಪಶ್ಯತಿ ಜ್ಞಾನಚಕ್ಷುಃ ತಧಾ ಭವತಿ ಶಾಂತಾತ್ಮ ಸರ್ವತೋಽ ಪಿ ಗತಸ್ಪೃಹಃ
೨	೬೨, ೬೩	ಧ್ಯಾಯತೋ ವಿಷಯಾನ್ ಪುಂಸಸ್ಸಂಗಸ್ತೇಷೂಪಜಾಯತೇ। ಸಂಗಾತ್ ಸಂಜಾಯತೇ ಕಾಮಃ॥ ಕಾಮಾತ್ ಕ್ರೋಧೋಽಭಿಜಾಯತೇ॥ ಕ್ರೋಧಾದ್‌ಭವತಿ ಸಂಮೋಹಃ । ಸಂಮೋಹಾತ್‌ಸ್ಮೃತಿ ವಿಭ್ರಮಃ ಸ್ಮೃತಿ ಭ್ರಂಶಾದ್‌ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ	ಪಾರಮೇಶ್ವರ	೭	೫೧,೫೨,೫೩	ನ ಯಸ್ಯ ನಿರ್ಮಾಲಾ ಬುದ್ಧಿಃ ಸಧ್ಯಾಯೇತ್ ವಿಷಯಾನ್ ಸದಾ। ಧ್ಯಾಯತೋ ವಿಷಯಾನ್ ಪುಂಸಸ್ಸಂಗಸ್ತೇಷೂಪಜಾಯತೇ। ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ। । ಕ್ರೋಧಾದ್‌ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ। ಸ್ಮೃತಿ ಭ್ರಂಶಾತ್ ಬುದ್ಧಿನಾಶೋತ್ ಪ್ರಣಶ್ಯತಿ।
೩	೧೭	ಯಸ್ತ್ವಾತ್ಮರತಿರೇವ ಸ್ಯಾದತ್ಮ ತೃಪ್ತಶ್ಚ ಮಾನವಃ ಅತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ	ದೇವೀಕಾಲೋತ್ತರಾಗಮ			ಶಿವಜ್ಞಾನಾಮೃತಂ ಪೀತ್ವಾ ಭಕ್ತ್ಯಾ ಪರವಶಂಗತಃ ಅಂತರ್ನಿವಿಷ್ಟ ಚಿತ್ತಸ್ಯ ಕರ್ಮಣಾಸ್ಯ ಕಿಂ ಭವೇತ್

೩	೨೭	ಪ್ರಕೃತೇಃ ಕ್ರಿಯಾಮಾಣಾನಿ ಗುಣೈಃ ಕರ್ಮಾಣಿ ಸರ್ವಶ ಅಹಂಕಾರ ವಿಮೂಢಾತ್ಮ ಕರ್ತಾಹಮಿತಿಮನ್ಯತೇ	ಪಾರಮೇಶ್ವರ	೭	೭೫	ಪರಿತ್ಯಜ್ಯಾಥ ಮಹತಾಽಹಂಕಾರಂ ಸ ಶಿವೋ ಭವೇತ್ । ಊರ್ಮಿವರ್ಗ ಭಯಂಯಸ್ಯ ನ ಸ ಮುಕ್ತೋ ನ ಸಂಶಯಃ
೪	೧	ಇಮಂ ದಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಂ ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್	ಪಾರಮೇಶ್ವರ	೧೧	೧೪	ಏವಮೇವ ಪುರಾ ದೇವಿ ಪ್ರಲಯೇ ಸತಿ ಸಂಭವೇ ವಟಪತರಶಯೀ ಕೃಷ್ಣೋ ವೇಧಸಾ ಮಾಮಪೃಚ್ಛತ
೪	೨	ಏವಂ ಪರಂಪರಾಪ್ರಾಪ್ತಮಿಮಂರಾಜರ್ಷ ಯೋರ್ವಿದುಃ ಸಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ಸ ಏವಾಯಂ ಮಯಾ ತೇಽದ್ಯಯೋಗಃ ಪ್ರೋಕ್ತಃ ಪುರಾತನಃ	ಪಾರಮೇಶ್ವರಾಗಮ	೧೧	೧೭	ಉಪದಿಷ್ಟಂ ಮಯಾ ತಸ್ಮೈ ಜ್ಞಾನಂಯೋಗಂ ಸ್ವರೂಪತಃ। ತದೇತದೇವ ವಕ್ಷ್ಯಾಮಿ ಶೃಣು ದತ್ತಮನಾಃ ಶಿವೇ
೪	೭	ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ	ಪಾರಮೇಶ್ವರ	೧೧	೩೦	ಶಿವಭಕ್ತಾ ಹಿತಾರ್ಥಯ ಮಾನುಷಂ ಭಾವ ಮಾಶ್ರಿತಾಃ । ರುದ್ರಲೋಕಾತ್ ಪರಿಭ್ರಷ್ಟಾಸ್ತೇ ರುದ್ರಾ ನಾತ್ರ ಸಂಶಯಃ
೪	೧೧	ಯೇ ಯಥಾ ಮಾಂ ಪ್ರದ್ಯಂತೇ ತಾಂಸ್ತಥೈವ ಭಜಾಮ್ಯಹಂ ಮಮ ವರ್ತ್ಮಾನುವರ್ತಂತೇ ಸ ಮನುಷ್ಯಃ ಪಾರ್ಥ ಸರ್ವಶಃ	ಕಾಮಿಕಾಗಮ	ಕ್ರಿಯಾಚರ್ನಾ ಪಟಲ		ಯೇನ ಯೇನ ಹಿ ಭಾವೇನ ಸಾಧಕಃ ಸಂಸ್ಮರೇತ್ ತಥಾ ತಸ್ಯ ತನ್ಮಯತಾಂ ಚಿಂತಾಮಣಿರಿವೇಶ್ವರಃ
೪	೩೫	ಯದ್‌ಜ್ಞಾತ್ವಾ ನಪುರ್ಮೋಽಹಮೇವಂ ಯಾ ಸ್ಯಾಮಿ ಪಾಂಡವ । ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ	ಪಾರಮೇಶ್ವರ	೭	ಶ್ಲೋ. ೫೯	ತೇನ ಶೀಘ್ರಂ ಗಿರಿಸುತೇ ಸಮ್ಯಗ್ ಜ್ಞಾನಂ ತತೋಭವೇತ್ ಯೇನ ಭೂತಾನ್ಯಶೇಷಾಣಿ ದ್ರಕ್ಷ್ಯತ್ಯಾತ್ಮನ್ಯಥೋ ಮಯಿ
೪	೩೭	ಯಥೈಧಾಂಸಿ ಸಮಿದ್ಧೋಗ್ನಿರ್ಭ ಸ್ಮಸಾತ್ ಕುರುತೇಽರ್ಜುನ ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮ ಸಾತ್ ಕುರುತೇ ತಥಾ	ಪಾರಮೇಶ್ವರಾಗಮ	೧೧	೮೧	ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರುತೇ ಶಿವೇ ತಥೈವ ನಿರ್ದಹೇದಿಂಧಂ ವೀರಶೈವವ್ರತಾನಲಃ
೫	೧೦	ಬ್ರಹ್ಮಣ್ಯಾಧಾಯ ಕರ್ಮಣಿ ಸಂಗಂತ್ಯಕ್ತ್ವಾ ಕರೋತಿ ಯಃ	ಪಾರಮೇಶ್ವರ	೧೮	೫೫	ಕೃತ್ಯಮಿತ್ಯೇವ ನಿಷ್ಕರ್ಮೋ ಯಶ್ವರೇದ್ ವೀರಶೈವಃ ಶಿವಾರ್ಪಿತಾತ್ಮಸತತಂ ನತೇನಸಚಿದೃಶಂ ಕ್ವಚಿತ್
೫	೧೩	ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ	ಪಾರಮೇಶ್ವರ	೭	ಶ್ಲೋ. ೯೧	ನಿಷ್ಠಾಭೇದೇನ ಮರ್ತ್ಯಾನಾಂ ಭೇದಾವಂತರಭೇದತಃ ಕಲ್ಪತಾಹಿಮಯಾ ಭೇದಾಜ್ಞಾನಮೇಕಂ ಹಿ ಕಾರಣಂ ॥
೫	೧೮	ವಿದ್ಯಾವಿನಯಸಂಪನ್ನೆ ಬ್ರಾಹ್ಮಣೇ ಗವಿ ಹಸ್ತಿನಿ ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ	ಪಾರಮೇಶ್ವರ	೬	೯೩, ೯೪	ನ ಮಾತಾ ನ ಪಿತಾ ಭಾರ್ಯಾ ನ ಚಾಂಡಾಲೋ ನ ಭೂಸುರಃ । ನ ಗೌರ್ನ ಶುನಕೋ ಹಸ್ತೀ ಗರ್ದ ಭೋ ವಾಪಿ ಭೇದತಃ । ನೋತ್ತಮಂ ಆತ್ಮಜ್ಞಾನಾವ ಧೂತಸ್ಯ ಸಮಮೇವಾಖಿಲಂ ಶಿವೇ
೫	೨೩	ಶಕ್ನೋತೀಹೈವ ಯಂ ಸೋಢುಂ ಪ್ರಾಕ್‌ಶರೀರ ವಿಮೋಕ್ಷಣಾತ್ ಕಾಮಕ್ರೋಧೋದ್ಭವಂ ವೇಗಂ ಸ ಯುಕ್ತಃ ಸುಖೀ ನರಃ	ಪಾರಮೇಶ್ವರ	೬	೫೫	ಶಕ್ನೋತೀಹೈವ ಯಂ ಸೋಢುಂ ಪ್ರಾಕ್‌ಶರೀರ ವಿಮೋಕ್ಷಣಾತ್ । ಕಾಮಕ್ರೋಧೋದ್ಭವಂ ಯೋಗಂ ಸ ಯಾತಿ ಲಘುಮಾಂ ಶಿವೇ

೫	೨೬	ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತ ಚೇತಸಾಮ್ ಅಭಿತೋ ಬ್ರಹ್ಮ ನಿರ್ವಾಣಂ ವರ್ತತೇ ವಿದಿತಾತ್ಮನಾಂ	ಪಾರಮೇಶ್ವರ	೧೦	೬೬	ರಾಗದ್ವೇಷಮುಕ್ತಾನಾಂ ಲಿಂಗಿನಾಂ ವೀರಶೈವಿನಾಂ ಅಭಿತಃ ಶಿವ ಕೈವಲ್ಯಂ ಕರಸ್ಥಂ ವಿದಿತಾತ್ಮನಾಮ್
೬	೮	ಜ್ಞಾನವಿಜ್ಞಾನ ತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮ ಕಾಂಚನಂ	ಪಾರಮೇಶ್ವರ	೮	೮	ಈಷಣತ್ರಯನಿರ್ಮುಕ್ತಾ ಜ್ಞಾನವಿಜ್ಞಾನತತ್ಪರಾಃ ದೃಢವೈರಾಗ್ಯ ಸಂಪನ್ನಾ ವೀರಾಸ್ತೇ ಶಿವಯೋಗಿನಃ
೬	೯	ಸುಹೃನ್ಮಿತ್ರಾರ್ಯುರ್ದಾಸೀನ ಮಧ್ಯಸ್ಥ ದ್ವೇಷ್ಯ ಬಂಧುಷು । ಸಾಧುಷ್ವಪಿ ಚ ಪಾಪೇಷು ಸಮ ಬುದ್ಧಿರ್ವಿಶಿಷ್ಯತೇ	ಪಾರಮೇಶ್ವರ	೧೦	೬೨, ೬೩	ಸುಹೃನ್ಮಿತ್ರಾರ್ಯುರ್ದಾಸೀನ ಮಧ್ಯಸ್ಥ ದ್ವೇಷ್ಯ ಬಂಧುಷು । ಸಾಧುಷ್ವಪಿ ಚ ಪಾಪೇಷು ದುರ್ಜನೇಷು ಜನೇಷ್ವಪಿ ಸರ್ವತ್ರ ಭಾವಯೇದೇಕಂ ವೀರಶೈವಮತೇ ಶಿವೇ
೬	೧೦	ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ	ಪಾರಮೇಶ್ವರ	೧೦	೧೯	ವಿವಿಕ್ತ ದೇಶಮಾಶ್ರಿತ್ಯ ಧ್ಯಾನಮೇವ ಸದಾಭ್ಯಸೇತ್
೬	೧೧	ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಂ	ಪಾರಮೇಶ್ವರ	೧೦	೨೦	ಪಾರ್ಷ್ಣಿಪಾಣಿದ್ವಯೋಭೂತ್ವಾ ನಾಸಾಗ್ರೇಗ? ತಿಲೋಚನಃ। ಆತಿಷ್ಠೇತ್ ಸ್ಥಾಣುವತ್ ಸ್ವಸ್ಥೋ। ಯಥಾದೀಪೋನಿವಾತಕಃ ಸಮಂಕಾಯಶಿರೋಗ್ರೀವಂ ಧಾರಯನ್ನಚರಂ ಸ್ಥಿರಃ
೬	೧೭	ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ಯುಕ್ತ ಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ	ಪಾರಮೇಶ್ವರ	೧೦	೨೨	ಯುಕ್ತಾಹಾರವಿಹಾರಶ್ಚ ಯುಕ್ತ ಚೇಷ್ಟಶ್ಚ ಕರ್ಮಸು ಯುಕ್ತ ನಿದ್ರಾವಬೋಧಶ್ಚ ಸರ್ವಾಯಾಸ ವಿವರ್ಜಿತಃ
೬	೨೯	ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ	ಪಾರಮೇಶ್ವರ	೭೧	೧೦೨	ಜಗದಾತ್ಮನಿ ಸಂಪಶ್ಯನ್ನಾತ್ಮಾನಂ ಜಗದೀಕ್ಷಯನ್? ಜಗದಾತ್ಮ ನಾಮೀಶಾನಿ ಪಶ್ಯೇನ್ಮಯಿ ಚಿದಾತ್ಮ ಕಂ
೬	೩೭	ಅಯತಿಃ ಶ್ರದ್ಧಯೋಪೇತೋ ಯೋಗಾಚ್ಚಲಿತಮಾನಸಃ ಅಪ್ರಾಪ್ಯ ಯೋಗಸಂಸಿದ್ಧಿಂ ಕಾಂ ಗತಿಂ ಕೃಷ್ಣ ಗಚ್ಛತಿ ।	ಪಾರಮೇಶ್ವರ	೮	೪	ಭಕ್ತ್ಯಾ ಮದಾಶ್ರಯಂ ಕೃತ್ವಾ ವೈರಾಗ್ಯ ಶಿಥಿಲೇಂದ್ರಿಯಃ ಪುನರಾಗತ್ಯ ವಿಷಯಾನ್ ಕಾಂ ಗತಿಂ ಶಿವ ಗಚ್ಛತಿ
೬	೪೦	ಪಾರ್ಥ ನೈವೇಹ ನಾಮುತ್ರ ವಿನಾಶಸ್ತವ ವಿದ್ಯತೇ ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ	ಪಾರಮೇಶ್ವರ	೮	೮೨	ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ದೇವಿ ಗಚ್ಛತಿ ಧೃತ್ವಾ ಲಿಂಗಂ ಮಮ ಶಿವೇ ಕಥಂ ಯಾಸ್ಯತಿ
೬	೪೧	ಪ್ರಾಪ್ಯ ಪುಣ್ಯಕೃತಾಲ್ಲೋಕಾನುಷಿತ್ವಾ ಶಾಶ್ವತೀಃ ಸ್ಸಮಾಃ ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ	ಪಾರಮೇಶ್ವರ	೮	೮೩	ಪ್ರಾಪ್ಯ ಪುಣ್ಯಕೃತಾಲ್ಲೋಕಾನುಷಿತ್ವಾ ಶಾಶ್ವತೀಃ ಗೃಹೇಷು ಲಿಂಗಿನಾಮೇವ ವ್ರತಭ್ರಷ್ಟೋಽಭಿಜಾಯತೇ
೬	೪೨	ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಂ ಏತದ್ಧಿ ದುರ್ಲಭತರ ಲೋಕೇ ಜನ್ಮ ಯದೀದೃಶಂ	ಪಾರಮೇಶ್ವರ	೮	೮೪	ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಂ ತತ್ರ ತಂ ಬುದ್ಧಿಸಂಯೋಗಂ ಲಭತೇಽ ಪ್ಪೌರ್ವದೈಹಿಕಂ?

೬	೪೩	ತತ್ರತಂ ಬುದ್ಧಿ ಸಂಯೋಗಂ ಲಭತೇಪೌರ್ವದೈಹಿಕಂ ಯತತೇ ಚ ತತೋ ಭೂಯ ಃ ಸಂಸಿದ್ಧೌ ಕುರುನಂದನ॥	ಪಾರಮೇಶ್ವರ	೮	೮೫	ಯತತೇ ಚ ತತೋ ಭೂಯಃ ಸಂಸಿದ್ಧೌ ಗಿರಿನಂದನೇ ಕ್ರಮೇಣ ಕುರುತೇ ವೀರಶೈವೇ ವೀರಸಮಾಶ್ರಂ
೬	೪೫	ಅನೇಕ ಜನ್ಮಸಂಸಿದ್ಧಸ್ತತೋ ಯಾತಿ ಪರಾಂಗತಿಮ್	ಪಾರಮೇಶ್ವರ	೮	೮೭	ಅನೇಕ ಜನ್ಮ ಸಂಸಿದ್ಧಸ್ತತೋ ಯಾತಿ ಪರಾಂ ಗತಿಂ
೬	೪೬	ತಪಸ್ವಿಭ್ಯೋಽಧಿಕೋ ಯೋಗಿ ಜ್ಞಾನಿಭ್ಯೋಽಪಿ ಮತೋಽಧಿಕ ಕರ್ಮಿಭ್ಯಶ್ಚಾಧಿಕೋ ತಸ್ಮಾತ್ ಯೋಗೀ ಭವಾರ್ಜುನ	ಪಾರಮೇಶ್ವರ			ತಪಸ್ವಿಭ್ಯೋಽಧಿಕೋ ಲಿಂಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ಕರ್ಮಿಭ್ಯಶ್ಚಾಧಿಯೋಗಿಭ್ಯಃ? ಶಿವಲಿಂಗೋ ವಿಶಿಷ್ಯತೇ
೭	೩	ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ ಯತತಿ ಸಿದ್ಧಯೇ ಯತತಾಮಪಿಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ	ಸೂಕ್ಷ್ಮಾಗಮ	೬		ನಿಷ್ಕಾಮಕರ್ಮ ತ್ರ್ಯಾಣಾಂ ಶ್ರೌತಸ್ಮಾರ್ತಾನನುಸಾರತಃ ಬಹೂನಾಂ ಜನ್ಮ ನಾಮಂತ್ರೇ ಜ್ಞಾನೇಧ್ಯಾನೇಭವೇನ್ನತಃ
೭	೧೩	ತ್ರಿಭಿರ್ಗುಣಮಯೈರ್ಭಾ ವೈರೇಭಿಃ ಸರ್ವಮಿದಂ ಜಗತ್ ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್	ಸೂಕ್ಷ್ಮಾಗಮ	೧೦	೨೬	ಕರ್ತಾರಮೇಕ ಜಗತಾಂ ತಥಾಪಿಮಾಯಾವೃತಾಸ್ತ್ವಾಂ ನಹಿಜಾನಂತೇನರಾಃ
೭	೧೪	ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ । ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂತರಂತಿ ತೇ	ಸೂಕ್ಷ್ಮಾಗಮ	೩	೧೦೦	ಮಹತೀಖಲು ಸಾ ಮಾಯಾ ದುಸ್ತರಾ ಸ್ತ್ರೀಗುಣಾತ್ಮಿಕಾ
೭	೧೫	ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇನರಾಧಮಾಃ। ಮಾಯಯಾಪಹೃತಜ್ಞಾನ ಅಸ್ಮರಂ ಭಾವಮಾಶ್ರಿತಾಃ	ಪಾರಮೇಶ್ವರ	೧	೯೩	(ಶಿವಜ್ಞಾನಂ) ಕಥಂ ಭವಿಷ್ಯತಿ ಶಿವೇ ವಿನಾಮತ್ ಕುರುಣಾಂನ್ನೃಣಾಂ ಕರ್ಮಪೂರಿತದೃಷ್ಟಾನಾಂ ಮನ್ ಮಾಯಾ ಮೋಹಿತಾತ್ಮನಾಂ
೭	೧೭	ಪ್ರಿಯೋಹಿ ಜ್ಞಾನಿನೋಽತ್ಯರ್ಥಮಹ ಸಚಮಮ ಪ್ರಿಯಃ	ಪಾರಮೇಶ್ವರ	೬	೨೫	ಯಸ್ಯ (ಜ್ಞಾನಿನಃ) ಪ್ರಿಯೋಹಮೀಶಾನಿಸಮಯಾ ಸೀತ್ ಪ್ರಿಯೇಯತಃ
೭	೧೯	ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ । ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ	ಪಾರಮೇಶ್ವರ	೧	೮೮	ಗತೇಷುಬಹುಸಂಖ್ಯೇಷು ದುಃಖರೂಪೇಷು ಜನ್ಮಸು । ಮತ್ಕಾರುಣ್ಯೇನ ತಸ್ಯಾಂತೇ ಜಾಯತೇ ಲಿಂಗದರ್ಶನಂ। ಅನೇಕ ಜನ್ಮನಾಮಂತೇ ಮಯಿ ಭಕ್ತಿರ್ದೃಢಾಭವೇತ್
೮	೬	ಯಂ ಯಂ ವಾಪಿ ಸ್ಮರನ್ ಭಾವಂತ್ಯಜತ್ಯಂತೇ ಕಲೇವರಮ್ । ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ	ದೇವೀಕಾಲೋತ್ತರಾಗಮ,		೨೪, ೨೫, ೨೬	ಯದ್ಯದಾಲೋಕ್ಯಯೋಜಂತುಃ ಕುರುತೇ ಕರ್ಮಸಂಚಯಂ। ತದ್ಗತಿರ್ಜಾಯತೇಯಸ್ಮಿನ್ನಿ ರಾಲೋಕಂತು ಚಿಂತಯೇತ್ । ಸರ್ವೇಕ್ಲೇಶಂ ಪರಿತ್ಯಕ್ತುಂ ಮಹಾಶೂನ್ಯಂ ವಿಚಿಂತಮೇ ಯೋಗಂ ಸಾಲಂಬನಂ ತ್ಯಕ್ತ್ವಾ ನಿಷ್ಪ್ರಪಂಚೋವಿಚಿಂತಯೇತ್॥
೯	೨೬	ಪತ್ರಂಪುಷ್ಪಂಫಲಂ ತೋಯಂ ಯೋ ಮೇಭಕ್ತ್ಯಾ ಪ್ರಯಚ್ಛತಿ । ತದಹಂ ಭಕ್ತ್ಯುಪಹತಮಶ್ನಾಮಿ ಪ್ರಯತಾತ್ಮನಃ	ಪಾರಮೇಶ್ವರಾಗಮ	೨೨	೧೨,೧೮	ಪತ್ರಂಪುಷ್ಪಂ ಫಲಂ ವನ್ಯಂ ಗ್ರಾಮ್ಯಂವಾದುರ್ಭಲೋಬ ಸಮರ್ಪಿತಂ ಚಿತಂ ಸಮಾನೀಚು ಭಕ್ತೇನಂ ಮಮತತ್ ಪಿರಯೆ॥ ಸುಗಂಧಿಃ ಶೀತಲಂ ಸ್ವಚ್ಛಂ ವಸ್ತ್ರಪ್ರತಂಪಯೋ ಬಹು ಚುಲುಕಂ ವಾ ಯಥಾಶಕ್ತಿಸ್ತದಕ್ಷೆ ಯಮದರ್ಪಿತಂ

೯	೨೭	ಯತ್ ಕರೋಷಿ ಯದಶ್ನಾಸಿ ಯಜ್ಜುಹೋಷಿದ ದಾಸಿಯತ್ । ಯತ್ ತಪಸ್ಯಸಿ ಕೌಂತೇಯ ತತ್ ಕುರು ಷ್ವಮದರ್ಪಣಂ	ಸೂಕ್ಷ್ಮಾಗಮ	೭	೫೫	ಚರಾರ್ಪಿತಂವಿನಾ ದೇವಿಯೋನು ಭುಂಕ್ತೇಸ ನಾರಕೀ ಭಕ್ಷ್ಯಂ ಭೋಜ್ಯಾದಿ ವಸ್ತೂನಿ ಯೋಭುಂಕ್ತೇ ಚ ರವರ್ಜಿಸ ಭುಂಕ್ತೇತಃ ಮಲಮಾಂಸಂ
			ಪಾರಮೇಶ್ವರ	೨೨	೩೮, ೩೫	ಭಕ್ತಪೀತಾದಿಕಂ ಸರ್ವಂಮತ್ ಪ್ರಸಾದಧಿ ಯಾಶ್ರುತೇ । ಸರ್ವಮ್ಯೆಂದ್ರಿಯಕೀಂ ವೃತ್ತಿಂ ಮತ್‌ಸೇವಾಯ್ಯೆ ನಿಯೋಜಯೇತ್ ಸಂಪ್ರಾಪ್ತ ಮಖಿಲಂ ಭೋಗಂ ಮದರ್ಥಮಿತಿಚಾರ್ಪಯೇತ್
೯	೩೦	ಅಪಿಚೇತ್ ಸು ದುರಾಚಾರೋಭಜತೇ ಮಾಮನನ್ಯಭಾಕ್ । ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋಹಿಸಃ	ಪಾರಮೇಶ್ವರ	೨೨	೯	ಅತಿಪ್ರಾಣಿವಿಹಿಂಸ್ರಂ ವಾಹ್ಯತಿಪಾತಕಕಾರಿಣಂ ಅತಿನಿಂದಿತ ಕರ್ಮಾಣಂ ಮಮಭಕ್ತಿಃ ಮನಾತಿಹಿ
೯	೩೧	ಕ್ಷಿಪ್ರಂಭವತಿಧರ್ಮಾತ್ಮಾಶಸ್ವಚ್ಛಾಂತಿಂ ನಿಗಚ್ಛತಿ ಕೌಂತೇಯ ಪ್ರತಿ ಜಾನೀಹಿ ನಮೇಭಕ್ತಃ ಪ್ರಣಶ್ಯತಿ	ಪಾರಮೇಶ್ವರ	೧	೪೨	ಅಪಿಪಾಪಶತಂ ಕೃತ್ವಾಜ್ಞಾನತೋಜ್ಞಾನತೋಽಪಿವಾ ವೀರಶೈವಮತಂಪ್ರಾಪ್ಯ ಶಿವಏವ ನ ಸಂಶಯಃ
೧೩	೩೨	ಮಾಂಹಿಪಾರ್ಥವ್ಯಪಾಶ್ರಿತ್ಯಂಯೇಽಪಿಸ್ಯುಃ ಪಾಪ ಯೋನಯಃ । ಸ್ತ್ರಿಯೋವೈಶ್ಯಸ್ತಥಾ ಶೂದ್ರಸ್ತೇಪಿ ಯಾಂತಿಪರಾಂಗತಿಂ	ಪಾರಮೇಶ್ವರ	೧೧	೧೧	ಬ್ರಾಹ್ಮಣಾಕ್ಷತ್ರೀಯಾ ವೈಶ್ಯಾಶ್ಯೂದ್ರಾಯೇಜಾನ್ಯಜಾತಂಯಃ ಲಿಂಗಧಾರಣ ಮಾತ್ರೇಣಶಿವಾಏವನಸಂಶಯಃ
೧೦	೨	ನಮೇ ವಿದುಃ ಸುರಗಣಾಃ ಪ್ರಭವಂ ನಮಹರ್ಷಯಃ ಅಹಮಾದಿರ್ಹಿದೇವಾನಾಂ ಮಹರ್ಷೀಣಾಂ ಚ ಸರ್ವಶಃ	ಪಾರಮೇಶ್ವರ	೧	೫೬	ನೈವಜಾನಂತಿಮದ್ರೂಪಂಹರಿ ಬ್ರಹಮ್ಮ ಮಹರ್ಷಯಃ ಗಜಾನನೋಽಪಿ ಸ್ಕಂದೋಽಪಿವಿನಾಮ ದ್ವಾಕ್ಯಮುತ್ತಮಂ
೧೨	೧೦, ೧೧, ೧೪, ೧೫, ೧೬, ೧೭	ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ದಿ ಮವಾಪ್ಸ್ಯಸಿ ಸರ್ವಕರ್ಮಫಲತ್ಯಾಗಂ ತತಃಕುರುಯತಾತ್ಮವಾನ್ ಮಯ್ಯರ್ಪಿತಮನೋಬುದ್ಧಿ ರ್ಯೋಮದ್ಭಕ್ತಃ ಸಮೇಪ್ರಿಯಃ । ಯಸ್ಮಾನ್ನೋದ್ವಿಜತೇ	ಪಾರಮೇಶ್ವರ	೨೨	೩೮, ೩೯	ಭಕ್ತಿಪೀಯಾಧಿಕಂ ಸರ್ವಂಮತ್ ಪ್ರಸಾದ ಧಿಯಾ ಶ್ರುತೇ । ಸರ್ವಾನ್ಯೆಂದ್ರಿಯಕೀಂ ವೃತಿಂ ಮತ್ ಸೇವಾಯ್ಯೆ ನಿಯೋಜಯೇತ್ । ಸಂಪ್ರಾಪ್ತಮಖಿಲಂ ಭೋಗ ಮದರ್ಥಮಿತಿ ಚಾರ್ಪಯೇತ್
		ಲೋಕೋಲೋಕಾನ್ನೋದ್ವೇಗ್ಯೆರ್ಮು ಕ್ಯೋಯಃ ಸರ್ವಾಚಮೇ ಪ್ರಿಯಂ ಪ್ರಾರಂಭಪರಿತ್ಯಾಗೀ ಯೋಮದ್ಭಕ್ತಃ ಸಮೇಪ್ರಿಯಃ ಯೋನಹೃಷ್ಯತಿ ನ ದ್ವೇಷ್ಟಿನ ಶೋಚತಿನಕಾಂಕ್ಷತಿ ಶುಭಾಶುಭಪರಿತ್ಯಾಗೀ ಭಕ್ತಿಮಾನ್ಯಃ ಸಮೇಪ್ರಿಯಃ	ಪಾರಮೇಶ್ವರ	೨೦	೫೩,೪೫,೪೬	ಸೋದ್ವಿಜೇತ್ ಜಿನಾತ್ ಲಿಂಗೀ ಜನಂ ಚೋದ್ವೇಜಯೇನ್ನುತು । ಹರ್ಷಾಮರ್ಷಭಯೋದ್ವೇಗವಿಮುಕ್ತಃ ಸಮದೃರ್ಕ ಶ್ಚಿಜಃ ನೈಮಿತ್ತಕಂ ಚವೈಕಾರ್ಯಂ ನಕರ್ಮಾದಿಕಥಾಪಿವಾ ನಪ್ರಾಯಶ್ಚಿತ್ತ ಮೌನ್ನತ್ಯಂ ತುರ್ಯಶೈವಸ್ಯಲಿಂಗಿನಃ ನವೈಹರ್ಷವಿಷಾದಾಭ್ಯಾಮಾಲಸ್ಯಂ ಚ ವಿಕಾರತಾ ನರ್ಥೇ ನಷ್ಟೇತು ಶೋಚೇತ ನಲಾಭೇಹರ್ಷ ಮಾವ್ರಜೇತ್
೧೨	೧೯	ತುಲ್ಯನಿಂದಾಸ್ತುತಿರ್ಮೌನೀಸಂತುಷ್ಟೋ ಯೇನ ಕೇನಚಿತ್ ಅನಿಕೇತಃ ಸ್ಥಿರಮತಿಭಕ್ತಿಮಾನ್‌ಮೇ ಪ್ರಿಯೋನರಃ	ಪಾರಮೇಶ್ವರ	೨೦		ತ್ಯಕ್ತ್ವಾ ಶೋನಿರ್ಭಯಃ ಶಾಂತೋಮೌನವಾನ್ ವಿಜಿತೇಂದ್ರಿಯಃ। ನಾಂತಗ್ರಾಮಂ ವಿಶೇಲ್ಲಿಂಗೀ ತುರ್ಯಶೈವಮತೋತ್ತಮಃ। ನೋತಿಷ್ಯೇತ ನವಂದೇತ ನಸ್ತುವಿತಾಪಿ ಚೋತ್ತಮುವಜ್ । ನದದ್ಯಾನ್ ನಚಗೃಹ್ಣೀಯಾತ್ ತುರ್ಯಶೈವಮತೋತ್ತಮಃ

೧೩	೯	ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷುನಿತ್ಯಂಚಸಮ ಚಿತ್ತತ್ವಮಿಷ್ಟಾನಿಷ್ಟೋಪಪತ್ತಿಷು	ಪಾರಮೇಶ್ವರ	೨೨	೯೨	ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು । ಸುಖ ದುಃಖಾತ್ಮ ಸಮತಾ ಪರೇಷಾಂಚ ದ್ವಿಷಾಮಪಿ
೧೬	೨೩	ಯಃಶಾಸ್ತ್ರವಿಧಿಮುತ್ಸೃಜ್ಯ ವರ್ತತೇಕಾಮಕಾರತಃ ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಂ	ಪಾರಮೇಶ್ವರ	೨	೧೦೪	ಯಃಶಾಸ್ತ್ರವಿಧಿಮುತ್ಸೃಜ್ಯ ವರ್ತತೇಕಾಮಕಾರತಃ ನಸ ಸಿದ್ಧಿಮವಾಪ್ನೋತಿನಸುಖಂ ನ ಪರಾಂಗತಿಂ
೧೬	೨೪	ತಸ್ಮಾತ್ ಶಾಸ್ತ್ರಂಪ್ರಮಾಣಂತೇ ಕಾರ್ಯಾಕಾರ್ಯವ್ಯವಸ್ಥಿತೌ। ಜ್ಞಾತ್ವಾ ಶಾಸ್ತ್ರವಿಧಾನೋಕ್ತ ಕರ್ಮ ಕರ್ತುಮಿಹಾರ್ಹಸಿ	ಪಾರಮೇಶ್ವರ	೮	೧೦೫	ತಸ್ಮಾಚ್ಛಾಸ್ತ್ರಂಪ್ರಮಾಣಂ ಹಿ ಕಾರ್ಯಾಕಾರ್ಯ ವ್ಯವಸ್ಥಿತೌ। ಜ್ಞಾತ್ವಾಶಾಸ್ತ್ರ ವಿಧಾನೋಕ್ತಂ ತತ್ತಂಕುರ್ಯಾದ್ಗುರೋರ್ಮುಖಾತ್
೧೮	೫೬	ಸರ್ವಕರ್ಮಾಣ್ಯಪಿ ಸದಾಕುರ್ವಾಣೋ ಮದ್ವ್ಯಪಾಶ್ರಯಃ। ಚೇತಸಾಸರ್ವಕರ್ಮಾಣಿಮಯಿ ಸನ್ನ್ಯಸ್ಯಮತ್ಪರಃ। ಬುದ್ಧಿಯೋಗ ಮುಪಾಶ್ರಿತ್ಯ ಮಚ್ಚಿತ್ತಃ ಸತತಂಭವ	ಸೂಕ್ಷ್ಮಾಗಮ	೬	೪	ಕೃತ್ವಾವಾಕರ್ಮಸಕಲಮನಪೇತೋಮಹಾಫಲಂ ನಿವೇಶಯೇಚ್ಛಿವೇ ಚಿತ್ತಂ ಸಯತಾತ್ಮಾ ನಿರಾಕುಲಃ
೧೮	೬೬	ಸರ್ವಧರ್ಮಾನ್ ಪರಿತ್ಯಜ್ಯಮಾಮೇಕಂ ಶರಣಂ ವ್ರಜ	ಪಾರಮೇಶ್ವರ	೧೦	೮೩	ಸರ್ವಧರ್ಮಾನ್ ಪರಿತ್ಯಜ್ಯಶೈವಂ ಪಂಚಾಕ್ಷ ರಂಜಪೇತ್ಃ
೩	೧೭	ಯಸ್ತ್ವಾತ್ಮರತಿರೇವಸ್ಯಾದಾತ್ಮ ತೃಪ್ತಶ್ಚ ಮಾನವಃ ಆತ್ಮನ್ಯೇವ ಚ ಸಂತುಷ್ಟಸ್ತಸ್ಯಕಾರ್ಯಂ ನ ವಿದ್ಯತೇ	ದೇವೀಕಾಲೋತ್ತರ	೬	೯೩	ಶಿವಜ್ಞಾನಾಮೃತಂ ಪೀತ್ವಾಭಕ್ತ್ಯಾ ಪರವಶಂಗತಃ

ಭಗವದ್ಗೀತೆಯು ಪ್ರಸಿದ್ಧ ಗ್ರಂಥವಾಗಿರುವುದರಿಂದ ಈ ಶ್ಲೋಕಗಳು ಅಲ್ಲಿಂದಲೇ ಶಿವಾಗಮಗಳತ್ತ ಸಾಗಿ ಬಂದಿರಬಹುದೆಂದು ಕೆಲವರಿಗೆ ತೋರಬಹುದು ಆದರೆ ವಸ್ತು ಸ್ಥಿತಿಹಾಗಿಲ್ಲ. ಏಕೆಂದರೆ–

೧. ಶಿವಾಗಮಗಳಲ್ಲಿ ಇವೆಲ್ಲ ಶ್ಲೋಕಗಳು ಒಂದು ವಿಶಿಷ್ಟ ವಿಷಯವನ್ನೆತ್ತಿಕೊಂಡು ವಿವರವಾಗಿ ಪ್ರತಿಪಾದಿಸುವ ಸಂದರ್ಭದಲ್ಲಿ ಬಂದಿವೆ. ಒಂದೊಂದು ವಿಷಯಕ್ಕೆ ಸಂಬಂಧಿಸಿದ ಹಲವಾರು ಶ್ಲೋಕಗಳು ಒಂದಕ್ಕೊಂದು ಪೂರ್ವಾಪರ ಸಂಬಂಧವುಳ್ಳವಾಗಿ ಬರುತ್ತವೆ. ಶಿವಾಗಮಗಳಲ್ಲಿ ಈ ಶ್ಲೋಕಗಳು ಆಯಾ ಸಂದರ್ಭದಲ್ಲಿ ಸಹಜವಾಗಿ ಉದ್ಭವಿಸಿದ ಅನಿವಾರ್ಯ ಘಟಕಗಳಾಗಿ ಬಂದಿವೆ. ಅಲ್ಲಿಂದ ಕೆಲವನ್ನು ಕಿತ್ತುಹಾಕಿದರೆ ವಿಷಯ ಪ್ರತಿಪಾದನೆಗೆ ಕೊರತೆಯುಂಟಾಗುವ ಅನುಭವವಾಗುತ್ತದೆ. ಆದುದರಿಂದ ಶಿವಾಗಮಗಳಲ್ಲಿ ಈ ಶ್ಲೋಕಗಳು ಆಯಾ ಸನ್ನಿವೇಶಗಳ ಅವಿಭಾಜ್ಯ ಅಂಗಗಳಾಗಿವೆ. ಒಂದೊಂದು ಸಿದ್ಧಾಂತವನ್ನು ಸಂಗ್ರಹಿಸಿ ಹೇಳುವಾಗ ಈ ಶ್ಲೋಕಗಳು ಉದಾಹೃತವಾದಂತಿವೆ.

೨. ಭಗವದ್ಗೀತೆಯನ್ನು ಉಪದೇಶ ಮಾಡಿದಾತ ವಿಷ್ಣುವಿನ ದಶಾವತಾರಗಳಲ್ಲಿ ಒಬ್ಬನಾದ ಶ್ರೀಕೃಷ್ಣ. ಶೈವ ಪರವಾಗಿ ಶೈವ ಧರ್ಮವನ್ನು ಬೋಧಿಸುವ ಶಿವಾಗಮಗಳು

ಹಾಗೂ ಶ್ರೀಕೃಷ್ಣ ಒಂದಕ್ಕೊಂದು ಹೊಂದಿಕೆಯಾಗಲಾರದು ಎಂಬ ಅಭಿಪ್ರಾಯ ಮೂಡಬಹುದು. ಆದರೆ ವಸ್ತುಸ್ಥಿತಿಯೇ ಬೇರೆ. ಏಕೆಂದರೆ ಶ್ರೀಕೃಷ್ಣನು ಶಿವ ಭಕ್ತನಾಗಿ ಶಿವಲಿಂಗಾರ್ಚನೆ ಮಾಡಿರುವನೆಂಬುದನ್ನು ಮಹಾಭಾರತ ಮತ್ತು ಅನೇಕ ಪ್ರಾಚೀನ ಪುರಾಣಗಳು ಹೇಳುತ್ತವೆ. ಅಪ್ಪಯ್ಯ ದೀಕ್ಷಿತರು ತಮ್ಮ ಭಾರತ ಸಂಗ್ರಹದಲ್ಲಿ ಶ್ರೀಕೃಷ್ಣನ ಶಿವಭಕ್ತಿಯನ್ನು ಹೀಗೆ ವರ್ಣಿಸಿರುವರು :

ಶ್ರೀ ಮಹಾಭಾರತಂ ಕುರ್ವಾಣಃ ಸರ್ವೇಷಾಂ ಬ್ರಹ್ಮವಿದಾಂ
ಗುರುರ್ಭಗವಾನ್ ವ್ಯಾಸಃ ಶ್ರೀಕೃಷ್ಣಮಹಾತ್ಮ್ಯ ವರ್ಣನದ್ವಾರಾ
ಶಿವಏವ ಪರಬ್ರಹ್ಮೇತಿ ಶಿಷ್ಯೇಭ್ಯಃ ಪರಮತತ್ತ್ವಂ
ದರ್ಶಯಾಮಾಸ................ ಸರ್ವತ್ರಾಪಿ ಮಹಾಭಾರತೇ
ಶ್ರೀಕೃಷ್ಣಸ್ಯ ಶಿವಪೂಜಾನಿಷ್ಠತ್ವಂ, ತತ್‌ಪ್ರಸಾದಲಬ್ಧ
ಸಕಲ ಪ್ರಭಾವತ್ವಂ ಚಾವರ್ಣ್ಯತ....................

ಆದಿಪರ್ವಣಿ ಸುಭದ್ರಾಪರಿಣಯ ಪ್ರಸ್ತಾಪೇ ಸಮುದ್ರ ಮಧ್ಯೇ ಕ್ವಚಿದ್‌ದ್ವೀಪ ವಿಶೇಷೇ ಕೃಷ್ಣೇನ ಶವಸ್ಯಪ್ರಜಾರ್ಥಂ ಪ್ರವರ್ತಿತ ಮಹೋತ್ಸವಃ ಉಪಮನ್ಯೂಪದೇಶೇನ ಶ್ರೀ ಕೃಷ್ಣಸ್ಯಾಪಿ........ ಪಾಶು ಪತವ್ರತಾನುಷ್ಠಾನಂ........ ಕೈಲಾಸಮಾತ್ರಾಯಾಂ ಪೂಜಾಸ್ತುತಿತಪೋಭಿಃ........ ವರ್ಣಿತಂ ದ್ರೋಣಪರ್ವಣಿ-ಧ್ರೋಣವಧಾನಚಿತರಂ ಕೃಷ್ಣಾರ್ಜುನೌ ಲಿಂಗಾರ್ಚನಯಾ........ ಶಿವಮಾರಾಧಿತೌ ಶಿವೇನ ಅತಿಬಲ ವೀರ್ಯ ಪರಾಕ್ರಮಾದಯೋ ಬಹವೋ ವರಾ ದತ್ತಾ ಇತಿ ವೇದವ್ಯಾಸೇನ ಕಥಿತೇ........

ವಾಯುಪುರಾಣ ಅಧ್ಯಾಯ ೪೦ (೧-೩) ರಲ್ಲಿ ಶ್ರೀಕೃಷ್ಣನು ಶಿವಾಗಮಗಳ ತತ್ತ್ವಜ್ಞಾನವನ್ನು ಬೋಧಿಸಬೇಕೆಂದು ಉಪಮನ್ಯುಮುನಿಗಳಲ್ಲಿ ಹೀಗೆ ಪ್ರಾರ್ಥಿಸಿದನು.

ಭಗವನ್ ಶ್ರೋತಮಿಚ್ಛಾಮಿ ಶಿವೇನಪರಿಭಾಷಿತಂ
ವೇದಸಾರಂ ಶಿವಜ್ಞಾನಂ ಸ್ವಾಶ್ರಿತಾನಾಂ ವಿಮುಕ್ತಯೇ

ಕೂರ್ಮಪುರಾಣ ಅಧ್ಯಾಯ ೨೫ (೪೬-೪೮) ರಲ್ಲಿ ಉಪಮನ್ಯುಮುನಿ ಕೃಷ್ಣನಿಗೆ ಶಿವದೀಕ್ಷೆಯನ್ನಿತ್ತ ವಿಷಯ ಹೀಗೆ ಉಕ್ತವಾಗಿದೆ.

'ಏವಮುಕ್ತ್ವಾ ದದೌ ಜ್ಞಾನಮುಪಮನ್ಯುಮಹಾಮುನಿಃ' ದ್ರೋಣಪರ್ವದಲ್ಲಿ ಅಶ್ವತ್ಥಾಮನು ಕೃಷ್ಣಾರ್ಜುನರು ಶಿವಲಿಂಗವನ್ನು ಪೂಜೆ ಮಾಡಿ ಸಾಮರ್ಥ್ಯ ಪಡೆದುದರಿಂದ ತನಗೆ ಸೋಲುಂಟಾಯಿತೆಂದು ಹೇಳುತ್ತಾನೆ.

ಹೀಗೆ ಅನೇಕ ಪುರಾಣಗಳಲ್ಲಿ ಶ್ರೀಕೃಷ್ಣನ ಶಿವಭಕ್ತಿ ವರ್ಣಿತವಾಗಿದೆ. ಭಗವದ್ಗೀತೆಯನ್ನು ಉಪದೇಶಿಸಿದ ಶ್ರೀಕೃಷ್ಣನು ಉಪಮನ್ಯು ಮುನಿಗಳಿಂದ ಶಿವಾಗಮಗಳ ಆಧ್ಯಾತ್ಮ ತತ್ವಜ್ಞಾನವನ್ನೂ ಪಡೆದ ವಿಷಯವೂ ಉಲ್ಲೇಖಿತವಾಗಿದೆ.

೩. ಮಹಾಭಾರತದಲ್ಲಿ ವರ್ಣಗಳ ತಾರತಮ್ಯಭಾವ, ಅಗ್ರವರ್ಣದ ಶ್ರೇಷ್ಠತೆ ಇವು ಅತ್ಯಂತ ತೀಕ್ಷ್ಣವಾಗಿ ಪ್ರತಿಪಾದಿತವಾಗಿವೆ. ಅನುಶಾಸನ ಪರ್ವದಲ್ಲಿ ಭೀಷ್ಮರು

'ಜನ್ಮನೈವ ಮಹಾಭಾಗೋ ಬ್ರಾಹ್ಮಣೋನಾಮ ಜಾಯತೇ' ಎಂದು ಬ್ರಾಹ್ಮಣ್ಯ ಜನ್ಮದಿಂದ ಪ್ರಾಪ್ತವಾಗುತ್ತದೆಯೆಂದು ಹೇಳಿರುವರು. ಅಂದರೆ ಜನ್ಮದಿಂದ ವ್ಯಕ್ತಿಗೆ ಅವನ ವರ್ಣ ಅಥವಾ ಜಾತಿ ಪ್ರಾಪ್ತವಾಗುವದೆಂಬುದನ್ನು ಮಹಾಭಾರತ ಪ್ರತಿಪಾದಿಸುತ್ತದೆ. ಅದರಲ್ಲಿ ಬ್ರಾಹ್ಮಣ್ಯಮತಿದುಷ್ಪ್ರಾಪ್ಯಂ ಎಂದು ಬ್ರಾಹ್ಮಣ್ಯದ ಅಗ್ಗಳಿಕೆಯನ್ನು ಭೀಷ್ಮರೇ ಸಾರುತ್ತಾರೆ. ಬ್ರಾಹ್ಮಣ್ಯವು ಜನ್ಮದಿಂದ ಪ್ರಾಪ್ತವಾಗುವುದನ್ನೂ ಅದರ ಶ್ರೇಷ್ಠತೆಯನ್ನೂ ಎತ್ತಿ ಹಿಡಿಯುವುದರ ಜೊತೆಗೆ ಶೂದ್ರರಿಗೆ ಜ್ಞಾನದ ಬಾಗಿಲುಗಳೆಲ್ಲವನ್ನೂ ಮಹಾಭಾರತದಲ್ಲಿ ಮುಚ್ಚಿಬಿಟ್ಟಿರುವುದನ್ನು ನೋಡಬಹುದು.

ಮಿತ್ರಸೌಹಾರ್ದಭಾವೇನ ಉಪದೇಶಂ ಕರೋತಿಯಃ
ಜಾತ್ಯಧರ್ಮಸ್ಯ ರಾಜರ್ಷೇ ದೋಷಾನ್ತಸ್ಯಭವೇನ್ನವಾ
ಉಪದೇಶೋನಕರ್ತವ್ಯೋ ಜಾತಿಹೀನಸ್ಯನಕಸ್ಯಚಿತ್
ನಾಧ್ಯಾಪಯೇತ್ಶೂದ್ರಮಿಹ ತಥಾ ನೈವ ಚ ಯಾಜಯೇತ್

– ಅನುಶಾಸನ ಪರ್ವ ೩೧–೩–೪–೫

ಅಂದರೆ ಮಿತ್ರನೆಂಬ ಭಾವನೆಯಿಂದ ಅಧಮ ಜಾತಿಯವನಿಗೆ ಉಪದೇಶ ಮಾಡಕೂಡದು. ಜಾತಿಹೀನನಿಗೆ ಉಪದೇಶವನ್ನು ಮಾಡಕೂಡದೆಂದು ವಿಧಿಸುತ್ತದೆ. ಇಂತಹ ಶ್ಲೋಕಗಳು ಮಹಾಭಾರತದ ನಾನಾಭಾಗಗಳಲ್ಲಿ ಚಲ್ಲವರಿದಿವೆ. ಆದರೆ ಇವುಗಳ ಮಧ್ಯೆ ಸಮಸ್ತ ಮಾನವರ ಸಮಾನತೆಯನ್ನು ಎತ್ತಿಹಿಡಿಯುವ ಉದಾರವಾದ ಈ ಶ್ಲೋಕಗಳು ಬಂದಿವೆ. ಇವು ಭಗವದ್ಗೀತೆಗಾಗಲಿ, ಮಹಾಭಾರತಕ್ಕಾಗಲಿ ಸಹಜವಾಗಿ ಹೊಂದಿಕೊಳ್ಳುವ ಶ್ಲೋಕಗಳಲ್ಲ. ಕಾರಣ ಈ ವಿಚಾರಧಾರೆ ಶಿವಾಗಮಗಳಿಂದ ಭಗವದ್ಗೀತೆಗೆ ಬಂದಿವೆಯೆಂದು ನಿರ್ಧರಿಸಬೇಕಾಗುತ್ತದೆ.

೪. ಶಿವಾಗಮಗಳಲ್ಲಿ ಧ್ಯಾನದ ಸಂಪೂರ್ಣ ವ್ಯಾಖ್ಯೆ ವಿವರ ಬಂದಿದೆ. 'ಧ್ಯಾನವೆಂದರೆ ಶಿವರೂಪಾದಿ ಚಿಂತಾ' ಎಂದು ವ್ಯಾಖ್ಯಾನಿಸಲಾಗಿದೆ. ಇಡೀ ಸೃಷ್ಟಿಯಲ್ಲಿ ಶಿವನಶಕ್ತಿಯ ಆವಿಷ್ಕರಣವೆಂದು ಭಾವಿಸುವುದೇ ನೈಜಧ್ಯಾನ. ಈ ಧ್ಯಾನದ ಸರ್ವಶ್ರೇಷ್ಠ ಅವಸ್ಥೆಯೆಂದರೆ ಮನಸ್ಸನ್ನು ಪಂಚಾಕ್ಷರ ಇಲ್ಲವೆ ಷಡಕ್ಷರ ಮಂತ್ರದಲ್ಲಿ ನಿಲ್ಲಿಸುವುದು. ಇದೇ ಧ್ಯಾನದಲ್ಲಿ ನಿಷ್ಕಲವಾದ ಪರವಸ್ತು ಸಕಲನಾಗಿ ಧ್ಯಾನಮಾಡುವವನ ಭಾವನೆಗೆ ತಕ್ಕ ರೂಪಧಾರಣ ಮಾಡಿ ಅವನ ಮನದ ಒಳಗಣ್ಣಿನೆದುರು ಬಂದು ನಿಲ್ಲುತ್ತಾನೆ.

'ಯೋಗಿನಾಂ ಧ್ಯಾನಿನಾಂ ತಥಾ ಧ್ಯಾನಪೂಜಾನಿಮಿತ್ತಾರ್ಥಂ ತನುಂ ಗೃಹ್ಣಾತಿ ಮಾಯಯಾ' ಎಂದು ಶಿವಾಗಮಗಳಲ್ಲಿ ಹೇಳಲಾಗಿದೆ. ಪರಮಾತ್ಮನು ತನ್ನಲ್ಲಿರುವ ಶಕ್ತಿಯಿಂದ ಯೋಗಿಗಳ ಧ್ಯಾನ ಪೂಜಾ ನಿಮಿತ್ತಾರ್ಥವಾಗಿ ಸೂಕ್ಷ್ಮ ದೇಹಧಾರಣ ಮಾಡುತ್ತಾನೆ ಎಂಬುದು ಇದರ ಮತಿತಾರ್ಥ.

ಭಗವದ್ಗಿತೆಯಲ್ಲಿ ಧ್ಯಾನವನ್ನು ಬೋಧಿಸುವ ಹಲವಾರು ಶ್ಲೋಕಗಳು ಬಂದಿವೆ.

ಇವು ಶಿವಾಗಮಗಳ ಶ್ಲೋಕಗಳನ್ನು ಹೋಲುತ್ತವೆ. ಉದಾಹರಣೆಗೆಂದು ಭಗವದ್ಗಿತೆಯ ೬ ನೆಯ ಅಧ್ಯಾಯದ ೧೩ ಹಾಗೂ ೫೪ ನೆಯ ಶ್ಲೋಕಗಳನ್ನು ಸೂಕ್ಷ್ಮಾಗಮದ ಮೂರನೆಯ ಪಟಲದ ೫೫ ನೆಯ ಶ್ಲೋಕದೊಡನೆ ಹೋಲಿಸಬಹುದು.

ಇವೆಲ್ಲ ವಿವೇಚನೆಯಿಂದ ಭಗವದ್ಗೀತೆಯಲ್ಲಿ ಶಿವಾಗಮದ ಪ್ರಭಾವ ನಿಚ್ಚಳವಾಗಿ ಕಂಡು ಬರುವದರಿಂದ ಮೇಲೆ ನಿರ್ದೇಶಿಸಿದ ಶ್ಲೋಕಗಳು ಶಿವಾಗಮಗಳಿಂದ ಭಗವದ್ಗೀತೆಗೆ ಬಂದಿವೆಯೆಂದು ನಿರ್ಧರಿಸಬೇಕಾಗುತ್ತದೆ. ಅದುದರಿಂದ ಶಿವಾಗಮಗಳು ಭಗವದ್ಗೀತೆಗಿಂತ ಮೊದಲಿನವೆಂದು ಊಹಿಸಬೇಕಾಗುತ್ತದೆ.

ಇನ್ನೊಂದು ಅಭಿಪ್ರಾಯದಂತೆ 'ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ' ಎಂಬ ಉಕ್ತಿ ಪ್ರಸಿದ್ಧವಾಗಿದೆ. ಭಗವದ್ಗೀತೆಯು ಉಪನಿಷತ್ತುಗಳ ಸಾರವೆಂದು ಈ ಉಕ್ತಿಯಿಂದ ವ್ಯಕ್ತವಾಗುತ್ತದೆ. ಭಗವದ್ಗೀತೆಯು ಉಪನಿಷತ್ತುಗಳಿಂದ ಪ್ರಭಾವಿತವಾಗಿರುವುದನ್ನೂ ರಾನಡೆಯವರು Constructive survey of Upanishds ತಮ್ಮ ಎಂಬ ಗ್ರಂಥದಲ್ಲಿ ತೋರಿಸಿದ್ದಾರೆ.

ಆದರೆ ಭಗವದ್ಗೀತೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅದು ಕೇವಲ ಉಪನಿಷತ್ತುಗಳ ಸಾರ ಮಾತ್ರವಾಗಿರದೆ ಶಿವಾಗಮಗಳಿಂದಲೂ ವಿಫುಲವಾದ ಸಿದ್ಧಾಂತಸಾಮಗ್ರಿಯನ್ನು ಪಡೆದಿದೆಯೆಂದು ವಿದಿತವಾಗುತ್ತದೆ.

೧. ಉಪನಿಷತ್ತುಗಳು ಶಾಶ್ವತ ಸುಖವನ್ನೀಯುವ ಬ್ರಹ್ಮ ಪದವಿಯನ್ನು ಪಡೆಯಬೇಕೆಂದು ಹೇಳಿದವು. ಬ್ರಹ್ಮ ಪದವಿಯನ್ನು ಪಡೆಯಲು ಜ್ಞಾನ ಮಾರ್ಗವನ್ನು ಬೋಧಿಸಿದ್ದು, ಈ ಜ್ಞಾನವನ್ನು ತಪಸ್ಸಿನ ಮೂಲಕ ಸಾಧಿಸಬೇಕೆಂದು ತಿಳಿಸಿವೆ. ಉಪನಿಷತ್ತುಗಳ ಈ ಜ್ಞಾನ ಮಾರ್ಗವು ಕಷ್ಟದಾಯಕವೂ ಮತ್ತು ಸಾಮಾನ್ಯ ಜನಗಳ ಅಳವಿಗೆ ನಿಲುಕುವಂತಹುದಲ್ಲ. ಆದರೆ ಆಗಮಗಳು ಮೋಕ್ಷಸಾಧನೆಗೆ ಭಕ್ತಿ ಮಾರ್ಗವನ್ನು ಬೋಧಿಸಿದವು. ಭಕ್ತಿಮಾರ್ಗ ಎಲ್ಲರಿಗೂ ಸುಲಭಸಾಧ್ಯವಾದುದು. ಈ ನಿಟ್ಟಿನಲ್ಲಿ ಗೀತೆ ಹೇಳುವುದನ್ನು ಕೇಳಬೇಕು.

ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತ ಚೇತಸಾಂ
ಅವ್ಯಕ್ತಾಹಿ ಗತಿದುಃಖಂ ದೇಹವಿದ್ಭರವಾಪ್ಯತೇ

ಈ ಕಾರಣಕ್ಕಾಗಿ ಭಗವದ್ಗೀತೆ ಉಪನಿಷತ್ತುಗಳ ಜ್ಞಾನಮಾರ್ಗ ಆಗಮಗಳ ಭಕ್ತಿಮಾರ್ಗ ಎರಡನ್ನೂ ಸಮನ್ವಯಗೊಳಿಸಿತು. ಹೀಗೆ ಭಗವದ್ಗೀತೆ ಶಿವಾಗಮಗಳಿಗೆ ನೇರಋಣಿಯಾಗಿದೆ.

೨. ಭಕ್ತಿ ಮತ್ತು ನಿಷ್ಕಾಮ ಕರ್ಮಗಳ ವಿಚಾರದಲ್ಲಿ ಭಗವದ್ಗೀತೆ ಶಿವಾಗಮಗಳಿಗೆ ಋಣಿಯಾದಂತಿದೆ. ವಿದ್ಯಾರ್ಣವ ಭಟ್ಟಾಚಾರ್ಯರು ತಮ್ಮ ಗ್ರಂಥದಲ್ಲಿ ಹೀಗೆ ಹೇಳಿರುವರು "ತಂತ್ರಗಳು ಅಂದರೆ ಆಗಮಗಳು ಪ್ರಪಂಚವನ್ನು ಆನಂದಮಯ ದೃಷ್ಟಿಯಿಂದ ಕಂಡು ಅದನ್ನು ಪರಮಾನಂದ ಸಾಗರವನ್ನಾಗಿ ಪರಿವರ್ತಿಸಿವೆ. ಆಗಮಗಳು ಬೋಧಿಸುವ ಭಕ್ತಿ ಮಾರ್ಗದಲ್ಲಿ ಭಕ್ತನು ತನ್ನದೆಲ್ಲವನ್ನು ದೇವರಿಗೆ ಅರ್ಪಿಸುವ ವಿಧಾನವು ಅಡಗಿದೆ.

ಭಕ್ತನು ತನ್ನ ಎಲ್ಲ ಚಟುವಟಿಕೆಗಳನ್ನು ನಡೆಸುತ್ತ ಅವುಗಳ ಫಲಾಫಲಗಳನ್ನೆಲ್ಲ ಪರಮಾತ್ಮನಿಗೆ ಅರ್ಪಿಸಿಬಿಡುತ್ತಾನೆ. ಭಕ್ತನು ತನ್ನ ಎಲ್ಲ ಸುಖದುಃಖಗಳಿಗೆ ಪರಮಾತ್ಮನನ್ನೇ ಪೂರ್ತಿಯಾಗಿ ಆಶ್ರಯಿಸುವುದರಿಂದ ತನ್ನ ಎಲ್ಲ ಕರ್ಮಗಳ ಫಲಗಳನ್ನು ಅವನಿಗೆ ಅರ್ಪಿಸಿಬಿಡುತ್ತಾನೆ." ಹೀಗೆ ಭಗವದ್ಗೀತೆಯ ನಿಷ್ಕಾಮ ಕರ್ಮದ ಉಗಮ ಆಗಮಗಳ ಭಕ್ತಿಮಾರ್ಗದಲ್ಲಿದೆ. ಗೀತೆ ಆಗಮಗಳ ಈ ಸಿದ್ಧಾಂತವನ್ನು ವಿಶದೀಕರಿಸಿದೆ. ಭಗವದ್ಗೀತೆಯ ಸಾರ ಸರ್ವಸ್ವವೆನಿಸಿದ ಕರ್ಮಯೋಗ ರೂಪುಗೊಂಡಿರುವದು ಶಿವಾಗಮಗಳ ಭಕ್ತಿ ಮಾರ್ಗದಿಂದ ಎಂಬುದು ಮಹತ್ವವಾದುದು. ಭಗವದ್ಗೀತೆಯ ನಿಷ್ಕಾಮ ಕರ್ಮದ ಉಗಮ ಆಗಮಗಳ ಭಕ್ತಿ ಮಾರ್ಗದಲ್ಲಿದೆ.

೩. ಮಾಯಾ ತತ್ವದ ಕಲ್ಪನೆಯಲ್ಲಿಯೂ ಭಗದ್ಗೀತೆ ಶಿವಾಗಮಗಳನ್ನು ಅನುಸರಿಸಿದಂತೆ ತೋರುತ್ತದೆ. ಆಗಮಗಳಲ್ಲಿ ಮಾಯೆ ಎಂದರೆ ಪರಬ್ರಹ್ಮ ಶಕ್ತಿ. ಅದರಿಂದಲೇ ಸೃಷ್ಟಿಯ ಉತ್ಪತ್ತಿ. ಕಾರಣ ಸೃಷ್ಟಿ ಸತ್ಯವಾದುದು ಎಂದು ಪ್ರತಿಪಾದಿಸಿವೆ. ಶ್ವೇತಾಶ್ವತರ ಉಪನಿಷತ್ತಿನ ಹೊರತಾಗಿ ಮಿಕ್ಕ ಉಪನಿಷತ್ತುಗಳಲ್ಲಿ ಮಾಯೆಯ ಕಲ್ಪನೆ ಇಲ್ಲ. ಕಾರಣ ಶಿವಾಗಮಗಳಂತೆ ಭಗವದ್ಗೀತೆಯು ಸೃಷ್ಟಿ ಸತ್ಯವೆಂತಲೂ ಈ ಸೃಷ್ಟಿ ಪರಮಾತ್ಮನ ಶಕ್ತಿ ಸ್ವರೂಪವೆಂದು ನಂಬುತ್ತದೆ.

೪. ಯೋಗದ ವಿಷಯದಲ್ಲಿಯೂ ಭಗವದ್ಗೀತೆ ಉಪನಿಷತ್ತುಗಳಿಗಿಂತ ಶಿವಾಗಮಗಳಿಗೆ ಹೆಚ್ಚು ಋಣಿಯಾಗಿರುವಂತೆ ತೋರುತ್ತದೆ. ಉಪನಿಷತ್ತುಗಳು ಯೋಗದ ವಿಷಯವನ್ನು ಪ್ರಸ್ತಾಪಿಸಿದರೂ ಅದರ ಸಾಧನ ಮಾರ್ಗ ಸಿದ್ಧಿಯ ವಿವರಗಳು ಅಲ್ಲಿಲ್ಲ. ಆದರೆ ಆಗಮಗಳ ನಾಲ್ಕು ಪಾದಗಳಲ್ಲಿ ಯೋಗಪಾದವು ಪ್ರಸಿದ್ಧ ಅಂಗ. ಭಗವದ್ಗೀತೆಯಲ್ಲಿ ಭಕ್ತಿ, ಕರ್ಮ ಜ್ಞಾನಗಳೆಲ್ಲ ಯೋಗವಾಗಿಯೇ ಪರಿಗಣಿತವಾಗಿವೆ. ಇದೂ ಸಹ ಶಿವಾಗಮಗಳ ಪ್ರಭಾವವಾಗಿದೆ.

೫. ವಾಸ್ತವವಾಗಿ ಭಗವದ್ಗೀತೆ ಪ್ರತಿಪಾದಿಸಬೇಕಾಗಿದ್ದುದು ಕರ್ಮಮಾರ್ಗ. ಮಹಾಭಾರತದೊಳಗೆ ಕುರುಕ್ಷೇತ್ರದಲ್ಲಿ ಅರ್ಜುನನು ಯುದ್ಧ ಮಾಡಲಾರೆ ಎಂದು ಹೇಳಿ ರಣರಂಗದಲ್ಲಿ ಕೈಮುಗಿದು ನಿಂತುಬಿಟ್ಟನು. ಆಗ ಶ್ರೀಕೃಷ್ಣನಿಂದ ಅರ್ಜುನನಿಗೆ ಗೀತೋಪದೇಶವಾಗಿದೆ. ಅಂದಮೇಲೆ ಭಗವದ್ಗೀತೆ ಕರ್ಮಮಾರ್ಗ ಪ್ರತಿಪಾದಕ ಗ್ರಂಥವಾಗುವುದು ತೀರ ಸ್ವಾಭಾವಿಕ. ಅಂತೆಯೇ ಲೋಕಮಾನ್ಯತಿಲಕರು ತಮ್ಮ ಗೀತಾರಹಸ್ಯದಲ್ಲಿ ಕರ್ಮಮಾರ್ಗಪರ ಭಾಷ್ಯವನ್ನೇ ಪ್ರತಿಪಾದಿಸಿರುವರು.

'ನಹಿಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮ ಕೃತ್' ಎಂದು ಕರ್ಮಮಾರ್ಗದ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತದೆ.

ಶಿವಾಗಮಗಳಲ್ಲಿ ಕರ್ಮಮಾರ್ಗವೆಂದರೆ ಧರ್ಮಮಾರ್ಗವೆಂದು ಪ್ರತಿಪಾದಿತವಾಗಿದೆ. ಭಗವದ್ಗೀತೆಯ ಸಾರಸರ್ವಸ್ವವೆನಿಸಿದ ಕರ್ಮಯೋಗ ರೂಪುಗೊಂಡಿರುವುದು ಶಿವಾಗಮಗಳ ಈ ಭಕ್ತಿಮಾರ್ಗದಿಂದ ಎಂಬುದು ಮಹತ್ವವಾದುದು.

೬. ಆರ್ಥರ ಆ್ಯವ್ಹೆಲಾನ್ ಅವರು ತಮ್ಮ Shakti and Shakta ಎಂಬ ಗ್ರಂಥದಲ್ಲಿ (P.೧೯) ಭಗವದ್ಗೀತೆಯ ಒಂದು ಶ್ಲೋಕವನ್ನು ಉದ್ಧರಿಸಿರುವರು. ಅದು ಹೀಗಿದೆ.

ತೇನೋಕ್ತಂ ಸಾತ್ವತಂ ತಂತ್ರಂ ಯದ್ ಜ್ಞಾತ್ವಾಮುಕ್ತಿಭಾಗ್‌ಭವೇತ್
ಯತ್ರ ಸ್ತ್ರೀಶೂದ್ರದಾಸಾನಾಂ ಸಂಸ್ಕಾರೋ ವೈಷ್ಣವೋಸ್ಮೃತಃ

ಇಲ್ಲಿ ಭಗವದ್ಗೀತೆಯು ಸಾತ್ವತ ತಂತ್ರ (ಆಗಮ) ವನ್ನು ಹೆಸರಿಸಿ ಅದನ್ನರಿಯುವದರಿಂದ ಮುಕ್ತಿ ದೊರೆಯುತ್ತದೆ ಎಂದು ತಿಳಿಸಿ ಸ್ತ್ರೀ, ಶೂದ್ರ, ದಾಸಾದಿಗಳಿಗೆ ವೈಷ್ಣವ ಸಂಪ್ರದಾಯಕ್ಕಿಂತಲೂ ಮಿಗಿಲಾಗಿ ಅವರಿಗೆ ಜನ್ಮ ಜಾತಿಯನ್ನೇ ನೀಗುವ ಶಿವದೀಕ್ಷೆಯ ಸಂಸ್ಕಾರ ನೀಡಬೇಕೆಂದು ಹೇಳಿದ ವಿಚಾರ ಅತ್ಯಂತ ಕ್ರಾಂತಿಕಾರಕ ವಾದುದು. ಆದುದರಿಂದ ಭಗವದ್ಗೀತೆ ಶೈವಾಗಮಗಳನ್ನು ಅವಶ್ಯವಾಗಿ ತನ್ನಲ್ಲಿ ಅಳವಡಿಸಿಕೊಂಡಿರಬೇಕು. ಸ್ವಾತಂತ್ರವನ್ನು ಹೆಸರಿಸುವ ಈ ಶ್ಲೋಕವನ್ನು ಆರ್ಥರ್ ಆ್ಯವ್ಹೆಲಾನ್ ಅವರು ಯಾವ ಸಂಪಾದನೆಯಿಂದ ಆಯ್ದು ಕೊಂಡರೆಂಬುದು ತಿಳಿದು ಬಂದಿಲ್ಲ. ಆದರೆ ಇದರಿಂದ ಭಗವದ್ಗೀತೆ ಆಗಮಗಳಿಗೆ ಋಣಿಯಾದ ವಿಷಯ ಪ್ರಸ್ತಾಪಿತವಾಗಿರುವುದು ಬಹು ಮಹತ್ವವಾದುದು.

೭. ಪರಬ್ರಹ್ಮದ ಸಾಕಾರ ನಿರಾಕಾರ ಸ್ವರೂಪಗಳೆರಡರಲ್ಲಿ ಉಪನಿಷತ್ತು ನಿರಾಕಾರ ಸ್ವರೂಪಕ್ಕೆ ಪ್ರಾಧಾನ್ಯವಿತ್ತರೆ, ಆಗಮಗಳು ನಿರಾಕಾರದೊಡನೆ ಸಾಕಾರ ಸ್ವರೂಪವನ್ನೂ ಒಪ್ಪಿಕೊಂಡಿವೆ. ಭಕ್ತಿ ಮಾರ್ಗಕ್ಕೆ ಸಾಕಾರರೂಪ ಅವಶ್ಯವೆನಿಸಿದೆ–ಹೀಗೆ ಭಗವದ್ಗೀತೆಯಲ್ಲಿ ಸಾಕಾರ ಪರಮಾತ್ಮನೆನಿಸಿದ ಶ್ರೀಕೃಷ್ಣನಿಗೆ ಪ್ರಾಧಾನ್ಯತೆಯಿದೆ. ಶಿವಾಗಮಗಳಲ್ಲಿ ಶಿವನಿಗೆ ಪ್ರಾಧಾನ್ಯವಿದ್ದರೆ ಗೀತೆಯಲ್ಲಿ ವಾಸುದೇವನಿಗೆ ಹಿರಿಮೆ, ಗರಿಮೆಯಿದೆ.

ಕಾರಣ ಭಗವದ್ಗೀತೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅದು ಕೇವಲ ಉಪನಿಷತ್ತುಗಳ ಸಾರ ಮಾತ್ರವಾಗಿರದೆ ಶಿವಾಗಮಗಳಿಂದಲೂ ವಿಫುಲವಾದ ಸಿದ್ಧಾಂತಸಾಮಗ್ರಿಯನ್ನು ಪಡೆದಿದೆಯೆಂದು ವಿದಿತವಾಗುತ್ತದೆ.

೨.೭.೩ ಶಿವಾಗಮಗಳು ಮತ್ತು ಸ್ಮೃತಿ

ಆಗಮಪರಿಜ್ಞಾನವೆಂಬ ಗ್ರಂಥದ ಪುಟ ೪೧ ರಲ್ಲಿ ಶ್ರೀಶಂಭುಲಿಂಗ ಶಿವಾಚಾರ್ಯರು ಸ್ಮೃತಿಗಳ ಮೇಲೆ ಶಿವಾಗಮಗಳ ಪ್ರಭಾವವನ್ನು ಈ ರೀತಿ ವಿವರಿಸಿದ್ದಾರೆ – ಸ್ಮೃತಿಗಳೆಂದರೆ ಧರ್ಮಶಾಸ್ತ್ರಗಳು. ಸ್ಮೃತಿಗಳು ಮನು, ವಸಿಷ್ಠ, ಯಾಜ್ಞವಲ್ಕ್ಯ, ಅತ್ರಿ, ಬೋಧಾಯನ, ಹಾರೀತ ಎಂಬ ಅಭಿಧಾನಗಳಿಂದ ಅನೇಕವಾಗಿವೆ. ಅವುಗಳಲ್ಲಿ ವೇದಗಳ ಅರ್ಥಾನುವಾದ ವಾಕ್ಯಗಳಿರುವಂತೆ ಆಗಮಗಳ ಅರ್ಥಾನುವಾದ ವಚನಗಳೂ ಇವೆ. ವಶಿಷ್ಠ ಹಾರೀತ ಮೊದಲಾದ ಕೆಲವು ಸ್ಮೃತಿಗಳಲ್ಲಿ ಆಗಮ ಶ್ಲೋಕಗಳೇ ಇದ್ದಕ್ಕಿದ್ದ ಹಾಗೆ ಉಲ್ಲೇಖಿಸಲ್ಪಟ್ಟಿರುವುದನ್ನು ಕಾಣಬಹುದು. ಈ ಆಗಮಾರ್ಥವನ್ನು ಅನುವಾದಿಸತಕ್ಕ ಸ್ಮೃತಿವಾಕ್ಯಗಳಿರುವೆಡೆಯಲ್ಲಿ ಅವುಗಳ ತಾತ್ಪರ್ಯ ಸ್ಪಷ್ಟೀಕರಣಾರ್ಥವಾಗಿ ವ್ಯಾಖ್ಯಾನಕಾರರು ಶೈವಶಾಸ್ತ್ರಗಳಲ್ಲಿಯ ವಾಕ್ಯಗಳನ್ನು

ಉಲ್ಲೇಖಿಸಿದ್ದಾರೆ. ಈ ಬಗ್ಗೆ ಪರಾಶರಾದಿ ಸ್ಮೃತಿಗಳ ವ್ಯಾಖ್ಯಾನಗಳನ್ನು ಅವಲೋಕಿಸಿದರೆ ಸಾಕು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೇ ಸ್ಮೃತಿಗಳು ಗೋವತ್ಸನ್ಯಯದಂತೆ ವೈದಿಕೀಶ್ರುತಿಯನ್ನು ಅನುಸರಿಸುವ ಮೇರೆಗೆ ತಾಂತ್ರಿಕೀ ಶ್ರುತಿಯನ್ನು ಅನುಸರಿಸುತ್ತವೆ. ಈ ವಿಷಯದಲ್ಲಿ ಹಾರೀತ ಸ್ಮೃತಿಯಲ್ಲಿಯ –

ದ್ವಾಭ್ಯಾಮೇವ ಹಿ ಪಕ್ಷಾಭ್ಯಾಂ ಯಥಾ ವೈ ಪಕ್ಷಿಣಾಂ ಗತಿಃ ।
ತಥೈವ ಜ್ಞಾನಕರ್ಮಭ್ಯಾಂ ಪ್ರಾಪ್ಯತೇ ಬ್ರಹ್ಮ ಶಾಶ್ವತಂ॥

ಹಕ್ಕಿಯು ಒಂದು ರೆಕ್ಕೆಯಿಂದ ಹೇಗೆ ಹಾರಲಾರದೋ, ಅದಕ್ಕೆ ಎರಡು ರೆಕ್ಕೆಗಳು ಹೇಗೆ ಅವಶ್ಯಕವೋ, ಹಾಗೆ ಮೋಕ್ಷಪ್ರಾಪ್ರಿಗೆ ಜ್ಞಾನ. ಕ್ರಿಯೆಗಳೆರಡೂ ಪ್ರಧಾನವಾದವುಗಳು: ಎಂಬ ವಾಕ್ಯವು ಜ್ಞಾನಕರ್ಮಗಳ ಸಮಸಮುಚ್ಚಯವನ್ನೆ ಪ್ರತಿಪಾದಿಸತಕ್ಕ ಆಗಮದ ಅನುವಾದವೇ ಆಗಿದೆ.

'ಧರ್ಮ ಶಾಸ್ತ್ರಂಚ' ಎಂಬಲ್ಲಿಯ 'ಚ' ಕಾರವು ಸಮುಚ್ಚಯಾರ್ಥ ಬೋಧಕ ವಾದುದರಿಂದ ಧರ್ಮಶಾಸ್ತ್ರವೆಂದರೆ ಮುಖ್ಯವಾಗಿ ಶಿವಾಗಮವೇ ಗ್ರಹಿಸಲ್ಪಡುವುದು. ಶಿವಧರ್ಮ ಸಂಹಿತೆಯಲ್ಲಿ –

ಸರ್ಯೋನಿಃ ಸರ್ವವಿದ್ಯಾನಾಂ ಪುರುಷಃ ಕಾರಣಂ ಪರಃ ।
ನಿಃಶ್ವಾಸತುಲ್ಯಮುದ್ಭೂತಾನ್ನಿ ಖಿಲಾನ್ನಿಗಮಾನಪಿ॥
ಸಾವಶೇಷಾನ್ ಕ್ರಿಯಾಭಾಗ್ಯೈರವೇದ್ಯಾನ್ಪಶುಸಮ್ಮಿತೇಃ।
ವಿಚಿನ್ತ್ಯ ಧರ್ಮಶಾಸ್ತ್ರ ತಚ್ಛೈ ವಮಾಖ್ಯಾತವಾನ್ಪುನಃ॥
ಅನನ್ತವೇದಸನ್ದಿ ಷ್ಟಸರ್ವಾರ್ಥಸ್ಯೋಪಬ್ರುಂಹಣಂ।
ಕಾಮಿಕಾದಿಪ್ರಭೇದೇನ ಭಿನ್ನ ಮೇಕಾರ್ಥಶೋಭಿತಂ।
ತತ್ತತ್ಕಾಲಾವತೀರ್ಣೈಸ್ತು ಮುನಿಭಿಃ ಶಂಸಿತವ್ರತೈಃ।
ಶಾಸ್ತ್ರಂತದನುಸ್ಮೃತ್ಯೈವ ಕಥ್ಯತೇ ಧರ್ಮಸಂಗ್ರಹಃ ॥
ಅದಿತಃ ಶೈವಮೇವಾಹುರಾರ್ಷಂ ತದನುಸಾರತಃ।
ಧರ್ಮಶಾಸ್ತ್ರಮಿತಿ ಪ್ರಜ್ಞಾಃ ಶಾಸ್ತ್ರನಿರ್ಣಯತತ್ಪರಾಃ॥

ಸರ್ವ ವಿದ್ಯಾಧಿಪತಿಯಾದ ಪರಮೇಶ್ವರನ ನಿಃಶ್ವಾಸದಂತೆ ಆವಿರ್ಭವಿಸಿದ ಋಗಾದಿವೇದಗಳಲ್ಲಿ ಕ್ರಿಯಾಕಾಂಡವು (ಸರ್ವಜೀವಾನುಷ್ಠೇಯ ಕ್ರಿಯಾ ಭಾಗವು) ಸಾಂಗವಾಗಿಲ್ಲವೆಂದೂ, ಆ ವೇದಗಳ ಅರ್ಥವು ಜೀವಕೋಟಿಗೆ ಸರಿಯಾಗಿ ತಿಳಿಯದೆಂದೂ ಯೋಚಿಸಿ, ನಿಶ್ಶೇಷ ಕ್ರಿಯಾಭಾಗವನ್ನು ತಿಳಿಸುವಂತಹದೂ, ಸಮಸ್ತ ವೇದಾರ್ಥದ ಉಪಬ್ರುಂಹಣರೂಪವಾದುದೂ, ಏಕಾರ್ಥ ಬೋಧಕಗಳಾದ ಕಾಮಿಕಾದ್ಯನೇಕ ಸಂಹಿತೆಗಳನ್ನೊಳಕೊಂಡುದುದೂ ಆದ ಆಗಮಶಾಸ್ತ್ರವೆಂಬ ಧರ್ಮಶಾಸ್ತ್ರವನ್ನು ಬೋಧಿಸಿದನು. ಬಳಿಕ ಆಯಾ ಕಾಲದಲ್ಲಿ ಅವತರಿಸಿದ

ಮುನಿವರ್ಯರಿಂದ ಶಿವಾಗಮವೆಂಬ ಮೂಲಧರ್ಮಶಾಸ್ತ್ರವನ್ನು ಅನುಸರಿಸಿಯೇ ಧರ್ಮಸಂಗ್ರಹವು ಹೇಳಲ್ಪಡುತ್ತದೆ ಎಂದು ಅಭಿಪ್ರಾಯ ಪಡುವುದರ ಮೂಲಕ ಶಿವಾಗಮಗಳನ್ನು ಅನುಸರಿಸಿಯೇ ಸ್ಮೃತಿಗಳು ಹುಟ್ಟಿಕೊಂಡಿವೆ ಎಂದು ತಿಳಿಸಿದ್ದಾರೆ.

೨.೭.೪ ಶಿವಾಗಮಗಳು ಮತ್ತು ಪುರಾಣ

ಆಗಮಪರಿಜ್ಞಾನವೆಂಬ ಗ್ರಂಥದ ಪುಟ ೫೧ ರಲ್ಲಿ ಶ್ರೀಶಂಭುಲಿಂಗ ಶಿವಾಚಾರ್ಯರು ಪುರಾಣಗಳ ಮೇಲೆ ಶಿವಾಗಮಗಳ ಪ್ರಭಾವವನ್ನು ಈ ರೀತಿ ವಿವರಿಸಿದ್ದಾರೆ - ಪುರಾಣಗಳಲ್ಲಿ ಶಿವಾಗಮಗಳೇ ಪ್ರಾಶಸ್ತ್ಯವಾಗಿವೆ. ಸ್ಕಂದ ಪುರಾಣಾಂತರ್ಗತವಾದ ಸೂತಸಂಹಿತೆಯ ಪ್ರಥಮಾಧ್ಯಾಯದಲ್ಲಿ.

ಅಷ್ಟಾದಶಪುರಾಣಾನಾಂ ಕರ್ತಾ ಸತ್ಯವತೀಸುತಃ।
ಕಾಮಿಕಾದಿಪ್ರಭೇದಾನಾಂ ಯಥಾ ದೇವೋ ಮಹೇಶ್ವರಃ॥

ಮಹೇಶ್ವರನು ಕಾಮಿಕಾದಿ ದಿವ್ಯಾಗಮಗಳಿಗೆ ಹೇಗೆ ಕರ್ತನಾಗಿದ್ದಾನೋ, ಹಾಗೇ ಸತ್ಯವತಿ ಸುತನಾದ ಪರಾಶರನು (ವ್ಯಾಸ ಮುನಿಯು) ಹದಿನೆಂಟು ಪುರಾಣಗಳಿಗೂ ಕರ್ತನಾಗಿದ್ದಾನೆ ಎಂಬ ವಚನದಿಂದ ಪುರಾಣಗಳಿಗೆ ಪ್ರಾಮಾಣ್ಯವನ್ನು ಹೇಳುವುದಕ್ಕಾಗಿ ಶಿವಾಗಮಗಳು ನಿರ್ದೇಶಿಸಲ್ಪಟ್ಟಿವೆ. ಸೂತಸಂಹಿತೆಗೆ ವ್ಯಾಖ್ಯಾನವನ್ನು ಬರೆದ ಮಾಧವಾಚಾರ್ಯನು ಈ ಮೇಲಿನ ಶ್ಲೋಕದ ಅರ್ಥವನ್ನು 'ಕಾಮಿಕಾದಿಂನಾಮಾಗಮ ಸಂಹಿತಾನಾಂ ಶಿವೇನೈವಪ್ರಣಯನಾತ್ಪ್ರಾಮಾಣ್ಯೇ ಯಥಾವಿಸ್ರಮ್ಭಃ, ಏವಂನಾರಾಯಣಾ ವತಾರೇಣ ವ್ಯಾಸೇನ ಪ್ರಣಯನಾತ್ಪುರಾಣೇ ಪ್ಯವಿಶೇಷಃ' - ಅರ್ಥಾತ್ ಕಾಮಿಕಾ ದ್ಯಾಗಮಗಳಿಗೆ ಈಶ್ವರಪ್ರೋಕ್ತತ್ವ ಮೂಲಕ ಹೇಗೆ ಪ್ರಾಮಾಣ್ಯವು ಅಭಾದಿತವಾಗಿರುವುದೋ, ಹಾಗೆ ನಾರಾಯಣನ ಅವತಾರವೆಂದು ಹೇಳಿಸಿಕೊಳ್ಳಲ್ಪಡುವವನಾದ ವ್ಯಾಸಮುನಿಯಿಂದ ಬರೆಯಲ್ಪಟ್ಟ ಪುರಾಣಗಳಾದರೂ ಅಪ್ರಮಾಣಗಳಲ್ಲವೆಂದು ಬರೆದಿರುವನು.

ಪುರಾಣಗಳು ಕಾದಂಬರಿ ಗ್ರಂಥಗಳಂತೆ ವ್ಯಾಸಮುನಿಯ ಕಪೋಲ ಕಲ್ಪಿತಗಳಲ್ಲ; ಅವನು ತನ್ನ ಕಾಲದಲ್ಲಿ ಕಾಮಿಕಾದ್ಯಾಗಮಸಂಹಿತೆಗಳನ್ನೇ ಬೇರೆ ಬೇರೆ ಪುರಾಣಗಳ ಹೆಸರಿನಿಂದ ಪ್ರಸಿದ್ಧಗೊಳಿಸಿದನು. ಪುರಾಣಂ ಎಂದರೆ ಪುರಾತನವಾದದ್ದು. ಇದೇ ಅರ್ಥವು ಬೃಹದಾರಣ್ಯಕೋಪನಿಷತ್ತಿನಲ್ಲಿಯೂ (೨-೪-೧೦), ಶತಪಥಬ್ರಾಹ್ಮಣದಲ್ಲಿಯೂ (೧೪-೫-೧೦), ಮೈತ್ರ್ಯುಪನಿಷತ್ತಿನಲ್ಲಿಯೂ (೬-೩೨) ನಿರ್ದೇಶಿಸಲ್ಪಟ್ಟಿದೆ. ಕಾಮಿಕಾದ್ಯಾ ಗಮಗಳು ವಿದ್ಯೇಶ್ವರರಿಗೂ, ರುದ್ರನಿಗೂ, ಈಶ್ವರನಿಂದ ಬೋಧಿಸಲ್ಪಟ್ಟಿರುವವು. ಹಾಗೇ ಸಂಹಿತೆಗಳಾದರೂ ವಿದ್ಯೇಶ್ವರ, ಶತರುದ್ರ, ಶಂಕರ, ನಂದಿಕೇಶ್ವರ, ಸನತ್ಕುಮಾರ ಮುಂತಾದ ಶಿವಾಗಮಗಳಲ್ಲಿಯ ಬೇರೆ ಬೇರೆ ಬೋಧ್ಯಬೋಧಕರ ಹೆಸರುಗಳನ್ನೇ ತಳೆದಿರುವವು. ವಿದ್ಯೇಶ್ವರಸಂಹಿತೆಯ ೪ ನೆಯ ಅಧ್ಯಾಯದಲ್ಲಿ ಬ್ರಹ್ಮನು ಮುನಿಗಳಿಗೆ ಹೇಳುತ್ತಾನೆ:

ತತ್ಸಾಧನಃ ಬಹುವಿಧಂ ಈಶೇನ ಬೋಧಿತಂ।
ಸಂಕ್ಷಿಪ್ಯ ತತ್ರ ವಃ ಸಾರಂ ಸಾಧನಂ ಪ್ರಬ್ರವೀಮ್ಯಹಂ॥

'ಶಿವತ್ವಪ್ರಾಪ್ತಿಗೆ ಸಾಧನವಾದ ಶಿವಲಿಂಗಾರ್ಚನಾದಿಗಳು ಬಹುವಿಧವಾಗಿರುವುದನ್ನು ಸಾಕ್ಷಾತ್ ಶಿವನೇ ಬೋಧಿಸಿದ್ದಾನೆ. ಆ ಶಿವಾರ್ಚನಾದಿ ಬಹುವಿಧ ಸಾಧನವೆಲ್ಲವನ್ನೂ ನಾನು ನಿಮಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ' ಎಂಬ ವಾಕ್ಯಗಳನ್ನು ಪರ್ಯಾಲೋಚಿಸಿದರೆ ಪುರಾಣಗಳೆಂದರೆ ಶಿವಾಗಮಗಳ ಪ್ರತಿಬಿಂಬಗಳೆಂದೇ ಸಿದ್ಧವಾಗುವುದು. ಮತ್ತು ಕೊನೆಯ ವಾಯವೀಯಸಂಹಿತೆಯ ಪೂರ್ವಖಂಡದ ಪ್ರಥಮಾಧ್ಯಾಯದಲ್ಲಿ ಪ್ರಾರಂಭಕ್ಕೇ ನೈಮಿಷಾರಣ್ಯವಾಸಿಗಳಾದ ಮುನಿಗಳು ಸೂತಮುನಿಯನ್ನು ಕುರಿತು ಪುರಾಣ ಶ್ರವಣೋತ್ಸಕತೆಯು ತಮಗೆ ವಿಶೇಷವಾಗಿರುವುದೆಂದು ಪ್ರಾರ್ಥಿಸಲು, ಸೂತಮುನಿಯು ಪುರಾಣ ಪ್ರವಚನಾರಂಭದಲ್ಲಿ.

ಅಭಿವಂದ್ಯ ಮಹಾದೇವಂ ದೇವೀಂ ಸ್ಕಂದಂ ವಿನಾಯಕಂ ।
ನನಿದನಂ ಚ ತಥಾ ವ್ಯಾಸಂ ಸಾಕ್ಷಾತ್ಸವ್ಯವತೀಸುತಂ
ವಕ್ಷ್ಯಾಮಿ ಪರಮಂ ಪುಣ್ಯಂ ಪುರಾಣಂ ವೇದಸಂಮಿತಂ ।
ಶಿವಜ್ಞಾನಾರ್ಣವಂ ಸಾಕ್ಷಾದ್ಭುಕ್ತಿಮುಕ್ತಿ ಫಲಪ್ರದಂ
ಶಬ್ದಾರ್ಥನ್ಯಾಯಸಂಯುಕ್ತೈ ರಾಗಮಾರ್ಥೈರ್ವಿಭೂಷಿತಂ।
ಶ್ವೇತಕಲ್ಪಪ್ರಸಂಗೇನ ವಾಯುನಾ ಕಥಿತಂ ಪುರಾ

ಮಹಾದೇವನನ್ನೂ, ಮಹಾದೇವಿಯನ್ನೂ, ಸ್ಕಂದನನ್ನೂ, ವಿಘ್ನೇಶ್ವರನನ್ನೂ, ನಂದಿಕೇಶ್ವರನನ್ನೂ, ವ್ಯಾಸನನ್ನೂ ಹೃದಯದಲ್ಲಿ ಭಕ್ತಿಪೂರ್ವಕವ್ಷಾಗಿ ಅಭಿವಂದಿಸಿ, ಭೋಗಮೋಕ್ಷಪ್ರದವೂ, ವೇದಾವಿರುದ್ಧವೂ,ಶಿವಜ್ಞಾನಶರಧಿಯೂ, ಭೋಗಮೋಕ್ಷಪ್ರದವೂ, ಶಬ್ದಾರ್ಥನ್ಯಾಯಗಳಿಂದಯುಕ್ತವಾದ ಶೈವಾಗಮಗಳ ಅರ್ಥಗಳಿಂದ ಶೋಭಿಸುವುದೂ, ಮೊದಲು ವಾಯುವು ಶೇತ್ವ ಕಲ್ಪ ಪ್ರಸಂಗದಲ್ಲಿ ನಿರೂಪಿಸಿದುದೂ ಆದ ವಾಯುವೀಯ ಸಂಹಿತಾತ್ಮಕಪುರಾಣವನ್ನು ಹೇಳುವೆನು ಎಂಬ ವಾಕ್ಯವು ಶಿವಾಗಮಗಳ ಅರ್ಥವನ್ನೇ ಪುರಾಣಗಳು ಬಿಂಬಿಸುತ್ತವೆ ಎಂಬುದನ್ನು ತಿಳಿಸುತ್ತದೆ.

ಅಲ್ಲದೇ ಪುರಾಣಗಳಲ್ಲಿಯ ಪತ್ಯಾದಿಪದಾರ್ಥಗಳ ನಿರ್ದೇಶವೂ, ಶಾಂತ್ಯತೀತಾದಿ ಕಲದ್ವಾರಾ ಸೃಷ್ಟಿ ವರ್ಣನೆಯೂ, ಷಡಧ್ವಾದಿಗಳ ನಿರೂಪಣೆಯೂ, ಮಲದ ಪಕ್ವಾಪಕ್ವ ಸ್ವರೂಪವಿಚಾರವೂ, ಶಿವದೀಕ್ಷೆ, ಶಿವಭಕ್ತಿ, ಶಿವಪೂಜೆ, ಶಿವವ್ರತ, ಶಿವಧ್ಯಾನ, ಶಿವಜ್ಞಾನ ಮುಂತಾದ ವಿಷಯಗಳನ್ನು ವಿಶೇಷವಾಗಿ ಆಗಮವಾಕ್ಯಗಳ ಮೇಲೆಯೇ ಕೈಯೂರಿ ಪುರಾಣಗಳು ಪ್ರತಿಪಾದಿಸಿವೆ ಎಂದು ಉಲ್ಲೇಖಿಸಿದ್ದಾರೆ.

೨.೭.೫ ಶಿವಾಗಮಗಳು ಮತ್ತು ಸಾಂಖ್ಯ

ಶ್ರೀಶಂಭುಲಿಂಗ ಶಿವಾಚಾರ್ಯರು ಆಗಮಪರಿಜ್ಞಾನವೆಂಬ ಗ್ರಂಥದ ಪುಟ ೬೭ ರಲ್ಲಿ ಸಾಂಖ್ಯದ ಮೇಲೆ ಶಿವಾಗಮಗಳ ಪ್ರಭಾವವನ್ನು ಈ ರೀತಿ ವಿವರಿಸಿದ್ದಾರೆ – ಶೈವಾಗಮಗಳಲ್ಲಿ ಪ್ರತಿಪಾದಿಸಲ್ಪಡುವ ಶುದ್ಧಾಶುದ್ಧರೂಪಗಳಾದ ಮೂವತ್ತಾರು ತತ್ತ್ವಗಳಲ್ಲಿ ಪ್ರಕೃತಿ ಮುಂತಾದ ಅಶುದ್ಧತತ್ತ್ವಗಳನ್ನು ವಿವರಿಸುವುದೇ ಸಾಂಖ್ಯಮತದ

ಧ್ಯೇಯವಾಗಿರುವುದರಿಂದ, ಈ ಮತದ ಪ್ರವರ್ತಕರು ಜಗತ್ತಿನ ಸೃಷ್ಟಿಯ ವಿಚಾರದ ಬಗ್ಗೆ ಮೂವತ್ತಾರು ತತ್ತ್ವಗಳಲ್ಲಿ ಪುರುಷ ಪ್ರಕೃತಿ ತತ್ತ್ವಗಳವರೆಗೆ ಮಾತ್ರ ಹೋಗಿ ಹಿಂತಿರುಗಿದವರಾದುದರಿಂದ, ಸಿದ್ಧಾಂತ (ಶೈವಾಗಮ) ಶಾಸ್ತ್ರದಲ್ಲಿ ಆ ಸಾಂಖ್ಯಮತವು ವೈಶೇಷಿಕಾದಿಮತದಂತೆ ಪೂರ್ವಪಕ್ಷರೂಪವಾಗಿರುವುದು ಎಂದು ಪ್ರತಿಪಾದಿಸಿದ್ದಾರೆ.

ಕಾರಣ ಉಪನಿಷತ್ತು, ಸಾಂಖ್ಯ, ಸ್ಮೃತಿ, ತರ್ಕ, ಪುರಾಣಗಳ ಮೇಲೆ ಶಿವಾಗಮಗಳು ಪ್ರಭಾವ ಬೀರಿರುವುದನ್ನು ಗಮನಿಸಿದರೆ ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಶಿವಾಗಮಗಳು ರಚನೆಗೊಂಡಿರುವ ಬಗ್ಗೆ ತಿಳಿದು ಬರುತ್ತದೆ.

ಇನ್ನು **ಬಾಹ್ಯ ಪ್ರಮಾಣಗಳ ಆಧಾರದ ಮೇಲೆ ಶಿವಾಗಮಗಳ ಕಾಲವನ್ನು** ಇಲ್ಲಿ ಚರ್ಚಿಸಲಾಗಿದೆ.[೮೧]

೧. ಹನ್ನೆರಡನೆಯ ಶತಮಾನದ ವಚನ ವಾಙ್ಮಯದಲ್ಲಿ ಶಿವಾಗಮಗಳಿಂದ ಶ್ಲೋಕಗಳು ಹೇರಳವಾಗಿ ಉದ್ಧೃತವಾಗಿವೆ. ಕಾರಣ ಶಿವಾಗಮಗಳು ೧೨ ನೇ ಶತಮಾನಕ್ಕಿಂತ ಹಿಂದಿನವು ಎಂದು ಸ್ಪಷ್ಟವಾಗಿ ಕಂಡು ಬರುತ್ತದೆ.

೨. ತಾಳೆಯ ಗರಿಗಳಲ್ಲಿ – ರಾಜೇಂದ್ರ ಚೋಳನ ದೀಕ್ಷಾಗುರುವಾದ ಈಶಾನ ಶಿವನು ಬೃಹದೀಶ್ವರ ದೇವಾಲಯದ ಸ್ಥಾಪನಾಚಾರ್ಯನು ಮತ್ತು ಅಲ್ಲಿಯ ಮಠದ ಅಧಿಪತಿಯೂ ಆಗಿದ್ದನು. ಈತನು ಕ್ರಿ. ಶ. ೧೧ ನೇ ಶತಮಾನದಲ್ಲಿ ಜೀವಿಸಿದ್ದನು. 'ಈಶಾನಶಿವ ಗುರುದೇವಪದ್ಧತಿ' ಎಂಬುದು ಈಶಾನಶಿವನ ಕೃತಿ. ಅದರಲ್ಲಿ ಶಿವಾಗಮಗಳಿಂದ ಶ್ಲೋಕಗಳು ಉದ್ಧೃತವಾಗಿವೆ. ಕಾರಣ ಆಗಮಗಳು ೧೧ ನೇ ಶತಮಾನಕ್ಕಿಂತ ಪೂರ್ವದವೆಂದು ದೃಢಪಡುತ್ತದೆ.

೩. ಭಾರವಿ ಕವಿಯು ತನ್ನ ಕಿರಾತಾರ್ಜುನೀಯ ಕೃತಿಯ ಐದನೇ ಸ್ವರ್ಗದ ೧೮ ಹಾಗೂ ೨೨ ನೇ ಶ್ಲೋಕಗಳಲ್ಲಿ ಎರಡು ಸಲ ಆಗಮಗಳನ್ನು ಉಲ್ಲೇಖಿಸಿರುತ್ತಾನೆ.

'ಇಹ ದುರಧಿಗಮ್ಯೆ ಃ ಕಿಂಚಿದೇವಾಗಮ್ಯೆಃ ಸತತಮ್
ಸ್ಮತರಂ ಪರ್ಣಯತ್ಯಂತರಮ್'
'ವೀತ ಜನ್ಮರಸಂ ಪರಂ ಶುಚಿರ್ಬ್ರಹ್ಮಣಃ ಪದಮುಪೈತು
ಮಿಚ್ಛತಾಂ । ಆಗಮಾದಿವ ತಮೋಪಹಾರಿತಃ
ಸಂಭವಂತಿ ಮತಯೋಭವಚ್ಛಿದಃ ।'

ಈ ಕಾವ್ಯದಲ್ಲಿ ಶಿವನ ಚರಿತ್ರೆಯೇ ಉಕ್ತವಾಗಿರುವುದರಿಂದ ಇಲ್ಲಿ ಶಿವಾಗಮಗಳೇ ಉಕ್ತವಾಗಿವೆ ಎಂಬುದು ಸ್ಪಷ್ಟ ಭಾರವಿ ಕವಿಯು ಕ್ರಿ ಶ ೭ ನೇ ಶತಮಾನದಲ್ಲಿದ್ದುದರಿಂದ ಶಿವಾಗಮಗಳ ಕಾಲ ೭ ನೇ ಶತಮಾನಕ್ಕಿಂತ ಹಿಂದೆ ಹೋಗುತ್ತದೆ.

---

೮೧. ಡಾ. ಆರ್.ಸಿ. ಹಿರೇಮಠರವರ ಮಹಾಯಾತ್ರೆ ಪುಟ ೬೬–೭೧ ರಲ್ಲಿ ಮತ್ತು Shivagamas – S. D. Pavate, Part 1,page 6-10 ರಲ್ಲಿಯ ವಿಷಯವನ್ನು ಕ್ರೋಢೀಕರಿಸಿ ಪ್ರತಿಪಾದಿಸಲಾಗಿದೆ.

೪. ಯಾಜ್ಞವಲ್ಕರು ತಮ್ಮ ಸ್ಮೃತಿಯ ಪ್ರಥಮ ಪ್ರಕರಣದ ೪ ನೇ ಶ್ಲೋಕದಲ್ಲಿ ಹಾರೀತನ ಕೃತಿಯನ್ನು ಉಲ್ಲೇಖಿಸುತ್ತಾರೆ. ಈ ಹಾರೀತನು ತನ್ನ ಧರ್ಮಶಾಸ್ತ್ರದಲ್ಲಿ ಹೀಗೆ ಹೇಳುತ್ತಾನೆ 'ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ । ಶ್ರುತಿ ಪ್ರಮಾಣಕಃ। ಧರ್ಮಃ। ಶ್ರುತಿಶ್ಚದ್ವಿವಿಧಾ ವೈದಿಕೀ ತಾಂತ್ರಿಕೀ ಚ।' ಶ್ರುತಿ ಪ್ರಮಾಣವಾದುದು ಧರ್ಮ. ಶ್ರುತಿಗಳು ವೈದಿಕ, ತಾಂತ್ರಿಕ ಎಂಬ ೨ ಬಗೆಯಾಗಿವೆ ಎಂದು ಹಾರೀತನ ಅಭಿಮತ.

ಹಾರೀತನ ಕಾಲದಲ್ಲಿ ತಂತ್ರಗಳು ಅಂದರೆ ಆಗಮಗಳು ವೇದಗಳ ಸರಿಸಮ ಸ್ಥಾನದಲ್ಲಿದ್ದು ಪ್ರಮಾಣಗ್ರಂಥಗಳೆನಿಸಿದ್ದು, ವೇದಗಳನ್ನು ಆಧರಿಸಿದ ಧರ್ಮಗಳಿದ್ದಂತೆ ಆಗಮಪ್ರಣೀತ ಧರ್ಮಗಳೂ ಇದ್ದುವೆಂದು ವ್ಯಕ್ತವಾಗುತ್ತದೆ. ವೇಬರ್ ಎಂಬ ಪಾಶ್ಚಿಮಾತ್ಯ ಪ್ರಾಚ್ಯತಜ್ಞನು ಯಾಜ್ಞವಲ್ಕರ ಕಾಲವನ್ನು ಕ್ರಿ. ಶ. ೨ ನೇ ಶತಮಾನವೆಂದು ಊಹಿಸಿರುವನು. ಕಾರಣ ಹಾರೀತನು ಕ್ರಿ. ಶ. ಆರಂಭದಲ್ಲಿದ್ದನೆಂದು ಊಹಿಸಬಹುದಾಗಿದೆ. ಕಾರಣ ಶಿವಾಗಮಗಳು ಕ್ರಿ. ಶ ಪ್ರಾರಂಭದಲ್ಲಿಯೇ ಅತ್ಯುನ್ನತ ಸ್ಥಾನ ಹೊಂದಿದ್ದು ಶ್ರುತಿಗಳೆಂದು ಪರಿಗಣಿತವಾಗಿ ಪೂಜ್ಯವೆನಿಸಿದ್ದವೆಂದು ಅರ್ಥವಾಗುತ್ತದೆ.

೫. ಕಾಳಿದಾಸನು ತನ್ನ ರಘುವಂಶದ ೧೦ ನೇ ಸ್ವರ್ಗದ ೨೬ ನೇ ಪದ್ಯದಲ್ಲಿ ಆಗಮಗಳನ್ನು ಉಲ್ಲೇಖಿಸುತ್ತಾನೆ.

'ಬಹುಧಾಪ್ಯಾಗಮೈರ್ಭಿನ್ನಾಃ ಪಂಥಾನಃ ಸಿದ್ಧಿಹೇತವಃ' ಕಾಳಿದಾಸನ ಕಾಲವನ್ನೂ ಭಾರತೀಯ ವಿದ್ವಾಂಸರು ಕ್ರಿ. ಪೂ. ೧ ನೇ ಶತಮಾನದಿಂದ ಕ್ರಿ. ಶ. ೧ ನೇ ಶತಮಾನವೆಂದು ನಿರ್ಣಯಿಸಿರುವರು. ಆದುದರಿಂದ ಶಿವಾಗಮಗಳ ಕಾಲ ಕ್ರಿ. ಪೂ. ಯುಗಕ್ಕೆ ಹೋಗುತ್ತದೆ.

೬. ಮಹಾಭಾರತದ ಶಾಂತಿಪರ್ವದಲ್ಲಿ ಆಗಮಗಳ ಉಲ್ಲೇಖ ಪರ್ಯಾಯವಾಗಿ ಹೀಗೆ ಬಂದಿದೆ. 'ಉಮಾಪತಿಭೂತಪತಿಃ ಶ್ರೀಕಂಠೋ ಬ್ರಹ್ಮಣಃ ಸುತಃ ಉಕ್ತವಾನಿದಮವ್ಯಯಂ ಜ್ಞಾನಂ ಪಾಶುಪತಂ ಶಿವಃ। ಪಾಂಚರಾತ್ರಸ್ಯ ಕೃತ್ಸ್ನಸ್ಯ ವೇತ್ತಾತು ಭಗವಾನ್ ಸ್ವಯಂ। ಸರ್ವೇಷು ಚ ನೃಪ ಶ್ರೇಷ್ಠೋ ಜ್ಞಾನೇಷ್ವೇತೇಷು ದೃಶ್ಯತೇ ಯಥಾಗಮಂ ಯಥಾಜ್ಞಾನಂ ನಿಷ್ಠಾ ನಾರಾಯಣ ಪ್ರಭುಃ।'

ಪಾಶುಪತ, ಪಾಂಚರಾತ್ರ ಧರ್ಮಗಳೆರಡೂ ಮಹಾಭಾರತ ಕಾಲಕ್ಕೆ ಪ್ರಸಿದ್ಧಿಯನ್ನು ಪಡೆದಿದ್ದವೆಂದು ವಿದಿತವಾಗುತ್ತದೆ. ಪಾಶುಪತ ಧರ್ಮವು ಶಿವಾಗಮಗಳನ್ನು ಆಧರಿಸಿದ್ದುದು ಸುಪ್ರಸಿದ್ಧ. ಇದಲ್ಲದೇ 'ಋತೇತ್ವಾಗಮ ಶಾಸ್ತ್ರೇಭೋ ಭ್ರೂಹಿ ತದ್ಯದಿ ಪಶ್ಯಸಿ॥' ಎಂದು ಮಹಾಭಾರತದ ಶಾಂತಿಪರ್ವ ಅಧ್ಯಾಯದ ೨೬೮ ನೇ ಶ್ಲೋಕದಲ್ಲಿ ಆಗಮಗಳ ನೇರ ಉಲ್ಲೇಖವಿದೆ. ಮಹಾಭಾರತದ ಕಾಲವು ಕ್ರಿ. ಶ. ಪೂರ್ವ ೧ ನೇ ಶತಮಾನದಿಂದ ಕ್ರಿ.ಶ. ೧ ನೇ ಶತಮಾನದವರೆಗಿನ ಅವಧಿಯಾಗಿರಬಹುದೆಂದು ವಿದ್ವಾಂಸರ ನಿರ್ಣಯ. ಕಾರಣ ಮಹಾಭಾರತದ ಪೂರ್ವದಲ್ಲಿಯೇ ಶಿವಾಗಮಗಳು ಪ್ರಸಿದ್ಧವಾಗಿದ್ದವೆಂದು ಅಭಿವ್ಯಕ್ತವಾಗುತ್ತದೆ.

೭. ಸೂತಸಂಹಿತೆಯ ಶಿವಮಹಾಲಿಂಗ ಖಂಡದಲ್ಲಿ ಶಿವಾಗಮಗಳ ಉಲ್ಲೇಖ ಮೇಲಿಂದ ಮೇಲೆ ಬರುತ್ತದೆ. 'ಅಷ್ಟಾದಶ ಪುರಾಣಾನಾಂ ಕತಾಸತ್ಯವತೀ ಸುತಃ । ಕಾಮಿಕೌದಿ ಪ್ರಭೇದಾನಾಂ ಯಥಾ ದೇವೋ ಮಹೇಶ್ವರಃ।'

೮. ಬ್ರಹ್ಮಗೀತೆಯಲ್ಲಿ ೯ ನೇ ಅಧ್ಯಾಯದಲ್ಲಿ ಹೀಗೆ ಉಕ್ತವಾಗಿದೆ 'ಶಿವಾಗಮೇಷು ಚಾದ್ವೈತಂ ಬಭಾಷೇ ಪರಮೇಶ್ವರಃ'।.

೯. ಶಿವಪುರಾಣದ ವಾಯು ಸಂಹಿತೆಯ ಅಧ್ಯಾಯ ೯ ರ ಶ್ಲೋಕ ೩೯ ರಲ್ಲಿ ಹೀಗೆ ಉಲ್ಲೇಖವಿದೆ. 'ಶ್ರೀಕಂಠೇಣ ಶಿವೇನೋಕ್ತಾ ಶಿವಾಯ್ಯೈ ಚ ಶಿವಾಗಮಃ ಶಿವಾಶ್ರಿತಾನಾಂ ಕಾರುಣ್ಯಾತ್ ಶ್ರೇಯಸಾಮೇಕ ಕಾರಣಂ।.'

೧೦. ಕೂರ್ಮಪುರಾಣದಲ್ಲಿ ಹೀಗೆ ಬರುತ್ತದೆ. 'ಏಕಮುಕ್ತಾದದೌ ಜ್ಞಾನ ಮುಪಮನ್ಯು ಮಹಾಮನಿಃ। ವೃತಂ ಪಾಶುಪತಂ ಯೋಗಂಕೃಷ್ಣಯಾಕ್ಲಿಷ ಕರ್ಮಣೇ।'

ಕೆಲವು ಪುರಾಣಗಳ ಕಾಲವನ್ನೂ ಪಾಶ್ಚಿಮಾತ್ಯ ಪಂಡಿತರು ಕ್ರಿ. ಶ. ೧೦ ನೇ ಶತಮಾನದವರೆಗೆ ತಂದರೂ ಅಮರಕೋಶದಲ್ಲಿ ಪುರಾಣದ ವ್ಯಾಖ್ಯೆ ಬಂದಿದೆ. ಕಾರಣ ಅಮರಕೋಶಕ್ಕಿಂತ ಮೊದಲು ಕೆಲವು ಮಹತ್ವದ ಪುರಾಣಗಳು ರಚನೆಯಾಗಿರಲು ಸಾಕು. ಅಂತಹ ಪುರಾಣದಲ್ಲಿ ಸ್ಕಂದ, ಕೂರ್ಮ, ಶಿವಪುರಾಣ ಇತ್ಯಾದಿಗಳು ಅಡಕವಾಗುತ್ತವೆ. ಅಮರಕೋಶದ ಕಾಲ ಕ್ರಿ. ಪೂ. ೧ ನೇ ಶತಮಾನ. ಮೇಲೆ ನಿರ್ದೇಶಿಸಿದ ಪುರಾಣಗಳು ಒಂದನೇ ಶತಮಾನಕ್ಕಿಂತ ಮೊದಲಿನವೆಂದು ಸಿದ್ಧವಾಗುತ್ತದೆ ಅಲ್ಲಿ ಉಕ್ತವಾದ ಶಿವಾಗಮಗಳು ತತ್ ಪೂರ್ವದ್ದೆಂದು ಉಕ್ತವಾಗುತ್ತದೆ.

೧೧. ಶಾಸನಗಳಲ್ಲಿ ಕಂಚಿಯ ಕೈಲಾಸನಾಥ ದೇವಾಲಯದ ಒಂದು ಶಾಸನದಲ್ಲಿ ೨೮ ಶಿವಾಗಮಗಳ ಹೆಸರುಗಳು ಬರುತ್ತವೆ. ಪಲ್ಲವ ಅರಸನಾದ ರಾಜಸಿಂಹವರ್ಮನು ಆಗಮೋಕ್ತ ಶೈವ ಮತಾನುಯಾಯಿಯಾಗಿದ್ದನೆಂದು ಅದೇ ಶಾಸನದಿಂದ ತಿಳಿದು ಬರುತ್ತದೆ. ಪಲ್ಲವರ ಕಾಲ ಕ್ರಿ. ಶ ೬–೭ ಶತಮಾನ. ಕಾರಣ ಈ ಕಾಲದ ಹೊತ್ತಿಗೆ ೨೮ ಆಗಮಗಳು ಪ್ರಸಿದ್ಧವಾಗಿರುವದು ಸ್ಪಷ್ಟ.

೧೨. ಕಾಂಭೋಜ ದೇಶದ ಶಾಸನವೊಂದರಲ್ಲಿ ಅಲ್ಲಿಯ ಅರಸು ೨ ನೇ ಜಯವರ್ಮನು ಕ್ರಿ. ಶ ೮೦೨ ರಲ್ಲಿ ದೇವರಾಜ ಎಂಬ ಲಿಂಗವನ್ನು ಸ್ಥಾಪಿಸಿ ಒಂದು ದೊಡ್ಡ ದೇವಾಲಯುವನ್ನೂ ನಿರ್ಮಿಸಿ ಶಿವಕೈವಲ್ಯನೆಂಬವನನ್ನೂ ಸ್ಥಾನಾಧಿಪತಿಯೆಂದು ನಿಯಮಿಸಿದನು. ಈ ಶಿವಕೈವಲ್ಯನಿಗೆ ಹಿರಣ್ಯಧಾಮನೆಂಬ ಶಿವಾಚಾರ್ಯನಿಂದ ಶಿವದೀಕ್ಷೆ ಕೊಡಿಸಿ ಶಿವಾಗಮಗಳನ್ನೂ ಆಶೀರ್ವಾದ ಮಾಡಿಸಿದನು. ಹೀಗೆಯೇ ಜಾವಾ, ಚಂಪಾ, ಸುಮಾತ್ರಾ, ವಾಲಿ ನಡುಗಡ್ಡೆಗಳಲ್ಲಿ ಉಪಲಬ್ಧವಿರುವ ೮೦೦ ರ ಪೂರ್ವದ ಶಿಲಾಶಾಸನಗಳಲ್ಲಿ ಶಿವಾಗಮಗಳ ಉಲ್ಲೇಖವಿದೆ. ಕಾರಣ ಶಿವಾಗಮಗಳ ಕಾಲ ಕ್ರಿ. ಶ ೮ ನೇ ಶತಮಾನಕ್ಕೆ ಹಿಂದೆ ಹೋಗುತ್ತದೆ.

೧೩. ಅದೇ ಕಾಂಭೋಜ ದೇಶದ (Combodia) ಥೋಕ್ ಕೊಕ್‌ಥೋಮ್

ಎಂಬ ದೊರೆಯ ಸಿಸ್ತೋ ಪ್ರೋಮ ಪ್ರಾಂತದಲ್ಲಿ ದೊರೆತ ಕ್ರಿ. ಶ. ೧೦೫೨ ರ ಒಂದು ಶಾಸನದಲ್ಲಿ ಕೆಲವು ಶಿವಾಗಮಗಳ ಹೆಸರುಗಳು ಬಂದಿವೆ. ಈ ಶಾಸನವು ಕಾಂಭೋಜ ದೇಶದಲ್ಲಿ ಶೈವಧರ್ಮವು ೧೧ ನೇ ಶತಮಾನಕ್ಕಿಂತ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದುದನ್ನೂ ಸೂಚಿಸುತ್ತದೆ.

೧೪. ಕುಶಾನ, ತ್ರೈಕೂಟ, ಭವನಾಗ ಮೊದಲಾದ ಪ್ರಾಚೀನ ರಾಜಮನೆತನಗಳು ಶೈವಮತದ ಅಭಿವೃದ್ಧಿಗೆ ವಿಶೇಷ ಪ್ರೋತ್ಸಾಹವಿತ್ತಿವೆ. ಕುಶಾನ ವಂಶದ ವಿಮಕಡ್‌ಫೀಸಿಸ್ ಎಂಬುವನು ತನ್ನ ಬಂಗಾರದ ನಾಣ್ಯಗಳ ಮೇಲೆ ಶಿವನ ಮೂರ್ತಿಯನ್ನೂ ಮತ್ತು ಮಹೇಶ್ವರ ಎಂಬ ಅಕ್ಷರಗಳನ್ನೂ ಕೊರೆಸಿರುವನು. ಈತನು ಕ್ರಿ. ಶ. ೧ ರಲ್ಲಿದ್ದನೆಂದೂ ಈತನೇ ಶಕಕರ್ತನೆಂದೂ ಕೆಲವು ಇತಿಹಾಸ ತಜ್ಞರ ಅಭಿಮತ. ಕ್ರಿ. ಶ. ೩-೪ ನೆಯ ಶತಮಾನದಲ್ಲಿದ್ದ ಭವನಾಗರು ಶಿವಲಿಂಗಧಾರಿಗಳಾಗಿದ್ದರೆಂದೂ ಅವರ ಆಪ್ತರಾದ ವಾಕಾಟಕರು ಶೈವಮತಾವಲಂಬಿಗಳಾಗಿದ್ದರೆಂದೂ ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಕಾರಣ ಶಿವಾಗಮಗಳು ಆಗಲೇ ಅಸ್ತಿತ್ವದಲ್ಲಿದ್ದವೆಂಬುದನ್ನೂ ಇದು ಸೂಚಿಸುತ್ತದೆ.

೧೫. ನೇಪಾಳದ ದರ್ಬಾರ ಗ್ರಂಥಾಲಯದಲ್ಲಿ ಬ್ರಹ್ಮಯಾಮಲ ಎಂಬ ಗ್ರಂಥವಿದೆ. ಈ ಗ್ರಂಥವನ್ನು ಕ್ರಿ. ಶ. ೧೦೫೨ ರಲ್ಲಿ ಪ್ರತಿಮಾಡಿಕೊಳ್ಳಲಾಗಿದೆ. ಈ ಗ್ರಂಥದ ೩೯ ನೇ ಅಧ್ಯಾಯದಲ್ಲಿ ಕೆಲವು ಆಗಮಗಳ ಹೆಸರುಗಳಿವೆ.

ವಿಜಯಂ ಚೈವ ನಿಃಶ್ವಾಸಂ ಸ್ವಾಯಂಭುವಂ ಅತಃ ಪರಂ।
ವಾತುಲಂ ವೀರಭದ್ರಂಚ ರೌರವಂ ಮಾಕುಟಂತಥಾ
ವೀರೇಶಶ್ಚ ತಥಾ ಚಾನ್ಯಂ ಲಲಿತಂ ತಥಾ
ಸಿದ್ಧಿಸತ್ವಾನಕಂ ಚೈವ ಸರ್ವೋದ್ಗೀತಮತಃ ಪರಂ।
ಕಿರಣಂ ಚ ಮಹಾದೇವಿ ಪಾರಮೇಶ್ವರ ಏವ ಚ ।

೧೬. ನೇಪಾಳ ದರ್ಬಾರ ಗ್ರಂಥಾಲಯದಲ್ಲಿ (Haraprasad Shastri, Nepal Darbar Library Catalogue) ನಿಶ್ವಾಸ ತಂತ್ರ ಸಂಹಿತೆ ಎಂಬ ಆಗಮದ ಕೈಬರಹದ ಪ್ರತಿಯುಂಟು. ಇದನ್ನು ಗುಪ್ತಾಕ್ಷರಗಳಲ್ಲಿ ಬರೆಯಲಾಗಿದೆ. ಲಿಪಿಶಾಸ್ತ್ರದ ಆಧಾರದ ಮೇಲೆ ಈ ಗ್ರಂಥವನ್ನು ೮ ನೇ ಶತಮಾನದಲ್ಲಿ ಪ್ರತಿ ಮಾಡಲಾಗಿದೆಯೆಂದು ನಿರ್ಧರಿಸಲಾಗಿದೆ. ಇದರಲ್ಲಿ ಶೈವಾಗಮಗಳ ಉಲ್ಲೇಖ ೨೪-ಅ, ೨೪-ಬ ಪತ್ರಗಳಲ್ಲಿ ಹೀಗೆ ಬಂದಿದೆ.

ಶಿವತಂತ್ರಸ್ಯಚೋತ್ಪತ್ತಿಂ ಕೀರ್ತ್ಯಮಾನಂ ನಿಬೋಧಮೇ।
ಕಾಮಿಕಂ ಯೋಗಜಂ ದಿವ್ಯಂ ಕಾರಣಮಜಿತಂ ತಥಾ
ದೀಪ್ತಂ ಸೂಕ್ಷ್ಮಂಚ ಸಾಹಸ್ರಂ ಅಸುರ ಸುಪ್ರಭೇದೀಚ।
ಅನಂತ ಶಿವಶಾಸ್ತ್ರಂತು ದಶಧಾ ಪರಿಕೀರ್ತಿತಂ।
ಪುನಶ್ಚಾಷ್ಟಾದಶ ಬೇಧಂ ರುದ್ರೇಣ ಪರಿಕೀರ್ತತಂ।
ವಿಜಯಂ ಪ್ರಥಮಂ ಹ್ಯೇಷಾಂ ನಿಃಶ್ವಾಸಂ ತದನಂತರಂ
ವೀರಭದ್ರಮಿತಿ ಖ್ಯಾತಂ ಲಲಿತಂ ರೌರವಂ ಮಾಕುಟಸ್ತಥಾ

ವೀರಂ ಚಂದ್ರಜ್ಞಾನಂ ಚ ಮುಖ ಬಿಂಬಕಂ ಪ್ರೋದ್ಗೀತಂ।
ಲಲಿತಂ ಚೈವ ಸಿದ್ದಂ ಸಂತಾನ ಮೇಮುಚ ಸರ್ವೋದೀತಂಚ ವಿಜ್ಞೇಯಂ
ಕಿರಣಂ ಪಾರಮೇಶ್ವರಂ ಪಾರಮೇಶ್ವರ ತಂತ್ರೋಯಂ
ಯೇಷುದೇವೇಷು ಕೀರ್ತಿತಂ॥
ಅಷ್ಟವಿಂಶತಿ ತಂತ್ರಾಣಿ ಪ್ರಸಿದ್ಧಾನಿ ಸಹಸ್ರಶಃ।

ಇದರಿಂದ ೨೮ ಶಿವಾಗಮಗಳ ಕಾಲ ಕ್ರಿ. ಶ. ೮ನೇ ಶತಮಾನಕ್ಕಿಂತ ಹಿಂದೆ ಹೋಗುತ್ತದೆ.

೧೭. ಕೆಂಬ್ರಿಜ್ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಕೆಲವು ಶಿವಾಗಮಗಳ ತಾಳೆಯೋಲೆಯ ಗ್ರಂಥಗಳಿವೆ. ಅವುಗಳಲ್ಲಿ ಕೆಲವನ್ನು ಕ್ರಿ. ಶ ೭ ನೇ ಶತಮಾನದಲ್ಲಿ ಪ್ರತಿಮಾಡಿಕೊಂಡ ಉಲ್ಲೇಖವಿದೆ. ಕಾರಣ ಶಿವಾಗಮಗಳ ಕಾಲ ಕ್ರಿ. ಶ ೭ ನೇ ಶತಮಾನಕ್ಕಿಂತ ಹಿಂದೆ ಹೋಗುತ್ತದೆ.

೧೮. ಆಗಮ ತಜ್ಞರಾದ ಡಾ॥ ಎಸ್.ಸಿ. ನಂದಿಮಠರು "ಈಗ ಉಪಲಬ್ಧವಿದ್ದ ಆಧಾರಗಳಿಂದ ಶಿವಾಗಮಗಳ ಕಾಲವನ್ನು ಕ್ರಿ. ಶ. ೧ ನೇ ಶತಮಾನಕ್ಕಿಂತ ಹಿಂದೆ ಒಯ್ಯಬಹುದು" ಎಂದು ಅಭಿಮತ ಇತ್ತಿರುವರು.

ಹಲವು ಉಪನಿಷತ್ತುಗಳಂತೆ ಕೆಲವು ಆಗಮಗಳಾದರೂ ಈಚಿನವಿರಬಹುದು. ಉಪಲಬ್ಧವಾದ ಆಗಮಗಳಲ್ಲಿ ಕೆಲವು ಭಾಗಗಳು ಸೇರಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

೨.೮ ಶಿವಾಗಮಗಳ ಅನುಪಲಬ್ಧತ್ವದ ವಿಚಾರ[೮೨]

ಪ್ರಾಚೀನ ಕಾಲದಲ್ಲಿಯೇ ಆಗಮಗಳು ವೇದಗಳಷ್ಟೇ ಪಾವಿತ್ರ್ಯ ಪ್ರಾಮಾಣ್ಯಗಳನ್ನು ಪಡೆದು ಶೃತಿಯ ಸ್ಥಾನದಲ್ಲಿ ನಿಂತಿದ್ದವು. ಅಂತೆಯೇ ಹಾರೀತ ಋಷಿಯು (ಕ್ರಿ. ಶ ೧ ನೇ ಶತಮಾನ) ಶೃತಿಶ್ವದ್ವಿವಿಧಾ ವೈದೀಕಿ ತಾಂತ್ರಿಕೀ ಚ ಎಂದು ಶೃತಿಯಲ್ಲಿ ಎರಡು ಭಾಗಗಳನ್ನು ಕಲ್ಪಿಸಿ ಅವನ್ನು ವೈದಿಕಿ (ವೇದಗಳಿಗೆ ಸಂಬಂಧಪಟ್ಟವು), ತಾಂತ್ರೀಕಿ (ಆಗಮಗಳನ್ನು ಆಧರಿಸಿದವು) ಎಂದು ಕರೆದಿರುವನು.

ವೇದ ಆಗಮ ಧರ್ಮಗಳೆರಡೂ ಭರತವರ್ಷದಲ್ಲಿ ಒಂದರ ಮೇಲೆ ಇನ್ನೊಂದು ಪರಸ್ಪರ ಪ್ರಭಾವ ಬೀರುತ್ತಾ ಮುನ್ನಡೆದಿರುವಾಗ ಅವುಗಳ ನಡುವಿನ ಅಂತರ ಕಡಿಮೆಯಾಗುತ್ತಾ ನಡೆದುದು ಸ್ವಾಭಾವಿಕ. ೮೦ ಪುರಾಣಗಳು, ತಿರುಮೋಲ್ಲರ್, ಹರದತ್ತ ಶಿವಾಚಾರ್ಯರು, ಶ್ರೀಕಂಠ ಮೊದಲಾದ ಶೈವಸಿದ್ಧಾಂತದ ಆಚಾರ್ಯರು, ವೇದ ಮತ್ತು ಆಗಮ ಸಿದ್ಧಾಂತಗಳಲ್ಲಿ ಭಿನ್ನತೆಯನ್ನು ಸಮನ್ವಯಗೊಳಿಸಲು ವಿಶ್ವಪ್ರಯತ್ನ ಮಾಡಿದರು. ಹರದತ್ತ ಶಿವಾಚಾರ್ಯರು ವೇದ ಮತ್ತು ಆಗಮಗಳ ವಿಚಾರ ಪ್ರಣಾಳಿಕೆಯಲ್ಲಿ

---

೮೨. ಡಾ॥ ಅರ್. ಸಿ. ಹಿರೇಮಠರ ಮಹಾಯಾತ್ರೆ, ಪ್ರಕಾಶನ ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೭ ಪುಟ ೭೯–೮೩ ರಲ್ಲಿ ಉದ್ಧೃತಗೊಂಡ ವಿಷಯವನ್ನೇ ಸಂಕ್ಷೇಪಿಸಲಾಗಿದೆ.

ಐಕ್ಯತೆಯನ್ನುಂಟು ಮಾಡಲು ಪರಿಶ್ರಮ ಪಟ್ಟಿರುವರು. ಅವರು ತಮ್ಮ ತಾತ್ಪರ್ಯಸಂಗ್ರಹ ಎಂಬ ಗ್ರಂಥದುದ್ದಕ್ಕೂ ಆಗಮಿಕ ಪದ್ಧತಿಯ ಶಿವ ಪೂಜೆಯು ವೇದಗಳ ಸಂಪೂರ್ಣ ಒಪ್ಪಿಗೆ ಮತ್ತು ಮನ್ನಣೆ ಪಡೆದಿರುವುದಾಗಿ ಸ್ಪಷ್ಟಪಡಿಸಿರುವರು. ತಿರುಮೂಲರ್ ಅವರ ಹೇಳಿಕೆ ಗಮನಾರ್ಹವಾಗಿದೆ.

The Veda with the Agama is the truth. They are the words of the Lord. The revelations of the Lord are to be studies as the general & special doctorines, On enquiry, they are taken to be different as giving also two different sets on conclusions by ordinary man, but to the great once they are non different.

ವೇದ ಆಗಮಗಳೆರಡೂ ಪರಮಾತ್ಮನ ಉಸಿರಾದುದರಿಂದ ಅವುಗಳ ತತ್ವಗಳನ್ನು ಅನುಕ್ರಮವಾಗಿ ಸಾಮಾನ್ಯ ಮತ್ತು ವಿಶೇಷವೆಂದು ಪರಿಗಣಿಸಿ ಅರ್ಥಮಾಡಿಕೊಳ್ಳಬೇಕು. ಸಾಮಾನ್ಯರ ದೃಷ್ಟಿಗೆ ಅವೆರಡೂ ಭಿನ್ನ ಭಿನ್ನ ನಿರ್ಣಯಗಳನ್ನು ನೀಡಿದಂತೆ ತೋರಿದರೂ ಮಹಾತ್ಮರ ಅಭಿಮತದಲ್ಲಿ ಅವು ಭಿನ್ನವಲ್ಲ ಎಂಬ ಅಭಿಪ್ರಾಯ ಅತ್ಯಂತ ಮಹತ್ವವಾದುದು. ಧರ್ಮಶಾಸ್ತ್ರ, ಪುರಾಣಗಳೂ ಸಹ ಇವೆರಡರ ಸಮನ್ವಯತೆಯನ್ನು ಎತ್ತಿ ತೋರಿಸಿವೆ. ಭಾಗವತ ಪುರಾಣ[೮೩] ಮತ್ತು ವರಾಹ ಪುರಾಣಗಳು ವಿಷ್ಣು, ಮಹೇಶ್ವರರ ಪೂಜೆಯನ್ನು ಆಗಮ ಮತ್ತು ವೇದಗಳ ವಿಧಿಯನ್ವಯ ಮಾಡಬೇಕೆಂದು ತಿಳಿಸುತ್ತವೆ.

ಹೀಗೆ ಎರಡೂ ಪಥಗಳನ್ನು ಒಂದುಗೂಡಿಸುವ ಪ್ರಯತ್ನಗಳು ಒಳ್ಳೇ ತೀವ್ರಗತಿಯಿಂದ ನಡೆದರೂ ಕೊನೆಯಲ್ಲಿ ಕಂಡುಬಂದ ಪರಿಣಾಮ ತೀರ ವಿಪರೀತವಾಗಿದೆ.

ಕಾಲಾನುಕ್ರಮದಲ್ಲಿ ಆಗಮಗಳ ಪ್ರಭಾವ ಸಾಮಾನ್ಯ ಜನಜೀವನದ ಮೇಲೆ ವಿಶೇಷವಾಗಿ ಆಗುತ್ತ ಹೋದಂತೆ ವೇದವಾದರತರು ಹೆಚ್ಚು ಜಾಗರೂಕರಾಗಿ ವೇದ ಪ್ರಾಮಾಣ್ಯ ಹಾಗೂ ಪಾರಮ್ಯಗಳನ್ನು ಜೋರಾಗಿ ಪ್ರತಿಪಾದಿಸತೊಡಗಿದರು. ಕೆಲವು ಜನ ಶಾಕ್ತರೂ ಹಾಗೂ ಇತರರು ಆಗಮಗಳ ತಾಂತ್ರಿಕತೆಯನ್ನು ತಪ್ಪಾಗಿ ಬಳಸತೊಡಗಿದುದರಿಂದ ಆಗಮಗಳ ಬಗೆಗೆ ಗೌರವ ಕಡಿಮೆಯಾಗುತ್ತ ಗೌಣಭಾವನೆ ಬೆಳೆಯತೊಡಗಿತು.

ಆಗಮಗಳಿಂದ ವೇದಗಳು ಅನೇಕ ಅಂಶಗಳನ್ನು ಪಡೆದಿದ್ದರೂ ಕೊನೆಗೆ ವೇದಗಳ ಕೈ ಮೇಲಾಗಿದ್ದುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆಗಮಗಳು ವರ್ಣಾಶ್ರಮವನ್ನೂ ಒಪ್ಪಿದರೂ ದೀಕ್ಷೆಯಾದವರು ವರ್ಣಾತೀತರಾಗುವರೆಂಬುದು ಅವುಗಳ ನಂಬುಗೆಯಾಗಿತ್ತು. ಶೂದ್ರರು, ವೈಶ್ಯರು, ಸ್ತ್ರೀಯರು ಈ ಶಿವ ದೀಕ್ಷೆಯನ್ನು ಪಡೆಯಲರ್ಹರಾಗಿರುತ್ತಿದ್ದರು. ವೇದ ಮಾರ್ಗದಲ್ಲಿ ಚ್ಯುತರಾದ ವ್ರಾತ್ಯರು ಆಗಮದೀಕ್ಷೆ

---

೮೩. ಭಾಗವತ ಪುರಾಣ ಅಧ್ಯಾಯ ೧೧ ೩– ೨೭, ೪೭, ೪೮

ಪಡೆದು ಪುನೀತರಾಗಬಹುದಾಗಿದ್ದಿತು. 'ವೇದಮಾಗಧ ಪ್ರಚ್ಯುತಾನಾಂ ತಂತ್ರಮಾರ್ಗಪ್ರವೇಶನಂ ಸ್ತ್ರೀ ಶೂದ್ರ ಬ್ರಹ್ಮ ಬಂಧೂನಾಂ ತಂತ್ರಮಾರ್ಗಾಧಿಕಾರಿತಾ ಶ್ರುತಿಪಥಗಲಿತಾನಾಂ ಮಾನವಾನಾಂ ಹಿ ತಂತ್ರಂ'-ಹೀಗೆ ಆಗಮಗಳು ವೇದ ಮಾರ್ಗಗಲಿತರಾದವರಿಗೆ ಮೋಕ್ಷ ಮಾರ್ಗವನ್ನು ತೋರಿಸಿಕೊಡತೊಡಗಿದವು. ಅಲ್ಲದೇ ಅವು ವರ್ಣಾಶ್ರಮದ ಭೇದವನ್ನು ಅಳಿಸತೊಡಗಿದವು ಅಲ್ಲದೇ ಅವು ವರ್ಣಾಶ್ರಮವನ್ನು ಮೀರಿ ಅತಿವರ್ಣಾಶ್ರಮವನ್ನು ಸ್ಥಾಪಿಸಿದವು. ಇದು ವರ್ಣಾನಾಂ ಬ್ರಾಹ್ಮಣಃ ಶ್ರೇಷ್ಠ ಎಂದೆನೆಸಿಕೊಂಡ ಬ್ರಾಹ್ಮಣರಿಗೆ ಪಥ್ಯವೆನಿಸಲಿಲ್ಲ. ಎಲ್ಲ ಧಾರ್ಮಿಕ ಸಾಹಿತ್ಯ ವಿಧಿ ವಿಧಾನಗಳನ್ನು ತಮ್ಮ ಅಂಕಿತದಲ್ಲಿಟ್ಟುಕೊಂಡು ಈ ಜನ ಆಗಮಗಳನ್ನು ವರ್ಣಸಂಕರದ ನೆವದಿಂದ ದೂಷಿಸಲು ಪ್ರಾರಂಭಿಸಿದರು. ಬ್ರಾಹ್ಮಣರ ಶಾಸ್ತ್ರಪುರಾಣಗಳಲ್ಲಿ ತಂತ್ರಗಳ ನಿಂದನೆ ಆರಂಭವಾಯಿತು.

ಸೂತ ಸಂಹಿತೆಯಲ್ಲಿ ಹೀಗೆ ಹೇಳಲಾಗಿದೆ-

ಪಾಂಚರಾತ್ರಾದಿ ಮಾರ್ಗಾಣಾಂ ವೇದ ಮೂಲತ್ವ ಮಾಸ್ತಿಕಾಃ
ನಹಿ ಸ್ವತಂತ್ರಾಸ್ತೇನ್ಯೆತೇ ಭ್ರಾಂತಿ ಮೂಲ ನಿಬಂಧನಾಃ
ವಾಮ ಪಾಶುಪತಾದೀನಾಮ್ ಶೌತಾನಾಂ ಪರಿಗ್ರಹಃ

ವಾಮಪಾಶುಪತಾದಿಗಳನ್ನು ಅವೈದಿಕವೆಂದು ಖಂಡಿಸಲಾಗಿದೆ. ಬ್ರಹ್ಮ ವೈವರ್ತದಲ್ಲಿ ಹೀಗೆ ಹೇಳಲಾಗಿದೆ-

ವಿಡ್ ಭಿಕ್ಷಾಶ್ಚೈವ ಯೇಕೇಚಿತ್ ಕಪಾಲಕೃತ ಭೂಷಣಾಃ
ಶೈವಾಃ ಪಾಶುಪತಾಶ್ಚಾನ್ಯಾ ಪಾಂಚರಾತ್ರಾಸ್ತಥಾಪರೇ
ತಥಾ ಚಾನ್ಯೇದುರಾತ್ಮನಃ ಸರ್ವೇಪ್ಯಸುರದೈವತಾಃ ।
ಪಾಶಬದ್ಧೇನ ತ್ರಯೀ ಶಚ್ಚೌಜಗತಃ ಪಾಲನಾತ್ಮನಃ
ತಂ ಖಂಡಯಂತಿಯಸ್ಮಾತ್ತೇ ಪಾಖಂಡಾಸ್ತೇನ ಹೇತುನಾ

ತಂತ್ರ ಮಾರ್ಗಾವಲಂಬಿಗಳಾದ ಕಾಪಾಲಿಕರು, ಶೈವರು, ಪಾಶುಪತರು ಪಾಂಚರಾತ್ರರು ಇವರೇ ಮೊದಲಾದವರನ್ನು ದುರಾತ್ಮರೆಂದು ಪಾಖಂಡಿಗಳೆಂದೂ ನಿಂದಿಸಲಾಗಿದೆ.

ರುದ್ರನು ವೇದಮಾರ್ಗಚ್ಯುತರಾದವರನ್ನೂ ಮೋಸದಿಂದ ತನ್ನತ್ತ ಸೆಳೆಯುವುದಕ್ಕಾಗಿ ಈ ತಂತ್ರಗಳನ್ನು ರಚಿಸಿದನೆಂದು ವರಾಹ ಪುರಾಣವು ಹೇಳುತ್ತದೆ. ಕೂರ್ಮಪುರಾಣವೂ ಇದೇ ಅಭಿಪ್ರಾಯವನ್ನು ವಿವರಿಸುತ್ತದೆ. ಭಟ್ಟೋಜಿ ದೀಕ್ಷಿತನು ತನ್ನ ತಂತ್ರಾಧಿಕಾರ ನಿರ್ಣಯದಲ್ಲಿ ತಂತ್ರಗಳು ಅನಧಿಕೃತ ಗ್ರಂಥಗಳೆಂದೂ ಅವು ಜನತೆಯನ್ನು ಮೋಸಗೊಳಿಸುತ್ತವೆಂದೂ ಹೇಳಿದ. ಅನೇಕ ಶ್ಲೋಕಗಳನ್ನು ವಾಶಿಷ್ಠಪುರಾಣ, ಲಿಂಗ ಪುರಾಣ, ಸ್ಕಂದ ಮೊದಲಾದವುಗಳಿಂದ ಉದ್ಧರಿಸಿರುವನು. ಹೀಗೆ ಆಗಮಗಳು ಅವೈದಿಕವೆಂದು ಹೇಳುವ, ಅವನ್ನು ನಿಂದಿಸುವ ಕಾರ್ಯ ಮುಂದುವರೆಯಿತು. ಈ ಸಮಯದಲ್ಲಿ ಆಗಮಗಳೂ ಸುಮ್ಮನೆ ಕುಳಿತುಕೊಳ್ಳಲಿಲ್ಲ.

'ತಂತ್ರೇಷುದೀಕ್ಷಿತೋ ಮರ್ತ್ಯೋ ವೈದಿಕನ್ನಸ್ಪೃಶ್ಯೈತ್' ತಂತ್ರಮಾರ್ಗದಲ್ಲಿ ದೀಕ್ಷೆ ಪಡೆದವರು ವೈದಿಕರನ್ನು ಮುಟ್ಟಬಾರದೆಂದು ಸಾರಿದವು. ವೇದ ಆಗಮಗಳ ನಡುವೆ ನಡೆದ ಹೋರಾಟದಲ್ಲಿ ಕೊನೆಗೆ ಜಯ ದೊರೆತುದು ವೇದಗಳಿಗೆ ಮಾತ್ರ.

ತಂತ್ರಗಳು ದ್ವಿತೀಯ ದರ್ಜೆಯ ಕೃತಿಗಳೆನಿಸಿದವು. ತಮ್ಮ ಪಾವಿತ್ರ್ಯವನ್ನು ಕಾಪಾಡಿಕೊಳ್ಳಲು ಅವು ವೇದಗಳಿಗೆ ಶರಣು ಹೋಗಬೇಕಾಯಿತು. ಕೊನೆಗೆ ತಂತ್ರಗಳು ವೇದ ಜನ್ಯವೆಂಬ ಭಾವನೆ ಉಂಟಾಯಿತು. ಎಲ್ಲ ಆಗಮಗಳೂ ಈ ವಿಚಾರ ಒಪ್ಪದಿದ್ದಾಗ ಕೆಲವು ಪುರಾಣಗಳು ಆಗಮಗಳನ್ನೇ ಶ್ರೌತ, ಅಶ್ರೌತ ಎಂದು ಎರಡು ಬಗೆಯಾಗಿ ವಿಂಗಡಿಸಿದವು. ಶಿವಪುರಾಣದ ವಾಯುಸಂಹಿತೆಯ ಉತ್ತರಭಾಗದ ೧೭೭-೧೭೮ ನೇ ಶ್ಲೋಕದಲ್ಲಿ ಹೀಗೆ ಹೇಳುತ್ತದೆ.

'ಶಿವಾಗಮೋಽಪಿ ದ್ವಿವಿಧಃ ಶ್ರೌತೋಽಶ್ರೌತಶ್ಚ ಸಂಸ್ಕೃತಾಃ ಶ್ರುತಿ ಸಾರಮಯಃ ಶ್ರೌತಃ ಸ್ವತಂತ್ರ ಇತಿಃ ಸ್ಮೃತಃ' ಒಂದು ಕಾಲಕ್ಕೆ 'ಶ್ರುತಿಶ್ಚ ದ್ವಿವಿಧಾ ವೈದಿಕೀ ತಾಂತ್ರಿಕೀಚ' ಎನ್ನುವಷ್ಟು ಉನ್ನತ ಸ್ಥಾನದಲ್ಲಿದ್ದ ತಂತ್ರಗಳು ಈಗ ಶ್ರೌತ ಮತ್ತು ಸ್ವತಂತ್ರ ಎಂದು ಇಬ್ಭಾಗವಾದವು. ಕೊನೆಗೆ ತಂತ್ರಗಳು ವೇದವಾದರತರ ಸಂಪೂರ್ಣ ಭರ್ತ್ಸನೆಗೆ ತುತ್ತಾಗಿ ಮೂಲೆಗುಂಪಾದವು.

ಇದಕ್ಕೆ ಇನ್ನೊಂದು ಕಾರಣವೂ ಉಂಟು. ಆಗಮಗಳು ಶೈವ, ಶಾಕ್ತ, ಪಾಂಚರಾತ್ರ ಎಂದು ಮೂರು ಬಗೆಯಾಗಿವೆ. ಇವುಗಳಲ್ಲಿ ಶಿವನೇ ಶ್ರೇಷ್ಠನೆಂದು ಶೈವರೂ, ವಿಷ್ಣುಶ್ರೇಷ್ಠನೆಂದು ಪಾಂಚರಾತ್ರರು ವಾದಿಸತೊಡಗಿ ಈ ವಾದವಿವಾದದಲ್ಲಿ ಶಿವಾಗಮಗಳು ಬಹಳ ಹಾನಿಗೆ ಒಳಗಾದವು.

ತಾಂತ್ರಿಕ ವಿಧಾನಗಳನ್ನು ಅಜ್ಞರಾದ ಸಾಮಾನ್ಯರು ತಿಳಿಯದೆ ಅವುಗಳ ದುರುಪಯೋಗ ಮಾಡಿಕೊಳ್ಳತೊಡಗಿದರು. ಪಂಚ 'ಮ'ಕಾರಗಳ ದುರುಪಯೋಗವಾಗಿ ಜನ ಸ್ತ್ರೀಲೋಲುಪತೆ, ಮದ್ಯಪಾನ, ಮಾಂಸಭಕ್ಷಣೆ ಮುಂತಾದವುಗಳಲ್ಲಿ ನಿರತರಾದರು. ತಾವೂ ಹಾಳಾದರು, ಜಗತ್ತಿನ ಧಾರ್ಮಿಕ ವಾಙ್ಮಯದಲ್ಲಿ ಅಗ್ರಸ್ಥಾನವನ್ನು ಪಡೆದಿದ್ದ ಆಗಮಸಾಹಿತ್ಯಕ್ಕೆ ಕೆಟ್ಟಹೆಸರನ್ನು ತಂದರು. ಶಂಕರ ವಿಜಯವು ಇಂತಹ ಅನೇಕ ಕಥೆಗಳನ್ನು ವಿವರಿಸುತ್ತದೆ. ತಾಂತ್ರಿಕ ಷಟ್‌ಕರ್ಮದ ದುರ್ಬಳಕೆಯೂ ವಿಶೇಷವಾಗಿ ಆಗತೊಡಗಿತು. ಆದುದರಿಂದ ಆಗಮಗಳ ಅನೇಕ ವಿಧಿ ವಿಧಾನಗಳು ವೇದ ಬಾಹಿರವೆನಿಸಿದವು.

ಕೆ. ಬಿ. ಪಾಠಕ ಸ್ಮಾರಕ ಸಂಪುಟದಲ್ಲಿ ಈ ವಿಷಯವನ್ನು ವಿವರಿಸುವ ಉಲ್ಲೇಖ ಹೀಗೆ ಬಂದಿದೆ.

"It must be confessed by an unbased critic that the denunciations of the Tantras were not wholly unmerited. People had begun to take part in all kinds of excesses from an early period

under the cover of Tantrikism. As a matter of fact the Tantra rites that have been tabooed for the ordinary man for the exvessive difficulty involved in their performance, came to be regarded as the easiest means leadig to salvation. The popular view with regard to these rites is reflected in a short stanza spoken by a Kapalika in the Mattavilasa (1-7) of Mahendra Varman of Pallava dynasty. He is glad that Lord Pashupati has pound an easy way to salvation e.g. through the enjoyment resulting from the drinking of wine and looking at the face of the beloved lady. The Karpura manjari of Rajashekhara echoes the same thing when the Koula Patha is praised in that it makes provision for the use of meat and wine and when the Lord Pashupati as eulogued for his showing the path of salvation through sexual enjoyment and wine some of the tantras had developed a form of religion which was brought to the level of very thinly veiled kamasutra.

The Tantra form of worship had at that time actually reached such a stage of object and degeneration at the hands of at least a section of its followers that it naturally invited all kinds of Vituperation against it in general

ಶೈವ ಪಂಥಗಳಲ್ಲಿಯ ಕಾಪಾಲಿಕ, ಶಾಕ್ತ ಮೊದಲಾದವರು ಹೀಗೆ ಭರ್ತ್ಸನೆಗೆ ಒಳಗಾದುದರಿಂದ ಒಟ್ಟು ಶೈವವೇ ಒಂದು ಬಗೆಯ ನಿಂದನೆಗೆ ಒಳಗಾದಂತಾಯಿತು. ಆದುದರಿಂದಲೇ ಶಿವಾಗಮದ ಪ್ರತಿಗಳನ್ನು ವೇದಗಳಷ್ಟು ಶ್ರದ್ಧೆಯಿಂದ ಸಂರಕ್ಷಣೆ ಮಾಡಿಕೊಂಡು ಬರುವುದಾಗಲಿಲ್ಲ.

ಶಿವಾಗಮಗಳ ಉಪಲಬ್ಧತ್ವ

ಕೆಲವು ಮೂಲ ಆಗಮಗಳು ಮತ್ತು ಉಪಾಗಮಗಳು ಉಪಲಬ್ಧವಾಗಿವೆ. ಅವು ಕೂಡಾ ಸಮಗ್ರವಾಗಿ ದೊರೆಯುವುದಿಲ್ಲ. ಮೂಲಾಗಮಗಳಲ್ಲಾಗಲೀ, ಉಪಾಗಮಗಳಲ್ಲಾಗಲೀ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ, ಜ್ಞಾನಪಾದವೆಂದು ನಾಲ್ಕು ನಾಲ್ಕು ಪಾದಗಳಿರುತ್ತವೆ ಉಪಲಬ್ಧವಾದ ಕೆಲವು ಆಗಮಗಳಲ್ಲಿ ನಾಲ್ಕು ಪಾದಗಳು ದೊರೆಯುವುದಿಲ್ಲ. ಇನ್ನೊಂದು ವಿಚಾರವೆಂದರೆ ಆಗಮಗಳು ಪೂರ್ವ ಮತ್ತು ಉತ್ತರವೆಂದು ಎರಡೆರಡು ಭಾಗಗಳನ್ನು ಹೊಂದಿವೆ. ಸಿದ್ಧಾಂತ ಶಿಖಾಮಣಿ, ಶ್ರೀಕರ ಭಾಷ್ಯ, ಕ್ರಿಯಾಸಾರ, ಕೈವಲ್ಯಸಾರ ಮುಂತಾದ ಪ್ರಮಾಣಗ್ರಂಥಗಳು ಹಾಗೂ ಬಸವಾದಿ ಶಿವಶರಣರ ವಚನಗಳಲ್ಲಿ ಉಲ್ಲೇಖಿಸಲ್ಪಟ್ಟ ಆಗಮೋಕ್ತಿಗಳಿಂದ ನಮಗೆ

ಪ್ರತಿ ಆಗಮದಲ್ಲಿ ವೀರಶೈವ ಪರವಾದ ಭಾಗಗಳಿದ್ದವೆಂಬುದಕ್ಕೆ ಸಾಕ್ಷಿಯಾಗಿವೆ. ಸಿದ್ಧಾಂತ ಶಿಖಾಮಣಿಯಂತೂ ಸ್ಪಷ್ಟವಾಗಿ ಹೇಳಿದೆ–

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟ ಮುತ್ತರೇ ಭಾಗೇ ವೀರಶೈವ ಮತಂ ಪರಮ್[೮೪]

ಸಿದ್ಧಾಂತವೆಂದು ಕರೆಯಲ್ಪಡುವ ಶಿವನಿಂದ ಉಕ್ತವಾದ ಕಾಮಿಕ ಮುಂತಾದ ತಂತ್ರ ಸಮುದಾಯದ ಉತ್ತರ ಭಾಗದಲ್ಲಿ ಶ್ರೇಷ್ಠವಾದ ವೀರಶೈವ ಮತವು ಪ್ರತಿಪಾದಿಸಲ್ಪಟ್ಟಿದೆ. ಆದರೆ ಕೆಲವು ಆಗಮಗಳ ಪೂರ್ವಭಾಗ ಮಾತ್ರ ಮತ್ತು ಕೆಲವು ಆಗಮಗಳ ಉತ್ತರ ಭಾಗ ಮಾತ್ರ ಉಪಲಬ್ಧವಾಗಿವೆ. ಉಪಲಬ್ಧವಾಗಿರುವ ಆಗಮಗಳಲ್ಲಿ ಕೆಲವು ಪ್ರಕಟಿತವಾಗಿವೆ, ಕೆಲವು ಅಪ್ರಕಟಿತವಾಗಿವೆ. ಆಗಮ ಪ್ರತಿಗಳು ಪ್ರಾಚ್ಯಹಸ್ತಪ್ರತಿ ಸಂಗ್ರಹಾಲಯಗಳಲ್ಲಿ ದೊರೆಯುತ್ತವೆ.

೨.೯ ಪ್ರಕಟಿತ ಶಿವಾಗಮಗಳ ಮತ್ತು ಉಪಾಗಮಗಳ ಪರಿಚಯ

೧ **ಕಾಮಿಕಾಗಮ :** ಸಿದ್ಧಾಂತಾಗಮವೆಂದು ಕರೆಯಲ್ಪಡುವ ೨೮ ಶಿವಾಗಮಗಳಲ್ಲಿ ಕಾಮಿಕವು ಮೊದಲನೆಯದು. ಪ್ರಣವಾದಿಗಳಿಗೆ ಬೋಧಿಸಿದ ಕಾಮಿಕವನ್ನು ಪುನಃ ಪರಶಿವನು ಕೌಶಿಕಾದಿ ಋಷಿಗಳಿಗೆ ಬೋಧಿಸುತ್ತಾನೆ. ಪರಶಿವನಿಂದ ಹೊರಹೊಮ್ಮಿದ ಈ ಜ್ಞಾನವು ಕಾಮದ ಅಥವಾ ಇಷ್ಟಾರ್ಥವನ್ನು ಪೂರೈಸುವುದರಿಂದ ಕಾಮಿಕಾಗಮವೆಂದು ಪ್ರಣೀತವಾಗಿದೆ.

ಕಾಮಿಕಾಗಮದ ಉತ್ತರ ಭಾಗವು ೧೯೦೯ ರಲ್ಲಿ ಕೆ. ಷಣ್ಮುಖಸುಂದರ ಮುದಲಿಯಾರ್ ಅವರಿಂದ ಗ್ರಂಥಲಿಪಿಯಲ್ಲಿ ಪ್ರಕಟಿತವಾಗಿತ್ತು. ೧೯೭೫ ರಲ್ಲಿ ಪೂರ್ವ ಮತ್ತು ಉತ್ತರ ಭಾಗಗಳೆರಡೂ ದಕ್ಷಿಣ ಭಾರತ ಅರ್ಚಕರ ಸಂಘದ ಅಧ್ಯಕ್ಷ ಶ್ರೀ ಸ್ವಾಮಿನಾಥ ಶಿವಾಚಾರ್ಯರಿಂದ ಪ್ರಕಾಶಿತವಾಗಿದೆ.

ಕಾಮಿಕಾಗಮದ ಪೂರ್ವ ಭಾಗದಲ್ಲಿ ೭೫ ಪಟಲಗಳು ಉತ್ತರ ಭಾಗದಲ್ಲಿ ೯೮ ಪಟಲಗಳಿವೆ. ಎರಡೂ ಭಾಗಗಳ ಈ ಪಟಲಗಳು ಕ್ರಿಯಾಪಾದಕ್ಕೆ ಸೇರಿದವುಗಳು. ಉಳಿದ ಪಾದಗಳ ಪಟಲಗಳು ಮತ್ತು ವೀರಶೈವ ಪಟಲಗಳು ಉಪಲಬ್ಧವಾಗಿಲ್ಲ. ಉಲ್ಲೇಖಗಳಿಂದ ಅವುಗಳ ಅಸ್ತಿತ್ವದ ಬಗ್ಗೆ ಸೂಚನೆ ದೊರೆಯುತ್ತದೆ.

ಕಾಮಿಕಾಗಮ ಪೂರ್ವಭಾಗದಲ್ಲಿ ತಂತ್ರಾವತಾರ ಪಟಲ, ಮಂತ್ರಾವತಾರ ಪಟಲ, ಸ್ನಾನವಿಧಿ, ಅರ್ಚನವಿಧಿ, ಅರ್ಚನಾಂಗವಿಧಿ, ನೈವೇದ್ಯವಿಧಿ, ಕುಂಡವಿಧಿ, ಅಗ್ನಿಕಾರ್ಯವಿಧಿ, ಕಾಲವಿಧಿ, ನಿಮಿತ್ತ, ಭೂಪರೀಕ್ಷಾವಿಧಿ, ಪ್ರವೇಶವಿಧಿಪಟಲ, ಭೂಪರಿಗ್ರಹವಿಧಿ, ಭೂಕರ್ಷಣವಿಧಿ, ಶಂಕುಸ್ಥಾಪನ, ಮನೋಪಕರಣ, ಪದವಿನ್ಯಾಸವಿಧಿ, ಸೂತ್ರನಿರ್ಮಾಣ, ವಾಸ್ತುದೇವಬಲಿ, ಗ್ರಾಮಾದಿಲಕ್ಷಣ, ವಿಸ್ತಾರಾಯಾಮ, ಗರ್ಭನ್ಯಾಸ, ವಾಸ್ತುಶಾಂತಿ, ಶಾಲಾಲಕ್ಷಣಪ್ರಭೇದ, ನಾಗರಾದಿವಿಭೇದ, ಅದ್ಯೇಷ್ಟಕಾವಿಧಿ,

---

೮೪. ಸಿದ್ಧಾಂತ ಶಿಖಾಮಣಿ ೫.೧೪

ಉಪಪೀಠವಿಧಿ, ಪಾದಬಂಧವಿಧಿ, ಪ್ರಾಸಾದ ಭೂಷಣ, ಪ್ರಾಸಾದ ನಿರ್ಮಾಣಕ್ಕೆ ಸಂಬಂಧಿಸಿದ ವಿಚಾರ, ಕಂಠಲಕ್ಷಣ, ಶಿಖರಲಕ್ಷಣ, ಸ್ತೂಪಿಕಾಲಕ್ಷಣ, ಮುರ್ಧ್ನೇಷ್ಟಕಾಸ್ಥಾಪನ, ಲಿಂಗಲಕ್ಷಣ, ಶಿಲಾಲಕ್ಷಣ, ಲಿಂಗಪ್ರಮಾಣ, ಲಿಂಗಪ್ರಭೇದ, ಅಂಕುರಾರ್ಪಣ, ಲಿಂಗಪ್ರತಿಷ್ಠಾ, ಪ್ರತಿಮಾಲಕ್ಷಣ, ಲಿಂಗದ ಎತ್ತರ, ದಪ್ಪ ಮುಂತಾದ ವಿಚಾರಗಳು, ಶೂಲಸ್ಥಾಪನ, ದೇವತಾಸ್ಥಾಪನ, ಪ್ರತಿಮಾಪ್ರತಿಷ್ಠಾ, ವಿಮಾನಸ್ಥಾಪನ, ಮಂಟಪಸ್ಥಾಪನ, ಪ್ರಾಕಾರಲಕ್ಷಣ, ಪರಿವಾರಲಕ್ಷಣ, ಪರಿವಾರಾರ್ಚನ, ವೃಷಭಸ್ಥಾಪನ, ಗೋಪುರಸ್ಥಾಪನ ಮುಂತಾದ ವಿಷಯಗಳು ವಿಸ್ತಾರವಾಗಿ ವರ್ಣಿತವಾಗಿವೆ.

ಉತ್ತರ ಕಾಮಿಕಾಗಮದ ಕ್ರಿಯಾ ಪಾದದಲ್ಲಿ ಪಶ್ಚಿಮದ್ವಾರಾರ್ಚನ, ಸಕಳಾರ್ಚನ, ಸ್ನಪನ, ನಿತ್ಯೋತ್ಸವ, ಮಹೋತ್ಸವ, ನೀರಾಜನ, ಕೃತಿಕಾ ದೀಪಾವಲಿ, ಘೃತಸ್ನಾನ, ಡೋಲಾರೋಹಣ, ಘೃತಕಂಬಲಪೂಜಾ, ಶಿವರಾತ್ರಿಪೂಜಾ, ಪಾಲ್ಗುನಗಂಧಪೂಜಾ, ಚೈತ್ರಮಾಸಪೂಜಾ, ವಸಂತೋತ್ಸವ, ವೈಶಾಖಮಾಸಶೀತಕುಂಭ, ಜೇಷ್ಠಮಾಸಫಲ ಪೂಜಾ, ಪೂರ್ವಫಲ್ಗುಣಿಪೂಜಾ, ಶ್ರಾವಣಮಾಸಪೂಜಾ ನವನ್ನೈವೇದ್ಯ, ಸಮಯ ವಿಶೇಷದೀಕ್ಷಾ, ಸ್ಥಾಲೀಪಾಕ, ಸ್ವಪ್ನಾಧ್ಯಾಯ, ನಿರ್ವಾಣದೀಕ್ಷಾ ಆಚಾರ್ಯಾಭಿಷೇಕ, ಗೋತ್ರನಿರ್ಣಯ, ಶತಾಭಿಷೇಚನ, ಅಂತ್ಯೇಷ್ಟಿ, ಪಿತೃಯಜ್ಞ, ಶೈವಶ್ರಾದ್ಧ, ಪ್ರಾಯಶ್ಚಿತ, ಅದ್ಭುತಶಾಂತಿ, ಅನುಕರ್ಮ, ಕಾಮ್ಯಯೋಗವಿಧಾನ, ಸಂಪ್ರೋಕ್ಷಣ, ಪೀಠಪ್ರತಿಷ್ಠಾ, ಬಾಣಲಿಂಗ ಪ್ರತಿಷ್ಠಾ, ಕಾವ್ಯಲಿಂಗ ಪ್ರತಿಷ್ಠಾ, ಅರ್ಷಲಿಂಗಪ್ರಾಸಾದ, ಪೌರುಷಲಿಂಗ ಪ್ರಾಸಾದ, ಸ್ವಾಯಂಭುವ, ಬಾಣ, ದೈವಿಕ, ಅರ್ಷಲಿಂಗಗಳಲ್ಲಿ ಆಯಾಲಿಂಗಗಳಿಗೆ ನಿರ್ಮಿಸುವ ಪ್ರಾಸಾದ ವಿಶೇಷಗಳು, ಸಾರ್ವದೇಶಿಕಲಿಂಗ ಪ್ರಾಸಾದ, ಅಂಗಲಿಂಗ ಪ್ರತಿಷ್ಠಾ, ಸದಾಶಿವ ಸ್ಥಾಪನ, ದೇವಿ ಸ್ಥಾಪನ, ವಿಘ್ನೇಶ ಪ್ರತಿಷ್ಠಾ, ನೃತ್ಯಮೂರ್ತಿ ಸ್ಥಾಪನ, ಸೋಮಸ್ಕಂದ ಸ್ಥಾಪನ, ಚಂದ್ರಶೇಖರ ಸ್ಥಾಪನ, ಪುರಾರಿ ಸ್ಥಾಪನ, ಲಿಂಗೋದ್ಭವ ಪ್ರತಿಷ್ಠಾ, ದಕ್ಷಿಣಾಮೂರ್ತಿಸ್ಥಾಪನ, ಭಿಕ್ಷಾಟನಮೂರ್ತಿ ಸ್ಥಾಪನ, ಬಲಭರ್ತೃ ಪ್ರತಿಷ್ಠಾ, ಶರಭೇಶ ಪ್ರತಿಷ್ಠಾ, ಚಂಡೇಶಾದ್ಯನುಗ್ರಹ ಪ್ರತಿಷ್ಠಾ, ಭಕ್ತಾನುಗ್ರಹದೇವತಾ ಸ್ಥಾಪನೆ, ಕಾಲಾರಿಕಾಮಾಂತಕ ಪ್ರತಿಷ್ಠಾ, ಕಲ್ಯಾಣಮೂರ್ತಿ ಪ್ರತಿಷ್ಠಾ, ಕಲ್ಯಾಣ ಕರ್ಮ, ವಿಷ್ಣುವಾರ್ಧ ಪ್ರತಿಷ್ಠಾ, ತ್ರಿಮೂರ್ತಿಸ್ಥಾಪನ, ವೃಷಾರೂಢಮೂರ್ತಿಪ್ರತಿಷ್ಠಾ, ಗಂಗಾಧರ ಪ್ರತಿಷ್ಠಾ, ಗುಹಸ್ಥಾಪನ, ಚಂಡೇಶ ಸ್ಥಾಪನ, ಶಿವಭಕ್ತ ಪ್ರತಿಷ್ಠಾ, ವಿದ್ಯಾಪೀಠಪ್ರತಿಷ್ಠಾ, ದಶಾಯುಧ ಪ್ರತಿಷ್ಠಾ, ತ್ರಿಶೂಲಸ್ಥಾಪನ, ಸಿಂಹಾಸನ ಪ್ರತಿಷ್ಠಾ, ರಥಾದಿಸ್ಥಾಪನ, ಕರಣಲಕ್ಷಣ, ಸೌಖ್ಯಕರ್ಮವಿಧಿ, ವೈಶಿಷ್ಯವಿಧಾನ, ವ್ಯಾಧಿನಾಶನ, ರಾಜರಕ್ಷಾ, ದುರ್ಗಾಪೂಜಾ, ವಾಜಿನೀರಾಜನ, ರಾಜನೀರಾಜನ, ಪುಷ್ಯಾಭಿಷೇಕ, ಗ್ರಹಯಜ್ಞ, ಪ್ರತಿಸರ, ತುಲಾರೋಹ, ಷೋಡಶದಾನ, ಹಿರಣ್ಯಗರ್ಭದಾನ, ತಿಲಪರ್ವತದಾನ, ಸುವರ್ಣಭೂಮಿದಾನ, ಕಲ್ಪಪಾದಪದಾನ, ಗಣೇಶದಾನ, ಹೇಮಧೇನುದಾನ, ಲಕ್ಷ್ಮೀದಾನ, ತಿಲಧೇನುದಾನ, ಸಹಸ್ರಗೋದಾನ, ಹಿರಣ್ಯಾಶ್ವದಾನ, ಕನ್ಯಾದಾನ, ಹಿರಣ್ಯೋಕ್ಷ ಪ್ರದಾನ, ಗಜದಾನ, ಲೋಕಪಾಲಾಷ್ಟಕದಾನ, ಸರ್ವದಾನೋತ್ತಮ ವಿಧಿಪಟಲದಲ್ಲಿ ಮಂಟಪ, ವೇದಿಕೆ ರಚಿಸಿ, ಮಂಡಲ ಮಧ್ಯದಲ್ಲಿ

ಬ್ರಹ್ಮ ವಿಷ್ಣು ಸಹಿತ ಶಿವನನ್ನು ಪೂಜಿಸಿ, "ಬ್ರಹ್ಮನ್ ಬ್ರಹ್ಮಾಣ ಭೇದಾಯ" "ನಾರಾಯಣಾಯ ವಿದ್ಮಹೇ" ಇತ್ಯಾದಿ ವಿಷ್ಣು ಗಾಯತ್ರಿಯನ್ನುಚ್ಚರಿಸಿ, ಹೋಮಾನಂತರ ವೇದಾಧ್ಯಯನವುಳ್ಳವರಿಗೆ ದಾನಗಳನ್ನು ಕೊಡಬೇಕು ಎಂಬ ವಿವರಣೆ ಇದೆ.

ಸಿದ್ಧಾಂತಶಿಖಾಮಣಿ ಶ್ರೀಕರಬಾಷ್ಯ, ಕ್ರಿಯಾಸಾರ, ವೇದಾಂತಸಾರ, ವೀರಶೈವ ಚಿಂತಾಮಣಿ, ಕೈವಲ್ಯಸಾರ ಗ್ರಂಥಗಳಲ್ಲಿ ಕಾಮಿಕಾಗಮದ ಉತ್ತರ ಭಾಗದಿಂದ ಅನೇಕ ಶ್ಲೋಕಗಳು ಉದಾಹೃತವಾಗಿದ್ದು ಕ್ರಿ.ಶ. ೮ ನೇ ಶತಮಾನದ ಪೂರ್ವದಿಂದಲೂ ಕಾಮಿಕಾಗಮದ ವೀರಶೈವ ಪಟಲವು ಅಸ್ಥಿತ್ವಹೊಂದಿದ್ದ ಸೂಚನೆಗಳು ದೊರಕುತ್ತವೆ.

೨. ಕಾರಣಾಗಮ : ಶಿವಾಗಮಗಳಲ್ಲಿ ಚತುರ್ಥ ಆಗಮವೆಂದರೆ ಕಾರಣಾಗಮ. ಈ ಕಾರಣಾಗಮದ ಪೂರ್ವ ಹಾಗೂ ಉತ್ತರ ಭಾಗಗಳನ್ನು ೧೯೨೦ ಮತ್ತು ೧೯೨೮ ರಲ್ಲಿ ಕೆ. ಷಣ್ಮುಖಸುಂದರ ಮುದಲಿಯಾರ್ ಸಂಪಾದಿಸಿ ಅಳಗಪ್ಪ ಮುದಲಿಯಾರ್ ಮೂಲಕ ಪ್ರಕಟಿಸಿದ್ದರು. ೧೯೪೦ ರಲ್ಲಿ ಕಾಶಿನಾಥ ಶಾಸ್ತ್ರಿಗಳು ಆಗಮದ ಉತ್ತರ ಭಾಗವನ್ನು ಮಾತ್ರ ಸಂಪಾದಿಸಿ ತಮ್ಮ ಪಂಚಾಚಾರ್ಯಪ್ರೆಸ್ ಮೈಸೂರ ಮೂಲಕ ಪ್ರಕಾಶನಗೊಳಿಸಿದ್ದರು. ಅದು ೧೯೫೬ ರ ರಲ್ಲಿ ಅವರೇ ಪ್ರಕಟಿಸಿದ ಶಿವಾಗಮ ಸಂಗ್ರಹದ ಭಾಗವಾಗಿ ಹೊರಬಂದಿದೆ. ಮತ್ತೆ ಶ್ರೀಶೈಲ ದೇವಸ್ಥಾನದವರು ಕಾರಣಾಗಮದ ಪೂರ್ವೋತ್ತರ ಭಾಗಗಳನ್ನು ನಾಲ್ಕು ಭಾಗಗಳಲ್ಲಿ ಕ್ರಮವಾಗಿ ೧೯೭೯, ೧೯೮೦, ೧೯೮೨ ಮತ್ತು ೧೯೮೫ ರಲ್ಲಿ ಪ್ರಕಟಿಸಿದ್ದಾರೆ. ಅದರಲ್ಲಿ ಪಾದಗಳ ವಿಭಾಗವನ್ನು ತೋರಿಸಿಲ್ಲ. ೧೯೭೪ ರಲ್ಲಿ ಜೆ. ಡಬ್ಲೂ. ವ್ಹಿ. ಕರ್ಟಿಸ್ (ವಾಷಿಂಗ್‌ಟನ್ ವಿಶ್ವವಿದ್ಯಾಲಯ) ಅವರು ಕಾರಣಾಗಮ ಪೂರ್ವಭಾಗದ ನಿತ್ಯ ಪೂಜಾವಿಧಿ ಪಟಲವನ್ನು ಆಂಗ್ಲಾನುವಾದದಿಂದ ಪ್ರಕಟಿಸಿದ್ದಾರೆ.

ಶ್ರೀಶೈಲ ದೇವಸ್ಥಾನದಿಂದ ಪ್ರಕಟಿತವಾದ ಪೂರ್ವ ಮತ್ತು ಉತ್ತರ ಕಾರಣಾಗಮ ಭಾಗಗಳಲ್ಲಿ ಕ್ರಮವಾಗಿ ೧೪೭ ಮತ್ತು ೧೦೫ ಪಟಲಗಳನ್ನು ಒಳಗೊಂಡಿವೆ. ಆದರೆ ಮದರಾಸಿನಿಂದ ಗ್ರಂಥಲಿಪಿಯಲ್ಲಿ ಪ್ರಕಾಶಿತವಾದ ಆ ಭಾಗಗಳಲ್ಲಿ ೧೫೮ ಮತ್ತು ೧೦೭ ಪಟಲಗಳನ್ನು ಒಳಗೊಂಡಿವೆ. ಕಾಶೀನಾಥ ಶಾಸ್ತ್ರಿಗಳು ಪ್ರಕಟಿಸಿದ ಕಾರಣಾಗಮದ ವೀರಶೈವ ಪರ ಉತ್ತರ ಭಾಗದಲ್ಲಿ ಕ್ರಿಯಾಪಾದದ ೧೦ ಪಟಲಗಳು ಇವೆ.

ಪೂರ್ವ ಕಾರಣಾಗಮದ ಕ್ರಿಯಾಪಾದದಲ್ಲಿ ೧೫೮ ಪಟಲಗಳಿದ್ದು ತಂತ್ರಾವತಾರ ಪಟಲ, ಮಂತ್ರಾವತಾರ ಪಟಲ, ವಾಸ್ತುವಿನ್ಯಾಸ ಪಟಲ, ಆದ್ಯೇಷ್ಟಕಾ ವಿಧಿ, ಅಧಿಷ್ಠಾನ ವಿಧಿ, ಗರ್ಭನ್ಯಾಸ, ಪ್ರಾಸಾದ ಲಕ್ಷಣ, ಪ್ರಾಕಾರಲಕ್ಷಣ, ಲಿಂಗಲಕ್ಷಣ, ಮೂರ್ಧ್ನೇಷ್ಟಕಾ, ಪ್ರತಿಮಾ ಲಕ್ಷಣ, ಸ್ತ್ರೀಮಾನದಶತಾಲ, ಪ್ರತಿಮಾಲಕ್ಷಣ, ಕನಿಷ್ಠದಶತಾಲ, ನವತಾಲೋತ್ತಮ, ನಿತ್ಯಾಗ್ನಿವಿಧಿ, ಬಲಿಕರ್ಮ, ಪಂಚಾಮೃತ ಕ್ಷೀರಾಭಿಷೇಕ, ಕರಣಾಧಿಕಾರ, ಮೃತ್ಸಂಗ್ರಹಣ, ಅಂಕುರಾರ್ಪಣ, ಕುಂಡಲಕ್ಷಣ, ಅಗ್ನಿಕಾರ್ಯ, ವಹ್ನಿರೂಪ, ಸ್ರುಕ್‌ಸ್ರುವಲಕ್ಷಣ, ಯೋಗಶಾಲಾಲಕ್ಷಣ, ಆಚಾರ್ಯಲಕ್ಷಣ, ಕಲಾನ್ಯಾಸ, ಮುದ್ರಾಲಕ್ಷಣ, ಸ್ನಾನ, ನಿತ್ಯಾರ್ಚನ, ಅರ್ಚನಾಂಗ, ಸಾಯರಕ್ಷಾ, ನೈವೇದ್ಯ, ಪುಣ್ಯಾಹ,

ಪಂಚಗವ್ಯ, ಪಂಚವಿಂಶತಿ ಸ್ನಪನ, ಏಕೋನಪಂಚಾಯಶತ್‌ಸ್ನಪನ, ಅಷ್ಟೋತ್ತರ ಶತಸ್ನಪನ, ಮಹಾಸ್ನಪನ, ಚಂಡಿತ ವಿಧಾನ, ಮಹಾಭಿಷೇಕ, ಏಕಾದಶರುದ್ರಾಭಿಷೇಕ, ತೈಲಾಭ್ಯಂಗ, ಶೀತಕುಂಭ, ಜಲಧಾರಾ, ಉಷ್ಣೋದಕ, ಸಹಸ್ರಧಾರಾಭಿಷೇಕ, ಅಷ್ಟ – ಕಲಶಚತುಷ್ಕಲಶಸ್ನಪನ, ಪುಣ್ಯಾಹಾಭಿಷೇಕ, ಪೂಜಾದ್ರವ್ಯ, ಆಧಾರಾಧೇಯ, ಚಟಕಬಲಿ, ಶಾಸ್ತಾರ್ಚನ, ಅತ್ಮಾರ್ಥಪೂಜಾ, ಸೌರಾರ್ಚನ, ವಾಸ್ತುಹೋಮ, ವಿಘ್ನೇಶ್ವರ ಸ್ಥಾಪನ, ಸ್ಥಾಪನಕ್ರಮು, ಲಿಂಗಸ್ಥಾಪನ, ಬಲಿಪೀಠಪ್ರತಿಷ್ಠಾ, ರತ್ನಾದಿಲಿಂಗಸ್ಥಾಪನೆ, ಮಂತ್ರದ್ರವ್ಯಹೋಮ, ಪಂಚಬ್ರಹ್ಮ, ಉಪಚಾರ, ಪರಿವಾರಬಲಿಕ್ರಮ, ಶೂಲಸ್ಥಾಪನೆ, ತ್ರಿಶೂಲಸ್ಥಾಪನೆ, ಪಾಶುಪತಸ್ಥಾಪನೆ, ವಿಮಾನಸ್ಥಾಪನ, ಸಕಳೋತ್ಪತ್ತಿ, ಸಕಲಸ್ಥಾಪನ, ಸಕಳಪ್ರೋಕ್ಷಣ, ಲಿಂಗೋದ್ಭವ, ನೃತ್ಯಮೂರ್ತಿಸ್ಥಾಪನ, ದಕ್ಷಿಣಾಮೂರ್ತಿಸ್ಥಾಪನ, ಚಂದ್ರಶೇಖರಸ್ಥಾಪನ, ವೈವಾಹ್ಯಸ್ಥಾಪನ, ಸೋಮಾಸ್ಕಂದಸ್ಥಾಪನ, ಅರ್ಧನಾರೀಶ್ವರ ಸ್ಥಾಪನ, ಗಂಗಾಧರ ಪ್ರತಿಷ್ಠಾ, ಕಂಕಾಳ ಪ್ರತಿಷ್ಠಾ, ಗಜಸಂಹಾರ ಪ್ರತಿಷ್ಠಾ, ಕಾಲನಿಗ್ರಹ ಸ್ಥಾಪನ, ಪುರಾರಿಸ್ಥಾಪನ, ಸಪ್ತತಾಂಡವ, ಚಂಡೇಶಸ್ಥಾಪನ, ಭಕ್ತಸ್ಥಾಪನ, ಗೌರೀಸ್ಥಾಪನ, ಗೌರ್ಯರ್ಚನಾ, ಗೌರೀಸ್ನಪನ, ದೇವೀನಿತ್ಯಾರ್ಚನ, ಉಮಾಪೂಜಾ, ಗೌರೀಧರ್ಮ, ಪ್ರತಿಸರಬಂಧ, ದೇವೀನಿತ್ಯೋತ್ಸವ, ದೇವೀಮಹೋತ್ಸವ, ದುರ್ಗಾಸ್ಥಾಪನ, ಹರಿಸ್ಥಾಪನ, ಲಕ್ಷ್ಮೀಸ್ಥಾಪನ, ಮೋಹಿನೀ ಸ್ಥಾಪನ, ಚತುರ್ದ್ವಾರಾರ್ಚನ, ಕ್ಷೇತ್ರಪಾಲಾರ್ಚನ, ವಾರಪೂಜಾ, ಅಷ್ಟಮೀ ಪೂಜಾ, ಪ್ರದೋಷ ಪೂಜಾ, ಅಮವಾಸ್ಯಾ ಪೂಜಾ, ನಕ್ಷತ್ರ ಪೂಜಾ, ಮಾಸಪೂಜಾ, ಮಾಸಪೂಜಾದ್ರವ್ಯ, ಕೃತ್ತಿಕಾದೀಪನಕ್ಷತ್ರ ನಿರ್ಣಯ, ಕೃತ್ತಿಕಾ ದೀಪ ಲಕ್ಷಣ, ಧನುರ್ಮಾಸಪೂಜಾ, ಆರ್ದ್ರಾವ್ರತ, ಕುಂಕುಮ ಪೂಜಾ, ಪುಷ್ಯಮಾಸ ಗಂಧ ಪೂಜಾ, ಮಾಘಮಾಸ ಘೃತಕಂಬಲಪೂಜಾ, ಶಿವರಾತ್ರೀಪೂಜಾ, ಫಾಲ್ಗುನಪುಷ್ಯ ಪೂಜಾ, ಚೈತ್ರೇ ಉಡುಪೋತ್ಸವ, ಆಷಾಢ ಪವಿತ್ರ ಪೂಜಾ, ಪವಿತ್ರರೋಹಣ, ಪೂರಕರ್ಮ, ಶ್ರಾವಣ ತಿಲಪೂಜಾ, ಪೂರ್ವಾಷಾಢ ನವ ನೈವೇದ್ಯ ಲಕ್ಷಣ, ಆಶ್ವೀಜ ಘೃತ ಪೂಜಾ, ನವರಾತ್ರಿ ವಿಧಿ, ಅನ್ನ ಪೂಜಾ, ದೀಪಪೂಜಾ ವಿಧಿ, ಲಾಜ ಪೂಜಾ, ಸಂಕ್ರಮ ವಿಧಿ, ಗ್ರಹಣ ಪೂಜಾ, ಜೀರ್ಣೋದ್ದಾರ, ಬಾಲಸ್ಥಾಪನ, ಅಷ್ಟಬಂಧನ, ಸಂಪ್ರೋಕ್ಷಣ, ಸಂಕ್ಷೇಪ, ಮೃತ್ಸಂಗ್ರಹಣ, ರಕ್ಷಾಬಂಧನ, ನಿತ್ಯೋತ್ಸವ, ಮಹೋತ್ಸವ, ಅಷ್ಟಾದಶ ದಿನೋತ್ಸವ, ಸಪ್ತವಿಂಶತಿ ಉತ್ಸವ, ರಥಸಂಗ್ರಹಣ, ನೀರಾಜನ, ಪ್ರಾಯಶ್ಚಿತ್ತ, ಉತ್ಸವ ಪ್ರಾಯಶ್ಚಿತ್ತ, ಸಂಪ್ರೋಕ್ಷಣ ಪ್ರಾಯಶ್ಚಿತ್ತ, ಶಾಂತಿಹೋಮ, ಮೂರ್ತಿಹೋಮ, ದಿಶಾಹೋಮ, ಅದ್ಭುತಶಾಂತಿ, ಶಿವದೀಕ್ಷಾ, ಅಗ್ನಿರುದ್ಭವ, ಮಂಡೂಕವಾಸ್ತುಶಾಂತಿ ಮುಂತಾದವುಗಳ ವಿವರಣೆ ಇದೆ.

ಕಾರಣಾಗಮದಲ್ಲಿ ವೀರಶೈವ ಪರ ಉತ್ತರಭಾಗದಲ್ಲಿ ದೊರೆತಿರುವದು ಕ್ರಿಯಾಪಾದ ಮಾತ್ರ. ಅದರ ಪ್ರಥಮ ಪಟಲದಲ್ಲಿ ಮಹಾಪಾಶುಪತ ಅಥವಾ ಶಾಂಭದ ವ್ರತದ ಶ್ರೇಷ್ಠ ಲಕ್ಷಣ, ಶಿವದೀಕ್ಷೆಯ ಮೂರು ವಿಧಗಳು, ದೀಕ್ಷಾಮಂಟಪದ ರಚನೆ, ದೀಕ್ಷಾವಿಧಾನ, ಪಂಚ ಕಲಶ ಸ್ಥಾಪನೆ, ಲಿಂಗ ಸಂಸ್ಕಾರ, ವೇಧಾ ದೀಕ್ಷೆಯಲ್ಲಿನ ಏಳು ದೀಕ್ಷೆಗಳು ಮಂತ್ರದೀಕ್ಷೆಯಲ್ಲಿನ ಏಳು ದೀಕ್ಷೆಗಳನ್ನು ಹೇಳಲಾಗಿದೆ. ದ್ವಿತೀಯ ಪಟಲದಲ್ಲಿ

ಶಾಂಭವದೀಕ್ಷೆಯ ವಿವರಣೆ. ಸ್ತ್ರೀಯರಿಗೂ ಶಾಂಭವ ದೀಕ್ಷೆಕೊಡುವ ಬಗ್ಗೆ ವಿವರಣೆಯಿದೆ. ತೃತೀಯ ಪಟಲದಲ್ಲಿ ಶಾಂಭವ ವ್ರತವನ್ನು ಸ್ವೀಕರಿಸಿದವನು ಆಚರಿಸಬೇಕಾದ ದಿನನಿತ್ಯದ ಕರ್ತವ್ಯಗಳ ಬಗ್ಗೆ ಶಿವಪೂಜೆಗೆ ಅಗತ್ಯವಾದ ಸಾಮಗ್ರಿಗಳು, ಶಿವಪೂಜಾವಿಧಿ ಕುರಿತಾಗಿ ವಿವರಣೆಯಿದೆ. ಚತುರ್ಥ ಪಟಲದಲ್ಲಿ ಶಿವಪೂಜೆಯ ಮೂರು ವಿಧಗಳು, ಗ್ರಹಣ ಕಾಲದ ನಿಯಮಗಳು, ಪೂಜೆಗೆ ಅಗತ್ಯವಾದ ದೀಪಗಳು, ಪತ್ರಿ ಪುಷ್ಪಗಳ ವಿವರಣೆ ಇದೆ. ಪಂಚಮ ಪಟಲದಲ್ಲಿ ಶಿವಪೂಜೆಗೆ ಅಗತ್ಯ ಪಾತ್ರೆಗಳು, ಪೂಜಾವಿಧಿಯ ವರ್ಣನೆಯಿದೆ. ಷಷ್ಟಮ ಪಟಲದಲ್ಲಿ ಅವಸರ ಪೂಜೆಯ ವಿಧಗಳು, ಲಘು ಅರ್ಚನ ಕ್ರಮದ ವರ್ಣನೆ ಇದೆ. ಸಪ್ತಮ ಪಟಲದಲ್ಲಿ ಷಟಸ್ಥಲಗಳ ವಿವರಣೆ ಇದೆ. ಲಿಂಗಪೂಜಾ ಸಂದರ್ಭದಲ್ಲಿ ಶಿವಲಿಂಗ ಪೂಜಕನು ಈ ಷಟಸ್ಥಲಗಳನ್ನು ಸಾಧಿಸುವ ಬಗೆ ಹಾಗೂ ಈ ಷಟಸ್ಥಲ ಲಿಂಗಪೂಜಾ ಕ್ರಮದಲ್ಲಿ ನೈವೇದ್ಯವನ್ನು ಸಮರ್ಪಣಗೈಯುವ ವಿಧಾನದ ವರ್ಣನೆ ಇದೆ. ಮಹಾಪೂಜೆಯ ವರ್ಣನೆಯಿದೆ. ಅಷ್ಟಮ ಪಟಲದಲ್ಲಿ ತಾಂತ್ರಿಕ ಪೂಜಾಕ್ರಮದ ವರ್ಣನೆಯಿದ್ದು ತಾಂತ್ರಿಕ ಮಂತ್ರಗಳು ಇವೆ. ಇವುಗಳ ಪೂಜೆಯನ್ನು ಸ್ತ್ರೀ- ಪುರುಷ ವರ್ಣ ಭೇದವಿಲ್ಲದೆ ಎಲ್ಲರೂ ಮಾಡಬಹುದು ಎಂಬ ಉಲ್ಲೇಖವಿದೆ. ನವಮ ಪಟಲದಲ್ಲಿ ಪೂಜಾನಿರತನಾದ ವ್ಯಕ್ತಿಯು ಅನುಸರಿಸಬೇಕಾದ ಕೆಲವು ನಿಯಮಗಳು ಹೇಳಲಾಗಿದೆ. ಪೂಜಾ ಸಮಯದಲ್ಲಿ ಭಕ್ತನು ಅರಿಷಡ್ವರ್ಗಗಳ ಪ್ರಭಾವದಿಂದ ದೂರನಾಗಿದ್ದು ಲಿಂಗಾರ್ಪಿತವಾದ ಪ್ರಸಾದವನ್ನೇ ಸೇವಿಸಬೇಕು. ಶಿವದೀಕ್ಷೆ ಹೊಂದದ ವ್ಯಕ್ತಿಯ ದರ್ಶನವನ್ನು ಮಾಡಕೂಡದೆಂದು ಹೇಳಲಾಗಿದೆ. ಇಲ್ಲಿ ವಿಶೇಷವಾಗಿ ಸ್ತ್ರೀಯರು ಪ್ರಸಾದ ಸ್ವೀಕರಿಸುವ ಬಗ್ಗೆ, ಅನ್ಯದೇವತಾ ಸ್ಮರಣ, ಪೂಜನ ಮತ್ತು ಅನ್ಯಮಹಾತ್ಮರನ್ನು ಗೌರವಿಸುವ ವಿಷಯದಲ್ಲಿ ಏಳುವ ಸಂಶಯಗಳಿಗೆ ಉತ್ತರಗಳು ದೊರಕುತ್ತವೆ. ದಶಮ ಪಟಲದಲ್ಲಿ ಪ್ರಾಯಶ್ಚಿತ ವಿಧಿಗಳನ್ನು ವಿವರಿಸಲಾಗಿದ್ದು ಅನುಷಂಗೀಕವಾಗಿ ಲಿಂಗ ಪ್ರತಿಷ್ಠೆಗೆ ಯಾರು ಯೋಗ್ಯರು? ಎಂಬ ಪ್ರಶ್ನೆಯು ಚರ್ಚಿಸಲ್ಪಟ್ಟಿದೆ.

೩) **ಅಜಿತಾಗಮ :** ಅಜಿತಾಗಮವು ಪಾಂಡೀಚೇರಿಯ ಇನ್‌ಸ್ಟಿಟ್ಯೂಟ್ ಆಫ್ ಫ್ರೆಂಚ್ ಇಂಡಾಲಜಿ ಸಂಸ್ಥೆಯ ಮೂಲಕ ಎನ್. ಆರ್. ಭಟ್ ಅವರಿಂದ ಸಂಪಾದಿಸಲ್ಪಟ್ಟ ಎರಡು ಭಾಗಗಳಲ್ಲಿ ೧೯೬೪ ಮತ್ತು ೧೯೬೭ ರಲ್ಲಿ ಪ್ರಕಟಿಸಲ್ಪಟ್ಟಿದೆ. ಒಂದನೇ ಭಾಗದಲ್ಲಿ ಕ್ರಿಯಾಪಾದದ ೧-೩೫ ಪಟಲಗಳು ಎರಡನೇ ಭಾಗದಲ್ಲಿ ಅದೇ ಪಾದದ ೩೬-೫೪ ಪಟಲಗಳು ಇವೆ ಇವು ಪೂರ್ವ ಅಜಿತಾಗಮಕ್ಕೆ ಸೇರಿದವು.

ವೀರ ಮಹೇಶ್ವರಾಚಾರ ಸಂಗ್ರಹದಲ್ಲಿ ಅಜಿತಾಗಮ ಶ್ಲೋಕಗಳು ಉದಾಹೃತವಾಗಿವೆ. ಅಜಿತಾಗಮದ ಮೊದಲ ಪಟಲದಲ್ಲಿ ಅಜಿತಾಗಮದ ಉತ್ಪತ್ತಿ ವಿಚಾರ, ಶಿವಾಗಮಗಳ ಸಂಖ್ಯೆ, ಶಿವಾಗಮದ ಭೇದಗಳಾದ ಶಿವಾಗಮಗಳು ಮತ್ತು ರುದ್ರಾಗಮಗಳು ಹಾಗೂ ಆಯಾ ಆಗಮಗಳ ಶ್ರೋತೃಗಳು ಹಾಗೂ ಆಗಮಗಳ ಅಂಗಭೂತವಾದ ೨೦೭ ಉಪಾಗಮಗಳ ವಿವರವಿದೆ.

ದ್ವಿತೀಯ ಪಟಲದಲ್ಲಿ ಪರಶಿವನ ಸ್ವರೂಪ ಮತ್ತು ಲಕ್ಷಣಗಳು, ಸದಾಶಿವತತ್ವದಿಂದ ಮಹೇಶ್ವರ–ರುದ್ರ–ವಿಷ್ಣು–ಬ್ರಹ್ಮರೆಂಬ ಕಾರಣೇಶ್ವರರ ಉತ್ಪತ್ತಿ, ಜಗತ್ತಿನ ಸೃಷ್ಟಿ–ಸ್ಥಿತಿ–ಸಂಹಾರಾದಿ ಅಧಿಕಾರಿಗಳ ವಿವರವಿದೆ.

ತೃತೀಯ ಪಟಲದಲ್ಲಿ ಲಿಂಗೋತ್ಪತ್ತಿಯ ಕಥೆ ಸಂಕ್ಷೇಪವಾಗಿ ಉಕ್ತವಾಗಿದೆ. ಸಂಹಾರ ಕಾಲದಲ್ಲಿ ಎಲ್ಲ ಜಗತ್ತು ಲಿಂಗದಲ್ಲಿ ಲಯವಾಗುತ್ತದೆ ಮತ್ತೆ ಸೃಷ್ಟಿಕಾಲದಲ್ಲಿ ಆ ಲಿಂಗದಿಂದಲೇ ಆವಿರ್ಭಾವ. ಆದ್ದರಿಂದಲೇ 'ಲಿಂಗ' ಎಂಬ ನಿರ್ವಚನ ಅನ್ವರ್ಥಕ ಎಂಬ ವಿವರಣೆಯಿದೆ.

ನಾಲ್ಕನೇ ಪಟಲದಲ್ಲಿ ಲಿಂಗಲಕ್ಷಣ, ಅದರ ಭೇದಗಳು, ಲಿಂಗಾರಾಧನೆಯ ಫಲವರ್ಣನಗಳು ಉಕ್ತವಾಗಿವೆ. ಐದನೇ ಪಟಲದಲ್ಲಿ ಲಿಂಗನಿರ್ಮಾಣ, ಅದಕ್ಕೆ ತಕ್ಕ ಶಿಲೆ, ಅವುಗಳ ಲಕ್ಷಣ ಮತ್ತು ಪ್ರಭೇದಗಳ ವರ್ಣನೆಯಿದೆ.

ಆರನೇ ಪಟಲದಲ್ಲಿ ಲಿಂಗಸ್ಥಾಪನೆಗೆ ಯೋಗ್ಯಸ್ಥಳ ಪರಿಶೀಲನೆ ವಿಚಾರವಿದೆ. ಏಳರಿಂದ ಹದಿನೆಂಟರವರೆಗಿನ ಪಟಲಗಳಲ್ಲಿ ದೇವಾಲಯ ನಿರ್ಮಾಣಕ್ಕೆ ಸ್ಥಲ ಪರೀಕ್ಷೆ ಮುಂತಾಗಿ ಲಿಂಗಸ್ಥಾಪನೆಯವರೆಗಿನ ಕಾರ್ಯಕಲಾಪಗಳ ವರ್ಣನೆಯಿದೆ.

ಹತ್ತೊಂಭತ್ತನೇ ಪಟಲದಿಂದ ೨೬ ನೇ ಪಟಲದವರೆಗೆ ನಿತ್ಯಕರ್ಮ ವಿಧಿಯು ಉಕ್ತವಾಗಿದೆ; ಅಂದರೆ ಶಿವಾರ್ಚನ, ಅಗ್ನಿಕಾರ್ಯ, ಅರ್ಚನೆಗೆ ಉಪಯುಕ್ತ ಅಂಗಗಳು, ದೀಪ ನೀರಾಜನಗಳು, ನಿತ್ಯೋತ್ಸವ, ಮುದ್ರೆಗಳ ಲಕ್ಷಣಗಳು ವರ್ಣಿತವಾಗಿವೆ. ಅಜಿತಾಗಮದಲ್ಲಿ ೨೪ ಮುದ್ರೆಗಳು, ಕಾರಣಾಗಮದಲ್ಲಿ ೩೨, ಸುಪ್ರಭೇದದಲ್ಲಿ ೨೩ ಮುದ್ರಾಲಕ್ಷಣಗಳಿವೆ. ಅಜಿತಾಗಮದ ಮುಂದಿನ ಪಟಲಗಳಲ್ಲಿ ಮಹೋತ್ಸವ, ಡೋಲೋತ್ಸವ, ವಸಂತೋತ್ಸವ, ವಿಶೇಷೋತ್ಸವ, ದಮನೋತ್ಸವ, ಕೃತ್ತಿಕಾದೀಪ, ಶಿವನೈವೇದ್ಯ, ಅದ್ಭುತಶಾಂತಿ, ಪೂರಕ ಕರ್ಮಗಳ ವಿವರಣೆಯಿದೆ. ಸ್ನಪನ ವಿಧಿಗಳು, ಶಾಂತ್ಯಾದಿ ಕರ್ಮಗಳು, ವಿಶೇಷಾರ್ಚನೆಗಳು, ಕ್ಷೀರಾಭಿಷೇಕ ವಿಧಿ, ಅನ್ನನವನೀತ, ಗಂಧ, ಪುಷ್ಪಫಲ ಮೊದಲಾದವುಗಳಿಂದ ಲಿಂಗಪೂರಣ, ಘೃತಾಭಿಷೇಕ ವಿಧಿ, ಘೃತಕಂಬಲವಿಧಿ, ಶೀತಕುಂಭಾಭಿಷೇಕವಿಧಿ, ಅಂಕುರಾರ್ಪಣ ವಿಧಿಗಳು ವರ್ಣಿತವಾಗಿವೆ.

ಅಜಿತಾಗಮದಲ್ಲಿ ಪ್ರತಿಪಾದಿತವಾಗಿರುವ ವಿಷಯಗಳಿಗೂ ಇತರ ಆಗಮಗಳಲ್ಲಿ ಹೇಳಿರುವ ವಿಷಯಗಳಿಗೂ ಅಲ್ಲಲ್ಲಿ ಕೆಲವು ವ್ಯತ್ಯಾಸಗಳಿವೆ. ಉದಾಹರಣೆಗೆ ಕಾಮಿಕದಿಂದ ವಾತುಲದವರೆಗಿನ ೨೮ ಶಿವಾಗಮಗಳು ಶಿವನ ಸದ್ಯೋಜಾತಾದಿ ಐದು ಮುಖಗಳಿಂದ ಉದಿಸಿದವು ಎಂಬುದು ಸಾಮಾನ್ಯವಾಗಿ ಉಕ್ತವಾಗಿರುವ ವಿಷಯ. ಅವು ಕ್ರಮವಾಗಿ ಕಾಮಿಕದಿಂದ ಅಜಿತದವರೆಗೆ ಐದು ಆಗಮಗಳು ಸದ್ಯೋಜಾತ ಮುಖದಿಂದ, ದೀಪ್ತದಿಂದ ಸುಪ್ರಭೇದದವರೆಗಿನ ಐದು ಆಗಮಗಳು ವಾಮದೇವ ಮುಖದಿಂದ, ವಿಜಯದಿಂದ ವೀರಾಗಮದವರೆಗಿನ ಐದು ಆಗಮಗಳು ಅಘೋರ ಮುಖದಿಂದ, ರೌರವದಿಂದ ಬಿಂಬದವರೆಗಿನ ಐದು ಆಗಮಗಳು ತತ್ಪುರುಷ ಮುಖದಿಂದ, ಪ್ರೋದ್ಗೀತದಿಂದ ವಾತುಳದವರೆಗಿನ ಎಂಟು ಆಗಮಗಳು ಈಶಾನ

ಮುಖೋದ್ಭವಗಳೆಂದು ಹೇಳಲಾಗಿದೆ. ಆದರೆ ಈ ಅಜಿತಾಗಮದ ಮೊದಲ ಪಟಲದಲ್ಲಿ (೧೦೩- ೧೧೨) ಕಾಮಿಕದಿಂದ ಸುಪ್ರಭೇದದವರೆಗಿನ ಹತ್ತು ಆಗಮಗಳು ಈಶಾನ ಮುಖೋದ್ಭವವೆಂದು, ವಿಜಯ- ಪಾರಮೇಶ್ವರ- ನಿಶ್ವಾಸ- ಪ್ರೋದ್ಗೀತ- ಬಿಂಬವೆಂಬ ಐದು ಸದ್ಯೋಜಾತ ಮುಖೋದ್ಭವವೆಂದು, ಸಿದ್ಧ-ಸಂತಾನ-ಶರ್ವೋಕ್ತ-ಚಂದ್ರಜ್ಞಾನ -ವಿಮಲಗಳು ವಾಮದೇವ ಮುಖೋದ್ಭವವೆಂದು, ಸ್ವಾಯಂಭುವ-ವೀರ-ರೌರವ -ಮಕುಟ-ಕಾರಣಗಳು ಅಘೋರ ಮುಖೋದ್ಭವವೆಂದು, ಲಲಿತ-ವಾತುಳಗಳು ತತ್ಪುರುಷ ಮುಖೋದ್ಭವವೆಂದು ಹೇಳಲಾಗಿದೆ.

ಸ್ನಪನ ವಿಷಯಕವಾದ ವಿವರಣೆಯಲ್ಲಿಯೂ ಕೂಡಾ ಬೇರೆ ಆಗಮಗಳಿಗೂ ಈ ಅಜಿತಕ್ಕೂ ವ್ಯತ್ಯಾಸವಿದೆ. ಈ ಬಗೆಯ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಬಿಟ್ಟರೆ ಆಯಾಪಾದಗಳಲ್ಲಿ ಪ್ರತಿಪಾದಿತವಾಗಿರುವ ಇತರ ವಿಷಯಗಳಲ್ಲಿ ಒಮ್ಮತವಿದೆ.

೪) ಸೂಕ್ಷ್ಮಾಗಮ : ಸೂಕ್ಷ್ಮಾಗಮವು ಮೊಟ್ಟ ಮೊದಲಿಗೆ ಸೊಲ್ಲಾಪುರ ವಾರದ ಮಲ್ಲಪ್ಪ ಗ್ರಂಥಮಾಲೆಯಲ್ಲಿ ಮಣ್ಣೂರ ಮಲ್ಲಿಕಾರ್ಜುನ ಶಾಸ್ತ್ರಿಗಳ ಮರಾಠಿ ಸಂಗ್ರಹಾನುವಾದದೊಂದಿಗೆ ೧೯೨೦ ರಲ್ಲಿ ಪ್ರಕಟವಾಗಿತ್ತು. ದೇವನಾಗರೀ ಲಿಪಿಯಲ್ಲಿ ಮುದ್ರಿತವಾದ ಅದರಲ್ಲಿ ಕ್ರಿಯಾಪಾದದ ೧೦ ಪಟಲಗಳಿವೆ. ಅದನ್ನು ಮತ್ತೆ ೧೯೧೪ ರಲ್ಲಿ ಶಂಕರಪ್ಪ ಅಚ್ಚಪ್ಪ ಟೊಪಗಿ ಅವರು ಮೈಸೂರ ಕ್ರೌನ್ ಪ್ರೆಸ್‌ದಲ್ಲಿ ಪ್ರಕಟಿಸಿದರು. ಅದೇ ಮತ್ತೆ ೧೯೪೧ ರಲ್ಲಿ ಪ್ರತ್ಯೇಕವಾಗಿಯೂ ೧೯೪೨ ಮತ್ತು ೧೯೫೬ ರಲ್ಲಿ ಶಿವಾಗಮ ಸಂಗ್ರಹದ ಭಾಗವಾಗಿಯೂ ಕಾಶಿನಾಥ ಶಾಸ್ತ್ರೀಗಳಿಂದ ಕನ್ನಡ ಲಿಪಿಯಲ್ಲಿಯೇ ಮೈಸೂರ ಪಂಚಾಚಾರ ಪ್ರೆಸ್ ಮೂಲಕ ಪ್ರಕಟಿಸಲ್ಪಟ್ಟಿತು.

ವೀರಶೈವ ಚಿಂತಾಮಣಿ – ಅನಾದಿವೀರಶೈವ ಸಂಗ್ರಹ, ಧರ್ಮಶಿರೋಮಣಿಗಳಲ್ಲಿ ಸೂಕ್ಷ್ಮಾಗಮದ ಶ್ಲೋಕಗಳು ಉದಾಹೃತವಾಗಿವೆ. ಸೂಕ್ಷ್ಮಾಗಮದ ವೀರಶೈವ ಪರವಾದ ಭಾಗವು ಮಾತ್ರ ಉಪಲಬ್ಧವಾಗಿದ್ದು ಅದೂ ಕೂಡಾ ಸಮಗ್ರವಾಗಿ ದೊರಕಿಲ್ಲ.

ಸೂಕ್ಷ್ಮಾಗಮವು ೨೮ ಆಗಮುಗಳಲ್ಲಿ ಏಳನೇಯದು. ಬೃಹತ್ತಿನಲ್ಲಿ ಕಾಮಕಾಗಮವನ್ನು ಬಿಟ್ಟರೆ ಎರಡನೇ ಸ್ಥಾನ ಇದಕ್ಕೆ ಮೀಸಲು. ಸೂಕ್ಷಾಗಮದ ಪ್ರಥಮ ಪಟಲದಲ್ಲಿ ಸೂಕ್ಷಾಗಮದ ಮಹತ್ವ, ಪರಶಿವನ ಪಂಚಸಾದಾಖ್ಯಗಳು ವರ್ಣಿತವಾಗಿವೆ. ಎರಡನೇ ಪಟಲದಲ್ಲಿ ಶಿವನ ಪಂಚವಿಂಶತಿ (೨೫) ಲೀಲೆಗಳ ವರ್ಣನೆಯು ಇದೆ. ಮೂರನೇ ಮಂತ್ರ ಪಟಲದಲ್ಲಿ ಪಂಚಾಕ್ಷರ ಮಹಾಮಂತ್ರದ ವರ್ಣನೆ ಮತ್ತು ಮಹತ್ವವಿದೆ. ನಾಲ್ಕನೇ ಪ್ರಣವ ಪಟಲದಲ್ಲಿ ಪ್ರಣವ ಪಂಚಾಕ್ಷರ ಮಂತ್ರದ ಉತ್ಪತ್ತಿ ಷಡ್‌ತತ್ವ ಸ್ವರೂಪಗಳ ಸೂಕ್ಷ್ಮ ವಿವರಣೆ ಇದೆ. ಐದನೇ ಪಟಲದಲ್ಲಿ ಗುರುಶಿಷ್ಯ ಸಂಬಂಧದ ವರ್ಣನೆ, ಗುರುವಿನ ಲಕ್ಷಣ, ಶಿಷ್ಯನ ಲಕ್ಷಣ, ಶಿಷ್ಯ ಪರೀಕ್ಷೆ, ಶಿಷ್ಯೋಪದೇಶ, ಶಿವದೀಕ್ಷೆಯ ಫಲಶೃತಿ ಅಡಕವಾಗಿದೆ. ಆರನೇ ಪಟಲದಲ್ಲಿ ಲಿಂಗಾರ್ಚನ ಕ್ರಮ, ಉಪಚಾರಗಳು, ಷಟಸ್ಥಲಲಿಂಗ ಪೂಜೆಯ ವರ್ಣನೆ ಇದೆ. ಏಳನೇ ವೀರಶೈವ ಪಟಲದಲ್ಲಿ ಸಪ್ತವಿಧ ಶೈವಗಳು, ವೀರಶೈವದಲ್ಲಿನ ಸಾಮಾನ್ಯ,

ವಿಶೇಷ ಮತ್ತು ನಿರಾಭಾರಿಯೆಂಬ ಪ್ರಭೇದಗಳ ವರ್ಣನೆಯಿದೆ. ಎಂಟನೇ ಪಟಲದಲ್ಲಿ ಲಿಂಗಾಂಗ ವಿಜ್ಞಾನ, ನವಮ ಪಟಲದಲ್ಲಿ ಭಕ್ತರ ವಿಧಗಳು ಹಾಗೂ ದಶಮ ಪಟಲದಲ್ಲಿ ಮುಕ್ತಿಯ ವರ್ಣನೆಯು ಅಡಕವಾಗಿದೆ.

೫) ಸಹಸ್ರಾಗಮ : ಸಹಸ್ರಾಗಮದ ಕೇವಲ ಒಂದು ಪಟಲ ಮಾತ್ರ (ಅಷ್ಟ ಬಂಧನ ಪಟಲ) ದೇವನಾಗರೀ ಲಿಪಿಯಲ್ಲಿ ಧರ್ಮಪುರದ ಸ್ವಾಮಿನಾಥ ಗುರುಕ್ಕಳ್ ಅವರಿಂದ ಜ್ಞಾನಸಂಬಂಧಮ್ ಎಂಬ ನಿಯತಕಾಲಿಕ (೧೯೭೦-೭೧) ದಲ್ಲಿ ಪ್ರಕಾಶಿತವಾಗಿದೆ.

೬) ಸುಪ್ರಭೇದಾಗಮ : ಮೊದಲಿಗೆ ಸುಪ್ರಭೇದಾಗಮವು ಸೋಲಾಪೂರ ವಾರದ ಮಲ್ಲಪ್ಪ ಗ್ರಂಥ ಮಾಲೆಯಲ್ಲಿ ವೀರಶೈವ ಸದಾಚಾರ ಸಂಗ್ರಹದ ಭಾಗವಾಗಿ ಭಾಗಶಃ ಪ್ರಕಟವಾಗಿತ್ತು. ೧೯೦೫ ರಲ್ಲಿ ಪ್ರಕಟವಾದ ಭಾಗಗಳು ೧ ರಿಂದ ೫ ಪಟಲಗಳು ಹಾಗೂ ೭, ೮ ಪಟಲಗಳು. ೧೯೬೦ ರಲ್ಲಿ ವೀರಶೈವ ಸದಾಚಾರ ಸಂಗ್ರಹದ ಭಾಗವಾಗಿಯೇ ಸುಪ್ರಭೇದ ಪಟಲಗಳನ್ನು ಎಮ್. ಜಿ. ನಂಜುಂಡಾರಾಧ್ಯರು ಆಗಮ ವಿದ್ಯಾರ್ಥಿಗಳಿಗಾಗಿ ಪ್ರಕಟಿಸಿದರು. ಹಾಗೆಯೇ ಹುಬ್ಬಳ್ಳಿ ಮೂರುಸಾವಿರಮಠದಿಂದ ಪಗಡದಿನ್ನಿ ಬಸವರಾಜ ಶಾಸ್ತ್ರಿಗಳು ಕನ್ನಡ ವ್ಯಾಖ್ಯಾನದೊಂದಿಗೆ ೧೯೬೪ ರಲ್ಲಿ ಪ್ರಕಟಿಸಿದರು. ಈ ಪಟಲಗಳು ವೀರಶೈವಪರ ಉತ್ತರ ಭಾಗಕ್ಕೆ ಸೇರಿದವುಗಳೆಂಬುದು ಸ್ಪಷ್ಟ. ೧೯೦೭ ಮತ್ತು ೧೯೨೮ ರಲ್ಲಿ ಪೂರ್ವ ಭಾಗಗಳನ್ನು ಅಳಗಪ್ಪ ಮೂದಲಿಯಾರವರು ಮದ್ರಾಸದಿಂದ ಪ್ರಕಟಿಸಿದರು. ಅದರಲ್ಲಿ ಕ್ರಿಯಾಪಾದದ ೫೬, ಚರ್ಯಾಪಾದದ ೧೨, ಯೋಗಪಾದದ ೩ ಮತ್ತು ಜ್ಞಾನಪಾದದ ೩ ಪಟಲಗಳಿವೆ.

ವೀರಶೈವಾಚಾರ ಪ್ರದೀಪಿಕೆಯಲ್ಲಿ, ವೀರಮಾಹೇಶ್ವರಾಚಾರ ಸಂಗ್ರಹ, ಧರ್ಮಶಿರೋಮಣಿಯಲ್ಲಿ ಈ ಸುಪ್ರಭೇದಾಗಮದ ಶ್ಲೋಕಗಳು ಉಲ್ಲೇಖಿಸಲ್ಪಟ್ಟಿವೆ.

ಸುಪ್ರಭೇದಾಗಮವು ವೀರಶೈವಾಗಮಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಅದರಲ್ಲಿ ವೀರಶೈವ ಆಚಾರ್ಯರು, ಅವರ ಪೀಠಗಳು, ಉಪಾಚಾರ್ಯರು, ಪಂಚಮರು ಮತ್ತು ಅವರ ಶಾಖೆಗಳು, ಗುರುಸ್ಥಲದವರಿಗೆ ವಿಹಿತವಾದ ವಿಭೂತಿ, ಲಿಂಗ, ಸಜ್ಜೆ ಮತ್ತು ಶಿವದಾರಗಳನ್ನು ವಿಕ್ರಯಿಸುವ ಕಾಯಕಗಳನ್ನು ಕುರಿತ ವಿವರಣೆಗಳಿವೆ. ಮಾತ್ರವಲ್ಲದೆ ಶೈವಭೇದ, ವೀರಶೈವಾಧಿಕ್ಯ, ಸಪ್ತವಿಧಶೈವಗಳು ಹಾಗೂ ಚತುರ್ವಿಧ ವೀರಶೈವ ಲಕ್ಷಣಗಳು ಸ್ಫುಟವಾಗಿ ಉಲ್ಲೇಖಿತವಾಗಿವೆ. ವೀರಾಗಮದಲ್ಲಿ ವೀರಶೈವರ ಪಂಚ ಆಚಾರ್ಯರಲ್ಲಿ ಒಬ್ಬರಾದ ಶ್ರೀ ರೇಣುಕಾಚಾರ್ಯರ ಮಹಿಮೆಗಳ ಬಗೆಗೆ ಅಲ್ಲಲ್ಲಿ ಪ್ರಸ್ತಾಪಗಳು ಬಂದಿವೆ.

ಸುಪ್ರಭೇದಾಗಮದ ಪ್ರಥಮ ಪಟಲದಲ್ಲಿ ಪದಾರ್ಥವು ಸ್ವತಂತ್ರ ಮತ್ತು ಅಸ್ವತಂತ್ರ ಎಂದು ೨ ವಿಧ. ಇವುಗಳಲ್ಲಿ ಸ್ವತಂತ್ರವೆಂದರೆ ಪರಶಿವನೊಬ್ಬನೆ. ಉಳಿದದ್ದೆಲ್ಲ ಅಸ್ವತಂತ್ರ. ಅದು ಚೇತನ ಮತ್ತು ಅಚೇತನವೆಂದು ೨ ವಿಧವಾಗಿದ್ದು ಚೇತನವು ನಿತ್ಯ ಮುಕ್ತ ಮತ್ತು ನಿತ್ಯಸಂಸಾರಿ ಎಂದು ೨ ವಿಧ ಎಂದು ಹೇಳಲಾಗಿದೆ. ವೀರ, ನಂದಿ, ಬೃಂಗಿ, ವೃಷಭ ಮತ್ತು ಸ್ಕಂದರೆಂಬ ಪ್ರಮಥರು ನಿತ್ಯಮುಕ್ತರು. ಏಕೆಂದರೆ ಇವರು ಹುಟ್ಟು

ಸಾವುಗಳ ಸಂಸಾರ ಚಕ್ರಕ್ಕೆ ಸಿಲುಕದ ವೀರಶೈವ ಗೋತ್ರ ಪುರುಷರೆನಿಸಿದ್ದಾರೆ.

ಬ್ರಹ್ಮ, ವಿಷ್ಣು ಮತ್ತು ರುದ್ರರು ಜಗತ್ತಿನ ಸೃಷ್ಟಿ, ಸ್ಥಿತಿ, ಮತ್ತು ಸಂಹಾರಾದಿಗಳಿಗೆ ಕಾರಣರಾಗಿ ನಿತ್ಯ ಸಂಸಾರಿಗಳೆನಿಸಿದ್ದಾರೆ. ಇನ್ನುಳಿದ ದೇವ - ದಾನವ ಮತ್ತು ಮಾನವಾದಿಗಳು ಸಂಸಾರ ಚಕ್ರಕ್ಕೆ ಸಿಕ್ಕಿ ಜನನ- ಮರಣವೆಂಬ ಸುಳಿಯಲ್ಲಿ ತೊಳಲುತ್ತಿರುವುದರಿಂದ ಅವರೂ ನಿತ್ಯ ಸಂಸಾರಿಗಳೆನಿಸಿದ್ದಾರೆ. ಇಂಥವರನ್ನು ಉದ್ಧರಿಸಲು ನಿತ್ಯಮುಕ್ತರಾದ ವೀರ, ನಂದ್ಯಾದಿ ಪ್ರಮಥರು ಯುಗಭೇದದಿಂದ ಭೂಲೋಕದಲ್ಲಿ ಅವತರಿಸಿ, ಪರಶಿವನಿಂದ ಬೋಧಿಸಲ್ಪಟ್ಟ ಶಿವಾಗಮಗಳನ್ನು ಮಾನವರಿಗೆ ಬೋಧಿಸಿ, ಅವರಲ್ಲಿ ಶಿವಕೃಪೆಗೆ ಪಾತ್ರ (ಶಕ್ತಿಪಾತ)ರಾದವರಿಗೆ ಶಿವದೀಕ್ಷೆಯಿತ್ತು ಅವರನ್ನು ಉದ್ಧರಿಸುವ ಹೊಣೆಹೊತ್ತಿದ್ದಾರೆ.

ಶಿವಾಗಮಗಳಲ್ಲಿ ಹೇಳಿರುವಂತೆ ಪರಶಿವನ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಮತ್ತು ಈಶಾನವೆಂಬ ಪಂಚಮುಖಗಳಿಂದ ಉದ್ಭವರಾದ ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಚತುರಕ್ಷರ ಮತ್ತು ಪಂಚಾಕ್ಷರರೆಂಬ ಆಚಾರ್ಯರು ಕೃತಯುಗದಲ್ಲಿಯೂ, ಏಕವಕ್ತ್ರ, ದ್ವಿವಕ್ತ್ರ, ತ್ರಿವಕ್ತ್ರ, ಚತುರವಕ್ತ್ರ ಮತ್ತು ಪಂಚವಕ್ತ್ರ ಎಂಬುವರು ತ್ರೇತಾಯುಗದಲ್ಲಿಯೂ, ರೇಣುಕ, ದಾರುಕ, ಶಂಕುಕರ್ಣ, ಧೇನುಕರ್ಣ ಮತ್ತು ವಿಶ್ವಕರ್ಣರು ದ್ವಾಪರಯುಗದಲ್ಲಿಯೂ, ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರು ಕಲಿಯುಗದಲ್ಲಿಯೂ ಅವತರಿಸಿ ಶಿವಾಗಮೋಕ್ತವಾದ ವೀರಶೈವವನ್ನು ಭೂಲೋಕದಲ್ಲಿ ಸ್ಥಾಪಿಸಿ ಮಠಾಚಾರ್ಯರೆನಿಸಿದ್ದಾರೆ. ಕಲಿಯುಗದಲ್ಲಿ ಅವತರಿಸಿದ ಈ ಐವರು ಆಚಾರ್ಯರ ನಾಮ, ಗೋತ್ರ, ಸೂತ್ರ, ದಂಡ, ಕಮಂಡಲ, ಮಂತ್ರಬೀಜ, ಪ್ರವರ, ಶಾಖಾ, ಕಂಥಾ ಮತ್ತು ವರ್ಣಗಳ ವಿವರಣೆ ಇದೆ.

ದ್ವಿತೀಯ ಪ್ರಕರಣದಲ್ಲಿ ಪಡ್ವಿಡಿಸೂತ್ರದ, ವೃಷ್ಟಿ ಸೂತ್ರದ, ಲಂಬಕ ಸೂತ್ರದ, ಮುಕ್ತಾಗುಚ್ಚೆ ಸೂತ್ರದ, ಪಂಚವರ್ಣ ಸೂತ್ರದ ಉಪಸೂತ್ರಗಳನ್ನು ವಿವರಿಸಲಾಗಿದೆ.

ತೃತೀಯ ಪ್ರಕರಣದಲ್ಲಿ ಗುರುವು ಗೌಣ ಮತ್ತು ಮುಖ್ಯ ಎಂದು ಎರಡು ವಿಧ. ಶಿವನ ಮುಖೋದ್ಭವರಾದ ಪಂಚ ಆಚಾರ್ಯರು ಮುಖ್ಯರೂ, ಸ್ವತಂತ್ರರೂ, ಲಿಂಗಧಾರಣಾದಿ ಕಾರ್ಯಗಳನ್ನು ಮಾಡಿಸಬಲ್ಲವರು, ನಿಗ್ರಹಾನುಗ್ರಹ ಸಮರ್ಥರು ಆಗಿರುವರು. ಮಹಾಸೂತ್ರಗಳಿಗೆ ಸೇರಿದ ಆಯಾ ಉಪಸೂತ್ರಗಳವರು ಮಹಾಚಾರ್ಯರ ಅನುಮತಿಯಂತೆ ಧರ್ಮಕಾರ್ಯಗಳನ್ನು ನೆರವೇರಿಸುತ್ತಾರೆ. ಆದ್ದರಿಂದಲೇ ಇವರಿಗೆ ಗೌಣ ಗುರುಗಳೆಂದು ಹೆಸರು ಎಂದು ವಿವರಿಸಲಾಗಿದೆ.

ಚತುರ್ಥ ಪ್ರಕರಣದಲ್ಲಿ ಮೇಲೆ ಹೇಳಿದ ಉಪಸೂತ್ರಗಳವರಲ್ಲಿ ಮಠಾರ್ಯ, (ಮಠಸ್ಥರು), ಗಣಾರ್ಯ, ಸ್ಥಾವರಾರ್ಯ, ಮಠಪತಿ ಮತ್ತು ಗಣಕುಮಾರ (ಮಾಲಾರ್ಯ) ಎಂಬ ಐದು ಬಗೆಗಳಿವೆ. ಈ ಐವರೂ ಉಪಾಚಾರ್ಯರು ರಾಜನ ಸೇವೆಗಾಗಿ ಸೇವಕರಿರುವಂತೆ ಮಹಾಚಾರ್ಯರೆಸಗುವ ಸಮಾಜಸೇವೆಯಲ್ಲಿ

ನೆರವಾಗುತ್ತಾರೆ. ಗ್ರಾಮಾಚಾರ್ಯರೆಂಬುದು ಇವರಿಗೆ ಮತ್ತೊಂದು ಹೆಸರು. ಇವರಲ್ಲಿ ಮಠಸ್ಥರಿಗೆ ಮಾತ್ರ ಗೌಣ ಗುರುತ್ವವುಂಟು. ಉಳಿದವರು ಮಠಸ್ಥರೆಸಗುವ ಧರ್ಮಕಾರ್ಯಗಳಲ್ಲಿ ಸಹಾಯಕರು ಎಂಬ ವಿವರಣೆ ಇದೆ.

ಪಂಚಮ ಪ್ರಕರಣದಲ್ಲಿ ಪಂಚಮ ಸ್ವರೂಪ ನಿರೂಪಣೆಯಿದೆ. ಶಿವನ ಈಶಾನ ಮುಖದಿಂದ ಉದಯಿಸಿದ ಗಣೇಶ್ವರನ ಪಂಚಮುಖಗಳಿಂದ ಮುಖಾರಿ, ಕಾಲಾರಿ, ಪುರಾರಿ, ಸ್ಮರಾರಿ, ಮತ್ತು ವೇದಾರಿ ಎಂಬ ಪಂಚಮರಿಗೆ ರೇಣುಕಾದಿ ಪಂಚಾಚಾರ್ಯರು ಶಿವದೀಕ್ಷೆಯನ್ನು ಕೊಟ್ಟು ಅವರಿಗೆ ಕ್ರಮವಾಗಿ ಪ್ರಸಾದ ಪಂಚಾಕ್ಷರಿ, ಮಾಯಾ ಪಂಚಾಕ್ಷರಿ, ಸೂಕ್ಷ್ಮ ಪಂಚಾಕ್ಷರಿ, ಸ್ಥೂಲ ಪಂಚಾಕ್ಷರಿ, ಮತ್ತು ಮೂಲ ಪಂಚಾಕ್ಷರಿ ಮಂತ್ರಗಳನ್ನು ಉಪದೇಶ ಮಾಡುತ್ತಾರೆ. ಈ ಐವರು ಪಂಚಮರಿಂದ ಮತ್ತೆ ೧೨ ಜನ ಉಪಪಂಚಮರು ಜನಿಸಿದರು ಎಂದು ವಿವರಿಸಲಾಗಿದೆ.

ಸಪ್ತಮ ಪಟಲದಲ್ಲಿ ಶೈವಭೇದಗಳಾದ ಸಾಮಾನ್ಯ ಶೈವ, ಮಿಶ್ರ ಶೈವ, ಶುದ್ಧ ಶೈವ ಮತ್ತು ವೀರಶೈವಗಳ ಲಕ್ಷಣಗಳು ವಿವರಿಸಲ್ಪಟ್ಟಿದೆ. ಅಲ್ಲದೇ ವೀರಶೈವದ ಪಂಚಯಜ್ಞಗಳ, ಸಂಧ್ಯಾವಂದನ, ವೀರಶೈವ ಪದನಿರ್ವಚನದ ವಿವರಣೆ ಇದೆ. ಇಷ್ಟಲಿಂಗಧಾರಣದ ಅಗತ್ಯ, ಇಷ್ಟಲಿಂಗ ಮತ್ತು ಪ್ರಾಣಲಿಂಗದ ಪೂಜಾರಹ್ಯಸವು ವರ್ಣಿತವಾಗಿವೆ.

೭) ನಿಃಶ್ವಾಸಾಗಮ : ಪಂಡಿತ ಶ್ರೀ ವ್ರಜವಲ್ಲಭ ದ್ವಿವೇದಿಯವರ ಕೃತಿ ಲುಪ್ತಾಗಮಸಂಗ್ರಹವು ಸಂಪೂರ್ಣಾನಂದ ಸಂಸ್ಕೃತ ವಿದ್ಯಾಲಯದಿಂದ ೧೯೭೩ ರಲ್ಲಿ ಪ್ರಕಟಗೊಂಡಿದ್ದು ಅದರ ಉಲ್ಲೇಖದಿಂದ ಡಾ. ತುನಗಾಂಡ್ರಿಯನ್ ಎಂಬ ವಿದ್ವಾಂಸರು ನಿಃಶ್ವಾಸಾಗಮದ ವಿಮರ್ಶಿತ ಆವೃತ್ತಿಯೊಂದನ್ನು ತಯಾರಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ಆ ವಿದ್ವಾಂಸರು ಹಾಲೆಂಡಿನವರು.

೮) ಸ್ವಾಯಂಭುವಾಗಮ : ಸ್ವಾಯಂಭುವಾಗಮದ ವೀರಶೈವ ಪರವಾದ ೩ ಪಟಲಗಳು (೮-೧೦) ಮಾತ್ರ ಶಿವಾಗಮ ಸೌರಭದಲ್ಲಿ ಅನುಭಂದ ರೂಪದಲ್ಲಿ ಎಮ್. ಜಿ. ನಂಜುಡಾರಾಧ್ಯರಿಂದ ಸಂಪಾದಿತವಾಗಿ ಪ್ರಕಟಿಸಲ್ಪಟ್ಟಿದೆ. ಅನಾದಿ ವೀರಶೈವಸಾರ ಸಂಗ್ರಹ, ಧರ್ಮಶಿರೋಮಣಿ, ಕೈವಲ್ಯಸಾರದಲ್ಲಿ ಈ ಆಗಮದಿಂದ ಶ್ಲೋಕಗಳು ಉಲ್ಲೇಖಿಸಲ್ಪಟ್ಟಿವೆ. ಸ್ವಾಯಂಭುವಾಗಮದ ಅಷ್ಟಮ ಪಟಲದಲ್ಲಿ ಪಂಚಮರ ಉತ್ಪತ್ತಿಯ ಸುಂದರ ಕಥೆ ವರ್ಣಿತವಾಗಿದೆ. ಭಾರತ ವರ್ಷದ ವಿಧರ್ಭ ಮಂಡಲದ ಫಂಚವಲ್ಲಿಪುರದ ಅರಸು ವೀರಗಂಧರ್ವ, ಪತ್ನಿ ಸುವಕ್ಷಾದೇವಿ, ಅವರಿಗೆ ಓರ್ವಳೆ ಪುತ್ರಿ ಬಲಿದೇವಿ. ಗೋಮುದಾಸುರನೆಂಬ ರಾಕ್ಷಸನು ಗಂಧರ್ವ ರಾಜನನ್ನು ಸೋಲಿಸಿ ಪುರವನ್ನು ವಶಪಡಿಸಿಕೊಂಡ. ಆಗ ಬಲಿದೇವಿಯು ವೇಷ ಮರೆಸಿಕೊಂಡು ಹೋಗಿ ಲಲಿತಾರಣ್ಯದಲ್ಲಿ ಘೋರ ತಪಸ್ಸನ್ನು ಆಚರಿಸಿದಳು. ಅವಳ ತಪಕ್ಕೆ ಒಲಿದ ಪರಶಿವನು ಫಂಚವಕ್ತ್ರ ಗಣೇಶ್ವರನನ್ನು ಕರೆದು ಬಲಿದೇವಿಯ ಮನೋರಥವನ್ನು ನೆರವೇರಿಸಲು ಆಜ್ಞಾಪಿಸಿದನು. ಶಿವನ ಆಜ್ಞಾನುಸಾರ ಗಣೇಶ್ವರನು

ಗೋಮುಖಾಸುರನನ್ನು ಸಂಹರಿಸಿ ಪಂಚವಲ್ಲಿಪುರವನ್ನು ಜಯಿಸಿದನು. ಇದರಿಂದ ಸಂಪ್ರೀತನಾದ ರಾಜನು ತನ್ನ ಮಗಳನ್ನು ವರಿಸುವಂತೆ ಪ್ರಾರ್ಥಿಸಲು ಶುಭಮೂಹೂರ್ತದಲ್ಲಿ ಮದುವೆ ನೆರವೇರಿತು. ಅವರಿಗೆ ಮಹಾಶೂರರಾದ ಐವರು ಮಕ್ಕಳು ಜನಸಿದರು. ಪಂಚಾಸ್ಯ ಗಣೇಶ್ವರನು ಕೈಲಾಸಕ್ಕೆ ಹೋಗಿ ತನ್ನ ಮಕ್ಕಳಿಗೆ ಶಿವದೀಕ್ಷೆ ಮತ್ತು ಸಂಸ್ಕಾರ ಕೊಡುವಂತೆ ಭಿನ್ನಯಿಸಿದನು. ಆಗ ಪರಶಿವನು ಪಂಚಗಣಾಧೀಶ್ವರರನ್ನು ಕರೆದು ತನ್ನ ಶಿಖಾಚಕ್ರ ಮಧ್ಯದಲ್ಲಿರುವ ನಿರಂಜನ ಸ್ವರೂಪವಾದ ಚರಲಿಂಗವನ್ನು ನೀಡಿ ಅವರನ್ನು ಭೂಲೋಕಕ್ಕೆ ಕಳುಹಿಸಿದನು. ಇವರು ಪಂಚಾಸ್ಯ ಗಣವರನ ಪುತ್ರರಿಗೆ ಶಿವದೀಕ್ಷೆಯನ್ನಿತ್ತು ಉದ್ಧರಿಸಿದರು ಎಂದು ವರ್ಣಿತವಾಗಿದೆ.

ಒಂಭತ್ತನೆಯ ಪಟಲದಲ್ಲಿ ಪಂಚಾಚಾರ್ಯರ ಉತ್ಪತ್ತಿಯು ಹೇಳಲ್ಪಟ್ಟಿದೆ. ಇಲ್ಲಿ ಘಂಟಾಕರ್ಣ (ಶಂಕುಕರ್ಣ), ಗಜಕರ್ಣ (ಧೇನುಕರ್ಣ), ರೇಣುಕ, ದಾರುಕ ಮತ್ತು ವಿಶ್ವಕರ್ಣ ಎಂಬ ಕ್ರಮದಲ್ಲಿ ಅವರ ಉತ್ಪತ್ತಿಯನ್ನು ಹೇಳಲಾಗಿದೆ. ದ್ರಾಕ್ಷಾರಾಮದ ರಾಮನಾಥ ಲಿಂಗದಿಂದ ಏಕೋರಾಮರ ಜನನ, ಹಿಮಾಲಯವು ಅವರ ತಪೋಭೂಮಿ; ಸುಧಾಕುಂಡ (ಚಂದ್ರಕುಂಡ) ವೆಂಬ ಹೆಸರುಳ್ಳ ಶ್ರೀ ಮಲ್ಲಿಕಾರ್ಜುನ ಲಿಂಗದಿಂದ ಪಂಡಿತಾರಾಧ್ಯರ ಜನನ, ಶ್ರೀಗಿರಿಯಲ್ಲಿಯೇ ಅವರ ಆವಾಸ; ಮನೋಹರವಾದ ಕೊಲ್ಲಿಪಾಕೀ ಕ್ಷೇತ್ರದ ಸೋಮೇಶ್ವರ ಲಿಂಗದಿಂದ ರೇವಣಾರಾಧ್ಯರ ಜನನ, ಕದಳೀ (ಬಾಳೆಹಳ್ಳಿ) ಪುರವು ಅವರ ಆವಾಸ; ವಟಕ್ಷೇತ್ರದ ಸಿದ್ಧೇಶ್ವರಲಿಂಗದಿಂದ ಮರುಳಸಿದ್ಧರ ಜನನ, ಉಜ್ಜಯಿನಿ ಅವರ ಆವಾಸ; ಕಾಶೀಕ್ಷೇತ್ರದ ವಿಶ್ವನಾಥ ಲಿಂಗದಿಂದ ವಿಶ್ವಾರಾಧ್ಯರ ಜನನ, ಕಾಶಿಯಲ್ಲಿ ಅವರ ಆವಾಸ.

ಹತ್ತನೆಯಪಟಲದಲ್ಲಿ ಪಂಚಾಚಾರ್ಯರ ಸಂಕೇತವಾಗಿ ಪಂಚಕಲಶಗಳನ್ನು ಸ್ಥಾಪಿಸುವ ವಿಷಯವನ್ನು ನಿರೂಪಿಸಲಾಗಿದೆ. ಇಲ್ಲಿ ಹೇಳಿರುವ ಕ್ರಮ ಮತ್ತು ಯಾವ ದಿಕ್ಕಿನ ಕಲಶಕ್ಕೆ ಯಾರು ಆರಾಧ್ಯರು ಎಂಬ ವಿಷಯದಲ್ಲಿ ಬದಲಾವಣೆಗಳಾಗಿರುವುದನ್ನು ಕಾಣುತ್ತೇವೆ. ಮೂಲಭೂತವಾಗಿ **ಪಂಚಕಲಶಗಳು** ಪಂಚಬ್ರಹ್ಮರ ಮತ್ತು ಅವರಿಂದ ಹುಟ್ಟಿದ **ಪಂಚ ಆರಾಧ್ಯರ ಸಂಕೇತವಾಗಿ ಸ್ಥಾಪಿತವಾಗಿ** ಪೂಜಿಸಲ್ಪಡುತ್ತವೆ ಎಂಬ ಮಹತ್ವದ ಅಂಶ ಪ್ರತಿಪಾದಿತವಾಗಿದೆ. ಕೊನೆಗೆ ಅಲಿಂಗಿಗಳಿಂದ ಭಸ್ಮ, ರುದ್ರಾಕ್ಷಿ ಮುಂತಾದ ಶಿವದೀಕ್ಷೆಗೆ ಯೋಗ್ಯವಾದ ವಸ್ತುಗಳನ್ನು ಕೊಳ್ಳಬಾರದು. ಕಾಪಾಲಿಕರು ಪಾಷಂಡರು ಮುಂತಾದವರಿಂದ ಕೊಂಡ ವಸ್ತುಗಳು ಶಿವದೀಕ್ಷಾ ಯೋಗ್ಯವೆನಿಸಲಾರವು ಎಂದು ಹೇಳಲಾಗಿದೆ.

೯) ವೀರಾಗಮ:[೮೫] ವೀರಾಗಮದ ಉತ್ತರ ಭಾಗವು ಎರಡು ಮುದ್ರಿತ ಆವೃತ್ತಿಗಳಲ್ಲಿ ಉಪಲಬ್ಧವಾಗಿದೆ. ಒಂದು ಆವೃತ್ತಿ ಡಾ॥ ಶ್ರೀ ಜ. ಚ. ನಿ. ಅವರಿಂದ ಪರಿಷ್ಕರಿಸಲ್ಪಟ್ಟು ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘ, ಗದಗ–ಬೆಟಗೇರಿ ಅವರಿಂದ

---

೮೫. ವೀರಶೈವ ಭವ್ಯಪರಂಪರೆ, ಡಾ. ಶ್ರೀ ಎಂ. ಶಿವಕುಮಾರ ಸ್ವಾಮಿ, ಪ್ರ. ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ, ೨೦೦೪ ಪುಟ. ೮೪–೯೦

೧೯೬೨ ರಲ್ಲಿ ಪ್ರಕಟವಾಗಿರುವುದು. ಇನ್ನೊಂದು ಆವೃತ್ತಿ ಡಾ॥ ಎಚ್. ಪಿ. ಮಲ್ಲೇದೇವರಿಂದ ಸಂಪಾದಿಸಲ್ಪಟ್ಟು ಅದರ ಮೊದಲ ಭಾಗವು ಮೈಸೂರ ಪ್ರಾಚ್ಯ ಸಂಶೋಧನ ಸಂಸ್ಥೆಯಿಂದ ೧೯೮೮ ರಲ್ಲಿ ಪ್ರಕಾಶಿಸಲ್ಪಟ್ಟಿದೆ. ಎರಡನೇ ಭಾಗವಿನ್ನೂ ಪ್ರಕಟವಾಗಿಲ್ಲ. ವೀರಾಗಮೋತ್ತರ ಭಾಗದ ಉಪಲಬ್ಧವಾದ ೭ ಪಟಲಗಳಲ್ಲಿ ಮೊದಲ ೪ ಪಟಲಗಳು ಮೊದಲ ಭಾಗದಲ್ಲಿ ಸೇರಿವೆ. ಇದು ದೇವನಾಗರೀ ಲಿಪಿಯಲ್ಲಿ ಮುದ್ರಿತವಾಗಿದೆ. ವೀರಗುರು ಲಿಂಗಾರಾಧ್ಯ ಮತ್ತು ಕಾಶೀಖಾಂಡ ಚನ್ನವೀರದೇವ ಎಂಬ ಇಬ್ಬರು ವಿದ್ವಾಂಸರು ವೀರಾಗಮೋತ್ತರಕ್ಕೆ (ವೀರಮಾಹೇಶ್ವರ ತಂತ್ರ) ಕನ್ನಡದಲ್ಲಿ ಟೀಕೆ ಬರೆದಿದ್ದಾರೆ. ಈ ಟೀಕೆಗಳಿನ್ನೂ ಪ್ರಕಟವಾಗಿಲ್ಲ.

ಡಾ॥ ಶ್ರೀ ಜ.ಚ.ನಿ ಆವೃತ್ತಿಯಲ್ಲಿ ಏಳುಪಟಲಗಳಿವೆ. ಆದರೆ ಡಾ॥ ಎಚ್. ಪಿ. ಮಲ್ಲೇದೇವರ ಆವೃತ್ತಿಯಲ್ಲಿ ನಾಲ್ಕು ಪಟಲಗಳು ಮಾತ್ರ ಇದ್ದು ಶ್ಲೋಕಗಳ ಸಂಖ್ಯೆಯಲ್ಲಿ ವ್ಯತ್ಯಾಸಗಳಿವೆ.

ಡಾ॥ ಶ್ರೀ ಜ.ಚ.ನಿ ಆವೃತ್ತಿ		**ಡಾ॥ ಎಚ್. ಪಿ. ಮಲ್ಲೇದೇವರ ಆವೃತ್ತಿ**	
ಪಟಲಗಳು	**ಶ್ಲೋ.ಸಂ.**	**ಪಟಲಗಳು**	**ಶ್ಲೋ.ಸಂ.**
೧. ಶೈವಪಟಲ	೭೮೩	ಈ ಪಟಲ ಇಲ್ಲ	–
೨. ದೀಕ್ಷಾದ್ರವ್ಯ ಪಟಲ	೬೦೫	ಇದು ೪ನೇ ಪಟಲ	೬೦೦
೩. ತತ್ವ ಸ್ವರೂಪ ಪಟಲ	೧೭೬	ಇದು ೧ನೇ ಪಟಲ	೧೮೦
೪. ವೀರಮಾಹೇಶ್ವರ ಸ್ವರೂಪ ಪಟಲ	೨೨೪	ಇದು ೨ನೇ ಪಟಲ	೨೨೧
೫. ವೀರಶೈವ ದೀಕ್ಷಾಕಾಲ ನಿರ್ಣಯ ಪಟಲ	೨೭೦	ಇದು ೩ನೇ ಪಟಲ	೨೭೧
೬. ಪ್ರಸಾದ ಸ್ವರೂಪ ಪಟಲ	೫೧೪	ಈ ಪಟಲ ಇಲ್ಲ	–
೭. ಪಾದೋದಕ ಪ್ರಸಾದವರ್ಣನ ಪಟಲ	೬೦೮	ಈ ಪಟಲ ಇಲ್ಲ	–
ಒಟ್ಟು ಏಳು ಪಟಲಗಳು	೩೧೮೦	**ಒಟ್ಟು ಪಟಲಗಳು ೪**	೧೨೭೨

ಡಾ॥ ಮಲ್ಲೇದೇಪರ ಆವೃತ್ತಿಭಾಗ ೨ರಲ್ಲಿ ಇನ್ನುಳಿದ ಪಟಲಗಳು ಬರಬಹುದೇನೋ ಕಾದುನೋಡಬೇಕು. ಆದರೆ ಇರುವ ಪಟಲದಲ್ಲಿ ಶ್ಲೋಕ ಸಂಖ್ಯೆಯಲ್ಲಿ ವ್ಯತ್ಯಾಸವಿದ್ದರೂ ವಿಷಯಭೇದವಿಲ್ಲ.

ಪ್ರಥಮ ಪಟಲದಲ್ಲಿ ಶೈವಪ್ರಭೇದಗಳು ಪ್ರತಿಪಾದಿತವಾಗಿದ್ದು ಅದರಲ್ಲಿ ಶುದ್ಧಶೈವ, ಕ್ರಿಯಾಶೈವ, ರೂಪಶೈವ, ಮಿಶ್ರಶೈವ, ಗುಣಶೈವ, ಬಿಂಬಶೈವ, ಭಕ್ತಿಶೈವ, ಕರ್ಮಶೈವ, ಮಠಶೈವ, ಅತೀರ್ಥಶೈವ, ಲಾಕ್ಷಶೈವ, ವ್ರತಶೈವ, ಪಾಕಕ್ರಿಯಾಶೈವ, ಅನುಕೂಲಶೈವ, ಪ್ರತಿಕೂಲಶೈವ, ಕರಶೈವ, ವಿಭೂತಿಶೈವ, ದೀಕ್ಷಾಶೈವ, ಮಂತ್ರಶೈವ, ಆಚಾರಶೈವ,

ಜಾತಿಶೈವ, ಕ್ರಿಯೋಪಾಧಿಶೈವ, ಭೋಗಶೈವ, ಮಹಾತ್ಮಶೈವ – ಎಂಬ ಬಹುವಿಧ ಶೈವಗಳ ಉಲ್ಲೇಖವು ಬಂದಿದೆ. ವೀರಶೈವವು ಶೈವರಾಜವೆಂದು ಉಲ್ಲೇಖಿಸಲಾಗಿದೆ.

ಇತರ ವಿಷಯಗಳು: ಪ್ರೇತಲಿಂಗಾರ್ಚನ ನಿಂದೆ, ಉನ್ಮತ್ತ ಶೈವನಿಂದೆ, ಸ್ವರಶೈವನಿಂದೆ, ಗುಣಶೈವನಿಂದೆ; ಭಕ್ತಿಶೈವಪ್ರಶಂಸೆ; ಶಿಂಶುಮಾರನ ಕಾಯಕಕ್ರಾಂತಿ; ಮಠಶೈವ ಪ್ರಶಂಸೆ; ಡಿಂಡಿಮಾರ ಶಾಂತಯೋಗೀಶ್ವರ ಗಣಾಧಿಪ ಸಂವಾದ; ವೀರಶೈವ ದಿನಚರಿ– ಶೌಚವಿಧಿ, ದಂತಧಾವನವಿಧಿ, ಭಸ್ಮ ತಯಾರಿಕೆ ಮತ್ತು ಭಸ್ಮ ಧಾರಣವಿಧಿ; ಮಠಶೈವ – ಡಿಂಡಿಮಾರ ಗುರು ಪ್ರಶಂಸೆ; ಗುರುವು ಗೃಹಾನ್ವಿತನಾಗಿರಬೇಕು; ಭೂರುದ್ರ ಪ್ರಶಂಸೆ; ಭೂರುದ್ರ ಆತಿಥ್ಯ, ಮಾಹೇಶ್ವರಾತಿಥ್ಯ, ಭೂರುದ್ರರಿಗೆ ದಾಸೋಹ; ವಿಶೇಷವಾಗಿ ಶಿಂಶುಮಾರ, ವಿರೂಪಾಕ್ಷ, ಡಿಂಡಿಮಾರ, ವಿಡಂಬಕ, ಮೇಘನಾದ, ಸ್ವರಾಧೀಶ, ಕಮಲಾಶ್ರಗಳ ಪುರಸ್ಕಾರ; ಮಾಹಿಷ್ಮತೀ ಪುರದ ರಾಜ ಶತಾನಂದನಿಗೆ ಶ್ರೀ ರೇಣುಕರು ದರ್ಶನ ನೀಡಿದ್ದು, ಪಾದಪೂಜೆಯನ್ನು ಸ್ವೀಕರಿಸಿದುದು; ಶತಾನಂದನ ನಿತ್ಯದಾಸೋಹ ಸೇವೆ; ಶತಾನಂದ–ರೇಣುಕ ಸಂವಾದ; ಶತಾನಂದ ಯೋಗೀಶ್ವರನ ಮೇಲೆ ವೃತ್ರಸುರನ ದ್ವೇಷ ಮತ್ತು ಯುದ್ಧ, ಯೋಗೀಶ್ವರನ ನಿಃಶ್ವಾಸವಾಯುವಿನಿಂದ ವೃತ್ರನ ಹಸ್ತಿ, ಅಶ್ವ, ರಥಗಳ ಸೈನ್ಯದ ನಾಶ; ಲಾಕ್ಷಶೈವನಿಂದೆ, ವ್ರತಶೈವನಿಂದೆ; ಪಾಕಕ್ರಿಯಾನ್ವಿತಶೈವಪ್ರಶಂಸೆ; ಅಗ್ರಾಹ್ಯ ವಸ್ತುಗಳು–ಕಸ್ತೂರಿ, ಸಾಂಬ್ರಾಣಿ, ಪುನುಗು, ಇತ್ಯಾದಿಗಳು; ಪವಿತ್ರ ಮತ್ತು ಅಪವಿತ್ರ ಕ್ಷೀರ (ಆಕಳ ಮೊಲೆಗಳನ್ನು ತೊಳೆಯದೆ ಹಿಂಡಿಕೊಂಡದ್ದು ಅಥವಾ ಅಲಿಂಗಿಯು ಕರೆದುಕೊಂಡದ್ದು ಅಪವಿತ್ರ, ತೊಳೆದು ಲಿಂಗವಂತರಿಂದ ಕರೆದುಕೊಂಡದ್ದು ಪವಿತ್ರ); ಅಲಿಂಗಿ ಪಾಕದ ಅಗ್ರಾಹ್ಯತ್ವ; ಷಟ್‌ಸ್ಥಲದ ವರ್ಣನೆ; ಭೂರುದ್ರ ಪ್ರಶಂಸೆ ಮತ್ತು ವೀರಮಾಹೇಶ್ವರ ಪ್ರಶಂಸೆ.

ದೀಕ್ಷಾದ್ರವ್ಯ ಪಟಲದಲ್ಲಿ ಮೊದಲು ದೀಕ್ಷಾದ್ರವ್ಯಗಳ ನಿರೂಪಣೆ, ಕಾರ್ತಿಕ, ಮಾರ್ಗಶಿರಾ, ಶ್ರಾವಣ, ಮಾಘ, ಫಾಲ್ಗುನ ಮಾಸಗಳಲ್ಲಿ ವೀರಮಾಹೇಶ್ವರರಿಗೆ ದೀಕ್ಷಾ ಕಾಲ. ಅನೇಕ ಸುರಭಿಯುಕ್ತ ಕೋಮಲ ವಿವಿಧ ಪುಷ್ಪಗಳು, ಹಲವು ಬಗೆಯ ಚಿಗುರುಗಳು, ನಾನಾ ವರ್ಣಗಳ ವಸ್ತ್ರಗಳು, ವಿವಿಧ ಪೂಜಾ ದ್ರವ್ಯಗಳು, ವೀರಮಾಹೇಶ್ವರರ ಪ್ರಶಂಸೆಯ ಅನಂತರ ಪಂಚಕಲಶ ಸ್ಥಾಪನೆಯ ವಿವರಗಳು ಬರುತ್ತವೆ; ಪಂಚಬ್ರಹ್ಮರ (ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನರ) ಸಂಕೇತವಾಗಿ ಪಂಚ ಕಲಶಗಳ ಸ್ಥಾಪನೆ, ಅವುಗಳಲ್ಲಿ ರೇಣುಕಾದಿ ಅನ್ವಯ ಸಂಜಾತರಾದ ಇತರ ಆರಾಧ್ಯರನ್ನು ಆಹ್ವಾನಿಸಿ ಪೂಜಿಸಬೇಕೆಂದು ಹೇಳಿದೆ (೪, ೭, ೨, ೭, ೮). ರೇಣುಕರ ವರ್ಣನೆ ಮತ್ತು ಅವರನ್ನು ಪೂಜಿಸುವ ವಿಧಾನ ಬಂದಿವೆ. ಶ್ರೀರೇಣುಕರಿಗೆ ಶರಣು ಎನ್ನುವ ಸ್ತೋತ್ರವು ಸುದೀರ್ಘವಾಗಿದೆ. ಅನಂತರ ಓಹಿಲನೆಂಬ ಗುರುಶ್ರೇಷ್ಠನ ಇತಿಹಾಸವು ನಿರೂಪಿಸಲ್ಪಟ್ಟಿದೆ; ಶಿಖಾವತೀ (ದ್ರಾಕ್ಷಾರಾಮ ಕ್ಷೇತ್ರ) ವರ್ಣನೆ ಮತ್ತು ಅಲ್ಲಿದ್ದ ಓಹಿಲೇಶ್ವರನ ವರ್ಣನೆ ಮತ್ತು ಕೈಲಾಸಪ್ರಾಪ್ತಿ ಮುಂತಾದವು ಬರುತ್ತವೆ. ಭೂರುದ್ರರಾದ ವೀರಮಾಹೇಶ್ವರರ ವೈಶಿಷ್ಟ್ಯ–ಪ್ರಶಂಸೆಗಳು ಸುದೀರ್ಘವಾಗಿ ಬರುತ್ತವೆ. ವೀರಮಾಹೇಶ್ವರರ ಕವಚ (ರಕ್ಷಣೆ) ಮೋಕ್ಷದಾಯಕ.

ಶಿಂಶುಮಾರ (ದಾರುಕ), ರೇಣುಕ, ಗಜಶ್ರುತಿ (ಗಜಕರ್ಣ) ಮತ್ತು ಘಂಟಾಕರ್ಣರ ಹಾಗೂ ಷಣ್ಮುಖನ ಅಂಗಾವರಣ (ಕವಚ) ಮೋಕ್ಷದಾಯಕವೆಂದು ಹೇಳಿದೆ. ಅವರ ಪ್ರಶಂಸೆಯು ದೀರ್ಘವಾಗಿ ಬಂದಿದೆ. ಶಿವಕವಚ (ವೀರಾಗಮಕವಚ); ಅದರ ಮಹಿಮೆ ವರ್ಣಿಸಲ್ಪಟ್ಟಿದೆ. ವೀರಾಚಾರ–ವೀರದೀಕ್ಷೆಗಳು, ಇಷ್ಟಲಿಂಗಾರ್ಚನ ವೈಶಿಷ್ಟ್ಯ, ಶಿವದೀಕ್ಷಾ ಪ್ರಭಾವಗಳನ್ನು ವರ್ಣಿಸಲಾಗಿದೆ. ಅನಂತರ ಮತಂಗ ಪರ್ವತ ವರ್ಣನೆ ಮತ್ತು ಮಾತಂಗನ ಇತಿಹಾಸ ಬಂದಿವೆ. ಮಾತಂಗನಿಗೆ ಶರಣು ಎಂಬ ಸುದೀರ್ಘ ಸ್ತೋತ್ರವು ಬಂದಿದೆ. ವೀರಮಾಹೇಶ್ವರರ ಪ್ರಸಾದದ ಮಹಿಮೆಯು ವರ್ಣಿಸಲ್ಪಟ್ಟಿದೆ. ಅನಂತರ ದೀಕ್ಷಾ ಮಹಾತ್ಮ್ಯವು ವರ್ಣಿಸಲ್ಪಟ್ಟಿದೆ. ದೂಷ್ಯ ದೀಕ್ಷಾಪ್ರಕಾರಗಳ ಬಗ್ಗೆ ಹೇಳಲಾಗಿದೆ. ವರ್ಣಭೇದದ ಖಂಡನೆಯಿದೆ. ಭಕ್ತಿಸಾಗರ, ದ್ವಿತೀಯ ಷಣ್ಮುಖ, ಆಚಾರ ಚಕ್ರವರ್ತಿ ಎಂಬ ಬಿರುದಾಂಕಿತ ಸತ್ಯೇಂದ್ರ ಭೂಪಾಲನ ಮೂಲಕ ಶ್ರೀ ರೇಣುಕರು ವೀರಮಾಹೇಶ್ವರ ಸಭಾ ಸಂಘಟನೆಯನ್ನು ಮಾಡಿಸಿದ್ದು ಮುಂತಾದ ಘಟನೆಗಳು ವರ್ಣಿಸಲ್ಪಟ್ಟಿವೆ. ಸತ್ಯೇಂದ್ರ – ಸುಶೀಲೆಯರ ಮಗ ಶಿವಶರ್ಮನಿಗೆ ಶ್ರೀ ರೇಣುಕರಿಂದ ದೀಕ್ಷೆ ಮುಂತಾದ ವಿವರಗಳು ನಿರೂಪಿತವಾಗಿವೆ. ವೀರಮಾಹೇಶ್ವರರ ಪಾದಧೂಳಿಯ ಮಹತ್ತ್ವ ಸುದೀರ್ಘವಾಗಿ ವರ್ಣಿತವಾಗಿದೆ.

ತತ್ತ್ವಸ್ವರೂಪವರ್ಣನ ಪಟಲ : ಈ ಪಟಲವು ಈಶ್ವರನನ್ನು ಕುರಿತು ಗೌರಿಯು ವೀರಮಾಹೇಶ್ವರಾಚಾರವನ್ನು ತಿಳಿಯುವ ಆಶೆಯನ್ನು ವ್ಯಕ್ತಪಡಿಸುವುದರ ಮೂಲಕ ಆರಂಭವಾಗುತ್ತದೆ. ಈಶ್ವರನು ಶ್ರೀ ರೇಣುಕೋಕ್ತವಾದುದನ್ನು ಹೇಳಲು ಪ್ರತಿಜ್ಞೆ ಮಾಡಿ ಮೊದಲಿಗೆ ಶಿವತತ್ತ್ವಾದಿಗಳ ಅಂದರೆ ಮೂವತ್ತಾರು ತತ್ತ್ವಗಳ ಆವಿರ್ಭಾವವನ್ನು ನಿರೂಪಿಸುತ್ತಾನೆ. ತತ್ತ್ವಗಳಲ್ಲಿ ಶಿವತತ್ತ್ವವೇ ರಾಜ. ಅದರ ಉಪದೇಶವನ್ನು ಪೂರ್ವದಲ್ಲಿ ಶ್ರೀ ರೇಣುಕರಿಂದ ಷಡ್ವಕ್ತ್ರನು (ಷಣ್ಮುಖನು) ಪಡೆದನು. ಶಿವತತ್ತ್ವದಿಂದ ರುದ್ರತತ್ತ್ವವು ಹುಟ್ಟಿತು. ಆ ರುದ್ರತತ್ತ್ವದಿಂದ ಅವಿದ್ಯಾ–ಅಹಂಕಾರ–ಮನಸ್ಸುಗಳು ಹುಟ್ಟಿ ಅವೆಲ್ಲವೂ ಅಣು ಸಂಬಂಧವುಳ್ಳವುಗಳಾದವು. ಐದು ಆಣವಗಳ ಬಗ್ಗೆ ನಿರೂಪಣೆ ಬರುತ್ತದೆ. ಸಿದ್ಧಾಣವ, ತ್ಯಾಜಮಾನಾಣವ, ಮೂಲಾಣವ, ಗುಣಾಣವ ಮತ್ತು ಯೋಗಾಣವವೆಂದು ಆಣವಗಳು ಐದು, ಆತ್ಮನಲ್ಲಿ ಅನಾತ್ಮತಾಬುದ್ಧಿಯು ಸಿದ್ಧಾಣವ; ಅನಾತ್ಮನಲ್ಲಿ ಆತ್ಮತಾ ಬುದ್ಧಿಯು ತ್ಯಾಜಮಾನಾಣವ; ಜೀವನಲ್ಲಿ ಆತ್ಮವತಾಬುದ್ಧಿ, ಅಂದರೆ ತನಗೆ ಪ್ರೇರಕ ಪರಮಾತ್ಮನೆಂಬುದು ಮಲಾಣವ; ಅವಿದ್ಯೆಯಲ್ಲಿ ಆತ್ಮತಾಬುದ್ಧಿಯು ಗುಣಾಣವ, ಮತ್ತು ಅವಿದ್ಯಾಮಾಯಾಮಲವನ್ನು ಎಚ್ಚರಗೊಳಿಸುವುದೇ ಯೋಗಾಣವ. ವೀರಮಾಹೇಶ್ವರರು ಶೀಲಾಚಾರ ಸಮನ್ವಿತರಾಗಿ ಆಣವ, ಮಾಯೀಯ, ಕಾರ್ಮಿಕ ಮಲಗಳಿಂದ ಮುಕ್ತರಾಗಿರುವರು. ಜೀವನು ಜಡನೆಂದರಿತು ಶ್ರೀರೇಣುಕರು ಶಿವಭಕ್ತಿಯಿಂದ ತುಂಬಿದವರಾಗಿ ಇಷ್ಟಲಿಂಗವನ್ನು ಧರಿಸಿದರು. ಅದೇ ರೀತಿ ಸಮಸ್ತ ವೀರಮಾಹೇಶ್ವರರು ಭಕ್ತಿಯಿಂದ ಇಷ್ಟಲಿಂಗವನ್ನು ಧರಿಸುತ್ತಾರೆ. ಇಲ್ಲಿ ಲಿಂಗತತ್ತ್ವದ (ಶಿವತತ್ತ್ವದ) ಮಹತ್ತ್ವವು ನಿರೂಪಿಸಲ್ಪಟ್ಟಿದೆ. ಶಿವಾದ್ವೈತದ ಉಪದೇಶ; ಅದ್ವೈತಮತ, ಸಾಂಖ್ಯಮತ, ವೇದಾಂತ ಮತ, ಯೋಗಮತ, ತಾರ್ಕಿಕ ಮತ,

ವ್ಯಾಸಮತ, ಪುರಾಣವಾದ ಮುಂತಾದ ವಾದಗಳ ನಿರಸನಪೂರ್ವಕ ಸ್ವಮತದ ಸಮರ್ಥನೆ ಮಾಡಿ ಮತ್ತೆ ಮೀಮಾಂಸಾಮತ, ವೈಷ್ಣವಮತ ಮುಂತಾದವುಗಳ ನಿರಸನವನ್ನು ಹೇಳಲಾಗಿದೆ. ವೀರಮಾಹೇಶ್ವರರ ಮಹಿಮೆಯನ್ನು ವರ್ಣಿಸಿ, ಅವರ ಈಶ್ವರಧ್ಯಾನ್ಯ ವಿಧಿಯನ್ನು ನಿರೂಪಿಸಲಾಗಿದೆ. ವೀರಮಾಹೇಶ್ವರರ ವೈಭವವನ್ನು ವರ್ಣಿಸಿ, ಶಿವಭಕ್ತಿವಿಹೀನರ ನಿಂದೆಯನ್ನು ಮಾಡಲಾಗಿದೆ. ವೀರಮಾಹೇಶ್ವರರ ಜ್ಞಾನಶಕ್ತಿಯನ್ನು ನಿರೂಪಿಸಿ ಶಿವಪೂಜಾ – ಧ್ಯಾನ ಮಹಿಮೆಯನ್ನು ವರ್ಣಿಸಲಾಗಿದೆ. ಮಣಿಭದ್ರನ ಕಥೆಯನ್ನು ಹೇಳಿ, ಅದರ ಫಲಶ್ರುತಿಯನ್ನು ನಿರೂಪಿಸಲಾಗಿದೆ.

ವೀರಮಾಹೇಶ್ವರ ಸ್ವರೂಪವರ್ಣನ ಪಟಲ ೨: ವೀರಮಾಹೇಶ್ವರ ಮಹಿಮೆಯ ಬಗ್ಗೆ ಪಾರ್ವತಿಯು ಕೇಳುವ ಪ್ರಶ್ನೆಯಿಂದ ಈ ಪಟಲವು ಆರಂಭವಾಗುತ್ತದೆ. ಈಶ್ವರನ ನಿರೂಪಣೆಯಂತೆ ವೀರಮಾಹೇಶ್ವರರು ದೇವಾಧಿದೇವರಿಗೆ ಪೂಜ್ಯರು. ಅನ್ಯ ದ್ವಿಜಾದಿಗಳ ಪೂಜೆಯು ನಿಷೇಧಿಸಲ್ಪಟ್ಟಿದೆ. ಶಿವಾಧಿಕ್ಯವನ್ನು ಬಿಂಬಿಸಲು ಧರ್ಮಗುಪ್ತ ಇತಿಹಾಸವು ವರ್ಣಿಸಲ್ಪಟ್ಟಿದೆ. ನಂತರ ಜಂಗಮರ ಮಹಿಮೆಯ ವರ್ಣನೆ, ಶಿವದೀಕ್ಷಾಸಂಪನ್ನ ವೀರಮಾಹೇಶ್ವರ ಸ್ತುತಿ, ಶ್ರೀರೇಣುಕ ಭಕ್ತಿ ಪ್ರಶಂಸೆಗಳು ಬಂದಿವೆ. ಪಾರ್ವತಿಯು ಶ್ರೀರೇಣುಕರ ಇತಿಹಾಸವನ್ನು ಹೇಳೆಂದು ಕೇಳಿದಾಗ ಈಶ್ವರನು ಶ್ರೀರೇಣುಕರ ಇತಿಹಾಸವನ್ನು ವರ್ಣಿಸುತ್ತಾನೆ. ಶ್ರೀರೇಣುಕರು ಮಣಿಭದ್ರನ ಬಳಿಗೆ ಬರುತ್ತಾರೆ. ಮಣಿಭದ್ರನು ಶ್ರೀರೇಣುಕರನ್ನು ಉದ್ದೇಶಿಸಿ ಈ ಲೋಕದಲ್ಲಿ ಶ್ರೇಷ್ಠ ತಪಸ್ವಿ ಯಾರು? ಎಂದು ಕೇಳುತ್ತಾನೆ. ಶ್ರೀರೇಣುಕರು ವೀರಮಾಹೇಶ್ವರರೇ ಅಂಥವರು ಎಂದು ಉತ್ತರಿಸುತ್ತಾರೆ. ಅವರು ಮಣಿಭದ್ರನಿಗೆ ಉಪದೇಶ ಮಾಡುತ್ತಾರೆ. ವೇದಗಳ ವಿಷಯವನ್ನು ಎತ್ತಿಕೊಂಡು ಅವುಗಳಲ್ಲಿ ನಮಕ-ಚಮಕ-ಶತರುದ್ರೀಯಗಳದೇ ಪ್ರಾಧಾನ್ಯವೆಂದು ಪ್ರತಿಪಾದಿಸಲಾಗಿದೆ. ಮಣಿಭದ್ರ-ದಮಯಂತಿಯರ ಕಥೆಯು ಬರುತ್ತದೆ. ಶಿವಮಂತ್ರದ ಮಹಿಮೆ ಮತ್ತು ಷಡಕ್ಷರ ಮಂತ್ರ ಮಹಿಮೆಗಳು ನಿರೂಪಿತವಾಗಿವೆ.

ವೀರಶೈವ ದೀಕ್ಷಾ ಕಾಲನಿರ್ಣಯ ಪಟಲ : ಮಣಿಭದ್ರನು ಶ್ರೀ ರೇಣುಕರನ್ನು ಕುರಿತು ದೀಕ್ಷಾಕಾಲ ನಿರ್ಣಯದ ವಿವರಣೆಯನ್ನು ಕೇಳಲು ಆರಂಭಿಸುತ್ತಾನೆ. ದೀಕ್ಷೆಗಾಗಿ ಉತ್ತಮ ಕಾಲದ ನಿರ್ಣಯವು ಅವಶ್ಯಕವೆಂದು ಹೇಳಿ ದೀಕ್ಷಾಕಾಲ ಶುದ್ಧಿಯನ್ನು ವಿವರಿಸಲಾಗಿದೆ. ಅದರಲ್ಲಿ ಲಗ್ನಶುದ್ಧಿ, ನಕ್ಷತ್ರ ಬಲಾಬಲ ಶೋಧನೆ, ವಾರಶುದ್ಧಿ, ತಿಥಿಶುದ್ಧಿ, ಯೋಗಶುದ್ಧಿ, ಕರಣಶುದ್ಧಿ, ಗ್ರಹಗಳ ಉದಯಾಸ್ತ ಸಮಯ ಸಂಶೋಧನೆ, ಮಾಸಶುದ್ಧಿ, ಪಿತೃಪಕ್ಷಾದಿ ವಿಚಾರ, ಗ್ರಹಗತಿ ನಿರ್ಣಯ, ಕ್ಷಯಮಾಸನಿರ್ಣಯ ನಿಷ್ಪಂಚಕತ್ವ ನಿರ್ಣಯ ಮುಂತಾದ ಜ್ಯೋತಿಷ್ಯ ಸಂಬಂಧಿ ವಿಷಯಗಳು ಬರುತ್ತವೆ. ಪ್ರಾಕೃತದೀಕ್ಷಾಪರಿತ್ಯಾಗದ ಉಪದೇಶವನ್ನು ಮಾಡಿ, ದೀಕ್ಷಾ ಮಹಿಮೆಯು ನಿರೂಪಿಸಲ್ಪಟ್ಟಿದೆ. ದೀಕ್ಷಾಕಾಲದ ಶೋಧನೆಯ ಆವಶ್ಯತೆಯನ್ನು ಬಿಂಬಿಸಲು ವೇದಾದ್ರಿಯ ನಿವಾಸಿ ಶ್ರೀಪತಿಯ ಕಥೆಯನ್ನು ಹೇಳಲಾಗಿದೆ. ಶ್ರೀಪತಿಯ ಪೂಜಾ ಮಹಿಮೆಯನ್ನು ವಿವರಿಸಿ ಅವನನ್ನು ಕುರಿತು ಸೂರ್ಯಾದಿಗ್ರಹಗಳು ಮಾಡಿದ ಸ್ತೋತ್ರ ಮತ್ತು ಆ ಸ್ತೋತ್ರ ಪಠನದ ಫಲಶ್ರುತಿಗಳು ವರ್ಣಿತವಾಗಿವೆ.

ವೀರಮಾಹೇಶ್ವರ ಪ್ರಸಾದ ಮಹಿಮೆಯನ್ನು ಶ್ರೀ ರೇಣುಕರು ತಿಳಿಸಿ, ಅನಾದಿ ವೀರಶೈವ ಪ್ರಸಾದವು ಬ್ರಹ್ಮಪೂಜಿತ, ಶಿವಪ್ರೀತಿ ಸಾಧನವೆಂದು ವರ್ಣಿಸಲಾಗಿದೆ. ಗುರುಶೇಷದ ಮಹಿಮೆಯನ್ನು ಹೇಳುತ್ತಾ ಪ್ರಮಥಶ್ರೇಷ್ಠರು ಅದನ್ನು ಸೇವಿಸಲು ಇಚ್ಛಿಸುತ್ತಾರೆಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ಸಾನಂದ ಗಣಾಧೀಶ್ವರರು ಇಷ್ಟಲಿಂಗ ನೈವೇದ್ಯವನ್ನು ಶುದ್ಧವೆಂದು ಸ್ವೀಕರಿಸಿದರು ಎಂದು ವರ್ಣಿಸಲ್ಪಟ್ಟಿದೆ. ಗುರುಗಳ ಪ್ರಸಾದ ವಿಶುದ್ಧವೆಂದು ಕರೆಯಲ್ಪಡುತ್ತದೆ. ಭೂರುದ್ರಯೋಗಿಗಳ ಪ್ರಸಾದವು ಶಿವನಿಗೂ ಪ್ರಿಯ; ಪ್ರಸಾದವನ್ನು ನಿಂದಿಸುವವರು ಘೋರ ನರಕಕ್ಕೆ ಹೋಗುತ್ತಾರೆ ಎಂದು ಬಿಂಬಿಸಲಾಗಿದೆ. ಗುರುಪ್ರಸಾದದ ಮಹಿಮೆಯು ಸುದೀರ್ಘವಾಗಿ ವರ್ಣಿಸಲ್ಪಟ್ಟಿದೆ. ಈ ಸಂದರ್ಭದಲ್ಲಿ ಪುಣ್ಯವತೀ ಪಟ್ಟಣದ ಪ್ರಸಾದಿ ಪ್ರಾಣಲಿಂಗಿ ವಿಡಂಬಕ ಚರಿತ್ರೆಯು ಬಂದಿದೆ. ಪ್ರಸಾದದ ಮಹತ್ತ್ವವನ್ನು ಇಲ್ಲಿ ಶ್ರೀ ರೇಣುಕಾದಿಗಳು ಉಪದೇಶಿಸುತ್ತಾರೆ. ಶಿವೆ (ಪಾರ್ವತಿ) ಮತ್ತು ಸ್ಕಂದರು ಶ್ರೀರೇಣುಕರಿಂದ ದೀಕ್ಷೆಯನ್ನು ಪಡೆದವರೆಂದು ಹೇಳಲಾಗಿದೆ. ಮುಂದೆ ಪ್ರಸಾದದ ಸ್ತುತಿಯು ಸುದೀರ್ಘವಾಗಿ ಬಂದಿದೆ. ವಿಡಂಬಕನ ಶತ್ರು ವ್ಯಾಘ್ರಾಸುರನು ಪ್ರಸಾದ ವಿರೋಧಿಸಿ ನಾಶ ಹೊಂದಿದ ಪ್ರಸಂಗವೂ ಇಲ್ಲಿ ಉಲ್ಲೇಖಿತವಾಗಿದೆ. ವಿಡಂಬಕ-ಶೀಲಾ ದಂಪತಿಗಳು ಮತ್ತು ಧರ್ಮಗುಪ್ತ ರಾಜರ ಪ್ರಸಂಗಗಳೂ ವರ್ಣಿಸಲ್ಪಟ್ಟಿವೆ. ಮತ್ತೆ ಪ್ರಸಾದದ ಪ್ರಭಾವವು ವಿವರಿಸಲ್ಪಟ್ಟಿದೆ. (ಈ ಪಟಲದಲ್ಲಿ ಕಾಮಿಕಾದಿ - ವಾತುಲಾಂತ ೨೮ ಆಗಮಗಳ ಹೆಸರುಗಳು ಹೇಳಲ್ಪಟ್ಟಿವೆ - ೬.೪೬೮-೪೭೧. ಎಲ್ಲಾ ಆಗಮಗಳ ಮುಖ್ಯಾಂಶಗಳನ್ನು ಹೇಳಲಾಗಿದೆ. ೬.೪೭೩-೪೮೫).

ಪಾದೋದಕ ಪ್ರಸಾದ ವರ್ಣನ ಪಟಲ ಮೊದಲು ಪಾದೋದಕದ ಮಹಿಮೆಯು ಸುದೀರ್ಘವಾಗಿ ಬಂದಿದೆ. ಅನಂತರ ಬದರಿಕಾಕ್ಷೇತ್ರದ ವರ್ಣನೆಯು ಬರುತ್ತದೆ. ಅನಂತರ ಸಿಂಹನಾದನೆಂಬ ಗಣಾಧಿಪನ ಚರಿತ್ರೆಯು ವರ್ಣಿಸಲ್ಪಟ್ಟಿದೆ. ಅವನು ಜಂಗಮತೀರ್ಥದ ಮಹಿಮೆಯನ್ನು ತಿಳಿದು ಅದನ್ನು ವಿರೋಧಿಸುವವರ ವಿರುದ್ಧ ಯುದ್ಧ ಮಾಡಿದನು. ಅವರ ನಾಶವಾಯಿತು. ವಸಿಷ್ಠಾದಿಗಳು ಸಿಂಹನಾದನನ್ನು ಸ್ತುತಿಸಿದರು. ಸಿಂಹನಾದನ ಪಾದತೀರ್ಥದ ಮಹಿಮೆಯಿಂದ ನಾರದನ ಸ್ತ್ರೀ ಜನ್ಮದ ಕೊನೆಯಾಯಿತು ಎಂಬ ಕಥೆಯು ಇಲ್ಲಿ ಬಂದಿದೆ. ನಾರದನು ಮಾಡಿದ ಆ ಪಾದತೀರ್ಥದ ಸ್ತುತಿಯು ಸುದೀರ್ಘವಾಗಿ ಬಂದಿದೆ. ನಂತರ ಮೇಘನಾದನ ವರ್ಣನೆ ಬಂದಿದೆ. ಗ್ರಹಗಳ ಆರಾಧನೆಯನ್ನು ಮಾಡದ ವೀರಶೈವರು ಷಟ್‌ಸ್ಥಲಾಂತರ್ಗತವಾಗಿ ಏಕೋತ್ತರ ಶತಸ್ಥಾನ (ಸ್ಥಲ)ಗಳ ಮಾರ್ಗದಲ್ಲಿ ಸಾಧನೆ ಮಾಡುವರು. ಷಟ್‌ಸ್ಥಲಾಚರಣೆಯಿಲ್ಲದೆ ಯೋಗವಿಲ್ಲ (ಬ್ರಹ್ಮೈಕತ್ವ ಸಿದ್ಧಿಯಿಲ್ಲ) ಎಂದು ತಿಳಿಸಿ ಷಟ್‌ಸ್ಥಲಗಳ ಮಹಿಮೆಯನ್ನು ವರ್ಣಿಸಲಾಗಿದೆ. ವೀರಮಾಹೇಶ್ವರರು ಧಾರ್ಮಿಕ ಕ್ರಾಂತಿಯನ್ನು ಮಾಡಿದವರು; ಅವರು ಶಿವತತ್ತ್ವ ಪಾರಗರು ಎಂದು ವರ್ಣಿಸಲಾಗಿದೆ.

ಶ್ರೀಕರ ಭಾಷ್ಯ, ವೀರಶೈವಾಚಾರ ಪ್ರದೀಪಿಕೆ, ವೀರಮಾಹೇಶ್ವರಾಚಾರ ಸಂಗ್ರಹ,

ಧರ್ಮಶಿರೋಮಣಿ, ಅನಾದಿ ವೀರಶೈವ ಸಾರಸಂಗ್ರಹ, ಕೈವಲ್ಯಸಾರ ಗ್ರಂಥಗಳಲ್ಲಿ ವೀರಾಗಮದ ಶ್ಲೋಕಗಳು ಉದಾಹೃತವಾಗಿವೆ. ಬಸವಾದಿ ಶರಣರ ವಚನಗಳಲ್ಲಿಯೂ ವೀರಾಗಮದ ಉಲ್ಲೇಖಗಳು ಬರುತ್ತವೆ. ಈ ಉಲ್ಲೇಖಗಳಿಂದ ಕ್ರಿ.ಶ ೧೦ ನೇ ಶತಮಾನಕ್ಕಿಂತ ಪೂರ್ವದಿಂದಲೂ ವೀರಶೈವ ಗ್ರಂಥಕಾರರಿಗೆ ಈ ಆಗಮ ಪರಿಚಯವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

೧೦) **ರೌರವಾಗಮ** : ಇದು ಎನ್. ಅರ್. ಭಟ್‌ವರಿಂದ ಸಂಪಾದಿಸಲ್ಪಟ್ಟು ಮೂರು ಭಾಗಗಳಲ್ಲಿ ಪಾಂಡಿಚೇರಿ ಇನ್‌ಸ್ಟಿಟ್ಯೂಟ್ ಮೂಲಕ ೧೯೬೧, ೧೯೭೨ ಮತ್ತು ೧೯೮೮ ರಲ್ಲಿ ಪ್ರಕಾಶಿತವಾಗಿದೆ. ಮೊದಲ ಭಾಗದಲ್ಲಿ ವಿದ್ಯಾಪಾದದ ಮೂರು ಪಟಲಗಳು, ಕ್ರಿಯಾಪಾದದ ೨೬ ಪಟಲಗಳು ಬಂದಿವೆ. ಅಲ್ಲದೇ ವಿದ್ಯಾಪಾದ ೧೦ ಪಟಲಗಳು ಮತ್ತು ಸೌರವಿಧಿ ಭಾಗದಲ್ಲಿ ಕ್ರಿಯಾಪಾದದ ೨೭ ರಿಂದ ೪೬ ರ ವರೆಗಿನ ಪಟಲಗಳಲ್ಲದೇ ಪಂಚಸಾದಾಖ್ಯವಿಧಿ ಪಟಲವೆಂಬ ಅನುಬಂಧವು ಅಡಕವಾಗಿದೆ. ಮೂರನೇ ಭಾಗದಲ್ಲಿ ಕ್ರಿಯಾಪಾದದ ೪೭ ರಿಂದ ೬೫ ರ ವರೆಗಿನ ಪಟಲಗಳು ಮತ್ತು ಅನುಬಂಧ ರೂಪದಲ್ಲಿ ಶೌಚಾಗಮನ ಸ್ನಾನ, ಮಂತ್ರೋದ್ಧಾರಾರ್ಚನ ವಿಧಿ ಪಟಲಗಳು ಸೇರಿವೆ. ೧೯೮೮ ರಲ್ಲಿ ಫ್ರೆಂಚ್ ಇನ್‌ಸ್ಟಿಟ್ಯೂಟ್‌ನಿಂದಲೇ ರೌರವೋತ್ತರಾಗಮವು ಪ್ರಕಟವಾಗಿದ್ದು, ಅದರಲ್ಲಿ ೨೦ ಪಟಲಗಳಿವೆ. ವೀರಶೈವ ಗ್ರಂಥಗಳಲ್ಲಿ ರೌರವಾಗಮದ ಉಲ್ಲೇಖಗಳು ಇಲ್ಲವೆಂದೇ ಹೇಳಬಹುದು.

ರೌರವಾಗಮ ವಿದ್ಯಾಪಾದದಲ್ಲಿ ೧. ಉಪೋದ್ಘಾತ, ಸೃಷ್ಟಿಕ್ರಮ ೨. ಶಿವತತ್ತ್ವಗಳು ೩. ತಂತ್ರಾವತಾರ ೪. ಅಧ್ವವಿಧಿ ಎಂಬ ನಾಲ್ಕು ಪಟಲಗಳಿವೆ.

ಕ್ರಿಯಾಪಾದಲ್ಲಿ : ಮಂತ್ರೋದ್ಧಾರ, ಕಲಾನ್ಯಾಸ, ಶಿವಪಂಚಾಕ್ಷರ, ಜಪ, ಶೌಚ, ಆಚಮನ, ಸ್ನಾನ, ಭಸ್ಮಸ್ನಾನ, ಅರ್ಚನಾಂಗ, ಶಿವಾರ್ಚನ, ಪಶ್ಚಿಮಮುಖಾರ್ಚನ, ನೈವೇದ್ಯ, ನವನೈವೇದ್ಯ, ಕುಂಡಲಕ್ಷಣ, ಅಗ್ನಿಕಾರ್ಯ, ನಿತ್ಯೋತ್ಸವ, ಅಂಕುರಾರ್ಪಣ, ಮಹೋತ್ಸವ, ಶುದ್ಧನೃತ್ತ, ನವಕಲಶಸ್ನಪನ, ಪಂಚವಿಂಶತಿ ಕಲಶಸ್ನಪನ (೨೫), ಏಕೋನಪಂಚಾಶತ್ ಕಲಶಸ್ನಪನ (೪೯), ಅಷ್ಟೋತ್ತರಶತ ಕಲಶಸ್ನಪನ (೧೦೮), ನವಾಧಿಕ ಸಹಸ್ರಕಲಶಸ್ನಪನ (೧೦೦೯) , ಪವಿತ್ರಾರೋಪಣ, ಕೃತ್ತಿಕಾರೋಪಣ, ಕೃತ್ತಿಕಾದೀಪ, ಕುಂಡಗಳಲ್ಲಿ : ಚತುರಶ್ರ, ಯೋನಿ, ಅರ್ಧೇಂದು, ತ್ರಿಕೋಣ, ವೃತ್ತ, ಪಂಚಶ್ರ, ಷಡಶ್ರ, ಸಪ್ತಶ್ರ, ಅಷ್ಟಾಶ್ರ, ಪದ್ಮ ಎಂದು ಹತ್ತು ವಿಧಗಳ ವಿವರಣೆ ಇದೆ.

೧೧) **ಮಕುಟಾಗಮ** : ಇದರ ಉತ್ತರ ಭಾಗವು ೧೯೪೧ ರಲ್ಲಿ ಪ್ರತ್ಯೇಕವಾಗಿಯೂ ೧೯೪೨ ಮತ್ತು ೧೯೫೬ ರಲ್ಲಿ ಶಿವಾಗಮ ಸಂಗ್ರಹದ ಭಾಗವಾಗಿಯೂ ಮೈಸೂರ ಪಂಚಾಚಾರ್ಯ ಪ್ರೆಸ್ ಮೂಲಕ ಪ್ರಕಟವಾಯಿತು. ಅದರ ಪೂರ್ವ ಭಾಗವು ದಕ್ಷಿಣ ಭಾರತದ ಅರ್ಚಕರ ಸಂಘದ ಮೂಲಕ ೧೯೭೭ ರಲ್ಲಿ ಗ್ರಂಥಲಿಪಿಯಲ್ಲಿ ಪ್ರಕಟವಾಯಿತು. ಕನ್ನಡಲಿಪಿಯಲ್ಲಿ ಪ್ರಕಟವಾದ ಉತ್ತರ ಭಾಗದಲ್ಲಿ ಕ್ರಿಯಾಪಾದದ ೫ ಪಟಲಗಳು ಮತ್ತು ಚರ್ಯಾಪಾದದ ೧೦ ಪಟಲಗಳು ಇರುತ್ತವೆ.

ಶ್ರೀಕರಭಾಷ್ಯ, ವೀರಶೈವಚಿಂತಾಮಣಿಯಲ್ಲಿ ಮಕುಟಾಗಮದಿಂದ ಶ್ಲೋಕಗಳು

ಉದಾಹೃತವಾಗಿದೆ. ಈ ಉಲ್ಲೇಖಗಳಿಂದ ಕ್ರಿ. ಶ. ೧೦ ನೇ ಶತಮಾನಕ್ಕಿಂತ ಪೂರ್ವದಿಂದಲೂ ವೀರಶೈವ ಗ್ರಂಥಕಾರರಿಗೆ ಮಕುಟಾಗಮದ ಪರಿಚಯವಿತ್ತು ಎಂಬುದನ್ನು ಸೂಚಿಸುತ್ತದೆ.

ಈ ಆಗಮವು ಇತರ ಎಲ್ಲ ಆಗಮಗಳಿಗೆ ಮಕುಟ ಪ್ರಾಯವಾಗಿರುವದರಿಂದ ಇದಕ್ಕೆ ಮಕುಟ ಎಂಬ ಹೆಸರು ಅನ್ವರ್ಥವಾಗಿದೆ.

ಶ್ರೀ ಮನ್ಮುಖಾದಧಿಗತಂ ಮಕುಟಂ ಮಕುಟಾಯಿತಮ್।
ಭಗವನ್ ಶ್ರೋತುಕಾಮೋಸ್ಮಿ ತದೀಯಂ ಬಾಗಮುತ್ತರಮ್॥ (೧,೧,೬)

ಎಂದು ಗ್ರಂಥದ ಆರಂಭದಲ್ಲಿಯೇ ಹೇಳಲಾಗಿದೆ. ಮಕುಟಾಗಮದ ಉತ್ತರ ಭಾಗದಲ್ಲಿ ಕ್ರಿಯಾಪಾದ ಮತ್ತು ಚರ್ಯಾಪಾದ ಎಂಬ ಎರಡು ಭಾಗಗಳಿವೆ. ಕ್ರಿಯಾಪಾದದಲ್ಲಿ ಐದು ಪಟಲಗಳು ಮತ್ತು ಚರ್ಯಾಪಾದದಲ್ಲಿ ಹತ್ತು ಪಟಲಗಳಿವೆ. ಪ್ರಸ್ತುತ ಗ್ರಂಥವು ಭಗವಾನ್ ಪರಶಿವ ಮತ್ತು ರುದ್ರ ಇವರ ಸಂವಾದ ರೂಪದಲ್ಲಿ ರಚಿತವಾಗಿದೆ.

ಕ್ರಿಯಾಪಾದದ ಮೊದಲನೆ ಪಟಲದಲ್ಲಿ ಶಾಂಭವ ವ್ರತದ ಮಹತ್ವವನ್ನು ವಿವರಿಸಲಾಗಿದೆ. ಈ ಶಾಂಭವವ್ರತವನ್ನು ಅತಿ ರಹಸ್ಯವಾದ ಶಿರೋವ್ರತವೆಂದು ಕರೆಯಲಾಗಿದೆ. ಗುರುವಿನ ಅನುಗ್ರಹದಿಂದ ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ ಶರೀರಗತವಾಗಿರುವ ಕಾರ್ಮಿಕ, ಮಾಯಾ ಮತ್ತು ಆಣವ ಎಂಬ ಮಲತ್ರಯಗಳನ್ನು ನಾಶಗೊಳಿಸುವ ವೇಧಾ, ಮನು ಮತ್ತು ಕ್ರಿಯಾ ಎಂಬ ಹೆಸರಿನ ಮೂರು ದೀಕ್ಷೆಗಳಿಂದ ಸಂಪನ್ನನಾದ ವ್ಯಕ್ತಿಯು ಕರ್ಮಸಾಮ್ಯದ ಸ್ಥಿತಿಯನ್ನು ತಲುಪಿ ಪುನರ್ಜನ್ಮವನ್ನು ಪಡೆಯುವುದಿಲ್ಲ. ಈ ರೀತಿಯಾಗಿ ಮೋಕ್ಷ ಮತ್ತು ಶಾಂಭವ ವ್ರತದ ಸಾಧ್ಯ ಸಾಧನ ಭಾವ ಸಂಬಂಧವನ್ನು ನಿರೂಪಿಸಲಾಗಿದೆ.

ಎರಡನೇ ಪಟಲದಲ್ಲಿ ಇಷ್ಟಲಿಂಗಧಾರಿಗಳಾದ ಶಿವಭಕ್ತರು ಆಚರಿಸಬೇಕಾದ ಆಹ್ನಿಕಗಳನ್ನು (ದೈನಂದಿನ ಕ್ರಿಯೆಗಳನ್ನು) ಕುರಿತ ರುದ್ರನ ಪ್ರಶ್ನೆಗೆ ಉತ್ತರವಾಗಿ ಪರಶಿವನು ಪ್ರಾತಃಕೃತ್ಯಗಳು, ಶೌಚವಿಧಿ, ಹಲ್ಲುಜ್ಜುವಿಕೆ, ಪಂಚಾಂಗಸ್ನಾನ, ತ್ರಿಪುಂಡ್ರಧಾರಣೆ, ರುದ್ರಾಕ್ಷಧಾರಣೆ ಮುಂತಾದ ವಿಷಯಗಳನ್ನು ನಿರೂಪಿಸಿ, ಭಸ್ಮಧಾರಣೆ ಮಾಡುವ ೩೨ ಸ್ಥಾನಗಳ ಮತ್ತು ರುದ್ರಾಕ್ಷಗಳನ್ನು ಧರಿಸುವ ಸ್ಥಾನಗಳು ಹಾಗೂ ಶರೀರದ ಯಾವ ಯಾವ ಅಂಗದಲ್ಲಿ ಎಷ್ಟು ರುದ್ರಾಕ್ಷಗಳನ್ನು ಧರಿಸಬೇಕೆಂಬುದನ್ನು ವರ್ಣಿಸುತ್ತಾನೆ. ಶಿವಾಗ್ನಿಯ ಆರಾಧನೆಯ ವಿಧಾನವನ್ನು, ಅಗ್ನಿಯ ಏಳು ನಾಲಿಗೆಯನ್ನು ವಿವರಿಸಲಾಗಿದೆ. ಅನಂತರ ಗುರುಚರಣ ಪೂಜೆಯ ಪ್ರಕ್ರಿಯೆಯನ್ನು ವಿವರಿಸಿ ದಿನದ ೨,೩,೪ ನೇ ಭಾಗಗಳಲ್ಲಿ ಆಚರಿಸಬೇಕಾದ ವಿಧಿಗಳನ್ನು ಕುರಿತು ಚರ್ಚಿಸಲಾಗಿದೆ.

೩ ನೇ ಪಟಲದಲ್ಲಿ ಮಹತೀ, ಗುರ್ವೀ, ಲಘ್ವೀ ಮತ್ತು ಅವಸರಾ ಎಂಬ

ಪೂಜೆಗಳ ವಿಧಾನವನ್ನು ಹಾಗೂ ಈ ಪೂಜೆಯಲ್ಲಿ ಹಚ್ಚುವ ದೀಪಗಳ ಮತ್ತು ದೀಪದ ಬತ್ತಿಗಳ ಬಗ್ಗೆ ಮತ್ತು ಆಯಾ ಪೂಜೆಗಳಲ್ಲಿ ಜಪಿಸುವ ಪಂಚಾಕ್ಷರ ಮಂತ್ರ ಜಪದ ಸಂಖ್ಯೆಯ ಬಗ್ಗೆ, ವಿವಿಧ ಆರತಿಗಳ, ವಿವಿಧ ನೈವೇದ್ಯಗಳ ಬಗ್ಗೆ ವಿವರಿಸಿದೆ.

೪ ನೇ ಪಟಲದಲ್ಲಿ ಪೂಜೋಪಯೋಗಿ ಸಾಮಗ್ರಿಗಳಾದ ಪಂಚಾಮೃತ, ಸುಗಂಧ ದ್ರವ್ಯಗಳು, ಅಭಿಷೇಕ ಜಲದಲ್ಲಿ ಮಿಶ್ರಣ ಮಾಡುವ ದ್ರವ್ಯಗಳು, ಪುಷ್ಪಗಳು, ಗಂಧ, ಚೂರ್ಣ, ಧೂಪ, ದೀಪದ ಎಣ್ಣೆ, ದೀಪ ಹಚ್ಚುವ ವಿಧಿಗಳ ವರ್ಣನೆಗಳ ನಂತರ ಪಂಚಸೂತ್ರದ ಲಕ್ಷಣವನ್ನು ತಿಳಿಸಿದೆ.

೫ ನೇ ಪಟಲದಲ್ಲಿ ಸಂಸ್ಥಾಪನ, ಸನ್ನಿಧಾನ, ಸನ್ನಿರೋಧನ, ಅವಗುಂಠನ, ಸಕಲೀಕರಣ ಮತ್ತು ಅಮೃತೀಕರಣ ವಿಧಿಗಳನ್ನು ವಿವರಿಸಲಾಗಿದೆ. ಆಚಾರಾದಿಲಿಂಗಗಳ ಸ್ಥಿತಿಯನ್ನು ಹಾಗೂ ನೈವೇದ್ಯ ಸ್ವೀಕಾರದ ರೀತಿಯನ್ನು ವಿವರಿಸಲಾಗಿದೆ. ಭಕ್ಷ್ಯ, ಭೋಜ್ಯ ಮತ್ತು ಲೇಹ್ಯ ಎಂಬ ನಾಲ್ಕು ವಿಧವಾದ ಪ್ರಸಾದ ಸ್ವೀಕಾರದ ಬಗ್ಗೆ ವಿವರಿಸಿದೆ.

ಚರ್ಯಾಪಾದದ ಮೊದಲನೆಯ ಪಟಲವು ಅಂತಿಮ ಸಂಸ್ಕಾರದ ಶಿವಮೇಧ ವಿಧಿಯನ್ನು ನಿರೂಪಿಸುತ್ತದೆ. ಶಿವಭಕ್ತನಿಗೆ ಕೇವಲ ಸಮಾಧಿ ಸಂಸ್ಕಾರವೇ ಮೋಕ್ಷ ಪ್ರಾಪ್ತಿಗೆ ಉತ್ತಮವಾದ ವಿಧಿ ಎಂದು ಹೇಳಲಾಗಿದೆ.

ಎರಡನೆಯ ಪಟಲವು ಉತ್ಕ್ರಮಣದ ವಿಧಾನದ ಮೂಲಕ ಪ್ರಾಣತ್ಯಾಗ ಮಾಡಲು ಸಿದ್ಧನಾಗಿರುವ ಶಿವಭಕ್ತನಿಗೆ ಮಾಡಬೇಕಾಗಿರುವ ವಿಧಿ-ವಿಧಾನಗಳನ್ನು ವರ್ಣಿಸುತ್ತದೆ. ಶಿವಭಕ್ತನು ಸ್ನಾನವಿಧಿ, ರುದ್ರಾಕ್ಷಧಾರಣ, ಭಸ್ಮ ಲೇಪನ ಮಾಡಿಕೊಂಡು ತರುವಾಯ ತತ್ವ ಸಂಯೋಜನ ವಿಧಿಯ ಮೂಲಕ ಸ್ಥೂಲ ಶರೀರವನ್ನು ಕಾರಣಗಳಲ್ಲಿ ಹೇಗೆ ವಿಲೀನಗೊಳಿಸಬೇಕೆಂದು ವರ್ಣಿಸಲಾಗಿದೆ. ಲಿಂಗಾಂಗ ಸಾಮರಸ್ಯದ ನಿರೂಪಣೆಯನ್ನು ಮಾಡಿ ಅಂತ್ಯಕಾಲದಲ್ಲಿ ಪಾದೋದಕ ಸೇವನೆಯ ಮತ್ತು ಶಿವಸ್ಮರಣೆಯ ಮಹತ್ವವನ್ನು ಪ್ರತಿಪಾದಿಸಿದೆ.

ಮೂರನೆಯ ಪಟಲದಲ್ಲಿ ಅಂತ್ಯ ಸಂಸ್ಕಾರವನ್ನು ಮಾಡುವ ಅಧಿಕೃತ ವ್ಯಕ್ತಿಯು ಆಚರಿಸಬೇಕಾದ ಕರ್ತವ್ಯಗಳನ್ನು, ದಾನ ವಿಧಾನವನ್ನು, ಶವವನ್ನು ಸಮಾಧಿ ಸ್ಥಳಕ್ಕೆ ಒಯ್ಯುವ ವಿಧಾನವನ್ನು ವಿವರಿಸಲಾಗಿದೆ.

ನಾಲ್ಕನೆಯ ಪಟಲದಲ್ಲಿ ಭೂ ನಿಕ್ಷೇಪ ವಿಧಿಯ ಎಲ್ಲ ವಿಧಾನಗಳನ್ನು ವಿವರವಾಗಿ ವರ್ಣಿಸಲಾಗಿದೆ. ಐದನೆಯ ಪಟಲದಲ್ಲಿ ಸಮಾಧಿವಿಧಿಯ ನಂತರ ಆಚರಿಸಬೇಕಾದ ಉತ್ತರ ಕ್ರಿಯೆಗಳನ್ನು ನಿರೂಪಿಸುತ್ತದೆ. ಆರನೆಯ ಪಟಲದಲ್ಲಿ ಹನ್ನೊಂದನೆಯ ದಿನ ಆಚರಿಸಬೇಕಾದ ಸಂಸ್ಕಾರಗಳನ್ನು ಹಾಗೂ ಏಳನೆಯ ಪಟಲವು ಹನ್ನೆರಡನೆಯ ದಿನ ಆಚರಿಸಬೇಕಾದ ವಿಧಿಗಳನ್ನು ವರ್ಣಿಸಿದೆ.

ಎಂಟನೆಯ ಪಟಲದಲ್ಲಿ ಪ್ರಕೀರ್ಣಕ ವಿಧಿಯನ್ನು ಮತ್ತು ಒಂಬತ್ತನೆಯ ಪಟಲದಲ್ಲಿ ವಾರ್ಷಿಕ ಆರಾಧನೆಯ ಎಲ್ಲ ವಿಧಿ-ವಿಧಾನಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ.

ಕೊನೆಯ ಪಟಲದಲ್ಲಿ ಅಶೌಚಕ್ಕೆ ಸಂಬಂಧಿಸಿದ ವಿಧಿಗಳನ್ನು ನಿರೂಪಿಸಲಾಗಿದೆ.

೧೨) ಚಂದ್ರಜ್ಞಾನಾಗಮ : ಚಂದ್ರಜ್ಞಾನಾಗಮದ ಉತ್ತರ ಭಾಗವು ಮಾತ್ರ ಕ್ರಿ. ಶ. ೧೯೪೦ ರಲ್ಲಿ ಪ್ರತ್ಯೇಕವಾಗಿಯೂ, ೧೯೪೩ ಮತ್ತು ೧೯೫೭ ರಲ್ಲಿ ಶಿವಾಗಮ ಸಂಗ್ರಹದ ಭಾಗವಾಗಿಯೂ ಮೈಸೂರ ಪಂಚಾಚಾರ್ಯ ಪ್ರೆಸ್‌ನಿಂದ ಪ್ರಕಟವಾಗಿದೆ. ಅದರಲ್ಲಿ ಕ್ರಿಯಾಪಾದದ ೧೨ ಪಟಲಗಳು ಮತ್ತು ಚರ್ಯಾಪಾದದ ೮ ಪಟಲಗಳೂ ಇವೆ.

ಶ್ರೀರುದ್ರನಿಂದ ಬೋಧಿಸಲ್ಪಟ್ಟು ರುದ್ರಸಂಹಿತೆಯೆಂದು ಕರೆಯಲಾಗುವ ಹದಿನೆಂಟು ಶೈವಾಗಮಗಳಲ್ಲಿ ಇದು ಒಂಬತ್ತನೆಯದು. ಶಿವಸಂಹಿತೆಗಳೆಂದು ಕರೆಯಲಾಗುವ ಹತ್ತನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಆಗುವ ಒಟ್ಟು ಇಪ್ಪತ್ತೆಂಟು ಶೈವಾಗಮಗಳಲ್ಲಿ ಇದು ಹತ್ತೊಂಬತ್ತನೆಯದು. ಇದರಲ್ಲಿ ಅನಂತರುದ್ರನು ದೇವತೆಗಳ ಗುರುವಾದ ಬೃಹಸ್ಪತಿಗೆ ವೀರಶೈವದ ಆಚಾರ-ವಿಚಾರಗಳನ್ನು ವಿಶೇಷವಾಗಿ ಅಷ್ಟಾವರಣ, ಪಂಚಾಚಾರ, ಶಿವಮೇಧಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಬೋಧಿಸಿದ್ದಾನೆ. ಇದು ಹನ್ನೆರಡು ಪಟಲಗಳುಳ್ಳ ಕ್ರಿಯಾಪಾದ ಮತ್ತು ಎಂಟು ಪಟಲಗಳುಳ್ಳ ಚರ್ಯಾಪಾದ ಎಂಬ ಎರಡು ಭಾಗಗಳನ್ನು ಒಳಗೊಂಡಿದೆ.

ಚಂದ್ರಜ್ಞಾನಾಗಮದ ಬಗ್ಗೆ ಎರಡು ಮಾರ್ಮಿಕ ವಿಚಾರಗಳು ಪ್ರಸ್ತಾಪಿಸಲ್ಪಟ್ಟಿವೆ. ಮೊದಲನೆಯದಾಗಿ ಈ ಆಗಮಸಂಹಿತೆಗಳು ನಿರೂಪಿಸಲ್ಪಡದೇ ಇದ್ದಿದ್ದರೆ ಜಗತ್ತು ಗಾಢವಾದ ಅಜ್ಞಾನವೆಂಬ ಕತ್ತಲಲ್ಲಿ ಮುಳುಗಿಹೋಗುತ್ತಿತ್ತು ಎಂಬ ಮಾತಿನಿಂದ ಈ ಆಗಮದಲ್ಲಿ ಅಡಕವಾಗಿರುವ ಜ್ಞಾನವು ಚಂದ್ರನಂತೆ ಕಾಂತವೂ, ಶಾಂತವೂ, ಆಹ್ಲಾದಕರವೂ ಆಗಿದ್ದು ನಲಿವನ್ನುಂಟು ಮಾಡುವುದರ ಜೊತೆಗೆ ಅಜ್ಞಾನಾಂಧಕಾರವನ್ನೂ ದೂರ ಮಾಡುತ್ತದೆ. ಇದರಲ್ಲಿ ವೀರಶೈವವೆಂದು ಕರೆಯಲಾಗುವ ಪಾಶುಪತ ವ್ರತಕ್ಕೆ ಮೂಲಾಧಾರವಾದ ಅಷ್ಟಾವರಣ ಮತ್ತು ಪಂಚಾಚಾರಗಳ ವಿಚಾರವು ವಿವರಿಸಲ್ಪಟ್ಟಿದೆ. ಅದರಿಂದ ನಮ್ಮೊಳಗಿನ ಜ್ಞಾನಪ್ರಕಾಶವು ಬೆಳಗುವುದು. ಈ ದೃಷ್ಟಿಯಿಂದ ಈ ಆಗಮಕ್ಕೆ ಚಂದ್ರಜ್ಞಾನಾಗಮವೆಂಬ ಹೆಸರು ಅತ್ಯಂತ ಔಚಿತ್ಯಪೂರ್ಣವಾಗಿದೆ.

ಎರಡನೆಯದಾಗಿ, ಈ ಆಗಮಸಂಹಿತೆಗಳನ್ನು ಅರಿಯದೆ ನಾನು ಅರಿತವನೆಂದು ಬೀಗುವ ವ್ಯಕ್ತಿ ಪಶುವಿಗೆ ಸಮಾನ ಎಂಬ ಮಾತು ಈ ಆಗಮದ ಮಹತ್ತ್ವವನ್ನು ಬಿಂಬಿಸುತ್ತದೆ. ಆಗಮದ ಜ್ಞಾನವಿಲ್ಲದೆ ಯಾರ ಜ್ಞಾನಕ್ಕೂ ಪರಿಪೂರ್ಣತೆಯೆಂಬುದಿಲ್ಲ. ಮೋಕ್ಷಕ್ಕೇರುವ ಮೆಟ್ಟಲುಗಳನ್ನು ತೋರುವ ವೀರಶೈವದ ಆಚಾರ-ವಿಚಾರಗಳನ್ನು ತಿಳಿಸುವ ಆಗಮದ ಅಧ್ಯಯನ ಅನಿವಾರ್ಯವೆಂಬುದು ಈ ಮಾತಿನ ಮರ್ಮ. ಶ್ರೀ ರುದ್ರನೇ ಹೇಳುವಂತೆ ಬೃಹಸ್ಪತಿಯೂ ಕೂಡ ಈ ಆಗಮಾಮೃತವನ್ನು ಆಸ್ವಾದಿಸಿ ಎಲ್ಲಾ ಸಾಧನ ಸಂಪತ್ತಿನಿಂದ ಕೂಡಿದವನಾಗಿ ದೇವ ಗುರುವಾಗುವ ಅರ್ಹತೆಯನ್ನು ಪಡೆದನು ಎಂಬುದೂ ಕೂಡ ಈ ಆಗಮದ ಮಹತ್ತ್ವವನ್ನೇ ಸಾರುತ್ತದೆ.

ಕ್ರಿಯಾಪಾದದ ಶಿವಾಧಿಕ್ಯಕಥನವೆಂಬ ಮೊದಲನೆಯ ಪಟಲದಲ್ಲಿ ತತ್ತ್ವತ್ರಯ

ವಿಚಾರ ಬಂದಿದೆ. ಇದರಲ್ಲಿ ಶೈವ ಮತ್ತು ವೀರಶೈವವೆಂಬ ಎರಡು ಸಂಪ್ರದಾಯಗಳಿಗೂ ಸಮ್ಮತವಾದ ಪತಿ, ಪಶು ಮತ್ತು ಪಾಶ ಎಂಬ ಮೂರು ತತ್ತ್ವಗಳ ವಿಚಾರವನ್ನು ಪ್ರತಿಪಾದಿಸಲಾಗಿದೆ.

ಗುರುಸ್ವರೂಪ ನಿರೂಪಣ ಎಂಬ ಎರಡನೆಯ ಪಟಲದಲ್ಲಿ ಹಿಂದೂ ಸಂಪ್ರದಾಯದಲ್ಲಿ ಮತ್ತು ವಿಶೇಷವಾಗಿ ವೀರಶೈವ ಪರಂಪರೆಯಲ್ಲಿ ಇರುವ ಗುರುವಿನ ಉನ್ನತ ಸ್ಥಾನವನ್ನು ಗುರುತಿಸಿ ಮೋಕ್ಷಕ್ಕೆ ಅರ್ಹತೆಯನ್ನು ಗಳಿಸಿಕೊಡುವ ದೀಕ್ಷೆಗೆ ಗುರುವೇ ಅಧಿಕೃತನು. ಗುರುವು ಮತ್ತು ಶಿವನು ಬೇರೆಯಲ್ಲ. ಶಿವನ ವ್ಯಕ್ತ ಸ್ವರೂಪವೇ ಗುರುವು ಎಂಬುದನ್ನು ಪ್ರತಿಪಾದಿಸಿ ಗುರುವಿನ ಸ್ವರೂಪ, ಶಿಷ್ಯನ ಲಕ್ಷಣ, ಶಿಷ್ಯನು ಗುರುವನ್ನು ಸತ್ಕರಿಸುವ ರೀತಿ, ಗುರುಸೇವೆ, ಪ್ರದಕ್ಷಿಣೆ, ಗುರುಯಾತ್ರೆ, ಗುರುಸನ್ನಿಧಿಯಲ್ಲಿ ಶಿಷ್ಯನ ವರ್ತನೆ, ಗುರುವಿನ ಅನುಗ್ರಹದಿಂದ ದೊರೆಯುವ ಸತ್ಫಲ ಮುಂತಾದ ವಿಚಾರಗಳನ್ನು ಮಂಡಿಸಲಾಗಿದೆ.

ಲಿಂಗಸ್ವರೂಪ ನಿರೂಪಣ ಎಂಬ ಮೂರನೆಯ ಪಟಲದಲ್ಲಿ ಲಿಂಗತತ್ತ್ವ ನಿರೂಪಣೆ ಬಂದಿದೆ. ಲಿಂಗದ ಸ್ವರೂಪ ಮತ್ತು ಮಹತ್ತ್ವವನ್ನು ನಿರೂಪಿಸಲಾಗಿದೆ. ಲಿಂಗಶಬ್ದದ ನಿಷ್ಪತ್ತಿ; ಲಿಂಗವು ಬಿಂದು – ನಾದಾತ್ಮಕ, ಅದರಲ್ಲಿ ಬಿಂದುವೆಂದರೆ ಶಕ್ತಿ ಮತ್ತು ನಾದವೆಂದರೆ ಶಿವ, ಅದೇ ಜಗತ್ತಿಗೆ ಕಾರಣ; ಮಾತಾಪಿತೃಸ್ವರೂಪವಾದ ಆ ಲಿಂಗವು ಮೊದಲು ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳೆಂದು ಮೂರು ವಿಧವಾಗಿ, ಆ ಮೂರೇ ಎರಡೆರಡಾಗಿ ಮಹಾಲಿಂಗ, ಪ್ರಸಾದಲಿಂಗ, ಚರಲಿಂಗ, ಶಿವಲಿಂಗ, ಗುರುಲಿಂಗ ಮತ್ತು ಆಚಾರಲಿಂಗಗಳೆಂದು ಆರು ವಿಧವಾಗುವದು. ಮೂರು ದೀಕ್ಷೆಗಳ ಮೂಲಕ ಇಷ್ಟ, ಪ್ರಾಣ ಮತ್ತು ಭಾವ ಎಂಬ ಮೂರು ಲಿಂಗಗಳನ್ನು ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳಲ್ಲಿ ಸ್ಥಾಪಿಸುವ ಮೂಲಕ ಆಣವ, ಮಾಯೀಯ ಮತ್ತು ಕಾರ್ಮಿಕ ಎಂಬ ಮೂರು ಮಲಗಳ ನಾಶ, ಲಿಂಗದ ಆರಾಧನೆಯ ಮಹಿಮೆ ಮುಂತಾದ ವಿಚಾರಗಳನ್ನು ಪ್ರತಿಪಾದಿಸಲಾಗಿದೆ.

ಜಂಗಮಸ್ವರೂಪ ನಿರೂಪಣವೆಂಬ ನಾಲ್ಕನೆಯ ಪಟಲದಲ್ಲಿ ಜಂಗಮದ ಸ್ವರೂಪ ಮತ್ತು ಮಹಾತ್ಮ್ಯಗಳು ನಿರೂಪಿಸಲ್ಪಟ್ಟಿವೆ. ಜಂಗಮ ಶಬ್ದದ ಅರ್ಥವನ್ನು ವಿವರಿಸಿ, ಜಂಗಮ ಶಬ್ದದ ಪರ್ಯಾಯ ಪದಗಳು, ಜಂಗಮರ ದ್ವೈವಿಧ್ಯ, ಅದರಲ್ಲಿ ಸಹಜ ಜಂಗಮರಲ್ಲಿ ಬ್ರಹ್ಮಚಾರಿ, ಗೃಹಸ್ಥ ಮತ್ತು ನಿರಾಭಾರಿಯೆಂಬ ತ್ರೈವಿಧ್ಯ; ವಿವಿಧ ಜಂಗಮರ ಲಕ್ಷಣಗಳು ಮತ್ತು ಅವರಿಗೆ ವಿಧಿಸಲಾದ ನಿಯಮಗಳು, ಜಂಗಮ ಭಕ್ತಿಯ ಚಿಹ್ನೆಗಳು ಮುಂತಾದ ವಿಚಾರಗಳನ್ನು ನಿರೂಪಿಸಲಾಗಿದೆ.

ಪಾದೋದಕ ಪ್ರಸಾದ ಸ್ವರೂಪ ನಿರೂಪಣವೆಂಬ ಐದನೆಯ ಪಟಲದಲ್ಲಿ ಪಾದೋದಕ ಮತ್ತು ಪ್ರಸಾದಗಳ ವಿಷಯವನ್ನು ಪ್ರತಿಪಾದಿಸಲಾಗಿದೆ. ಪಾದೋದಕ ಮತ್ತು ಪ್ರಸಾದಗಳ ಸ್ವರೂಪ, ಪ್ರಕಾರಗಳು, ಅವುಗಳ ಪ್ರಭಾವ ಮತ್ತು ಪರಿಣಾಮಗಳನ್ನು ವಿವರಿಸಲಾಗಿದೆ.

ಭಸ್ಮಸ್ವರೂಪ ನಿರೂಪಣವೆಂಬ ಆರನೆಯ ಪಟಲದಲ್ಲಿ ಭಸ್ಮದ ಮಹತ್ತ್ವ ನಿರ್ಮಾಣ ಮತ್ತು ಉಪಯೋಗಗಳು ನಿರೂಪಿಸಲ್ಪಟ್ಟಿವೆ. ಭಸ್ಮ ನಿರ್ಮಾಣವಿಧಿ, ಭಸ್ಮದ ಪ್ರಭೇದಗಳು, ಭಸ್ಮಧಾರಣ ವಿಧಿ, ಭಸ್ಮಸ್ನಾನ, ತ್ರಿಪುಂಡ್ರಧಾರಣೆ ಮತ್ತು ಅದರ ಸ್ಥಾನಗಳು, ಭಸ್ಮಧಾರಣ ಫಲ ಮತ್ತು ಮಹಿಮೆ ಎಂಬ ವಿಷಯಗಳು ವಿಸ್ತಾರವಾಗಿ ಬಂದಿವೆ.

ರುದ್ರಾಕ್ಷ ಸ್ವರೂಪ ನಿರೂಪಣವೆಂಬ ಏಳನೆಯ ಪಟಲದಲ್ಲಿ ರುದ್ರಾಕ್ಷದ ಉತ್ಪತ್ತಿ, ಧಾರಣವಿಧಿ ಹಾಗೂ ಮಹಿಮೆಗಳು ನಿರೂಪಿಸಲ್ಪಟ್ಟಿವೆ. ರುದ್ರಾಕ್ಷದ ಉತ್ಪತ್ತಿಗೆ ಸಂಬಂಧಿಸಿದ ಪೌರಾಣಿಕ ಕಥೆಯನ್ನು ನಿರೂಪಿಸಿ, ರುದ್ರಾಕ್ಷಗಳ ಪ್ರಕಾರಗಳು, ಧರಿಸಲು ಯೋಗ್ಯವಾದ ಹಾಗೂ ಯೋಗ್ಯವಲ್ಲದ ರುದ್ರಾಕ್ಷಿಗಳು, ಶಾಸ್ತ್ರೋಕ್ತ ರುದ್ರಾಕ್ಷಧಾರಣವಿಧಿ (ಸ್ಥಾನ ಮತ್ತು ಸಂಖ್ಯೆ), ಮುಖಭೇದದಿಂದ ರುದ್ರಾಕ್ಷದ ಮಹಿಮೆ ಮುಂತಾದ ವಿಚಾರಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

ಪಂಚಾಕ್ಷರ ಸ್ವರೂಪ ನಿರೂಪಣೆವೆಂಬ ಎಂಟನೆಯ ಪಟಲದಲ್ಲಿ ಪಂಚಾಕ್ಷರ ಮಂತ್ರದ ಸ್ವರೂಪ; ಅದರ ಹೆಸರುಗಳು; ಋಷಿ – ಛಂದಸ್ಸು–ದೇವತೆ–ಬೀಜ–ಶಕ್ತಿ–ಕೀಲಕಗಳು; ಮಂತ್ರನ್ಯಾಸದ ಪ್ರಕಾರಗಳು, ಜಪದ ವಿಧಾನ, ತ್ರಿವಿಧ ಜಪ, ಸಗರ್ಭ–ಅಗರ್ಭ ಜಪಗಳು; ಮಂತ್ರಪುರಶ್ಚರಣ ಕ್ರಮ; ಜಪದಲ್ಲಿ ಬೆರಳು ಮುಂತಾದವುಗಳ ಉಪಯೋಗ ಮತ್ತು ಅದರ ಮಹಿಮೆ; ಜಪಕಾಲದಲ್ಲಿ ವರ್ಜನೀಯವಾದವುಗಳು; ಮಂತ್ರದ ಮಹಿಮೆ ಮುಂತಾದ ವಿಚಾರಗಳನ್ನು ಪ್ರತಿಪಾದಿಸಲಾಗಿದೆ.

ಪಂಚಾಚಾರ ಸ್ವರೂಪ ನಿರೂಪಣವೆಂಬ ಒಂಭತ್ತನೆಯ ಪಟಲದಲ್ಲಿ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರವೆಂಬ ಐದು ಆಚಾರಗಳನ್ನು ವಿಸ್ತಾರವಾಗಿ ನಿರೂಪಿಸಲಾಗಿದೆ. ಲಿಂಗಾಚಾರಕ್ಕೆ ಸಂಬಂಧಿಸಿದಂತೆ ವೇಧಾ–ಮನು–ಕ್ರಿಯಾ ದೀಕ್ಷೆಗಳಲ್ಲಿಯ ಒಟ್ಟು ೨೧ ಅವಾಂತರ ದೀಕ್ಷೆಗಳ ವಿಚಾರ, ಸದಾಚಾರದ ಅಂತರ್ಗತವಾಗಿ ೮ ವಿಧವಾದ ಶೀಲಗಳು, ಶಿವಾಚಾರಾಂತರ್ಗತವಾಗಿ ೧೬ ಶುದ್ಧಿಗಳು, ಗಣಾಚಾರದ ಪ್ರಸ್ತಾಪದಲ್ಲಿ ೬೪ ಶೀಲಗಳು, ಅವುಗಳಲ್ಲಿನ ನಿಷ್ಠೆಯಿಂದ ಆಗುವ ಶಿವಸಾಯುಜ್ಯಪ್ರಾಪ್ತಿರೂಪದ ಫಲವನ್ನು ವರ್ಣಿಸಿ, ಭೃತ್ಯಾಚಾರದ ವೈಶಿಷ್ಟ್ಯವನ್ನು ವಿವರಿಸಲಾಗಿದೆ.

ಶೈವಭೇದ ಎಂಬ ಹೆಸರಿನ ಹತ್ತನೆಯ ಪಟಲದಲ್ಲಿ ಅನಾದಿಶೈವ, ಆದಿಶೈವ, ಪೂರ್ವಶೈವ, ಮಿಶ್ರಶೈವ, ಶುದ್ಧಶೈವ, ಮಾರ್ಗಶೈವ, ಸಾಮಾನ್ಯಶೈವ ಮತ್ತು ವೀರಶೈವವೆಂಬ ಎಂಟು ಶೈವಭೇದಗಳ ಲಕ್ಷಣಗಳನ್ನು ಕೊಟ್ಟು, ವಿಶೇಷವಾಗಿ ವೀರಶೈವದ ಸಾಮಾನ್ಯ ವೀರಶೈವ, ವಿಶೇಷ ವೀರಶೈವ ಮತ್ತು ನಿರಾಭಾರಿ ವೀರಶೈವಗಳನ್ನು ವಿವರಿಸಲಾಗಿದೆ.

ಆಹ್ನಿಕ ವಿಧಿಯೆಂಬ ಹನ್ನೊಂದನೆಯ ಪಟಲದಲ್ಲಿ ವೀರಶೈವರ ದೈನಂದಿನ ಆಚರಣೆಗಳು ಬಂದಿವೆ. ಶಿವಭಕ್ತನ ಆಹ್ನಿಕವು ಬ್ರಾಹ್ಮೀಮುಹೂರ್ತದಿಂದ ಹಿಡಿದು ರಾತ್ರಿ ಮಲಗುವವರೆಗೆ ಹೇಗಿರುತ್ತದೆ, ಹೇಗಿರಬೇಕು ಎಂಬುದು ಈ ಪಟಲದಲ್ಲಿ ವಿವರಿಸಲ್ಪಟ್ಟಿದೆ.

ಶೌಚವಿಧಿ, ಸ್ನಾನವಿಧಿ, ತ್ರಿಪುಂಡ್ರಧಾರಣ, ಸಂಧ್ಯಾವಂದನ, ಗಾಯತ್ರೀ ಮಂತ್ರಾರ್ಥ, ಹೋಮವಿಧಿ, ಸಾಯಂವಿಧಿ, ಮಲಗುವ ಕ್ರಮ ಎಂಬ ವಿಚಾರಗಳು ಇಲ್ಲಿ ನಿರೂಪಿತವಾಗಿವೆ.

ವರ್ಣಾಶ್ರಮಧರ್ಮಾವಶ್ಯಕತಾ ನಿರೂಪಣವೆಂಬ ಹನ್ನೆರಡನೆಯ ಪಟಲದಲ್ಲಿ ಜ್ಞಾನ-ಕರ್ಮಸಮುಚ್ಚಯವನ್ನು ಅಂಧ ಪಂಗುನ್ಯಾಯದ ಆಧಾರದ ಮೇಲೆ ಹೇಳಿ, ಜೀವವಿರುವವರೆಗೂ ಕರ್ಮಾನುಷ್ಠಾನದ ಅವಶ್ಯಕತೆಯನ್ನು ಬಿಂಬಿಸಿ,ಕರ್ಮ ಪರಿತ್ಯಾಗದಿಂದ ಮನುಷ್ಯನು ಪತಿತನಾಗುತ್ತಾನೆಂದು ವರ್ಣಿಸಲಾಗಿದೆ.

ಅನಂತರ **ಚರ್ಯಾಪಾದದ** ಎಂಟು ಪಟಲಗಳಲ್ಲಿ ವೀರಶೈವರ ಶಿವಮೇಧಕ್ಕೆ (ಅಂತ್ಯೇಷ್ಟಿಗೆ) ಸಂಬಂಧಿಸಿದ ಕಾರ್ಯಗಳನ್ನು ಮತ್ತು ಅಶೌಚ- ಪ್ರಾಯಶ್ಚಿತ್ತಗಳನ್ನು ನಿರೂಪಿಸಲಾಗಿದೆ. ಶಿವಮೇಧ ಪ್ರಶಂಸಾ, ಉತ್ಕ್ರಾಂತಿಸಮಯಾಚಾರ ವರ್ಣನ, ಉತ್ಕ್ರಾಂತ್ಯನಂತರ ಕಾರ್ಯಕರ್ತೃಕ್ರಮ ನಿರ್ಣಯ, ಔರ್ಧ್ವದೇಹಿಕ ವಿಧಿಕಥನ, ಪ್ರಕೀರ್ಣ ವಿಧಿ ಕಥನ - ಎಂಬ ಹೆಸರಿನ ಐದು ಪಟಲಗಳು ಶಿವಮೇಧದ ವಿವಿಧ ಕ್ರಿಯೆಗಳನ್ನು ವರ್ಣಿಸುತ್ತವೆ. ಅಶೌಚ ಶುದ್ಧಿಕಥನವೆಂಬ ಆರನೆಯ ಪಟಲದಲ್ಲಿ ಜನನ ಮತ್ತು ಮರಣಸೂತಕಗಳ ವಿಷಯವು ನಿರೂಪಿತವಾಗಿವೆ. ಪ್ರಾಯಶ್ಚಿತ್ತ ಕಥನ ಮತ್ತು ಪ್ರಾಯಶ್ಚಿತ್ತ ವಿಧಿಕಥನ ಎಂಬ ಏಳನೆಯ ಮತ್ತು ಎಂಟನೆಯ ಪಟಲಗಳಲ್ಲಿ ಪ್ರಾಯಶ್ಚಿತ್ತ ವಿಧಿಗಳ ನಿರೂಪಣೆಯನ್ನು ಕಾಣುತ್ತೇವೆ. ಏಳನೆಯದರಲ್ಲಿ ಉರುಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡವರನ್ನು ಸಂಸ್ಕಾರ ಮಾಡಿದುದಕ್ಕೆ, ಪತಿತರ ಸಂಪರ್ಕ ರೂಪದ ಪಾಪಕ್ಕೆ, ನರಿ- ನಾಯಿ ಕಡಿದ ಮೈಲಿಗೆ ಮುಂತಾದವುಗಳಿಗೆ ವಿಧಿಸಿದ ಪ್ರಾಯಶ್ಚಿತ್ತ ವಿಧಿಗಳನ್ನು ಹೇಳಿದ್ದರೆ ಎಂಟನೆಯದರಲ್ಲಿ ಮಹಾಪಾಪಾದಿಗಳಿಗೆ (ಅಗಮ್ಯಗಮನಗಳಿಗೆ) ಸಂಬಂಧಿಸಿದ ಪ್ರಾಯಶ್ಚಿತ್ತಗಳನ್ನು ವಿವರಿಸಲಾಗಿದೆ.

೧೩) **ಪಾರಮೇಶ್ವರಾಗಮ :** ಪಾರಮೇಶ್ವರಾಗಮದ ಉತ್ತರ ಭಾಗವು ಮಾತ್ರ ಶಂಕರಪ್ಪ ಅಚ್ಚಪ್ಪ ಟೋಪಗಿ ಅವರಿಂದ ಮೈಸೂರ ಕ್ರೌನ್ ಪ್ರೆಸ್ ಮೂಲಕ ೧೯೧೪ ರಲ್ಲಿ ಪ್ರಕಟಿಸಲ್ಪಟ್ಟ ತಂತ್ರ ಸಂಗ್ರಹದ ಭಾಗವಾಗಿ ಪ್ರಕಾಶಿತವಾಗಿದೆ. ಅದರಲ್ಲಿ ಕ್ರಿಯಾಪಾದದ ೨೨ ಪಟಲಗಳು ಮಾತ್ರ ಇರುತ್ತವೆ.

ವೀರಶೈವಾಚಾರ ಪ್ರದೀಪಿಕೆ, ವೀರಶೈವ ಚಿಂತಾಮಣಿ, ಅನಾದಿವೀರಶೈವ ಸಾರ ಸಂಗ್ರಹ, ಧರ್ಮಶಿರೋಮಣಿ, ವೀರಮಾಹೇಶ್ವರಾಚಾರ ಸಂಗ್ರಹದಲ್ಲಿ ಪಾರಮೇಶ್ವರಾಗಮದಿಂದ ಶ್ಲೋಕಗಳು ಉಲ್ಲೇಖಿಸಲ್ಪಟ್ಟಿವೆ.

ಮೊದಲನೆಯ ಪಟಲದಲ್ಲಿ ವಿಶೇಷವಾಗಿ ವಿಭಿನ್ನ ಮತಗಳ ನಿರೂಪಣೆಯಿದೆ. ಸಪ್ತವಿಧ ಶೈವಗಳ ಬಗ್ಗೆ ವಿವರಿಸಿ ಅನಂತರ ಶೈವ, ಪಾಶುಪತ, ಸೋಮ ಮತ್ತು ಲಾಕುಲ ಎಂಬ ನಾಲ್ಕು ಶೈವಮತಗಳನ್ನು ವಿವರಿಸಲಾಗಿದೆ. ಆಗಮದ ಪದ್ಧತಿಯ ಪ್ರಕಾರ ಪಂಚಾಕ್ಷರ ಮಂತ್ರದ ಪ್ರತ್ಯಕ್ಷರ ಸೂಕ್ಷ್ಮ ಉದ್ಧಾರವನ್ನು ಪ್ರದರ್ಶಿಸಲಾಗಿದೆ. ಮುಂದೆ ವೀರಶೈವ ಮತದ ವಿಶೇಷವನ್ನು ಮತ್ತು ಭಸ್ಮ, ರುದ್ರಾಕ್ಷ ಮತ್ತು ಇಷ್ಟಲಿಂಗಧಾರಣೆಯ ಮಹಿಮೆಯನ್ನು ವರ್ಣಿಸಲಾಗಿದೆ. ಇಲ್ಲಿ ವೀರಪದದ ನಿಷ್ಪತ್ತಿಯು

ಗಮನೀಯವಾದುದು. ವೀರಶೈವ ಮತದ ಉತ್ಕರ್ಷದ ಜೊತೆಗೆ ಪಂಚಾಕ್ಷರ ಮಂತ್ರ ಮತ್ತು ಇಷ್ಟಲಿಂಗದ ಮಹಿಮೆಯು ನಿರೂಪಿಸಲ್ಪಟ್ಟಿದೆ. ಶಿವಲಿಂಗ ಪೂಜೆಯ ವಿಧಾನ, ಶಿವಯೋಗಿ ಮತ್ತು ಶಿವಾಲಯದ ಶಿಖರಗಳ ದರ್ಶನದ ಮಹಿಮೆಯನ್ನು ಈ ಪಟಲದ ಅಂತ್ಯದಲ್ಲಿ ಹೇಳಲಾಗಿದೆ.

ಎರಡನೆಯ ಪಟಲದಲ್ಲಿ ಪ್ರಧಾನವಾಗಿ ಇಷ್ಟಲಿಂಗ ಸಜ್ಜಿಕೆ, ಶಿವಸೂತ್ರ ಮುಂತಾದವುಗಳನ್ನು ತಯಾರಿಸುವ ಪದ್ಧತಿಯನ್ನು ಈ ಪಟಲದಲ್ಲಿ ಹೇಳಿದೆ. ದೀಕ್ಷೆಗಾಗಿ ಗುರುವಿನ ಅವಶ್ಯಕತೆಯನ್ನು ಹೇಳಿ, ಗುರು – ಶಿಷ್ಯರ ಲಕ್ಷಣ, ದೀಕ್ಷಾಕ್ರಮ ಮತ್ತು ಶಿಷ್ಯನ ಕರ್ತವ್ಯಗಳ ಬಗ್ಗೆ ಹೇಳಲಾಗಿದೆ. ಇಷ್ಟಲಿಂಗವು ನಷ್ಟವಾದರೆ ಏನು ಮಾಡಬೇಕೆಂದು ತಿಳಿಸಿ, ಜೀವನಪರ್ಯಂತ ಗುರುವು ಕೊಟ್ಟ ಲಿಂಗವನ್ನು ಧರಿಸಿರಲೇ ಬೇಕು ಎಂದು ಒತ್ತಿಹೇಳಲಾಗಿದೆ. ದೀಕ್ಷಾಗುರುವನ್ನು ತ್ಯಜಿಸುವುದು ನಿಂದಾರ್ಹವೆಂದು ತಿಳಿಸಿದೆ.

ಮೂರನೆಯ ಪಟಲದಲ್ಲಿ ದೀಕ್ಷಾವಿಧಿಯ ವಿಸ್ತಾರವಾದ ನಿರೂಪಣೆಯಿದೆ. ದೀಕ್ಷೆಗಾಗಿ ಮಂಟಪ ನಿರ್ಮಾಣ, ಯಜಮಾನನ ಕರ್ತವ್ಯಗಳು, ಪಂಚಕಲಶಗಳ ಪೂಜೆಗಳನ್ನು ಹೇಳಿ, ದೀಕ್ಷೆಯ ಕ್ರಮ, ಲಿಂಗಾರ್ಚನೆ, ಪೂಜೆಗೆ ಬೇಕಾದ ಪುಷ್ಪಗಳು, ಪೂಜಾವಿಧಿ ಮತ್ತು ಸಜ್ಜಿಕೆಯ ದಾರದ ಸಂಸ್ಕಾರ ಮುಂತಾದವುಗಳ ವಿವರಣೆಯಿದೆ. ದೀಕ್ಷೆಯನ್ನು ಪಡೆದವನು ಮಾಡಬೇಕಾದ ಕರ್ತವ್ಯಗಳ ನಿರೂಪಣೆಯಿದೆ. ಸಂದರ್ಭಕ್ಕೆ ಅನುಗುಣವಾಗಿ (೩.೭೩ – ೭೫) ಘಂಟಾನಾದದ ಮಹಿಮೆಯು ವರ್ಣಿತವಾಗಿದೆ. ಅಭಿಷೇಕದ ವಿಧಿಯನ್ನು ವಿವರಿಸಿ ಯಜಮಾನನು ದೀಕ್ಷೆಯ ನಾಲ್ಕನೆಯ ದಿನ ಮಾಡಬೇಕಾದ ಕೃತ್ಯಗಳನ್ನು ಹೇಳಲಾಗಿದೆ. ಕಡೆಯಲ್ಲಿ ಶಿವಯೋಗಿ ಪಾಲಿಸಬೇಕಾದ ನಿಯಮಗಳನ್ನು ಹೇಳಿ, ಲಿಂಗ–ವಿಭೂತಿ ರುದ್ರಾಕ್ಷಗಳ ಮಹಿಮೆಯನ್ನು ನಿರೂಪಿಸಲಾಗಿದೆ.

ನಾಲ್ಕನೆಯ ಪಟಲದಲ್ಲಿ ದೀಕ್ಷಾವಿಧಿ ಅಂಗವಾಗಿ ಬರುವ ಹೋಮದ ವಿಸ್ತಾರವಾದ ವರ್ಣನೆಯಿದೆ. ಅಗ್ನಿಯ ಏಳು ನಾಲಿಗೆಗಳು ಮತ್ತು ಅವುಗಳಿಗೆ ನೀಡುವ ಆಹುತಿಗಳ ಪ್ರಯೋಜನಗಳನ್ನು ಹೇಳಿ ಕುಂಡದ ಮೇಖಲೆಗಳಲ್ಲಿ (ಸುತ್ತುಗಳಲ್ಲಿ) ಐವತ್ತೂರು ದೇವತೆಗಳ ಪೂಜಾಕ್ರಮವನ್ನು ನಿರೂಪಿಸಲಾಗಿದೆ. ಅನಂತರ ಅಗ್ನಿಯ ಪ್ರಾರ್ಥನೆ ಪರಿಧಿ–ಪರಿಸ್ತರಣ, ಯಜ್ಞಪಾತ್ರೆಗಳ ಸ್ಥಾಪನೆ, ಹೋಮವಿಧಾನ ಮುಂತಾದ ಸಂಪೂರ್ಣ ಪ್ರಕ್ರಿಯೆಯು ಹೇಳಲ್ಪಟ್ಟಿದೆ.

ಐದನೆಯ ಪಟಲದಲ್ಲಿ ಲಿಂಗಧಾರಣದ ವಿಸ್ತಾರವಾದ ವರ್ಣನೆಯಿದೆ. ಮೊದಲು ಸಜ್ಜಿಕೆ, ಶಿವಸೂತ್ರ ಮತ್ತು ಇಷ್ಟಲಿಂಗಗಳ ಸಂಯೋಜನೆಯ ಕ್ರಮವನ್ನು ಹೇಳಿ, ಅನಂತರ ಇಷ್ಟಲಿಂಗದ ಸುಂದರ ಸ್ತುತಿ, ಇಷ್ಟಲಿಂಗದ ಅಭಿಷೇಕ ವಿಧಿ, ವಿಭೂತಿಧಾರಣ, ರುದ್ರಾಕ್ಷಧಾರಣ, ಗುರುವಿನ ಪೂಜೆ, ಮಂತ್ರೋಪದೇಶ ಮುಂತಾದವುಗಳು ವಿಸ್ತಾರವಾಗಿ ನಿರೂಪಿತವಾಗಿವೆ. ವಿಶೇಷವೆಂದರೆ ಯಾವ ಯಾವ ಸ್ಥಾನದಲ್ಲಿ ಇಷ್ಟಲಿಂಗವನ್ನು ಧರಿಸಿದರೆ ಯಾವ ಯಾವ ಇಚ್ಛೆಗಳು ಪೂರ್ತಿಯಾಗುತ್ತವೆ ಎಂಬುದನ್ನು ಹೇಳಿ

ದೀಕ್ಷಿತನಾದ ಭಕ್ತನು ಇಷ್ಟಲಿಂಗವನ್ನು ನಿಯಾಮನುಸಾರ ಪೂಜಿಸಬೇಕು ಎಂಬುದಕ್ಕೆ ಒತ್ತು ಕೊಡಲಾಗಿದೆ. ವೀರಶೈವ ದೀಕ್ಷೆಯ ಅನಂತರ ಸ್ತ್ರೀ – ಪುರುಷ, ಜಾತಿ–ಧರ್ಮ, ವರ್ಣಾಶ್ರಮ–ಧರ್ಮ ಮುಂತಾದವುಗಳ ಭೇದವು ಸರ್ವಥಾ ತೊಡೆದು ಹೋಗುತ್ತದೆ. ಆಗ ಯಾವುದೇ ಭೇದ ದೃಷ್ಟಿಯು ಇರಬಾರದು ಎಂಬುದರ ಸುಂದರ ನಿರೂಪಣೆ ಬಂದಿದೆ. ನಿತ್ಯ, ನೈಮಿತ್ತಿಕ ಮತ್ತು ಕಾಮ್ಯ ಪೂಜೆಗಳು, ಜಂಗಮಪೂಜೆ, ಜಂಗಮನು ಪಾಲಿಸಬೇಕಾದ ನಿಯಮಗಳು, ಕಾಮ್ಯಾರ್ಚನೆಯ ವಿಧಿ, ಅತಿಥಿ ಸತ್ಕಾರ, ಜಂಗಮ ಪೂಜೆಯೊಂದಿಗೆ ಅನಾಥರಿಗೆ ಸಹಾಯ ಮಾಡುವುದು ಮುಂತಾದವುಗಳನ್ನು ನಿರೂಪಿಸಲಾಗಿದೆ. ಕಡೆಯಲ್ಲಿ ಶಿವಯೋಗಿಯು ನಡೆಸಬೇಕಾದ ನಿಯಮಗಳು ಮತ್ತು ವೀರಶೈವ ಮತದ ಶ್ರೇಷ್ಠತೆಯ ಕುರಿತು ಹೇಳಲಾಗಿದೆ.

ಆರನೆಯ ಪಟಲದಲ್ಲಿ ಬಹುಮುಖ್ಯವಾದ ಷಟ್‌ಸ್ಥಲಗಳ ಸ್ವರೂಪವು ನಿರೂಪಿತವಾಗಿದೆ. ಹೇಗೆ ಏಕಮೇವಾದ್ವಿತೀಯನಾದ ಪರಮಾನಂದ ಸ್ವರೂಪನಾದ ಪರಮಾತ್ಮನು ತಾನೇ ಆರು ಸ್ಥಲಗಳ ಸ್ವರೂಪವನ್ನು ತಾಳಿದನು ಎಂಬುದನ್ನು ವರ್ಣಿಸಿ, ಕ್ರಮವಾಗಿ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಆರು ಸ್ಥಲಗಳ ಲಕ್ಷಣಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಮುಂದೆ ಮಹೇಶ್ವರನ ಸರ್ವಜ್ಞತಾ, ತೃಪ್ತಿ, ಅನಾದಿಬೋಧ, ಸ್ವತಂತ್ರತಾ, ನಿತ್ಯವಾದ ಅಲುಪ್ತಶಕ್ತಿ ಮತ್ತು ಅನಂತಶಕ್ತಿಯೆಂಬ ಆರು ಅಂಗಗಳನ್ನು ಮತ್ತು ಆರು ಸ್ಥಲಗಳಲ್ಲಿ ಅವುಗಳ ಯೋಜನೆಯ ರೀತಿಯನ್ನು ಹೇಳಿ, ಭಕ್ತಿ, ಕರ್ಮಕ್ಷಯ, ಬುದ್ಧಿ, ವಿಚಾರ, ದರ್ಪಕ್ಷಯ ಮತ್ತು ಸಮ್ಯಗ್‌ಜ್ಞಾನ ಎಂಬ ಆರು ಲಿಂಗ ಮತ್ತು ಉಪಾಂಗಗಳ ಪರಸ್ಪರ ಸಂಬಂಧವನ್ನು ಹೇಳಿ, ಪ್ರಸಂಗವಶಾತ್ ಆರು ವಿಧ ಊರ್ಮಿಗಳ ಮತ್ತು ಅರಿಷಡ್ವರ್ಗದ ವಿವರಣೆಯನ್ನು ಕೊಡಲಾಗಿದೆ.

ಏಳನೆಯ ಪಟಲದಲ್ಲಿ ಶೈವಮತಗಳ ಲಕ್ಷಣಗಳು ವಿಸ್ತಾರವಾಗಿ ಹೇಳಲ್ಪಟ್ಟಿವೆ. ವೀರಶೈವರಿಗೆ ಅಪೇಯ–ಪಾನ, ಅಭಕ್ಷ್ಯ– ಭಕ್ಷಣ ಮುಂತಾದವುಗಳ ನಿಷೇಧವು ಕಟ್ಟುನಿಟ್ಟಾಗಿ ಹೇಳಲ್ಪಟ್ಟಿದೆ. ಇಲ್ಲಿ ಮತ್ತೆ ಅತಿಥಿ ಸತ್ಕಾರಕ್ಕೆ ವಿಶೇಷವಾದ ಒತ್ತು ನೀಡಲಾಗಿದೆ. ಆಮೇಲೆ ಅಷ್ಟಾವರಣಗಳ ನಿರ್ದೇಶ ಮಾಡಿ, ಇಷ್ಟಲಿಂಗಧಾರಿಯು ಪಾಲಿಸಬೇಕಾದ ನಿಯಮಗಳ ಬಗ್ಗೆ ಹೇಳಿ, ಪುಷ್ಪಸಂಗ್ರಹ ಮತ್ತು ಪೂಜಾ ಪದ್ಧತಿಗಳ ವಿಶೇಷ ನಿರೂಪಣೆಯನ್ನು ಕೊಡಲಾಗಿದೆ. ಎಂಟನೆಯ ಪಟಲದಲ್ಲಿ ವೀರ ಪದದ ನಿಷ್ಪತ್ತಿ ಮತ್ತು ಅದರ ಅರ್ಥವನ್ನು ವಿಸ್ತಾರವಾಗಿ ನಿರೂಪಿಸಲಾಗಿದೆ. ಬ್ರಹ್ಮಚರ್ಯದ ಸ್ಮೃತಿ ಸಮ್ಮತವಾದ ಅರ್ಥವನ್ನು ವಿವರಿಸಿ, ಇದು ಶಿವಯೋಗಿಗೆ ಅತ್ಯಾವಶ್ಯಕವೆಂದು ಹೇಳಲಾಗಿದೆ. ಮುಂದೆ ವೀರಶೈವ ವ್ರತದ ನಿರೂಪಣೆಯ ಅಂಗವಾಗಿ ಭಸ್ಮಧಾರಣ ವಿಧಿಯ ವಿಸ್ತಾರವಾದ ನಿರೂಪಣೆ ಬಂದಿದೆ. ಶಿವ, ಇಷ್ಟಲಿಂಗ, ಆತ್ಮ ಮತ್ತು ಗುರು ಇವರಲ್ಲಿ ಏಕತ್ವದ ಭಾವನೆಯಿರಬೇಕೆಂಬುದನ್ನು ಬಿಂಬಿಸಿ ವೀರಶೈವನು ಎಂದೂ ಅಧಃಪತನವನ್ನು ಹೊಂದಲಾರ ಎಂದು ಭಗವದ್ಗೀತೆಯಲ್ಲಿ ಹೇಳಿದ ವಿಚಾರಕ್ಕೆ ಸಂವಾದಿಯಾದ ವಿಚಾರವು ಬಿಂಬಿತವಾಗಿದೆ. ಪೂಜೆಯ ಕಾಲದ ಬಗ್ಗೆ ಹೇಳಿ,

ಜಂಗಮನಿಗೆ ಭಿಕ್ಷೆಯ ನಿಯಮಗಳನ್ನು ವಿಧಿಸಿ, ಅಂತಿಮವಾಗಿ ಹೇಗೆ ಗೃಹಸ್ಥನು ಜಂಗಮನ ಸತ್ಕಾರವನ್ನು ಮನಃಪೂರ್ವಕವಾಗಿ ಮಾಡಬೇಕೆಂಬುದನ್ನು ಸೂಚಿಸಲಾಗಿದೆ.

ಒಂಭತ್ತನೆಯ ಪಟಲದಲ್ಲಿ ವೀರಶೈವಮತದ ಮಹಿಮೆಯು ನಿರೂಪಿತವಾಗಿದೆ. ಕಾಶಿಯಲ್ಲಿ ಮರಣ ಮಾತ್ರದಿಂದ ಮುಕ್ತಿಯು ಹೇಗೆ ಲಭಿಸುತ್ತದೆಯೋ ಹಾಗೆಯೇ ವೀರಶೈವ ಮತವನ್ನು ಪ್ರವೇಶಿಸುವ ಮಾತ್ರದಿಂದಲೇ ಮುಕ್ತಿ ದೊರೆಯುತ್ತದೆ ಎಂದು ಹೇಳಿ, ಅನ್ಯಮತಗಳಲ್ಲಿ ಸ್ಖಲಿತನಾದ ವ್ಯಕ್ತಿ ವೀರಶೈವಮತವನ್ನು ಆಶ್ರಯಿಸಿ ಶುದ್ಧನಾಗುವನು ಎಂಬ ವಿಶೇಷವು ನಿರೂಪಿಸಲ್ಪಟ್ಟಿದೆ. ವೀರಶೈವನು ವಿಷಯಗಳಲ್ಲಿ ಅಭಿಲಾಷೆಯನ್ನು ಇಟ್ಟುಕೊಳ್ಳದೆ ತನ್ನ ಮತದ ಬಗ್ಗೆ ಸಂಪೂರ್ಣವಾದ ಆಸ್ಥೆ ಮತ್ತು ಭಕ್ತಿಗಳನ್ನು ಹೊಂದಿರಬೇಕು ಎಂದು ಹೇಳಿದೆ. ಯೋಗ್ಯತೆಯನ್ನು ಗಳಿಸದೆ ಒಮ್ಮಿಂದೊಮ್ಮೆಲೇ ವೀರಶೈವ ಮತದಲ್ಲಿ ಪ್ರವೇಶಿಸಬಾರದು ಎಂದು ಆಜ್ಞಾಪಿಸಲಾಗಿದೆ. ಇಲ್ಲಿ ಚತುರ್ಥಾಶ್ರಮವನ್ನು ಪ್ರವೇಶಿಸಿದ ಸಂನ್ಯಾಸಿ ಅಥವಾ ವೀರಶೈವ ಜಂಗಮನ ವಿಶೇಷತೆಗಳನ್ನು ಬಿಂಬಿಸಿ, ವೀರಶೈವ ಮತದಲ್ಲಿ ಯೋಗ್ಯತೆಯ ಆಧಾರದಿಂದ ಪ್ರವೇಶಿಸಿ ಹೇಗೆ ಅನಾಯಾಸವಾಗಿ ಮುಕ್ತಿಯನ್ನು ಹೊಂದಬಹುದು ಎಂಬುದನ್ನು ಹೇಳಲಾಗಿದೆ.

ಹತ್ತನೆಯ ಪಟಲದಲ್ಲಿ ಯೋಗದ ವಿಧಾನವು ಹೇಳಲ್ಪಟ್ಟಿದೆ. ಇಲ್ಲಿ ವಿಶೇಷವಾಗಿ ಎರಡು ವಿಧವಾದ ಯೋಗ ಶೈವದ ವಿಚಾರವು ನಿರೂಪಿತವಾಗಿದೆ. ಸಾಕಾರ ಮತ್ತು ನಿರಾಕಾರ ಎಂಬೆರಡು ಯೋಗಶೈವದ ಪ್ರಕಾರಗಳನ್ನು ವಿವರಿಸಿ, ಆಸನ ಮತ್ತು ಧ್ಯಾನ ಪದ್ಧತಿಗಳ ವರ್ಣನೆಯನ್ನು ನೀಡಲಾಗಿದೆ. ಅನಂತರ ಯೋಗದ ಎಂಟು ಅಂಗಗಳ ನಿರೂಪಣೆಯು ಬಂದಿದೆ. ಇಲ್ಲಿ ಹೇಳಿರುವ ಯೋಗದ ಅಂಗಗಳು ಬೇರೆ ಕಡೆ ಹೇಳಿದ ಯೋಗಾಂಗಗಳಿಗಿಂತ ಭಿನ್ನವಾಗಿವೆ. ಇಲ್ಲಿ ಹೇಳಿರುವ ಯೋಗದ ಅಂಗಗಳೆಂದರೆ ಭಕ್ತ, ವೈರಾಗ್ಯ, ಅಭ್ಯಾಸ, ಧಾನ್ಯ, ಏಕಾಂತಸೇವನ, ಭಿಕ್ಷಾಟನ, ಲಿಂಗಪೂಜಾ ಮತ್ತು ಸತತ ಶಿವಸ್ಮರಣ. ಅನಂತರ ಧ್ಯಾನಶೈವ ಮತ್ತು ವೀರಶೈವರ ಯೋಗ ಪದ್ಧತಿಗಳನ್ನು ವಿವರಿಸಿ, ಈ ಯೋಗಿಗಳಿಗೆ ಶಮ, ದಮ, ತಿತಿಕ್ಷಾ, ಉಪರತಿ, ಶ್ರದ್ಧೆ ಮತ್ತು ಸಮಾಧಿ ಎಂಬ ಆರು ಅಂಗಗಳನ್ನು ವಿಧಿಸಲಾಗಿದೆ. ದಯೆಯ ಮಹಿಮೆಯನ್ನು ಹೇಳಿ ಅಂತಿಮವಾಗಿ ಪಂಚಾಕ್ಷರ ಮಂತ್ರದ ಮಹಾತ್ಮ್ಯವು ವರ್ಣಿತವಾಗಿದೆ.

ಹನ್ನೊಂದನೆಯ ಪಟಲದಲ್ಲಿ ಪಂಚಾಕ್ಷರಮಂತ್ರ ಜಪದ ಸಂಪೂರ್ಣ ವಿಧಿಯು ವಿಸ್ತಾರವಾಗಿ ಹೇಳಲ್ಪಟ್ಟಿದೆ. ಪಂಚಾಕ್ಷರ ಮತ್ತು ಷಡಕ್ಷರ ಮಂತ್ರಗಳ ಸ್ವರೂಪ ಹಾಗೂ ಪ್ರಣವದ ಮಹಿಮೆಗಳನ್ನು ಹೇಳಿದ ಮೇಲೆ ಷಡಕ್ಷರ ಮಂತ್ರದ ಮಹಿಮೆಯು ಇಲ್ಲಿ ವರ್ಣಿತವಾಗಿದೆ. ಮಂತ್ರವನ್ನು ಸ್ವೀಕರಿಸುವುದಕ್ಕಿಂತ ಮೊದಲು ಗುರುವಿನ ಸೇವೆಯನ್ನು ಮಾಡುವುದು, ಗುರುವಿನ ಮೂಲಕ ಶಿಷ್ಯನ ಷಡಧ್ವಶುದ್ಧಿ, ಮಂತ್ರೋಪದೇಶ, ಮಂತ್ರಪುರಶ್ಚರಣೆಗಳ ವಿಧಿ– ವಿಧಾನಗಳನ್ನು ಹೇಳಲಾಗಿದೆ. ಜಪದ ವಿಧಿ ಮತ್ತು ಭೂತಶುದ್ಧಿ ಮುಂತಾದ ಪ್ರಕ್ರಿಯೆಗಳನ್ನು ತಿಳಿಸುವುದಕ್ಕಾಗಿ ಜಪದ ಮೂರು ವಿಧ

ಮತ್ತು ಪಂಚವಿಧಗಳನ್ನು ಹೇಳಿ, ಯಾವುದಾದರೂ ಒಂದು ವಿಧದ ಜಪದ ವಿಧಾನವನ್ನು ಅನುಸರಿಸಬೇಕು ಎಂದು ಸೂಚಿಸಲಾಗಿದೆ.

ಹನ್ನೆರಡನೆಯ ಪಟಲದಲ್ಲಿ ಕರ್ಮಯೋಗ, ಜ್ಞಾನಯೋಗ ಮತ್ತು ಭಕ್ತಿಯೋಗಗಳ ಸ್ವರೂಪವು ನಿರೂಪಿಸಲ್ಪಟ್ಟಿದೆ. ಮೊದಲು ಜ್ಞಾನ ಮತ್ತು ಯೋಗ (ಕರ್ಮ)ಗಳ ಪರಸ್ಪರ ಅವಲಂಬನೆಯು ವರ್ಣಿತವಾಗಿದೆ. ಇದರಿಂದ ಜ್ಞಾನಕರ್ಮ ಸಮುಚ್ಚಯ ವಾದಕ್ಕೆ ಪುಷ್ಟಿ ದೊರೆಯುತ್ತದೆ. ಕರ್ಮವು ಬಾಹ್ಯ ಮತ್ತು ಅಂತರವೆಂದು ಎರಡು ಪ್ರಕಾರಗಳನ್ನು ಹೇಳಿ, ಅವುಗಳಲ್ಲಿ ಬಾಹ್ಯಕರ್ಮದ ಮೂರು ಭೇದ ಮತ್ತು ಐದು ಭೇದಗಳನ್ನು ವಿವರಿಸಿ, ಅಂತರ ಕರ್ಮವು ಬಾಹ್ಯಕರ್ಮಕ್ಕಿಂತ ಶ್ರೇಷ್ಠ ಎಂಬುದನ್ನು ಸಮರ್ಥಿಸಲಾಗಿದೆ. ಶಿವಧರ್ಮವನ್ನು ಪಾಲಿಸುವವರ ಎಂಟು ಲಕ್ಷಣಗಳನ್ನು ಹೇಳಿ (೧೨,೨೬,೨೮), ಇಂತಹ ಲಕ್ಷಣಗಳು ಮ್ಲೇಚ್ಛನಲ್ಲಿದ್ದರೂ ಕೂಡ ಅವನನ್ನು ಶಿವಸ್ವರೂಪನೆಂದು ಗೌರವಿಸಬೇಕು ಎಂದು ವಿಶೇಷವಾಗಿ ಸೂಚಿಸಲಾಗಿದೆ. ಇಲ್ಲಿ ಭಕ್ತಿಯ ಪ್ರಾಧಾನ್ಯವನ್ನು ಅಂಗೀಕರಿಸಿ, ಭಕ್ತಿಯ ಲಕ್ಷಣ ಮತ್ತು ಪ್ರಕಾರಗಳ ನಿರೂಪಣೆಯನ್ನು ನೀಡಿ, ಭಕ್ತಿಯ ಮಹಿಮೆಯನ್ನು ವರ್ಣಿಸಲಾಗಿದೆ. ಅನಂತರ ಶಿವಧರ್ಮದಲ್ಲಿನ ಜ್ಞಾನ, ಕ್ರಿಯಾ, ಚರ್ಯಾ ಮತ್ತು ಯೋಗವೆಂಬ ನಾಲ್ಕು ಮಾರ್ಗಗಳ ಸ್ವರೂಪವನ್ನು ಹೇಳುತ್ತಾ ಈ ಶಿವಮಾರ್ಗದ ಅನುಸರಣೆಯು ಶಿವಜ್ಞಾನದ ಪ್ರಾಪ್ತಿಗೆ ಅತ್ಯಂತ ಅವಶ್ಯಕವೆಂಬುದನ್ನು ಸಮರ್ಥಿಸಲಾಗಿದೆ. ಅನಂತರ ಶೈವದರ್ಶನದಲ್ಲಿ ಪ್ರಸಿದ್ಧವಾದ ಪತಿ, ಪಶು ಮತ್ತು ಪಾಶಗಳೆಂಬ ತತ್ತ್ವತ್ರಯದ ಸ್ವರೂಪವನ್ನು ಹೇಳಿ, ಮೂರು ವಿಧವಾದ ಪಾಶಗಳನ್ನು ಕತ್ತರಿಸಲು ವೀರಶೈವ ದೀಕ್ಷೆಯ ಅವಶ್ಯಕತೆಯನ್ನು ಬಿಂಬಿಸಲಾಗಿದೆ. ಇದಕ್ಕೋಸ್ಕರ ಶ್ರದ್ಧೆ ಬೇಕು, ಶ್ರದ್ಧೆಯಿಂದಲೇ ಭಕ್ತಿಯ ಉದಯ, ಭಕ್ತಿಸಂಪನ್ನವಾದ ವ್ಯಕ್ತಿಯೇ ವೀರಶೈವ ದೀಕ್ಷೆಗೆ ಅರ್ಹ ಎಂಬ ವಿಚಾರಗಳನ್ನು ಮುಂದೆ ಹೇಳಲಾಗಿದೆ. ಈ ರೀತಿ ಇಲ್ಲಿ ಜ್ಞಾನ, ಕರ್ಮ ಮತ್ತು ಭಕ್ತಿಗಳ ನಿರೂಪಣೆ ಮಾಡಿ ಅಂತ್ಯದಲ್ಲಿ ಎಲ್ಲಾ ಪ್ರಕಾರದ ಶೈವರು ಪಾಲಿಸಬೇಕಾದ ಸಾಮಾನ್ಯ ಸದಾಚಾರ ಮತ್ತು ವೀರಶೈವರ ವಿಶೇಷ ಸದಾಚಾರಗಳನ್ನು ಹೇಳಲಾಗಿದೆ.

ಹದಿಮೂರನೆಯ ಪಟಲದಲ್ಲಿ ಪ್ರಧಾನವಾಗಿ ಕರಕಮಲದಲ್ಲಿ ಇಷ್ಟಲಿಂಗಪೂಜೆಯ ವಿಧಾನವು ವರ್ಣಿತವಾಗಿದೆ. ಅನ್ಯಪೀಠಗಳಿಗಿಂತ ಪಾಣಿಪೀಠವು ಶ್ರೇಷ್ಠವೆಂದು ಹೇಳಿ, ಅದರ ಸ್ವರೂಪವನ್ನು ನಿರೂಪಿಸುತ್ತಾ ಐದು ಬೆರಳುಗಳಲ್ಲಿ ಪಂಚಬ್ರಹ್ಮರು ಮತ್ತು ಪಂಚಾಗ್ನಿಗಳನ್ನೂ ಪರಿಭಾವಿಸಿಕೊಳ್ಳಬೇಕು ಎಂದು ತಿಳಿಸಿ, ಕರಕಮಲದಲ್ಲಿ ಇಷ್ಟಲಿಂಗಪೂಜೆಯ ವಿಧಾನ, ಪಾಲಿಸಬೇಕಾದ ನಿಯಮಗಳು ಮತ್ತು ಇಷ್ಟಲಿಂಗ ಪೂಜೆಯ ಮಹಿಮೆಗಳನ್ನು ಹೇಳಲಾಗಿದೆ. ಇಷ್ಟಲಿಂಗಕ್ಕೆ ಮಾಡಬೇಕಾದ ಅಭಿಷೇಕ, ಅದಕ್ಕೆ ಬೇಕಾಗುವ ಪಾತ್ರೆಗಳ ಹಾಗೂ ನೀರಿನ ಸಂಗ್ರಹಕ್ಕೆ ಅನುಸರಿಸಬೇಕಾದ ವಿಧಾನಗಳನ್ನು ವಿವರಿಸಲಾಗಿದೆ.

ಹದಿನಾಲ್ಕನೆಯ ಪಟಲದಲ್ಲಿ ಮುಖ್ಯವಾಗಿ ಅಷ್ಟಬಂಧ (ಸ್ಥಾವರ) ಲಿಂಗದ ಲಕ್ಷಣ ಮತ್ತು ಗುರುವನ್ನು ಪೂಜಿಸುವ ಕ್ರಮ ಎಂಬ ಎರಡು ವಿಷಯಗಳು

ವರ್ಣಿಸಲ್ಪಟ್ಟಿವೆ. ಇಲ್ಲಿ ಲಿಂಗದ ಸಖಂಡ, ಅಖಂಡ ಮುಂತಾದ ಭೇದಗಳ ಸ್ವರೂಪವನ್ನು ಹೇಳಿ, ತನ್ನ ಯೋಗ್ಯತೆಗೆ ಅನುಸಾರವಾಗಿ ಉಪಾಸನೆ ಮಾಡಬೇಕೆಂದು ಸೂಚಿಸಿದೆ. ಇದರಲ್ಲಿ ಭಕ್ತಿಗೆ ವಿಶೇಷ ಸ್ಥಾನವೆಂಬುದೂ ಹೇಳಲ್ಪಟ್ಟಿದೆ. ಇಷ್ಟಲಿಂಗದ ಪ್ರಮಾಣ ಮತ್ತು ಅದನ್ನು ಧರಿಸುವ ವಿಧಿಯನ್ನು ವಿವರಿಸಿ, ಇಲ್ಲಿ ಧರಿಸಿದ ಲಿಂಗವು ನಷ್ಟವಾದರೆ ಏನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು ಎಂಬುದನ್ನು ಹೇಳಲಾಗಿದೆ. ಪೂಜೆಗೆ ಬೇಕಾದ ಪಾತ್ರೆಗಳು ಹಾಗೂ ಶಿವಪಾತ್ರೆಯ ಲಕ್ಷಣಗಳನ್ನು ಹೇಳಿ, ಆ ಪಾತ್ರೆಗಳಲ್ಲಿ ತೀರ್ಥಗಳ ಆವಾಹನೆಯನ್ನು ಮಾಡಬೇಕೆಂದು ಸೂಚಿಸಲಾಗಿದೆ. ಇಷ್ಟಲಿಂಗದ ನಿರ್ಮಾಣ ಮತ್ತು ಪೂಜೆಗಳ ಎಲ್ಲಾ ವಿಧಾನಗಳನ್ನು ವಿವರಿಸಿ, ಗುರು ಮತ್ತು ದೇವತೆಗಳನ್ನು ಅಭಿನ್ನದೃಷ್ಟಿಯಿಂದ ನೋಡಬೇಕೆಂದು ಹೇಳಿದೆ. ಅನಂತರ ಸದ್ಗುರುವಿನ ಸ್ಮರಣ, ಪೂಜನ ಮತ್ತು ಧ್ಯಾನ ಮುಂತಾದವುಗಳ ವಿಧಾನ ಮತ್ತು ಗುರುವಿನ ಮಹಿಮೆಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ.

ಹದಿನೈದನೆಯ ಪಟಲದಲ್ಲಿ ಮೂರು ವಿಧವಾದ ವೀರಶೈವರ ನಿರೂಪಣೆಯಿದೆ. ಹದಿನಾರನೆಯ ಪಟಲದಲ್ಲಿ ಆರು ವಿಧ ಲಿಂಗಗಳ ವರ್ಣನೆ ಬರುತ್ತದೆ. ಆಮೇಲೆ ಸಂಕ್ಷಿಪ್ತವಾಗಿ ನಿರಾಭಾರಿಯ ಆಚರಣೆಗಳನ್ನು ಹೇಳಿ ಪಂಚಸೂತ್ರ ಘಟಿತ ಲಿಂಗದ ಸಂಕ್ಷಿಪ್ತ ಚರ್ಚೆಯನ್ನು ಮಾಡಲಾಗಿದೆ.

ಹದಿನೇಳನೆಯ ಪಟಲದಲ್ಲಿ ಶೈವಾಗಮಗಳಿಗೆ ಸಮ್ಮತವಾದ ಮೂವತ್ತಾರು ತತ್ತ್ವಗಳ ನಿರೂಪಣೆಯನ್ನು ನೀಡಲಾಗಿದೆ. ವಿರಕ್ತಶೈವರ ಹತ್ತು ಗುಣಗಳ ಪರಿಗಣನೆಯೂ ಇಲ್ಲಿ ಮಾಡಲ್ಪಟ್ಟಿದೆ. ಶೈವರ ಪ್ರತಿದಿನದ ಕಾರ್ಯಗಳನ್ನು (ಆಹ್ನಿಕವನ್ನು) ನಿರೂಪಿಸುತ್ತಾ ಸ್ನಾನವಿಧಿ, ಭಸ್ಮ ನಿರ್ಮಾಣವಿಧಿ, ಭಸ್ಮಧಾರಣ ವಿಧಿ, ಭಸ್ಮಮಹಿಮೆ, ರುದ್ರಾಕ್ಷಧಾರಣ, ಪಾಣಿಪೀಠದಲ್ಲಿ ಇಷ್ಟಲಿಂಗಪೂಜೆ, ವಿರಕ್ತ ಶಿವಯೋಗಿಯು ಭಿಕ್ಷಾಟನೆಯಲ್ಲಿ ಪಾಲಿಸಬೇಕಾದ ನಿಯಮಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ.

ಹದಿನೆಂಟನೆಯ ಪಟಲದಲ್ಲಿ ನಿರ್ಯಾಣಯಾಗದ (ಅಂತ್ಯೇಷ್ಟಿಯ) ವಿಧಾನವು ವರ್ಣಿತವಾಗಿದೆ. ತನ್ನ ಅಂತ್ಯಕಾಲ ಸಮೀಪಿಸಿತೆಂದು ತಿಳಿದಾಗಿನಿಂದ ಶಿವಭಕ್ತನು ಏನು ಮಾಡಬೇಕು ಎಂಬುದನ್ನು ಹೇಳಿ, ನಂತರ ಮೃತವ್ಯಕ್ತಿಯ ಸಮಾಧಿ ಮಾಡುವ ಪೂರ್ತಿ ವಿಧಾನವನ್ನು ವಿಸ್ತಾರವಾಗಿ ಹೇಳಲಾಗಿದೆ. ಯಾವುದೋ ಕಾಲದಲ್ಲಿ ಇದ್ದಿರಬಹುದಾದ ಪತ್ನಿ ಅಥವಾ ಪತ್ನಿಯರ ಸಹಗಮನ ಪದ್ಧತಿಯೂ ವರ್ಣಿಸಲ್ಪಟ್ಟಿದೆ. ಸಂಸ್ಕಾರ ಮಾಡಿದ ಸ್ಥಲದಲ್ಲಿ ಸಮಾಧಿಯನ್ನು ಶಿವಾಲಯವನ್ನು ಮಾಡಿ, ಶಿಲಾಲಿಂಗವನ್ನು ಸ್ಥಾಪಿಸಿ ಪೂಜಿಸುವುದು ಮುಂತಾದ ವಿಧಾನಗಳು ನಿರೂಪಿತವಾಗಿವೆ. ಲಿಂಗಮುದ್ರೆಯಿಂದ ಗುರುತಿಸಲ್ಪಟ್ಟ ವೃಷಭನನ್ನು ಬಿಡುವುದು, ನಿರ್ಯಾಣ ಯಾಗದಲ್ಲಿ ದೀಕ್ಷಿತನಾದವನು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಹೇಳಿದೆ.

ಹತ್ತೊಂಬತ್ತನೆಯ ಪಟಲದಲ್ಲಿ ವಿಶೇಷವಾಗಿ ಸಿದ್ಧಿದಿವಸ ಅಥವಾ ಮೃತ್ಯತಿಥಿಯ ದಿನ ಮಾಡಬೇಕಾದ ಕ್ರಿಯೆಗಳ ಬಗ್ಗೆ ನಿರೂಪಿಸಲಾಗಿದೆ. ಗುರು – ಶಿಷ್ಯ ಪರಂಪರೆಯ

ವಿವರಣೆಯನ್ನು ನೀಡುತ್ತಾ, ಆ ಪರಂಪರೆಯು ನಿರಂತರ ನಡೆದುಕೊಂಡು ಬರುತ್ತಿರುವುದರಿಂದ ಇಂದಿನ ಶಿಷ್ಯನು ಮುಂದೆ ಗುರುವೆನಿಸಿಕೊಳ್ಳುವನು ಎಂಬ ಸತ್ಯವನ್ನು ಹೇಳಲಾಗಿದೆ. ಯಾವುದೇ ಜಾತಿಭೇದವಿಲ್ಲದೆ ಎಲ್ಲರನ್ನೂ ಸಮಾನರೆಂದು ಭಾವಿಸಿ ಎಲ್ಲರಿಗೂ ಸಹಾಯ ಮಾಡಬೇಕು ಎಂದು ಸೂಚಿಸಲಾಗಿದೆ. ಆರ್ಥಿಕವಾಗಿ ಅಸಮರ್ಥ ವ್ಯಕ್ತಿಯು ತನ್ನ ದೈಹಿಕ ಶ್ರಮದಿಂದ ಏನೇನು ಪರೋಪಕಾರದ ಕಾರ್ಯಗಳನ್ನು ಮಾಡಬಹುದು ಎಂಬುದನ್ನೂ ಸೂಚಿಸಲಾಗಿದೆ. ತಂದೆ, ಗುರು ಮುಂತಾದವರ ಮೃತ್ಯುತಿಥಿಯ ದಿವಸ ಮಾಡಬೇಕಾದ ಧಾರ್ಮಿಕ ಕೃತ್ಯಗಳ ಸವಿಸ್ತಾರವಾದ ನಿರೂಪಣೆಯಿಲ್ಲಿ ಬಂದಿದೆ.

ಇಪ್ಪತ್ತನೆಯ ಪಟಲದಲ್ಲಿ ದೀಕ್ಷಾಭೇದಗಳ ವಿಧಾನವು ನಿರೂಪಿತವಾಗಿದೆ. ಇಲ್ಲಿ ಅರ್ಹತೆಯಿಲ್ಲದ (ಅನಧಿಕಾರ) ವ್ಯಕ್ತಿಗೆ ದೀಕ್ಷೆಯನ್ನು ನೀಡಬಾರದು ಎಂಬ ಎಚ್ಚರಿಕೆಯನ್ನಿತ್ತು, ದೀಕ್ಷಾರ್ಹನ ಲಕ್ಷಣಗಳನ್ನು ಹೇಳಿದೆ.

ಇಪ್ಪತ್ತೊಂದನೆಯ ಪಟಲದಲ್ಲಿ ಜ್ಞಾನಯೋಗದ ನಿರೂಪಣೆಯಿದೆ. ಇಪ್ಪತ್ತೆಂಟು ತತ್ತ್ವಗಳ ಪರಿಗಣನೆಯೊಂದಿಗೆ ಇಲ್ಲಿ ಜ್ಞಾನದ ಲಕ್ಷಣವನ್ನು ಕೊಡುತ್ತಾ ಶಿವನ ಸ್ವರೂಪಜ್ಞಾನವೇ ನಿಜವಾದ ಜ್ಞಾನವೆಂದು ಪ್ರತಿಪಾದಿಸಲಾಗಿದೆ. ಬಭುಕ್ಷಾ (ಹಸಿವು), ಪಿಪಾಸಾ (ಬಾಯಾರಿಕೆ) ಮುಂತಾದ ಆರು ಊರ್ಮಿಗಳ ಮತ್ತು ಕಾಮ, ಕ್ರೋಧ ಮುಂತಾದ ಆರು ವೈರಿಗಳ ಬಗ್ಗೆ ಚರ್ಚಿಸಲಾಗಿದೆ. ಇವುಗಳಿಂದ ಮುಕ್ತನಾದ ವ್ಯಕ್ತಿಯು ಶಿವನೇ ಸರ್ವಸ್ವನೆಂಬ ಜ್ಞಾನದೊಂದಿಗೆ ಯೋಗದ ಅಭ್ಯಾಸವನ್ನು ಮಾಡಬೇಕು, ಅದೇ ಮುಕ್ತಿಯ ಪರಮ ಸಾಧನವೆಂದು ಹೇಳಲಾಗಿದೆ. ಶಿವನೇ ಜೀವನ ಸ್ವರೂಪವನ್ನು ಹೇಗೆ ಧರಿಸುತ್ತಾನೆ ಎಂಬ ದೇವಿಯ ಪ್ರಶ್ನೆಗೆ ಪರಮಾತ್ಮನು ಚರಾಚರಾತ್ಮಕವಾದ ಜಗತ್ತೆಲ್ಲವೂ ಶಿವ-ಶಕ್ತ್ಯಾತ್ಮಕವೆಂದು ಹೇಳಿ ಜೀವಾತ್ಮನ ಸ್ವರೂಪವನ್ನು ನಿರೂಪಿಸುತ್ತಾ, ಮಾಯೆಯಿಂದ ಮೋಹಿತನಾದ ಜೀವನು ತನ್ನ ನಿಜಸ್ವರೂಪವನ್ನು ಮರೆಯುತ್ತಾನೆ, ವಾಸ್ತವವಾಗಿ ಶಿವ ಮತ್ತು ಜೀವರಿಗೆ ಅಣುಮಾತ್ರವೂ ಅಂತರವಿಲ್ಲ ಎಂದು ಹೇಳುತ್ತಾನೆ. ಇದೇ ಸಂದರ್ಭದಲ್ಲಿ ಅಧ್ಯಾಸದ ಬಗ್ಗೆ ಚರ್ಚೆ ಮಾಡುತ್ತಾ ಇಲ್ಲಿ ಅಧ್ಯಾಸವು ಬಿಂಬ- ಪ್ರತಿಬಿಂಬ ನ್ಯಾಯದಂತೆ ಇದೆ ಮತ್ತು ಇದರ ಕಾರಣದಿಂದಲೇ ಜೀವನು ತನ್ನಲ್ಲಿ ಸುಖ-ದುಃಖಗಳನ್ನು ಅನುಭವಿಸತೊಡಗುತ್ತಾನೆ; ಆದರೆ ಇದೆಲ್ಲವೂ ಬುದ್ಧಿಯ ವಿಲಾಸ, ಒಂದು ಪ್ರಕಾರದ ನಾಟಕ; ಏಕಮಾತ್ರ ಶಕ್ತಿ ತತ್ತ್ವವು ನಾಮರೂಪಗಳಾಗಿ ನಾನಾ ರೂಪಗಳಲ್ಲಿ ಭಾಸಿತವಾಗುತ್ತದೆ ಎಂದು ವಿವರಿಸಲಾಗಿದೆ.

ಇಪ್ಪತ್ತೆರಡನೆಯ ಪಟಲದಲ್ಲಿ ಜ್ಞಾನ ಮತ್ತು ಯೋಗಗಳ ನಿರೂಪಣೆಯು ಬಂದಿದೆ. ಜ್ಞಾನ ಮತ್ತು ಯೋಗಕ್ಕಿಂತ ಭಕ್ತಿಯು ಅಧಿಕ ಶ್ರೇಷ್ಠ ಎಂದು ಹೇಳಲಾಗಿದೆ. ಭಕ್ತಿಯಿಂದ ಸಮರ್ಪಿಸಿದ ಅಲ್ಪವಸ್ತುವೂ ಕೂಡ ಅಕ್ಷಯ ಫಲವನ್ನು ನೀಡುತ್ತದೆಯೆಂದೂ, ಪರಮಾತ್ಮನು ಭಕ್ತನ ವಶನೆಂದೂ, ಶಿವಭಕ್ತಿಯೇ ಮುಕ್ತಿಯೆಂದೂ ಇಲ್ಲಿ ನಿರೂಪಿಸಲಾಗಿದೆ. ಗುರುವೇ ಈಶ್ವರನೆಂದು ತಿಳಿದು ಅವನ ಸೇವೆಯನ್ನು ಕಾಯೇನು, ವಾಚಾ, ಮನಸಾ ಮಾಡಬೇಕು, ಈ ಭಕ್ತಿಯ ಅಭ್ಯಾಸದಿಂದ ಜ್ಞಾನ ಮತ್ತು ಯೋಗಗಳಲ್ಲಿ ಮನುಷ್ಯನಿಗೆ

ದೃಢತೆಯು ಪ್ರಾಪ್ತವಾಗುತ್ತದೆ, ಭಕ್ತಿಯಿಲ್ಲದಿದ್ದರೆ ದುಃಖವನ್ನು ಅನುಭವಿಸಬೇಕಾಗುತ್ತದೆ ಎಂಬ ವಿಷಯುಗಳು ಇಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಕೊನೆಯಲ್ಲಿ ಜಗನ್ಮಿಥ್ಯಾತತ್ವವಾದವನ್ನು ನಿರೂಪಿಸುತ್ತಾ, ಜಗತ್ತಿಗೆ ಯಾವುದೇ ವಾಸ್ತವ ಇರುವಿಕೆಯೆಂಬುದಿಲ್ಲ, ಅದು ಕೇವಲ ಶಿವನ ನಾಟಕವೆಂದು ನಿರೂಪಿಸಲಾಗಿದೆ.

ಇಪ್ಪತ್ಮೂರನೆಯ ಪಟಲದಲ್ಲಿ ನಿರ್ಲೇಪನೂ, ನಿಃಸಂಗನೂ ಆದ ಪರಮಾತ್ಮನು ಹೇಗೆ ಜಗತ್ತಿನ ಆಧಾರವಾಗುತ್ತಾನೆ ಎಂಬ ಪ್ರಶ್ನೆಗೆ ದೃಷ್ಟಾಂತಗಳಿಂದ ಕೂಡಿದ ಉತ್ತರವಿದೆ. ವಾಸ್ತವವಾಗಿ ನಾಮರೂಪಾತ್ಮಕವಾದ ಈ ಜಗತ್ತು ಸುಖಸಾಗರವಾದ ಶಿವನಿಂದ ಚಿಮ್ಮಿ ಹೊರಗೆ ಬರುತ್ತದೆ ಮತ್ತು ಅಂತಿಮವಾಗಿ ಅದರಲ್ಲೇ ಲೀನವಾಗುತ್ತದೆಯೆಂದೂ ನಿರೂಪಿಸಲಾಗಿದೆ. ಕಡೆಯಲ್ಲಿ ದೇವಿಯ ಮಾತಿನಲ್ಲಿ, ಇದಿಷ್ಟೂ ಪರತಂತ್ರ ಪ್ರಕೃತಿಯ ಕಾರ್ಯವಾಗಲಿಕ್ಕೆ ಸಾಧ್ಯವಿಲ್ಲ, ಇದರ ಪ್ರೇರಕನ ರೂಪದಲ್ಲಿ ಪರಮಾತ್ಮನ ಅಸ್ತಿತ್ವ ಸರ್ವದಾ ಸಿದ್ಧವೆಂಬ ಉಪಸಂಹಾರವು ಬಂದಿದೆ.

೧೪) ಕಿರಣಾಗಮ : ಕಿರಣಾಗಮವು ೧೯೩೨ ರಲ್ಲಿ ಅಧ್ಯಕ್ಷರು, ಶಿವಾಗಮ ಸಿದ್ಧಾಂತಪರಿಪಾಲನ ಸಂಘ, ದೇವಕೋಟ್ಟೈ ಅವರಿಂದ ಗ್ರಂಥಲಿಪಿಯಲ್ಲಿ ಪ್ರಕಟವಾಗಿತ್ತು. ಇದರ ಶ್ಲೋಕಗಳು ವೀರಶೈವ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ವೀರಶೈವ ಚಿಂತಾಮಣಿಯಲ್ಲಿ ಕೃತ್ವಾಸ್ನಾನವಿಧಾನೋ ವಾ ಇತ್ಯಾದಿ ಶ್ಲೋಕಗಳು, ಕೈವಲ್ಯಸಾರದಲ್ಲಿ ಅನಾದಿಮಲಸಂಬಂಧಾತ್ ಮುಂತಾದ ಶ್ಲೋಕಗಳು ಕಿರಣಾಗಮದಿಂದ ಉಲ್ಲೇಖಿಸಲ್ಪಟ್ಟಿವೆ. ವೀರಶೈವ ಗ್ರಂಥಕಾರಿಗೆ ಈ ಆಗಮದ ಪರಿಚಯವಿತ್ತು ಎಂಬುದು ಸ್ಪಷ್ಟವಾಗುತ್ತದೆ.

೧೫) ಮೃಗೇಂದ್ರಾಗಮ : ಮೃಗೇಂದ್ರಾಗಮವು ಕಾಮಿಕಾಗಮದ ಉಪಾಗಮ ಇದಕ್ಕೆ ನೃಸಿಂಹಾಗಮವೆಂದು ಇನ್ನೊಂದು ಹೆಸರು ಅದನ್ನು ದೇವಕೋಟ್ಟೈ ಸಂಘದವರು ೧೯೨೮ ರಲ್ಲಿ ನಾಗರೀಲಿಪಿಯಲ್ಲಿ ಭಟ್ಟ ನಾರಾಯಣಕಂಠ ಮತ್ತು ಅಘೋರ ಶಿವಾಚಾರ್ಯ ವ್ಯಾಖ್ಯಾನಗಳೊಂದಿಗೆ ಪ್ರಕಟಿಸಿದ್ದಾರೆ. ೧೯೩೦ ರಲ್ಲಿ ಮತ್ತೆ ಪಂಡಿತ ಮದುಸೂದನ ಕಾಲಶಾಸ್ತ್ರಿ ಅವರು ಸಂಪಾದಿಸಿ ಭಟ್‌ನಾರಾಯಣ ಕಂಠರ ವ್ಯಾಖ್ಯಾನದೊಂದಿಗೆ ಪ್ರಕಾಶಿತಗೊಳಿಸಿದರು. ೧೯೮೨ ರಲ್ಲಿ ದೆಹಲಿ ಮೆಹರ್‌ಚಂದ್ ಲಚ್ಛಮಣದಾಸ್ ಪ್ರಕಾಶಕರು ಅದರ ಪುನರ್‌ಮುದ್ರಣವನ್ನು ಹೊರತಂದಿದಾರೆ. ಅದರಲ್ಲಿ ವಿದ್ಯಾಪಾದದ ೧೩ ಪಟಲಗಳು ಮತ್ತು ಯೋಗಪಾದದ ೩ ಪಟಲಗಳು ಇವೆ.

ಕ್ರಿ.ಶ. ೧೯೬೨ ರಲ್ಲಿ ಅದರ ಕ್ರಿಯಾಪಾದ (೮ ಪಟಲಗಳು) ಮತ್ತು ಚರ್ಯಾಪಾದ (೧ ಪಟಲ) ಗಳನ್ನು ಪಾಂಡಿಚೇರಿ ಫ್ರೆಂಚ್ ಇನ್‌ಸ್ಟಿಟ್ಯೂಟ್‌ನವರು ಪ್ರಕಟಿಸಿದ್ದಾರೆ. ಅದೇ ಇನ್‌ಸ್ಟಿಟ್ಯೂಟ್‌ನವರು ೧೯೮೦ ರಲ್ಲಿ ಅದರ ಯೋಗಪಾದವನ್ನು ಸಂಸ್ಕೃತ ವ್ಯಾಖ್ಯಾನ (ನಾರಾಯಣಕಂಠ) ಮತ್ತು ಫ್ರೆಂಚ್ ಅನುವಾದ ಹಾಗೂ ಆಂಗ್ಲ ಸಾರ ಸಂಗ್ರಹಗಳೊಂದಿಗೆ ಪ್ರಕಟಿಸಿದ್ದಾರೆ. ಮತ್ತೆ ೧೯೮೫ ರಲ್ಲಿ ಅದರ ಚರ್ಯಾಪಾದವನ್ನು ಪ್ರತ್ಯೇಕವಾಗಿ ನಾರಾಯಣ ಕಂಠರ ವ್ಯಾಖ್ಯಾನದೊಂದಿಗೆ ಅವರೇ ಪ್ರಕಟಿಸಿದ್ದಾರೆ.

ಎಂ. ನಾರಾಯಣಸ್ವಾಮಿ ಅಯ್ಯರ್ ಎಂಬುವರು ಈ ಆಗಮದ ವಿದ್ಯಾಪಾದದ ಆಂಗ್ಲ ಭಾಷಾನುವಾದವನ್ನು ೧೯೦೦-೧ ರ ಸಿದ್ಧಾಂತ ದೀಪಿಕೈ ಎಂಬ ನಿಯತ ಕಾಲಿಕೆಯಲ್ಲಿ ಪ್ರಕಟಿಸಿದ್ದಾರೆ. ಕಾಮಿಕಾಗಮದ ಉಪಭೇದವಾದ ಮೃಗೇಂದ್ರಾಗಮದಲ್ಲಿ ಕೂಡ ವಿದ್ಯಾಪಾದ (ಜ್ಞಾನಪಾದ), ಕ್ರಿಯಾಪಾದ, ಯೋಗಪಾದ, ಚರ್ಯಾಪಾದ ಎಂಬ ನಾಲ್ಕು ಪ್ರಕರಣಗಳಿವೆ.

ವಿದ್ಯಾಪಾದದಲ್ಲಿ ೧) ಉಪೋದ್ಘಾತ, ೨) ಪರಮೋಕ್ಷನಿರಾಸ, ೩) ಪತಿಲಕ್ಷಣ ಪರೀಕ್ಷಾ, ೪) ಪತಿಸ್ವರೂಪ ನಿರೂಪಣ, ೫) ಪಂಚಕೃತ, ೬) ಪಶುಲಕ್ಷಣ, ೭) ಪಾಶಲಕ್ಷಣ, ೮) ಕರ್ಮವಿಚಾರ, ೯) ಮಾಯಾಲಕ್ಷಣ, ೧೦) ಕಲಾದಿಯಾರ್ಕ, ೧೧) ಪ್ರತ್ಯಯಾದಿ, ೧೨) ಇಂದ್ರಿಯಾದಿ, ಮತ್ತು ೧೩) ಅಧ್ವಪ್ರಕರಣ ಎಂಬ ಹದಿಮೂರು ಪ್ರಕರಣಗಳಿವೆ. ಯೋಗಪಾದದಲ್ಲಿ ಒಂದು ಪಾದವು ಮಾತ್ರ ದೊರೆತಿದೆ. ಇಲ್ಲಿ ಪ್ರಾಣಾಯಮ ಮೊದಲಾದ ಅಂಗಸಹಿತವಾದ ಯೋಗವು ನಿರೂಪಿತವಾಗಿದೆ.

ಕ್ರಿಯಾಪಾದದಲ್ಲಿ ಎಂಟು ಪಟಲಗಳಿವೆ. ಅವು ಕ್ರಮವಾಗಿ ೧) ಮಂತ್ರೋದ್ಧಾರ ೨) ಸ್ನಾನ ೩) ಅರ್ಚನಾ ೪) ಸಾದ್ಯಪೂಜಾ ೫) ಮುದ್ರಾ ೬) ಅಗ್ನಿಕಾರ್ಯ ೭) ಅಧಿವಾಸ ಮತ್ತು ೮) ದೀಕ್ಷಾವಿಧಿ.

ಚರ್ಯಾಪಾದದಲ್ಲಿ ಒಂದೇ ಪಟಲವಿದೆ. ಅದರಲ್ಲಿ ಶೈವರ ಸಮಯಾಚಾರಗಳು, ಶೈವಭೇದಗಳು, ಅವಾಂತರಭೇದಗಳು, ವ್ರತಗಳು, ಭಿಕ್ಷಾಚರಣ, ಭೋಜನವಿಧಿ, ಸಾಧಕ-ಪುತ್ರಕ-ಆಚಾರ್ಯರ ಆಚಾರ ವಿಶೇಷಗಳು, ಪ್ರಾಯಶ್ಚಿತ್ತ, ವಾರ್ಷಿಕ ಪ್ರಾಯಶ್ಚಿತ್ತ ಪವಿತ್ರವಿಧಿಗಳು ಉಕ್ತವಾಗಿವೆ.

ವೀರಶೈವ ಚಿಂತಾಮಣಿಯಲ್ಲಿ 'ತಮಃ ಶಕ್ತ್ಯಾಧಿಕಾರಸ್ಯ' ಎಂಬ ಶ್ಲೋಕವು ಮೃಗೇಂದ್ರಾಗಮದಿಂದ ಉದಾಹೃತವಾಗಿದೆ. ಇದರಿಂದ ಕ್ರಿ. ಶ. ೧೫ ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ವೀರಶೈವ ಗ್ರಂಥಕಾರರಿಗೆ ಈ ಆಗಮದ ಪರಿಚಯವಿತ್ತು ಎಂದು ಹೇಳಬಹುದು.

೧೬) ಕುಮಾರತಂತ್ರ : ಕುಮಾರತಂತ್ರವು ಲಲಿತಾಗಮದ ಉಪಾಗಮ ೧೯೭೪ ರಲ್ಲಿ ಅದರನ್ನು ದಕ್ಷಿಣಭಾರತ ಅರ್ಚಕರ ಸಂಘವು ನಾಗರೀ ಲಿಪಿಯಲ್ಲಿ ಪ್ರಕಟಿಸಿದೆ. ಅದರಲ್ಲಿ ಕ್ರಿಯಾಪಾದದ ೫೨ ಪಟಲಗಳು ದೊರೆಯುತ್ತವೆ. ಅದು ದೀರ್ಘವಾದ ಉಪಾಗಮ.

೧೭) ಮಾತಂಗ ಪಾರಮೇಶ್ವರಾಗಮ : ಮಾತಂಗ ಪಾರಮೇಶ್ವರಾಗಮವು ಪಾರಮೇಶ್ವರಾಗಮದ ಏಳು ಉಪಾಗಮಗಳಲ್ಲಿ ಒಂದು. ಇದರ ನಾಲ್ಕು ಪಾದಗಳು ಉಪಲಬ್ಧವಾಗಿ ಪ್ರಕಟವಾಗಿವೆ. ಮೊದಲು ೧೯೨೮ ರಲ್ಲಿ ದೇವಕೋಟ್ಟೈ ಶಿವಾಗಮ ಪರಿಪಾಲನ ಸಂಘದವರು ಅದರ ವಿದ್ಯಾಪಾದವನ್ನು ಮಾತ್ರ ಪ್ರಕಾಶಿತಗೊಳಿಸಿದರು (ದೇವನಾಗರಿ ಲಿಪಿಯಲ್ಲಿ). ೧೯೭೭ ರಲ್ಲಿ ಅದೇ ವಿದ್ಯಾಪಾದವನ್ನು ಪಾಂಡಿಚೇರಿ

ಫ್ರೆಂಚ್ ಇನ್‌ಸ್ಟಿಟ್ಯೂಟ್‌ನವರು ಭಟ್ಟರಾಮಕಂಠರ ವ್ಯಾಖ್ಯಾನದೊಂದಿಗೆ ಪ್ರಕಟಿಸಿದರು. ಅದೇ ಇನ್‌ಸ್ಟಿಟ್ಯೂಟ್‌ನವರು ಅದರ ಉಳಿದ ಕ್ರಿಯಾ-ಯೋಗ-ಚರ್ಯಾಪಾದಗಳನ್ನು ಭಟ್ಟರಾಮಕಂಠರ ವ್ಯಾಖ್ಯಾನದೊಂದಿಗೆ ೧೯೮೨ ರಲ್ಲಿ ಪ್ರಕಟಿಸಿದರು.

೧೮) **ಪೌಷ್ಕರಾಗಮ :** ಪೌಷ್ಕರಾಗಮ ಕೂಡ ಪಾರಮೇಶ್ವರಾಗಮದ ಉಪಾಗಮಗಳಲ್ಲಿ ಒಂದು. ಮೊದಲು ಅದರ ಜ್ಞಾನಪಾದವನ್ನು ೧೯೮೧ ರಲ್ಲಿಯೇ ಷಣ್ಮುಖಸುಂದರ ಮುದಲಿಯಾರ್ ಅವರು ಸಂಪಾದಿಸಿ ತಮಿಳು ಭಾಷಾಂತರದೊಂದಿಗೆ ಪ್ರಕಟಿಸಿದ್ದರು. ಅದರಲ್ಲಿ ೯ ಪಟಲಗಳಿವೆ. ಮುಂದೆ ೧೯೨೫ ರಲ್ಲಿ ಆ ಆಗಮವನ್ನು ಅಂಬಲವನ ನವಲರ್ ಎಂಬುವರು ಚಿದಂಬರಂನಲ್ಲಿನ ತಮ್ಮ ಮುದ್ರಣಾಲಯದಲ್ಲಿ ಗ್ರಂಥಲಿಪಿಯಲ್ಲಿ ಪ್ರಕಟಿಸಿದರು. ಅದೇ ಆಗಮದ ವಿದ್ಯಾಪಾದವನ್ನು ಷಣ್ಮುಖಸುಂದರ ಮುದಲಿಯಾರ್ ಅವರು ೧೯೧೮ ರಲ್ಲಿ ಗ್ರಂಥಲಿಪಿಯಲ್ಲಿ ಹೊರತಂದರು. ಅದೇ ವಿದ್ಯಾಪಾದವನ್ನು ಕಲ್ಕತ್ತಾ ಆರ್ಥರ್ ಎವಲೋನ್ ತಾಂತ್ರಿಕ ಗ್ರಂಥಮಾಲೆಯಲ್ಲಿ ಪ್ರಕಟಿಸಲಾಯಿತು.

ಈ ಪೌಷ್ಕರಾಗಮಕ್ಕೆ ಸೇರಿದ "ಈಶ ತತ್ಪುರುಷಾಘೋರ" ಇತ್ಯಾದಿ ಶ್ಲೋಕವು ವೀರಶೈವ ಚಿಂತಾಮಣಿಯಲ್ಲಿ ಉಲ್ಲೇಖಿಸಲ್ಪಟ್ಟಿದೆ.

೧೯) **ವಾತುಲಶುದ್ಧಾಗಮ :** ವಾತುಲಶುದ್ಧಾಗಮವು ವಾತುಲಾಗಮದ ಉಪಾಗಮಗಳಲ್ಲಿ ಒಂದು. ಅದನ್ನು ೧೯೧೨ ರಲ್ಲಿ ಶಿವಜ್ಞಾನ ಬೋಧಂ ಮುದ್ರಣಾಲಯ ದಿಂದ ಗ್ರಂಥ ಲಿಪಿಯಲ್ಲಿ ಪ್ರಕಟಿಸಲಾಗಿತ್ತು. ಅದರಲ್ಲಿ ೧೦ ಪಟಲಗಳಿವೆ. ಅದರ ಸಂಪಾದಕರು ಅಳಗಪ್ಪ ಮುದಲಿಯಾರ್ ಅವರು. ಅದರಲ್ಲಿ ಮಂತ್ರಕೀಲ ಪಟಲವೊಂದು ಅನುಬಂಧದ ರೂಪದಲ್ಲಿ ಸೇರಿಸಲ್ಪಟ್ಟಿದೆ. ೧೯೫೮ ರಲ್ಲಿ ಬೆಂಗಳೂರಿನ ತಲಕಾಡು ಕೃಷ್ಣಶಾಸ್ತ್ರೀಗಳು ನಾಗರೀ ಲಿಪಿಯಲ್ಲಿ ಅದನ್ನು ಪ್ರಕಟಿಸಿದ್ದಾರೆ. ಅದಕ್ಕೂ ಮೊದಲು ಶಂಕರಪ್ಪ ಅಚ್ಚಪ್ಪ ಟೊಪಿಗಿ ಅವರು ಮೈಸೂರ ಕ್ರೌನ್ ಪ್ರೆಸ್‌ನಲ್ಲಿ ೧೯೧೪ ರಲ್ಲಿಯೇ ಕನ್ನಡ ಲಿಪಿಯಲ್ಲಿ ಅದನ್ನು ಪ್ರಕಟಿಸಿದ್ದರು. ಅವರ ತಂತ್ರ ಸಂಗ್ರಹದಲ್ಲಿ ಇದು ಒಂದು ಭಾಗ. ಮೈಸೂರು ಪ್ರಾಚ್ಯ ಸಂಶೋಧನ ಸಂಸ್ಥೆಯಿಂದ ವಾತುಲಶುದ್ಧವು ಎರಡು ಭಾಗಗಳಲ್ಲಿ ಯೋಜಿಸಲ್ಪಟ್ಟು ಎರಡನೇ ಭಾಗವು ಮಾತ್ರ ೧೯೮೩ ರಲ್ಲಿ ಪ್ರಕಟವಾಗಿದೆ. ಅದರಲ್ಲಿ ೧೦ ಪಟಲಗಳಲ್ಲಿನ ಕಡೆಯ ನಾಲ್ಕು ಮಾತ್ರಬಂದಿವೆ. ಜೊತೆಗೆ ೧೧ ಅನುಬಂಧಗಳು ಅದರಲ್ಲಿ ಸೇರಿಸಲ್ಪಟ್ಟಿವೆ. ಮೊದಲನೆ ಭಾಗವಿನ್ನೂ ಹೊರಬಂದಿಲ್ಲ. ಆದರೆ ೧೯೮೮ರಲ್ಲಿ ಅದೇ ಸಂಸ್ಥೆಯು ಕನ್ನಡ ಲಿಪಿಯಲ್ಲಿ ಕನ್ನಡ ಭಾವಾನುವಾದದೊಂದಿಗೆ ವಾತುಲಶುದ್ಧದ ಎಲ್ಲಾ ೧೦ ಪಟಲಗಳನ್ನು ೧೧ ಅನುಬಂಧಗಳನ್ನೂ ಪ್ರಕಟಿಸಿದೆ. ಧರ್ಮಶಿರೋಮಣಿಯಲ್ಲಿ 'ಭುಕ್ತಿ ಮುಕ್ತಿ ಪ್ರದಂಚೈವ' ಎಂಬ ಶ್ಲೋಕವು ವಾತುಲಶುದ್ಧದಿಂದ ಉದಾಹೃತವಾಗಿದೆ.

ವಾತುಲ ಶುದ್ಧಾಖ್ಯದ ಪ್ರಥಮ ಪಟಲದಲ್ಲಿ ಶಿವತತ್ವದ ಶಿವ, ಸದಾಶಿವ, ಮತ್ತು ಮಹೇಶ ಎಂಬ ವಿಧಗಳನ್ನು, ಲಕ್ಷಣಗಳನ್ನು, ಶಿವಸೃಷ್ಟಿಯ ಬಗೆಯನ್ನು,

ಸಾದಾಖ್ಯಗಳ ಸ್ವರೂಪವನ್ನು, ಶಕ್ತಿ ಉತ್ಪತ್ತಿಯನ್ನು ಮತ್ತು ಶಕ್ತಿಯ ಕಲೆಗಳನ್ನು, ಅಂಗ, ಪ್ರತ್ಯಂಗ, ಸಾಂಗ ಮತ್ತು ಉಪಾಂಗಗಳನ್ನು ತಿಳಿಸಿದೆ.

ದ್ವಿತೀಯ ವರ್ಣಭೇದ ಎಂಬ ಪಟಲದಲ್ಲಿ ವರ್ಣಗಳು, ವರ್ಣಗಳ ಉದ್ಭವ ವರ್ಣಗಳ ವಿಧ, ಲಕ್ಷಣ, ನಾಮ, ರೂಪ, ಅಂಶ, ತತ್ವ, ಮಂತ್ರಾದಿ ಭೇದ, ಆದಿದೈವ, ಫಲ, ಸ್ಥೂಲ, ಜೀವ, ಉಪಾಧಿ ವಿಭೇದ, ಮತ್ತು ಅಕ್ಷರೋಚ್ಚಾರಣೆ, ಫಲವನ್ನು ವಿವರಿಸಲಾಗಿದೆ. ಚಕ್ರಭೇದವೆಂಬ ತೃತೀಯ ಪಟಲದಲ್ಲಿ ಮಂತ್ರಗಳು ಸುಖವಾಗಿ, ಬೋಧವಾಗುವುದಕ್ಕಾಗಿ, ಚಕ್ರರೂಪವು ಉಕ್ತವಾಗಿದೆ ಎಂದು ಹೇಳಿ ಚಕ್ರವು ಸರ್ವದೇವತಾಮಯ, ಸರ್ವ ವರ್ಣಾತ್ಮಕ, ಸಾಕ್ಷಾತ್ ಶಿವಜ್ಞಾನ ಸ್ವರೂಪವಾಗಿದ್ದು ಅದನ್ನು ಶುದ್ಧ ಪ್ರದೇಶದಲ್ಲಿ ಉದ್ಧರಿಸಬೇಕೆಂದು ತಿಳಿಸಲಾಗಿದೆ.

ಚಕ್ರದ ವರ್ಣನ್ಯಾಸಕ್ರಮ ತಿಳಿಸಲಾಗಿದ್ದು 'ಕರ್ಣಿಕಾ ಮಧ್ಯದಲ್ಲಿ ಶಿವಬೀಜ, ಪೂರ್ವಪತ್ರದಲ್ಲಿ ಬಿಂದು, ದಕ್ಷಿಣದಲ್ಲಿ ಆತ್ಮಬೀಜ, ಪಶ್ಚಿಮದಲ್ಲಿ ನಾದ, ಉತ್ತರದಲ್ಲಿ ವಿದ್ಯಾಬೀಜ ನ್ಯಾಸಮಾಡಬೇಕು, ಅದರ ಬಾಹ್ಯ ದಳಗಳಲ್ಲಿ ವರ್ಣವಿನ್ಯಾಸ ಮಾಡಬೇಕು. ಇದು ಚಕ್ರರಹಸ್ಯ' ಎಂದು ಹೇಳಿ ಚಕ್ರ ಧಾರಣದ ಫಲವನ್ನು ನಿರೂಪಿಸಲಾಗಿದೆ. ವರ್ಗಭೇದವೆಂಬ ಮೂರು ವಿಧಗಳನ್ನು ಹಾಗೂ ಸ್ಥಿತಿ ಭೇದವೆಂಬ ಮೂರು ವಿಧಗಳನ್ನು ತಿಳಿಸಿ ಅವುಗಳಲ್ಲಿಯ ಸಾತ್ವಿಕ, ರಾಜಸ ಮತ್ತು ತಾಮಸ ಎಂಬ ಮೂರು ವರ್ಣಗಳನ್ನು ತಿಳಿಸಲಾಗಿದೆ.

ಮಂತ್ರ ಭೇದವೆಂಬ ಐದನೆಯ ಪಟಲದಲ್ಲಿ ಸದಾಶಿವ ಮಂತ್ರಗಳು, ಶಕ್ತಿ ಬೀಜ ಮಂತ್ರಗಳು ಪ್ರಾಸಾದ ಮಂತ್ರ ಸ್ವರೂಪ ಮತ್ತು ಪ್ರಾಸಾದ ಶಬ್ದಾರ್ಥಗಳ ಬಗ್ಗೆ ವಿವರಿಸಲಾಗಿದೆ.

ಪ್ರಣವ ಭೇದ ಪಟಲದಲ್ಲಿ ಶಿವನ ಪಂಚ ಮುಖಗಳಿಂದ ಉದ್ಧೃತವಾದ ಸಾಕಲ್ಯ, ಶಾಂಭವ, ಸೌಖ್ಯ, ಶ್ಯಾಮಸ್ಯ ಮತ್ತು ಸಾವಿಜ್ಯ ಎಂಬ ೫ ವಿಧಗಳನ್ನು ತಿಳಿಸಿದೆ. ಆಯಾ ವಿಧಗಳ ಉತ್ಪತ್ತಿ ವರ್ಣಗಳು, ದೇವತೆಯನ್ನು ವಿವರಿಸಲಾಗಿದೆ.

ಬ್ರಹ್ಮಭೇದವೆಂಬ ಸಪ್ತಮ ಪಟಲದಲ್ಲಿ ಮೂರ್ತಿ ಬ್ರಹ್ಮ, ತತ್ಮ ಬ್ರಹ್ಮ, ಭೂತ ಬ್ರಹ್ಮ, ಪಿಂಡಬ್ರಹ್ಮ, ಕಲಾ ಬ್ರಹ್ಮ ಎಂಬ ೫ ಬಗೆಗಳನ್ನು ಮತ್ತು ೩೮ ಕಲೆಗಳನ್ನು, ಪಂಚ ಬ್ರಹ್ಮ ಸ್ವರೂಪವನ್ನು ತಿಳಿಸಿದೆ.

ಅಂಗಭೇದವೆಂಬ ಅಷ್ಟಮ ಪಟಲದಲ್ಲಿ ಶಿವಾಂಗ, ಭೂತಾಂಗ, ಕೂಟಾಂಗ, ವಿದ್ಯಾಂಗ, ಶಕ್ತ್ಯಂಗ ಮತ್ತು ಸಾಮಾನ್ಯಾಂಗ ಎಂದು ಆರು ವಿಧಗಳನ್ನು ಮತ್ತೆ ಅವುಗಳ ಆರಾರು ವಿಧಗಳನ್ನು ವಿವರಿಸಲಾಗಿದೆ.

ಮಂತ್ರಜಾತ ಎಂಬ ನವಮ ಪಟಲದಲ್ಲಿ ಸಪ್ತಕೋಟಿ ಮಹಾಮಂತ್ರಯುಕ್ತವಾದ ಲಿಂಗದ ಸ್ವರೂಪವನ್ನು ಚಿತ್ರಿಸಲಾಗಿದೆ. ಮಂತ್ರದ ಸ್ವರೂಪ, ಮಂತ್ರ ವಾಸ, ಮಂತ್ರ ವಾಹನ ಹೀಗೆ ೯೦ ಮಂತ್ರಜಾತ ಲಕ್ಷಣಗಳನ್ನು ಹೇಳಲಾಗಿದೆ.

ಮಂತ್ರ ಕೀಲ ಪಟಲವೆಂಬ ೧೦ ನೇ ಪಟಲದಲ್ಲಿ ಶೈವಪ್ರಭೇದಗಳು ವೀರಶೈವದ ಸಾಮಾನ್ಯ ಲಕ್ಷಣಗಳ ಮತ್ತು ವಿಧಾನಗಳನ್ನು ವಿವರಿಸಲಾಗಿದೆ.

ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯು ಪ್ರಕಟಿಸುತ್ತಿರುವ ವಾತುಲ ಶುದ್ಧಾಗಮ ಪ್ರತಿಯ ಸರ್ವಪ್ರಾಯಶ್ಚಿತ ಪಟಲ ಅನುಬಂಧದಲ್ಲಿ ಸರ್ವಪ್ರಾಯಶ್ಚಿತ್ತ ಪಟಲ, ಪುಣ್ಯಾಹವಿಧಿ, ಪಂಚಗವ್ಯವಿಧಿ, ಚರ್ಯಾಪಾದ, ಶಿವೋತ್ಸವವಿಧಿ, ಶಿವಲಿಂಗ ಪ್ರತಿಷ್ಠಾವಿಧಿ, ಏಕರಾತ್ರ ವಿಧಿ, ತ್ರಿರಾತ್ರ ವಿಧಿ, ಪಂಚರಾತ್ರವಿಧಿ, ಸಪ್ತರಾತ್ರವಿಧಿಗಳ ವರ್ಣನೆ ಇದೆ.

೨೦) ಸಾರ್ಧ– ತ್ರಿಶತಿ – ಕಾಲೋತ್ತರಾಗಮ : ಕಾಲೋತ್ತರಾಗಮವು ವಾತುಲಾಗಮದ ಕಾಲಜ್ಞಾನವೆಂದು ಕರೆಯಲಾಗುವ ಒಂದು ಉಪಾಗಮ. ಅದರ ಅನೇಕ ಆವೃತ್ತಿಗಳಲ್ಲಿ ೩೫೦ ಶ್ಲೋಕಗಳುಳ್ಳ ಒಂದು ಆವೃತ್ತಿಯನ್ನು ೧೯೭೯ ರಲ್ಲಿ ಪಾಂಡಿಚೇರಿಯ ಫ್ರೆಂಚ್ ಇನ್‌ಸ್ಟಿಟ್ಯೂಟ್‌ನವರು ಭಟ್ಟರಾಮಕಂಠರ ಸಂಸ್ಕೃತ ವ್ಯಾಖ್ಯಾನದೊಂದಿಗೆ ಪ್ರಕಟಿಸಿದ್ದಾರೆ. ಅದರಲ್ಲಿ ೨೭ ಪಟಲಗಳಿವೆ.

೨೧) ದೇವೀಕಾಲೋತ್ತರಾಗಮ : ದೇವೀಕಾಲೋತ್ತರಾಗಮವು ಕೂಡ ಒಂದು ಉಪಾಗಮ. ಅದಕ್ಕೆ ಸೇರಿದ ಜ್ಞಾನಾಚಾರಬೋಧಕವೆಂಬ ಒಂದು ಪಟಲವು ಮಾತ್ರ ಪ್ರಕಟವಾಗಿದೆ. ೧೯೧೧ ರಲ್ಲಿ ಎನ್. ಆರ್. ಕರಿಬಸವಶಾಸ್ತ್ರಿಗಳು ಅದನ್ನು ಎಳಂದೂರು ಶಾಸ್ತ್ರಿ ಸುಬ್ಬಣ್ಣನವರು ನೀಡಿದ ಹಸ್ತಪ್ರತಿಯ ಆಧಾರದ ಮೇಲೆ ಶ್ರೀ ಪರ್ವತೇಶ ಕೃತ ಕನ್ನಡ ಟೀಕೆಯೊಂದಿಗೆ ಪ್ರಕಟಿಸಿದರು. ಅದನ್ನೇ ೧೯೧೪ ರಲ್ಲಿ ಶಂಕರಪ್ಪ ಅಚ್ಚಪ್ಪ ಟೊಪಗಿ ಅವರು ತಮ್ಮ ತಂತ್ರಸಂಗ್ರಹದ ಭಾಗವಾಗಿ ಕನ್ನಡ ಲಿಪಿಯಲ್ಲಿ ಪ್ರಕಟಿಸಿದರು. ವೀರಶೈವಾಚಾರ ಪ್ರದೀಪಿಕೆಯಲ್ಲಿ ವಾರುಣಂ 'ವಾರಿಣಾ ಸ್ನಾನಂ' ಶ್ಲೋಕವೂ ಕೈವಲ್ಯಸಾರದಲ್ಲಿ 'ಅಹಮೇಕೋನ ಮೇ ಕಶ್ಚಿತ್' ಎಂಬ ಶ್ಲೋಕವೂ ದೇವೀಕಾಲೋತ್ತರ ದಿಂದ ಉಲ್ಲೇಖಿಸಲ್ಪಟ್ಟಿವೆ. ಈ ಉಲ್ಲೇಖಗಳಿಂದ ಈ ಆಗಮವು ಕ್ರಿ. ಶ. ೧೩ ನೇ ಶತಮಾನಕ್ಕಿಂತ ಪೂರ್ವದಿಂದಲೂ ವೀರಶೈವ ಗ್ರಂಥಕಾರರಿಗೆ ಪರಿಚಿತವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ದೇವಿಕಾಲೋತ್ತರಾಗಮದಲ್ಲಿ ಜ್ಞಾನ ಮತ್ತು ಆಚಾರದ ಕುರಿತು ಪಾರ್ವತಿಯು ಕೇಳುವ ಪ್ರಶ್ನೆಗಳಿಗೆ ಶಿವನು ಮೋಕ್ಷಸಾಧನೆಗೆ ಜ್ಞಾನ ಮತ್ತು ಆಚಾರಗಳು ಅಗತ್ಯವೆಂದು ಬೋಧಿಸುತ್ತಾನೆ. ಕಾಲಜ್ಞಾನದಿಂದಲೇ ಮೋಕ್ಷವು ಪ್ರಾಪ್ತಿಯಾಗುವುದು ಎಂದು ತಿಳಿಸಿ ಕಾಲೋತ್ತರಜ್ಞಾನಕ್ಕೆ ಅಧಿಕಾರಿಗಳು ಮತ್ತು ಅದರ ಮಹಿಮೆಯನ್ನು ವಿವರಿಸುತ್ತಾನೆ. ಚಂಚಲ ಚಿತ್ತದ ನಿಯಂತ್ರಕ್ಕಾಗಿ ಕೈಕೊಳ್ಳುವ ಉಪಾಯಗಳನ್ನು ತಿಳಿಸುತ್ತಾ ಚಂಚಲ ಚಿತ್ತದ ನಿಯಂತ್ರಣವೇ ಮೋಕ್ಷಕ್ಕೆ ಪ್ರಮುಖ ಸಾಧನವೆಂದು ಅರಹುತ್ತಾನೆ. ಚೈತನ್ಯದ ಎರಡು ಸ್ಥಿತಿಗಳನ್ನು ವಿವರಿಸಿ ನಿಷ್ಕಲಧ್ಯಾನದ ಪರಯೋಗ ಪ್ರವರ್ತಕತೆ, ಪರಯೋಗದಲ್ಲಿ ಚಕ್ರಗಳ ಜ್ಞಾನದ ಅನುಪಯೋಗ. ನಿರಾಕಾರ ನಿರಾಲೋಕ ನಿರಾಲಂಬ ಸ್ವರೂಪದ ಚಿಂತನೆ ಹಾಗೂ ಜೀವನ ಮುಕ್ತಿಗಾಗಿ ಮಹಾಶೂನ್ಯ ಮನೋಭಾವನೆಯ

ಉಪದೇಶವನ್ನು ಮಾಡಲಾಗಿದೆ. ಜ್ಞಾನದ ಉತ್ಪತ್ತಿಯಲ್ಲಿ ಕ್ರಿಯೆ ಮತ್ತು ಚರ್ಯೆಯ ಅಪೇಕ್ಷೆ ಹಾಗೂ ನಿರಾಲಂಬ ಯೋಗದ ಪ್ರಾಮುಖ್ಯತೆ, ಚೈತನ್ಯದ ಸಹಜ ಸ್ವರೂಪ, ಚಿತ್ತವನ್ನು ಚೈತನ್ಯದಲ್ಲಿ ವಿಲೀನಗೊಳಿಸುವ ಅಪೇಕ್ಷೆಯ ವಿವರಣೆ, ಮನಸ್ಸಿನ ನಾಲ್ಕು ವಿಧದ ಅವಸ್ಥೆಗಳು ಹಾಗೂ ಮನಸ್ಸಿನ ವಾಸ್ತವಿಕ ಸ್ವರೂಪದ ಬೋಧನೆಯನ್ನು ಮಾಡಲಾಗಿದೆ. ಸಾಲಂಬನ ಮನಸ್ಸನ್ನು ನಿರಾಲಂಬದಲ್ಲಿ ಲೀನಗೊಳಿಸುವ ಬಗೆಯನ್ನು ವಿವರಿಸುತ್ತ ಮನಸ್ಸನ್ನು ನಿಶ್ಚಲ ಸ್ಥಿತಿಗೆ ತರುವ ಉಪಾಯಗಳನ್ನು ವಿವರಿಸಲಾಗಿದೆ. ಶೂನ್ಯಸ್ವರೂಪದ ಪರಮತತ್ವ ಧ್ಯಾನದಿಂದ ಪರಮಸ್ಥಾನ ಪ್ರಾಪ್ತಿಯಾಗುವದೆಂದು ವಿವರಿಸಲಾಗಿದೆ. ಜೀವನಮುಕ್ತನಾದ ಯೋಗಿಯ ಸ್ವರೂಪವನ್ನು ವಿವರಿಸುತ್ತಾ ವೈರಾಗ್ಯದ ಅನಪೇಕ್ಷತೆಯನ್ನು ವಿವರಿಸಲಾಗಿದೆ. ಸರ್ವತ್ರ ಅಹಂ ಭಾವನೆಯನ್ನು ಅಪೇಕ್ಷಿಸುತ್ತಾ ಜೀವನಮುಕ್ತಯೋಗಿಯ ಬ್ರಹ್ಮಮಯ ಸ್ಥಿತಿಯನ್ನು ವಿವರಿಸಲಾಗಿದೆ. ಜೀವನಮುಕ್ತಿಯ ನಿಷ್ಪ್ರಪಂಚ ನಿರ್ವಾಣ ಪದವಿಯಲ್ಲಿ ಪ್ರವೇಶಿಸುವ ವಿಧಾನವನ್ನು ವಿವರಿಸಲಾಗಿದೆ. ಬಾಹ್ಯಸ್ನಾನ, ಪೂಜೆ, ಅಗ್ನಿಕಾರ್ಯಗಳ ನಿಷೇಧ ಹಾಗೂ ಕುಲಾಚಾರ, ಲೋಕಾಚಾರ, ಸಮಯಾಚಾರಗಳ ನಿಷೇಧವನ್ನು ವಿವರಿಸಲಾಗಿದೆ. ಸಿದ್ಧಿಪ್ರಾಪ್ತಿಯ ಮನೋವೃತ್ತಿಯ ನಿರಪೇಕ್ಷತೆ ಹಾಗೂ ಕ್ರೀಮಿಕೀಟ ಮುಂತಾದವುಗಳ ಹಿಂಸೆಯ ನಿಷೇಧ, ಮಾರಣ–ಉಚ್ಚಾಟಣ ಮುಂತಾದ ಕ್ಷುದ್ರಕೃತ್ಯಗಳ ಪರಿತ್ಯಾಗ ಹಾಗೂ ಕಾಷ್ಟ–ಪಾಷಾಣ ಪೂಜೆಗಳನ್ನು ನಿಷೇಧಿಸಲಾಗಿದೆ. ಎಲ್ಲರನ್ನೂ ಎಲ್ಲ ಸ್ಥಿತಿಯಲ್ಲಿಯೂ ಸಮದೃಷ್ಟಿಯಿಂದ ಕಾಣಬೇಕೆಂದು ವಿವರಿಸಲಾಗಿದೆ. ಜೀವನ್ಮುಕ್ತ ಸಾಧಕನ ಸರ್ವಜ್ಞತ್ವವನ್ನು ವಿವರಿಸಲಾಗಿದೆ. ಹಾಗೂ ಮೋಕ್ಷಪ್ರಾಪ್ತಿಗಾಗಿ ಜ್ಞಾನದ ಪ್ರಧಾನತೆಯನ್ನು ವರ್ಣಿಸಲಾಗಿದೆ. ಇಂತಹ ಜೀವನ್ಮುಕ್ತ ಶಿವಯೋಗಿಯ ಸೇವೆಯ ಫಲವನ್ನು ವಿವರಿಸಲಾಗಿದೆ.

೨೨) ಪಾಶುಪತಾಗಮ : ಪಾಶುಪತಾಗಮವು ಮಹಾವೀರಶೈವಾಗಮವೆಂದು ಕರೆಯಲ್ಪಟ್ಟಿದೆ. ಅದರ ಎರಡು ಪಟಲಗಳನ್ನು ಮಾತ್ರ ಎಂ. ಜಿ. ನಂಜುಂಡಾರಾಧ್ಯರು ಶಿವಾಗಮ ಸೌರಭವೆಂಬ ಗ್ರಂಥದಲ್ಲಿ ಅನುಬಂಧದ ರೂಪದಲ್ಲಿ ಪ್ರಕಟಿಸಿದ್ದಾರೆ. ಅದರ ಎರಡನೇ ಪಟಲದ ಕೊನೆಯಲ್ಲಿ ಇತಿ ಶ್ರೀ ಮನ್ಮಹಾಪಾಶುಪತ ವೀರಶೈವಾಗಮೇ ಏಕಾಶೀತಿರಧ್ಯಾಯಃ ಎಂದು ಹೇಳಿರುವುದನ್ನು ನೋಡಿದರೆ ಅದರಲ್ಲಿ ೮೧ ರಷ್ಟು ಅಥವಾ ಇನ್ನೂ ಹೆಚ್ಚು ಅಧ್ಯಾಯಗಳು ಇದ್ದಿರಬಹುದೆಂದು ತಿಳಿದುಬರುತ್ತದೆ. ಉಪಲಬ್ಧವಾಗಿರುವುದು ಅದರ ಸ್ವಲ್ಪ ಭಾಗ ಮಾತ್ರ.

ಮೊದಲನೆಯ ಪಟಲದಲ್ಲಿ ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅನಂತರಶೈವ, ಪ್ರವರಶೈವ ಮತ್ತು ವೀರಶೈವ ಎಂಬ ಏಳು ಶೈವ ಭೇದಗಳ ಲಕ್ಷಣಗಳು ಮತ್ತು ವೀರಶೈವದ ಸಾಮಾನ್ಯ, ಶುದ್ಧ, ವಿಶೇಷ ಮತ್ತು ನಿರಾಭಾರಿಯೆಂಬ ನಾಲ್ಕು ಬಗೆಗಳ ವಿಶಿಷ್ಟ ಲಕ್ಷಣಗಳನ್ನು ವಿವರಿಸಲಾಗಿದೆ.

ಎರಡನೆಯ ಪಟಲದಲ್ಲಿ ತನ್ನ ಪಂಚಮುಖಗಳಿಂದ ಉದ್ಭವಿಸಿ ಪಂಚಾಚಾರ್ಯರಾಗಿ ಅವತರಿಸಿದ ಗಣಾಧೀಶ್ವರರ ವಿಷಯವನ್ನು ಹೇಳಲು ಹೊರಟ

ಪರಮೇಶ್ವರನು ಮೊದಲು ಆಗಮ ಪ್ರಭೇದಗಳನ್ನು ಹೇಳುತ್ತಾನೆ. ಇಪ್ಪತ್ತೆಂಟು ಶೈವಾಗಮಗಳಲ್ಲಿ ೧೮ ಸಾತ್ತ್ವಿಕ, ಉಳಿದ ೧೦ ತಾಮಸ; ಸಾತ್ವಿಕ ೧೮ ಆಗಮಗಳು ಶ್ರುತಿ ಸಮ್ಮತವಾದವುಗಳು. ಉಳಿದ ೧೦ ತಾಮಸ ಆಗಮಗಳು ವೇದಾರ್ಥ ವಿರೋಧಿಗಳು. ಇವು ಕಾಮಿಕ, ಯೋಗಜ, ಚಿಂತ್ಯ(ಅಚಿಂತ್ಯ), ಕಿರಣ, ಅಜಿತ, ಸೂಕ್ಷ್ಮ, ಸಹಸ್ರ, ಅಂಶುಮಾನ್, ಸುಪ್ರಭೇದ, ವಿಜಯ, ನಿಃಶ್ವಾಸ, ಸ್ವಾಯಂಭುವ, ಪಾರಮೇಶ್ವರ, ಕಾರಣ, ವೀರ, ಭೀಮ, ಮಕುಟ ಮತ್ತು ವಾತುಲ –ಇವು ಸಾತ್ತ್ವಿಕ ಆಗಮಗಳೆಂದೂ, ಗರುಡ, ದಕ್ಷಿಣ, ಭೂತ, ಬೌದ್ಧ, ಜಿನ, ಭೈರವ, ಪಾಶ, ಪಶು, ಪತಿ ಮತ್ತು ಅಸುರ–ಇವು ತಾಮಸಾಗಮಗಳೆಂದು ತಿಳಿಸಲಾಗಿದೆ. ಮೇಲೆ ಹೇಳಿದ ಹದಿನೆಂಟು ಆಗಮಗಳನ್ನು ಪರಮೇಶ್ವರನು ಪಂಚಾಚಾರ್ಯರಿಗೆ ಉಪದೇಶಿಸಿದನು. (ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ತಾಮಸಗಳೆಂಬ ವರ್ಗದಲ್ಲಿ ಹೆಸರಿಸಿದ ಹತ್ತು ಆಗಮಗಳು ಕಾಮಿಕಾದಿ ವಾತುಲಾಂತವೆಂದು ಪರಿಗಣಿಸಿದ ೨೮ ಶೈವಾಗಮಗಳಲ್ಲಿ ಬರುವುದಿಲ್ಲ.) ಅಲ್ಲಿ ಬರುವ ಉಳಿದ ಹತ್ತು ಆಗಮಗಳು ಅನಲ, ರೌರವ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ, ಶರ್ವೋಕ್ತ ಮತ್ತು ಸಂತಾನ. ಈ ಎಲ್ಲಾ ೨೮ ಶೈವಾಗಮಗಳು ಸೇರಿ ಸಿದ್ಧಾಂತವೆನ್ನಿಸಿವೆ. ಅವೆಲ್ಲವೂ ವೀರಶೈವರಿಗೆ ಮಾನ್ಯ, ಪ್ರಮಾಣ. ಚಂದ್ರಜ್ಞಾನಾಗಮ ಉತ್ತರ ಭಾಗವಂತೂ ವೀರಶೈವರ ಅಷ್ಟಾವರಣ ಮತ್ತು ಪಂಚಾಚಾರಗಳ ಬಗ್ಗೆ ವಿವರಗಳನ್ನು ಕೊಡುವ ಏಕಮಾತ್ರ ಉಪಲಬ್ಧ ಶೈವಾಗಮೋತ್ತರ ಭಾಗ. ಪ್ರಸ್ತುತ ಆಗಮದ ೧೮ ಸಾತ್ತ್ವಿಕ ಆಗಮಗಳ ಪಟ್ಟಿಯಲ್ಲಿ ಭೀಮಾಗಮ ಎಂಬುದು ಸಿದ್ಧಾಂತಾಗಮಗಳೆಂದು ಪರಿಗಣಿತವಾದ ೨೮ ರಲ್ಲಿ ಆರನೆಯದಾದ ದೀಪ್ತಾಗಮದ ಸ್ಥಾನವನ್ನು ಆಕ್ರಮಿಸಿದೆ.

ಸ್ವಾಮಿ, ವೇದಗಳು ಎಲ್ಲಿ ಉದಿಸಿದವು? ಈ ಆಗಮಗಳು ಹೇಗೆ ಸಂಭವಿಸಿದವು? ಮಾನವರಿಗೆ ವೇದೋಕ್ತ ಕರ್ಮಮಾರ್ಗದಿಂದ ಮುಕ್ತಿ ಲಭಿಸುವುದೆ? ಅಥವಾ ಆಗಮೋಕ್ತವಾದ ಕ್ರಿಯಾನುಷ್ಠಾನದಿಂದ ಮುಕ್ತಿಯೇ? ಇನ್ನು ವೇದಗಳನ್ನು ಬಿಟ್ಟು ಆಗಮಗಳನ್ನು ಏಕೆ ಆಶ್ರಯಿಸಬೇಕು? ಎಂಬ ದೇವಿಯ ಪ್ರಶ್ನೆಗಳಿಗೆ ಶಿವನು ಹೀಗೆ ಉತ್ತರಿಸಿದ –ಶೀಘ್ರವಾಗಿ ಮುಕ್ತಿಯನ್ನು ಕೊಡುವ ಮಾರ್ಗವನ್ನು ಹೇಳುತ್ತೇನೆ ಕೇಳು. ವೇದಗಳು ನಾಸಿಕ(ಮೂಗು)ದ ಸಹಾಯದಿಂದ ಉಚ್ಚರಿಸಲ್ಪಟ್ಟಿವೆ. 'ಯಸ್ಯ ನಿಃಶ್ವತಂ ವೇದಾಃ' ಎಂಬ ಶ್ರುತಿ ಈ ಅಂಶವನ್ನು ಸೂಚಿಸಿದೆ ಎಂದರೆ ಅವು (ವೇದಗಳು) ನನ್ನ ಪ್ರಾಣಾನಿಲ ಸ್ವರೂಪವಾದವುಗಳು. ಇನ್ನು ಇಪ್ಪತ್ತೆಂಟು ಶಿವಾಗಮಗಳು ನನ್ನ ಮುಖದಿಂದ ಆವಿರ್ಭವಿಸಿವೆ. ವೇದಗಳಲ್ಲಿ ಅಧಿಕಾರಿ ತಾರತಮ್ಯದಿಂದ ಮುಕ್ತಿಯು ಉಕ್ತವಾಗಿದೆ. ಆದರೆ ಆಗಮಗಳಲ್ಲಿ ಆ ಬಗೆಯ ಅಂತರ(ವ್ಯತ್ಯಾಸ)ವಿರುವುದಿಲ್ಲ. ಅವುಗಳಲ್ಲಿ ಶೀಘ್ರವಾಗಿ ಮುಕ್ತಿ ಪಡೆಯುವ ಸುಲಭ ಮಾರ್ಗವನ್ನು ಹೇಳಿದೆ.

ಮತ್ತೊಂದು ಪ್ರಶ್ನೆ ಬ್ರಹ್ಮ ವಿಷ್ಣು ಮಾಹೇಶ್ವರರು ನಿತ್ಯ ಸಂಸಾರಿಗಳೆಂದೂ, ನಂದಿ ಭೃಂಗ್ಯಾದಿಗಳು ನಿತ್ಯ ಮುಕ್ತರೆಂದೂ ಹೇಳಿದ್ದೀರಿ! ಈ ವಿಚಾರವನ್ನು ಇನ್ನೂ ವಿಸ್ತಾರವಾಗಿ ಹೇಳಬೇಕು.

ಅದಕ್ಕೆ ಉತ್ತರ: ಒಮ್ಮೆ ವಿಷ್ಣುವಿನಿಂದ ಬ್ರಹ್ಮ, ಅವನಿಂದ ಮಹೇಶ್ವರನು ಜನಿಸಿದನು. ಮತ್ತೊಮ್ಮೆ ಮಹೇಶ್ವರನಿಂದ ವಿಷ್ಣು, ಅವನಿಂದ ಚತುರ್ಮುಖನು ಜನಿಸಿದ. ಮಗದೊಮ್ಮೆ ಚತುರ್ಮುಖನಿಂದ ವಿಷ್ಣು, ಅವನಿಂದ ಮಹೇಶ್ವರನು ಆವಿರ್ಭವಿಸಿದ. ಹೀಗೆ ಒಂದೊಂದು ಪರ್ಯಾಯದಲ್ಲಿ ಒಬ್ಬೊಬ್ಬರಿಂದ ಸೃಷ್ಟಿಯು ಆರಂಭವಾಯಿತು. ಆದ್ದರಿಂದಲೇ ಬ್ರಹ್ಮ ವಿಷ್ಣು ಮಹೇಶ್ವರರು ನಿತ್ಯ ಸಂಸಾರಿಗಳೆನಿಸಿದ್ದಾರೆ. ನಂದಿ, ಭೃಂಗಿ, ವೀರ, ವೃಷಭ ಮತ್ತು ಸ್ಕಂದರು ನನ್ನಿಂದ ಸೃಜಿಸಲ್ಪಟ್ಟರು. ಆದ್ದರಿಂದ ಅವರು ನಿತ್ಯ ಮುಕ್ತರು.

ಅನಂತರ ಪಂಚಾಚಾರ್ಯರ ಉತ್ಪತ್ತಿಯ ಬಗ್ಗೆ ವಿವರಗಳು ಬರುತ್ತವೆ. ಅದರ ವಿವರಗಳು ಇಲ್ಲಿ ಮರುಳಾರಾಧ್ಯ, ಏಕೋರಾಮ, ರೇವಣಾರಾಧ್ಯ, ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯ ಎಂಬ ಕ್ರಮದಲ್ಲಿ ಬರುತ್ತವೆ. ಇದೇ ಕ್ರಮದಲ್ಲಿ ಅವರ ಕೃತ, ತ್ರೇತಾ ಮತ್ತು ದ್ವಾಪರಯುಗಗಳ ಹೆಸರುಗಳೂ ಬರುತ್ತವೆ. ಇದೇ ಕ್ರಮದಲ್ಲಿ ಅವರ ಗೋತ್ರ, ಪ್ರವರ, ವರ್ಣ, ದಂಡ, ಕಮಂಡಲಿನ ಲೋಹ, ಇತ್ಯಾದಿಗಳ ವಿವರಗಳು ಹೇಳಲ್ಪಟ್ಟಿವೆ.

ಇದಾದ ಮೇಲೆ ಕೆಲವು ಪ್ರಶ್ನೆಗಳು ಬರುತ್ತವೆ. ಮೊದಲನೆಯದಾಗಿ, ಒಂದೇ ವೀರಶೈವವು ನಾಲ್ಕು ಬಗೆಯಾದದ್ದು ಹೇಗೆ? ಇವರ ಕರ್ತವ್ಯಗಳೇನು? ಅದಕ್ಕೆ **ಉತ್ತರ**: ಸಾಮಾನ್ಯ, ಶುದ್ಧ, ವಿಶೇಷ ಮತ್ತು ನಿರಾಭಾರ ಎಂಬುವೇ ಆ ನಾಲ್ಕು ವೀರಶೈವದ ಪ್ರಭೇದಗಳು ಎಂದು ತಿಳಿಸುತ್ತದೆ.

ಎರಡನೆಯದಾಗಿ, ಸಾಮಾನ್ಯ ವೀರಶೈವರಿಗೆ ಲಿಂಗದೀಕ್ಷೆ ಕೊಡುವಲ್ಲಿ ಅವರ ಶಿಕ್ಷಣ, ರಕ್ಷಣೆಗಳಿಗೆ ಕರ್ತರು ಯಾರು? ಇವರ ಆಚಾರ್ಯ, ಪ್ರಾಯಶ್ಚಿತ್ತ, ಶುಭ, ಅಶುಭ ವಿಧಿಗಳು ಯಾವವು? ಇವುಗಳಿಗೆ ಪಂಚಪೀಠಾಧಿಪತಿಗಳು ಕರ್ತರೆನಿಸುವರೆ? ಅದಕ್ಕೆ **ಉತ್ತರ**: ಸಾಮಾನ್ಯ ವೀರಶೈವರ ಶಿವದೀಕ್ಷೆ, ಶಿಕ್ಷಣ, ರಕ್ಷಣ ಮುಂತಾದ ಕಾರ್ಯಗಳನ್ನು ನೆರವೇರಿಸುವಲ್ಲಿ ಮೇಲೆ ಹೇಳಿದ ಪಂಚಪೀಠಾಧಿಪತಿಗಳೇ ಅಧಿಕಾರಿಗಳು. ಆದ್ದರಿಂದ ಇವರಿಗೆ ಸಾಭಾರಿಗಳೆಂಬ ಹೆಸರಿದೆ. ನಿರಾಭಾರಿಗಳಿಗೆ ಯದ್ಯಪಿ ಪಂಚಮುದ್ರೆಗಳಿದ್ದರೂ ಕೂಡ ಅವರಿಗೆ ಸಮಾಜದ ಶಿಕ್ಷಣ ರಕ್ಷಣಗಳ ಹೊಣೆಯಿಲ್ಲ, ಹಾಗೆ ಅವರು ಅದನ್ನು ಬಯಸಿದರೆ ಮಹಾದೋಷ ಎಂದು ತಿಳಿಸಿದೆ.

ಅನಂತರ ಪಂಚಕಲಶ ಸ್ಥಾಪನೆಯ ವಿಧಿಯನ್ನು ಹೇಳಲಾಗಿದೆ. ಅದಾದ ಮೇಲೆ ಪಟ್ಟಾಭಿಷೇಕದ ವಿಧಿಯನ್ನು ಹೇಳಿ, ಪಟ್ಟಾಧಿಕಾರಿಗಳಿಗಿಂತ ಶ್ರೇಷ್ಠರು ಯಾರು ಇಲ್ಲ ಎಂಬುದನ್ನು ಬಿಂಬಿಸಲಾಗಿದೆ.

ವೀರಶೈವ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ ಇತರ ಆಗಮಗಳು

ಉಪಲಬ್ಧವಿಲ್ಲದ ಇನ್ನೂ ಹಲವಾರು ಆಗಮಗಳ ಉಲ್ಲೇಖವು ವೀರಶೈವ ಗ್ರಂಥಗಳಲ್ಲಿ ಅಲ್ಲಲ್ಲಿ ಕಂಡು ಬರುತ್ತದೆ. ಆದರೆ ಈವರೆಗೆ ಅವು ಉಪಲಬ್ಧವಿಲ್ಲ.

ಅವುಗಳ ಹೆಸರುಗಳ ಉಲ್ಲೇಖ ಮಾತ್ರ ಗ್ರಂಥಾಂತರಗಳಲ್ಲಿ ದೊರೆಯುತ್ತದೆ. ಶ್ರೀಕರ ಭಾಷ್ಯದಲ್ಲಿ ಶ್ರೀಪತಿ ಪಂಡಿತಾರಾಧ್ಯರು ಸಿದ್ಧಾಂತಾಗಮದ "ಅಕರ ಸ್ಪರ್ಶಯೋಗ್ಯಾಪಿ"[೮೬] ಆಗಮಂ ಶಿವಲಿಂಗಸ್ಯ"[೮೭] "ಆತ್ಮಲಿಂಗಾಯೇತಿ ವಾಕ್ಯೈ"[೮೮] "ಆತ್ಮಶಕ್ತಿ ವಿಕಾಸೇನ"[೮೯] ಮುಂತಾದ ಶ್ಲೋಕಗಳನ್ನು ಆ ಆಗಮದ ಹೆಸರನ್ನು ಉಲ್ಲೇಖಿಸುವುದರ ಜೊತೆಗೆ ಉದಾಹರಿಸಿದ್ದಾರೆ.

ಶ್ರೀ ನೀಲಕಂಠ ಶಿವಾಚಾರ್ಯರು ರಚಿಸಿದ ಕ್ರಿಯಾಸಾರದಲ್ಲಿ ವಾತುಲಾಗಮ, ವಾತುಲೋತ್ತರಾಗಮ ಮತ್ತು ದಿವ್ಯಾಗಮಗಳ ಉಲ್ಲೇಖ ದೊರೆಯುತ್ತದೆ. ವಾತುಲಾಗಮದ "ಅನ್ನಾದ್ಯಮೌಷದಂ ತೋಯಂ"[೯೦] 'ವಾತುಲೋತ್ತರಾಗಮದ ವೇದಾರ್ಥ ಯೇವದೇವೇಶಿ[೯೧]' ದಿವ್ಯಾಗಮದ 'ಅಥ ಲೋಕೋತ್ತರೋದೇವಿ'[೯೨] ಮುಂತಾದ ಆಗಮದ ಉಕ್ತಿಗಳನ್ನು ಆಯಾ ಆಗಮಗಳ ಹೆಸರನ್ನು ಉಲ್ಲೇಖಿಸಲಾಗಿದೆ.

ವೀರಶೈವಾಚಾರ ಪ್ರದೀಪಿಕಾ ಗ್ರಂಥದಲ್ಲಿ ವಾತುಲಾಗಮ ಮತ್ತು ಭೀಮಾಗಮಗಳ ಉಕ್ತಿಗಳು ದೊರೆಯುತ್ತವೆ. ವಾತುಲಾಗಮದ 'ರುದ್ರಏವಸದಾ ಸಾಕ್ಷಾತ್[೯೩]' ಭೀಮಾಗಮದ 'ಸರ್ವತೀರ್ಥೇಷು ಯತ್‌ಪುಣ್ಯ'[೯೪] ಮುಂತಾದ ಉಕ್ತಿಗಳು ಉದ್ಧೃತಗೊಂಡಿವೆ.

ವೀರಶೈವ ಚಿಂತಾಮಣಿಯಲ್ಲಿ ವಾತುಲ, ವಾತುಲೋತ್ತರ ಮತ್ತು ಯೋಗಜಾಗಮಗಳ ಉಲ್ಲೇಖ ದೊರೆಯುತ್ತದೆ. ವಾತುಲಾಗಮದ 'ಪಂಚಮೂರ್ತಿ ಮಯಂ ದೇವಮ್'[೯೫] ವಾತುಲೋತ್ತರಾಗಮದ "ಸನ್ಮಾತ್ರಂ ಭಾವಲಿಂಗಸ್ಯಾತ್"[೯೬] ಯೋಗಜಾಗಮದ 'ಹೃದಯಕಮಲ ಮಧ್ಯೆ'[೯೭] ಎಂಬ ಉಕ್ತಿಗಳು ಉದ್ಧೃತಗೊಂಡಿವೆ.

ವೀರಮಾಹೇಶ್ವರಾಚಾರ ಸಂಗ್ರಹದಲ್ಲಿ ವಾತುಲಾಗಮದ 'ಕೊ ಮಂತ್ರಃ ಸರ್ವ-ಜಾತಿಯಃ'[೯೮] ದಿವ್ಯಾಗಮದ 'ಸಾಷ್ಟಾಷ್ಟಾದ್ವಿಶತಂ ಧಿಮಾನ್'[೯೯] ಉಕ್ತಿಗಳು ಉಲ್ಲೇಖಗೊಂಡಿವೆ.

---

೮೬. ಶ್ರೀಕರಭಾಷ್ಯಂ ಪುಟ ೨೩
೮೭. ಶ್ರೀಕರಭಾಷ್ಯಂ ಪುಟ ೧೯೬
೮೮. ಶ್ರೀಕರಭಾಷ್ಯಂ ಪುಟ ೨೧೨
೮೯. ಶ್ರೀಕರಭಾಷ್ಯಂ ಪುಟ ೪೫
೯೦. ಕ್ರಿಯಾಸಾರ ಭಾಗ ೨ ಪುಟ ೩೩೫
೯೧. ಕ್ರಿಯಾಸಾರ ಭಾಗ ೩ ಪುಟ ೩೩೮
೯೨. ಕ್ರಿಯಾಸಾರ ಭಾಗ ೩ ಪುಟ ೧೦೩
೯೩. ವೀರಶೈವಾವಾಚಾರ ಪ್ರದೀಪಿಕೆ ಪುಟ ೮೮
೯೪. ವೀರಶೈವಾವಾಚಾರ ಪ್ರದೀಪಿಕೆ ಪುಟ ೧೩೦
೯೫. ವೀರಶೈವ ಚಿಂತಾಮಣಿ ಪುಟ ೮೦
೯೬. ವೀರಶೈವ ಚಿಂತಾಮಣಿ ಪುಟ ೯೦
೯೭. ವೀರಶೈವ ಚಿಂತಾಮಣಿ ಪುಟ ೧೮೬
೯೮. ವೀರಮಾಹೇಶ್ವರಾಚಾರ ಸಂಗ್ರಹ ಪುಟ ೮೩
೯೯. ವೀರಮಾಹೇಶ್ವರಾಚಾರ ಸಂಗ್ರಹ ಪುಟ ೫೭

ಅನಾದಿ ವೀರಶೈವಸಾರ ಸಂಗ್ರಹದಲ್ಲಿ ವಾತುಲಾಗಮದ "ನಮಃ ಶಬ್ದಃ ಉಮಾ ಸಾಕ್ಷಾತ್"[೧೦೦] ಉತ್ತರವಾತುಲಾಗಮದ 'ಏಕಮೇವಾದ್ವಿತೀಯಂ ಯತ್'[೧೦೧] ವಿಜಯಾಗಮದ 'ಲಿಂಗಪ್ರಸಾದ ಸಂಕಲಂ'[೧೦೨] ಭೈರವಾಗಮದ 'ಅಣಿಮಾದಿಗುಣಂ ಲಿಂಗಂ'[೧೦೩] ಲಲಿತಾಗಮದ 'ವಿಶ್ವಪ್ರಾಣಮಯಂ ಲಿಂಗಂ'[೧೦೪] ಶಾಕಟಾಗಮದ 'ಆಸನೆ ಶಯನೆಯಾನೆ'[೧೦೫] ವೀರಭದ್ರಾಗಮದ 'ಸಂಯೋಗೇಷು ವಿಯೋಗೇಷು'[೧೦೬], ದೌರ್ಗಾಗಮದ 'ಪತಿವ್ರತಾಸ್ವಭಾವೇನ'[೧೦೭] ಎಂಬ ಉಕ್ತಿಗಳು ಉಲ್ಲೇಖಿಸಲ್ಪಟ್ಟಿವೆ.

ಧರ್ಮಶಿರೋಮಣಿಯಲ್ಲಿ ಯೋಗಜಾಗಮದ 'ಆದಿಮಧ್ಯಾಂತಶೂನ್ಯತ್ವಯ್'[೧೦೮] ವಾತುಲಾಗಮದ 'ಬ್ರಾಹ್ಮಣಃ ಕಥ್ಯತೆ ರುದ್ರಃ'[೧೦೯] ಎಂಬ ಉಕ್ತಿಗಳು ಉಲ್ಲೇಖಿಸಲ್ಪಟ್ಟಿವೆ.

ಕೈವಲ್ಯಸಾರದಲ್ಲಿ ವಾತುಲಾಗಮದ 'ಯಥಾ ಸಾಂಸಾರಿಕೋ ಭಾವೋ'[೧೧೦] ಯೋಗಜಾಗಮಸ್ಯ 'ಯದಾ ಶಿವಾಯ ಸ್ವಾತ್ಮಾನಂ'[೧೧೧] ರುದ್ರಯಾಗಮದ 'ದೃಶ್ಯಜಾತಮ ಶೇಷಂ ಚ'[೧೧೨] ಎಂಬ ಉಕ್ತಿಗಳು ಉಲ್ಲೇಖಿಸಲ್ಪಟ್ಟಿವೆ.

ಹೀಗೆ ವೀರಶೈವ ಗ್ರಂಥಗಳಲ್ಲಿ ವಾತುಲ, ವಾತುಲೋತ್ತರ, ಲಲಿತ, ಯೋಗಜ ಮುಂತಾದ ಪ್ರಧಾನ ಶೈವಾಗಮಗಳಿಂದ ಉಲ್ಲೇಖಗಳು ಕಂಡುಬರುತ್ತವೆ. ಆದರೆ ಅವುಗಳು ಇನ್ನೂ ಮೂಲ ರೂಪದಲ್ಲಿ ಬೆಳಕಿಗೆ ಬಂದಿಲ್ಲ. ಅಲ್ಲದೆ ವಿಜಯಭೈರವ, ಶಾಕಟ, ದಿವ್ಯ, ವೀರಭದ್ರೀಯ, ದೌರ್ಗ, ಸಿದ್ಧಾಂತ, ಬೃಹತ್, ಭೀಮ ಎಂಬ ಹೆಸರಿನ ಆಗಮಗಳಿಂದ ಉಲ್ಲೇಖಗಳಿದ್ದರೂ ಅವುಗಳ ಮೂಲಗ್ರಂಥಗಳು ಉಪಲಬ್ಧ ವಾಗಿಲ್ಲ. ಹಾಗೆಯೇ ಉಪಲಬ್ಧವಾದ ಹಾಗೂ ಪ್ರಕಟಿಸಲ್ಪಟ್ಟ ಆಗಮ-ಉಪಾಗಮಗಳಲ್ಲಿ ಬೇರೆ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ ಎಲ್ಲಾ ಶ್ಲೋಕಗಳು ದೊರೆಯುತ್ತಿಲ್ಲ. ಕಾರಣ ದೊರೆತು ಪ್ರಕಟಿತವಾದ ಆಗಮ-ಉಪಾಗಮಗಳು ಸಮಗ್ರವಾಗಿ ಉಪಲಬ್ಧವಾಗಿಲ್ಲ.

---

೧೦೦. ಅನಾದಿ ವೀರಶೈವ ಸಾರ ಸಂಗ್ರಹಭಾಗ ೧ ಪುಟ ೬

೧೦೧. ಅನಾದಿ ವೀರಶೈವ ಸಾರ ಸಂಗ್ರಹಭಾಗ ೧ ಪುಟ ೧೫

೧೦೨. ಅನಾದಿ ವೀರಶೈವ ಸಾರ ಸಂಗ್ರಹಭಾಗ ೨ ಪುಟ ೧೬

೧೦೩. ಅನಾದಿ ವೀರಶೈವ ಸಾರ ಸಂಗ್ರಹಭಾಗ ೨ ಪುಟ ೬

೧೦೪. ಅನಾದಿ ವೀರಶೈವ ಸಾರ ಸಂಗ್ರಹಭಾಗ ೨ ಪುಟ ೧೦೩

೧೦೫. ಅನಾದಿ ವೀರಶೈವ ಸಾರ ಸಂಗ್ರಹಭಾಗ ೨ ಪುಟ ೧೦೫

೧೦೬. ಅನಾದಿ ವೀರಶೈವ ಸಾರ ಸಂಗ್ರಹಭಾಗ ೨ ಪುಟ ೧೪೯

೧೦೭. ಅನಾದಿ ವೀರಶೈವ ಸಾರ ಸಂಗ್ರಹಭಾಗ ೨ ಪುಟ ೧೨೬

೧೦೮. ಧರ್ಮಶಿರೋಮಣಿ ಪುಟ ೨೪

೧೦೯. ಧರ್ಮಶಿರೋಮಣಿ ಪುಟ ೧೪೩

೧೧೦. ಕೈವಲ್ಯಸಾರ ಪುಟ ೧೧

೧೧೧. ಕೈವಲ್ಯಸಾರ ಪುಟ ೮೧

೧೧೨. ಕೈವಲ್ಯಸಾರ ಪುಟ ೧೦೩

ಒಟ್ಟಿನಲ್ಲಿ ಆಗಮಗಳು ಪರಂಪರೆಯಿಂದ ಪರಿಷ್ಕೃತವಾಗಿ ಸಾಗಿಬಂದ ಜ್ಞಾನರಾಶಿಗಳಾಗಿದ್ದು, ಭಾರತೀಯ ಸಂಸ್ಕೃತಿ ಮತ್ತು ಆತ್ಮಜ್ಞಾನದ ವಿಶ್ವಕೋಶಗಳಾಗಿವೆ.

ಆಗತಂ ಪಂಚವಕ್ತ್ರಾತ್ತು ಗತಂ ಚ ಗಿರಿಜಾನನೇ
ಮತಂ ಚ ವಾಸುದೇವಸ್ಯ ತಸ್ಮಾದಾಗಮ ಉಚ್ಯತೇ

ಈ ನಿರ್ವಚನದಂತೆ ಶಿವನ ಪಂಚಮುಖಗಳಿಂದ ಆಗತ (ಬಂದದ್ದು) ಗಿರಿಜೆಯಲ್ಲಿ 'ಗತ' (ಸ್ವೀಕರಿಸಲ್ಪಟ್ಟಿದ್ದು) 'ಮ' ಕಾರವು ವಾಸುದೇವನಿಗೆ ಸಮ್ಮತವಾದದ್ದೆಂದು ಸೂಚಿಸುತ್ತದೆ. ಕಾರಣ ಆಗಮಗಳೆಂದರೆ ಶಿವನಿಂದ ಪಾರ್ವತಿಗೆ ಬೋಧಿಸಲ್ಪಟ್ಟ ದಿವ್ಯಜ್ಞಾನರಾಶಿಗಳಾಗಿವೆ.

ಸೃಷ್ಟಿಯ ಉಗಮಕಾಲದಲ್ಲಿ ಶಿವನು ಸದಾಶಿವಾದಿ ಸ್ವರೂಪದಲ್ಲಿ ಈ ಅತ್ಯುತ್ತಮ ಜ್ಞಾನವನ್ನು ಪಡೆಯಲರ್ಹರಾದವರನ್ನು ಉದ್ಬೋಧಗೊಳಿಸಿ ಅವರಿಗೆ ತನ್ನ ಸದ್ಯೋಜಾತಾದಿ ಪಂಚಮುಖಗಳಿಂದ ಶಬ್ದರೂಪದಿಂದ ಈ ದಿವ್ಯಜ್ಞಾನವನ್ನು ಬೋಧಿಸುತ್ತಾನೆ. ಹೀಗೆ ಶಿವನಿಂದ ಈ ದಿವ್ಯಜ್ಞಾನವನ್ನು ಪಡೆದ ಜ್ಞಾನಿಗಳು ಅದನ್ನು ತಮ್ಮ ಶಿಷ್ಯರಿಗೆ ಬೋಧಿಸಿದರು, ಅನಂತರ ಈ ಬೋಧ್ಯರೇ ಬೋಧಕರಾಗಿ ತಮ್ಮ ಶಿಷ್ಯರಿಗೆ ಈ ದಿವ್ಯಜ್ಞಾನವನ್ನು ಬೋಧಿಸಿದರು. ಹೀಗೆ ಗುರುಶಿಷ್ಯ ಪರಂಪರೆಯ ಮೂಲಕ ವಾಙ್ಮಯ ರೂಪದಲ್ಲಿ ಪ್ರವಹಿಸಿದ ಈ ಜ್ಞಾನವನ್ನು ಕಾಲಾನಂತರ ಸಿದ್ಧಪುರುಷರು ಗ್ರಾಂಥಿಕರೂಪದಲ್ಲಿ ರಚಿಸಿದರು. ಹೀಗೆ ಪರಂಪರೆಯಿಂದ ಪರಿಷ್ಕೃತವಾಗಿ ಬಂದ ಜ್ಞಾನ ಹಾಗೂ ಅಂತಹ ಜ್ಞಾನವು ಸಂಗ್ರಹಿಸಲ್ಪಟ್ಟಿರುವ ಗ್ರಂಥರಾಶಿಯು ಕೂಡಾ 'ಆಗಮ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ಶಿವಾಗಮ ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿ ಮಾತ್ರವಲ್ಲ ವಿಶ್ವಸಾಹಿತ್ಯದಲ್ಲಿಯೇ ಅತ್ಯಂತ ಬೃಹತ್ತಾದ ಸಾಹಿತ್ಯವಾಗಿದ್ದು, ಅವು ಕಾಮಿಕಾದಿ ವಾತುಲ ಪರ್ಯಂತ ೨೮ ಎಂದು ಪ್ರಸಿದ್ಧವಾಗಿವೆ. ಇವುಗಳಿಗೆ ಶೈವ ಸಿದ್ಧಾಂತ ಸಂಹಿತೆಗಳೆಂಬ ಹೆಸರೂ ಉಂಟು. ಕಾಮಿಕಾದಿ ಸುಪ್ರಭೇದಾಂತಗಳಾದ ಹತ್ತು ಸಂಹಿತೆಗಳನ್ನು ದಶಶಿವರಿಗೆ ಬೋಧಿಸಿದ್ದರಿಂದ ಅವು ಶಿವಸಂಹಿತೆ(ಶಿವಾಗಮ)ಗಳೆಂದು, ವಿಜಯಾದಿವಾತುಲಾಂತಗಳಾದ ಹದಿನೆಂಟು ಸಂಹಿತೆಗಳು ಹದಿನೆಂಟು ಜನ ರುದ್ರರಿಗೆ ಬೋಧಿಸಲ್ಪಟ್ಟುದರಿಂದ ಅವು ರುದ್ರಸಂಹಿತೆ(ರುದ್ರಾಗಮ)ಗಳೆಂದು ಪ್ರಸಿದ್ಧವಾಗಿವೆ. ವೀರಶೈವ ಕೌಸ್ತುಭದಲ್ಲಿ ೧೦ ಶಿವಾಗಮಗಳಿಗೆ ೧೫೮ ಉಪಾಗಮಗಳು ಮತ್ತು ೧೮ ರೌದ್ರಾಗಮಗಳಿಗೆ ೧೫೦ ಉಪಾಗಮಗಳಿರುವುದನ್ನು ಉಲ್ಲೇಖಿಸಲಾಗಿದೆ ಅಲ್ಲದೇ ೨೮ ಶಿವಾಗಮಗಳಲ್ಲಿನ ಶ್ಲೋಕಗಳ ಒಟ್ಟು ಸಂಖ್ಯೆಯನ್ನು ಒಟ್ಟುಗೂಡಿಸಿ ನಿಜಗುಣರು ೨ ಶಂಖ, ೧ ಪದ್ಮ, ೧ ಅರ್ಬುದ, ೧೯ ಕೋಟಿ, ೩೮ ಲಕ್ಷ, ೪೪ ಸಾವಿರ ಶ್ಲೋಕಗಳು (೨೦೧೦೦೦೧೦೧೯೩೮೪೪೦೦೦) ಇವೆ ಎಂದು ತಿಳಿಸಿದ್ದಾರೆ.

ಆಗಮಗಳನ್ನು ಸಂವಾದಾತ್ಮಕ ತಂತ್ರದಲ್ಲಿ ರಚಿಸಲಾಗಿದೆ.ಇಲ್ಲಿ ಶಿವನನ್ನೇ ಉಪದೇಶಕನನ್ನಾಗಿ ಮಾಡಿ ಪಾರ್ವತಿ ಸ್ಕಂದರು ಶ್ರೋತೃಗಳಾಗಿದ್ದಾರೆ. ಆಗಮ ಸಾಹಿತ್ಯವು ಸಮೂಹ ಸೃಷ್ಟಿಯಾಗಿದ್ದು ಅವುಗಳನ್ನು ರಚಿಸಿದವರ ಹೆಸರು ಮಾತ್ರ

ಅಜ್ಞಾತವಾಗಿದೆ.

ವೇದಗಳನ್ನು ಪರಬ್ರಹ್ಮನ ಉಸಿರೆಂದು ಹೇಳುವಂತೆ ಆಗಮಗಳನ್ನು ಪರಶಿವನ ವಾಣಿ ಎಂದು ಕರೆಯುವರು. ಒಂದು ಉಸಿರು; ಇನ್ನೊಂದು ವಾಣಿ. ಉಸಿರು ಅರ್ಥಾಭಿವ್ಯಕ್ತಿಯಲ್ಲಿ ವ್ಯಂಜಕ ಗುಣ ಪಡೆದಿದ್ದರೆ, ವಾಣಿ ಅರ್ಥಾಭಿವ್ಯಕ್ತಿಯಲ್ಲಿ ಸ್ಪಷ್ಟವಾಗಿರುತ್ತದೆ. ವೇದ ವಾಕ್ಯಗಳು ಅಸ್ಪಷ್ಟವಾಗಿರುವುದರಿಂದಲೇ ಅದರ ಅರ್ಥ ನಿರ್ಣಯ ಮಾಡಹೊರಟ ಶಂಕರ ಮುಂತಾದ ಮಹಾನ್ ಆಚಾರ್ಯರಿಗೇ ಸಂದೇಹಗಳುಂಟಾಗಿ ಅದ್ವೈತ ಮತ್ತು ದ್ವೈತ ಮುಂತಾದ ಭೇದಗಳಾಗಲು ಕಾರಣವಾಯಿತು! ಆದರೆ ಆಗಮಗಳು ಪರಶಿವನ ಮುಖದಿಂದ ಹೊರಟ ಸ್ಪಷ್ಟವಾಣಿ. ಆಗಮಗಳಲ್ಲಿ ಆ ಬಗೆಯ ಅರ್ಥ ಸಂದೇಹಕ್ಕೆ ಎಡೆಯೇ ಇಲ್ಲ. ಆದುದರಿಂದ ಉಸಿರು–ವಾಣಿ ಎಂಬ ಪದಗಳನ್ನು ಅನುಕ್ರಮವಾಗಿ ವೇದ– ಆಗಮಗಳಿಗೆ ಬಳಸಲಾಗಿದೆ. ವೇದ ಆಗಮಗಳೆರಡೂ ಪರಶಿವನಿಂದಲೇ ರಚಿತವಾದವುಗಳಾದರೆ ಹೀಗೇಕೆ ಎರಡು ಸಾಹಿತ್ಯ ಪ್ರಕಾರಗಳು ರಚಿತವಾದವು? ಎಂಬ ಸಂಶಯ ಬರುವುದು ಸಹಜ. ಆದರೆ ವೇದಗಳು ಕೇವಲ ಮೇಲ್ವರ್ಗದ ಜನಾಂಗಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿದ್ದರಿಂದ ಎಲ್ಲ ವರ್ಗದ ಜನರ ಅಭ್ಯುದಯ ಮತ್ತು ಅಭ್ಯಾಸಕ್ಕಾಗಿ ಆಗಮಗಳು ರಚಿತವಾದವು. ಕಾರಣ ಆಗಮಗಳು ಸರ್ವಜನಾಂಗದ ಆಧ್ಯಾತ್ಮಿಕ ಉನ್ನತಿಗೆ ಪೂರಕವಾದ ಉನ್ನತ ಮಟ್ಟದ ಸಿದ್ಧಾಂತವನ್ನು ಹಾಗೂ ಸಮಾನತೆಯ ತತ್ವವನ್ನು ಪ್ರತಿಪಾದಿಸುತ್ತವೆ.

"ಶಿವಜ್ಞಾನ ಸಿದ್ಧಿಯಾರ್" ಎಂಬ ಹೆಸರುಳ್ಳ ಅರುಲನಂದಿ ಶಿವಾಚಾರ್ಯರ ತಮಿಳು ಗ್ರಂಥದ ೮ನೆಯ ಸೂತ್ರದ ೧೩–೧೫ ನೆಯ ಪದ್ಯಗಳ ಉಲ್ಲೇಖದಂತೆ ವೇದಗಳು ಮತ್ತು ಶಿವಾಗಮಗಳು ಮಾತ್ರ ಮೂಲ ಪುಸ್ತಕಗಳು. ಇತರ ಪುಸ್ತಕಗಳೆಲ್ಲವೂ ಇವುಗಳಿಂದ ಹುಟ್ಟಿವೆ. ಇವುಗಳಲ್ಲಿ ವೇದಗಳು ಸಾಮಾನ್ಯವಾದವು; ಎಲ್ಲರ ಶ್ರೇಯಸ್ಸಿಗಾಗಿ ಪ್ರಕಟವಾದ ಆಗಮಗಳು ವಿಶೇಷಗ್ರಂಥಗಳು. ಇವು ಆ ಮಹಾದೇವನ ದಯೆಯನ್ನು ಪಡೆದವರ ಉಪಯೋಗಕ್ಕಾಗಿ ಪ್ರಕಟವಾದವುಗಳು. ಈ ಆಗಮಗಳು ವೇದ ಮತ್ತು ವೇದಾಂತಗಳ ಸಾರವಾದ ನಿಜತತ್ವವನ್ನು ಒಳಗೊಂಡಿವೆ; ಆದ್ದರಿಂದ ಇತರ ಎಲ್ಲ ಪುಸ್ತಕಗಳು ಪೂರ್ವಪಕ್ಷವಾದರೆ ಶಿವಾಗಮಗಳೇ ಸಿದ್ಧಾಂತ (ನಿರ್ಣಯ) ರೂಪವಾಗಿವೆ.' ಎಂದು ನಿರ್ಣಯಿಸಿದ್ದಾರೆ. ಕಾಕಬೋಡಾಮಣಿ ಎಂಬ ತಂತ್ರವು ಆಗಮಗಳು ವೇದಗಳಿಗಿಂತ ಶ್ರೇಷ್ಠವಾದವೆಂಬುದನ್ನು ಸ್ಪಷ್ಟಪಡಿಸುತ್ತದೆ.

ಆಗಮಗಳಲ್ಲಿಯ ವಿಷಯ ವಿಭಾಗವು ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಮತ್ತು ಜ್ಞಾನಪಾದವೆಂಬ ವ್ಯವಸ್ಥೆಯನ್ನು ಆಧರಿಸಿದೆ. ಶಿವಾಗಮಗಳಲ್ಲಿ ಶೈವ, ವೀರಶೈವ ಎರಡೂ ಸಂಸ್ಕೃತಿಗಳ ವಿಚಾರಧಾರೆಯನ್ನು ಕಾಣುತ್ತೇವೆ. ಪೂರ್ವಭಾಗದಲ್ಲಿ ದೇವಾಲಯದ ಸಂಸ್ಕೃತಿ, ಉತ್ತರ ಭಾಗದಲ್ಲಿ ಇಷ್ಟಲಿಂಗ ಸಂಸ್ಕೃತಿಗಳನ್ನು ಕಾಣುತ್ತೇವೆ.

ಇನ್ನು ಶೈವಪ್ರಭೇದಗಳ ವಿಷಯದಲ್ಲಿ ಆಗಮಗಳು ಒಮ್ಮತಾಭಿಪ್ರಾಯವನ್ನು

ಹೊಂದಿಲ್ಲ. ಆದರೆ ಎಲ್ಲ ಶೈವ ಪ್ರಭೇದಗಳಲ್ಲಿ ವೀರಶೈವವೇ ಅತ್ಯಂತ ಶ್ರೇಷ್ಠವಾದುದು ಎಂಬ ಪ್ರತಿಪಾದನೆ ಆಗಮಗಳಲ್ಲಿದೆ. ವೀರಶೈವದಲ್ಲಿ ಸಾಮಾನ್ಯವೀರಶೈವ, ವಿಶೇಷವೀರಶೈವ ಹಾಗೂ ನಿರಾಭಾರಿ ವೀರಶೈವ ಎಂಬ ಮೂರು ಪ್ರಭೇದಗಳನ್ನು ಆಗಮಗಳಲ್ಲಿ ಹೇಳಲಾಗಿದೆ.

ಆಗಮಗಳ ಉಗಮಕ್ಕೆ ಪ್ರೇರಣೆಯನ್ನು ಅರಸುತ್ತಾ ಹೊರಟಾಗ ಕ್ರಿಸ್ತಪೂರ್ವ ೨೦೦೦ ವರ್ಷಗಳಷ್ಟು ಹಿಂದಿನ ಮೊಹೆಂಜೋದಾರೋ-ಹರಪ್ಪಾ ಉತ್ಖನನದಲ್ಲಿ ದೊರೆತ ಪಳೆಯುಳಿಕೆಗಳು ಹಾಗೂ ಅಂಗದ ಮೇಲೆ ಧಾರಣಮಾಡುವ ಲಿಂಗಗಳು ಬಹು ಮಹತ್ವದ್ದಾದವು. ಸರ್ ಜಾನ್ ಮಾರ್ಷಲ್ ಮೊಹೆಂಜೊದಾರೋ ಸಂಸ್ಕೃತಿಯ ಹಾಗೂ ಅಲ್ಲಿನವರ ಉಪಾಸನಾ ಪದ್ಧತಿ ಕುರಿತು, ಇಂದಿನ ಲಿಂಗಾಯತ ಸಂಸ್ಕೃತಿಯ ಕುರುಹುಗಳನ್ನು ಹೋಲುವುದಾಗಿ ಅಭಿಪ್ರಾಯ ತಳೆದಿದ್ದಾರೆ. ಆಗಮಗಳಲ್ಲಿ ಪ್ರತಿಪಾದನೆಗೊಂಡ ಷಟ್‌ಸ್ಥಲಗಳಿಗೆ ಮೂಲ ಷಟ್‌ಚಕ್ರಗಳು, ನವಚಕ್ರಗಳು ನವಲಿಂಗ ಸಕೀಲ ಎಲ್ಲದಕ್ಕೂ ಶಿವಯೋಗವೇ ತಳಹದಿಯಾಗಿರುವ ಮೂಲವನ್ನು ನಾವು ಮೊಹೆಂಜೊದಾರೊ ಸಂಸ್ಕೃತಿಯಲ್ಲಿ ಕಾಣುತ್ತೇವೆ. ಇಲ್ಲಿನ ಪೂಜೆ ಉಪಾಸನೆಗಳೇ ದ್ರಾವಿಡ ಸಂಸ್ಕೃತಿಯ ಕುರುಹುಗಳಾಗಿವೆ. ಅಲ್ಲದೇ ಪಶುಪತಿ ಹಾಗೂ ಶಿವ-ಶಕ್ತಿಗಳ ಪರಿಕಲ್ಪನೆ, ಇಷ್ಟಲಿಂಗ ಪೂಜೆ ಹಾಗೂ ಮೂಲ ನಿವಾಸಿಗಳಾದ ವ್ರಾತರ ವಿವರಣೆ ಮುಂತಾದವು ಆಗಮದಲ್ಲಿ ಪ್ರತಿಪಾದಿತವಾದ ವಿಷಯಗಳಿಗೆ ಪೂರಕವಾಗಿವೆ. ಕಾರಣ ಸೈಂಧವ ಸಂಸ್ಕೃತಿಯೇ ಆಗಮಿಕ ಸಂಸ್ಕೃತಿಯಾಗಿದ್ದು ಇದೇ ಆಗಮಗಳ ಉಗಮಕ್ಕೆ ಪ್ರೇರಣೆಯಾಗಿರಬಹುದು.

ಆಗಮಗಳ ರಚನಾ ಕಾಲವನ್ನು ನಿರ್ಣಯಾತ್ಮಕವಾಗಿ ಹೇಳುವದು ಬಹುಶಃ ಯಾರಿಗೂ ಸಾಧ್ಯವಿಲ್ಲ. ಭಾಷೆಯ ದೃಷ್ಟಿಯಿಂದ ಆಗಮಗಳು ಪಾಣಿನಿಯ (ಕ್ರಿ. ಪೂ ೭೦೦) ಅನಂತರ ಕಾಲಕ್ಕೆ ಸೇರಿದವುಗಳು. ಆದರೆ ಕ್ರಿ. ಪೂ ೨೦೦ ಕ್ಕೆ ಸೇರಿದ್ದವೆಂದು ತಿಳಿದ ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟ ಪಾಂಚರಾತ್ರಗಮೋಕ್ತ ಪೂಜಾ ಪದ್ಧತಿ ಮತ್ತು ಕ್ರಿ.ಪೂ. ೫೦೦ ಕ್ಕೆ ಸೇರಿದ್ದೆಂದು ಹೇಳಲಾದ ಭಗವದ್ಗೀತೆಯಲ್ಲಿ ಪಾಂಚರಾತ್ರಾಗಮೋಕ್ತ ವಾಸುದೇವ ಮಹತ್ವವು ಆಗಮಾರಂಭ ಕಾಲವನ್ನು ಸೂಚಿಸುತ್ತದೆ. ಅಲ್ಲದೇ ಪಾಂಚರಾತ್ರಾಗಮಗಳಲ್ಲಿ ಶಿವಾಗಮಗಳ ಪ್ರಸ್ತಾಪವಿರುವದು. ಆದರೆ ವೈಷ್ಣವಾಗಮಗಳ ಉಲ್ಲೇಖವು ಶಿವಾಗಮಗಳಲ್ಲಿ ಇಲ್ಲದಿರುವುದರಿಂದ ಶಿವಾಗಮಗಳು ವೈಷ್ಣವಾಗಮಗಳಿಗಿಂತ ಹಿಂದಿನವು ಎಂಬ ಅಭಿಪ್ರಾಯವಿದೆ.

ಪ್ರಾಚೀನವಾದ ಶಿವಾಗಮಗಳು ಉಪನಿಷತ್ತುಗಳ ಮೇಲೆ ಪ್ರಭಾವ ಬೀರಿವೆ ಎಂಬುದನ್ನು ವೀರಶೈವ ತತ್ವಪ್ರಕಾಶ ಗ್ರಂಥದಲ್ಲಿ ಶ್ರೀ ಶಿ.ಶಿ.ಬಸವನಾಳರವರು ಶ್ವೇತಾಶ್ವೇತರೋಪನಿಷತ್ತಿನ ೫ ನೇ ಅಧ್ಯಾಯದಲ್ಲಿ ಪ್ರತಿಪಾದಿತವಾದ ವಿಷಯದ ಮೇಲೆ ಮೃಗೇಂದ್ರಾಗಮ, ವಿಶ್ವಸಾರೋತ್ತರಾಗಮ, ಸ್ವಾಯಂಭುವಾಗಮ, ರೌರವಾಗಮಗಳ ಮಾಯಾದಿತತ್ವವು ಪ್ರಭಾವಬೀರಿರುವುದನ್ನು ಅನೇಕ ಶ್ಲೋಕಗಳ ಉಲ್ಲೇಖದೊಂದಿಗೆ ವಿವರಿಸಿ ಶ್ವೇತಾಶ್ವೇತರೋಪನಿಷತ್ತಿನಲ್ಲಿ ಶಿವಸಿದ್ಧಾಂತದ ಕುರುಹುಗಳು ಕಂಡುಬರುವುದರಿಂದ ಶಿವಾಗಮಗಳು ಅತೀ ಪ್ರಾಚೀನವಾದುವೆಂದು ಅರಿಕೆಯಾಗದಿರದೆಂದು ಅಭಿಪ್ರಾಯ ಮಂಡಿಸಿರುವರು.

ಶಿವಾಗಮಗಳಿಂದ ಭಗವದ್ಗೀತೆಗೆ ಅನೇಕ ಶ್ಲೋಕಗಳು ಬಂದಿರುವದನ್ನು ಡಾ.ಆರ್.ಸಿ. ಹಿರೇಮಠರವರ ಮಹಾಯಾತ್ರೆಯಲ್ಲಿ, ಹಾಗೂ ಶ್ರೀ ಎಸ್. ಡಿ. ಪಾವಟೆಯವರ 'Shivagamas' ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೇ ಕೂರ್ಮಪುರಾಣ ಅಧ್ಯಾಯ ೨೫ (೪೬-೪೮) ರಲ್ಲಿ ಭಗವದ್ಗೀತೆಯನ್ನೂ ಉಪದೇಶಿಸಿದ ಶ್ರೀಕೃಷ್ಣನು ಉಪಮನ್ಯು ಮುನಿಗಳಿಂದ ಶಿವಾಗಮಗಳ ಆಧ್ಯಾತ್ಮ ತತ್ವಜ್ಞಾನವನ್ನೂ ಪಡೆದ ವಿಷಯವೂ ಉಲ್ಲೇಖಿತವಾಗಿದೆ. ಆದುದರಿಂದ ಶಿವಾಗಮಗಳು ಭಗವದ್ಗೀತೆಗಿಂತ ಮೊದಲಿನವೆಂದು ಊಹಿಸಬೇಕಾಗುತ್ತದೆ.

ಶ್ರೀಶಂಭುಲಿಂಗ ಶಿವಾಚಾರ್ಯರು ಆಗಮಪರಿಜ್ಞಾನವೆಂಬ ಗ್ರಂಥದಲ್ಲಿ ಸಾಂಖ್ಯ, ಸ್ಮೃತಿ, ತರ್ಕ, ಪುರಾಣಗಳ ಮೇಲೆ ಶಿವಾಗಮಗಳು ಪ್ರಭಾವ ಬೀರಿರುವುದನ್ನು ಅನೇಕ ಶ್ಲೋಕಗಳ ಉಲ್ಲೇಖದೊಂದಿಗೆ ವಿವರಿಸಿದ್ದನ್ನು ಗಮನಿಸಿದರೆ ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಶಿವಾಗಮಗಳು ರಚನೆಗೊಂಡಿರುವ ಬಗ್ಗೆ ತಿಳಿದು ಬರುತ್ತದೆ.

ಪ್ರಾಚೀನ ಗ್ರಂಥಗಳಲ್ಲಿ ಉಪಲಬ್ಧವಿರುವ ಆಗಮಗಳ ಉಲ್ಲೇಖದಿಂದ ಆಗಮಕಾಲವನ್ನು ನಿರ್ಧರಿಸುವುದಾದರೆ ಯಾಜ್ಞವಲ್ಕರು ತಮ್ಮ ಸ್ಮೃತಿಯ ಪ್ರಥಮ ಪ್ರಕರಣದ ೪ ನೇ ಶ್ಲೋಕದಲ್ಲಿ ಹಾರೀತನ ಕೃತಿಯನ್ನು ಉಲ್ಲೇಖಿಸುತ್ತಾರೆ. ಈ ಹಾರೀತನು ತನ್ನ ಧರ್ಮಶಾಸ್ತ್ರದಲ್ಲಿ "ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ ಶ್ರುತಿ ಪ್ರಮಾಣಕಃ ಧರ್ಮಃ ಶ್ರುತಿಶ್ಚದ್ವಿವಿಧಾ ವೈದಿಕೀ ತಾಂತ್ರಿಕೀ ಚ' ಎಂದಿದ್ದಾನೆ. ಅಂದರೆ ಹಾರೀತನ ಕಾಲದಲ್ಲಿ ತಂತ್ರಗಳು ಅಂದರೆ ಆಗಮಗಳು ವೇದಗಳ ಸರಿಸಮ ಸ್ಥಾನದಲ್ಲಿದ್ದು ಪ್ರಮಾಣಗ್ರಂಥಗಳೆನಿಸಿದ್ದು, ವೇದಗಳನ್ನು ಆಧರಿಸಿದ ಧರ್ಮಗಳಿದ್ದಂತೆ ಆಗಮಪ್ರಣೀತ ಧರ್ಮಗಳೂ ಇದ್ದುವೆಂದು ಉಲ್ಲೇಖಿಸಿರುತ್ತಾನೆ. ವೇಬರ್ ಎಂಬ ಪಾಶ್ಚಿಮಾತ್ಯ ಪ್ರಾಚ್ಯತಜ್ಞನು ಯಾಜ್ಞವಲ್ಕರ ಕಾಲವನ್ನು ಕ್ರಿ.ಶ. ೨ ನೇ ಶತಮಾನವೆಂದು ಊಹಿಸಿರುವನು. ಕಾರಣ ಹಾರೀತನು ಕ್ರಿ.ಶ. ಆರಂಭದಲ್ಲಿದ್ದನೆಂದು ಊಹಿಸಬಹುದಾಗಿದೆ. ಕಾರಣ ಶಿವಾಗಮಗಳು ಕ್ರಿ.ಶ. ಪ್ರಾರಂಭದಲ್ಲಿಯೇ ಅತ್ಯುನ್ನತ ಸ್ಥಾನವನ್ನು ಹೊಂದಿದ್ದು ಶ್ರುತಿಗಳೆಂದು ಪರಿಗಣಿತವಾಗಿ ಪೂಜ್ಯವೆನಿಸಿದ್ದವೆಂದು ಅರ್ಥವಾಗುತ್ತದೆ.

ಅಲ್ಲದೇ ಕಾಳಿದಾಸನು ತನ್ನ ರಘುವಂಶದ ೧೦ ನೇ ಸ್ವರ್ಗದ ೨೬ ನೇ ಪದ್ಯದಲ್ಲಿ ಆಗಮಗಳನ್ನು ಉಲ್ಲೇಖಿಸುತ್ತಾನೆ. ಕಾಳಿದಾಸನ ಕಾಲವನ್ನು ಭಾರತೀಯ ವಿದ್ವಾಂಸರು ಕ್ರಿ.ಪೂ. ೧ ನೇ ಶತಮಾನದಿಂದ ಕ್ರಿ.ಶ. ೧ನೇ ಶತಮಾನವೆಂದು ನಿರ್ಣಯಿಸಿರುವರು. ಆದುದರಿಂದ ಶಿವಾಗಮಗಳ ಕಾಲ ಕ್ರಿ. ಪೂ. ಯುಗಕ್ಕೆ ಹೋಗುತ್ತದೆ.

ಆಗಮ ತಜ್ಞರಾದ ಡಾ|| ಎಸ್.ಸಿ. ನಂದಿಮಠರು "ಈಗ ಉಪಲಬ್ಧವಿದ್ದ ಆಧಾರಗಳಿಂದ ಶಿವಾಗಮಗಳ ಕಾಲವನ್ನು ಕ್ರಿ.ಶ. ೧ ನೇ ಶತಮಾನಕ್ಕಿಂತ ಹಿಂದೆ ಒಯ್ಯಬಹುದು" ಎಂದು ಅಭಿಮತ ಇತ್ತಿರುವರು.

ಇನ್ನು **ಉಪಲಬ್ಧವಿರುವ ಶಾಸನಗಳ ಆಧಾರದಿಂದ** ಅವಲೋಕಿಸಲಾಗಿ ಕ್ರಿ.ಶ. ೩-೪ ನೆಯ ಶತಮಾನದಲ್ಲಿದ್ದ ಭವನಾಗರು ಶಿವಲಿಂಗಧಾರಿಗಳಾಗಿದ್ದರೆಂದೂ ಅವರ ಆಪ್ತರಾದ ವಾಕಾಟಕರು ಶೈವಮತಾವಲಂಬಿಗಳಾಗಿದ್ದರೆಂದೂ

ಶಿಲಾಶಾಸನಗಳಿಂದ ತಿಳಿದುಬರುತ್ತದೆ ಕಾರಣ ಶಿವಾಗಮಗಳು ಆಗಲೇ ಅಸ್ತಿತ್ವದಲ್ಲಿದ್ದವೆಂಬುದನ್ನು ಇದು ಸೂಚಿಸುತ್ತದೆ.

ಅಲ್ಲದೇ ಕಂಚಿಯ ಕೈಲಾಸನಾಥ ದೇವಾಲಯದ ಒಂದು ಶಾಸನದಲ್ಲಿ ೨೮ ಶಿವಾಗಮಗಳ ಹೆಸರುಗಳು ಬರುತ್ತವೆ. ಪಲ್ಲವ ಅರಸನಾದ ರಾಜಸಿಂಹವರ್ಮನು ಆಗಮೋಕ್ತ ಶೈವ ಮತಾನುಯಾಯಿಯಾಗಿದ್ದನೆಂದು ಅದೇ ಶಾಸನದಿಂದ ತಿಳಿದು ಬರುತ್ತದೆ. ಪಲ್ಲವರ ಕಾಲ ಕ್ರಿ. ಶ. ೬-೭ ಶತಮಾನ. ಕಾರಣ ಈ ಕಾಲದ ಹೊತ್ತಿಗೆ ೨೮ ಆಗಮಗಳು ಪ್ರಸಿದ್ಧವಾಗಿರುವದು ಸ್ಪಷ್ಟ.

ಇನ್ನು **ಉಪಲಬ್ಧವಿರುವ ತಾಳೆಗರಿಗಳ ಆಧಾರದಿಂದ** ಅವಲೋಕಿಸಿದಾಗ ಕೆಂಬ್ರಿಜ್ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಕೆಲವು ಶಿವಾಗಮದ ಬೂರ್ಜ್ವಪತ್ರದ ಗ್ರಂಥಗಳಿವೆ. ಅವುಗಳನ್ನು ಕ್ರಿ.ಶ ೭ನೇ ಶತಮಾನದಲ್ಲಿ ಪ್ರತಿಮಾಡಿಕೊಂಡ ಉಲ್ಲೇಖವಿದೆ. ಅದರ ಪ್ರತಿಯನ್ನೇ ಡಾ. ಫಿಲಿಯೋಜಾರವರು ಪಾಂಡಿಚೇರಿಯ ಪ್ಯಾರಿಸ್ ಓರಿಯೆಂಟಲ್ ಗ್ರಂಥ ಭಾಂಡಾರ (FRANCAIS DE FRENCH INSTITUTE OF PONDICHERY) ದಲ್ಲಿ ಸಂಗ್ರಹಿಸಿ ಇಟ್ಟಿರುವರು. ಆ ಸಂಸ್ಥೆಯವರು ಅಲ್ಲಿನ ಆಗಮಗಳನ್ನು ಇಂಟರನೆಟ್‌ನಲ್ಲಿ ಬಿಡುಗಡೆಗೊಳಿಸಿದ್ದು ಅದನ್ನು http://muktalib.org/access-page.htm ನ ಮೂಲಕ ವೀಕ್ಷಿಸಿ ಅಧ್ಯಯನ ಕೈಕೊಳ್ಳಬಹುದು. ಈ ಆಧಾರದನ್ವಯ ಶಿವಾಗಮಗಳ ಕಾಲ ಕ್ರಿ. ಶ. ೭ನೇ ಶತಮಾನಕ್ಕಿಂತ ಹಿಂದೆ ಹೋಗುತ್ತದೆ.

ಇನ್ನು **ಶಿವಾಗಮಗಳ ಉಪಲಬ್ಧತ್ವ ಹಾಗೂ ಅನುಪಲಬ್ಧತ್ವದ ವಿಚಾರ ಮಾಡಲಾಗಿ** ಪ್ರಾಚೀನ ಕಾಲದಲ್ಲಿಯೇ ಆಗಮಗಳು ವೇದಗಳಷ್ಟೇ ಪಾವಿತ್ರ್ಯ ಪ್ರಾಮಾಣ್ಯಗಳನ್ನು ಪಡೆದು ಶೃತಿಯ ಸ್ಥಾನದಲ್ಲಿ ನಿಂತಿದ್ದರೂ ಸಹ ಶಿವಾಗಮದ ಪ್ರತಿಗಳನ್ನು ವೇದಗಳಷ್ಟು ಶ್ರದ್ಧೆಯಿಂದ ಸಂರಕ್ಷಣೆ ಮಾಡಿಕೊಂಡು ಬರುವುದಾಗಲಿಲ್ಲ. ಹಾಗಾಗಿ ಕೆಲವು ಮೂಲ ಆಗಮಗಳು ಮತ್ತು ಉಪಾಗಮಗಳು ಉಪಲಬ್ಧವಾಗಿವೆ. ಅವು ಕೂಡಾ ಸಮಗ್ರವಾಗಿ ದೊರೆಯುವುದಿಲ್ಲ. ಮೂಲಾಗಮಗಳಲ್ಲಾಗಲೀ, ಉಪಾಗಮಗಳಲ್ಲಾಗಲೀ ಪೂರ್ವ ಮತ್ತು ಉತ್ತರವೆಂದು ಎರಡೆರಡು ಭಾಗಗಳನ್ನು ಹೊಂದಿವೆ. ಮತ್ತೆ ಅವುಗಳಲ್ಲಿ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ, ಜ್ಞಾನಪಾದವೆಂದು ನಾಲ್ಕು ನಾಲ್ಕು ಪಾದಗಳಿರುತ್ತವೆ. ಉಪಲಬ್ಧವಾದ ಕೆಲವು ಆಗಮಗಳಲ್ಲಿ ನಾಲ್ಕು ಪಾದಗಳು ದೊರೆಯುವುದಿಲ್ಲ. ಇನ್ನೊಂದು ವಿಚಾರವೆಂದರೆ ಶಿವಾಗಮಗಳ ಉತ್ತರಭಾಗದಲ್ಲಿ ವೀರಶೈವ ಪರವಾದ ವಿವರಣೆಯಿದ್ದು ಆ ಭಾಗಗಳು ಸಮಗ್ರವಾಗಿ ದೊರೆಯುವುದಿಲ್ಲ. ಈಗ ಉಪಲಬ್ಧವಿರುವ ಶೈವಾಗಮಗಳ ಉತ್ತರಭಾಗದಲ್ಲಿ ನಿರೂಪಿತಗೊಂಡಿರುವ ವೀರಶೈವ ಸಿದ್ಧಾಂತಕ್ಕೂ ಹಾಗೂ ವಚನಗಳಲ್ಲಿ ನಿರೂಪಿತವಾಗಿರುವ ವೀರಶೈವಕ್ಕೂ ಸಾಮ್ಯ ವೈಷಮ್ಯಗಳೇನಾದರೂ ಇವೆಯೇ? ಶಿವಾಗಮೋಕ್ತ ಸಿದ್ಧಾಂತವೇ ಶಿವಶರಣರಿಗೆ ಪ್ರೇರಣೆಯಾಗಿದೆಯೇ? ಶಿವಾಗಮಗಳ ಪ್ರಭಾವ ವಚನಗಳ ಮೇಲೆ ಎಷ್ಟರಮಟ್ಟಿಗೆ ಆಗಿದೆ? ಶಿವಾಗಮಗಳಿಂದ ಪ್ರಭಾವಿತರಾದರೂ ಯಾವ ದೃಷ್ಟಿಯಿಂದ ವಿಭಿನ್ನರಾಗಿ ವಚನಕಾರರು ಮುನ್ನಡೆದಿದ್ದಾರೆ? ಎಂಬುದನ್ನು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ೩.

ಶಿವಾಗಮಗಳು ಮತ್ತು ವಚನ ಸಾಹಿತ್ಯ: ದಾರ್ಶನಿಕ ಚಿಂತನ

■ ಸೃಷ್ಟಿಯ ಉಗಮ

- ♦ ಸೃಷ್ಟಿ ಪೂರ್ವದ ಸ್ಥಿತಿ
- ♦ ಶಕ್ತಿವಿಶಿಷ್ಟನಾದ ಪರಶಿವನೇ ಜಗತ್‌ಸೃಷ್ಟಿಗೆ ಕಾರಣ
- ♦ ವಿವಿಧ ಶಕ್ತಿ, ಸಾದಾಖ್ಯ ಮತ್ತು ಕಲೆಗಳ ಉತ್ಪತ್ತಿ
- ♦ ಸೃಷ್ಟಿ ಶಿವನ ಲೀಲಾ ವಿನೋದ

■ ಪಶು–ಪತಿ–ಪಾಶ ತತ್ವದ ವಿಚಾರ

- ♦ ಶಿವತತ್ವ (ಪತಿತತ್ವ)
- ♦ ಪಶುತತ್ವ (ಜೀವತತ್ವ)
- ♦ ಪಾಶತತ್ವ (ಬಂಧ)
- ♦ ಭಕ್ತಿಯೇ ಮುಕ್ತಿಯ ಸಾಧನ
- ♦ ಪಾಶಗಳನ್ನು ಕತ್ತರಿಸಲು ವೀರಶೈವ ದೀಕ್ಷೆ ಅಂಗೀಕರಿಸಬೇಕು.

ಅಧ್ಯಾಯ–೩

ಶಿವಾಗಮಗಳು ಮತ್ತು ವಚನ ಸಾಹಿತ್ಯ : ದಾರ್ಶನಿಕ ಚಿಂತನ

ವೀರಶೈವ ಧರ್ಮವು ಅಷ್ಟಾವರಣ, ಪಂಚಾಚಾರ, ಷಟಸ್ಥಲಾತ್ಮಕವಾದ ಸಾಧನ ಮಾರ್ಗವನ್ನು ಬೋಧಿಸಿ ಅದಕ್ಕೆ ಪೂರಕವಾದ ದಾರ್ಶನಿಕ ತತ್ವಗಳನ್ನು ಸಹ ನಿರೂಪಿಸುತ್ತದೆ. ಸೃಷ್ಟಿಯ ಉಗಮ ಹೇಗಾಯಿತು? ಸಕಲ ಚರಾಚರ ಸೃಷ್ಟಿ ರಚನೆಗೆ ಕಾರಣವೇನು? ಸೃಷ್ಟಿಕರ್ತನ ಸ್ವರೂಪವೇನು? ಜೀವ, ಜಗತ್ತು ಹಾಗೂ ಈಶ್ವರನಿಗೂ ಇರುವ ಸಂಬಂಧವೇನು? ಮುಂತಾದ ದಾರ್ಶನಿಕ ಚಿಂತನೆಗಳನ್ನು ಶಿವಾಗಮಗಳು ಮತ್ತು ವಚನ ಸಾಹಿತ್ಯದಲ್ಲಿ ನಿರೂಪಿಸಲಾಗಿದ್ದು ಅವುಗಳ ವಿವೇಚನೆ ಇಂತಿದೆ –

೩.೧ ಸೃಷ್ಟಿಯ ಉಗಮ

ಸೃಷ್ಟಿರಹಸ್ಯವನ್ನು ಕುರಿತಾದ ಕೆಲವು ಮೂಲಭೂತವಾದ ಪ್ರಶ್ನೆಗಳನ್ನು ತರ್ಕಸಮ್ಮತವಾಗಿ ವಿವರಿಸುವುದು ವಿಜ್ಞಾನಕ್ಕಾಗಲೀ ತತ್ವ ಜಿಜ್ಞಾಸೆಗಾಗಲೀ ಸಾಧ್ಯವಿಲ್ಲ. ಬುದ್ಧಿ ತರ್ಕ ಸಂಶೋಧನೆಗಳಿಂದ ಪೂರ್ಣವಾಗಿ ಸೃಷ್ಟಿರಚನೆಯ ಸ್ವರೂಪವನ್ನು ತಿಳಿಯಲು ಅಸಾಧ್ಯವೆಂಬ ಸ್ಥಿತಿಗೆ ವಿಜ್ಞಾನವೂ ಸಹ ಬರುತ್ತಿದೆ. ಸೂರ್ಯನಿಂದ ಭೂಮಿ ಸಿಡಿದು ಬಂತು, ಭೂಮಿಯಿಂದ ಚಂದ್ರ ಸಿಡಿದ; ಇವೆಲ್ಲಾ ಮೊದಲು ಉರಿಯುವ ಗೋಳಗಳಾಗಿದ್ದವು ಇತ್ಯಾದಿ ಮಾತುಗಳನ್ನು ಕೇಳಿದಾಗ ಏಕೆ ಹಾಗಾಯಿತು? ಆ ಉರಿಯುವ ಗೋಳ ಹೇಗೆ ಬಂದಿತು? ಏಕೆ ಬಂದಿತು? ಎಂಬ ಪ್ರಶ್ನೆ ಎದುರಾದರೆ ಅದಕ್ಕೆ ವಿಜ್ಞಾನ ಏನನ್ನೂ ಹೇಳದು. ಸೃಷ್ಟಿ ಹೇಗೆ ಆಗಿರಬಹುದೆಂಬುದನ್ನು ಕುರಿತ ವಿಜ್ಞಾನದ ವಿವರಣೆಯನ್ನು ಗಮನಿಸಿದಾಗ 'ಹೇಗೆ?' ಎಂಬುದನ್ನು ತಕ್ಕಮಟ್ಟಿಗೆ ವಿವರಿಸಲು ಪ್ರಯತ್ನಿಸಬಹುದೇ ಹೊರತು 'ಏಕೆ?' ಎಂಬುದನ್ನು ಅದು ಹೇಳಲಾರದು. ಇದೆಲ್ಲ 'ಸರ್ವಶಕ್ತವಾದ ಶಕ್ತಿಯೊಂದರ ವಿನ್ಯಾಸ' ಎಂಬ ಧಾರ್ಮಿಕ ಅಭಿಪ್ರಾಯವೇ ಬಹುಶಃ ಅದಕ್ಕೆ ಏಕೈಕ ಉತ್ತರವೆಂದು ತೋರುತ್ತದೆ. ಈ ಮಿತಿಯನ್ನು ಒಪ್ಪಿಕೊಂಡು ಇದರ ಚೌಕಟ್ಟಿನೊಳಗೆ ಈ ವಿವೇಚನೆ ನಡೆಯಬೇಕಾಗುತ್ತದೆ.

ಈ ದೃಷ್ಟಿಯಿಂದ ವೀರಶೈವ ಸಿದ್ಧಾಂತವು ಶಿವತತ್ವವೊಂದೇ ಶಾಶ್ವತವಾದದ್ದು ಸರ್ವ ಶಕ್ತವಾದದ್ದು ಎಂಬ ನಿರ್ಧಾರಕ್ಕೆ ಬಂದಿತು. ಅದರಿಂದಲೇ ಜಗತ್ತುಗಳು ಹುಟ್ಟುತ್ತವೆ, ಜೀವಿಗಳು ಮೈತಾಳುತ್ತವೆ; ಮತ್ತೆ ಅಲ್ಲಿಯೇ ಅಡಗುತ್ತವೆ; ಸಮುದ್ರದಲ್ಲಿ ಹುಟ್ಟುವ ಅಲೆಗಳಂತೆ. ಅಲೆಗಳೇ ಸಮುದ್ರವಲ್ಲ; ಅಂತೆಯೇ ಸಮುದ್ರದಿಂದ ಅವು ಬೇರೆಯೂ ಅಲ್ಲ. ಈ ಸೃಷ್ಟಿಯ ಬಹುರೂಪಗಳೆಲ್ಲವೂ ಹಾಗೇ ತೋರಿಕೆಯವು; ಶಿವನಲ್ಲಿ ಒಂದಾಗಿ ಪರಿಣಮಿಸತಕ್ಕವು; ಶಿವತತ್ವವೊಂದೇ ಕೊನೆಯಲ್ಲಿ ಉಳಿಯುವುದು. ಈ ಅರ್ಥದಲ್ಲಿ ಇದು ಅದ್ವೈತ. ಆದರೆ ಆ ಅಲೆಗಳು ಆಯಾ ನಿಲುವಿನಲ್ಲಿ

ಸತ್ಯವಾದವುಗಳು, ಮಿಥ್ಯೆಯಲ್ಲ; ಸ್ವತಂತ್ರ ಅಸ್ತಿತ್ವವನ್ನುಳ್ಳಂತಹವು; ಈ ಅರ್ಥದಲ್ಲಿ ಇದು ದ್ವೈತ. ಹೀಗೆ ದ್ವೈತಾದ್ವೈತಗಳೆರಡೂ ಇಲ್ಲಿ ಸಮಂಜಸ ಸ್ಥಾನವನ್ನು ಪಡೆದು ಸಮನ್ವಯಗೊಂಡಿವೆ ಎನ್ನಬಹುದು. ಈ ಸೃಷ್ಟಿರಚನಾ ಪ್ರಕ್ರಿಯೆಯ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅವುಗಳನ್ನಿಲ್ಲಿ ತೌಲನಿಕವಾಗಿ ವಿವೇಚಿಸಲಾಗಿದೆ.

ಸೃಷ್ಟಿ ಪೂರ್ವದ ಸ್ಥಿತಿ –

ಈ 'ಸೃಷ್ಟಿ ರಚನೆಗೆ ಮುನ್ನ' ಎಂಬ ಮಾತು ಯಾವುದೇ ಒಂದು ನಿರ್ದಿಷ್ಟ ಕಾಲವನ್ನು ನಿರ್ದೇಶಿಸಿ ಹೇಳುವಂತಹುದಲ್ಲ. ಅನಾದಿಯಾದ ಅತೀತವನ್ನು ಕಲ್ಪಿಸಿಕೊಳ್ಳುವ ತಾತ್ವಿಕ ದೃಷ್ಟಿಯನ್ನು ಇಲ್ಲಿ ಕಾಣುತ್ತೇವೆ. ಈ ಸೃಷ್ಟಿ ವ್ಯಕ್ತಗೊಂಡು ಅಸ್ತಿತ್ವಕ್ಕೆ ಬರುವುದಕ್ಕೆ ಮುನ್ನ, ಸೃಷ್ಟಿಕರ್ತನ ಸ್ವರೂಪವನ್ನು ಕುರಿತು ಉತ್ತರವಾತುಲಾಗಮವು–

"ನ ಭೂಮಿರ್ನಜಲಂ ಚೈವ ನ ತೇಜೋ ನ ಚ ವಾಯುಚ।
ನಚಾಕಾಶಂ ನ ಸೂರ್ಯಶ್ಚ ನಚ ಚಂದ್ರಮ ಇಂದ್ರಯೋ।
ನ ಚ ಬ್ರಹ್ಮ ನ ವಿಶ್ವಂ ಚ ನಚೋ ನಕ್ಷತ್ರಕಾರಕಾ।
ಏಕಮೇವ ಪರಂ ನಾಸ್ತಿ ಅಖಂಡಿತಮಹೋದಯಂ।
ಸರ್ವಶೂನ್ಯಂ ನಿರಾಲಂಬಂ ಸ್ವಯಂ ಲಿಂಗಮಯಂ ಪರಂ॥[೧]

ಎಂದು ಈ ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಇಂದ್ರ, ಬ್ರಹ್ಮ, ವಿಶ್ವ, ನಕ್ಷತ್ರ ಮುಂತಾದವುಗಳು ಯಾವುದೂ ಇಲ್ಲದ ಮುನ್ನ ಲಿಂಗರೂಪಿಯಾದ ಪರಶಿವನು ಸರ್ವಶೂನ್ಯ ನಿರಾಲಂಬ ಸ್ಥಿತಿಯಲ್ಲಿದ್ದ ಎಂದು ಅರುಹುತ್ತದೆ. ಅಲ್ಲದೇ –

"ವಾಚಾತೀತಂ ಮನೋತೀತಂ ವರ್ಣಾತೀತಂ ಪರಂ ಶಿವಂ।
ಸರ್ವಶೂನ್ಯಂ ನಿರಾಕಾರಂ ನಿರಾಲಂಬಸ್ಯ ಲಿಂಗಯೋಃ॥[೨]

ಶಬ್ದ–ವರ್ಣ–ಮನಕ್ಕೆ ಅತೀತನಾದ ಆ ಲಿಂಗರೂಪಿ ಪರಶಿವನು ಸರ್ವಶೂನ್ಯ ನಿರಾಕಾರ ನಿರಾಲಂಬ ಸ್ಥಿತಿಯಲ್ಲಿದ್ದನೆಂದು ವರ್ಣಿಸಲಾಗಿದೆ. ಇದನ್ನೇ ಮಕುಟಾಗಮವು

"ಆದಿಮಧ್ಯಾಂತ ಶೂನ್ಯಂ ಚ ಶೂನ್ಯ ಶೂನ್ಯಂ ದಶಾದಿಶಂ।
ಸರ್ವಶೂನ್ಯಂ ನಿರಾಕಾರಂ ನಿರ್ದ್ವಂದ್ವಂ ಪರಮಂ ಪದಂ॥"[೩]

---

೧. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೨೩೭, ಪುಟ ೮೪
೨. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೨೩೭, ಪುಟ ೮೪
೩. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೨೩೭, ಪುಟ ೮೪

ಎಂದು ಸೃಷ್ಟಿಯ ರಚನೆಗಿಂತ ಪೂರ್ವದಲ್ಲಿ ಆದಿ–ಮಧ್ಯ–ಅಂತ್ಯ ಎಲ್ಲೆಡೆಯೂ, ದಶದಿಕ್ಕುಗಳಲ್ಲಿಯೂ ಶೂನ್ಯವೇ ವ್ಯಾಪಿಸಿತ್ತು. ಆಗ ಆ ನಿರ್ದ್ವಂದ್ವವಾದ ಪರಮ ಪದವು ಸರ್ವಶೂನ್ಯ ನಿರಾಕಾರ ಸ್ಥಿತಿಯಲ್ಲಿತ್ತು ಎಂದು ವರ್ಣಿಸಿದೆ. ಮೂಲತಃ ಪರಶಿವನು ಏನೂ ಸೃಷ್ಟಿಸದೇ ಇದ್ದಾಗ, ಸೃಷ್ಟಿಸಬೇಕೆಂಬ ನೆನಹೂ ಅವನಲ್ಲಿ ತಲೆದೋರದಿದ್ದಾಗ, ತಾನೊಬ್ಬನೇ ಇದ್ದೇನೆಂಬ ಅರಿವೂ ಆತನಿಗೆ ಬಾರದಿದ್ದಾಗ ಅವನ ಸ್ಥಿತಿಯನ್ನು 'ಸರ್ವಶೂನ್ಯ ನಿರಾಲಂಬ' ಸ್ಥಲವೆಂದು ಕರೆಯಲಾಗುತ್ತದೆ. ತಾನೊಬ್ಬನೇ ಇದ್ದೇನೆ ಎಂಬ ಅರಿವು ಅವನಿಗೆ ಉಂಟಾದಾಗ ಅವನು ಮಹಾಶೂನ್ಯನೆನಿಸಿಕೊಳ್ಳುತ್ತಾನೆ. ಸೃಷ್ಟಿ ಮಾಡಬೇಕೆಂಬ ಬಯಕೆ ತಲೆದೋರಿದಾಗ ಅವನು ನಿಃಕಲ ಲಿಂಗನೆನಿಸಿಕೊಳ್ಳುತ್ತಾನೆ.

ಕಾರಣ ಈ ತೋರಿಕೆಯ ಎಲ್ಲ ಸೃಷ್ಟಿಗೂ ಕಾರಣವಾದ, ಆದರೆ ಇದೆಲ್ಲಕ್ಕೂ ಅತೀತವಾದ, ಸೃಷ್ಟಿಕರ್ತನ ಸೃಷ್ಟಿ ಪೂರ್ವದ ಸಹಜ ಸ್ವರೂಪವನ್ನು ಆಗಮಗಳಲ್ಲಿ 'ಸರ್ವಶೂನ್ಯ ನಿರಾಲಂಬ' 'ಶೂನ್ಯಾಶೂನ್ಯ', 'ಸರ್ವಶೂನ್ಯಂ ನಿರಾಕಾರ', 'ನಿಃಕಲತತ್ವ' ಎಂದು ವರ್ಣಿಸಲಾಗಿದೆ.

ತೋಂಟದ ಸಿದ್ಧಲಿಂಗೇಶ್ವರರು ಸೃಷ್ಟಿ ಪೂರ್ವದಲ್ಲಿಯ ಸೃಷ್ಟಿಕರ್ತನ ಸಹಜ ಸ್ವರೂಪವನ್ನು ಇದೇ ಬಗೆಯಾಗಿ ವರ್ಣಿಸುತ್ತ –

ಅಂತರವಿಲ್ಲದಂದು, ಬಾಹ್ಯವಿಲ್ಲದಂದು,
ಅಡಿ, ಮುಡಿ, ಒಡಲು, ಮತ್ತೊಂದೆಡೆಯೇನೂ ಇಲ್ಲದಂದು,
ದೇಶ ದಿಕ್ಕುಗಳು ವಿಶ್ವಪ್ರಪಂಚುಯೇನೂ ಇಲ್ಲದಂದು,
ಸ್ಥಾವರ ಜಂಗಮಾತ್ಮಕಂಗಳಿಗೆ ಆಧಾರಕರ್ತೃವೆಂಬ
ನಾಮಂಗಳೇನೂ ಇಲ್ಲದಂದು,
ಸರ್ವಶೂನ್ಯನಿರಾಲಂಬವಾಗಿರ್ದೆಯಲ್ಲಾ ನೀನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

ಎಂದು ಹೇಳುತ್ತಾರೆ. ಅಲ್ಲದೇ ತಮ್ಮ ಇನ್ನೊಂದು ವಚನದಲ್ಲಿ ಈ ಸೃಷ್ಟಿಪೂರ್ವದ ಪರಶಿವನ ಸ್ವರೂಪವನ್ನು ವರ್ಣಿಸುತ್ತ –

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯ, ಆತ್ಮನೆಂಬ
ಅಷ್ಟತನು ಮೂರ್ತಿ ಸ್ವರೂಪಗೊಳ್ಳದಂದು,
ನಾನು, ನೀನೆಂಬ ಭ್ರಾಂತಸೂತಕ ಹುಟ್ಟದಂದು,
ನಾಮ ರೂಪ ಕ್ರಿಯೆಗಳೇನುಯೇನೂ ಇಲ್ಲದಂದು, ಸರ್ವಶೂನ್ಯವಾಗಿರ್ದೆಯಲ್ಲಾ
ನೀನು ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

---

೪. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ. ೬, ವಚನ ಸಂಖ್ಯೆ ೧೩, ಪುಟ ೬
೫. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ. ೬, ವಚನ ಸಂಖ್ಯೆ ೧೧, ಪುಟ ೫

ಎಂದು ಸೃಷ್ಟಿಪೂರ್ವದ ಪರಶಿವನ ನಿಲುವನ್ನು ವಚನಗಳಲ್ಲಿಯೂ ಸಹ 'ಸರ್ವಶೂನ್ಯ ನಿರಾಲಂಬ', 'ಶೂನ್ಯಾಶೂನ್ಯ', ಮೊದಲಾದ ಮಾತುಗಳಿಂದ ವರ್ಣಿಸಿದ್ದಾರೆ.

ಹಾಗಾದರೆ ಸರ್ವಶೂನ್ಯವೆಂದು ನಿರ್ದೇಶಿತವಾಗಿರುವ ಈ ನಿರಂಜನ ತತ್ವದಿಂದ ಸಚರಾಚರ ಜಗತ್ತು ಹೇಗೆ ಸೃಷ್ಟಿಯಾಯಿತು? ಎಂಬುದನ್ನು ವಿವರಿಸುತ್ತ ವಚನಕಾರರು ಸರ್ವಶೂನ್ಯ ನಿರಾಲಂಬದಿಂದ ಶೂನ್ಯಲಿಂಗವಾಗಿ, ಅಲ್ಲಿಂದ ನಿಃಕಲ ಲಿಂಗವಾಗಿ ಪರಿಣಮಿಸಿತು. ಈ ನಿಃಕಲ ಲಿಂಗದಲ್ಲಿ ಶಕ್ತಿಸಂಚಾರವಾಗಿ ಅದು ಓಂಕಾರಕ್ಕೆ ಕಾರಣವಾಗುತ್ತದೆ. ಆ ಪ್ರಣವ ಸ್ವರೂಪಿಯಾದದ್ದೇ ಮಹಾಲಿಂಗವೆಂದೂ, ತೋಂಟದ ಸಿದ್ಧಲಿಂಗೇಶ್ವರರು –

ನಿಃಕಲ ಶಿವತತ್ವದಲ್ಲಿ ಜ್ಞಾನಚಿತ್ತು ಉದಯವಾಯಿತ್ತು. ಆ ಚಿತ್ತಿನಿಂದ ಅಕಾರ ಉಕಾರ ಮಕಾರಂಗಳೆಂಬ ಅಕ್ಷರತ್ರಯಂಗಳಾದವು. ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ ಇಂತೀ ತ್ರಿವಿಧಕ್ಕೆ ತಾಯಿ ಚಿತ್ತು. ಇಂತೀ ನಾಲ್ಕು ಒಂದಾದಲ್ಲಿ ಓಂಕಾರವೆಂಬ ಪ್ರಣವ ಉತ್ಪತ್ತಿಯಾಯಿತ್ತು, ಆ ಓಂಕಾರವೆಂಬ ಪ್ರಣವವೇ ಅಖಂಡ ಪರಿಪೂರ್ಣ ಗೋಳಕಾರ ತೇಜೋಮೂರ್ತಿಯಪ್ಪ ಮಹಾಲಿಂಗ ನೋಡಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.[೬]

ಎಂದು ನಿಃಕಲ ಲಿಂಗದಿಂದ ಪ್ರಣವ ಸ್ವರೂಪಿಯಾದ ಮಹಾಲಿಂಗವು ಉಂಟಾದ ಪರಿಯನ್ನು ವಿವರಿಸಿದ್ದಾರೆ. ಮಹಾಲಿಂಗಕ್ಕಿಂತ ಹಿಂದಿನದೆಲ್ಲವೂ ನಿರಾಕಾರ ನಿಲುವಾಗಿದ್ದು, 'ಗೋಳಕಾಕಾರದ ತೇಜೋಮೂರ್ತಿಯಾಗಿ ಪ್ರಕಾಶಿಸುವ ಮಹಾಲಿಂಗವೇ ಎಲ್ಲ ಸೃಷ್ಟಿಗೂ ಕಾರಣವಾಗುವ ಪೂರ್ವಸ್ಥಿತಿ'ಯೆಂದು ವರ್ಣಿಸಲಾಗಿದೆ.

ಇನ್ನು ಈ ಸಕಲ ಚರಾಚರ ಸೃಷ್ಟಿ ರಚನೆಗೆ ಕಾರಣವೇನು? ಸೃಷ್ಟಿ ರಚನೆಗೊಂಡ ಬಗೆ ಹೇಗೆ? ಎಂಬುದನ್ನು ವಿಶ್ಲೇಷಿಸುತ್ತ, 'ಮಹಾಲಿಂಗ ಸ್ವರೂಪಿಯಾದ ಪರಶಿವನ ಲೀಲಾ ವಿನೋದದಿಂದ ಶಿವನ ನೆನಹೇ ಅವಿನಾಭಾವ ಶಕ್ತಿಯಾಗಿ ಪರಿಣಮಿಸಿ ಸೃಷ್ಟಿ ರಚನೆಗೆ ಕಾರಣವಾಯಿತು' ಎಂದು ಶಿವಾಗಮಗಳು ಮತ್ತು ವಚನಗಳು ವಿವರಿಸುತ್ತವೆ.

ಶಕ್ತಿವಿಶಿಷ್ಟನಾದ ಪರಶಿವನೇ ಜಗತ್ತಿನ ಸೃಷ್ಟಿಗೆ ಕಾರಣನು–

ವೀರಶೈವ ಸಿದ್ಧಾಂತದ ಸೃಷ್ಟಿ ರಚನೆಯ ಕ್ರಮದಲ್ಲಿ ಕಾಣುವ ಬಹುಮುಖ್ಯವಾದ ಅಂಶವೆಂದರೆ ಶಕ್ತಿವಿಶಿಷ್ಟನಾದ ಪರಶಿವನ ಕಲ್ಪನೆ. ಈ ಶಕ್ತಿವಿಶಿಷ್ಟನಾದ ಪರಮಾತ್ಮನು ಒಮ್ಮೆ ಸೃಷ್ಟಿಗೆ ಇಚ್ಛಿಸಿದಾಗ ಆತನ ಲೀಲೆಯ ಭಾಗವಾಗಿ ವೈವಿಧ್ಯಮಯ ಸೃಷ್ಟಿಯ ಆರಂಭವಾಯಿತು ಎಂದು ಆಗಮಗಳು ಪ್ರತಿಪಾದಿಸಿವೆ.

---

೬ ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ. ೬, ವಚನ ಸಂಖ್ಯೆ ೩೩, ಪುಟ ೧೪

ಶಂಭುಃ ಕದಾಚಿನ್ನಿಜಯಾ ಪ್ರಕೃತ್ಯಾ ಲೀಲಯಾ ಸ್ವಯಮ್॥
ಸೃಷ್ಟ್ಯರ್ಥಂ ಸರ್ವತತ್ತ್ವಾನಾಂ ಜಗದುತ್ಪತ್ತಿಕಾರಣಮ್।
ಯೋಗಿನಾಮುಪಕಾರಾಯ ಸ್ವೇಚ್ಛಯಾಽಚಿಂತಯಚ್ಛಿವಃ॥[೭]

ಅರ್ಥಾತ್ ಶಂಭುವು ಒಮ್ಮೆ ಯೋಗಿಗಳ ಉಪಕಾರಕ್ಕಾಗಿ ಸರ್ವ ತತ್ತ್ವಾತ್ಮಕವಾದ ಜಗತ್ತಿನ ಸೃಷ್ಟಿಗೆ ಇಚ್ಛಿಸಿದಾಗ ಆತನಲ್ಲಿಯ ಶಕ್ತಿಯ ಸ್ಪಂದನದಿಂದ, ಜಗತ್ತಿನ ನಿರ್ಮಾಣ ಲೀಲೆಯುಂಟಾಯಿತು. ಕಾರಣ ಪರಮಾತ್ಮನು ಸರ್ವದಾ ಶಕ್ತಿವಿಶಿಷ್ಟನು. ಅವನಲ್ಲಿ ಸೃಷ್ಟಿಯ ಇಚ್ಛೆಯುಂಟಾದಾಗ ಒಂದೇ ಆದ ಅವನ ಶಕ್ತಿಯು ವಿವಿಧರೂಪಗಳನ್ನು ಧರಿಸುತ್ತದೆ ಎಂಬುದು ಶಿವಾಗಮಗಳ ಮೂಲಭೂತ ವಿಷಯವಾಗಿದೆ. ಕಾರಣ ಈ ವಿಶ್ವಾಧಿಪತಿಯಾದ ವಿಶ್ವೇಶ್ವರನು ಶಕ್ತಿ ಸಂಯುಕ್ತನಾಗಿದ್ದು ಆತನೇ ಸಮಸ್ತ ಜಗತ್ತಿನ ಸೃಷ್ಟಿಗೆ ಕಾರಣನಾಗಿದ್ದಾನೆ ಎಂದು ಆಗಮಗಳು ಪ್ರತಿಪಾದಿಸಿವೆ. ವಚನಗಳಲ್ಲಿಯೂ ಇದೇ ಅಭಿಪ್ರಾಯ ಪ್ರತಿಪಾದಿತವಾಗಿದೆ.

ಏನೆಂದೆನಲ್ಲಿಲ್ಲದ ಮಹಾ ಘನವು
ತನ್ನ ಲೀಲೆಯಿಂದ ತಾನೇ ಸ್ವಯಂಭು ಲಿಂಗವಾಯಿತ್ತು!
ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ.
ಆ ಶಿವಶಕ್ತ್ಯಾತ್ಮಕದಿಂದಾದುದು ಆತ್ಮ. ಆತ್ಮನಿಂದಾದುದು ಆಕಾಶ.
ಆಕಾಶದಿಂದಾದುದು ವಾಯು. ವಾಯುವಿನಿಂದಾದುದು ಅಗ್ನಿ,
ಅಗ್ನಿಯಿಂದಾದುದು ಅಪ್ಪು, ಅಪ್ಪುವಿನಿಂದಾದುದು ಪೃಥ್ವಿ,
ಪೃಥ್ವಿಯಿಂದಾದುದು ಸಕಲ ಜೀವವೆಲ್ಲಾ.
ಇವೆಲ್ಲ ನಿಮ್ಮ ನೆನಹು ಮಾತ್ರದಿಂದಾದುವು ಸಿಮ್ಮಲಿಗೆಯ ಚೆನ್ನರಾಮಾ.[೮]

ಎಂದು ಸೃಷ್ಟಿಯ ರಚನೆಗೆ ಕಾರಣವಾದುದು ಶಿವನ ನೆನಹುರೂಪವಾದ ಶಕ್ತಿ ಎಂಬ ಆಗಮದ ಪ್ರತಿಪಾದನೆಯನ್ನೇ ಶರಣರು ಒಪ್ಪಿಕೊಂಡಿದ್ದಾರೆ. ಅಲ್ಲದೆ ಮಾಯೆ ಎಂಬ ಮಾತನ್ನು ಶರಣರು ಶಿವನಲ್ಲಿ ಸಹಜವಾಗಿರುವ ಶಕ್ತಿ ಎಂಬ ಅರ್ಥದಲ್ಲಿಯೂ ಉಪಯೋಗಿಸುತ್ತಾರೆ –

ಅನಾದಿಯಾಗಿ ಶಿವನುಂಟು, ಮಾಯೆಯು ಉಂಟು.
ಆತ್ಮನೂ ಉಂಟೆಂಬುದನಾವರಿಯೆವಯ್ಯ.
ಆದಿ ಅನಾದಿ ಸುರಾಳ ನಿರಾಳವಿಲ್ಲದಂದು
ಮಾಯೆಯನು ಕಾಣೆ, ಆತ್ಮನನು ಕಾಣೆ.
ಮಹಾದೇವ ತಾನೊಬ್ಬನೇ ಇದ್ದನೆಂಬುದು
ಕಾಣಬಂದಿತ್ತು ನೋಡಾ ಶಿವಜ್ಞಾನದೃಷ್ಟಿಗೆ.
ಆ ಲಿಂಗ ನಿರ್ಮಿತದಿಂದ ಮಾಯೆ ಹುಟ್ಟಿತ್ತು ನೋಡಾ.

---

೭. ಸೂಕ್ಷ್ಮಾಗಮ ಪಟಲ ೧, ಶ್ಲೋಕ ಸಂಖ್ಯೆ ೧೮–೧೯
೮. ಸಮಗ್ರ ವಚನ ಸಂಪುಟ ೭, ಸಂಕೀರ್ಣ ವ.ಸಂ. ೨, ವಚನ ಸಂಖ್ಯೆ ೫೭೩, ಪುಟ ೧೮೯

ಆ ಮಾಯೆಯಿಂದ ತತ್ವ ಬ್ರಹ್ಮಾಂಡಾದಿ
ಲೋಕಾದಿ ಲೋಕಂಗಳು ಹುಟ್ಟಿದುವು ನೋಡಾ.
ಹೀಂಗೆ ನಿನ್ನ ನೆನಹು ಮಾತ್ರದಿಂದ ತ್ರೈಜಗ ಹುಟ್ಟಿತ್ತು ನೋಡಾ.
ಆ ತ್ರೈಜಗಂಗಳ ಉತ್ಪತ್ತಿ ಸ್ಥಿತಿ ಲಯಂಗಳಿಗೆ
ನೀನೇ ಕಾರಣನಯ್ಯ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ[೯]

ಎಂದು ಮಾಯಾಶಕ್ತಿ ಸಂಯುಕ್ತನಾದ ಶಿವನ ನೆನಹಿನಿಂದ ತ್ರಿಜಗಂಗಳುತ್ಪತ್ತಿಯಾದವೆಂದು ಆಗಮದ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ. ಇದನ್ನು ಸಿದ್ಧರಾಮೇಶ್ವರರು ಇನ್ನೊಂದು ರೀತಿಯಲ್ಲಿ ಹೀಗೆ ಹೇಳಿದ್ದಾರೆ –

ಲೀಲೆಯದು ಪರಬೊಮ್ಮದ ಇಚ್ಛೆ.
ಇಚ್ಛೆಯದು ಸಕಲ ಜೀವ ಜಾಲೋತ್ಪತ್ತಿ.
ಸಕಲ ಜೀವ ಜಾಲೋತ್ಪತ್ತಿಯದು ಜಗದ್ರಚನೆ.
ಜಗದ್ರರಚನೆಯದು ಜಗತ್ಪ್ರಳಯ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ.[೧೦]

ಎಂದು ಲೀಲಾರೂಪಿಯಾದ ಪರಬೊಮ್ಮದ ಇಚ್ಛೆಯೇ ಜೀವಜಾಲೋತ್ಪತ್ತಿಗೂ ಜಗದ್ರಚನೆಗೂ ಜಗತ್ಪ್ರಳಯಕ್ಕೂ ಕಾರಣ. ಅಂದರೆ ಇದೊಂದು ನಿರಂತರವಾದ ಕ್ರಿಯೆ ಎಂಬುದನ್ನು ಸಿದ್ಧರಾಮೇಶ್ವರರು ಸೂಚಿಸುತ್ತಾರೆ. ಹೀಗೆ ಶಕ್ತಿಯು ಯಾವಾಗಲೂ ಶಿವನಲ್ಲೇ ಇದ್ದು, ಕೆಲವು ವೇಳೆ ಅವ್ಯಕ್ತವಾಗಿಯೂ ಮತ್ತೆ ಕೆಲವು ವೇಳೆ ವ್ಯಕ್ತವೂ ಆಗಿರುತ್ತದೆ. ಶಕ್ತಿಯು ಅವ್ಯಕ್ತವಾಗಿ ಶಿವನಲ್ಲಿ ಒಂದಾಗಿದ್ದರೆ ಆ ಸ್ಥಿತಿಗೆ ಪ್ರಳಯವೆಂತಲೂ, ಅದೇ ಶಕ್ತಿ ವ್ಯಕ್ತವಾಗಿ ವಿಕಾಸವಾದರೆ ಸೃಷ್ಟಿಯೆಂತಲೂ ಹೆಸರು. ಕಾರಣ ಪರಮಾತ್ಮನು ಸರ್ವದಾ ಶಕ್ತಿವಿಶಿಷ್ಟನು, ಅವನಲ್ಲಿ ಸೃಷ್ಟಿಯ ಇಚ್ಛೆಯುಂಟಾದಾಗ ಅವನಲ್ಲಿಯ ಶಕ್ತಿಯು ವಿವಿಧರೂಪಗಳನ್ನು ಧರಿಸುತ್ತದೆ ಎಂದು ಶಿವಾಗಮಗಳು ಮತ್ತು ವಚನಗಳು ಅರುಹುತ್ತವೆ.

ಶಕ್ತಿವಿಶಿಷ್ಟನಾದ ಪರಶಿವನಿಂದ ವಿವಿಧ ಶಕ್ತಿಗಳ, ಸಾದಾಖ್ಯಗಳ ಹಾಗೂ ಕಲೆಗಳ ಉತ್ಪತ್ತಿ –

ಪರಮಾತ್ಮನು ಸೃಷ್ಟಿಯ ಇಚ್ಛೆಯಿಂದ ತಪಸ್ಸನ್ನು ಮಾಡಿದಾಗ ಅವನಲ್ಲಿ ಅವಿನಾಭಾವ ಸಂಬಂಧದಿಂದಿದ್ದ ಶಕ್ತಿಯ ಸ್ಪಂದವಾಗಿ ಅದರಿಂದ ವಿವಿಧ ಶಕ್ತಿಗಳ ಉಗಮವಾಯಿತು ಮತ್ತು ಅವುಗಳಿಂದ ವೈವಿಧ್ಯಮಯ ಸೃಷ್ಟಿಯ ಆರಂಭವಾಯಿತು.

ಧ್ಯಾಯಮಾನಾತ್ ತತೋ ದೇವಿ ಪರಾಶಕ್ತಿರಜಾಯತ।
ಆದಿಶಕ್ತಿಸ್ತತೋ ಜಾತಾ ಪರಾಶಕ್ತ್ಯಂಶಭೇದತಃ॥
ಆದಿಶಕ್ತ್ಯಂಶತಃ ಸಾಕ್ಷಾದಿಚ್ಛಾಶಕ್ತಿರಜಾಯತ।

---

೯. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ. ೬, ವಚನ ಸಂಖ್ಯೆ ೬೬, ಪುಟ ೩೫
೧೦.ಸಿದ್ಧರಾಮೇಶ್ವರ ವ.ಸಂ. ಸಮಗ್ರ ವಚನ ಸಂಪುಟ ೪, ವಚನ ಸಂಖ್ಯೆ ೧೭೩೪, ಪುಟ ೪೯೨

ಇಚ್ಛಾಶಕ್ತ್ಯಂಶಭೇದೇನ ಜ್ಞಾನಶಕ್ತಿರಜಾಯತ॥
ಜ್ಞಾನಶಕ್ತ್ಯಂಶಭೇದೇನ ಕ್ರಿಯಾಶಕ್ತಿರಜಾಯತ।
ಏಕೈವ ಪಂಚಧಾ ಭಿನ್ನಾ ನಿರ್ಮಲಾ ಶಿವಚಿಂತಯಾ॥[೧೧]

ಪರಮಾತ್ಮನ ಧ್ಯಾನದಿಂದ ಪರಾಶಕ್ತಿಯು ಉದಿಸಿತು. ಆ ಪರಾಶಕ್ತಿಯ ಅಂಶವನ್ನು ಹಂಚಿಕೊಂಡು ಆದಿಶಕ್ತಿಯು ಹುಟ್ಟಿತು. ಆದಿಶಕ್ತಿಯ ಅಂಶವನ್ನು ಹೊಂದಿ ಇಚ್ಛಾಶಕ್ತಿಯು ಜನಿಸಿತು. ಇಚ್ಛಾಶಕ್ತಿಯ ಅಂಶವಾಗಿ ಜ್ಞಾನಶಕ್ತಿಯು ಉಂಟಾಯಿತು. ಜ್ಞಾನಶಕ್ತಿಯ ಅಂಶದಿಂದ ಕ್ರಿಯಾಶಕ್ತಿ ಜನಿಸಿತು. ಹೀಗೆ ಒಂದೇ ಆಗಿದ್ದ ನಿರ್ಮಲ ಶಕ್ತಿಯು ಪರಶಿವನ ಧ್ಯಾನದಿಂದ ಐದು ವಿಧವಾಯಿತು. ಐದು ಶಕ್ತಿಗಳ ಮೂಲಕವೇ ಶಿವನು ಸೃಷ್ಟಿಯ ಲೀಲೆಗಾಗಿ ಐದು ಸಾದಾಖ್ಯಗಳ ಸ್ವರೂಪವನ್ನು ತಾಳುತ್ತಾನೆ ಎನ್ನುತ್ತ –

ಪರಾಶಕ್ತ್ಯಾದಿಶಕ್ತ್ಯೋಶ್ಚ ಬಿಂದುನಾದಸ್ವರೂಪಯೋಃ।
ಮೇಲನೇ ಶಿವತತ್ತ್ವಸ್ಯ ಸಾದಾಖ್ಯಂ ಸಮಜಾಯತ॥
ಪ್ರಥಮಂ ಶಿವಸಾದಾಖ್ಯಮಮೂರ್ತಂ ತು ತತೋಽಭವತ್।
ತತಃ ಸಮೂರ್ತಸಾದಾಖ್ಯಂ ತತೋ ವೈ ಕರ್ತೃನಾಮಕಮ್
ಕರ್ಮಸಾದಾಖ್ಯಮಪರಂ ಪಂಚಸಾದಾಖ್ಯಮೀರಿತಮ್॥[೧೨]

ಬಿಂದು ಸ್ವರೂಪದ ಪರಾಶಕ್ತಿ ಮತ್ತು ನಾದ ಸ್ವರೂಪದ ಆದಿಶಕ್ತಿ ಇವೆರಡರ ಮಿಲನದಿಂದ ಶಿವತತ್ತ್ವದಿಂದ ಸಾದಾಖ್ಯದ ಉದಯವಾಯಿತು. ಇದರಿಂದ ನಿರ್ಗುಣನಾಗಿದ್ದ ಪರಮಾತ್ಮನು ಸಗುಣನಾದನು. ಹೀಗೆ ಶಿವ–ಶಕ್ತಿಯ ಮಿಲನದಿಂದ ಶಿವ ಸಾದಾಖ್ಯ; ಅಮೂರ್ತ ಸಾದಾಖ್ಯ, ಮೂರ್ತ ಸಾದಾಖ್ಯ, ಕರ್ತೃ ಸಾದಾಖ್ಯ ಹಾಗೂ ಕರ್ಮ ಸಾದಾಖ್ಯ ಎಂಬ ಐದು ಸಾದಾಖ್ಯ ತತ್ತ್ವಗಳು ಉತ್ಪತ್ತಿಯಾದವು. ಇದರಿಂದ ಪ್ರಪಂಚದಲ್ಲಿ ಎಲ್ಲಾ ಚರಾಚರ ವಸ್ತುಗಳು ಹುಟ್ಟುತ್ತವೆ ಎನ್ನುತ್ತ ಈ ಐದು ಸಾದಾಖ್ಯಗಳು ನಿವೃತ್ತಿಕಲಾ, ಪ್ರತಿಷ್ಠಾಕಲಾ, ವಿದ್ಯಾಕಲಾ, ಶಾಂತಿಕಲಾ ಮತ್ತು ಶಾಂತ್ಯತೀತಕಲಾ ಎಂಬ ಐದು ಕಲೆಗಳಿಂದ ಯುಕ್ತವಾಗಿವೆ. ನಿವೃತ್ತಿ ಕಲೆಯು ಕರ್ಮಸಾದಾಖ್ಯಕ್ಕೂ, ಪ್ರತಿಷ್ಠಾಕಲೆಯು ಕರ್ತೃಸಾದಾಖ್ಯಕ್ಕೂ, ವಿದ್ಯಾಕಲೆಯು ಮೂರ್ತಸಾದಾಖ್ಯಕ್ಕೂ, ಶಾಂತಿಕಲೆಯು ಅಮೂರ್ತಸಾದಾಖ್ಯಕ್ಕೂ ಮತ್ತು ಶಾಂತ್ಯತೀತಕಲೆಯು ಶಿವಸಾದಾಖ್ಯಕ್ಕೂ ಸಂಬಂಧಿಸಿವೆ ಎಂದು ಸಾದಾಖ್ಯಗಳ ಉತ್ಪತ್ತಿಯನ್ನು ಮತ್ತು ಸ್ವರೂಪವನ್ನು[೧೩] ವಿವರಿಸುತ್ತದೆ.

ಅಲ್ಲದೇ ಓಂಕಾರವು ಮಹಾಲಿಂಗದ ಸ್ವರೂಪವಾಗಿರುವುದರಿಂದ ಓಂಕಾರದ ಆರು ಅವಯವಗಳಾದ ಜ್ಯೋತಿಸ್ವರೂಪ, ದರ್ಪಣಾಕಾರ, ಅರ್ಧಚಂದ್ರಕ,

---

೧೧. ಸೂಕ್ಷ್ಮಾಗಮ ಪಟಲ ೧, ಶ್ಲೋಕ ಸಂಖ್ಯೆ ೨೦–೨೨
೧೨. ಸೂಕ್ಷ್ಮಾಗಮ ಪಟಲ ೧, ಶ್ಲೋಕ ಸಂಖ್ಯೆ ೨೪–೨೬
೧೩. ಸೂಕ್ಷ್ಮಾಗಮ ಪಟಲ ೧, ಶ್ಲೋಕ ಸಂಖ್ಯೆ ೩೩–೪೪

ಕುಂಡಲಾಕಾರ, ದಂಡಸ್ವರೂಪ ಹಾಗೂ ತಾರಕ ಸ್ವರೂಪದಲ್ಲಿ ಕಲೆಗಳು,[೧೪] ಸಾದಾಖ್ಯಗಳು,[೧೫] ಶಬ್ದಾದಿ ತನ್ಮಾತ್ರೆಗಳು[೧೬] ಪಂಚ ಮಹಾಭೂತಗಳು[೧೭] ಹಾಗೂ ಜ್ಞಾನೇಂದ್ರಿಯಗಳು[೧೮] ಉತ್ಪತ್ತಿಗೊಂಡ ಕ್ರಮವನ್ನು ನಿಃಕಲತೀತಾಗಮ, ಅತೀಮಹಾಗಮ, ಉತ್ತರವಾತುಲಾಗಮ, ಚಿತ್ರಕಾಶಾಗಮ, ಚಕ್ರತೀತಾಗಮಗಳು ವಿವರಿಸಿವೆ. ಇನ್ನು ಒಟ್ಟಾರೆ ಸಕಲ ಚರಾಚರ ಸೃಷ್ಟಿಯು ಮೂವತ್ತಾರು ತತ್ವಗಳಿಂದ ಕೂಡಿದೆ ಎನ್ನುತ್ತ –

> "ರಾಗ ವಿದ್ಯಾಕಲಾಶ್ಚೈವ ನೇತಿಶ್ಚಕಾಲ ಮಾಯಯಾ ।
> ಈಶ್ವರಃ ಶುದ್ಧವಿದ್ಯಾಶ್ಚ ಪರಾಶಕ್ತಿಃ ಸದಾಶಿವಃ ॥
> ಇತಿ ದಶ ತತ್ವಂ, ಚೈವ ನಿಃಕಲತತ್ವ ವಿಲೀಯತೇ ।
> ಗುಣತ್ರಯಂ ಮನೋ ಬುದ್ಧಿಃ ಚಿತ್ತಮಹಂಕಾರಸ್ತಥಾ ॥
> ಶ್ರೋತ್ರತ್ವಗ್ನೇತ್ರಜಿಹ್ವಾ ಚ ಘ್ರಾಣಂ ಪಂಚೇಂದ್ರಿಯಂ ತಥಾ ।
> ವಾಕ್ ಪಾಣಿಶ್ಚ ಪಾದಶ್ಚ ಪಾಯುಗುಹ್ಯಸ್ತಥೈವ ಚ ॥
> ಪೃಥಿವ್ಯಪ್‌ಸ್ತತಸ್ತೇಜಃ ವಾಯುರ್ವ್ಯೋಮ ತಥೈವ ಚ ।
> ಇತಿ ದಶೇಂದ್ರಿಯಾಣಾಂ ಸಕಲ ತತ್ವವಿಲೀಯತೇ ।
> ಸಕಲನಿಃಕಲೋರ್ರೈಕ್ಯಂ ಪರತತ್ವಂ ವರಾನನೇ ॥"[೧೯]

ಎಂದು ರಾಗ, ವಿದ್ಯೆ, ಕಲೆ, ನಿಯತಿ, ಕಾಲ, ಮಾಯೆ, ಶುದ್ಧವಿದ್ಯೆ, ಈಶ್ವರ, ಸದಾಶಿವ, ಮಹಾಶಕ್ತಿ – ಈ ಹತ್ತು ತತ್ವಗಳು ನಿಃಕಲತತ್ವವೆಂದೂ, ಮನ, ಬುದ್ಧಿ, ಚಿತ್ತ, ಅಹಂಕಾರ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ, ವಾಕು, ಪಾಣಿ, ಪಾದ, ಪಾಯು, ಗುಹ್ಯ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ – ಈ ಇಪ್ಪತ್ನಾಲ್ಕು ತತ್ವಗಳು ಸಕಲತತ್ವವೆಂದು ವಿಭಾಗಿಸಿ, ಈ ಸಕಲ ಮತ್ತು ನಿಃಕಲತತ್ವಗಳು ಏಕಾರ್ಥವಾಗಿ ಪರಾಶಿವತತ್ವವಾಗಿತ್ತು ಎಂದು ಮೂವತ್ತಾರು ತತ್ವಗಳನ್ನು ನಿರೂಪಿಸುತ್ತದೆ.

ಹೀಗೆ ಪರಶಿವನು ತನ್ನ ಶಕ್ತಿಯೊಂದಿಗೆ ಸೇರಿ ಶಿವ–ಶಕ್ತಿ–ಸದಾಶಿವ–ಈಶ್ವರ–ಶುದ್ಧವಿದ್ಯಾ–ಮಾಯಾ–ಕಲಾ–ವಿದ್ಯಾ–ರಾಗ–ಕಾಲ–ನಿಯತಿ–ಪುರುಷ–ಪ್ರಕೃತಿ–ಬುದ್ಧಿ–ಅಹಂಕಾರ–ಮನಸ್ಸು–ಶ್ರೋತ್ರ–ತ್ವಕ್–ನೇತ್ರ–ಜಿಹ್ವಾ–ಘ್ರಾಣ–ವಾಕ್–ಪಾಣಿ–ಪಾದ–ವಾಯು–ಉಪಸ್ಥ–ಶಬ್ದ–ಸ್ಪರ್ಷ–ರೂಪ–ರಸ–ಗಂಧ–ಆಕಾಶ–ವಾಯು–ಅಗ್ನಿ–ಜಲ–ಪೃಥ್ವಿಗಳೆಂಬ ಮೂವತ್ತಾರು ತತ್ತ್ವಗಳಿಂದಾದ ಜಗತ್ತಿನ ರೂಪದಲ್ಲಿ ಪರಮಾತ್ಮನು ಪರಿಣಮಿಸುವನು ಎನ್ನುತ್ತ ಚರಾತ್ಮಕವಾದ ಜಗತ್ತು ಮೂವತ್ತಾರು ತತ್ತ್ವಗಳಿಂದ

---

೧೪. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ. ೮, ವಚನ ಸಂಖ್ಯೆ ೪೬೯ ಪುಟ ೨೧೪
೧೫. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ. ೮, ವಚನ ಸಂಖ್ಯೆ ೪೭೩ ಪುಟ ೨೧೬
೧೬. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ. ೮, ವಚನ ಸಂಖ್ಯೆ ೪೮೫ ಪುಟ ೨೨೩
೧೭. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ. ೮, ವಚನ ಸಂಖ್ಯೆ ೫೦೨ ಪುಟ ೨೩೫
೧೮. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ. ೮, ವಚನ ಸಂಖ್ಯೆ ೫೧೯ ಪುಟ ೨೪೪
೧೯. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ. ೮, ವಚನ ಸಂಖ್ಯೆ ೭೨೩ ಪುಟ ೩೨೦

ನಿರ್ಮಿತವಾಗಿದೆ ಎಂಬುದನ್ನು ಶಿವಾಗಮಗಳು ಪ್ರತಿಪಾದಿಸುತ್ತವೆ.

ಇವೇ ಮೂವತ್ತಾರು ತತ್ವಗಳನ್ನು ವಚನಕಾರರು ಪ್ರತಿಪಾದಿಸಿದ್ದರೂ ಸಹ ಅವರ ವಿಭಾಗ ಕ್ರಮದಲ್ಲಿ ವ್ಯತ್ಯಾಸವಿದೆ.

"ಶಿವತತ್ತ್ವ ಐದು ಅವಾವೆಂದಡೆ :
ಶಿವ, ಶಕ್ತಿ, ಸಾದಾಖ್ಯ (ಸದಾಶಿವ), ಈಶ್ವರ, ಶುದ್ಧವಿದ್ಯೆ–
ಇಂತು ಶಿವತತ್ತ್ವ ಐದು.
ಇನ್ನು ವಿದ್ಯಾತತ್ತ್ವವೆಂತೆಂದೊಡೆ :
ಕಲೆ, ರಾಗ, ನಿಯತಿ, ವಿದ್ಯೆ, ಪುರುಷ, ಪ್ರಕೃತಿ ಇಂತು ವಿದ್ಯಾತತ್ತ್ವಗಳು ಏಳು.
ಇನ್ನು ಕರಣಂಗಳೆಂತೆಂದಡೆ :
ಚಿತ್ತ ಬುದ್ಧಿ ಅಹಂಕಾರ, ಮನ – ಇವು ಕರಣ ತತ್ತ್ವ ನಾಲ್ಕು.
ಇನ್ನು ಇಂದ್ರಿಯಂಗಳೆಂತೆಂದಡೆ :
ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ – ಇಂತು ಬುದ್ಧೀಂದ್ರಿಯಂಗಳು ಐದು.
ಇನ್ನು ಕರ್ಮೇಂದ್ರಿಯಂಗಳೆಂತೆಂದಡೆ :
ವಾಕ್ಕು, ಪಾದ, ಪಾಣಿ, ಗುಹ್ಯ, ಪಾಯು – ಇಂತು ಕರ್ಮೇಂದ್ರಿಯಂಗಳು ಐದು.
ಇನ್ನು ತನ್ಮಾತ್ರಗಳೆಂತೆಂದಡೆ :
ಶಬ್ದ, ಸ್ಪರ್ಶ, ರೂಪ, ರಸ, ಗಂಧ – ಇಂತು ಜ್ಞಾನೇಂದ್ರಿಯ ವಿಷಯ ಐದು.
.... ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ – ಇಂತು ಭೂತಂಗಳು ಐದು[೨೦]

ಹೀಗೆ ಶರಣರು ಮೂವತ್ತಾರು ತತ್ತ್ವಗಳನ್ನೇ ಅಂಗೀಕರಿಸಿದರೂ ಅವುಗಳ ಪರಿಗಣನೆಯ ಕ್ರಮ ಮತ್ತು ಕಲ್ಪನೆಗಳಲ್ಲಿ ವಿಶಿಷ್ಟತೆಯನ್ನು ತೋರಿ, ತತ್ವಗಳನ್ನು ಶಿವತತ್ವ, ವಿದ್ಯಾತತ್ವ, ಆತ್ಮತತ್ವ ಎಂದು ಮೂರು ಬಗೆಯಾಗಿ ವಿಂಗಡಿಸಿದ್ದಾರೆ. ಇದನ್ನೇ ಚೆನ್ನಬಸವಣ್ಣನವರು ವಿವರಿಸುತ್ತ –

.... ಜೀವಾತ್ಮನೆಂಬ ಅಂಗಸ್ಥಲಕ್ಕೆ ಸೇರಿದ
ತತ್ತ್ವಂಗಳಿಪ್ಪತ್ತೈದು ಅವಾವುವಯ್ಯಾ ಎಂದಡೆ;
ಶ್ರೋತ್ರಾದಿ ಜ್ಞಾನೇಂದ್ರಿಯಗಳೈದು, ವಾಗಾದಿ ಕರ್ಮೇಂದ್ರಿಯಗಳೈದು,
ಶಬ್ದಾದಿ ವಿಷಯಂಗಳೈದು ಪ್ರಾಣಾದಿ ವಾಯುಗಳೈದು,
ಮನ ಬುದ್ಧಿ ಚಿತ್ತ ಅಹಂಕಾರ ಜೀವಂಗಳೈದು. ಅಂತು ಅಂಗತತ್ತ್ವಗಳಿಪ್ಪತ್ತೈದು.
ಇಂತು ಅಂಗ ತತ್ತ್ವ ಇಪ್ಪತ್ತೈದು ತನ್ನೊಳಗೆ ಸಮರಸತ್ವನೆಯ್ದಿಸಲೋಸುಗ,
ಭಕ್ತಿ ತದರ್ಥವಾಗಿ, ಆ ಮಹಾಘನ ಪರಾತ್ಪರವಪ್ಪ
ದಿವ್ಯಲಿಂಗವು ಹನ್ನೊಂದು ತತ್ತ್ವವಾಯಿತ್ತು.

---

೨೦. ಸಿದ್ಧರಾಮೇಶ್ವರ ವ.ಸಂ. ಸಮಗ್ರ ವಚನ ಸಂಪುಟ ೪, ವಚನ ಸಂಖ್ಯೆ ೧೧೦೫, ಪುಟ ೨೮೨

ಇಂತೀ ಹನ್ನೊಂದು ತತ್ತ್ವದ ಪರಿಕ್ರಮವೆಂತಂದಡೆ:
ಶಾಂತಾದಿ ಶಕ್ತಿಗಳೈದು, ಶಿವಾದಿ ಸಾದಾಖ್ಯಗಳೈದು,
ಪರಶಿವತತ್ತ್ವವೊಂದು ಇಂತೀ ಲಿಂಗತತ್ತ್ವ ಹನ್ನೊಂದು
ಅ ಅಂಗತತ್ತ್ವ ಲಿಂಗತ್ತ್ವವೆಂಬ ಉಭಯ ತತ್ತ್ವ ಮೂವತ್ತಾರು ....

ಎಂದು ಮೂವತ್ತಾರು ತತ್ತ್ವಗಳನ್ನು ಇಪ್ಪತ್ತೈದು 'ಅಂಗತತ್ವಗಳು' ಹಾಗೂ ಹನ್ನೊಂದು 'ಲಿಂಗತತ್ವ' ಗಳೆಂದು ವಿಭಾಗಿಸಿದ್ದಾರೆ. ಈ ಸೃಷ್ಟಿ ರಚನೆಯನ್ನು ಕುರಿತು ಇನ್ನೂ ವಿವರವಾದ ವಿವೇಚನೆ ಶರಣರ ವಚನಗಳಲ್ಲಿದೆ. 'ಸೃಷ್ಟಿಯ ವಚನಗಳು' ಎಂಬುದಾಗಿಯೇ ಕೆಲವು ದೀರ್ಘವಾದ ವಚನಗಳುಂಟು. ಅಕ್ಕನ 'ಸೃಷ್ಟಿಯ ವಚನ' ಗಳನ್ನು ಪ್ರಭುದೇವರ 'ಸೃಷ್ಟಿಯ ವಚನ'ಗಳನ್ನು ಇಲ್ಲಿ ಹೆಸರಿಸಬಹುದು. ಅತಿ ದೀರ್ಘವಾದ ಈ ವಚನಗಳು ಮೇಲೆ ಹೇಳಿದ ಸೃಷ್ಟಿಕ್ರಮವನ್ನು ಅಂದರೆ ಶೂನ್ಯಲಿಂಗ, ನಿಃಕಲಲಿಂಗ, ಸಾದಾಖ್ಯಗಳು, ಪಂಚಭೂತಾದಿಗಳು ಇವುಗಳನ್ನೇ ಅಲ್ಪಸ್ವಲ್ಪ ಬದಲಾವಣೆಗಳೊಡನೆ ವಿವರಿಸುತ್ತವೆ. ಅಕ್ಕನ ಸೃಷ್ಟಿಯ ವಚನದಲ್ಲಿ –

'.... ಮೊದಲು ನಿರಾಕಾರವಾದ ನಿಃಕಲ ಬ್ರಹ್ಮವು; ಆ ನಿಃಕಲ ಬ್ರಹ್ಮದಿಂದ ಚಿತ್ತು, ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳು ಹುಟ್ಟಿದವು. ಆ ಚಿನ್ನಾದ ಚಿದ್ಬಿಂದು ಚಿತ್ಕಳೆ ಮೂಲಚಿತ್ತೆಂಬ ಚತುರ್ವಿಧವು ಘಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು. ಆ ಮಹಾಲಿಂಗವೇ ಪಂಚ ಸಾದಾಖ್ಯ ಮೂರ್ತಿಯೆಂದೆನಿಸಿತು. ಆ ಪಂಚಸಾದಾಖ್ಯವೆ ಪಂಚಲಿಂಗ ಪ್ರಕಾಶವೆಂದೆನಿಸಿತು. ಆ ಪಂಚಲಿಂಗ ಪ್ರಕಾಶವೆ ಪಂಚಮುಖವೆಂದೆನಿಸಿತು. ಆ ಪಂಚಮುಖದಿಂದಲೆ ಪಂಚಾಕ್ಷರಂಗಳುತ್ಪತ್ತಿ. ಆ ಪಂಚಾಕ್ಷರಗಳಿಂದಲೆ ಪಂಚಕಲೆಗಳುತ್ಪತ್ತಿ. ಆ ಪಂಚಕಲೆಗಳಿಂದಲೆ ಪಂಚಶಕ್ತಿಗಳುತ್ಪತ್ತಿ. ಆ ಪಂಚಶಕ್ತಿಗಳಿಂದಲೇ ಪಂಚಕರಣಂಗಳುತ್ಪತ್ತಿ. ಆ ಪಂಚಕರಣಂಗಳಿಂದಲೇ ಪಂಚ ತನ್ಮಾತ್ರೆಗಳುತ್ಪತ್ತಿ. ಪಂಚ ತನ್ಮಾತ್ರೆಗಳಿಂದಲೇ ಪಂಚಭೂತಂಗಳುತ್ಪತ್ತಿ. ಆ ಪಂಚಭೂತಂಗಳೆ ಪಂಚಕರಣತ್ವವನೈದಿ ಒಂದೊಂದು ತತ್ವಂಗಳು ಐದು ಐದು ತತ್ವಂಗಳ ಸ್ವರೂಪವನು ತಾಳಿ ಇಪ್ಪತ್ತೈದು ತತ್ವಂಗಳಾಗಿ, ಆ ಇಪ್ಪತ್ತೈದು ತತ್ವಾತ್ಮಕವಾದ ಶರೀರವು ತನಗೆ ಬಂದು ದೊರೆಕೊಂಡಿತಲಾ.' ಎಂದು ಬ್ರಹ್ಮಾಂಡದಿಂದ ಪಿಂಡಾಂಡದವರೆಗೂ ಬೆಳೆದು ಬಂದ ಸೃಷ್ಟಿಕ್ರಮದ ನಿರೂಪಣೆಗೈದಿದ್ದಾರೆ.

ಸೃಷ್ಟಿ ಶಿವನ ಲೀಲಾ ವಿನೋದ

"ತನ್ನ ವಿನೋದಕ್ಕೆ ತಾನೇ ಸೃಜಿಸಿದ ಸಕಲ ಜಗತ್ತು."[೨೧] – ಶಿವ ತನ್ನ ಲೀಲೆಗಾಗಿ ಈ ಜಗತ್ತನ್ನು ಸೃಷ್ಟಿಸಿದ್ದಾನೆ; ಇದನ್ನು ತನ್ನಲ್ಲಿಯೇ ಅಡಗಿಸಿಕೊಳ್ಳುತ್ತಾನೆ;

---

೨೧. ಶಿವಶರಣೆ ವ. ಸಂ, ಸಮಗ್ರ ವಚನ ಸಂಪುಟ ೫, ವಚನ ಸಂಖ್ಯೆ ೨೩೨, ಪುಟ ೬೯

ಮತ್ತೆ ಹೊರಹೊಮ್ಮಿಸುತ್ತಾನೆ. ಈ ಕ್ರಿಯೆ ಅನಾದಿಯಾದದ್ದು; ಅನಂತವಾದದ್ದು. ಶಿವನ ನೆನಹು ರೂಪವಾದ ಶಕ್ತಿಯಿಂದ ನಡೆಯುವ ಒಂದು ಲೀಲೆ ಇದು.

ಉತ್ಪದ್ಯಂತೇ ವಿಲೀಯಂತೇ ಯಥಾಬ್ಧೌ ವೀಚಯಸ್ತಥಾ।[೨೨]
ತ್ವಯಿ ಸರ್ವಮಿದಂ ದೃಶ್ಯಂ ಜಗದೇತಚ್ಚರಾಚರಮ್॥

ಸಮುದ್ರದಲ್ಲಿ ಅಲೆಗಳು ಉದಯಿಸಿ ಅಲ್ಲಿಯೇ ವಿಲೀನವಾಗುವಂತೆ, ಚರಾತ್ಮಕವಾದ ಈ ದೃಶ್ಯ ಜಗತ್ತು ಶಿವನಲ್ಲಿ ಉದಯಿಸಿ ಶಿವನಲ್ಲಿಯೇ ವಿಲೀನವಾಗುತ್ತದೆ. ಅಂದರೆ ಈ ಭೌತಪ್ರಪಂಚ ಮತ್ತು ಚೈತನಾತ್ಮಕವಾದ ಜೀವರುಗಳು ಈ ಎಲ್ಲವನ್ನೂ ಮಹಾಕರ್ತ ತನ್ನ ಶಕ್ತಿಯ ವಿನೋದಕ್ಕೆ ಸೃಷ್ಟಿಸಿದ್ದಾನೆ ಎಂಬುದು ಶಿವಾಗಮಗಳ ಮತ್ತು ವಚನಗಳ ಅಭಿಪ್ರಾಯದ ಸಾರವಾಗಿದೆ.

ಒಟ್ಟಿನಲ್ಲಿ ಪರಮೇಶ್ವರನು ಸ್ವಲೀಲೆಯಿಂದ ಜಗತ್ತುಗಳಿಗೆಲ್ಲ ಕಾರಣನಾದ ತತ್ವಗಳನ್ನು ಸೃಷ್ಟಿ ಮಾಡಬೇಕೆಂಬ ಸಂಕಲ್ಪ ಹೊಂದಿದವನಾಗಲು ಆ ಧ್ಯಾನದಿಂದಲೆ ಅವನಲ್ಲಿ ಅವಿನಾಭಾವ ಸಂಬಂಧದಿಂದಿದ್ದ ಶಕ್ತಿಯ ಸ್ಪಂದವಾಗಿ ಅದರಿಂದ ವಿವಿಧ ಶಕ್ತಿಗಳ ಉಗಮವಾಯಿತು ಮತ್ತು ಅವುಗಳಿಂದ ವೈವಿಧ್ಯಮಯ ಸೃಷ್ಟಿಯ ಆರಂಭವಾಯಿತು ಎಂದು ಶಿವಾಗಮಗಳು ವಿವರಿಸುತ್ತವೆ.

ಈ ಶಿವಶಕ್ತಿಯರ ಕಲ್ಪನೆಯಲ್ಲಿ ಮತ್ತು ಸೃಷ್ಟಿ ನಿರ್ಮಾಣಕ್ಕೆ ಕಾರಣವಾದ ಮೂವತ್ತಾರು ತತ್ವಗಳ ನಿರೂಪಣೆಯಲ್ಲಿ ಶಿವಾಗಮ ಮತ್ತು ವಚನಗಳಲ್ಲಿ ಸಾಮ್ಯತೆಯಿದೆ. ಆದರೆ ವಚನಕಾರರು ಮೂವತ್ತಾರು ತತ್ತ್ವಗಳನ್ನೇ ಅಂಗೀಕರಿಸಿದರೂ ಅವುಗಳ ಪರಿಗಣನೆಯ ಕ್ರಮ ಮತ್ತು ಕಲ್ಪನೆಗಳಲ್ಲಿ ವಿಶಿಷ್ಟತೆಯನ್ನು ತೋರಿ, ತತ್ವಗಳನ್ನು ಶಿವತತ್ವ, ವಿದ್ಯಾತತ್ವ, ಆತ್ಮತತ್ವ ಎಂದು ಮೂರು ಬಗೆಯಾಗಿ ವಿಂಗಡಿಸಿ, ಪಂಚ ಸಾದಾಖ್ಯಗಳು, ಪಂಚಕಲೆಗಳು ಇವು ಹತ್ತು ವಿದ್ಯಾತತ್ತ್ವಗಳಾಗುತ್ತವೆ. ಇವೆಲ್ಲಕ್ಕೂ ಕಾರಣವಾದ ಶಿವತತ್ವವೂ ಸೇರಿ ಈ ಹನ್ನೊಂದನ್ನು ಲಿಂಗತತ್ವಗಳೆಂದು ಕರೆದಿದ್ದಾರೆ. ಇನ್ನು ಆತ್ಮವು ಈ ಸೃಷ್ಟಿಯಲ್ಲಿ ಮೈದೋರಲು ಕಾರಣವಾದ ಈ ದೇಹಕ್ಕೆ ಸಂಬಂಧಿಸಿದುದು ಆತ್ಮತತ್ವ. ಇದು ಪಂಚಭೂತಗಳು, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ ಮತ್ತು ಪಂಚತನ್ಮಾತ್ರೆಗಳು, ಮನ, ಬುದ್ಧಿ, ಚಿತ್ತ, ಅಹಂಕಾರ, ಜೀವ – ಈ ಇಪ್ಪತ್ತೈದು ತತ್ತ್ವಗಳನ್ನು ಅಂಗತತ್ವಗಳೆಂದೂ ಕರೆಯಲಾಗಿದೆ.

ಪರಶಿವನು ಶಕ್ತಿವಿಶಿಷ್ಟನಾಗಿದ್ದು ಈ ಶಕ್ತಿಯು ಕೆಲವು ವೇಳೆ ಅವ್ಯಕ್ತವಾಗಿಯೂ ಮತ್ತೆ ಕೆಲವು ವೇಳೆ ವ್ಯಕ್ತವೂ ಆಗಿರುತ್ತದೆ. ಶಕ್ತಿಯು ಅವ್ಯಕ್ತವಾಗಿ ಶಿವನಲ್ಲಿ ಒಂದಾಗಿದ್ದರೆ ಆ ಸ್ಥಿತಿಗೆ ಪ್ರಳಯವೆಂತಲೂ, ಅದೇ ಶಕ್ತಿ ವ್ಯಕ್ತವಾಗಿ ವಿಕಾಸವಾದರೆ ಸೃಷ್ಟಿಯೆಂತಲೂ ಹೆಸರು. ಈ ವಿಕಸನ ಮತ್ತು ಆಕುಂಚನಗಳು ನಿರಂತರವಾಗಿ ನಡೆಯುವ ಕ್ರಿಯೆಗಳು ಎಂದು ಶಿವಾಗಮ ಮತ್ತು ವಚನ ಸಾಹಿತ್ಯದಲ್ಲಿ ವರ್ಣಿಸಲಾಗಿದೆ.

---

೨೨. ಸೂಕ್ಷ್ಮಾಗಮ ಪಟಲ ೧೦, ಶ್ಲೋಕ ಸಂಖ್ಯೆ ೩೯

೩.೨ ಪತಿ–ಪಶು–ಪಾಶ (ಶಿವ–ಜೀವ–ಶಕ್ತಿ)

ಸೃಷ್ಟಿಯ ಉಗಮ ಮತ್ತು ರಚನೆಯನ್ನು ದಾರ್ಶನಿಕವಾಗಿ, ತಾತ್ವಿಕವಾಗಿ ಪ್ರತಿಪಾದಿಸಿದ ಶಿವಾಗಮ ಮತ್ತು ವಚನಗಳು ಈ ಸೃಷ್ಟಿಯ ರಚನೆಗೆ ಕಾರಣವಾದ ಆ ಪರಶಿವನ ಸ್ವರೂಪ ಹೇಗಿದೆ? ಜೀವಾತ್ಮನ ಸ್ವರೂಪವೇನು? ಜೀವಾತ್ಮನಿಗೂ ಹಾಗೂ ಆ ಪರಶಿವನಿಗೂ ಇರುವ ಸಂಬಂಧವೇನು? ಮುಕ್ತಿಯ ಬಗೆ ಹೇಗೆ? ಎಂಬುದರ ಕುರಿತು ವಿಶ್ಲೇಷಿಸಿವೆ.

ಸಕಲ ಚರಾಚರ ಸೃಷ್ಟಿಯ ರಚನೆಗೆ ಕಾರಣವಾದ ಪರಶಿವತತ್ತ್ವವನ್ನು 'ಪತಿ' ಎಂದೂ, ಮಾಯಾಶಕ್ತಿಯಿಂದ ಆವೃತವಾಗಿರುವ ಜೀವಾತ್ಮನನ್ನು 'ಪಶು' ಎಂದೂ, ಜೀವರನ್ನು ಬಂಧಿಸಿರುವ ಮಾಯೆ, ಮಲ ಮುಂತಾದ ವಿಷಯಗಳನ್ನು 'ಪಾಶ' ಎಂದು ಕರೆಯಲಾಗಿದೆ. ಮೂಲತಃ ಪರಮಾತ್ಮನಿಗೂ ಹಾಗೂ ಜೀವಾತ್ಮನಿಗೂ ಭೇದವಿಲ್ಲ. ಜೀವಾತ್ಮರ ಚೈತನ್ಯವು ಮಲತ್ರಯ(ಪಾಶ)ದಿಂದ ಆವೃತವಾಗಿರುವುದು. ದೇಹದ ಪರಿಮಿತಿಗೆ ಒಳಗಾಗಿ ಪಾಶಬದ್ಧರಾದ ಆತ್ಮರು ತಾನು ಪರಶಿವನಿಗಿಂತ ಭಿನ್ನರೆಂದು ತಿಳಿದು ತೊಳಲಾಡುತ್ತ ತಮ್ಮ ನಿಜಸ್ಥಿತಿಯನ್ನು ಮರೆತು ದೇಹ, ಮನಸ್ಸು, ಬುದ್ಧಿಗಳೇ ತಾನೆಂಬ ಭ್ರಮೆಗೆ ಒಳಗಾಗಿ ದುಃಖಕ್ಕೆ ಗುರಿಯಾಗುತ್ತಾರೆ. ಆದರೆ ಅನನ್ಯ ಭಕ್ತಿಯ ಮೂಲಕ ಜೀವನು ಪರಶಿವನನ್ನು ಉಪಾಸನೆಗೈದಾಗ ಶುದ್ಧಮಾನಸನಾಗುತ್ತಾನೆ. ಅಂತಹ ಶುದ್ಧಾಂತಃಕರಣನಾದ ಜೀವನಿಗೆ ಶಿವನು ಕರುಣೆಯಿಂದ ಗುರುರೂಪದಲ್ಲಿ ಸ್ವಸ್ವರೂಪದ ಜ್ಞಾನವನ್ನರುಹಿ ಪಾಶಗಳಿಂದ ವಿಮುಕ್ತಿಗೊಳಿಸಿ ಲಿಂಗಾಂಗ ಸಾಮರಸ್ಯದ ಮೋಕ್ಷದ ಮಾರ್ಗವನ್ನು ಉಪದೇಶಿಸುವನು. ಆ ಮಾರ್ಗದರ್ಶನದಂತೆ ಭಕ್ತಿಮಾರ್ಗದಲ್ಲಿ ಮುನ್ನಡೆದ ಸಾಧಕನು ಶಿವಯೋಗದ ಮೂಲಕ ಮುಕ್ತಿಯನ್ನು ಹೊಂದುವನೆಂದು ಶಿವಾಗಮಗಳು ಮತ್ತು ವಚನಗಳು ಪ್ರತಿಪಾದಿಸಿದ್ದು ಅವುಗಳ ವಿವೇಚನೆ ಇಂತಿದೆ –

ಶಿವತತ್ತ್ವ (ಪತಿತತ್ತ್ವ)

ಶಿವಾಗಮಗಳು ಪರಶಿವನೇ ಸರ್ವೋತ್ಕೃಷ್ಟವಾದ, ಸರ್ವಕ್ಕೂ ಕಾರಣವಾದ ತತ್ತ್ವವೆಂದು ಪ್ರತಿಪಾದಿಸುತ್ತವೆ. ಇದು ವೀರಶೈವ ಸಿದ್ಧಾಂತದ ಮೂಲಭೂತ ವಿಚಾರವಾಗಿದೆ. ಪರಶಿವನು ಮೂಲತಃ ಅದ್ವಿತೀಯನೆಂದು ಪ್ರತಿಪಾದಿಸುತ್ತಾ ಶಿವಸ್ವರೂಪದ ವರ್ಣನೆಗೈಯಲಾಗಿದೆ.

ಅಸ್ತಿ ಕಶ್ಚಿತ್ ಸ್ವತಃಸಿದ್ಧಃ ಸಚ್ಚಿದಾನಂದಲಕ್ಷಣಃ।
ನಿತ್ಯೋ ನಿರಂಜನಃ ಶುದ್ಧೋ ನಿರ್ಮಲೋ ನಿರುಪಪ್ಲವಃ।
ನಿರ್ಗುಣೋ ನಿತ್ಯಸಂಪನ್ನೋ ನಿರ್ಮಾಯೋ ನಿರುಪಾಧಿಕಃ।
ಅಕಾಯೋ ಭಕ್ತಕಾಯಶ್ಚ ಪರಾತ್ಪರತರಃ ಶಿವಃ॥
ಪುರುಷಃ ಶಾಶ್ವತಃ ಸ್ಥಾಣುರೂರ್ಧ್ವರೇತಾಸ್ತ್ರಿಯಂಬಕಃ॥

ಸಾದಾಖ್ಯಪಂಚಕಾತೀತೋ ವೇದವೇದಾಂತಗೋಚರಃ।
ಷಡಧ್ವಕರ್ತಾ ದೇವೇಶಃ ಸರ್ವತತ್ತ್ವೋಪರಿ ಸ್ಥಿತಃ॥[೧]

ಪರಶಿವನು ಸ್ವತಃಸಿದ್ಧನು(ಸ್ವಯಂಭು), ಸತ್–ಚಿತ್–ಆನಂದ ಸ್ವರೂಪನು, ನಿತ್ಯ–ನಿರಂಜನ–ಶುದ್ಧ–ನಿರ್ಮಲನು, ಕ್ಲೇಶರಹಿತನು, ನಿರ್ಗುಣನು, ನಿತ್ಯಪರಿಪೂರ್ಣನು, ಮಾಯಾರಹಿತನು, ಉಪಾಧಿರಹಿತನು, ಶರೀರವಿಲ್ಲದವನು, ಭಕ್ತನೇ ಶರೀರವಾಗಿ ಉಳ್ಳವನು, ಪರಾತ್ಪರನು, ಶುಭಕಾರಕನು, ಏಕೈಕನು, ರುದ್ರನು, ಪರಂಜ್ಯೋತಿ ಸ್ವರೂಪನು, ಪರಮಾತ್ಮನು, ಸನಾತನನು, ಪುರುಷನು, ಶಾಶ್ವತನು, ಸ್ಥಾಣುವು, ಊರ್ಧ್ವರೇತಸನು, ತ್ರಿಯಂಬಕನು. ಆ ಮಹಾದೇವನು ಮೂಲತಃ ಸರ್ವಾತೀತನು; ಸೃಷ್ಟಿಗಾಗಿ ಸರ್ವತತ್ತ್ವಗಳ ರೂಪವನ್ನು ಹೊಂದುತ್ತಾನೆ. ಈತನು ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಮೂರ್ತಸಾದಾಖ್ಯ, ಕೃರ್ತಸಾದಾಖ್ಯ ಮತ್ತು ಕರ್ಮಸಾದಾಖ್ಯ ಎಂಬ ಪಂಚಸಾದಾಖ್ಯಗಳನ್ನು ಮೀರಿದವನು. ಅವನು ವೇದ–ವೇದಾಂತಗಳ ಮೂಲಕ ತಿಳಿಯಲ್ಪಡುವವನು, ವರ್ಣ–ಪದ–ಮಂತ್ರ–ಕಲಾ–ತತ್ತ್ವಗಳನ್ನು ಮೀರಿ ನಿಂತವನು ಎಂದು ಪ್ರತಿಪಾದಿಸಲಾಗಿದೆ.

ಪಾರ್ವತಿಯು ಮಾಡುವ ಒಂದು ಶಿವಸ್ತುತಿಯಲ್ಲಿ ಶಿವನ ಸ್ವರೂಪವನ್ನು ಕುರಿತು, "ಪರಮಾತ್ಮನು ದೇವರ ಒಡೆಯನು, ಭಕ್ತವತ್ಸಲನು, ಕರುಣಾಸಮುದ್ರನು. ಆತನು ಈಶಾನ–ತತ್ಪುರುಷ–ಅಘೋರ–ವಾಮದೇವ–ಸದ್ಯೋಜಾತ ಎಂಬ ಪಂಚಬ್ರಹ್ಮರ ಸ್ವರೂಪನು, ಮೂವತ್ತಾರು ತತ್ತ್ವಗಳ ಸ್ವರೂಪನಾದರೂ ತತ್ತ್ವಾತೀತನು, ಪರತತ್ತ್ವ ಸ್ವರೂಪನು, ತತ್ತ್ವಗಳ ಮೂಲಕವೇ ತಿಳಿಯಲ್ಪಡುವವನು.[೨] ಅವನು ವಿಶ್ವತೋ ಬಾಹು, ವಿಶ್ವತೋಪಾದ, ವಿಶ್ವತೋ ಚಕ್ಷು, ವಿಶ್ವತೋಮುಖನಾದ ವಿರಾಟ ಸ್ವರೂಪನೂ, ಅವ್ಯಕ್ತನು, ಬಹುರೂಪವುಳ್ಳವನಾದರೂ ಏಕರೂಪವುಳ್ಳವನು.[೩] ಹೇಗೆ ಸಮುದ್ರದಲ್ಲಿ ಅಲೆಗಳು ಉಂಟಾಗಿ ಮತ್ತೆ ಅಲ್ಲಿಯೇ ಲೀನವಾಗುತ್ತವೆಯೋ ಹಾಗೆಯೇ ಪರಮಾತ್ಮನಲ್ಲಿ ಕಣ್ಣಿಗೆ ಕಾಣುವ ಈ ಚರಾಚರಾತ್ಮಕವಾದ ಜಗತ್ತು ನೆಲೆಸಿದೆ."[೪] ಎಂದು ಶಿವಸ್ವರೂಪವನ್ನು ಬಣ್ಣಿಸಲಾಗಿದೆ.

ಪಾರಮೇಶ್ವರಾಗಮವು ಪರಮಶಿವನ ಸ್ವರೂಪವು ಆದಿ, ಮಧ್ಯ ಮತ್ತು ಅಂತ್ಯವಿಲ್ಲದ್ದು; ಎಲ್ಲ ಜೀವಿಗಳಿಗೆ ಸಾಕ್ಷಿಯಂತಿರುವ ಈಶ್ವರನು ಎಲ್ಲರ ಪಾಲಕ ಹಾಗೂ ನಿಯಂತ್ರಕ, ಎಲ್ಲ ಕಾರಣಗಳಿಗೂ ಕಾರಣನು, ಎಲ್ಲ ಪ್ರಾಣಿಗಳ ಸೃಷ್ಟಿಗೆ ಮೊದಲು ಮತ್ತು ಸಂಹಾರದ ನಂತರವೂ ಕೂಡ ಭಗವಾನ್ ಪರಮಶಿವನು ವಿರಾಜಿಸಿದ್ದಾನೆ. ಅವನಿಗೆ ರೂಪವಿಲ್ಲದಿದ್ದರೂ ಎಲ್ಲ ರೂಪಗಳಿಗಿಂತಲೂ ಹೆಚ್ಚಾಗಿ

---

೧. ಸೂ.ಆ. ಕ್ರಿ.ಪಾ. ಪಟಲ ೧, ಶ್ಲೋಕ ಸಂಖ್ಯೆ ೧೪–೧೭
೨. ಸೂ.ಆ. ಕ್ರಿ.ಪಾ. ಪಟಲ ೧೦, ಶ್ಲೋಕ ಸಂಖ್ಯೆ ೨–೫
೩. ಸೂ.ಆ. ಕ್ರಿ.ಪಾ. ಪಟಲ ೧೦, ಶ್ಲೋಕ ಸಂಖ್ಯೆ ೨೪–೨೫
೪. ಸೂ.ಆ. ಕ್ರಿ.ಪಾ. ಪಟಲ ೧೦, ಶ್ಲೋಕ ಸಂಖ್ಯೆ ೩೯

ಶೋಭಿಸುವ, ಶಬ್ದದ ವಿಷಯ ವ್ಯಾಪ್ತಿಯಲ್ಲಿ ಬರದಿದ್ದರೂ ಎಲ್ಲ ಶಬ್ದಗಳಿಗೂ ಕಾರಣನು. ಅವ್ಯಕ್ತನು ಮತ್ತು ಸಮಸ್ತ ವ್ಯಕ್ತ ಜಗತ್ತಿಗೆ ಆಧಾರನು. ಸರ್ವಾಂತರ್ಯಾಮಿಯಾದ ದೇವನು, ಸತ್‌ಚಿತ್ ಸ್ವರೂಪನು ಮತ್ತು ಸರ್ವತ್ರ ವ್ಯಾಪಕನು. 'ತತ್ವಮಸಿ' ಮುಂತಾದ ಮಹಾವಾಕ್ಯಗಳಿಗೆ ಲಕ್ಷ್ಯಾರ್ಥವಾಗಿರುವವನು, ಏಕೈಕನು, ನಿತ್ಯನು, ವ್ಯಾಕುಲರಹಿತನು, ಸ್ವಚ್ಛನು, ಭಾವನೆಗಳಿಗೆ ನಿಲುಕದವನು, ಮೂರು ಗುಣಗಳಿಲ್ಲದವನು, ಮೂರು ಅವಸ್ಥೆಗಳನ್ನು ಮೀರಿದವನು, ನಿಃಸಂಗನಾದರೂ ಎಲ್ಲದರೊಡನೆ ಸಂಯುಕ್ತನಾದವನು, ಭೋಜ್ಯ-ಭೋಜಕ-ಭೋಕ್ತೃವಾದವನು ಮತ್ತು ಎಲ್ಲಾ ದೇಹಗಳ ಅಭಿಮಾನವುಳ್ಳವನು. ಅವನ ಸ್ವರೂಪವನ್ನು ಯಾವುದೇ ದೃಶ್ಯದ ಆಕಾರದಲ್ಲಿ ಗ್ರಹಿಸಲು ಸಾಧ್ಯವಿಲ್ಲ. ಯಾರೂ ಅವನನ್ನು ತಮ್ಮ ಕಣ್ಣುಗಳಿಂದ ನೋಡಲಾಗುವುದಿಲ್ಲ. ಇವನ ಸ್ವರೂಪವನ್ನು ತಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವ ಯಾರೇ ಆದರೂ ಶಾಶ್ವತವಾದ (ಮೋಕ್ಷದ) ಪದವಿಯನ್ನು ಪಡೆಯುತ್ತಾರೆ. ಕೈಕಾಲುಗಳಿಲ್ಲದವನಾದರೂ ವೇಗವಾಗಿ ಸಂಚರಿಸುವವನು, ಸ್ವಯಂ ಅದೃಶ್ಯನಾದರೂ ಎಲ್ಲರಿಗೂ ದೃಶ್ಯನು(ಕಾಣಿಸುವವನು), ಶ್ರೋತ್ರೇಂದ್ರಿಯ(ಕಿವಿ)ವಿಲ್ಲದಿದ್ದರೂ ಎಲ್ಲವನ್ನು ಕೇಳಿಸಿಕೊಳ್ಳುವವನು, ಇವನಿಗೆ ಸಮಾನರು ಯಾರು ಇಲ್ಲದಿದ್ದರೂ, ಎಲ್ಲರ ಮನಸ್ಸಿನಲ್ಲಿ ಸಮಾನಭಾವದಿಂದಿರುವವನು, ಸ್ವಯಂ ಭೋಕ್ತೃ (ಅನುಭವಿಸುವವ)ವಾದರೂ ಅಕ್ಷರನು, ಶುದ್ಧನು, ನಿರ್ವಿಕಲ್ಪನು, ನಿರಂಜನನು, ನಿರ್ಲಿಪ್ತನು, ಪರಮಾನಂದ ಸ್ವರೂಪನು ಹಾಗೂ ಹರ್ಷ-ವಿಷಾದ ರಹಿತನು. ಇವನು ನಿತ್ಯಬದ್ಧನು ಹಾಗೂ ನಿತ್ಯಮುಕ್ತನು, ನಿರುಪದ್ರವಿಯು, ಅವ್ಯಯನು, ಎಲ್ಲರ ಮೂಲಕಾರಣನಾದರೂ ಸ್ವಯಂ ಬೇರೆ ಮೂಲಕಾರಣವಿಲ್ಲದವನು, ಪಾಪರಹಿತನು, ಎಲ್ಲೆಡೆ ಪೂರ್ವರೂಪದಿಂದ ವ್ಯಾಪಿಸಿರುವವನು, ಅಖಂಡ ಸ್ವರೂಪಿಯು, ಸ್ವಯಂಜ್ಯೋತಿಯು, ಅದ್ವಿತೀಯನು, ಮಾತಿಗೆ ಅಗೋಚರವಾದ ಪರಮತತ್ತ್ವದಲ್ಲಿ ಇರುವವನು. ಎಲ್ಲರ ಅಂತಃಕರಣದಲ್ಲಿಯೂ ವಿರಾಜಮಾನನಾಗಿರುವನು. ಸರ್ವೇಶ್ವರನು, ಸರ್ವಜ್ಞನು, ಸರ್ವವ್ಯಾಪಿಯೂ ಹಾಗೂ ಸನಾತನ ಪರಬ್ರಹ್ಮನು ಎಂದು ಶಿವ ಸ್ವರೂಪವನ್ನು ವರ್ಣಿಸಲಾಗಿದೆ.[೫] ವಚನಗಳೂ ಸಹ ಇದನ್ನೇ ಪ್ರತಿಪಾದಿಸುತ್ತ

ಎಲ್ಲೆಲ್ಲಿ ನೋಡಿದಡಲ್ಲಲ್ಲಿ ನೀನೇ ದೇವಾ
ಪಿಂಡಾಂಡಂಗಳೊಳಗೆಲ್ಲ ನೀನೇ ದೇವಾ.
ಮಹದಾಕಾಶ ರೂಪ, ನಿರುಪಾಧಿಕ ಪರಂಜ್ಯೋತಿ ನೀನೇ ದೇವಾ.
ಉಪಮಾತೀತ ವಾಙ್ಮನಕ್ಕಗೋಚರ ನೀನೇ ದೇವಾ.
ಸ್ವಾನುಭೂತಿ ಸ್ವರೂಪ ಶರಣಜನ ಮನೋವಲ್ಲಭ ನೀನೇ ದೇವಾ,
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.[೬]

---

೫. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೧೯-೩೪

೬ ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ.೬., ವಚನ ಸಂಖ್ಯೆ ೧೦೫೮, ಪುಟ ೫೪೨

ಎಂದು ಸ್ವತಂತ್ರ ಸಿದ್ಧಲಿಂಗೇಶ್ವರರು ಸೃಷ್ಟಿಕರ್ತನ ಸ್ವರೂಪವನ್ನು ವಿವರಿಸಿ ಆತನು ಸರ್ವತ್ರ ವ್ಯಾಪಿಯೂ, ಉಪಮಾತೀತನೂ ವಾಙ್ಮನಕ್ಕಗೋಚರನೂ ಆಗಿರುವನು ಎಂದು ವರ್ಣಿಸಿದ್ದಾರೆ.

ದೇವಿಕಾಲೋತ್ತರಾಗಮದಲ್ಲಿ ಪರಶಿವನು ತನ್ನ ಸ್ವರೂಪವನ್ನು ವರ್ಣಿಸುತ್ತಾ, "ನಾನು ಸ್ಥೂಲನೂ ಅಲ್ಲ, ಸೂಕ್ಷ್ಮನೂ ಅಲ್ಲ, ಶೂನ್ಯ ಸ್ವರೂಪನೂ ಅಲ್ಲ ನಾನು ಜ್ಞಾನ ಸ್ವರೂಪನಾಗಿರುವೆನು. ಈ ಸರ್ವಜಗತ್ತಿನ ಹಿತಚಿಂತಕನಾಗಿದ್ದೇನೆ. ನಾನು ದೇಶ ಮತ್ತು ಕಾಲಗಳಿಂದ ಅಪರಿಚ್ಛಿನ್ನನಾಗಿದ್ದೇನೆ. ಸ್ವಪ್ನ ಮುಂತಾದ ಅವಸ್ಥೆಗಳಿಂದ ನಿರ್ಮುಕ್ತನೂ, ನಿರ್ಮಲನೂ, ನಿಷ್ಪ್ರಪಂಚನೂ, ನಿರಂಜನನೂ, ನಿರೀಶನೂ, ಅದೃಶ್ಯನೂ, ಅಗ್ರಾಹ್ಯ ಅಚಿಂತ್ಯನಾದ ಈಶ್ವರನಾಗಿರುವೆನು."[೭] ಎಂದು ತನ್ನ ಸ್ವರೂಪವನ್ನು ಬಣ್ಣಿಸಿದ್ದಾನೆ.

ಹೀಗೆ ಆಗಮಗಳು ಹಾಗೂ ವಚನಗಳು ಪರಶಿವನು ಸರ್ವಜ್ಞನು, ಸರ್ವ ವ್ಯಾಪಿಯು, ಸತ್-ಚಿತ್-ಆನಂದ ಸ್ವರೂಪನು, ನಿತ್ಯ-ನಿರಂಜನ-ಶುದ್ಧ-ನಿರ್ಮಲನು, ಕ್ಲೇಶರಹಿತನು, ನಿರ್ಗುಣನು, ನಿತ್ಯಪರಿಪೂರ್ಣನು, ಮಾಯಾರಹಿತನು, ಉಪಾಧಿ ರಹಿತನು, ಶುಭಕಾರಕನು, ಪರಂಜ್ಯೋತಿ ಸ್ವರೂಪನು, ಸನಾತನನು, ಶಾಶ್ವತನು, ಸರ್ವಾತೀತನು ಎಂದು ವರ್ಣಿಸುತ್ತವೆ.

ಪರಶಿವನೇ ವಿಶ್ವಾಧಿಪತಿ, ಶಿವನ ಶಾಸನದಿಂದಲೇ ಎಲ್ಲವೂ ನಡೆಯುವುದು ಅಂತರ್ಯಾಮಿಯಾದ ಪರಮಾತ್ಮನು ವಿಶ್ವಾಧಿಪತಿಯೂ ಶಾಸಕನೂ ಆಗಿದ್ದಾನೆ ಎಂಬುದನ್ನು ಶಿವಾಗಮಗಳು ಪ್ರತಿಪಾದಿಸುತ್ತವೆ. ಎಲ್ಲವೂ ಅವನನ್ನೇ ಅವಲಂಬಿಸಿವೆ, ಎಲ್ಲವೂ ಅವನ ಆಜ್ಞೆಯನ್ನು ಪಾಲಿಸುತ್ತವೆ-

ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಪಿ ವಾ।
ತತ್ಸರ್ವಂ ಶಂಕರಸ್ಯಾಜ್ಞಾಬಲೇನ ಸಮಧಿಷ್ಠಿತಮ್॥
ಆಜ್ಞಾಬಲಾತ್ತಸ್ಯ ಧರಾ ಸ್ಥಿತೇಹ ಧಾರಾಧರಾ ವಾರಿಧರಾಃ ಸಮುದ್ರಾಃ।
ಜ್ಯೋತಿರ್ಗಣಾಶಕ್ರಮುಖಾಶ್ಚ ದೇವಾಃ ಸ್ಥಿರಂ ಚರಂ ವಾ ಚಿದಚಿದ್ಯದಸ್ತಿ॥[೮]

ಜಗತ್ತಿನಲ್ಲಿ ಯಾವುದೆಲ್ಲಾ ಕಣ್ಣಿಗೆ ಬೀಳುತ್ತದೆಯೋ ಕೇಳಿ ಬರುತ್ತದೆಯೊ ಅದೆಲ್ಲಾ ಪರಮಾತ್ಮನ ಆಜ್ಞಾಬಲದಿಂದಲೇ ನಿಂತಿವೆ. ಈ ಭೂಮಿ, ಮೇಘಗಳು, ಸಮುದ್ರಗಳು, ನಕ್ಷತ್ರಾದಿ ತೇಜೋ ಬಿಂಬಗಳು, ಇಂದ್ರಾದಿ ದೇವತೆಗಳು, ಚರಾಚರಗಳು, ಚೇತನಾ ಚೇತನಗಳು, ಎಲ್ಲವೂ ಆತನ ಆಜ್ಞೆಯನ್ನು ಅವಲಂಬಿಸಿವೆ. ಹೀಗೆ ವಿಶ್ವವೆಲ್ಲವೂ ಪರಮಾತ್ಮನ ಆಜ್ಞಾಬಲದಿಂದಲೇ ನಿಂತಿದೆ. ವಿಶ್ವವೆಲ್ಲಾ ಪರಮಾತ್ಮನ ನಿಯಂತ್ರಣಕ್ಕೆ ಒಳಗಾಗಿ ನಡೆಯುತ್ತದೆ ಎಂದು ಪ್ರತಿಪಾದಿಸುತ್ತವೆ.

---

೭. ದೇವಿ ಕಾಲೋತ್ತರಾಗಮ, ಶ್ಲೋ. ಸಂ. ೫೮

೮. ಚಂ.ಆ.ಕ್ರಿ. ಪಾ. ಪಟಲ ೧, ಶ್ಲೋಕ ಸಂಖ್ಯೆ ೪೨-೪೩

ಪಶುತತ್ವ (ಜೀವತತ್ವ)

ಶಿವಾಗಮಗಳು ಬ್ರಹ್ಮನಿಂದ ಹಿಡಿದು ಸ್ಥಾವರಪರ್ಯಂತ ಎಲ್ಲವೂ(ರೂ) ಜೀವರುಗಳೆಂದು (ಪಶುಗಳೆಂದು) ವಿಭಾಗಿಸಿದರೂ ಸಹ ಇವೆಲ್ಲವೂ ಶಿವಸ್ವರೂಪವೇ ಆಗಿದೆ ಎಂದು ವರ್ಣಿಸುತ್ತವೆ-"ಇಂದ್ರ ಮೊದಲಾದ ದೇವತೆಗಳೂ, ಯಕ್ಷ, ರಾಕ್ಷಸ, ಪಿಶಾಚ, ಮನುಷ್ಯ, ಪಶು, ಪಕ್ಷಿ, ಕ್ರಿಮಿ, ಕೀಟ, ಪತಂಗಾದಿಗಳು, ಸೂರ್ಯನೇ ಮುಂತಾದ ನವಗ್ರಹಗಳು, ಕೃತ್ತಿಕಾದಿ ೨೭ ರಾಶಿಗಳೂ, ಚಂದ್ರನ ಬೆಳಕು, ಪ್ರಕಾಶ, ಅಂಧಕಾರ, ಉತ್ಪತ್ತಿ, ಸ್ಥಿತಿ, ಲಯ, ಸಮಸ್ತ ಲೋಕಗಳು, ಸ್ಥಾವರ-ಜಂಗಮಾತ್ಮಕವಾದ ಜಗತ್ತು, ಎಲ್ಲ ಬಗೆಯ ಜಾತಿಗಳೂ, ಧರ್ಮ, ಅಧರ್ಮ, ಸುಖ, ದುಃಖ, ಸಂಸಾರಿಯಾದ ಜೀವ, ಭೋಕ್ತೃ, ಪ್ರೇರಕ ಮತ್ತು ಭೋಜ್ಯದ ರೂಪವೂ ಸಹ ಶಿವನದೇ ಆದ ಸ್ಥಿತಿಗಳು ಎಂದು ವರ್ಣಿಸಲಾಗಿದೆ.[೧೦]

ಆದರೆ ಪಶುವೆಂದರೆ ಅವ್ಯಾಪಕ, ಕ್ಷಣಿಕ, ಕಿಂಚಿಜ್ಞ, ಮಲತ್ರಯಯುಕ್ತನು, ತನ್ನ ಕರ್ಮಫಲವನ್ನು ಅನುಭವಿಸುವವನಾಗಿದ್ದು ಆತನು ಹೇಗೆ ಶಿವಸ್ವರೂಪನಾಗುವನು? ಎಂದು ಪಾರ್ವತಿಯು ಪರಮಾತ್ಮನನ್ನು ಕುರಿತು ಕೇಳಿದ ಪ್ರಶ್ನೆಯಿಂದ ಜೀವತತ್ತ್ವದ ವಿಚಾರವು ಪ್ರತಿಪಾದಿಸಲ್ಪಟ್ಟಿದೆ.

ಜೀವತತ್ವದ ವಿವರಣೆ –

ಪಾರಮೇಶ್ವರಾಗಮದಲ್ಲಿ ಜೀವತತ್ತ್ವದ ವಿಷಯದಲ್ಲಿ ಬಹಳ ವಿಚಾರಗಳು ಚರ್ಚೆಗೆ ಒಳಗಾಗಿವೆ. ಅಲ್ಲಿ –

ಅನಂತಮವ್ಯಯಂ ಶುದ್ಧಂ ಸಚ್ಚಿಜ್‌ಜ್ಯೋತಿಃ ಸುಖಪ್ರದಮ್।
ಪೂರ್ಣಮೇವಾಪ್ತಕಾಮಸ್ತ್ವಂ ಪರಂ ಬ್ರಹ್ಮ ಪರಾತ್ಪರಮ್॥
ಭೋಕ್ತಾ ವಿಕಾರೀ ನಿರ್ಬದ್‌ಧಃ ಶರೀರೀ ಸುಖದುಃಖಭುಕ್।
ಜಾಯತೇ ಮ್ರಿಯತೇ ಜೀವಃ ಕಥಂ ಜೀವಸ್ತ್ವಮೀಶ್ವರ॥
ಲೋಕಾಲ್ಲೋಕಂ ಪ್ರಯಾತ್ಯೇಷ ಅರ್ಥವಾಂಶ್ಚ ದರಿದ್ರವತ್।
ನೈವ ಸಂಗಚ್ಛತೇ ದೇವ ಮನಸೋ ಮಮ ಶಂಕರ॥[೧೧]

"ಪರಾತ್ಪರ ಪರಬ್ರಹ್ಮನಾದ ನೀನು ಅನಂತನು, ಕ್ಷೀಣನಾಗದವನು, ಶುದ್ಧನು, ಸತ್-ಚಿತ್-ಜ್ಯೋತಿ ಸ್ವರೂಪನು, (ಎಲ್ಲರಿಗೂ) ಆನಂದವನ್ನು ನೀಡುವವನು; ನೀನು ಪರಿಪೂರ್ಣನಾದ್ದರಿಂದ ಎಲ್ಲಾ ಕಾಮನೆಗಳನ್ನು ಸ್ವಯಂ ಪಡೆದವನು; ಆದರೆ ಜೀವನು (ಸುಖ-ದುಃಖಗಳ) ಭೋಕ್ತೃ, ವಿಕಾರಗಳುಳ್ಳವನು, (ನಾನಾ ಪ್ರಕಾರದ) ಬಂಧನಗಳಿಗೆ ಒಳಗಾದವನು; ಅವನು ಹುಟ್ಟುತ್ತಾನೆ, ಸಾಯುತ್ತಾನೆ; ಅವನು ಲೋಕದಿಂದ ಲೋಕಕ್ಕೆ

---

೯. ಪಾ.ಆ. ಪಟಲ ೧೨, ಶ್ಲೋಕ ಸಂಖ್ಯೆ ೬೦-೬೧
೧೦. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೩೭-೩೯, ೪೧-೪೩
೧೧. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೪೬-೪೮

ಸಂಚರಿಸುತ್ತಾನೆ, ಐಶ್ವರ್ಯವಂತನೋ ಬಡವನೋ ಆಗಿರುತ್ತಾನೆ. ಹಾಗಿರುವಾಗ, ಹೇ ಈಶ್ವರ, ಹೇಗೆ ತಾನೆ ನೀನು ಜೀವನಾಗುತ್ತೀಯೇ? ನನ್ನ ಮನಸ್ಸಿಗಂತೂ ಇದು ಸಮುಚಿತವಾಗಿ ತೋರುವುದಿಲ್ಲ." ಎನ್ನುತ್ತಾಳೆ. ಇದಕ್ಕೆ ಉತ್ತರವಾಗಿ ಪರಮಾತ್ಮನು-

ಅಹಮೇವ ವರಾರೋಹೇ ನಿರ್ವಿಕಲ್ಪಾದಿಲಕ್ಷಣಃ।
ಭವತ್ಯಾ ಮಮ ಶಕ್ತ್ಯೈವಂ ವಿಕ್ರೀಡಾಮಿ ಯಥಾಸುಖಮ್॥[೧೨]

"ನಿರ್ವಿಕಲ್ಪ-ನಿರ್ವಿಕಾರ ಮುಂತಾದ ಲಕ್ಷಣಗಳಿಂದ ಕೂಡಿ ನಾನೇ ಶಕ್ತಿಯಾದ ನಿನ್ನ ಸಹಾಯದಿಂದ ಸಂಸಾರದಲ್ಲಿ ಸ್ವಚ್ಛಂದವಾಗಿ ವಿನೋದಿಸುತ್ತೇನೆ. ಕನ್ನಡಿಯ ಸ್ವರೂಪದಂತೆ ಜೀವಿಗಳ ಬುದ್ಧಿಯಲ್ಲಿ ಪ್ರತಿಬಿಂಬಿತನಾಗಿರುವೆ. ಆದರೂ ನಾನು ಅಸಂಗತನು, ಭೋಗರಹಿತನೂ ಆಗಿರುವೆನು. ಶೋಕ, ಹರ್ಷ, ಭಯ, ಕ್ರೋಧ, ಲೋಭ, ಮೋಹ, ಸ್ಪೃಹಾ ಮತ್ತು ಹುಟ್ಟು ಸಾವುಗಳು ಅಹಂಕಾರ ಧರ್ಮಗಳು" ಎಂದು ವಿಶ್ಲೇಷಿಸುತ್ತಾನೆ.

ವಚನಕಾರರೂ ಸಹ ಇದನ್ನೇ ಪ್ರತಿಪಾದಿಸುತ್ತ ಪರಶಿವನು ಸಕಲ ಪದಾರ್ಥಗಳಲ್ಲಿ, ಸಕಲ ಜೀವಿಗಳಲ್ಲಿ ಚೈತನ್ಯಾತ್ಮಕವಾಗಿ ವ್ಯಾಪಿಸಿದ್ದರೂ ಅವೆಲ್ಲಕ್ಕೂ ಅತೀತನಾಗಿ ವಿಶ್ವದ ಗುಣಗಳನ್ನು ಹೊದ್ದದಂತಿರುತ್ತಾನೆ ಎಂಬುದನ್ನು ಒತ್ತಿ ಹೇಳುತ್ತಾರೆ. "ಮರೀಚಿಯೊಳಗಣ ಬಿಸಿಲಿನಂತೆ, ಕ್ಷೀರದೊಳಗಣ ತುಪ್ಪದಂತೆ, ಚಿತ್ರಕನೊಳಡಗಿದ ಚಿತ್ರದಂತೆ, ಆಲಿಯೊಳಡಗಿದ ತೇಜದಂತೆ, ನುಡಿಯೊಳಡಗಿದ ಅರ್ಥದಂತಿದ್ದಿತ್ತು..." ಎಂದು ಚೆನ್ನಬಸವಣ್ಣನವರು ವರ್ಣಿಸಿದ್ದಾರೆ. ಇದೇ ಅಭಿಪ್ರಾಯವನ್ನು ಅಲ್ಲಮ ಪ್ರಭುಗಳು –

ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿದ ಮಿಂಚಿನಂತೆ,
ಬಯಲ ಮರೆಯಲಡಗಿದ ಮರೀಚಿಯಂತೆ
ಕಂಗಳ ಮರೆಯಲಡಗಿದ ಬೆಳಗಿನಂತೆ ಗುಹೇಶ್ವರಾ ನಿಮ್ಮ ನಿಲವು.[೧೩]

ಎಂದು ಸಾದೃಶ್ಯದ ಮೂಲಕ ಸೃಷ್ಟಿಕರ್ತನ ವ್ಯಾಪಕತ್ವವನ್ನು ವ್ಯಕ್ತಪಡಿಸಿದ್ದಾರೆ. ಉರಿಲಿಂಗ ಪೆದ್ದಿಯವರು-

ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತ ವಿಶ್ವವನು
ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೇ? ಇಲ್ಲ. ವಿಶ್ವಮಯ ತಾನಾದನು.
ವಿಶ್ವವೆಲ್ಲವೂ ತಾನಾದಡೆ, ವಿಶ್ವದುತ್ಪತ್ತಿ ಸ್ಥಿತಿ ಲಯಕ್ಕೊಳಗಾದನೇ? ಇಲ್ಲ.
ಅದೇನು ಕಾರಣವೆಂದಡೆ; ಅಜಾತನಾಗಿ ಉತ್ಪತ್ತಿ ಇಲ್ಲ.
ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ; ಮರಣ ರಹಿತನಾಗಿ ಲಯಕ್ಕೊಳಗಲ್ಲ.
ಇಂತೀ ಗುಣತ್ರಯಂಗಳ ಹೊದ್ದಲರಿಯ.

---

೧೨. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೪೯
೧೩. ಅಲ್ಲಮ ಪ್ರಭುದೇವರ ವಚನ ಸಂಪುಟ ೨, ವಚನ ಸಂಖ್ಯೆ ೪, ಪುಟ ೪

ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ.
ತನ್ನಲ್ಲಿ ತಾನಲ್ಲದ ಅನ್ಯವು ತೋರಲರಿಯದಾಗಿ, ಇದಿರಿಲ್ಲ.
ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ
ಅರಸು ಕಾಲಾಳಾಗಬಲ್ಲ, ತನ್ನ ವಿನೋದಕ್ಕೆ; ಮರಳಿ ಅರಸಾಗಬಲ್ಲ;
ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು
ಜಗವಾಗಲೂ ಬಲ್ಲ; ಜಗವಾಗದಿರಲೂ ಬಲ್ಲನಯ್ಯಾ[೧೪]

ಎಂದಿದ್ದಾರೆ. ಕಾರಣ ಶಿವನು "ಜಲದೊಳಗಣ ಸೂರ್ಯನಂತೆ", "ಹಲವು ತೃಣಕಾಷ್ಠಗಳಲ್ಲಿ ಅಗ್ನಿ ಬೆರೆದಿರ್ದಂತೆ" ಬೆರಸಿಯೂ ಬೆರಸದಂತಿದ್ದಾನೆ ಎಂದಿದ್ದಾರೆ.

ವಸ್ತುತಃ ಆತ್ಮನೂ ಸಹ ಯಾವಾಗಲೂ ಹುಟ್ಟುವುದಿಲ್ಲ, ಸಾಯುವುದಿಲ್ಲ; ಇವನು ನಿತ್ಯನು, ಶಾಶ್ವತನು ಮತ್ತು ಪುರಾಣನು; ಇವನು ಶರೀರ ನಷ್ಟವಾದಾಗ ಸ್ವತಃ ನಷ್ಟವಾಗುವುದಿಲ್ಲ. ಹೀಗೆ ಜೀವಾತ್ಮನು ಶರೀರಕ್ಕಿಂತ ಭಿನ್ನನು ಎನ್ನುತ್ತ –

ನ ಜಾಯತೇ ಮ್ರಿಯತೇ ವಾ ಕದಾಚಿ–
ನ್ನಾಯಂ ಭೂತೋ ಭವಿತಾ ವಾ ನ ಭೂಯಃ।
ಅಜೋ ನಿತ್ಯಃ ಶಾಶ್ವತೋಽ ಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ॥[೧೫]

ಎಂದು ಪಾರಮೇಶ್ವರಾಗಮವು ಆತ್ಮನ ಸ್ವರೂಪವನ್ನು ವರ್ಣಿಸುತ್ತದೆ. ಆದರೆ ಅಹಂಕಾರದ ಕಾರಣದಿಂದ ಆತ್ಮನ ಮೇಲೆ ದೇಹದ ಧರ್ಮಗಳ ಆರೋಪವಾಗುತ್ತದೆ ಎಂದು –

ಜೀವೋಽವ್ಯಯೋಽಗುಣಃ ಶುದ್ಧಃ ಸ್ವಯಂಜ್ಯೋತಿರಪಾವೃತಃ।
ಅಗ್ನಿವದ್ ಧಾತುವದ್ ದೇವಿ ನ ಭೋಕ್ತಾ ಜೀವ ಈಶ್ವರಃ॥
ಸುಖತ್ವಮಪಿ ದುಃಖತ್ವಂ ಕಾರ್ಶ್ಯಸೌಥ್ಲ್ಯಾದ್ಯನೇಕಧಾ।
ಭಾವಾ ಅಹಂಮತೇರ್ಧರ್ಮಾ ಜೀವಾಧ್ಯಾಸಾದಭೂತ್ ತನುಃ॥
ಯಥಾ ಸ್ವಪ್ನಗತಾ ಧರ್ಮಾ ಆರೋಪ್ಯತೇ ಸ್ವ ಆತ್ಮನಿ।[೧೬]
ಅಜ್ಞೇನ ದೇಹತಾದಾತ್ಮ್ಯಾತ್ ತಥೈವಾಸ್ಯ ಶರೀರಿಣಃ॥

ಜೀವನು ಅವ್ಯಯನು, ಗುಣರಹಿತನು, ಶುದ್ಧನು, ಸ್ವಯಂಜ್ಯೋತಿಯು ಮತ್ತು ಆವರಣವಿಲ್ಲದವನು. ಅವನು ಅಗ್ನಿಯಂತೆ, ಲೋಹದಂತೆ ಪರಿಶುದ್ಧನು; ಜೀವನು ಭೋಕ್ತೃವಲ್ಲ, ಈಶ್ವರನು. ಸುಖವಾಗಲಿ, ದುಃಖವಾಗಲಿ, ಕೃಶತ್ವವಾಗಲಿ, ಸ್ಥೂಲತ್ವವಾಗಲಿ,

೧೪. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ.೧., ವಚನ ಸಂಖ್ಯೆ ೧೫೫೪, ಪುಟ ೫೪೯
೧೫. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೫೬
೧೬ ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೫೩–೫೫

ಹೀಗೆಯೇ ಅನೇಕ ವಿಧದ ಭಾವಗಳಾಗಲಿ, ಅವೆಲ್ಲವೂ ಅಹಂಕಾರದ ಧರ್ಮಗಳು. ಈ ರೀತಿಯ ಧರ್ಮಗಳು ಅಧ್ಯಾಸ(ಆರೋಪದ)ದ ಕಾರಣವೇ ಅವನು ಶರೀರಧಾರಿಯಾಗಿದ್ದಾನೆ. ಹೇಗೆ ಸ್ವಪ್ನದ ಅವಸ್ಥೆಯಲ್ಲಿ ಜೀವನು ಸ್ವಪ್ನದ ಧರ್ಮಗಳನ್ನು ತನ್ನ ಮೇಲೆ ಆರೋಪ ಮಾಡಿಕೊಳ್ಳುವಂತೆ, ಅಜ್ಞಾನಿಯಾದ ಜೀವನು ಜಾಗ್ರತಾವಸ್ಥೆಯಲ್ಲಿ ಕೂಡ ಶರೀರದ ಧರ್ಮಗಳನ್ನು ಆತ್ಮನ ಮೇಲೆ ಆರೋಪಿಸಿಕೊಳ್ಳುತ್ತಾನೆ. ಇಲ್ಲಿ ಆತ್ಮನ ಮೇಲೆ ಶರೀರದ ಧರ್ಮಗಳ ಆರೋಪವನ್ನು ಅಧ್ಯಾಸವೆಂದು ಸ್ವಪ್ನದೃಷ್ಟಾಂತದಿಂದ ಸಮರ್ಥಿಸಲಾಗಿದೆ.

ಮಾಯೆಯಿಂದ ಮೋಹಿತನಾದ ಜೀವನು ತನ್ನನ್ನು ಬೇರೆಯಾಗಿ ನೋಡುತ್ತಾನೆ.

ಮಾಯಾಮೋಹಿತನಾದ ಜೀವನು ತನ್ನನ್ನು ಬೇರೊಂದು ರೀತಿಯಲ್ಲಿ ಕಲ್ಪಿಸಿಕೊಳ್ಳುತ್ತಾನೆ ಎಂಬುದನ್ನು ಬಿಂಬ-ಪ್ರತಿಬಿಂಬ ವಾದದಿಂದ ಸ್ಪಷ್ಟಪಡಿಸಲಾಗಿದೆ.

ನಿರ್ಲೇಪೋಽಹಂ ಯಥಾ ದೇವಿ ನಿಃಸಂಗಶ್ಚಾಪ್ಯಕಾಮನಃ।
ತಥೈವ ಜೀವೋ ಮದ್ಬಿಂಬೋ ನ ಬಿಂಬ-ಪ್ರತಿಬಿಂಬಯೋಃ॥
ಭೇದಃ ಪ್ರಸಿದ್ಧ ಏವಾಸೌ ದೃಶ್ಯತೇ ಗಿರಿನಂದಿನಿ।
ಮನ್ಮಾಯಾ ಮೋಹಿತೋ ಜೀವಃ ಪಶ್ಯತ್ಯಾತ್ಮಾನಮನ್ಯಥಾ॥[೧೭]

ಹೇಗೆ ಪರಮಾತ್ಮನು ನಿರ್ಲೇಪನು, ನಿಃಸಂಗನು ಮತ್ತು ಇಚ್ಛಾರಹಿತನೋ ಹಾಗೆಯೇ ಪರಮಾತ್ಮನ ಪ್ರತಿಬಿಂಬವಾದ ಜೀವನೂ ಕೂಡ. ಬಿಂಬ ಮತ್ತು ಪ್ರತಿಬಿಂಬಗಳ ಮಧ್ಯೆ ಭೇದವು ಪ್ರಸಿದ್ಧವೂ ಅಲ್ಲ, ಅದು ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಪರಮಾತ್ಮನು (ತಿರೋಧಾನಕೃತ್ಯಾಂಗವಾಗಿ) ಯೋಜಿಸಿದ ಅವನ ಮಾಯಾಶಕ್ತಿಯಿಂದ ಮೋಹಿತನಾದ ಜೀವನು ತನ್ನನ್ನು ಬೇರೆಯ ರೀತಿಯಲ್ಲೇ ತಿಳಿಯುತ್ತಾನೆ. ಅದು ಹೇಗೆಂದರೆ-

ನೃತ್ಯತೋ ಗಾಯತಃ ಪಶ್ಯನ್ ಯದ್ವೈವಾನ್ಯತ್ ಕರೋತಿ ತಾನ್।
ಏವಂ ಬುದ್ಧಿಗುಣಾನ್ ಪಶ್ಯನ್ನನೀಹೋಽಪ್ಯನು ಕಾರ್ಯತೇ॥[೧೮]

ಹೇಗೆ ಬೇರೆಯವರ ನರ್ತನ-ಗಾಯನವನ್ನು ನೋಡಿ, ಕೇಳಿ ಮತ್ತೊಬ್ಬನು ಹಾಗೇ ಮಾಡಲು ತೊಡಗುತ್ತಾನೋ ಹಾಗೆ ಈ ಜೀವನು ಯಾವುದೇ ಇಚ್ಛೆಯಿಲ್ಲದವನಾದರೂ ಬುದ್ಧಿಯ ಗುಣಗಳನ್ನು ಅನುಸರಿಸಿ ಅವುಗಳಲ್ಲಿ ಮಗ್ನನಾಗುತ್ತಾನೆ. ಅಲ್ಲದೇ -

ಶುದ್ಧೋ ಹಿ ಸ್ಫಟಿಕೋ ದೇವಿ ಜಪಾಕುಸುಮಸನ್ನಿಧೇಃ।
ರಕ್ತಸ್ಫಟಿಕವದ್ಭಾತಿ ತದ್ವದೌಪಾಧಿಕೀ ಭೃತಿಃ॥[೧೯]

---

೧೭. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೫೭-೫೮

೧೮. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೫೯

೧೯. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೬೨

ಶುದ್ಧವಾದ ಸ್ಫಟಿಕವು ಜಪಾಕುಸುಮದ ಸಾನ್ನಿಧ್ಯದಿಂದ ಕೆಂಪು ಸ್ಫಟಿಕದಂತೆ ಕಾಣುವಂತೆ ಈ ಭೋಗವು ಬುದ್ಧಿಯ ಉಪಾಧಿಯಿಂದ ತೋರುವಂತಹುದು. ಇದರಿಂದ ಬಿಡುಗಡೆ ಹೇಗೆ? ಎಂಬುದಕ್ಕೆ ಉತ್ತರವಾಗಿ –

ಗುಣೋರಗಭ್ರಮಾದ್ ಭೀತೋ ಗುಣಂ ಜ್ಞಾತ್ವಾ ಭಯಂ ತ್ಯಜೇತ್।
ಮಾಮಂತರ್ವ್ಯಾಪಿನಂ ಜ್ಞಾತ್ವಾ ಜೀವೋ ಮುಚ್ಯೇತ ಬಂಧನಾತ್॥[೨೦]

ಹಗ್ಗದಲ್ಲಿ ಹಾವಿನ ಭ್ರಾಂತಿಯಿಂದ (ರಜ್ಜು–ಸರ್ಪಭ್ರಾಂತಿಯಿಂದ) ಭಯಗೊಂಡವನು ಹಗ್ಗವೇ ಇದು ಎಂದು (ನಿಜವನ್ನು) ತಿಳಿದಾಗ ಭಯವನ್ನು ಬಿಡುತ್ತಾನೆ. ಹಾಗೆ ಪರಮಾತ್ಮನೇ ಅಂತರ್ಯಾಮಿಯಾಗಿದ್ದಾನೆಂದು ತಿಳಿದು ಜೀವನು ಬಂಧನದಿಂದ ಮುಕ್ತನಾಗುತ್ತಾನೆ. ಆದರೆ ಅಂತಹ ಜ್ಞಾನವು ಜೀವನಲ್ಲಿ ಸ್ವತಃ ಉದಯವಾಗುವುದಿಲ್ಲ; ಅಂತಹ ಜ್ಞಾನವನ್ನು ಕೊಡುವ ಗುರುವು ಬೇಕು ಎನ್ನುತ್ತ –

ಅನಾದ್ಯವಿದ್ಯಾಯುಕ್ತಸ್ಯ ಪುರುಷಸ್ಯಾತ್ಮವೇದನಮ್।
ಸ್ವತೋ ನ ಸಂಭವೇದನ್ಯಸ್ತತ್ತ್ವಜ್ಞೋ ಜ್ಞಾನದೋ ಭವೇತ್॥[೨೧]

ಅನಾದಿ ಅವಿದ್ಯೆಯಿಂದ ಕೂಡಿದ ಜೀವಾತ್ಮನಿಗೆ ಆತ್ಮಜ್ಞಾನವು ತನ್ನಿಂದ ತಾನೇ ಉಂಟಾಗಲಾರದು. ಆದ್ದರಿಂದ ಜ್ಞಾನವನ್ನು ನೀಡುವ ಇನ್ನೊಬ್ಬ ತತ್ತ್ವಜ್ಞನು ಬೇಕು ಎಂದು ಪ್ರತಿಪಾದಿಸುತ್ತವೆ.

ಯಾವನ್ನ ಜಾನಾತ್ಯಾತ್ಮಾನಮಾತ್ಮನಾ ತಂ ಮದಾತ್ಮಕಮ್ ॥
ವಿದ್ಯೇತ ವೃತ್ತಿವೈಚಿತ್ರ್ಯಮನಂತಾಯಾ ಅಹಮ್ಮತೇಃ॥[೨೨]

ಎಲ್ಲಿಯವರೆಗೆ ಜೀವಾತ್ಮನು ತನ್ನ ಆತ್ಮವನ್ನು ಶಿವಾತ್ಮಕವೆಂದು ತಿಳಿಯುವುದಿಲ್ಲವೊ ಅಲ್ಲಿಯವರೆಗೆ ಜೀವನಲ್ಲಿ ಬುದ್ಧಿಗತವಾದ ವ್ಯವಹಾರಗಳ ವೈಚಿತ್ರ್ಯಗಳಿರುತ್ತವೆ. ಏಕೆಂದರೆ ಅಹಂಕಾರದ ನಾನಾ ರೂಪಗಳು ಜೀವಿಗೆ ಪ್ರೇರಣೆ ನೀಡುತ್ತಿರುತ್ತವೆ ಎಂದು ಆಗಮಗಳು ಪ್ರತಿಪಾದಿಸಿವೆ. ಹೀಗೆ ಬಿಂಬ–ಪ್ರತಿಬಿಂಬ ದೃಷ್ಟಾಂತ, ಜಪಾಕುಸುಮದೃಷ್ಟಾಂತ ಮತ್ತು ರಜ್ಜು–ಸರ್ಪದೃಷ್ಟಾಂತಗಳ ಮೂಲಕ ಪಾರಮೇಶ್ವರಾಗಮವು ಪರಮಾತ್ಮ–ಜೀವಾತ್ಮರ ಅಭೇದ ಸಂಬಂಧವನ್ನು ಪ್ರತಿಪಾದಿಸುತ್ತದೆ.

ಪಾಶತತ್ವ (ಬಂಧ)

ಚಂದ್ರಜ್ಞಾನಾಗಮ ಹಾಗೂ ಪಾರಮೇಶ್ವರಾಗಮಗಳು ಮಲ, ಮಾಯೆಗಳಿಂದ ಬಂಧಿತವಾದ ಇಪ್ಪತ್ನಾಲ್ಕು ತತ್ತ್ವಗಳು ಪಾಶವೆಂದು ಉಲ್ಲೇಖಿಸುತ್ತವೆ.

---

೨೦. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೬೩
೨೧. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೬೫
೨೨. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೮೮–೮೯

ಚತುರ್ವಿಂಶತಿತತ್ತ್ವಾನಿ ಮಾಯಾಕರ್ಮಗುಣಾ ಅಮೀ॥
ವಿಷಯಾ ಇತಿ ಕಥ್ಯಂತೇ ಪಾಶಾ ಜೀವನಿಬಂಧನಾಃ॥ [೨೩]

ಇಪ್ಪತ್ನಾಲ್ಕು ತತ್ತ್ವಗಳು, ಮಾಯಾ, ಕರ್ಮ ಮತ್ತು ಗುಣಗಳು ವಿಷಯಗಳೆಂದು ಹೇಳಲ್ಪಡುತ್ತವೆ. ಇವು ಜೀವರನ್ನು ಬಂಧಿಸುವುದರಿಂದ ಅವೇ ಪಾಶಗಳು ಎಂದು ತಿಳಿಸುತ್ತದೆ. ಆದರೆ ಪೌಷ್ಕರಾಗಮವು ಶಿವನ ಪಂಚಕೃತ್ಯಗಳಲ್ಲಿ ಒಂದಾದ ತಿರೋಧಾನವನ್ನು ಹಾಗೂ ಕುಂಡಲಿನೀ ಎನ್ನುವ ಬಿಂದುವನ್ನು ಪಾಶವೆಂದು ಗ್ರಹಿಸಿ ಪಾಶಗಳು ಐದು ವಿಧವೆಂದು ಹೇಳುತ್ತದೆ. ಆದರೆ ವೀರಶೈವರಲ್ಲಿ ಈ ಪಾಶಗಳ ಸಂಖ್ಯೆ ಮಲ, ಮಾಯಾ ಮತ್ತು ಕರ್ಮಗಳೆಂಬ ಮೂರು ವಿಧವಾಗಿ ಉಳಿದುಕೊಂಡಿದೆ.

ವಿಷಯಗಳಿಂದ ಬಂಧಿತರಾದ ಜೀವಿಗಳು ವಿಷಯೋಪಭೋಗಗಳನ್ನು ತ್ಯಜಿಸಲು ಅಸಮರ್ಥರಾಗಿರುವರು.

ದುರ್ವಾಸನಾನುಬಂಧೇನ ವಿಷಯತ್ಯಾಗಕಾತರಾಃ।
ಮನ್ಮಾಯಾಮೋಹಿತಧಿಯಃ ಪುರುಷಾಃ ಪೂರ್ವಕರ್ಮತಃ ॥
ನೈವ ತೇ ಮಾಂ ವಿಜಾನಂತಿ ಹೃದಿಸ್ಥಂ ಯ ಇಮಂ ಯತಃ।
ಅಕ್ಷಶಸ್ತ್ರಾ ಹ್ಯಸುತೃಪ್ತಾ ಯಥಾ ನೀಹಾರಚಕ್ಷುಷಃ ॥
ಅಹಿತಾ ಆತುರಾ ವಾಚಾ ಪರಂ ಪುಷ್ಟಿತಯಾಖಿಲಾಃ।
ಬಧ್ಯಂತೇ ಸಂಕಟೇ ಘೋರೇ ಮಾಂಸಲುಬ್ಧಾ ಇವಾಂಡಜಾಃ ॥
ನ ರುಚಿಃ ಕರ್ಮ ಬಂಧಾನಾಂ ಜ್ಞಾನಭಕ್ತ್ಯೋರ್ಮಮ ಪ್ರಿಯೇ। [೨೪]

ಜೀವಿಗಳು ಪೂರ್ವಜನ್ಮಕೃತ ಕರ್ಮಗಳ ದೆಸೆಯಿಂದ ಉಂಟಾದ ವಾಸನಾ ವಿಷಯಗಳಿಂದ ಬಂಧಿತರಾದ ಕಾರಣ ವಿಷಯೋಪಭೋಗಗಳನ್ನು ತ್ಯಜಿಸಲು ಅಸಮರ್ಥರಾಗಿರುವರು. ಏಕೆಂದರೆ ಶಿವನ ಮಾಯೆಯು ಅವರ ಬುದ್ಧಿಯನ್ನು ಆವರಿಸಿಕೊಂಡಿರುವ ಕಾರಣ ನಿತ್ಯಾನಿತ್ಯ ವಿವೇಕವನ್ನು ಪಡೆಯದವರಾಗಿರುತ್ತಾರೆ. ತನ್ನಲ್ಲಿಯೇ ಅಡಗಿರುವ ಪರಮಾತ್ಮನನ್ನು ಕೂಡ ಅವರು ತಿಳಿಯುವುದಿಲ್ಲ. ಅವರು ಹೊರಗಿನ ಕಣ್ಣುಗಳಿಂದ ಮಾತ್ರ ನೋಡುವರು. ಅನಿತ್ಯವಾದ ಪ್ರಾಣವನ್ನು ತೃಪ್ತಿಪಡಿಸುವದರಲ್ಲಿಯೇ ಮಗ್ನರಾಗಿರುವರು. ಕಣ್ಣಿನ ಪೊರೆಯಿಂದ ಮಂಜಾದ ದೃಷ್ಟಿಗೆ ಹೇಗೆ ವಸ್ತುಗಳು ಅಸ್ಪಷ್ಟವಾಗಿ ತೋರುವವೋ ಹಾಗೆಯೇ ಅವರು ತತ್ತ್ವವನ್ನು ಸ್ಪಷ್ಟವಾಗಿ ಅರಿಯುವಲ್ಲಿ ಅಸಮರ್ಥರಾಗಿರುವರು. ಅವರು ಪರರಿಗೆ ಅಪಕಾರ ಮಾಡುವುದರಲ್ಲಿ ಮಗ್ನರಾಗಿರುವರು. ಸದಾ ವ್ಯಾಕುಲರೂ, ವ್ಯರ್ಥ ಮಾತುಗಳಲ್ಲಿ ಕಾಲವ್ಯಯ ಮಾಡುವವರೂ ಆಗಿರುವರು. ಮಾಂಸದ ಆಸೆಯಿಂದ ಬೇಡನ ಬಲೆಯಲ್ಲಿ ಸಿಕ್ಕಿಬೀಳುವ ಅವಿವೇಕಿ ಪಕ್ಷಿಯಂತೆ ಅಂಥ ಪುರುಷರು ವಿಷಯಗಳಲ್ಲಿನ

---

೨೩. ಚಂ.ಆ.ಕ್ರಿ. ಪಾ. ಪಟಲ ೧, ಶ್ಲೋಕ ಸಂಖ್ಯೆ ೧೨

೨೪. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೭೫, ೭೭-೭೯

ಆಸಕ್ತಿಯಿಂದ ಸದಾ ಸಂಕಟದಲ್ಲಿ ಸಿಲುಕಿರುವರು. ಕರ್ಮಬಂಧನದಲ್ಲಿ ಸಿಲುಕಿರುವ ಇಂಥ ಪುರುಷರು ಒಳ್ಳೆಯ ತುಪ್ಪವನ್ನು ಬಿಟ್ಟು ಸತ್ತ ಪ್ರಾಣಿಯ ಮೂಳೆ ಮತ್ತು ಚರ್ಮಗಳಲ್ಲಿ ಆಸಕ್ತಿ ತೋರುವ ಶ್ವಾನದಂತೆ ಶಿವಜ್ಞಾನ ಮತ್ತು ಶಿವಭಕ್ತಿಗಳಲ್ಲಿ ನಿರಾಸಕ್ತಿ ಹೊಂದಿರುವರು ಎಂದು ಅರುಹುತ್ತದೆ.

ವಚನಕಾರರೂ ಸಹ ವಾಸನಾ ವಿಷಯಗಳಿಂದ ಬಂಧಿತರಾದ ಜೀವಿಗಳ ಭಾವವನ್ನು ವ್ಯಕ್ತಪಡಿಸುತ್ತ

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ.
ಪಶುವೇನ ಬಲ್ಲುದು? ಹಸುರೆಂದೆಳೆಸುವುದು.
ವಿಷಯರಹಿತನ ಮಾಡಿ, ಭಕ್ತಿರಸವ ದಣಿಯ ಮೇಯಿಸಿ,
ಸುಬುದ್ಧಿಯೆಂಬ ಉದಕವನೆರೆದು,
ನೋಡಿ ಸಲಹಯ್ಯಾ, ಕೂಡಲಸಂಗಮದೇವಾ.[೨೫]

ಎಂದು ಪ್ರಾರ್ಥಿಸಿದ್ದಾರೆ. ಅಲ್ಲದೇ "ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ. ಸಂಸಾರ ಸಂಗವ ಬಿಡದು ನೋಡೆನ್ನ ಮನವು. ಈ ನಾಯಿತನವ ಮಾಣಿಸು[೨೬] ಎಂದು ಸಂಸಾರಾದಿ ವ್ಯಾಮೋಹಗಳು ಮನುಷ್ಯನನ್ನು ಪರವಸ್ತುವಿನೆಡೆಗೆ ಸಾಗದಂತೆ ತಡೆಯುತ್ತವೆಂದು ತಿಳಿಸಿರುವರು. ಕಾರಣ "ಆಸೆ, ಆಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ – ಇವನೆನ್ನ ನಾಲಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ, ಅದೇಕೆಂದಡೆ, ನಿನ್ನತ್ತಲೆನ್ನ ಬರಲೀಯವು."[೨೭] ಎಂದು ಮನೋಜ್ಞವಾಗಿ ಬಿನ್ನಯಿಸಿದ್ದಾರೆ.

ಮಾಯಾಮೋಹದ ಪ್ರಭಾವದಿಂದ ಪರಶಿವನೊಂದಿಗೆ ತಮ್ಮ ತಾದಾತ್ಮ್ಯದ ಜ್ಞಾನದಿಂದ ವಂಚಿತರಾಗಿ ತಮ್ಮ ಕರ್ಮಕ್ಕೆ ಅನುಸಾರವಾಗಿ ಸಂಸಾರದಲ್ಲಿ ಸುತ್ತುತ್ತಾರೆ. ಪ್ರಾಣಿಗಳು, ಮನುಷ್ಯ ಮುಂತಾದ ಜನ್ಮ ಭೇದದಿಂದ ಚಕ್ರದ ಸುತ್ತಲಿನ ಬಳೆಯಂತೆ ಸುತ್ತುತ್ತಾರೆ. ಹುಟ್ಟು, ಆಯುಷ್ಯ ಮತ್ತು ಭೋಗಗಳ ವೈಲಕ್ಷಣ್ಯಕ್ಕೆ ಕೇವಲ ಅವರವರ ಕರ್ಮವು ಕಾರಣ. ಈ ದುಃಖಗಳಿಂದ ಪೀಡಿತರಾದ ಜೀವರಿಗೆ ಅಲ್ಪಮಾತ್ರವೂ ಸುಖವಿಲ್ಲ. ಕಾರಣ – " ಇಂದಿಂಗೆಂತು ನಾಳಿಂಗೆಂತು ಎಂದು ಬೆಂದ ಒಡಲ ಹೊರೆಯ ಹೋಯಿತ್ತೆನ್ನ ಸಂಸಾರ! ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ, ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ. ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದಯ್ಯಾ ಈ ಮಾಯೆ[೨೮] ಎಂದು ತಿಳಿಸಿದ್ದಾರೆ. ಕಾರಣ ಇಂಥ ದುಃಖಾದಿಗಳಿಂದ ವಿಮುಕ್ತಿ ಹೊಂದಲು ಭಕ್ತಿಯನ್ನು ಆಶ್ರಯಿಸಬೇಕೆಂದು ಆಗಮಗಳು ಪ್ರತಿಪಾದಿಸಿವೆ.

---

೨೫. ಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೫೧, ಪುಟ ೧೬
೨೬. ಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೩೫, ಪುಟ ೧೨
೨೭. ಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೪೬, ಪುಟ ೧೪
೨೮. ಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೧೭, ಪುಟ ೮

ಭಕ್ತಿಯೇ ಮುಕ್ತಿಯ ಸಾಧನ -

ದುಃಖಗಳಿಂದ ನಿವೃತ್ತಿಯನ್ನು ಹೊಂದಲು ಭಕ್ತಿಯನ್ನು ಆಶ್ರಯಿಸಬೇಕೆಂದು ಅನೇಕ ಸಾದೃಶ್ಯಗಳ ಮೂಲಕ ಅತ್ಯಂತ ಮನೋಜ್ಞವಾಗಿ ವಿವರಿಸುತ್ತ, "ಶರೀರೇಂದ್ರಿಯಗಳನ್ನು ನಿಗ್ರಹಿಸಿ ಪರಶಿವನ ಆರಾಧನೆಯಲ್ಲಿ ಯಾವನು ಸಮರ್ಥನಿದ್ದಾನೆಯೋ ಅಂಥವನಿಗೆ ತಿರುಕನಿಗೆ ನಿಧಿಪ್ರಾಪ್ತಿಯಾದಂತೆ ಸದ್ಭಕ್ತಿಯೇ ಪರಮಪ್ರಯೋಜನವಾಗಿದೆ. ಇದು ಭವರೋಗಕ್ಕೆ ಔಷಧಿ ಪ್ರಾಯವಾಗಿದೆ. ಪಾಪವೆಂಬ ಕಾಡ್ಗಿಚ್ಚಿಗೆ ಮಳೆ ಸುರಿಸುವ ಮೇಘಗಳಂತಿದೆ. ಅದು ಸಂಸಾರದ ಸಂಕಷ್ಟಗಳ ದುಃಖದಿಂದ ನೊಂದಿರುವವರನ್ನು ಮುಕ್ತರನ್ನಾಗಿ ಮಾಡುತ್ತದೆ. ಮನುಷ್ಯನು ಬುದ್ಧಿಪೂರ್ವಕವಾಗಿ ಮಾಡಲ್ಪಟ್ಟ ಪಾಪಕರ್ಮಗಳು ಕೂಡ ಶಿವಭಕ್ತಿಯಿಂದ, ವಡವಾಗ್ನಿಯಲ್ಲಿ ಒಣಗಿದ ಹುಲ್ಲು ಉರಿದು ಭಸ್ಮವಾಗುವಂತೆ ನಾಶಹೊಂದುತ್ತವೆ. ಮೋಹರೂಪಿಯಾದ ಗಾಢಾಂಧಕಾರದಲ್ಲಿ ಮುಳುಗಿದ, ದುಃಖವೆಂಬ ಭಯಂಕರ ಕಾಡಲ್ಲಿ ದಿಕ್ಕೆಟ್ಟು ಅಲೆಯುವಂತಹವರಿಗೆ ಸದ್ಭಕ್ತಿಯೆಂಬುದೇ ಶಾಸ್ತ್ರೋಚಿತ ಮಾರ್ಗ. ಆಲಸ್ಯದಿಂದಾಗಲಿ, ಕಾರ್ಯಬಾಹುಳ್ಯದಿಂದಾಗಲಿ, ವಿನೋದದಿಂದಾಗಲಿ, ಮನಃಪೂರ್ವಕವಾಗಿಯಾಗಲಿ, ಅರೆಮನಸ್ಸಿನಿಂದಾಗಲಿ ಯಾವೊಬ್ಬ ಶಿವಭಕ್ತನು ಭಕ್ತಿಯನ್ನು ಆಚರಿಸಿದರೆ ಅಂಥವನು ಕೂಡ ದುಃಖಸಾಗರವನ್ನು ದಾಟುತ್ತಾನೆ. ಆರೋಗ್ಯವನ್ನು ಬಯಸುವ ರೋಗಿಯು ಹೇಗೆ ಆದರದಿಂದ ಔಷಧವನ್ನು ತೆಗೆದುಕೊಳ್ಳುವನೋ ಹಾಗೆಯೇ ಇಹಪರಗಳಲ್ಲಿ ಸುಖವನ್ನಿಚ್ಛಿಸುವವನು ಭಕ್ತಿಯನ್ನು ಆಚರಿಸಬೇಕು. ಪರಸ್ಥಳಕ್ಕೆ ಹೊರಟಿರುವ ಪ್ರಯಾಣಿಕನು ದಾರಿಯ ಊಟಕ್ಕಾಗಿ ಹೇಗೆ ಬುತ್ತಿಯನ್ನು ಆಶ್ರಯಿಸುವನೋ ಹಾಗೆಯೇ ನನ್ನನ್ನು ಅಪೇಕ್ಷಿಸುವವನು ಸಮಾಧಾನ ಚಿತ್ತನಾಗಿ ನಿರಪೇಕ್ಷನಾಗಿ ಭಕ್ತಿಯನ್ನು ಆಶ್ರಯಿಸಬೇಕು. ಎಲ್ಲಾ ಜನರಿಗೆ ಅತಿಪ್ರಿಯವಾದ ಸ್ತ್ರೀಸಂಗದೆಡೆಗಿನ ತೀವ್ರವಾದ ಅನುರಾಗದಂತೆ, ಎಲ್ಲ ಆಸಕ್ತಿಗಳನ್ನು ತೊರೆದು, ಭಕ್ತನು ಭಕ್ತಿಯಿಂದ ಶಿವನನ್ನು ಆರಾಧಿಸಬೇಕು. ಕೋಟಿ ಕೋಟಿ ಗ್ರಂಥಗಳಲ್ಲಿ ಹೇಳಿರುವ ತತ್ತ್ವವನ್ನು ಒಂದೇ ವಾಕ್ಯದಲ್ಲಿ ಹೇಳುವೆ ಕೇಳು, "ಶಿವಭಕ್ತಿಯೇ ಮುಕ್ತಿಗೆ ಸರ್ವಶ್ರೇಷ್ಠ ಸಾಧನವು"[೨೯] ಎಂದು ಪ್ರತಿಪಾದಿಸುತ್ತ "ಭಕ್ತಿಯಿಂದ ಉತ್ಪನ್ನವಾದ ಜ್ಞಾನವು ಸದೃಢವಾಗಿರುವುದು. ದೃಢಜ್ಞಾನದಿಂದ ಯೋಗವು ಪ್ರಾಪ್ತಿಯಾಗುವದು. ಜ್ಞಾನ ಮತ್ತು ಯೋಗಗಳ ಬಲದಿಂದ ಸಿದ್ಧಿಪುರುಷನಾಗುವ ಶಿವಭಕ್ತನು ಅಂತಿಮವಾಗಿ ಮುಕ್ತನಾಗುವನು. ಭಕ್ತಿರಹಿತನಾದ ವ್ಯಕ್ತಿಯಲ್ಲಿ ಸುಜ್ಞಾನವು ಉದಿಸಲಾರದು."[೩೦] ಎಂದು ದುಃಖ ನಿವೃತ್ತಿಯ ಮಾರ್ಗವನ್ನು ಹೇಳಿದೆ.

ಪಾಶಗಳನ್ನು ಕತ್ತರಿಸಲು ವೀರಶೈವ ದೀಕ್ಷೆಯನ್ನು ಅಂಗೀಕರಿಸಬೇಕು

ಭವಪಾಶದಿಂದ ಬೇಸತ್ತು ಅದರಿಂದ ಮುಕ್ತಿಯನ್ನು ಬಯಸಿ ಶ್ರೀಗುರುವಿನ

---

೨೯. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೨೨-೩೦

೩೦. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೬೧-೬೨

ಬಳಿ ಭಕ್ತಿಯಿಂದ ಶರಣಾಗತನಾಗಿ ಬಂದ ಜೀವನಿಗೆ ಶ್ರೀಗುರುವು ತ್ರಿವಿಧ ದೀಕ್ಷೆಯನ್ನು ಅನುಗ್ರಹಿಸಿ, ಅಷ್ಟಾವರಣ ಸಂಪನ್ನವೂ, ಪಂಚಾಚಾರ ವಿಶಿಷ್ಟವೂ ಆದ ಷಟ್‌ಸ್ಥಲಾತ್ಮಕ ಸಾಧನ ಮಾರ್ಗವನ್ನು ಬೋಧಿಸುವನು. ಆ ಮಾರ್ಗದರ್ಶನದಂತೆ ಮುನ್ನಡೆದ ಸಾಧಕನು ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗ ಪೂಜೆಗೈಯುತ್ತ, ಭಕ್ತಿಮಾರ್ಗದಲ್ಲಿ ಮುನ್ನಡೆದು ಶಿವಯೋಗದ ಮೂಲಕ ಮುಕ್ತಿಯನ್ನು ಹೊಂದುವನು ಎನ್ನುತ್ತ ಚಂದ್ರಜ್ಞಾನಾಗಮವು "ಕೊನೆಯಿಲ್ಲದ ಜನನ-ಮರಣಗಳ ಸರಣಿಗೆ ಕಾರಣವಾದ ಪಾಶಸಮುದಾಯದಿಂದ ಮುಕ್ತಿಯನ್ನು ಬಯಸುವವನು ಪಾಶವನ್ನು ಕತ್ತರಿಸುವ ವೇಧಾ, ಮನು (ಮಂತ್ರ) ಮತ್ತು ಕ್ರಿಯಾದೀಕ್ಷೆ ಎಂಬ ಮೂರು ದೀಕ್ಷೆಗಳಿಂದ ಶೋಭಿತವಾದ ಶಾಂಭವೀ ದೀಕ್ಷೆಯನ್ನು ಸ್ವೀಕರಿಸಬೇಕು."[೩೧] ಎಂದು ತಿಳಿಸುತ್ತದೆ. ಇದನ್ನೇ ಚೆನ್ನಬಸವಣ್ಣನವರು ಪ್ರತಿಪಾದಿಸುತ್ತ –

ಭವಪಾಶದಿಂದೆ ಕಟ್ಟುವಡೆದು ಕಂಗೆಟ್ಟ ಮನುಜನು
ಶ್ರೀಗುರುವಿನ ಕರುಣವ ಪಡೆಯಬೇಕಾಗಿ ....
ಗುರುಲಕ್ಷಣದಿಂದೊಪ್ಪುವ ಮಹಿಮನೆಡೆಗೈದಿ
ಆತನಿಂದ ಜ್ಞಾನದೀಕ್ಷೆಯ ಪಡೆಯಬೇಕು.
ಇದು ಸದ್ಭಾವಿಗಳ ಸನ್ಮಾರ್ಗವಯ್ಯಾ, ಕೂಡಲಚೆನ್ನಸಂಗಮದೇವಾ[೩೨]

ಎಂದಿದ್ದಾರೆ. ಪಾರಮೇಶ್ವರಾಗಮದ "ತತ್ರ ತತ್ರ ಗತೋ ದೇವಿ ಮಮಾತ್ಮಾ ಪ್ರತಿಬಿಂಬಿತಃ ಜೀವತ್ವಮೇತ್ಯ ಮಚ್ಛಾಸ್ತ್ರಾತ್ ಪ್ರಕೃತಿಂ ಚಾನುಗಚ್ಛತಿ"[೩೩] ಎಂಬ ಉಕ್ತಿಯಂತೆ ಪರಮಾತ್ಮನ ಭಿನ್ನ ಭಿನ್ನ ಪ್ರತಿಬಿಂಬಗಳಾದ ಜೀವಾತ್ಮರು ಅವನಿಂದ ಬೇರೆಯಾಗಿದ್ದರೂ ಶಿವಶಾಸ್ತ್ರಾಧ್ಯಯನ ಮತ್ತು ಷಟಸ್ಥಲ ಸಾಧನೆಯಿಂದ ಶಿವಭಾವವನ್ನು ಹೊಂದುತ್ತಾರೆ, ಮರಳಿ ಶಿವನಲ್ಲಿ ಸಮರಸೈಕ್ಯವನ್ನು ಹೊಂದುತ್ತಾರೆ ಎಂಬುದೇ ಪತಿ-ಪಶು-ಪಾಶ ತತ್ವದ ಸಾರವಾಗಿದೆ.

ಒಟ್ಟಿನಲ್ಲಿ ಪತಿ-ಪಶು-ಪಾಶ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ತಿಳಿದುಬರುವ ವಿಷಯವೇನೆಂದರೆ ಶಿವಾಗಮಗಳು ಪರಶಿವನನ್ನೇ ಸರ್ವೋತ್ಕೃಷ್ಟವಾದ, ಸರ್ವಕ್ಕೂ ಕಾರಣವಾದ ಶಿವತತ್ತ್ವವೆಂದು ಪ್ರತಿಪಾದಿಸುತ್ತದೆ. ಪರಶಿವನು ಸತ್-ಚಿತ್-ಆನಂದ ಸ್ವರೂಪನು, ನಿತ್ಯ-ನಿರಂಜನ-ಶುದ್ಧ-ನಿರ್ಮಲನು, ಕ್ಲೇಶರಹಿತನು, ನಿರ್ಗುಣನು, ನಿತ್ಯಪರಿಪೂರ್ಣನು, ಮಾಯಾರಹಿತನು, ಉಪಾಧಿರಹಿತನು, ಶರೀರವಿಲ್ಲದವನು, ಏಕೈಕನು, ಪರಂಜ್ಯೋತಿ ಸ್ವರೂಪನು, ಸನಾತನನು, ಶಾಶ್ವತನು ಎಂದು ಪರಶಿವನ ಸ್ವರೂಪವನ್ನು ವರ್ಣಿಸಿ ವಿಶ್ವವೆಲ್ಲವೂ ಪರಮಾತ್ಮನ ಆಜ್ಞಾಬಲದಿಂದಲೇ ನಿಂತಿದ್ದು, ಆತನ ನಿಯಂತ್ರಣಕ್ಕೆ ಒಳಗಾಗಿ ನಡೆಯುತ್ತದೆ. ಎಲ್ಲಾ ತತ್ತ್ವಗಳ ಉತ್ಪತ್ತಿ, ದಿಕ್ಪಾಲಕರ ಪ್ರವೃತ್ತಿ, ಬ್ರಹ್ಮ-ವಿಷ್ಣು-

---

೩೧. ಚಂ.ಆ.ಕ್ರಿ. ಪಾ. ಪಟಲ ೧, ಶ್ಲೋಕ ಸಂಖ್ಯೆ ೪೫, ೪೭
೩೨. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವ. ಸಂ. ೧೪೨೪, ಪುಟ ೫೧೦
೩೩. ಪಾ.ಆ. ಪಟಲ ೨೧, ಶ್ಲೋಕ ಸಂಖ್ಯೆ ೭೫

ಹರರ ಸೃಷ್ಟಿ-ಸ್ಥಿತಿ-ಲಯವೆಂಬ ಕಾರ್ಯಗಳು, ಕಾಲ ಮುಂತಾದವುಗಳ ಪ್ರವರ್ತನೆ, ಬುದ್ಧಿ ಮುಂತಾದವುಗಳ ಕಾರ್ಯಗಳು ಎಲ್ಲವೂ ಪರಶಿವನ ಶಾಸನದಿಂದಲೇ ನಡೆಯುತ್ತವೆ ಎಂಬ ಪಾರಮಾರ್ಥಿಕ ಸತ್ಯವು ಮನದುಂಬುವಂತೆ ನಿರೂಪಿಸಿವೆ.

ಪಶು ಸ್ವರೂಪವನ್ನು ವರ್ಣಿಸುತ್ತ ಪಾಶಗಳಿಂದ ಬಂಧಿಸಲ್ಪಟ್ಟ ಜೀವವೇ ಪಶುವೆಂದು ಸೂಚಿಸಿ, ಬ್ರಹ್ಮಾದಿ ಸ್ಥಾವರಾಂತ ಎಲ್ಲವೂ ಪಶುಗಳೆಂದು ಹೇಳುತ್ತಾ, ಜೀವನನ್ನು ಪರಶಿವನ ಅಂಶವೆಂದೂ, ಜ್ಞಾನಸ್ವರೂಪನೆಂದೂ ಹೇಳಿದೆ. ಆತ್ಮನು ಯಾವಾಗಲೂ ಹುಟ್ಟುವುದಿಲ್ಲ, ಸಾಯುವುದಿಲ್ಲ; ಆತ ನಿತ್ಯನು, ಶಾಶ್ವತನು. ಪರಶಿವನ ಲೀಲೆಯಿಂದ ಆತ್ಮನಿಗೆ ಶರೀರ ಸಂಬಂಧವುಂಟಾಗುತ್ತದೆ. ಶರೀರ ನಷ್ಟವಾದಾಗ ಆತ್ಮನು ನಷ್ಟವಾಗುವುದಿಲ್ಲ. ಹೀಗೆ ಜೀವಾತ್ಮನು ಶರೀರಕ್ಕಿಂತ ಭಿನ್ನನು ಎಂದು ಪಾರಮೇಶ್ವರಾಗಮವು ಪರಮಾತ್ಮ-ಜೀವಾತ್ಮರ ಅಭೇದ ಸಂಬಂಧವನ್ನೂ, ಜೀವನು ಭೋಕ್ತೃವಾಗಿ ತೋರುವುದಕ್ಕೆ ಮಾಯಾ ಶಕ್ತಿವಶವಾದ ಬುದ್ಧಿ-ಅಹಂಕಾರಗಳ ಅನುಕರಣೆ ಪ್ರಭಾವಗಳು ಕಾರಣವೆಂಬುದನ್ನು ಬಿಂಬ-ಪ್ರತಿಬಿಂಬ ದೃಷ್ಟಾಂತ, ಜಪಾಕುಸುಮದೃಷ್ಟಾಂತ ಮತ್ತು ರಜ್ಜು-ಸರ್ಪದೃಷ್ಟಾಂತಗಳ ಮೂಲಕ ನಿರೂಪಿಸುತ್ತದೆ.

ಇಪ್ಪತ್ನಾಲ್ಕು ತತ್ತ್ವಗಳು, ಮಾಯಾ, ಕರ್ಮ ಮತ್ತು ಗುಣಗಳು ವಿಷಯಗಳೆಂದು ಹೇಳಲ್ಪಡುತ್ತವೆ. ಜೀವರನ್ನು ಬಂಧಿಸುವುದರಿಂದ ಅವೇ ಪಾಶಗಳು ಎಂದು ಪ್ರತಿಪಾದಿಸಿ, ಅವಿದ್ಯಾರೂಪ ಮಾಯಾಶಕ್ತಿಯ ಸ್ಪಂದದಿಂದ ಪರಶಿವನಿಂದ ಬೇರ್ಪಟ್ಟ ಅಂಶಗಳಾದ ಜೀವರು ಅವಿದ್ಯೆಯಿಂದ ಮೋಹಿತರಾಗಿ ಸುಖದುಃಖಗಳನ್ನು ಅನುಭವಿಸುತ್ತಾ ಜನನ-ಮರಣ ರೂಪ ಸಂಸಾರಚಕ್ರದಲ್ಲಿ ಸಿಲುಕಿ ಪರಿತಪಿಸುತ್ತಾರೆ. ಭವಪಾಶದಿಂದ ಬೇಸತ್ತು ಅದರಿಂದ ಮುಕ್ತಿಯನ್ನು ಬಯಸಿ ಶ್ರೀಗುರುವಿನ ಬಳಿ ಭಕ್ತಿಯಿಂದ ಶರಣಾಗತನಾಗಿ ಬಂದ ಜೀವನಿಗೆ ಶ್ರೀಗುರುವು ತ್ರಿವಿಧ ದೀಕ್ಷೆಯನ್ನು ಅನುಗ್ರಹಿಸಿ, ಅಷ್ಟಾವರಣ ಸಂಪನ್ನವೂ, ಪಂಚಾಚಾರ ವಿಶಿಷ್ಟವೂ ಆದ ಷಟ್‌ಸ್ಥಲಾತ್ಮಕ ಸಾಧನ ಮಾರ್ಗವನ್ನು ಬೋಧಿಸುವನು. ಆ ಮಾರ್ಗದರ್ಶನದಂತೆ ಮುನ್ನಡೆದ ಸಾಧಕನು ಭಕ್ತಿಮಾರ್ಗದಲ್ಲಿ ಮುನ್ನಡೆದು ಶಿವಯೋಗದ ಮೂಲಕ ಮುಕ್ತಿಯನ್ನು ಹೊಂದುವನು. ಹೀಗೆ ಶಿವನ ವಿಶ್ವಲೀಲೆಯ ಅಂಗವಾಗಿ ಶಕ್ತಿಯೇ ಅವಿದ್ಯಾಮಾಯೆಯಾಗಿ ಜೀವರನ್ನು ಸಂಸಾರಿಗಳಾಗುವಂತೆ ಮಾಡಿ ಸುಖ-ದುಃಖಗಳ ಅನುಭವಕ್ಕೆ ಪಕ್ಕಾಗಿಸಿದರೆ, ಭಕ್ತಿಯಾಗಿ ಮುಮುಕ್ಷುಗಳಾದ ಜೀವರನ್ನು ಮುಕ್ತಿಯೆಡೆಗೆ ಕೊಂಡೊಯ್ಯುತ್ತಾಳೆ ಎಂದು ಪ್ರತಿಪಾದಿಸಲಾಗಿದೆ. ವಚನಗಳಲ್ಲಿಯೂ ಸಹ ಪತಿ-ಪಶು-ಪಾಶ ತತ್ವದ ಇದೇ ವಿಶ್ಲೇಷಣೆಯೇ ಪ್ರತಿಪಾದಿತವಾಗಿದ್ದು ಪಾಶಗಳಿಂದ ವಿಮುಕ್ತಿಗೊಳಿಸುವಂತೆ ಪರಶಿವನಲ್ಲಿ ಪ್ರಾರ್ಥಿಸುವ ಪ್ರಸಂಗಗಳು ಅತ್ಯಂತ ಮನೋಜ್ಞವಾಗಿ, ಭಾವಪೂರ್ಣವಾಗಿ ಮೂಡಿಬಂದಿವೆ.

***

ಅಧ್ಯಾಯ–೪

ಶಿವಾಗಮಗಳು ಮತ್ತು ವಚನ ಸಾಹಿತ್ಯ: ಧಾರ್ಮಿಕ ಚಿಂತನ

೪.೧ ದೈನಂದಿನ ಆಚರಣೆಗಳು

- ಪ್ರಾತಃಕಾಲದ ಕರ್ಮಗಳು
- ಶೌಚವಿಧಿ, ದಂತಧಾವನ ವಿಧಿ, ಸ್ನಾನವಿಧಿ
- ಭಸ್ಮಸ್ನಾನ–ತ್ರಿಪುಂಡ್ರ ಧಾರಣವಿಧಿ
- ರುದ್ರಾಕ್ಷ ಧಾರಣವಿಧಿ
- ಸಂಧ್ಯಾವಂದನ
- ವೀರಶೈವರ ಪಂಚಯಜ್ಞಗಳು
- ಸಾಯಂವಿಧಿ, ರಾತ್ರಿ ಕರ್ತವ್ಯಗಳು

೪.೨ ಧಾರ್ಮಿಕ ಸಂಸ್ಕಾರಗಳು

೪.೨.೧ ದೀಕ್ಷಾ

- ದೀಕ್ಷೆಯ ತಾತ್ವಿಕ ಅರ್ಥ, ಮಹತ್ವ, ಅಗತ್ಯತೆ
- ದೀಕ್ಷಾ ಸಂಸ್ಕಾರದಲ್ಲಿ ಸ್ತ್ರೀಪುರುಷರಿಗೂ ಸಮಾನತೆ
- ದೀಕ್ಷೆಯನ್ನು ಪಡೆಯಲು ಇರಬೇಕಾದ ಅರ್ಹತೆಗಳು
- ದೀಕ್ಷೆ ನೀಡುವ ಗುರುವಿನ ಲಕ್ಷಣಗಳು
- ದೀಕ್ಷೆ ಹೊಂದಿದವರೆಲ್ಲ ಸಮಾನರು ಅವರಿಗೆ ಜಾತಿಭೇದವಿಲ್ಲ
- ದೀಕ್ಷೆಯ ಪ್ರಕಾರಗಳು – ಕ್ರಿಯಾ, ವೇಧಾ, ಮನು

೪.೨.೨ ಶಿವಮೇಧ ವಿಧಿ (ಅಂತ್ಯೇಷ್ಟಿವಿಧಿ)

- ಶಿವಮೇಧದ ಅರ್ಥ, ಪ್ರಶಂಸಾ ವಿಧಿ
- ಉತ್ಕ್ರಾಂತಿ ಸಮಯಾಚಾರವಿಧಿ
- ಸಮಾಧಿರಚನಾ ವಿಧಿ ಮತ್ತು ನಿಕ್ಷೇಪವಿಧಿ
- ಔರ್ಧ್ವದೇಹಿಕವಿಧಿ
- ಪ್ರಕೀರ್ಣವಿಧಿ

ಅಧ್ಯಾಯ–೪

ಶಿವಾಗಮಗಳು ಮತ್ತು ವಚನ ಸಾಹಿತ್ಯ: ಧಾರ್ಮಿಕ ಚಿಂತನ

ಜಗತ್ತಿನ ಪ್ರತಿಯೊಂದು ಧರ್ಮಕ್ಕೂ ಅದರದೇ ಆದ ತತ್ವಜ್ಞಾನವಿರುವಂತೆ ಧಾರ್ಮಿಕ ಆಚರಣೆಗಳೂ ಸಹ ಧರ್ಮದ ಪ್ರಮುಖ ಅಂಗಗಳಾಗಿರುತ್ತವೆ. ಈ ಧಾರ್ಮಿಕ ಆಚರಣೆಗಳು ವ್ಯಕ್ತಿಗತವಾದ ಶ್ರೇಯಸ್ಸನ್ನು ಸಾಧಿಸುವುದರ ಜೊತೆಗೆ ಸಾಮಾಜಿಕ ಹಿತಸಾಧನೆಗೂ ನೆರವಾಗುತ್ತವೆ. ಕಾರಣ ವಿವಿಧ ಧರ್ಮಗಳಲ್ಲಿ ಆಯಾ ಧರ್ಮಕ್ಕನುಗುಣವಾದ ಆಚರಣೆಗಳಿಗೆ ಮಹತ್ವ ನೀಡಲಾಗಿದ್ದು, ವೀರಶೈವ ಧರ್ಮದಲ್ಲಿ ದೈನಂದಿನ ಆಚರಣೆಗಳಿಗೆ ಮತ್ತು ಧಾರ್ಮಿಕ ಸಂಸ್ಕಾರಗಳಾದ ದೀಕ್ಷಾ ಮತ್ತು ಶಿವಮೇಧವಿಧಿಗೆ ಅತ್ಯಂತ ಪ್ರಾಶಸ್ತ್ಯ ನೀಡಲಾಗಿದೆ. ಆದುದರಿಂದ ಧಾರ್ಮಿಕ ಚಿಂತನದ ಅಡಿಯಲ್ಲಿ ಇವುಗಳನ್ನಿಲ್ಲಿ ಚರ್ಚಿಸಲಾಗಿದೆ.

೪.೧ ದೈನಂದಿನ ಆಚರಣೆಗಳು

ಪ್ರತಿಯೊಬ್ಬ ಮಾನವನಿಗೂ ಧರ್ಮದ ಆಚರಣೆಯು ಅತಿ ಅವಶ್ಯವಾಗಿದೆ. ಸರ್ವಧರ್ಮದಲ್ಲಿಯೂ ಉಪಾಸನಾ ದೈವ, ಉಪಾಸಕ ಮತ್ತು ಆ ದೈವವನ್ನು ಕುರಿತು ಆಚರಿಸುವ ವಿಧಾನಗಳು ಅಂದರೆ ಧಾರ್ಮಿಕ ಕಟ್ಟಳೆಗಳು ವಿಧಿ ನಿಯಮಗಳು ಇರುತ್ತವೆ. ಕಾರಣ ಲಿಂಗಾಂಗ ಸಮರಸಾಕಾಂಕ್ಷಿಗಳಾದ ವೀರಶೈವರು ಯಾವ ಯಾವ ದೈನಂದಿನ ಕರ್ಮಗಳನ್ನು ಆಚರಿಸಬೇಕೆಂದು ಶಿವಾಗಮ ಮತ್ತು ವಚನ ಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅವನ್ನಿಲ್ಲಿ ವಿವೇಚಿಸಲಾಗಿದೆ.

ಧಾರ್ಮಿಕವಾದ ದೈನಂದಿನ ಆಚರಣೆಗಳಿಗೆ ಶಿವಾಗಮಗಳಲ್ಲಿ ಆಹ್ನಿಕ ಎಂದು ಕರೆಯಲಾಗಿದೆ. ಮಕುಟಾಗಮದಲ್ಲಿ ರುದ್ರನಿಗೆ ಪರಶಿವನು ಮಲ ಪಾಶಗಳಿಂದ ಬಂಧಿಸಲ್ಪಟ್ಟ ಜೀವಿಯ ಮುಕ್ತಿಗೆ ಆಹ್ನಿಕವು ಸಾಧನವಾಗಿದೆಯೆಂದು –

ಆಹ್ನಿಕಂ ತು ಪ್ರವಕ್ಷ್ಯಾಮಿ ಶಾಂಭವಾನಾಮನುತ್ತಮಮ್।
ಶೃಣುಷ್ವಾವಹಿತೋ ಭೂತ್ವಾ ಭವಪಾಶನಿಕೃನ್ತನಮ್॥[೧]

ಎಂದು ಉಪದೇಶಿಸುತ್ತಾನೆ. ಕಾರಣ ಪ್ರತಿನಿತ್ಯವೂ ನಾವು ಆಚರಿಸುವ ಧಾರ್ಮಿಕ ಕಾರ್ಯಗಳು ಭವಪಾಶಗಳನ್ನು ನಿವಾರಿಸಲಿಕ್ಕೂ, ಶಿವನ ಸಾಕ್ಷಾತ್ಕಾರಕ್ಕೂ ಉತ್ತಮ ಸಾಧನಗಳಾಗಿವೆ. ಆದ್ದರಿಂದ ಶಿವಾಗಮಗಳ ಕ್ರಿಯಾಪಾದದಲ್ಲಿ ದಿನವನ್ನು ಎಂಟು ಭಾಗಗಳನ್ನಾಗಿ ವಿಂಗಡಿಸಿ, ಯಾವ ಯಾವ ಕಾಲದಲ್ಲಿ ಯಾವ ಯಾವ ಕಾರ್ಯಗಳನ್ನು ವೀರಶೈವರು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ವಿವರವಾಗಿ ನಿರೂಪಿಸಲಾಗಿದೆ.

---

೧. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೨

ಪ್ರಾತಃಕಾಲದ ಕರ್ಮಗಳು

ಬ್ರಾಹ್ಮೀ ಮುಹೂರ್ತವು[೨] ಮನಸ್ಸಿನ ಮತ್ತು ಶರೀರದ ಜಡತೆಯನ್ನು ಕಳೆದು ಹೊಸದಿನದ ಕಾರ್ಯಗಳಿಗಾಗಿ ನವಚೈತನ್ಯ ತುಂಬುವ ಕಾಲ. ಈ ಸಮಯವು ಧ್ಯಾನ, ಪೂಜೆ, ತತ್ತ್ವಚಿಂತನೆ ಇತ್ಯಾದಿ ಕಾರ್ಯಗಳಿಗೆ ಅತ್ಯಂತ ಪ್ರಶಸ್ತವಾಗಿರುತ್ತದೆ. ಕಾರಣ –

ಬುದ್ಧ್ಯಮಾನೋ ಹಿ ಮದ್ಭಕ್ತೋ ಮುಹೂರ್ತೇ ಬ್ರಹ್ಮಸಮ್ಮಿತೇ।
ಸಂಸ್ಮರನ್ ಮಾಮಿಷ್ಟಲಿಂಗಂ ಕರಾಭ್ಯಾಂ ಸ್ಪರ್ಶಯೇದ್ ದೃಶೋಃ।
ಧರ್ಮಾರ್ಥವನುಚಿಂತ್ಯಾಥ ಮಾಹೇಶಾನ್ ಪ್ರಣಮೇದಪಿ॥
ಬ್ರಾಹ್ಮೇ ಮುಹೂರ್ತೇ ಮದ್ಭಕ್ತೋ ಬುದ್ಧ್ಯಮನೋ ನಗಾತ್ಮಜೇ।
ನೇತ್ರಯೋಃ ಸ್ಪರ್ಶಯನ್ನಿಷ್ಟಲಿಂಗಂ ಮಾಮನುಸಂಸ್ಮರೇತ್॥
ಧರ್ಮಾನರ್ಥಾಂಶ್ಚ ತತ್ಕ್ಲೇಶಾನ್ ದಿನಕೃತ್ಯಂ ಚ ಚಿಂತಯೇತ್॥[೪]
ಬ್ರಾಹ್ಮೇ ಮುಹೂರ್ತೇ ಉತ್ಥಾಯ ನೇತ್ರಯೋರಿಷ್ಟಲಿಂಗಕಮ್।
ಸ್ಪರ್ಶಯನ್ನೀಶ್ವರಂ ಸಾಂಬಂ ಕಾರ್ಯಂ ವಿಚಾರ್ಯ ಚ॥[೫]

ಸದ್ಗುರುವಿನಿಂದ ಶಾಂಭವದೀಕ್ಷೆಯನ್ನು ಹೊಂದಿ ಇಷ್ಟಲಿಂಗಧಾರಿಗಳಾದ ವೀರಶೈವರು ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಪ್ರಪ್ರಥಮವಾಗಿ ತನ್ನ ಇಷ್ಟಲಿಂಗವನ್ನು ತನ್ನೆರಡೂ ಕಣ್ಣುಗಳಿಗೆ ಒತ್ತಿಕೊಳ್ಳಬೇಕು. ನಂತರ ಚರಾಚರ ಪ್ರಪಂಚಕ್ಕೆ ಆದಿದಂಪತಿಗಳಾದ ಪಾರ್ವತೀ ಪರಶಿವರನ್ನು ಧ್ಯಾನಿಸಬೇಕು. ತದನಂತರ ಅಂದಿನ ಕಾರ್ಯಗಳ ಕುರಿತು ಯೋಚಿಸಬೇಕೆಂದು ಕಾರಣಾಗಮ, ಮಕುಟಾಗಮ ಮತ್ತು ಚಂದ್ರಜ್ಞಾನಾಗಮಗಳು ನಿರೂಪಿಸುತ್ತವೆ.

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಽಪಿ ವಾ।
ಯಃ ಸ್ಮರೇದ್ವೈ ವಿರೂಪಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ॥[೬]

ಬ್ರಾಹ್ಮೀ ಮುಹೂರ್ತದಲ್ಲಿ ಇಷ್ಟಲಿಂಗವನ್ನು ಸ್ಪರ್ಶಿಸಿ, ಶಿವನನ್ನು ಧ್ಯಾನಿಸಿದ ವ್ಯಕ್ತಿಯು ಪವಿತ್ರನಾಗಿರಲಿ, ಅಪವಿತ್ರನಾಗಿರಲಿ ಬಾಹ್ಯ ಮತ್ತು ಆಂತರಿಕವಾಗಿ

---

೨. ಬ್ರಾಹ್ಮೀ ಮುಹೂರ್ತವೆಂದರೆ ಅರುಣೋದಯಕ್ಕಿಂತ ೪೮ ನಿಮಿಷ ಮುಂಚೆ ಆಗುವದು. ಮತ್ತು ಅರುಣೋದಯವು ಸೂರ್ಯೋದಯಕ್ಕಿಂತ ೯೬ ನಿಮಿಷ ಮುಂಚೆ ಆಗುವುದು. ಉದಾಹರಣೆಗಾಗಿ ಬೆಳಿಗ್ಗೆ ೬.೦೦ ಕ್ಕೆ ಸೂರ್ಯೋದಯ ಸಮಯವೆಂದು ತಿಳಿದರೆ ಅರುಣೋದಯವು ೪.೨೪ ಆಗುವುದು. ಬ್ರಾಹ್ಮೀ ಮುಹೂರ್ತವು ಅರುಣೋದಯಕ್ಕೆ ೪೮ ನಿಮಿಷ ಮುಂಚೆ ಅಂದರೆ ೩.೩೬ ನಿಮಿಷಕ್ಕೆ ಎಂದು ತಿಳಿಯಬೇಕು.

೩. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೩

೪. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೨,೪

೫. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೩

೬ ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೧೨

ಶುಚಿಯಾಗುವನೆಂದು ಆಗಮಗಳು ಪ್ರತಿಪಾದಿಸಿವೆ.

ಶಿವಸ್ಮರಣೆಯ ನಂತರ ಸಾಧಕನು ಕೈಕಾಲುಗಳನ್ನು, ಬಾಯಿಯನ್ನು ವಿಧಿವತ್ತಾಗಿ ತೊಳೆದುಕೊಂಡು ಶುಚಿರ್ಭೂತನಾಗಿ 'ಆತ್ಮ ತತ್ತ್ವಾಯ ಸ್ವಾಹಾ', 'ವಿದ್ಯಾ ತತ್ತ್ವಾಯ ಸ್ವಾಹಾ' ಮತ್ತು 'ಶಿವ ತತ್ತ್ವಾಯ ಸ್ವಾಹಾ' ಹೇಳುತ್ತಾ ಮೂರು ಸಲ ಆಚಮನ ಮಾಡಬೇಕು.[೭]

ಈ ಸಂಧ್ಯಾಸಮಯದಲ್ಲಿ (ಸೂರ್ಯೋದಯ, ಸೂರ್ಯಾಸ್ತದಲ್ಲಿ) ಭೋಜನ, ಸ್ತ್ರೀಸಹವಾಸ, ಅಧ್ಯಯನ ಮತ್ತು ನಿದ್ದೆ – ಈ ನಾಲ್ಕು ಕರ್ಮಗಳನ್ನು ಯೋಚಿಸಬಾರದೆಂದು ಕಾರಣಾಗಮವು ನಿಷೇಧ ಹೇರುತ್ತದೆ. ಸಂಧ್ಯಾಸಮಯದಲ್ಲಿ ಶಿವಭಕ್ತನು ನಿದ್ದೆಯನ್ನು ಮಾಡುತ್ತಿದ್ದಲ್ಲಿ ಅವನು ಪ್ರಾಣಾಯಾಮ ಹಾಗೂ ೧೦೮ ಬಾರಿ ಪಂಚಾಕ್ಷರೀ ಮಂತ್ರಜಪವನ್ನು ಆಚರಿಸಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದು ಹೇಳುತ್ತದೆ.[೮]

ಬ್ರಾಹ್ಮೀ ಮುಹೂರ್ತದಲ್ಲಿ ಎದ್ದ ಶಿವಭಕ್ತನು ನೋಡಬೇಕಾದ ಹಾಗೂ ನೋಡಬಾರದ ವ್ಯಕ್ತಿ, ವಸ್ತುಗಳನ್ನು ಕುರಿತು ಹೇಳಿ ಅವುಗಳ ಫಲಾಫಲಗಳನ್ನು ಕುರಿತು ಹೀಗೆ ಉಲ್ಲೇಖಿಸಿದೆ.

ವ್ರತಿನಂ ಸತ್ರಿಣಂ ದಾಂತಂ ಭಕ್ತಂ ಲಿಂಗಾಂಗಸಂಗಿನಮ್।
ಪ್ರಾತಃಕಾಲೇ ತು ಯಃ ಪಶ್ಯೇತ್ ಸ ಈಪ್ಸಿತಮವಾಪ್ನುಯಾತ್॥[೯]
ಮದ್ಭಕ್ತಂ ಭಸ್ಮ ರುದ್ರಾಕ್ಷಂ ಮಾಂ ಚ ಬಿಲ್ವಮಹೀರುಹಮ್।
ಪ್ರಾತಃಕಾಲೇ ತು ಯಃ ಪಶ್ಯೇತ್ ಸೋಽಭಿಷ್ಟಂ ಸಮವಾಪ್ನುಯಾತ್॥[೧೦]

ಶಿವಭಕ್ತನನ್ನು, ಬ್ರಹ್ಮಜ್ಞಾನಿಯನ್ನು, ಆತ್ಮ ಸಂಯಮಿಯನ್ನು, ಇಷ್ಟಲಿಂಗಧಾರಿ ವೀರಶೈವರನ್ನು ನೋಡುವುದರಿಂದ ಇಚ್ಛಿತ ಫಲಪ್ರಾಪ್ತಿಯಾಗುವುದು. ಭಸ್ಮ, ರುದ್ರಾಕ್ಷ, ಬಿಲ್ವವೃಕ್ಷಗಳನ್ನು, ಶಿವಭಕ್ತರನ್ನು ನೋಡಬೇಕೆಂದು ಹೇಳಿದೆ. ಇದೇ ಮಾತನ್ನು ಪುಷ್ಟೀಕರಿಸುತ್ತಾ ಅಲ್ಲಮಪ್ರಭುಗಳು ತಮ್ಮ ವಚನದಲ್ಲಿ –

ಮುಂದು ಜಾವದಲೆದ್ದು, ಲಿಂಗದಂಘ್ರಿಯ ಮುಟ್ಟಿ,
ಸುಪ್ರಭಾತ ಸಮಯದೊಳು ಶಿವಭಕ್ತರ ಮುಖವ ನೋಡುವುದು
ಹುಟ್ಟಿದುದಕ್ಕೆ ಇದೇ ಸಫಲ ನೋಡಾ ಗುಹೇಶ್ವರಾ[೧೧]

ಎಂದಿದ್ದಾರೆ. ಬಸವಣ್ಣನವರು ಸಹ ಈ ಸಂಗತಿಯನ್ನು ಅಂಗೀಕರಿಸುತ್ತಾ "ಮುಂಜಾವದಲೆದ್ದು, ಲಿಂಗದಂಘ್ರಿಯ ಮುಟ್ಟಿ, ಸುಪ್ರಭಾತದಲ್ಲಿ ಶಿವಶರಣರ ಮುಖವ

೭. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೮
೮. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೪–೫
೯. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೪
೧೦. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೬
೧೧. ಸಮಗ್ರ ವಚನ ಸಂಪುಟ ೨, ವ.ಸಂ. ೮೮, ಪುಟ ೨೯

ನೋಡುವದು. ಹುಟ್ಟಿದ ಜನ್ಮಕ್ಕೆ ಇದೇ ಸಫಲವು ಸತ್ಯವಚನವಿಂತೆಂದುದಾಗಿ ಇಂತಲ್ಲದವರನೊಲ್ಲ ನಮ್ಮ ಕೂಡಲಸಂಗಮದೇವಾ."[೧೨] ಎಂದಿದ್ದಾರೆ.

ಹೀಗೆ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದ ಶಿವಭಕ್ತನು ನೋಡಬಾರದ ವ್ಯಕ್ತಿ ಮತ್ತು ವಸ್ತುಗಳನ್ನು ಕುರಿತು ಆಗಮಗಳು –

ಪಾಷಂಡಂ ಪತಿತಂ ಕ್ರೂರಮಭಕ್ತಂ ದೇವನಿಂದಕಮ್।
ಪ್ರಾತರುತ್ಥಾಯ ಯಃ ಪಶ್ಯೇತ್ ಸೋऽನಿಷ್ಟಂ ಸಮವಾಪ್ನುಯಾತ್॥[೧೩]

ಪ್ರಾತಃಕಾಲದಲ್ಲಿ ಮೋಸಗಾರ, ಧರ್ಮಭ್ರಷ್ಟ, ಕ್ರೂರಿ, ನಾಸ್ತಿಕ, ದೇವನಿಂದಕ, ಭೀರುಸ್ವಭಾವದವ ಮತ್ತು ಯಾಚಕ ಇವರನ್ನು ನೋಡಕೂಡದೆಂಬ ನಿಷೇಧಗಳನ್ನು ಮಕುಟಾಗಮದಲ್ಲಿ ಹೇಳಿದೆ.

ಹೀಗೆ ಶಿವಭಕ್ತನು ದಿನದ ಮಂಗಲಾರಂಭಕ್ಕೆ ಸುಮೂಹೂರ್ತವಾದ ಬ್ರಾಹ್ಮೀಕಾಲದಲ್ಲಿ ಎದ್ದು ಇಷ್ಟಲಿಂಗವನ್ನು ಧ್ಯಾನಿಸಿ ನಂತರ ಮಾಡಬೇಕಾದ ಶೌಚವಿಧಿಯನ್ನು ಕುರಿತು ವಿವರಿಸಿದೆ.

ಶೌಚವಿಧಿ

ಶೌಚಕ್ರಿಯೆಗಳಿಗೆ ಶಿವಭಕ್ತನು ತನ್ನ ಮನೆಯಿಂದ ಆಗ್ನೇಯ ದಿಕ್ಕಿಗೆ ಹೋಗಬೇಕು. ಶೌಚಕ್ರಿಯೆಗೆ ಮುನ್ನ ಯಜ್ಞೋಪವೀತ ಹಾಗೂ ಶಿವಸೂತ್ರಗಳನ್ನು ತಲೆಯ ಮೇಲೆ ಇರಿಸಿಕೊಂಡು ಬಟ್ಟೆಯಿಂದ ಸುತ್ತಿಕೊಳ್ಳಬೇಕು. ಜಲವನ್ನು ಒಂದು ಸ್ಥಾನದಲ್ಲಿರಿಸಿ ವಿಧಿವತ್ತಾಗಿ ಮಲ–ಮೂತ್ರಗಳನ್ನು ವಿಸರ್ಜಿಸಿ ಶೌಚಕ್ರಿಯೆಯನ್ನು ಮುಗಿಸಬೇಕೆಂದು ಚಂದ್ರಜ್ಞಾನಾಗಮದಲ್ಲಿ ಹೇಳಿದೆ.[೧೪]

ಕಾರಣಾಗಮವೂ ಕೂಡ ಶೌಚಾದಿವಿಧಿಗಳಿಗೆ ಆಗ್ನೇಯ ದಿಕ್ಕಿಗೆ ಹೋಗಬೇಕೆಂದು ಸೂಚಿಸಿ ಜಲಪಾತ್ರೆಯನ್ನು ಒಂದು ಬಾಣವನ್ನು ಬಿಟ್ಟಾಗ ಅದು ಎಷ್ಟು ದೂರದಲ್ಲಿ ಹೋಗಿ ಬೀಳುತ್ತದೆಯೋ ಅಷ್ಟು ದೂರದಲ್ಲಿ ಇಡಬೇಕೆಂದು ಹೇಳುತ್ತದೆ.[೧೫] ಆದರೆ ಮಕುಟಾಗಮವು ದಿಕ್ಕಿನ ವಿಶೇಷವನ್ನು ಹೇಳದೇ ಕೇವಲ ಮನೆಯಿಂದ ದೂರಕ್ಕೆ ಹೋಗಬೇಕೆಂದು ಮಾತ್ರ ತಿಳಿಸುತ್ತದೆ. ಮಲಮೂತ್ರ ವಿಸರ್ಜಿಸುವಾಗ ಮೇಲೆ ಕೆಳಗೆ ನೋಡಕೂಡದು ಎಂದು ತಿಳಿಸುತ್ತದೆ. ಕಾರಣಾಗಮವು ಬ್ರಹ್ಮಜ್ಞಾನಿಗೆ, ಅಗ್ನಿಗೆ, ಸೂರ್ಯನಿಗೆ, ಚಂದ್ರನಿಗೆ ಎದುರಾಗಿ ಕುಳಿತುಕೊಳ್ಳಬಾರದು.[೧೬] ಶೌಚದ ನಂತರ ಮಣ್ಣು ಹಾಗೂ ನೀರನ್ನು ಉಪಯೋಗಿಸಿ ಕೈಕಾಲು ತೊಳೆದುಕೊಂಡು ಶುಚಿಯಾಗಬೇಕು.

---

೧೨. ವಚನ ಶಾಸ್ತ್ರಸಾರ–ಫ. ಗು. ಹಳಕಟ್ಟಿ (ಸನ್ ೧೯೨೩)–ಪುಟ ೧೮೧–ವಚನ ಸಂಖ್ಯೆ ೬
೧೩. ಮ.ಆ. ಕ್ರಿಪಾ, ಪಟಲ ೨, ಶ್ಲೋಕ ಸಂಖ್ಯೆ ೫
೧೪. ಚಂ.ಆ. ಕ್ರಿಪಾ, ಪಟಲ ೧೧, ಶ್ಲೋಕ ಸಂಖ್ಯೆ ૩–೪
೧೫. ಕಾ.ಆ. ಕ್ರಿ ಪಾ, ಪಟಲ ૩, ಶ್ಲೋಕ ಸಂಖ್ಯೆ ೮
೧೬. ಕಾ.ಆ. ಕ್ರಿ ಪಾ, ಪಟಲ ૩, ಶ್ಲೋಕ ಸಂಖ್ಯೆ ೧೦

ಅಶುಚಿ ವ್ಯಕ್ತಿಯು ಅಧೋಗತಿಯನ್ನು ಹೊಂದುತ್ತಾನೆಂದು[೧೭] ತಿಳಿಸಿ ದೈಹಿಕ ಸ್ವಚ್ಛತೆಯು ಅತೀ ಅಗತ್ಯವೆಂದು ತಿಳಿಸುತ್ತಾ ದಂತಧಾವನವಿಧಿಯನ್ನು ವಿವರಿಸಿವೆ.

ದಂತಧಾವನ ವಿಧಿ

ಹಲ್ಲುಜ್ಜಲು ಬಿಲ್ವವೃಕ್ಷದ ಶಾಖೆಯನ್ನು ಹೊರತುಪಡಿಸಿ ಮಾವು ಮುಂತಾದ ಇತರ ಯಾವುದೇ ಕ್ಷೀರಯುಕ್ತ(ರಸಭರಿತ), ನಾರುಗಳುಳ್ಳ ಅಥವಾ ಮುಳ್ಳನ್ನು ಹೊಂದಿರುವ ಮರದ ಶಾಖೆಯು ಯೋಗ್ಯವೆಂದು ಕಾರಣಾಗಮದಲ್ಲಿ ವಿವರಿಸಿದೆ.[೧೮] ಇಂಥ ಕಟ್ಟಿಗೆಗಳು ಸಿಗದಿದ್ದ ಪಕ್ಷದಲ್ಲಿ ನೀರನ್ನು ೧೨ ಬಾರಿ ಚೆನ್ನಾಗಿ ಮುಕ್ಕಳಿಸಿ ನಂತರ ಆಚಮನವನ್ನು ಮಾಡಬೇಕೆಂದು ಚಂದ್ರಜ್ಞಾನಾಗಮವು ಹೇಳುತ್ತದೆ.[೧೯]

ಆಚಮನವನ್ನು ಮಾಡಿದ ನಂತರ ಪೂರ್ವಾಭಿಮುಖನಾಗಿ ನಿತ್ಯವೂ ದಂತಧಾವನ ಕ್ರಿಯೆಯನ್ನು ಆಚರಿಸಬೇಕು. 'ಮಧುವಾತಾ ಋತಾಯತೇ' ಎಂಬ ಮಂತ್ರದಿಂದ ದಂತಕೂರ್ಚ (ಹಲ್ಲುಜ್ಜಲು ಉಪಯೋಗಿಸುವ ಕಾಷ್ಠ) ವನ್ನು ಅಭಿಮಂತ್ರಿಸಿ ಆ ಕೂರ್ಚವನ್ನು ಕುರಿತು ಶ್ರದ್ಧೆಯಿಂದ

ಆಯುರ್ಬಲಂ ಯಶೋ ವರ್ಚಃ ಪ್ರಜಾಃ ಪಶುವಸೂನಿ ಚ।
ಬ್ರಹ್ಮ ಪ್ರಜ್ಞಾಂ ಚ ಮೇಧಾಂ ಚ ತ್ವಂ ನೋ ದೇಹಿ ವನಸ್ಪತೇ॥[೨೦]

ಹೇ ವನಸ್ಪತಿಯೆ! ಆಯಸ್ಸು, ಬಲ, ಕೀರ್ತಿ, ಯಶಸ್ಸು, ಸಂತಾನ, ಪಶುಸಂಪತ್ತು, ಧನ ಇತ್ಯಾದಿಗಳನ್ನು ಕರುಣಿಸು ಎಂದು ಮಂತ್ರದೊಂದಿಗೆ ಪ್ರಾರ್ಥನೆಯನ್ನು ಮಾಡಿದ ನಂತರ ಹಲ್ಲುಜ್ಜಿಕೊಳ್ಳಬೇಕೆಂದು ಆಗಮಗಳು ತಿಳಿಸುತ್ತವೆ.

ಸ್ನಾನವಿಧಿ

ಸ್ನಾನಕ್ಕೆ ನದಿಗಳು ಕೊಳಗಳು, ಸರೋವರ, ನೀರಿನ ಚಿಲುಮೆ ಮುಂತಾದ ನೈಸರ್ಗಿಕ ಜಲಸ್ಥಾನಗಳಲ್ಲಿ ಸ್ನಾನ ಮಾಡುವುದು ಉಚಿತ.[೨೧] ಶಿವಮಂದಿರಗಳ ಹತ್ತಿರವಿರುವ ತೀರ್ಥಗಳಲ್ಲಿ ಸ್ನಾನ ಮಾಡುವುದು ಶಿವಾನುಗ್ರಹಕ್ಕೆ ಸಾಧನ ಎಂದು ಹೇಳಿ –

ರೂಪಂ ತೇಜೋ ಬಲಂ ಶೌಚಮಾಯುರ್ಧೃತಿರರೋಗತಾ।
ಮೇಧಾಃ ದುಃಸ್ವಪ್ನನಾಶಶ್ಚ ಗುಣಾಃ ಸ್ನಾನಸ್ಯ ಕೀರ್ತಿತಾಃ॥
ಮದಾಲಯಸಮೀಪೇ ತು ಯತ್ತೋಯಂ ಪರಿತಿಷ್ಠತೇ।

---

೧೭. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೭ ; ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೧೧
೧೮. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೨೦
೧೯. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೫–೬
೨೦. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೧೯
೨೧. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೨೧

ಶಿವಗಂಗೇತಿ ವಿಜ್ಞೇಯಾ ತತ್ರ ಸ್ನಾತ್ವಾ ಲಭೇತ ಮಾಮ್॥ [೨೨]

ಸ್ನಾನದಿಂದ ರೂಪ, ತೇಜಸ್ಸು, ಬಲ, ಶೌರ್ಯ, ಆಯುವೃದ್ಧಿ, ಆರೋಗ್ಯ, ಬುದ್ಧಿಮತ್ತೆ ಮತ್ತು ದುಃಸ್ವಪ್ನನಾಶ ಮುಂತಾದ ಲಾಭಗಳಾಗುತ್ತವೆ ಎಂದು ಕಾರಣಾಗಮವು ಸ್ನಾನವಿಧಿಯ ಪ್ರಯೋಜನಗಳನ್ನು ಹೇಳುತ್ತದೆ. ಸಾರ್ಧತ್ರಿಶತಿಕಾಲೋತ್ತರಾಗಮದ ವಾರುಣಸ್ನಾನ ಪ್ರಕರಣದಲ್ಲಿ ಸ್ನಾನವನ್ನು ಶುಭಕರ ಹಾಗೂ ಪಾಪನಾಶಿನಿ ಎಂದು ಸ್ನಾನಮಹಿಮೆಯನ್ನು ಹೊಗಳಲಾಗಿದೆ.

ವೀರಶೈವನಿಗೆ ಸ್ನಾನವು ಕೇವಲ ಶರೀರಶುದ್ಧಿಗೋಸ್ಕರವಾದ ಬಹಿರಂಗ ಕ್ರಿಯೆಯಾಗದೇ ಅಂತರಂಗಶುದ್ಧಿಗೋಸ್ಕರವೂ ಪ್ರಯೋಜನಕಾರಿಯಾಗಬೇಕೆಂದು ಪಾರಮೇಶ್ವರಾಗಮವು "ಶಿವಚಿಂತಾಪರಂ ಸ್ನಾನಂ ಯತ್ತತ್ ಸ್ವಾತ್ಮೀಯಮುಚ್ಯತೇ"[೨೩] ಶಿವಚಿಂತನೆಯ ಮೂಲಕ ಮಾಡುವ ಸ್ನಾನವು ಯಾವುದೋ ಅದು ಆಧ್ಯಾತ್ಮಿಕ ಸ್ನಾನವೆಂದು ತಿಳಿಸಿದೆ. ಕಾರಣಾಗಮವು ಸಹ ಭಾವಶುದ್ಧಿಯಿಲ್ಲದೇ ಮಾಡಿದ ಶುದ್ಧಿಯ ಕ್ರಿಯೆಗಳೆಲ್ಲ ನಿಷ್ಫಲ ಎಂದು ಅಂತರಂಗದ ಶುದ್ಧತೆಗೆ ಪ್ರಾಶಸ್ತ್ಯ ನೀಡಿ, ಉಭಯಶುಚಿತ್ವ ಸಾಧನೆಯನ್ನು ವಿವರಿಸಿದೆ.[೨೪]

ಪರಿಶುದ್ಧವಾದ ಶರೀರ ಮತ್ತು ಪರಿಶುದ್ಧವಾದ ಅಂತಃಕರಣಗಳಲ್ಲಿ ಕೇವಲ ಸತ್ಕರ್ಮ ವ್ಯಾಪಾರವೇ ಜರುಗುವುದು. ಕಾರಣ ವೀರಶೈವನು ಸ್ನಾನಕ್ಕಾಗಿ ನೀರಿಗಿಳಿದು ಆ ನೀರನ್ನು ಪವಿತ್ರ ಶಿವತೀರ್ಥವೆಂದು ಮನದಲ್ಲಿ ಭಾವಿಸಿ ಪಂಚಾಂಗ ಸ್ನಾನವನ್ನು ಮಾಡಬೇಕು. ಅಂದರೆ ಸಂಕಲ್ಪ, ಮಂತ್ರಪಠಣ, ಮಾರ್ಜನ, ಅಘಮರ್ಷಣ ಮತ್ತು ದೇವತಾರ್ಪಣ – ಇವು ಸ್ನಾನದ ಐದು ಅಂಗಗಳೆಂದು ಆಗಮಗಳು ತಿಳಿಸುತ್ತವೆ. ದೇವತಾ ಸಂಕಲ್ಪ, ಮಂತ್ರಪಠಣ, ಹಾಗೂ ಮಾರ್ಜನದ ನಂತರ ಪಂಚಬ್ರಹ್ಮಮಂತ್ರ ಗಳಿಂದ ಮೂರುಬಾರಿ ಅರ್ಘಮರ್ಷಣ ಕ್ರಿಯೆಯನ್ನಾಚರಿಸಬೇಕು. ಅಘಮರ್ಷಣ ಎಂದರೆ ಪಾಪಗಳ ನಾಶ (ಅಘಸ್ಯ ಮರ್ಷಣಃ) ಎಂದರ್ಥ. ಬಲಗೈಯಲ್ಲಿ ನೀರಿನ ಪಾತ್ರೆ ಹಿಡಿದು ಎಡಗೈಯಿಂದ ಮುಚ್ಚಿ 'ಋತಂಚ ಸತ್ಯಂ ಚ' ಮುಂತಾದ ಋಗ್ವೇದದ ಅಘಮರ್ಷಣ ಸೂಕ್ತದ ಮೂರು ಮಂತ್ರಗಳನ್ನು ಜಪಿಸುತ್ತಾ ತನ್ನ ಬಲಭಾಗದಿಂದ ಆರಂಭಿಸಿ ತನ್ನ ಸುತ್ತಲೂ ಚೆಲ್ಲಬೇಕು. ಇದೇ ಅಘಮರ್ಷಣ ಕ್ರಿಯೆ. ತದನಂತರ ದೇವಗಣ, ಋಷಿಗಣ, ಪಿತೃಗಣಗಳಿಗೆ ತರ್ಪಣವನ್ನು ನೀಡಿ ನೀರಿನಿಂದ ಹೊರಬಂದು ಒದ್ದೆ ವಸ್ತ್ರವನ್ನು ತ್ಯಾಗಮಾಡಿ ಶುಭ್ರ, ಸ್ವಚ್ಛ ವಸ್ತ್ರಧಾರಣ ಮಾಡಬೇಕು.[೨೫]

---

೨೨. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೨೨–೨೩
೨೩. ಪಾ.ಆ. ಪಟಲ ೧೭, ಶ್ಲೋಕ ಸಂಖ್ಯೆ ೪೩
೨೪. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೧೧
೨೫. ಕಾ.ಆ. ಕ್ರಿ.ಪಾ, ಪಟಲ ೩, ಶ್ಲೋಕ ಸಂಖ್ಯೆ ೨೩–೩೯

ಭಸ್ಮಸ್ನಾನ – ತ್ರಿಪುಂಡ್ರಧಾರಣ ವಿಧಿ

ಪವಿತ್ರವಾದ ಸ್ನಾನದ ನಂತರ ಶರೀರ ಮನಸ್ಸುಗಳಂತೆಯೇ ನಿರ್ಮಲ, ಶುಭ್ರವಾದ ಬಟ್ಟೆಗಳನ್ನು ಧರಿಸಿದ ವೀರಶೈವನು ಉತ್ತರ ಅಥವಾ ಪೂರ್ವಾಭಿಮುಖವಾಗಿ ಕುಳಿತು ಇಷ್ಟಲಿಂಗ ಜಲಾಭಿಷೇಕವನ್ನು ಆಚರಿಸಿ, ಎಡಗೈಯಲ್ಲಿ ಭಸ್ಮವನ್ನು ಹಿಡಿದು ಅದರ ಮೇಲೆ ಷಟ್ಕೋಣಾಕೃತಿಯನ್ನು ಬರೆಯಬೇಕು.

ವಾಮಪಾಣಿತಲನ್ಯಸ್ತೇ ಷಟ್ಕೋಣಂ ಭಸ್ಮನಿ ನ್ಯಸೇತ್।
ಪ್ರಣವಂ ತನ್ಮುಖೇ ಚೈವ ವಾಯಕಾರೌ ಭುಜದ್ವಯೇ॥
ಶಿಕಾರಂ ಯಂತ್ರಮಧ್ಯೇ ಚ ನಮಃಕಾರೌ ಪದದ್ವಯೇ।
ವಿಲಿಖ್ಯ ಮೂಲಮಂತ್ರೇಣ ಷಡ್ವಾರಮಭಿಮಂತ್ರಯೇತ್॥ [೨೬]

'ಓಂ'ಕಾರವನ್ನು ಭಸ್ಮದ ಮುಖದಲ್ಲಿ, 'ವಾ' ಮತ್ತು 'ಯ' ಕಾರಗಳನ್ನು ಅದರ ಎರಡು ಭುಜಗಳಲ್ಲಿ, 'ಶಿ'ಕಾರವನ್ನು ಯಂತ್ರದ ಮಧ್ಯದಲ್ಲಿಯೂ, 'ನ' ಮತ್ತು 'ಮಃ' ಕಾರಗಳನ್ನು ಷಟ್ಕೋಣದ ಎರಡೂ ಪಾದಗಳಲ್ಲಿ ಕ್ರಮವಾಗಿ ಬರೆದು, ಅದನ್ನು ಪಂಚಾಕ್ಷರಿ ಮಂತ್ರದಿಂದ ಆರು ಸಲ ಮಂತ್ರಿಸಬೇಕು. ಹೀಗೆ ಮಂತ್ರದಿಂದ ಪವಿತ್ರವಾದ ಭಸ್ಮವನ್ನು ಶರೀರದ ಮೂವತ್ತೆರಡು ಸ್ಥಾನಗಳಿಗೆ ಧರಿಸುವ ಕ್ರಮವನ್ನು ಮಕುಟಾಗಮ, ಕಾರಣಾಗಮ ಮತ್ತು ಚಂದ್ರಜ್ಞಾನಾಗಮಗಳಲ್ಲಿ ವಿವರಿಸಲಾಗಿದೆ.

ಉತ್ತಮಾಂಗೇ ಲಲಾಟೇ ಚ ಕರ್ಣಯೋರ್ನೇತ್ರಯೋರ್ದ್ವಯೋಃ।
ನಾಸಾವಕ್ತ್ರಗಲೇಷ್ವೇವಮಂಸದ್ವಯಮನಂತರಮ್॥
ಕೂರ್ಪರೇ ಮಣಿಬಂಧೇ ಚ ಹೃದಯೇ ಪಾರ್ಶ್ವಯೋರ್ದ್ವಯೋಃ।
ನಾಭೌ ಗುಹ್ಯದ್ವಯೇ ಚೈವ ಊರ್ವೋಃ ಸ್ಫಿಗ್ಬಿಂಬಜಾನುಷು॥
ಜಂಘಾದ್ವಯೇ ಪಾದಯೋಶ್ಚ ದ್ವಾತ್ರಿಂಶತ್ ಸ್ಥಾನಮುತ್ತಮಮ್॥ [೨೭]

ಶಿರಸ್ಸು (ತಲೆ), ಹಣೆ, ಎರಡು ಕಿವಿಗಳು, ಎರಡು ಕಣ್ಣುಗಳು, ಎರಡು ಮೂಗಿನ ಹೊಳ್ಳೆಗಳು, ಮುಖ, ಕುತ್ತಿಗೆ, ಎರಡು ತೋಳುಗಳು, ಮೊಳಕೈ, ಮಣಿಕಟ್ಟು, ಹೃದಯ, ಎರಡು ಎದೆಗಳು, ಹೊಕ್ಕಳು, ಎರಡು ಗುಹ್ಯೇಂದ್ರಿಯಗಳು, ಎರಡು ತೋಳುಗಳು, ಎರಡು ನಿತಂಬಗಳು, ಎರಡು ಮಂಡಿಗಳು, ಎರಡು ಮೊಳಕಾಲು, ಎರಡು ಕೈ ಮತ್ತು ಎರಡು ಕಾಲುಗಳು – ಈ ಮೂವತ್ತೆರಡು ಸ್ಥಾನಗಳಲ್ಲಿ ತ್ರಿಪುಂಡ್ರಧಾರಣೆ ಮಾಡಿಕೊಳ್ಳಬೇಕೆಂದು ಮಕುಟಾಗಮ ಕಾರಣಾಗಮ ಮತ್ತು ಚಂದ್ರಜ್ಞಾನಾಗಮಗಳಲ್ಲಿ ವಿವರಿಸಲಾಗಿದೆ.

---

೨೬. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೪೫–೪೬

೨೭. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೧೪–೧೬; ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೧೩–೧೫; ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೪೭–೪೯

ಹೀಗೆ ಮಂತ್ರದಿಂದ ಪವಿತ್ರವಾದ ಭಸ್ಮದಿಂದ ಸ್ನಾನಮಾಡುವುದರಿಂದ ಸಕಲದೋಷ ನಿವೃತ್ತಿಯಾಗುವುದೆಂದು ಆಗಮದಲ್ಲಿ ಪ್ರತಿಪಾದಿಸಲಾಗಿದೆ.[೨೮] ಬಸವಣ್ಣನವರು ಕೂಡ ಭಸ್ಮದ ಮಹತಿಯನ್ನು ತಿಳಿಸುತ್ತ,

ಸಕಲಕ್ರಿಯೆಗಳಿಗಿದು ಕವಚ, ಸಕಲವಶ್ಯಕ್ಕಿದು ಶುಭತಿಲಕ,
ಸಕಲಸಂಪದಕ್ಕೆ ತಾಣವಿದು, ಅಘಟಿತಘಟಿತವೆನಿಸುವ ಅನುಪಮ ತ್ರಿಪುಂಡ್ರ
ಅಣುಮಾತ್ರ ವಿಭೂತಿಯ ಪಣೆಯೊಳಿಡೆ ಎಣಿಕೆಯಿಲ್ಲದ ಭವನಾಶ ಪರಿವುದು
ತ್ರಿಣಯನ ನೀನೋಲಿದು ಧರಿಸಿದೆಯೆಂದೆನೆ;
ಆನು ಧರಿಸಿ ಬದುಕಿದೆ ಕೂಡಲಸಂಗಯ್ಯಾ[೨೯]

ಎಂದು ಭಸ್ಮವು ಭವನಾಶನವನ್ನು ಮಾಡಿ ಸಕಲಸಂಪದವನ್ನು ನೀಡುವುದೆಂದು ಆಗಮವಾಕ್ಯಗಳ ಸಮರ್ಥನೆಯನ್ನು ಮಾಡಿದ್ದಾರೆ. ಕಾರಣ ಪವಿತ್ರವಾದ ಭಸ್ಮಸ್ನಾನ, ತ್ರಿಪುಂಡ್ರಧಾರಣೆಯ ನಂತರ ವಿಧಿವತ್ತಾಗಿ ರುದ್ರಾಕ್ಷಧಾರಣವನ್ನು ಮಾಡಿಕೊಳ್ಳಬೇಕು.

ರುದ್ರಾಕ್ಷಧಾರಣ ವಿಧಿ

ಶಿವಭಕ್ತನು ತ್ರಿಪುಂಡ್ರಧಾರಣೆಯ ತರುವಾಯ ಮತ್ತೆ ಸಂಕಲ್ಪ ಮಾಡಿ ರುದ್ರಾಕ್ಷಗಳನ್ನು ಧರಿಸಬೇಕು. ಶಿವಭಕ್ತನು ರುದ್ರಾಕ್ಷಗಳನ್ನು ಧರಿಸುವಾಗ ಎಷ್ಟೆಷ್ಟು ರುದ್ರಾಕ್ಷಗಳನ್ನು ಯಾವ ಯಾವ ಸ್ಥಾನದಲ್ಲಿ ಧರಿಸಬೇಕೆಂಬುದನ್ನು ಶಿವಾಗಮಗಳು ಈ ರೀತಿಯಾಗಿ ವಿವರಿಸುತ್ತವೆ.

ಶಿಖಾಯಾಮೇಕರುದ್ರಾಕ್ಷಂ ತ್ರಿಂಶತ್ತು ಶಿರಸಾ ವಹೇತ್।
ಷಟ್‌ತ್ರಿಂಶತ್ತು ಗಲೇ ದದ್ಯಾದ್ ಬಾಹ್ವೋಃ ಷೋಡಶ ಷೋಡಶ॥
ದ್ವಾದಶ ಮಣಿಬಂಧೇಽಪಿ ಸ್ಕಂಧೇ ಪಂಚಶತಂ ವಹೇತ್।
ಅಷ್ಟೋತ್ತರಶತೈರ್ಮಾಲಾಂ ಜಪಯಜ್ಞೇ ಪ್ರಕಲ್ಪಯೇತ್॥
ದ್ವಿಸರಂ ತ್ರಿಸರಂ ವಾಽಪಿ ಸರಾಣಾಂ ಪಂಚಕಂ ತು ವಾ।
ಸಪ್ತಕಂ ದಶಕಂ ವಾಽಪಿ ಬಿಭೃಯಾತ್ ಕಂಠದೇಶತಃ॥
ಮಕುಟೇ ಕುಂಡಲೇ ಚೈವ ಕರ್ಣಿಕಾಹಾರಕೇಷು ಚ।
ಕೇಯೂರಕಟಕೇ ಚೈವ ಕಕ್ಷೆಬಂಧೇ ವಿಶೇಷತಃ।
ಸುಪ್ತೇ ಪೀತೇ ಸದಾಕಾಲಂ ರುದ್ರಾಕ್ಷಾನ್ ಧಾರಯೇನ್ನರಃ[೩೦]

---

೨೮. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೧೦
೨೯. ಬ.ವ.ಸಂ. ಸಮಗ್ರ ವಚನ ಸಂಪುಟ ೧, ವ.ಸಂ. ೧೩೭೪, ಪುಟ ೩೭೯
೩೦. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೫೦–೫೩; ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೧೭–೧೮;

ಶಿಖೆಯಲ್ಲಿ ೧, ತಲೆಯ ಮೇಲೆ ೩೦, ಕುತ್ತಿಗೆಯಲ್ಲಿ ೩೬, ಪ್ರತಿಯೊಂದು ತೋಳಿನಲ್ಲಿ ೧೬ ರಂತೆ ಎರಡೂ ತೋಳುಗಳಲ್ಲಿ, ಮಣಿಕಟ್ಟಿನಲ್ಲಿ ತಲಾ ೧೨, ಹೆಗಲಿನಲ್ಲಿ ೫೦೦ ರುದ್ರಾಕ್ಷಗಳನ್ನು ಧರಿಸಬೇಕು. ೧೦೮ ರುದ್ರಾಕ್ಷಗಳ ಮಾಲೆಯನ್ನು ಜಪಕ್ಕಾಗಿ ಸಿದ್ಧಪಡಿಸಬೇಕೆಂದು ಮಕುಟ–ಕಾರಣಾಗಮಗಳು ವಿವರಿಸುತ್ತವೆ. ಎರಡು, ಮೂರು, ಐದು, ಏಳು ಅಥವಾ ಹತ್ತು ಎಳೆಯ ರುದ್ರಾಕ್ಷ ಸರಗಳನ್ನು ಕುತ್ತಿಗೆಯಲ್ಲಿ ಧರಿಸಬೇಕು. ಮಕುಟದಲ್ಲಿ, ಕುಂಡಲದಲ್ಲಿ, ಕರ್ಣಾಭರಣದಲ್ಲಿ, ಕೇಯೂರ (ತೋಳ್ಬಂದಿ), ಕಂಕಣದ ಸ್ಥಾನದಲ್ಲಿ ಮತ್ತು ಕಕ್ಷಬಂಧ (ಕಂಕುಳು)–ಈ ಸ್ಥಾನಗಳಲ್ಲಿ ರುದ್ರಾಕ್ಷಗಳನ್ನು ವಿಶೇಷವಾಗಿ ಧರಿಸಬೇಕೆಂದು ಕಾರಣಾಗಮ ನಿರೂಪಿಸುತ್ತಾ, ರುದ್ರಾಕ್ಷಧಾರಣೆಯ ನಂತರ ಪರಶಿವನ ಶರೀರ ರೂಪದಲ್ಲಿರುವ ಸೂರ್ಯನಿಗೆ ಅರ್ಘ್ಯವನ್ನು ಸಮರ್ಪಿಸಿ, ಗಾಯತ್ರೀ ಹಾಗೂ ಪಂಚಾಕ್ಷರ ಮಂತ್ರಸಹಿತವಾದ ಸಂಧ್ಯಾವಂದನೆಯನ್ನು ಮಾಡಬೇಕು.

ಸಂಧ್ಯಾವಂದನ

ಸೂರ್ಯೋದಯ ಹಾಗೂ ಸೂರ್ಯಾಸ್ತದ ಸಮಯಗಳನ್ನು ಸಂಧಿ ಸಮಯ ಅಥವಾ ಸಂಧ್ಯಾಕಾಲ ಎಂದು ಕರೆಯುತ್ತಾರೆ. ಈ ಕಾಲಗಳಲ್ಲಿ ಸಕಲಪ್ರಪಂಚವನ್ನು ತನ್ನ ಜ್ಯೋತಿಸ್ವರೂಪ ಪ್ರಕಾಶದಿಂದ ಬೆಳಗುವ ಶಿವರೂಪಿಯಾದ ಸೂರ್ಯನನ್ನು ಗಾಯತ್ರೀ ಮಂತ್ರದಿಂದ ಉಪಾಸಿಸುವುದೇ ಸಂಧ್ಯಾವಂದನ.

ಸೂರ್ಯನು ಶಿವನ ಶರೀರವೇ ಆಗಿದ್ದಾನೆ ಹಾಗೂ ಗಾಯತ್ರೀ ಮಂತ್ರದ ದೇವತೆಯ ರೂಪದಲ್ಲಿ ಸಾಕ್ಷಾತ್ ಶಿವನಿದ್ದಾನೆ.[೩೧] ಆದ್ದರಿಂದ ಶಿವರೂಪಿಯಾದ ಸೂರ್ಯನಿಗೆ ಅಭಿಮುಖನಾಗಿ ಅಥವಾ ಉತ್ತರಾಭಿಮುಖನಾಗಿ ನಿಂತುಕೊಂಡು ಸೌರಮಂಡಲದ ಮಧ್ಯದಲ್ಲಿರುವ ಪಾರ್ವತೀಪರಮೇಶ್ವರರ ಧ್ಯಾನವನ್ನು ತದನಂತರ ಗುರುಧ್ಯಾನ ಮಾಡಿ–

ಶಿವೋ ಮಹೇಶ್ವರಶ್ಚೈವ ರುದ್ರಃ ಶಂಭುರುಮಾಪತಿಃ।
ಸಂಸಾರವೈದ್ಯಃ ಸರ್ವಜ್ಞಃ ಪರಮಾತ್ಮೇತಿ ಚಾಷ್ಟಕಮ್[೩೨]

ಎಂಬ ಶಿವನಾಮಾಷ್ಟಕವನ್ನು ಜಪಿಸಿ ಮೂರು ಬಾರಿ ಅರ್ಘ್ಯವನ್ನರ್ಪಿಸಬೇಕು. ನಂತರ ಗಾಯತ್ರೀ ಜಪವನ್ನಾಚರಿಸಬೇಕೆಂದು ತಿಳಿಸಿದೆ.[೩೩]

ಈ ಸಂಧ್ಯಾಸಮಯದಲ್ಲಿ ಶಿವನ ಹೊರತಾಗಿ ಅನ್ಯದೈವೋಪಾಸನೆಯನ್ನು ಮಾಡಿದಲ್ಲಿ ಉಪಾಸಕನ ಆಯಸ್ಸು, ವಿದ್ಯೆ, ಯಶಸ್ಸು ಮತ್ತು ಬಲಗಳು ನಷ್ಟವಾಗುತ್ತವೆ[೩೪]

---

೩೧. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೫೫; ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೧೭–೧೮;

೩೨. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೧೯

೩೩. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೨೩

೩೪. ಕಾ.ಆ. ಕ್ರಿ. ಪಾ, ಪಟಲ ೩, ಶ್ಲೋಕ ಸಂಖ್ಯೆ ೫೬

ಎಂದು ಸಂಧ್ಯಾವಂದನ ಕ್ರಮವನ್ನು ವಿವರಿಸಿದರೂ ಸಹ 'ಪ್ರತಿಯೊಬ್ಬ ವೀರಶೈವನು ತನ್ನ ಇಷ್ಟಲಿಂಗಪೂಜಾ ಸಮಯದಲ್ಲಿ ಅಂತಃಕರಣದಲ್ಲಿ ಬೆಳಗುವ ಜ್ಞಾನಸೂರ್ಯನ ಉಪಾಸನೆಯನ್ನು ಮನಃಪೂರ್ವಕವಾಗಿ ಆಚರಿಸುವುದೇ ವೀರಶೈವರು ಮಾಡುವ ಸಂಧ್ಯಾವಂದನ' ಎಂದು ಸುಪ್ರಭೇದಾಗಮದಲ್ಲಿ[೩೫] ಹೇಳಿದೆ.

ಈ ಸಂಧ್ಯಾವಂದನದ ನಂತರ ಪೂಜೆ, ಪಂಚಾಕ್ಷರ ಜಪ ಹಾಗೂ ರುದ್ರಾಧ್ಯಾಯದ ಪಠಣಗೈದು ಅಗ್ನಿಕಾರ್ಯವನ್ನು ಕೈಕೊಳ್ಳಬೇಕೆಂದು ಆಗಮಗಳು ತಿಳಿಸುತ್ತವೆ.

ಅಗ್ನಿಕಾರ್ಯ

ಯಜ್ಞಶಾಲೆಯನ್ನು ಪ್ರವೇಶಿಸಿ, ಅಗ್ನಿಯನ್ನು ಪವಿತ್ರವಾದ ಶಿವಸಂಸ್ಕಾರದಿಂದ ಶಿವಾಗ್ನಿಯನ್ನಾಗಿ ಪರಿವರ್ತಿಸಿ,[೩೬] ಆ ಅಗ್ನಿಯಲ್ಲಿ ಪಾರ್ವತೀ ಸಹಿತನಾದ ಪರಮೇಶ್ವರನನ್ನು ಧ್ಯಾನಿಸಿ[೩೭] ಯಜ್ಞವನ್ನು ಆಚರಿಸಬೇಕೆಂದು ತಿಳಿಸುತ್ತಾ ಹೋಮಯೋಗ್ಯ ಸಮಿತ್ತಗಳ ಬಗ್ಗೆ ತಿಳಿಸುತ್ತದೆ.

ಮುತ್ತಗ, ಕಗ್ಗಲಿಮರ(ಖದಿರ), ಅರಳಿಮರ(ಅಶ್ವತ್ಥ), ಬನ್ನಿಮರ(ಶಮೀ), ಅತ್ತೀಮರ(ಉದುಂಬರ) ಇವುಗಳು ಅಗ್ನಿಕಾರ್ಯಕ್ಕೆ ಯೋಗ್ಯವಾದ ಸಮಿತ್ತುಗಳು. ಇವುಗಳಲ್ಲಿ ತೊಗಟೆಯಿಂದ ಕೂಡಿದ, ೧೦-೧೨ ಅಂಗುಲಗಳಷ್ಟು ಉದ್ದದ, ಅರ್ಧಂಬರ್ಧ ಒಣಗಿದ, ಒಂದೇ ಅಳತೆ ಕತ್ತರಿಸಿದ, ತೋರ್ಬೆರಳಿನಷ್ಟು ದಪ್ಪವಾಗಿರುವ, ಗುಂಡಗಿನ, ಕತ್ತರಿಸಿದ ನಂತರ ನೆಲದ ಮೇಲೆ ಬೀಳದೇ ಇರುವ, ಇನ್ನೊಂದು ಕೊಂಬೆ ಇಲ್ಲದೇ ಇರುವ, ಹುಳುಗಳು ತಿನ್ನದೇ ಇರುವ ಸಮಿತ್ತುಗಳು ಉತ್ತಮವಾದವುಗಳೆಂದು ವಿವರಿಸಿ ಹವಿಸ್ಸನ್ನು ಅರ್ಪಿಸುವಲ್ಲಿ ಹೋಮಾಗ್ನಿಯ ಕೆಲವು ನಿಷಿದ್ಧ ಅಂಗಗಳನ್ನು ಚಂದ್ರಜ್ಞಾನಾಗಮದಲ್ಲಿ ಹೇಳಲಾಗಿದೆ.[೩೮]

ಸರಿಯಾಗಿ ಬೆಂಕಿ ಹತ್ತಿಕೊಳ್ಳದೇ ಉರಿಯುತ್ತಿರುವ ಸಮಿತ್ತು ಅಗ್ನಿಯ ಕರ್ಣವೆಂದೂ ಅದರಲ್ಲಿ ಹವಿಸ್ಸನ್ನು ನೀಡುವುದರಿಂದ ರೋಗಪ್ರಾಪ್ತಿಯು. ಧೂಮದಿಂದ ಆವೃತವಾದ ಅಗ್ನಿಕುಂಡವು ನಾಸಿಕವೆಂದೂ, ಅದರಲ್ಲಿ ಹವಿಸ್ಸನ್ನು ನೀಡುವುದರಿಂದ ಮನೋಕ್ಷಯ(ಮನೋದೌರ್ಬಲ್ಯ)ವು. ಅಗ್ನಿಯ ಹೃಸ್ವಜ್ವಾಲೆಗಳಿರುವ ಭಾಗವನ್ನು ನೇತ್ರವೆಂದೂ, ಅದರಲ್ಲಿ ಹವಿಸ್ಸನ್ನು ನೀಡುವುದರಿಂದ ಮೃತ್ಯವು. ಸುಟ್ಟ ಸಮಿತ್ತುಗಳ ಭಸ್ಮವನ್ನು ಶಿರವೆಂದೂ, ಅದರಲ್ಲಿ ಆಹುತಿ ನೀಡುವುದರಿಂದ ಪಾಪವೂ ಉಂಟಾಗುತ್ತವೆ. ಎಲ್ಲಿ ಅಗ್ನಿಯು ಜಾಜ್ವಲ್ಯಮಾನವಾಗಿ ಉನ್ನತ ಜ್ವಾಲೆಗಳಿಂದ ಪ್ರಜ್ವಲಿಸುತ್ತಿರುವುದೋ ಅದೇ ಅಗ್ನಿಯ ನಾಲಿಗೆ. ಆದ್ದರಿಂದ ಹೋಮಾಗ್ನಿಯ ನಾಲಿಗೆಯಲ್ಲಿಯೇ ಹವಿಸ್ಸನ್ನು ಅರ್ಪಿಸಬೇಕೆಂದು ವಿವರಿಸಲಾಗಿದೆ.[೩೯]

೩೫. ಸುಪ್ರಭೇದಾಗಮ, ೭ ನೇ ಪಟಲ, ಶ್ಲೋ. ಸಂ. ೧೦
೩೬. ಚಂ.ಆ. ಕ್ರಿಪಾ, ಪಟಲ ೧೧, ಶ್ಲೋಕ ಸಂಖ್ಯೆ ೪೮
೩೭. ಪಾ.ಆ. ಪಟಲ ೪, ಶ್ಲೋಕ ಸಂಖ್ಯೆ ೧೯
೩೮. ಚಂ.ಆ. ಕ್ರಿಪಾ, ಪಟಲ ೧೧, ಶ್ಲೋಕ ಸಂಖ್ಯೆ ೫೦-೫೩
೩೯. ಚಂ.ಆ. ಕ್ರಿಪಾ, ಪಟಲ ೧೧, ಶ್ಲೋಕ ಸಂಖ್ಯೆ ೫೪-೫೭

ಚಂದ್ರಜ್ಞಾನಾಗಮದಲ್ಲಿನ ಈ ವಿವರಣೆಗಳು ಮಕುಟಾಗಮದಲ್ಲಿ ಕಂಡು ಬರದಿದ್ದರೂ, ಇದರ ಮುಂದುವರಿದ ವಿವರಣೆಯು ಕಂಡು ಬರುತ್ತದೆ. ಶಿವನ ಘೋರ ಸ್ವರೂಪವಾದ ಅಗ್ನಿಯಲ್ಲಿ ಸುವರ್ಣಾ, ಕನಕಾ, ರಕ್ತಾ, ಕೃಷ್ಣ, ಸುಪ್ರಭಾ, ಬಹುರೂಪಾ ಮತ್ತು ಅತಿರಕ್ತಾ ಎಂಬ ಏಳು ಶಿವಾಗ್ನಿಗಳ ನಾಲಿಗೆಗಳಿದ್ದು, ಅವು ಕ್ರಮವಾಗಿ ಪಶ್ಚಿಮ, ಮಧ್ಯಭಾಗ, ಉತ್ತರ, ದಕ್ಷಿಣ, ಪೂರ್ವ, ಆಗ್ನೇಯ ಮತ್ತು ಈಶಾನ್ಯ ದಿಕ್ಕುಗಳಲ್ಲಿವೆ[೪೦] ಎಂದು ವಿವರಿಸಿ, ವಿವಾಹದ ಸಂದರ್ಭದಲ್ಲಿ ಪಶ್ಚಿಮ ದಿಕ್ಕಿನ ಸುವರ್ಣಾ ನಾಲಿಗೆಗೆ, ಯಜ್ಞಕರ್ಮಗಳಲ್ಲಿ ಮಧ್ಯಮ ಸ್ಥಾನದಲ್ಲಿರುವ ಕನಕಾ ನಾಲಿಗೆಗೆ, ಉಪನಯನ ಕರ್ಮದಲ್ಲಿ ಉತ್ತರ ದಿಕ್ಕಿನ ರಕ್ತಾ ನಾಲಿಗೆಗೆ, ಪಿತೃ ಕರ್ಮಗಳಲ್ಲಿ ದಕ್ಷಿಣ ದಿಕ್ಕಿನ ಕೃಷ್ಣಾ ನಾಲಿಗೆಗೆ, ಎಲ್ಲ ಕಾಮ್ಯ ಕರ್ಮಗಳಲ್ಲಿ ಪೂರ್ವ ದಿಕ್ಕಿನ ಸುಪ್ರಭಾ ನಾಲಿಗೆಗೆ, ಶಾಂತಿ ಕರ್ಮಗಳಲ್ಲಿ ಆಗ್ನೇಯ ದಿಕ್ಕಿನ ಅತಿರಕ್ತಾ ನಾಲಿಗೆಗೆ ಮತ್ತು ಉಗ್ರ ಕಾರ್ಯಗಳಲ್ಲಿ ಈಶಾನ್ಯ ಬಹುರೂಪಾ ನಾಲಿಗೆಗೆ ಹವಿಸ್ಸನ್ನರ್ಪಿಸುವುದು ಯಾವಾಗಲೂ ಪ್ರಶಂಸನೀಯವೆಂದು ಬೋಧಿಸುತ್ತದೆ.[೪೧] ಶಿವಾಗ್ನಿಯ ಈ ಏಳು ನಾಲಿಗೆಗಳಲ್ಲಿ ಕನಕಾ, ಬಹುರೂಪಾ ಮತ್ತು ಅತಿರಕ್ತಾ ಎಂಬ ಮೂರು ನಾಲಿಗೆಗಳು ಪರಶಿವನ ಈಶಾನ ಮುಖದಲ್ಲಿದ್ದರೆ, ಸುಪ್ರಭಾ, ಕೃಷ್ಣಾ, ರಕ್ತಾ ಮತ್ತು ಸುವರ್ಣಾ– ಈ ನಾಲಿಗೆಗಳು ಕ್ರಮವಾಗಿ ಪರಶಿವನ ತತ್ಪುರುಷ, ಅಘೋರ, ಸದ್ಯೋಜಾತ ಮತ್ತು ವಾಮದೇವ ಎಂಬ ಮುಖಗಳಲ್ಲಿ ನೆಲೆಸಿವೆ. ಆದ್ದರಿಂದ ಶಿವಾಗ್ನಿಯನ್ನು ಜ್ಞಾನಿಯು ಧ್ಯಾನಿಸುತ್ತಾ ಪ್ರಾತಃಕಾಲದಲ್ಲಿ ಮತ್ತು ಸಾಯಂಕಾಲದಲ್ಲಿ ಆಹುತಿಯನ್ನರ್ಪಿಸಿ ಹೋಮ ಮಾಡಬೇಕೆಂದು ತಿಳಿಸಿದೆ.[೪೨]

ಈ ಯಜ್ಞಗಳಲ್ಲಿ ಐದು ಪ್ರಕಾರಗಳಿವೆ. ಹೋಮವನ್ನಾಚರಿಸುವುದು ದೇವಯಜ್ಞ, ಪಿತೃಗಳಿಗೆ ತರ್ಪಣವನ್ನರ್ಪಿಸುವುದು ಪಿತೃಯಜ್ಞ, ಭೂತಗಳಿಗೆ ಬಲಿಯನ್ನರ್ಪಿಸುವುದು ಭೂತಯಜ್ಞ, ಬ್ರಾಹ್ಮಣರಿಗೆ ಅನ್ನದಾನ ಮಾಡುವ ಕ್ರಿಯೆ ಮನುಷ್ಯಯಜ್ಞ ಮತ್ತು ಸ್ವಾಧ್ಯಾಯವೇ ಬ್ರಹ್ಮಯಜ್ಞ – ಇವು ಪಂಚಯಜ್ಞಗಳೆಂದು ಪ್ರಸಿದ್ಧವಾಗಿವೆ. ಆದರೆ ವೈದಿಕವಾದ ಈ ಯಜ್ಞಗಳ ಬದಲಾಗಿ ಕರ್ಮಯಜ್ಞ, ತಪೋಯಜ್ಞ, ಜಪಯಜ್ಞ, ಧ್ಯಾನಯಜ್ಞ ಮತ್ತು ಜ್ಞಾನಯಜ್ಞ ಎಂಬ ಪಂಚಯಜ್ಞಗಳನ್ನು ವೀರಶೈವರು ಆಚರಿಸಬೇಕೆಂದು ಆಗಮಗಳು ತಿಳಿಸುತ್ತವೆ.

ವೀರಶೈವರ ಪಂಚಯಜ್ಞಗಳು

ವೀರಶೈವರು ಆಚರಿಸುವ ಪಂಚಯಜ್ಞಗಳ ವಿಚಾರವು ಪಾರಮೇಶ್ವರಾಗಮದಲ್ಲಿ ಈ ರೀತಿಯಾಗಿ ನಿರೂಪಿತವಾಗಿದೆ:

---

೪೦. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೨೪–೨೬

೪೧. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೨೭–೨೮

೪೨. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೩೧–೩೨

ಶಿವಾರ್ಥಂ ದೇಹಸಂಶೋಷಸ್ತಪಃ ಕೃಚ್ಛ್ರಾದಿ ನೋ ಮತಮ್ ॥
ಶಿವಾರ್ಚಾ ಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿ ನೋಚ್ಯತೇ
ಜಪಃ ಪಂಚಾಕ್ಷರಾಭ್ಯಾಸಃ ಪ್ರಣವಾಭ್ಯಾಸ ಏವ ವಾ ॥
ರುದ್ರಾಧ್ಯಾಯಾದಿಕಾಭ್ಯಾಸೋ ನ ಚಾನ್ಯಾಧ್ಯಯನಾದಿಕಮ್।
ಧ್ಯಾನಂ ಶಿವಸ್ಯ ರೂಪಾದಿಚಿಂತಾ ನಾತ್ಮಾದಿಚಿಂತನಮ್ ॥[೪೩]

ಶಿವಪೂಜೆ(ಇಷ್ಟಲಿಂಗಪೂಜೆ)ಯೇ ಕರ್ಮ ಹೊರತು ಬಾಹ್ಯ ಯಜ್ಞಯಾಗಾದಿಗಳ ಆಚರಣೆಯಲ್ಲ. ಶಿವನಿಗೋಸ್ಕರ ದೇಹವನ್ನು ಶೋಷಿಸುವುದೇ ತಪಸ್ಸು ಹೊರತು ಕಷ್ಟಕರ ಚಾಂದ್ರಾಯಣಾದಿ ವ್ರತಗಳಲ್ಲ. ಪಂಚಾಕ್ಷರಮಂತ್ರದ ಪುನಃಪುನಃ ಪಠನ ಹಾಗೂ ರುದ್ರಾಧ್ಯಾಯದ ಅಭ್ಯಾಸವೇ ಜಪ ಹೊರತು ಸಾಂಖ್ಯ, ವೇದಗಳ ಅಧ್ಯಯನವಲ್ಲ. ಶಿವನ ರೂಪಾದಿಗಳ ಚಿಂತನೆಯೇ ಧ್ಯಾನ ಹೊರತು ಆತ್ಮಾದಿಗಳ ಚಿಂತನೆಯಲ್ಲ ಎಂದು ತಿಳಿಸಿದೆ. ಅರ್ಥಾತ್ ವೀರಶೈವನಿಗೆ ಇಷ್ಟಲಿಂಗಪೂಜೆಯೇ ಕರ್ಮಯಜ್ಞ, ಶಿವನಿಗೋಸ್ಕರ ದೇಹವನ್ನು ಶೋಷಿಸುವುದೇ ತಪೋಯಜ್ಞ, ಪಂಚಾಕ್ಷರಮಂತ್ರದ ಪುನಃಪುನಃ ಪಠನವೇ ಜಪಯಜ್ಞ, ಶಿವನ ರೂಪಾದಿಗಳ ಚಿಂತನೆಯೇ ಧ್ಯಾನಯಜ್ಞ ಮತ್ತು ಕಾಮಿಕಾದಿ ದಿವ್ಯಾಗಮಗಳ ಅರ್ಥವನ್ನು ವಿಚಾರಮಾಡಿ ತಿಳಿಯುವುದೇ ಜ್ಞಾನಯಜ್ಞವೆಂದು ನಿರೂಪಿಸಿದೆ.

ಗುರುಜಂಗಮರಿಗೆ ನಮಸ್ಕಾರ ವಿಧಿ

ಅಗ್ನಿಕಾರ್ಯದ ನಂತರ ವೀರಶೈವನು ಗುರು-ಜಂಗಮರಿಗೆ ವಿಧಿವತ್ತಾಗಿ ನಮಸ್ಕರಿಸಬೇಕೆಂದು ಆಗಮಗಳು ತಿಳಿಸಿವೆ. ಗುರು-ಜಂಗಮರ ನಮಸ್ಕಾರವಿಧಿಯನ್ನು ಮಕುಟಾಗಮದಲ್ಲಿ ಈ ರೀತಿ ಹೇಳಲಾಗಿದೆ.

ದಕ್ಷಹಸ್ತೇನ ಸಂಗೃಹ್ಯ ನಿಶ್ಚಲೋ ಲಿಂಗಪೇಟಿಕಾಮ್।
ಪಾದಾಂಗುಷ್ಠೌ ಗುರೋಃ ಸವ್ಯಹಸ್ತೇನ ಪರಿಗೃಹ್ಯ ಚ॥
ಸಂಸ್ಪರ್ಶಯೇನ್ನೇತ್ರಯೋಸ್ತ್ರಿರ್ಗುರ್ವಾಧೀನ್ ಶರಣಂ ವ್ರಜೇತ್॥[೪೪]

ಇಷ್ಟಲಿಂಗದ ಪೆಟ್ಟಿಗೆ (ಕರಡಿಗೆಯನ್ನು) ಭದ್ರವಾಗಿ ಬಲಗೈಯಲ್ಲಿ ಹಿಡಿದುಕೊಂಡು ಎಡಗೈಯನ್ನು ಗುರುವಿನ ಪಾದಗಳ ಎರಡೂ ಅಂಗುಷ್ಠಗಳ ಕೆಳಗೆ ಆಧಾರದಂತೆ ಇರಿಸಿ ತನ್ನೆರಡೂ ಕಣ್ಣುಗಳನ್ನು ಶ್ರೀ ಗುರುವಿನ ಎರಡೂ ಪಾದಾಂಗುಷ್ಠಗಳಿಗೆ ಸ್ಪರ್ಶಿಸಬೇಕು. ಎಡಗಣ್ಣನ್ನು ಎಡಪಾದದ ಅಂಗುಷ್ಠಕ್ಕು ಬಲಗಣ್ಣನ್ನು ಬಲ ಪಾದಾಂಗುಷ್ಠಕ್ಕೂ ಸ್ಪರ್ಶಿಸಿ ೩ ಬಾರಿ ನಮಸ್ಕಾರವನ್ನು ಮಾಡಬೇಕು.

ಹೀಗೆ ವೀರಶೈವನು ತನ್ನ ಪ್ರಥಮ ಅವಧಿಯ ದೈನಂದಿನ ಕಾರ್ಯಗಳನ್ನು ಈ ಬಗೆಯಾಗಿ ಪೂರೈಸಬೇಕೆಂದು ಆಗಮಗಳು ತಿಳಿಸಿವೆ.

---

೪೩. ಪಾ.ಆ. ಪಟಲ ೧೭, ಶ್ಲೋಕ ಸಂಖ್ಯೆ ೮೦-೮೨
೪೪. ಮ.ಆ. ಕ್ರಿಪಾ, ಪಟಲ ೨, ಶ್ಲೋಕ ಸಂಖ್ಯೆ ೩೪

ದಿನದ ಎರಡನೇ ಅವಧಿಯ ಕಾರ್ಯಗಳು

ಭಾಗೇ ದ್ವಿತೀಯೇ ನಿಗಮಾನಭ್ಯಸೇದಾಗಮಾನಪಿ।
ಅಧ್ಯಾಪಯೇಚ್ಚ ಶಾಸ್ತ್ರಾಣಿ ಸಮಿಧಾದೀನಿ ಚಾಹರೇತ್॥
ಪುಷ್ಪಾಣಿ ಬಿಲ್ವಪತ್ರಾಣಿ ಶ್ರೀಗಂಧಪ್ರಮುಖಾನಿ ಚ ॥

ದಿನದ ೨ನೇ ಭಾಗದಲ್ಲಿ ವೇದ, ಆಗಮಗಳು, ಉಪನಿಷತ್ತುಗಳು ಮುಂತಾದವುಗಳ ಅಧ್ಯಾಪನ ಹಾಗೂ ಅಧ್ಯಯನವನ್ನು ಮಾಡಬೇಕು. ಹಾಗೆಯೇ ಹೋಮಕಾರ್ಯಗಳಿಗೆ ಸಮಿತ್ತುಗಳನ್ನು, ಪೂಜಾಕಾರ್ಯಕ್ಕೆ ಹೂ, ಬಿಲ್ವ, ಗಂಧ ಮುಂತಾದ ಸಾಮಗ್ರಿಗಳನ್ನು ಸಂಗ್ರಹಿಸಬೇಕು. ಇದು ಎರಡನೇ ಅವಧಿಯ ಕರ್ತವ್ಯ.[೪೫]

ದಿನದ ಮೂರನೇ ಅವಧಿಯ ಕಾರ್ಯಗಳು

"ಅರ್ಥಸಿದ್ಧ್ಯೈ ಚ ಕುರ್ವೀತ ಯತ್ನಂ ಭಾಗೇ ತೃತೀಯಕೇ॥"[೪೬]

ದಿನದ ಮೂರನೇ ಅವಧಿಯಲ್ಲಿ ತನ್ನ ಹಾಗೂ ಕುಟುಂಬ ಜೀವನಪೋಷಣೆಗೆ ಉದ್ಯೋಗವನ್ನು ಮಾಡಬೇಕು.

ದಿನದ ನಾಲ್ಕನೇ ಅವಧಿಯ ಕಾರ್ಯಗಳು

ನಾಲ್ಕನೇ ಅವಧಿಯಲ್ಲಿ ಮಧ್ಯಾಹ್ನದ ಸ್ನಾನ, ಭಸ್ಮಸ್ನಾನ, ತ್ರಿಪುಂಡ್ರಧಾರಣೆ, ರುದ್ರಾಕ್ಷಧಾರಣೆಯನ್ನು ಮಾಡಿ ಗಾಯತ್ರೀ ಹಾಗೂ ಪಂಚಾಕ್ಷರ ಮಂತ್ರಸಹಿತವಾದ ಸಂಧ್ಯಾವಂದನೆಯನ್ನು ಮಾಡಬೇಕು. ನಂತರ ಗುರ್ವೀ, ಮಹತೀ ಅಥವಾ ಲಘ್ವೀ ಈ ಮೂರರಲ್ಲಿ ಯಾವುದಾದರೂ ಒಂದು ರೀತಿಯಲ್ಲಿ ತನ್ನ ಶಕ್ತ್ಯಾನುಸಾರ ಇಷ್ಟಲಿಂಗ ಪೂಜೆಯನ್ನು ಭಕ್ತಿಭಾವದಿಂದ ಆಚರಿಸಬೇಕು.[೪೭]

ಮಧ್ಯಾಹ್ನದ ಪೂಜೆಯ ನಂತರ ಮನೆಗೆ ಆಗಮಿಸಿದ ಅತಿಥಿಯ ಸತ್ಕಾರವನ್ನು ಮಾಡಬೇಕು. ಅತಿಥಿಯು ಪಂಡಿತನೇ ಇರಲಿ, ಮೂರ್ಖನೇ ಇರಲಿ, ಶತ್ರುವೇ ಇರಲಿ, ಮಿತ್ರನೇ ಇರಲಿ ಆತನನ್ನು ಅತಿಥಿರೂಪದಲ್ಲಿರುವ ಸಾಕ್ಷಾತ್ ಶಂಭುವೇ ಎಂದು ತಿಳಿಯಬೇಕು. ಮನೆಗೆ ಆಗಮಿಸಿದ ಮಾಹೇಶ್ವರ ಅಥವಾ ಜಂಗಮನನ್ನು ಭಕ್ತಿಭಾವದಿಂದ ಪೂಜಿಸಬೇಕು. ಆತನ ಭೋಜನ ಸಮಾಪ್ತಿಯ ನಂತರವೇ ಮನೆಯ ಯಜಮಾನನು ಪ್ರಸಾದವನ್ನು ಸ್ವೀಕರಿಸಬೇಕು.

---

೪೫. ಚಂ.ಆ. ಕ್ರಿಪಾ, ಪಟಲ ೧೧, ಶ್ಲೋಕ ಸಂಖ್ಯೆ ೫೮ ; ಮ.ಆ. ಕ್ರಿಪಾ, ಪಟಲ ೨, ಶ್ಲೋಕ ಸಂಖ್ಯೆ ೩೫ ; ಕಾ.ಆ. ಕ್ರಿಪಾ. ಪಟಲ ೩, ಶ್ಲೋಕ ಸಂಖ್ಯೆ ೬೩

೪೬. ಚಂ.ಆ. ಕ್ರಿಪಾ, ಪಟಲ ೧೧, ಶ್ಲೋಕ ಸಂಖ್ಯೆ ೫೯ ; ಮ.ಆ. ಕ್ರಿಪಾ, ಪಟಲ ೨, ಶ್ಲೋಕ ಸಂಖ್ಯೆ ೩೬ ; ಕಾರಣಾಗಮ, ಕ್ರಿಪಾ, ೩ ನೇ ಪಟಲ, ಶ್ಲೋ. ಸಂ. ೬೬

೪೭. ಚಂ.ಆ. ಕ್ರಿಪಾ, ಪಟಲ ೧೧, ಶ್ಲೋಕ ಸಂಖ್ಯೆ ೫೯–೬೨ ; ಮ.ಆ. ಕ್ರಿಪಾ, ಪಟಲ ೨, ಶ್ಲೋಕ ಸಂಖ್ಯೆ ೩೭–೪೦ ;

ಪಂಡಿತೋ ವಾಽಥವಾ ಮೂರ್ಖಃ ಪ್ರಿಯೋ ವಾ ದ್ವೇಷ್ಯ ಏವ ವಾ।
ಸಂಪ್ರಾಪ್ತೋ ಯಸ್ತು ಪೂಜಾಂತೇ ಸ ವೈ ಶಂಭುರ್ನ ಸಂಶಯಃ॥
ಮಾಹೇಶ್ವರಂ ಹಿ ಸದ್ಭಕ್ತ್ಯಾ ಪೂಜಯೇದ್ ಗೃಹಮಾಗತಮ್।
ಜಂಗಮಂ ಚ ಸಮಾರಾಧ್ಯ ಪ್ರಸಾದಮುಪಭುಜ್ಯ ಚ ॥[೪೮]

ಪ್ರಸಾದ ಸ್ವೀಕಾರದ ನಂತರ ಭುಂಜಿಸಿದ ಆಹಾರವು ಚೆನ್ನಾಗಿ ಜೀರ್ಣವಾಗುವ ಸಲುವಾಗಿ ಯಾವುದೇ ಚಿಂತೆ ಇಲ್ಲದೇ ಸುಖವಾಗಿ ಕುಳಿತುಕೊಳ್ಳಬೇಕು. ಜೊತೆಗೆ ಶಿವಸ್ತೋತ್ರ, ಪುರಾಣ ವಾಚನ ಮುಂತಾದವುಗಳನ್ನು ಮಾಡಬೇಕು. ತದನಂತರ ಸಾಯಂಕಾಲದವರೆಗೆ ಜೀವನೋಪಾಯಕ್ಕೆ ಅರ್ಥಸಂಗ್ರಹಕ್ಕೆ ತೊಡಗಬೇಕು.[೪೯]

ಸಾಯಂ ವಿಧಿ

ಸಾಯಂಕಾಲ ಜಲಸ್ನಾನ ಅಥವಾ ಭಸ್ಮಸ್ನಾನವನ್ನು, ಸಂಧ್ಯಾವಂದನೆಯನ್ನು ಮಾಡಿ ಎರಡು ವಿಧದ ಜಪ (ಗಾಯತ್ರೀ ಜಪ ಹಾಗೂ ಪಂಚಾಕ್ಷರೀ ಜಪ) ಮಾಡಬೇಕು. ನಂತರ ಅಗ್ನಿಕಾರ್ಯ ಹಾಗೂ ಸಾಯಂಕಾಲದ ಪೂಜೆಯನ್ನು ನೆರವೇರಿಸಬೇಕು.

ಹೀಗೆ ವೀರಶೈವನು ಅರುಣೋದಯ, ಸೂರ್ಯೋದಯ, ಸಂಗವಕಾಲ (ಗೋವುಗಳ ಹಾಲು ಹಿಂಡಿ ಮೇಯಲು ಬಿಡುವ ಕಾಲ), ಮಧ್ಯಾಹ್ನ, ಸಾಯಂಕಾಲ ಹಾಗೂ ಅರ್ಧರಾತ್ರಿ ಈ ಆರು ಸಮಯಗಳಲ್ಲಿ ಅಥವಾ ಸೂರ್ಯೋದಯ, ಮಧ್ಯಾಹ್ನ ಮತ್ತು ಅರ್ಧರಾತ್ರಿ ಈ ಮೂರು ಕಾಲಗಳಲ್ಲಾಗಲಿ ಶಿವಭಕ್ತನು ಎಲ್ಲ ಆಪತ್ತುಗಳಿಂದ ಕಾಪಾಡುವ ಇಷ್ಟಲಿಂಗವನ್ನು ತನ್ನ ಶಕ್ತ್ಯಾನುಸಾರ ಮಹತೀ, ಗುರ್ವೀ, ಅವಸರಾ ಅಥವಾ ಲಘ್ವೀ ವಿಧಾನಗಳಿಂದ ಪೂಜಿಸಬೇಕೆಂದು ಆಗಮಗಳು ತಿಳಿಸುತ್ತವೆ.

ಷಟ್ಸು ಕಾಲೇಷು ಸಂಪೂಜ್ಯಂ ತ್ರಿಸಂಧ್ಯಮಥವಾ ಪುನಃ।
ಇಷ್ಟಲಿಂಗಂ ಮಹೇಶಸ್ಯ ಸರ್ವಾನಿಷ್ಟನಿಷೂದನಮ್॥
ಅರುಣಸ್ಯೋದಯೇ ಭಾನೋರುದಯೇ ಸಂಗವೇ ತಥಾ।
ಮಧ್ಯಾಹ್ನೇ ಚ ತಥಾ ಸಾಯಮರ್ಧರಾತ್ರೌ ಬೃಹಸ್ಪತೇ॥
ಷಟ್ಕಾಲಮರ್ಚನೀಯಂ ಸ್ಯಾಚ್ಛಿವಲಿಂಗಮನಾಮಯಮ್॥
ಅಭೋಜನೇ ತ್ವವಸರಾ ವಿಧೇಯಾ ಹ್ಯನ್ಯಥಾ ಪರಾ।
ಲಘುರ್ಗುರುರ್ವಾ ಮಹತೀ ಪೂಜಾ ಶಕ್ತ್ಯನುಸಾರತಃ॥[೫೦]

---

೪೮. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೬೬–೬೮ ; ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೪೩ ; ಕಾ.ಆ. ಕ್ರಿ.ಪಾ. ಪಟಲ ೩, ಶ್ಲೋಕ ಸಂಖ್ಯೆ ೭೩

೪೯. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೬೮ ; ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೪೬ ; ಕಾ.ಆ.ಕ್ರಿ.ಪಾ, ಪಟಲ ೩, ಶ್ಲೋಕ ಸಂಖ್ಯೆ ೭೫–೭೬

೫೦. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೬೩–೬೫

ದಿನಕ್ಕೆ ಆರು ಬಾರಿ ಅಥವಾ ಕನಿಷ್ಠ ಮೂರು ಬಾರಿಯಾದರೂ ಇಷ್ಟಲಿಂಗ ಪೂಜೆಯನ್ನು ಆಚರಿಸಬೇಕೆಂಬ ಆಗಮಗಳ ಅಭಿಪ್ರಾಯವನ್ನು ಪುಷ್ಟೀಕರಿಸುತ್ತ ಚೆನ್ನಬಸವಣ್ಣನವರು,

ಉದಯಕಾಲ, ವಿಚಿತ್ರಕಾಲ, ಅಸ್ತಮಾನ ಕಾಲದಲ್ಲಿ
ತನ್ನ ಇಷ್ಟಲಿಂಗಕ್ಕೆ ಷೋಡಶೋಪಚಾರವ ಮಾಡದವನು
ಭಕ್ತನಲ್ಲ, ಶರಣನಲ್ಲ, ಲಿಂಗೈಕ್ಯನಲ್ಲ.
ಅವನು ಪಂಚಮಹಾಪಾತಕ, ವಿಘಾತಕ ಲಿಂಗಚೋರಕ;
ಇಂತೆಂದುದು ಕೂಡಲಚೆನ್ನಸಂಗನ ವಚನ"[೫೧]

ಎಂದು ಹೇಳಿರುವರು. ಹೀಗೆ ಸಾಯಂಕಾಲದಲ್ಲಿ ಅವಸರಾ ವಿಧಾನದಿಂದ ಇಷ್ಟಲಿಂಗಪೂಜೆಯನ್ನು ನಿಷ್ಠೆಯಿಂದ ಆಚರಿಸಿದ ನಂತರ ವೈಶ್ವದೇವವಿಧಿಯನ್ನು (ಗೋವು ಮುಂತಾದ ಪ್ರಾಣಿಗಳಿಗೆ ಮತ್ತು ಅತಿಥಿಗಾಗಿ ಆಹಾರ ಪದಾರ್ಥವನ್ನು ಬೇರೆ ತಗೆದು ಮೀಸಲಿರಿಸುವ ವಿಧಿ) ಆಚರಿಸಬೇಕು.[೫೨]

ರಾತ್ರಿಯ ಕರ್ತವ್ಯಗಳು

ಯಥಾಶಕ್ತಿ ರಾತ್ರಿ ಪೂಜೆಯ ನಂತರ ಅತಿಥಿಸತ್ಕಾರವನ್ನು ಭಕ್ತಿಪೂರ್ವಕವಾಗಿ ಮಾಡಿ ನಂತರ ಪ್ರಸಾದ ಸ್ವೀಕಾರ ಮಾಡಬೇಕು. ಸ್ವೀಕರಿಸಿದ ಆಹಾರವು ಪ್ರಸಾದದ ಅನುಭೂತಿಯನ್ನುಂಟು ಮಾಡಲು ಶಿವಸ್ತೋತ್ರ ಮುಂತಾದವುಗಳ ಪಠಣವನ್ನು ಮಾಡಬೇಕು.[೫೩]

ಮಲಗುವ ಕ್ರಮ

ದಿನದ ಎಲ್ಲ ವಿಧಿಗಳ ಆಚರಣೆಯ ನಂತರ ಪ್ರಸನ್ನ ಮನಸ್ಕನಾಗಿ ಶಿವನ ಧ್ಯಾನವನ್ನು ಮಾಡುತ್ತ ತನ್ನ ಮನಸ್ಸಿಗೆ ಹಿತವೆನಿಸುವ ಸುಖವಾದ ನಿದ್ರೆಯನ್ನು ಹೊಂದುವಂತಹ ಹಾಸಿಗೆಯ ಮೇಲೆ ಮಲಗಿಕೊಳ್ಳಬೇಕು.

ಅಧಿಶಯ್ಯಾಭಿಃರುಚಿತಾಂ ಶಯ್ಯಾಂ ಶಂಭುಂ ಶುಚಿಃ ಸ್ಮರನ್।
ಧ್ಯಾಯನ್ ಶಯೀತ ನಿಶ್ಚಿಂತಸ್ತತೋ ನಿದ್ರಾಸುಖಂ ವ್ರಜೇತ್॥[೫೪]
ತತಃ ಶಯ್ಯಾಂ ಸುಖಕರೀಮಧಿಶಯ್ಯ ಶುಚಿಸ್ತು ಮಾಮ್।
ಧ್ಯಾಯನ್ ಶಯೀತ ಚ ಸುಖಮುತ್ಸೃಷ್ಟಾಖಿಲಚಿಂತನಃ॥[೫೫]

---

೫೧. ಚೆ.ಬ.ವ.ಸಂ.ಸಮಗ್ರ ವಚನ ಸಂಪುಟ ೩, ವ.ಸಂ. ೧೭೩, ಪುಟ ೫೧

೫೨. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೬೯ ; ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೪೭–೪೮ ; ಕಾ.ಆ. ಕ್ರಿ.ಪಾ. ಪಟಲ ೩ ಶ್ಲೋಕ ಸಂಖ್ಯೆ ೭೭

೫೩. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೭೦–೭೧; ಕಾ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೭೮–೮೦

೫೪. ಚಂ.ಆ. ಕ್ರಿ.ಪಾ, ಪಟಲ ೧೧, ಶ್ಲೋಕ ಸಂಖ್ಯೆ ೭೧

೫೫. ಮ.ಆ. ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೪೯,ಕಾ.ಆ.ಕ್ರಿ.ಪಾ, ಪಟಲ ೩, ಶ್ಲೋಕ ಸಂಖ್ಯೆ ೮೧

ಹೀಗೆ ವೀರಶೈವರಿಗೆ ಯೋಗ್ಯವಾದ ಆಹ್ನಿಕವನ್ನು ಆಚರಿಸಿದ ಪ್ರತಿಯೊಬ್ಬನೂ ಸಕಲದುರಿತಗಳಿಂದ ಮುಕ್ತನಾಗುತ್ತಾನೆಂದು ಆಗಮಗಳು ಪ್ರತಿಪಾದಿಸಿವೆ.[೫೬]

ಒಟ್ಟಿನಲ್ಲಿ ಶಿವಾಗಮಗಳಲ್ಲಿ ಹಾಗೂ ವಚನಗಳಲ್ಲಿ ನಿರೂಪಿತವಾಗಿರುವ ವೀರಶೈವನ ದೈನಂದಿನ ಆಚರಣೆಗಳನ್ನು ವಿಮರ್ಶಾತ್ಮಕವಾಗಿ ಅವಲೋಕಿಸಿದರೆ ಶಿವಾಗಮಗಳ ದೈನಂದಿನ ಆಚರಣೆಗಳಲ್ಲಿ ಪ್ರತಿಪಾದನೆಯಾದ ಬ್ರಾಹ್ಮೀ ಮಹೂರ್ತದಲ್ಲಿ ಎದ್ದು ಇಷ್ಟಲಿಂಗವನ್ನು ಕಣ್ಣುಗಳಿಗೆ ಸ್ಪರ್ಶಿಸಿ ಶಿವನಾಮ ಸ್ಮರಣೆ ಮಾಡುವ, ಭಸ್ಮ ಹಾಗೂ ರುದ್ರಾಕ್ಷಗಳನ್ನು ಧರಿಸಿಕೊಳ್ಳುವ, ಷಟ್ಕಾಲ ಅಥವಾ ತ್ರಿಕಾಲ ಇಷ್ಟಲಿಂಗವನ್ನು ಪೂಜಿಸುವ ವಿಧಾನಗಳೆಲ್ಲವೂ ವಚನಗಳಲ್ಲಿ ಸ್ವೀಕೃತವಾಗಿವೆ. ಆದರೆ ಇನ್ನುಳಿದ ದೈನಂದಿನ ಆಚರಣೆಗಳಾದ ಸೂರ್ಯ ಸ್ವರೂಪದಲ್ಲಿರುವ ಶಿವನಿಗೆ ಅರ್ಘ್ಯವನ್ನರ್ಪಿಸುವುದು, ಪರಶಿವ ಸ್ವರೂಪವನ್ನೇ ವರ್ಣಿಸುವ ಗಾಯತ್ರೀ ಜಪ, ಶಿವನ ಘೋರ ಸ್ವರೂಪವಾದ ಶಿವಾಗ್ನಿಯ ಹೋಮ ಕಾರ್ಯಗಳು ವಚನಗಳಲ್ಲಿ ಪ್ರತಿಪಾದನೆಗೊಂಡಿಲ್ಲ. ಹೀಗೆಂದ ಮಾತ್ರಕ್ಕೆ ಇವು ಕೇವಲ ಶೈವ ಆಚರಣೆಗಳು ವೀರಶೈವರ ನಿತ್ಯ ಆಚರಣೆಗೆ ವ್ಯತಿರಿಕ್ತವಾದವುಗಳು ಎಂದು ಭಾವಿಸಬೇಕಾಗಿಲ್ಲ. ಏಕೆಂದರೆ ಸೂರ್ಯ, ಗಾಯಿತ್ರಿಮಂತ್ರ, ಅಗ್ನಿಗಳಲ್ಲಿ ಪರಶಿವನನ್ನೇ ಪರಿಭಾವಿಸುವ ಮನೋಭಾವ ಈ ಆಚರಣೆಗಳಲ್ಲಿದೆ. ಅಲ್ಲದೇ ಪ್ರಾಚೀನಕಾಲದಲ್ಲಿ ನದಿ, ತಟಾಕಗಳಲ್ಲಿಯೇ ಸ್ನಾನ ಮಾಡುವ ಹಾಗೂ ಮನೆಯಲ್ಲಿ ಯಾವಾಗಲೂ ಅಗ್ನಿಯನ್ನು ಸಂರಕ್ಷಿಸುವ ಪದ್ಧತಿಯಿತ್ತು. ಹಾಗಾಗಿ ಸೂರ್ಯ ನಮಸ್ಕಾರ ಹಾಗೂ ಗೃಹಾಗ್ನಿಯನ್ನೇ ಶಿವಾಗ್ನಿಯನ್ನಾಗಿ ಪರಿವರ್ತಿಸಿ ಆರಾಧಿಸುವ ಕಾರ್ಯಗಳು ದೈನಂದಿನ ಆಚರಣೆಗಳಲ್ಲಿ ಪ್ರತಿಪಾದಿಸಲ್ಪಟ್ಟವು. ಇದೂ ಅಲ್ಲದೇ ಸಂಧ್ಯಾ ಕಾಲದಲ್ಲಿ ಸೂರ್ಯ ನಮಸ್ಕಾರ, ಜಪ ಮತ್ತು ಹೋಮಗಳ ಆಚರಣೆಯಿಂದ ದೈಹಿಕದಾರ್ಢ್ಯತೆ, ಮಾನಸಿಕ ಶಾಂತಿ, ಏಕಾಗ್ರತೆ, ಪರಿಸರ ಶುದ್ಧತೆ, ರೋಗಪ್ರತಿನಿರೋಧಕ ಶಕ್ತಿಯ ವೃದ್ಧಿಯಂತಹ ಅನೇಕ ವೈಜ್ಞಾನಿಕ ಲಾಭಗಳಾಗುತ್ತವೆ. ಆದರೂ ಇವು ಕಡ್ಡಾಯವಾಗಿ ಆಚರಿಸಲೇಬೇಕೆಂದು ಆಗಮಗಳಲ್ಲಿಯೂ ಸಹ ಹೇಳಲ್ಪಟ್ಟಿಲ್ಲ. ಸೂರ್ಯನ ಉಪಾಸನೆ ಹಾಗೂ ಗಾಯತ್ರೀ ಜಪದ ಬದಲಾಗಿ ಅಂತಃಕರಣದಲ್ಲಿ ಬೆಳಗುವ ಜ್ಞಾನಸೂರ್ಯನ ಉಪಾಸನೆಯನ್ನು ಮನಃಪೂರ್ವಕವಾಗಿ ಆಚರಿಸುವುದೇ ವೀರಶೈವರು ಮಾಡುವ ಸಂಧ್ಯಾವಂದನ ಎಂದು ಸುಪ್ರಭೇದಾಗಮವೂ ಮತ್ತು ಹೋಮಕಾರ್ಯದ ಬದಲಾಗಿ ಪಂಚಯಜ್ಞಗಳಾದ ಶಿವನ ರೂಪಾದಿಗಳ ಚಿಂತನೆಯೆಂಬ ಧ್ಯಾನಯಜ್ಞವನ್ನು, ಇಷ್ಟಲಿಂಗ ಪೂಜೆಯೆಂಬ ಕರ್ಮಯಜ್ಞವನ್ನು, ಪಂಚಾಕ್ಷರಮಂತ್ರದ ಪಠಣವೆಂಬ ಜಪಯಜ್ಞವನ್ನು, ವೇದಾಗಮಗಳ ಅಧ್ಯಯನವೆಂಬ ಜ್ಞಾನಯಜ್ಞವನ್ನು ಮತ್ತು ಪೂಜಾ ಕಾರ್ಯಗಳಿಗೆ ಸಾಮಗ್ರಿ ಸಂಗ್ರಹದ ಮೂಲಕ ತಪೋಯಜ್ಞವನ್ನು ವೀರಶೈವರು ಆಚರಿಸಬೇಕೆಂದು ಪಾರಮೇಶ್ವರಾಗಮದಲ್ಲಿ ಉಪದೇಶಿಸುವುದರ ಜೊತೆಗೆ

---

೫೬ ಚಂ.ಆ. ಕ್ರಿಪಾ, ಪಟಲ ೧೧, ಶ್ಲೋಕ ಸಂಖ್ಯೆ ೭೨

ನ ಸಾಧಯತಿ ಮಾಂ ಯೋಗಃ ಸಾಂಖ್ಯಧರ್ಮಸ್ತ್ವನುಷ್ಠಿತಃ।
ಸ್ವಾಧ್ಯಾಯೋಽಪಿ ತಪಸ್ತೀರ್ಥಂ ಕ್ಷೇತ್ರಾಣಿ ನಿಯಮಾದಯಃ ॥
ವ್ರತಾನಿ ಯಜ್ಞಾಶ್ಛಂದಾಂಸಿ ಜಾತಯಾಶ್ಚಾಶ್ರಮಾ ಅಪಿ।
ವಿನಾ ಭಕ್ತ್ಯಾ ಸುದೃಢಯಾ ಮಯ್ಯೇವ ನಿರಪೇಕ್ಷಯಾ॥[೫೭]

"ನಿರಪೇಕ್ಷ ಹಾಗೂ ಸದೃಢ ಭಕ್ತಿಯಿಲ್ಲದೆ ಕೇವಲ ವಿಧಿವತ್ತಾದ ನೈಷ್ಠಿಕ ಧರ್ಮಾಚರಣೆ, ಯೋಗ, ಸಾಂಖ್ಯ, ತಪಸ್ಸು, ತೀರ್ಥಯಾತ್ರೆ, ಸ್ವಾಧ್ಯಾಯ, ಕ್ಷೇತ್ರವಿನ್ಯಾಸ, ನಿಯಮಗಳ ಆಚರಣೆ, ವ್ರತ, ಯಜ್ಞ, ವೇದ, ಜಾತಿ, ಆಶ್ರಮ ಮುಂತಾದವುಗಳ ಮೂಲಕ ಶಿವನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲ" ಎಂದು ಎಚ್ಚರಿಸುವ ಮೂಲಕ ದೈನಂದಿನ ಆಚರಣೆಗಳು ಡಾಂಬಿಕ ಆಚರಣೆಗಳಾಗದೇ ನಿರಪೇಕ್ಷ ಹಾಗೂ ಸದೃಢಭಕ್ತಿಯಿಂದ ಕೂಡಿದ ಆಚರಣೆಗಳಾಗಿರಬೇಕೆಂದು ಸೂಚಿಸುತ್ತದೆ.

ಇನ್ನೊಂದು ಮಹತ್ವಪೂರ್ಣ ಅಂಶವೇನೆಂದರೆ ವಚನ ಕಾಲದ 'ದಾಸೋಹ'ದ ಪರಿಕಲ್ಪನೆಯ ಮೂಲವನ್ನು ಶಿವಾಗಮಗಳ ದೈನಂದಿನ ಆಚರಣೆಗಳಲ್ಲಿ ಪ್ರತಿಪಾದನೆಯಾದ ವೈಶ್ವದೇವವಿಧಿ ಹಾಗೂ ಅತಿಥಿಗಳನ್ನು ದಿನನಿತ್ಯ ಸತ್ಕರಿಸಬೇಕೆಂಬ ಪ್ರತಿಪಾದನೆಯಲ್ಲಿ ಕಾಣುತ್ತೇವೆ. ಅಲ್ಲದೇ 'ದಾಸೋಹ' ಎಂಬ ಪದಪ್ರಯೋಗವನ್ನು 'ವೀರಾಗಮ'ವು ಹಲವು ಬಾರಿ ಉಲ್ಲೇಖಿಸಿದೆ.

ದಾಸೋಹ ಕರುಣಶೀಲಾಂ ತಾಂ ಲೋಕೇ ರೇಣುಕಾದಯಃ
ಪ್ರವರ್ತಯಂತಿ ಸತತಂ॥ [೫೮]

ಅರ್ಥಾತ್ ರೇಣುಕಾದಿ ಆಚಾರ್ಯರು ಜಗದೊಳಗೆ ಸೋಪಾಧಿ, ನಿರುಪಾಧಿ, ಸಹಜವೆಂಬ ಶೀಲಗಳುಳ್ಳ ದಾಸೋಹವನ್ನು ಸತತವಾಗಿ ನಡೆಸಿದರು ಎಂದು ಪ್ರತಿಪಾದಿಸುತ್ತ ದಾಸೋಹ ಮಾಡುವ ವ್ಯಕ್ತಿ 'ನಿರಹಂಕಾರಿ'ಯಾಗಿ, ಕೊಡುವ ನೀಡುವ ವಸ್ತು 'ದೈವ ಸ್ವರೂಪ'ದ್ದು, ತನ್ನದಲ್ಲ ಎಂದು ಭಾವಿಸಿ ಕೊಡುವದು ಅಥವಾ ಮಾಡುವದು ನಿಜವಾದ ದಾಸೋಹವೆನಿಸುತ್ತದೆ. ಇದನ್ನು ರೇಣುಕಾದಿ ಆಚಾರ್ಯರು ಜಗದಲ್ಲಿ ಪ್ರಚುರಪಡಿಸಿದರು ಎಂದು ತಿಳಿಸಿ,

ದಾಸೋಹಂ ಪ್ರಥಮಾ ಮೋಕ್ಷಂ ವದಂತೀತಿ ನ ಸಂಶಯಃ ।
ಭೂರುದ್ರಾಣಾಂ ಜಂಗಮಾನಾಂ । ಷಟಸ್ಥಲ ಬ್ರಹ್ಮಿಣಾಂ ಪ್ರೀಯೆ ।[೫೯]

ಅರ್ಥಾತ್ 'ಗುರು, ಲಿಂಗ, ಜಂಗಮರಿಗೆ, ತನು, ಮನ, ಧನದಿಂದ ಮಾಡುವ ಧಾಸೋಹ ಮೋಕ್ಷಕ್ಕೆ ಕಾರಣವಾಗುತ್ತದೆ' ಎಂಬ ವೀರಾಗಮದ ಪ್ರತಿಪಾದನೆಯನ್ನು ವಚನಕಾರರು ಅತ್ಯಂತ ಅರ್ಥಪೂರ್ಣವಾಗಿ, ಹೆಚ್ಚು ಶಕ್ತಿಯುತವಾಗಿ ತಮ್ಮ ಸಾಧನೆಯಲ್ಲಿ ಬಳಸಿಕೊಂಡಿದ್ದಾರೆ.

---

೫೭. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೧-೨
೫೮. ವೀರಾಗಮ, ಶೈವಪಟಲ, ಶ್ಲೋಕ ಸಂಖ್ಯೆ ೪೮೮
೫೯. ವೀರಾಗಮ, ಶೈವಪಟಲ, ಶ್ಲೋಕ ಸಂಖ್ಯೆ ೩೬೬

೪.೨ ಧಾರ್ಮಿಕ ಸಂಸ್ಕಾರಗಳು

ವ್ಯಕ್ತಿಯ ದೇಹ, ಮನಸ್ಸು ಹಾಗೂ ವಿಚಾರವನ್ನು ಪವಿತ್ರಗೊಳಿಸುವ ಮೂಲಕ ಅವನನ್ನು ಸಮಾಜದ ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುವ ಧಾರ್ಮಿಕ ಕ್ರಿಯೆಯೇ 'ಸಂಸ್ಕಾರ'. ವೀರಶೈವರು ಪ್ರಮುಖವಾಗಿ ಗರ್ಭದಾನದಿಂದ ಅಂತ್ಯಸಂಸ್ಕಾರದವರೆಗೆ ಹತ್ತು ಸಂಸ್ಕಾರಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಗರ್ಭದಾನ, ಪುಂಸವನ, ಸೀಮಂತ, ಜಾತಕರ್ಮ(ಲಿಂಗಧಾರಣೆ, ನಾಮಕರಣ), ಅನ್ನಪ್ರಾಶನ, ಚೌಲಕರ್ಮ(ಜಾವಳ), ಅಕ್ಷರಾಭ್ಯಾಸ, ವಿವಾಹಗಳು ಸಾಂಪ್ರದಾಯಿಕ ಸಂಸ್ಕಾರಗಳಾಗಿದ್ದು, ದೀಕ್ಷಾ ಮತ್ತು ಶಿವಮೇಧ(ಅಂತ್ಯೇಷ್ಟಿವಿಧಿ)ಗಳು ಧಾರ್ಮಿಕ ಸಂಸ್ಕಾರಗಳಾಗಿವೆ.

ಪ್ರಸ್ತುತ ಜೀವಾತ್ಮನಿಗೆ ಶಿವಾತ್ಮ ಭಾವವನ್ನು ಕರುಣಿಸುವ ದೀಕ್ಷಾಸಂಸ್ಕಾರವನ್ನು ಕುರಿತು ಶಿವಾಗಮ ಹಾಗೂ ವಚನಸಾಹಿತ್ಯದ ಹಿನ್ನಲೆಯಲ್ಲಿ ವಿವೇಚಿಸಲಾಗಿದೆ.

೪.೨.೧ ದೀಕ್ಷಾ ಸಂಸ್ಕಾರ

ಎಲ್ಲ ಶೈವ ಪಂಥಗಳಲ್ಲಿಯೂ ದೀಕ್ಷೆಗೆ ಬಹಳ ಮಹತ್ವವಿದೆ. ಆಯಾ ಪಂಥಗಳು ಇಟ್ಟುಕೊಂಡಿರುವ ಕೊನೆಯ ಗುರಿಯನ್ನು ಮುಟ್ಟಲು ದೀಕ್ಷೆ ಅವಶ್ಯವಾಗಿ ಬೇಕು. ಸಾಮಾನ್ಯರ್ಥದಲ್ಲಿ ದೀಕ್ಷೆ ಎಂದರೆ 'ದಕ್ಷತೆಯಿಂದ ಸತ್ಕಾರ್ಯವನ್ನು ನಿರ್ವಹಣೆ ಮಾಡಲು ಕಂಕಣಬದ್ಧರಾಗಿರುವುದು' ಎಂದರ್ಥ. ಆದರೆ ವೀರಶೈವ ಪರಿಭಾಷೆಯಲ್ಲಿ ದೀಕ್ಷೆ ಎಂದರೆ 'ಘಾಂಸಪಿಂಡವನ್ನು ಸಂಸ್ಕರಿಸಿ ಮಂತ್ರಪಿಂಡವನ್ನಾಗಿ ಮಾಡುವ ಹಾಗೂ ಲಿಂಗಾಂಗ ಸಾಮರಸ್ಯವನ್ನುಂಟು ಮಾಡುವ ವಿಶೇಷ ಸಂಸ್ಕಾರವೇ ದೀಕ್ಷೆ' ಎಂದು ಕರೆಯಲ್ಪಡುತ್ತದೆ. ಇದು ನೈತಿಕ ಬೋಧೆಗಳನ್ನು ಮತ್ತು ಆಧ್ಯಾತ್ಮಿಕ ಯೋಗದ ಅಂಶಗಳನ್ನು ಒಳಗೊಂಡಿದೆ.ವೀರಶೈವದ ಹೆಬ್ಬಾಗಿಲನ್ನು ತೆರೆಯುವ ದೀಕ್ಷಾಸಂಸ್ಕಾರವನ್ನು ವೀರಶೈವನಲ್ಲದವನನ್ನು ವೀರಶೈವಕ್ಕೆ ಸೇರಿಸಿಕೊಳ್ಳುವಾಗಲೂ ನೆರವೇರಿಸಲಾಗುತ್ತದೆ.

ದೀಕ್ಷೆಯ ತಾತ್ವಿಕ ಅರ್ಥ

ದೀಕ್ಷಾಶಬ್ದದಲ್ಲಿ 'ದೀ' ಎಂಬುದು ಜ್ಞಾನದಾತೃತ್ವವನ್ನು, 'ಕ್ಷೀ' ಎಂಬುದು ಮಲತ್ರಯಗಳಿಂದ ಬಿಡುಗಡೆಯನ್ನು ಬೋಧಿಸುತ್ತದೆ.

ದೀಯತೇ ಲಿಂಗಸಂಬಂಧಃ ಕ್ಷೀಯತೇ ಕರ್ಮಸಂಚಯಃ।
ದೀಯತೇ ಕ್ಷೀಯತೇ ಸಾಕ್ಷಾದ್ ಯಯಾ ದೀಕ್ಷೇತಿ ಕಥ್ಯತೇ॥[೧]

ಅರ್ಥಾತ್ ಯಾವುದರಿಂದ ಲಿಂಗಸಂಬಂಧವು ಕೊಡಲ್ಪಟ್ಟು, ಅನಂತ ಜನನ-ಮರಣಗಳಿಗೆ ಕಾರಣವಾದ ಕರ್ಮಸಂಚಯ ಪಾಶದಿಂದ ಮುಕ್ತನನ್ನಾಗಿಸುವುದೇ ಅದೇ ದೀಕ್ಷೆ ಎಂದು ಸೂಕ್ಷ್ಮಾಗಮದಲ್ಲಿ ವ್ಯಾಖ್ಯಾನಿಸಲಾಗಿದೆ. ಇದನ್ನೇ ಕಾರಣಾಗಮವು –

---

೧. ಸೂ.ಆ, ಕ್ರಿ. ಪಾ, ಪಟಲ ೮, ಶ್ಲೋಕ ಸಂಖ್ಯೆ ೧೧

ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಮ್।
ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ॥[೨]

ಅರ್ಥಾತ್ ಯಾವುದರಿಂದ ಲಿಂಗಸಂಬಂಧವು ಕೊಡಲ್ಪಡುತ್ತದೆಯೋ ಮತ್ತು ಯಾವುದರಿಂದ ಆಣವ, ಮಾಯೀಯ ಮತ್ತು ಕಾರ್ಮಿಕವೆಂಬ ಮೂರು ಮಲಗಳು ನಾಶಗೊಳಿಸಲ್ಪಡುತ್ತವೆಯೋ ಅದು ದೀಕ್ಷೆ ಎಂದು ದೀಕ್ಷೆಯ ಶಬ್ದನಿಷ್ಪತ್ತಿಯನ್ನು ವ್ಯಾಖ್ಯಾನಿಸಿದೆ.

ಪರಶಿವನ ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾಶಕ್ತಿಯಿಂದ ನಿರ್ಮಾಣವಾದ ಸೃಷ್ಟಿಯ ಭಾಗವಾದ ಜೀವಾತ್ಮನಲ್ಲಿಯೂ ಈ ಶಕ್ತಿಗಳಿವೆ. ಆದರೆ ಜೀವಾತ್ಮನಲ್ಲಿಯ ಅಜ್ಞಾನದಿಂದ ಶಿವನಿಗಿಂತ ತಾನು ಭಿನ್ನನೆಂದು ಪರಿಭಾವಿಸಿ, ಲೌಕಿಕ ಸಂಗತಿಗಳಲ್ಲಿಯೇ ಮಗ್ನನಾದಾಗ ಈ ಶಕ್ತಿಗಳೇ ಮಲ ಎನಿಸಿಕೊಳ್ಳುತ್ತವೆ. ಕಾರಣ ಜೀವಾತ್ಮನನ್ನು ಆಣವ, ಮಾಯಾ, ಕಾರ್ಮಿಕ ಮಲಗಳು ಆವರಿಸಿವೆ. **ಪರಶಿವನ ಕ್ರಿಯಾಶಕ್ತಿಯ ಸಂಕೋಚವೇ ಕಾರ್ಮಿಕ ಮಲ.** ಇದು ಪಂಚಭೂತಾತ್ಮಕವಾದ, ವಿವಿಧ ಬಾಹ್ಯಕ್ರಿಯೆಗಳನ್ನು ಮಾಡುವ ಸ್ಥೂಲಶರೀರದಲ್ಲಿದ್ದು ಶುಭ-ಅಶುಭ ಕರ್ಮಮಯವಾಗಿದ್ದು ನಾನು ಅಲ್ಪಕರ್ತೃತ್ವ ಶಕ್ತಿಯನ್ನು ಹೊಂದಿದವನೆಂಬ ಮನೋಭಾವನೆಯನ್ನು ಜೀವಾತ್ಮನಲ್ಲಿ ಮೂಡಿಸುತ್ತದೆ. **ಪರಶಿವನ ಜ್ಞಾನಶಕ್ತಿಯ ಸಂಕೋಚವೇ ಮಾಯೀಯ ಮಲ.** ಇದು ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದ ತನ್ಮಾತ್ರಗಳಿಂದ ಮಾಡಲ್ಪಟ್ಟ ಮನಸ್ಸು, ಪ್ರಾಣ ಮುಂತಾದ ರೂಪದಲ್ಲಿರುವ ಸೂಕ್ಷ್ಮಶರೀರಾಂತರ್ಗತವಾಗಿದ್ದು, ಇದರ ಕಾರಣದಿಂದ ಜೀವನು ಶಿವನಿಗಿಂತ ತಾನು ಭಿನ್ನನೆಂದೂ, ಶರೀರಾದಿರೂಪನೆಂದೂ, ಅಲ್ಪಜ್ಞಾನಿ ಎಂದೂ ಭಾವಿಸಲು ತೊಡಗುತ್ತಾನೆ. **ಪರಶಿವನ ಇಚ್ಛಾಶಕ್ತಿಯ ಸಂಕೋಚವೇ ಆಣವಮಲ.** ಇದು ಪರಶಿವನ ಸಂಕುಚಿತ ರೂಪವಾದ ಕಾರಣಶರೀರದಲ್ಲಿದ್ದು, ಜೀವನಿಗೆ ತಾನು ಅಲ್ಪಶಕ್ತಿಯುಳ್ಳವ ಅಪೂರ್ಣನೆಂದು ಭಾವಿಸುವಂತೆ ಮಾಡುತ್ತದೆ. ಈ ಸ್ಥೂಲಾದಿ ಮೂರು ಶರೀರಗಳಲ್ಲಿ ನೆಲೆಸಿದ ಈ ಕಾರ್ಮಿಕಾದಿ ಮೂರು ಮಲಗಳನ್ನು ಗುರುವು ಕ್ರಿಯಾದಿ ಮೂರು ದೀಕ್ಷೆಗಳಿಂದ ನಾಶಮಾಡಿ ಇಷ್ಟಾದಿ ಮೂರು ಲಿಂಗಗಳನ್ನು ಕರುಣಿಸುವ ಸಂಸ್ಕಾರವೇ ದೀಕ್ಷೆ ಎಂದು ಶಿವಾಗಮಗಳು ದೀಕ್ಷಾಶಬ್ದದ ನಿಷ್ಪತ್ತಿಯನ್ನು ವಿವರಿಸುತ್ತವೆ.

ದೀಕ್ಷೆಯ ಮಹತ್ವ ಮತ್ತು ಅಗತ್ಯತೆ

ಸಂಸಾರಿಕ ಜೀವನದ ಆರಂಭಕ್ಕೆ ವಿವಾಹವು ಹೇಗೆ ಮುಖ್ಯವೋ ಹಾಗೆ ಲಿಂಗಾಂಗ ಸಾಮರಸ್ಯದ ಸಾಧನಮಾರ್ಗಕ್ಕೆ ದೀಕ್ಷೆಯೂ ಅತೀ ಮುಖ್ಯವಾಗಿದೆ. ವೀರಶೈವರ ಪಾರಮಾರ್ಥಿಕ ಸಂಸಾರದಲ್ಲಿ ಅಂಗವೇ ಸತಿ; ಲಿಂಗವೇ ಪತಿ; ದೀಕ್ಷೆಯೇ ವಿವಾಹ.

ವೀರಶೈವರಲ್ಲಿ ಮಗುವಿಗೆ ಇಷ್ಟಲಿಂಗವನ್ನು ತಾಯಿಯ ಗರ್ಭದಲ್ಲಿದ್ದಾಗಲೇ

---

೨. ಕಾ.ಆ, ಕ್ರಿ, ಪಾ, ಪಟಲ ೧, ಶ್ಲೋಕ ಸಂಖ್ಯೆ ೧೨

ಧಾರಣೆ ಮಾಡಿದರೂ ಸಹ ಜೀವಭಾವವಳಿದು ಶಿವಭಾವ ಸಮಾವೇಶಗೊಳ್ಳಲು ಶಿವದೀಕ್ಷೆ ಅತ್ಯಗತ್ಯ. ದೀಕ್ಷೆಯಿಲ್ಲದೆ ಶಿವಜ್ಞಾನವು ಲಭಿಸುವುದಿಲ್ಲ.[೩] 'ದೀಕ್ಷಾ ಸಂಸ್ಕೃತಿ ಸಂಶುದ್ಧಿ'ಯಿಲ್ಲದ ಜೀವಿಯ ಚಿತ್ತದಲ್ಲಿ ಲಿಂಗನಿಷ್ಠೆ ಮತ್ತು ಶಿವಜ್ಞಾನವುಂಟಾಗುವುದಿಲ್ಲ. ಅದಕ್ಕಾಗಿ ಸದ್ಗುರು ಶಿಷ್ಯನಿಗೆ ಶಿವದೀಕ್ಷೆಯನ್ನು ನೀಡುತ್ತಾನೆ. ಗುರುವಿನಿಂದ ಪಡೆಯುವ ದೀಕ್ಷೆಯಿಂದ ಜೀವ, ಶಿವರಜ್ಞಾನ ಉಂಟಾಗುತ್ತದೆ ಎಂದು ದೀಕ್ಷೆಯ ಮಹತ್ವವನ್ನು ಆಗಮಗಳು ವಿವರಿಸಿವೆ. ಇದೇ ಅಭಿಪ್ರಾಯವನ್ನು ಷಣ್ಮುಖಸ್ವಾಮಿಗಳು ಅಭಿವ್ಯಕ್ತಗೊಳಿಸುತ್ತಾ –

ಗುರುದೀಕ್ಷೆಯಿಲ್ಲದ ಲಿಂಗವು ಧರೆಯ ಕಲ್ಲೆನಿಸಿತ್ತು.
ಗುರುದೀಕ್ಷೆಯಿಲ್ಲದ ನರನು ಶರಣರ ಸಮಯಕ್ಕೆ ಸಲ್ಲ. ಅದೆಂತೆಂದೊಡೆ:
ಸುಟ್ಟ ಮಡಕೆಯಲ್ಲಿ ನೀರ ತುಂಬಿದಡೆ ದಿಟವಾಗಿ ನಿಲ್ಲುವುದಲ್ಲದೆ
ಹಸಿಯ ಮಡಕೆಯಲ್ಲಿ ನೀರ ತುಂಬಿದಡೆ ದಿಟವಾಗಿ ನಿಲ್ಲುವುದೆ ಹೇಳಾ?
ಇದು ಕಾರಣ, ಗುರು ದೀಕ್ಷೆಯಿಲ್ಲದವ ಎಷ್ಟು ಜ್ಞಾನಿಯಾದಡು
ಅವನ ಜ್ಞಾನವು ಪ್ರಯೋಜನಕ್ಕೆ ಬಾರದು.
ಅವನು ಎಷ್ಟು ಕ್ರಿಯೆಯನಾಚರಿಸ್ಸಿದಡು ಅವನ ಕ್ರಿಯೆಯು
ನಿಷ್ಫಲ ನೋಡಾ ಅಖಂಡೇಶ್ವರಾ.[೪]

ಎಂದು ದೀಕ್ಷೆಯಿಲ್ಲದವನ ಜ್ಞಾನ ಮತ್ತು ಕ್ರಿಯೆಗಳು ನಿಷ್ಫಲ ಎಂದು ಪ್ರತಿಪಾದಿಸಿದ್ದಾರೆ.

ದೀಕ್ಷಾ ಸಂಸ್ಕಾರದಲ್ಲಿ ಸ್ತ್ರೀಪುರುಷರಿಗೂ ಸಮಾನತೆ

ವರ್ಣಾಶ್ರಮಧರ್ಮದಲ್ಲಿ ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಉಪನಯನವಿಲ್ಲ. ಆದರೆ ಶಿವಾಗಮಗಳಲ್ಲಿ ದೀಕ್ಷಾ ಸಂಸ್ಕಾರ ಸ್ತ್ರೀ ಪುರುಷರಿಗೆ ಸಮಾನವಾಗಿದೆ.

ನೈವ ಸ್ತ್ರೀ ನ ಪುಮಾನೇಷ ನೈವ ಚಾಯಂ ನಪುಂಸಕಃ।
ಯದ್ಯಚ್ಛರೀರಮಾಧತ್ತೇ ತೇನ ತೇನ ಸ ಲಿಪ್ಯತೇ ॥
ನಾರೀತ್ವಮೈಹಿಕಂ ವಾಽಪಿ ಭಾರ್ಯಾತ್ವಂ ಕಲ್ಪಿತಂ ತಥಾ।
ನಿರುಂಧತಃ ಕಥಂ ತನ್ವ್ಯಾಃ ಪಂಥಾನಂ ಮೋಕ್ಷಗಾಮಿನಮ್॥
ಅದೀಕ್ಷಾಸಂಸ್ಕೃತಾ ನಾರೀ ದೀಕ್ಷಿತಸ್ಯ ನಿಜೇಶಿತುಃ।
ನ ಯೋಗ್ಯಾ ಪರಿಚರ್ಯಾಯೈ ದೀಕ್ಷಣೀಯಾ ಸತಿಃ ತತಃ ॥
ಅದೀಕ್ಷಾಸಂಸ್ಕೃತಾ ನಾರೀ ಯಂ ಯಂ ಪಾಕಂ ಕರೋತಿ ಚ ।
ಸ ಸ ನೈವಾರ್ಹತಿ ಕಿಲ ಪಾಕೋ ಮಹ್ಯಂ ನಿವೇದಿತುಮ್ ॥
ಅದೀಕ್ಷಾಸಂಸ್ಕೃತಾ ನಾರೀ ಪರಿಸ್ಪೃಶತಿ ಯಜ್ಜಲಮ್।
ಅಭಿಷೇಕಕ್ರಿಯಾದೀನಾಂ ಮಮ ನಾರ್ಹತಿ ತಜ್ಜಲಮ್॥[೫]

---

೩. ಚಂ.ಆ.ಕ್ರಿ.ಪಾ.ಪಟಲ ೧, ಶ್ಲೋಕ ಸಂಖ್ಯೆ ೪೬; ಕಾ.ಆ.ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೧೦–೧೧

೪. ವಚನ ಸಾಹಿತ್ಯ ಸಂಗ್ರಹ–ಸಂಪಾದಕರು ಭೂಸನೂರಮಠ ವ. ಸಂ. ೫೫, ಪುಟ ೧೧೧

೫. ಕಾ.ಆ, ಕ್ರಿ, ಪಾ, ಪಟಲ ೨, ಶ್ಲೋಕ ಸಂಖ್ಯೆ ೬೩–೬೪,೬೭–೬೯

ಅರ್ಥಾತ್ ಈ ಆತ್ಮವು ಸ್ತ್ರೀಯಲ್ಲ, ಪುರುಷನಲ್ಲ ಮತ್ತು ನಪುಂಸಕನಲ್ಲ. ಯಾವ ಯಾವ ಶರೀರವನ್ನು ಧರಿಸುತ್ತದೆಯೋ ಆಯಾ ಶರೀರ ಲೇಪವನ್ನು ಹೊಂದುತ್ತದೆ. ಕಾರಣ ಸ್ತ್ರೀಯಾಗುವುದು ಈ ಜನ್ಮದ ವಿಷಯವಾಗಿರುವುದರಿಂದ ಅವರೂ ಸಹ ಮೋಕ್ಷದ ಮಾರ್ಗವಾದ ದೀಕ್ಷೆಯನ್ನು ಅಗತ್ಯವಾಗಿ ಪಡೆಯಲೇಬೇಕು. ದೀಕ್ಷಾ ಸಂಸ್ಕಾರವಿಲ್ಲದ ಹೆಂಡತಿ, ದೀಕ್ಷಾ ಸಂಸ್ಕಾರವುಳ್ಳ ಗಂಡನ ಸೇವೆಗೆ ಯೋಗ್ಯಳಲ್ಲ ಅಷ್ಟೇ ಅಲ್ಲದೇ ಅವಳು ಮಾಡಿದ ಅಡಿಗೆ ನೈವೇದ್ಯಕ್ಕೆ ಸಲ್ಲದು ಎಂದು ಕಾರಣಾಗಮ ಸ್ತ್ರೀಯರಿಗೂ ದೀಕ್ಷೆಯ ಅಗತ್ಯವನ್ನು ತಿಳಿಸಿ, ಧಾರ್ಮಿಕ ಸಮಾನತೆ ಹಾಗೂ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದೆ. ಅಲ್ಲದೇ ದೀಕ್ಷೆ ಹೊಂದಿದ ಮಹಿಳೆಯರನ್ನು ಮಹೇಶ್ವರಿಯರು, ಶಿವಾಚಾರಿಣಿಯರು ಎಂದು ಗೌರವದಿಂದ ಸಂಬೋಧಿಸಬೇಕೆನ್ನುವ ವಿಚಾರವನ್ನು ವೀರಾಗಮ ಉಲ್ಲೇಖಿಸುತ್ತದೆ. ಹೀಗೆ ಸ್ತ್ರೀಸಮಾನತೆಯನ್ನು ಎತ್ತಿಹಿಡಿಯುವುದರ ಜೊತೆಗೆ ಕುಲ–ಜಾತಿ–ಲಿಂಗಗಳ ತಾರತಮ್ಯವಿಲ್ಲದೆ ಸರ್ವರೂ ಈ ಪವಿತ್ರವಾದ ದೀಕ್ಷಾಸಂಸ್ಕಾರವನ್ನು ಪಡೆಯಬಹುದೆಂಬ ಕ್ರಾಂತಿಕಾರಿ ವಿಚಾರವನ್ನು ಆಗಮಗಳಲ್ಲಿ ಮಂಡಿಸಲಾಗಿದೆ.

ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋ ಯತಿಸ್ತು ವಾ ॥
ಬ್ರಾಹ್ಮಣಃ ಕ್ಷತ್ರಿಯೋ ವಾಽಥ ವೈಶ್ಯಃ ಶೂದ್ರೋಽಂತ್ಯಜೋಽಪಿ ವಾ।
ಪುಮಾನ್ ನಾರ್ಯಥವಾ ಕ್ಲಿಬಃ ಸರ್ವೇ ಮೋಕ್ಷಾಧಿಕಾರಿಣಃ ॥[೬]

ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥನಾಗಲಿ, ಯತಿಯಾಗಲಿ, ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ, ಪುರುಷನಾಗಲಿ, ಸ್ತ್ರೀಯಾಗಲಿ ಎಲ್ಲರೂ ಮೋಕ್ಷಾಧಿಕಾರಿಗಳಾಗಿದ್ದಾರೆ. ಕಾರಣ ಸರ್ವರೂ ಮೋಕ್ಷವನ್ನು ಹೊಂದಲು ಪ್ರಥಮ ಸೋಪಾನವಾದ ಈ ದೀಕ್ಷಾಸಂಸ್ಕಾರವನ್ನು ಪಡೆಯಬಹುದು ಎಂದು ತಿಳಿಸಿದೆ.

ಹಾಗೆಂದ ಮಾತ್ರಕ್ಕೆ ಎಲ್ಲರಿಗೂ ದೀಕ್ಷೆ ನೀಡಬೇಕೆಂದರ್ಥವಲ್ಲ. ಅದನ್ನು ಪಡೆಯಲು ವ್ಯಕ್ತಿಯು ಕೆಲವು ಅರ್ಹತೆಗಳನ್ನು ಹೊಂದಿರಬೇಕೆಂದು ಆಗಮಗಳು ತಿಳಿಸುತ್ತವೆ. ಅಂಥ ಅರ್ಹತೆಗಳನ್ನು ಹೊಂದಿದವನಿಗೆ ಮಾತ್ರ ಕುಲ–ಜಾತಿ–ಲಿಂಗಗಳ ತಾರತಮ್ಯವೆನಿಸದೇ ದೀಕ್ಷೆಯನ್ನು ನೀಡಬೇಕೆಂದು ಉಲ್ಲೇಖಿಸುತ್ತವೆ.

ದೀಕ್ಷೆಯನ್ನು ಪಡೆಯಲು ಇರಬೇಕಾದ ಅರ್ಹತೆಗಳು

ದೈಹಿಕವಾಗಿ–ಮಾನಸಿಕವಾಗಿ ಶುದ್ಧನೂ, ಶೀಲಸಂಪನ್ನನೂ, ಧರ್ಮಿಷ್ಠನೂ, ಸತ್ಯವಾದಿಯು, ಜಿತೇಂದ್ರಿಯನೂ, ನಿರಹಂಕಾರಿಯೂ, ರಾಗದ್ವೇಷಾದಿಗಳಿಲ್ಲದವನೂ ಆಗಿರಬೇಕು. ಗುರುವಿನಲ್ಲಿ ಭಕ್ತಿಯುಳ್ಳವನೂ, ಕ್ರೋಧವಿಲ್ಲದವನೂ, ಗುರುವಿನಾಜ್ಞೆಯನ್ನು ಪರಿಪಾಲಿಸತಕ್ಕವನೂ, ವಿಷಯಾಸಕ್ತಿರಹಿತನೂ, ಅಷ್ಟಮದಗಳಿಲ್ಲದವನೂ ಆಗಿರಬೇಕು

೬ ಕಾ.ಆ, ಕ್ರಿ, ಪಾ, ಪಟಲ ೨, ಶ್ಲೋಕ ಸಂಖ್ಯೆ ೩೧–೩೨

ಮತ್ತು ಮುಂದೆ ನನ್ನ ಗತಿ ಏನೆಂದು ಹಗಲಿರುಳು ಚಿಂತಿಸುವವನಾಗಿರಬೇಕು. ಅರ್ಥಾತ್ ನಶ್ವರವಾದ ಈ ಲೌಕಿಕಜೀವನದ ಕ್ಷಣಿಕ ಸುಖದಿಂದ ವಿಮುಕ್ತಿಗೊಳಿಸಿ ಶಾಶ್ವತ ಪರಮಾನಂದವನ್ನೀಯುವ ಆಧ್ಯಾತ್ಮಿಕತೆಯತ್ತ ಚಿಂತಿಸುವವನಾಗಿರಬೇಕು.[೭]

ಆಸ್ತಿಕಾಯ ವಿಶುದ್ಧಾಯ ಮದ್ಭಕ್ತಾಯ ಮುಮುಕ್ಷವೇ।[೮]
ಜಿತೇಂದ್ರಿಯಾಯ ಮೃದವೇ ಸರ್ವತ್ರೇಶ್ವರಭಾವಿನೇ॥

ಆಸ್ತಿಕನಾದ, ಶುದ್ಧ ಚಾರಿತ್ರ್ಯವುಳ್ಳ, ಮೋಕ್ಷಾಕಾಂಕ್ಷಿಯಾದ, ಜಿತೇಂದ್ರಿಯನಾದ, ಮೃದು ಸ್ವಭಾವದ, ಶಾಂತಸ್ವಭಾವದ, ಗುರುವನ್ನು ಗೌರವಿಸುವ, ಎಲ್ಲೆಡೆ ಈಶ್ವರ(ಶಿವ)ನನ್ನು ಭಾವಿಸುವವನಾದ ಭಕ್ತನಿಗೆ ಮಾತ್ರ ದೀಕ್ಷೆಯನ್ನು ನೀಡಬೇಕೆಂದು ಆಗಮಗಳು ತಿಳಿಸುತ್ತವೆ.

ಇಂಥ ಗುಣಲಕ್ಷಣಗಳಿಲ್ಲದ ದುರಾಚಾರಿ ಶಿಷ್ಯನಿಗೆ ದೀಕ್ಷೆ ನೀಡುವುದನ್ನು ವಚನಗಳೂ ಸಹ ವಿರೋಧಿಸುತ್ತವೆ. ಇದನ್ನೇ ಬಸವಣ್ಣನವರು ಉದಾಹರಣೆಯೊಂದಿಗೆ ಹೀಗೆ ನಿರೂಪಿಸಿದ್ದಾರೆ –

ಸಗಣೆಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ
ಅದರ ಗಂಜಳ ಬಿಡದಣ್ಣಾ! ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ
ತೊಳೆದರೆ ನಿಚ್ಚನಿಚ್ಚಕ್ಕೆ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣಾ !
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವನೇಕೆ
ಶಿವಭಕ್ತನಹನು ಕೂಡಲಸಂಗಮದೇವಾ?[೯]

ಎಂದಿದ್ದಾರೆ. ಕಾರಣ ವಿಚಾರಿಸದೆ ಲಿಂಗವ ಕೊಟ್ಟರೆ ಅದರಿಂದಾಗುವ ಪರಿಣಾಮವನ್ನು ಆಗಮದ ಉಲ್ಲೇಖದೊಂದಿಗೆ ಚೆನ್ನಬಸವಣ್ಣನವರು ಹೀಗೆ ನಿರೂಪಿಸಿದ್ದಾರೆ –

ಮದ್ಯಪಾನಿಗೆ ಲಿಂಗಸಾಹಿತ್ಯವ ಮಾಡಿದಾತ ಹಿಂಗದೆ ನರಕದಲಾಳುತ್ತಿಪ್ಪನು.
ಮಾಂಸಾಹಾರಿಗೆ ಲಿಂಗಸಾಹಿತ್ಯವ ಮಾಡಿದಾತನ ವಂಶಕ್ಷಯವೆಂದುದು.
ಜೂಜುಗಾರಂಗೆ ಲಿಂಗಸಾಹಿತ್ಯವ ಮಾಡಿದಾತ ರೌರವನರಕಕ್ಕೆ ಹೋಹನು.
ಸೂಳೆಗೆ ಲಿಂಗಸಾಹಿತ್ಯವ ಮಾಡಿದಾತ
ಏಳೇಳು ಜನ್ಮದಲ್ಲೂ ಶ್ವಾನನ ಗರ್ಭದಲ್ಲಿ ಬರುತ್ತಿಪ್ಪನು.
ಅಂಗಹೀನಂಗೆ ಲಿಂಗಸಾಹಿತ್ಯವ ಮಾಡಿದಾತ ಲಿಂಗದ್ರೋಹಿ,
ಆತನ ಮುಖವ ನೋಡಲಾಗದು.
ಮದ್ಯಪಾನೀ ಮಾಂಸಭಕ್ಷೀ ಶಿವದೀಕ್ಷಾವಿವರ್ಜಿತಃ।

---

೭. ಸೂ.ಆ, ಕ್ರಿ. ಪಾ, ಪಟಲ ೫, ಶ್ಲೋಕ ಸಂಖ್ಯೆ ೩೧–೩೩

೮. ಪಾ.ಆ. ಪಟಲ ೨೦ ಶ್ಲೋಕ ಸಂಖ್ಯೆ ೧೬

೯. ವಚನ ಸಾಹಿತ್ಯ ಸಂಗ್ರಹ–ಸಂಪಾದಕರು ಭೂಸನೂರಮಠ– ವ.ಸಂ. ೧೧೪ ಪುಟ ೧೨೯

ದ್ಯೂತೀ ವೇಶ್ಯಾಂಗಹೀನಶ್ಚ ತದ್ಗುರೋರ್ದರ್ಶನಂ ತ್ಯಜೇತ್ ॥
ಇದು ಕಾರಣ ಕೂಡಲಚೆನ್ನಸಂಗನಲ್ಲಿ
ವಿಚಾರಿಸದೆ ಲಿಂಗವ ಕೊಟ್ಟಗುರುವಿಂಗೆ ನರಕ ತಪ್ಪದು. [೧೦]

ಎಂದಿದ್ದಾರೆ. ಅಲ್ಲದೆ ಬಸವಣ್ಣನವರು ತಮ್ಮ ಇನ್ನೊಂದು ವಚನದಲ್ಲಿ ದೃಷ್ಟಾಂತದ ಮೂಲಕ ಈ ಅಭಿಪ್ರಾಯವನ್ನು ಸಮರ್ಥಿಸುತ್ತಾರೆ.

ಕುಂಬಳಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ
ಕೊಳೆವುದಲ್ಲದೆ ಬಲುಹಾಗಬಲ್ಲುದೇ? ಅಳಿಮನದವಂಗೆ ಶಿವದೀಕ್ಷೆಯ
ಕೊಟ್ಟರೆ ಭಕ್ತಿ ಎಂತಹುದೋ ಮುನ್ನಿನಂತೆ? ಕೂಡಲಸಂಗಯ್ಯಾ
ಮನಹೀನಗೆ ಮೀಸಲ ಕಾಯ್ದಿರಿಸಿದಂತೆ! [೧೧]

ಕಾರಣ ಅಮೂಲ್ಯವಾದ ದೀಕ್ಷಾ ಸಂಸ್ಕಾರವನ್ನು ಅಳಿಮನದವನಿಗೆ, ಸದ್ಗುಣ ಹೀನನಿಗೆ ನೀಡುವುದನ್ನು ಆಗಮ ಮತ್ತು ವಚನಗಳೆರಡೂ ಖಂಡಿಸಿವೆ.

ಹೀಗೆ ದೀಕ್ಷೆಯನ್ನು ಪಡೆಯಲು ಇರಬೇಕಾದ ಅರ್ಹತೆಯನ್ನು ಚರ್ಚಿಸುವುದರ ಜೊತೆಗೆ ಮುಕ್ತಿಮಾರ್ಗಕ್ಕೆ ಸೋಪಾನವಾದ ಈ ದೀಕ್ಷಾಸಂಸ್ಕಾರವನ್ನು ನೀಡುವ ಗುರುವಿನ ಗುಣಲಕ್ಷಣಗಳು ಹೇಗಿರಬೇಕೆಂದು ಆಗಮಗಳು ವಿವರವಾಗಿ ಪ್ರಸ್ತಾಪಿಸಿವೆ.

ದೀಕ್ಷೆ ನೀಡುವ ಗುರುವಿನ ಲಕ್ಷಣಗಳು –

ಎಲ್ಲಾ ಶುಭಲಕ್ಷಣಗಳಿಂದ ಕೂಡಿದವನು, ಸರ್ವಜ್ಞನು, ಎಲ್ಲರ ಗೌರವಕ್ಕೆ ಪಾತ್ರನು, ಸದಾಚಾರದಲ್ಲಿ ನಿರತನು, ಶುದ್ಧನು, ಶಿವಭಕ್ತನು, ಚಂಚಲತೆ ಇಲ್ಲದವನು, ಸತ್ಯವನ್ನೇ ನುಡಿಯುವವನು, ಶಾಂತನು, ದ್ವೇಷ-ಅಸೂಯೆಗಳಿಲ್ಲದವನು, ಎಲ್ಲಾ ಶಾಸ್ತ್ರಗಳಲ್ಲಿ ಪರಿಣತನು, ರಹಸ್ಯವನ್ನು ತಿಳಿದವನು, ಅವ್ಯಾಕುಲನು, ದ್ರವ್ಯಲೋಭರಹಿತನು, ಆತ್ಮಜ್ಞಾನಿಯು, ವಿಷಯಾಸಕ್ತಿಯಿಲ್ಲದವನು, ವಂಚನೆಯಿಲ್ಲದವನು, ಪ್ರವಚನಪಟುವು, ಶಿವತತ್ತ್ವದ ಮರ್ಮವನ್ನು ತಿಳಿದವನು ಮತ್ತು ಆನಂದ ತುಂಬಿದ ಮನಸ್ಸುಳ್ಳವನಾಗಿರಬೇಕೆಂದು ಪಾರಮೇಶ್ವರಾಗಮವು ಗುರುವಿನ ಗುಣಲಕ್ಷಣಗಳನ್ನು ವಿವರಿಸುತ್ತದೆ.[೧೨]

ಆಗಮಗಳ ಅಭಿಪ್ರಾಯದಂತೆ ಯಾರು ಸಂವಿತ್ತಿ (ಸತ್ಯಜ್ಞಾನ) ರಹಿತನೋ ಅವನು ನಾಮಮಾತ್ರದಿಂದ ಗುರು. ಅಂತಹ ಅಜ್ಞಾನಿಯು ಅನ್ಯರನ್ನು ಉದ್ಧರಿಸಲಾರನು. ಶಿಲೆಯು ಶಿಲೆಯನ್ನು ಉದ್ಧರಿಸಬಲ್ಲುದೇ? ಕಾರಣ ಆತ್ಮಸ್ವರೂಪಜ್ಞಾನವಿಲ್ಲದವನನ್ನು ಪಶುವೆಂದು ಕರೆಯಲಾಗುತ್ತದೆ. ಒಂದು ಪಶು ಇನ್ನೊಂದು ಪಶುವಿಗೆ ಪ್ರೇರಣೆ ನೀಡಿದರೆ ಪಶುತ್ವವಂತೂ ನಿವೃತ್ತವಾಗುವುದಿಲ್ಲ. ಆದ್ದರಿಂದ ಯಾರು

---

೧೦. ಚೆ.ಬ.ವ.ಸಂ. ಸಮಗ್ರ ವಚನ ಸಂಪುಟ ೩, ವ. ಸಂ. ೧೫೫. ಪುಟ ೪೬.
೧೧. ವಚನ ಸಾಹಿತ್ಯ ಸಂಗ್ರಹ–ಸಂಪಾದಕರು ಭೂಸನೂರಮಠ–ವ.ಸಂ. ೧೧೨ ಪುಟ ೧೨೯
೧೨. ಪಾ.ಆ, ಪಟಲ ೨ ಶ್ಲೋಕ ಸಂಖ್ಯೆ ೬೩–೬೬

ಸಂವಿತ್ತಿಯ(ಶಿವಜ್ಞಾನದ) ತತ್ತ್ವವನ್ನು ತಿಳಿದಿದ್ದಾರೋ ಅವರು ಮುಕ್ತರು, ಮತ್ತು ಅವರು ಮಾತ್ರ ಬೇರೆಯವರಿಗೆ ಮುಕ್ತಿಯ ದಾರಿಯನ್ನು ತೋರುತ್ತಾರೆ.[೧೩] ಕಾರಣ ಶಿಷ್ಯನ ಅಜ್ಞಾನವನ್ನು ಪರಿಹರಿಸಿ, ಶಿವಜ್ಞಾನವನ್ನುಂಟು ಮಾಡಿಕೊಡುವ ಸದ್ಗುರುವನ್ನು ಸಾಧಕನು ಮೊದಲು ಅನುಸರಿಸಬೇಕೆಂದು ತಿಳಿಸಿವೆ.

ತಸ್ಮಾದ್ಯಸ್ಯೈವ ಸಂಪರ್ಕಾತ್ ಪ್ರಬೋಧಾನಂದಸಂಭವಃ।
ಗುರುಂ ತಮೇವ ವೃಣುಯಾನ್ನಾಪರಂ ಮತಿಮಾನ್ನರಃ॥[೧೪]

ಯಾರ ಸಂಪರ್ಕದಿಂದ ಅರಿವಿನ ಆನಂದವು ಉಂಟಾಗುವುದೋ ಅಂತಹವನನ್ನೇ ಬುದ್ಧಿಮಾನ್ ಶಿಷ್ಯನು ಗುರುವಾಗಿ ಆಯ್ದುಕೊಳ್ಳಬೇಕು ಎಂದು ಆಗಮಗಳು ಎಚ್ಚರಿಸುತ್ತವೆ.

ಇಂಥ ಗುಣಲಕ್ಷಣಗಳುಳ್ಳ ಗುರು ದೊರೆತ ನಂತರ ಶಿಷ್ಯನು(ದೀಕ್ಷಾಪೇಕ್ಷೆಯುಳ್ಳವನು) ಆ ಗುರುವಿನ ಬಳಿ ಹೋಗಿ ದೀಕ್ಷೆಗಾಗಿ ವಿನಂತಿಸಿಕೊಳ್ಳುವ ಬಗೆಯನ್ನು ಆಗಮ ಮತ್ತು ವಚನಗಳೆರಡೂ ವಿವರಿಸಿವೆ.

ಶಿಷ್ಯನು ಗುರುವಿನ ಬಳಿ ವಿನಂತಿಸಿಕೊಳ್ಳುವ ಬಗೆ –

ಅರಿವಿನ ಆನಂದವನ್ನು ಉಂಟುಮಾಡುವ ಗುರುವಿನ ಬಳಿಗೆ ಹೋಗಿ ಭಕ್ತಿಪೂರ್ವಕ ಸಾಷ್ಟಾಂಗ ನಮಸ್ಕಾರ ಮಾಡಿ, ಕೈಗಳನ್ನು ಬೊಗಸೆಯಾಗಿಸಿ ನಿಂತು, ಸ್ತುತಿಸಿ, ಅನಂತರ 'ಶಿಷ್ಯನಾದ ನನಗೆ ಇಷ್ಟಾರ್ಥ ಸಿದ್ಧಿಗಳನ್ನು ಕೊಡುವ, ವೀರಶೈವ ದೀಕ್ಷೆಯನ್ನು ಅನುಗ್ರಹಿಸು' ಎಂದು ಪ್ರಾರ್ಥಿಸಿಕೊಳ್ಳಬೇಕು.[೧೫]

ಸಂಸಾರಾಂಬುಧಿನಿರ್ಮಗ್ನಂ ಜನ್ಮಗ್ರಾಹಭಯಾಕುಲಮ್।
ಮೃತ್ಯುಪಾಶವಶಂ ದೀನಂ ಕೃಪಯಾಽನುಗೃಹಾಣ ಮಾಮ್॥[೧೬]

ಅರ್ಥಾತ್ ಸಂಸಾರ ಸಾಗರದಲ್ಲಿ ಮುಳುಗಿದ, ಜನ್ಮವೆಂಬ ಮೊಸಳೆಯ ಭಯದಿಂದ ವ್ಯಾಕುಲಗೊಂಡ, ಮೃತ್ಯುಪಾಶದಲ್ಲಿ ಬಂಧಿತನಾದ ಮತ್ತು ದೀನನಾದ ನನ್ನನ್ನು ಕೃಪೆಯಿಂದ ಅನುಗ್ರಹಿಸಬೇಕೆಂದು ಗುರುವಿನ ಬಳಿ ನಿವೇದಿಸಿ ನಮಸ್ಕರಿಸಬೇಕು ಎಂದು ಆಗಮಗಳು ತಿಳಿಸಿವೆ. ಇದೇ ಅಭಿಪ್ರಾಯ ವಚನಗಳಲ್ಲಿಯೂ ಕೂಡಾ ವ್ಯಕ್ತವಾಗಿದೆ.

ಆ ಸದ್ಗುರುಸ್ವಾಮಿಯ ಕಂಡು ದೀರ್ಘದಂಡ ನಮಸ್ಕಾರಮಂ ಮಾಡಿ
ಶ್ರೀಗುರುವೆ ಮದ್ಗುರುವೆ ಶ್ರೀ ಮಹಾಗುರುವೆ[೧೭]

---

೧೩. ಚಂ.ಆ, ಕ್ರಿಪಾ, ಪಟಲ ೨, ಶ್ಲೋಕ ಸಂಖ್ಯೆ ೫೫–೬೦

೧೪. ಚಂ.ಆ, ಕ್ರಿಪಾ, ಪಟಲ ೨, ಶ್ಲೋಕ ಸಂಖ್ಯೆ ೬೬

೧೫. ಪಾ.ಆ, ಪಟಲ ೨ ಶ್ಲೋಕ ಸಂಖ್ಯೆ ೬೮

೧೬. ಕಾ.ಆ, ಕ್ರಿಪಾ, ಪಟಲ ೧, ಶ್ಲೋಕ ಸಂಖ್ಯೆ ೩೭

೧೭. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ.ವ.ಸಂ.೮.ವಚನ.ಸಂ.೩೧೦.ಪು.ಸಂ.೧೨೭

ನಿತ್ಯನಿರಂಜನಗುರುವೆ ಶರಣು, ಶಾಂತ ಉಪಶಾಂತಗುರುವೇ ಶರಣು,
ವ್ಯೋಮಾತೀತಗುರುವೆ ಶರಣು, ನಾದ ಬಿಂದು ಕಲಾತೀತಗುರುವೆ ಶರಣು,
ನಿಮ್ಮ ಭವರೋಗವೈದ್ಯನೆಂದು ಶ್ರುತಿಗಳು ಸಾರುತಿರಲು
ನಾನು ಭವರೋಗಿ ಬಂದು ನಿಮ್ಮ ಮೊರೆಹೊಕ್ಕೆನು,
ಎನ್ನ ಭವರೋಗಂಗಳ ಕಳೆದು ನಿಮ್ಮ ಕರುಣಪ್ರಸಾದವನಿಕ್ಕಿ ಸಲಹಯ್ಯ[೧೮]
ಅಯ್ಯಾ, ಅನಂತ ಜನ್ಮದಲ್ಲಿ ಮಾಡಿದ ಪಾಪಂಗಳೆಂಬ ಪಂಕವ
ನಿಮ್ಮ ಚಿದ್ವಾಕ್ಯಪ್ರಭೆಯಲ್ಲಿ ಮುಳುಗಿಸುವುದಯ್ಯ.
ಎನ್ನ ಭವಾರಣ್ಯವ ನಿಮ್ಮ ಮಹಾಜ್ಞಾನ ಶಸ್ತ್ರದಲ್ಲಿರಿದು ಖಂಡಿಸುವುದಯ್ಯ.
ಎನ್ನ ಭವರೋಗಂಗಳೆಂಬ ಕಾಷ್ಠಂಗಳ
ನಿಮ್ಮ ಮಹಾಜ್ಞಾನಾಗ್ನಿಯಲ್ಲಿ ದಹಿಸುವುದಯ್ಯ[೧೯]
ಶ್ರೀ ಗುರುವೆ ಮಹಾದೇವ, ಮಹಾಗುರುವೆ ಸದಾಶಿವನು,
ಶ್ರೀಗುರುವೆ ಪರತತ್ವ, ಶ್ರೀಗುರುವೆ ಪರಬ್ರಹ್ಮವೆಂದರಿದು
ನಿಮ್ಮ ಮೊರೆಹೊಕ್ಕೆನು, ಎನ್ನ ಭವಸಾಗರವ ದಾಂಟಿಸಿ,
ಎನ್ನ ಕರಕಮಲಕ್ಕೆ ಇಷ್ಟಲಿಂಗವ ಕರುಣಿಸಿ ರಕ್ಷಿಸಾ ಶ್ರೀಗುರುವೆ [೨೦]

ಎಂದು ಶಿಷ್ಯನಾದವನು "ಎಲ್ಲಾ ಇಚ್ಛೆಗಳನ್ನು ನೆರವೇರಿಸುವ ವೀರಶೈವ ದೀಕ್ಷೆಯನ್ನು ಅನುಗ್ರಹಿಸು" ಎಂದು ಗುರುವಿನ ಬಳಿ ಪ್ರಾರ್ಥಿಸಿಕೊಳ್ಳಬೇಕು.

ಹೀಗೆ ಪ್ರಾರ್ಥನೆಗೈದ ಶಿಷ್ಯನಿಗೆ ಗುರುವು ದೀಕ್ಷೆಯನ್ನು ಕೊಡಲು ಮನಸ್ಸು ಮಾಡಿದರೆ, ಆ ಶಿಷ್ಯನನ್ನು ಪರೀಕ್ಷಿಸಿಯೇ ಅವನಿಗೆ ದೀಕ್ಷೆಯನ್ನು ಕೊಡಬೇಕೆಂದು ಆಗಮ ಮತ್ತು ವಚನಗಳು ಪ್ರತಿಪಾದಿಸಿವೆ.

ಶಿಷ್ಯನ ಪರೀಕ್ಷಾ ಅವಧಿ ಮತ್ತು ಪರೀಕ್ಷಾಕ್ರಮ

ಜ್ಞಾನಿಯಾದ ಗುರುವು ಶಿಷ್ಯನ ಪ್ರಾರ್ಥನೆಯನ್ನು ಅಂಗೀಕರಿಸಿ ದೀಕ್ಷೆಯನ್ನು ಕೊಡಲು ಮನಸ್ಸು ಮಾಡಿದರೆ, ಆ ಶಿಷ್ಯನನ್ನು ಆರು ವರ್ಷ ಪರೀಕ್ಷಿಸಿ ನಂತರ ಅವನಿಗೆ ದೀಕ್ಷೆಯನ್ನು ಕೊಡಬೇಕು ಎಂದು ಪಾರಮೇಶ್ವರಾಗಮವು ಮೌಲಿಕ ಸೂಚನೆಯನ್ನು ಕೊಡುತ್ತದೆ.

ವದೇದನಧಿಕಾರಾಯ ನ ಕಾರ್ಯಾಕಾಂಕ್ಷಿಣೇ ಶಿವೇ।
ನಾಪರೀಕ್ಷ್ಯಾಪಿ ಷಡ್‌ವರ್ಷಂ ನ ದತ್ತಾರ್ಥಾಭಿಮಾನಿನೇ ॥
ಜ್ಞಾನಂ ವಿರಕ್ತಿಂ ವೈದುಷ್ಯಮಾಚಾರಂ ಶಾಂತಚಿತ್ತತಾಮ್।

೧೮. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ.ವ.ಸಂ.೮.ವಚನ.ಸಂ.೩೧೧.ಪು.ಸಂ.೧೨೮
೧೯. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ.ವ.ಸಂ.೮.ವಚನ.ಸಂ.೩೧೨.ಪು.ಸಂ.೧೨೮
೨೦. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ.ವ.ಸಂ.೮.ವಚನ.ಸಂ.೩೧೩.ಪು.ಸಂ.೧೨೮

ನೈಸ್ಪೃಹ್ಯಮಪರೀಕ್ಷ್ಯಾಶು ಶಿಷ್ಯಂ ನಾನು ಗೃಹೇದ್ ಗುರುಃ ॥
ದೀಕ್ಷಾಭೇದವಿಧಾನಂ ತನ್ನೋಪದೇಶ್ಯಂ ವಿಶಾರದೈಃ।[೨೧]

ಅನರ್ಹನಾದವನಿಗೆ, ತನ್ನ ಕಾರ್ಯವನ್ನು ಮಾಡಿಕೊಳ್ಳಲು ಅಪೇಕ್ಷೆಯುಳ್ಳವನಾದ ಸ್ವಾರ್ಥಿಗೆ, ಮಾಡಿದ ದಾನವನ್ನು ತಾನೇ ಪ್ರಚಾರಮಾಡುವ ವ್ಯಕ್ತಿಗೆ ಆರು ವರ್ಷಗಳ ಕಾಲ ಪರೀಕ್ಷಿಸದೆ ಈ ವಿಷಯವನ್ನು ಹೇಳಬಾರದು. ಜ್ಞಾನ, ವಿರಕ್ತಿ, ವೈದುಷ್ಯ, ಆಚಾರ, ಶಾಂತಚಿತ್ತ, ನಿಷ್ಪೃಹತೆ ಇವುಗಳನ್ನು ಪರೀಕ್ಷಿಸದೆ ಕೂಡಲೇ ಗುರುವು ಶಿಷ್ಯನನ್ನು ಸ್ವೀಕರಿಸಬಾರದು. ವಿದ್ವಾಂಸನಾದ ಗುರುವು ದೀಕ್ಷಾಭೇದ ವಿಧಾನಗಳನ್ನು ಅವರಿಗೆ ಉಪದೇಶಿಸಬಾರದು ಎಂದು ತಿಳಿಸಿದೆ.

ಸೂಕ್ಷ್ಮಾಗಮದಲ್ಲಿ ಶಿಷ್ಯನ ಪರೀಕ್ಷೆ ಅವಧಿಯನ್ನು ತಿಳಿಸದೇ ಸೂಚ್ಯವಾಗಿ ತಿಳಿಸಿದೆ. ಆದರೆ ಚಂದ್ರಜ್ಞಾನಾಗಮದಲ್ಲಿ ಚತುರ್ವರ್ಣದವರಿಗೆ ಪ್ರತ್ಯೇಕ ಅವಧಿಯನ್ನು ಗೊತ್ತು ಮಾಡಿದೆ.

ಗುರುಸ್ತು ಸ್ವಾಶ್ರಿತಂ ಶಿಷ್ಯಂ ಪರೀಕ್ಷೇದ್ ವರ್ಷಮೇಕಕಮ್।
ಬ್ರಾಹ್ಮಣಂ ಕ್ಷತ್ರಿಯಂ ವೈಶ್ಯಂ ದ್ವಿತ್ರಿವರ್ಷಕಮೇವ ವಾ॥
ಪ್ರಾಣದ್ರವ್ಯಪ್ರದಾನಾದ್ಯೈರಾದೇಶೈಶ್ಚ ಸಮಾಸಮೈಃ।
ಉತ್ತಮಾಂಶ್ಚಾಧಮೇ ಕೃತ್ವಾ ನೀಚಾನುತ್ತಮಕರ್ಮಣಿ॥
ಆಕೃಷ್ಟಾಸ್ತಾಡಿತಾ ವಾ ಯೇ ವಿಷಾದಂ ನೈವ ಯಾಂತ್ಯಪಿ।
ತೇ ಯೋಗ್ಯಾ ಸತತಂ ಶುದ್ಧಾಃ ಶಿವಸಂಸ್ಕಾರಕರ್ಮಣಿ॥
ಅಹಿಂಸಕಾ ದಯಾವಂತೋ ನಿತ್ಯಮುದ್ಯಕ್ತಚೇತಸಃ॥
ಅಮಾನಿನೋ ಬುದ್ಧಿಮಂತಸ್ತ್ಯಕ್ತಸ್ಪರ್ಧಾಃ ಪ್ರಿಯಂವದಾಃ॥
ಋಜವೋ ಮೃದವಃ ಸ್ವಚ್ಛಾ ವಿನೀತಾಃ ಸ್ಥಿರಚೇತಸಃ।
ಶೌಚಾಚಾರ ಸಮೋಪೇತಾಃ ಶಿವಭಕ್ತಾ ದ್ವಿಜಾತಯಃ॥
ಏವಂ ವೃತ್ತಸಮೋಪೇತಾ ವಾಙ್ಮನಃಕಾಯಕರ್ಮಭಿಃ।
ಶೋಧ್ಯಾ ಬೋಧ್ಯಾ ಯಥಾನ್ಯಾಯ್ಯಮಿತಿ ಶಾಸ್ತ್ರವಿನಿಶ್ಚಯಃ॥[೨೨]

ಗುರುವು ತನ್ನನ್ನು ಆಶ್ರಯಿಸಿದ ಶಿಷ್ಯನನ್ನು ಒಂದು ವರ್ಷಕಾಲ ಪರೀಕ್ಷಿಸಬೇಕು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರನ್ನು ಎರಡು ಮೂರು ವರ್ಷಕಾಲ ಪರೀಕ್ಷಿಸಬೇಕು ಎಂದು ತಿಳಿಸಿದೆ. ಆ ಶಿಷ್ಯನಿಗೆ ಪ್ರಾಣ, ದ್ರವ್ಯ ಮುಂತಾದವನ್ನು ಕೊಡುವಂತೆ ತಿರುಗಾಮುರುಗಾ ಆಜ್ಞೆಗಳನ್ನು ಕೊಡುತ್ತಾ ಉತ್ತಮರನ್ನು ಅಧಮ ಕಾರ್ಯದಲ್ಲಿ ಅಧಮರನ್ನು ಉತ್ತಮ ಕಾರ್ಯದಲ್ಲಿ ತೊಡಗುವಂತೆ ಮಾಡಬೇಕು. ಎಳೆದಾಡುವುದು, ತಾಡನೆ ಮುಂತಾದವುಗಳಿಗೆ ಗುರಿಯಾದರೂ ಕೂಡ ಯಾರು ವಿಷಾದವನ್ನು

೨೧. ಪಾ.ಆ, ಪಟಲ ೨೦ ಶ್ಲೋಕ ಸಂಖ್ಯೆ ೧೩–೧೪
೨೨. ಚಂ. ಆ, ಕ್ರಿ. ಪಾ, ಪಟಲ ೨, ಶ್ಲೋಕ ಸಂಖ್ಯೆ ೭೬–೮೧

ಹೊಂದುವುದಿಲ್ಲವೋ ಅಂಥವರು ಸತತವಾಗಿ ಶುದ್ಧರು ಮತ್ತು ಶಿವಸಂಸ್ಕಾರದ ಕರ್ಮಗಳಿಗೆ ಯೋಗ್ಯರು. ಹಿಂಸೆ ಮಾಡದವರು, ದಯಾವಂತರು, ನಿತ್ಯವೂ ಕಾರ್ಯಕ್ಕೆ ಸಿದ್ಧವಾದ ಮನಸ್ಸುಳ್ಳವರು, ದುರಭಿಮಾನವಿಲ್ಲದವರು, ಬುದ್ಧಿವಂತರು, ಸ್ಪರ್ಧೆಯನ್ನು ಬಿಟ್ಟವರು, ಪ್ರಿಯವಾಗಿ ಮಾತನಾಡುವವರು, ನೇರ ನಡೆಯುವವರು, ಮೃದು ಸ್ವಭಾವದವರು, ಸ್ವಚ್ಛರು, ವಿನಯಶಾಲಿಗಳು, ಸ್ಥಿರವಾದ ಮನಸ್ಸುಳ್ಳವರು, ಶೌಚ ಮತ್ತು ಆಚಾರಗಳನ್ನು ನಡೆಸುವವರು, ಶಿವಭಕ್ತರಾದ ದ್ವಿಜರು, ನಡತೆಯಿಂದ ಭೂಷಿತರಾದವರು ಶಿಷ್ಯರು. ಅವರನ್ನು ವಾಚಿಕ, ಮಾನಸಿಕ, ಶಾರೀರಿಕ ಕರ್ಮಗಳಲ್ಲಿ ಯೋಜಿಸುವ ಮೂಲಕ ಶೋಧಿಸಬೇಕು ಮತ್ತು ನ್ಯಾಯ ಪೂರ್ವಕವಾಗಿ ಅವರಿಗೆ ಬೋಧಿಸಬೇಕು. ಇದು ಶಾಸ್ತ್ರದ ನಿರ್ಣಯ ಎಂದು ಆಗಮಗಳು ತಿಳಿಸುತ್ತವೆ. ಇದೇ ಅಭಿಪ್ರಾಯ ವಚನಗಳಲ್ಲಿಯೂ ಕೂಡಾ ವ್ಯಕ್ತವಾಗಿದೆ.

> ಶ್ರೀಗುರುವಾದಾತನು ಸಕಲಾಗಮಂಗಳ ಹೃದಯವನರಿತು ತನ್ನ ತಾನರಿದು
> ಸರ್ವಾಚಾರ ತನ್ನಲ್ಲಿ ನೆಲೆಗೊಂಡು ಉಪದೇಶವ ಮಾಡುವ ಕ್ರಮವೆಂತೆಂದಡೆ:
> ಬ್ರಾಹ್ಮಣನ ಮೂರು ವರುಷ ನೋಡಬೇಕು, ಕ್ಷತ್ರಿಯನ ಆರು ವರುಷ ನೋಡಬೇಕು,
> ವೈಶ್ಯನ ಒಂಬತ್ತು ವರುಷ ನೋಡಬೇಕು,
> ಶೂದ್ರನ ಹನ್ನೆರಡು ವರುಷ ನೋಡಬೇಕು,
> ನೋಡಿದಲ್ಲದೆ ದೀಕ್ಷೆ ಕೊಡಬಾರದು
> **ವೀರಾಗಮೇ.** "ಬ್ರಾಹ್ಮಣಂ ತ್ರೀಣಿ ವರ್ಷಾಣಿ ಷಡಬ್ದಂ ಕ್ಷತ್ರಿಯಂ ತಥಾ।
> ವೈಶ್ಯಂ ನವಾಬ್ದ ಮಾಖ್ಯಾತಂ ಶೂದ್ರಂ ದ್ವಾದಶವರ್ಷಕಂ॥ ಈ ಕ್ರಮವನರಿಯದೆ,
> ಉಪಾಧಿವಿಡಿದು ಉಪದೇಶವ ಮಾಡುವಾತ ಗುರುವಲ್ಲ,
> ಉಪಾಧಿವಿಡಿದು ಉಪದೇಶವ ಮಾಡಿಸಿಕೊಂಬಾತ ಶಿಷ್ಯನಲ್ಲ.
> ಇವರಿಬ್ಬರ ನಿಲವು ಒಂದೆ: ಠಕ್ಕನ ಮನೆಗೆ ಠಕ್ಕ ಬಿದ್ದಿನ ಬಂದಂತೆ
> ಈ ಗುರುಶಿಷ್ಯರಿಬ್ಬರನು ರೌರವನರಕದಲ್ಲಿಕ್ಕುವ ಕೂಡಲಚೆನ್ನಸಂಗಯ್ಯ। [೨೩]

ಎಂದು ಚೆನ್ನಬಸವಣ್ಣನವರು ವೀರಾಗಮದ ಉಕ್ತಿಯನ್ನು ತಮ್ಮ ವಚನದಲ್ಲಿ ಉಲ್ಲೇಖಿಸಿ, ಈ ವಿಚಾರವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾರೆ. ಮೇಲಿನ ಈ ಆಗಮೋಕ್ತಿಯನ್ನು ಗಮನಿಸಿದಾಗ ಇದು ವರ್ಣಭೇದ ಮಾಡಿದಂತೆ ಕಂಡುಬಂದರೂ ಸಹ ಬ್ರಾಹ್ಮಣರು ಶಾಸ್ತ್ರಾಧ್ಯಯನ ಮಾಡುವ ಸಂಸ್ಕಾರಯುತ ಕುಟುಂಬದಿಂದ ಬಂದಿರುವದರಿಂದ ಅವರಿಗೆ ಪರೀಕ್ಷಾ ಅವಧಿಯನ್ನು ಕಡಿಮೆಗೊಳಿಸಿರಬಹುದು. ಅದೇನೇ ಇರಲಿ ವಚನಕಾರರೂ ಸಹ ಈ ವಿಚಾರಕ್ಕೆ ತಮ್ಮ ಸಹಮತವನ್ನಿತ್ತಿರುವರು. ಆದರೆ ಇಲ್ಲಿ ಗಮನಿಸಬೇಕಾದ ಒಂದಂಶವೇನೆಂದರೆ ಶಿಷ್ಯನು ಯಾವುದೇ ವರ್ಣಕ್ಕೆ ಸೇರಿರಲಿ, ಸದ್ಗುರುವು ಆತನನ್ನು ಅನೇಕ ವಿಧಾನಗಳಿಂದ

---

೨೩. ಚೆ.ಬ.ವ.ಸಂ. ಸಮಗ್ರ ವಚನ ಸಂಪುಟ ೩, ವ. ಸಂ. ೧೬೨೦. ಪುಟ ೪೫೦.

ಕುಲಂಕುಶವಾಗಿ ಪರೀಕ್ಷಿಸದೇ ದೀಕ್ಷೆಯನ್ನು ನೀಡುವಂತಿಲ್ಲವೆಂದು ಆಗಮಗಳು ಮತ್ತು ವಚನಗಳು ಆದೇಶಿಸುತ್ತವೆ. ಕಾರಣ ಯಾವುದೇ ವರ್ಣ, ಆಶ್ರಮ, ಲಿಂಗ ಭೇದದ ಹಂಗಿಲ್ಲದೆ ಸಾತ್ವಿಕ ಜೀವನಕ್ಕೆ ಸಂಪೂರ್ಣವಾಗಿ ಪರಿವರ್ತಿತರಾದವರೆಲ್ಲರೂ ದೀಕ್ಷೆಯನ್ನು ಪಡೆಯುವುದಕ್ಕೆ ಅಧಿಕಾರಿಯಾಗುತ್ತಾರೆ.

ದೀಕ್ಷೆ ಹೊಂದಿದವವರೆಲ್ಲ ಸಮಾನರು ಅವರಿಗೆ ಜಾತಿಭೇದವಿಲ್ಲ

ಅಗ್ನಿಯು ಹೇಗೆ ಅನೇಕ ವಿಧವಾದ ಕಟ್ಟಿಗೆಗಳನ್ನು ಸುಟ್ಟು ಬೆಂಕಿಯನ್ನು ಮಾಡುತ್ತದೆಯೋ ಅಂತೆಯೇ ದೀಕ್ಷೆಯಲ್ಲಿ ಗುರುವಿನಿಂದ ಅನುಗ್ರಹಿಸಲ್ಪಡುವ ಜ್ಞಾನಜ್ಯೋತಿರೂಪವಾದ ಪರಶಿವಲಿಂಗದ ಮೂಲಕ ವಿವಿಧ ವರ್ಗದ ಮಾನವರು ಶಿವತ್ವವನ್ನು ಹೊಂದುವರು. ಕಾರಣ ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯ-ಶೂದ್ರ ಯಾರೇ ಆಗಲಿ ಲಿಂಗಧಾರಣೆಯಿಂದ ಅವರೆಲ್ಲ ಶಿವಸ್ವರೂಪರು. ಅಲ್ಲಿ ಜಾತಿಭೇದವಿಲ್ಲ. ಲಿಂಗಧಾರಿಯಾದರೆ ಸಾಕು. ಪೂರ್ವಾಶ್ರಮವಿಲ್ಲ, ಜಾತಿ ಭೇದದ ಸೋಂಕಿಲ್ಲ. ಎಲ್ಲರೂ ಶಿವನಿಗೆ ಸಮಾನರು ಎನ್ನುತ್ತದೆ ಪಾರಮೇಶ್ವರಾಗಮ.[೨೪]

ಇದೇ ಅಭಿಪ್ರಾಯ ವಚನಗಳಲ್ಲಿಯೂ ಕೂಡಾ ವ್ಯಕ್ತವಾಗಿದೆ. ಆಗಮದ ಉಲ್ಲೇಖದೊಂದಿಗೆ ಚೆನ್ನಬಸವಣ್ಣನವರು ತಮ್ಮ ವಚನದಲ್ಲಿ –

ಗುರುಹಸ್ತದೊಳು ಪುನರ್ಜಾತನಾದ ಭಕ್ತನಲ್ಲಿ
ಆವ ಜನ್ಮಜಾತಿಯ ಬೆದಕಲಪ್ಪುದು?
ಅವೆಲ್ಲ ಪ್ರಾಕೃತರಿಗಲ್ಲದೆ ಅಪ್ರಾಕೃತರಿಗುಂಟೆ ಹೇಳಾ?
"ಅಪ್ರಾಕೃತಸ್ಯ ಭಕ್ತಸ್ಯ ಗುರುಹಸ್ತಾಮಲಾಂಬುಜಾತ್॥
ಪುನರ್ಜಾತಸ್ಯಾತ್ಮಜನ್ಮ ಜಾತ್ಯಾದೀನ್ನ ಚ ಕಲ್ಪಯೇತ್।"
ಎಂಬ ಆಗಮವನರಿಯದೆ,
ನಿಮ್ಮ ಶರಣರಲ್ಲಿ ಜಾತಿಯ ಹುಡುಕುವ
ಕಡುಪಾತಕಿಗಳ ಎನ್ನತ್ತ ತೋರದಿರಯ್ಯಾ
ಕೂಡಲಚೆನ್ನಸಂಗಮದೇವಾ.[೨೫]

ಎಂದಿದ್ದಾರೆ. ಇದೇ ಅಭಿಪ್ರಾಯವನ್ನು ಬಸವಣ್ಣನವರು ತಮ್ಮ ವಚನದಲ್ಲಿ –

ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು
ಶಿವನೆಂದು ವಂದಿಸಿ, ಪೂಜಿಸಿ, ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ.
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ ಪಂಚಮಹಾಪಾತಕ
ನರಕ ಕಾಣಾ, ಕೂಡಲಸಂಗಮದೇವಾ[೨೬]

೨೪. ಪಾ.ಆ. ಪಟಲ ೨೦ ಶ್ಲೋಕ ಸಂಖ್ಯೆ ೪೧
೨೫. ಚೆ.ಬ.ವ.ಸಂ. ಸಮಗ್ರ ವಚನ ಸಂಪುಟ ೩, ವ. ಸಂ. ೧೨೦೧. ಪುಟ ೪೧೫
೨೬. ಬ.ವ.ಸಂ. ಸಮಗ್ರ ವಚನ ಸಂಪುಟ ೧–ವ.ಸಂ. ೧೨೧೫. ಪುಟ ೩೩೪

ಎಂದಿದ್ದಾರೆ. ಕಾರಣ ದೀಕ್ಷೆಯಿಂದ ಬ್ರಾಹ್ಮಣರು ತಮ್ಮ ಬ್ರಾಹ್ಮಣತ್ವವನ್ನು ಹಾಗೂ ಶೂದ್ರರು ತಮ್ಮ ಶೂದ್ರತ್ವವನ್ನು ಕಳೆದುಕೊಂಡು ಪರಮ ಪವಿತ್ರವಾದ ಶಿವತ್ತ್ವವನ್ನು ಹೊಂದುವರು. ಹೇಗೆ ಬೆಳ್ಳಿ, ತಾಮ್ರ ಮೊದಲಾದ ಲೋಹಗಳು, ತಜ್ಞನಿಂದ ತಯಾರಿಸಲ್ಪಟ್ಟ ವಿಶೇಷ ರಸ ಸಂಪರ್ಕದಿಂದ ಹೇಗೆ ಸುವರ್ಣವಾಗಿ ಪರಿವರ್ತನಗೊಳ್ಳುತ್ತವೆಯೋ ಅಂತೆಯೇ ಪರಮಗುರುವಿನಿಂದ ಉಪದೇಶಿಸಲ್ಪಡುವ ಶಿವಜ್ಞಾನವೆಂಬ ರಸದಿಂದ ವಿವಿಧವರ್ಗದ ಮಾನವರು ಕುಲ-ಜಾತಿ-ಅಂತಸ್ತು-ಅಧಿಕಾರಗಳ ತಾರತಮ್ಯವಿಲ್ಲದೇ ಶಿವಚೈತನ್ಯವನ್ನು ಹೊಂದುವರು.

ಆದರೆ ಹೀನಕುಲದ ಶಿಷ್ಯನಿಗೆ ಅನುಗ್ರಹಮಾಡಿ ದೀಕ್ಷಾ ಸಂಸ್ಕಾರವನ್ನು ನೀಡಿದರೂ ಸಹ ಅಂಥ ಶಿಷ್ಯನಲ್ಲಿ ಮೇಲು ಕೀಳೆಂದು ತಾರತಮ್ಯ ಉಂಟುಮಾಡುವ ಗುರುಗಳನ್ನು ಅಂಬಿಗರ ಚೌಡಯ್ಯ ತರಾಟೆಗೆ ತೆಗೆದುಕೊಂಡದ್ದನ್ನು ಆತನ ವಚನದಲ್ಲಿ ಕಾಣಬಹುದಾಗಿದೆ.

'ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ
ತಿರುಗಿ ಅವನ ಮನೆಯಲ್ಲಿ ಉಣಬಾರದೆಂದು
ಅಕ್ಕಿ ಕಣಕವ ಕೊಂಡುಹೋಗುವ ಗುರುವಿನ ಕಂಡರೆ
ಕೆಡವಿ ಹಾಕಿ ಮೂಗನೆ ಕೊಯ್ದು ಇಟ್ಟಂಗಿಯ
ಕಲ್ಲಿಲೆ ತಿಕ್ಕಿ ಸಾಸಿವೆಯ ಹಿಟ್ಟನೆ ತಳೆದು
ಮೇಲೆ ಲಿಂಬಿಯ ಹುಳಿಯನೆ ಹಿಂಡಿ ಪಡುವ ಗಾಳಿಗೆ
ಹಿಡಿಯೆಂದಾತ ನಮ್ಮ ಅಂಬಿಗರ ಚೌಡಯ್ಯ'[೨೭]

ಎಂದು ಉಗ್ರವಾಗಿ ಖಂಡಿಸಿದ್ದಾರೆ. ಇದೇ ಅಭಿಪ್ರಾಯವನ್ನು ಚನ್ನಬಸವಣ್ಣನವರು ತಮ್ಮ ವಚನದಲ್ಲಿ -

ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ, ತನ್ನ
ಪ್ರಾಣಲಿಂಗವ ಕೊಟ್ಟು, ಕರ್ಣದಲ್ಲಿ ಮಂತ್ರವ ನಿಕ್ಷೇಪಿಸಿ, ಬಳಿಕ
ಅವ ಬಂದು ಶಿಷ್ಯನ ಮನೆಯ ಹೊಗಲೊಲ್ಲದೆ,
ಅಕ್ಕಿ ಪಡಿಯ ತರಿಸಿಕೊಂಡು, ಹೊಸ ಬಳಕೆ ಎಂದು
ಮಾಡಿಸಿಕೊಂಡುಂಬವಂಗೇ ನೆಂಬೆನಯ್ಯಾ?
ಅವನ ಧನಕ್ಕೆ ತಂದೆಯಾದನಲ್ಲದೆ ಅವನಿಗೆ ತಂದೆಯಾದುದಿಲ್ಲ.
ಇದು ಕಾರಣವಾಗಿ ಕೂಡಲ ಚೆನ್ನಸಂಗಯ್ಯ,
ಲಿಂಗವ ಮಾರಿಕೊಂಡುಂಬ ಭಂಗಗಾರರ ಕಂಡು ನಾಚಿ ಬೆರಗಾದೆನಯ್ಯಾ![೨೮]

ಎಂದಿದ್ದಾರೆ. ಕಾರಣ ದೀಕ್ಷೆಯನ್ನು ಹೊಂದಿದೊಡನೆಯೇ ಹಿಂದಿನ ಜಾತಿ ಭೇದಗಳೆಲ್ಲ ನಶಿಸಿ ಎಲ್ಲರೂ ಶಿವ ಸ್ವರೂಪರಾಗುವರು ಎಂಬ ಆಗಮದ ಅಭಿಪ್ರಾಯ ವಚನಗಳಲ್ಲೂ ಪ್ರತಿಪಾದನೆಗೊಂಡಿದೆ. ಇಂಥ ಸರ್ವಸಮಾನತೆಯನ್ನುಂಟು ಮಾಡಿ ಅಂಗವನ್ನು

೨೭. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವಚನ ಸಂಪುಟ ೧- ವ.ಸಂ.೧೨೦, ಪುಟ ೩೯
೨೮. ವಚನಸಾಹಿತ್ಯಸಂಗ್ರಹ, ಸಂಪಾದಕರು- ಭೂಸನೂರಮಠ, ವಚನ.ಸಂ ೧೦೬. ಪುಟ ೧೨೬.

ಲಿಂಗವನ್ನಾಗಿಸುವ ದೀಕ್ಷಾ ಸಂಸ್ಕಾರದ ಸಮಗ್ರ ಚಿತ್ರಣವು ಶೈವಾಗಮಗಳಲ್ಲಿ ವಿಶೇಷವಾಗಿ ಆಗಮೋತ್ತರ ಭಾಗದಲ್ಲಿ ದೊರೆಯುತ್ತದೆ.

ದೀಕ್ಷೆಯ ಪ್ರಕಾರಗಳು

ಶೈವಾಗಮೋತ್ತರ ಸಿದ್ಧಾಂತ ಪರಂಪರೆಯಂತೆ ವೀರಶೈವ ದೀಕ್ಷಾಸಂಸ್ಕಾರವು ಮೂರು ವಿಧವಾದ ದೀಕ್ಷೆಯನ್ನು ಒಳಗೊಂಡಿದೆ.ಅವು :

೧. ಕ್ರಿಯಾದೀಕ್ಷೆ
೨. ವೇಧಾ ದೀಕ್ಷೆ
೩. ಮನು (ಮಂತ್ರ) ದೀಕ್ಷೆ

ಗುರುವು ಕ್ರಿಯಾದೀಕ್ಷೆ, ವೇಧಾದೀಕ್ಷೆ ಮತ್ತು ಮಂತ್ರದೀಕ್ಷೆಗಳೆಂಬ ಮೂರು ದೀಕ್ಷೆಗಳಿಂದ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬ ಮೂರು ಶರೀರಗಳಲ್ಲಿರುವ ಕಾರ್ಮಿಕ ಮಲ, ಮಾಯೀಯ ಮಲ ಮತ್ತು ಆಣವಮಲ ಎಂಬ ಮೂರು ಮಲಗಳನ್ನು ದಹಿಸಿ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗ ಎಂಬ ಮೂರು ಲಿಂಗಗಳನ್ನು ಶಿಷ್ಯನಿಗೆ ಕರುಣಿಸುತ್ತಾನೆ.

೧. ಕ್ರಿಯಾದೀಕ್ಷೆಯಲ್ಲಿ–ಸ್ಥೂಲತನುವಿನ ಕಾರ್ಮಿಕ ಮಲವಳಿದು ಇಷ್ಟಲಿಂಗ ಸಂಬಂಧ
೨. ವೇಧಾದೀಕ್ಷೆಯಲ್ಲಿ–ಕಾರಣ ತನುವಿನ ಆಣವ ಮಲವಳಿದು ಭಾವಲಿಂಗ ಸಂಬಂಧ
೩. ಮಂತ್ರದೀಕ್ಷೆಯಲ್ಲಿ–ಸೂಕ್ಮತನುವಿನ ಮಾಯೀಯ ಮಲವಳಿದು ಪ್ರಾಣಲಿಂಗ ಸಂಬಂಧ

ಈ ತ್ರಿವಿಧ ದೀಕ್ಷೆಗಳ ವಿವರಣೆಯನ್ನು ತೋಂಟದ ಸಿದ್ಧಲಿಂಗಯತಿಗಳು ಹೀಗೆ ನಿರೂಪಿಸಿದ್ದಾರೆ "ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆ ಎಂಬ ದೀಕ್ಷಾತ್ರಯಂಗಳಿಂದ ತನುತ್ರಯಂಗಳ ಪೂರ್ವಾಶ್ರಯಂಗಳ ಕಳೆದು ಲಿಂಗತ್ರಯಂಗಳ ಸಂಬಂಧಿಸಿದನೆಂತೆಂದೊಡೆ, ವೇಧಾದೀಕ್ಷೆ ಎಂದು ಶ್ರೀಗುರು ತನ್ನ ಹಸ್ತವ ಶಿಷ್ಯನ ಮಸ್ತಕದಲ್ಲಿ ಸಂಯೋಗಮಾಡಿದನು. ಮಂತ್ರದೀಕ್ಷೆ ಎಂದು ಶ್ರೀಗುರು ಪ್ರಣವ ಪಂಚಾಕ್ಷರಿ ಮಂತ್ರವ ಕರ್ಣದಲ್ಲಿ ಉಪದೇಶಿಸಿದನು. ಕ್ರಿಯಾದೀಕ್ಷೆ ಎಂದು ಆ ಮಂತ್ರ ಸ್ವರೂಪವನೇ ಇಷ್ಟಲಿಂಗ ಸ್ವರೂಪವನೆ ಮಾಡಿ, ಕರಸ್ಥಲದಲ್ಲಿ ಸಂಬಂಧಿಸಿದನು. ಇದು ಕಾರಣ ವೇಧಾದೀಕ್ಷೆಯಿಂದ ಕಾರಣ ತನುವಿನ ಪೂರ್ವಾಶ್ರಯವ ಕಳೆದು ಭಾವಲಿಂಗ ಸಂಬಂಧವಾಯಿತು. ಮಂತ್ರದೀಕ್ಷೆಯಿಂದ ಸೂಕ್ಷ್ಮ ತನುವಿನ ಪೂರ್ವಾಶ್ರಯವಳಿದು ಪ್ರಾಣಲಿಂಗ ಸಂಬಂಧವಾಯಿತು. ಕ್ರಿಯಾದೀಕ್ಷೆಯಿಂದ ಸ್ಥೂಲತನುವಿನ ಪೂರ್ವಾಶ್ರಯ ವಳಿದು ಇಷ್ಟಲಿಂಗ ಸಂಬಂಧವಾಯಿತು. ಅಂಗತ್ರಯದಲ್ಲಿ ಲಿಂಗತ್ರಯ ಧರಿಸಿದೆನಯ್ಯ, ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ."[೨೯] ಎಂದು ತ್ರಿವಿಧ ದೀಕ್ಷೆಗಳ ಚಿತ್ರಣವನ್ನು ನೀಡಿದ್ದಾರೆ.

---

೨೯. ವಚನ ಶಾಸ್ತ್ರಸಾರ –ಫ.ಗು. ಹಳಕಟ್ಟಿ–(ಸನ್ ೧೯೨೩) – ವಚನ.ಸಂ.೨, ಪುಟ ೪೭

ಈ ತ್ರಿವಿಧ ದೀಕ್ಷೆಗಳಲ್ಲಿ ಒಂದೊಂದೂ ಏಳೇಳು ದೀಕ್ಷೆಗಳನ್ನು ಒಳಗೊಂಡಿವೆ. ತ್ರಿವಿಧ ದೀಕ್ಷೆಯ ಅಂಗವಾಗಿ ಬರುವ ಇಪ್ಪತ್ತೊಂದು ದೀಕ್ಷೆಗಳಲ್ಲಿ ಭಕ್ತಿ-ಜ್ಞಾನ-ಕ್ರಿಯಾಸಮನ್ವಯವನ್ನು ಸ್ಪಷ್ಟವಾಗಿ ಕಾಣಬಹುದು. ಈ ಇಪ್ಪತ್ತೊಂದು ದೀಕ್ಷೆಗಳು ಈ ರೀತಿಯಾಗಿವೆ.

ಆಜ್ಞೋಪಮಾ ಚ ಕಲಶೈರಭಿಷೇಕಸ್ತತಃ ಪರಮ್।
ಸ್ವಸ್ತಿಕಾರೋಹಣಂ ಭೂತಿಪಟ್ಟಮಾಯತ್ತಮೇವ ಚ ॥
ಸ್ವಾಯತ್ತಮಿತಿ ಸಪ್ತೈತಾಃ ಕ್ರಿಯಾದೀಕ್ಷಾಂತರಾ ಮತಾಃ ॥
ಸಮಯಶ್ಚಾಪ್ಯಸಂಸಾರಸ್ತತ್ತ್ವಂ ಜ್ಞಾನಮನುಗ್ರಹಃ।
ಅಧ್ಯಾತ್ಮಶುದ್ಧವಿದ್ಯೇ ಚ ಸಪ್ತ ವೇಧಾಂತರಾಃ ಸ್ಮೃತಾಃ
ದೃಢವ್ರತಮಹಿಂಸಾ ಚ ತಸ್ಮೈ ಪಂಚೇಂದ್ರಿಯಾರ್ಪಣಮ್।
ಏಕಾಗ್ರಚಿತ್ತಸಂಪತ್ತಿಃ ಪರತತ್ತ್ವೇ ಸದಾ ರತಿಃ ॥
ಲಿಂಗೇ ನಿಜಮನೋಲೀನಂ ಸದ್ಯೋಮುಕ್ತಿಶ್ಚ ಶಾಶ್ವತೀ ।
ಏವಂ ಸಪ್ತವಿಧಾ ದೀಕ್ಷಾ ಮನುದೀಕ್ಷಾಂತರಾಃ ಸ್ಮೃತಾಃ ॥ [೩೦]

ಆಜ್ಞಾದೀಕ್ಷೆ, ಉಪಮಾದೀಕ್ಷೆ, ಕಲಶಾಭಿಷೇಕ ದೀಕ್ಷೆ, ಸ್ವಸ್ತಿಕಾರೋಹಣ ದೀಕ್ಷೆ, ಭೂತಿಪಟ್ಟ ದೀಕ್ಷೆ, ಆಯತ್ತ ದೀಕ್ಷೆ ಮತ್ತು ಸ್ವಾಯತ್ತ ದೀಕ್ಷೆ, ಇವು ಏಳು ಕ್ರಿಯಾ ದೀಕ್ಷೆಯಲ್ಲಿ ಬರುವ ದೀಕ್ಷೆಗಳು. ಸಮಯ ದೀಕ್ಷೆ, ಅಸಂಸಾರ ದೀಕ್ಷೆ(ನಿಸ್ಸಂಸಾರ ದೀಕ್ಷೆ), ತತ್ತ್ವದೀಕ್ಷೆ, ಜ್ಞಾನ ದೀಕ್ಷೆ (ತತ್ತ್ವ ಸಂಶೋಧನ ದೀಕ್ಷೆ), ಅನುಗ್ರಹ ದೀಕ್ಷೆ (ನಿರ್ವಾಣ ದೀಕ್ಷೆ), ಅಧ್ಯಾತ್ಮ ದೀಕ್ಷೆ ಮತ್ತು ಶುದ್ಧವಿದ್ಯಾದೀಕ್ಷೆ (ತತ್ತ್ವೋಪದೇಶಿನೀ ದೀಕ್ಷಾ), ಇವು ವೇಧಾದೀಕ್ಷೆಯ ಅಂತರ್ಗತವಾದ ಏಳು ದೀಕ್ಷೆಗಳು. ದೃಢವ್ರತ ದೀಕ್ಷೆ, ಅಹಿಂಸಾ ದೀಕ್ಷೆ, ಪಂಚೇಂದ್ರಿಯಾರ್ಪಣವೆಂಬ ದೀಕ್ಷೆ, ಚಿತ್ತೈಕಾಗ್ರ್ಯದೀಕ್ಷೆ, ಪರತತ್ತ್ವಾನುರಾಗದೀಕ್ಷೆ (ಲಿಂಗನಿಷ್ಠಾ ದೀಕ್ಷೆ), ಲಿಂಗನಿಜಮನೋ ದೀಕ್ಷೆ (ಮನೋಲಯ ದೀಕ್ಷೆ) ಮತ್ತು ಶಾಶ್ವತ ಸದ್ಯೋಮುಕ್ತಿ ದೀಕ್ಷೆ, ಇವು ಏಳು ಮನು (ಮಂತ್ರ) ದೀಕ್ಷೆಯಲ್ಲಿ ಬರುವ ದೀಕ್ಷೆಗಳು.

ಈ ಇಪ್ಪತ್ತೊಂದು ದೀಕ್ಷೆಗಳ ನಾಮನಿರ್ದೇಶನವನ್ನು ವಚನದಲ್ಲಿಯೂ ಸಹ ಕಾಣಬಹುದು.

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳಂ ಕಳೆದು
ಆಜ್ಞಾದೀಕ್ಷೆ ಉಪಮಾದೀಕ್ಷೆ ಸ್ವಸ್ತಿಕಾರೋಹಣ ಕಳಶಾಭಿಷೇಕ,
ವಿಭೂತಿಯ ಪಟ್ಟ ಲಿಂಗಾಯತ್ತ ಲಿಂಗಸ್ವಾಯತ್ತ-
ಈ ಏಳನು ಕಾಯಕ್ಕುಪದೇಶವ ಮಾಡುವುದು.
ಸಮಯ ನಿಸ್ಸಂಸಾರ ನಿರ್ವಾಣ ತತ್ತ್ವದೀಕ್ಷೆ ಆಧ್ಯಾತ್ಮ ಅನುಗ್ರಹ ಶುದ್ಧವಿದ್ಯೆ-

೩೦. ಚಂ,ಆ, ಕ್ರಿ, ಪಾ, ಪಟಲ ೯, ಶ್ಲೋಕ ಸಂಖ್ಯೆ ೧೨-೧೫

ಈ ಏಳನು ಪ್ರಾಣಕ್ಕುಪದೇಶವ ಮಾಡುವುದು.
ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ
ಮನೋಲಯ ಲಿಂಗನಿಜ ಸದ್ಯೋನ್ಮುಕ್ತಿ-
ಈ ಏಳನು ಮನಕ್ಕುಪದೇಶವ ಮಾಡುವದು.
ಈ ಪ್ರಕಾರದುಪದೇಶ ಕೂಡಲಚೆನ್ನಸಂಗಯ್ಯನಲ್ಲಿ ಸಹಜದೀಕ್ಷೆ.[೩೧]

ಎಂದು ಇಪ್ಪತ್ತೊಂದೂ ಬಗೆಯ ದೀಕ್ಷಾವಿಧಗಳನ್ನು ಅನುಸರಿಸಬೇಕೆಂದು ವಚನಕಾರರು ಪ್ರತಿಪಾದಿಸಿದ್ದಾರೆ. ಚೆನ್ನಬಸವಣ್ಣನವರ 'ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂಬಾತನು[೩೨] ಎಂಬ ತಮ್ಮ ಸುದೀರ್ಘ ವಚನದಲ್ಲಿ ಕ್ರಿಯಾದೀಕ್ಷೆಯ ಕ್ರಮವನ್ನು, ದೀಕ್ಷಾಕಾಲದಲ್ಲಿ ಆಚರಿಸಬೇಕಾದ ಕ್ರಿಯೆಗಳನ್ನು, ಉಚ್ಚರಿಸಬೇಕಾದ ಮಂತ್ರಗಳನ್ನು ವಿವರಿಸಿದ್ದಾರೆ.

ಈ ಇಪ್ಪತ್ತೊಂದು ದೀಕ್ಷೆಗಳ ವಿವರಣೆ ಆಗಮಗಳಲ್ಲಿ ಸ್ಪಷ್ಟವಾಗಿ ಈ ಬಗೆಯಾಗಿ ವಿಶ್ಲೇಷಿಸಲ್ಪಟ್ಟಿದೆ.

ಕ್ರಿಯಾದೀಕ್ಷೆ	ವೇಧಾದೀಕ್ಷೆ	ಮಂತ್ರದೀಕ್ಷೆ
೧. ಆಜ್ಞಾದೀಕ್ಷೆ	೧. ಸಮಯದೀಕ್ಷೆ	೧. ಏಕಾಗ್ರಮತಿದೀಕ್ಷೆ
೨. ಉಪಮಾದೀಕ್ಷೆ	೨. ನಿಸ್ಸಂಸಾರದೀಕ್ಷೆ	೨. ದೃಢವ್ರತದೀಕ್ಷೆ
೩. ಕಲಶಾಭಿಷೇಕದೀಕ್ಷೆ	೩. ನಿರ್ವಾಣದೀಕ್ಷೆ	೩. ಪಂಚೇಂದ್ರಿಯಾರ್ಪಣದೀಕ್ಷೆ
೪. ಸ್ವಸ್ತಿಕರೋಹಣದೀಕ್ಷೆ	೪. ತತ್ತ್ವದೀಕ್ಷೆ	೪. ಅಹಿಂಸಾದೀಕ್ಷೆ
೫. ಭೂತಿಪಟ್ಟದೀಕ್ಷೆ	೫. ಅಧ್ಯಾತ್ಮದೀಕ್ಷೆ	೫. ಲಿಂಗನಿಷ್ಠಾದೀಕ್ಷೆ
೬. ಆಯತ್ತದೀಕ್ಷೆ	೬. ತತ್ತ್ವಸಂಶೋಧನದೀಕ್ಷೆ	೬. ಮನೋಲಯದೀಕ್ಷೆ
೭. ಸ್ವಾಯತ್ತದೀಕ್ಷೆ	೭. ತತ್ತ್ವೋಪದೇಶಿನೀದೀಕ್ಷಾ	೭. ಸದ್ಯೋಮುಕ್ತಿದೀಕ್ಷೆ

೧. ಕ್ರಿಯಾದೀಕ್ಷೆ–"ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್।"[೩೩]

ಶಿವದೀಕ್ಷೆಯ ಅಂಗವಾಗಿ ಷಡಧ್ವಶುದ್ಧಿಯಿಂದ ಸಂಸ್ಕರಿಸಿದ ಲಿಂಗವನ್ನು ಶಿಷ್ಯನ ಹಸ್ತದಲ್ಲಿ ಸ್ಥಾಪಿಸುವುದು ಕ್ರಿಯಾದೀಕ್ಷೆ.

ಕ್ರಿಯಾದೀಕ್ಷೆಯಿಂದ ಶಿಷ್ಯನಿಗೆ ಪ್ರಾಪ್ತವಾದ ಶಿವಲಿಂಗವನ್ನು ಇಷ್ಟಲಿಂಗವೆಂದು ಕರೆಯುತ್ತಾರೆ. ಇದರಿಂದ ಸಾಧಕನ ಕಾರ್ಮಿಕ ಮಲವು ನಾಶವಾಗುತ್ತದೆ. ಇಷ್ಟಲಿಂಗವನ್ನು ಪರಮಗುರುವು ಶಿಷ್ಯನಿಗೆ ಪ್ರದಾನಮಾಡುವುದೇ ಕ್ರಿಯಾದೀಕ್ಷೆಯ ಪರಮೋದ್ದೇಶವಾಗಿದೆ.

೩೧. ಚೆ.ಬ.ವ.ಸಂ. ಸಮಗ್ರ ವಚನ ಸಂಪುಟ ೩, ವ. ಸಂ. ೯೭೩ ಪುಟ ೩೧೫
೩೨. ಚೆ.ಬ.ವ.ಸಂ. ಸಮಗ್ರ ವಚನ ಸಂಪುಟ ೩, ವ. ಸಂ. ೧೪೨೮ ಪುಟ ೫೧೧
೩೩. ಕಾ.ಆ, ಕ್ರಿಪಾ, ಪಟಲ ೧, ಶ್ಲೋಕ ಸಂಖ್ಯೆ ೧೪

ಆಜ್ಞೋಪಮಾ ಚ ಕಲಶಾಭಿಷೇಕಾಖ್ಯಾ ತತಃ ಪರಮ್।
ಸ್ವಸ್ತಿಕಾರೋಹಣಂ ಭೂತಿಪಟ್ಟಮಾಯತ್ತಮೇವ ಚ ॥
ಸ್ವಾಯತ್ತಮಿತಿ ಸಪ್ತೈತಾಃ ಕ್ರಿಯಾದೀಕ್ಷಾಂತರಾ ಮತಾಃ।[೩೪]

ಕ್ರಿಯಾ ದೀಕ್ಷೆಯಲ್ಲಿ ಆಜ್ಞಾ, ಉಪಮಾ, ಕಲಶಾಭಿಷೇಕ, ಸ್ವಸ್ತಿಕಾರೋಹಣ, ಭೂತಿಪಟ್ಟ, ಆಯತ್ತ, ಸ್ವಾಯತ್ತ ಎಂಬ ಸಪ್ತ ಸಂಸ್ಕಾರಗಳು ಅಂತರ್ಗತವಾಗಿವೆ.

ಕ. ಆಜ್ಞಾದೀಕ್ಷೆ

ಪರಿತ್ಯಜ್ಯ ಸದಾಚಾರಂ ಮಾ ಪ್ರವರ್ತಸ್ವ ಸರ್ವದಾ।
ಇತ್ಯಾಜ್ಞಾದೀಕ್ಷಯಾಽಽದಿಶ್ಯ ತತಸ್ತ್ವೇವಂ ವದೇದ್ ಗುರುಃ॥[೩೫]

ಶ್ರೀಗುರುವು ದೀಕ್ಷೆ ಪಡೆಯಲು ತನ್ನಲ್ಲಿಗೆ ಬಂದ ಶಿಷ್ಯನಿಗೆ ಸದಾಚಾರವನ್ನು ಮತ್ತು ಅಹಿಂಸಾದಿ ದಶವಿಧ ಧರ್ಮಸ್ವರೂಪವನ್ನು ಉಪದೇಶ ಮಾಡುತ್ತಾನೆ. ಅನಂತರ ಯಾವಜ್ಜೀವಪರ್ಯಂತವಾಗಿ ಉಪದೇಶವನ್ನು ಪರಿಪಾಲಿಸಬೇಕೆಂದು ಅಪ್ಪಣೆ ಮಾಡುತ್ತಾನೆ. ಸದ್ಗುರುವಿನ ಈ ಆಜ್ಞೆಯೇ ಆಜ್ಞಾದೀಕ್ಷೆಯೆಂದು ಕರೆಯಲ್ಪಟ್ಟಿದೆ. ಅರ್ಥಾತ್ **'ಸದಾಚಾರವನ್ನು ಮೀರಿ ನಡೆಯಬೇಡ' ಎಂಬ ಗುರುವಿನ ಆದೇಶವು ಆಜ್ಞಾದೀಕ್ಷೆ.**

ಖ. ಉಪಮಾದೀಕ್ಷೆ

ಪುರಾತನಕೃತಾಚಾರಸದೃಶಂ ಕುರ್ವಿತಿ ಸ್ಫುಟಮ್।
ಉಪಮಾದೀಕ್ಷಯಾಽಽದಿಶ್ಯ ಶಿಷ್ಯಪಾಪಾಪನುತ್ತಯೇ।
ಪ್ರಾಣಾನಾಯಮ್ಯ ವಿಧಿವತ್ ಪಂಚಗವ್ಯಾನಿ ಸಾಧಯೇತ್॥[೩೬]

ಶ್ರೀಗುರುವು ತಾನು ಉಪದೇಶಿಸಿದ ಸದಾಚಾರದಲ್ಲಿ ಮತ್ತು ಧರ್ಮಮಾರ್ಗದಲ್ಲಿ ವಿಶ್ವಾಸವನ್ನು ಬಲಪಡಿಸುವುದಕ್ಕಾಗಿ ಸದಾಚಾರ ಸಂಪನ್ನರಾದ ಮಹಾತ್ಮರ ಚರಿತ್ರೆಗಳನ್ನು ತನ್ನ ಶಿಷ್ಯನಿಗೆ ತಿಳಿಸುತ್ತಾನೆ. ಆಚಾರಶೀಲರ ದೃಷ್ಟಾಂತಗಳನ್ನು ಕೇಳುವುದರಿಂದ ಶ್ರೋತೃಗಳ ಮನಸ್ಸಿನಲ್ಲಿ ತಾವೂ ಆಚಾರಸಂಪನ್ನರಾಗಬೇಕೆಂಬ ಭಾವನೆಯುಂಟಾಗುತ್ತದೆ. ಆದ್ದರಿಂದ ದೃಷ್ಟಾಂತ ಮಾಧ್ಯಮದಿಂದ ಪುರಾತನರು ನಡೆಸುತ್ತಿದ್ದ ಆಚಾರಕ್ಕೆ ಸಮಾನವಾದ ಆಚಾರವು ನಿನ್ನದಾಗಬೇಕೆಂದು ಸದಾಚಾರವನ್ನು ಉಪದೇಶಿಸುವ ಸಂಸ್ಕಾರ ವಿಶೇಷವು ಉಪಮಾದೀಕ್ಷೆ. ಅರ್ಥಾತ್ **'ಪುರಾತನರು ಆಚರಿಸಿದಂತೆ ಆಚರಿಸು' ಎಂದು ಉಪದೇಶಿಸುವುದೇ ಉಪಮಾದೀಕ್ಷೆ.**

---

೩೪. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೪೩
೩೫. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೪೪
೩೬. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೪೫

ಗ. ಕಲಶಾಭಿಷೇಕದೀಕ್ಷೆ

ಪಂಚಕುಂಭೋದಕೈಃ ಶುದ್ಧೈಃ ಶಿಷ್ಯಂ ಸಂಸ್ನಾಪಯೇದಪಿ।
ಪಂಚತತ್ತ್ವವಿಶುದ್ಧ್ಯರ್ಥಂ ಪಂಚಬ್ರಹ್ಮಮನೂನ್ ಜಪನ್॥[೩೭]

ಕಲಶೋದಕಗಳಿಂದ ಲಿಂಗಾಂಗಗಳಿಗೆ ಅಭಿಷೇಕ ಮಾಡುವ ಸಂಸ್ಕಾರವೇ ಕಲಶಾಭಿಷೇಕದೀಕ್ಷೆ. ಈ ಅಭಿಷೇಕವಿಧಾನದಿಂದ ಲಿಂಗಾಂಗಗಳಿಗೆ ಶುದ್ಧಿಯುಂಟಾಗುತ್ತದೆ. ಪ್ರಥಮತಃ ದೀಕ್ಷಾಮಂಟಪದ ಮಧ್ಯಭಾಗದಲ್ಲಿ ಪಂಚಾಚಾರ್ಯರ ಪ್ರತೀಕವಾದ ಪಂಚಬ್ರಹ್ಮಕಲಶಗಳನ್ನು ಸ್ಥಾಪಿಸಲಾಗುತ್ತದೆ. ಪೂರ್ವದಿಕ್ಕಿನಲ್ಲಿ ಸದ್ಯೋಜಾತಕಲಶ, ದಕ್ಷಿಣದಲ್ಲಿ ವಾಮದೇವಕಲಶ, ಉತ್ತರದಲ್ಲಿ ತತ್ಪುರುಷಕಲಶ, ಪಶ್ಚಿಮದಲ್ಲಿ ಅಘೋರಕಲಶ, ಮಧ್ಯದಲ್ಲಿ ಈಶಾನಕಲಶವನ್ನು ಸ್ಥಾಪಿಸಬೇಕೆಂಬ ವಿಧಿಯಿದೆ. ಹೀಗೆ ಸ್ಥಾಪಿಸಲ್ಪಟ್ಟ ಕಲಶಗಳಲ್ಲಿ ಸದ್ಯೋಜಾತಾದಿ ಪಂಚಬ್ರಹ್ಮದೇವತೆಗಳನ್ನು ಆವಾಹನೆ ಮಾಡುತ್ತಾರೆ. ಅನಂತರ ಪಂಚಸೂತ್ರಪ್ರಕ್ರಿಯೆಯಿಂದ ನಿರ್ಮಿತವಾದ ಅಂಗುಷ್ಠ ಪರಿಮಾಣದ ಶಿಲಾಮಯವಾದ ಶಿವಲಿಂಗವನ್ನು ತೆಗೆದುಕೊಂಡು ಪಂಚಗವ್ಯದಿಂದ ಮತ್ತು ಪಂಚಾಮೃತದಿಂದ ಅಭಿಷೇಕ ಮಾಡಿ ಪಂಚಕಲಶಗಳಲ್ಲಿರುವ ಶುದ್ಧೋದಕದಿಂದ ಪಂಚಬ್ರಹ್ಮಮಂತ್ರೋಚ್ಚಾರಣ ಪೂರ್ವಕವಾಗಿ ಪುನಃ ಅಭಿಷೇಕ ಮಾಡಲಾಗುತ್ತದೆ. ತದನಂತರ ಸರ್ವದೋಷಗಳ ಶಾಂತಿಗೋಸ್ಕರವಾಗಿ ಜಲಾಧಿವಾಸ, ಧಾನ್ಯಾಧಿವಾಸ, ಷಡಧ್ವನ್ಯಾಸಗಳನ್ನು ಮಾಡಲಾಗುತ್ತದೆ. ಈ ಪ್ರಕಾರ ಶಿವಲಿಂಗಸಂಸ್ಕಾರದ ಬಳಿಕ ದೀಕ್ಷಾರ್ಥವಾಗಿ ಬಂದಿರುವ ಶಿಷ್ಯನನ್ನು ಭದ್ರಾಸನದಲ್ಲಿ ಕುಳ್ಳಿರಿಸಿ ಪಂಚಕಲಶೋದಕದಿಂದ ಅವನಿಗೆ ಅಭಿಷೇಕ ಮಾಡಿಸಲಾಗುತ್ತದೆ. ಹೀಗೆ ಸಾಧಕನ ಶರೀರದಲ್ಲಿರುವ ಪಂಚಭೌತಿಕತತ್ತ್ವಗಳ ಶುದ್ಧಿಗೋಸ್ಕರ ಪಂಚಕಲಶಗಳಲ್ಲಿ ಸ್ಥಾಪಿಸಲ್ಪಟ್ಟ ಪಂಚಬ್ರಹ್ಮರನ್ನು ಪೂಜಿಸಿ, ಆ ಪಂಚಕಲಶಗಳಿಂದ ಪಂಚಸೂತ್ರಗಳನ್ನು ತೆಗೆದುಕೊಂಡು ಇಷ್ಟಲಿಂಗ ಮತ್ತು ಶಿಷ್ಯನಿಗೆ ಸಂಸ್ಕಾರವನ್ನು ಮಾಡಿ ಪಂಚಕಲಶೋದಕದಿಂದ ಸಂಪ್ರೋಕ್ಷಣೆ ಮಾಡುವುದು ಕಲಶಾಭಿಷೇಕ ದೀಕ್ಷೆ.

ಘ. ಸ್ವಸ್ತಿಕಾರೋಹಣದೀಕ್ಷೆ

ಷಡಧ್ವಶೋಧನದ್ವಾರಾ ಮಾಂಸಪಿಂಡನಿವೃತ್ತಯೇ ।
ಸ್ವಸ್ತಿಕಾರೋಹಣಾಭಿಖ್ಯಾಂ ದೀಕ್ಷಾಂ ದದ್ಯಾದ್ಯಥಾವಿಧಿ॥[೩೮]

ಶಿಷ್ಯನ ಪಾದಾದಿಮಸ್ತಕಪರ್ಯಂತವಾದ ಅವಯವಗಳಲ್ಲಿ ವರ್ಣ-ಪದ-ಮಂತ್ರ-ಕಲಾ-ತತ್ತ್ವ-ಭುವನವೆಂಬ ಷಡಧ್ವಗಳನ್ನು ಕ್ರಮವಾಗಿ ಪಾದ, ಮೇಢ್ರ (ಜನನೇಂದ್ರಿಯ), ನಾಭಿ, ಹೃದಯ, ಮುಖ ಮತ್ತು ಶಿರಸ್ಸುಗಳಲ್ಲಿ ಸ್ಥಾಪಿಸಿ ದೃಢವಾಗಿ ಸಂಬಂಧಗೊಳಿಸುವುದರಿಂದ ಅವನ ಶರೀರವು ಮಾಂಸಪಿಂಡತ್ವವನ್ನು ಕಳೆದುಕೊಂಡು

---

೩೭. ಕಾ.ಆ, ಕ್ರಿಪಾ, ಪಟಲ ೧, ಶ್ಲೋಕ ಸಂಖ್ಯೆ ೭೫

೩೮. ಕಾ.ಆ, ಕ್ರಿಪಾ, ಪಟಲ ೧, ಶ್ಲೋಕ ಸಂಖ್ಯೆ ೭೭

ಅಧ್ವಾತ್ಮಕವಾಗುತ್ತದೆ. ಅಧ್ವಸಂಬಂಧಾ ನಂತರ ಪಾದಾದಿಶಿಖಾಂತವಾದ ಆರು ಸ್ಥಾನಗಳಲ್ಲಿ ಪುನಃ ಷಡಕ್ಷರ ಮಹಾಮಂತ್ರವನ್ನು ಸಂಬಂಧಗೊಳಿಸಲಾಗುತ್ತದೆ. ಈ ಪ್ರಕಾರ ಮಾಡಲಾಗುವ ಅಧ್ವಸಂಬಂಧವೇ ಸ್ವಸ್ತಿಕಾರೋಹಣದೀಕ್ಷೆಯೆಂದು ನಿರೂಪಿಸಲ್ಪಟ್ಟಿದೆ. ಹೀಗೆ **ಶಿಷ್ಯನ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿಸಲು ಮಾಡುವ ಷಡಧ್ವಶೋಧನ ಕ್ರಿಯೆಯೇ ಸ್ವಸ್ತಿಕಾರೋಹಣ ದೀಕ್ಷೆ.**

ಐ. ಭೂತಿಪಟ್ಟದೀಕ್ಷೆ

ಅನಾದಿಮಲಸಂಹೃತ್ಯೈಭೂತಿಪಟ್ಟಾಖ್ಯದೀಕ್ಷಯಾ।
ಸ್ನಾನಮುದ್ಧೂಲನಂ ಭೂತ್ಯಾ ಧಾರಣಂ ಚಾಪಿ ಕಾರಯೇತ್॥[೩೯]

ಭೂತಿಯೆಂದರೆ ವಿಭೂತಿ. ಶುದ್ಧವಾದ ಗೋಮಯದಿಂದ ನಿರ್ಮಿತವಾದ ವಿಭೂತಿಯಿಂದ ಶಾರೀರಕವಾದ ಹಾಗೂ ಮಾನಸಿಕವಾದ ಮಾಲಿನ್ಯ ಪರಿಹಾರ ವಾಗುತ್ತದೆ. ಆದ್ದರಿಂದ ವೀರಶೈವಸಿದ್ಧಾಂತದಲ್ಲಿ ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ತ್ರಿಪುಂಡ್ರಧಾರಣಗಳು ವಿಹಿತವಾಗಿವೆ. ದೀಕ್ಷಾಸಂದರ್ಭದಲ್ಲಿ ಗುರುವು ಇದರ ಮಹತ್ವವನ್ನು ಬೋಧಿಸಿ ತನ್ನ ಅಮೃತಹಸ್ತದಿಂದ ಶಿಷ್ಯನ ಶರೀರದಲ್ಲಿ ವಿಭೂತಿಯನ್ನು ಧರಿಸುತ್ತಾನೆ. ಈ ಪ್ರಕಾರವಾಗಿ **ಮಲಪರಿಹಾರಕವಾದ ಭಸ್ಮದಿಂದ ಮಾಡಲಾಗುವ ಶಿಷ್ಯನ ಶರೀರಸಂಸ್ಕಾರವು ಭೂತಿಪಟ್ಟದೀಕ್ಷೆ**ಯೆಂದು ಹೆಸರಾಗಿದೆ.

ಚ. ಆಯತ್ತದೀಕ್ಷೆ

ಇಷ್ಟಲಿಂಗಂ ಸಮಾಧಾಯ ವಾಮಹಸ್ತೇಭಿಪೂಜ್ಯ ಚ ।
ಸೌಮ್ಯೇತಲ್ಲಿಂಗಮೀಕ್ಷಸ್ವೇತೀಷ್ಟಲಿಂಗಂ ಪ್ರದರ್ಶಯೇತ್॥[೪೦]

ಗುರುವು ಸುಸಂಸ್ಕೃತವಾದ ಹಾಗೂ ಪಂಚಸೂತ್ರಘಟಿತವಾದ ಶಿವಲಿಂಗವನ್ನು ಪ್ರಾಣಪ್ರತಿಷ್ಠಾಪನಾರ್ಥವಾಗಿ ತನ್ನ ವಾಮಹಸ್ತದಲ್ಲಿ ಇಟ್ಟುಕೊಂಡು ಪೂಜಿಸಿ ಶಿಷ್ಯನಿಗೆ ತೋರಿಸುತ್ತಾನೆ.

ಶಿಷ್ಯನಿಗೆ ಲಿಂಗವನ್ನು ತೋರಿದ ಬಳಿಕ ಗುರುವು ತಮ್ಮಿಬ್ಬರ ಮಧ್ಯೆ ಜವನಿಕಾಪಟವನ್ನು ಹಿಡಿಸಿ ಮಂಗಲಾಷ್ಟಕವನ್ನು ಉಚ್ಚರಿಸಿ, ಮಂಗಲಾಕ್ಷತೆಗಳನ್ನು ಎರಚಿ, ಶಿಷ್ಯನನ್ನು ಕುರಿತು "ವತ್ಸ, ಸ್ಥೂಲ–ಸೂಕ್ಷ್ಮ–ಕಾರಣವೆಂಬ ಅಂಗತ್ರಯದಲ್ಲಿ ಸದಾ ಇಷ್ಟಲಿಂಗ–ಪ್ರಾಣಲಿಂಗ–ಭಾವಲಿಂಗಗಳೆಂಬ ತ್ರಿವಿಧಲಿಂಗ ಸಂಪನ್ನನಾಗಿರು" ಎಂದು ಉಪದೇಶಮಾಡಿ, ಜವನಿಕೆಯನ್ನು ಸರಿಸಿ, ಇಂದಿನಿಂದ ನೀನು ಸದಾ ಲಿಂಗಧಾರಿಯಾಗಿರು' ಎಂದು ಹೇಳಿ ಇಷ್ಟಲಿಂಗವನ್ನು ಪ್ರದರ್ಶಿಸುತ್ತಾನೆ. ಈ ಸಂಸ್ಕಾರವು ಶ್ರೀಗುರುವಿನಿಂದ ಉಪದೇಶಿಸಲ್ಪಟ್ಟಡುವ ಕಾರಣ ಆಯತ್ತದೀಕ್ಷೆಯೆಂದು ಪ್ರಖ್ಯಾತವಾಗಿದೆ. ಅರ್ಥಾತ್ **ಇಷ್ಟಲಿಂಗವನ್ನು ನೀಡಿ ಸ್ಥೂಲ–**

---

೩೯. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೮೩

೪೦. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೮೯

ಸೂಕ್ಷ್ಮ-ಕಾರಣಗಳೆಂಬ ಅಂಗತ್ರಯದಲ್ಲಿ ಲಿಂಗವಂತನಾಗು ಎಂದು ಮಂಗಲಾಕ್ಷತೆಯನ್ನು ಶಿಷ್ಯನ ತಲೆಯ ಮೇಲೆ ಹಾಕಿ ಆಶೀರ್ವದಿಸುವುದು ಆಯತ್ತ ದೀಕ್ಷೆ.

ಛ. ಸ್ವಾಯತ್ತದೀಕ್ಷೆ

ವಾಮಹಸ್ತಂ ತು ಶಿಷ್ಯಸ್ಯ ಮೂಲೇನೈವಾಭಿಮಂತ್ರ್ಯ ಚ ॥
ಸಪ್ತವಾರಂ ಸುಸಂಪೂಜ್ಯ ಸ್ವವಾಮಕರಸಂಸ್ಥಿತಮ್।
ನಿಕ್ಷೇಪತ್ತತ್ರ ತಲ್ಲಿಂಗಂ ತ್ರಿಯಂಬಕಮನುಂ ಸ್ಮರನ್॥[೪೧]

ಶ್ರೀಗುರುವು ತನ್ನ ವಾಮಹಸ್ತದಲ್ಲಿರುವ ಇಷ್ಟಲಿಂಗವನ್ನು ಮಂತ್ರೋಪದೇಶ ಪೂರ್ವಕವಾಗಿ ಶಿಷ್ಯನ ವಾಮಹಸ್ತಪೀಠದಲ್ಲಿ ಸ್ಥಾಪಿಸುತ್ತಾನೆ. ಆಗ ಆ ಲಿಂಗವು ಶಿಷ್ಯನಿಗೆ ಪ್ರಾಪ್ತವಾಗುತ್ತದೆ. ಪುರಾತನಪದ್ಧತಿಯ ಪ್ರಕಾರ **ಇಷ್ಟಲಿಂಗವನ್ನು ಶಿಷ್ಯನ ಸ್ವಾಧೀನಗೊಳಿಸುವ ಸಂಸ್ಕಾರವೇ 'ಸ್ವಾಯತ್ತದೀಕ್ಷೆ'**

ಈ ಕ್ರಿಯಾದೀಕ್ಷೆಯ ವಿಶ್ಲೇಷಣೆಯನ್ನು ತೋಂಟದ ಸಿದ್ಧಲಿಂಗ ಶಿವಯೋಗಿಗಳು ತಮ್ಮ ವಚನದಲ್ಲಿ -"ಶ್ರೀಗುರು ಶಿವನ ಗಣಂಗಳ ಮಧ್ಯದಲ್ಲಿ ಎನಗೆ ಉಪದೇಶಿಸುವಲ್ಲಿ ಪರಮೇಶ್ವರನ ಪಂಚಮುಖವನೇ ಪಂಚಕಲಶವಾಗಿ ಮೂರ್ತಿಗೊಳಿಸಿ, ಗಣಂಗಳ ಸಾಕ್ಷಿಯಾಗಿ ಕರಸ್ಥಲಕ್ಕೆ ಶಿವಲಿಂಗವ ಕೊಟ್ಟು ಈ ಲಿಂಗವೇ ಗಂಡ ನೀನೇ ಹೆಂಡತಿ ಎಂದು ಹೇಳಿ ಲಲಾಟದಲ್ಲಿ ವಿಭೂತಿಯ ಪಟ್ಟವಂ ಕಟ್ಟಿ ಹಸ್ತದಲ್ಲಿ ಕಂಕಣವ ಕಟ್ಟಿ, ಪಾದೋದಕ ಪ್ರಸಾದವನಿತ್ತು ಎಂದೆಂದಿಗೂ ಸತಿಪತಿಭಾವ ತಪ್ಪದೆ ಇರಲಿ ಎಂದು ನಿರೂಪಿಸಿದನಯ್ಯ ಶ್ರೀಗುರು. ಆ ನಿರೂಪವ ಮಹಾಪ್ರಸಾದವೆಂದು ಕೈಕೊಂಡೆನಯ್ಯ. ಇದು ಕಾರಣ ಪತಿಯಲ್ಲದೆ ಅನ್ಯವನರಿಯೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.[೪೨] ಎಂದು ವಿವರಿಸಿದ್ದಾರೆ.

ಹೀಗೆ ಈ ಕ್ರಿಯಾದೀಕ್ಷೆಯ ವಿಧಾನವನ್ನು ವೀರಾಗಮದ ಉಲ್ಲೇಖದೊಂದಿಗೆ ಇನ್ನೊಂದು ವಚನದಲ್ಲಿ -

ಆ ಸದ್ಗುರುಸ್ವಾಮಿ ಸದ್ಯೋಜಾತವಾಮದೇವಮುಖದಲ್ಲಿ
ಅಘೋರ ತತ್ಪುರುಷ ಈಶಾನವೆಂಬ ಪಂಚಕಳಸವನಿರಿಸಿ,
ಆ ಶಿಷ್ಯನನು ಗಣತಿಂತಿಣಿಗೆ ದೀರ್ಘದಂಡನಮಸ್ಕಾರವಂ ಮಾಡಿಸಿ
ಪೂರ್ವಜನ್ಮವಂ ಕಳೆದು ಪುನರ್ಜಾತನಂ ಮಾಡಿ,
ಆ ಶಿಷ್ಯನ ಮಸ್ತಕದ ಮೇಲೆ ತಮ್ಮ ಹಸ್ತಕಮಲವನಿರಿಸಿ,
ಬ್ರಹ್ಮರಂಧ್ರದ ಚಿತ್ಪ್ರಭಾಕಳೆಯಂ ತೆಗೆದು
ಆ ಕುಮಾರನ ಠಾವಿನಮೇಲೆ ಆಹ್ವಾನವಂ ಮಾಡಿ
ಇಷ್ಟಲಿಂಗವಂ ಕರಸ್ಥಲದಲ್ಲಿ ಕೊಟ್ಟು,

---

೪೧. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೯೪-೯೫
೪೨. ವಚನ ಶಾಸ್ತ್ರಸಾರ -ಫ.ಗು. ಹಳಕಟ್ಟಿ-(ಸನ್ ೧೯೨೩) : ವ.ಸಂ.೧೨ ಪುಟ ೫೧

ಕರ್ಣದ್ವಾರದಲ್ಲಿ ಮಂತ್ರೋಪದೇಶವಂ ಮಾಡಿ, ಗಣಸಾಕ್ಷಿಯಾಗಿ
ದೀಯೆಂಬ ಮಹಾಜ್ಞಾನಮಂ ಕೊಟ್ಟು ಕ್ಷ ಎಂಬ ಮಲತ್ರಯಂಗಳ ಬಿಡಿಸಿ,
ಸದ್ಗುರುಸ್ವಾಮಿ ಗುರುಲಿಂಗಜಂಗಮವಂ ಮಾಡಿದ ಬಳಿಕ
ತಿರುಗಿ ಆ ಮಲತ್ರಯಂಗಳ ಹಿಡಿದರೆ
ಆ ಗುರುಲಿಂಗ ಜಂಗಮಕ್ಕೆ ರೌರವನರಕವೆಂದುದು ನೋಡಾ.
ಇದಕ್ಕೆ ವೀರಾಗಮೇ:
“ದೀಯತೇ ಜ್ಞಾನಸಂಬಂಧಂ ಕ್ಷೀಯತೇ ಚ ಮಲತ್ರಯಂ।
ದೀಯತೇ ಕ್ಷೀಯತೇ ಚೈವ ದೀಕ್ಷಾಶಬ್ದೋಽಭಿಧೀಯತೇ॥
ತನ್ಮಲತ್ರಯಸಂಯೋಗಾತ್ ಗುರೂಣಾಂ ಜಂಗಮ ಸ್ತಥಾ।
ದ್ವಿವಿಧಂ ನರಕಂ ಯಾತಿ ಯಾವಚ್ಚಂದ್ರದಿವಾಕರೌ॥”
ಮಲತ್ರಯಂಗಳ ಬಿಟ್ಟು ಸುಳಿವ ಮಹಾಗುರುಲಿಂಗಜಂಗಮಕ್ಕೆ
ನಮೋ ನಮೋ ನಮೋ ಎಂದು ಬದುಕಿದೆನು ನೋಡಾ
ಅಪ್ರಮಾಣಕೂಡಲಸಂಗಮದೇವಾ.[೪೩]

ಎಂದು ವಿವರಿಸಲಾಗಿದೆ. ಹೀಗೆ ಕ್ರಿಯಾದೀಕ್ಷೆಯ ವಿವರಣೆ ಆಗಮಗಳಲ್ಲಿ ನಿರೂಪಿಸಿದಂತೆಯೇ ವಚನಕಾಲದಲ್ಲಿಯೂ ಅನುಸರಿಸಿ, ಇಂದಿನವರೆಗೂ ಅದೇ ವಿಧಾನವನ್ನು ಪರಿಪಾಲಿಸಿಕೊಂಡು ಬಂದಿರುವುದನ್ನು ನಾವು ಕಾಣಬಹುದು.

೨. ವೇಧಾದೀಕ್ಷೆ – “ಹಸ್ತಮಸ್ತಕ ಸಂಯೋಗಾದ್ ದೃಷ್ಟೇರ್ವೇಧೇತಿ ಕೀರ್ತ್ಯತೇ।”[೪೪]

ಕಾರುಣ್ಯನಿಧಿಯಾದ ಪರಮಗುರುವು ಶಿಷ್ಯನನ್ನು ಕೃಪಾದೃಷ್ಟಿಯಿಂದ ನೋಡಿ, ಆತನ ಮಸ್ತಕದ ಮೇಲೆ ಹಸ್ತವನ್ನಿಟ್ಟು, ಆತನಲ್ಲಿ ಶಿವಕಲೆಯನ್ನು ಜಾಗೃತಗೊಳಿಸಿ, ಅವನ ಕಾರಣ ತನುವಿನಲ್ಲಿ ಭಾವಲಿಂಗವನ್ನು ನೆಲೆಗೊಳಿಸುವುದಕ್ಕೆ “ವೇಧಾದೀಕ್ಷೆ” ಎಂದು ಹೆಸರು.

ಈ ದೀಕ್ಷೆಯಿಂದ ಶಿಷ್ಯನ ಆಣವಮಲ ದೂರಸರಿಯುತ್ತದೆ; ಶಿವಭಾವ ಉದಯವಾಗುತ್ತದೆ. ಈ ‘ಶಿವೋಹಂ’ ಭಾವವೇ ಭಾವಲಿಂಗವೆಂದು ಕರೆಯಲ್ಪಟ್ಟಿದೆ. ಈ ವೇಧಾದೀಕ್ಷೆಯಲ್ಲಿ ಶಿಷ್ಯನ ಪ್ರಗತಿಗೆ ಪೂರಕವಾಗಿ ಸಪ್ತವಿಧವಾದ ಉಪದೇಶಗಳನ್ನು ಅಳವಡಿಸಲಾಗಿದೆ. ಅವು –

ಆದ್ಯಾ ಸಮಯಸಂಜ್ಞಾಸ್ಯಾನ್ನಿಃಸಂಸಾರಾ ದ್ವಿತೀಯಕಾ।
ನಿರ್ವಾಣಾಖ್ಯಾ ತೃತೀಯಾ ಸ್ಯಾತ್ ತತ್ತ್ವಸಂಜ್ಞಾ ಚತುರ್ಥಿಕಾ॥
ಪಂಚಮಾಧ್ಯಾತ್ಮಸಂಜ್ಞಾ ಸ್ಯಾತ್ ಷಷ್ಠೀ ತತ್ತ್ವವಿಶೋಧಿನೀ।
ಸಪ್ತಮೀ ತತ್ತ್ವಬೋಧಾ ಸ್ಯಾದ್ ವೇಧಾದೀಕ್ಷಾಂತರಾ ಇಮಾಃ॥[೪೫]

---

೪೩. ಸಮಗ್ರ ವಚನ ಸಂಪುಟ ೧೩ –ವ. ಸಂ. ೭೮೩ ಪುಟ ೩೫೩
೪೪. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೪
೪೫. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೯೬–೯೭

ಸಮಯ ದೀಕ್ಷೆ, ಅಸಂಸಾರ ದೀಕ್ಷೆ (ನಿಸ್ಸಂಸಾರದೀಕ್ಷೆ), ತತ್ತ್ವ ದೀಕ್ಷೆ, ಜ್ಞಾನ ದೀಕ್ಷೆ (ತತ್ತ್ವಸಂಶೋಧನ ದೀಕ್ಷೆ), ಅನುಗ್ರಹ ದೀಕ್ಷೆ (ನಿರ್ವಾಣ ದೀಕ್ಷೆ), ಅಧ್ಯಾತ್ಮ ದೀಕ್ಷೆ ಮತ್ತು ಶುದ್ಧವಿದ್ಯಾ ದೀಕ್ಷೆ (ತತ್ತ್ವೋಪದೇಶಿನೀ ದೀಕ್ಷಾ), ಇವು ಏಳು ವೇಧಾದೀಕ್ಷಾಂತರ್ಗತವಾದ ದೀಕ್ಷೆಗಳು.

ಕ. ಸಮಯದೀಕ್ಷೆ

ಹಿತ್ವಾ ಬಂಧುಜನೇ ಪ್ರೀತಿಂ ತಾಂ ಭಕ್ತೇಷು ಸ್ಥಿರಾಂ ಕುರು।
ಏವಂ ಸಮಯಮಾದಿಶ್ಯ ನಿಃಸಂಸಾರಾಂ ನಿಬೋಧಯೇತ್॥ [೪೬]

ವೇಧಾದೀಕ್ಷೆಯ ಸಮಯದಲ್ಲಿ ಶ್ರೀ ಗುರುವು ತನ್ನ ಬಲಹಸ್ತವನ್ನು ಆರು ಬಾರಿ ಷಡಕ್ಷರ ಮಹಾಮಂತ್ರದಿಂದ ಅಭಿಮಂತ್ರಿಸಿ, ಅದನ್ನು ಶಿವಹಸ್ತವೆಂದು ಭಾವಿಸಿ ಶಿಷ್ಯನ ಶಿರಸ್ಸಿನಲ್ಲಿಟ್ಟು ಕೃಪಾಪೂರ್ಣದೃಷ್ಟಿಯಿಂದ ನೋಡುತ್ತಾ **"ಶಿವದೀಕ್ಷಾಸಂಸ್ಕಾರವನ್ನು ಹೊಂದುವ ಮೊದಲು ತನ್ನ ಬಂಧುಜನರಲ್ಲಿ ತೋರುತ್ತಿದ್ದ ಪ್ರೀತಿಯನ್ನು ಇನ್ನು ಮುಂದೆ ಶಿವಭಕ್ತರಲ್ಲಿ ತೋರತಕ್ಕದ್ದು"**ಎಂದು ಉಪದೇಶಿಸುತ್ತಾನೆ. ಈ ಪ್ರಕಾರವಾದ ಸಮಯೋಪದೇಶವನ್ನು ಸಮಯದೀಕ್ಷೆ ಎಂದು ಕರೆಯಲಾಗಿದೆ.

ಖ. ನಿಸ್ಸಂಸಾರದೀಕ್ಷೆ

ದೇಹೇಂದ್ರಿಯಾದಿಸಂಸಾರಂ ಪರಿಹೃತ್ಯ ಸದಾ ಮಮ।
ಪೂಜೋಪಚಾರಃ ಸಂಸಾರ ಇತಿ ಭಾವಯ ಚೇತಸಿ॥ [೪೭]

ಶರೀರೇಂದ್ರಿಯಾದಿಗಳಲ್ಲಿ ಮಮಕಾರಬುದ್ಧಿಯಿಂದ ಮಾಡುವ ವ್ಯವಹಾರವೇ ಸಂಸಾರ. ಸಂಸಾರಿಗಳು ಶರೀರದ ಇಂದ್ರಿಯಗಳ ಉಪಚಾರಗಳಲ್ಲಿ ನಿರತರಾಗಿರುತ್ತಾರೆ. ಕಾರಣ ವ್ಯಕ್ತಿಗೆ ತನ್ನ ದೇಹ, ಇಂದ್ರಿಯ ಸಂಸಾರಗಳ ಸಂಗದಲ್ಲೆ ಸಂಲಗ್ನನಾಗಿರದೆ ಇವು ಆತ್ಮ ಸಾಕ್ಷಾತ್ಕಾರದ ಸಾಧನಗಳೆಂಬ ಭಾವನೆಯಿಂದೊಡಗೂಡಿ ಸರ್ವಕಾರ್ಯವೂ, ಸಂಸಾರ ವ್ಯವಹಾರವೂ ಅನುಸಂಧಾನಕ್ಕೆ ಸಹಾಯಕವಾಗುವಂತೆ ಮಾಡಿಕೋ ಎಂದು ಉಪದೇಶಿಸುವುದೇ ನಿಃಸಂಸಾರ ದೀಕ್ಷೆ. ಈ ಸಂಸ್ಕಾರದಿಂದ ಬಹಿರ್ಮುಖವಾದ ಮನಸ್ಸು ಅಂತರ್ಮುಖವಾಗಿ ಆಧ್ಯಾತ್ಮಿಕ ಸಾಫಲ್ಯವನ್ನು ಪಡೆಯಲು ಸಹಾಯಕ ವಾಗುತ್ತದೆ. ಅರ್ಥಾತ್ **ಸಂಸಾರದಲ್ಲಿ ಆಸಕ್ತಿಯನ್ನು ಬಿಟ್ಟು ಗುರು-ಲಿಂಗ-ಜಂಗಮರ ಪೂಜೆಯೇ ನಿನ್ನ ಸಂಸಾರವೆಂದು ತಿಳಿ ಎಂದು ಆದೇಶಿಸುವುದು ನಿಸ್ಸಂಸಾರದೀಕ್ಷೆ.**

ಗ. ನಿರ್ವಾಣದೀಕ್ಷೆ

ಇತ್ಯಾದಿಶ್ಯ ಚ ದದ್ಯಾಚ್ಚ ದೀಕ್ಷಾಂ ನಿರ್ವಾಣಸಂಜ್ಞಿತಾಮ್।
ಮಲತ್ರಯಸಮುದ್ಭೂತೇ ತಾಪತ್ರಯಭಯಾಕುಲೇ॥

---

೪೬. ಕಾ.ಆ, ಕ್ರಿಪಾ, ಪಟಲ ೧, ಶ್ಲೋಕ ಸಂಖ್ಯೆ ೧೦೧

೪೭. ಕಾ.ಆ, ಕ್ರಿಪಾ, ಪಟಲ ೧, ಶ್ಲೋಕ ಸಂಖ್ಯೆ ೧೦೨

ದುರಂತೇ ದುರ್ಭವೋಪಾಂತೇ ಮನೋ ನ ಕುರು ಯತ್ನತಃ।
ಇತಿ ನಿರ್ವಾಣಮಾದಿಶ್ಯ ದದ್ಯಾತ್ ತತ್ತ್ವಾಭಿಧಾಯಿನೀಮ್॥[೪೮]

ನಿರ್ವಾಣವೆಂದರೆ ಮುಕ್ತಿ. ಮನವೇ ಮಾನವರ ಬಂಧಮೋಕ್ಷಗಳಿಗೆ ಕಾರಣ. ಮನಸ್ಸು ವಿಷಯಾಸಕ್ತವಾದರೆ ಭವಬಂಧನವುಂಟಾಗುತ್ತದೆ. ಚಂಚಲವಾದ ಮನಸ್ಸನ್ನು ಪರಮಾತ್ಮನಲ್ಲಿ ಕೇಂದ್ರೀಕರಿಸಿ ಭವಬಂಧನದಿಂದ ಬಿಡುಗಡೆ ಹೊಂದುವುದೇ ನಿರ್ವಾಣ. ಆದ್ದರಿಂದ **'ಆದಿಭೌತಿಕ, ಆದಿದೈವಿಕ ಮತ್ತು ಆಧ್ಯಾತ್ಮಿಕವೆಂಬ ತಾಪತ್ರಯದ ಭಯದಿಂದ ವ್ಯಾಕುಲವಾದ ದುರಂತಕರವಾದ ಹಾಗೂ ದುಃಖಮಯವಾದ ಸಂಸಾರದಲ್ಲಿ ಮನಸ್ಸನ್ನು ತೊಡಗಿಸಬೇಡ, ಪ್ರಯತ್ನಪೂರ್ವಕವಾಗಿ ಅದನ್ನು ನಿಗ್ರಹಿಸು' ಎಂದು ತಿಳಿಸುವ ಸಂಸ್ಕಾರವನ್ನು** ಕಾರಣಾಗಮ ನಿರ್ವಾಣೋಪದೇಶ ಅಥವಾ ನಿರ್ವಾಣದೀಕ್ಷೆ ಎಂದು ನಿರೂಪಿಸಿದೆ.

ಫ. ತತ್ತ್ವದೀಕ್ಷೆ

ಲಿಂಗಾಂಗತತ್ತ್ವಂ ವಿಜ್ಞಾಯ ಲಿಂಗಸಾಯುಜ್ಯವಾನ್ ಭವ।
ಉಪದಿಶ್ಯೈವಮಥ ಚ ದದ್ಯಾದಧ್ಯಾತ್ಮಸಂಜ್ಞಿತಾಮ್॥[೪೯]

ಪ್ರಪಂಚದ ಸೃಷ್ಟಿ–ಸ್ಥಿತಿ–ಸಂಹಾರಾದಿ ಕಾರ್ಯಗಳಿಗೆ ಕಾರಣೀಭೂತವಾದುದೇ ಲಿಂಗತತ್ತ್ವ. ಲಿಂಗತತ್ತ್ವದ ಅಂಶಭೂತವೇ ಅಂಗತತ್ತ್ವ. ಈ ಲಿಂಗ ಮತ್ತು ಅಂಗದ ತತ್ವಗಳನ್ನರಿತು ಅವುಗಳಲ್ಲಿ ಸಮರಸ ಸಾಧಿಸಬೇಕೆಂಬ ಉಪದೇಶ ಕ್ರಿಯೆಯೇ ತತ್ವದೀಕ್ಷೆ. ಅರ್ಥಾತ್ **ಲಿಂಗಾಂಗತತ್ತ್ವಗಳ ಸಾಮರಸ್ಯವನ್ನು ಉಪದೇಶಿಸುವ ಸಂಸ್ಕಾರವೇ ತತ್ತ್ವದೀಕ್ಷೆ**

ಬ. ಅಧ್ಯಾತ್ಮದೀಕ್ಷೆ

ಪ್ರಾಣೇ ಲಿಂಗಂ ಪ್ರತಿಷ್ಠಾಪ್ಯ ಲಿಂಗೇ ಪ್ರಾಣಂ ನಿಧಾಯ ಚ।
ಲಿಂಗಂ ನಿರೀಕ್ಷಮಾಣಃ ಸನ್ ಲಿಂಗಪ್ರಾಣೀ ಸದಾ ಭವ॥[೫೦]

ಮೋಕ್ಷಾಪೇಕ್ಷಿಗಳು ಶಿವಲಿಂಗದ ಉಪಾಸನೆ ಮಾಡುತ್ತಾರೆ. ಗುರೂಪದೇಶದ ಪ್ರಕಾರ ಉಪಾಸ್ಯವಾದ ಲಿಂಗದಲ್ಲಿ ತನ್ನ ಪ್ರಾಣವನ್ನು, ತನ್ನ ಪ್ರಾಣದಲ್ಲಿ ಆ ಲಿಂಗವನ್ನು ಸಮರಸ ಮಾಡಿಕೊಂಡ ಮಹಾತ್ಮನು ಲಿಂಗಪ್ರಾಣಿಯಾಗುತ್ತಾನೆ. ಅವನ ಜೀವನವು ಆಧ್ಯಾತ್ಮಿಕವಾಗುತ್ತದೆ. ಕಾರಣ **ಪ್ರಾಣದಲ್ಲಿ ಲಿಂಗವನ್ನು ಸ್ಥಾಪಿಸಿ ಲಿಂಗದಲ್ಲಿ ಪ್ರಾಣವನ್ನು ನಿಲ್ಲಿಸಿ ಲಿಂಗದಲ್ಲಿ ದೃಷ್ಟಿಯೋಗವನ್ನು ಸಾಧಿಸಿ ಲಿಂಗ ಪ್ರಾಣಿ ನೀನಾಗು ಎಂದು ಬೋಧಿಸುವುದು ಅಧ್ಯಾತ್ಮದೀಕ್ಷೆ.**

---

೪೮. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೦೨–೧೦೩
೪೯. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೦೪
೫೦. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೦೫

ಚ. ತತ್ತ್ವಸಂಶೋಧನದೀಕ್ಷೆ

ಆದಿಶ್ಯೈವಂ ತತೋ ದದ್ಯಾತ್ ತ್ರತ್ತ್ವಸಂಶೋಧನಾತ್ಮಿಕಾಮ್॥
ಶಬ್ದಾದೀನ್ ವಿಷಯಾನ್ ಸರ್ವಾಂಸ್ತತ್ತದಿಂದ್ರಿಯಗೋಚರಾನ್।
ಆಚಾರಲಿಂಗಮುಖ್ಯೇಭ್ಯಃ ಷಡ್‌ಲಿಂಗೇಭ್ಯಃ ಸಮರ್ಪಯನ್।
ವರ್ತಸ್ವ ಶುದ್ಧಧೀರ್ನಿತ್ಯಂ ಪ್ರಯತೋಽಪಿ ಜಿತೇಂದ್ರಿಯಃ।
ಉಪದಿಶ್ಯೈವಮಪಿ ಚ ದದ್ಯಾತ್ ತತ್ತ್ವೋಪದೇಶಿನೀಮ್॥[೫೧]

ಸಾಧಕನು ಆಹಾರಪದಾರ್ಥಗಳನ್ನು ಶಿವಲಿಂಗಕ್ಕೆ ಸಮರ್ಪಿಸಿ ಪ್ರಸಾದರೂಪದಿಂದ ಸ್ವೀಕರಿಸುವುದು ಔಚಿತ್ಯಪೂರ್ಣವಾಗಿದೆ. ಇಷ್ಟೇ ಅಲ್ಲದೇ ಗಂಧ–ರಸ–ಸ್ಪರ್ಶ–ಶಬ್ದ–ತೃಪ್ತಿಯೆಂಬ ಷಡ್ವಿಷಯಗಳನ್ನೂ ಸಹ ಲಿಂಗಾರ್ಪಿತ ಮಾಡಿ ಪ್ರಸಾದರೂಪದಿಂದ ಸ್ವೀಕರಿಸಬೇಕೆಂದು ಗುರೂಪದೇಶವಿದೆ. ಇಂತಹ ಪ್ರಸಾದವನ್ನು ಸ್ವೀಕರಿಸಬೇಕಾದರೆ ಘ್ರಾಣ–ಜಿಹ್ವಾ–ಚಕ್ಷುಷ್–ಚರ್ಮ–ಶ್ರೋತ್ರ–ಮನಸ್ಸೆಂಬ ಷಡಿಂದ್ರಿಯಗಳಲ್ಲಿ ಕ್ರಮವಾಗಿ ಆಚಾರಲಿಂಗ–ಗುರುಲಿಂಗ–ಶಿವಲಿಂಗ–ಜಂಗಮಲಿಂಗ–ಪ್ರಸಾದಲಿಂಗ–ಮಹಾಲಿಂಗ ವೆಂಬ ಷಡ್ಲಿಂಗಗಳನ್ನು ಪರಿಭಾವಿಸಿ, ಆಯಾಯ ವಿಷಯಗಳನ್ನು ಆಯಾಯ ಇಂದ್ರಿಯಗಳಲ್ಲಿ ಅಧಿಷ್ಠಿತವಾದ ಲಿಂಗಗಳಿಗೆ ನಿವೇದಿಸಬೇಕು. ಅರ್ಥಾತ್ **ಶಬ್ದ ಮುಂತಾದ ವಿಷಯಗಳನ್ನು,ಆಯಾಯ ಇಂದ್ರಿಯಗಳ ಮೂಲಕ ಆಚಾರಲಿಂಗ ಮುಂತಾದ ಆರು ಲಿಂಗಗಳಿಗೆ ಅರ್ಪಿಸಿ ಶುದ್ಧಬುದ್ಧಿಯವನಾಗು ಎಂದು ಆದೇಶಿಸುವುದು ತತ್ವಸಂಶೋಧಿನೀದೀಕ್ಷೆ.**

ಛ. ತತ್ತ್ವೋಪದೇಶಿನೀದೀಕ್ಷಾ (ತತ್ವಬೋಧದೀಕ್ಷೆ)

ದದ್ಯಾದ್ದೀಕ್ಷಾಂ ವಿಧಾನಜ್ಞಃ ಕೃಪಾಪರವಶೋ ಗುರುಃ।
ಸಚ್ಚಿತ್ಸುಖನಿಜಾಕಾರಂ ಲಿಂಗಂ ಯದ್ ಬ್ರಹ್ಮಸಂಜ್ಞಿತಮ್॥
ತದಸಿ ತ್ವಮುಪಾಸ್ವಾತಸ್ತದೇವಾಹಮಿತಿ ಧ್ರುವಮ್।
ವೇಧಾಖ್ಯಯಾ ದೀಕ್ಷಯೈವಂ ಶಿಷ್ಯಮಾದಿಶ್ಯ ದೇಶಿಕಃ॥[೫೨]

ಶಿವ–ಜೀವರ ಐಕ್ಯವನ್ನು ಉಪದೇಶಿಸುವುದೇ ತತ್ತ್ವೋಪದೇಶ. ಅದನ್ನು ಲಿಂಗಾಂಗಸಾಮರಸ್ಯವೆನ್ನುತ್ತಾರೆ. ಶ್ರೀಗುರುವು 'ತತ್ತ್ವಮಸಿ' ಮಹಾವಾಕ್ಯದಿಂದ ಅಂಗಲಿಂಗ ಸಮಾಯೋಗವನ್ನು ಉಪದೇಶ ಮಾಡುತ್ತಾನೆ. ಗುರೂಪದೇಶವನ್ನು ಪಡೆದ ಸಾಧಕನು 'ಆ ಪರಬ್ರಹ್ಮವೇ ನಾನು' ಎಂಬ ಭಾವನೆಯಿಂದ ಸದಾ ಧ್ಯಾನಿಸುತ್ತಿರುತ್ತಾನೆ. ಈ ರೀತಿಯಾಗಿ ಲಿಂಗಾಂಗ ಸಾಮರಸ್ಯವನ್ನು ಬೋಧಿಸುವ ಉಪದೇಶವೇ ತತ್ವಬೋಧ ಅಥವಾ ತತ್ತ್ವೋಪದೇಶಿನೀದೀಕ್ಷಾ. ಅರ್ಥಾತ್ **ಸಚ್ಚಿದಾನಂದ ಸ್ವರೂಪ ಬ್ರಹ್ಮಸಂಜ್ಞೆಯಾದ ಲಿಂಗವು ನೀನಾಗಿದ್ದೀಯೆ,ಅದನ್ನು ಉಪಾಸಿಸು, ಅದೇ ನೀನೆಂದು ಸ್ಥಿರವಾಗಿ ತಿಳಿ ಎಂದು**

---

೫೧. ಕಾ.ಆ, ಕ್ರಿಪಾ, ಪಟಲ ೧, ಶ್ಲೋಕ ಸಂಖ್ಯೆ ೧೦೫–೧೦೭

೫೨. ಕಾ.ಆ, ಕ್ರಿಪಾ, ಪಟಲ ೧, ಶ್ಲೋಕ ಸಂಖ್ಯೆ ೧೦೭–೧೦೮

ಬೋಧಿಸುವುದು ತತ್ವೋಪದೇಶಿನೀ ದೀಕ್ಷೆ.

೩. ಮಂತ್ರದೀಕ್ಷೆ – ಗುರುಣೋದೀರಿತಾ ಕರ್ಣೇ ಸಾ ಹಿ ಮಂತ್ರಾತ್ಮಿಕಾ ಭವೇತ್।[೫೩]

ಮಂತ್ರಗಳಲ್ಲಿ ಅತ್ಯಂತ ಶ್ರೇಷ್ಠವೂ ಪರಮಪವಿತ್ರವೂ ಆದ ಪಂಚಾಕ್ಷರೀ ಮಹಾಮಂತ್ರವನ್ನು ಶ್ರೀಗುರುವು ಶಿಷ್ಯನಿಗುಪದೇಶಿಸಿ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಮಾರ್ಪಡಿಸಿ, ಪ್ರಾಣಲಿಂಗವನ್ನು ಸೂಕ್ಷ್ಮದೇಹದಲ್ಲಿ ನೆಲೆಗೊಳಿಸುವ ವಿಧಾನಕ್ಕೆ "ಮಂತ್ರದೀಕ್ಷೆ" ಎಂದು ಹೆಸರು.

ಶಿವದೀಕ್ಷಾಂಗವಾಗಿ ಗುರುವು ಶಿಷ್ಯನ ಬಲಗಿವಿಯಲ್ಲಿ ರಹಸ್ಯವಾಗಿ ಮಾಡುವ ಪಂಚಾಕ್ಷರಮಹಾಮಂತ್ರೋಪದೇಶವೇ ಮಂತ್ರದೀಕ್ಷೆ. ಸಾಧಕನು ಗುರೂಪದೇಶ ಕ್ರಮದಿಂದ ಮೂಲಮಂತ್ರವನ್ನು ಮನನಮಾಡುವುದರಿಂದ ಮಾಯಾಮಲವು ಮಾಯವಾಗಿ 'ನಾನು ಚಿದ್ರೂಪನು' ಎಂಬ ಭಾವ ಉದಯವಾಗುತ್ತದೆ. ಇದನ್ನೇ ಪ್ರಾಣಲಿಂಗವೆಂದು ಕರೆಯಲಾಗಿದೆ. ಹೀಗೆ ಮಾಯಾಮಲವನ್ನು ನಿವಾರಿಸಿ ಪ್ರಾಣಲಿಂಗವನ್ನು ನೆಲೆಗೊಳಿಸುವ ದೀಕ್ಷೆಯೇ ಮಂತ್ರದೀಕ್ಷೆ.

ಪ್ರಾಣಾನಾಯಮ್ಯ ಚ ಗುರುರ್ಮನುದೀಕ್ಷಾಚಿಕೀರ್ಷಯಾ।
ಸಪ್ತ ಚೈಕಾಗ್ರಚಿತ್ತಾದ್ಯಾ ದದ್ಯಾದ್ ದೀಕ್ಷಾ ಅನುಕ್ರಮಾತ್॥
ತತ್ರೈಕಾಗ್ರಮತಿಸ್ತ್ವಾದ್ಯಾ ದ್ವಿತೀಯಾ ತು ದೃಢವ್ರತಾ।
ಪಂಚೇಂದ್ರಿಯಾರ್ಪಣಾಭಿಖ್ಯಾ ತೃತೀಯಾ ಪರಿಕೀರ್ತಿತಾ।
ಅಹಿಂಸಾಖ್ಯಾ ತುರೀಯಾ ಸ್ಯಾಲ್ಲಿಂಗನಿಷ್ಠಾ ತು ಪಂಚಮೀ।
ಅನಂತರಾ ವಿನಿರ್ದಿಷ್ಟಾ ಷಷ್ಠೀ ಲಿಂಗಮನೋಲಯಾ।
ಸಪ್ತಮೀ ತು ಸಮಾಖ್ಯಾತಾ ಸದ್ಯೋಮುಕ್ತಿಸಮಾಹ್ವಯಾ॥[೫೪]

ಮಂತ್ರದೀಕ್ಷೆಯಲ್ಲಿ ಸಹ ಚಿತ್ತೈಕಾಗ್ರತಾ, ದೃಢವ್ರತಾ, ಪಂಚೇಂದ್ರಿಯಾರ್ಪಣಾ, ಅಹಿಂಸಾ, ಲಿಂಗನಿಷ್ಠಾ, ಲಿಂಗಮನೋಲಯಾ, ಸದ್ಯೋಮುಕ್ತಿ ಎಂಬ ಸಪ್ತವಿಧವಾದ ಉಪದೇಶಗಳನ್ನು ಅಂತರ್ಗತಗೊಳಿಸಲಾಗಿದೆ:

ಅ. ಏಕಾಗ್ರಮತಿ ದೀಕ್ಷಾ

ಇಷ್ಟಲಿಂಗಾತ್ ಪರಂ ವಸ್ತು ಶಿಷ್ಯ ತ್ವಂ ನಾವಲೋಕಯ।
ಇತ್ಯೇಕಾಗ್ರಮತಿಂ ದತ್ತ್ವಾ ದೀಕ್ಷಾಂ ದದ್ಯಾದ್ ದೃಢವ್ರತಾಮ್॥[೫೫]

ಚಾಂಚಲ್ಯ ಚಿತ್ತದ ಸಹಜಸ್ವಭಾವ. ಚಿತ್ತದಲ್ಲಿ ಚಂಚಲತೆಯಿದ್ದರೆ ಸಾಧಕನು ಏಕದೇವೋಪಾಸನೆ ಮಾಡಲು ಅರ್ಹನಾಗುವುದಿಲ್ಲ. **ಗುರುವು ಶಿಷ್ಯನಿಗೆ ಇಷ್ಟಲಿಂಗಕ್ಕಿಂತಲೂ**

---

೫೩. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೪
೫೪. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೯–೧೧೧
೫೫. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೧೨

ಮಿಗಿಲಾದುದು ಯಾವುದೂ ಇಲ್ಲ. ಇಷ್ಟಲಿಂಗವೇ ಪರವಸ್ತುವೆಂಬ ಅರಿವು ಮೂಡಿಸಿ ಏಕದೇವೋಪಾಸನೆಯ ಮಹತ್ತ್ವವನ್ನು ತಿಳಿಸುವ ಸಂಸ್ಕಾರವನ್ನು ಏಕಾಗ್ರಮತಿ ದೀಕ್ಷಾ ಎಂದು ಕರೆಯಲಾಗಿದೆ.

ಆ. ದೃಢವ್ರತದೀಕ್ಷೆ

ಶರೀರಪಾತಪರ್ಯಂತಂ ನ ಜಹೀಹಿ ವ್ರತಾನ್ಯಪಿ।
ದೃಢವ್ರತಾಮಿತಿ ಪ್ರೋಕ್ತ್ವಾ ದದ್ಯಾತ್ ಪಂಚೇಂದ್ರಿಯಾರ್ಪಣಾಮ್॥[೫೬]

ಸಾಧಕನು ದೃಢಮನಸ್ಕನಾಗಿದ್ದರೆ ವಿಘ್ನಗಳಿಂದ ಪದೇ ಪದೇ ಬಾಧಿಸಲ್ಪಟ್ಟರೂ ಹಿಡಿದ ವ್ರತವನ್ನು ಬಿಡುವುದಿಲ್ಲ. ದೇಹವಿರುವವರೆಗೆ ವ್ರತಕ್ಕೆ ಲೋಪಬಾರದಂತೆ ಪರಿಪಾಲಿಸುವುದೇ ದೃಢವ್ರತವೆನಿಸುತ್ತದೆ. ಇಂತಹ ದೃಢವ್ರತವನ್ನು ಉಪದೇಶಿಸುವ ಸಂಸ್ಕಾರವೇ ದೃಢವ್ರತದೀಕ್ಷೆ.

ಇ. ಪಂಚೇಂದ್ರಿಯಾರ್ಪಣದೀಕ್ಷೆ

ಸತ್ಯಹಂ ಮತ್ಪತಿರ್ಲಿಂಗಮಿತಿ ನಿಶ್ಚಿತ್ಯ ಚೇತಸಿ।
ಸದಾ ತನುಮನೋಭಾವಾನಿಷ್ಟಾದಿಭ್ಯಃ ಸಮರ್ಪಯ॥[೫೭]

ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳು ಸ್ವಭಾವತಃ ತಮ್ಮ ತಮ್ಮ ವಿಷಯಗಳಲ್ಲಿ ಪ್ರವರ್ತಿಸುತ್ತವೆ. ಇವುಗಳ ವಿಷಯ ಪ್ರವೃತ್ತಿಯನ್ನು ನಿರೋಧಿಸಿ ಭಗವಂತನಿಗೆ ಅರ್ಪಿಸುವುದೇ ಪಂಚೇಂದ್ರಿಯಾರ್ಪಣವೆಂದು ಹೇಳಲಾಗಿದೆ. ವೀರಶೈವ ಸಾಧಕನು ತನ್ನ ಲಿಂಗವೇ ಪತಿಯಾಗಿದ್ದು ತಾನು ಸತಿಯೆಂದು ಭಾವಿಸಿ ಸದಾ ತನ್ನ ಶರೀರ, ಮನಸ್ಸು ಮತ್ತು ಭಾವಗಳನ್ನು ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳಿಗೆ ಅರ್ಪಿಸಬೇಕೆಂದು ಯಾವ ಗುರೂಪದೇಶವಿದೆಯೋ ಅದೇ ಪಂಚೇಂದ್ರಿಯಾರ್ಪಣದೀಕ್ಷೆ.

ಈ. ಅಹಿಂಸಾದೀಕ್ಷೆ

ಇತ್ಯಾದಿಶ್ಯ ತತೋ ದದ್ಯಾದಹಿಂಸಾಸಂಜ್ಞಿತಾಂ ಗುರುಃ।
ಸರ್ವಾಣೀಮಾನಿ ಭೂತಾನ್ಯಪ್ಯಾತ್ಮವತ್ ಪರಿಭಾವಯನ್।
ಮಾ ಹಿಂಸೀರಿತ್ಯುಪಾದಿಶ್ಯ ಲಿಂಗನಿಷ್ಠಾಮುಪಾದಿಶೇತ್॥[೫೮]

ಅಹಿಂಸೆಯನ್ನು ಪರಿಪಾಲಿಸಬೇಕಾದರೆ ಸಕಲಜೀವಿಗಳಲ್ಲಿ ಆತ್ಮದೃಷ್ಟಿಯನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ ಆದ್ದರಿಂದಲೇ ಗುರುವು ಶಿಷ್ಯನಿಗೆ ಸರ್ವಭೂತಗಳಲ್ಲಿ ಆತ್ಮದೃಷ್ಟಿಯನ್ನು ಉಪದೇಶಮಾಡುತ್ತಾನೆ. ಎಲ್ಲ ಪ್ರಾಣಿಗಳಲ್ಲೂ ಜೀವಾತ್ಮನಿದ್ದಾನೆ. ಅದರಂತೆ ಪ್ರಾಣಿಗಳೂ

೫೬. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೧೩
೫೭. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೧೪
೫೮. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೧೪-೧೧೫

ನಮ್ಮಂತೆ ಬದುಕಲು ಅವಕಾಶವಿರಬೇಕು. ಆದುದರಿಂದ ಪ್ರಾಣಿಹಿಂಸೆ ಮಾಡಬಾರದೆಂಬುದೇ ಅಹಿಂಸಾದೀಕ್ಷೆ. ಅರ್ಥಾತ್ ಎಲ್ಲ ಪ್ರಾಣಿಗಳನ್ನು ನಿನ್ನಂತೆಯೇ ಭಾವಿಸು, ಅವುಗಳ ಹಿಂಸೆಯನ್ನು ಮಾಡಬೇಡವೆಂದು ಮಾಡುವ ಉಪದೇಶವೇ ಅಹಿಂಸಾದೀಕ್ಷೆಯೆನಿಸುತ್ತದೆ.

ಉ. ಲಿಂಗನಿಷ್ಠಾದೀಕ್ಷೆ

ಆದಿಮಧ್ಯಾಂತರಹಿತಂ ಲಿಂಗಂ ಯದ್ ಬ್ರಹ್ಮಸಂಜ್ಞಿತಮ್।
ತನ್ನಿಷ್ಠೋ ಭವ ಸದ್‌ಬುದ್ಧೇ ಇತ್ಯುಪಾದಿಶ್ಯ ಸದ್ಗುರುಃ॥[೫೯]

ಪ್ರಪಂಚದ ಲಯ ಗಮನಗಳಿಗೆ ಕಾರಣೀಭೂತವಾದ ಆದ್ಯಂತ ರಹಿತವಾದ ಪರಶಿವಬ್ರಹ್ಮವೇ ಲಿಂಗ. ಗುರುವು ಸದ್ಗುಣಿಯಾದ ಶಿಷ್ಯನಿಗೆ ಪರಬ್ರಹ್ಮವೆಂದು ಕರೆಯಲ್ಪಡುವ ಆದಿ, ಮಧ್ಯ ಮತ್ತು ಅಂತ್ಯಗಳಿಲ್ಲದಿರುವ ಲಿಂಗದಲ್ಲಿಯೇ ದೃಢವಾದ ಭಕ್ತಿಯನ್ನು, ನಿಷ್ಠೆಯನ್ನರಿಸಬೇಕೆಂದು ಉಪದೇಶಿಸುವುದೇ ಲಿಂಗನಿಷ್ಠಾದೀಕ್ಷೆ.

ಊ. ಲಿಂಗಮನೋಲಯದೀಕ್ಷೆ

ದೀಕ್ಷಾಮುಪದಿಶೇದ್ ಭೂಯೋ ಲಿಂಗರೂಪಮನೋಲಯಾಮ್।
ಲಿಂಗರೂಪಮಭಿಧ್ಯಾಯನ್ನಮನಸ್ಕಶ್ಚಿರಂ ಭವ॥[೬೦]

ಸ್ವಾಭಾವಿಕವಾಗಿ ಚಂಚಲವಾಗಿರುವ ಮನಸ್ಸನ್ನು ತನ್ನ ಆರಾಧ್ಯದೈವವಾದ ಮಹಾಲಿಂಗದಲ್ಲಿ ಲಯಗೊಳಿಸುವ ಉಪದೇಶವೇ ಲಿಂಗಮನೋಲಯದೀಕ್ಷೆ. ಅರ್ಥಾತ್ ಲಿಂಗರೂಪವನ್ನು ಧ್ಯಾನಿಸುತ್ತಾ ಅಮನಸ್ಕನಾಗು ಎಂದು ಉಪದೇಶಿಸುವುದು ಲಿಂಗಮನೋಲಯದೀಕ್ಷೆ.

ಋ. ಸದ್ಯೋಮುಕ್ತಿದೀಕ್ಷೆ

ಇತ್ಯಾದಿಶ್ಯ ಪುನರ್ದದ್ಯಾತ್ ಸದ್ಯೋಮುಕ್ತಿಸಮಾಹ್ವಯಾಮ್।
ಮದುಕ್ತಾರ್ಥೇ ಸ್ಥಿರಮತಿಃ ಪ್ರವರ್ತಸ್ವ ವಿಸಂಶಯಃ॥[೬೧]

ಮಂತ್ರದೀಕ್ಷೆಯ ಅಂತಿಮೋಪದೇಶ ಸದ್ಯೋಮುಕ್ತಿ. ಶ್ರೀಗುರುವು ಜೀವನ್ಮುಕ್ತಿಯ ಸ್ವರೂಪವನ್ನು ಉಪದೇಶಿಸಿ ಅದರಲ್ಲಿಯೇ ಶಿಷ್ಯನ ಮನಸ್ಸನ್ನು ಸ್ಥಿರಗೊಳಿಸುತ್ತಾನೆ. ಸಂಶಯವನ್ನು ಪರಿಹರಿಸಿಕೊಂಡು ಗುರೂಪದೇಶಾನುಸಾರವಾಗಿ ಸಾಧಿಸುವ ಸಾಧಕನಿಗೆ ಜೀವನ್ಮುಕ್ತವಸ್ಥೆಯು ಸಹಜವಾಗಿಯೇ ಪ್ರಾಪ್ತವಾಗುತ್ತದೆ. ಕ್ರಮಬದ್ಧವಾದ ವಿಧಾನದಿಂದ ಜೀವನ್ಮುಕ್ತಿಯನ್ನು ದೊರಕಿಸಿಕೊಡುವ ಉಪದೇಶವೇ ಸದ್ಯೋಮುಕ್ತಿದೀಕ್ಷೆಯೆಂದು ಕರೆಯಲ್ಪಟ್ಟಿದೆ. ಅರ್ಥಾತ್ ಗುರುವು ಶಿಷ್ಯನಿಗೆ ಪರವಸ್ತು ಪ್ರತೀಕವಾದ ಲಿಂಗವನ್ನು ಧಾರಣೆ

---

೫೯. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೧೬
೬೦. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೧೬-೧೧೭
೬೧. ಕಾ.ಆ, ಕ್ರಿ.ಪಾ, ಪಟಲ ೧, ಶ್ಲೋಕ ಸಂಖ್ಯೆ ೧೧೭-೧೧೮

ಮಾಡಿಕೊಂಡು ಅದರಲ್ಲಿ ಮನಮಗ್ನವಾಗಿ ಅನ್ಯ ವಿಷಯಗಳಿಂದ ಮುಕ್ತನಾಗು ಹಾಗೂ ತಾವು ಹೇಳಿದ್ದನ್ನು ಸ್ಥಿರಬುದ್ಧಿಯಿಂದ ಪರಿಪಾಲಿಸು ಎಂದು ಬೋಧಿಸುವುದು ಸದ್ಯೋಮುಕ್ತಿದೀಕ್ಷೆ.

ಹೀಗೆ ತ್ರಿವಿಧ ದೀಕ್ಷೆಗಳ ಅಂತರ್ಗತವಾದ ಈ ಇಪ್ಪತ್ತೊಂದು ದೀಕ್ಷೆಗಳ ಕಾಲದಲ್ಲಿ ಆಚರಿಸಬೇಕಾದ ಕ್ರಿಯೆಗಳನ್ನು, ಮಾಡಿಕೊಳ್ಳಬೇಕಾದ ಮಂಟಪರಚನಾದಿ ಸಿದ್ಧತೆಗಳನ್ನು, ಉಚ್ಚರಿಸಬೇಕಾದ ಮಂತ್ರಗಳನ್ನು, ಬೋಧಿಸಬೇಕಾದ ಉಪದೇಶಗಳನ್ನು ಆಗಮಗಳು ವಿಸ್ತೃತವಾಗಿ ವಿವರಿಸಿವೆ.

ಈ ಭಕ್ತಿ-ಜ್ಞಾನ-ಕ್ರಿಯಾ ಸಮನ್ವಯವನ್ನು ಹೊಂದಿದ ಈ ದೀಕ್ಷಾಸಂಸ್ಕಾರ ವಿಧಾನವನ್ನು ಸ್ವತಂತ್ರ ಸಿದ್ಧಲಿಂಗೇಶ್ವರರು "ಶ್ರೀಗುರು ಕರುಣಿಸಿ ಅಂಗದ ಮೇಲೆ ಲಿಂಗವ ಧರಿಸಿದ ಕಾರಣ, ಸರ್ವಾಂಗವು ಲಿಂಗವಾಯಿತ್ತು. ಅದೆಂತೆಂದೊಡೆ: ಅಗ್ನಿಯಿಂದ ತಪ್ತವಾದ ಲೋಹದ ಪುತ್ಥಳಿಯಂತೆ ಒಳಗೂ ಹೊರಗೂ ಏಕವಾಗಿ ಲಿಂಗವೇ ಬೆಳಗುತ್ತಿದ್ದ ಕಾರಣ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ, ನಿಮ್ಮ ಶರಣ ಸರ್ವಾಂಗಲಿಂಗಿಯಾದನು."[೬೨] ಎಂದು ಉಪಮೆಯೊಂದಿಗೆ ವಿವರಿಸಿದ್ದಾರೆ.

ಈ ದೀಕ್ಷಾಸಂಸ್ಕಾರವು ಪರಶಿವನ ಅಂಶವಾದ ಜೀವಾತ್ಮನು ಮರಳಿ ಪರಶಿವನಲ್ಲಿಯೇ ಲೀನವಾಗುವ ಲೀಲಾವಿನೋದದ ಪ್ರಥಮ ಸೋಪಾನವಾಗಿದೆ. ಇದನ್ನೇ ಚೆನ್ನಬಸವಣ್ಣನವರು-

ಅಯ್ಯಾ, ಅನಾದಿ ವಸ್ತುವೆ ಗುರು-ಶಿಷ್ಯ, ಭಕ್ತ-ಜಂಗಮ, ಗುರು-ಲಿಂಗ,
ಶರಣಸತಿ-ಲಿಂಗಪತಿಯೆಂಬ ಸಾಕಾರಲೀಲೆಯ ಧರಿಸಿ,
ಅವಿರಳಾನಂದ ನಿಜ ವೇಧಾ-ಮಂತ್ರ-ಕ್ರಿಯಾದೀಕ್ಷಾಯುಕ್ತವಾದ
ಮೂರೇಳು ಇಪ್ಪತ್ತೊಂದು ದೀಕ್ಷೆಯ
ಭಿನ್ನವಿಲ್ಲದೆ ಸದ್ಗುರುಮುಖದಿಂದ ಅರಿದಾನಂದಿಸ ಬಲ್ಲಡೆ,
ಸಹಜ ದೀಕ್ಷೆಯುಳ್ಳ ಶ್ರೀಗುರುಲಿಂಗಜಂಗಮ,
ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ
ನಿರವಯವಮೂರ್ತಿಯೆಂಬೆನಯ್ಯಾ ಕೂಡಲಚೆನ್ನಸಂಗಮನಲ್ಲಿ.[೬೩]

ಎಂದಿದ್ದಾರೆ. ಹೀಗೆ ವೇಧಾ-ಮನು-ಕ್ರಿಯೆಯೆಂಬ ತ್ರಿವಿಧ ದೀಕ್ಷೆಗಳ ಸಂಸ್ಕಾರಗಳಿಂದ ಸುಸಂಸ್ಕೃತನಾದ ಜೀವನು ಅಂಗತ್ರಯಗಳಲ್ಲಿ ಮಲತ್ರಯರಹಿತನಾಗಿ ಷಟ್ಸ್ಥಲ ಬ್ರಹ್ಮಜಿಜ್ಞಾಸೆಗೆ ಅಧಿಕಾರಿಯಾಗುತ್ತಾನೆ. ಕ್ರಮಕ್ರಮವಾಗಿ ಸಾಧಕನ ಅಂಗಗುಣಗಳು ಲಿಂಗಗುಣಗಳಾಗಿ ಪರಿವರ್ತನೆಗೊಂಡು ಪರಿಪೂರ್ಣದೆಡೆಗೆ ಸಾಗಿ ಹರನಾಗುತ್ತಾನೆ; ಲಿಂಗಾಂಗಸಾಮರಸ್ಯವನ್ನು ಹೊಂದುತ್ತಾನೆ. ಇದನ್ನೇ ಬಸವಣ್ಣನವರು-

---

೬೨. ವಚನಸಾಹಿತ್ಯಸಂಗ್ರಹ-ಸಂ.ಭೂಸನೂರಮಠ- ವ.ಸಂ. ೭೦ ಪುಟ ೧೧೫

೬೩. ಚೆ.ಬ.ವ.ಸಂ. ಸಮಗ್ರ ವಚನ ಸಂಪುಟ ೩, ವ. ಸಂ. ೯೧೪, ಪುಟ ೨೮೨

ಅಯ್ಯಾ, ಎನ್ನ ಹೃದಯದಲ್ಲಿ ವ್ಯಾಪ್ತವಾಗಿಹ ಪರಮ ಚಿದ್ಬೆಳಗ
ಹಸ್ತಮಸ್ತಕ ಸಂಯೋಗದಿಂದೊಂದುಗೂಡಿ ಮಹಾಬೆಳಗ ಮಾಡಿದಿರಲ್ಲಾ. ಅಯ್ಯಾ,
ಎನ್ನ ಮಸ್ತಕದೊಳಗೊಂದುಗೂಡಿದ
ಮಹಾಬೆಳಗ ತಂದು ಭಾವದೊಳಗಿಂಬಿಟ್ಟಿರಲ್ಲಾ,
ಅಯ್ಯಾ, ಎನ್ನ ಭಾವದೊಳಗೆ ಕೂಡಿದ
ಮಹಾಬೆಳಗ ತಂದು ಮನಸಿನೊಳಗಿಂಬಿಟ್ಟಿರಲ್ಲಾ.
ಅಯ್ಯಾ, ಎನ್ನಕಂಗಳೊಳು ಕೂಡಿದ
ಮಹಾಬೆಳಗ ತಂದು ಕಂಗಳೊಳಗಿಂಬಿಟ್ಟಿರಲ್ಲಾ.
ಅಯ್ಯಾ. ಎನ್ನ ಮನಸಿನೊಳು ಕೂಡಿದ ಮಹಾಬೆಳಗ ತಂದು
ಕರಸ್ಥಲದೊಳಗಿಂಬಿಟ್ಟಿರಲ್ಲಾ.
ಅಯ್ಯಾ, ಎನ್ನ ಕರಸ್ಥಲದಲ್ಲಿ ಥಳಥಳಿಸಿ ಬೆಳಗಿ ಹೊಳೆಯುತ್ತಿಪ್ಪ ಅಖಂಡತೇಜವನೆ
ಇಷ್ಟಲಿಂಗವೆಂಬ ದೃಷ್ಟವ ತೋರಿ ನಿಶ್ಚಯವ ಶ್ರೋತ್ರದಲ್ಲಿ ಸೃಜಿಸಿದಿರಲ್ಲಾ.
ಅಯ್ಯಾ, ಎನ್ನ ಶ್ರೋತ್ರದಲ್ಲಿ ಸೃಜಿಸಿದ ಸುಮಂತ್ರದೊಳಗೆ ನೀವು ನಿಮ್ಮ ಮಹತ್ವವ
ಹುದುಗಿದಿರಲ್ಲಾ, ಅಯ್ಯಾ, ಎನ್ನ ಆರಾಧ್ಯ ಕೂಡಲಸಂಗಮದೇವಾ, ಎನ್ನೊಳಗೆ
ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದಿರಲ್ಲಾ.[೬೪]

ಎಂದಿದ್ದಾರೆ. ಅಕ್ಕಮಹಾದೇವಿಯು ತಮ್ಮ ವಚನದಲ್ಲಿ ಇದೇ ಅನುಭಾವವನ್ನು ತೋರ್ಪಡಿಸುತ್ತಾ,

ಶ್ರೀಗುರುಲಿಂಗದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ
ಮೇಲೆ ಇರಿಸಿದಾಗಳೇ ಎನ್ನ ಭವಂ ನಾಸ್ತಿಯಾಯಿತ್ತು.
ಎನ್ನ ತನ್ನಂತೆ ಮಾಡಿದ. ಎನಗೆ ತನಗೆ ತೆರಹಿಲ್ಲದಂತೆ ಮಾಡಿ
ತೋರಿದನು ನೋಡಾ! ತನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನೆನ್ನ
ಕರಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಮನ ಸ್ಥಲದಲ್ಲಿದ್ದ
ಮಹಾಲಿಂಗವನೆನ್ನ ಎನ್ನ ಭಾವಸ್ಥಲದಲ್ಲಿ ಮೂರ್ತಿಗೊಳಿಸಿದ.
ಎನ್ನ ಭಾವಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ ಜ್ಞಾನಸ್ಥಲದಲ್ಲಿ
ಮೂರ್ತಿಗೊಳಿಸಿದ. ಎನ್ನ ಜ್ಞಾನಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ
ಸರ್ವಾಂಗದೊಳಹೊರ್ಗಗೆ ತೆರಹಿಲ್ಲದಳವಡಿಸಿದ ನಮ್ಮ ಶ್ರೀಗುರುಲಿಂಗ ದೇವ
ಚೆನ್ನಮಲ್ಲಿಕಾರ್ಜುನ.[೬೫]

ಎಂದಿದ್ದಾರೆ. ಹೀಗೆ ದೀಕ್ಷೆಯು ಗುರುವಿನ ಅನುಗ್ರಹದಿಂದ, ಉಪದೇಶದ ಮೂಲಕ

---

೬೪. ಬ.ವ.ಸಂ. ಸಮಗ್ರ ವಚನ ಸಂಪುಟ ೧, ವ. ಸಂ. ೯೮೬. ಪುಟ ೨೬೫

೬೫. ವಚನಸಾಹಿತ್ಯಸಂಗ್ರಹ–ಸಂ.ಭೂಸನೂರಮಠ – ವ.ಸಂ. ೬೭ ಪುಟ ೧೧೪

ಪ್ರಾಪ್ತವಾಗುತ್ತದೆ. ಇದು ಭಕ್ತನು ಜೀವನದಲ್ಲಿ ನಡೆದುಕೊಳ್ಳಬೇಕಾದ ರೀತಿಯನ್ನು ಮತ್ತು ಅದನ್ನು ಸಾಧಿಸಲು ಬೇಕಾದ ಜ್ಞಾನದ ಬೋಧನೆಗಳನ್ನು ನೀಡುತ್ತದೆ. ಅವುಗಳನ್ನು ಶಿಷ್ಯನು ತನ್ನ ಜೀವನದಲ್ಲಿ ಪ್ರಯತ್ನಪೂರ್ವಕವಾಗಿ ಅಳವಡಿಸಿಕೊಂಡರೆ ಅವುಗಳ ಸಾಕ್ಷಾತ್ಕಾರವಾಗುತ್ತದೆ. ವೀರಶೈವ ಧರ್ಮದ ಈ ಪರಮ ಪವಿತ್ರವಾದ ದೀಕ್ಷೆಯನ್ನು ನೀಡುವ ಅಧಿಕಾರವನ್ನು ಪಂಚಾಚಾರ್ಯರು ಮತ್ತು ಅವರ ಅನುಯಾಯಿಗಳಾದ ಅಸಂಖ್ಯಾತ ಶಿವಾಚಾರ್ಯರು ಅನುಗ್ರಹಿಸುತ್ತಾ ಬಂದಿರುವರು. ಪಾಶುಪತಾಗಮದ ಉಕ್ತಿಯಂತೆ–

ಪಂಚಮಹಾಚಾರ್ಯೈರುಪದೇಶಃ ಕೃತೋ ಭವೇತ್।
ಉಪದೇಶಃ ಸ್ವಗೋತ್ರಾಣಾಂ ಕರ್ತವ್ಯೋ ಗುರುಸತ್ತಮೈಃ।
ಉಪಸೂತ್ರೈಶ್ಚ ಕರ್ತವ್ಯೋ ಮಹಾಸೂತ್ರಾವಲಂಬನೈಃ॥ [೬೬]

ಎಂಬಂತೆ ವೀರಶೈವರಿಗೆ ಪ್ರಧಾನವಾಗಿ ಪಂಚಪೀಠಗಳಿದ್ದು, ಆ ಪೀಠಗಳಿಗೆ ಅಭಿಷಿಕ್ತರಾದವರನ್ನು ಪಂಚಾಚಾರ್ಯರೆಂದೂ, ಜಗದ್ಗುರುಗಳೆಂದೂ ಕರೆಯುವರು. ಶಾಖಾಮಠಗಳಿಗೆ ಅಭಿಷಿಕ್ತರಾಗುವವರನ್ನು ಶಿವಾಚಾರ್ಯರೆಂದು ಕರೆಯುವರು. ಅವರುಗಳೇ ತಮ್ಮ ಶಾಖಾನುಯಾಯಿಗಳಾದ ವೀರಶೈವ ಭಕ್ತರಿಗೆ ದೀಕ್ಷಾ ಸಂಸ್ಕಾರವನ್ನು ಕರುಣಿಸಿ ಷಟಸ್ಥಲ ಜ್ಞಾನೋಪದೇಶ ಮಾಡುವ ಪದ್ಧತಿ ಪರಂಪರಾಗತವಾಗಿ ನಡೆದುಬಂದಿದೆ.

ಒಟ್ಟಿನಲ್ಲಿ ದೀಕ್ಷಾ ಸಂಸ್ಕಾರದ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ತಿಳಿದುಬರುವ ವಿಷಯವೇನೆಂದರೆ, ಆಗಮಗಳಲ್ಲಿ ದೀಕ್ಷೆಯ ಬಗ್ಗೆ ಅತ್ಯಂತ ವ್ಯವಸ್ಥಿತವಾಗಿ, ಶಾಸ್ತ್ರೀಯವಾಗಿ ವಿವರಿಸಲಾಗಿದೆ. ವೇಧಾ, ಮಂತ್ರ ಮತ್ತು ಕ್ರಿಯಾ ಎಂಬ ಮೂರು ವಿಧದ ದೀಕ್ಷೆಯ ಲಕ್ಷಣವನ್ನು ಕೊಟ್ಟು ಪ್ರತಿಯೊಂದು ದೀಕ್ಷೆಯಲ್ಲೂ ಏಳೇಳು ಪ್ರಕಾರಗಳನ್ನು ಗುರುತಿಸಿ, ಅವುಗಳ ಸ್ವರೂಪವನ್ನು ವಿವರಿಸಿವೆ. ವಚನಕಾರರೂ ಸಹ ದೀಕ್ಷೆಯ ಕ್ರಿಯಾಚರಣೆಯನ್ನು ಸಮರ್ಥಿಸಿ, ತಮ್ಮ ವಚನಗಳಲ್ಲಿ ಹಲವೆಡೆ ಆಗಮೋಲ್ಲೇಖಗಳೊಂದಿಗೆ ಪ್ರತಿಪಾದಿಸಿದ್ದಾರೆ. ಚೆನ್ನಬಸವಣ್ಣನವರು ಈ ೨೧ ವಿಧದ ದೀಕ್ಷೆಗಳನ್ನು ಕಾಯಕ್ಕೆ, ಪ್ರಾಣಕ್ಕೆ, ಮನಕ್ಕೆ ಎಂದು ನಿರೂಪಿಸಿ, ಆ ದೀಕ್ಷೆಗಳ ಪ್ರಯೋಗವನ್ನು ಸ್ಪಷ್ಟಪಡಿಸಿದ್ದಾರೆ. ಕಾರಣ ವೀರಶೈವ ಧರ್ಮದ ಅತ್ಯಂತ ಪ್ರಧಾನ ಲಕ್ಷಣವಾದ ಇಷ್ಟಲಿಂಗ ಪೂಜೆಯು ಆಗಮಕಾಲದಿಂದಲೇ ಪ್ರಚಲಿತದಲ್ಲಿತ್ತೆ ವಿನಃ ಬಸವಾದಿ ಶಿವಶರಣರಿಂದ ಪ್ರಾರಂಭಗೊಂಡಿಲ್ಲ ಎಂಬ ಸಂಗತಿಯನ್ನು ಅತ್ಯಂತ ಸ್ಪಷ್ಟವಾಗಿ ಶಿವಾಗಮಗಳು ಸಮರ್ಥಿಸುತ್ತವೆ. ಕಾರಣ ದೀಕ್ಷಾಸಂಸ್ಕಾರದ ವಿಷಯ ಪ್ರತಿಪಾದನೆಯಲ್ಲಿ ಶಿವಾಗಮಗಳ ಪ್ರಭಾವ ವಚನಕಾರರ ಮೇಲೆ ಆಗಿರುವುದು ವಚನಗಳಲ್ಲಿಯ ಉಲ್ಲೇಖಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ.

---

೬೬. ಪಾಶುಪತಾಗಮ, ದ್ವಿತೀಯ ಪಟಲ, ಶ್ಲೋಕ ಸಂ. ೧೫೩–೧೫೪.

೪.೨.೨ ಶಿವಮೇಧ (ಅಂತ್ಯೇಷ್ಟಿ) ವಿಧಿ

"ಜಾತಸ್ಯ ಮರಣಂ ಧ್ರುವಮ್"ಎಂಬಂತೆ ಹುಟ್ಟಿದವನು ಸಾಯುವುದು ನಿಶ್ಚಿತವಾಗಿದೆ. ಸಾವು ಎಂಬುದೊಂದು ಅಪವಿತ್ರ ಘಟನೆಯೆಂಬ ಭಾವದಿಂದ ಮರಣ ಸೂತಕವನ್ನು ಆಚರಿಸುವ ಕ್ರಮ ಹಿಂದುಗಳಲ್ಲಿದೆ. ಆದರೆ ಲಿಂಗಾಂಗ ಸಾಮರಸ್ಯವೇ ಜೀವಾಳವಾಗಿರುವ ವೀರಶೈವರು "ಮರಣವೇ ಮಹಾನವಮಿ" ಎಂದು ಪರಿಭಾವಿಸುತ್ತಾರೆ. ಏಕೆಂದರೆ, "ಏಕೇನ ಜನ್ಮನಾ ಮುಕ್ತಿಃ ವೀರಾಣಾಂ ತು ಮಹೇಶ್ವರೀ"[೧] ಎಂಬ ಶಿವಾಗಮ ಪ್ರಮಾಣದಂತೆ ವೀರಶೈವರು ಗುರುಮುಖೇನ ದೀಕ್ಷೆಯನ್ನು ಹೊಂದಿ ಮಲತ್ರಯಗಳನ್ನು ಕಳೆದುಕೊಂಡು ಲಿಂಗತ್ರಯಗಳನ್ನು ಹೊಂದಿ, ಲಿಂಗವನ್ನು ಪೂಜಿಸಿದ ಕಾರಣ ಪುನರ್ಜನ್ಮವಿಲ್ಲ. ಹಾಗಾಗಿ ಇದೇ ಅಂತ್ಯಜನ್ಮ. ಆದ್ದರಿಂದ ಇಷ್ಟಲಿಂಗಧಾರಿಗಳಾದ ಶಿವಭಕ್ತರು ಮರಣಾವಸ್ಥೆಯಲ್ಲಿ ಆಚರಿಸಬೇಕಾದ ವಿಧಿಗಳು ಮತ್ತು ಶಿವೈಕ್ಯನಾದ ವ್ಯಕ್ತಿಯ ದೇಹವನ್ನು ಸಂಸ್ಕಾರ ಮಾಡುವ ಕ್ರಮವನ್ನು ಶಿವಾಗಮ ಮತ್ತು ವಚನ ಸಾಹಿತ್ಯದಲ್ಲಿ ನಿರೂಪಿಸಲಾಗಿದ್ದು ಅವುಗಳ ವಿವೇಚನೆ ಇಂತಿದೆ.

'ಶಿವಮೇಧ'ದ ಅರ್ಥ ಮತ್ತು ಪರ್ಯಾಯ ಪದಗಳು

ಶಿವದೀಕ್ಷೆಯನ್ನು ಹೊಂದಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ವ್ರತನಿಷ್ಠನಾದ ವ್ಯಕ್ತಿಯ ಅವಸಾನ ಸಮಯದಲ್ಲಿ ಕೈಕೊಳ್ಳುವ ಸಂಸ್ಕಾರ ಅಥವಾ ಆರಾಧನಾ ರೂಪ ಕರ್ಮಕ್ಕೆ ಶಿವಮೇಧ(ಅಂತ್ಯೇಷ್ಟಿ)ವಿಧಿ ಎಂದು ಹೆಸರು.

ಶಿವಮೇಧ ವಿಧಿಗೆ ಅಂತ್ಯೇಷ್ಟಿವಿಧಿ, ಅವಸಾನವಿಧಿ, ಔರ್ಧ್ವದೇಹಿಕವಿಧಿ, ಪಿತೃಮೇಧವಿಧಿ, ವಿಶಿಷ್ಟಪಿತೃಮೇಧ, ನಿರ್ಯಾಣಯಾಗ ಮುಂತಾದ ಪರ್ಯಾಯ ನಾಮಗಳಿವೆ. ಇವುಗಳಲ್ಲಿ 'ಶಿವಮೇಧ' ಎಂಬುದಕ್ಕೆ ವಿಶೇಷವಾಗಿ ಒತ್ತುಕೊಟ್ಟು ಶಿವಾಗಮಗಳಲ್ಲಿ ಪದನಿಷ್ಪತ್ತಿಯನ್ನು ಹೀಗೆ ಹೇಳಲಾಗಿದೆ.

ಶಿವೇ ಪರೇ ಪ್ರವಿಷ್ಟಾನಾಂ ಮೇಧ ಆರಾಧನಾತ್ಮಕಃ।
ಶಿವಮೇಧ ಇತಿ ಖ್ಯಾತಃ ಕರಣೀಯೋ ಮುಮುಕ್ಷುಭಿಃ॥[೨]

'ಪರಶಿವನಲ್ಲಿ ಲೀನರಾದವರಿಗಾಗಿ ಮಾಡುವ ಆರಾಧನೆಗೆ ಶಿವಮೇಧ ಎನ್ನುವರು. ಮೋಕ್ಷಾಭಿಲಾಷಿಗಳು ಈ ಶಿವಾರಾಧನೆಯನ್ನು ಅವಶ್ಯ ಮಾಡಬೇಕು ಎಂದು ತಿಳಿಸಲಾಗಿದೆ. ಆಗಮಗಳ ಚರ್ಯಾಪಾದದಲ್ಲಿ ಶಿವಮೇಧ ವಿಧಿಯ ವಿಷಯವನ್ನು ನಿರೂಪಿಸಲಾಗಿದ್ದು, ಈ ಶಿವಮೇಧ ವಿಧಿಯ ಕ್ರಿಯಾಕಲಾಪಗಳನ್ನೆಲ್ಲಾ ಐದು ವಿಧಿಗಳನ್ನಾಗಿ ವಿಂಗಡನೆ ಮಾಡಬಹುದು.

---

೧. ಮ.ಆ., ಚ.ಪಾ., ಪಟಲ ೧, ಶ್ಲೋಕ ಸಂಖ್ಯೆ ೮-೧೦

೨. ಚಂ.ಆ. ಚ.ಪಾ. ಪಟಲ ೧, ಶ್ಲೋಕ ಸಂಖ್ಯೆ- ೭

೧. ಶಿವಮೇಧಾ ಪ್ರಶಂಸಾವಿಧಿ,

೨. ಉತ್ಕ್ರಾಂತಿಸಮಯಾಚಾರವಿಧಿ,

೩. ಸಮಾಧಿರಚನಾ ಮತ್ತು ನಿಕ್ಷೇಪವಿಧಿ,

೪. ಔರ್ಧ್ವದೇಹಿಕವಿಧಿ,

೫. ಪ್ರಕೀರ್ಣವಿಧಿ.

ಈ ಕ್ರಮವು ಎಲ್ಲ ಶಿವಾಗಮಗಳಲ್ಲಿಯೂ ಸಾಮಾನ್ಯತಃ ಏಕರೂಪವಾಗಿದೆ.

೧. ಶಿವಮೇಧಪ್ರಶಂಸಾ ವಿಧಿ

ಈ ವಿಧಿಯಲ್ಲಿ ಶಿವಮೇಧದ ಪ್ರಶಂಸೆ, ಶಿವವ್ರತಿಗಳನ್ನು ಖನನಮಾಡಬೇಕೇ ವಿನಾ ದಹನ ಮಾಡಬಾರದು ಎಂಬೆರಡು ವಿಷಯಗಳ ನಿರೂಪಣೆಯಿದೆ.

'ಶಿವಲಿಂಗಧರೋ ವಿಪ್ರೋ ವಿಪನ್ನಸ್ತಂ ನ ದಾಹಯೇತ್।
ಯದಿ ವಾ ದಾಹಯೇತ್ತಸ್ಯ ಬ್ರಹ್ಮಹತ್ಯಾ ಸದಾ ಭವೇತ್॥'
'ಗೃಹೀ ವಾಽಥ ಯತಿರ್ವಾಪಿ ಲಿಂಗಧಾರೀ ತನುಂ ತ್ಯಜೇತ್।
ನ ದಹೇತ್ತಸ್ಯ ದೇಹಂ ತು ಸಮಾಧೌ ಗೋಪಯೇತ್ತದಾ॥'[೩]
ಶಾಂಭವವ್ರತಿನೋ ದೇಹಂ ದಹೇದ್ ಯೋ ಮೂಢಚೇತನಃ।
ನರಕೇ ದಹ್ಯತೇ ಸೋಽಯಂ ಸರ್ವದಾ ಯಮಕಿಂಕರೈಃ॥[೪]

ಶಿವಲಿಂಗಧಾರಿಗಳಾದವರು ಗೃಹಸ್ಥರಾಗಿರಲಿ, ಯತಿಗಳಾಗಿರಲಿ ಅವರು ಪುನರಾವೃತ್ತಿ ರಹಿತರಾದ್ದರಿಂದ ಖನನ (ಸಮಾಧಿ) ಮಾಡಬೇಕೇ ಹೊರತು ದಹನ ಮಾಡಬಾರದು. ಹಾಗೊಂದು ವೇಳೆ ದಹನ ಮಾಡಿದರೆ ಕರ್ತನಿಗೆ ಬ್ರಹ್ಮಹತ್ಯಾದೋಷ ಪ್ರಾಪ್ತವಾಗುವುದು.

ಲಿಂಗಧಾರಿಗಳ ದೇಹ ಮತ್ತು ಧರಿಸಿದ ಲಿಂಗಗಳೆರಡೂ ಪಾರ್ಥಿವವಾಗಿರುವುದರಿಂದ (ಪೃಥಿವಿಗೆ ಸಂಬಂಧಿಸಿದ್ದರಿಂದ) ಅಂಗ-ಲಿಂಗಗಳೆರಡನ್ನೂ ಭೂಮಿಯಲ್ಲಿಯೇ ನಿಕ್ಷೇಪಮಾಡಬೇಕು (ಹೂಳಬೇಕು).

'ಶರೀರಂ ಪಾರ್ಥಿವಂ ಬಾಹ್ಯಂ ಲಿಂಗಂ ಯತ್ತದ್ಧಿ ಪಾರ್ಥಿವಂ।
ಉಭಯಂ ಪಾರ್ಥಿವಂ ಯಸ್ಮಾತ್ ಗೋಪ್ಯಂ ರಂಧ್ರೇ ತು ಪಾರ್ಥಿವೇ॥'[೫]

ಎಂದು ವಾತುಲಾಗಮವು ತಿಳಿಸಿರುವುದಲ್ಲದೇ ಶಿವವ್ರತಿಯ ದೇಹವನ್ನು ದಹನ

---

೩. ಚಂ.ಆ. ಚ.ಪಾ. ಪಟಲ ೧, ಶ್ಲೋಕ ಸಂಖ್ಯೆ- ೯, ೧೩

೪. ಮ.ಆ. ಚ.ಪಾ. ಪಟಲ ೧, ಶ್ಲೋಕ ಸಂಖ್ಯೆ-೧೫

೫. ವಾತುಲಾಗಮ, (ಚಂದ್ರಜ್ಞಾನಾಗಮ ವಿಚಾರ ರಶ್ಮಿ ಪುಟ ೧೬೧)

ಮಾಡಿದರೆ ಶಿವಾಲಯವನ್ನು ಶಿವಲಿಂಗವನ್ನು ಹಾಗೂ ಶಿವನನ್ನೇ ದಹನ ಮಾಡಿದಂತಾಗುತ್ತದೆ. ಅಲ್ಲದೇ ಲಿಂಗವ್ರತಿಯು ಉತ್ಕ್ರಾಂತಿ ಪೂರ್ವದಲ್ಲಿಯೇ ಮಂತ್ರದಿಂದ ತನ್ನಲ್ಲಿ ಅಗ್ನಿಯನ್ನು ಆರೋಪಿಸಿಕೊಳ್ಳುವುದರಿಂದ ದೇಹವು ರುದ್ರಾಗ್ನಿ ಅಥವಾ ಶಿವಾಗ್ನಿಯಿಂದ ಮೊದಲೇ ದಗ್ಧವಾಗಿರುವಾಗ ಪುನಃ ಅದನ್ನು ದಹನಮಾಡಲು ಸಾಧ್ಯವಿಲ್ಲ ಎಂದು ಆಗಮಗಳು ತಿಳಿಸಿವೆ. ವಚನಕಾರರು ಸಹ ಈ ಅಭಿಪ್ರಾಯವನ್ನು ಒಪ್ಪಿದ್ದಾರೆ. ಚೆನ್ನಬಸವಣ್ಣನವರು–

ಅಟ್ಟುದನಡುವರೆ? ಸುಟ್ಟುದ ಸುಡುವರೆ? ಬೆಂದ ನುಲಿಯ ಸಂಧಿಸಬಹುದೆ?
ಪಂಚಾಕ್ಷರಿಯಲ್ಲಿ ದಗ್ಧವಾದ ನಿರ್ದೇಹಿಗೆ ಸಂದೇಹವುಂಟೆ?
ದಗ್ಧಸ್ಯ ದಹನಂ ನಾಸ್ತಿ ಪಕ್ವಸ್ಯ ಪಚನಂ ಯಥಾ।
ಜ್ಞಾನಾಗ್ನಿದಗ್ಧದೇಹಸ್ಯ ನ ಪುನರ್ದಹನಕ್ರಿಯಾ॥
ಇದು ಕಾರಣ ಕೂಡಲಚೆನ್ನಸಂಗನ ಶರಣರು ಭ್ರಾಂತುಸೂತಕ ಕ್ರಿಯಾವಿಹಿತರು.[೬]

ಎಂದು ಹೇಳಿ 'ದಗ್ಧಸ್ಯ ದಹನಂ ನಾಸ್ತಿ...' ಎಂಬ ಶ್ಲೋಕವನ್ನೇ ಉದಾಹರಿಸಿದ್ದಾರೆ. ಇದನ್ನೇ ಬಸವಣ್ಣನವರು–

"[ದೇ]ವರ ಪಾದಕ್ಕೆ ಸಂದಲ್ಲಿ ಆತನ ಶರೀರವ ಸಮಾಧಿಯಲ್ಲಿ ನಿಕ್ಷೇಪವಂ ಮಾಡಿ" [೭]

ಎಂದಿದ್ದಾರೆ. ಕಾರಣ ಲಿಂಗಧಾರಿಗಳಿಗೆ ದಹನ ವಿಧಿಗಿಂತಲೂ ಖನನವಿಧಿಯೇ (ಸುಡುವುದಕ್ಕಿಂತಲೂ ಹೂಳುವುದೇ) ಶ್ರೇಷ್ಠವಾದದ್ದು ಎಂಬ ಆಗಮದ ಅಭಿಪ್ರಾಯವನ್ನೇ ವಚನಗಳೂ ಸಮರ್ಥಿಸಿವೆ.

೨. ಉತ್ಕ್ರಾಂತಿ ಸಮಯಾಚಾರವಿಧಿ

'ಉತ್ಕ್ರಾಂತಿ' ಎಂದರೆ ಜೀವಿಯ ಮರಣಾವಸ್ಥೆಯ ಸ್ಥಿತಿ. ಹೃದಯಕಮಲದಲ್ಲಿ ವಾಸವಾದ ಜೀವನು ಪಂಚಮಹಾಭೂತಗಳಿಂದಾದ ದೇಹವನ್ನು ತ್ಯಜಿಸುವ ಅವಸ್ಥೆಗೆ ಉತ್ಕ್ರಾಂತಿ ಎಂದು ಹೆಸರು. ಈ ಉತ್ಕ್ರಾಂತಿ ವಿಧಿಯಲ್ಲಿ ಮರಣಾವಸ್ಥೆಯ ದೃಷ್ಟಿಯಿಂದ ಎರಡು ವಿಧ. (ಅ) ಉತ್ಕ್ರಾಂತಿಪೂರ್ವ ಸಮಯಾಚಾರವಿಧಿ (ಆ) ಉತ್ಕ್ರಾಂತ್ಯುತ್ತರ ಸಮಯಾಚಾರ ವಿಧಿ.

(ಅ) ಉತ್ಕ್ರಾಂತಿಪೂರ್ವ ಸಮಯಾಚಾರವಿಧಿ

ಪ್ರಾಣವು ಉತ್ಕ್ರಮಣವಾಗುವಾಗ ಸಾಮಾನ್ಯರಿಗಾಗಲಿ ಪ್ರಾಜ್ಞರಿಗಾಗಲೀ ಅನೇಕ ನಿಮಿತ್ತಗಳು ಗೋಚರವಾಗುತ್ತವೆ. ಚಂದ್ರಜ್ಞಾನಾಗಮದಲ್ಲಿಯೂ "ಉತ್ಕ್ರಾಂತಿಂ ಭಾವಿನೀಂ

---

೬ ಚೆ.ಬ.ವ.ಸಂ. ಸಮಗ್ರ ವಚನ ಸಂಪುಟ. ೩, ವ.ಸಂ. ೧೭೦, ಪುಟ ೫೧

೭. ಬ.ವ.ಸಂ. ಸಮಗ್ರ ವಚನ ಸಂಪುಟ. ೧, ವ.ಸಂ. ೧೨೨೧, ಪುಟ ೩೩೬.

ಜ್ಞಾತ್ವಾನಿಮಿತ್ತೈಃ ಸಮನಂತರಮ್"[೮] ಎಂದು ಹೇಳಿದೆ. ಆದರೆ ನಿಮಿತ್ತಗಳಾವುವು ಎಂಬುದನ್ನು ಹೇಳಿಲ್ಲ. ಏಕೆಂದರೆ ಶಿವಯೋಗ ಸಂಪನ್ನರಾದ ವೀರಶೈವರಿಗೆ ಛಾಯಾದಿ ಪುರುಷದರ್ಶನಗಳು ನಿಮಿತ್ತವಾಗುವುದಿಲ್ಲ. ಏಕೆಂದರೆ ಹಗಲಿರುಳು 'ಓಂನಮಃ ಶಿವಾಯ' ಎಂಬ ಊರ್ಧ್ವಪ್ರಣವದ ನಾದದೊಳಗಾದ ಸುನಾದವನ್ನು ಎಡೆತಡೆಯಿಲ್ಲದೆ ಕೇಳುವುದರಿಂದ ಜಾಗ್ರತ್ ಸ್ವಪ್ನ-ಸುಷುಪ್ತಿಯೆಂಬ ಮೂರವಸ್ಥೆಗಳು ತುರ್ಯಾವಸ್ಥೆಯಲ್ಲಿ ಹರಿದುಹೋಗುತ್ತವೆ. ಹೀಗೆ 'ಓಂ ನಮಃ ಶಿವಾಯ' ಎಂಬ ಪ್ರಣವನಾದವನ್ನು ಕೇಳಿದವರಿಗೆ ಸ್ವಪ್ನವು ಎಂದಿಗೂ ತೋರದು. ಆದರೆ ತನುವನ್ನು ಬಿಡುವ ೧೨ ಗಂಟೆಯ ಪೂರ್ವದಲ್ಲಿ ದಶವಿಧನಾದಗಳು[೯] ನುಡಿಯದೆ ಘೋಷ ನಿರ್ಘೋಷವಾಗುತ್ತದೆ. ಆಗ ಅಂಗುಲ ಪ್ರಮಾಣವಾಗಿ ವಸ್ತುವು ಅಂಗುಷ್ಟಕ್ಕೆ ಬರುತ್ತದೆ. ಅನಂತರ ವೃಕ್ಷವನೇರಿದ ಸರ್ಪದಂತೆ ಬ್ರಹ್ಮರಂಧ್ರದ ಕೊನೆಗೇರುತ್ತದೆ. ಶಿವಯೋಗಿಗಳಾದವರಿಗೆ ಇದೇ ನಿಮಿತ್ತ[೧೦] ಎಂದು ಷಣ್ಮುಖಸ್ವಾಮಿಗಳು ಅಭಿಪ್ರಾಯಪಟ್ಟಿದ್ದಾರೆ.

ಹೀಗೆ ಉತ್ತಮಣೇಚ್ಛವಾದ ಮನುಷ್ಯನು ನಿಮಿತ್ತಗಳಿಂದಾಗಲೀ, ತನ್ನ ಸ್ವಂತ ಬುದ್ಧಿಯಿಂದಾಗಲೀ ಅಥವಾ ವೈದ್ಯನಿಂದಾಗಲೀ ತನಗೆ ಮರಣ ಸಮೀಪಿಸುತ್ತಿರುವುದನ್ನು ತಿಳಿದು ದೇಹ, ಪುತ್ರ, ಧನಾದಿ ವ್ಯಾಮೋಹರೂಪ ಲೌಕಿಕ ದೃಷ್ಟಿಯನ್ನು ಬಿಟ್ಟು, ಭೋಗದ ಆಶೆಯನ್ನು ತ್ಯಜಿಸಿ ನಿರಂತರವಾದ ಪ್ರಣವಪಂಚಾಕ್ಷರ ಜಪಮಾಡುತ್ತಾ ಮನಸ್ಸನ್ನು ಪರಶಿವನಲ್ಲಿ ನೆಲೆಗೊಳಿಸಬೇಕು. ಯಾರಿಗೆ ಸುಖಾಸನದಲ್ಲಿ ಕುಳಿತುಕೊಳ್ಳಲು ದೇಹದಲ್ಲಿ ಬಲವಿದೆಯೋ ಅವನು ಉಟ್ಟಿರುವ ಪೂರ್ವದ ಬಟ್ಟೆಗಳನ್ನು ಬಿಟ್ಟು ನಿರ್ಮಲವಾದ ಬಟ್ಟೆಯನ್ನು (ಶ್ವೇತವಸ್ತ್ರವನ್ನು) ಉಡಬೇಕು. ಸರ್ವ ಅಂಗಗಳಲ್ಲಿ ಭಸ್ಮೋದ್ಧೂಲನವನ್ನು ಮಾಡಿಕೊಂಡು, ರುದ್ರಾಕ್ಷಮಾಲೆಗಳನ್ನು ಧರಿಸಿಕೊಂಡು ಶುದ್ಧನಾಗಿ ಭಕ್ತಿಯಿಂದ ಇಷ್ಟಲಿಂಗವನ್ನು ಮೊದಲಿನಂತೆ ಪೂಜಿಸಬೇಕು. ಸ್ವಸ್ತಿಕಾಸನದಲ್ಲಿ ಕುಳಿತು ಮೌನಧ್ಯಾನಯುಕ್ತನಾಗಿ, ಕೈಗಳನ್ನು ತೊಡೆಗಳ ಮೇಲಿಟ್ಟುಕೊಂಡು ದೃಷ್ಟಿಯನ್ನು ಮೂಗಿನ ತುದಿಯಲ್ಲಿ ಕೇಂದ್ರೀಕರಿಸಿ, ಹುಬ್ಬುಗಳ ಮಧ್ಯದ ಶೃಂಗಾಟಕದಲ್ಲಿ (ತ್ರಿಕೋಣ ಸ್ಥಾನವನ್ನು) ಎರಡು ದಳದ ಉತ್ತಮ ಆಜ್ಞಾಚಕ್ರದಲ್ಲಿ ಮನಸ್ಸು ಮತ್ತು ವಚನಗಳಿಂದ ಶಿವನನ್ನು ದೃಢವಾಗಿ ಧ್ಯಾನಮಾಡುತ್ತಾ ಎಂಜಲಿನ ಭಾವನೆಯಿಲ್ಲದಿದ್ದರೆ ಲಿಂಗವನ್ನು ಬಾಯಲ್ಲಿ ಇಟ್ಟುಕೊಳ್ಳಬೇಕು. ಅಥವಾ ಕರಡಿಗೆ ಮುಂತಾದವುಗಳಲ್ಲಿ ಅಥವಾ ಕೈಯಲ್ಲಿ ಧರಿಸಬೇಕು. ನಂತರ ಸುಖೋತ್ತಮಣಕ್ಕಾಗಿ ಆಗಮೋಕ್ತರೀತ್ಯಾ ತತ್‌ಸ್ಥಾನಗಳಲ್ಲಿ ಭಸ್ಮರುದ್ರಾಕ್ಷಧಾರಣೆ ಮಾಡಿಕೊಂಡು ಕುಶಾಸನದಲ್ಲಿ (ದರ್ಭೆಯ ಹಾಸಿಗೆಯಲ್ಲಿ) ಕುಳಿತು "ಯಾತೇ ಅಗ್ನೇ..." ಮಂತ್ರದಿಂದ ತನ್ನಲ್ಲಿ ಅಗ್ನಿಯನ್ನು ಆರೋಪಿಸಿಕೊಂಡು

---

೮. ಚಂ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ-೫

೯. ದಶವಿಧನಾದಗಳೆಂದರೆ: ಶರಧಿ, ನಿರ್ಝರ, ಮೇಘ, ಮುರಜ, ಭೇರಿ, ಕಹಳೆ, ಘಂಟೆ, ಶಂಖ, ವೀಣೆ, ಭ್ರಮರ ನಾದ.

೧೦.ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವಚನ ಸಂಪುಟ ೯, ವ.ಸಂ. ೯೨೫, ಪುಟ ೪೧೮

'ಅಗ್ನಿರಿತಿ ಭಸ್ಮ...' ಮಂತ್ರದಿಂದ ಸರ್ವಾಂಗಗಳಿಗೂ ಭಸ್ಮ ಸ್ಪರ್ಶಮಾಡಿಕೊಳ್ಳಬೇಕು.[೧೧] ಅವನು ಕುಳಿತುಕೊಳ್ಳಲು ಅಸಮರ್ಥನಾದರೆ ಮಲಗಿದ್ದಂತೆಯೇ ಮನಸ್ಸಿನಲ್ಲಿ ಪೂರಾ ಭಕ್ತಿಯಿಂದ ಸಂಪೂರ್ಣ ಬುದ್ಧಿಯಿಂದ ಶಿವನನ್ನೇ ಸ್ಮರಿಸಬೇಕು.[೧೨] ನಂತರ ಶಿವಸಾಯುಜ್ಯಸಿದ್ಧಿಗಾಗಿ ಗೋವು, ಸುವರ್ಣ, ಭೂಮಿ, ಶಿವಲಿಂಗ ಇವುಗಳನ್ನು ವೀರಮಾಹೇಶ್ವರರಿಗೆ ದಾನಮಾಡಬೇಕು.[೧೩]

ಈ ಒಂದೊಂದು ದಾನವೂ ಒಂದೊಂದರ ಸಿದ್ಧಿಗಾಗಿವೆ. ಸುಖೋತ್ಕ್ರಾಂತಿ ಸಿದ್ಧಿಗಾಗಿ ಗೋದಾನ, ಹಿರಣ್ಯಗರ್ಭನಿಂದ ಸೇವಿತನಾದ ಮಹಾದೇವನ ತೃಪ್ತಿಗಾಗಿ ಸುವರ್ಣದಾನ, ಜನನ ಮರಣಗಳ ಆವರ್ತದಿಂದ ಮುಕ್ತಿಗಾಗಿ ಶಿವಲಿಂಗ ಅಥವಾ ಸಜ್ಜಿಕೆದಾನ, ಶತರುದ್ರರೂಪನಾದ ವಿಶ್ವನಾಥನ ತೃಪ್ತಿಗಾಗಿ ಭೂದಾನ ಮಾಡಬೇಕು.[೧೪] ಹೀಗೆ ಶಕ್ತಿಗೆ ಅನುಗುಣವಾಗಿ ದಾನ ಮಾಡಿ ನಂತರ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೆ ಕಾರಣವಾದ ತತ್ತ್ವಗಳನ್ನು ಆಯಾಯ ಲಿಂಗತತ್ತ್ವಗಳಲ್ಲಿ ವಿಲೀನಗೊಳಿಸಬೇಕು. ಅದು ಹೇಗೆಂದರೆ– 'ಆಯುಷಃ ಪ್ರಾಣಮ್...' ಎಂಬ ಮಂತ್ರವನ್ನು ಪಠಿಸುತ್ತಾ ಗುರುದತ್ತವಾದ ಲಿಂಗವೇ ನಾಮರೂಪಕ್ರಿಯೆಗಳಿಂದ ಎನ್ನ ಸರ್ವಾಂಗ ಹಾಗೂ ಸರ್ವೇಂದ್ರಿಯಗಳಲ್ಲಿ ಆಚಾರಾದಿಲಿಂಗರೂಪದಲ್ಲಿ ಬೆಳಗುತ್ತಿದೆ ಎಂಬುದನ್ನು ಆ ಗುರೂಪದೇಶದಿಂದ ತಿಳಿದು ಪರಿಭಾವಿಸುತ್ತಾ ಸೂಕ್ಷ್ಮಾಂಗದಲ್ಲಿ ಪ್ರಾಣಲಿಂಗ, ಆತ್ಮಾಂಗದಲ್ಲಿ ಭಾವಲಿಂಗ, ಹೃದಯದಲ್ಲಿ ಮಹಾಲಿಂಗ, ಶ್ರೋತ್ರಾಂಗದಲ್ಲಿ ಪ್ರಸಾದಲಿಂಗ, ತ್ವಗಂಗದಲ್ಲಿ ಚರಲಿಂಗ, ದೃಗಂಗದಲ್ಲಿ ಶಿವಲಿಂಗ, ಜಿಹ್ವಾಂಗದಲ್ಲಿ ಗುರುಲಿಂಗ ಮತ್ತು ನಾಸಿಕಾಂಗದಲ್ಲಿ ಆಚಾರಲಿಂಗಗಳ ಹಾಗೂ ಇದೇ ರೀತಿ ಕರ್ಮೇಂದ್ರಿಯಗಳಲ್ಲಿಯೂ ಲಿಂಗಸಾಂಗತ್ಯವನ್ನು ಪರಿಭಾವಿಸಿ ಅದ್ವೈತಾನಂದವನ್ನು ಅನುಭವಿಸಬೇಕು. ಇದಕ್ಕೆ ಸರ್ವಾಂಗಲಿಂಗ ಸಾಹಿತ್ಯವಿಧಿ ಎಂದು ಹೆಸರು.[೧೫]

ಆನಂತರ ಅತ್ಯಾಶ್ರಮಾಚಾರಣೆಯಲ್ಲಿ, ಅಷ್ಟಾವರಣಸಂಪನ್ನತೆಯಲ್ಲಿ, ಪಂಚಾಚಾರ ಪರಿಪಾಲನೆಯಲ್ಲಿ ಮನೋವಾಕ್ ಕರ್ಮಗಳಲ್ಲಿ ಭಕ್ತಿಯ ಲೋಪದಿಂದ ಉಂಟಾಗಿರ ಬಹುದಾದ ದೋಷಗಳ ನಿವೃತ್ತಿಗಾಗಿ ಹಾಗೂ ಶಿವಸಾಯುಜ್ಯವನ್ನು ಪಡೆಯಲು ಗುರು–ಜಂಗಮರನ್ನು ಪೂಜಿಸಿ ಅವರ ಪಾದೋದಕವನ್ನು ಪಾನ ಮಾಡಬೇಕು.[೧೬]

---

೧೧. ಚಂ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ– ೫,೬ ; ಮ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ–೫,

೧೨. ಪಾ.ಆ. ಪಟಲ ೧೮, ಶ್ಲೋಕ ಸಂಖ್ಯೆ ೮ –೧೮

೧೩. ಚಂ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ ೭

೧೪. ಚಂ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ ೮–೧೧; ಮ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ– ೮–೧೧,

೧೫. ಚಂ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ □ ೧೪, ೧೬, ೧೮,; ಮ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ– ೧೭–೨೯

೧೬. ಚಂ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ– ೨೧–೨೪ ; ಮ.ಆ. ಚ.ಪಾ. ಪಟಲ ೨, ಶ್ಲೋಕ ಸಂಖ್ಯೆ– ೩೨–೩೩,

ತದನಂತರ ಶಿವನಾಮವನ್ನು ಪಠಿಸುತ್ತಾ ಮಹಾಲಿಂಗವನ್ನು ಭಾವಿಸಿಕೊಂಡು ಪರಶಿವನಲ್ಲಿ ಲೀನವಾಗುವುದಕ್ಕಾಗಿ 'ಪ್ರಾಯೋಪವೇಶ'[೧೭] ಎಂಬ ವ್ರತವನ್ನು ಕೈಗೊಳ್ಳಬೇಕು. ಪ್ರಾಣ ಹೋಗುವ ಸಮಯದಲ್ಲಿ ಅವನ ಮಕ್ಕಳಾಗಲಿ, ಶಿಷ್ಯರಾಗಲಿ, ಬಂಧುಗಳಾಗಲಿ ಷಡಕ್ಷರಮಂತ್ರವನ್ನು ಮತ್ತು ಉಪನಿಷತ್ ಮಂತ್ರಗಳನ್ನು ಬಲಗಿವಿಯಲ್ಲಿ ಕೇಳಿಸಬೇಕು. ಆಮೇಲೆ ಉತ್ಕ್ರಾಂತಿ ಸಮಯ ಹತ್ತಿರವಾದಾಗ ಅರ್ಥಾತ್ ವಾಕ್ ಮನಸ್ಸಿನೊಡನೆ, ಮನಸ್ಸು ಪ್ರಾಣದೊಡನೆ, ಪ್ರಾಣ ತೇಜಸ್ಸಿನಲ್ಲಿ, ತೇಜಸ್ಸು ಪರಾಶಕ್ತಿಯಲ್ಲಿ ಸೇರಿಹೋದಾಗ 'ಶಿಖಿಕರ್ಪೂರನ್ಯಾಯ'ದಂತೆ ಲಿಂಗದಲ್ಲಿ ಅಂಗಲೀನವಾದುದರ ಸಂಕೇತವಾಗಿ ಬೃಹದಾರಣ್ಯಕೋಪನಿಷತ್ತಿನ 'ಅಣುಃಪಂಥಾ ವಿತತಃ ಪುರಣೋ...'[೧೮] ಎಂಬ ಮಂತ್ರವನ್ನು ಪಠಿಸುತ್ತಾ ಕರ್ಪೂರವನ್ನು ಬೆಳಗಬೇಕು ಎಂದು ಆಗಮಗಳಲ್ಲಿ ವಿವರಿಸಲಾಗಿದೆ.

ಆಗಮಗಳಲ್ಲಿ ಪ್ರತಿಪಾದಿತವಾದ ಈ ಉತ್ಕ್ರಾಂತಿಪೂರ್ವ ಸಮಾಯಾಚಾರ ವಿಧಿಯನ್ನೇ ಷಣ್ಮುಖ ಶಿವಯೋಗಿಗಳು ತಮ್ಮ ದೀರ್ಘವಾದ ಒಂದು ವಚನದಲ್ಲಿ ವಿವರವಾಗಿ ಹೀಗೆ ಹೇಳಿದ್ದಾರೆ.

..........ಶರಣನು ತನ್ನವಸಾನಕಾಲದ ಎಚ್ಚರಿಕೆಯನರಿದು
ಗೋವು ಮಲಗುವಷ್ಟು ಧರಣಿಯ ಸಾರಣೆಯ ಮಾಡುವದು
ಗೋಮಯ ಗೋಮೂತ್ರ ಗೋಕ್ಷೀರ ಗೋದಧಿ, ಗೋಘೃತ
ಗೋರೋಚನ ಎಂಬ ಷಡುಸಮ್ಮಾರ್ಜನೆಯ ಮಾಡುವುದು
ಶಿವಜಂಗಮದ ಧೂಳಪಾದಾರ್ಚನೆಯ
ಉದಕಮಂ ನೀಡಿ ಸಮ್ಮಾರ್ಜನೆಯ ಮಾಡುವುದು
ರಂಗವಲ್ಲಿಯ ತುಂಬುವುದು ಭಸ್ಮವ ತೆಳೆವುದು.
ಪಾದೋದಕ ಪ್ರಸಾದಮಂ ಸಲಿಸಿ, ಶಿವಗಣಂಗಳಿಗೆ ವಂದನೆಯ ಮಾಡಿ,
ಆ ಸಮ್ಮಾರ್ಜನೆಯ ಮಾಡಿದ ಗದ್ದುಗೆಯ ಮೇಲೆ ಮುಹೂರ್ತವ ಮಾಡಿ,
"ಓಂ ನಮಃ ಶಿವಾಯ" ಎಂಬ ಪ್ರಣವಸ್ಮರಣೆಯ ಮಾಡುವುದು
ಹಸ್ತದಲ್ಲಿ ಇಷ್ಟಲಿಂಗವ ಹಿಡಿದುಕೊಂಡು ಇರವಂತಿಗೆ ಸೇವಂತಿಗೆ ಮೊಲ್ಲೆ ಮಲ್ಲಿಗೆ
ಜಾಜಿ ಕರವೀರ ಸುರಹೊನ್ನೆ ಸಂಪಿಗೆ ಮರುಗ ಪಚ್ಚೆ ದವನ ಬಿಲ್ವಪತ್ರೆ
ಮೊದಲಾದ ಸಮಸ್ತ ಪುಷ್ಪಪತ್ರೆಗಳ ಧರಿಸಿ
ಆ ಶಿವಲಿಂಗವನ್ನು ಮನವೊಲಿದು ಕಂಗಳ ತುಂಬಿ ನೋಡುತ್ತಾ

---

೧೭. ಪ್ರಾಣತ್ಯಾಗ ಮಾಡಲು ದೃಢಸಂಕಲ್ಪ ಮಾಡಿ ನಿಶ್ಚಿತವಾದೊಂದು ಸ್ಥಾನದಲ್ಲಿ ಕುಳಿತುಕೊಳ್ಳುವುದು.
೧೮. ಅಣುಃ ಪಂಥಾ ವಿತತಃ ಪುರಾಣೋ ಮಾಂ ಸ್ಪೃಷ್ಟೋನುವಿತ್ತೋ ಮಯ್ಯೆವ। ತೇನ ಧೀರಾ ಅಪಿಯಂತಿ ಬ್ರಹ್ಮವಿದಃ ಸ್ವರ್ಗಂಲೋಕಮಿತ್ತೋ ಊರ್ಧ್ವಂ ವಿಮುಕ್ತಾಃ॥ – ಬೃಹದಾರಣ್ಯಕೋಪನಿಷತ್

ದೇವಭಕ್ತರು ಬಂದಡೆ ಶರಣಾರ್ಥಿ ಎಂದು ಮಜ್ಜನವ ನೀಡಿಸಿ
ವಿಭೂತಿಯ ಧರಿಸಿ, ಪುಷ್ಪಪತ್ರೆಗಳ ಧರಿಸಿ ಎಂದು ಅವರ ಪಾದವಿಡಿದು,
ಶರಣಾರ್ಥಿ ಸ್ವಾಮಿಗಳಿಗೆ ಎಂದು ಹೇಳಿ,
ಶಿವಾರ್ಪಣವ ಮಾಡಿ ಎಂದು ಬಿನ್ನಹವ ಮಾಡುವುದು.
ಮದುವೆ ಮಾಂಗಲ್ಯ ಅರ್ತಿ ಉತ್ಸಾಹ ಶಿಶುವಿನ ಹೆಸರಿಡುವ ಹಾಗೆ
ಹರುಷ ಪರುಷ ಧೈರ್ಯವೇ ಭೂಷಣವಾಗಿ ನಿರೋಧಂಗಳಮಾಡದೆ
"ಓಂ ನಮಃ ಶಿವಾಯ" ಎಂಬ ಮಂತ್ರ ಭೋರ್ಗರೆಯೆ ನಿರ್ಮಲ ನೈಷ್ಠಿಕದಿಂದೆ
ಶಿವಜಂಗಮದ ಪಾದವನು ಮಸ್ತಕದ ಮೇಲೆ ಇಡಿಸುವುದು,
ಹಿತವಂತರಾದವರು ವೀರಶೈವ ಪರಮ ವಚನಂಗಳಂ ಕೇಳಿಸುವುದು,
ಎಡಬಲದಲ್ಲಿರ್ದ ಸಕಲ ಭಕ್ತರು ಮಹೇಶ್ವರರು
"ಓಂ ನಮಃ ಶಿವಾಯ" ಎಂಬ ಶಿವಮಂತ್ರವನ್ನು
ಆ ಶರಣನ ಕರ್ಣಂಗಳಲ್ಲಿ ಉಚ್ಚರಿಸುವುದು.
ಈ ಹಡಗದ ಹಗ್ಗವ ಮತ್ತೊಂದು ಹಡಗಕ್ಕೆ ಹಾಕಿ ಬಿಗಿದಡೆ,
ಹಡಗಕ್ಕೆ ಹಡಗಕೂಡಿ ಸಮುದ್ರದ ತೆರೆಯೋಪಾದಿಯಲ್ಲಿ
ಹಡಗವ ಬಿಟ್ಟು ಪ್ರತಿ ಹಡಗದೊಳಗೆ ಮೂರ್ತವ ಮಾಡಿದಂತೆ
ಮಂತ್ರಮಂತ್ರವು ಸಂಬಂಧವಾಗಿ, ಉರಿಕರ್ಪುರ ಕೊಂಡಂತಾಯಿತ್ತು
ಶರಣನ ದೇಹಪ್ರಾಣವು ಇದು ಗುಹ್ಯಕ್ಕೆ ಗುಹ್ಯ,[೧೯] ಗೋಪ್ಯಕ್ಕೆ ಗೋಪ್ಯ
ರಹಸ್ಯಕ್ಕೆ ಅತಿರಹಸ್ಯ ನೋಡಾ ಅಖಂಡೇಶ್ವರಾ॥

ಎಂದು ಉತ್ಕ್ರಮಣಕ್ರಿಯೆ ವಿಧಾನವನ್ನು ಆಗಮಗಳಲ್ಲಿ ಪ್ರತಿಪಾದಿತಗೊಂಡಂತೆಯೇ ವಿವರಿಸಿದ್ದಾರೆ.

(ಆ) ಉತ್ಕ್ರಾಂತ್ಯುತ್ತರ ಸಮಯಾಚಾರವಿಧಿ

ಉತ್ಕ್ರಮಣವಾದ ನಂತರ ಸತ್ತವನ ಪರವಾಗಿ ಕರ್ತನು[೨೦] ಅಥವಾ ಕರ್ತಳು ಸ್ನಾನಮಾಡಿ ಶ್ವೇತವಸ್ತ್ರ ಧರಿಸಿ ವಿಭೂತಿರುದ್ರಾಕ್ಷಧಾರಣೆ ಮಾಡಿಕೊಂಡು ವೀರಮಾಹೇಶ್ವರರನ್ನು ಆಹ್ವಾನಿಸಿ ಅವರಿಗೆ ಯಥಾಶಕ್ತಿ ಗೋ, ಭೂ, ಹಿರಣ್ಯಾದಿಗಳನ್ನು

೧೯. ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವಚನ ಸಂಪುಟ ೯, ವ.ಸಂ.೯೨೫, ಪುಟ ೪೧೮

೨೦. ಈ ಕೆಳಗಿನವರು ಕರ್ತೃತ್ವಕ್ಕೆ ಪಾತ್ರರು– ಮಗ, ಮಗನಮಗ, ಮಗಳಮಗ, ದತ್ತುಮಗ, ದತ್ತುಮಗನಮಗ, ಗಂಡ, ಹೆಂಡತಿ, ಸಪತ್ನಿ, ಮಗಳು, ಮಗಳಮಗಳು, ತಮ್ಮ, ತಮ್ಮನಮಗ, ತಂದೆ, ತಾಯಿ, ಸೊಸೆ, ಅಕ್ಕ, ತಂಗಿ, ಅವಳಗಂಡ, ಮಗ, ಮಗಳು ಸಹೋದರಿತಮ್ಮ, ತಾಯಿಯ ತಮ್ಮ, ಸಗೋತ್ರದಿಂದ, ಶಿಷ್ಯ,ಪುರೋಹಿತ, ಸೇವಕ, ಗುರು, ಸಹಪಾಠಿ, ಸ್ನೇಹಿತ, ರಾಜಾ ಮುಂತಾದವರು. ಇವರನ್ನೆಲ್ಲಾ ಸೇರಿಸಿ ೩ ಗುಂಪು ಮಾಡಬಹುದು. ಪುತ್ರ, ಪ್ರಪೌತ್ರ; ಬಾಂಧವರು ಮತ್ತು ಇತರರು ಎಂಬುದಾಗಿ

ದಾನ ಮಾಡಬೇಕು. ನಂತರ ಅವರ ಅಪ್ಪಣೆ ಪಡೆದು ಮೃತನ ಶರೀರವನ್ನು ಜಂಗಮಪಾದೋದಕದೊಂದಿಗೆ ಷಟ್ ಸಂಮಾರ್ಜನೆ[೨೧] ಗೊಳಿಸಿ ರಂಗವಲ್ಲಿ ಹಾಕಿ ವಿಭೂತಿ ಶಯ್ಯೆಮಾಡಿ ಅದರ ಮೇಲಿಟ್ಟು ಭವಿಯ ದರ್ಶನವಾಗದಂತೆ ತೆರೆಹಾಕಿ ಬಲಗಿವಿಯಲ್ಲಿ ಮೂವತ್ತಾರು ಸಾರಿ ಪ್ರಣವ ಪಂಚಾಕ್ಷರಿಯನ್ನು ಕೇಳಿಸಬೇಕು. ವೀರಮಾಹೇಶ್ವರರು ಶತರುದ್ರೀಯ ಪಂಚರುದ್ರಾದಿಗಳನ್ನು ಪಠಿಸುತ್ತಿರಬೇಕು ಎಂದು ಆಗಮಗಳು ಪ್ರತಿಪಾದಿಸಿವೆ.

ಲಿಂಗಧಾರಿಯ ಮರಣದ ಸಂದರ್ಭದಲ್ಲಿ ಈ ರೀತಿ ಗುರುಗಳನ್ನು ಆಹ್ವಾನಿಸಿ ಪಾದವಿಡಿಸಿ, ಪೂಜಿಸಿ, ಪಾದೋದಕ ಕೊಂಬುವುದನ್ನು ವಚನಗಳಲ್ಲಿ **'ವಿಭೂತಿ ವೀಳ್ಯ'** ಎಂದು ಕರೆಯಲಾಗಿದೆ.

> [ದೇ]ವರ ಪಾದಕ್ಕೆ ಸಂದಲ್ಲಿ ಆತನ ಶರೀರವ ಸಮಾಧಿಯಲ್ಲಿ ನಿಕ್ಷೇಪವಂ ಮಾಡಿ
> ಲಿಂಗಭಕ್ತರಿಗೆ ವಿಭೂತಿ ವೀಳೆಯವಂ ಕೊಡುವುದೆ ಸದಾಚಾರ [೨೨]

ಎಂಬುದಾಗಿ ಮರಣದ ಸಂದರ್ಭದಲ್ಲಿ ಗುರುಗಳನ್ನು ಆಹ್ವಾನಿಸಿ ಪಾದೋದಕ ಕೊಂಬುವುದನ್ನು ವಚನಕಾರರು ಸಮ್ಮತಿಸಿರುವರು.

ಹೀಗೆ ವೀರಮಾಹೇಶ್ವರರನ್ನು ಆಹ್ವಾನಿಸಿ ಪೂಜಿಸಿದ ನಂತರ ಕರ್ತನು ಸಂಕಲ್ಪ ಮಾಡಿ ಮೃತನ ಲಿಂಗಶರೀರವನ್ನು ಇಷ್ಟಲಿಂಗಸಹಿತ ಸ್ನಾನ ಮಾಡಿಸಿ, ಪವಮಾನಸೂಕ್ತದಿಂದ[೨೩] ಅಭಿಮಂತ್ರಿಸಿ ಪುನಃ ಶ್ರೀರುದ್ರಾದಿಗಳನ್ನು ಪಠಿಸುತ್ತಾ ಶುದ್ಧೋದಕದಿಂದ ಸ್ನಾನಮಾಡಿಸಿ ವಿಭೂತಿ ರುದ್ರಾಕ್ಷಿಗಳಿಂದಲಂಕರಿಸಿ ಕರಸ್ಥಲದಲ್ಲಿ ಇಷ್ಟಲಿಂಗವನ್ನಿಟ್ಟು ಸಂಪೂಜಿಸಿ ಸಜ್ಜಿಕೆಯಲ್ಲಿಡಬೇಕೆಂದು ಆಗಮಗಳು ಪ್ರತಿಪಾದಿಸಿವೆ.[೨೪]

೩. ಸಮಾಧಿರಚನಾ ವಿಧಿ ಮತ್ತು ನಿಕ್ಷೇಪವಿಧಿ

ಈ ವಿಭಾಗದಲ್ಲಿ ಮೂವತ್ತಾರು ತತ್ತ್ವಗಳ ಹಾಗೂ ಇನ್ನೂರ ಹದಿನಾರು ಸಕೀಲಸಂಬಂಧವುಳ್ಳ ಸಮಾಧಿರಚನೆಯ ಬಗ್ಗೆ ಹಾಗೂ ಸಮಾಧಿಗೆ ಯೋಗ್ಯವಾದ ಸ್ಥಾನ, ಗರ್ತ, ಸೋಪಾನ, ತ್ರಿಕೋಣಗಳ ಅಳತೆ, ಬೀಜಾಕ್ಷರ ಲಿಖಿತ ತಗಡುಗಳ ಸಂಬಂಧ ಮೃತ್ತಕಾದಾನ ಕೊಡುವಾಗ ಹೇಳುವ ಪುಷ್ಪಾಂಜಲಿ ಸ್ತವನ ಇತ್ಯಾದಿ ವಿಷಯಗಳ ನಿರೂಪಣೆಯಿದೆ.

ಮೃತದೇಹವನ್ನು ಸಾಲಂಕೃತವಾದ ವಿಮಾನದಲ್ಲಿ ಕುಳ್ಳಿರಿಸಿ ಮಹೋಕ್ಷ, ವೃಷಭ, ನಂದೀಶ, ನಂದಿಕೇಶ್ವರರೆಂಬ ಹೆಸರಿನ ನಾಲ್ವರು ವಾಹಕರನ್ನು ಕರೆಯಿಸಿ ನಿಕ್ಷೇಪ

---

೨೧. ಗೋಮಯ ಗೋಮೂತ್ರ, ಗೋಕ್ಷೀರ, ಗೋದಧಿ, ಗೋಘೃತಿ, ಗೋರೋಜನ.
೨೨. ಬ.ವ.ಸಂ. ಸಮಗ್ರ ವಚನ ಸಂಪುಟ ೧, ವ. ಸಂ. ೧೨೨೧, ಪುಟ ೩೩೬.
೨೩. ಯಾ ತೇ ಅಗ್ನೇ ರುದ್ರಿಯಾ ತಮಾಸ್ತಯಾ ನಃ ಪಾಹಿ।
ಯಾ ತೇ ಅಗ್ನೇ ಗುರಾಶಯಾ... ತಸ್ಯಾಸ್ತೇ ಸ್ವಾಹಾ॥ ಇತ್ಯಾದಿಗಳು
೨೪. ಮ.ಆ. ಚ.ಪಾ. ಪಟಲ ೩, ಶ್ಲೋಕ ಸಂಖ್ಯೆ–೮–೯

ಮಾಡಲು ಶಿವಾಲಯ ಸಮೀಪ, ಶಿವಾಲಯದ ತೋಟ, ಬಿಲ್ವವೃಕ್ಷದ ಬುಡ ಅಥವಾ ಶಿವತೀರ್ಥ ಮುಂತಾದ ಶುದ್ಧದೇಶಕ್ಕೆ ಒಯ್ದು ಸಂಸ್ಕಾರಮಾಡಬೇಕು.

ಕ್ರಿಯಾ ಸಮಾಧಿಯ ಅಳತೆ ಮತ್ತು ವಿನ್ಯಾಸವನ್ನು ಕುರಿತು ಮಕುಟಾಗಮವು –

ಚತುರಸ್ರ ಪಂಚಪಾದಂ ದೀರ್ಘಂ ವಿಸ್ತಾರಮೇವ ಚ ।
ಖಾತಂ ನವಪದಂ ತ್ವಾದ್ಯಂ ಸೋಪಾನಂ ಚೈಕಪಾದಕಮ್।
ದ್ವಿತೀಯಂ ದ್ವಿಪದಂ ಪ್ರೋಕ್ತಂ ತೃತೀಯಂ ತ್ರಿಪದಂತಥಾ॥[೨೫]

ಸಮಾಧಿಯು ಚೌಕಾಕಾರವಾಗಿದ್ದು, ಉದ್ದ ಮತ್ತು ಅಗಲವು ಐದು ಐದು ಹೆಜ್ಜೆ, ಆಳ ಒಂಬತ್ತು ಹೆಜ್ಜೆ, ಮೊದಲನೆಯ ಮೆಟ್ಟಿಲು ಒಂದು ಹೆಜ್ಜೆ, (ಒಂದು ಹೆಜ್ಜೆ ಉದ್ದ, ಒಂದು ಹೆಜ್ಜೆ ಅಗಲ ಮತ್ತು ಒಂದು ಹೆಜ್ಜೆ ಆಳ) ಎರಡನೇ ಮೆಟ್ಟಿಲು ಎರಡು ಹೆಜ್ಜೆ, (ಎರಡು ಹೆಜ್ಜೆ ಉದ್ದ, ಎರಡು ಹೆಜ್ಜೆ ಅಗಲ, ಮತ್ತು ಎರಡು ಹೆಜ್ಜೆ ಆಳ) ಮತ್ತು ಮೂರನೆಯದು ಮೂರು ಹೆಜ್ಜೆ (ಮೂರು ಹೆಜ್ಜೆ ಉದ್ದ, ಮೂರುಹೆಜ್ಜೆ ಅಗಲ ಮತ್ತು ಮೂರು ಹೆಜ್ಜೆ ಆಳ) ಹೀಗೆ ಮೃತನ ಪಾದದ ಅಥವಾ ಗುರುವಿನ ಬಲಪಾದದ ಅಳತೆ ಪ್ರಮಾಣದಂತೆ ತೆಗೆಯುವುದು. ನಂತರ

ವೇದಿಕಾ ಚ ತ್ರಿಪಾದೇನ ತಸ್ಯ ದಕ್ಷಿಣತೋ ದಿಶಿ ।
ತ್ರಿಕೋಣಂ ಚ ಪ್ರಕರ್ತವ್ಯಂ ತ್ರಿಪಾದಂ ದೀರ್ಘಮಾಯತಮ್॥[೨೬]

ಸಮಾಧಿಯ ಒಳಭಾಗ ದಕ್ಷಿಣ ದಿಕ್ಕಿನಲ್ಲಿ ಮೂರು ಹೆಜ್ಜೆಗಳಷ್ಟು ಉದ್ದ ಮತ್ತು ಅಗಲವುಳ್ಳ ಒಂದೂವರೆ ಪಾದ ಉದ್ದದಕೋನ, ಒಂದು ತ್ರಿಕೋನಾಕಾರದ ರಂಧ್ರವನ್ನು ತೆಗೆದು (ಅಗೆದು) ಅದರ ಒಳಗಡೆ ಮೂರು ಹೆಜ್ಜೆ ಉದ್ದ ಅಗಲವುಳ್ಳಂತೆ ಒಂದು ವೇದಿಕೆಯನ್ನು ನಿರ್ಮಾಣ ಮಾಡಬೇಕು. ಮಂತ್ರ ಪೂರ್ವಕವಾಗಿ ಗೋಮಯದಿಂದ ಸಾರಿಸಿ, ರಂಗವಲ್ಲಿಯಿಂದ ಅಲಂಕರಿಸಿ, ಗಾಯತ್ರಿ ಮಂತ್ರ ಅಥವಾ ಪುಣ್ಯಾಹ ಆಚರಿಸಿದ ಜಲವನ್ನು ಗುರು ಪಾದೋದಕ ಮಿಶ್ರಣಮಾಡಿ ಸಮಾಧಿಯ ಎಲ್ಲಾ ಕಡೆ ಪ್ರೋಕ್ಷಿಸಬೇಕು.

ಸಮಾಧಿಯಲ್ಲಿ ಮೃತಶರೀರ ಸ್ಥಾಪನೆ :

ಅಗ್ನಿರಿತ್ಯಾದಿನಾ ಭಸ್ಮಶಯ್ಯಾಂ ಸಮ್ಯಗ್ ವಿದಾಯ ಚ।
ವಿಕೀರ್ಯ ಪತ್ರಪುಷ್ಪಾಣಿ ಚತುರ್ದಿಕ್ಷೂಪರಿ ಹ್ಯಧಃ॥।
ಷಡಕ್ಷರಾಣಿ ವಿನ್ಯಸ್ಯ ಮೂಲೇನೈವಾಭಿಮಂತ್ರ್ಯ ಚ।
ನದತ್ಸು ತೂರ್ಯವೃಂದೇಷು ಪುಷ್ಪವೃಷ್ಟೌ ಚರತ್ಯಪಿ॥

೨೫. ಮ.ಆ. ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ–೩
೨೬. ಮ.ಆ. ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ–೪

ಚಿತ್ತಿಃ ಪೃಥಿವ್ಯಗ್ನಿರಿತಿ ಚಾನುವಾಕಾನ್ ಸಮುಚ್ಚರನ್
ಸ್ವಸ್ತಿಕಾಸನರೂಪೇಣ ತಚ್ಚರೀರಮುದಙ್ಮುಖಮ್।
ಶಂಭೋ ಹವ್ಯಂ ಗೃಹಾಣೇತಿ ನಿದಧೀತ ಬಿಲೇ ತದಾ॥[೨೭]

ಅಗ್ನಿ ಮತ್ತು ರುದ್ರಸೂಕ್ತವನ್ನು ಪಠಿಸುತ್ತಾ ಶಾಸ್ತ್ರೋಕ್ತ ರೀತಿಯಲ್ಲಿ ಉಪ್ಪು ಮತ್ತು ಧೂಳು ಭಸ್ಮದಿಂದ ಗೂಡಿನಲ್ಲಿ ವೇದಿಕೆ ಸಿದ್ಧಪಡಿಸಿ, ಬಿಲ್ವ ಮತ್ತು ಹೂಗಳನ್ನು ಹರಡಿ ಷಡಕ್ಷರಿ ಮಂತ್ರವನ್ನು ಬರೆದು, ಮೂಲ ಪಂಚಾಕ್ಷರಿಯನ್ನು ಹೇಳುತ್ತಾ ಪವಿತ್ರಗೊಳಿಸಿ, ನಗಾರಿ, ಕರಡಿ ಮೇಳಗಳಿಂದ ಧ್ವನಿ ಮಾಡುತ್ತಿರಲು ಗುರುಗಳ ಪಾದಪೂಜೆ ಮಾಡಬೇಕು, ದಕ್ಷಿಣೆ ಕೊಟ್ಟು ಅನುಮತಿ ಪಡೆದು ಮೃತನ ಶರೀರವನ್ನು ಗೂಡಿನಲ್ಲಿ ಉತ್ತರಾಭಿಮುಖವಾಗಿ ಕೂಡ್ರಿಸಬೇಕು. ತರುವಾಯ ಮೃತನ ಪುತ್ರ, ಬಂಧು ಬಳಗದವರು ಪುಷ್ಪಾಂಜಲಿ ನೀಡಿ, ಮೃತನ ಮುಖವನ್ನು ಹೊಸಬಟ್ಟೆಯಿಂದ ಮುಚ್ಚಬೇಕು.

ಋತಂ ತಪ ಇತಿ ಪಠನ್ ಭಸ್ಮನಾ ಲವಣೇನ ಚ।
ಮೃತ್ತಿಕಾಭಿಃ ಪೂರಯೇತಾಪ್ಯಾಕಂಠಂ ತದನಂತರಮ್॥
ಸರ್ವಸ್ಯ ಪ್ರತಿಶಿವೇತಿ ಮೂರ್ಧಾನಂ ದಿವಿ ಇತ್ಯಪಿ।
ಸಜಲಂ ಭಸ್ಮ ಮೃತ್ಪಿಂಡಂ ಪಿತುರ್ಮೂರ್ಧನಿ ನಿಕ್ಷಿಪೇತ್।
ತತಶ್ಚ ಪೂರಯೇದ್ ಗರ್ತಂ ಭಸ್ಮನಾ ಮೃತ್ಸ್ನಯಾಪಿ ಚ॥[೨೮]

"ಋತಂತಪಃ, ಸತ್ಯಂತಪಃ, ಶ್ರುತಂತಪಃ, ಶಾಂತಂತಪಃ" ಇತ್ಯಾದಿ (ಮಹಾ ನಾರಾಯಣೀಯೋಪನಿಷತ್) ಮಂತ್ರವನ್ನು ಹೇಳುತ್ತಾ, ಭಸ್ಮ, ಉಪ್ಪು, ಪತ್ರೆ ಪುಷ್ಪಗಳಿಂದ ಮತ್ತು ಮಣ್ಣಿನಿಂದ ಕುತ್ತಿಗೆಯವರೆಗೂ ತುಂಬಬೇಕು. ಅನಂತರ ಮೃತ್ತಿಕೆಯನ್ನು ಮಂತ್ರ ಪೂರ್ವಕವಾಗಿ ಇತ್ತು (ಮೃತವ್ಯಕ್ತಿಯ ಮಗನು) ಜಲಮಿಶ್ರಿತ ಭಸ್ಮವನ್ನು ತಂದೆಯ ತಲೆಯ ಮೇಲಿರಿಸಿ ಗುಂಡಿಯನ್ನು (ಮಣ್ಣಿನಿಂದ) ಮುಚ್ಚಬೇಕು. ತರುವಾಯ, ಸಮಾಧಿಯನ್ನು ಚೌಕಾಕಾರವಾಗಿ ಸಮಮಾಡಿ, ಉತ್ತರಾಭಿಮುಖವಾಗಿ ಮೂರು ಮೆಟ್ಟಿಲುಗಳನ್ನು ನಿರ್ಮಿಸಿ, ಮೃತ್ತಿಕಾ ಲಿಂಗ ಮತ್ತು ಬಸವನನ್ನು ಮಾಡಿ ಸಮಾಧಿಯ ಮೇಲಿರಿಸಿ ಗುರುಗಳನ್ನು ಪೂಜಿಸಿ ಜಲತರ್ಪಣವನ್ನು ಬಿಡಬೇಕೆಂದು ಹೇಳಲಾಗಿದೆ.

ಶಿವದೀಕ್ಷೆ ಹೊಂದಿದ ಲಿಂಗಧಾರಿಯ ಅಂತ್ಯಸಂಸ್ಕಾರ ವಿಧಿಗಳನ್ನು ಲಿಂಗಧಾರಿಯಾದ ಮಗನೇ ನೆರವೇರಿಸಬೇಕು. ಒಂದುವೇಳೆ ಮಗನಿಗೆ ಶಿವದೀಕ್ಷೆ ಯಾಗಿರದಿದ್ದರೆ ಅಂತಹ ಸಂದರ್ಭದಲ್ಲಿ ಮಗನ ಬದಲಾಗಿ ಲಿಂಗಧಾರಿಯಾದ ಬೇರೆ ಕರ್ತನು ಅಂತ್ಯಸಂಸ್ಕಾರ ವಿಧಿಗಳನ್ನು ನೆರವೇರಿಸಬೇಕೆಂದು ಆಗಮಗಳು ಕಟ್ಟೆಚ್ಚರಮಾಡಿವೆ.[೨೯] ಆಗಮದ ಈ ಅಭಿಪ್ರಾಯದಂತೆ ಲಿಂಗಧಾರಿಯೇ ಅಂತ್ಯಸಂಸ್ಕಾರ

೨೭. ಮ.ಆ. ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ–೬–೮
೨೮. ಮ.ಆ. ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ–೯–೧೦
೨೯. ಮ.ಆ. ಚ.ಪಾ. ಪಟಲ ೫, ಶ್ಲೋಕ ಸಂಖ್ಯೆ ೧೮

ವಿಧಿಗಳನ್ನು ನೆರವೇರಿಸಬೇಕೆಂದು ಮೃತನ ಲಿಂಗವನ್ನೇ ತಗೆದು ಮಗನ ಕೊರಳಿಗೆ ಹಾಕಿ ಆತನಿಂದ ಅಂತ್ಯಸಂಸ್ಕಾರ ಮಾಡಿಸುವ ಪದ್ಧತಿಯು ವಚನಕಾರರ ಕಾಲದಲ್ಲಿ ಕೆಲವೆಡೆ ಜಾರಿಯಲ್ಲಿ ಬಂದಂತೆ ಕಾಣುತ್ತದೆ. ಕಾರಣ ಈ ಪದ್ಧತಿಯನ್ನು ವಿರೋಧಿಸಿ ಚೆನ್ನಬಸವಣ್ಣನವರು–

ಪಿತನಾಚಾರವನುದ್ಧರಿಸುವಾತ ಪುತ್ರನಲ್ಲದೆ ಗತಿಗೆಡಿಸುವಾತ ಪುತ್ರನಲ್ಲ.
ತಂದೆಯ ಅಂಗದ ಮೇಲಣ ಲಿಂಗವ ಹಿಂಗಿಸಿ
ಆತನ ಭೂತಪ್ರಾಣಿಯ ಮಾಡಿ ಕಳುಹಿದಾತ ಪುತ್ರನೆ? ಅಲ್ಲ, ಅವ ದುರಾತ್ಮನು.
ತಂದೆಯ ಬರುಕಾಯವ ಮಾಡಿ ಭಕ್ತನಾದಾತ ಪುತ್ರನೇ? ಅಲ್ಲ,
ಅವ ಜ್ಞಾನಶೂನ್ಯನು.
ಇಲ್ಲಿ ಭೂನರಕಂ ವ್ರಜೇತ್' ಎಂಬ ಶ್ರುತಿಯ ಕೇಳಿ, ವಿಸ್ತರಿಸಿ ನೋಡಿ ನೋಡಿ,
ಕುಳ್ಳಿರಿಸಿ, ಅವನ ಭಕ್ತನ ಮಾಡಿದಾತನು ಪಂಚಮಹಾಪಾತಕಿ.
ಅಲ್ಲಿಗೆ ಹೋದಾತ ಭೂತಪ್ರಾಣಿ, ಭಕ್ತನಾದಾತ ಪ್ರೇತಲಿಂಗ ಸಂಸ್ಕಾರಿ,
ಭಕ್ತನ ಮಾಡಿದವರಿಗೆ ರೌರವನರಕ,
ಭೂತಲಿಂಗೇನ ಸಂಸ್ಕಾರೀ ಭೂತಪ್ರಾಣಿಷು ಜಾಯತೇ।
ಪ್ರಭಾತೇ ತನ್ಮುಖಂ ದೃಷ್ಟ್ವಾ ಕೋಟಿಜನ್ಮನಿ ಸೂಕರಃ॥
ಎಂದುದಾಗಿ ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ
ತ್ರಿಜನಕೆ ತಪ್ಪದು ಅಘೋರನರಕ.[೩೦]

ಎಂದಿದ್ದಾರೆ. ಕಾರಣ ಮೃತನ ಲಿಂಗಶರೀರವನ್ನು ಇಷ್ಟಲಿಂಗ ಸಹಿತವಾಗಿಯೇ ನಿಕ್ಷೇಪ ಮಾಡಬೇಕು ಮತ್ತು ಲಿಂಗಧಾರಿಯೇ ಲಿಂಗಧಾರಿಯ ಅಂತ್ಯಸಂಸ್ಕಾರ ವಿಧಿಗಳನ್ನು ನೆರವೇರಿಸಬೇಕೆಂಬ ವಿಚಾರ ಆಗಮ ಮತ್ತು ವಚನಗಳಲ್ಲಿ ಪ್ರತಿಪಾದಿತವಾಗಿದೆ.

ಅಲ್ಲದೇ ವೀರಶೈವರಿಗೆ ಮರಣಸೂತಕವಿರುವುದಿಲ್ಲವೆಂದು ಆಗಮಗಳು ಪ್ರತಿಪಾದಿಸಿವೆ.

ಸೂತಕೇ ಮೃತಕೇ ಚೈವ ಸಂಧ್ಯಾಂ ಪೂಜಾಂ ನ ಸಂತ್ಯಜೇತ್।
ಉಪಾಂಶುಸಂಧ್ಯಾಂ ಪೂಜಾಂ ತು ಕುರ್ಯಾತ್ ತ್ರಿಕರಣೈರಪಿ॥[೩೧]

ಮರಣದಿಂದ ಅಶೌಚವು ಉಂಟಾದಾಗಲೂ ಕೂಡ ಮೃತನ ಕುಟುಂಬದವರು ಇಷ್ಟಲಿಂಗ ಪೂಜೆಯನ್ನು ನಿಲ್ಲಿಸಬಾರದು. ಅಂತಹ ಸನ್ನಿವೇಶದಲ್ಲಿ ಉಪಾಂಶು ವಿಧಿಯಿಂದ(ಬೇರೆಯವರಿಗೆ ಕೇಳಿಸದಂತೆ ಮಂತ್ರೋಚ್ಚಾರಣೆಗೈಯುವ ವಿಧಿ) ಪೂಜೆಯನ್ನು ಮಾಡಬೇಕೆಂದು ಆಗಮಗಳು ತಿಳಿಸುತ್ತವೆ. ಮರಣಾ ನಂತರ ಅಲ್ಪ, ಅಧಿಕ, ಅಪೂರ್ಣ, ಪೂರ್ಣ, ಶೌಚಗಳನ್ನು ಆಗಮದಲ್ಲಿ ಹೇಳಿದ್ದರೂ ವಿಪ್ರ, ವೈಶ್ಯ,

---

೩೦. ಚೆ.ಬ.ವ. ಸಮಗ್ರ ವಚನ ಸಂಪುಟ ೩, ವ.ಸಂ. ೧೫೪೭.ಪುಟ ೪೭.
೩೧. ಮ.ಆ. ಚ.ಪಾ. ಪಟಲ ೧೦, ಶ್ಲೋಕ ಸಂಖ್ಯೆ ೨೮

ಕ್ಷತ್ರಿಯ, ಶೂದ್ರವರ್ಣದವರಿಗೇ ಹೊರತು ಅತ್ಯಾಶ್ರಮಿಗಳಿಗೆ (ವೀರಶೈವರಿಗೆ) ಅಲ್ಲ ಎಂದು ತಿಳಿಸಿವೆ.

ನ ತಸ್ಯ ಸೂತಕಂ ವತ್ಸ ಪ್ರಾಣಲಿಂಗಾಂಗಿಸಂಗಿನಃ।
ಜನನೋತ್ಥಂ ಮೃತೋತ್ಥಂ ವಾ ವಿದ್ಯತೇ ನಾತ್ರಸಂಶಯಃ॥
"ಯತೀನಾಂ ಚ ವನಸ್ಥಾನಾಂ ನೈಷ್ಠಿಕಾನಾಂ ಚ ವರ್ಣಿನಾಮ್।
ಜನಿಜಂ ಮೃತಿಜಂ ವಾಪಿ ನಾಶೌಚಮಿಹ ವಿದ್ಯತೇ॥"[೩೨]

ಯತಿಗಳಿಗೆ, ವಾನಪ್ರಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಅತ್ಯಾಶ್ರಮಿಗಳಿಗೆ (ವೀರಶೈವರಿಗೆ) ಜನನದ ಅಥವಾ ಮರಣದ ಸೂತಕವಿಲ್ಲವೆಂದು ಆಗಮಗಳು ಪ್ರತಿಪಾದಿಸುತ್ತವೆ. ಇದನ್ನೇ ಬಸವಣ್ಣನವರು –

ಜನನಸೂತಕ, ಕುಲಸೂತಕ, ರಜಃಸೂತಕ, ಎಂಜಲಸೂತಕ, ಪ್ರೇತಸೂತಕ
ಎಂಬಿವಾದಿಯಾದ ಸರ್ವಸೂತಕಂಗಳು
ಅಂಗಲಿಂಗ ಸಂಬಂಧಿಗಳಾದ ಲಿಂಗಭಕ್ತರಿಗಿಲ್ಲ ನೋಡಾ,ಅದೆಂತೆಂದೊಡೆ;
ಆದಿಬಿಂದುರ್ಭವೇದ್ಬೀಜಂ ಬೀಜಮಧ್ಯಸ್ಥಿತಂ ಕುಲಂ।
ಬೀಜಂ ನಾಸ್ತಿ ಕುಲಂ ನಾಸ್ತಿ ತಸ್ಮೈ ಶಿವಕುಲಂ ಭವೇತ್॥ ಎಂದುದಾಗಿ,
ಪೂರ್ವಾಚಾರವನಳಿದು ಪುನರ್ಜಾತನಾಗಿ,
ಅಂಗದಮೇಲೆ ಲಿಂಗಸಾಹಿತ್ಯನಾದ ಭಕ್ತಂಗೆ ....
ಗುರುವಿನಿಂ ಜನನ, ಚರಲಿಂಗದಿಂ ಸ್ಥಿತಿ,
ಪರಮಪಾವನ ಘನಮಹಾಲಿಂಗದೊಳೈಕ್ಯ. ಅದೆಂತೆಂದೊಡೆ;
ಸದ್ಗುರೋಃ ಪಾಣಿಜಾತಸ್ಯ ಸ್ಥಿತೇ ಸದ್ಭಕ್ತಸಂಗಿನಾಂ।
ಲೀಯತೇ ಚ ಮಹಾಲಿಂಗೀ ವೀರಶೈವೋತ್ತಮೋತ್ತಮಂ॥ ಎಂದುದಾಗಿ,
ನಿಜಲಿಂಗೈಕ್ಯವಾದ ಸದ್ಭಕ್ತಂಗೆ ಪ್ರೇತಸೂತಕವೆಂಬುದೆ ಪಾತಕ ನೋಡಾ.
ಇಂತೀ ಪಂಚಸೂತಕವನುಳ್ಳ ಪಾತಕಂಗಳ
ಪಂಚಾಚಾರಯುಕ್ತನಾದ ಸದ್ಭಕ್ತಂಗೆ ಕಲ್ಪಿಸುವ
ಪಂಚಮಹಾಪಾತಕರ ಘೋರನರಕದಲ್ಲಿಕ್ಕುವ ಕೂಡಲಸಂಗಯ್ಯ.[೩೩]

ಎಂದು ವೀರಶೈವರಿಗೆ ಮರಣಸೂತಕವಿರುವುದಿಲ್ಲ ಎಂಬ ಆಗಮದ ಅಭಿಪ್ರಾಯವನ್ನು ಅಂಗೀಕರಿಸಿ ಸಮರ್ಥಿಸಿದ್ದಾರೆ.

---

೩೨. ಚಂ.ಆ. ಚ.ಪಾ. ಪಟಲ ೬, ಶ್ಲೋಕ ಸಂಖ್ಯೆ–೧೩ ; ಮ.ಆ. ಚ.ಪಾ. ಪಟಲ ೧೦, ಶ್ಲೋಕ ಸಂಖ್ಯೆ–೨೬,

೩೩. ಬ.ಬ.ಸಂ. ಸಮಗ್ರ ವಚನ ಸಂಪುಟ ೧, ವ.ಸಂ, ೧೧೯೬, ಪುಟ ೩೪೯

೪. ಔರ್ಧ್ವದೇಹಿಕವಿಧಿ

ಗರ್ತವನ್ನು ವಿಭೂತಿ ಅಥವಾ ಮಣ್ಣಿನಿಂದ ಮುಚ್ಚಿ ಮೇಖಲಾತ್ರಯವುಳ್ಳ (ಮೂರು ಹಂತವುಳ್ಳ) ಸಮಾಧಿಯನ್ನು ರಚಿಸಬೇಕು. ಅನಂತರ ಕರ್ತೃವು ವಸ್ತ್ರವನ್ನು ಧರಿಸಿ ಸಚೇಲಸ್ನಾನ ಮಾಡಬೇಕು. ನಂತರ ತಲೆ, ಗಡ್ಡಮೀಸೆಗಳನ್ನು ಬೋಳಿಸಿಕೊಳ್ಳಬೇಕು ಎಂದು ತಿಳಿಸಿದೆ.[೩೪] ಆಮೇಲೆ ಸ್ನಾನಾದಿಗಳನ್ನು ಮಾಡಿ ವಿಭೂತಿ ರುದ್ರಾಕ್ಷಿಗಳನ್ನು ಧಾರಣೆ ಮಾಡಿಕೊಂಡು ಶಿವಗಣಂಗಳ ಅಪ್ಪಣೆ ಪಡೆದು ೫ ಅಥವಾ ೯ ವೃಷಭಗಳಿಂದ ಕೂಡಿದ ಲಿಂಗವೊಂದನ್ನು ಮೃತ ಪಿತೃವಿನ ಅಂಕಿತದಲ್ಲಿ ದಿವ್ಯರೂಪಪ್ರಾಪ್ತಿಗಾಗಿ ಸಮಾಧಿಯ ಮೇಲೆ ಸ್ಥಾಪಿಸಬೇಕು. ಆದಾದ ಮೇಲೆ ಗೋ, ಭೂಮಿ, ತಿಲ, ತುಪ್ಪ, ವಸ್ತ್ರ, ಧಾನ್ಯ, ಬೆಲ್ಲ, ಬೆಳ್ಳಿ, ಉಪ್ಪು–ಈ ಹತ್ತು ವಿಧ ದಾನಗಳನ್ನು ಕೊಡಬೇಕು.

ಸಮಾಧಿಯ ಮೇಲೆ ಲಿಂಗವನ್ನು ಸ್ಥಾಪಿಸಿದ ನಂತರ ಮಣ್ಣು ಹಾಕುವಾಗ (ಘಟ್ಟನಾ) ಉಂಟಾದ ಸಂತಾಪದ ಶಮನಕ್ಕಾಗಿ ಕ್ಷೀರಾದಿಗಳನ್ನು ತರ್ಪಣ ಮಾಡಬೇಕು. ಹೀಗೆ ಹತ್ತು ದಿನಗಳವರೆಗೂ ಮಾಡಬೇಕು. ಅನಂತರ ದೀಪಸಂಹಿತ ಬಂಧುಗಳೊಡನೆ ಮನೆಗೆ ಬಂದು 'ನಗ್ನಪ್ರಚ್ಛಾದನಾ'[೩೫] ಎಂಬ ಆರಾಧನೆಯನ್ನು ಮಾಡಬೇಕು. ಸಮಾಧಿಯ ಮೇಲೆ ಸ್ಥಾಪಿತವಾದ ಲಿಂಗವನ್ನು ಅಲುಗಾಡಿಸಬಾರದು. ಒಂದು ವೇಳೆ ಜಂತುಗಳಿಂದಲೋ ಪ್ರಾಣಿಗಳಿಂದಲೋ ಅಲುಗಾಡಿಸಲ್ಪಟ್ಟರೆ ಪ್ರಾಣಾಯಾಮ ಜಪಗಳಿಂದ ಪುನಃಸ್ಥಾಪಿಸಬೇಕು. ಹೀಗೆ ತರ್ಪಣ ಮತ್ತು ಪೂಜೆಗಳನ್ನು ೧೦ ದಿನಗಳವರೆಗೆ ಮಾಡಬೇಕು. ನಂತರ ಏಕೋದ್ದಿಷ್ಟವಿಧಿಯನ್ನನುಸರಿಸಿ ೧–೩–೫–೭–೯–೧೦ ನೆಯ ದಿನಗಳಲ್ಲಿ ನವಾರಾಧನೆಯನ್ನು ಮಾಡಬೇಕು. ೧೧ನೆಯ ದಿನ ಸಮಾಧಿಯ ಮೇಲಿನ ಲಿಂಗವನ್ನು ತೆಗೆದು ಬಟ್ಟೆಯಲ್ಲಿಟ್ಟು ಪೃಥಿವೀ ಯಚ್ಛ... ಎಂಬ ಮಂತ್ರವನ್ನು ಪಠಿಸುತ್ತಾ ತೀರ್ಥವನ್ನೆರೆಯಬೇಕು. ನಂತರ ಎಳ್ಳು ಮತ್ತು ನೆಲ್ಲಿಯನ್ನು ಬೆರೆಸಿದ ನೀರಿನಿಂದ ಸ್ನಾನವಮಾಡಿ ಗಾಣಪತ್ಯ ಹೋಮ ಆನಂದಹೋಮಗಳನ್ನು ಮಾಡಿ ವಿಪ್ರನೊಬ್ಬನನ್ನು ಅರ್ಚಿಸಿ ಲಿಂಗವನ್ನು ವಿಸರ್ಜಿಸಿ ಹೋರಿಯನ್ನು ದಾನವಾಗಿ ಆಗಲಿ, ದೇವರ ಹೆಸರಿನಿಂದಾಗಲೀ ಸ್ವತಂತ್ರವಾಗಿ ಬಿಡಬೇಕು. ಇದಕ್ಕೆ ವೃಷೋತ್ಸರ್ಗಾರಾಧನೆ ಎಂದು ಹೆಸರು.[೩೬]

ನಂತರ ಅದೇ ೧೧ನೆಯ ದಿನದಲ್ಲಿ ರುದ್ರಹೋಮವನ್ನು ಮಾಡಬೇಕು. ರುದ್ರಹೋಮವೆಂದರೆ ಆಚಾರಾದಿ ಷಡ್ಲಿಂಗಾಶ್ರಿತರೂ ಭಕ್ತಾದಿಷಟ್‌ಸ್ಥಲ ಸಮಾಶ್ರಿತರೂ

---

೩೪. ಚಂ.ಆ.ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ–೬ ;ಮ.ಆ.,ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ ೧೧,

೩೫. ವಸ್ತುವನ್ನು ಭೂಮಿಯಲ್ಲಿ ನಿಕ್ಷೇಪಮಾಡಿ ದೀಪಸಹಿತ ಬಂಧುಗಳೊಡನೆ ಮನೆಯನ್ನು ಪ್ರವೇಶ ಮಾಡಿದ ನಂತರ ಮಾಡುವ ಒಂದು ವಿಧಿ ನಗ್ನಪ್ರಚ್ಛಾದನ.

೩೬.ಚಂ.ಆ. ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ–೨೦–೨೧ ; ಮ.ಆ. ಚ.ಪಾ. ಪಟಲ ೬, ಶ್ಲೋಕ ಸಂಖ್ಯೆ–೨,೩,

ಆದ ಖಡ್ಗೇಶ ಮುಂತಾದ[೩೭] ಐವತ್ತು (೪+೬+೧೦+೧೨+೧೬+೨) ಮಂದಿ ರುದ್ರರನ್ನು (ರುದ್ರರೂಪರಾದ ಮಾಹೇಶ್ವರರನ್ನು) ಅರ್ಚಿಸುವುದು ಒಂದು ವೇಳೆ ೫೦ ಮಂದಿ ರುದ್ರರನ್ನು ಅರ್ಚಿಸಲು ಸಾಧ್ಯವಾಗದಿದ್ದಲ್ಲಿ ೧೨, ೧೦, ೬, ೪, ಅಥವಾ ೨ ಮಾಹೇಶ್ವರರನ್ನಾದರೂ ರುದ್ರರೂಪರೆಂದು ಭಾವಿಸಿ ಸತ್ತವನಿಗೆ ರುದ್ರತ್ವವನ್ನು ತಂದುಕೊಡಲು ಅರ್ಚನೆ ಮಾಡಬೇಕು.

೧೨ ನೆಯ ದಿನ ಕಲಾ ಮತ್ತು ತತ್ತ್ವಾರಾಧನೆಯನ್ನು ಮಾಡಬೇಕು. ಮಹೇಶ, ಸದಾಶಿವ, ಶಿವರೆಂಬ ಪಿತೃಗಳನ್ನು ನಂದಿ ಮತ್ತು ಮಹಾಕಾಲರೆಂಬ ವಿಶ್ವೇದೇವರನ್ನು ಆಹ್ವಾನಿತರಾದ ಮಾಹೇಶ್ವರರಲ್ಲಿ (ಜಂಗಮರಲ್ಲಿ) ಆರೋಪಿಸಿಕೊಂಡು.

"ನಂದಿಕೇಶ್ವರಮಹಾಕಾಲಸಂಜ್ಞಿನೋರ್ವಿಶ್ವದೇವಯೋಃ।
ಪಿತುಃ ಪಿತಾಮಹಾದೀನಾಂ ಮಹೇಶಾದಿ ಸ್ವರೂಪಿಣಾಮ್॥
ಷಟ್‌ತ್ರಿಂಶತಾಂ ಚ ತತ್ತ್ವಾನಾಂ ಕಲಾನಾಮಷ್ಟತ್ರಿಂಶತಾಂ
ಆರಾಧನಂ ಕರಿಷ್ಯಾಮೀ"

ಎಂದು ಸಂಕಲ್ಪ ಮಾಡಿಕೊಂಡು ಪಾತ್ರೆಯಲ್ಲಿ ಕಲೆಗಳನ್ನು ಮತ್ತು ತತ್ತ್ವಗಳನ್ನು ಆಹ್ವಾನಿಸಿ ಸಂಯೋಜಿಸಬೇಕು.[೩೮] ಇದರಿಂದ ಮೃತನಿಗೆ ವರ್ಗತ್ರಯೈಕ್ಯ ಸಿದ್ಧಿಯೂ, ಶಿವಸ್ವರೂಪವೂ, ಚತುರ್ಥದ (ಪ್ರೇತಭಾವದ) ನಿವೃತ್ತಿಯೂ ಪ್ರಾಪ್ತವಾಗುವುದು. ಈ ತತ್ವ ಸಂಯೋಜನೆ ಕಲಾಸಂಯೋಜನೆ ಷೋಡಷಾರಾಧನೆಯನ್ನು ಮಾಡಿ ನಂತರ ಏಕೋದ್ದಿಷ್ಟವಿಧಿಯಿಂದ ಮಾಡಬೇಕು. ಇದಕ್ಕೆ ಪ್ರತ್ಯಾಬ್ಧಿಕ ಎಂದು ಹೆಸರು. ಇದನ್ನು ಪ್ರತಿವರ್ಷವೂ ಮಾಡಬೇಕೆಂದು ಆಗಮಗಳು ತಿಳಿಸಿವೆ.

ಆದರೆ ಈ ಕರ್ಮಾಚರಣೆಯ ಔರ್ಧ್ವದೇಹಿಕವಿಧಿಯನ್ನು ವಚನಕಾರರು ವಿರೋಧಿಸಿರುವರು. ಚೆನ್ನಬಸವಣ್ಣನವರು –

ತದ್ದಿನವ ಮಾಡುವ ಕ್ರೂರಕರ್ಮಿಯ ಮನೆಯಲ್ಲಿ
ಮದ್ಯ ಮಾಂಸವಲ್ಲದೆ ಲಿಂಗಕ್ಕೋಗರವಿಲ್ಲ.
ಹರಸಿಕೊಂಡುಮಾಡುವ ಭಕ್ತನ ಮನೆಯಲು
ದಂಡಕ್ಕಿಕ್ಕುವುದಲ್ಲದೆ ಲಿಂಗಕ್ಕೋಗರವಿಲ್ಲ.
ವರುಷಕ್ಕೊಂದು ತಿಥಿಯೆಂದು ಕೂಟಕ್ಕಿಕ್ಕಲು
ಕೀರ್ತಿವಾರ್ತೆಗೆ ಸಲುವುದಲ್ಲದೆ ಲಿಂಗಕ್ಕೋಗರವಿಲ್ಲ.

---

೩೭. ಚಂ.ಆ. ಚ.ಪಾ., ಪಟಲ ೪, ಶ್ಲೋಕ ಸಂಖ್ಯೆ ೩೨–೩೫. ಮತ್ತು ಮ.ಆ. ಚ.ಪಾ. ಪಟಲ ೬, ಶ್ಲೋಕ ಸಂಖ್ಯೆ ೧೪–೨೦

೩೮. ಚಂ.ಆ. ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ ೩೮–೪೪ ; ಮ.ಆ. ಚ.ಪಾ. ಪಟಲ ೭, ಶ್ಲೋಕ ಸಂಖ್ಯೆ–೮–೧೨,

ತದ್ದಿನಂ ದಿನದೋಷಂ ಸ್ಯಾತ್ ರಕ್ತಮಾಂಸಸುರಾನ್ವಿತಂ।
ಸ ಸಂಕಲ್ಪಂ ವಿಕಲ್ಪಂ ಚ ನರಕೇ ಕಾಲಮಕ್ಷಯಂ॥
ಈ ತ್ರಿವಿಧವಿಡಿದುಮಾಡುವಾತ ಭಕ್ತನಲ್ಲ,
ಅಲ್ಲಿ ಹೊಕ್ಕು ಮಾಡಿಸಿಕೊಂಬವರು ಜಂಗಮವಲ್ಲ.
ಕೂಡಲಚೆನ್ನಸಂಗಯ್ಯಾ ಈ ತ್ರಿವಿಧವು ನರಕಕ್ಕೆ ಭಾಜನ.[೩೯]

ಎಂದಿದ್ದಾರೆ. ಕಾರಣ ಲಿಂಗದಲ್ಲಿ ಅಂಗಲೀನವಾಗಿದೆ ಎಂದು ಆನಂದಿಸದೇ ಅತ್ಯಂತ ದುಃಖಭರಿತರಾಗಿ ಕರ್ಮವನ್ನಾಚರಿಸುವ ಜನರನ್ನು ಕಂಡು ಮೂರು ಸಾವಿರ ಮುಕ್ತಿಮುನಿ ಎಂಬ ವಚನಕಾರನು ತನ್ನ ಒಂದು ನೀಳ್ವಚನದಲ್ಲಿ ಹೀಗೆ ಖಂಡಿಸಿದ್ದಾನೆ.

ಶಿವಲಿಂಗ ಸಂಗವಾಗಿ.......ನಮ್ಮ ಗುರುವು–ಜಂಗಮವು, ತಂದೆ–ತಾಯಿ,
ಸತಿ–ಸುತ, ಒಡಹುಟ್ಟಿದರು ಸತ್ತರು ನಮಗೆ ಗತಿ ಯಾವುದೆಂದು,
ಲಿಂಗಜಂಗಮದಾರ್ಚನಾರ್ಪಣಗಳನುಳಿದು
ಶೋಕಾಗ್ನಿಯ ಜ್ವಾಲೆಯನೆಬ್ಬಿಸಿ ಮಹಾದುಃಖಾಬ್ಧಿಯಲ್ಲಿ ಮುಳುಗಾಡುತ್ತಾ
ಅಂದಮಾಡಿ ಗುಂಟಿಕೆಯನಿಕ್ಕಿ ಗೂಟವ ಬಡಿದು
ಶಿವಾನಂದಲೋಲುಪ್ತಿಯೆಂಬ ಸ್ತೋತ್ರಧ್ಯಾನ ಮಂಗಳಾರತಿ ಪುಷ್ಪಪತ್ರಿಯ
ಘನಸನ್ಮಾನ ನಿಜೋತ್ಸಾಹದ ಕೈವಲ್ಯ ಶುಭಸಂತೋಷವನರಿಯದೆ
ಅಯ್ಯಯ್ಯೋ ಅಪ್ಪಪ್ಪ ಅವ್ವವ್ವ ಅಣ್ಣಣ್ಣ ಅಕ್ಕಕ್ಕ
ಮಗಳೆ ಮಗಳೆ ಮಗನೆ ಮಗನೆ ಗುರುವೆ ಗುರುವೆ ಸ್ವಾಮಿ ಸ್ವಾಮಿ
ಹೇಂಗೆ ನಿಮ್ಮ ಕಳಕೊಂಡು ಹೇಂಗೆ ಜೀವಿಸಲೆಂದು
ಲಿಂಗಸಾವಧಾನವನುಳಿದು ಬೊಬ್ಬೆಯ ಹೊಡೆಹೊಡೆದು
ಎದೆಎದೆಯ ಬಡಿಬಡಿದು, ಕಿರಾತರಂತೆ ಮಣ್ಣಿನೊಳು ಮುಚ್ಚಿ
ಗುಟ್ಟಿಯ ಮಾಡಿ ಪ್ರತುಮೆಗಳನಿಟ್ಟು ಪೂಜಿಸಿ
ತಾನನಾದಿಲಿಂಗಮಂತ್ರಭೋಗೋಪಭೋಗದೊಡನೆ ಸಲಿಸುವ
ತೀರ್ಥಪ್ರಸಾದವ ತೋರಿ ವಸ್ತ್ರಾಭರಣಗಳನಿಟ್ಟು
ಕುಂಡಗೋಳಕರಂತೆ ನಿಜಸಂಗನ ನಿಲವನರಿಯದೆ
ಸತ್ತ ದಿನ ಮೂರು ಐದು ಒಂಭತ್ತು ತಿಂಗಳು
ವರುಷ ಹನ್ನೆರಡು ವರುಷ ಪರಿಯಲ್ಲಿವಿಡಿದು
ಲಿಂಗ ಬಾಹ್ಯರಂತೆ ಎಡೆಹುಡಿಯನುಟ್ಟು ಪರಮಾನ್ನಪಾಯಸಗಳ ಮಾಡಿ
ಕೊಡಗಳನ್ನಿಟ್ಟು ಪೂಜಿಸಿ, ಘನಗುರುಲಿಂಗಜಂಗಮದ ತೀರ್ಥವ ತೋರಿ
ಸುಳಿಬಾಳೆ ಎಲಿಯ ಹಾಸಿ, ದೇವಾದಿದೇವರ ದೇವಜಂಗಮಕ್ಕೆ ಅಲ್ಪಸ್ವಲ್ಪ
ನೀಡಿ ಆ ಸುಳಿಬಾಳೆ ಎಲೆಯೊಳಗೆ ಮಿತಿತಪ್ಪಿ

೩೯. ಚೆ.ಬ.ವ. ಸಮಗ್ರ ವಚನ ಸಂಪುಟ ೩, ವ.ಸಂ. ೧೫೮, ಪುಟ ೪೭.

ಪಶುವಿನ ಮುಂದೆ ಇಟ್ಟ ಹಾಂಗೆ ಮಡುಗಿ, ತಮ್ಮ ಹೆತ್ತವರ ಸತ್ತವರ ಹೆಸರುಗೊಂಡ
ಗಂಡ ಗುರುಲಿಂಗಜಂಗಮಪ್ರಸಾದಿಯಾಗಿ, ಹೆಂಡತಿ ಮಕ್ಕಳೊಡಹುಟ್ಟಿದರೆಲ್ಲ
ಶ್ರೀ ಗುರುವಿತ್ತ ಲಿಂಗವಿಲ್ಲದವರು ಕೆಲರು ಲಿಂಗವ ಕೊಟ್ಟಿಕೊಂಡವರು ಕೆಲರು
ಆ ಸತ್ತವರ ನೆನಹಿನಿಂದ ಸಮಸ್ತ ಉಪಚಾರವ ಮಾಡಿ, ಮನವೆಲ್ಲ ಸತ್ತವರೊಡಗೂಡಿ
ಲಿಂಗ ನೈವೇದ್ಯವ ಮಾಡಿದೆವೆಂಬುದೆ ಶುದ್ಧ ಅನಾಚಾರ ಕ್ರಿಯೆಯು –[೪೦]

ಎಂದು ವಚನಕಾರರು ಈ ಔರ್ಧ್ವದೇಹಿಕವಿಧಿಯನ್ನು ವಿರೋಧಿಸಿರುವರು.

ಶಿವಾಗಮಗಳು ಪ್ರತ್ಯಾಬ್ಧಿಕದ ಔರ್ಧ್ವದೇಹಿಕ ವಿಧಿಯನ್ನು ಹೇಳಿದರೂ ಸಹ ಪಿಂಡ ಪ್ರದಾನಾದಿಗಳನ್ನು ಹಾಗೂ ವಿಶ್ವೇದೇವತೆಗಳ ಆವಾಹನಾದಿಗಳನ್ನು ಮಾಡಕೂಡದೆಂದು ಪ್ರತಿಪಾದಿಸಿವೆ.

ಅಪಸವ್ಯಂ ತಿಲಾನ್ ಪಿಂಡಂ ವಿಕಿರಂ ಚಾಗ್ನಿಕರ್ಮ ಚ ।
ಅರ್ಘ್ಯಪಾತ್ರಂ ಚ ಮತಿಮಾನ್ ಶೈವಶ್ರಾದ್ಧೇಷು ವರ್ಜಯೇತ್॥[೪೧]

ವೀರಶೈವರಾದವರು ಸತ್ತಾಗ ಮಾಡುವ ಶೈವಶ್ರಾದ್ಧದಲ್ಲಿ ಎಡದಿಂದ ಬಲಕ್ಕೆ ಜನಿವಾರವನ್ನು ಬದಲಾಯಿಸುವಂತೆ ಶಿವದಾರವನ್ನು ಅಪಸವ್ಯ ಮಾಡುವುದಾಗಲೀ, ಅಕ್ಷತೆಗೆ ಬದಲಾಗಿ ತಿಲ (ಎಳ್ಳನ್ನು) ಉಪಯೋಗಿಸುವುದನ್ನಾಗಲಿ, ಪ್ರೇತತ್ವವೇ ಇಲ್ಲದುದರಿಂದ ಪಿಂಡ ಹಾಕುವುದಾಗಲೀ, ಅಕ್ಕಿಯನ್ನು ಎರಚುವುದಾಗಲೀ, ಆಹಿತಾಗ್ನಿಯನ್ನೊಯ್ಯುವುದಾಗಲೀ, ಅರ್ಘ್ಯಪಾತ್ರೆಯನ್ನು ಕೊಂಡೊಯ್ಯುವುದಾಗಲಿ ಮಾಡಕೂಡದು. ಹೀಗೆ ಹೋಮ, ಪಿಂಡ, ಎಳ್ಳು, ದರ್ಭೆ, ವಿಕಿರ, ಅರ್ಘ್ಯಪಾತ್ರೆ ಮತ್ತು ಅಪಸವ್ಯಗಳು ವೀರಶೈವರಾದವರು ಸತ್ತಾಗ ಮಾಡುವ ಶ್ರಾದ್ಧದಲ್ಲಿ ನಿಷಿದ್ಧವಾಗಿವೆ. ಅಲ್ಲದೇ ವಿಶ್ವೇದೇವತೆಗಳ ಆವಾಹನಾದಿಗಳು ನಿಷಿದ್ಧ ಎಂದು ಅಭಿಪ್ರಾಯಪಟ್ಟಿವೆ.

ವಿಶ್ವೇದೇವಾವಾಹನಂ ಚ ನಾಭಿಶ್ರವಣಕೀರ್ತನಮ್।
ಪ್ರದಕ್ಷಿಣವಿಸರ್ಗೇ ವಾ ಸೀಮಾಂತಗಮನಂ ನಹಿ॥[೪೨]

ವಿಶ್ವೇದೇವತೆಗಳನ್ನು ಆವಾಹನೆ ಮಾಡುವುದು, ಹೊಗಳುವುದು, ಕೀರ್ತನೆ ಮಾಡುವುದು, ಪ್ರದಕ್ಷಿಣೆ ಹಾಕುವುದು, ಸೀಮಾಂತಕ್ಕೆ ಗಮಿಸುವುದು ಇವು ನಿಷಿದ್ಧ. ಆದರೆ ಅದೇ ಚಂದ್ರಜ್ಞಾನಾಗಮದಲ್ಲಿ ತತ್ತ್ವಸಂಯೋಜನೆ ಮಾಡುವಾಗ ವಿಶ್ವೇದೇವತೆಗಳಿಂದ ನಂದಿಕೇಶ್ವರ ಮಹಾಕಾಲರನ್ನು ಆರಾಧಿಸುತ್ತೇನೆಂದು ಸಂಕಲ್ಪಮಾಡಬೇಕೆಂದು[೪೩] ತಿಳಿಸುತ್ತದೆ.

---

೪೦. ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವಚನ ಸಂಪುಟ ೯, ವ.ಸಂ. ೫೬, ಪುಟ ೫೯

೪೧. ಚಂ.ಆ. ಚ.ಪಾ. ಪಟಲ ೫, ಶ್ಲೋಕ ಸಂಖ್ಯೆ–೬

೪೨. ಚಂ.ಆ. ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ–೨೯

೪೩. ಚಂ.ಆ. ಚ.ಪಾ. ಪಟಲ ೪, ಶ್ಲೋಕ ಸಂಖ್ಯೆ–೪೧–೪೨

೫. ಪಕೀರ್ಣ ವಿಧಿ

ಈ ವಿಧಿಯಲ್ಲಿ ಶ್ರಾದ್ಧದಲ್ಲಿ (ಶಿವಮೇಧದಲ್ಲಿ) ಬರುವ ಪಿತೃಗಣಗಳಾರು? ಗ್ರಾಹ್ಯದ್ರವ್ಯಗಳಾವುವು? ತತ್ತ್ವಸಂಯೋಜನೆಯ ಕರ್ತ ಯಾರು ? ಆರಾಧನಾ ಪ್ರಭೇದ ಎಷ್ಟು ವಿಧ? ಎಂಬ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ.

ಒಟ್ಟಿನಲ್ಲಿ ಶಿವಸಾಂಯುಜ್ಯವನ್ನು ಪಡೆಯುವ ಸಂಸ್ಕಾರವಾದ ಶಿವಮೇಧವಿಧಿ(ಅಂತ್ಯೇಷ್ಟಿವಿಧಿ) ವಿಚಾರದ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ತಿಳಿದುಬರುವ ವಿಷಯವೇನೆಂದರೆ ಶಿವಾಗಮಗಳಲ್ಲಿ ಪ್ರತಿಪಾದಿತವಾದ ಶಿವಮೇಧಾ ಪ್ರಶಂಸಾವಿಧಿ, ಉತ್ಕ್ರಾಂತಿಪೂರ್ವಸಮಯಾಚಾರವಿಧಿ, ಉತ್ಕ್ರಾಂತ್ಯುತ್ತರ ಸಮಯಾಚಾರ ವಿಧಿ. ಸಮಾಧಿರಚನಾ ಮತ್ತು ನಿಕ್ಷೇಪವಿಧಿಯ ಬಗ್ಗೆ ವಚನಕಾರರಲ್ಲಿ ಆಗಮದ ಅಭಿಪ್ರಾಯಕ್ಕೆ ಸಂಪೂರ್ಣ ಸಹಮತ ವ್ಯಕ್ತವಾಗಿವೆ. ಆದರೆ ಕರ್ಮಾಚರಣೆಯ ಔರ್ಧ್ವದೇಹಿಕ ವಿಧಿಯಾದ ಸಮಾಧಿಯ ರಚನೆ, ಕರ್ತನ ಕೇಶಮುಂಡನ, ಸಮಾಧಿಯ ಮೇಲೆ ಲಿಂಗಸ್ಥಾಪನೆ, ೧–೩–೫–೭–೯–೧೦ ನೇ ದಿನಗಳಲ್ಲಿ ನವಾರಾಧನೆ, ಗಾಣಪತ್ಯಹೋಮ, ವೃಷೋತ್ಸರ್ಗಾರಾಧನೆ, ಆಚಾರಾದಿ ಷಡ್ಲಿಂಗಾಶ್ರಿತರೂ ಭಕ್ತಾದಿಷಟ್‌ಸ್ಥಲ ಸಮಾಶ್ರಿತರೂ ಆದ ಮಾಹೇಶ್ವರರ ಆರಾಧನೆಯ ರುದ್ರಹೋಮ, ತತ್ವಸಂಯೋಜನೆ ಹಾಗೂ ಕಲಾಸಂಯೋಜನೆಯ ಮೂಲಕ ಜಂಗಮ ಆರಾಧನೆ, ಪ್ರತಿ ವರುಷಕ್ಕೊಮ್ಮೆ ಪ್ರತ್ಯಾಬ್ಧಿಕದ ಆಚರಣೆಯನ್ನು ವಚನಕಾರರು ವಿರೋಧಿಸಿರುವರು. ಆದರೂ ಸಹ ಇಂದಿಗೂ ವೀರಶೈವರಲ್ಲಿ ಆಗಮಗಳಲ್ಲಿ ಪ್ರತಿಪಾದಿತವಾದಂತೆ ವಿಸ್ತೃತವಾದ ಔರ್ಧ್ವದೇಹಿಕವಿಧಿಯ ಆಚರಣೆಯು ಕಂಡು ಬರದಿದ್ದರೂ ಸಮಾಧಿಯ ರಚನೆ, ಸಮಾಧಿಯ ಮೇಲೆ ಲಿಂಗಸ್ಥಾಪನೆ, ವ್ಯಕ್ತಿ ಮರಣಿಸಿದ ಮೂರು, ಐದು ಅಥವಾ ಒಂಭತ್ತನೇ ದಿನಕ್ಕೆ ಶಿವಗಣಾರಾಧನೆಯನ್ನು ಹಮ್ಮಿಕೊಳ್ಳುವ ಹಾಗೂ ಪ್ರತಿವರ್ಷ ಪುಣ್ಯತಿಥಿಯನ್ನು ಆಚರಿಸುವ ಪದ್ಧತಿಯು ರೂಢಿಯಲ್ಲಿದೆ. ಅದರೆ ಮೃತನನ್ನು ಸಮಾಧಿ ಮಾಡಿದ ನಂತರ ಕರ್ತನು ಕೇಶಮುಂಡನ ಮಾಡಿಕೊಳ್ಳುವ ಪದ್ಧತಿ, ಗಾಣಪತ್ಯಹೋಮ, ವೃಷೋತ್ಸರ್ಗಾರಾಧನೆಗಳು ರೂಢಿಯಲಿಲ್ಲ.

***

ಅಧ್ಯಾಯ - ೫

ಶಿವಾಗಮಗಳು ಮತ್ತು ವಚನ ಸಾಹಿತ್ಯ : ತಾತ್ವಿಕ ಚಿಂತನ

೫.೧ ಅಷ್ಟಾವರಣ

- ಗುರು
- ಲಿಂಗ
- ಜಂಗಮ
- ಪಾದೋದಕ
- ಪ್ರಸಾದ
- ವಿಭೂತಿ
- ರುದ್ರಾಕ್ಷಿ
- ಮಂತ್ರ

೫.೨ ಪಂಚಾಚಾರ

- ಲಿಂಗಾಚಾರ
- ಸದಾಚಾರ
- ಶಿವಾಚಾರ
- ಗಣಾಚಾರ
- ಭೃತ್ಯಾಚಾರ

೫.೩ ಷಟಸ್ಥಲ

- ಸ್ಥಲದ ಅರ್ಥ
- ಸ್ಥಲ ವಿಭಾಗ ಕ್ರಮ
- ಭಕ್ತ ಸ್ಥಲ
- ಮಹೇಶಸ್ಥಲ
- ಪ್ರಸಾದಿ ಸ್ಥಲ
- ಪ್ರಾಣಲಿಂಗಿಸ್ಥಲ
- ಶರಣ ಸ್ಥಲ
- ಐಕ್ಯ ಸ್ಥಲ

ಅಧ್ಯಾಯ – ೫

ಶಿವಾಗಮಗಳು ಮತ್ತು ವಚನ ಸಾಹಿತ್ಯ : ತಾತ್ವಿಕ ಚಿಂತನ

ಮೂಲತಃ ಪದಾರ್ಥ–ಮಾಯಾ–ಕಲಾ–ವಿದ್ಯಾ–ರಾಗ–ಕಾಲ–ನಿಯತಿ– ಪುರುಷ –ಪ್ರಕೃತಿ–ಬುದ್ಧಿ–ಅಹಂಕಾರ–ಮನಸ್ಸು ಮುಂತಾದ ೩೬ ಸಂಗತಿಗಳನ್ನು ತತ್ವ ಎಂದು ಎಲ್ಲೆಡೆ ಪ್ರತಿಪಾದಿಸಿದ್ದರೂ ಈ ಮೂವತ್ತಾರು ತತ್ವಗಳಲ್ಲಿಯ ಶಿವ ಸ್ವರೂಪವನ್ನು ತಿಳಿದುಕೊಳ್ಳಲು ಅಷ್ಟಾವರಣ, ಪಂಚಾಚಾರ ಹಾಗೂ ಷಟಸ್ಥಲಗಳನ್ನು ವೀರಶೈವ ಧರ್ಮದಲ್ಲಿ ಪ್ರತಿಪಾದಿಸಲಾಗಿದೆ. ಕಾರಣ ಇವುಗಳನ್ನೂ ಸಹ ತತ್ವತ್ರಯಗಳೆಂದು ಪ್ರಯೋಗಿಸಿದ್ದರಿಂದ[೧] ಇವುಗಳನ್ನೇ ತಾತ್ವಿಕ ಚಿಂತನೆಯಲ್ಲಿ ವಿಶ್ಲೇಷಿಸಲಾಗಿದೆ. ಪ್ರಥಮದಲ್ಲಿ ವೀರಶೈವದ ಅಂಗವೆಂದು ಪರಿಗಣಿಸಲ್ಪಡುವ ಅಷ್ಟಾವರಣಗಳ ಬಗ್ಗೆ ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ತೌಲನಿಕವಾಗಿ ವಿವೇಚಿಸಲಾಗಿದೆ.

೫.೧ ಅಷ್ಟಾವರಣ

ವೀರಶೈವ ಧರ್ಮದಲ್ಲಿ ಅಷ್ಟಾವರಣಗಳ ಪಾತ್ರ ಮಹತ್ವದ್ದಾಗಿದೆ. ಧಾರ್ಮಿಕ ನೆಲಗಟ್ಟಿನ ಮೇಲೆ ನೈತಿಕ–ಸೌಧವನ್ನು ಕಟ್ಟಲು ಈ ಧರ್ಮಾಚರಣೆಗಳು ಸಹಾಯಕಾರಿಯಾಗಿವೆ. ಸಾಮಾಜಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಇವು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ಅಂತೆಯೆ ಅಷ್ಟಾವರಣಗಳನ್ನು ಅಂಗವೆಂದೂ, ಪಂಚಾಚಾರಗಳನ್ನು ಪ್ರಾಣವೆಂದೂ, ಷಟ್‌ಸ್ಥಲಗಳನ್ನು ಆತ್ಮ ಎಂದೂ ಕರೆದಿದ್ದಾರೆ. ಹೆಸರಿನಲ್ಲೇ ಸೂಚಿತವಾದಂತೆ ಅಷ್ಟಾವರಣ ಎಂದರೆ–ಎಂಟು ಹೊದಿಕೆಗಳು.

ಯೋಧನಿಗೆ ಕವಚ, ಅರಮನೆಗೆ ಕೋಟೆ, ತೋಟಕ್ಕೆ ಬೇಲಿ–ಇದ್ದಂತೆ ವೀರಶೈವ ಸಾಧಕನಿಗೆ ಮಲತ್ರಯಗಳ ಬಾಧೆ ತಟ್ಟಬಾರದೆಂದು ಈ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಎಂಟು ಹೊದಿಕೆಗಳನ್ನು ಆಚ್ಛಾದಿಸಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಈ ಅಷ್ಟಾವರಣಗಳು ಸಾಮಾಜಿಕ ಸಮತೆಯನ್ನುಂಟು ಮಾಡುವುದರೊಂದಿಗೆ ಸಾಧಕನಿಗೆ ಶ್ರೀರಕ್ಷೆಯಾಗಿರುತ್ತವೆ.

---

೧. ಶ್ರೀ ಜ.ಚ.ನಿ.ಯವರು, ಶ್ರೀಕಾಶಿ ಜ್ಞಾನ ಸಿಂಹಾಸನಾಧೀಶ್ವರ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯರು (ಶಕ್ತಿವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶೆ), ಶ್ರೀ ಜಗದ್ಗುರು ಅನ್ನದಾನಿಶ್ವರ ಮಹಾಶಿವಯೋಗಿಗಳು ಮಹಾ ಸಂಸ್ಥಾನಮಠ ಮುಂಡರಗಿ (ಷಟ್‌ಸ್ಥಲ : ಒಂದು ಅಧ್ಯಯನ)

ಶೈವೋಪನಿಷತ್ತುಗಳಲ್ಲಿ ಅಷ್ಟಾವರಣಗಳ ವಿವರ ದೊರೆಯುವುದಾದರೂ "ಅಷ್ಟಾವರಣ" ಶಬ್ದದ ಬಳಕೆ ಮೊಟ್ಟಮೊದಲು ಶೈವಾಗಮೋತ್ತರ ಭಾಗಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಗುರುರ್ಲಿಂಗಂ ಜಂಗಮಶ್ಚ ತೀರ್ಥಂ ಚೈವ ಪ್ರಸಾದಕಃ ।
ಭಸ್ಮರುದ್ರಾಕ್ಷಮಂತ್ರಾಶ್ಚೇತ್ಯಷ್ಟಾವರಣಸಂಜ್ಞಿತಾಃ
ಇಮಾನಿ ಶಿವಭಕ್ತಾನಾಂ ಭವದೋಷತತೇಃ ಸದಾ ।
ನಿವಾರಣೈಕಕಾರ್ಯಾಣಿ ಖ್ಯಾತಾನ್ಯಾವರಣಾಖ್ಯಯಾ ॥[೨]

ಗುರು, ಲಿಂಗ, ಜಂಗಮ, ತೀರ್ಥ (ಪಾದೋದಕ), ಪ್ರಸಾದ, ಭಸ್ಮ, ರುದ್ರಾಕ್ಷ ಮತ್ತು ಮಂತ್ರ ಇವುಗಳು ಅಷ್ಟಾವರಣವೆಂಬ ಹೆಸರನ್ನು ಹೊಂದಿವೆ. ಇವು (ಎಂಟು) ಶಿವಭಕ್ತರ ಸಂಸಾರವೆಂಬ ದೋಷ ಸಮೂಹವನ್ನು ಪರಿಹರಿಸುವಂಥವುಗಳು. ಆದ್ದರಿಂದ ಆವರಣವೆಂಬ ಹೆಸರಿನಿಂದ ಪ್ರಸಿದ್ಧವಾಗಿವೆ ಎಂದು ಚಂದ್ರಜ್ಞಾನಾಗಮವು ಪ್ರತಿಪಾದಿಸಿದೆ.

ಗುರು-ಲಿಂಗ-ಜಂಗಮರು ಲಿಂಗಾಂಗಿಗಳಿಗೆ ಉಪಾಸ್ಯಮೂರ್ತಿಗಳಾಗಿದ್ದಾರೆ. ಈ ಮೂರು ಅವ್ಯಕ್ತಪರಬ್ರಹ್ಮನ ವ್ಯಕ್ತಸ್ವರೂಪವಾಗಿರುತ್ತವೆ. ಭಸ್ಮ-ರುದ್ರಾಕ್ಷಿ-ಮಂತ್ರ ಇವು ಉಪಾಸನೆಗೆ ಬೇಕಾದ ಮುಖ್ಯ ಸಾಧನಗಳಾಗಿರುತ್ತವೆ. ಪಾದೋದಕ-ಪ್ರಸಾದಗಳು ಉಪಾಸನೆಯಿಂದ ದೊರೆಯುವ ಲಾಭಗಳಾಗಿವೆ.

ಅಷ್ಟಾವರಣಗಳಲ್ಲಿ ಮುಖ್ಯವಾಗಿ ಬಾಹ್ಯ ಮತ್ತು ಆಂತರಿಕ ಎಂದು ಎರಡು ಪ್ರಕಾರಗಳಿರುತ್ತವೆ. ಬಾಹ್ಯ ಅಷ್ಟಾವರಣಗಳು ಸ್ಥೂಲ ಶರೀರಕ್ಕೂ, ಆಂತರಿಕ ಅಷ್ಟಾವರಣಗಳು ಕಾರಣ ಶರೀರಕ್ಕೂ ಸಂಬಂಧಿಸಿದವುಗಳಾಗಿವೆ. ಸ್ಥೂಲ ಶರೀರದಲ್ಲಿಯ ೧. ಗುರು ೨. ಲಿಂಗ ೩. ಜಂಗಮ ೪. ಪಾದೋದಕ ೫. ಪ್ರಸಾದ ೬. ವಿಭೂತಿ ೭. ರುದ್ರಾಕ್ಷಿ ೮. ಮಂತ್ರ -ಇವು ಬಾಹ್ಯ ಅಷ್ಟಾವರಣಗಳಾಗಿರುತ್ತವೆ ಹಾಗೂ ಕಾರಣ ಶರೀರದಲ್ಲಿಯ ೧. ಅರಿವು ೨. ಆತ್ಮ ೩. ಅನುಭವ ೪. ಅಂತಃಕರಣ ೫. ಪ್ರಸನ್ನತೆ ೬. ನಿಷ್ಕಾಮ ೭. ನಿರ್ಮೋಹ ೮. ಅನಾಹತ - ಇವು ಆಂತರಿಕ ಅಷ್ಟಾವರಣಗಳಾಗಿರುತ್ತವೆ.

ವ್ಯಕ್ತಿಯು ತನ್ನ ಗುರಿಯಾದ ಲಿಂಗಾಂಗ ಸಾಮರಸ್ಯ ಪಡೆಯಬೇಕಾದರೆ ಈ ಆವರಣಗಳ ಎಲ್ಲೆಯಲ್ಲಿರಬೇಕು ಎಂದು ವೀರಶೈವ ಧರ್ಮವು ಪ್ರತಿಪಾದಿಸಿದೆ. ಕಾರಣ ಅಷ್ಟಾವರಣದಲ್ಲಿಯ ಪ್ರತಿಯೊಂದು ಆವರಣಗಳ ಬಗ್ಗೆ ಸವಿವರವಾಗಿ ಶಿವಾಗಮ ಮತ್ತು ವಚನಗಳ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ.

---

೨. ಚಂ.ಆ. ಕ್ರಿಪಾ. ಪಟಲ ೨, ಶ್ಲೋಕ ಸಂಖ್ಯೆ ೨,೩

೫.೧.೧ ಗುರು

ವೀರಶೈವ ಧರ್ಮದ ಅಷ್ಟಾವರಣಗಳಲ್ಲಿ ಗುರುವಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಏಕೆಂದರೆ ಲಿಂಗಾಂಗಸಾಮರಸ್ಯವೆಂಬ ಮೋಕ್ಷವೇ ವೀರಶೈವರ ಅಂತಿಮ ಗುರಿಯಾಗಿದ್ದು, ಈ ಸಾಧನೆಗೆ ಅಗತ್ಯವಾದ ಜ್ಞಾನವು ಸದ್ಗುರುವಿನ ಕರುಣೆಯಿಲ್ಲದೇ ಲಭಿಸದು.

ಮೋಕ್ಷಸ್ಯ ದೀಕ್ಷಾಸಂಪ್ರಾಪ್ತ್ಯೈ ಗುರುಃ ಸ್ಯಾನ್ಮೂಲಕಾರಣಮ್।
ನ ವಿನಾ ಗುರುಣಾ ಸಿದ್ಧ್ಯೈ ಸಾಧನಾನಿ ಭವಂತ್ಯಲಮ್ ॥[೧]

ಎಂಬ ಆಗಮೋಕ್ತಿಯಂತೆ ಮೋಕ್ಷಕ್ಕೆ ಮತ್ತು ದೀಕ್ಷೆಯನ್ನು ಪಡೆಯಲು ಗುರುವೇ ಮೂಲ ಕಾರಣನು. ಗುರುವಿಲ್ಲದೆ ಯಾವ ಸಾಧನಗಳೂ ಸಿದ್ಧಿಗೆ ಪರ್ಯಾಪ್ತವಾಗಲಾರವು. ಗುರುವಿನ ಉಪದೇಶಕ್ಕೆ ಪಾತ್ರನಾದವನೇ ಪರಮಾತ್ಮನನ್ನು ಅರಿತುಕೊಳ್ಳುವನು. ಆದುದರಿಂದ ಶಿಷ್ಯನ ಅಜ್ಞಾನವನ್ನು ಪರಿಹರಿಸಿ, ಶಿವಜ್ಞಾನ ವನ್ನುಂಟು ಮಾಡುವ ಮೂಲಕ ಆತನನ್ನು ಅರಿಷಡ್ವೈರಿಗಳಿಂದ ರಕ್ಷಿಸುವುದರಿಂದ ಗುರುವಿಗೆ ಅಷ್ಟಾವರಣಗಳಲ್ಲಿ ಆದ್ಯಸ್ಥಾನವನ್ನು ನೀಡಲಾಗಿದೆ.

ಗುರು ಪದದ ಅರ್ಥ ಮತ್ತು ನಿಷ್ಪತ್ತಿ –

'ಗುರು' ಶಬ್ದಕ್ಕೆ ಬೃಹಸ್ಪತಿಯಿಂದ ಹಿಡಿದು ಆಚಾರ್ಯ, ಉಪಾಧ್ಯಾಯ, ಸಂಪ್ರದಾಯ ಪ್ರವರ್ತಕ, ಉಪದೇಶಕ, ಆತ್ಮವಿದ್ಯೋಪದೇಶಕ, ಪೂಜ್ಯ, ತಂದೆ, ಭಾರವಾದ, ಪುರೋಹಿತ, ಒಂದು ಗ್ರಹ, ಪುಷ್ಯ ನಕ್ಷತ್ರ, ಪರಮಾತ್ಮ ಮುಂತಾದ ಸುಮಾರು ಇಪ್ಪತ್ತಕ್ಕಿಂತ ಹೆಚ್ಚು ಅರ್ಥಗಳನ್ನು ಶಬ್ದಾರ್ಥ ಕೌಸ್ತುಭ ನಿಘಂಟು ತಿಳಿಸುತ್ತದೆ. ಆದರೆ 'ಗುಣಾನ್ ರುಂಧೇ ಇತಿ ಗುರುಃ' ಎಂಬ ವ್ಯುತ್ಪತ್ತಿಯಂತೆ 'ಯಾರು ಶಿಷ್ಯನ ರಾಜಸಾದಿ ಗುಣಗಳನ್ನು ತೊಲಗಿಸಿ ಶಿವತತ್ವವನ್ನು ಬೋಧಿಸುತ್ತಾನೋ ಆತನೇ ಗುರು' ಎಂದು ಕರೆಯಲ್ಪಡುತ್ತಾನೆ. 'ಗುರು' ಪದದ ನಿಷ್ಪತ್ತಿಯನ್ನು ಕುರಿತು ಪಾರಮೇಶ್ವರಾಗಮವು –

ಗುಕಾರೋಽಂಧತಮಃ ಪ್ರೋಕ್ತಂ ರುಕಾರೋ ಭಾಸ್ಕರೋದಯಃ।
ಮೋಹಾಂಧಕಾರಹರಣಾದ್ ಗುರುರಿತ್ಯಭಿಧೀಯತೇ ॥[೨]

ಅರ್ಥಾತ್ 'ಗು'ಕಾರವು ಅಂಧತಮಸ್ಸು, 'ರು'ಕಾರವು ಸೂರ್ಯೋದಯ; ಕಾರಣ ಶಿವಜ್ಞಾನದ ಬೆಳಕಿನಿಂದ ಶಿಷ್ಯನ ಮೋಹಾಂಧಕಾರವನ್ನು ತೊಲಗಿಸುವ ಜ್ಞಾನ ಭಾಸ್ಕರನೇ 'ಗುರು' ಎಂದು ಅರ್ಥೈಸಿದೆ. ಇದೇ ಅರ್ಥವನ್ನುಳ್ಳ ಉತ್ತರ ವೀರಾಗಮದ ಶ್ಲೋಕದ ಉಲ್ಲೇಖದೊಂದಿಗೆ ವಚನದಲ್ಲಿ

ಗುರು ತಾಮಸ ನಿರಸನವದೆಂತೆಂದಡೆ:

---

೧. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೫

೨. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೬೩

ಗುಕಾರವೆ ಅಂಧಃಕಾರವೆಂಬ ಅಜ್ಞಾನವ ಕೆಡಿಸುವ ಜ್ಯೋತಿಸ್ವರೂಪ ನೋಡಾ.
ರುಕಾರವೇ ರೂಪಾತೀತವಾಗಿಹ ಪರಬ್ರಹ್ಮ ನೋಡಾ.
ಇದಕ್ಕೆ **ಉತ್ತರವೀರಾಗಮೇ** :
“ಗುಕಾರವಸ್ತಂಧಕಾರಸ್ತು ರೂಪಾತೀತಂ ರುಕಾರಕಂ।
ಗುಣರೂಪ ವಿಹೀನತ್ವಾತ್ ಗುರುರಿತ್ಯಾಭಿಧೀಯತೇ॥” ಇಂತೆಂದುದಾಗಿ,
ಅಪ್ರಮಾಣ ಕೂಡಲಸಂಗಮದೇವಾ.

ಎಂದು ‘ಜೀವಾತ್ಮನ ಅಜ್ಞಾನವನ್ನು ತೊಲಗಿಸುವ ಜ್ಯೋತಿಸ್ವರೂಪ ಹಾಗೂ ನಿರಾಕಾರ ಪರಬ್ರಹ್ಮನ ಸಾಕಾರ ಸ್ವರೂಪವೇ ಗುರು’ ಎಂದು ವಿಶ್ಲೇಷಿಸಿದೆ. ಇದೇ ಅರ್ಥವಿಶ್ಲೇಷಣೆಯ ಭಾವವನ್ನೇ ಸಿದ್ಧರಾಮರು ‘......ಕಣ್ಣಿಂಗೆ ಸತ್ತ್ವ–ರಜ–ತಮವೆಂಬ ತಿಮಿರ ಕವಿದು, ಅಜ್ಞಾನ ವಶನಾದಲ್ಲಿ ಸದ್ಗುರುವನುಪಧಾವಿಸಿ, ಕಣ್ಗೆ ಔಷಧಿಯ ಬೇಡಲೊಡನೆ, ಶಿವಜ್ಞಾನವೆಂಬ ಅಂಜನವ ನೆಚ್ಚಿ ಎನ್ನ ಕಣ್ಣ ಮುಸುಂಕಿದ ಅಜ್ಞಾನ ಕಾಳಿಕೆಯ ಬೇರ್ಪಡಿಸಿದ ಶ್ರೀಗುರು”[೪] ಎಂದು ಅತ್ಯಂತ ಸುಂದರವಾಗಿ ಕನ್ನಡೀಕರಿಸಿದ್ದಾರೆ. ಇದನ್ನೇ ತೋಂಟದ ಸಿದ್ಧಲಿಂಗರು ತಮ್ಮ ವಚವೊಂದರಲ್ಲಿ ‘ಭವ ತಿಮಿರವೆಂಬ ಅಜ್ಞಾನದಿಂದ ಮುಸುಕಿಕೊಂಡು ಕಾಣಬಾರದೆಯಿದ್ದ, ಕಣ್ಣಿಂಗೆ ಜ್ಞಾನವೆಂಬ ಅಂಜನವನೆಚ್ಚು ಶಿವಪಥವಿದೆಂದು ತೋರಿಸಿದ ಸದ್ಗುರು ದೇವಂಗೆ ನಮೋನಮೋ’[೫] ಎಂದು ಗುರುಸ್ತುತಿಗೈಯುವ ಮೂಲಕ ಗುರು ಸ್ವರೂಪವನ್ನು ವರ್ಣಿಸಿದ್ದಾರೆ. ‘ಗುರು’ ಪದದ ಇನ್ನೊಂದು ಬಗೆಯ ನಿಷ್ಪತ್ತಿಯನ್ನು ಕುರಿತು ವೀರಾಗಮವು –

ಗುಕಾರಂ ಚ ಗುಣಾತೀತಂ ರುಕಾರಂ ರೂಪವರ್ಜಿತಂ।
ಗುಣರೂಪಮತೀತಂ ಚ ಯೋತ್ಸದದ್ಯಾತ್ಸ ಗುರುಸ್ಮೃತಃ॥”[೬]

‘ಗು’ ಎಂದರೆ ಗುಣಾತೀತನೂ, ‘ರು’ ಅಂದರೆ ರೂಪಾತೀತನೂ ಆದ ಪರಶಿವ ಸ್ವರೂಪನೇ ‘ಗುರು’. ಅರ್ಥಾತ್ ಸತ್ವ, ರಜಸ್ ಮತ್ತು ತಮಸ್ಸುಗಳೆಂಬ ತ್ರಿಗುಣಗಳಿಂದ ಹೊರತಾದವನು ಹಾಗೂ ಅಶುದ್ಧವಾದ ಮಾಯೆಯ ರೂಪದಿಂದ ಅತೀತನಾದ ಪರಶಿವನ ಭೌತಿಕ ರೂಪವೇ ಗುರು ಎಂದು ವಿಶ್ಲೇಷಿಸಲಾಗಿದೆ. ವಚನದಲ್ಲಿಯೂ ಸಹ ಇದೇ ಶ್ಲೋಕದ ಉಲ್ಲೇಖದೊಂದಿಗೆ –

ಗುಕಾರವೇ ನಿರ್ಗುಣಾತ್ಮನು, ರುಕಾರವೇ ಪರಮಾತ್ಮನು.
ಗುಕಾರವೇ ಶಿವ, ರುಕಾರವೇ ಶಿವಾತ್ಮನು.
ಈ ಉಭಯ ಸಂಗವೇ ಗುರುರೂಪ ನೋಡಾ.

---

೩. ಸಮಗ್ರ ವಚನ ಸಂಪುಟ ೧೩. ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೭೬೬. ಪುಟ ೩೪೫
೪. ಸಮಗ್ರ ವಚನ ಸಂಪುಟ ೯, ಸಂಕೀರ್ಣ ವ.ಸಂ.೪, ವಚನ ಸಂಖ್ಯೆ ೧೦೨೭. ಪುಟ ೨೯೬
೫. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ.೬, ವಚನ ಸಂಖ್ಯೆ ೧೫೮. ಪುಟ ೭೨
೬ ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೭೬೭. ಪುಟ ೩೪೫

ಇದಕ್ಕೆ ಈಶ್ವರೋಽವಾಚ:

ಗುಕಾರಂ ಚ ಗುಣಾತೀತಂ ರುಕಾರಂ ರೂಪವರ್ಜಿತಂ।
ಗುಕಾರಂ ಮಮ ರೂಪಂ ಚ ರುಕಾರಂ ತನುರೂಪಕಂ।
ಉಭಯೋಃ ಸಂಗಮೇದೇವ ಗುರುರೂಪೋ ಮಹೇಶ್ವರಿ॥"[೭]

ಎಂದು 'ತ್ರಿಗುಣಗಳಿಂದ ಹೊರತಾದವನು, ಸತ್–ಚಿತ್–ಆನಂದ ಸ್ವರೂಪನೇ ಗುರು' ಎಂದು ಅರ್ಥೈಸುವ ಮೂಲಕ ಗುರುವು ಸಾಕ್ಷಾತ್ ಶಿವನ ಸ್ವರೂಪನೆಂಬ ಆಗಮದ ವಿಶ್ಲೇಷಣೆಯೇ ವಚನಗಳಲ್ಲಿ ಮೂಡಿಬಂದಿದೆ.

ಗುರುವೇ ಶಿವ ಸ್ವರೂಪನು

ಗುರುವೇ ಸಾಕ್ಷಾತ್ ಪರಬ್ರಹ್ಮಸ್ವರೂಪನು. ನಿರಾಕಾರ ಶಿವನೇ ಭಕ್ತರ ಉದ್ಧಾರಕ್ಕಾಗಿ ಗುರು ರೂಪದಿಂದ ಸಂಚರಿಸುವನೆಂದು ಆಗಮಗಳು ಪ್ರತಿಪಾದಿಸಿವೆ.

ಯೋ ಗುರುಃ ಸ ಶಿವಃ ಪ್ರೋಕ್ತೋ ಯಃ ಶಿವಃ ಸ ಗುರುಃ ಸ್ಮೃತಃ।
ಗುರುರ್ವಾ ಶಿವ ಏವಾಥ ವಿದ್ಯಾಕಾರೇಣ ಸಂಸ್ಥಿತಃ॥
ಯಥಾ ಶಿವಸ್ತಥಾ ವಿದ್ಯಾ ಯಥಾ ವಿದ್ಯಾ ತಥಾ ಗುರುಃ।
ಶಿವವಿದ್ಯಾಗುರೂಣಾಂ ಚ ಪೂಜಯಾ ಸದೃಶಂ ಫಲಮ್॥[೮]

ಯಾರು ಗುರುವೋ ಅವನೇ ಶಿವ. ಶಿವ ಮತ್ತು ಗುರುವಿಗೆ ಭೇದವಿಲ್ಲ. ಗುರುವಾಗಲಿ, ಶಿವನಾಗಲಿ ವಿದ್ಯೆಯ ಸ್ವರೂಪರು, ಶಿವ ಮತ್ತು ಗುರುಗಳ ಪೂಜೆಯಿಂದ ಸಮಾನವಾದ ಫಲ ದೊರೆಯುತ್ತದೆ. ಹೀಗೆ ಗುರುವೇ ಶಿವ, ಶಿವನೇ ಗುರು ಎನ್ನುವ ತಾದಾತ್ಮ್ಯ ಭಾವವನ್ನು ರೂಪಕಾಲಂಕಾರದ ಮೂಲಕ ಸ್ಪಷ್ಟಪಡಿಸುತ್ತದೆ. ಆಗಮದ ಇದೇ ಶ್ಲೋಕದ ಉಲ್ಲೇಖದೊಂದಿಗೆ ಚೆನ್ನಬಸವಣ್ಣನವರು –

ಗುರುದೇವೋ ಮಹಾದೇವೋ ಎಂದುದಾಗಿ, ಗುರುದೇವನೇ ಮಹಾದೇವನು.
'ಯೋ ಗುರುಃ ಸ ಶಿವಃ ಪ್ರೋಕ್ತೋ ಯಃ ಶಿವಃ ಸ ಗುರುಃ ಸ್ಮೃತಃ ।'
ಎಂದುದಾಗಿ ಗುರುವೆ ಶಿವನು, ಶಿವನೆ ಶ್ರೀಗುರು ನೋಡಾ.
'ಗುರುದೈವಾತ್ ಪರಂ ನಾಸ್ತಿ' ಎಂದುದಾಗಿ ಗುರುವಿನಿಂದಧಿಕವಿಲ್ಲ.
'ಶಿಷ್ಯದೀಕ್ಷಾದಿಕಾರಣಾತ್' ಎಂದುದಾಗಿ ಎನ್ನ ನಿಮಿತ್ತ ಗುರುಮೂರ್ತಿಯಾದೆ,
ಕೂಡಲಚೆನ್ನಸಂಗಮದೇವಾ.[೯]

ಎಂದು ಗುರುವೇ ಶಿವನ ಸ್ವರೂಪವೆಂದು ವಿವರಿಸಿದ್ದಾರೆ. ಇದನ್ನೇ ಷಣ್ಮುಖ ಸ್ವಾಮಿಗಳು –

---

೭. ಸಮಗ್ರ ವಚನ ಸಂಪುಟ ೧೩. ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೭೬೭. ಪುಟ ೩೪೫

೮. ಚಂ.ಆ. ಕ್ರಿ.ಪಾ. ಪಟಲ ೨. ಶ್ಲೋಕ ಸಂಖ್ಯೆ ೭–೮

೯. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವ.ಸಂ.೩, ವ.ಸಂ. ೧೧೬೧. ಪುಟ ೩೯೯

ಗುರುವೆ ಪರತತ್ವವು ತಾನೆ ನೋಡಾ.
ಗುರುವೆ ಪರವಸ್ತುವು ತಾನೆ ನೋಡಾ.
ಗುರುವೆ ಪರಬ್ರಹ್ಮವು ತಾನೆ ನೋಡಾ.
ಗುರುವೆ ಪರಶಿವನು ತಾನೆ ನೋಡಾ.
ಗುರುವಿನಿಂದೆ ಪರವಿಲ್ಲವೆಂದು ಸಕಲ ಶ್ರುತಿಗಳು ಹೊಗಳುತಿಪ್ಪುವು ನೋಡಾ.
ಇಂತಪ್ಪ ಶ್ರೀಗುರುವಿಂಗೆ ನಮೋ ನಮಃ ಎಂಬೆನಯ್ಯಾ ಅಖಂಡೇಶ್ವರಾ.[೧೦]

ಎಂದು ಗುರು-ಪರಶಿವರಲ್ಲಿ ಅಭೇದವನ್ನು ಪ್ರತಿಪಾದಿಸಿದ್ದಾರೆ. ಗುರುವನ್ನು ಸಾಕ್ಷಾತ್ ಪರಬ್ರಹ್ಮಸ್ವರೂಪನೆಂದು ಭಾವಿಸಬೇಕಲ್ಲದೆ, ಬೇರೆ ರೀತಿಯಾಗಿ ಭಾವಿಸಬಾರದು ಎಂದು ಆಗಮದಲ್ಲಿ ಎಚ್ಚರಿಸುತ್ತಾ –

ಗುರುದೇವೋ ಮಹಾದೇವಃ ಸಾಕ್ಷಾತ್ಸರ್ವಜಗತ್ಪ್ರಭುಃ।
ಅನ್ಯಥಾ ತಂ ನ ಜಾನೀಯಾತ್ಪರತತ್ತ್ವಾವಭೋಧಕಮ್ ॥
ಗುರುರೂಪಂ ಸಮಾಶ್ರಿತ್ಯ ಸೋಽಹಮೇವ ಮಹೇಶ್ವರಿ।
ಗೃಹ್ಣಾಮಿ ತತ್ಕೃತಾಂ ಪೂಜಾಂ ಯತಸ್ತೇ ಮಾಮುಪಾಶ್ರಿತಾಃ ॥
ತಸ್ಮಾದ್ದ್ರೋಹೋ ನ ಕರ್ತವ್ಯೋ ಗುರುಮೂರ್ತೇಮ ಮಾಪಿ ಚ ।
ಮತ್ಪ್ರಸಾದಮನಾ ದೇವಿ ಗುರುಮೇವ ಸಮಾಶ್ರಯೇತ್ ॥
ಸರ್ವತತ್ತ್ವೈಕನಿಲಯಂ ಸರ್ವಾಧಾರಮನೂಪಮಮ್।
ಷಡ್ಭಾವರಹಿತಂ ದಿವ್ಯಮುಕ್ತಂ ಶ್ರೀಗುರುಲಕ್ಷಣಮ್ ॥
ನಿರಾಲಂಬಂ ನಿರಾಧಾರಂ ನಿರ್ವಿಕಲ್ಪಂ ನಿರಾಮಯಮ್।
ನಿರ್ದ್ವಂದ್ವಂ ನಿತ್ಯಸಂಸಿದ್ಧಮುಕ್ತಂ ಶ್ರೀಗುರುಲಕ್ಷಣಮ್ ॥
ನಿದಾನಂ ಸರ್ವವಿದ್ಯಾನಾಂ ಸರ್ವಭೂತನಿಯಾಮಕಮ್।
ಪರಾತ್ಪರತರಂ ಸೂಕ್ಷ್ಮ ಮುಕ್ತಂ ಶ್ರೀಗುರುಲಕ್ಷಣಮ್।
ತಸ್ಮಾತ್ತತ್ಪಾದಯುಗಲಮಾಶ್ರಿತ್ಯಾಸ್ತಿ ಜಗತ್ತ್ರಯಮ್ ॥[೧೧]

ಗುರುವೇ ಮಹಾದೇವನು. ಸಮಸ್ತ ಜಗತ್ತಿಗೆ ಸಾಕ್ಷಾತ್ ಒಡೆಯನು. ಪರತತ್ವವನ್ನು ಬೋಧಿಸುವ ಗುರುವನ್ನು ಸಾಕ್ಷಾತ್ ದೇವರೆಂದು ಭಾವಿಸಬೇಕಲ್ಲದೆ, ಬೇರೆ ರೀತಿಯಾಗಿ ಭಾವಿಸಬಾರದು. ನಾನೇ ಗುರುರೂಪವನ್ನು ಧರಿಸಿ, ಭಕ್ತರ ಮೂಲಕ ಪೂಜೆಯನ್ನು ಸ್ವೀಕರಿಸುತ್ತೇನೆ. ಏಕೆಂದರೆ ಅವರು ನನ್ನನ್ನೇ ಆಶ್ರಯಿಸಿದ್ದಾರೆ. ಆದ್ದರಿಂದ ಶ್ರೀಗುರುವಿಗೆ ಮತ್ತು ಶಿವನಿಗೆ ದ್ರೋಹವನ್ನು ಮಾಡಬಾರದು. ಶಿವ ಪ್ರಸಾದವನ್ನು ಬಯಸುವವನು ಶ್ರೀಗುರುವನ್ನೇ ಆಶ್ರಯಿಸಬೇಕೆಂದು ಆಜ್ಞಾಪಿಸಿದೆ. ಇದನ್ನೇ ವಚನಗಳೂ ಸಹ ಅನುಮೋದಿಸುತ್ತ –

---

೧೦. ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವ.ಸಂ.೯, ವಚನ ಸಂಖ್ಯೆ ೨೭೯. ಪುಟ ೧೭೮
೧೧. ಸೂ.ಆ.ಕ್ರಿ.ಪಾ.ಪಟಲ ೫, ಶ್ಲೋಕ ಸಂಖ್ಯೆ ೧೦-೧೬

ಸುರತರು ವೃಕ್ಷದೊಳಗಲ್ಲ; ಸುರಧೇನು ಪಶುವಿನೊಳಗಲ್ಲ;
ಪರುಷ ಪಾಷಾಣದೊಳಗಲ್ಲ; ಶಿಷ್ಯನ ಭಾವಕ್ಕೆ ಗುರು ನರನಲ್ಲ;
ಗುರುವೇ ಪರಮೇಶ್ವರನೆಂದು ಭಾವಿಸಬಲ್ಲಡೆ ಶಿಷ್ಯನೆಂಬೆನಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ [೧೨]

ಎಂದಿದ್ದಾರೆ. ಇದನ್ನು ಪುಷ್ಟೀಕರಿಸುತ್ತಾ ಚೆನ್ನಬಸವಣ್ಣನವರು ಶಿವನೇ ಭಕ್ತರ ಉದ್ಧಾರಕ್ಕಾಗಿ ಗುರು ರೂಪದಿಂದ ಸಂಚರಿಸುವನೆಂದು ವಿವರಿಸುತ್ತಾ "ಪರಶಿವನು ಗುರುಜಂಗಮರೂಪಿಂದ ನರನುದ್ಧರಿಸಲೆಂದು ಸಜಾತೀಯವಾದ ಮನುಜಾಕಾರವ ಧರಿಸಿ ಧರೆಗವತರಿಸಿರ್ಪನಯ್ಯಾ" ಎಂದಿದ್ದಾರೆ. ಕಾರಣ ಗುರುವು ಶಿಷ್ಯನಿಗೆ ಸುಜ್ಞಾನೋಪದೇಶಕ್ಕಾಗಿ ದೇಹಧಾರಿಯಾಗಿ ಕಂಡರೂ ಆತನೇ ಪ್ರತ್ಯಕ್ಷ ಶಿವ ಸ್ವರೂಪನೆಂದು ಸರ್ವರೂ ಪರಿಭಾವಿಸಬೇಕೆಂದು ಆಗಮ ಮತ್ತು ವಚನಗಳೆರಡೂ ಸಾರಿವೆ. ಆಗಮಗಳು ಇನ್ನೂ ಮುಂದುವರೆದು –

ಬ್ರಹ್ಮಾ ವಿಷ್ಣುಃ ಶಿವೋರುದ್ರ ಈಶಃ ಶಕ್ತಿಃ ಪಿತಾಮಹಃ।
ಸೂರ್ಯಚಂದ್ರಾಗ್ನಿಮರುತೋ ಗುರುರೇವ ನ ಸಂಶಯಃ ॥ [೧೩]

ಎಂದು ಬ್ರಹ್ಮ, ವಿಷ್ಣು, ಶಿವ, ರುದ್ರ, ಶಕ್ತಿ, ಸೂರ್ಯ, ಚಂದ್ರ, ಅಗ್ನಿ, ಮರುತ್ ಎಲ್ಲವೂ ಗುರುವಿನ ಸ್ವರೂಪವೇ ಎಂದು ಅರ್ಥೈಸುವ ಮೂಲಕ ಗುರುವು ಸಾಕ್ಷಾತ್ ಪರಶಿವನ ಸ್ವರೂಪನೆಂದು ಬಣ್ಣಿಸಲಾಗಿದೆ.

ಹರನಿಗಿಂತ ಗುರು ಅಧಿಕ

ಶಿವೇ ರುಷ್ಟೇ ಗುರುಸ್ತ್ರಾತಾ ನ ರುಷ್ಟೇ ನಿಜಸದ್ಗುರೌ।
ತ್ರಾತಾ ಶಿವಸ್ತದೇತಸ್ಮಾದ್ ಗುರುಪೂಜಾರತೋ ಭವೇತ್॥
ಯಃ ಸ್ವಸ್ಯ ಗುರುಪೂಜಾಂ ತು ತ್ಯಕ್ತ್ವಾ ಶಿವಪದಂ ಯಜೇತ್।
ಪರಾಙ್ಮುಖಃ ಶಿವಸ್ತಸ್ಯ ನರಕಂ ಸಂಪ್ರಯಚ್ಛತಿ ॥ [೧೪]

ಶಿವನು ಕೋಪಗೊಂಡರೆ ಗುರು (ಶಿಷ್ಯನನ್ನು) ರಕ್ಷಿಸುತ್ತಾನೆ. ಆದರೆ ಸದ್ಗುರು ಕೋಪಿಸಿಕೊಂಡರೆ ಶಿವನೂ ರಕ್ಷಿಸಲಾರನು. ಆದುದರಿಂದ ಶಿಷ್ಯನು ಸದಾ ಗುರುಪೂಜೆಯಲ್ಲಿ ನಿರತನಾಗಬೇಕು. ಯಾರು ತನ್ನ ಗುರುವಿನ ಪೂಜೆಯನ್ನು ಬಿಟ್ಟು ಶಿವಪದವನ್ನು ಪೂಜಿಸುತ್ತಾನೋ ಅವನಿಂದ ಶಿವನು ಮುಖ ತಿರುಗಿಸುತ್ತಾನೆ ಮತ್ತು ನರಕದ ಸ್ಥಾನವನ್ನು ಕೊಡುತ್ತಾನೆಂದು ತಿಳಿಸಿದೆ.

ಇದನ್ನೇ 'ಹರ ಮುನಿದರೆ ಗುರು ಕಾಯವ, ಗುರು ಮುನಿದರೆ ಹರ ಕಾಯ'

---

೧೨. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ.೬, ವಚನ ಸಂಖ್ಯೆ ೧೬೧. ಪುಟ ೭೩
೧೩. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೬೯
೧೪. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೮೨-೮೩

ಎಂಬ ಉಕ್ತಿಯು ಸಾರುತ್ತದೆ. ಪರಶಿವನು ನಿರಾಕಾರ; ಗುರು ಸಾಕಾರ. ಅವನನ್ನು ಮೊರೆಹೊಕ್ಕರೆ, ಅವನ ಉಪದೇಶ ಆಲಿಸಿದರೆ ಮುಕ್ತಿ ಕಟ್ಟಿಟ್ಟದ್ದು. ಅಂತೆಯೆ ಮುಪ್ಪಿನ ಷಡಕ್ಷರಿಗಳು 'ಸಕಲಕೆಲ್ಲಕೆ ನೀನೆ ಅಕಳಂಕ ಗುರುವೆಂದು ನಿಖಿಳಶಾಸ್ತ್ರ ಪೇಳುತಿರಲು ಅರಿದೆನು' ಎಂದಿದ್ದಾರೆ.

ಗುರು ಸ್ಮರಣೆಯೇ ಮಂಗಲಮಯವಾದ ಮಹಾಮಂತ್ರ –

ಶಿವನ ಮಂತ್ರದ ಜಪ ಮಾಡುವಾಗ ಶ್ರೀಗುರುವಿನ ನಾಮವನ್ನು ಸ್ಮರಿಸಬೇಕು. ಏಕೆಂದರೆ ಶ್ರೀಗುರುವಿನ ಮೂರ್ತಿಯು ಎಲ್ಲಾ ಧ್ಯಾನಕ್ಕೂ ಮೂಲ ಮತ್ತು ಶ್ರೀಗುರುವಿನ ಕೃಪೆಯು ಮೋಕ್ಷಕ್ಕೆ ಆಧಾರ. ಕಾರಣ ಎಲ್ಲಾ ಮಂತ್ರಗಳನ್ನು ಒಳಗೊಂಡ, ಎಲ್ಲಾ ಶಾಸ್ತ್ರಗಳಿಂದ ಕೂಡಿದ, ಶುಭವಾದ, ಸರ್ವವೇದಸ್ವರೂಪವಾದ, ಪುಣ್ಯಕರವಾದ ಶ್ರೀಗುರುವಿನ ನಾಮವು ಮಂಗಲಮಯವಾಗಿದೆ ಎಂದು ಆಗಮಗಳು ಸಾರುತ್ತವೆ.

ಧ್ಯಾನಮೂಲಂ ಗುರೋರ್ಮೂರ್ತಿರ್ಮೋಕ್ಷಮೂಲಂ ಗುರೋಃ ಕೃಪಾ
ಜಪೇ ಮಂತ್ರಸ್ಯ ಮೇ ದೇವಿ ಶ್ರೀಗುರೋರ್ನಾಮ ಸಂಸ್ಮರೇತ್॥[೧೫]
ತಸ್ಮಾತ್ ಸ್ವರ್ಗಾಪವರ್ಗೇಚ್ಛುರಿಹ ಭೋಗೇಚ್ಛುರಾಸ್ತಿಕಃ।
ಸರ್ವದಾ ಸರ್ವಯತ್ನೇನ ಗುರುದೇವಂ ಸಮಾಶ್ರಯೇತ್ ॥
ಸರ್ವೇ ವೇದಾಶ್ಚ ಶಾಸ್ತ್ರಾಣಿ ಪುರಾಣಾನಿ ಚ ಸಂಹಿತಾಃ।
ಸ್ಮೃತಯೋ ಧರ್ಮಶಾಸ್ತ್ರಾಣಿ ಶ್ರೀಗುರೋರ್ವಚನಂ ಪರಮ್ ॥
ಸಪ್ತಕೋಟಿಮಹಾಮಂತ್ರಾಶ್ಚಿತ್ತವಿಭ್ರಮಕಾರಕಾಃ।
ಏಕ ಏವ ಮಹಾಮಂತ್ರೋ ಗುರುರಿತ್ಯಕ್ಷರದ್ವಯಮ್ ॥
ದ್ವಾವೇವ ಮಂತ್ರೌ ದೇವೇಶಿ ಸರ್ವೇಷಾಮಪಿ ಮುಕ್ತಯೇ।
ಸರ್ವಕ್ಲೇಶವಿನಾಶಾಯ ತೌ ಗುರ್ವಿತಿ ಶಿವೇತಿ ಚ ॥
ಭಾವಯೇತ್ ಸತತಂ ಧೀಮಾನ್ ಜಗದೇತಚ್ಚರಾಚರಮ್।
ಇಂದ್ರಿಯೋಪಗತಂ ಯದ್ಯತ್ ಶ್ರೀಗುರೋ ರೂಪಮೈಶ್ವರಮ್॥[೧೬]

ಎಲ್ಲಾ ವೇದಗಳು, ಶಾಸ್ತ್ರಗಳು, ಪುರಾಣಗಳು, ವಿವಿಧ ಸಂಹಿತೆಗಳು, ಸ್ಮೃತಿಗಳು, ಧರ್ಮಶಾಸ್ತ್ರಗಳು ಇವೆಲ್ಲವೂ ಶ್ರೀಗುರುವಿನ ಶ್ರೇಷ್ಠ ಸೂಕ್ತಿಗಳು. ಏಳು ಕೋಟಿ ಮಹಾಮಂತ್ರಗಳು ಮನಸ್ಸಿಗೆ ಭ್ರಮೆಯನ್ನುಂಟು ಮಾಡುವಂಥವು. ಆದರೆ 'ಗುರು' ಎಂಬೆರಡು ಅಕ್ಷರಗಳು ಏಕಮಾತ್ರ ಮಹಾಮಂತ್ರ. ಎಲ್ಲರ ಮುಕ್ತಿಗೆ ಮತ್ತು ಎಲ್ಲಾ ಕಷ್ಟಗಳ ವಿನಾಶಕ್ಕೆ ಎರಡೇ ಮಂತ್ರಗಳು; ಅವು 'ಗುರು' ಎಂದು ಮತ್ತು 'ಶಿವ' ಎಂದು. ಜ್ಞಾನಿಯು ಸತತವಾಗಿ ಚರಾಚರಾತ್ಮಕವಾದ ಜಗತ್ತನ್ನು, ಇಂದ್ರಿಯಕ್ಕೆ

---

೧೫. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೮೭–೮೮
೧೬. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೯೧–೯೬

ಗೋಚರವಾದ ಎಲ್ಲವೂ ಶ್ರೀಗುರುವಿನ ಈಶ್ವರೀಯರೂಪ ಎಂದು ಪರಿಭಾವಿಸಬೇಕೆಂದು ಆಗಮಗಳು ಸಾರುತ್ತವೆ.

ಎಲ್ಲ ಆಧ್ಯಾತ್ಮಿಕ ಸಾಧನೆ ಸಿದ್ಧಿಗೆ ಗುರುವೇ ಮೂಲ–

ಕುರುಡನಿಗೆ ವಸ್ತುಗಳನ್ನು ನೋಡಬೇಕೆನ್ನುವ ಬಯಕೆ ಹೇಗೆ ವ್ಯರ್ಥವೋ ಹಾಗೆಯೇ ಶ್ರೀಗುರುವನ್ನು ಬಿಟ್ಟು ಮುಕ್ತಿ ಪಡೆಯಬೇಕೆನ್ನುವದು ಮೂಢತನವಾಗುತ್ತದೆ ಎಂದು ಸೂಕ್ಷ್ಮಾಗಮವು ತಿಳಿಸುತ್ತದೆ.

ಅಂಧೋ ಯಥಾರ್ಥಜಾತಂ ಚ ದ್ರಷ್ಟುಂ ಸಮಭಿಕಾಂಕ್ಷತಿ।
ಗುರುಂ ವಿನಾ ತಥಾ ಮುಕ್ತಿಂ ಪ್ರಾಪ್ತುಮಿಚ್ಛತಿ ಮೂಢಧೀಃ॥[೧೭]

ಕಾರಣ ಸದ್ಗುರುವಿನ ಮಾರ್ಗದರ್ಶನದ ಮೂಲಕವೇ ಶಿವತತ್ತ್ವದ ರಹಸ್ಯವನ್ನು ತಿಳಿಯಬೇಕೆಂದು ಪಾರಮೇಶ್ವರಾಗಮವು –

ಪುರಾ ಕೃತೇನ ಪುಣ್ಯೇನ ನಿರ್ವಿಣ್ಣಃ ಸುಖಸಂಗಮೇ।
ಗುರುಂ ಸಮಾಶ್ರಯೇದ್ ಭಕ್ತ್ಯಾ ದುಃಖೋತ್ತರಣಹೇತವೇ ॥[೧೮]
ತ್ಯಕ್ತ್ವೈಷಣಾಸಮ್ಯಗ್ಜ್ಞಃ ಶ್ರಯೇದ್ಭಕ್ತಿಂ ಪರಾಂಮಯಿ ॥
ಅಶಕ್ತಃ ಕಾಮನಾತ್ಯಾಗೇ ನ ಗ್ರಹೀತುಮಪೀಚ್ಛತಿ।
ಮಧ್ಯಸ್ಥಃ ಶ್ರೀಗುರುಮುಖಾಜ್‌ಜ್ಞಾತ್ವಾ ಮಾಮೇವ ಸಂಶ್ರಯೇತ್ ॥
ಭಕ್ತ್ಯಾ ತು ದೃಢಯಾ ಮಾಂ ಚ ಜ್ಞಾತ್ವಾ ಸಮ್ಯಕ್ ಸಮಃ ಶಿವೇ।
ಶಿವೋಽಹಮಿತಿ ಸಂಭಾವ್ಯ ಶಿವ ಏವ ಭವೇದ್ ಧ್ರುವಮ್ ॥[೧೯]

ಮನುಷ್ಯನು ಹಲವು ಜನ್ಮಗಳಲ್ಲಿ ಮಾಡಿದ ಪುಣ್ಯಕರ್ಮಗಳ ಫಲಸಂಚಯದಿಂದ ಈ ಜನ್ಮದಲ್ಲಿ ಪ್ರಾಪಂಚಿಕ ಭೋಗಗಳಲ್ಲಿ ವಿರಕ್ತಿ ಹೊಂದುವನು. ಸಾಂಸಾರಿಕ ದುಃಖದ ಅತ್ಯಂತಿಕ ನಿವೃತ್ತಿಗಾಗಿ ಆತನು ಭಕ್ತಿಯಿಂದ ಗುರುವನ್ನು ಆಶ್ರಯಿಸಬೇಕು. ಶಿವಜ್ಞಾನ ಪ್ರಾಪ್ತಿಗೋಸ್ಕರ ತನ್ನೆಲ್ಲ ಇಚ್ಛೆಗಳನ್ನು ತ್ಯಜಿಸಿ ಕೇವಲ ಭಕ್ತಿಯನ್ನು ಮಾತ್ರ ಆಶ್ರಯಿಸಬೇಕು. ಪ್ರಾಪಂಚಿಕ ಸುಖವನ್ನು ತ್ಯಜಿಸಲೂ ಆಗದೇ ಗ್ರಹಿಸುವ ಇಚ್ಛೆಯೂ ಇರದೇ ಉಭಯಸಂಕಟದಲ್ಲಿರುವ ವ್ಯಕ್ತಿಯು ಗುರುವಿನ ಮಾರ್ಗದರ್ಶನದ ಮೂಲಕ ಶಿವನನ್ನು ಆಶ್ರಯಿಸಬೇಕು. ದೃಢಭಕ್ತಿಯಿಂದ ತನ್ನನ್ನು ಚೆನ್ನಾಗಿ ಅರಿತು 'ಶಿವನೇ ನಾನು' ಎಂಬ ಭಾವದಿಂದ ಇರುವ ಸಮದರ್ಶಿಯಾದ ಭಕ್ತನು ನಿಸ್ಸಂಶಯವಾಗಿ ಕೊನೆಯಲ್ಲಿ ಶಿವನ ಸ್ವರೂಪವೇ ಆಗುವನು. ಕಾರಣ ಎಲ್ಲ ಆಧ್ಯಾತ್ಮಿಕ ಸಾಧನೆ ಸಿದ್ಧಿಗಾಗಿ ಗುರುವನ್ನೇ ಆಶ್ರಯಿಸಬೇಕೆಂದು ತಿಳಿಸಿದೆ.

---

೧೭. ಸೂ.ಆ.ಕ್ರಿ.ಪಾ.೫, ಶ್ಲೋಕ ಸಂಖ್ಯೆ ೨೬
೧೮. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೫೪
೧೯. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೫೬–೫೮

ವಚನಗಳೂ ಆಗಮಗಳ ಅಭಿಪ್ರಾಯವನ್ನೇ ಸಮರ್ಥಿಸಿವೆ. ನಿಜಗುಣ ಶಿವಯೋಗಿಗಳು 'ಶ್ರೀಗುರು ವಚನೋಪದೇಶವ ನಾಲಿಸಿದಾಗಳಹುದು ನರರಿಗೆ ಮುಕುತಿ' ಎಂದಿದ್ದಾರೆ. ಇದನ್ನೇ ಜೇಡರ ದಾಸಿಮಯ್ಯನವರು–

'ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು.
ಮಾಯ ಪ್ರಪಂಚು ಬಿಟ್ಟಿತ್ತು. ಮುಂದಣ ಹುಟ್ಟರತು ಹೋಯಿತ್ತು.
ನೆಟ್ಟಗೆ ಗುರುಪಾದವ ಮುಟ್ಟಿ ಭವಗೆಟ್ಟೆನು ಕಾಣಾ ರಾಮನಾಥ'[೨೦]

ಎಂದಿದ್ದಾರೆ. ಅಂತೆಯೇ ಬಸವಣ್ಣನವರು 'ಮಡಿಕೆಯ ಮಾಡುವಡೆ ಮಣ್ಣೇ ಮೊದಲು, ತೊಡಿಗೆಯ ಮಾಡುವಡೆ ಹೊನ್ನೇ ಮೊದಲು, ಶಿವಪಥವನರಿವಡೆ ಗುರುಪಥವೇ ಮೊದಲು'[೨೧] ಎಂದು ಹೇಳಿ ಶಿವಸಾನಿಧ್ಯ ಹೊಂದಲು ಗುರುವನ್ನೇ ಆಶ್ರಯಿಸಬೇಕೆಂಬ ವಿಚಾರವನ್ನು ಸಮರ್ಥಿಸಿದ್ದಾರೆ.

ಗುರುವಿನ ಮಹಿಮೆ –

ಗುರುವಿನ ಮಹಿಮೆಯನ್ನು ಎಲ್ಲಾ ಆಗಮಗಳೂ ಮುಕ್ತ ಕಂಠದಿಂದ ಸ್ತುತಿಸಿವೆ.

ಸೂರ್ಯೋದಯೇ ತಮೋ ಯದ್ವದ್ವಿನಾಶಮುಪಯಾತಿ ಹಿ।
ಗುರುದರ್ಶನತಸ್ತದ್ವತ್ಪಾಪಜಾಲಂ ಪ್ರಣಶ್ಯತಿ ॥
ಸಂಸಾರದಾವದಹನಜ್ವಾಲಾ ಯೇನ ವಿನಾಶಿತಾ।
ಕಟಾಕ್ಷಾಮೃತವರ್ಷೇಣ ಕೋಹಿ ತತ್ಸದೃಶೋ ಭವೇತ್ ॥
ತಸ್ಮಾನ್ಮುಮುಕ್ಷುಃ ಸೇವೇತ, ಗುರುಮೇವಾತಿಭಕ್ತಿತಃ॥[೨೨]

ಸೂರ್ಯನ ಉದಯದಿಂದ ಕತ್ತಲೆಯು ಕಳೆಯುವಂತೆ, ಗುರುದರ್ಶನದಿಂದ ಎಲ್ಲ ಪಾಪಸಮೂಹಗಳೂ ನಾಶವಾಗುತ್ತವೆ. ಶ್ರೀ ಗುರುವಿನ ಕೃಪಾಕಟಾಕ್ಷವೆಂಬ ಅಮೃತಧಾರೆಯಿಂದ ಶಿಷ್ಯನ ಸಂಸಾರವೆಂಬ ಕಾಡುಗಿಚ್ಚಿನ ಜ್ವಾಲೆಯು ನಾಶವಾಗುತ್ತದೆ (ತಣ್ಣಗಾಗುತ್ತದೆ). ಆದ್ದರಿಂದ ಶ್ರೀ ಗುರುವಿಗೆ ಸರಿಸಮರಾರೂ ಇಲ್ಲ. ಆದ್ದರಿಂದ ಮೋಕ್ಷಾಪೇಕ್ಷಿಯು ಅತಿ ಭಕ್ತಿಯಿಂದ ಶ್ರೀಗುರುವನ್ನೇ ಸೇವಿಸಬೇಕು ಎಂದು ಗುರು ಮಹಿಮೆಯನ್ನು ಸಾರಿವೆ.

ವಚನಕಾರರೂ ಸಹ ಗುರುವನ್ನು ಭವರೋಗ ವೈದ್ಯ ಎಂದೂ; ಅವನೊಬ್ಬನೇ ಭವರೋಗ ಕಳೆಯಬಲ್ಲನೆಂದೂ ಹಾಡಿ ಹೊಗಳಿದ್ದಾರೆ. ಗುರುಪಾದವ ಮುಟ್ಟಿ ಭವಗೆಟ್ಟೆನು ಎಂದಿದ್ದಾರೆ. ಗಣದಾಸಿ ವೀರಣ್ಣನವರು ಗುರುವೇ ಪರಶಿವ, ಸಕಲ ವಿದ್ಯಾ ಸ್ವರೂಪ, ಸಕಲ ಮಂತ್ರ ಸ್ವರೂಪ, ಕಾಮಧೇನು–ಎಂದೆಲ್ಲ ಗುರುವಿನ ಮಹಿಮಾತಿಶಯವನ್ನು

೨೦. ಸಮಗ್ರ ವಚನ ಸಂಪುಟ ೭, ಸಂಕೀರ್ಣ ವ.ಸಂ.೨, ವಚನ ಸಂಖ್ಯೆ ೭೮೬. ಪುಟ ೨೪೬
೨೧. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೭೦. ಪುಟ ೨೦
೨೨. ಸೂ.ಆ.ಕ್ರಿ.ಪಾ.೫, ಶ್ಲೋಕ ಸಂಖ್ಯೆ ೨೩–೨೫

ಕೊಂಡಾಡಿದ್ದಾರೆ. ಅಲ್ಲದೇ 'ಗುರುವಿಲ್ಲದೆ ಲಿಂಗವೇ ಇಲ್ಲ.' ಎಂದು ನುಡಿದು "ಗುರುವಿಡಿದು ಕುರುಹ ಕಾಣಬೇಕು", "ಗುರುವಿಡಿದು ಅರುಹ ಕಾಣಬೇಕು." ಎಂದು ಗುರುವಿನ ಮಹತ್ವವನ್ನು ಕೊಂಡಾಡಿದ್ದಾರೆ. ಅಕ್ಕಮಹಾದೇವಿಯು ಶ್ರೀಗುರುವಿನ ಕರುಣೆಯಿಂದಲೇ ಸಕಲ ಸನ್ಮಂಗಲಗಳು ಎಂಬ ಮಾತನ್ನು ಪುಷ್ಟೀಕರಿಸುತ್ತಾ –

'ಗುರುವಿನ ಕರುಣದಿಂದ ಲಿಂಗವ ಕಂಡೆ, ಜಂಗಮನ ಕಂಡೆ
ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ
ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಸಮ್ಮೋಷ್ಠಿಯ ಕಂಡೆ
ಚೆನ್ನಮಲ್ಲಿಕಾರ್ಜುನಯ್ಯಾ ನಾ ಹುಟ್ಟಲೊಡನೆ ಶ್ರೀಗುರುವಿಭೂತಿಯ
ಪಟ್ಟವ ಕಟ್ಟಿ ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆ'[೨೩]

ಎಂದಿದ್ದಾರೆ. ಕಾರಣ ಗುರುಕರುಣೆಯು ಲಭ್ಯವಾಗಬೇಕಾದರೆ ಭಕ್ತಿಯಿಂದ ಗುರುಸೇವೆಯನ್ನು ಗೈಯಬೇಕೆಂದು ಆಗಮ ಮತ್ತು ವಚನಗಳು ಸಾರುತ್ತವೆ.

ಗುರುಸೇವೆ ಮತ್ತು ಗುರುಕಾರುಣ್ಯಪ್ರಾಪ್ತಿ

ಗುರೂಕ್ತ ವಚನಗಳೆಲ್ಲವೂ ಮಂತ್ರಸ್ವರೂಪವಾಗಿರುತ್ತವೆ. ಆತನಿಂದ ನಿರ್ದೇಶಿಸಲ್ಪಟ್ಟ ಕ್ರಿಯೆಗಳೆಲ್ಲವು ಶ್ರೇಷ್ಠಕರ್ಮ. ಆದ್ದರಿಂದ ಶಿವನ ಸ್ವರೂಪದ ಸರಿಯಾದ ಜ್ಞಾನವು ಉಂಟಾಗುವವರೆಗೂ ದಾಸನಂತೆ ತ್ರಿಕರಣಶುದ್ಧಿಯಿಂದ ಸದ್ಗುರುವಿನ ಸೇವೆಯನ್ನು ಮಾಡಬೇಕೆಂದು ಪಾರಮೇಶ್ವರಾಗಮವು –

ತದ್ಯಾವಜ್‌ಜ್ಞಾಯತೆ ಭಕ್ತಿರ್ಜಾನೀಯಾನ್ಮಾಮಶೇಷತಃ।
ಗುರುಂ ಪರಿಚರೇತ್ ತಾವನ್ನೀಚವೃತ್ತ್ಯಾಪಿ ದಾಸವತ್ ॥
ತದುಕ್ತಃ ಪರಮೋ ಮಂತ್ರಃ ಕ್ರಿಯಾ ತಚ್ಚೋದಿತಾ ಪರಾ।
ಕರಣತ್ರಯಭಾವೇನ ವಿಶ್ವಸೇದ್ ಗುರುಮೀಶ್ವರಮ್ ॥[೨೪]

ಎಂದು ಬೋಧಿಸುತ್ತದೆ. ಚಂದ್ರಜ್ಞಾನಾಗಮವು ಸಹ ಇದನ್ನೇ ಸಮರ್ಥಿಸುತ್ತಾ

ಗುರುಪೂಜೈವ ಪೂಜಾ ಸ್ಯಾಚ್ಛಿವಸ್ಯ ಪರಮಾತ್ಮನಃ।
ಗುರುಶೇಷಂ ತು ತತ್ಸರ್ವಮಾತ್ಮಶುದ್ಧಿಕರಂ ಭವೇತ್॥
ತಸ್ಮಾದ್ ಗುರುಮುಖಾತ್ ಕರ್ಮ ಜ್ಞಾನಂ ಚಾಪಿ ವಿಶೇಷತಃ।
ಜ್ಞಾತ್ವಾ ಕರ್ತವ್ಯಮಖಿಲಂ ಭೋಗಮೋಕ್ಷಪಲಬ್ಧಯೇ ॥
ಗುರುಪ್ರಸಾದಪಾತ್ರಂ ಯಃ ಸ ಹಿ ಮೋಕ್ಷಾಯ ಕಲ್ಪತೇ।
ನ ಮುಕ್ತಿ ಮೂಲಮನ್ಯದ್ಧಿ ವಿಹಾಯ ಗುರುಸತ್ಕೃಪಾಮ್॥[೨೫]

೨೩. ಸಮಗ್ರ ವಚನ ಸಂಪುಟ ೫, ವಚನ ಸಂಖ್ಯೆ ೨೦೧. ಪುಟ ೫೯
೨೪. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೫೯–೬೦
೨೫. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೯೪–೯೬

ಗುರುಪೂಜೆಯೇ ಪರಮಾತ್ಮನಾದ ಪರಶಿವನ ಪೂಜೆ. ಗುರುಪ್ರಸಾದವು ಆತ್ಮ ಶುದ್ಧಿಯನ್ನುಂಟು ಮಾಡುವುದು. ಆದ್ದರಿಂದ ಗುರುಮುಖದಿಂದ ಕರ್ಮ, ಜ್ಞಾನಗಳ ವಿಷಯವನ್ನು ವಿಶೇಷವಾಗಿ ತಿಳಿದುಕೊಂಡು ಎಲ್ಲವನ್ನೂ ಭೋಗ ಮೋಕ್ಷಗಳ ಸಿದ್ಧಿಗೋಸ್ಕರ ನಿರ್ವಹಿಸಬೇಕು. ಯಾರು ಗುರು ಪ್ರಸಾದಕ್ಕೆ ಯೋಗ್ಯನೋ ಅವನು ಮಾತ್ರ ಮೋಕ್ಷವನ್ನು ಪಡೆಯುತ್ತಾನೆ. ಗುರುಕೃಪೆಯ ಹೊರತಾಗಿ ಬೇರಾವುದೂ ಮುಕ್ತಿಗೆ ಕಾರಣವಲ್ಲ ಎಂದು ಬೋಧಿಸುತ್ತದೆ. ಇದೇ ಭಾವವನ್ನು ಚೆನ್ನಬಸವಣ್ಣನವರ ವಚನದಲ್ಲಿ ಕಾಣಬಹುದು.

ಗುರು ಕರುಣಿಸೆ ಬಿಟ್ಟಿತ್ತು ಮಾಯೆ,
ಗುರು ಕರುಣಿಸೆ ಬಿಟ್ಟಿತ್ತು ಮರವೆ,
ಗುರು ಕರುಣಿಸೆ ಬಿಟ್ಟಿತ್ತು ಪ್ರಪಂಚ,
ಕೂಡಲಚೆನ್ನಸಂಗಮದೇವಾ
ಗುರು ಕರುಣಿಸೆ ಬಿಟ್ಟಿತ್ತು ಎನ್ನ ಕರ್ಮಪಾಶ[೨೬]

ಎಂದಿದ್ದಾರೆ. ಗುರು ಕರುಣೆಯು ಲಭಿಸಬೇಕಾದರೆ ತ್ರಿಕರಣಪೂರ್ವಕವಾಗಿ ಗುರುಸೇವೆಯನ್ನು ಗೈಯಬೇಕು.

ಗುರುಸೇವೆಯು ಆಪ್ತ, ಅಂಗ, ಸ್ಥಾನ ಮತ್ತು ಸದ್ಭಾವ ಎಂದು ನಾಲ್ಕು ವಿಧವಾಗಿದೆ. 'ಆಪ್ತ'ಎಂದರೆ ಸ್ವಜನರು(ಬಂಧುಗಳು). ಸ್ವಜನರ ಆಗಮನದಿಂದ ನಾವು ಹೇಗೆ ಅತ್ಯಂತ ಸಂತೋಷಗೊಂಡು ಅವರ ಆದರಾತಿಥ್ಯವನ್ನು ಮಾಡುತ್ತೇವೆಯೋ ಅದೇ ಬಗೆಯಾಗಿ ಗುರುವು ಆಗಮಿಸಿದಾಗಲೂ ಸಹ ನಡೆದುಕೊಳ್ಳಬೇಕೆಂದು ಚಂದ್ರಜ್ಞಾನಾಗಮವು–

ಗುರುಂ ಸ್ವಗೃಹಮಾಯಾಂತಂ ದೃಷ್ಟ್ವಾ ಭಕ್ತಿಯುತೋ ಜನಃ।
ನತ್ವಾ ತದಾಸನಂ ದತ್ತ್ವಾ ಚಾಸೀತ ತದನುಜ್ಞಯಾ॥
ಚಂದನಂ ಚಾಕ್ಷತಂ ಪುಷ್ಪಂ ಸ್ವರ್ಣಂ ತಾಂಬೂಲಮಂಬರಮ್।
ಪಾತ್ರೇ ನಿಧಾಯ ಗುರವೇ ಶಿಷ್ಯೋ ದದ್ಯಾನ್ನ ಪಾಣಿನಾ॥
ಸಂಭೋಜಯಿತ್ವಾ ಸ್ವಗುರುಂ ಪಶ್ಚಾದ್ ಭುಂಜೀತ ಬುದ್ಧಿಮಾನ್।
ಗುರೋಃ ಪುರಸ್ತಾದ್ಯೋ ಭುಂಕ್ತೇ ಗುರುದ್ರೋಹೀ ಸ ಉಚ್ಯತೇ॥
ತಾಂಬೂಲಮುತ್ತಮಂ ತಸ್ಮೈತತಃ ಪಾತ್ರೇಣ ದಾಪಯೇತ್।
ಪಶ್ಚಾದಿಷ್ಟಾನಿ ವಸ್ತೂನಿ ದತ್ತ್ವಾ ನತ್ವಾ ಕ್ಷಮಾಪಯೇತ್।
ದರಿದ್ರಶ್ಚೋದಿತೇಷ್ವೇಷು ನಿಜಶಕ್ತಿಮವಂಚಯನ್।
ಅವಶ್ಯಮರ್ಚಯೇಚ್ಛಿಷ್ಯೋ ಗುರುಂ ಲಬ್ಧಧನೇನ ವಾ॥[೨೭]

---

೨೬. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವ. ಸಂಖ್ಯೆ ೧೧೫೧, ಪುಟ ೩೯೪

೨೭. ಚಂ.ಆ. ಕ್ರಿ.ಪಾ. ಪಟಲ ೨. ಶ್ಲೋಕ ಸಂಖ್ಯೆ ೨೧, ೨೩–೨೫, ೨೭

ಭಕ್ತಿವಂತನಾದ ವ್ಯಕ್ತಿಯು ಗುರುವು ತನ್ನ ಮನೆಗೆ ಬಂದದ್ದನ್ನು ಕಂಡು ನಮಸ್ಕರಿಸಿ, ಅವನಿಗೆ ಆಸನವನ್ನು ನೀಡಿ ಆಮೇಲೆ ಗುರುಪಾದವನ್ನು ಪೂಜಿಸಿ ಅವನ ಅನುಜ್ಞೆಯನ್ನು ಪಡೆದು ತಾನು ಕುಳಿತುಕೊಳ್ಳಬೇಕು. ಅನಂತರ ಗುರು ಪಾದೋದಕದ ಸೇವನೆಯನ್ನು ಮಾಡಿ, ಶಿಷ್ಯನು ಗುರುವಿಗೆ ಗಂಧ, ಅಕ್ಷತೆ, ಹೂವು ಚಿನ್ನ, ತಾಂಬೂಲ, ವಸ್ತ್ರಗಳನ್ನು ಪಾತ್ರೆಯಲ್ಲಿ ಇಟ್ಟು ಅರ್ಪಿಸಬೇಕು. ತನ್ನ ಗುರುವಿಗೆ ಮೊದಲು ಊಟ ಮಾಡಿಸಿ ಅನಂತರ ಶಿಷ್ಯನು ಊಟ ಮಾಡಬೇಕು. ಗುರುವಿಗಿಂತ ಮೊದಲು ಯಾರು ಊಟ ಮಾಡುತ್ತಾನೋ ಅವನು ಗುರುದ್ರೋಹಿಯೆಂದು ಕರೆಯಲ್ಪಡುತ್ತಾನೆ. ಗುರುಗಳು ಭೋಜನವನ್ನು ಪೂರೈಸಿಕೊಂಡ ಬಳಿಕ ಉತ್ತಮವಾದ ತಾಂಬೂಲವನ್ನು ಪಾತ್ರೆಯಲ್ಲಿಟ್ಟು ಗುರುವಿಗೆ ಅರ್ಪಿಸಬೇಕು. ಅಲ್ಲದೇ ಗುರುಗಳಿಗೆ ಇಷ್ಟವಾದ ವಸ್ತುಗಳನ್ನು ಕೊಟ್ಟು ನಮಸ್ಕರಿಸಬೇಕು. ಬಡವನಾದ ಭಕ್ತನು ತನ್ನ ಶಕ್ತಿಯಿದ್ದಷ್ಟು ವಂಚನೆಯಿಲ್ಲದೆ ಗುರುವು ಕೇಳಿದ್ದನ್ನು ಅರ್ಪಿಸಿ ಸತ್ಕರಿಸಬೇಕು ಎಂದು ಗುರು ಆಗಮಿಸಿದಾಗ ಶಿಷ್ಯನು ಆದರಿಸುವ ಕ್ರಮವನ್ನು ಸವಿಸ್ತಾರವಾಗಿ ವಿವರಿಸಿವೆ.

ಇದನ್ನೇ ಚೆನ್ನಬಸವಣ್ಣನವರು ಪ್ರತಿಪಾದಿಸುತ್ತಾ "...........ಶ್ರೀಗುರುಕಾರುಣ್ಯವುಳ್ಳ ಶಿವಭಕ್ತರು ಆ ಶ್ರೀಗುರುಲಿಂಗಕ್ಕೆ ತನುಕ್ರೀಯಿಂದ ಪಾದಾರ್ಚನೆಯ ಮಾಡಿ ಪಾದತೀರ್ಥಮಂ ಕೊಂಡು, ಷಡುಸಮ್ಮಾರ್ಜನೆಯ ಮಾಡಿ ರಂಗವಾಲಿಯನಿಕ್ಕಿ, ಶ್ರೀಗುರುವ ಲಿಂಗಾರ್ಚನೆಗೆ ಕುಳ್ಳಿರಿಸಿ ಅಷ್ಟವಿಧಾರ್ಚನೆ ಷೋಡಶೋಪಚಾರವಂ ಮಾಡಿ ಪುರುಷಾಹಾರ ಪ್ರಮಾಣಿನಿಂದ ನೀಡಿ, ತೆರಹು ಮರಹಿಲ್ಲದೆ ಆ ಶ್ರೀಗುರುವಾರೋಗಣೆಯಂ ಮಾಡಿದ ಬಳಿಕ ಹಸ್ತಮಜ್ಜನಕ್ಕೆರೆದು, ಒಕ್ಕುಮಿಕ್ಕುದ ಕೊಂಡುಂಬುದು ಗುರುಪ್ರಸಾದ........."[೨೮] ಎಂದು ಗುರು ಆಗಮಿಸಿದಾಗ ಶಿಷ್ಯನು ಆದರಿಸುವ ಕ್ರಮವನ್ನು ವಿವರಿಸಿದ್ದಾರೆ.

ಗುರು ಸೇವೆಯ ಇನ್ನೊಂದು ಪ್ರಕಾರವೆಂದರೆ 'ಅಂಗಸೇವೆ'. ಗುರುವಿನ ಪಾದಾದಿ ಅವಯುವಗಳ ವಿಷಯುದಲ್ಲಿ ಪ್ರೀತಿಯಿಂದಿದ್ದು ಪಾದತೊಳೆಯುವದು, ಅಂಗಸಂವಾಹನೆ(ಶರೀರವನ್ನು ಒತ್ತುವದು) ಇತ್ಯಾದಿಯಾಗಿ ಮಾಡುವ ಸೇವೆಯನ್ನು ಅಂಗಸೇವೆಯೆಂದು ಕರೆಯುತ್ತೇವೆ. ಗುರುಪಾದ ಪೂಜೆ ಮತ್ತು ಗುರುಪಾದೋದಕಸೇವನೆಯನ್ನು ಕುರಿತು ಚಂದ್ರಜ್ಞಾನಾಗಮದಲ್ಲಿ –

ಸ್ವಾಚಾರ್ಯಚರಣದ್ವಂದ್ವಪ್ರಕ್ಷಾಲಿತಜಲಂ ಸದಾ।
ಯಃ ಪಿಬೇದ್ಧಾರಯೇದ್ಭಕ್ತ್ಯಾ ಸರ್ವಪಾಪೈಃ ಪ್ರಮುಚ್ಯತೇ॥[೨೯]

ತನ್ನ ಗುರುವಿನ ಪಾದಗಳನ್ನು ತೊಳೆದ ನೀರನ್ನು (ಪಾದೋದಕವನ್ನು) ಯಾರು ಯಾವಾಗಲೂ ಸ್ವೀಕರಿಸುತ್ತಾನೋ ಅಥವಾ ಭಕ್ತಿಯಿಂದ ಧರಿಸುತ್ತಾನೋ ಅವನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ. ಏಕೆಂದರೆ–

೨೮. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂ. ೩, ವಚನ ಸಂಖ್ಯೆ ೧೧೬೫., ಪುಟ ೪೦೧
೨೯. ಚಂ.ಆ. ಕ್ರಿ.ಪಾ. ಪಟಲ ೨. ಶ್ಲೋಕ ಸಂಖ್ಯೆ ೨೨

ಪಾದಾಂಗುಷ್ಠೇ ಸಮಸ್ತಾನಿ ತೀರ್ಥಾನಿ ನಿವಸಂತಿ ಹಿ।
ಗುಲ್ಫೇ ತಸ್ಯ ಮಹಾದೇವಿ ತಿಷ್ಠಂತಿ ಗಣತಾರಕಾಃ॥[೩೦]

ಶ್ರೀಗುರುವಿನ ಪಾದಾಂಗುಷ್ಠದಲ್ಲಿ ಎಲ್ಲಾ ತೀರ್ಥಗಳು ನೆಲೆಸಿವೆ. ಹಿಮ್ಮಡಿಯ ಗಂಟಿನಲ್ಲಿ ಗಣದೇವತೆಗಳು ತಾರಾಮಂಡಲಗಳಿವೆ. ಪಾದದಡಿಯಲ್ಲಿ ಎಲ್ಲ ಸಮುದ್ರಗಳಿವೆ. ಪಾದದ ಮೇಲ್ಭಾಗದಲ್ಲಿ ಕುಲಪರ್ವತಗಳಿವೆ ಮತ್ತು ಮೊಣಕಾಲುಗಳೆರಡರಲ್ಲಿ ಮೂವತ್ತಾರು ತತ್ವಪುಂಜಗಳಿವೆ ಎಂದು ಶ್ರೀಗುರುವಿನ ಪಾದಗಳ ವಿರಾಟ ಸ್ವರೂಪವನ್ನು ವರ್ಣಿಸುತ್ತಾ ಸಕಲವಿದ್ಯೆಗಳ ನಿವಾಸವಾದ ಶ್ರೀ ಗುರುವಿನ ಪಾದಯುಗಲವನ್ನು ಮೂರುಲೋಕಗಳೂ ಆಶ್ರಯಿಸಿವೆ ಎಂದು ಆಗಮಗಳು ಅರಹುತ್ತವೆ. ಕಾರಣ –

ಸರ್ವಸಂಕಲ್ಪಸಿದ್ಧ್ಯರ್ಥಂ ಧ್ಯಾಯೇದ್‌ಗುರುಪಾದಾಂಬುಜಮ್ ॥
ಮಂತ್ರಮೂಲಂ ಗುರೋರ್ವಾಕ್ಯಂ ಪೂಜಾಮೂಲಂ ಗುರೋಃ ಪದಮ್॥[೩೧]

ಎಲ್ಲಾ ಸಂಕಲ್ಪಗಳ ಸಿದ್ಧಿಗಾಗಿ ಗುರುವಿನ ಪಾದಪದ್ಮಗಳನ್ನು ಧ್ಯಾನಿಸಬೇಕು. ಶ್ರೀಗುರುವಿನ ವಾಕ್ಯ ಎಲ್ಲಾ ಮಂತ್ರಗಳಿಗೆ ಮೂಲ. ಶ್ರೀಗುರುವಿನ ಪಾದವು ಎಲ್ಲಾ ಪೂಜೆಗೂ ಆಶ್ರಯ ಎಂದು ಆಗಮಗಳು ತಿಳಿಸುತ್ತವೆ. ಇದೇ ಅಭಿಪ್ರಾಯ ವಚನಗಳಲ್ಲಿಯೂ ಅಭಿವ್ಯಕ್ತಗೊಂಡಿದೆ.

ಗುರುಚರಣವ ಪೂಜಿಸಿ ಎನ್ನ ಹಸ್ತಂಗಳು ಪರುಷವಾದವು.
ಗುರು ಚರಣವ ನೋಡಿ ಎನ್ನ ಕಂಗಳು ಪರುಷವಾದವು.
ಗುರುಚರಣವ ಹಾಡಿ ಹರಸಿ ಎನ್ನ ಜಿಹ್ವೆ ಪರುಷವಾಯಿತ್ತು.
ಗುರುಚರಣವ ನೆನೆದು ಎನ್ನ ಮನ ಪರುಷವಾಯಿತ್ತು.
ಗುರುಚರಣವ ಧ್ಯಾನಿಸಿ ಎನ್ನ ಭಾವ ಪರುಷವಾಯಿತ್ತು ನೋಡಾ ಅಖಂಡೇಶ್ವರಾ.[೩೨]

ಎಂಬ ವಚನದಲ್ಲಿ ಇದೇ ಭಾವ ವ್ಯಕ್ತವಾಗಿದೆ. 'ಬ್ರಹ್ಮಂಗೆ ವಾಕ್ಪರುಷ ವಿಷ್ಣುವಿಂಗೆ ನಯನ ಪರುಷ ರುದ್ರಂಗೆ ಹಸ್ತ ಪರುಷ ನಮ್ಮ ಕೂಡಲ ಸಂಗನ ಶರಣರಿಗೆ ಪಾದವೆ ಪರುಷ' ಎಂದು ಬಸವಣ್ಣನವರು ಸಾರಿದಂತೆ ಗುರುವಿನ, ಜಂಗಮನ ಪಾದಗಳು ಪರುಷಮಣಿಗಳಾಗಿವೆ. ಅಂತಹ ಪವಿತ್ರ ಪಾದಗಳ ತೇಜಸ್ಸಿನಿಂದ ದೊರೆಯುವ ಪಾದೋದಕದಿಂದ ಪವಿತ್ರರಾಗುವರೆಂಬುದನ್ನು ವಚನಕಾರರೂ ಒತ್ತಿ ಹೇಳಿದ್ದುಂಟು.

ಇನ್ನು ಮೂರನೇ ಗುರುಸೇವೆಯೇ ಸ್ಥಾನಸೇವೆ. ಇಲ್ಲಿ 'ಸ್ಥಾನ' ಎಂದರೆ ಸದ್ಗುರುವಿನ ವಾಸಕ್ಷೇತ್ರ. 'ಗುರುರ್ದೇವೋ ಯತಃ ಸಾಕ್ಷಾತ್ ತದ್ಗೃಹಂ ದೇವಮಂದಿರಂ'[೩೩](ಗುರುವು

೩೦. ಸೂ.ಆ.ಕ್ರಿ.ಪಾ.೫, ಶ್ಲೋಕ ಸಂಖ್ಯೆ ೧೭

೩೧. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೮೬–೮೭

೩೨. ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವ.ಸಂ.೯, ವಚನ ಸಂಖ್ಯೆ ೨೯೬. ಪುಟ ೧೮೩

೩೩. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೧೨

ಸಾಕ್ಷಾತ್ ದೇವನಾದುದರಿಂದ ಆತನ ಮನೆಯು ದೇವಾಲಯ) ಎಂಬ ಆಗಮೋಕ್ತಿಯಂತೆ ಗುರುವಿನ ವಾಸಕ್ಷೇತ್ರವನ್ನು ದೇವಮಂದಿರದಂತೆ ಶ್ರದ್ಧೆಯಿಂದ ತಿಳಿಯಬೇಕು ಎಂದು ತಿಳಿಸುತ್ತಾ ಚಂದ್ರಜ್ಞಾನಾಗಮವು –

ಗುರುಯಾತ್ರಾ ದೇವಯಾತ್ರಾ ತೀರ್ಥಯಾತ್ರೇತಿ ಚ ತ್ರಿಧಾ।
ಆಸಾಂ ತ್ರಿವಿಧಯಾತ್ರಾಣಾಂ ಗುರುಯಾತ್ರಾ ಫಲಾಧಿಕಾ॥[೩೪]

ಗುರುಯಾತ್ರೆ, ದೇವಯಾತ್ರೆ ಮತ್ತು ತೀರ್ಥಯಾತ್ರೆ ಎಂಬ ತ್ರಿವಿಧ ಯಾತ್ರೆಗಳಲ್ಲಿ ಗುರುಯಾತ್ರೆಯು ಅಧಿಕಫಲವನ್ನು ನೀಡುವದು. ಗುರುವಿನ ದರ್ಶನಕ್ಕೋಸ್ಕರ ಯಾರು ಭಕ್ತಿಯಿಂದ ಯಾತ್ರೆ ಮಾಡುತ್ತಾನೋ ಅವನು ಪುಣ್ಯಶರೀರವುಳ್ಳವನು. ಎಲ್ಲಾದೇವತೆಗಳಿಗೆ ಪ್ರೀಯನು. ಶಿಷ್ಯನು ಗುರುವು ನೆಲೆಸಿರುವ ಗ್ರಾಮವನ್ನು ಪ್ರವೇಶ ಮಾಡುವಾಗ ವಾಹನ ಮುಂತಾದವುಗಳನ್ನು ಬಿಡಬೇಕು ಮತ್ತು ಗುರುವಿನ ಮನೆಯ ಸಮೀಪದಲ್ಲಿಯೇ ತನ್ನ ಪಾದರಕ್ಷೆಗಳನ್ನು ಕಳಚಬೇಕು.[೩೫] ಎಂದು ತಿಳಿಸುತ್ತಾ –

ಗುರುಯಾತ್ರಾ ಸದಾ ಕಾಶೀಯಾತ್ರಾ ತಸ್ಯ ಯದೀಕ್ಷಣಮ್।
ಭೂಮಿ ಪ್ರದಕ್ಷಿಣಂ ಸಾಕ್ಷಾತ್ ದರ್ಶನಂ ಮಮ ಸುವ್ರತೇ ॥[೩೬]

ಗುರುದರ್ಶನಕ್ಕೆ ಮಾಡುವ ಯಾತ್ರೆಯು ಕಾಶೀಯಾತ್ರೆಗೆ ಸಮ; ಗುರುವಿನ ಪ್ರದಕ್ಷಿಣೆಯು ಭೂಮಿಯ ಪ್ರದಕ್ಷಿಣೆಯಿದ್ದಂತೆ. ಅದೇ ಶಿವನ ದರ್ಶನವಿದ್ದಂತೆ ಎಂದು ತಿಳಿಸಿವೆ.

ನಾಲ್ಕನೇ ಸೇವೆಯನ್ನು 'ಸದ್ಭಾವಸೇವೆ' ಎಂದು ಕರೆಯುತ್ತಾರೆ. 'ಗುರು ಸಾಕ್ಷಾತ್ ಪರಬ್ರಹ್ಮ' ಎಂಬ ವಿಶ್ವಾಸವೇ ಸದ್ಭಾವನೆಯಾಗಿದೆ. ಕಾರಣ ಶಿಷ್ಯನು ಗುರುಸೇವೆಯನ್ನು ಭಯಾನ್ವಿತನೂ ಹಾಗೂ ಭಾವಾನ್ವಿತನೂ ಆಗಿ ನಿರ್ವಹಿಸಬೇಕೆಂದು ತಿಳಿಸುತ್ತಾ ಗುರುವಿನ ಬಳಿ ಶಿಷ್ಯನು ನಡೆದುಕೊಳ್ಳುವ ಬಗೆಯನ್ನು ಪಾರಮೇಶ್ವರಾಗಮವು ಹೀಗೆ ವಿವರಿಸುತ್ತದೆ –

ಭುಕ್ತಿಮುಕ್ತಿಫಲಪ್ರಾಪ್ತ್ಯೈ ಸೇವೇದೀಶಧಿಯಾ ಗುರುಮ್।
ನ ಲಂಘಯೇದ್ ಗುರೋಶ್ಛಾಯಾಮಾತ್ಮಚ್ಛಾಯಾಂ ತಥಾ ಗುರೌ ॥
ಪ್ರಸಾರಯೇತ್ ಪ್ರಯತ್ನೇನ ಶಿಷ್ಯೋ ಭೂಷ್ಣು ಕದಾಚನ।
ಉಚ್ಚಾಸನಂ ನ ಸೇವೇತ ನೋಚ್ಚೈರ್ಬ್ರೂಯಾತ್ ತದಗ್ರತಃ॥
ನ ಚೇಷ್ಟಯೇದ್ಯಥಾತ್ಮೇಚ್ಛಂ ನಾನ್ಯ ಗೋಷ್ಠಿಂ ಸಮಾಶ್ರಯೇತ್
ನ ಗುರೋರಗ್ರತೋ ಗಚ್ಛೇನ್ನ ಸ್ವಪೇದ್ ಗುರುಸಂನಿಧೌ

---

೩೪. ಚಂ.ಆ. ಕ್ರಿ.ಪಾ. ಪಟಲ ೨. ಶ್ಲೋಕ ಸಂಖ್ಯೆ ೨೮

೩೫. ಚಂ.ಆ. ಕ್ರಿ.ಪಾ. ಪಟಲ ೨. ಶ್ಲೋಕ ಸಂಖ್ಯೆ ೨೯–೩೦ .

೩೬. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೯೭

ಸಹ ಶ್ರೀಗುರುಣಾ ಶಿಷ್ಯೋ ನ ಕುರ್ಯಾತ್ ಕ್ರಯವಿಕ್ರಯಮ್
ನೋಚ್ಚೈರ್ಹಸೇನ್ನ ಪ್ರಲಪೇನ್ನೋಪವಿಶ್ಯೇತ್ ತದಗ್ರತಃ ॥
ಮುಖಾವಲೋಕೀ ಸೇವೇತ ಸುಪ್ರಸನ್ನಮನೋಮುಖಃ।
ಕೃಚ್ಛ್ರೇಪಿ ನಾತ್ಮನಃ ಕ್ಲೇಶಂ ತದಗ್ರೇ ಸಂಪ್ರಕಾಶಯೇತ್॥
ಶಯ್ಯಾ ಚಾಸನವಸ್ತ್ರಾದಿ ಯತ್ತತ್ ಸ್ಪೃಷ್ಟಂ ತು ಪೂಜಯೇತ್।
ಪಾದುಕಾವಾಹನಾದೀನಿ ನಾಪಸವ್ಯಂ ವ್ರಜೇದ ಗುರೋಃ।
ಸಮರ್ಪ್ಯ ಗುರವೇಽಶ್ನೀಯಾದ್ ಯದ್ಯದಿಷ್ಟಂ ತಥಾತ್ಮನಃ।[೩೭]
ಭಾವಯೇಚ್ಛ್ರೀಗುರೋ ರೂಪಂ ಜಗದೇತಚ್ಚರಾಚರಮ್॥

ಶಿಷ್ಯನಾಗುವವನು ಭೋಗ ಮತ್ತು ಮೋಕ್ಷಗಳನ್ನು ಪಡೆಯುವುದಕ್ಕಾಗಿ ಗುರುವನ್ನು ಈಶ್ವರನೇ ಆತನೆಂಬ ಭಾವನೆಯಿಂದ ಸೇವಿಸಬೇಕು; ಗುರುವಿನ ನೆರಳನ್ನು ದಾಟಬಾರದು ಮತ್ತು ತನ್ನ ನೆರಳು ಗುರುವಿನ ಮೇಲೆ ಪಸರಿಸದಂತೆ ಪ್ರಯತ್ನಪೂರ್ವಕವಾಗಿ ನೋಡಿಕೊಳ್ಳಬೇಕು; ಯಾವಾಗಲೂ ಆತನ ಆಸನಕ್ಕಿಂತ ಎತ್ತರದ ಆಸನದಲ್ಲಿ ಕುಳಿತುಕೊಳ್ಳಬಾರದು ಮತ್ತು ಆತನ ಎದುರಿಗೆ ಎತ್ತರದ (ಏರು) ಧ್ವನಿಯಲ್ಲಿ ಮಾತನಾಡಬಾರದು. ಗುರುವಿನ ಮುಂದೆ ಸ್ವೇಚ್ಛೆಯಿಂದ ವರ್ತಿಸಬಾರದು. ಗುರುವಿನ ಸನ್ನಿಧಿಯಲ್ಲಿ ಮಲಗಬಾರದು. ಶ್ರೀಗುರುವಿನೊಂದಿಗೆ ಶಿಷ್ಯನು ಕೊಳ್ಳುವ ಮಾರುವ ವ್ಯವಹಾರವನ್ನು ಇಟ್ಟುಕೊಳ್ಳಬಾರದು. ಗುರುವಿನ ಎದುರಿಗೆ ಜೋರಾಗಿ ನಗಬಾರದು. ಅಸಂಬದ್ಧವಾಗಿ ಮಾತನಾಡಬಾರದು ಮತ್ತು ಕುಳಿತುಕೊಳ್ಳಬಾರದು. ಗುರುವಿನ ಮುಖವನ್ನು ನೋಡುತ್ತಿದ್ದಂತೆಯೇ ಸಂತುಷ್ಟವಾದ ಮನಸ್ಸು ಮತ್ತು ಮುಖಭಾವದಿಂದ ಸೇವೆ ಮಾಡಬೇಕು. ಕಷ್ಟವಿದ್ದಾಗಲೂ ತನ್ನ ಕಷ್ಟವನ್ನು ಗುರುವಿನ ಮುಂದೆ ತೋರಿಸಿಕೊಳ್ಳಬಾರದು. ಹಾಸಿಗೆ, ಆಸನ, ಬಟ್ಟೆ, ಪಾದುಕೆ, ವಾಹನ ಮುಂತಾದ್ದು ಯಾವುದು ಗುರುವಿನಿಂದ ಸ್ಪರ್ಶಿಸಲ್ಪಟ್ಟಿದೆಯೋ ಅದನ್ನು ಪೂಜಿಸಬೇಕು. ಗುರುವಿನ ಬಲಗಡೆಯಿಂದ ಹೋಗಬಾರದು. ಯಾವುದು ತನಗೆ ಇಷ್ಟವೋ ಅದನ್ನು ಗುರುವಿಗೆ ಸಮರ್ಪಿಸಿ ತಿನ್ನಬೇಕು. ಚರಾಚರಾತ್ಮಕವಾದ ಜಗತ್ತನ್ನು ಶ್ರೀಗುರುವಿನ ರೂಪವೆಂದು ಭಾವಿಸಬೇಕೆಂದು ತಿಳಿಸುತ್ತದೆ. ಇದನ್ನೇ ಚಂದ್ರಜ್ಞಾನಾಗಮವು ಸಮರ್ಥಿಸುತ್ತ –

ಗಚ್ಛಂಸ್ತಿಷ್ಠನ್ ಸ್ವಪನ್ ಭುಂಜನ್ ಯದ್ಯತ್ಕರ್ಮ ಸಮಾಚರೇತ್।
ಸಮಕ್ಷಂ ಯದಿ ಕುರ್ವೀತ ತತ್ಸರ್ವಂ ಗುರ್ವನುಜ್ಞಯಾ ॥
ಗುರೋರ್ಗೇಹೇ ಸಮಕ್ಷೇ ವಾ ನ ಯಥೇಷ್ಟಾಸನೋ ಭವೇತ್।
ಗುರುರ್ದೇವೋ ಯತಃ ಸಾಕ್ಷಾತ್ ತದ್ಗೃಹಂ ದೇವಮಂದಿರಮ್ ॥
ಪಾಪಿನಾಂ ಚ ಯಥಾ ಸಂಗಾತ್ ತತ್ಪಾಪಫಲಭಾಗ್ ಭವೇತ್।
ತದ್ವದಾಚಾರ್ಯಸಂಗೇನ ತದ್ಧರ್ಮ ಫಲಭಾಗ್ ಭವೇತ್।

---

೩೭. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೭೭–೮೩

ಯಥೇಹ ವಹ್ನಿಸಂಪರ್ಕಾನ್ಮಲಂ ತ್ಯಜತಿ ಕಾಂಚನಮ್।
ತಥೈವ ಗುರುಸಂಪರ್ಕಾತ್ ಪಾಪಂ ತ್ಯಜತಿ ಮಾನವಃ॥
ಯಥಾ ಪ್ರಜ್ವಲಿತೋ ವಹ್ನಿರ್ನಿಷ್ಠಾಂ ಕಾಷ್ಠಸ್ಯ ನಿರ್ದಹೇತ್।
ತಥಾಯಮಪಿ ಸಂತುಷ್ಟೋ ಗುರುಃ ಪಾಪಂ ಕ್ಷಣಾದ್ದಹೇತ್॥[೩೮]

ನಡೆಯುವಾಗ, ಮಲಗಿದಾಗ, ಊಟ ಮಾಡುವಾಗ ಯಾವುದೇ ಕರ್ಮವನ್ನು ಮಾಡುವಾಗಲೂ ಗುರುವಿನ ಎದುರಿಗೆ ಮಾಡುವುದಾದರೆ ಅದೆಲ್ಲವನ್ನೂ ಗುರುವಿನ ಒಪ್ಪಿಗೆಯನ್ನು ಪಡೆದು ಮಾಡಬೇಕು. ಗುರುವಿನ ಮನೆಯಲ್ಲಿ ಆಸನದ ಮೇಲೆ ಕುಳಿತುಕೊಳ್ಳಬಾರದು. ಏಕೆಂದರೆ ಗುರುವು ಸಾಕ್ಷಾತ್ ದೇವನು ಮತ್ತು ಆ ಮನೆಯು ದೇವ ಮಂದಿರ. ಪಾಪಿಗಳ ಸಂಪರ್ಕದಿಂದ ಹೇಗೆ ಅವರ ಪಾಪದ ಫಲದಲ್ಲಿ ಭಾಗಿಯಾಗಬೇಕಾಗುತ್ತದೋ ಹಾಗೆಯೇ ಶ್ರೀಗುರುವಿನ ಸಂಪರ್ಕದಿಂದ ಅವನ ಧರ್ಮದ ಫಲವನ್ನು ಪಡೆದವನಾಗುತ್ತಾನೆ. ಹೇಗೆ ಬೆಂಕಿಯ ಸಂಪರ್ಕದಿಂದ ಚಿನ್ನವು ತನ್ನ ಕೊಳೆಯನ್ನು ಬಿಡುವುದೋ ಹಾಗೆಯೇ ಶ್ರೀ ಗುರುವಿನ ಸಂಪರ್ಕದಿಂದ ಮನುಷ್ಯನು ಪಾಪವನ್ನು ತೊಡೆದುಕೊಳ್ಳುತ್ತಾನೆ. ಹೇಗೆ ಉರಿಯುತ್ತಿರುವ ಬೆಂಕಿಯು ಕಟ್ಟಿಗೆಯ ಕಠಿಣತೆಯನ್ನು ಸುಡುತ್ತದೆಯೋ ಹಾಗೆ ಶ್ರೀಗುರುವು ಸಂತುಷ್ಟನಾದಾಗ ಕ್ಷಣದಲ್ಲಿಯೇ ನಮ್ಮ ಪಾಪಗಳನ್ನು ದಹಿಸುತ್ತಾನೆ ಎಂದು ಗುರುಸೇವೆಯ ಮಹಿಮೆಯನ್ನು ಕೊಂಡಾಡಿವೆ.

ಗುರುವಿನ ಆಜ್ಞೆಯನ್ನು ಉಲ್ಲಂಘಿಸಕೂಡದು

ಸರ್ವದೇವಾತ್ಮಕಶ್ಚಾಸೌ ಸರ್ವಮಂತ್ರಮಯೋ ಗುರುಃ।
ತಸ್ಮಾತ್ ಸರ್ವಪ್ರಯತ್ನೇನ ತಸ್ಯಾಜ್ಞಾಂ ಶಿರಸಾ ವಹೇತ್
ಶ್ರೇಯೋರ್ಥೀ ಯದಿ ಗುರ್ವಾಜ್ಞಾಂ ನ ಲಂಘಯೇತ್।
ಗುರ್ವಾಜ್ಞಾಪಾಲಕೋ ಯಸ್ಮಾದ್ ಜ್ಞಾನಸಂಪತ್ತಿಮಶ್ನುತೇ ॥[೩೯]

ಗುರುವು ಎಲ್ಲಾ ದೇವತೆಗಳ ಸ್ವರೂಪನು ಮತ್ತು ಮಂತ್ರಗಳ ಸ್ವರೂಪನು. ಆದ್ದರಿಂದ ಎಲ್ಲಾ ಪ್ರಯತ್ನಗಳಿಂದ ಅವನ ಆಜ್ಞೆಯನ್ನು ಶಿರಸಾವಹಿಸಿ ನಡೆಸಬೇಕು. ಶ್ರೇಯಸ್ಸನ್ನು ಬಯಸುವವನಾದರೆ ಗುರುವಿನ ಆಜ್ಞೆಯನ್ನು ಮನಸ್ಸಿನಿಂದ ಕೂಡ ಉಲ್ಲಂಘಿಸಕೂಡದು. ಏಕೆಂದರೆ ಗುರುವಿನ ಆಜ್ಞೆಯನ್ನು ಪಾಲಿಸುವವನು ಜ್ಞಾನದ ಸಂಪತ್ತನ್ನು ಪಡೆಯುತ್ತಾನೆ ಎಂದು ಚಂದ್ರಜ್ಞಾನಾಗಮವು ತಿಳಿಸುತ್ತದೆ.

ಗುರುವಿನ ಕ್ರೋಧದಿಂದ ಸರ್ವನಾಶ

ಮನಸಾ ಕರ್ಮಣಾ ವಾಚಾ ಗುರೋಃ ಕ್ರೋಧಂ ನ ಕಾರಯೇತ್।
ತಸ್ಯ ಕ್ರೋಧೇನ ದಹ್ಯಂತೇ ಹ್ಯಾಯುಃ ಶ್ರೀಜ್ಞಾನಸತ್ಕ್ರಿಯಾಃ॥

---

೩೮. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೧೧–೧೫
೩೯. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೯–೧೧

ತತ್ರೋಽಧಿಕಾರಿಣೋ ಯೇ ಸ್ಯುಸ್ತೇಷಾಂ ಯಜ್ಞಾಶ್ಚ ನಿಷ್ಫಲಾಃ।
ಯಮಾಶ್ಚ ನಿಯಮಾಶ್ಚೈವ ನಾತ್ರ ಕಾರ್ಯ ವಿಚಾರಣಾ॥
ಗರೋರ್ವಿರುದ್ಧಂ ಯದ್ವಾಕ್ಯಂ ನ ವದೇಜ್ಜಾತುಚಿನ್ನರಃ।
ವದೇದ್ ಯದಿ ಮಹಾಘೋರೇ ರೌರವೇ ಪತತಿ ಧ್ರುವಮ್ ॥
ನೈರ್ಗುಣ್ಯೇ ಖ್ಯಾಪಿತೇ ತಸ್ಯ ನೈರ್ಗುಣ್ಯಶತಭಾಗ್ಭವೇತ್।
ಗುಣೇ ತು ಖ್ಯಾಪಿತೇ ತದ್ವತ್ ಸರ್ವಂ ಪುಣ್ಯಫಲಂ ಭವೇತ್॥
ಗುರೋರ್ಹಿತಂ ಪ್ರಿಯಂ ಕುರ್ಯಾದಾದಿಷ್ಟೋ ವಾ ನರಃ ಸದಾ।[೪೦]

ಮನಸ್ಸಿನಿಂದ, ಕೃತಿಯಿಂದ ಮತ್ತು ಮಾತಿನಿಂದ ಗುರುವಿಗೆ ಕೋಪವುಂಟಾಗುವಂತೆ ಮಾಡಬಾರದು. ಗುರುವಿನ ಕ್ರೋಧದಿಂದ ಆಯುಷ್ಯ, ಸಂಪತ್ತು ಮತ್ತು ಪುಣ್ಯಗಳು ದಹಿಸಿಹೋಗುತ್ತವೆ. ಯಾರು ಗುರುವಿಗೆ ಕೋಪವನ್ನುಂಟುಮಾಡುವರೋ ಅವರ ಯಜ್ಞಗಳು, ಯಮ-ನಿಮಯಗಳು ನಿಷ್ಫಲವಾಗುವವು. ಗುರುವಿನ ವಿರುದ್ಧ ಯಾವ ಮನುಷ್ಯನೂ ಎಂದೂ ಯಾವ ಮಾತನ್ನೂ ಆಡಬಾರದು. ಅದನ್ನು ಆಡಿದ್ದಾದರೆ ಅಂಥವನು ಅತ್ಯಂತ ಘೋರವಾದ ರೌರವ ನರಕದಲ್ಲಿ ಬೀಳುತ್ತಾನೆ. ಗುರುವಿನ ದೋಷವನ್ನು ಪ್ರಚಾರ ಮಾಡಿದ್ದಾದರೆ ಅಂಥವನು ನೂರು ದೋಷಗಳಲ್ಲಿ ಭಾಗಿಯಾಗುವನು. ಗುರುವಿನ ಗುಣವನ್ನು ಪ್ರಚಾರ ಮಾಡಿದ್ದಾದರೆ ಅಂಥವನಿಗೆ ಎಲ್ಲಾ ಪುಣ್ಯಗಳ ಫಲವು ದೊರೆಯುವುದು. ಗುರುವಿಗೆ ಹಿತವಾದುದನ್ನು ಪ್ರಿಯವಾದುದನ್ನು ಮಾಡಬೇಕು ಎಂದು ಚಂದ್ರಜ್ಞಾನಾಗಮವು ತಿಳಿಸುತ್ತದೆ.

ಗುರುವಿನ ಉಪೇಕ್ಷೆ ಹಾನಿಕಾರ

ಯಃ ಪಶ್ಯತಿ ಗುರುಂ ಶಿಷ್ಯಃ ಸಾಧಾರಣ ಮನುಷ್ಯವತ್।
ತಸ್ಯ ಭಕ್ತಿರ್ವೃಥಾ ವಿದ್ವನ್ ಭವತ್ಯತ್ರ ನ ಸಂಶಯಃ।
ಸಮಸ್ತದೇವತಾವಾಸಂ ಸರ್ವಮಂತ್ರಾಸ್ಪದಂ ಗುರುಮ್।
ಉಪೇಕ್ಷತೇ ಯಃ ಪಾಪಾತ್ಮಾ ರೌರವಂ ನರಕಂ ವ್ರಜೇತ್॥[೪೧]

ಯಾವ ಶಿಷ್ಯನು ಗುರುವನ್ನು ಸಾಧಾರಣ ಮನುಷ್ಯನಂತೆ ಕಾಣುತ್ತಾನೋ ಅವನ ಭಕ್ತಿಯು ನಿಷ್ಫಲವಾಗುತ್ತದೆ. ಈ ಬಗ್ಗೆ ಯಾವುದೇ ಸಂಶಯವಿಲ್ಲ. ಎಲ್ಲಾ ದೇವತೆಗಳ ಆವಾಸ ಸ್ಥಾನವಾದ ಮತ್ತು ಎಲ್ಲಾ ಮಂತ್ರಗಳ ಆಶ್ರಯವಾದ ಗುರುವನ್ನು ಉಪೇಕ್ಷೆ ಮಾಡುವ ಪಾಪಾತ್ಮನು ರೌರವ ನರಕಕ್ಕೆ ಹೋಗುತ್ತಾನೆ ಎಂದು ಆಗಮಗಳು ಪ್ರತಿಪಾದಿಸಿವೆ. ಆದರೆ ಯೋಗ್ಯ ಗುರುಗಳು ಅತಿ ವಿರಳವೆನ್ನುವ ಸತ್ಯವನ್ನು ಆಗಮಗಳು ಸ್ಪಷ್ಟವಾಗಿ ತಿಳಿಸುತ್ತವೆ.

---

೪೦. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೧೬-೨೦
೪೧. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೪೪-೪೫

ಯೋಗ್ಯ ಗುರುವನ್ನೇ ಆಯ್ದುಕೊಳ್ಳಬೇಕು –

ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ।
ದುರ್ಲಭೋಽಯಂ ಗುರುರ್ಲೋಕೇ ಶಿಷ್ಯಹೃತ್ತಾಪಹಾರಕಃ॥[೪೨]

ಶಿಷ್ಯರ ಸಂಪತ್ತನ್ನು ಅಪಹರಿಸುವ ಗುರುಗಳು ಬಹಳ ಇದ್ದಾರೆ. ಆದರೆ ಈ ಲೋಕದಲ್ಲಿ ಶಿಷ್ಯರ ಹೃದಯದ ತಾಪವನ್ನು ಪರಿಹರಿಸುವ ಗುರುವು ದೊರೆಯುವುದು ಕಷ್ಟ ಎಂದು ಆಗಮಗಳು ತಿಳಿಸುತ್ತವೆ.

ಇದೇ ಅಭಿಪ್ರಾಯವನ್ನೇ ಅಂಬಿಗರ ಚೌಡಯ್ಯನು 'ಲೋಕದಲ್ಲಿಯ ನೂರಾರು ಗುರುಗಳ ನೋಡಿ ನಾನು ಬೇಸರಗೊಂಡೆನಯ್ಯಾ, ವಿತ್ತಾಪಹಾರಿ ಗುರುಗಳು ನೂರಾರು; ಶಾಸ್ತ್ರಾರ್ಥ ಪೇಳುವ ಗುರುಗಳು ನೂರಾರು; ಮಂತ್ರತಂತ್ರದಿಂದುಭಯ ಲೋಕದಲ್ಲಿ ಸುಖದುಃಖವನೀವ ಗುರುಗಳು ನೂರಾರು'[೪೩] ಎಂದು ತಿಳಿಸಿದ್ದಾನೆ. ಇದನ್ನೇ ಅಲ್ಲಮಪ್ರಭುಗಳು 'ಆನೆಯ ಚೋಹವ ತೊಟ್ಟು ನಾಯಾಗಿ ಬೊಗಳುವವರ ಏನೆಂಬೆ ಗುಹೇಶ್ವರಾ'[೪೪] ಎಂದು ಇಬ್ಬಗೆಯ ವರ್ತನೆಯನ್ನು ಖಂಡಿಸಿ ನಡೆ–ನುಡಿಯಲ್ಲಿ ಸಮನ್ವಯ ಹೊಂದಿದವನೇ ನಿಜವಾದ ಗುರು ಎಂದು ತಿಳಿಸಿದ್ದಾರೆ.

ಕಾರಣ ಆತ್ಮಜ್ಞಾನ ರಹಿತನೂ ಹಾಗೂ ಸದಾಚಾರ ರಹಿತನನ್ನು ಗುರುವೆಂದು ಪರಿಗಣಿಸಕೂಡದೆಂದು ಹೋಲಿಕೆಯ ಮೂಲಕ ಆಗಮಗಳು ಅತ್ಯಂತ ಸುಂದರವಾಗಿ ನಿರೂಪಿಸಿವೆ –

ಸಂವಿತ್ತಿಜನನಂ ಸತ್ಯಂ ಪರಾನಂದಸಮುದ್ಭವಮ್।
ತತ್ತತ್ತ್ವಂ ವಿದಿತಂ ಯೇನ ಸ ಏವಾನಂದದರ್ಶಕಃ॥
ಸ ಪುನರ್ನಾಮಮಾತ್ರೇಣ ಸಂವಿತ್ತಿರಹಿತಸ್ತು ಯಃ।
ಅನ್ಯಂ ನ ತಾರಯೇದಜ್ಞಃ ಕಿಂ ಶಿಲಾ ತಾರಯೇಚ್ಛಿಲಾಮ್॥
ಏಷಾ ತನ್ನಮಮಾತ್ರೇಣ ಮುಕ್ತಿರ್ವೈ ನಾಮಮಾತ್ರಿಕಾ।
ಯೈಃ ಪುನರ್ವಿದಿತಂ ತತ್ತ್ವಂ ತೇ ಮುಕ್ತಾ ಮೋಚಯಂತ್ಯಪಿ॥
ತತ್ತ್ವಹೀನೇ ಕುತೋ ಬೋಧಃ ಕುತೋ ಹ್ಯಾತ್ಮಪರಿಗ್ರಹಃ।
ಪರಿಗ್ರಹವಿನಿರ್ಮುಕ್ತಃ ಪಶುರಿತ್ಯಭಿಧೀಯತೇ
ಪಶುಭಿಃ ಪ್ರೇರಿತಶ್ಚಾಪಿ ಪಶುತ್ವಂ ನಾತಿವರ್ತತೇ।
ತಸ್ಮಾತ್ತತ್ತ್ವಂ ವಿದಿತ್ವೇಹ ಮುಕ್ತೋ ಮೋಚಕ ಇಷ್ಯತೇ।
ಸರ್ವಲಕ್ಷಣಯುಕ್ತೋಽಪಿ ಸರ್ವಶಾಸ್ತ್ರಂ ವಿದನ್ನಪಿ।
ಸರ್ವೋಪಾಯವಿಧಿಜ್ಞೋಽಪಿ ತತ್ತ್ವಹೀನಸ್ತು ನಿಷ್ಫಲಃ॥[೪೫]

---

೪೨. ಚಂ.ಆ. ಕ್ರಿ.ಪಾ. ಪಟಲ ೨. ಶ್ಲೋಕ ಸಂಖ್ಯೆ ೫೪
೪೩. ವಚನಗಳಲ್ಲಿ ವೀರಶೈವಧರ್ಮ ಡಾ. ಎಚ್. ತಿಪ್ಪೇರುದ್ರಸ್ವಾಮಿ.ಪು.ಸಂ.೧೯೪
೪೪. ವಚನಗಳಲ್ಲಿ ವೀರಶೈವಧರ್ಮ ಡಾ. ಎಚ್. ತಿಪ್ಪೇರುದ್ರಸ್ವಾಮಿ.ಪು.ಸಂ.೧೯೨
೪೫. ಚಂ.ಆ. ಕ್ರಿ.ಪಾ. ಪಟಲ ೨. ಶ್ಲೋಕ ಸಂಖ್ಯೆ ೫೫–೬೦

ಆಗಮಗಳ ಅಭಿಪ್ರಾಯದಂತೆ ಯಾರು ಸಂವಿತ್ತಿ (ಸತ್ಯಜ್ಞಾನ) ರಹಿತನೋ ಅವನು ನಾಮುವಾತ್ರದಿಂದ ಗುರು. ಅಂತಹ ಅಜ್ಞಾನಿಯು ಅನ್ಯರನ್ನು ಉದ್ಧರಿಸಲಾರನು. ಶಿಲೆಯು ಶಿಲೆಯನ್ನು ಉದ್ಧರಿಸಬಲ್ಲುದೇ? ಕಾರಣ ಆತ್ಮಸ್ವರೂಪ ಜ್ಞಾನವಿಲ್ಲದವನನ್ನು ಪಶುವೆಂದು ಕರೆಯಲಾಗುತ್ತದೆ. ಒಂದು ಪಶು ಇನ್ನೊಂದು ಪಶುವಿಗೆ ಪ್ರೇರಣೆ ನೀಡಿದರೆ ಪಶುತ್ವವಂತೂ ನಿವೃತ್ತಿಯಾಗುವುದಿಲ್ಲ. ಆದ್ದರಿಂದ ಯಾರು ಸಂವಿತ್ತಿಯ ತತ್ತ್ವವನ್ನು, ಶಿವಜ್ಞಾನದ ತತ್ತ್ವವನ್ನು ತಿಳಿದಿದ್ದಾರೋ ಅವರು ಮುಕ್ತರು ಮತ್ತು ಅವರು ಬೇರೆಯವರಿಗೆ ಮುಕ್ತಿಯ ದಾರಿಯನ್ನು ತೋರುತ್ತಾರೆ. ಎಲ್ಲಾ ಲಕ್ಷಣಗಳಿಂದ ಕೂಡಿದವನಾದರೂ, ಎಲ್ಲಾ ಶಾಸ್ತ್ರಗಳನ್ನು ತಿಳಿದವನಾದರೂ ಎಲ್ಲಾ ಉಪಾಯಗಳ ವಿಧಾನಗಳನ್ನು ಅರಿತವನಾದರೂ ತತ್ತ್ವಹೀನನು ಫಲವಿಲ್ಲದವನಾಗುವನು. ಕಾರಣ ಶಿಷ್ಯನ ಅಜ್ಞಾನವನ್ನು ಪರಿಹರಿಸಿ, ಶಿವಜ್ಞಾನವನ್ನುಂಟು ಮಾಡಿಕೊಡುವ ಸದ್ಗುರುವನ್ನು ಸಾಧಕನು ಮೊದಲು ಅನುಸರಿಸಬೇಕೆಂದು ತಿಳಿಸುತ್ತಾ

ಸಾಮಾನ್ಯಗುರುಮಾಶ್ರಿತ್ಯ ಜ್ಞಾನಮಿಚ್ಛತಿ ಮೂಢಧೀಃ।
ಭಿನ್ನನಾವಾಶ್ರಿತಃ ಸೋಽಪಿ ಮಹಾಬ್ಧಿಂ ಸಂತರಿಷ್ಯತಿ ॥
ಅತೋ ಹಿ ಸದ್ಗುರುಂ ಪ್ರಜ್ಞೋ ಜ್ಞಾನಾರ್ಥೀ ಸಂಶ್ರಯೇನ್ನರಃ।
ಏತಾದೃಶಂ ಗುರುಂ ಜ್ಞಾತ್ವಾ ಶುಶ್ರೂಷಾಂ ವೈ ಸಮಾಚರೇತ್ ॥[೪೬]

ಸಾಮಾನ್ಯ ಗುರುವನ್ನು ಆಶ್ರಯಿಸಿ, ಜ್ಞಾನವನ್ನು ಪಡೆಯಬಯಸುವ ಮೂಢನು ಒಡೆದ ದೋಣಿಯಲ್ಲಿ ಕುಳಿತು ಮಹಾಸಾಗರವನ್ನು ದಾಟಲು ಬಯಸಿದಂತಾಗುತ್ತದೆ. ಆದ್ದರಿಂದ ಜ್ಞಾನಾರ್ಥಿಯಾದ ಬುದ್ಧಿವಂತನು ಸದ್ಗುರುವನ್ನು ಆಶ್ರಯಿಸಬೇಕೆಂದು ಎಚ್ಚರಿಸುತ್ತವೆ. ಇದೇ ಅಭಿಪ್ರಾಯ ವಚನಗಳಲ್ಲಿಯೂ ಕೂಡಾ ವ್ಯಕ್ತವಾಗಿದೆ.

ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧವಿಡಿದಾತ ಗುರುವಲ್ಲ.
ಆತ ದೋಷಾರ್ಥಿ; ಆತ ನರಕಿ ಎಂದುದು ನೋಡಾ.
ಇದಕ್ಕೆ **ವೀರಾಗಮೇ:**
"ಕಾಂಚನಂ ಕಾಮಿನೀಚ್ಚೈವ ತಥಾ ಮಹಿಶ್ಚ ಕ್ಷೇತ್ರಕಂ।
ಗುರುಣಾ ತ್ರಿವಿಧಂ ಭೋಗ್ಯಂ ತದ್ಗುರುಃ[೪೭] ನರಕಂ ವ್ರಜೇತ್॥" ಇಂತೆಂದುದಾಗಿ,
ಅಪ್ರಮಾಣಕೂಡಲಸಂಗಮದೇವಾ॥

ಎಂದು ವೀರಾಗಮದ ಉಲ್ಲೇಖದೊಂದಿಗೆ ಹೊನ್ನು ಹೆಣ್ಣು ಮಣ್ಣಿಗಾಗಿ ಆಸೆ ಪಡುವವನು ಗುರುವಲ್ಲ ಎಂದು ತಿಳಿಸುತ್ತದೆ. ಇದನ್ನೇ ಬಸವಣ್ಣನವರು –

ಕ್ರಿಯಾಚಾರವಿಲ್ಲದ ಗುರುವಿನ ಕೈಯಿಂದ ದೀಕ್ಷೆ, ಉಪದೇಶವ ಕೊಳ್ಳಲಾಗದು.
ಕ್ರಿಯಾಚಾರವಿಲ್ಲದ ಶಿಲೆಯ ಲಿಂಗವೆಂದು ಪೂಜಿಸಲಾಗದು.

---

೪೬ ಸೂ.ಆ.ಕ್ರಿ.ಪಾ.೫, ಶ್ಲೋಕ ಸಂಖ್ಯೆ ೨೭–೨೮

೪೭. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೭೬೮. ಪುಟ ೩೪೬

ಕ್ರಿಯಾಚಾರವಿಲ್ಲದ ಭೂತಪ್ರಾಣಿಗಳಲ್ಲಿ ಜಂಗಮವೆಂದು ಪಾದೋದಕ ಪ್ರಸಾದವ
ಕೊಳಲಾಗದು. ಇಂತಪ್ಪ ಆಚಾರವಿಲ್ಲದ,
ಅನಾಚಾರವ ಬಳಸುವ ದುರಾಚಾರಿಗಳಲ್ಲಿ
ಉಪದೇಶವ ಪಡೆದು, ಪಾದೋದಕ ಪ್ರಸಾದವ ಕೊಂಡವಂಗೆ
ಅಘನಾಸ್ತಿಯಾಗದು, ಮುಂದೆ ಅಘೋರ ನರಕ ತಪ್ಪದು
ಕಾಣಾ, ಕೂಡಲಸಂಗಮದೇವಾ.[೪೮]

ಎಂದು ಎಚ್ಚರಿಸಿದ್ದಾರೆ. ಹಾಗಾದರೆ ಆ ಸದ್ಗುರು ಎಂದರೆ ಯಾರು? ಎಂಬುದನ್ನು ಚಂದ್ರಜ್ಞಾನಾಗಮವು ವಿವರಿಸಿದೆ.

ಗುರು ಎಂದರೆ ಯಾರು?

ಯಸ್ಯಾನುಭವಪರ್ಯಂತಾ ಮತಿಸ್ತತ್ತ್ವೇ ಪ್ರತಿಷ್ಠಿತಾ ।
ತಸ್ಯಾವಲೋಕನಾದ್ಯೈಶ್ಚ ಪರಾನಂದೋಽಭಿಜಾಯತೇ॥
ತಸ್ಮಾದ್ಯಸ್ಯೈವ ಸಂಪರ್ಕತ್ ಪ್ರಬೋಧಾನಂದಸಂಭವಃ।
ಗುರುಂ ತಮೇವ ವೃಣುಯಾನ್ನಾಪರಂ ಮತಿಮಾನ್ನರಃ॥[೪೯]

ಯಾರ ಸಂಪರ್ಕದಿಂದ ಅರಿವಿನ ಆನಂದವು ಉಂಟಾಗುವುದೋ ಹಾಗೂ ಯಾರ ಬುದ್ಧಿಯು ತತ್ವದಲ್ಲಿ ನೆಲೆಗೊಂಡಿದ್ದು ಅದರ ಸಾಕ್ಷಾತ್ಕಾರ ಹೊಂದುವ ಸಾಮರ್ಥ ಹೊಂದಿದೆಯೋ ಅವರೇ ನಿಜವಾದ ಗುರು.

ಇದನ್ನೇ ಸಿದ್ಧರಾಮರು, '.....ಸಂಶಯಾದಿಗಳನ್ನೆಲ್ಲ ಜ್ಞಾನಾಗ್ನಿಯಿಂದ ದಹಿಸಿ ಅರುಹಿನ ಬಂಧದಲ್ಲಿರಿಸಿದ ಗುರು'[೫೦] ಎಂದು ಆಗಮ ಅಭಿಪ್ರಾಯವನ್ನೇ ಸಮರ್ಥಿಸಿದ್ದಾರೆ. ಆದ್ದರಿಂದ ಅರಿವಿನ ಆನಂದ ನೀಡುವವನನ್ನೇ ಬುದ್ಧಿಮಾನ್ ಶಿಷ್ಯನು ಗುರುವಾಗಿ ಆಯ್ದುಕೊಳ್ಳಬೇಕು ಎಂದು ಆಗಮಗಳು ವಿವರಿಸುತ್ತಾ ಆ ಸದ್ಗುರುವಿನ ಲಕ್ಷಣಗಳೇನು? ಎಂಬುದನ್ನು ವಿಸ್ತೃತವಾಗಿ ವಿವರಿಸಿವೆ.

ಸದ್ಗುರುವಿನ ಲಕ್ಷಣ –

ಸದ್ಗುರುವಿನ ಗುಣಮೌಲ್ಯಗಳನ್ನು ಚಂದ್ರಜ್ಞಾನಾಗಮವು –

ಗುರುಶ್ಚ ಗುಣವಾನ್ ಪ್ರಾಜ್ಞಃ ಪರಮಾನಂದಭಾಸಕಃ।
ತತ್ತ್ವಚ್ಛಿವಸಂಸಕ್ತೋ ಮುಕ್ತಿದೋ ನ ತು ಚಾಪರಃ
ಶೈವಸಿದ್ಧಾಂತತತ್ತ್ವಜ್ಞಃ ಪ್ರತಿಷ್ಠಾಮಂತ್ರಪಾರಗಃ।

---

೪೮. ಬಸವಣ್ಣನವರ ವ. ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೧೧೬೫. ಪುಟ ೩೧೮.
೪೯. ಚಂ. ಆ. ಕ್ರಿ. ಪಾ. ಪಟಲ ೨. ಶ್ಲೋಕ ಸಂಖ್ಯೆ ೬೫–೬೬
೫೦. ಸಮಗ್ರ ವಚನ ಸಂಪುಟ ೪, ವಚನ ಸಂಖ್ಯೆ ೧೯೫೬ ಪುಟ ೫೫೯

ಮೋಕ್ಷದಃ ಕರುಣೋಪೇತೋ ವೀತರಾಗೋ ವಿಮತ್ಸರಃ॥
ಕ್ರಿಯಾದಿಜ್ಞಾನಪರ್ಯಂತ ಶಿವತತ್ತ್ವವಿನಿಶ್ಚಯಃ।
ಸಂಪ್ರದಾಯಾಗತಜ್ಞಾನೋ ಗುರುವಂಶಸಮುದ್ಭವಃ॥
ಲಿಂಗಾಂಗಸ್ಥಲಭೇದಜ್ಞಃ ಷಟ್‌ಸ್ಥಲಜ್ಞಾನತತ್ಪರಃ।
ದೀಕ್ಷಾಕರ್ಮಾದಿಕುಶಲಃ ಷಡಧ್ವಜ್ಞಾನವತ್ಸಲಃ
ಶಿವಸ್ಯ ಚ ಗುರೋರ್ಭಕ್ತಃ ಶಿವೈಕಾಹಿತಮಾನಸಃ।
ಶಿವಾರ್ಚನಾಸಕ್ತಚಿತ್ತಃ ಶಿವಧ್ಯಾನೈಕತತ್ಪರಃ॥[೫೧]

ಗುರುವೆಂದರೆ ಗುಣವಂತನು, ಜ್ಞಾನಿಯು, ಪರಮಾನಂದದ ಅನುಭವವನ್ನು ತಂದು ಕೊಡುವವನು, ತತ್ತ್ವಗಳನ್ನು ತಿಳಿದವನು, ಶಿವನಲ್ಲಿ ಅನುರಕ್ತನು, ಮುಕ್ತಿಯನ್ನು ಕೊಡುವವನು, ಶೈವ ಸಿದ್ಧಾಂತದ ತತ್ತ್ವಗಳನ್ನು ಅರಿತವನು, (ಲಿಂಗಾದಿ) ಪ್ರತಿಷ್ಠೆಯ ವಿಧಿ ಮತ್ತು ಮಂತ್ರಗಳಲ್ಲಿ ಪಾರಂಗತನು, ಮೋಕ್ಷವನ್ನು ಅನುಗ್ರಹಿಸುವವನು, ಕರುಣಾಮಯನು, ರಾಗವರ್ಜಿತನು, ಮಾತ್ಸರ್ಯರಹಿತನು, ಕ್ರಿಯಾಪಾದದಿಂದ ಜ್ಞಾನಪಾದದವರೆಗಿನ ಶೈವಾಗಮ ತತ್ತ್ವಗಳ ನಿಶ್ಚಿತ ಜ್ಞಾನವುಳ್ಳವನು, ಸಂಪ್ರದಾಯದಿಂದ ಬಂದ ಜ್ಞಾನವುಳ್ಳವನು, ಗುರುವಂಶದಲ್ಲಿ ಹುಟ್ಟಿದವನು, ಲಿಂಗಸ್ಥಲ ಮತ್ತು ಅಂಗಸ್ಥಲಗಳ ಭೇದವನ್ನು ತಿಳಿದವನು, ಷಟ್‌ಸ್ಥಲಗಳ ಜ್ಞಾನದಲ್ಲಿ ಮಗ್ನನಾದವನು, ದೀಕ್ಷಾಸಂಬಂಧಿ ಕ್ರಿಯೆಗಳಲ್ಲಿ ನಿಷ್ಣಾತನು, ಷಡಧ್ವಜ್ಞಾನದಲ್ಲಿ ಪ್ರೀತಿಯುಳ್ಳವನು, ಶಿವ ಮತ್ತು ಗುರುವಿನ ಭಕ್ತನು, ಶಿವನಲ್ಲಿ ತನ್ಮಯವಾದ ಮನಸ್ಸುಳ್ಳವನು, ಶಿವಾರ್ಚನೆಯಲ್ಲಿ ಆಸಕ್ತವಾದ ಚಿತ್ತವುಳ್ಳವನು ಮತ್ತು ಶಿವಧ್ಯಾನದಲ್ಲಿ ಮೈ ಮರೆತವನು ಆಗಿರಬೇಕೆಂದು ಚಂದ್ರಜ್ಞಾನಾಗಮವು ತಿಳಿಸುತ್ತದೆ. ಇದನ್ನೇ ಪಾರಮೇಶ್ವರಾಗಮದಲ್ಲಿ ಈ ರೀತಿ ವಿವರಿಸಲಾಗಿದೆ:

ಸರ್ವಲಕ್ಷಣಸಂಪನ್ನಂ ಸರ್ವಜ್ಞಂ ಸರ್ವಸಂಮತಮ್॥
ಸದಾಚಾರರತಂ ಶುದ್ಧಂ ಶಿವಭಕ್ತಮಲೋಲುಪಮ್।
ಯಥಾರ್ಥವಾದಿನಂ ಶಾಂತಂ ದ್ವೇಷಾಸೂಯಾದಿವರ್ಜಿತಮ್॥
ವಿದಿತಾಖಿಲಶಾಸ್ತ್ರಾರ್ಥಮಿಂಗಿತಜ್ಞಮನಾಕುಲಮ್।
ಅನರ್ಥಾತುರಮಾತ್ಮಜ್ಞಮಕಾಮುಕಮವಂಚಕಮ್॥
ವಾಗ್ಮಿನಂ ಶಿವತತ್ತ್ವಾರ್ಥಬೋಧಕಂ ಹೃಷ್ಟಮಾನಸಮ್।
ಏತಾದೃಶಗುಣೋಪೇತಮುಪೇಯಾದ್ ಗುರುಮೀಶ್ವರಮ್॥[೫೨]

ಎಲ್ಲಾ ಶುಭಲಕ್ಷಣಗಳಿಂದ ಕೂಡಿದವನು, ಸರ್ವಜ್ಞನು, ಎಲ್ಲರ ಗೌರವಕ್ಕೆ ಪಾತ್ರನು, ಸದಾಚಾರದಲ್ಲಿ ನಿರತನು, ಶುದ್ಧನು, ಶಿವಭಕ್ತನು, ಚಂಚಲತೆ ಇಲ್ಲದವನು,

೫೧. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೪೮–೫೨
೫೨. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೬೩–೬೬

ಸತ್ಯವನ್ನೇ ನುಡಿಯುವವನು, ಶಾಂತನು, ದ್ವೇಷ–ಅಸೂಯೆಗಳಿಲ್ಲದವನು, ಎಲ್ಲಾ ಶಾಸ್ತ್ರಗಳಲ್ಲಿ ಪರಿಣತನು, ರಹಸ್ಯವನ್ನು ತಿಳಿದವನು, ಅವ್ಯಾಕುಲನು, ದ್ರವ್ಯಲೋಭರಹಿತನು, ಆತ್ಮಜ್ಞಾನಿಯು, ವಿಷಯಾಸಕ್ತಿಯಿಲ್ಲದವನು, ವಂಚನೆಯಿಲ್ಲದವನು, ಪ್ರವಚನಪಟುವು, ಶಿವತತ್ತ್ವದ ಮರ್ಮವನ್ನು ತಿಳಿದವನು ಮತ್ತು ಆನಂದ ತುಂಬಿದ ಮನಸ್ಸುಳ್ಳವನು ಆಗಿರುವನು ಎಂದು ಗುರುವಿನ ಲಕ್ಷಣವನ್ನು ವಿವರಿಸಿದೆ. ಸೂಕ್ಷ್ಮಾಗಮವು ಇನ್ನೂ ಮುಂದುವರೆದು –

ಸತ್ಕಲಾಂ ಪ್ರಜಪನ್ ಶಾಂತಃ ಸತ್ಯವಾಗನಹಂಕೃತಿಃ।
ನಿರ್ಮತ್ಸರೋ ನಿರುತ್ಸೇಕಃ ಕಾಮಾದಿಗುಣವರ್ಜಿತಃ ॥
ಸ್ತ್ರೀಸಂಗರಹಿತೋ ದಾಂತಃ ಸಮಸ್ತಾಗಮಪಾರಗಃ।
ವಾಗ್ಮೀ ಗಂಭೀರಃ ಸಂತುಷ್ಟಃ ಪ್ರಗಲ್ಭಃ ಕರುಣಾಸ್ಪದಃ ॥
ಅಧೀತವೇದವೇದಾಂಗಃ ಸರ್ವಸ್ಮೃತಿಷು ಕೋವಿದಃ।
ಪುರಾಣಸಂಹಿತಾವಕ್ತಾ ತದರ್ಥಪ್ರತಿಪಾದಕಃ ॥
ಮಂತ್ರಶಾಸ್ತ್ರಕೃತಾಭ್ಯಾಸೋ ಮಂತ್ರೋದ್ಧಾರವಿಧಾನವಿತ್।
ಶಿವಭಕ್ತಃ ಶಿವಧ್ಯಾನೀ ಗುರುಭಕ್ತೋ ಗುರುಪ್ರಿಯಃ ॥
ಶಿವೈಕಾಹಿತಚಿತ್ತಶ್ಚ ಶಿವಲಿಂಗಾರ್ಚನಪರಃ।
ಸಂಪ್ರದಾಯವಿಶೇಷಜ್ಞಃ ಶಿವಭಕ್ತಜನಪ್ರಿಯಃ ॥
ಸದಾಚಾರೈಕನಿರತಃ ಸರ್ವತ್ರ ಸಮದರ್ಶನಃ।
ಏವಮಾದಿಗುಣೋಪೇತೋ ಗುರುರಿತ್ಯಭಿಧೀಯತೇ॥ [೫೩]

ಮಹಾಮಂತ್ರವನ್ನು ಜಪಿಸುವವನು, ಶಾಂತನು, ಸತ್ಯವಂತನು, ನಿರಹಂಕಾರನು, ಮತ್ಸರವಿಲ್ಲದವನು, ದೋಷರಹಿತನು, ಕಾಮಾದಿಗುಣವರ್ಜಿತನು, ಸ್ತ್ರೀ ಸಂಗವಿಲ್ಲದವನು ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡವನು, ಸಮಸ್ತ ಆಗಮಗಳನ್ನು ಬಲ್ಲವನು, ವಾಗ್ಮಿ, ಗಂಭೀರ ಸ್ವಭಾವದವನು, ಸಂತುಷ್ಟ, ಪ್ರಗಲ್ಭ, ಕರುಣಾಳು, ವೇದವೇದಾಂಗಗಳಲ್ಲಿ ತಿಳುವಳಿಕೆ ಉಳ್ಳವನು, ಎಲ್ಲ ಸ್ಮೃತಿಗಳನ್ನು ಬಲ್ಲವನು ಪುರಾಣ–ಸಂಹಿತೆಗಳನ್ನು ಪ್ರವಚನ ಮಾಡುವವನು ಮತ್ತು ಅವುಗಳ ಅರ್ಥವನ್ನು ತಿಳಿಸಿ ಹೇಳುವವನು, ಮಂತ್ರಶಾಸ್ತ್ರ ಪ್ರವೀಣನು, ಮಂತ್ರೋದ್ಧಾರದ ವಿಧಿ–ವಿಧಾನಗಳನ್ನು ಬಲ್ಲವನು, ಶಿವಭಕ್ತನು, ಶಿವಧ್ಯಾನಿಯು, ಗುರುಭಕ್ತನು ಹಾಗೂ ಗುರುವಿಗೆ ಪ್ರಿಯನಾದವನು, ಶಿವನೊಬ್ಬನಲ್ಲಿಯೇ ಆಸಕ್ತನಾದ ಮನಸ್ಸುಳ್ಳವನು, ಶಿವಲಿಂಗಾರ್ಚನಪರನು, ಸಂಪ್ರದಾಯಗಳನ್ನು ವಿಶೇಷವಾಗಿ ತಿಳಿದವನು, ಶಿವಭಕ್ತರಾದ ಜನರಿಗೆ ಪ್ರೀತಿಪಾತ್ರನು, ಸದಾಚಾರದಲ್ಲೇ ನಿರತನು, ಸರ್ವತ್ರ ಸಮದರ್ಶಿಯಾದವನೇ ಗುರುವೆಂದು ತಿಳಿಸಿದೆ.

ಗುರುವಿನ ನಿರೂಪಣೆಗೈಯುವಲ್ಲಿ ಚಂದ್ರಜ್ಞಾನಾಗಮವು ಒಂದು ವಿಶೇಷ ಹೇಳಿಕೆಯನ್ನು ನೀಡುತ್ತದೆ. "ಗೃಹಸ್ಥನು ಮಾತ್ರ ಗುರುವಾಗುತ್ತಾನೆ. ಸಂನ್ಯಾಸಿ (ವಿರಕ್ತ)

---

೫೩. ಸೂ.ಆ.,ಪಟಲ ೫, ಶ್ಲೋಕ ಸಂಖ್ಯೆ ೪–೯

ಎಂದೂ ಗುರುವಾಗುವುದಿಲ್ಲ. ಹಾಗೆಯೇ ವಾನಪ್ರಸ್ಥ ಸಂನ್ಯಾಸಿಗಳ ಗುರುತ್ವವೂ ನಿಷ್ಫಲವಾಗುತ್ತದೆ"[೫೪] ಎಂದು ತಿಳಿಸಿದೆ. ಏಕೆಂದರೆ ಗೃಹಸ್ಥನಿಗೆ ತನ್ನ ಕುಟುಂಬ ಸಂರಕ್ಷಣೆಯೊಂದಿಗೆ ಸಾಮಾಜಿಕ ಜವಾಬ್ದಾರಿ ಇರುತ್ತದೆ. ನಿರಾಭಾರಿಯಾದ ವಿರಕ್ತ ಅಥವಾ ಸಂನ್ಯಾಸಿಗೆ ಸಾಮಾಜಿಕ ಜವಾಬ್ದಾರಿ ಇರುವುದಿಲ್ಲ. ಆತ ಚರಮೂರ್ತಿಯಾಗಿ ಸಂಚರಿಸುತ್ತಾನೆ. ಈ ದೃಷ್ಟಿಯಿಂದ ಗುರುತ್ವ ಅವನಿಗೆ ಸಿದ್ಧಿಸುವುದಿಲ್ಲ. ಪ್ರಾಚೀನ ಕಾಲದಲ್ಲಿ ಗುರುಗಳು ಉಪನಿಷತ್ತಿನ ಕಾಲದ ಋಷಿಗಳಂತೆ ಗೃಹಸ್ಥರಾಗಿರುತ್ತಿದ್ದರೆಂದು ಕಾಣುತ್ತದೆ. ಪರಮಜ್ಞಾನಿಗಳು, ಪವಿತ್ರ ಚರಿತ್ರರೂ ಆಗಿದ್ದ ಗುರುಗಳಿಗೆ ಗೃಹಸ್ಥ ಜೀವನ ಅಪವಿತ್ರವಾಗಿರಲಿಲ್ಲ, ಅಡ್ಡಿಯೂ ಆಗಿರಲಿಲ್ಲ. ಕಾಲ ಕಳೆದಂತೆ ಜೈನ-ಬೌದ್ಧ ಸಂನ್ಯಾಸಿಗಳ ಪ್ರಭಾವದಿಂದ ವಿಶೇಷವಾಗಿ ಗುರುಗಳು ಬ್ರಹ್ಮಚಾರಿಗಳಾಗಿರಬೇಕು ಎನ್ನುವ ಪರಿಕಲ್ಪನೆ ಸಮಾಜದಲ್ಲಿ ಬೆಳೆದು ಬಂದಿರಬೇಕೆಂದು ತೋರುತ್ತದೆ.

ಒಟ್ಟಿನಲ್ಲಿ ಜ್ಞಾನಿಯು, ಪರಮಾನಂದದ ಅನುಭವವನ್ನು ತಂದು ಕೊಡುವವನು, ತತ್ತ್ವಗಳನ್ನು ತಿಳಿದವನು, ಆಚಾರಸಂಪನ್ನನೂ, ಸತ್‌ಕ್ರಿಯಾನಿರತನೂ ಆದ ಗುರು ದೊರೆತ ನಂತರ ಶಿಷ್ಯನು (ದೀಕ್ಷಾಪೇಕ್ಷೆಯುಳ್ಳವನು) ಆ ಗುರುವಿನ ಬಳಿ ಹೋಗಿ ಭಕ್ತಿಪೂರ್ವಕ ಸಾಷ್ಟಾಂಗ ನಮಸ್ಕರಿಸಿ, ಕೈಗಳನ್ನು ಬೊಗಸೆಯಾಗಿಸಿ ನಿಂತು, 'ಶಿಷ್ಯನಾದ ನನಗೆ ಇಷ್ಟಾರ್ಥ ಸಿದ್ಧಿಗಳನ್ನು ಕೊಡುವ, ವೀರಶೈವ ದೀಕ್ಷೆಯನ್ನು ಅನುಗ್ರಹಿಸು' ಎಂದು ಪ್ರಾರ್ಥಿಸಿಕೊಳ್ಳಬೇಕು.

ಹೀಗೆ ಪ್ರಾರ್ಥನೆಗೈದ ಶಿಷ್ಯನಿಗೆ ಗುರುವು ದೀಕ್ಷೆಯನ್ನು ಕೊಡಲು ಮನಸ್ಸು ಮಾಡಿದರೆ, ಆ ಶಿಷ್ಯನನ್ನು ಪರೀಕ್ಷಿಸಿಯೇ ಅವನಿಗೆ ದೀಕ್ಷೆಯನ್ನು ಕೊಡಬೇಕೆಂದು ಆಗಮ ಮತ್ತು ವಚನಗಳು ಪ್ರತಿಪಾದಿಸಿ ಶಿಷ್ಯನ ಗುಣಮೌಲ್ಯಗಳನ್ನು ವಿವರಿಸಿವೆ.

ಶಿಷ್ಯನ ಸ್ವರೂಪ –

'ಕಿಂ ವಾ ಶಿಷ್ಯಸ್ಯ ಲಕ್ಷಣಮ್' (ಶಿಷ್ಯನ ಲಕ್ಷಣಗಳೇನು?)[೫೫] ಎಂಬ ಪಾರ್ವತಿಯ ಪ್ರಶ್ನೆಗೆ ಪರಶಿವನು–

ಶುಚಿಃ ಸುಶೀಲೋ ಧರ್ಮಿಷ್ಠಃ ಸತ್ಯವಾಗ್ವಿಜಿತೇಂದ್ರಿಯಃ॥
ಅಹಂಕಾರವಿನಿರ್ಮುಕ್ತೋ ರಾಗದ್ವೇಷಾದಿವರ್ಜಿತಃ ॥
ಗುರುಭಕ್ತೋ ಜಿತಕ್ರೋಧೋ ಗುರ್ವಾಜ್ಞಾಪರಿಪಾಲಕಃ।
ವಿಷಯಾಸಂಗನಿರ್ಮುಕ್ತೋ ವಿನಿರ್ಜಿತಮದಾಷ್ಟಕಃ ॥
ಕಾ ವಾ ಗತಿರ್ಮಮೋತ್ಯೇವಂ ಧ್ಯಾಯಮಾನೋ ದಿವಾನಿಶಮ್॥[೫೬]

---

೫೪. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೫೩
೫೫. ಸೂ.ಆ.ಕ್ರಿಪಾ.ಪಟಲ ೫, ಶ್ಲೋ.ಸಂ ೨
೫೬ ಸೂ.ಆ.ಕ್ರಿಪಾ.ಪಟಲ ೫, ಶ್ಲೋ.ಸಂ ೩೧–೩೩

ದೈಹಿಕವಾಗಿ, ಮಾನಸಿಕವಾಗಿ ಶುದ್ಧನೂ, ಶೀಲಸಂಪನ್ನನೂ, ಧರ್ಮಿಷ್ಠನೂ, ಸತ್ಯವಾದಿಯು, ಜಿತೇಂದ್ರಿಯನೂ, ನಿರಹಂಕಾರಿಯೂ, ರಾಗದ್ವೇಷಾದಿಗಳಿಲ್ಲದವನೂ ಆಗಿರಬೇಕು. ಗುರುವಿನಲ್ಲಿ ಭಕ್ತಿಯುಳ್ಳವನೂ, ಕ್ರೋಧವಿಲ್ಲದವನೂ, ಗುರುವಿನಾಜ್ಞೆಯನ್ನು ಪರಿಪಾಲಿಸತಕ್ಕವನೂ,ವಿಷಯಾಸಕ್ತಿರಹಿತನೂ, ಅಷ್ಟಮದಗಳಿಲ್ಲದವನೂ ಆಗಿರಬೇಕು ಅಲ್ಲದೇ ಮುಂದೆ ನನಗೆ ಯಾವ ಗತಿ ಉಂಟಾಗುತ್ತದೆ? ಎಂದು ಹಗಲಿರುಳು ಚಿಂತಿಸುವವನಾಗಿರಬೇಕೆಂದು ಸೂಕ್ಷ್ಮಾಗಮವು ತಿಳಿಸುತ್ತದೆ. ಪಾರಮೇಶ್ವರಾಗಮವೂ ಸಹ ಇದನ್ನೇ ಪ್ರತಿಪಾದಿಸುತ್ತಾ –

ಕುಶಲಂ ಶ್ರೀಗುರೋರ್ಭಕ್ತಂ ಶ್ರೀಗುರೋಃ ಪ್ರಿಯಕಾರಿಣಮ್।
ಕರ್ಮಣಾ ಮನಸಾ ವಾಚಾ ಛಾಯೇವಾನುಚರಂ ಸದಾ।
ಗುರುಮಂತ್ರಾತ್ಮದೇವೇಷು ತಥೈವಾಸನಮುದ್ರಯೋಃ
ಅಭೇದಭಾವನಾಧೀರಂ ಸತ್ಯವಾದಿನಮಾಸ್ತಿಕಮ್।
ಪ್ರಾಣಾರ್ಥಮಾನವಸುಭಿರ್ಮನೋವಾಕ್ಕಾಯಕರ್ಮಭಿಃ
ಸರ್ವದಾ ಸರ್ವಭಾವೇನ ಗುರುಶುಶ್ರೂಷಣೇ ರತಮ್।
ಅಪ್ರಮತ್ತಮುದಾರಾಂಗಂ ದೃಢಚಿತ್ತಮನಾಮಯಮ್
ಅಸತ್ಯವಾದರಹಿತಮವಂಚಕಮದುರ್ಹೃದಮ್।
ಅನರ್ಥಾಲೋಭಮರ್ಥಾಢ್ಯಂ ಮೃದುಸಂಭಾಷಣಪ್ರಿಯಮ್॥[೫೭]

ಕುಶಲನು, ಶ್ರೀಗುರುವಿನ ಭಕ್ತನು, ಶ್ರೀಗುರುವಿಗೆ ಪ್ರಿಯವಾದುದನ್ನೇ ಮಾಡುವವನು, ಕ್ರಿಯೆ, ಮನಸ್ಸು ಮತ್ತು ಮಾತುಗಳಿಂದ ಯಾವಾಗಲೂ ಗುರುವನ್ನು ನೆರಳಿನಂತೆ ಹಿಂಬಾಲಿಸುವವನು, ಗುರು–ಮಂತ್ರ–ಆತ್ಮ–ದೇವತೆಗಳು–ಆಸನ–ಮುದ್ರೆಗಳಲ್ಲಿ ಅಭೇದ ಭಾವನೆಯಿಂದ ದೃಢವಾಗಿರುವವನು, ಸತ್ಯವನ್ನು ನುಡಿಯುವವನು, ಆಸ್ತಿಕನು, ಪ್ರಾಣ–ಅರ್ಥ–ಮಾನ–ಸಂಪತ್ತು–ಮನಸ್ಸು–ಮಾತು–ಶರೀರ–ಕರ್ಮಗಳಿಂದ ಸದಾ ಎಲ್ಲಾ ಸ್ಥಿತಿಗಳಲ್ಲಿ ಗುರುಸೇವೆಯಲ್ಲಿ ನಿರತನು, ಮೈಮರೆಯದವನು, ಧಾರಾಳ ಮನಸ್ಸಿನವನು, ಸುಳ್ಳು ಮಾತನ್ನು ಆಡದವನು, ವಂಚನೆ ಮಾಡದವನು, ಸಾಧು ಹೃದಯದವನು, ಅರ್ಥಲೋಭವಿಲ್ಲದವನು, ಅರ್ಥವುಳ್ಳವನು, ಮೃದುವಾದ ಸಂಭಾಷಣೆಯನ್ನು ಪ್ರೀತಿಸುವವನು ಆಗಿರಬೇಕೆಂದು ತಿಳಿಸಿದೆ.

ಚಂದ್ರಜ್ಞಾನಾಗಮವೂ ಆದರ್ಶ ಶಿಷ್ಯನ ಗುಣಮೌಲ್ಯಗಳನ್ನು ತಿಳಿಸುತ್ತಾ ಗುರುವಿನಲ್ಲಿ ಭಕ್ತಿ, ಗುರುಸೇವೆಯಲ್ಲಿ ನಿಷ್ಠೆ, ಗುರುಗಳ ಆಜ್ಞಾಪರಿಪಾಲನೆ, ಗುರುವು ಬೈದರೂ, ಹಂಗಿಸಿದರೂ, ಹೊಡೆದರೂ, ಶಿಷ್ಯ ಕೋಪಿಸಿಕೊಳ್ಳಬಾರದು. ಇಂತಹ ಸಹನಾಮೂರ್ತಿ ಶಿಷ್ಯನಿರಬೇಕೆಂದು ತಿಳಿಸುತ್ತದೆ.[೫೮]

---

೫೭. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೭೦–೭೪

೫೮. ಚಂ.ಆ. ಕ್ರಿಪಾ. ಪಟಲ ೨. ಶ್ಲೋಕ ಸಂಖ್ಯೆ ೭೮–೮೦

ಏವಂಗುಣಾನ್ವಿತಂ ಶಿಷ್ಯಂ ಪರೀಕ್ಷ್ಯ ಗುರುರಾದರಾತ್।
ಶಿಕ್ಷಯೇತ್ತಸ್ಯ ವೈ ಚಿತ್ತಂ ಯಥಾಭವತಿ ನಿರ್ಮಲಮ್॥[೫೯]

ಈ ಗುಣಗಳಿಂದ ಕೂಡಿದ ಶಿಷ್ಯನನ್ನು ಶ್ರೀಗುರುದೇವನು ಆದರದಿಂದ ಪರೀಕ್ಷಿಸಿ, ಆತನ ಚಿತ್ತ ನಿರ್ಮಲವಾಗುವಂತೆ ಬೋಧಿಸಿ ದೀಕ್ಷೆಯನ್ನು ನೀಡಬೇಕೆಂದು ತಿಳಿಸಿವೆ.

ಗುರುವು ದೀಕ್ಷೆಯನ್ನು ಅನುಗ್ರಹಿಸುವ ಕ್ರಮ –

ಆಣವಮಲ, ಮಾಯಾಮಲ ಮತ್ತು ಕಾರ್ಮಿಕ ಮಲಗಳು ಸ್ಥೂಲ–ಸೂಕ್ಷ್ಮ–ಕಾರಣ ಶರೀರಿಗಳನ್ನು ಆವರಿಸಿ ಬಂಧನಕ್ಕೊಳಪಡಿಸುವುದರಿಂದ ಆತ್ಮನಿಗೆ ಪಶುತ್ವ (ಜೀವಭಾವ) ಉಂಟಾಗುವುದು. ಇದರಿಂದ ಆತ್ಮನು ಸಂಸಾರ ದುಃಖಕ್ಕೆ ಗುರಿಯಾಗುವನು. ಸದ್ಗುರುವಾದವನು ಶಿಷ್ಯನ ತನುತ್ರಯದಲ್ಲಿರುವ ಮಲತ್ರಯಗಳನ್ನು ವೇಧಾ, ಮಂತ್ರ, ಕ್ರಿಯೆಗಳೆಂಬ ತ್ರಿವಿಧ ದೀಕ್ಷಾಬಲದಿಂದ ಸುಟ್ಟು, ಸ್ಥೂಲ–ಸೂಕ್ಷ್ಮ–ಕಾರಣ ಶರೀರಿಗಳಲ್ಲಿ ಇಷ್ಟ–ಪ್ರಾಣ–ಭಾವವೆಂಬ ತ್ರಿವಿಧ ಲಿಂಗಗಳನ್ನು ಸ್ಥಾಪಿಸುವನು.

ಕಾರುಣ್ಯನಿಧಿಯಾದ ಪರಮಗುರುವು ಶಿಷ್ಯನನ್ನು ಕೃಪಾದೃಷ್ಟಿಯಿಂದ ನೋಡಿ, ಆತನ ಮಸ್ತಕದ ಮೇಲೆ ಹಸ್ತವನ್ನಿಟ್ಟು, ಆತನಲ್ಲಿ ಶಿವಕಲೆಯನ್ನು ಜಾಗೃತಗೊಳಿಸಿ, 'ನೀನು ಶಿವನ ಸ್ವರೂಪನೇ ಇದ್ದೀಯೆ' ಎಂದು ಗುರು ಬೋಧಿಸುತ್ತಾನೆ. ಅದನ್ನು ಶಿಷ್ಯನು ಅಷ್ಟೇ ಶ್ರದ್ಧೆಯಿಂದ ನಂಬುತ್ತಾನೆ. ಇದರಿಂದ ಶಿಷ್ಯನ ಅಜ್ಞಾನ ಅಳಿದು, ಆಣವಮಲ ದೂರಸರಿಯುತ್ತದೆ; ಶಿವಭಾವ ಉದಯವಾಗುತ್ತದೆ. ಈ 'ಶಿವೋಹಂ' ಭಾವವೇ ಭಾವಲಿಂಗವೆಂದು ಕರೆಯಲ್ಪಟ್ಟಿದೆ. ಹೀಗೆ ಶಿಷ್ಯನ ಕಾರಣ ತನುವಿನಲ್ಲಿ ಭಾವಲಿಂಗವನ್ನು ನೆಲೆಗೊಳಿಸುವುದಕ್ಕೆ "ವೇಧಾದೀಕ್ಷೆ" ಎಂದು ಹೆಸರು.

ಶ್ರೀಗುರುವು ಪರಮಪವಿತ್ರವಾದ ಪಂಚಾಕ್ಷರೀ ಮಹಾಮಂತ್ರವನ್ನು ಶಿಷ್ಯನಿಗುಪದೇಶಿಸಿ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಮಾರ್ಪಡಿಸುತ್ತಾನೆ. ಮೂಲಮಂತ್ರವನ್ನು ಮನನಮಾಡುವುದರಿಂದ ಮಾಯಾಮಲವು ಮಾಯವಾಗಿ 'ನಾನು ಚಿದ್ರೂಪನು' ಎಂಬ ಭಾವ ಉದಯವಾಗುತ್ತದೆ. ಇದನ್ನೇ ಪ್ರಾಣಲಿಂಗವೆಂದು ಕರೆಯಲಾಗಿದೆ. ಹೀಗೆ ಪಂಚಾಕ್ಷರೀ ಮಂತ್ರವನ್ನು ಉಪದೇಶಿಸಿ ಮಾಯಾಮಲವನ್ನು ನಿವಾರಿಸಿ ಪ್ರಾಣಲಿಂಗವನ್ನು ನೆಲೆಗೊಳಿಸುವ ದೀಕ್ಷೆಯೇ ಮಂತ್ರದೀಕ್ಷೆ.

ಶಿವದೀಕ್ಷೆಯ ಅಂಗವಾಗಿ ಷಡಧ್ವಶುದ್ಧಿಯಿಂದ ಸಂಸ್ಕರಿಸಿದ ಲಿಂಗವನ್ನು ಶಿಷ್ಯನ ಹಸ್ತದಲ್ಲಿ ಸ್ಥಾಪಿಸುವುದು ಕ್ರಿಯಾದೀಕ್ಷೆ.[೬೦] ಹೀಗೆ ಶಿಷ್ಯನಿಗೆ ಪ್ರಾಪ್ತವಾದ ಶಿವಲಿಂಗವನ್ನು ಇಷ್ಟಲಿಂಗವೆಂದು ಕರೆಯುತ್ತಾರೆ. ಇದರಿಂದ ಸಾಧಕನ ಕಾರ್ಮಿಕ ಮಲವು ನಾಶವಾಗುತ್ತದೆ.

ಹೀಗೆ ಗುರು ಶಿಷ್ಯನಿಗೆ ತ್ರಿವಿಧದೀಕ್ಷೆ ಕೊಡುವುದರಿಂದ ಶಿಷ್ಯನು ತನ್ನ ತನುತ್ರಯ

೫೯. ಸೂ.ಆ.ಕ್ರಿ.ಪಾ.ಪಟಲ ೫, ಶ್ಲೋಕ ಸಂಖ್ಯೆ ೩೩

೬೦. ಕಾ.ಆ. ಪಟಲ ೧, ಶ್ಲೋಕ ಸಂಖ್ಯೆ ೧೪,

ಗಳಿಗಂಟಿಕೊಂಡ ಮಲತ್ರಯಗಳನ್ನು ಕಳೆದುಕೊಂಡು ಸರ್ವಾಂಗಲಿಂಗ ಸಿದ್ಧಿ ಪಡೆಯುವನು. ಗುರೂಪದೇಶದಂತೆ ಲಿಂಗಧಾರಣ, ಲಿಂಗಪೂಜೆ, ಶಿವಮಂತ್ರ ಜಪ, ಶಿವತತ್ವಾನುಸಂಧಾನ ಮುಂತಾದ ಜ್ಞಾನ ಕ್ರಿಯಾತ್ಮಕವಾದ ಆಚರಣೆಗಳನ್ನು ದೇಹವಿರುವರೆಗೆ ಆಚರಿಸುತ್ತ ಇರುವೆನು ಎಂದು ಪ್ರತಿಜ್ಞೆ ಮಾಡಿ ಶಿಷ್ಯನು ಹಾಗೆಯೇ ನಡೆಯಬೇಕಾಗುತ್ತದೆ. ಈ ದೀಕ್ಷಾವಿಧಿಯು ಕುಲ-ಜಾತಿ-ಲಿಂಗಗಳ ತಾರತಮ್ಯವಿಲ್ಲದೇ ಸ್ತ್ರೀಪುರುಷರೆಲ್ಲರಿಗೂ ಸಮಾನವಾದುದಾಗಿರುತ್ತದೆ. ಹೀಗೆ ಅನಂತವಾದ ಆಧ್ಯಾತ್ಮಿಕ ಅನುಭವದತ್ತ ಕರೆದೊಯ್ಯಲು ಮಾರ್ಗದರ್ಶಕನೇ ಮಹಾಗುರು.

ಕಾರಣ ಲಿಂಗದೀಕ್ಷೆಯನ್ನಿತ್ತು ಭವಿಯನ್ನು ಭಕ್ತನನ್ನಾಗಿ ಮಾಡಿ ಸಾಧನೆಯಲ್ಲಿ ತೊಡಗಿಸುವ ಗುರುವಿನ ಬಗ್ಗೆ ವಚನಕಾರರು ಅತ್ಯಂತ ಭಕ್ತಿಯಿಂದ ಕೊಂಡಾಡಿದ್ದಾರೆ. ಮಹಾದೇವಿಯಕ್ಕನು ನರಜನ್ಮವ ತೊಡೆದು ಹರಜನ್ಮವ ಮಾಡಿದವನೆಂದೂ, ಭವಬಂಧನ ಬಿಡಿಸಿ ಪರಮ ಸುಖವ ತೋರಿದವನೆಂದೂ ಗುರುವಿನ ಮಹಾತ್ಮೆಯನ್ನು ಹಾಡಿ ಹರಸಿದ್ದಾಳೆ.

'ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ ನಮೋ
ಭವಬಂಧನವ ಬಿಡಿಸಿ ಪರಮಸುಖವ ತೋರಿದ ಗುರುವೆ ನಮೋ
ಭವಿಯೆಂಬುದ ತೊಡೆದು ಭಕ್ತೆಯೆಂದೆನಿಸಿದ ಗುರುವೆ ನಮೋ
ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೆ, ನಮೋ ನಮೋ'[೬೧]

ಎಂದಿದ್ದಾರೆ. ಜೇಡರ ದಾಸಿಮಯ್ಯನವರು ಇದನ್ನೇ ಅಭಿವ್ಯಕ್ತಗೊಳಿಸುತ್ತ –

ಘಟದೊಳಗೆ ತೋರುವ ಸೂರ್ಯನಂತೆ, ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು.
ಇದ್ದರೇನು ? ಅದಕೂಡವರೆ ಗುರುವಿನಿಂದಲ್ಲದಾಗದು ಕಾಣಾ ರಾಮನಾಥಾ.[೬೨]

ಎಂದಿದ್ದಾರೆ. ಷಣ್ಮುಖ ಸ್ವಾಮಿಗಳೂ ಸಹ ಗುರುವಿನ ಮಹಿಮೆಯನ್ನು ಕೊಂಡಾಡುತ್ತ

ಸಕಲ ವಿಸ್ತಾರದೊಳಗೆಲ್ಲ ಲಿಂಗವ ತೋರಿದ.
ಆ ಲಿಂಗದೊಳಗೆ ಎನ್ನ ತೋರಿದ. ಎನ್ನೊಳಗೆ ತನ್ನ
ತೋರಿದ ಮಹಾಗುರುವಿಂಗೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ![೬೩]

ಎಂದಿದ್ದಾರೆ. ಹೀಗೆ ಶಿಷ್ಯನ ಭವಿತನವನ್ನು ಕಳೆದು 'ಶಿವೋಹಂ' ಭಾವವನ್ನು ಮೂಡಿಸುವ ಗುರುವಿನ ಪರಿಯನ್ನು ಕೊಂಡಾಡುತ್ತ ಅಕ್ಕಮಹಾದೇವಿಯವರು –

ಒಳಗೆ ಶೋಧಿಸಿ ಹೊರಗೆ ಶುದ್ಧಯಿಸಿ, ಒಳಹೊರಗೆಂಬ
ಉಭಯ ಶಂಕೆಯ ಕಳೆದು, ಸ್ಫಟಿಕದ ಶಲಾಕೆಯಂತೆ
ತಳವೆಳಗು ಮಾಡಿ, ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ,

೬೧. ಸಮಗ್ರ ವಚನ ಸಂಪುಟ ೫, ವಚನ ಸಂಖ್ಯೆ ೨೫೧. ಪುಟ ೭೪
೬೨. ಸಮಗ್ರ ವಚನ ಸಂಪುಟ ೭, ಸಂಕೀರ್ಣ ವ.ಸಂ. ೨, ವಚನ ಸಂಖ್ಯೆ ೭೯೦. ಪುಟ ೨೪೭
೬೩. ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವ.ಸಂ. ೬, ವಚನ ಸಂಖ್ಯೆ ೨೮೬. ಪುಟ ೧೮೦

ಶಿಷ್ಯನ ಸರ್ವ ಪ್ರಪಂಚ ನಿವೃತ್ತಿಯಂ ಮಾಡಿ ನಿಜೋಪದೇಶವನಿತ್ತು
ಆ ಶಿಷ್ಯನ ನಿಜದಾದಿಯನ್ನೈದಿಸುವನೀಗ ಜ್ಞಾನಗುರು.
ಅವನ ಶ್ರೀಪಾದಕ್ಕೆ ನಮೋ ನಮೋ ಎಂಬೆ ಕಾಣಾ ಚೆನ್ನಮಲ್ಲಿಕಾರ್ಜುನಾ.[೬೪]

ಎಂದಿದ್ದಾರೆ. ಇದನ್ನೇ ಷಣ್ಮುಖಸ್ವಾಮಿಗಳು ಅತ್ಯಂತ ಅರ್ಥವತ್ತಾಗಿ ಹೀಗೆ ನಿರೂಪಿಸಿದ್ದಾರೆ, 'ಎನ್ನ ಕರಕಮಲಮಧ್ಯದಲ್ಲಿ ಪರಮನಿರಂಜನದ ಕುರುಹ ತೋರಿದ; ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ, ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ. ಆ ಬೆಳಗಿನ ನಿಲುವಿನೊಳಗೆ ಎನ್ನ ತೋರಿದ. ಎನ್ನೊಳಗೆ ತನ್ನ ತೋರಿದ. ತನ್ನೊಳಗೆ ಎನ್ನನಿಂಬಿಟ್ಟುಕೊಂಡ ಮಹಾಗುರುವಿಂಗೆ ನಮೋ ನಮೋ ಎನುತಿರ್ದೆನಯ್ಯಾ ಅಖಂಡೇಶ್ವರಾ'[೬೫] ಎಂದು ಜೀವ ಶಿವರ ಐಕ್ಯವನ್ನು ಸಾಧಿಸಿಕೊಡುವ ಗುರುವಿಗೆ ಹೃತ್ಪೂರ್ವಕ ವಂದನೆಗೈದಿದ್ದಾರೆ.

ಹೀಗೆ ತನು, ಮನ, ಪ್ರಾಣಕ್ಕೆ ಸಂಸ್ಕಾರಗೈಯುವುದರ ಮೂಲಕ ದೀಕ್ಷೆಯನ್ನು, ಶಿಕ್ಷಣವನ್ನು ಮತ್ತು ಜ್ಞಾನವನ್ನು ನೀಡುವ ದೃಷ್ಟಿಯಿಂದ ಗುರುವಿನಲ್ಲಿಯೂ ಮೂರು ಹಂತಗಳನ್ನು ಮಾಡಲಾಗಿದೆ. ಜೀವಾತ್ಮನಲ್ಲಿಯ ಪಾಶ ಬಂಧನಗಳನ್ನು ದೂರಮಾಡಿ ಪರಮಜ್ಞಾನವನ್ನು ಶಿಷ್ಯನಿಗೆ ದೀಕ್ಷಾ ಸಮಯದಲ್ಲಿ ಪ್ರದಾನ ಮಾಡುವವನನ್ನು ದೀಕ್ಷಾ ಗುರು ಎಂದೂ, ಶಿಷ್ಯನಿಗೆ ಯುಕ್ತಾಯುಕ್ತ ವಿವೇಕವನ್ನೂ, ಗುರು-ಲಿಂಗ-ಜಂಗಮ ಒಂದೇ ಸ್ವರೂಪ ಎಂಬ ಜ್ಞಾನವನ್ನು, ಹಾಗೂ 'ಮಾಡು-ಬಿಡು' ಗಳನ್ನು ಸ್ಪಷ್ಟೀಕರಿಸುವವನನ್ನು ಶಿಕ್ಷಾಗುರು ಎಂದೂ, ಆಚರಣೆಯ ವೇಳೆಯಲ್ಲಿ ಸಂದೇಹ ಪ್ರಾಪ್ತವಾದರೆ ಅದನ್ನು ಯುಕ್ತ ರೀತಿಯಲ್ಲಿ ನಿವಾರಿಸಿ, ಸಮೀಚೀನ ಜ್ಞಾನವನ್ನು ದೊರಕಿಸುವವನನ್ನು ಜ್ಞಾನಗುರುವೆಂದು ಗುರುವನ್ನು ಆಗಮದಲ್ಲಿ ಮೂರು ವಿಧವಾಗಿ ವಿಂಗಡಿಸಿರುವರು. ಒಬ್ಬರಿಂದಲೂ ಈ ಮೂರು ಕ್ರಿಯೆಗಳೂ ನಡೆಯಬಹುದು. ಹೀಗೆ ಗುರುವು ದೀಕ್ಷಾ ಶಿಕ್ಷಾ ಮೋಕ್ಷಗುರುವಾಗಿ ಸಂಸ್ಕಾರವಿತ್ತು ಅಂಗನ ಮಲತ್ರಯಗಳನ್ನು ಮಾಣಿಸಿ ಜ್ಞಾನತ್ರಯಗಳನ್ನು ಕರುಣಿಸುತ್ತಾನೆಂದು ಆಗಮಗಳು ವಿವರಿಸಿವೆ.[೬೬]

ಇದೇ ವಿಭಾಗ ಕ್ರಮವನ್ನು ವಚನದಲ್ಲಿಯೂ ನಾವು ಕಾಣಬಹುದು. ಮೋಳಿಗೆ ಮಾರಯ್ಯನವರು,

ಕರ್ಮ, ಕ್ರೀ, ಆಚಾರ ಸಂಬಂಧವ ಸಂಬಂಧಿಸಿ ಮಾಡುವಲ್ಲಿ ದೀಕ್ಷಾಗುರು;
ಆ ಕ್ರೀ ತಪ್ಪಿದಲ್ಲಿ ಬಂಧನವ ಮಾಡುವಲ್ಲಿ ಶಿಕ್ಷಾಗುರು;
ಇಷ್ಟಕಾಮ್ಯ ಮೋಕ್ಷಂಗಳ ಗೊತ್ತುಗೆಡಿಸಿ ನಿಶ್ಚೈಸಿ[೬೭] ಮಾಡುವಲ್ಲಿ ಮೋಕ್ಷಗುರು;
ಇಂತೀ ಭೇದವನರಿಯಬಲ್ಲಡೆ ಪರಮಗುರು'

೬೪. ಸಮಗ್ರ ವಚನ ಸಂಪುಟ ೫, ವಚನ ಸಂಖ್ಯೆ ೧೩೩. ಪುಟ ೪೨

೬೫. ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವ.ಸಂ. ೯, ವಚನ ಸಂಖ್ಯೆ ೨೯೯. ಪುಟ ೧೮೪

೬೬ ಸೂ.ಆ.ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೧೦-೧೩

೬೭. ವಚನಗಳಲ್ಲಿ ವೀರಶೈವಧರ್ಮ ಡಾ. ಎಚ್. ತಿಪ್ಪೇರುದ್ರಸ್ವಾಮಿ. ಪು.ಸಂ.೧೯೦

ಎಂದಿದ್ದಾರೆ. ಇದನ್ನೇ ಇನ್ನೂ ಸ್ಪಷ್ಟವಾಗಿ ಶಿವಲೆಂಕ ಮಂಚಣ್ಣನವರ ವಚನವು ನಿರೂಪಿಸುತ್ತದೆ.

'ಅಂಗಕ್ಕೆ ಲಿಂಗವ ಕೊಟ್ಟವ ಆಚಾರ್ಯನಾದ,
ಮನಕ್ಕೆ ಅರಿವ ತೋರಿದಾತ ಮೋಕ್ಷ ಆಚಾರ್ಯನಾದ,
ಮೋಕ್ಷ ವಿಮೋಕ್ಷವಾಗಿ ಉಭಯದ ಗೊತ್ತು ತೋರಿ
ಕಾಯದ ಕರ್ಮವ ಕೆಡಿಸಿ, ಜೀವನ ಭವವ ಭೇದಿಸಿ,
ತದ್ರೂಪ ತೋರಿದಾತ ಜ್ಞಾನಗುರು.
ಆತ ಪ್ರಕಾಶ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವು ತಾನೇ.'[೧೮]

ಎನ್ನುವ ಮೂಲಕ ಗುರುವು ಇಷ್ಟಲಿಂಗವೆಂಬ ಕುರುಹಿನ ಮೂಲಕ ಅರುಹಿನ ಕಳೆಯನ್ನೂ, ಜ್ಞಾನದ ಬೆಳಗನ್ನೂ ತೋರಿಸಿ ತ್ರಿವಿಧ ರೂಪದಲ್ಲಿ ಶಿಷ್ಯನ ಭವಪಾಶವನ್ನು ಹರಿದು ಶಿವಸಂಸ್ಕಾರಿಯನ್ನಾಗಿ ಮಾಡುತ್ತಾನೆ ಎಂದು ವಿವರಿಸಿದ್ದಾನೆ.

ಆದರೆ ಗುರುವಿನ ಅನುಗ್ರಹ ಪಡೆದ ಮಾತ್ರಕ್ಕೆ ಶಿಷ್ಯನ ಭವಬಂಧನ ಹರಿಯುತ್ತದೆಂಬ ಮಾತನ್ನು ಶರಣರು ಒಪ್ಪುವುದಿಲ್ಲ. ಏಕೆಂದರೆ ಸದ್ಗುರುವಿನ ಕಾರುಣ್ಯವಾದರೂ ಅದನ್ನು ಸಾಧಿಸುವ ನಿಷ್ಠೆ ಶಿಷ್ಯನಲ್ಲಿರಬೇಕು. ಇದನ್ನೇ ಸಕಲೇಶ ಮಾದರಸರು–

ಏರಿಯ ಕಟ್ಟಬಹುದಲ್ಲದೆ ನೀರ ತುಂಬಬಹುದೆ ?
ಕೈದುವ ಕೊಡಬಹುದಲ್ಲದೆ ಕಲಿತನವ ಕೊಡಬಹುದೆ ?
ವಿವಾಹವ ಮಾಡಬಹುದಲ್ಲದೇ ಪುರುಷತನವ ಹರಸಬಹುದೇ ?
ಘನವ ತೋರಬಹುದಲ್ಲದೆ ನೆನಹ ನಿಲಿಸಬಹುದೆ ?
'ಓದು ಒಕ್ಕಾಲು ಬುದ್ಧಿ ಮುಕ್ಕಾಲು' ಎಂಬ ಲೋಕದ ಗಾದೆಮಾತಿನಂತೆ
ಸದ್ಗುರು ಕಾರುಣ್ಯವಾದರೂ ಸಾಧಿಸಿದವನಿಲ್ಲ, ಸಕಳೇಶ್ವರಾ.[೧೯]

ಎಂದು ಸದ್ಗುರುವಿನ ಕಾರುಣ್ಯವಾದರೂ ಅದನ್ನು ಸಾಧಿಸುವ ನಿಷ್ಠೆ ಭಕ್ತನಲ್ಲಿ ಇದ್ದಾಗ ಮಾತ್ರ ಸದ್ಗತಿ ಎಂದು ಎಚ್ಚರಿಸಿದ್ದಾರೆ. ಗುರುಕಾರುಣ್ಯ ಮತ್ತು ಶಿಷ್ಯಪ್ರಯತ್ನ ಎರಡೂ ಸೇರಿದಾಗ ಕೊನೆಯಲ್ಲಿ ಗುರುಶಿಷ್ಯ ಎಂಬ ಭೇದವೇ ಅಳಿಸಿ ಹೋಗುತ್ತದೆ. ಇದನ್ನೇ ಜೇಡರ ದಾಸಿಮಯ್ಯನವರು

'ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದಡೆ
ಆ ತೃಣವನ್ನು ಆ ಕೆಂಡ ನುಂಗುವಂತೆ,
ಗುರುಚರಣದ ಮೇಲೆ ತನುವೆಂಬ ತೃಣವ ತಂದಿರಿಸಿದಡೆ
ಆ ತನುವೆಲ್ಲ ಲಿಂಗಮಯ ಕಾಣಾ ರಾಮನಾಥಾ'[೨೦]

೧೮. ಸಮಗ್ರ ವಚನ ಸಂಪುಟ ೯, ಸಂಕೀರ್ಣ ವ.ಸಂ.೪, ವಚನ ಸಂಖ್ಯೆ ೧೫೪. ಪುಟ ೫೯
೧೯. ಸಮಗ್ರ ವಚನ ಸಂಪುಟ ೯, ಸಂಕೀರ್ಣ ವ.ಸಂ.೪, ವಚನ ಸಂಖ್ಯೆ ೪೦೧. ಪುಟ ೧೪೨
೨೦. ಸಮಗ್ರ ವಚನ ಸಂಪುಟ ೭, ಸಂಕೀರ್ಣ ವ.ಸಂ.೨, ವಚನ ಸಂಖ್ಯೆ ೭೪೦. ಪುಟ ೨೩೬.

ಎಂದಿದ್ದಾರೆ. ಕಾರಣ ರಸಕ್ಕೆ ತಾಮ್ರವನ್ನು ಸುವರ್ಣವನ್ನಾಗಿಸುವ ಶಕ್ತಿಯಿದೆ; ಆದರೆ ತನ್ನಂತೆಯೇ ರಸವಾಗಿಸುವ ಸಾಮರ್ಥ್ಯ ಇಲ್ಲ. ಆದರೆ ಗುರುವಿಗೆ ತನ್ನ ಶಿಷ್ಯನ ಅಜ್ಞಾನವನ್ನು ಹರಿಸಿ, ಅವನನ್ನು ತನ್ನಂತೆಯೇ ಜ್ಞಾನಿಯಾನ್ನಾಗಿಸುವ, ಗುರುವನ್ನಾಗಿ ರೂಪಿಸುವ ಚೈತನ್ಯವಿದೆ. ಇದನ್ನೇ ಉರಿಲಿಂಗಪೆದ್ದಿಗಳು ಉದಾಹರಣೆಯೊಂದಿಗೆ ವಿಶ್ಲೇಷಿಸುತ್ತ –

ಜ್ಯೋತಿಯ ಸಂಗದಿಂದ ಕರ್ಪುರವು ಜ್ಯೋತಿಯಪ್ಪಂತೆ,
ಅಪ್ಪುವಿನ ಸಂಗದಿಂದ ಲವಣವು ಅಪ್ಪುವಪ್ಪಂತೆ, ಶ್ರೀಗುರುವಿನ
ಸಂಗದಿಂದ ಶಿಷ್ಯನು ಶೀಗುರುವಪ್ಪುದು ತಪ್ಪದು.[೭೧]
ಶಿವನಾಣೆ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಎಂದಿದ್ದಾರೆ. ಗುರುವಿನ ಹಸ್ತದೊಳಗಿಪ್ಪ ಶಿಷ್ಯ ಅಪ್ಪಟ ಚಿನ್ನ ಎಂದ ಅಲ್ಲಮಪ್ರಭುಗಳು–

'ಜೋತಿಯೊಳಗಣ ಕರ್ಪುರಕ್ಕೆ, ಅಪ್ಪುವಿನ ಕೈಯಲ್ಲಿಪ್ಪ ಉಪ್ಪಿಂಗೆ,
ಶ್ರೀಗುರುವಿನ ಹಸ್ತದೊಳಗಿಪ್ಪ ಶಿಷ್ಯಂಗೆ
ಈ ಮೂರಕ್ಕೆಯೂ ಬೇರೆ ಕ್ರಿಯಾವರ್ತನೆ ಉಂಟೇ ಗುಹೇಶ್ವರಾ'.[೭೨]

ಎಂದು ಅಲಂಕಾರಿಕವಾಗಿ ನುಡಿದಿದ್ದಾರೆ. ಹೀಗೆ ಆತ್ಮೋನ್ನತಿಗೆ ಕಾರಣವಾಗಬಲ್ಲ ಒಬ್ಬ ಗುರುವನ್ನೇ ಶಿಷ್ಯನ ಕುಟುಂಬದವರೆಲ್ಲ ಆಶ್ರಯಿಸಬೇಕೆಂದು ಆಗಮಗಳು ಸೂಚಿಸುತ್ತವೆ.

ಅನೇಕ ಗುರುವಾದದ ತಿರಸ್ಕಾರ –

ಪಿತೃಬ್ರಾತೃಕಲತ್ರಾಣಾಂ ಪುತ್ರಾದೀನಾಂ ತಥೈವ ಚ।
ದೀಕ್ಷಾಶಿಕ್ಷಾವಿಧಾನಾರ್ಥಮೇಕ ಏವ ಗುರುರ್ಭವೇತ್॥[೭೩]

ತಂದೆ, ಸಹೋದರ, ಹೆಂಡತಿ, ಮಕ್ಕಳು, ಮನೆಯವರಿಗೆಲ್ಲ ದೀಕ್ಷೆ-ಶಿಕ್ಷೆಗಳನ್ನು ಪಡೆಯಲು ಒಬ್ಬನೇ ಗುರುವನ್ನು ಆಶ್ರಯಿಸಬೇಕೆಂದು ಸೂಕ್ಷ್ಮಾಗಮವು ತಿಳಿಸುತ್ತದೆ. ಏಕೆಂದರೆ ಒಂದೇ ಕುಟುಂಬದಲ್ಲಿ ಗುರುಗಳು ಬೇರೆ ಬೇರೆ ಆದರೆ ಅಲ್ಲಿ ಆಚಾರ ಭೇದ ಭಾವಗಳು ಉಂಟಾಗುತ್ತವೆ. ಹಾಗಾಗಿ ಕುಟುಂಬದ ಶಿಷ್ಯರು ಯಾರನ್ನು ಅನುಸರಿಸಬೇಕು? ಯಾರಲ್ಲಿ ಶ್ರದ್ಧೆಯನ್ನಿಡಬೇಕೆಂಬ ಸಂದೇಹದಲ್ಲಿ ಸಿಲುಕಿ ಧರ್ಮದ ಆಚಾರನಿಷ್ಠೆ ಶಿಥಿಲವಾಗುವದು. ಆದ್ದರಿಂದ ಕುಟುಂಬಕ್ಕೆ ಒಬ್ಬನೇ ಗುರುವಿರುವದು ಭಾವನಾತ್ಮಕ ದೃಷ್ಟಿಯಿಂದ ಮತ್ತು ಆಚಾರನಿಷ್ಠೆಯಿಂದ ಸೂಕ್ತವೆಂದು ಸೂಕ್ಷ್ಮಾಗಮವು ನಿರ್ಣಯಿಸಿದೆ. ಇದೇ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತಾ ಆಗಮದ ಬೇರೊಂದು ಶ್ಲೋಕದ ಉಲ್ಲೇಖದೊಂದಿಗೆ ಚೆನ್ನಬಸವಣ್ಣನವರು –

---

೭೧. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ.೧, ವಚನ ಸಂಖ್ಯೆ ೧೪೯೫. ಪುಟ ೪೭೬
೭೨. ಅಲ್ಲಮಪ್ರಭುದೇವರ ವ.ಸಂ, ಸಮಗ್ರ ವಚನ ಸಂಪುಟ ೨, ವಚನ ಸಂಖ್ಯೆ ೬೨. ಪುಟ ೧೮
೭೩. ಸೂ.ಆ.ಕ್ರಿಪಾ. ಪಟಲ ೫, ಶ್ಲೋಕ ಸಂಖ್ಯೆ ೨೯

ಉಪದೇಶವ ಮಾಡುವ ಗುರು ಒಬ್ಬನಲ್ಲದೇ ಇಬ್ಬರು ಸಾಲದು ನೋಡಾ
ಉಪದೇಶವ ಮಾಡುವ ಗುರು ಒಂದಾದಲ್ಲಿ ಲಿಂಗ ಒಂದು,
ಲಿಂಗ ಒಂದಾದಲ್ಲಿ ದೀಕ್ಷೆ ಒಂದು, ದೀಕ್ಷೆ ಒಂದಾದಲ್ಲಿ ಪ್ರಸಾದ ಒಂದು,
ಪ್ರಸಾದ ಒಂದಾದಲ್ಲಿ ಭಕ್ತಿ ಒಂದು, ಭಕ್ತಿ ಒಂದಾದಲ್ಲಿ ಮುಕ್ತಿ ಒಂದು,
ಅದೆಂತೆಂದಡೆ; ಗುರುರೇಕೋ ಲಿಂಗಮೇಕಂ ದೀಕ್ಷಾಮೇಕಾಂ ಪ್ರಸಾದಕಂ
ಏಕಮುಕ್ತಿಮಿದಂ ದೇವಿ ವಿಶೇಷಂ ಶುದ್ಧಭಕ್ತಿಮಾನ್॥
ದ್ವಯೋರ್ಗುರು ದ್ವಯೋರ್ಲಿಂಗ ದ್ವಯೋದೀಕ್ಷಾ ಪ್ರಸಾದಯೋಃ।
ಯಥಾದ್ವಯಮಿದಂ ದೇವಿ ವಿಶೇಷಂ ಪಾತಕಂ ಭವೇತ್॥
ಎಂದುದಾಗಿ ಗುರುವೆರಡಾದಲ್ಲಿ ಲಿಂಗವೆರಡು
ಲಿಂಗವೆರಡಾದಲ್ಲಿ ದೀಕ್ಷೆ ಎರಡು, ದೀಕ್ಷೆ ಎರಡಾದಲ್ಲಿ ಭಕ್ತಿ ಎರಡು,
ಭಕ್ತಿ ಎರಡಾದಲ್ಲಿ ಮುಕ್ತಿ ದೂರ ನೋಡಾ
ಇಂತೀ ಮುಕ್ತಿದೂರರಿಗೆ ಮುಂದೆ ನರಕ ತಪ್ಪದು ನೋಡಾ.
ಇದು ಕಾರಣ ತನ್ನ ಸತಿ-ಸುತ ಪಿತ ಮಾತೆ ಸಹೋದರ
ಭೃತ್ಯ ದಾಸಿಯರಿಗುಪದೇಶವ ಮಾಡುವ ಗುರು ಒಬ್ಬನಲ್ಲದೆ
ಇಬ್ಬರು ಸಲ್ಲದು ನೋಡಾ. ಅದೆಂತೆಂದಡೆ;
ಪತೀ ಪತ್ನಿ ಭ್ರಾತೃಪುತ್ರ ದಾಸಿ ಗೃಹಚರಾದಿನಾಂ।
ಏಕದೀಕ್ಷಾ ಭವೇಸಿದ್ದೇವಿ ವಿಶೇಷಂತು ಶುದ್ಧಭಕ್ತಿಮಾನ್॥
ಎಂದುದಾಗಿ, ಒಂದು ಮನೆಗೆ ಗುರುಲಿಂಗವ ಎರಡು ಮಾಡಿಕೊಂಡು ನಡೆದಡೆ
ಕೂಡಲಚೆನ್ನಸಂಗಯ್ಯ ಅಘೋರನರಕದಲ್ಲಿಕ್ಕುವನು.[೭೪]

ಎಂದು ಕುಟುಂಬಕ್ಕೆ ಅನೇಕ ಗುರುಗಳಾಗುವುದನ್ನು ತಿರಸ್ಕರಿಸಿದ್ದಾರೆ. ಆದುದರಿಂದ ವೀರಶೈವರು ತಮ್ಮ ವಂಶಪರಂಪರೆಯಿಂದ ಬಂದ ಗುರುಗಳಿಂದ(ಶಿವಾಚಾರ್ಯರಿಂದ) ದೀಕ್ಷೆಯನ್ನು ಪಡೆಯುತ್ತಾರೆ.

ಭೌತದೇಹದ ಜನನಕ್ಕೆ ಕಾರಣರಾದ ತಂದೆ ತಾಯಿಗಳಿಗಿಂತಲೂ ಮಂತ್ರಶರೀರದ ಜನನಕ್ಕೆ ಕಾರಣರಾದ ಶ್ರೀಗುರುವಿಗೆ ವೀರಶೈವದಲ್ಲಿ ಪೂಜ್ಯಸ್ಥಾನವಿದೆ. ಆತ್ಮವು ಪರಮಾತ್ಮನಲ್ಲಿ ಐಕ್ಯನಾಗಲು ಬೇಕಾದ ಹಾದಿಯನ್ನು ತೋರಿಸಿ, ಆಧ್ಯಾತ್ಮಿಕ ಜೀವನ ನಡೆಸಲು ಕಾರಣನಾದ್ದರಿಂದ ಪರಶಿವನಿಗಿಂತಲೂ ಹೆಚ್ಚಿನ ಭಕ್ತಿಗೌರವಗಳಿಗೆ ಶ್ರೀಗುರುವು ಅರ್ಹನಾಗಿದ್ದಾನೆ. ತ್ರಿವಿಧ ದೀಕ್ಷೆಗಳಿಂದ ಶಿಷ್ಯನ ಮಲತ್ರಯಗಳನ್ನು ನಿವಾರಿಸಿ ಲಿಂಗತ್ರಯಗಳನ್ನು ಅನುಗ್ರಹಿಸಿ, ಸನ್ಮಾರ್ಗವನ್ನು ಉಪದೇಶಿಸುವ ಮೂಲಕ ಶಿಷ್ಯನನ್ನು ಅರಿಷಡ್ವೈರಿಗಳಿಂದ, ದುರಾಚಾರಗಳಿಂದ ರಕ್ಷಿಸುವುದರಿಂದ ಗುರುವನ್ನು ವೀರಶೈವ ಧರ್ಮದಲ್ಲಿ ಮೊದಲನೇ ಆವರಣವೆಂದು ಪರಿಗಣಿಸಲಾಗಿದೆ.

ಒಟ್ಟಿನಲ್ಲಿ 'ಗುರು' ವಿಷಯದ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ತಿಳಿದುಬರುವ ಅಂಶವೇನೆಂದರೆ

೭೪. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೦೨೯. ಪುಟ ೩೩೯

ಶಿವಾಗಮಗಳಲ್ಲಿ 'ಗುರು' ಪದದ ಅರ್ಥ ಮತ್ತು ನಿಷ್ಪತ್ತಿಯನ್ನು ವಿಶ್ಲೇಷಿಸಿ, ಗುರುವೇ ಸಾಕ್ಷಾತ್ ಶಿವಸ್ವರೂಪನೆಂದು ಪ್ರತಿಪಾದಿಸಿದರೂ ಶಿವನಿಗಿಂತ ಗುರುವೇ ಅಧಿಕನೆಂದು ಸಾರಿವೆ. ಗುರು ಸಕಲ ತೀರ್ಥಗಳ ಸಂಗಮ, ಸಕಲ ಮಂತ್ರಗಳ ಸ್ವರೂಪ. ಸೂರ್ಯನ ಉದಯದಿಂದ ಕತ್ತಲೆಯು ಕಳೆಯುವಂತೆ ಗುರುದರ್ಶನದಿಂದ ಎಲ್ಲ ಪಾಪಸಮೂಹಗಳೂ ನಾಶವಾಗುತ್ತವೆ ಎಂದು ಗುರುವಿನ ಮಹಿಮೆಯನ್ನು ಸಾರಿವೆ. ಕಾರಣ ಎಲ್ಲ ಆಧ್ಯಾತ್ಮಿಕ ಸಾಧನೆ ಸಿದ್ಧಿಗಾಗಿ ಗುರುವನ್ನೇ ಆಶ್ರಯಿಸಬೇಕೆಂದು ತಿಳಿಸಿ, ಗುರುಕಾರುಣ್ಯಪ್ರಾಪ್ತಿಗಾಗಿ ಗುರುಸೇವೆಗೈಯಬೇಕೆಂದು ತಿಳಿಸುತ್ತಾ ಗುರುಸೇವೆಯ ವಿಧಾನವನ್ನು ವರ್ಣಿಸಿವೆ. ಗುರುವು ತ್ರಿವಿಧ ದೀಕ್ಷೆಗಳಿಂದ ಮಲತ್ರಯಗಳನ್ನು ನಿವಾರಿಸಿ, ಲಿಂಗತ್ರಯಗಳನ್ನು ಕರುಣಿಸಿ, ಷಟಸ್ಥಲ ಸಾಧನಾ ಮಾರ್ಗವನ್ನು ಬೋಧಿಸಿ ಶಿಷ್ಯನ ಆತ್ಮೋನ್ನತಿಗೆ ಕಾರಣನಾಗುತ್ತಾನೆ ಎಂದು ತಿಳಿಸುವುದರ ಜೊತೆಗೆ ಈ ಲೋಕದಲ್ಲಿ ಶಿಷ್ಯರ ಹೃದಯದ ತಾಪವನ್ನು ಪರಿಹರಿಸುವ ಗುರುವು ದೊರೆಯುವುದು ಕಷ್ಟ. ಆದರೆ ಶಿಷ್ಯರ ಸಂಪತ್ತನ್ನು ಅಪಹರಿಸುವ ಗುರುಗಳು ಬಹಳ ಇದ್ದಾರೆ ಎಂದು ಎಚ್ಚರಿಸುತ್ತವೆ. ಕಾರಣ ಸದ್ಗುರುವಿನ ಲಕ್ಷಣಗಳೇನು? ಎಂಬುದನ್ನು ವಿಸ್ತೃತವಾಗಿ ವಿವರಿಸಿ 'ಅರಿವಿನ ಆನಂದವನ್ನು ಉಂಟುಮಾಡುವವನೂ, ಜ್ಞಾನಿಯೂ, ತತ್ತ್ವಗಳನ್ನು ತಿಳಿದವನೂ, ಆಚಾರಸಂಪನ್ನನೂ, ಸತ್‌ಕ್ರಿಯಾನಿರತನೂ ಆದ ಗುರುವನ್ನೇ ಬುದ್ಧಿಮಾನ್ ಶಿಷ್ಯನು ಗುರುವಾಗಿ ಆಯ್ದುಕೊಳ್ಳಬೇಕು' ಎಂದು ತಿಳಿಸಿವೆ. ಇಂಥ ಗುರುವು ದೊರೆತ ನಂತರ ಶಿಷ್ಯನು (ದೀಕ್ಷಾಪೇಕ್ಷೆಯುಳ್ಳವನು) ಆ ಗುರುವಿನ ಬಳಿ ಹೋಗಿ ಭಕ್ತಿಪೂರ್ವಕ ಸಾಷ್ಟಾಂಗ ನಮಸ್ಕರಿಸಿ, ಕೈಗಳನ್ನು ಬೊಗಸೆಯಾಗಿಸಿ ನಿಂತು, ವಿನಮ್ರಭಾವದಿಂದ 'ಶಿಷ್ಯನಾದ ನನಗೆ ಇಷ್ಟಾರ್ಥ ಸಿದ್ಧಿಗಳನ್ನು ಕೊಡುವ, ವೀರಶೈವ ದೀಕ್ಷೆಯನ್ನು ಅನುಗ್ರಹಿಸು' ಎಂದು ಪ್ರಾರ್ಥಿಸಿಕೊಳ್ಳಬೇಕು. ಹೀಗೆ ಪ್ರಾರ್ಥನೆಗೈದ ಶಿಷ್ಯನಿಗೆ ಗುರುವು ದೀಕ್ಷೆಯನ್ನು ಕೊಡಲು ಮನಸ್ಸು ಮಾಡಿದರೆ, ಆ ಶಿಷ್ಯನನ್ನು ಹಲವು ವರ್ಷಗಳ ಕಾಲ ಪರೀಕ್ಷಿಸಿದ ನಂತರವೇ ಆತನ ಚಿತ್ತ ನಿರ್ಮಲವಾಗುವಂತೆ ಬೋಧಿಸಿ ದೀಕ್ಷೆಯನ್ನು ನೀಡಬೇಕೆಂದು ತಿಳಿಸಿವೆ. ಶಿಷ್ಯನ ತನು, ಮನ, ಪ್ರಾಣಕ್ಕೆ ಸಂಸ್ಕಾರಗೈಯುವುದರ ಮೂಲಕ ದೀಕ್ಷೆಯನ್ನು, ಶಿಕ್ಷಣವನ್ನು ಮತ್ತು ಜ್ಞಾನವನ್ನು ನೀಡುವ ದೃಷ್ಟಿಯಿಂದ ಗುರುವಿನಲ್ಲಿಯೂ ದೀಕ್ಷಾ ಗುರು, ಶಿಕ್ಷಾಗುರು, ಜ್ಞಾನಗುರುವೆಂದು ಮೂರು ಹಂತಗಳನ್ನು ಮಾಡಲಾಗಿದೆ. ಅಲ್ಲದೇ ಆತ್ಮೋನ್ನತಿಗೆ ಕಾರಣವಾಗಬಲ್ಲ ಒಬ್ಬ ಗುರುವನ್ನೇ ಶಿಷ್ಯನ ಕುಟುಂಬದವರೆಲ್ಲ ಆಶ್ರಯಿಸುವುದೇ ಭಾವನಾತ್ಮಕ ದೃಷ್ಟಿಯಿಂದ ಮತ್ತು ಆಚಾರನಿಷ್ಠೆಯಿಂದ ಸೂಕ್ತವೆಂದು ನಿರ್ಣಯಿಸಿದೆ. ಹೀಗೆ ಆಗಮದಲ್ಲಿ ಪ್ರತಿಪಾದನೆಗೊಂಡ ಮೇಲಿನ ಎಲ್ಲ ಅಭಿಪ್ರಾಯಗಳನ್ನು ವಚನಕಾರರು ಅಂಗೀಕರಿಸಿದ್ದು, ತಮ್ಮ ವಚನಗಳಲ್ಲಿ ಹಲವೆಡೆ ಆಗಮೋಲ್ಲೇಖಗಳೊಂದಿಗೆ ಪ್ರತಿಪಾದಿಸಿದ್ದಾರೆ. ಕಾರಣ ಮೇಲಿನ ವಿಷಯಗಳ ಪ್ರತಿಪಾದನೆಯಲ್ಲಿ ಶಿವಾಗಮ ಮತ್ತು ವಚನ ಸಾಹಿತ್ಯದಲ್ಲಿ ಸಾಮ್ಯತೆ ಕಂಡುಬರುತ್ತದೆ. ಆದರೆ 'ಗುರುವಿನ ಅನುಗ್ರಹ ಪಡೆದ ಮಾತ್ರಕ್ಕೆ ಶಿಷ್ಯನ ಭವಬಂಧನ ಹರಿಯಲಾರದು. ಏಕೆಂದರೆ ಸದ್ಗುರುವಿನ ಕಾರುಣ್ಯವಾದರೂ ಅದನ್ನು ಸಾಧಿಸುವ ನಿಷ್ಠೆ ಶಿಷ್ಯನಲ್ಲಿರಬೇಕು' ಎಂದು ಕೆಲವು ವಚನಗಳಲ್ಲಿ ಪ್ರತಿಪಾದಿಸಲಾಗಿದೆ. ಉಳಿದಂತೆ ಎಲ್ಲ ಅಂಶಗಳ ವಿವರಣೆಯಲ್ಲಿ ಶಿವಾಗಮ ಮತ್ತು ವಚನಗಳಲ್ಲಿ ಏಕರೂಪದ ಸಾಮ್ಯತೆ ಕಂಡುಬರುತ್ತದೆ.

೫.೧.೨ ಲಿಂಗ

ಅವ್ಯಕ್ತನಾದ ಪರಶಿವನ ವ್ಯಕ್ತರೂಪವೇ ಲಿಂಗವಾಗಿದ್ದು, ಇದು ಶಿವಚೈತನ್ಯದ ಪ್ರತೀಕವೂ ಅಹುದು. ಸ್ಥೂಲ ಶರೀರದ ಭವಿತನವನ್ನು ನಿವಾರಿಸಲು ಇಷ್ಟಲಿಂಗದ ಅವಶ್ಯಕತೆಯಿರುವಂತೆ ಸೂಕ್ಷ್ಮ ಮತ್ತು ಕಾರಣ ಶರೀರಗಳನ್ನೂ ಲಿಂಗಮಯ ವನ್ನಾಗಿಸುವಲ್ಲಿ ಇಷ್ಟಲಿಂಗದ ಶಕ್ತಿಯು ದಿವ್ಯವಾಗಿದೆ. ಕಾರಣ ಅಷ್ಟಾವರಣಗಳಲ್ಲಿ ಲಿಂಗವನ್ನು ಎರಡನೆಯ ಆವರಣವೆಂದು ಪರಿಗಣಿಸಲಾಗಿದೆ.

ಪ್ರಸ್ತುತ ಲಿಂಗದ ಅರ್ಥ, ವಿಧಗಳು, ಇಷ್ಟಲಿಂಗದ ಅವಶ್ಯಕತೆ, ಲಿಂಗ ಪೂಜಾ ವಿಧಾನ, ಲಿಂಗಧಾರಿಯು ಪಾಲಿಸಬೇಕಾದ ನಿಯಮಗಳು ಮುಂತಾದವುಗಳ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅದು ಇಂತಿದೆ –

ಲಿಂಗ ಶಬ್ದದ ನಿಷ್ಪತ್ತಿ ಮತ್ತು ಅರ್ಥ

'ಲಿಂಗ' ಶಬ್ದದಲ್ಲಿ 'ಲಿ', 'ಅನುಸ್ವಾರ' ಮತ್ತು 'ಗ' ಎಂದು ಮೂರು ಅಕ್ಷರಗಳಿವೆ. 'ಲಿ' ಎಂಬುದು 'ಲೀಯತೇ' ಎಂಬ ಅರ್ಥವನ್ನು ನೀಡಿ, ಜಗತ್ತಿನ ಲಯವನ್ನು ಪ್ರತಿನಿಧಿಸುತ್ತದೆ. 'ಅನುಸ್ವಾರ'ವು 'ಅಸ್ತಿ' ಎಂಬ ಅರ್ಥದಲ್ಲಿ ಜಗತ್ತಿನ ಇರುವಿನ ಸ್ಥಿತಿಯನ್ನು ಹೇಳುತ್ತದೆ. 'ಗ' ಎಂಬುದು 'ಗಮ್ಯತೇ' ಎಂಬ ಅರ್ಥದಲ್ಲಿ ಜಗತ್ತಿನ ಉತ್ಪತ್ತಿಯನ್ನು ಪ್ರತಿನಿಧಿಸುತ್ತದೆ. ಇದನ್ನೇ ಸೂಕ್ಷ್ಮಾಗಮವು :

ಲಿಕಾರೋ ಲಯಬುದ್ಧಿಸ್ಥೋ ಬಿಂದುನಾ ಸ್ಥಿತಿರುಚ್ಯತೇ ।
ಗಕಾರಾತ್ ಸೃಷ್ಟಿರಿತುಕ್ತಂ ಲಿಂಗಂ ಸೃಷ್ಟ್ಯಾದಿಕಾರಣಮ್॥
ಲೀನಂ ಪ್ರಪಂಚರೂಪಂ ಹಿ ಸರ್ವಮೇತಚ್ಚರಾಚರಮ್।
ಸರ್ಗಾದೌ ಗಮ್ಯತೇ ಯಸ್ಮಾತ್ ತಸ್ಮಾಲ್ಲಿಂಗಮುದೀರಿತಮ್॥ [೧]

'ಲ'ಕಾರ ಲಯಕ್ಕೂ, 'ಂ' (ಸೊನ್ನೆ) ಸ್ಥಿತಿಗೂ, 'ಗ'ಕಾರ ಸೃಷ್ಟಿಗೂ ಸಂಕೇತವಾಗಿ ಲಿಂಗವು ಸೃಷ್ಟಿ–ಸ್ಥಿತಿ–ಲಯಕ್ಕೆ ಕಾರಣವಾಗಿದೆ ಎಂದು ತಿಳಿಸಿ ಪ್ರಪಂಚದ ಉಗಮಕ್ಕೂ, ಪ್ರಪಂಚವನ್ನು ತನ್ನಲ್ಲಿ ವಿಲೀನಗೊಳಿಸಿಕೊಳ್ಳುವುದಕ್ಕೂ ಕಾರಣವಾದದ್ದೇ 'ಲಿಂಗ'ವೆಂದು ನಿರ್ವಚಿಸುತ್ತದೆ. ಕಾರಣ ಆಗಮದಲ್ಲಿ ಜಗತ್ತಿನ ಸೃಷ್ಟಿ–ಸ್ಥಿತಿ–ಲಯಕ್ಕೆ ಕಾರಣವಾದುದೇ ಲಿಂಗ ಎಂದು ಅರ್ಥೈಸಲಾಗಿದೆ.

ಲಿಂಗ ಗರ್ಭದಲ್ಲಿಯೇ ಸಕಲ ಚರಾಚರವೂ ಅಡಕವಾಗಿದೆ

ಜಠರೇ ಲೀಯತೇ ಸರ್ವಂ ಜಗತ್ ಸ್ಥಾವರಜಂಗಮಮ್ ।
ಪುನರುತ್ಪದ್ಯತೇ ಯಸ್ಮಾತ್ ತದ್‌ಬ್ರಹ್ಮ ಲಿಂಗಸಂಜ್ಞಕಮ್॥ [೨]

"ಯಾವುದರ ಜಠರದಲ್ಲಿ ಸರ್ವ ಚರಾಚರಾತ್ಮಕವಾದ ಜಗತ್ತು (ಸೃಷ್ಟಿಗೆ ಮೊದಲು)

---

೧. ಸೂ. ಆ. ಪಟಲ ೬, ಶ್ಲೋಕ ಸಂಖ್ಯೆ ೫–೬

೨. ಚಂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೮

ಲೀನವಾಗಿರುತ್ತದೆಯೋ ಮತ್ತು ಯಾವುದರಿಂದ ಹುಟ್ಟುತ್ತದೆಯೋ ಅದೇ ಲಿಂಗವೆಂದು ಕರೆಯಲ್ಪಡುವ ಪರಶಿವಬ್ರಹ್ಮ." ಎಂದು ಶಿವಾಗಮಗಳಲ್ಲಿ ಲಿಂಗದ ಪರಿಕಲ್ಪನೆ ವಿರಾಟ ಸ್ವರೂಪದ್ದಾಗಿದೆ.

ಇದನ್ನೇ ಬಾಲಸಂಗಯ್ಯ ಎಂಬ ವಚನಕಾರರು ಹಲವು ಆಗಮಗಳ ಉಲ್ಲೇಖಗಳೊಂದಿಗೆ ವಿವರಿಸುತ್ತಾ-

........ಲಿಂಗಗರ್ಭದಲ್ಲಿ ಅನೇಕ ಕೋಟಿ ತತ್ವಂಗಳು,
ಅನೇಕ ಕೋಟಿ ಸದಾಶಿವರು ಅಡಗಿಹರು ನೋಡಾ
ಇದಕ್ಕೆ **ಶಿವಲಿಂಗಾಗಮೇ:**
"ಚಿದ್ವ್ಯೋಮ ಲಿಂಗಮಿತ್ಯಾಹುಃ ಚಿದ್ಭೂಮಿ ತಸ್ಯ ಪೀಠಿಕಾ।
ಆಲಯಃ ಸರ್ವದೇವಾನಾಂ ಲಯಾನಾಂ ಲಿಂಗಮುಚ್ಯತೇ॥
ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ।
ಉತ್ಪದ್ಯಂತೇ ಪುನಸ್ತಸ್ಮಾತ್ ಬ್ರಹ್ಮಾವಿಷ್ಣಾದಿ ದೇವತಾಃ॥" ಇಂತೆಂದುದಾಗಿ,-
ಅಪ್ರಮಾಣಕೂಡಲಸಂಗಮದೇವಾ.[೩]

ಎಂದು ಸಕಲ ಚರಾಚರ ಜಗತ್ತು ಲಿಂಗದಲ್ಲಿಯೇ ಅಡಕವಾಗಿದೆ ಎಂದು ಲಿಂಗದ ವಿರಾಟ ಸ್ವರೂಪವನ್ನು ಸಮರ್ಥಿಸಿದ್ದಾರೆ.

ಲಿಂಗದಿಂದಲೇ ದೇವಾನುದೇವತೆಗಳ ಸೃಷ್ಟಿ

ಲಿಂಗದಿಂದಲೇ ದೇವಾನುದೇವತೆಗಳು ಸೃಷ್ಟಿಗೊಂಡ ವಿಸ್ತೃತ ವರ್ಣನೆಯನ್ನು ಸೂಕ್ಷ್ಮಾಗಮವು ಹೀಗೆ ನಿರೂಪಿಸುತ್ತದೆ :

ದೇವದಾನವಗಂಧರ್ವಾ ವೇದಾಃ ಸಾಂಗಾಃ ಸನಾತನಾಃ।
ಉತ್ಪದ್ಯತೇऽತ್ರ ಕಲ್ಪಾದೌ ಕಲ್ಪಾಂತೇ ಚ ಲಯಂಗತಾಃ॥
ದಕ್ಷಿಣಾಂಗಾತ್ತತೋ ಬ್ರಹ್ಮಾ ವಿಷ್ಣುರ್ವಾಮಾಂಗತಸ್ತಥಾ।
ಸಮಸ್ತವೇದಜನನೀ ಗಾಯತ್ರೀ ಹೃದಯಾದಭೂತ್॥
ವೇದಾಃ ಶಿರಃಸಮುದ್ಭೂತಾಃ ಸಾಂಗೋಪಾಂಗಾಃ ಸಹಸ್ರಶಃ।[೪]

"ದೇವತೆಗಳು, ರಾಕ್ಷಸರು, ಗಂಧರ್ವರು, ವೇದಗಳು ಕಲ್ಪದ ಆರಂಭದಲ್ಲಿ ಲಿಂಗದಿಂದಲೇ ಉದ್ಭವಿಸಿದವು, ಮತ್ತೆ ಕಲ್ಪದ ಕೊನೆಯಲ್ಲಿ ಅದರಲ್ಲೇ ಲಯ ಹೊಂದಿದವು. ಲಿಂಗದ ಬಲಭಾಗದಿಂದ ಬ್ರಹ್ಮನು, ಎಡಭಾಗದಿಂದ ವಿಷ್ಣು ಮತ್ತು ಹೃದಯದಿಂದ ಸರ್ವವೇದಗಳ ಜನನಿಯಾದ ಗಾಯತ್ರಿಯು ಉತ್ಪನ್ನರಾದರು. ಅಂಗ-ಉಪಾಂಗಗಳಿಂದ ಕೂಡಿದ ವೇದಗಳು ಅದರ ಶಿರಸ್ಸಿನಿಂದ ಉದ್ಭವಿಸಿದವು." ಎಂದು ತಿಳಿಸಿದೆ.

---

೩. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೨೩೭.ಪುಟ ೮೪

೪. ಸೂ. ಆ. ಪಟಲ ೬, ಶ್ಲೋಕ ಸಂಖ್ಯೆ ೧೩-೧೫

ಇದನ್ನೇ ಬಾಲಸಂಗಯ್ಯ ಎಂಬ ವಚನಕಾರರು ಹಲವು ಆಗಮಗಳ ಉಲ್ಲೇಖಗಳೊಂದಿಗೆ ವಿವರಿಸುತ್ತಾ-

.....ಅನಂತ ಕೋಟಿ ಬ್ರಹ್ಮರು, ಅನಂತ ಕೋಟಿ ವಿಷ್ಣಾದಿಗಳು,
ಅನಂತ ಕೋಟಿ ಇಂದ್ರಾದಿಗಳು, ಅನಂತ ಕೋಟಿ ದೇವರ್ಕಳು,
ಇವರೆಲ್ಲ ಎಲ್ಲಿ ಹುಟ್ಟುವರು ಅದೇ 'ಗಂ' ಎಂಬ ಶಬ್ದ.
ಇದಕ್ಕೆ **ಅಖಂಡಾಗಮೇ** ;
"ಅಸಂಖ್ಯಾತಮಹಾವಿಷ್ಣುಃ ಅಸಂಖ್ಯಾತಪಿತಾಮಹಾಃ।
ಅಸಂಖ್ಯಾತಸುರೇಂದ್ರಾಣಾಂ ಲೀಯತೇ ಸರ್ವದೇವತಾಃ॥
ವಿಷ್ಣು ಸಂಜ್ಞಾ ಅಸಂಖ್ಯಾತಾಃ ಅಸಂಖ್ಯಾತಪಿತಾಮಹಾಃ।
ಅಸಂಖ್ಯಾತಸುರೇಂದ್ರಾಣಾಂ ಗಮ್ಯತೇ ಸರ್ವದೇವತಾಃ॥
ಲೀಯತೇ ಗಮ್ಯತೇ ಯತ್ರಬ್ರಹ್ಮ ವಿಷ್ಣ್ವಾದಿ ದೇವತಾಃ।
ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ವಂ ಪರಾಯಣ್ಯೈಃ॥"[೫]

ಎಂದು ಸಕಲ ದೇವಾನುದೇವತೆಗಳು ಲಿಂಗದಿಂದ ಸೃಷ್ಟಿಗೊಂಡ ಬಗೆಯನ್ನು ಸಮರ್ಥಿಸಿದ್ದಾರೆ. ಅಲ್ಲದೇ "ಲೀಯಂತೇ ಮೂರ್ಧ್ನಿ ವೈ ವೇದಾಃ ಸಷಡಂಗಪದಕ್ರಮಾಃ॥[೬] ಎಂದು "ಲಿಂಗದ ಶಿರಸ್ಸಿನಲ್ಲಿ ಗಾಯತ್ರೀಮಂತ್ರ ಸಹಿತವಾದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ ಮತ್ತು ಜ್ಯೋತಿಷ್ಯವೆಂಬ ಆರು ಅಂಗಗಳಿಂದ ಕೂಡಿದ ಸಮಗ್ರ ವೇದವು ಮತ್ತು ಜಟಾ, ಮಾಲಾ, ಶಿಖಾ, ರೇಖಾ, ಧ್ವಜ, ದಂಡ, ರಥ ಮತ್ತು ಘನಗಳೆಂಬ ಎಂಟು ಪಾಠಕ್ರಮಗಳಿಂದ ಕೂಡಿದ ವೇದಾಂಗಗಳು ಲಿಂಗದಲ್ಲಿ ನೆಲೆಯಾಗಿದೆ ಎಂದು ಹೇಳುವ ಮೂಲಕ ಚಂದ್ರಜ್ಞಾನಾಗಮವು ಲಿಂಗದ ಜ್ಞಾನಮಯಸ್ವರೂಪವನ್ನು ನಿರೂಪಿಸುತ್ತದೆ. ಲಿಂಗ ಮಹಿಮೆಯನ್ನು ಸೂಕ್ಷ್ಮಾಗಮವು ಕೊಂಡಾಡುತ್ತ, "ಈ ಜ್ಯೋತಿರ್ಲಿಂಗದ ತೇಜಸ್ಸಿನಿಂದಲೇ ಚಂದ್ರಾದಿಗ್ರಹ ನಕ್ಷತ್ರಗಳು ನಿಯಮಿತರಾಗಿ, ಕಾಲಕ್ಕನುಸಾರವಾಗಿ, ಹಗಲಿರುಳು ಬೆಳಗುತ್ತವೆ. ಲಿಂಗದ ಭಯದಿಂದಲೇ ಗಾಳಿಯು ಮೂರು ಲೋಕಗಳಲ್ಲೂ ಸದಾ ಬೀಸುತ್ತಿದೆ. ರವಿ ಉದಯಿಸುತ್ತಾನೆ. ಬೆಂಕಿ ಸುಡುತ್ತದೆ. ಚಂದ್ರ ತಂಪಾಗಿರುವನು, ಯಮನು (ಮೃತ್ಯು ರೂಪದಲ್ಲಿ ಎಲ್ಲೆಡೆಯೂ) ಓಡಾಡುತ್ತಾನೆ. ಆದ್ದರಿಂದ ಲಿಂಗವು ಸತ್- ಚಿತ್- ಆನಂದ ಸ್ವರೂಪದ ಪರಬ್ರಹ್ಮವಾಗಿದೆ. ಈ ಲಿಂಗವು ಅವ್ಯಕ್ತವಾಗಿದ್ದರೂ, ಈ ಜಗತ್ತಿನ ರೂಪದಲ್ಲಿ ವ್ಯಕ್ತವಾಗಿದೆ ಮತ್ತು ಅನಂತವೂ ವಿಶ್ವತೋಮುಖವೂ, ನಿರ್ಮಲವೂ, ಪರಮಪದವೂ, ಜ್ಯೋತಿಸ್ವರೂಪವೂ ಆಗಿರುವ ಲಿಂಗವನ್ನು ಜ್ಞಾನಿಗಳು ದರ್ಶನ ಮಾಡುತ್ತಾರೆ ಎಂದು ಪ್ರತಿಪಾದಿಸಿದೆ.[೭] ಈ ಮಹಾಲಿಂಗದ ಸ್ವರೂಪವನ್ನು

---

೫. ಸಮಗ್ರ ವಚನ ಸಂ. ೧೩, ಸಂಕೀರ್ಣ.ವ.ಸಂ.೮. ವಚನ ಸಂಖ್ಯೆ ೭೬೯ ಪುಟ ೩೪೬

೬. ಚಂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೭

೭. ಸೂ. ಆ. ಪಟಲ ೬, ಶ್ಲೋಕ ಸಂಖ್ಯೆ ೯–೧೨

ಚಂದ್ರಜ್ಞಾನಾಗಮದಲ್ಲಿ ಹೀಗೆ ವರ್ಣಿಸುತ್ತದೆ.

ಮಹಾಲಿಂಗದ ಸ್ವರೂಪ ಮತ್ತು ವಿಧಗಳು

ಮಹಾಲಿಂಗವು ನಿಷ್ಕಲ, ನಿಷ್ಕ್ರಿಯ, ಶಾಂತ, ನಿರವದ್ಯ ಮತ್ತು ನಿರಂಜನ ಸ್ವರೂಪವಾಗಿದ್ದು ಅಗೋಚರವೂ, ಕೇವಲ ಆತ್ಮಸಂವೇದ್ಯವು ಆಗಿರುವದು. ಅದೇ ಬ್ರಹ್ಮ, ಋತ ಮತ್ತು ಸತ್ಯ. ಅದು ಸತ್-ಚಿತ್-ಆನಂದ ಸ್ವರೂಪ[೮] ಎಂದು ಚಂದ್ರಜ್ಞಾನಾಗಮವು ಮಹಾಲಿಂಗದ ವಿಶಿಷ್ಟ ಸ್ವರೂಪವನ್ನು ನಿರೂಪಿಸಿ, ಆ ಮಹಾಲಿಂಗವೇ ಸುಜನರ ಅನುಗ್ರಹಕ್ಕಾಗಿ, ಸಾಧಕರ ಉಪಾಸನೆಗಾಗಿ ಸ್ವಮಾಯೆಯಿಂದ ಭಾವಲಿಂಗ, ಪ್ರಾಣಲಿಂಗ, ಮತ್ತು ಇಷ್ಟಲಿಂಗವೆಂದು ಮೂರು ವಿಧವಾಯಿತು.[೯]

"ಭಾವಲಿಂಗವು ನಿಷ್ಕಲವಾಗಿದೆ. ಅದು ಕೇವಲ ಭಾವಗೋಚರ. ಅದೇ ಪರಾತ್ಪರ ಲಿಂಗ. ಪ್ರಾಣಲಿಂಗವು ಸಕಲ-ನಿಷ್ಕಲ. ಅದು ಮನೋಗೋಚರ. ಇಷ್ಟಲಿಂಗವು ಸಕಲ. ಕಣ್ಣಿಗೆ ಗೋಚರ. ಅದು ಇಷ್ಟಸಿದ್ಧಿಯನ್ನು ಕೊಡುವಂತಹುದು ಮತ್ತು ಅನಿಷ್ಟವಾದುದನ್ನು ಪರಿಹರಿಸುವಂತಹುದು."[೧೦] ಎಂದು ಚಂದ್ರಜ್ಞಾನಾಗಮವು ಮೂರು ಲಿಂಗಗಳ ಸ್ವರೂಪವನ್ನು ತಿಳಿಸಿದೆ. ನಿಷ್ಕಲವೆಂದರೆ ಭಾಗಗಳಿಲ್ಲದ್ದು, ಗುರುತಿಸಲು ಯಾವುದೇ ಚಿಹ್ನೆಗಳಿಲ್ಲದ್ದು. ಸಕಲವೆಂದರೆ ಭಾಗಗಳಿಂದ ಕೂಡಿರುವಂತಹದ್ದು, ಆಕಾರವುಳ್ಳದ್ದು. ಭಾವಲಿಂಗವು ಕೇವಲ ನಿಷ್ಕಲ. ಇಷ್ಟಲಿಂಗವು ಕೇವಲ ಸಕಲ. ಆದರೆ ಪ್ರಾಣಲಿಂಗವು ಸಕಲ-ನಿಷ್ಕಲ. ಅದಕ್ಕೆ ಯಾವುದೇ ಭಾಗಗಳಿಂದ ಕೂಡಿದ ಆಕಾರವಿಲ್ಲದಿದ್ದರೂ ಅದು ಜ್ಯೋತಿಸ್ವರೂಪವೆಂದು ಜ್ಞಾನಿಗಳು ಹೇಳುತ್ತಾರೆ.

ಲಿಂಗತ್ರಯಗಳ ಆರಾಧನೆ ಮತ್ತು ಅದರ ಮಹಿಮೆ

ಲಿಂಗತ್ರಯಗಳ ಸ್ವರೂಪವನ್ನು ಹೇಳಿದ ಚಂದ್ರಜ್ಞಾನಾಗಮವು ಆ ಲಿಂಗತ್ರಯದ ಆರಾಧನೆಯನ್ನು ನಿರೂಪಿಸುತ್ತ, "ಜಾಗ್ರತಸ್ಥಿತಿಯಲ್ಲಿ ಇಷ್ಟಲಿಂಗದ ಆರಾಧನೆ,[೧೧] ತುರೀಯಾವಸ್ಥೆಯಲ್ಲಿ ಪ್ರಾಣಲಿಂಗದ ಆರಾಧನೆ,[೧೨] ಜೊತೆಗೆ ತುರೀಯಾತೀತ ಸ್ಥಿತಿಯಲ್ಲಿ ಭಾವಲಿಂಗವನ್ನು ಆರಾಧಿಸಬೇಕೆಂದು[೧೩] ತಿಳಿಸುತ್ತ ಇಷ್ಟಲಿಂಗದಲ್ಲಿ ಪೂಜೆ, ಪ್ರಾಣಲಿಂಗದಲ್ಲಿ ಧ್ಯಾನ, ಭಾವಲಿಂಗದಲ್ಲಿ ಅನುಸಂಧಾನ ಮಾಡುವುದರಿಂದ ಸಾಧಕ ಬೆಳೆಯುತ್ತಾ ಪರಿಶುದ್ಧ ಪರಿಪೂರ್ಣತೆಯತ್ತ ಸಾಗುತ್ತಾನೆ ಎಂದು ಲಿಂಗತ್ರಯದ ಆರಾಧನೆಯ ಬಗೆಯನ್ನು ನಿರೂಪಿಸಲಾಗಿದೆ.

---

೮. ಚಂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೨೦-೨೧

೯. ಚಂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೨೩

೧೦. ಚಂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೨೪-೨೫

೧೧. ಚಂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೪೩

೧೨. ಚಂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೪೨

೧೩. ಚಂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೩೯

ಹೀಗೆ ಮಹಾಲಿಂಗವೇ ಗುರುವಿನ ಅನುಗ್ರಹದಿಂದ ಕರಸ್ಥಲಕ್ಕೆ ಬಂದು ಇಷ್ಟಲಿಂಗವಾಗಿದೆ, ಪ್ರಾಣದಲ್ಲಿ ಪ್ರಾಣಲಿಂಗವೆನಿಸಿದೆ, ಭಾವದಲ್ಲಿ ಭಾವಲಿಂಗವೆನಿಸಿದೆ. ಶ್ರೀಗುರುವು ಜೀವನಿಗೆ ದೀಕ್ಷೆ ನೀಡುವಾಗ ಅವನಲ್ಲಿ ಕಂಡುಬರುವ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಭೇದಗಳನ್ನು ವಿಶ್ಲೇಷಿಸಿ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳನ್ನು ಕಲ್ಪಿಸಿ ಅವುಗಳಲ್ಲಿ ಕ್ರಮವಾಗಿ ಈ ಲಿಂಗಗಳನ್ನು ಸ್ಥಾಪಿಸುವನು. ಕಾರಣ ಇಷ್ಟಲಿಂಗದಲ್ಲಿ ದೃಷ್ಟಿಯೋಗ, ಪ್ರಾಣಲಿಂಗದಲ್ಲಿ ಮನೋಯೋಗ ಮತ್ತು ಭಾವಲಿಂಗದಲ್ಲಿ ಭಾವಯೋಗವನ್ನು ಏಕಕಾಲದಲ್ಲಿ ಸಾಧಿಸಿದ ಸಾಧಕರು ಮುಕ್ತರು. ಈ ಮೂರರ ಸಮನ್ವಯವೇ ಶಿವಯೋಗವೆಂಬುದು ಶೈವಾಗಮದ ಸಿದ್ಧಾಂತ. ಅದೇ ಶಿವಾರಾಧನೆಯ ಕ್ರಮ.

ಮೂಲತಃ ಲಿಂಗಗಳು ಮೂರಾದರೂ ಅವೆಲ್ಲ ಒಂದೇ ಮಹಾಲಿಂಗದ ಮೂರು ರೂಪಗಳು. ಇಷ್ಟಲಿಂಗವನ್ನು ಪೂಜೆಗೈಯುತ್ತ ಭಾವಲಿಂಗ ಮತ್ತು ಪ್ರಾಣಲಿಂಗವನ್ನು ಅರ್ಚಿಸಬೇಕು. ಇದು ದ್ವೈತದಿಂದ ಅದ್ವೈತದೆಡೆಗೆ ಸಾಗುವ ಸಾಧನಾ ಪಥವಾಗಿದೆ. ಕಾರಣ ಮೂರು ವಿಧವಾದ ಲಿಂಗಗಳನ್ನು ಏಕಸೂತ್ರಾನುಸಂಧಾನದಿಂದ ಪೂಜಿಸಬೇಕೆಂದು ಆಗಮಗಳು ತಿಳಿಸಿವೆ. ಇದನ್ನೇ ಬಸವಣ್ಣನವರು –

> ಇಷ್ಟಲಿಂಗವೊಂದು ಪ್ರಾಣಲಿಂಗ[ವೊಂದು,ಭಾವಲಿಂಗ]ವೊಂದೆಂಬ
> ಮಿಟ್ಟಿಯ ಭಂಡರ, ಅವರ ಮಾತ ಕೇಳಲಾಗದು.
> ಅಂಗಳದೊಳಗೊಬ್ಬಗಂಡ, ಮನೆಯೊಳಗೊಬ್ಬ ಗಂಡ, ಹಿತ್ತಿಲೊಳಗೊಬ್ಬ ಗಂಡನೆಂಬ
> ಸತಿಯರ ಲೋಕದ ಮಾನವರು ಮೆಟ್ಟಿ ಮೂಗಕೊಯ್ಯದೆ ಮಾಣ್ಬರೆ, ಅಯ್ಯಾ?
> ಲಿಂಗತ್ರಯವೆಂದು ತೋರಿದವರಾರೊ?
> 'ಲಿಂಗಮೇಕಂ ಪರಂ ನಾಸ್ತಿ' ಎಂದು ಸದ್ಗುರುಸ್ವಾಮಿ ಅರುಹಿದನಾಗಿ.
> ಷಟ್ತ್ರಿಂಶತ್ತತ್ವಕ್ಕೆ ಆಲಯಮಪ್ಪಂತಹ ಮಹಾಘನಲಿಂಗದ ಬೆಳಗು
> ಕರಸ್ಥಲದಲ್ಲಿ, ಮನಸ್ಥಲದಲ್ಲಿ, [ಭಾವಸ್ಥಲದಲ್ಲಿ] ವೇದ್ಯವಾದ ಬಳಿಕ
> ಸರ್ವಾಂಗಲಿಂಗ, ಕೂಡಲಸಂಗಯ್ಯಾ ನಿಮ್ಮ ಶರಣಂಗೆ.[೧೪]

ಎಂದಿದ್ದಾರೆ. ಹೀಗೆ ಇಷ್ಟಲಿಂಗವನ್ನು ಪೂಜಿಸುತ್ತಾ, ಪ್ರಾಣಲಿಂಗವನ್ನು ಧ್ಯಾನಿಸುತ್ತಾ ಮತ್ತು ಭಾವಲಿಂಗವನ್ನು ಭಾವಿಸುತ್ತಾ ಲಿಂಗತ್ರಯಗಳನ್ನು ಏಕಸೂತ್ರಾನುಸಂಧಾನದಿಂದ ಪೂಜಿಸುವುದರಿಂದ ಭಕ್ತನು ತನ್ನ ಸಾವಿನ ಕಟ್ಟುಗಳನ್ನು ಕತ್ತರಿಸಿಕೊಳ್ಳುತ್ತಾನೆ ಎಂದು ಲಿಂಗತ್ರಯ ಆರಾಧನೆಯ ಬಗೆಯನ್ನು ವಚನಗಳಲ್ಲಿ ವಿವರಿಸಲಾಗಿದೆ.

> ಪೂಜಯನ್ನಿಷ್ಟಲಿಂಗಂ ತು ನಿಧ್ಯಾಯನ್ ಪ್ರಾಣಲಿಂಗಕಮ್।
> ಭಾವಯನ್ ಭಾವಲಿಂಗಂ ವೈ ಮೃತ್ಯುಪಾಶಾಂಶ್ಛಿನತ್ತಿ ಸಃ॥
> ಸರ್ವದೇವಮಯಂ ಲಿಂಗಂ ತಸ್ಮಿನ್ ಸಾಕ್ಷಾಚ್ಛಿವಃ ಸ್ವಯಮ್।

---

೧೪. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೧೦೬೩ ಪುಟ ೨೮೬

ಅನುಗ್ರಹಾಯ ವಸತಿ ತಸ್ಮಾಲ್ಲಿಂಗಂ ಪ್ರಪೂಜಯೇತ್॥
ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ।
ಲೀಯಂತೇ ಲಿಂಗಮೂಲೇ ತು ತಸ್ಮಾಲ್ಲಿಂಗಂ ಪ್ರಪೂಜಯೇತ್॥[೧೫]

ಇಷ್ಟಲಿಂಗವನ್ನು ಪೂಜಿಸಿ ಅದರಲ್ಲಿ ದೃಷ್ಟಿಯೋಗವನ್ನು ಸಾಧಿಸಿ, ಪ್ರಾಣಲಿಂಗದಲ್ಲಿ ಮನಸ್ಸನ್ನು ನೆಲೆಗೊಳಿಸಿ, ನಿರಾಕಾರ, ನಿಷ್ಕಲ-ಭಾವಲಿಂಗದ ಭಾವನೆಯನ್ನು ಬಲಿಸಿಕೊಂಡು ಮಹಾಲಿಂಗದಲ್ಲಿ ಒಂದಾಗಬೇಕು. ಕಾರಣ ಆತ್ಮಸಾಕ್ಷಾತ್ಕಾರಕ್ಕೆ ಆತ್ಮಸಿದ್ಧಿಗಾಗಿ ಲಿಂಗಪೂಜೆಯು ಸಾಧನವಾಗಿದ್ದು ವಿಶ್ವರೂಪದ ಲಿಂಗವನ್ನು ಪೂಜಿಸುವುದರಿಂದ ವಿಶ್ವಾತ್ಮನಾದ ಪರಶಿವನಲ್ಲಿ ಬೆರೆತು ಬೇರಾಗದಂತಹ ಕೌಶಲ ಸಿದ್ಧಿಸುತ್ತದೆ ಎಂದು ಲಿಂಗಾರಾಧನೆಯ ಮಹಿಮೆಯನ್ನು ಅರುಹಿ, ಲಿಂಗವು ಮಾತಾಪಿತೃ ಸ್ವರೂಪವಾಗಿದ್ದು ಬಿಂದುನಾದಾತ್ಮಕವಾಗಿದೆ ಎಂದು ಇಷ್ಟಲಿಂಗದ ಸ್ವರೂಪವನ್ನು ವಿವರಿಸುತ್ತವೆ.

ಇಷ್ಟಲಿಂಗವು ಬಿಂದುನಾದಾತ್ಮಕವಾಗಿದ್ದು ಮಾತಾಪಿತೃ ಸ್ವರೂಪವಾಗಿದೆ

ನಾದರೂಪಃ ಶಿವಃ ಸಾಕ್ಷಾತ್ ಲಿಂಗಮಿತ್ಯಭಿಧೀಯತೇ ।
ತತ್ಪೀಠಿಕಾ ಮಹಾಶಕ್ತಿಃ ಸಾ ಚ ವೈ ಬಿಂದುರೂಪಿಣೀ ॥
ತಯೋಃ ಸಮ್ಮೇಲನಾದ್ದೇವಿ ಕಲಾ ತತ್ರ ಪ್ರತಿಷ್ಠಿತಾ।
ಸಾ ಕಲಾ ಪರಮಾ ಸೂಕ್ಷ್ಮಾ ವ್ಯಾಪ್ತಾ ಸರ್ವತ್ರ ಸರ್ವದಾ॥[೧೬]
ತಸ್ಮಾಲ್ಲಿಂಗಮಿತಿ ಖ್ಯಾತಂ ನಾದಬಿಂದುಕಲಾತ್ಮಕಮ್ ॥
ಮಾತಾ ದೇವೀ ಬಿಂದು ರೂಪಾ ನಾದರೂಪಃ ಶಿವಃ ಪಿತಾ।
ಪಿತೃಭ್ಯಾಂ ದತ್ತಮೈಶ್ವರ್ಯಂ ಯಥಾಭೋಗಾಯ ಕಲ್ಪ್ಯತೇ॥
ತಯೋರೈಶ್ವರ್ಯಲಾಭಾರ್ಥಂ ಶಿವಲಿಂಗಂ ಪ್ರಪೂಜಯೇತ್ ॥
ಸಾ ದೇವೀ ಜಗತಾಂ ಮಾತಾ ಸ ಶಿವೋ ಜಗತಃ ಪಿತಾ॥
ಪಿತ್ರೋಃ ಶುಶ್ರೂಷಕೇ ನಿತ್ಯಂ ಕೃಪಾಧಿಕ್ಯಂ ಹಿ ವರ್ಧತೇ ॥
ಕೃಪಯಾಽಂತರ್ಗತೈಶ್ವರ್ಯಂ ಪೂಜಕಸ್ಯ ದದಾತಿ ಹಿ॥
ತಸ್ಮಾದಂತರ್ಗತಾನಂದಲಾಭಾರ್ಥಂ ಮುನಿಪುಂಗವ।
ಪಿತೃಮಾತೃಸ್ವರೂಪಂ ಹಿ ಶಿವಲಿಂಗಂ ಪ್ರಪೂಜಯೇತ್ ॥[೧೭]

"ನಾದರೂಪ ಶಿವನೇ ಲಿಂಗ, ಬಿಂದುರೂಪ ಮಹಾಶಕ್ತಿಯೇ ಪೀಠ, ಇವೆರಡರ ಮಿಲನದಿಂದ ಕಲೆಯ ಉದಯವಾಗುತ್ತದೆ. ಆದ್ದರಿಂದ ಲಿಂಗವು ನಾದಬಿಂದು ಕಲಾತ್ಮಕವೆಂದು ಪ್ರಸಿದ್ಧವಾಗಿದೆ. ಈ ಬಿಂದುಸ್ವರೂಪಳಾದ ದೇವಿಯೇ (ಶಕ್ತಿಯೇ)

---

೧೫. ಚಂ. ಆ. ಕ್ರಿ ಪಾ. ಪಟಲ ೩, ಶ್ಲೋಕ ಸಂಖ್ಯೆ ೪೮ –೫೦
೧೬. ಸೂ. ಆ. ಪಟಲ ೬, ಶ್ಲೋಕ ಸಂಖ್ಯೆ ೩–೪
೧೭. ಚಂ. ಆ. ಕ್ರಿ ಪಾ. ಪಟಲ ೩, ಶ್ಲೋಕ ಸಂಖ್ಯೆ ೧೭–೧೯

ಸಕಲ ಜಗತ್ತುಗಳ ಮಾತೆ; ನಾದರೂಪದ ಶಿವನೇ ಇಡೀ ಜಗತ್ತಿನ ತಂದೆ. ತಂದೆ-ತಾಯಿಗಳ ಸೇವೆ ಮಾಡುವವರಿಗೆ ಅವರ ಕೃಪೆ ಹಾಗೂ ಲೌಕಿಕ ಆಸ್ತಿ ಪ್ರಾಪ್ತವಾಗುವಂತೆ, ಶಿವಲಿಂಗವನ್ನು ಪೂಜಿಸುವುದರಿಂದ ಶಿವ-ಶಕ್ತಿಯರ ಕೃಪಾಶೀರ್ವಾದ ಹಾಗೂ ಆಂತರಿಕವಾದ ಐಶ್ವರ್ಯಪ್ರಾಪ್ತವಾಗುತ್ತದೆ. ಆದ್ದರಿಂದ ಒಳಗಿನ ಆನಂದವನ್ನು ಪಡೆಯಲು ಮಾತಾಪಿತೃ ಸ್ವರೂಪಿಯಾದ ಲಿಂಗವನ್ನು ಪೂಜಿಸಬೇಕು." ಎಂದು ತಿಳಿಸಿದೆ. ಹೀಗೆ ಜಗತ್ತಿನ ತಂದೆ-ತಾಯಿಗಳ ಸ್ವರೂಪವಾದ ಲಿಂಗವನ್ನು ಪೂಜಿಸಿದರೆ ಮುಕ್ತಿ ದೊರೆಯುತ್ತದೆ ಎಂಬ ವಿಶಿಷ್ಟವಾದ ಪರಿಕಲ್ಪನೆ ಆಗಮಗಳಲ್ಲಿ ಅಭಿವ್ಯಕ್ತಗೊಂಡಿದೆ. ಇದನ್ನೇ ಶರಣರು ತಮ್ಮ ವಚನಗಳಲ್ಲಿ ಮನತುಂಬಿ ಹಾಡಿದ್ದಾರೆ.

ಲಿಂಗವೆಂಬುದು ಪರಶಕ್ತಿಯುತ. ಪರಶಿವನ ನಿಜದೇಹ.
ಲಿಂಗವೆಂಬುದು ಪರಶಿವನ ಘನತೇಜ.
ಲಿಂಗವೆಂಬುದು ಪರಶಿವನ ನಿರತಿಶಯಾನಂದಸುಖವು,
ಲಿಂಗವೆಂಬುದು ಪರಶಿವನ ಪರಮಜ್ಞಾನ.
ಲಿಂಗವೆಂಬುದು ಷಡಧ್ವಮಯ ಜಗಜ್ಜನ್ಮಭೂಮಿ,
ಲಿಂಗವೆಂಬುದು ಅಖಂಡಿತವೇದ ಪಂಚಸಂಜ್ಞೆ,
ಲಿಂಗವೆಂಬುದು ತಾ ಹರಿಬ್ರಹ್ಮರ ನಡುಮನೆಗಳ ಜ್ಯೋತಿರ್ಲಿಂಗ,[೧೮]

ಎಂದು ಸರ್ವತತ್ವಗಳಿಗೂ ಆಶ್ರಯಸ್ಥಾನವಾದ ಲಿಂಗದ ಸ್ವರೂಪವನ್ನು ಸೂಚಿಸಿದ್ದಾರೆ. ಇದನ್ನೇ ಸ್ವತಂತ್ರ ಸಿದ್ಧಲಿಂಗೇಶ್ವರರು, "ಲಿಂಗವೆಂಬುದು ಸರ್ವಕಾರಣ ಪರಮ ನಿರ್ಮಲ. ಲಿಂಗವೆಂಬುದು ಸಚ್ಚಿದಾನಂದ ನಿತ್ಯಪರಿಪೂರ್ಣ. ಲಿಂಗವೆಂಬುದು ಸರ್ವ ಲೋಕೋತ್ಪತ್ತಿಗೆ ಮೂಲ ಕಾರಣ. ಲಿಂಗವೆಂಬುದು ಸರ್ವ ತತ್ವಪೂರ್ಣ ನಿಜಚೈತನ್ಯವು. ಲಿಂಗವೆಂಬುದು ಜನ್ಮವಾರುಧಿಯ ದಾಂಟಿಸುವ ಚೈತ್ರವು. ಲಿಂಗವೆಂಬುದು ಶರಣರ ಹೃದಯದಲ್ಲಿ ಬೆಳಗುವ ಜ್ಯೋತಿರ್ಮಯ ಲಿಂಗವು. ಇಂತೀ ಲಿಂಗದ ಮರ್ಮವನರಿದವನೇ ಅರಿದವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ."[೧೯] ಎಂದು ಆಗಮದಲ್ಲಿ ಪ್ರತಿಪಾದಿತವಾದ ಲಿಂಗದ ವಿರಾಟಸ್ವರೂಪವನ್ನು ಶರಣರೂ ವರ್ಣಿಸಿದ್ದಾರೆ. ಶಿಷ್ಯರ ಅನುಗ್ರಹಕ್ಕಾಗಿ ಲಿಂಗದಲ್ಲೇ ಶಿವನು ನೆಲೆಸಿದ್ದಾನೆ. ಆದ್ದರಿಂದ ಲಿಂಗವನ್ನು ಏಕಾಗ್ರತೆಯಿಂದ ಪೂಜಿಸಬೇಕು.

ಇಷ್ಟಲಿಂಗಧಾರಣೆಯ ಅವಶ್ಯಕತೆ ಮತ್ತು ಉದ್ದೇಶ -

ಪರಮಾತ್ಮನ ಅನುಗ್ರಹವನ್ನು ಪಡೆಯಲು ಇಷ್ಟಲಿಂಗ ರೂಪದಲ್ಲಿಯೇ ಶಿವನನ್ನು ಪೂಜಿಸಬೇಕು. ಇಷ್ಟಲಿಂಗದ ಅನುಸಂಧಾನದ ಮೂಲಕವೇ ಪ್ರಾಣಲಿಂಗ ಮತ್ತು ಭಾವಲಿಂಗಗಳ ಸ್ವರೂಪಸಾಕ್ಷಾತ್ಕಾರ ಹಾಗೂ ಪೂಜೆ-ಧ್ಯಾನಗಳನ್ನು ಮಾಡಬೇಕೆಂದು

---

೧೮. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ.೧, ವಚನ ಸಂಖ್ಯೆ ೧೫೨೪ ಪುಟ ೫೪೭

೧೯. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ.೬, ವಚನ ಸಂಖ್ಯೆ ೯೫೬ ಪುಟ ೪೭೧

ಆಗಮಗಳು ಅರುಹುತ್ತವೆ.

ಆದರೆ ಪ್ರತಿಯೊಬ್ಬನ ಹೃದಯದಲ್ಲಿ ಪ್ರಾಣಲಿಂಗವಿರುವದು. ಅದಕ್ಕಾಗಿ ಬಾಹ್ಯವಾಗಿ ಇಷ್ಟಲಿಂಗ ಧರಿಸುವ ಅವಶ್ಯಕತೆ ಇಲ್ಲವೆಂದು ಕೆಲವರು ವಾದಿಸುತ್ತಾರೆ. ಆದರೆ ಇದು ಸರಿಯಲ್ಲವೆಂದು ಆಗಮ ಮತ್ತು ವಚನಗಳು ತಿಳಿಸುತ್ತವೆ.

ಸುಪ್ರಭೇದಾಗಮವು ಒಂದು ಉದಾಹರಣೆಯ ಮೂಲಕ ಇಷ್ಟಲಿಂಗ ಧಾರಣೆಯ ಅವಶ್ಯಕತೆಯನ್ನು ವಿವರಿಸುತ್ತದೆ.

ಗವಾಂ ಸರ್ಪಿಃ ಶರೀರಸ್ಥಂ ನ ಕರೋತ್ಯಾತ್ಮಪೋಷಣಂ ।
ನಿಃಸೃತಂ ಕರ್ಮರಚಿತಂ ಪುನಸ್ತಾಸಾಂ ತು ಭೇಷಜಂ ॥
ಏವಮಂತಃ ಶರೀರಸ್ಥಃ ಸರ್ಪಿವತ್ಪರಮೇಶ್ವರಃ ।
ವಿನಾ ಚೋಪಾಸನಾಂ ದೇವೋ ನ ಕರೋತಿ ಹಿತಂ ನೃಣಾಂ ॥[೨೦]

ಒಂದು ಆಕಳಿಗೆ ಮೈಮೇಲೆ ಹುಣ್ಣು ಆದಾಗ ಪಶು ವೈದ್ಯ ಬಂದು ಔಷಧ ಕೊಟ್ಟು ಅದನ್ನು ಆಕಳ ತುಪ್ಪದಲ್ಲಿ ಬೆರಸಿ ಗಾಯಕ್ಕೆ ಲೇಪಿಸಲು ತಿಳಿಸುತ್ತಾರೆ. ಜಾಣನಾದ ಆಕಳ ಯಜಮಾನನು 'ಅದು ಕರೆವ ಹಸು. ಆದರ ಕೆಚ್ಚಲ್ಲಲ್ಲಿ ಹಾಲಿದೆ, ಆ ಹಾಲಿನಲ್ಲಿ ತುಪ್ಪವಿದ್ದೇ ಇದೆ. ಆದ್ದರಿಂದ ಔಷಧವನ್ನು ಮಾತ್ರ ಹುಣ್ಣಿಗೆ ಹಚ್ಚಿದರೆ ಸಾಕು' ಎಂದು ತಿಳಿದರೆ ಆ ಹುಣ್ಣು ಮಾಯದು, ಅದಕ್ಕಾಗಿ ಹಾಲು ಕರೆದು, ಕಾಯಿಸಿ, ಹೆಪ್ಪು ಹಾಕಿ, ಮೊಸರು ಕಡೆದು, ಬೆಣ್ಣೆತೆಗೆದು, ಅದನ್ನು ಕಾಯಿಸಿ ತುಪ್ಪ ಮಾಡಿ ಅದನ್ನು ಔಷಧಕ್ಕೆ ಬೆರೆಸಿ ಗಾಯಕ್ಕೆ ಲೇಪಿಸಿದಾಗಲೇ ಅದು ವಾಸಿಯಾದೀತು! ಅದರಂತೆ ಮಾನವನ ಶರೀರದಲ್ಲಿ ಶಿವಕಲೆ ಇರುವುದು ನಿಜ. ಮಾನವನಿಗೆ ಬಂದಿರುವ ಹುಟ್ಟು ಸಾವು ಎಂಬ "ಭವರೋಗ"ವು ವಾಸಿಯಾಗಬೇಕಾದರೆ ಸದ್ಗುರು ಎಂಬ ಭವರೋಗ ವೈದ್ಯನು ಇಷ್ಟಲಿಂಗವೆಂಬ ಔಷಧಕ್ಕೆ ಅವನಲ್ಲಿಯೇ (ಆ ಶಿಷ್ಯನಲ್ಲಿಯೇ) ಇರುವ ಶಿವಕಲೆಯನ್ನು ಆಕರ್ಷಿಸಿ, ಇಷ್ಟಲಿಂಗದಲ್ಲಿ ಸ್ಥಾಪಿಸಿ, ಅದನ್ನು ಶಿಷ್ಯನಿಗೆ ಧರಿಸಿ, ವಿಧ್ಯುಕ್ತವಾಗಿ ಭಕ್ತಿಯಿಂದ ಆರಾಧಿಸಲು ಆದೇಶಿಸುತ್ತಾನೆ. ಗುರುವಿನ ಆದೇಶದಂತೆ ಆ ಲಿಂಗವನ್ನು ಪೂಜಿಸಿ, ಅನುಸಂಧಾನ ಮಾಡುವುದರಿಂದ ಮಾನವನು ಭವರೋಗದಿಂದ ಬಿಡಲ್ಪಟ್ಟು ಮುಕ್ತನಾಗುತ್ತಾನೆ ಎಂದು ಅತ್ಯಂತ ಮನೋಜ್ಞವಾಗಿ ಇಷ್ಟಲಿಂಗ ಧಾರಣದ ಅವಶ್ಯಕತೆಯನ್ನು ವಿವರಿಸಿದೆ.

ವಚನಕಾರರೂ ಸಹ ತಮ್ಮ ಅನೇಕ ವಚನಗಳಲ್ಲಿ ಇಷ್ಟಲಿಂಗದ ಅವಶ್ಯಕತೆಯನ್ನು ನಿರೂಪಿಸಿದ್ದಾರೆ. ಚೆನ್ನಬಸವಣ್ಣನವರು –

ಘಟದೊಳಗಿದ್ದ ಪದಾರ್ಥವು, ಆ ಘಟದ ಹೊರಗೆ
ಉರಿಯ ಹೊತ್ತಿಸಿದಲ್ಲದೆ ಪರಿಪಕ್ವವಾಗದು.

---

೨೦. ಸುಪ್ರಭೇದಾಗಮ ಪಟಲ ೭, ಶ್ಲೋಕ ಸಂಖ್ಯೆ ೫೭-೫೮

ಹಾಗೆ ಅಂತರಂಗದಲಿರ್ದ ಚಿದ್ವಸ್ತು ಸಂಸ್ಕಾರಬಲದಿಂದ ಹೊರ ಹೊರಟಲ್ಲದೆ
ಅಂತರಂಗದಲಿರ್ದ ಭವರೋಗ ಮಾಣದು
ಇದು ಕಾರಣ ಕೂಡಲ ಚೆನ್ನಸಂಗಮದೇವಾ
ಅರ್ಚನ ಅರ್ಪಣ ಅನುಭಾವಾದಿಗಳಿಂದ ನೀವು ಪ್ರಕಟಗೊಳ್ಳುವಿರಾಗಿ.[೨೧]

ಎನ್ನುತ್ತ ಪಾತ್ರೆಯೊಳಗೆ ಹಾಕಿದ ಅಕ್ಕಿಯು ಅದರ ಹೊರಗೆ ಉರಿಯನ್ನು ಹಚ್ಚಿದಾಗ ಮಾತ್ರ ಅದು ಅನ್ನವಾಗುವುದು; ಅದರಂತೆ ಸದ್ಭಕ್ತನ ಅಂತರಂಗದಲ್ಲಿ ಹುದುಗಿಕೊಂಡಿರ್ಪ ಚಿದ್ವಸ್ತುವನ್ನು ಇಷ್ಟಲಿಂಗ ರೂಪದಲ್ಲಿ ಸತ್ಕ್ರಿಯಾಚರಣೆಗಳಿಂದ ಅರ್ಚಿಸಿದಾಗಲೇ ಅವನ ಭವರೋಗ ನಾಶವಾಗುವುದು. ಏಕೆಂದರೆ ಇಷ್ಟಲಿಂಗವು ಗುರು ಕರುಣಿಸಿಕೊಟ್ಟ ಅರುಹಿನ ಕುರುಹಾಗಿರುತ್ತದೆ. ಕಾರಣ –

ಸಾಕಾರವಿಡಿದು ಅರ್ಚನೆ ಪೂಜನೆಯಂ ಮಾಡುವುದಲ್ಲದೆ
ನಿರಾಕಾರವ ನಂಬಲಾಗದು.ಅಗ್ನಿಯಲ್ಲಿಹ ಗುಣವು ಪ್ರಕಾಶದಲುಂಟೆ?
ಶ್ರೀ ಗುರು, ಕರಸ್ಥಲದಲ್ಲಿ ಬಿಜಯಂಗೈಸಿ ಕೊಟ್ಟ ಇಷ್ಟಲಿಂಗವಿದ್ದ ಹಾಂಗೆ[೨೨]
ವಜ್ರದೊಳಗೆ ಬಯಲನರಸುವರೆ? ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

ಎಂದು ನಿರಾಕಾರವನ್ನರಿಯಬೇಕಾದರೆ ಸಾಕಾರವಿಡಿಯಲೇಬೇಕು. "ಆಕಾಶದಲ್ಲಾಡುವ ಪಟಕ್ಕಾದರೂ ಮೂಲ ಸೂತ್ರವಿರಬೇಕು. ಕಲಿಯಾದರೂ ಕಜ್ಜವಿಲ್ಲದೆ ಆಗದು. ಭೂಮಿ ಇಲ್ಲದೆ ಬಂಡಿ ನಡೆವುದೆ? ಅಂಗಕ್ಕೆ ಲಿಂಗವಿಲ್ಲದೆ ನಿಸ್ಸಂಗವಾಗಲಾರದು" ಎನ್ನುವ ಚೆನ್ನಬಸವಣ್ಣನ ಮಾತಿನಂತೆ ನಿಸ್ಸಂಗತ್ವವನ್ನು ಸಾಧಿಸಲು ಲಿಂಗಸಂಗ ಅನಿವಾರ್ಯ. ಭೂಮಿ ಇಲ್ಲದೆ ಬಂಡಿ ನಡೆಯಲಾರದು; ಇಷ್ಟಲಿಂಗ ಸಂಬಂಧವಿಲ್ಲದೆ, ಅದರ ಪೂಜಾದಿ ಕ್ರಿಯೆಗಳಿಂದ ಸಾಧನೆಯಲ್ಲಿ ಮುಂದುವರಿಯದೆ ಕೇವಲ ಪ್ರಾಣಲಿಂಗದ ಸ್ವರೂಪವನ್ನು ಕಂಡುಕೊಳ್ಳುತ್ತೇನೆಂದರೆ ಅದು ಸಾಧ್ಯವಾಗುವುದಿಲ್ಲ. ಸತ್ ಸಾಧನೆಯಿಲ್ಲದೆ ಸತ್ಫಲ ಲಭಿಸಲಾರದು.

ಸತಿಯ ಸಂಗವತಿ ಸುಖವೆಂದರಿದೊಡೇನು?
ಗಣ ಸಾಕ್ಷಿಯಾಗಿ ವಿವಾಹವಾಗದನ್ನಕ್ಕರ?
ಕಣ್ಣು ಕಾಂಬುದೆಂದಡೆ. ಕತ್ತಲೆಯಲ್ಲಿ ಕಾಂಬುದೆ ದೀಪವಿಲ್ಲದನ್ನಕ್ಕರ?
ಸೂರ್ಯನ ಪ್ರಕಾಶದಿಂದ ಕಂಡು ತಾನೆ, ಕಂಡೆನೆಂಬ
ಜಗದ ನಾಣ್ಣುಡಿಯಂತಾಯಿತ್ತು. ಅಂಗವ ಬಿಟ್ಟು ಆತ್ಮನುಂಟೆ?
ಶಕ್ತಿಯ ಬಿಟ್ಟು ಶಿವನುಂಟೇ? ಇದು ಕಾರಣ
ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯವಿರಲು,
ಇಷ್ಟ ಪ್ರಾಣ ಭಾವವೆಂಬ ತ್ರಿವಿಧ ಲಿಂಗ ಸಂಬಂಧ

---

೨೧. ಚೆನ್ನಬಸವಣ್ಣನವರ ವ.ಸಂ. ಸಮಗ್ರವಚನ ಸಂಪುಟ ೩,ವಚನ ಸಂಖ್ಯೆ ೧೨೦೩ ಪುಟ೪೧೬
೨೨. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ.೧, ವಚನ ಸಂಖ್ಯೆ ೧೬೧೧ ಪುಟ ೬೧೦

ಬೇಡವೆಂದರೆ, ಅಸಂಖ್ಯಾತ ಪ್ರಮಥ ಗಣಂಗಳೊಪ್ಪುವರೆ?
ಕೂಡಲ ಚೆನ್ನಸಂಗಯ್ಯನಲ್ಲಿ ಇಷ್ಟಲಿಂಗಸಂಬಂಧವಿಲ್ಲದವರ
ಮುಖವ ನೋಡಲಾಗದು ಪ್ರಭುವೇ.[೨೩]

ಎಂದು ಚೆನ್ನಬಸವಣ್ಣನವರು ಅನೇಕ ಸಾದೃಶ್ಯಗಳನ್ನು ಕೊಟ್ಟು ಹೇಳಿರುವರು. "ಕರಸ್ಥಲಕ್ಕೆ ಇಷ್ಟಲಿಂಗ ಸಾಹಿತ್ಯವಿಲ್ಲದಿದ್ದರೆ ಜ್ಞಾನಯೋಗದ ಕೂಟ ಸಾಧ್ಯವಾಗದು" ಎಂಬುದಾಗಿಯೂ ಅಲ್ಲಮಪ್ರಭುಗಳು ಇಷ್ಟಲಿಂಗದ ಅವಶ್ಯಕತೆಯನ್ನು ಒತ್ತಿ ಹೇಳುತ್ತಾರೆ. "ರತ್ನದೀಪ್ತಿಯಾದರೂ ಬಂಧಿಸಿ ಕುಂದಣದಲ್ಲಿಯೇ ಸಂದಿರಬೇಕು; ಸ್ವಾದುರಸದ ರುಚಿಯನೀವ ಫಲವಾದರೂ ವೃಕ್ಷದಿಂದಲೇ ಲಭಿಸಬೇಕು; ಚಿತ್ರಸೌಂದರ್ಯ ನೋಟಕ್ಕೆ ಸುಖವಾದರೂ ಭಿತ್ತಿಯ ಮೇಲೆಯೇ ಅದನ್ನು ಚಿತ್ರಿಸಬೇಕು"–ಈ ಮುಂತಾದ ಉದಾಹರಣೆಗಳಿಂದ ಅದನ್ನು ಸಮರ್ಥಿಸಿದ್ದಾರೆ.

'ಪಂಚತತ್ವದಲ್ಲಿದ್ದು, ಪರತತ್ವವನರಿಯಬೇಕು. ಅದಕ್ಕೆ ದೃಷ್ಟ ಪಶುವಿನ ಹೊಟ್ಟೆಯಲ್ಲಿ ಕರುವಿದ್ದರೆ, ಕರೆವುದಕ್ಕೆ ಮನೋಹರ ಉಂಟೇ, ಅದು ಭಿನ್ನ ಭಾವವಾಗಿ ಇದಿರಿಟ್ಟು ಉಂಡಲ್ಲದೆ? ಆ ತೆರನನರಿದಲ್ಲಿ, ಅರಿವುದಕ್ಕೊಂದು ಕುರುಹುಬೇಕು. ಬಲ್ಲಿದ ವೀರನೆಂದೊಡೆ, ಅಲಗಿನ ಮೊನೆಯಲ್ಲಲ್ಲದೆ, ಗೆಲಬಹುದೇ? ಸದಾಶಿವಮೂರ್ತಿ ಲಿಂಗವನರಿವುದಕ್ಕೆ, ಇದಿರಿಟ್ಟು ಕಳೆದುಳಿಯಬೇಕು'[೨೪] ಎಂದು ಇಷ್ಟಲಿಂಗದ ಅವಶ್ಯಕತೆಯನ್ನು ಸಾರಿದ್ದಾರೆ.

ವೀರಶೈವರದು ನಿರಾಕಾರ ತತ್ವವೊಂದೇ ಸತ್ಯವೆಂಬ ಅದ್ವೈತಮಾರ್ಗವಲ್ಲ; ಹಾಗೆಯೇ ಕೇವಲ ಸಾಕಾರದಲ್ಲಿಯೇ ಪರ್ಯವಸನವಾಗುತ್ತದೆ ಎಂಬ ದ್ವೈತವೂ ಅಲ್ಲ; ಸಾಕಾರವಿಡಿದು ನಿರಾಕಾರಕ್ಕೇರುವ ಸಮನ್ವಯಮಾರ್ಗ. ಇಷ್ಟಲಿಂಗೋಪಾಸನೆಯಲ್ಲಿ ಅದು ವ್ಯಕ್ತವಾಗುತ್ತದೆ. ಇಷ್ಟಲಿಂಗ ಸಾಕಾರವೂ ಅಲ್ಲ; ನಿರಾಕಾರವೂ ಅಲ್ಲ. 'ನಿರಾಕಾರವೆಂಬೆನೆ, ಸಾಕಾರವಾಗಿದೆ; ಸಾಕಾರವೆಂಬೆನೆ ನಿರಾಕಾರವಾಗಿದೆ.' ಏಕೆಂದರೆ ಅಂತರಂಗದಲ್ಲಿದ್ದ ನಿರಾಕಾರ ಲಿಂಗವನ್ನು ಗುರುವು ಸಾಕಾರಲಿಂಗವನ್ನಾಗಿ ಮಾಡಿ ಶಿಷ್ಯನ ಕರಸ್ಥಲಕ್ಕೆ ತಂದು ಕೊಡುತ್ತಾನೆ. ಹೀಗೆ ನೋಟಕ್ಕೆ ಇದು ಸಾಕಾರವಾಗಿದ್ದರೂ ಇದರ ಮೂಲ ಇರುವುದು ನಿರಾಕಾರದಲ್ಲಿ; ಅದರ ಫಲ ದೊರಕೊಳ್ಳುವುದು ನಿರಾಕಾರದಲ್ಲಿಯೇ. ಕಾರಣ ಇಷ್ಟಲಿಂಗದ ಉಪಾಸನೆಯಲ್ಲಿ ಇತರ ಮೂರ್ತಿಪೂಜೆಗಳಂತಹ ದ್ವೈತ ಭಾವನೆ ಉಂಟಾಗುವುದಿಲ್ಲ. ಇಷ್ಟಲಿಂಗದಲ್ಲಿ ಸಾಧಕನು ತನ್ನನ್ನೇ ತಾನು ಕಂಡುಕೊಳ್ಳುತ್ತಾನೆ. ಕಾರಣ ಸೂಕ್ಷ್ಮಾಗಮವು –

ತಸ್ಮಾತ್ಸರ್ವೈಃ ಸದಾ ಕಾರ್ಯಂ ಲಿಂಗಾರಾಧನಮಾದರಾತ್ ॥
ಶ್ರೀಲಿಂಗಧಾರಣಂ ಹಿತ್ವಾ ಯದೀಚ್ಛೇತ ಸಿದ್ಧಿಮಾತ್ಮನಃ।

---

೨೩. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೬೪೨ ಪುಟ ೬೦೦
೨೪. ವಚನ ಶಾಸ್ತ್ರಸಾರ –ಫ.ಗು. ಹಳಕಟ್ಟಿ–(ಸನ್ ೧೯೨೩) ವಚನ ಸಂಖ್ಯೆ ೨ ಪುಟ ೬೪

ಸೂರ್ಯಚಂದ್ರಮಸೌ ಜಂತೋರಾಯುಷ್ಯಕ್ಷಯಕಾರಕೌ ॥
ತಸ್ಮಾಲ್ಲಿಂಗಾರ್ಚನಂ ಕುರ್ಯಾತ್ ಸರ್ವಧರ್ಮೋತ್ತಮೋತ್ತಮಮ್।
ಯಾವತ್ಕರಣಸಾಮರ್ಥ್ಯಂ ಜರಾ ಯಾವನ್ನ ಸಂಸ್ಪೃಶೇತ್।
ಸ್ಥಿರತ್ವಂ ಮನಸೋ ಯಾವತ್ತಾವತ್ಕುರ್ಯಾಚ್ಛಿವಾರ್ಚನಮ್ ॥[೨೫]

ಎಲ್ಲರೂ, ಎಲ್ಲ ಕಾಲದಲ್ಲಿಯೂ ಇಷ್ಟಲಿಂಗದ ಆರಾಧನೆಯನ್ನು ಮಾಡಬೇಕು. ಸಾಧಕನು ಇಷ್ಟಲಿಂಗಧಾರಣೆ ಮಾಡಿಕೊಳ್ಳದೆ, ಬೇರೆ ಸಾಧನದಿಂದ ಸಿದ್ಧಿಗಳನ್ನು ಪಡೆಯಲು ಬಯಸಿದರೆ ಅಂತಹ ವ್ಯಕ್ತಿಯ ಆಯುಷ್ಯವನ್ನು ಸೂರ್ಯ-ಚಂದ್ರರು ನಷ್ಟ ಮಾಡುತ್ತಾರೆ. ಅರ್ಥಾತ್ ಇಷ್ಟಲಿಂಗಧಾರಣೆ ಮಾಡದೆ ಮೋಕ್ಷ ಲಭಿಸದು. ಆದ್ದರಿಂದ ಸರ್ವಧರ್ಮಗಳಲ್ಲಿ ಶ್ರೇಷ್ಠವಾದ ಲಿಂಗಾರ್ಚನೆಯನ್ನು ಮಾಡಬೇಕು. ಮುಪ್ಪು ಬಾರದ ಮುನ್ನ, ಇಂದ್ರಿಯಗಳು ಸಾಮರ್ಥ್ಯವಿರುವಾಗಲೇ ಮನಸ್ಸುಗೊಟ್ಟು ಲಿಂಗಪೂಜೆ ಮಾಡಬೇಕು. (ಸ್ಥಿರವಾದ ಮನಸ್ಸಿದ್ದಾಗಲೇ ಶಿವಾರ್ಚನೆಯನ್ನು ಮಾಡಬೇಕು) ಎಂದು ಅರುಹಿವೆ.

ಇಷ್ಟಲಿಂಗದಲ್ಲಿ ವೈಜ್ಞಾನಿಕತೆಯೂ ಸಾಕಷ್ಟು ವ್ಯಕ್ತವಾಗುತ್ತದೆ. ಇಷ್ಟಲಿಂಗದ ಪೀಠಿಕೆಯ ಪಂಚ ಸೂತ್ರಗಳು ದೇಹಿಯ ದೇಹದ ಪಂಚಲಕ್ಷಣಗಳನ್ನು ಹೊಂದಿದೆ. ಲಿಂಗದ ಮೇಲಿರಿಸುವ ಕಂಥೆಯು ಚೌಪದೀಯ ಗುಣಗಳಿಂದ ಕೂಡಿದ್ದು ಕಾಂತಮಯವಾಗಿದೆ. ದೃಷ್ಟಿ ಯೋಗಕ್ಕೆ ಅತ್ಯಂತ ಸಹಕಾರಿಯಾಗಿದೆ. ಕಪ್ಪು ಚುಕ್ಕೆಯನ್ನು ನೋಡಿ ಸಾಧಿಸುವ ಮೆಸ್ಮೆರಿ ಝುಮ್‌ಗಿಂತಲೂ ಕ್ರಿಯಾ, ಜ್ಞಾನ, ಇಚ್ಛಾ, ಆದಿ, ಪರಾ, ಚಿಚ್ಛಕ್ತಿ ಈ ಆರು ಶಕ್ತಿಗಳಿಂದ ಪರಿಪೂರ್ಣವಾದ ಇಷ್ಟಲಿಂಗದ ಅನುಸಂಧಾನ ಮಾಡುವದರಿಂದ ಶ್ರದ್ಧಾ, ನಿಷ್ಠಾ, ಸಾವಧಾನ, ಅನುಭವ, ಆನಂದ, ಸಮರಸಗಳೆಂಬ ಆರು ಭಕ್ತಿಗಳು ಪಕ್ವಗೊಳ್ಳುವವು. ಕಾಂತಮಯವಾದ ಲಿಂಗದಲ್ಲಿ ವಿದ್ಯುನ್ಮಯತೆಯು (ಪ್ರಕಾಶ) ತುಂಬಿಕೊಂಡಿದೆ. ಕಾರಣ "ಕರಸ್ಥಲದ ಜ್ಯೋತಿಯದು. ಕುರುಹದು, ಎರಕವದು, ಅದರ ನೆಲೆಯ ತಿಳಿದರೆ ನಿಜಾನಂದವು. ಹೊಲಬುದೋರದಿಹ ನಿಸ್ಸೀಮನ ಹೊಲಬನರಿದು ಕೂಡಿದಾತನೇ ಮೃಡನು ಕಾಣಾ ರಾಮನಾಥಾ"[೨೬] ಎಂದಿದ್ದಾರೆ.

ಲಿಂಗಂ ವಿಶ್ವಾತ್ಮಕ ಧ್ಯಾಯೇದಾದಿಮಧ್ಯಾಂತವರ್ಜಿತಮ್ ।
ಭಕ್ತೀಚ್ಛಾವಶತೋ ಭಕ್ತಪಾಣಿಪಂಕಜಸಂಸ್ಥಿತಮ್ ॥[೨೭]

ಲಿಂಗವು ವಿಶ್ವ ಸ್ವರೂಪವಾಗಿದ್ದು, ಆದಿ-ಮಧ್ಯ-ಅಂತ್ಯಗಳಿಲ್ಲದ್ದು, ಅದು ಸಾಧಕನ ಭಕ್ತಿ-ಇಚ್ಛೆಗಳ ಕಾರಣದಿಂದ ಭಕ್ತನ ಕರಪಂಕಜದಲ್ಲಿ ನೆಲೆಸಿದೆ ಎಂಬ ಪಾರಮೇಶ್ವರಾಗಮದ ಉಕ್ತಿಯಂತೆ ಆದ್ಯಂತರಹಿತನಾದ ಪರಶಿವನೇ ಲಿಂಗರೂಪದಲ್ಲಿ ಭಕ್ತರ ಇಷ್ಟಾರ್ಥಸಿದ್ಧಿಗಾಗಿ ಕರಕಮಲದಲ್ಲಿ ನೆಲೆಸಿದ್ದಾನೆ. ಇದನ್ನೇ ಬಸವಣ್ಣನವರು-

---

೨೫. ಸೂ. ಆ. ಪಟಲ ೭, ಶ್ಲೋಕ ಸಂಖ್ಯೆ ೮೬-೮೮
೨೬. ವಚನ ಶಾಸ್ತ್ರಸಾರ -ಫ.ಗು.ಹಳಕಟ್ಟಿ-(ಸನ್ ೧೯೨೩) ವಚನ ಸಂಖ್ಯೆ ೯ ಪುಟ ೫೫
೨೭. ಪಾ.ಆ. ಪಟಲ ೧೩, ಶ್ಲೋಕ ಸಂಖ್ಯೆ ೪೩

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,
ಪಾತಾಳದಿಂದ ಅತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀ ಮಕುಟ!
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಕೂಡಲಸಂಗಮದೇವಯ್ಯಾ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ. [೨೮]

ಎಂದಿದ್ದಾರೆ. ಇದನ್ನೇ ಅಕ್ಕಮಹಾದೇವಿಯವರು "ಪಾತಾಳವಿತ್ತಿತ್ತ, ಪಾದಂಗಳತ್ತತ್ತ, ದಶದಿಕ್ಕು ಇತ್ತಿತ್ತ ದಶಭುಜಂಗಳತ್ತತ್ತ, ಬ್ರಹ್ಮಾಂಡವಿತ್ತಿತ್ತ ಮಣಿಮುಕುಟವತ್ತತ್ತ, ಚೆನ್ನಮಲ್ಲಿಕಾರ್ಜುನಯ್ಯಾ, ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲ ಲಿಂಗವೆ"[೨೯] ಎಂದಿದ್ದಾರೆ. ಇದನ್ನೇ ಚೆನ್ನಬಸವಣ್ಣನವರು –

ಕಿರಿದಾದ ಬೀಜದಲ್ಲಿ ಹಿರಿಯ ತರುವಡಗಿದ ಪರಿಯಂತೆ,
ಕರಗತವಾದ ಕನ್ನಡಿಯಲ್ಲಿ ಕರಿಗಿರಿಗಳು ತೋರುವ ಪರಿಯಂತೆ
ಜಗದ್ವ್ಯಾಪಕವಾದ ಪರವಸ್ತುವು ಖಂಡಿತಾಕಾರಮಾದ ಶರೀರದಲ್ಲಿ
ಅತಿ ಸೂಕ್ಷ್ಮ ಪ್ರಮಾಣದಲ್ಲಿರ್ಪಂತೆ,
ಪರತರಶಿವಲಿಂಗವು ಸದ್ಭಕ್ತರನುದ್ಧರಿಪ ಸದಿಚ್ಛೆಯಿಂದ
ಲಿಂಗಾಕಾರವಾಗಿ ನೆಲೆಗೊಂಡಿರ್ಪುದು.
'ಅಣೋರಣೀಯಾನ್ ಮಹತೋ ಮಹೀಯಾನ್' ಎಂದುದಾಗಿ,
ಪರಬ್ರಹ್ಮರೂಪವಾದ ಲಿಂಗವು, ಮಹದ್ರೂಪದಿಂದ ಅಖಂಡವಾಗಿಯೂ
ಅಣುರೂಪದಿಂದ ಖಂಡಿತವಾಗಿಯೂ ತೋರುವುದು.
ಕೂಡಲಚೆನ್ನಸಂಗಮದೇವಾ ಇದು ನಿಮ್ಮ ದಿವ್ಯಲೀಲೆಯಯ್ಯಾ. [೩೦]

ಎಂದಿದ್ದಾರೆ. ಸಮುದ್ರದಲ್ಲಿ ಸಕಲ ನದಿಗಳು ಸಮಾವೇಶಗೊಂಡಿರುವಂತೆ ಈ ಲಿಂಗದಲ್ಲಿ ಸಕಲವೂ ಒಳಗೊಂಡಿದೆ. ಇದು ಸರ್ವೇಶ್ವರತ್ವದ ಕುರುಹಾಗಿದ್ದು ಸರ್ವಾಂತರ್ಯಾಮಿಯು ಇದಾಗಿದೆ. ಕಾರಣ ಆಗಮಗಳು–

ಯಸ್ತು ಪೂಜಯತೇ ನಿತ್ಯಂ ಲಿಂಗಂ ತ್ರಿಭುವನೇಶ್ವರಮ್।
ಸ ಸರ್ವಮೋಕ್ಷರಾಜ್ಯಸ್ಯ ಕ್ಷಿಪ್ರಂ ಭವತಿ ಭಾಜನಮ್ ॥
ಸರ್ವೇ ಲಿಂಗಮಯಾ ಲೋಕಾಃ ಸರ್ವಂ ಲಿಂಗೇ ಪ್ರತಿಷ್ಠಿತಮ್ । [೩೧]
ತಸ್ಮಾತ್ ಸಂಪೂಜಯೇಲ್ಲಿಂಗಂ ಯದೀಚ್ಛೇತ್ ಸಿದ್ಧಿಮಾತ್ಮನಃ॥

೨೮. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೭೪೪ ಪುಟ ೧೮೬

೨೯. ಸಮಗ್ರ ವಚನ ಸಂಪುಟ ೫, ವಚನ ಸಂಖ್ಯೆ ೨೭೯ ಪುಟ ೮೨

೩೦. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೧೨೧. ಪುಟ ೩೮೧

೩೧ ಚಂ. ಆ. ಕ್ರಿ ಪಾ. ಪಟಲ ೩, ಶ್ಲೋಕ ಸಂಖ್ಯೆ ೫೨ – ೫೩

ಎಲ್ಲಾ ಲೋಕಗಳೂ ಲಿಂಗಮಯ. ಎಲ್ಲವೂ ಲಿಂಗದಲ್ಲಿಯೇ ನೆಲೆಯಾಗಿವೆ. ಆದ್ದರಿಂದ ಆತ್ಮಸಿದ್ಧಿಯನ್ನು ಬಯಸುವವನು ಲಿಂಗವನ್ನು ಪೂಜಿಸಬೇಕು. ಯಾರು ಮೂರು ಲೋಕಗಳ ಒಡೆಯನಾದ ಲಿಂಗವನ್ನು ನಿತ್ಯವೂ ಪೂಜಿಸುವನೋ ಅವನು ಶೀಘ್ರವೇ ಸಮಗ್ರ ಮೋಕ್ಷರಾಜ್ಯಕ್ಕೆ ಯೋಗ್ಯನಾಗುತ್ತಾನೆಂದು ಸಾರಿವೆ. ಶಿವಲಿಂಗದಲ್ಲಿ ಭಕ್ತರ ಉದ್ಧಾರಕ್ಕಾಗಿಯೇ ಸದಾಕಾಲವೂ ಶಿವನು ಸನ್ನಿಹಿತನಾಗಿರುತ್ತಾನೆ. ಆದುದರಿಂದ ಇಷ್ಟಲಿಂಗಪೂಜೆಯು ಅತ್ಯಗತ್ಯ. ಪ್ರಣತಿಯಲ್ಲಿ ಎಣ್ಣೆ ಬತ್ತಿಯನ್ನು ಹಾಕಿ ಜ್ಯೋತಿ ಮುಟ್ಟಿಸಿದರೆ ಕಿರಣಗಳು ಹರಡಿ ಪ್ರಕಾಶವು ಪಸರಿಸುವಂತೆಯೇ ಇಷ್ಟಲಿಂಗವೆಂಬ ಜ್ಯೋತಿ ಗುರುವಿನಿಂದ ಬೆಳಗಿದಾಗ ಪ್ರಾಣಲಿಂಗದ ಕಿರಣಗಳು ಸಕಲೇಂದ್ರಿಯಗಳಲ್ಲಿ ವ್ಯಾಪಿಸಿ ಭಾವಲಿಂಗದ ಬೆಳಕು ಹರಡುವದು. ಕಾರಣ ವೀರಶೈವರ ಸಾಧನೆ ಇಷ್ಟಲಿಂಗದೊಂದಿಗೆ ಪ್ರಾರಂಭಗೊಂಡು ಪ್ರಾಣಲಿಂಗದಲ್ಲಿ ಪಕ್ವವಾಗಿ ಭಾವಲಿಂಗದಲ್ಲಿ ಪರಿಪೂರ್ಣಗೊಳ್ಳುತ್ತದೆ. ಕಾರಣ ಇಷ್ಟಲಿಂಗಧಾರಣೆ ಅತೀ ಅಗತ್ಯವೆಂಬ ಆಗಮದ ಅಭಿಪ್ರಾಯವನ್ನೇ ವಚನಗಳು ಸಾರುತ್ತ ಇಷ್ಟಲಿಂಗ ಧಾರಣೆಯ ಪ್ರಾಚೀನತೆಯನ್ನರುಹಿವೆ.

ಇಷ್ಟಲಿಂಗ ಧಾರಣೆಯ ಪ್ರಾಚೀನತೆ

ಇಷ್ಟಲಿಂಗ ಧಾರಣೆಯ ಪ್ರಾಚೀನತೆಯನ್ನರುಹುತ್ತ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಮೊದಲಾದವರೆಲ್ಲ ಲಿಂಗಧಾರಣೆ ಮಾಡಿಕೊಂಡಿದ್ದಾರೆ ಎಂದು ಆಗಮೋಕ್ತಿಗಳ ಉಲ್ಲೇಖದೊಂದಿಗೆ ವಚನಗಳು ತಿಳಿಸಿವೆ.

ಇನ್ನು ಲಿಂಗಧಾರಣ ಮಹಾತ್ಮೆಯ ಸ್ಥಲವೆಂತೆಂದಡೆ:
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಮೊದಲಾದ
ಸಮಸ್ತಗಣಂಗಳೆಲ್ಲರೂ ಶಿವಲಿಂಗಧಾರಣವಾಗಿ
ಶಿವಪೂಜೆಯ ಮಾಡಿದರು ನೋಡಾ.......
ಇದಕ್ಕೆ ವಾತುಲತಂತ್ರೇ :
"ಬ್ರಹ್ಮವಿಷ್ಣುಸುರೇಶಾದಿ ದೇವತಾಃ ಪರಯಾ ಮುದಾ।
ಶಿರೋಭಿರ್ಧಾಯಂತ್ಯೇತಾಃ ಶಿವಲಿಂಗಮಹರ್ನಿಶಂ॥
ಪಾಣಿನಿಶ್ಚ ಕಣಾದಶ್ಚ ಕಪಿಲೋ ಗೌತಮಾದಯಃ।
ಪ್ರಸಾದಸೇವನಾದ್ಧ್ಯಾನಾದರ್ಚನಾದ್ಧಾರಣಾದಪಿ॥
ಕಂಠೇಷು ಹರಕಂಠಾದಿ ಮುನಯೋ ಮಾನವಾಸ್ತಥಾ।
ಸರ್ವದಾ ಶಿವಲಿಂಗಂತು ಧಾರಯಂತಿ ಯಜಂತಿ ಚ॥"[೩೨]

ಎಂದಿದ್ದಾರೆ. ಚೆನ್ನಬಸವಣ್ಣನವರೂ ಇಷ್ಟಲಿಂಗ ಧಾರಣೆಯ ಪ್ರಾಚೀನತೆಯನ್ನರುಹುತ್ತ –

ಇತಿಹಾಸೇಷು ವೇದೇಷು ಪುರಾಣೇಷು ಪುರಾತನೈಃ।
ಮಹರ್ಷಿಭಿರ್ಮಹಾದೇವೋ ಮಹನೀಯಃ ಪ್ರತಿಷ್ಠಿತಃ॥

---

೩೨. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೩೩೬ ಪುಟ ೧೫೦

ಇಂತೆಂದುದಾಗಿ ಪುರಾತನರಲ್ಲಿ ಆದ್ಯಂತರಾಗಿದ್ದ ಮಹಾಋಷಿಗಳೆಲ್ಲರೂ
ರತ್ನ ಸುವರ್ಣ ರಜತ ತಾಮ್ರ ಚಂದ್ರಕಾಂತ ಸ್ಫಟಿಕ ಪವಳಲಿಂಗಂಗಳ
ಆರಾಧಿಸಿದರು. ಅಗಸ್ತ್ಯ ದಧೀಚಿ ಕಂಕದ ಬಾಣಾಸುರ ಪುರಂದರ ಬ್ರಹ್ಮವಿಷ್ಣು
ದೂರ್ವಾಸ ನಂದಿಕೇಶ್ವರ ಸ್ಕಂದ ಭೃಂಗಿರಿಟಿ ವೀರಭದ್ರಾದಿಗಣಂಗಳೆಲ್ಲರೂ
ರುದ್ರೇಣ ದೀಕ್ಷಿತೋ ಭೂತ್ವಾ ಸ್ಕಂದಃ ಶಿವಸಮುದ್ಭವಃ।
ಶಿವಾಚಾರರಹಸ್ಯಸ್ಯ ಪಾತ್ರತಾಂ ಪರಮಾಂ ಗತಃ॥ [ಇಂತೆಂದುದಾಗಿ]
ಇದನರಿದು ಪರಶುರಾಮ ಪರಾಶರ ವಶಿಷ್ಠ ವಾಲ್ಮೀಕಿ
ಕಮಲಾಕರ ವಿಶ್ವಾಮಿತ್ರ ಮಹಾಮುನಿಗಳೆಲ್ಲರೂ
ಪಾಣಿನಿಶ್ಚ ಕಣಾದಶ್ಚ ಕಪಿಲೋ ಗೌತಮಾದಯಃ।
ಪ್ರಸಾದಸೇವನಾದ್ಧ್ಯಾನಾದರ್ಚನಾದ್ಧಾರಣಾದಪಿ॥ ಇಂತೆಂದುದಾಗಿ
ಇದು ಕಾರಣ ಕೂಡಲಚೆನ್ನಸಂಗಮದೇವರನಾರಾಧಿಸಿ,
ಪ್ರಸಾದ ಪಾದೋದಕವ ಕೊಂಡು ಅತಿಶುದ್ಧರಾದರು[೩೩]
ಎಲ್ಲಾ ದೇವರುಗಳು, ಎಲ್ಲಾ ಋಷಿಜನಂಗಳು.

ಎಂದು ಎಲ್ಲಾ ದೇವರುಗಳು, ಎಲ್ಲಾ ಋಷಿಜನಂಗಳು ಲಿಂಗ ಧರಿಸಿ, ಪ್ರಸಾದ ಪಾದೋದಕವನ್ನು ಪಡೆದು ಅತಿಶುದ್ಧರಾಗಿ ಧನ್ಯರಾಗಿರುವರೆಂದು ತಿಳಿಸುತ್ತಾ ವಚನಗಳು ಇಷ್ಟಲಿಂಗ ಧಾರಣೆಯ ಪ್ರಾಚೀನತೆಯನ್ನರುಹಿವೆ.

ಈ ಇಷ್ಟಲಿಂಗದ ಲಕ್ಷಣಗಳು, ಇಷ್ಟಲಿಂಗವನ್ನು ನಿರ್ಮಿಸಲು ಬಳಸಬೇಕಾದ ಶಿಲೆಗಳು, ಇಷ್ಟಲಿಂಗದ ಗಾತ್ರ, ಇಷ್ಟಲಿಂಗ ಸಂಸ್ಕಾರವಿಧಿ, ಇಷ್ಟಲಿಂಗವನ್ನು ಶರೀರದ ಮೇಲೆ ಧರಿಸುವ ಸ್ಥಾನಗಳು, ಇಷ್ಟಲಿಂಗಧಾರಣೆಯ ವಿಧಾನವನ್ನು ಆಗಮಗಳಲ್ಲಿ ಸವಿಸ್ತಾರವಾಗಿ ಚರ್ಚಿಸಲಾಗಿದೆ.

ಇಷ್ಟಲಿಂಗದ ಲಕ್ಷಣ ಮತ್ತು ಅಳತೆ

ಶಿವ-ಶಕ್ತಿ ಭಾಗಗಳಿಂದ ಕೂಡಿದ, ಸೃಷ್ಟಿ-ಸ್ಥಿತಿ-ಲಯಾತ್ಮಕವಾದ ಲಿಂಗವು ಪಂಚಸೂತ್ರಕ್ಕೆ ಸರಿಯಾಗಿರಬೇಕೆಂದು ಆಗಮಗಳು ಅರುಹುತ್ತವೆ.

ಲಿಂಗವೃತ್ತಸಮಂ ಪೀಠಂ ದೀರ್ಘಂ ವಿಸ್ತಾರ ಮುನ್ನತಮ್।
ತದರ್ಧಂ ಗೋಮುಖಂ ಚೈವ ಪಂಚಸೂತ್ರಂ ಪ್ರಕೀರ್ತಿತಮ್॥ [೩೪]

ಅರ್ಥಾತ್ "ಲಿಂಗದ ಪೀಠ, ಉದ್ದ, ಅಗಲ ಮತ್ತು ಎತ್ತರಗಳು ಲಿಂಗದ ಸುತ್ತಳತೆಗೆ ಸಮನಾಗಿರಬೇಕು. ಗೋಮುಖವು ಲಿಂಗದ ಸುತ್ತಳತೆಯ ಅರ್ಧದಷ್ಟಿರಬೇಕು. ಈ ಐದು ಲಕ್ಷಣಗಳಿಂದ ಕೂಡಿರುವ ಲಿಂಗವನ್ನು 'ಪಂಚಸೂತ್ರಲಿಂಗ'ವೆಂದು ಕರೆಯಲಾಗುತ್ತದೆ"

---

೩೩. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೪೭ ಪುಟ ೪೩

೩೪. ಮ.ಆ.ಕ್ರಿ.ಪಾ. ಪಟಲ ೪, ಶ್ಲೋಕ ಸಂಖ್ಯೆ ೪೬

ಶಿವಲಿಂಗವು ಶಿವ–ಶಕ್ತಿ ಇವರಿಬ್ಬರ ರೂಪವಾಗಿದೆ. ಅದರಂತೆ ಶಿವಲಿಂಗದ ಮೇಲಿರುವ ಬಾಣವು ಶಿವಸ್ವರೂಪ, ಶಿವಲಿಂಗದ ಕೆಳಗಿರುವ ಪೀಠವು ಶಕ್ತಿಸ್ವರೂಪ. ಶಿವಲಿಂಗದ ನಿರ್ಮಾಣದ ಸಂದರ್ಭದಲ್ಲಿ ಮೊದಲಿಗೆ ಬಾಣಲಿಂಗವನ್ನು ನಿರ್ಮಿಸಿ, ಅನಂತರ ಲಿಂಗದ ಸುತ್ತಳತೆ, ಗಾತ್ರ ಮತ್ತು ಪೀಠವನ್ನು ರಚಿಸಲಾಗುತ್ತದೆ. ಪೀಠದ ಉದ್ದ–ಅಗಲ–ಎತ್ತರಗಳು ಲಿಂಗದ ಸುತ್ತಳತೆಗೆ ಸಮನಾಗಿರುತ್ತವೆ. ಆದರೆ ಗೋಮುಖವು ಅದರ (ಸುತ್ತಳತೆಯ) ಅರ್ಧದಷ್ಟಿರುತ್ತದೆ. ಹೀಗೆ ಲಿಂಗದ ಸುತ್ತಳತೆ, ಪೀಠದ ಸುತ್ತಳತೆ, ಪೀಠದ ಉದ್ದ, ಪೀಠದ ಕೆಳಭಾಗದ ವಿಸ್ತಾರ ಮತ್ತು ಪೀಠದ ಮೇಲ್ಭಾಗದ ವಿಸ್ತಾರ–ಲಿಂಗದ ಈ ನಾಲ್ಕು ಅವಯವಗಳ ಪರಿಮಾಣವು (ಅಳತೆ ಅಥವಾ ಗಾತ್ರವು) ಸಮಾನವಾಗಿರುತ್ತವೆ. ಗೋಮುಖದ ಪರಿಮಾಣವು ಮಾತ್ರ ಲಿಂಗದ ಸುತ್ತಳತೆಯ ಅರ್ಧದಷ್ಟಿರುತ್ತದೆ. ಇದೇ ಪಂಚಸೂತ್ರ ಪ್ರಕ್ರಿಯೆ. ಈ ಪಂಚಸೂತ್ರ ಪ್ರಕ್ರಿಯೆಯ ಪರಿಮಾಣದಲ್ಲಿ ಸ್ವಲ್ಪವೂ ಹೆಚ್ಚಾಗಿಯೂ, ಕಡಿಮೆಯಾಗಿಯೂ ಇರಬಾರದು. ಈ ಪ್ರಕ್ರಿಯೆಯಲ್ಲಿ ವ್ಯತ್ಯಾಸವಾದರೆ–

ಶಿವಾಧಿಕ್ಯೇ ಭವೇನ್ ಮೃತ್ಯುಃ ಶಕ್ತ್ಯಾಧಿಕ್ಯೇ ಧನಕ್ಷಯಃ।[೩೫]
ಶಿವಶಕ್ತಿಸಮಂ ಲಿಂಗಂ ಭುಕ್ತಿಮುಕ್ತಿಫಲಪ್ರದಮ್॥

"ಲಿಂಗ ದೊಡ್ಡದಾಗಿದ್ದರೆ ಸಾವು, ಶಕ್ತಿ ದೊಡ್ಡದಾಗಿದ್ದರೆ ಸಂಪತ್ತಿನ ನಾಶವಾಗುತ್ತದೆ. ಲಿಂಗ ಮತ್ತು ಶಕ್ತಿ ಸಮನಾಗಿರುವ ಲಿಂಗವು ಭೋಗ ಮತ್ತು ಮೋಕ್ಷ ಫಲವನ್ನು ನೀಡುತ್ತದೆ" ಎಂಬ ಪ್ರಮಾಣವಾಕ್ಯದಂತೆ ಲಿಂಗವು ಪ್ರಮಾಣ ಬದ್ಧವಾಗಿರಬೇಕೆಂದು ಸೂಚಿಸುತ್ತದೆ. ಆದುದರಿಂದ ಭಕ್ತನಿಗೆ ಭೋಗ–ಮೋಕ್ಷ ಫಲಗಳುಂಟಾಗಲು ಸದ್ಗುರುವು ಶಿವಲಿಂಗವನ್ನು ಪರೀಕ್ಷಿಸಿ ಪಂಚಸೂತ್ರ ಪ್ರಮಾಣಾನುಸಾರವಾಗಿ ನಿರ್ಮಾಣವಾಗಿರುವ ಲಿಂಗವನ್ನು ಅನುಗ್ರಹಿಸುತ್ತಾರೆ.

ವಿವಿಧ ಲಿಂಗಗಳು ಮತ್ತು ಧಾರಣೆಯ ಫಲ –

ಆಗಮಗಳಲ್ಲಿ ಅನೇಕ ಬಗೆಯ ಲಿಂಗಗಳ ವಿವರಣೆ ಇದ್ದು ಅವುಗಳ ಧಾರಣೆಯ ಫಲವನ್ನು ವಿವರಿಸಲಾಗಿದೆ.

ಪಾರದಂ ಸರ್ವಕಾಮಾಯ ಸೌವರ್ಣಂ ವಿತ್ತಕಾಮಿನಃ।
ರಾಜತಂ ತು ಪ್ರಜಾಕಾಮಿ ತಾಮ್ರಂ ಶತ್ರುವಿನಾಶನಮ್॥
ತ್ರಪುಜಂ ರೋಗನಾಶಾಯ ಸೀಸಕಂ ಪಾಪನಾಶನಮ್।
ಸ್ಫಾಟಿಕಂ ಜ್ಞಾನದಂ ಪುಣ್ಯಂ ರುದ್ರಾಕ್ಷಂ ಮೋಕ್ಷದಾಯಕಮ್
ದಾರುಜಂ ಸರ್ವನಾಶಾಯ ಕಾಂಸ್ಯಂ ರೋಗಾರ್ತಿದಾಯಕಮ್।[೩೬]
ಶ್ರೀಶೈಲಜಂ ಮಹಾದೇವಿ ಹ್ಯೈಹಿಕಾಮುಷ್ಮಿಕಪ್ರದಮ್

---

೩೫ ಮ.ಆ, ಕ್ರಿಪಾ, ಪಟಲ ೪ ಶ್ಲೋಕ ಸಂಖ್ಯೆ ೪೭
೩೬ ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೯–೧೧

ಪಾರಲಿಂಗವು ಎಲ್ಲಾ ಇಚ್ಛೆಗಳ ಪ್ರಾಪ್ತಿಗೆ, ಚಿನ್ನದ ಲಿಂಗವು ಸಂಪತ್ತನ್ನು ಬಯಸುವವನಿಗೆ, ಬೆಳ್ಳಿಯಲಿಂಗವು ಸಂತಾನಪ್ರಾಪ್ತಿಗೆ, ತಾಮ್ರಲಿಂಗವು ಶತ್ರುಗಳ ನಾಶಕ್ಕೆ, ತ್ರಪು ಲಿಂಗವು ರೋಗನಾಶಕ್ಕೆ, ಸೀಸದ ಲಿಂಗವು ಪಾಪನಾಶಕ್ಕೆ, ಸ್ಫಟಿಕದ ಲಿಂಗವು ಜ್ಞಾನಕ್ಕಾಗಿ ಮತ್ತು ಪುಣ್ಯಕ್ಕಾಗಿ, ರುದ್ರಾಕ್ಷಲಿಂಗವು ಮೋಕ್ಷಪ್ರಾಪ್ತಿಗೆ, ಕಟ್ಟಿಗೆಯಿಂದ ಮಾಡಿದ್ದು ಎಲ್ಲಾ ನಾಶಕ್ಕಾಗಿ, ಕಂಚಿನಲಿಂಗವು ರೋಗದ ನೋವನ್ನು ಕೊಡುವಂತಹದು. ಶ್ರೀಶೈಲದ ಕಲ್ಲಿನಿಂದ ಮಾಡಿದ ಲಿಂಗವು ಈ ಲೋಕದ ಮತ್ತು ಪರಲೋಕದ ಭೋಗವನ್ನು ಕೊಡುತ್ತದೆ ಎಂದು ಹೇಳಿ –

ಸರ್ವಸಾಧಾರಣಂ ದೇವಿ ಸರ್ವಸೌಭಾಗ್ಯದಾಯಕಮ್।
ಸರ್ವಸಿದ್ಧಿಕರಂ ಲಿಂಗಂ ಯಚ್ಚ ಪಾಷಾಣನಿರ್ಮಿತಮ್
ಸರ್ವೋತ್ತಮೋತ್ತಮಂ ಲಿಂಗಂ ಯಚ್ಚ ಶ್ರೀಶೈಲಜಂ ಶಿವೇ। [೩೭]

.ಕಲ್ಲಿನಿಂದ ಮಾಡಿದ ಇಷ್ಟಲಿಂಗವು ಸಾಮಾನ್ಯರೂಪದಲ್ಲಿ ಎಲ್ಲಾ ಸೌಭಾಗ್ಯಗಳನ್ನು ನೀಡುವಂತಹದು, ಎಲ್ಲಾ ಸಿದ್ಧಿಗಳನ್ನು ಉಂಟುಮಾಡುವಂತಹದು. ಆದರೆ ಯಾವುದು ಶ್ರೀಶೈಲದ ಕಲ್ಲಿನಿಂದ ಮಾಡಲ್ಪಟ್ಟಿದೆಯೋ ಅ ಲಿಂಗವು ಎಲ್ಲಕ್ಕಿಂತ ಉತ್ತಮೋತ್ತಮ ಎಂದು ಹೇಳಿದರೂ ಗುರುವಿನಿಂದ ಕೊಡಲ್ಪಟ್ಟ ಲಿಂಗವೇ ಶ್ರೇಷ್ಠವೆಂದು ಪ್ರತಿಪಾದಿಸ ಲಾಗಿದೆ.

ಗುರುವಿನಿಂದ ಕೊಡಲ್ಪಟ್ಟ ಲಿಂಗವೇ ಶ್ರೇಷ್ಠ

ಸರ್ವೋತ್ತಮೋತ್ತಮಂ ಲಿಂಗಂ ಸರ್ವಾಭೀಷ್ಟಾರ್ಥದಾಯಕಮ್।
ಯದ್ದತ್ತಂ ಗುರುಣಾ ದೇವಿ ಲಿಂಗಂ ತದಹಮೇವ ಹಿ [೩೮]

ಯಾವುದು ಗುರುವಿನಿಂದ ಕೊಡಲ್ಪಟ್ಟದ್ದೋ ಆ ಲಿಂಗವು ಎಲ್ಲವುಗಳಿಗಿಂತ ಉತ್ತಮೋತ್ತಮ ಮತ್ತು ಎಲ್ಲಾ ಇಚ್ಛಿಸಿದ ವಸ್ತುಗಳನ್ನು ನೀಡುವಂತಹದು ಎಂದು ಆಗಮಗಳಲ್ಲಿ ತಿಳಿಸಲಾಗಿದೆ.

ಇಷ್ಟಲಿಂಗದ ಗಾತ್ರ

ಅಡಿಕೆಯ ಆಕಾರದಿಂದ ಆರಂಭಿಸಿ ದೊಡ್ಡ ಗಾತ್ರದ ಲಿಂಗವನ್ನು ಧರಿಸುವುದರಿಂದ ಉಂಟಾಗುವ ಫಲಗಳನ್ನು ತಿಳಿಸುತ್ತಾ, ಬಾರಿ ಹಣ್ಣಿನ ಗಾತ್ರದಷ್ಟು ಮಾಡಿದ ಲಿಂಗವು ಧರಿಸಿದವನಿಗೆ ಧರ್ಮದ ಅಭಿವೃದ್ಧಿಯನ್ನು ನೀಡುತ್ತದೆ. ಅಡಿಕೆಯ ಗಾತ್ರದ ಲಿಂಗವು ಎಲ್ಲಾ ಇಷ್ಟಾರ್ಥಗಳನ್ನು ನೀಡುತ್ತದೆ. ನಿಂಬೆಹಣ್ಣಿನ ಗಾತ್ರದ ಲಿಂಗವು ಎಲ್ಲಾ ಬಯಕೆಗಳನ್ನು ಈಡೇರಿಸುತ್ತದೆ. ಅದಕ್ಕಿಂತಲೂ ಅಧಿಕ ಗಾತ್ರದ ಲಿಂಗವು ಚತುರ್ವರ್ಗದ ಫಲವನ್ನೆಲ್ಲಾ ನೀಡುತ್ತದೆ ಎಂದು ಎಷ್ಟೆಷ್ಟು ಹೆಚ್ಚು ಗಾತ್ರವುಳ್ಳದ್ದೋ

---

೩೭. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೧೬–೧೭
೩೮. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೧೨

ಅಷ್ಟಷ್ಟು ಹೆಚ್ಚು ಶಿವಲಿಂಗವು ಶ್ರೇಷ್ಠವೆಂದು ತಿಳಿಸಲಾಗಿದೆ.[೩೯] ಏಕೆಂದರೆ ಇಷ್ಟಲಿಂಗದಲ್ಲಿ ದೃಷ್ಟಿ ಕೇಂದ್ರೀಕರಣಕ್ಕೆ ಲಿಂಗದ ಗಾತ್ರ ದೊಡ್ಡದಾದಷ್ಟು ಯೋಗ್ಯ ಎಂಬ ತತ್ವ ಇಲ್ಲಿದೆ.

ಲಿಂಗವನ್ನು ಶರೀರದ ಮೇಲೆ ಧರಿಸುವ ಸ್ಥಾನಗಳು

ಚಿತ್ಕಲಾ ಸ್ವರೂಪದ ಇಷ್ಟಲಿಂಗವನ್ನು ದೇಹದ ಯಾವಯಾವ ಭಾಗಗಳಲ್ಲಿ ಧರಿಸಬೇಕೆಂದು ಆಗಮಗಳಲ್ಲಿ ನಿರೂಪಿಸಲಾಗಿದೆ. ವಾತುಲಶುದ್ಧಾಗಮದಲ್ಲಿ –

ಮೂರ್ಧ್ನಿ ಕಂಠೇ ಭುಜೇ ಹಸ್ತೇ ಹೃತ್‌ಸ್ಥಲೇ ನಾಭಿಮಂಡಲೇ।
ಏತೇಷಾಮೇಕದೇಶೇ ತು ಧಾರಯೇತ್ ಶಿವಲಿಂಗಕಮ್॥[೪೦]

"ಮಸ್ತಕ, ಕುತ್ತಿಗೆ, ಭುಜ, ಕೈ, ಹೃದಯ ಅಥವಾ ನಾಭಿ– ಈ ಆರು ಸ್ಥಲಗಳಲ್ಲಿ ಯಾವುದಾದರೊಂದು ಸ್ಥಾನದಲ್ಲಿ ಲಿಂಗಧಾರಣೆ ಮಾಡಬೇಕೆಂಬುದನ್ನು ತಿಳಿಸಲಾಗಿದೆ. ಇದನ್ನೇ ಸೂಕ್ಷ್ಮಾಗಮವು –

ಉತ್ತಮಾಂಗೇ ಗಲೇ ಕಕ್ಷೇ ತಥಾ ವಕ್ಷಃಸ್ಥಲೇಪಿ ವಾ।
ಕರಸ್ಥಲೇಽಪಿವಾ ನಿತ್ಯಂ ಸಾವಧಾನೇನ ಧಾರಯ ॥[೪೧]

ಮುಂದಲೆಯಲ್ಲಿ (ಶಿರಸ್ಸು), ಕೊರಳಲ್ಲಿ, ಕರಸ್ಥಲದಲ್ಲಿ, ಎದೆಯಲ್ಲಿ, ಹೊಟ್ಟೆಯಲ್ಲಿ (ಹೃದಯಭಾಗ) ಇವುಗಳಲ್ಲಿ ಯಾವುದಾದರೊಂದು ಸ್ಥಾನದಲ್ಲಿ ನಿತ್ಯ ಎಚ್ಚರಿಕೆಯಿಂದ ಗುರುದತ್ತ ಲಿಂಗವನ್ನು ಧರಿಸಬೇಕು ಎಂದು ತಿಳಿಸಲಾಗಿದೆ. ಪಾರಮೇಶ್ವರಾಗಮವು ಮೋಕ್ಷವನ್ನು ಬಯಸುವವನು ಶಿಖಾ ಪ್ರದೇಶದಲ್ಲಿ, ಧರ್ಮವನ್ನು ಬಯಸುವವನು ಬಾಹುವಿನ ಮಧ್ಯದಲ್ಲಿ, ಎಲ್ಲವನ್ನೂ ಬಯಸುವವನು ಕಂಠದಲ್ಲಿ ಲಿಂಗವನ್ನು ಧರಿಸಬೇಕೆಂದು ತಿಳಿಸಿದೆ.[೪೨]

ಇಷ್ಟಲಿಂಗಧಾರಣೆಯ ವಿಧಾನ

ಇಷ್ಟಲಿಂಗವನ್ನು ಹೇಗೆ ಧರಿಸಬೇಕು? ಆ ವಿಧಾನವು ಎಂತಹದು? ಎಂದು ಪಾರಮೇಶ್ವರಾಗಮದಲ್ಲಿ ವಿವರಿಸಲಾಗಿದೆ.

ಅಥ ಕುರ್ಯಾನ್ ಮಹಾದೇವಿ ಸಜ್ಜಿಕಾಖ್ಯಂ ತದಾಲಯಮ್।
ಪಂಚಸೂತ್ರೋತ್ಥಲಿಂಗಸ್ಯ ಯಾವತ್ಪೂರ್ಣಂ ತಥಾ ಭವೇತ್॥
ಸೌವರ್ಣಮುತ್ತಮಂ ದೇವಿ ಯದಿ ಶಕ್ತಿಸ್ತಥಾ ಚರೇತ್।
ರಾಜತಂ ಪಿತ್ತಲಂ ತಾಮ್ರಂ ನೈವ ಕಾಂಸ್ಯೇನ ಕಾರಯೇತ್॥
ಸೀಸೇನ ತ್ರಪುಣಾ ದೇವಿ ತಾಂತವೀ ಪಾಟಕಾಪಿ ವಾ।

---

೩೯. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೧೩, ೧೪
೪೦. ವಾತುಲ ಶುದ್ಧಾಗಮ ಪಟಲ ೧೦, ಶ್ಲೋಕ ಸಂಖ್ಯೆ ೩೬
೪೧. ಸೂ.ಆ. ಪಟಲ ೫, ಶ್ಲೋಕ ಸಂಖ್ಯೆ ೪೭
೪೨. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೨೯

ಏತೇಷ್ವನ್ಯತಮಂ ನಿತ್ಯಂ ನಾನ್ಯತ್ ಕುರ್ಯಾದನಾಪದಿ॥
ಪರಿತ್ಯಜ್ಯಾಪಿ ಯತ್ನೇನ ಪ್ರಾಣಮಾನಧನಾದಿಕಮ್।
ಸಂರಕ್ಷಣೀಯಂ ಗಿರಿಜೇ ಲಿಂಗಮೇವಂ ನ ಸಂಶಯಃ॥[೪೩]

"ಇಷ್ಟಲಿಂಗದ ವಾಸಕ್ಕಾಗಿ ಕರಡಿಗೆ (ಸಜ್ಜಿಕೆ) ಎಂಬ ಶಿವಾಲಯವನ್ನು ಪಂಚಸೂತ್ರ ಘಟಿತವಾದ ಲಿಂಗಕ್ಕೆ ಪೂರ್ಣ ಅವಕಾಶವಿರುವಂತೆ ಮಾಡಿಸಬೇಕು. ಕರಡಿಗೆ ಚಿನ್ನದ್ದಾಗಿದ್ದರೆ ಉತ್ತಮ. ಆದುದರಿಂದ ಶಕ್ತಿಯಿದ್ದರೆ ಅದನ್ನೇ ಮಾಡಿಸಬೇಕು, ಬೆಳ್ಳಿ, ಹಿತ್ತಾಳೆ, ತ್ರಾಮದ ಕರಡಿಗೆಯನ್ನು ಮಾಡಿಸಬಹುದು. ಆದರೆ ಕಂಚು, ಸೀಸ, ತ್ರಪುವಿನ(ತವರ) ಕರಡಿಗೆಯನ್ನು ಮಾಡಿಸಬಾರದು. ತನಗೆ ಧಾತುಗಳ ಕರಡಿಗೆಯನ್ನು ಮಾಡಿಸುವದು ಸಾಧ್ಯವಿರದಿದ್ದರೆ ದಾರ ಇಲ್ಲವೆ ಬಟ್ಟೆಯ ಕರಡಿಗೆಯನ್ನು ಮಾಡಿಸಿಕೊಳ್ಳಬಹುದು. ಪ್ರಾಣ, ಮಾನ, ಧನ ಮುಂತಾದವನ್ನು ತ್ಯಜಿಸಿಯಾದರೂ ಪ್ರಯತ್ನದಿಂದ ಲಿಂಗವನ್ನು ಸಂರಕ್ಷಿಸಲೇಬೇಕು." ಎಂದು ತಿಳಿಸಿದೆ.

ಅರ್ಥಾತ್ ಶರೀರದ ಮೇಲೆ ಇಷ್ಟಲಿಂಗವನ್ನು ಧರಿಸಲು ಆ ಲಿಂಗದ ಗಾತ್ರಕ್ಕೆ ಅನುಗುಣವಾದ ಲೋಹದ ಆಲಯವನ್ನು ನಿರ್ಮಿಸಬೇಕು. ಆ ಇಷ್ಟಲಿಂಗವನ್ನಿಡುವ ಲೋಹದ ಆಲಯಕ್ಕೆ ಸಜ್ಜಿಗೆ, ಕರಡಿಗೆ ಎಂದು ಹೆಸರು. ಕರಡಿಗೆಯನ್ನು ತಮ್ಮ ಶಕ್ತ್ಯಾನುಸಾರ ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರ ಮುಂತಾದ ಲೋಹಗಳಿಂದ ನಿರ್ಮಿಸಿರಬೇಕು. ಕಂ[illegible], ಸೀಸಗಳಿಂದ ನಿರ್ಮಿಸಿದ ಕರಡಿಗೆಯು ನಿಷೇಧವಾಗಿದೆ. ಚಿನ್ನ ಮುಂತಾದ ಲೋಪಗಳಿಂದ ಕರಡಿಗೆಯನ್ನು ಮಾಡಿಸಲು ಅಶಕ್ತವಾದರೆ ಬಟ್ಟೆಯ ಕರಡಿಗೆಯನ್ನು ಉಪಯೋಗಿಸಬೇಕೆಂದು ಆಗಮವು ತಿಳಿಸುತ್ತದೆ.

ಕರಡಿಗೆಯ ಆಕಾರದ ವಿಷಯದಲ್ಲಿ ಅದೇ ಆಗಮದಲ್ಲಿ ಹೀಗೆ ವಿವರಿಸಲಾಗಿದೆ– ಕರಡಿಗೆಯು ನಂದೀಶ್ವರನ ಆಕಾರದಲ್ಲಿದ್ದರೆ ಸ್ವರ್ಗ–ಮೋಕ್ಷಗಳ ಫಲ; ಮಾವಿನಹಣ್ಣಿನ ಆಕಾರದಲ್ಲಿದ್ದರೆ ಆಯುರಾರೋಗ್ಯ ಫಲಗಳು; ಮೋದಕಾಕಾರದಲ್ಲಿದ್ದರೆ ದೀರ್ಘಾಯಸ್ಸು, ಪುತ್ರ ಸೌಭಾಗ್ಯ ಫಲಗಳು; ಬಿಲ್ವಕಾಯಿಯ ಆಕಾರದಲ್ಲಿದ್ದರೆ ಸಂಪತ್ತು, ವಿಜಯ, ದೀರ್ಘಾಯುಸ್ಸು ಮುಂತಾದ ಫಲಗಳು ಹಾಗೂ ಶಿವಲಿಂಗದ ಆಕಾರವಿದ್ದರೆ ಭೋಗ–ಮೋಕ್ಷ ಫಲಗಳುಂಟಾಗುತ್ತವೆ ಎಂದು ವಿಸ್ತಾರವಾಗಿ ನಿರೂಪಿಸಲಾಗಿದೆ.[೪೪] ಆದುದರಿಂದ ಶಿಷ್ಯನು ಗುರುವಿನ ಅಪ್ಪಣೆಯಂತೆ ತನಗಿಷ್ಟವಾದ ಫಲವನ್ನು ಪಡೆಯಲು ನಂದೀಶ್ವರ ಮೊದಲಾದ ಆಕಾರವುಳ್ಳ ಕರಡಿಗೆಯನ್ನು ತೆಗೆದುಕೊಂಡು ಅದರಲ್ಲಿ ಇಷ್ಟಲಿಂಗವನ್ನು ಬಟ್ಟೆಯಲ್ಲಿ ಸುತ್ತಿ ಇಟ್ಟು, ಇಷ್ಟಲಿಂಗವಿರುವ ಅ ಕರಡಿಗೆಯನ್ನು ಶಿವದಾರದಿಂದ ಕಟ್ಟಿ ಪೂರ್ವೋಕ್ತ ಆರು ಸ್ಥಾನಗಳ ಪೈಕಿ ಯಾವುದಾದರೊಂದು ಸ್ಥಾನದಲ್ಲಿ ಧರಿಸಬೇಕು.

ಕರಡಿಗೆಯನ್ನು ಕಟ್ಟಲು ಉಪಯೋಗಿಸುವ ಶಿವದಾರವು ಲೋಹ ಅಥವಾ

---

೪೩. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೨೨, ೩೪–೩೬

೪೪. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೪೧–೪೨

ದಾರದ್ದಾಗಿರಬಹುದು. ಲೋಹದಿಂದ ಮಾಡಿದ ಶಿವದಾರಗಳ ಪೈಕಿ ಚಿನ್ನದಿಂದ ಮಾಡಿರುವ ಶಿವದಾರವು ಸೌಭಾಗ್ಯವನ್ನು ನೀಡುವಂತಹದ್ದು; ಬೆಳ್ಳಿಯದ್ದು ಪುತ್ರ, ಕೀರ್ತಿಗಳನ್ನು ನೀಡುವಂತಹದ್ದು; ತಾಮ್ರದ್ದು ಧನ-ಧಾನ್ಯಾದಿಗಳನ್ನು; ಹಿತ್ತಾಳೆಯದು ಸರ್ವಭೋಗಪ್ರದ; ಕಂಚಿನದು ಕಲ್ಮಷನಾಶಕ; ತ್ರಪು ಸೀಸಗಳಿಂದ ಮಾಡಿರುವಂತಹದ್ದು ಇಷ್ಟಫಲವನ್ನು ನೀಡುತ್ತದೆ. ನೂಲಿನಿಂದ ಮಾಡಿದ ಶಿವದಾರವು ಎಲ್ಲ ಬಗೆಯ ಅಭೀಷ್ಟಪ್ರದವೆಂದು[೪೫] ಅದೇ ಆಗಮದಲ್ಲಿ ನಿರೂಪಿತವಾಗಿದೆ. ಅಲ್ಲದೇ ನೂಲಿನ ಶಿವದಾರ ಒಂದು ಪಕ್ಷ ಬಿಳಿಯ ಬಣ್ಣದ್ದಾಗಿದ್ದಲ್ಲಿ ಜ್ಞಾನಪ್ರದ, ಕೆಂಪು ವಶೀಕಾರಕ, ಕಪ್ಪು ಶತ್ರುಭಯದಾಯಕ, ಹಳದಿ ಪುತ್ರದಾಯಕ ಮತ್ತು ಮಿಶ್ರವರ್ಣದ್ದಾದರೆ ನಾನಾ ಫಲಗಳನ್ನು ನೀಡುತ್ತದೆ.[೪೬] ಈ ಶಿವದಾರವು ಮೂವತ್ತಾರು ಎಳೆಗಳಿಂದ ಕೂಡಿರಬೇಕು. (ಇದು ಶಿವಾದಿ ಭೂಮ್ಯಂತಗಳಾದ ಮೂವತ್ತಾರೂ ತತ್ತ್ವಗಳ ಪ್ರತೀಕವಾಗಿಯಾದರೂ ಹೇಳಬಹುದು.) ಹೀಗೆ ತನ್ನ ಇಚ್ಛಾನುಸಾರ ಕರಡಿಗೆ ಮತ್ತು ಶಿವದಾರವನ್ನು ತೆಗೆದುಕೊಂಡು, ಕರಡಿಗೆಯಲ್ಲಿ ಇಷ್ಟಲಿಂಗವನ್ನಿಟ್ಟು, ಅದನ್ನು ಶಿವದಾರದ ಎರಡು ತುದಿಗಳನ್ನು ಕೂಡಿಸಿ ಕಮಲದ ಮೊಗ್ಗಿನ ಆಕಾರವಾಗಿ ದುಂಡಗಿರುವಂತೆ ಹಾಕಿದ ಎರಡು ಗಂಟುಗಳು ಜ್ಞಾನ ಮತ್ತು ಕ್ರಿಯಶಕ್ತಿಗಳೆಂದು ಕರೆಯಲ್ಪಡುತ್ತವೆ. ಆ ಎರಡು ಗಂಟುಗಳ ಮೇಲೆ ಒಂದು ವಿಚಿತ್ರವಾದ ಸ್ವರೂಪವುಳ್ಳ ಗಂಟನ್ನು ಹಾಕಬೇಕು. ಈ ಗಂಟಿನ ಒಂದು ತುದಿಯನ್ನು ಮುಂದಕ್ಕೆ ಎಳೆದು ಇನ್ನೊಂದನ್ನು ಹಿಂದಕ್ಕೆ ಎಳೆದು ಅದರ ಎರಡೂ ಪಕ್ಕಗಳ ತುದಿಯಲ್ಲಿ ಕೂಡಿಸಿ ಗಂಟು ಹಾಕಿ, ಶಾಸ್ತ್ರೋಕ್ತವಾದ ಶರೀರದ ಯಾವುದಾದರೊಂದು ಸ್ಥಾನದಲ್ಲಿ ಧರಿಸಿ, ಇಷ್ಟಲಿಂಗಪೂಜಾರೂಪ ನಿತ್ಯಕರ್ಮವನ್ನು ಪ್ರತಿದಿನವೂ ವೀರಶೈವಮತಾನುಯಾಯಿಗಳು ಆಚರಿಸಬೇಕೆಂದು ತಿಳಿಸಿದೆ.[೪೭]

ಇದನ್ನೇ ಚೆನ್ನಬಸವಣ್ಣನವರು ಅಂಗೀಕರಿಸುತ್ತ ತಮ್ಮ ವಚನದಲ್ಲಿ –

.... ಚಿದ್ಘನ ಇಷ್ಟ ಮಹಾಲಿಂಗವ ಉರಸ್ಥಲದಲ್ಲಿ ಧರಿಸಬೇಕಾದಡೆ,
ದಾರದಿಂದ ಹುಟ್ಟಿದ ಸಜ್ಜೆಯ ಕರಕಮಲವಟುವ
ನೂಲಕಾಯಿ, ಬಿಲ್ವಕಾಯಿ, ಗಂಧದ ಮನೆ, ನಾರಂಗದ ಕಾಯಿ,
ರಜತ, ಹೇಮ ತಾಮ್ರ, ಹಿತ್ತಾಳೆ, ಮೃತ್ತಿಕೆ ಮೊದಲಾದ
ಆವುದು ತನಗೆ ಯೋಗ್ಯವಾಗಿ ಬಂದ
ಚಿದ್ಘನಲಿಂಗದೇವಂಗೆ ಪರಿಣಾಮ ಕಟ್ಟುವಂತೆ
ಮೂವತ್ತಾರೆಳೆಯ ದಾರವಾದಡೆಯೂ ಸರಿಯೆ,
ನಾಲ್ವತ್ತೆರಡೆಳೆಯ ದಾರವಾದಡೆಯೂ ಸರಿಯೆ,
ಐವತ್ತಾರೆಳೆಯಾದಡೆಯೂ ಸರಿಯೆ, ಅರವತ್ತುಮೂರಾದಡೆಯೂ ಸರಿಯೆ,
ನೂರೆಂಟೂ ಇನ್ನೂರ ಹದಿನಾರು, ಮುನ್ನೂರರುವತ್ತು ಎಳೆ ಮೊದಲಾಗಿ

---

೪೫. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೪೬–೪೮
೪೬ ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೪೯–೫೦
೪೭. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೫೮–೬೦

ಲಿಂಗಾಣತಿಯಿಂದ ಒದಗಿ ಬಂದಂತೆ ಶಿವಲಾಂಛನ ಸಂಯುಕ್ತದಿಂದ ದಾರವ ಕೂಡಿ
ಜ್ಞಾನಕ್ರಿಯಾಯುಕ್ತವಾದ ಎರಡೆಳೆಯಾದಡೆಯೂ ಸರಿಯೆ,
ಪರಿಪೂರ್ಣ ಅವಿರಳ ಪರಂಜ್ಯೋತಿ ಎಂಬ ಮಹಾಜ್ಞಾನಸೂತ್ರಯುಕ್ತವಾದ
ಮೂರಳೆಯಾದಡೆಯು ಸರಿಯೆ,
ಸತ್ತು ಚಿತ್ತು ಆನಂದ ನಿತ್ಯವೆಂಬ ಸ್ವಾನುಭಾವ ಸೂತ್ರಯುಕ್ತವಾದ
ನಾಲ್ಕೆಳೆಯಾದಡೆಯೂ ಸರಿಯೆ.
ಆ ಲಿಂಗಗೃಹಂಗಳಿಗೆ ಮಂತ್ರಧ್ಯಾನದಿಂದ ಸೂತ್ರವ ರಚಿಸಿ
ಲಾಂಛನಯುಕ್ತವಾದ ಪಾವಡ ಯಾವುದಾದಡೆಯೂ ಸರಿಯೆ,
ಗುರುಪಾದೋದಕದಲ್ಲಿ ತೊಳೆದು ಮಡಿಕೆಯ ಮಾಡಿ,
ಬೆಳ್ಳಿ ಬಂಗಾರ ತಾಮ್ರ ಹಿತ್ತಾಳೆ ಕರತಾಳವೋಲೆ ಮೊದಲಾಗಿ ತಗಡ ಮಾಡಿ.
ಪ್ರಮಾಣಯುಕ್ತವಾಗಿ ಪಾವಡವ ಮಡಿಚಿ ಹುದುಗಿ,
ಪೂರ್ವ ಗಳಿಗೆಯಲ್ಲಿ ತ್ರಿವಿಧಪ್ರಣವ, ಪಶ್ಚಿಮ ಗಳಿಗೆಯಲ್ಲಿ ತ್ರಿವಿಧಪ್ರಣವ
ಮಧ್ಯ ಗಳಿಗೆಯಲ್ಲಿ ತ್ರಿವಿಧಪ್ರಣವ, ಎತ್ತುವ ಹುದುಗದಲ್ಲಿ ಪಂಚಪ್ರಣವ,
ಉತ್ತರ ಭಾಗದರಗಿನಲ್ಲಿ ಚಿಚ್ಛಕ್ತಿಪ್ರಣವ, ದಕ್ಷಿಣ ಭಾಗದರಗಿನಲ್ಲಿ ಚಿಚ್ಛಿವಪ್ರಣವ,
ಇಂತು ಹದಿನಾರು ಪ್ರಣವಂಗಳ
ಷೋಡಶವರ್ಣಸ್ವರೂಪವಾದ ಷೋಡಶಕಗಳೆಂದು ಭಾವಿಸಿ,
ಕ್ರಿಯಾಭಸಿತದಿಂದ ಆಯಾಯ (ಸ್ಥಲದಲ್ಲಿ) ಸ್ಥಾಪಿಸಿ
ಆ ಮಂತ್ರಗೃಹದಲ್ಲಿ ಚಿದ್ಘನಮಹಾಪರತತ್ವ ಮೂರ್ತಿಯ[೪೮]
ಮೂರ್ತವ ಮಾಡಿಸುವುದಯ್ಯಾ....."

ಎಂದು ಆಗಮದ ವಿವರಣೆಯನ್ನ ಪುಷ್ಟೀಕರಿಸಿದ್ದಾರೆ. ಅಲ್ಲದೇ ತಮ್ಮ ಇನ್ನೊಂದು ವಚನದಲ್ಲಿ "ಅಂಗ ಸೋಂಕಿದ ಲಿಂಗ ಸಂಬಂಧಿಯಾದ ಬಳಿಕ, ಸರ್ವಸಂಗ ವಿಕಾರವಳಿಯಬೇಕು. ಅಂಗ ಸೋಂಕಿದ ಲಿಂಗಕ್ಕೆ ಸೆಜ್ಜೆ ಶಿವದಾರವಾವುದೆಂದರೆ, ಅಂಗವೇ ಸೆಜ್ಜೆ, ಆಚಾರವೇ ಶಿವದಾರ, ತ್ರಿಕರಣ ಶುದ್ಧಿಯೇ ಕಾಣಿಕೆ, ಈ ತ್ರಿವಿಧ ಗುಣವನರಿಯಬೇಕು, ತ್ರಿವಿಧ ಸಂಪನ್ನನಾಗಿರಬೇಕು, ಈ ತ್ರಿವಿಧ ಮುಟ್ಟಿ ಲಿಂಗಾರ್ಚನೆಯ ಮಾಡಬೇಕು, ಅಂಗ ಲಿಂಗ ಸಂಬಂಧಕ್ಕೆ ಇದೇ ಕ್ರಮವು ಕೂಡಲಚೆನ್ನಸಂಗಮದೇವಾ."[೪೯] ಎಂದು ತ್ರಿಕರ್ಣಶುದ್ಧವಾದ ಆಚರಣೆಯೇ ಲಿಂಗಕ್ಕೆ ಸೆಜ್ಜಿಕೆ ಮತ್ತು ಶಿವದಾರವೆಂದು ತಿಳಿಸಿದ್ದಾರೆ.

ಈ ಇಷ್ಟಲಿಂಗವನ್ನು ಎಂದು ಧಾರಣೆ ಮಾಡಿಕೊಳ್ಳಬೇಕು? ಎಂದು ಆಗಮಗಳಲ್ಲಿ ಚರ್ಚಿಸಲಾಗಿದೆ.

---

೪೮. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೯೨೧ ಪುಟ ೨೮೬
೪೯. ವಚನ ಶಾಸ್ತ್ರಸಾರ-ಫ.ಗು.ಹಳಕಟ್ಟಿ (ಸನ್ ೧೯೨೩)-ಪುಟ ೧೦೧ -ವಚನಸಂಖ್ಯೆ ೬

ಲಿಂಗಧಾರಣೆಯ ಕಾಲ

ಪಾಶುಪತಾಗಮದಲ್ಲಿ ಮಗುವಿಗೆ ತಾಯಿಯ ಗರ್ಭದಲ್ಲಿದ್ದಾಗಲೇ ಇಷ್ಟಲಿಂಗವನ್ನು ಧಾರಣೆಮಾಡಬೇಕೆಂದು ತಿಳಿಸುತ್ತಾ, ಗರ್ಭಿಣಿಗೆ ಮೂರು ತಿಂಗಳು, ಆರು ತಿಂಗಳು ಅಥವಾ ಒಂಭತ್ತು ತಿಂಗಳುಗಳಲ್ಲಿ ವಿದ್ಯುಕ್ತವಾಗಿ ಗರ್ಭಕ್ಕೆ ಲಿಂಗಧಾರಣೆ ಮಾಡಿಸಬೇಕು. ಪ್ರಸವಕಾಲದಲ್ಲಿ ಮಗುವಿನ ಶೀರ್ಷೋದಯವಾಗುತ್ತಿರುವಾಗ ಅಥವಾ ಜನನವಾದ ಕೂಡಲೇ ಶಿಶುವಿಗೆ ಲಿಂಗಧಾರಣ ಮಾಡಿಸಬೇಕು. ಅನಂತರ ಐದು ಅಥವಾ ಎಂಟನೇ ವಯಸ್ಸಿನಲ್ಲಿ ವಿದ್ಯುಕ್ತವಾಗಿ ಶಿವದೀಕ್ಷೆ ನೆರವೇರಿಸಬೇಕೆಂದು ತಿಳಿಸಿದೆ.[೫೦] ಈ ಸಂಪ್ರದಾಯವನ್ನೇ ವೀರಶೈವರು ಇಂದಿಗೂ ಪಾಲಿಸಿಕೊಂಡು ಬರುತ್ತಿದ್ದಾರೆ. ಆದರೆ ಅರುಹಿನ ಕುರುಹಾದ ಇಷ್ಟಲಿಂಗವನ್ನು ದೀಕ್ಷೆ ಇಲ್ಲದೆ ಧರಿಸಕೂಡದೆಂದು ಪಾರಮೇಶ್ವರಾಗಮವು ಎಚ್ಚರಿಸುತ್ತದೆ.

ಶಿವದೀಕ್ಷಾಂ ವಿನಾ ದೇವಿ ಯಃಕುರ್ಯಾಲ್ಲಿಂಗಧಾರಣಮ್।
ಸ ಯಾತಿ ನರಕಂ ಘೋರಂ ಯಸ್ತ್ಯಜೇತ್ತದಭಕ್ತಿತಃ॥[೫೧]

ಅರ್ಥಾತ್ ಯಾರು ಶಿವದೀಕ್ಷೆಯಿಲ್ಲದೇ ಲಿಂಗಧಾರಣೆಯನ್ನು ಮಾಡಿಕೊಳ್ಳುತ್ತಾನೋ ಅಥವಾ ಯಾರು ಭಕ್ತಿಯಿಲ್ಲದೆ ಅದನ್ನು ತ್ಯಜಿಸುತ್ತಾನೋ ಅವನು ಘೋರವಾದ ನರಕಕ್ಕೆ ಹೋಗುತ್ತಾನೆಂದು ತಿಳಿಸಿದೆ. ಕಾರಣ ಶಿವಲಿಂಗವನ್ನು ಧರಿಸುವುದರಲ್ಲಿ ದೃಢವಾದ ಭಕ್ತಿಯು ಇದ್ದುದಾದರೆ ಶಿವಯೋಗಿಯನ್ನು ಆಶ್ರಯಿಸಿ ಆ ಗುರುರೂಪದ ಶಿವನನ್ನು ಪೂಜಿಸಿ, ಅವರ ಅನುಗ್ರಹದೊಂದಿಗೆ ಲಿಂಗಧಾರಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದೆ.

ಲಿಂಗಧಾರಣವೆಂಬುದು ಕೇವಲ ಕ್ರಿಯಾವಿಧಾನವಲ್ಲ; ಜ್ಞಾನಾನುಭವ ವಿಧಾನವೂ ಅಹುದು. ಏಕೆಂದರೆ ಅವ್ಯಕ್ತ ಪರಬ್ರಹ್ಮದ ವ್ಯಕ್ತರೂಪವೇ ಲಿಂಗವಾಗಿದ್ದು, ಅದು ಶಿವಚೈತನ್ಯದ ಪ್ರತೀಕವೂ ಹೌದು. ಕಾರಣ ಪರಮ ಪವಿತ್ರವಾದ, ಅರುಹಿನ ಕುರುಹಾದ ಇಷ್ಟಲಿಂಗವನ್ನು ದೀಕ್ಷೆ ಇಲ್ಲದೆ ಧರಿಸಕೂಡದೆಂದು ಪಾರಮೇಶ್ವರಾಗಮ ಎಚ್ಚರಿಸುತ್ತದೆ. ಕಾರಣ ಲಿಂಗದ ನಿಜಸ್ವರೂಪವನ್ನರುಹಿ, ಲಿಂಗಾಂಗಸಾಮರಸ್ಯವನ್ನು ಬೋಧಿಸುವ ದೀಕ್ಷಾಸಂಸ್ಕಾರವಿಲ್ಲದೆ ಇಷ್ಟಲಿಂಗಧಾರಣೆ ಕೂಡದೆಂದು ಪಾರಮೇಶ್ವರಾಗಮ ಎಚ್ಚರಿಸಿದೆ. ಆದರೆ ವೀರಶೈವರಲ್ಲಿ ಮಗುವಿಗೆ ಇಷ್ಟಲಿಂಗವನ್ನು ತಾಯಿಯ ಗರ್ಭದಲ್ಲಿದ್ದಾಗಲೇ ಧಾರಣೆ ಮಾಡಿದರೂ ಸಹ ಇಷ್ಟಲಿಂಗಕ್ಕೆ ಸಂಸ್ಕಾರ ದೊರಕುವದು ಹಾಗೂ ಇಷ್ಟಲಿಂಗ ಪೂಜೆಗೆ ಅರ್ಹತೆ ಪ್ರಾಪ್ತವಾಗುವದು ದೀಕ್ಷೆಯ ಮೂಲಕವೇ.

ದೀಕ್ಷೆ ಹೊಂದಿದವನಿಗೆ ಲಿಂಗನಿಷ್ಠೆ ಅತೀ ಅಗತ್ಯ

ದಿಕ್ಷಾಸಂಸ್ಕೃತಿಸಂಶುದ್ಧೇ ಚಿತ್ತೇ ಜಂತೋಃ ಸಮರ್ಪಿತಮ್।

೫೦ ಪಾಶುಪತಾಗಮ ಪಟಲ ೧, ಶ್ಲೋಕ ಸಂಖ್ಯೆ ೪೭–೪೯
೫೧. ಪಾ.ಆ. ಪಟಲ ೧ ಶ್ಲೋಕ ಸಂಖ್ಯೆ ೭೬

ಲಿಂಗಾಂಗಸಾಮರಸ್ಯಾಖ್ಯಂ ಮನ್ನಿಷ್ಠಾಗೋಪಿತಂ ಪರಮ್।
ಭಕ್ತಿಸಿಕ್ತಂ ಮಮ ಜ್ಞಾನಂ ಮೋಕ್ಷಾಯ ಭವತಿ ಧ್ರುವಮ್ ॥[೫೨]

ದೀಕ್ಷಾಸಂಸ್ಕಾರದಿಂದ ಶುದ್ಧವಾದ ವ್ಯಕ್ತಿಯ ಚಿತ್ತದಲ್ಲಿ ಬಿತ್ತಿದ, ಶಿವನಿಷ್ಠೆಯಿಂದ ರಕ್ಷಿತವಾದ ಮತ್ತು ಭಕ್ತಿಯಿಂದ ಕೂಡಿದ ಲಿಂಗಾಂಗ ಸಾಮರಸ್ಯವೆಂಬ ಜ್ಞಾನವು ಮೋಕ್ಷ ಫಲವನ್ನು ಕೊಡುತ್ತದೆ. ಆದರೆ –

ಲಬ್ಧಂ ಕಥಮಪಿ ಜ್ಞಾನಂ ಲಿಂಗನಿಷ್ಠಾವಿವರ್ಜಿತೇ।
ನ ಫಲಾಯ ಭವತ್ಯೇವ ಯಥಾ ಸಸ್ಯಮರಕ್ಷಿತಮ್॥[೫೩]

ರಕ್ಷಣೆಯಿಲ್ಲದ ಸಸ್ಯವು ಫಲಪ್ರದವಾಗದೇ ಇರುವಂತೆ ದೊರೆತ ಜ್ಞಾನವು ಲಿಂಗ ನಿಷ್ಠೆಯಿಲ್ಲದವನಲ್ಲಿ ಫಲಿಸುವುದಿಲ್ಲ ಎಂದು ಕಾರಣಾಗಮವು ಅರುಹುತ್ತದೆ. ಇದನ್ನೇ ಚೆನ್ನಬಸವಣ್ಣನವರು, 'ಸತ್ಯವಿಲ್ಲದ ಭಕ್ತಿ ಸಾವಿರ ವರುಷ ಮಾಡಿದರೇನೋ? ನಿಷ್ಠೆ ಇಲ್ಲದ ಪೂಜೆ ಏಸು ಕಾಲ ಪೂಜಿಸಿದರೇನೋ? ಅಭ್ಯಾಸವಾಯಿತ್ತಲ್ಲದೆ ಸಹಜವಲ್ಲ, ಸನ್ಮತವಲ್ಲ, ನಿಜವಲ್ಲ. ಒಬ್ಬರನೊಬ್ಬರ ಕಂಡು ಮಾಡುವರಲ್ಲದೆ, ತಮ್ಮ ತಾವು ವಿಚಾರಿಸಿ ಕೊಳಲರಿಯರು. ಇಂತಪ್ಪವರು ಭಕ್ತರೆನಿಸಲಾರರು. ಕೂಡಲ ಚೆನ್ನಸಂಗಮದೇವಾ ನೀ ಸಾಕ್ಷಿಯಾಗಿ, ಛೀ ಛೀ ಎಂಬೆನು'[೫೪] ಎಂದಿದ್ದಾರೆ. ಸೂಕ್ಷ್ಮಾಗಮವು

ಲಿಂಗಭಕ್ತಿರ್ಲಿಂಗಪೂಜಾ ಲಿಂಗಸೇವಾ ತಥಾ ಶಿವೇ।
ಲಿಂಗಧ್ಯಾನಂ ಲಿಂಗಮನೋ ಲಿಂಗಚರ್ಯಾಪರೌ ಕರೌ ॥
ಲಿಂಗಶ್ರುತಿಪರೇ ಶ್ರೋತ್ರೇ ಲಿಂಗಾರ್ಪಿತರಸಾದಯಃ।
ಲಿಂಗನಿರ್ಮಾಲ್ಯಸುರಭಿಲಾಭೋ ಘ್ರಾಣಸ್ಯ ಪಾರ್ವತಿ ॥
ಲಿಂಗಾಲಂಕಾರಸಂದರ್ಶನಾಸಕ್ತೇ ಲೋಚನೇಽಪಿ ಚ ।
ಲಿಂಗಪ್ರದಕ್ಷಿಣಪರೌ ಪಾದೌ ಚ ಗಿರಿಸಂಭವೇ ॥
ಲಿಂಗಸ್ಯ ಪುರತೋ ನಿತ್ಯಂ ತದರ್ಥಂ ಚಾಂಗಚೇಷ್ಟನಮ್।
ಲಿಂಗಾರ್ಥಂ ದತ್ತಸರ್ವಸ್ವಂ ಲಿಂಗನಿಷ್ಠೇತಿ ಗೀಯತೇ ॥[೫೫]

ವೀರಶೈವನು ಲಿಂಗದಲ್ಲಿ ಭಕ್ತಿ, ಲಿಂಗಪೂಜೆ, ಲಿಂಗಸೇವೆ, ಲಿಂಗಧ್ಯಾನ, ಲಿಂಗದಲ್ಲಿ ಮನವುಳ್ಳವನಾಗಿರಬೇಕು. ಕೈಗಳೆರಡೂ ಲಿಂಗೋಪಚಾರದಲ್ಲಿಬೇಕು. ಕಿವಿಗಳೆರಡು ಲಿಂಗದ ಗುಣಗಾನ ಶ್ರವಣದಲ್ಲಿ ತತ್ಪರವಾಗಿರಬೇಕು. ನಾಲಿಗೆ ಲಿಂಗಾರ್ಪಿತವಾದ ರಸಾಸ್ವಾದದಲ್ಲಿ ನಿರತವಾಗಿರಬೇಕು. ಮೂಗು ಲಿಂಗಾರ್ಪಿತವಾದ ಪುಷ್ಪ–ಪರಿಮಳ ಲಾಭವನ್ನು ಪಡೆಯಬೇಕು. ಕಣ್ಣುಗಳು ಲಿಂಗಕ್ಕೆ ಮಾಡಿರುವ ಅಲಂಕಾರಗಳನ್ನು ನೋಡಲು ಆಸಕ್ತವಾಗಿರಬೇಕು. ಕಾಲುಗಳು ಲಿಂಗಪ್ರದಕ್ಷಿಣೆಯನ್ನು ಮಾಡುತ್ತಿರಬೇಕು.

೫೨. ಕಾ.ಆ.ಕ್ರಿಪಾ. ಪಟಲ ೨, ಶ್ಲೋಕ ಸಂಖ್ಯೆ ೯
೫೩. ಕಾ.ಆ.ಕ್ರಿಪಾ. ಪಟಲ ೨, ಶ್ಲೋಕ ಸಂಖ್ಯೆ ೮
೫೪. ವಚನ ಶಾಸ್ತ್ರಸಾರ–ಫ. ಗು. ಹಳಕಟ್ಟಿ (ಸನ್ ೧೯೨೩) ವಚನಸಂಖ್ಯೆ ೧೯. ಪುಟ ೧೭೯
೫೫. ಸೂ. ಆ. ಪಟಲ ೭, ಶ್ಲೋಕ ಸಂಖ್ಯೆ ೪೮–೫೧

ಸರ್ವಸ್ವವೂ ಲಿಂಗಕ್ಕಾಗಿ ಸಮರ್ಪಿತವಾಗಿರಬೇಕು.ಇದಕ್ಕೆ ಲಿಂಗನಿಷ್ಠೆ ಎಂದು ಕರೆಯುತ್ತಾರೆ ಎಂದು ತಿಳಿಸುತ್ತಾ ಇಷ್ಟಲಿಂಗ ಪೂಜೆಯನ್ನು ಎಂಥ ಸಂದರ್ಭ ಬಂದರೂ ಬಿಡಬಾರದೆಂದು ಎಚ್ಚರಿಸುತ್ತವೆ.

ಇಷ್ಟಲಿಂಗ ಪೂಜೆಯನ್ನು ಎಂದೂ ಬಿಡಬಾರದು

ನ ಲಿಂಗ ಮುತ್ಸೃಜೇತ್ ಕ್ವಾಪಿ ಪ್ರಾಣೈಃ ಕಂಠಗತೈರಪಿ।
ನ ಪೂಜಾಪಿ ಪರಿತ್ಯಾಜ್ಯಾ ಕೃಚ್ಛ್ರೇಪಿ ಕುಲನಾಶಕೇ॥[೫೬]

ಪ್ರಾಣವು ಹೋಗುವಂತಿದ್ದರೂ ಕುಲವೇ ನಾಶವಾಗುತ್ತದೆ ಎಂಬಷ್ಟು ಮಟ್ಟಿಗೆ ಉತ್ಕಟ ಸಂಕಟ ಬಂದಾಗಲೂ ಇಷ್ಟಲಿಂಗ ಪೂಜೆಯನ್ನು ಬಿಡಬಾರದು ಎಂದು ಆಗಮಗಳು ಸ್ಪಷ್ಟವಾಗಿ ಹೇಳಿವೆ. ಅಲ್ಲದೇ

ಸೂತಕೇ ಮೃತಕೇ ಚೈವ ಸಂಧ್ಯಾಂ ಪೂಜಾಂ ನ ಸಂತ್ಯಜೇತ್।
ಉಪಾಂಶುಸಂಧ್ಯಾಂ ಪೂಜಾಂ ತು ಕುರ್ಯಾತ್ ತ್ರಿಕರಣೈರಪಿ॥ [೫೭]

ಹುಟ್ಟು ಮತ್ತು ಸಾವುಗಳಿಂದ ಅಶೌಚವು ಉಂಟಾದಾಗಲೂ ಕೂಡ ಇಷ್ಟಲಿಂಗ ಪೂಜೆಯನ್ನು ನಿಲ್ಲಿಸಬಾರದು. ಅಂತಹ ಸನ್ನಿವೇಶದಲ್ಲಿ ಉಪಾಂಶು ವಿಧಿಯಿಂದ (ಬೇರೆಯವರಿಗೆ ಕೇಳಿಸದಂತೆ ಮಂತ್ರೋಚ್ಚಾರಣೆ ಮಾಡುವದು) ಪೂಜೆಯನ್ನು ಮಾಡಬೇಕೆಂದು ಆದೇಶಿಸುತ್ತವೆ. ಹಾಗೂ ಸ್ತ್ರೀಯರೂ ಸಹ ಕಡ್ಡಾಯವಾಗಿ ಇಷ್ಟಲಿಂಗ ಪೂಜೆಗೈಯಬೇಕೆಂದು ತಿಳಿಸುತ್ತವೆ.

ನ ಪುಷ್ಪಿಣೀ ತ್ಯಜೇತ್ಪೂಜಾಂ ನ ಭುಕ್ತ್ವಾ ನಾಶುಚಿಸ್ತ್ವಪಿ।
ಯದ್ಯೈವ ಪೂಜಯೇಲ್ಲಿಂಗಂ ತದಾನುಗ್ರಾಹಕೋ ಹ್ಯಹಮ್॥ [೫೮]

ರಜಸ್ವಲೆಯಾದ ಸ್ತ್ರೀಯು ಇಷ್ಟಲಿಂಗ ಪೂಜೆಯನ್ನು ಬಿಡಬಾರದು. ಹಾಗೆಯೇ ಭೋಜನ ಮಾಡಿದ ಮೇಲಾಗಲಿ ಮತ್ತು ಅಶೌಚದ ಸ್ಥಿತಿಯಲ್ಲಾಗಲಿ ಪೂಜೆಯನ್ನು ಬಿಡಬಾರದು. ಇಷ್ಟಲಿಂಗವನ್ನು ಪೂಜಿಸಿದಾಗಲೇ ಶಿವನು ಅನುಗ್ರಹ ಮಾಡುವವನು ಎಂದು ತಿಳಿಸುವುದರೊಂದಿಗೆ ಅಪವಿತ್ರನಾಗಿ, ಅನಾದರದಿಂದ ಲಿಂಗವನ್ನು ಪೂಜಿಸಬಾರದೆಂದು ಎಚ್ಚರಿಸುತ್ತವೆ.

ಅಪವಿತ್ರನಾಗಿ, ಅನಾದರದಿಂದ ಲಿಂಗವನ್ನು ಪೂಜಿಸಬಾರದು –

ನಾಶುಚಿಃ ಪೂಜಯೇಲ್ಲಿಂಗಂ ನಾಕಾಲೇ ನಾನ್ಯವಿನ್ಮನಾಃ।
ನಾನಾದರೇಣ ಹಸ್ತಾಬ್ಜೇ ಪೂಜಾಯಾಂ ವಿಧಿರುಚ್ಯತೇ ॥

---

೫೬. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೨೦
೫೭. ಮ.ಆ, ಕ್ರಿ.ಪಾ, ಪಟಲ ೧೦, ಶ್ಲೋಕ ಸಂಖ್ಯೆ ೨೮
೫೮. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೧೦೦

ನಾನ್ಯಕಾರ್ಯಪರಃ ಕ್ವಾಪಿ ನ ಪ್ರಲಾಪಪರೋऽಪಿ ವಾ ।
ನ ವ್ಯಗ್ರೋ ವಾ ನ ತ್ವರಯಾ ಪೂಜಯೇಲ್ಲಿಂಗಮೀಶ್ವರಿ ॥[೫೯]

ಅಪವಿತ್ರನಾಗಿ, ಮನಸ್ಸು ಬೇರೆ ಪ್ರಭಾವಕ್ಕೊಳಗಾದಾಗ, ಅಕಾಲದಲ್ಲಿ, ಅನಾದರದಿಂದ ಲಿಂಗವನ್ನು ಪೂಜಿಸಬಾರದು. ಬೇರೆ ಕಾರ್ಯದಲ್ಲಿ ನಿರತನಾಗಿ ಅಥವಾ ಪ್ರಲಾಪವನ್ನು ಮಾಡುವವನಾಗಿ, ಕ್ರೋಧಚಿತ್ತನಾಗಿ, ಅವಸರದಿಂದ ಲಿಂಗವನ್ನು ಪೂಜಿಸಬಾರದು. ಹಾಗೂ

ಯದ್ಯುತ್ತಿಷ್ಠೇಚ್ಛಿವೇ ಮಧ್ಯೇ ಧೃತ್ವಾ ಲಿಂಗಂ ಕರೇ ಮಮ।
ಸ ದ್ರೋಹೀ ಮಮ ವಿಜ್ಞೇಯೋ ಗುರುದ್ರೋಹೀ ನ ಸಂಶಯಃ ॥[೬೦]

ಕರದಲ್ಲಿ ಶಿವಲಿಂಗವನ್ನು ಧರಿಸಿ ಮಧ್ಯದಲ್ಲಿ ಮೇಲಕ್ಕೆ ಎದ್ದದ್ದಾದರೆ ನಿಃಸಂಶಯವಾಗಿ ಅವನನ್ನು ಗುರುದ್ರೋಹಿ, ಹಾಗೂ ಶಿವದ್ರೋಹಿಯೆಂದು ತಿಳಿಯಬೇಕು;

ತಸ್ಮಾದ್ವಿಜನಮಾಶ್ರಿತ್ಯ ನಿರಾಕುಲಮನಾಃ ಸದಾ।
ಯಥಾ ಸಂಭಾವಿತಂ ಭಕ್ತ್ಯಾ ಹ್ಯರ್ಚೇಲ್ಲಿಂಗಂ ಕರಾಂಬುಜೇ ॥[೬೧]
ಸಂತುಷ್ಟಮನಸಃ ಶಾಂತಃ ಶುಚಿರ್ಮಾಲ್ಯಾಂಬರಾತಃ।
ಸುವಾಸಿತಮುಖೋ ಭೂತ್ವಾ ಪೂಜಯೇಲ್ಲಿಂಗಮೀಶ್ವರಿ॥[೬೨]
ಧೃತರುದ್ರಾಕ್ಷಭಸ್ಮಾಂಗಃ ಶಿವನಾಮಪರಾಯಣಃ।
ಗುರೂಕ್ತೇನ ವಿಧಾನೇನ ಪ್ರಯತೋ ಲಿಂಗಮರ್ಚಯೇತ್ ॥[೬೩]

ಲಿಂಗಧಾರಿಯು ಪ್ರಶಾಂತ ಪ್ರದೇಶವನ್ನು ಆಶ್ರಯಿಸಿ ಯಾವಾಗಲೂ ವ್ಯಾಕುಲತೆಯಿಂದ ದೂರಾದ ಸಂತುಷ್ಟನಾದ ಮನಸ್ಸುಳ್ಳವನಾಗಿ ಸಾಧ್ಯವಾದಷ್ಟು ಭಕ್ತಿಯಿಂದ, ಶಾಂತನಾಗಿ, ಶುಚಿಭೂರ್ತನಾಗಿ, ಮಾಲೆ ಮತ್ತು ಬಟ್ಟೆಗಳನ್ನು ಧರಿಸಿದವನಾಗಿ, ಸುವಾಸನೆಯಿಂದ ಕೂಡಿದ ಮುಖದಿಂದ ರುದ್ರಾಕ್ಷ ಭಸ್ಮಗಳನ್ನು ಅಂಗಗಳಲ್ಲಿ ಧರಿಸಿ ಶಿವನ ನಾಮಗಳನ್ನು ಸ್ಮರಿಸುವುದರಲ್ಲಿ ಮಗ್ನನಾಗಿ ಗುರುವು ಹೇಳಿದ ವಿಧಾನದಂತೆ ಪವಿತ್ರನಾಗಿ ಲಿಂಗವನ್ನು ಪೂಜಿಸಬೇಕು ಎಂದು ಪಾರಮೇಶ್ವರಾಗಮವು ಹೇಳಿದೆ. ಇದನ್ನು ಪುಷ್ಟಿಕರಿಸುತ್ತಾ ಚೆನ್ನಬಸವಣ್ಣನವರು–

"ಅಯ್ಯಾ ತನುಶುದ್ಧನಾಗಿ ಇಷ್ಟಲಿಂಗವ ಪೂಜಿಸಬೇಕು
ಮನಶುದ್ಧನಾಗಿ ಪ್ರಾಣಲಿಂಗವ ಧ್ಯಾನಿಸಬೇಕು

---

೫೯. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೪೪, ೪೭
೬೦. ಪಾ.ಆ. ಪಟಲ ೧೩, ಶ್ಲೋಕ ಸಂಖ್ಯೆ ೪೦
೬೧. ಪಾ.ಆ. ಪಟಲ ೧೩, ಶ್ಲೋಕ ಸಂಖ್ಯೆ ೪೧
೬೨. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೪೮
೬೩. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೪೬,

ಭಾವಶುದ್ಧನಾಗಿ ಭಾವಲಿಂಗವ ಭಾವಿಸಬೇಕು. ಇಂತೀ ತ್ರಿವಿಧವನರಿಯದೆ,
'ಲಿಂಗದೇಹಿ ಸದಾ ಶುಚಿಃ' ಎಂಬೊಂದು ವಾಕ್ಯವನೆ ಮುಂದುಮಾಡಿ
'ಕ್ರಿಯಾದ್ವೈತಂ ನ ಕರ್ತವ್ಯಂ' ಎಂಬ ವಾಕ್ಯವ ಮರೆಯಾಚಿ,
ಸ್ನಾನಪೂಜಾದಿ ಸತ್ಕ್ರಿಯಾಸಂಪನ್ನನಾಗದೆ
ಶಮದಮಾದಿ ಸದ್ಗುಣಸಂಪತ್ತಿಯ ಪಡೆಯದೆ ನಿತ್ಯ ನಿರ್ಮಲತ್ವ ನೆಲೆಯಾಗದೆ
ಆನು ಶುದ್ಧನಾದೆನೆಂಬ ಕ್ರಿಯಾದ್ವೈತಿಯಾದ ಪಾತಕನ
ನಾಯಕನರಕದಲ್ಲಿಕ್ಕುವ, ನಮ್ಮ ಕೂಡಲಚೆನ್ನಸಂಗಮದೇವ"[೬೪]

ಎಂದಿದ್ದಾರೆ. ಕಾರಣ ವೀರಶೈವ ಸಾಧಕನು ಇಷ್ಟಲಿಂಗ ಧರಿಸಿಕೊಂಡಾದ ಮೇಲೆ ಧ್ಯಾನ, ಧಾರಣ, ಯೋಗ, ಶಿವಚಿಂತನೆ ಹಾಗೂ ಸದ್ಭಾವನೆಗಳಿಂದ ತನು, ಮನ, ಭಾವ ಶುದ್ಧಗೊಳಿಸಿಕೊಂಡಾಗಲೇ ತ್ರಿವಿಧ ಶುದ್ಧಿಯಾಗಿ ಲಿಂಗಪೂಜೆಗೆ ಅರ್ಹನಾಗುತ್ತಾನೆಂದು ವಚನಗಳೂ ಪ್ರತಿಪಾದಿಸುವದರೊಂದಿಗೆ ಇಷ್ಟಲಿಂಗವನ್ನು ದಿನಕ್ಕೆ ಎಷ್ಟುಬಾರಿ ಪೂಜಿಸಬೇಕೆಂದು ಆಗಮ ಮತ್ತು ವಚನಗಳಲ್ಲಿ ಚರ್ಚಿಸಲಾಗಿದೆ.

ಇಷ್ಟಲಿಂಗದ ಪೂಜಾ ಸಮಯ–

ವೀರಶೈವನು ಅರುಣೋದಯ, ಸೂರ್ಯೋದಯ, ಸಂಗವಕಾಲ (ಗೋವುಗಳ ಹಾಲು ಹಿಂಡಿ ಮೇಯಲು ಬಿಡುವ ಕಾಲ), ಮಧ್ಯಾಹ್ನ, ಸಾಯಂಕಾಲ ಹಾಗೂ ಅರ್ಧರಾತ್ರಿ ಈ ಆರು ಸಮಯಗಳಲ್ಲಿ ಅಥವಾ ಸೂರ್ಯೋದಯ, ಮಧ್ಯಾಹ್ನ ಮತ್ತು ಅರ್ಧರಾತ್ರಿ ಈ ಮೂರು ಕಾಲಗಳಲ್ಲಾಗಲಿ ಎಲ್ಲ ಆಪತ್ತುಗಳಿಂದ ಕಾಪಾಡುವ ಇಷ್ಟಲಿಂಗವನ್ನು ತನ್ನ ಶಕ್ತ್ಯಾನುಸಾರ ಮಹತೀ, ಗುರ್ವೀ, ಅವಸರಾ ಅಥವಾ ಲಘ್ವೀ ವಿಧಾನಗಳಿಂದ ಪೂಜಿಸಬೇಕೆಂದು ಆಗಮಗಳು ತಿಳಿಸುತ್ತವೆ.

ಷಟ್ಸು ಕಾಲೇಷು ಸಂಪೂಜ್ಯಂ ತ್ರಿಸಂಧ್ಯಮಥವಾ ಪುನಃ।
ಇಷ್ಟಲಿಂಗಂ ಮಹೇಶಸ್ಯ ಸರ್ವಾನಿಷ್ಟನಿಷೂದನಮ್
ಅರುಣಸ್ಯೋದಯೇ ಭಾನೋರುದಯೇ ಸಂಗವೇ ತಥಾ।
ಮಧ್ಯಾಹ್ನೇ ಚ ತಥಾ ಸಾಯಮರ್ಧರಾತ್ರೌ ಬೃಹಸ್ಪತೇ॥
ಷಟ್ಕಾಲಮರ್ಚನೀಯಂ ಸ್ಯಾಚ್ಛಿವಲಿಂಗಮನಾಮಯಮ್॥
ಅಭೋಜನೇ ತ್ವವಸರಾ ವಿಧೇಯಾ ಹ್ಯನ್ಯಥಾ ಪರಾ।
ಲಘುರ್ಗುರುರ್ವಾ ಮಹತೀ ಪೂಜಾ ಶಕ್ತ್ಯನುಸಾರತಃ॥[೬೫]

ದಿನಕ್ಕೆ ಆರು ಸಲ ಅಥವಾ ಕನಿಷ್ಠ ಮೂರು ಬಾರಿಯಾದರೂ ಇಷ್ಟಲಿಂಗ ಪೂಜೆಯನ್ನು ಆಚರಿಸಬೇಕೆಂದು ಆಗಮಗಳ ಅಭಿಪ್ರಾಯವನ್ನು ಪುಷ್ಟೀಕರಿಸುತ್ತ –

'ಉದಯಕಾಲ, ಮಧ್ಯಾಹ್ನಕಾಲ, ಅಸ್ತಮಾನಕಾಲದಲ್ಲಿ ತನ್ನ ಇಷ್ಟಲಿಂಗಕ್ಕೆ

---

೬೪. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ૩, ವಚನ ಸಂಖ್ಯೆ ೯೨೪, ಪುಟ ೨೮೯
೬೫. ಚಂ. ಆ. ಕ್ರಿ. ಪಾ. ಪಟಲ ೧೧, ಶ್ಲೋಕ ಸಂಖ್ಯೆ ೬೩–೬೫

ಅಷ್ಟವಿಧಾರ್ಚನೆ ಷೋಡಶೋಪಚಾರ ಮಾಡುವಾತನೇ ಸದ್ಭಕ್ತನು. ಇಂತೀ ತ್ರಿಕಾಲದಲ್ಲಿ ಲಿಂಗಾರ್ಚನೆಯ ಮಾಡುವಲ್ಲಿ ಹಿಂದಣ ಕ್ರಿಯೆಯಿಂದ ಮಾಡಬೇಕು. ಅಂತಲ್ಲದೆ ಸುಮ್ಮನೆ ಲಿಂಗಾರ್ಚನೆಯ ಮಾಡುವಾತ ಭಕ್ತನಲ್ಲ, ಮಹೇಶ್ವರನಲ್ಲ, ಪ್ರಸಾದಿಯಲ್ಲ, ಪ್ರಾಣಲಿಂಗಿಯಲ್ಲ, ಶರಣನಲ್ಲ, ಐಕ್ಯನಲ್ಲ. ಅವನು ಶ್ರೀಗುರುವಿನಾಜ್ಞೆಯನು ಮೀರಿದಾತನು, ಪಂಚಮಹಾಪಾತಕನು, ಘಾತುಕನು, ಲಿಂಗಚೋರಕನು ಕೇಳಿರೇ. ಅದೆಂತೆಂದೊಡೆ, "ಬ್ರಹ್ಮಚಾರೀ ಶುಚಿರ್ಭೂತ್ವಾ ತ್ರಿಸಂಧ್ಯಾಂ ಪೂಜೆಯೇತ್ ಶಿವಂ। ಪುಣ್ಯಂ ತತ್ಸಕಲಂ ಸಮ್ಯಗ್ಲಭತೆ ರುದ್ರಸ್ಯಾರ್ಚನಾತ್॥" ಇದನರಿತು, ತ್ರಿಸಂಧ್ಯಾಕಾಲದಲ್ಲಿ ತನ್ನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಹಿಂದಿಣ ಕ್ರಿಯೆವಿಡಿದು ಮಾಡುವ ಸದ್ಭಕ್ತಂಗೆ ನಮೋ ನಮೋ ಎಂಬೆ, ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ"[೬೬] ಎಂದು ಆಗಮದ ಅಭಿಪ್ರಾಯವನ್ನು ಮನ್ನಿಸಿದ್ದಾರೆ.

ಇಷ್ಟಲಿಂಗ ಪೂಜೆಯ ವಿಧಗಳು –

ಆಗಮಗಳಲ್ಲಿ ಇಷ್ಟಲಿಂಗಪೂಜೆಯ ಮೂರು ವಿಧಗಳು ವರ್ಣಿಸಲ್ಪಟ್ಟಿವೆ. ಲಘ್ವೀ, ಗುರ್ವೀ ಮತ್ತು ಮಹತೀ (ಸಂಕ್ಷಿಪ್ತ, ದೊಡ್ಡ ಮತ್ತು ಮಹತ್ತರ). ಉತ್ತಮವಾದುದು ಮಹತೀಪೂಜೆ; ಅದು ಸಾಧ್ಯವಾಗದ ವ್ಯಕ್ತಿಗೆ ಮಧ್ಯಮವಾದುದು ಗುರ್ವೀ ಪೂಜೆ ಮತ್ತು ಅದೂ ಆಗದವರಿಗೆ ಲಘ್ವೀಪೂಜೆ. ಭೋಜನ ಪೂರ್ವದಲ್ಲಿ ಅವಸರಾ ಎಂಬ ಪೂಜೆಯು ವಿಹಿತವಾಗಿದೆ ಎಂದು ತಿಳಿಸುತ್ತಾ

ಅಭೋಜನೇ ವಿನಿರ್ದಿಷ್ಟಾऽವಸರಾ ತ್ವನ್ಯದಾ ಪರಾ।
ಷಟಸ್ಥಲೋಕ್ತ ವಿಧಾನೇನ ಮಹಾಪೂಜಾಂ ಸಮಾಚರೇತ್॥[೬೭]

ಉಪವಾಸವಿದ್ದು ಮಾಡುವ ಇಷ್ಟಲಿಂಗಪೂಜೆಗೆ ಅವಸರಾ ಪೂಜಾ ಎಂದೂ, ಷಟಸ್ಥಲದ ಕ್ರಮದಂತೆ ಮಾಡುವ ಪೂಜೆಗೆ ಮಹಾಪೂಜಾ ಎನ್ನುವರು ಎಂದು ತಿಳಿಸುತ್ತಾ ಆಯಾ ಶಿವಪೂಜಾ ಸಮಯದಲ್ಲಿ ಉಪಯೋಗಿಸಬೇಕಾದ ಮಂಡಲ, ದೀಪ, ನೀರಾಜನ(ಆರತಿ), ಬತ್ತಿ, ನೈವೇದ್ಯ ಹಾಗೂ ಜಪಸಂಖ್ಯೆಗಳ ಬಗೆಗೆ ಆಗಮಗಳು ತಿಳಿಸುತ್ತವೆ.

ದೀಪ–ನೀರಾಜನ ಬತ್ತಿಗಳು –

ಅವಸರಾ ಪೂಜೆಯಲ್ಲಿ ಪದ್ಮಮಂಡಲ, ಒಂದು ದೀಪ, ಮೂವತ್ತಾರು ದಾರದೆಳೆಗಳಿಂದ ಹೊಸೆದ ಮೂರು ಬತ್ತಿಗಳು. ಮೂರು ನೀರಾಜನಗಳು (ದರ್ಶನ, ಮಜ್ಜನ ಮತ್ತು ಅವಸರ ಎಂಬ ಆರತಿಗಳು) ಅವಸರಾ ನೈವೇದ್ಯ ಹಾಗೂ ಮೂಲ ಪಂಚಾಕ್ಷರಿ ಮಂತ್ರದ ನೂರಾ ಎಂಟು ಬಾರಿ ಜಪವನ್ನು ಕೈಕೊಳ್ಳಬೇಕು.

---

೬೬ ವಚನ ಶಾಸ್ತ್ರಸಾರ– ಫ. ಗು. ಹಳಕಟ್ಟಿ (ಸನ್೧೯೨೩) ವಚನಸಂಖ್ಯೆ ೨೦, ಪುಟ ೧೮೪
೬೭ ಮ.ಆ, ಕ್ರಿ. ಪಾ, ಪಟಲ ೨ ಶ್ಲೋಕ ಸಂಖ್ಯೆ ೪೧

ಲಕ್ಷ್ಮೀ ಪೂಜೆಗಳಲ್ಲಿ ನವಪದ್ಮಮಂಡಲ, ಒಂದು ದೀಪ, ಮೂವತ್ತಾರು ದಾರದೆಳೆಗಳಿಂದ ಹೊಸೆದ ಒಂಬತ್ತು ಅಥವಾ ಹನ್ನೆರಡು ಬತ್ತಿಗಳು, ಒಂಬತ್ತು ನೀರಾಜನಗಳು (ದರ್ಶನ, ಅವಸರ, ಮಜ್ಜನ, ಮಾಂಗಲ್ಯ, ಕರ್ಪೂರ, ಶೃಂಗಾರ, ಮಹತ್, ಆನಂದ ಮತ್ತು ಅಸಂಖ್ಯಾತ ಎಂಬ ಆರತಿಗಳು), ಮಹಾ ನೈವೇದ್ಯ ಹಾಗೂ ಮೂಲ ಪಂಚಾಕ್ಷರಿ ಮಂತ್ರದ ನೂರಾಎಂಟು ಬಾರಿ ಜಪವನ್ನು ಕೈಕೊಳ್ಳಬೇಕು.

ಗುರ್ವೀ ಪೂಜೆಯಲ್ಲಿ ಭದ್ರಮಂಡಲ, ಎರಡು ಅಥವಾ ನಾಲ್ಕು ದೀಪಗಳು, ಮೂವತ್ತಾರು ದಾರದೆಳೆಗಳಿಂದ ಹೊಸೆದ ಹದಿನೆಂಟು ಮೂವತ್ತಾರು ಅಥವಾ ನೂರಾಎಂಟು ಬತ್ತಿಗಳು, ಹನ್ನೊಂದು ನೀರಾಜನಗಳು (ದರ್ಶನ, ಅವಸರ, ಮಜ್ಜನ, ಮಾಂಗಲ್ಯ, ಕರ್ಪೂರ, ಶೃಂಗಾರ, ಮಹತ್, ಆನಂದ, ಅಸಂಖ್ಯಾತ, ಸಾನುಗಾರ ಮತ್ತು ತಾಂಬೂಲ ಎಂಬ ಆರತಿಗಳು), ಮಹಾ ನೈವೇದ್ಯ ಹಾಗೂ ಮೂಲ ಪಂಚಾಕ್ಷರಿ ಮಂತ್ರದ ಸಾವಿರ ಬಾರಿ ಜಪವನ್ನು ಕೈಕೊಳ್ಳಬೇಕು.

ಮಹತಿ ಪೂಜೆಗಳಲ್ಲಿ ತತ್ವಮಂಡಲ, ಎರಡು ಅಥವಾ ನಾಲ್ಕು ದೀಪಗಳು, ಮೂವತ್ತಾರು ದಾರದೆಳೆಗಳಿಂದ ಹೊಸೆದ ನೂರಾ ಎಂಟು ಅಥವಾ ಮುನ್ನೂರು ಅಥವಾ ಸಹಸ್ರ ಬತ್ತಿಗಳು, ಹನ್ನೊಂದು ನೀರಾಜನಗಳು (ದರ್ಶನ, ಅವಸರ, ಮಜ್ಜನ, ಮಾಂಗಲ್ಯ, ಕರ್ಪೂರ, ಶೃಂಗಾರ, ಮಹತ್, ಆನಂದ, ಅಸಂಖ್ಯಾತ, ಸಾನುಗಾರ ಮತ್ತು ತಾಂಬೂಲ ಎಂಬ ಆರತಿಗಳು), ಮಹಾ ನೈವೇದ್ಯ ಹಾಗೂ ಮೂಲ ಪಂಚಾಕ್ಷರಿ ಮಂತ್ರದ ಸಾವಿರ ಬಾರಿ ಜಪವನ್ನು ಕೈಕೊಳ್ಳಬೇಕೆಂದು ಹೇಳಿ ದೀಪಾರಾಧನೆಯಿಂದ ಅಜ್ಞಾನದ ಕತ್ತಲೆಯು ತೊಲಗಿ ದಿವ್ಯ ಜ್ಞಾನವುಂಟಾಗುತ್ತದೆ ಎಂದು ಮಕುಟಾಗಮ ಪ್ರತಿಪಾದಿಸುತ್ತ ಪೂಜೆಗೆ ಉಚಿತವಾದ ಪತ್ರ ಪುಷ್ಪಗಳನ್ನು ತಿಳಿಸುತ್ತದೆ. [೧೮]

ಪೂಜೆಗೆ ಉಚಿತವಾದ ಪತ್ರ ಪುಷ್ಪಗಳು

ನಂದ್ಯಾವರ್ತ, ಶ್ರೀಯಾವರ್ತ, ಶ್ವೇತಾರ್ಕ (ಬಿಳಿ ಎಕ್ಕ), ಶ್ವೇತಕಮಲ (ಬಿಳಿಕಮಲ), ಲಕ್ಷ್ಮೀಪಾಟಲ, ಪುನ್ನಾಗ (ಸುರ ಹೊನ್ನೆ), ಮಾಲತೀ (ಜಾಜಿ) ಹಾಗೂ ಶಂಖಿನೀ (ಕಡಿಯಾಲ); ಪಲಾಶ (ಮುತ್ತುಗ), ಅಶೋಕ, ಬಕುಲ ಮತ್ತು ಕೆಂಪು ಅಗಸ್ತ್ಯ ಈ ಹೂಗಳು ಪ್ರಾತಃಕಾಲದ ಪೂಜೆಗೆ ಪ್ರಶಸ್ತವಾಗಿವೆ.[೧೯]

ಕೃತಮಾಲ (ಕಕ್ಕೆ ಹೂ), ಧತ್ತೂರ, ಕರವೀರ (ಕಣಗಲ ಹೂ), ದ್ರೋಣ (ತುಂಬೆ), ಚಂಪಕ (ಸಂಪಿಗೆ), ಪಾಟಲ (ಗಜ್ಜುಗ), ಕಮಲ ಮತ್ತು ಉತ್ಪಲ (ನೈದಿಲೆ) ಇವು ಮಧ್ಯಾಹ್ನದ ಪೂಜೆಗೆ ಪ್ರಶಸ್ತವೆಂದು ಹೇಳಲಾಗಿದೆ.[೨೦]

---

೧೮. ಕಾ.ಆ. ಪಟಲ ೪, ಶ್ಲೋಕ ಸಂಖ್ಯೆ ೧೭–೩೬

೧೯. ಮ. ಆ ಕ್ರಿಪಾ ೪ ನೇ ಪಟಲ, ಶ್ಲೋ.ಸಂ ೧೩–೧೪

೨೦. ಮ. ಆ ಕ್ರಿಪಾ ೪ ನೇ ಪಟಲ, ಶ್ಲೋ.ಸಂ ೧೫

ಜಾತಿ (ಜಾಜಿ), ನೀಲೋತ್ಪಲ (ನೀಲಕಮಲ), ಕದಂಬ (ಈಚಲು), ಕೇತಕೀ (ಕೇದಗೆ ಹೂ), ಸ್ಥಲಪದ್ಮ (ದಾಸವಾಳ), ಪೂಗ (ಅಡಿಕೆ ಹೂ) ಮತ್ತು ನಾಗದಂತಿ ಈ ಹೂಗಳು ಅರ್ಧರಾತ್ರಿಯ ಪೂಜೆಗೆ ಪ್ರಶಸ್ತವಾಗಿವೆ. ಆದರೆ ಕನಕ, ಕದಂಬ (ಈಚಲು), ಕೇತಕೀ (ಕೇದಗೆ) ಮತ್ತು ಜಾತಿ (ಜಾಜಿ) ಹೂಗಳನ್ನು ಭಕ್ತರು ಅರ್ಧರಾತ್ರಿಯ ಪೂಜೆಯಲ್ಲಿ ಮಾತ್ರ ಅರ್ಪಿಸಬೇಕು, ಬೇರೆಕಾಲಗಳಲ್ಲಲ್ಲ [೨೧] ಎಂದು ತಿಳಿಸಿದೆ.

ಪಾರಿಜಾತವನ್ನು ಪ್ರಾತಃಕಾಲದ ಪೂಜೆಯಲ್ಲಿ, ಚಂದ್ರಕಾಂತ ಕುಸುಮವನ್ನು ಸಾಯಂಕಾಲದಲ್ಲಿ ಪೂಜೆಯಲ್ಲಿ ಪ್ರತಿನಿತ್ಯವೂ ಉಪಯೋಗಿಸಬೇಕು ಎಂದು ಹೇಳುತ್ತ ತ್ರಿಕಾಲ ಮಲ್ಲಿಕಾ, ಕನಕಾಂಬರ, ದ್ರೋಣ(ತುಂಬೆ ಹೂ) ಮತ್ತು ಬಿಲ್ವಪತ್ರೆ ಇವು ಎಲ್ಲ ಕಾಲದ ಪೂಜೆಗಳಿಗೆ ಶ್ರೇಷ್ಠ ಎಂದು ಹೇಳಲಾಗಿದೆ.[೨೨] ಅಲ್ಲದೇ ಆಯಾ ಋತುಗಳಲ್ಲಿ ಸಮರ್ಪಿಸಬೇಕಾದ ಹೂಗಳ ಬಗ್ಗೆ ತಿಳಿಸುತ್ತ –

ವಸಂತದಲ್ಲಿ ಕದಂಬ, ಚಂಪಕ, ಪುನ್ನಾಗ ಮುಂತಾದ ಪುಷ್ಪಗಳು ಶಿವನಿಗೆ ಅರ್ಪಿಸಿದಾಗ ಅಶ್ವಮೇಧ ಯಾಗದ ಫಲವನ್ನು ಕೊಡುತ್ತವೆ. ಗ್ರೀಷ್ಮದಲ್ಲಿ ಪಾಟಲಿ, ಮಲ್ಲಿಗೆ, ಶತಪತ್ರ (ಕಮಲ)ಗಳನ್ನು ಅರ್ಪಿಸಿದರೆ ಅಗ್ನಿಷ್ಟೋಮ ಫಲ ಪ್ರಾಪ್ತವಾಗುತ್ತದೆ. ಶರತ್ಕಾಲದಲ್ಲಿ ನೀಲೋತ್ಪಲ, ಕಲ್ಹಾರ, ಜಾತಿ ಮುಂತಾದ ಹೂವುಗಳನ್ನು ಅರ್ಪಿಸಿದರೆ ಸತ್ರಯಾಗದ ಫಲವು ದೊರೆಯುತ್ತದೆ. ಹೇಮಂತ ಕಾಲದಲ್ಲಿ ಜಾತಿ, ನೀಲೋತ್ಪಲ, ಕರವೀರ ಪುಷ್ಪಗಳನ್ನು ಅರ್ಪಿಸಿದರೆ ನೂರು ಯಾಗಗಳ ಫಲ ಪ್ರಾಪ್ತವಾಗುತ್ತದೆ. ಶಿಶಿರದಲ್ಲಿ ಕರ್ಣಿಕಾರ ಪುಷ್ಪವನ್ನು ಅರ್ಪಿಸಿದರೆ ಎಲ್ಲಾ ಯಾಗಗಳ ಫಲವು ದೊರೆಯುತ್ತದೆ ಎಂದು ತಿಳಿಸಿದೆ.[೨೩]

ಅಲ್ಲದೇ ಆಗಮಗಳಲ್ಲಿ ಹೂಗಳನ್ನು ಸಾತ್ವಿಕ, ರಾಜಸ ಮತ್ತು ತಾಮಸ ಪುಷ್ಪಗಳೆಂದು ವಿಭಾಗಿಸಲಾಗಿದೆ. ಹೂವುಗಳಲ್ಲಿ ಬಿಳಿಯ ಹೂವುಗಳು ಶಿವನಿಗೆ ಪ್ರಿಯವಾದವುಗಳು. ಇವು ಸಾತ್ತ್ವಿಕ ಪುಷ್ಪಗಳು. ಅವು ಮುಕ್ತಿದಾಯಕಗಳು. ಮಿಶ್ರವರ್ಣದವು ಮತ್ತು ಹಳದಿ ವರ್ಣದವು ರಾಜಸ ಪುಷ್ಪಗಳು. ಅವು ಭೋಗ–ಮೋಕ್ಷದಾಯಕಗಳು. ಕಪ್ಪು ಹೂವುಗಳು ತಾಮಸ ಪುಷ್ಪಗಳು. ಇವುಗಳು ಶಿವಪೂಜೆಯಲ್ಲಿ ನಿಷಿದ್ಧವಾಗಿವೆ ಎಂದು ತಿಳಿಸಲಾಗಿದೆ.[೨೪] ಅಲ್ಲದೇ ಔಡಲ ಎಲೆಯಲ್ಲಿ, ವಸ್ತ್ರದಲ್ಲಿ ಅಥವಾ ಕೈಗಳಿಂದ ತಂದಂತಹ, ಬೇರೆಯವರಿಂದ ಬೇಡಿ ಪಡೆದ ಅಥವಾ ಅಪವಿತ್ರ ಜನರು ತಂದಂತಹ ಪುಷ್ಪಗಳನ್ನು ಇಷ್ಟಲಿಂಗಕ್ಕೆ ಅರ್ಪಿಸಬಾರದು. ಭೂಮಿಯ ಮೇಲೆ ಬಿದ್ದವುಗಳು, ಮೂಸಿ ನೋಡಲ್ಪಟ್ಟವುಗಳು, ಕೀಟವುಳ್ಳವುಗಳು, ತೊಟ್ಟಿಲ್ಲದವುಗಳು, ಹುಳತಿಂದವುಗಳು, ಇಂತಹ ಪುಷ್ಪಗಳನ್ನೂ ಲಿಂಗಕ್ಕೆ ಅರ್ಪಿಸಬಾರದು[೨೫] ಎಂದು ತಿಳಿಸಿವೆ. ಅಲ್ಲದೇ

೨೧. ಮ. ಆ ಕ್ರಿಪಾ ೪ ನೇ ಪಟಲ, ಶ್ಲೋ.ಸಂ ೧೬–೧೭
೨೨. ಮ. ಆ ಕ್ರಿಪಾ ೪ ನೇ ಪಟಲ, ಶ್ಲೋ.ಸಂ ೧೮–೧೯
೨೩. ಕಾ.ಆ. ಕ್ರಿಪಾ. ಪಟಲ ೪, ಶ್ಲೋಕ ಸಂಖ್ಯೆ ೪೨–೪೫
೨೪. ಮ.ಆ. ಕ್ರಿಪಾ ಪಟಲ ೪, ಶ್ಲೋ.ಸಂ. ೩೯ – ೪೧
೨೫. ಕಾ.ಆ.ಕ್ರಿಪಾ. ಪಟಲ ೪, ಶ್ಲೋಕ ಸಂಖ್ಯೆ ೪೯–೫೦

ಹೂವುಗಳನ್ನು ಮೇಲ್ಮುಖವಾಗಿಯೂ, ಬಿಲ್ವ ಪತ್ರೆಯನ್ನು ಕೆಳಮುಖವಾಗಿಯೂ ಧರಿಸಬೇಕು. ಎಲ್ಲಾ ಹೂಗಳ ಮೇಲೆ ಬಿಲ್ವಪತ್ರೆ ಧರಿಸಬಹುದು. ಬಿಲ್ವಪತ್ರದ ಮೇಲೆ ಮತ್ತು ಭಸ್ಮದ ಮೇಲೆ ಮತ್ತೇನನ್ನೂ ಧರಿಸಬಾರದು[೭೬] ಎಂದು ವಿಸ್ತೃತವಾಗಿ ಪೂಜಾಕಾಲದಲ್ಲಿ ಬಳಸಬೇಕಾದ ಪುಷ್ಪಗಳ ಬಗ್ಗೆ ತಿಳಿಸಿದರೂ ಸಹ ಪಾರಮೇಶ್ವರಾಗಮದಲ್ಲಿ ಪರಶಿವನು –

ಪತ್ರಂ ಪುಷ್ಪಂ ಫಲಂ ವನ್ಯಂ ಗ್ರಾಮ್ಯಂ ವಾ ದುರ್ಬಲೋಚಿತಮ್।
ಸಮರ್ಪಿತಂ ಸಮಾನೀಯ ಭಕ್ತೇನ ಮಮ ತತ್ಪ್ರಿಯಮ್ ॥
ಸುಗಂಧಿ ವಾಪ್ಯಗಂಧಂ ವಾ ತುಲಸೀಕುಸುಮಾದಿಕಮ್।
ಸಮರ್ಪಿತಂ ಭವೇತ್ ತೃಪ್ತ್ಯೈ ಭಕ್ತಾನಾಂ ಕಾಂಕ್ಷಿತೇನ ಮೇ॥[೭೭]

ವನಗಳಲ್ಲಿ, ಗ್ರಾಮಗಳಲ್ಲಿ ಸುಲಭವಾಗಿ ಮತ್ತು ದುರ್ಬಲರಿಗೂ ಕೂಡ ಲಭ್ಯವಾಗುವ ಪತ್ರಪುಷ್ಪಗಳನ್ನು ಭಕ್ತಿಯಿಂದ ಸಮರ್ಪಿಸುವ ಭಕ್ತನು ನನಗೆ ಅತಿ ಪ್ರಿಯನು! ಸುಗಂಧವಾಗಿರಲಿ, ಗಂಧರಹಿತವೇ ಆಗಿರಲಿ ಸುಲಭವಾಗಿ ಸಿಗುವ ಪುಷ್ಪಗಳನ್ನು ಭಕ್ತನು ಭಕ್ತಿಪೂರ್ವಕವಾಗಿ ಅರ್ಪಿಸಿದಲ್ಲಿ ನಾನು ತೃಪ್ತನಾಗುವೆನು. ಏಕೆಂದರೆ, ನನ್ನನ್ನು ಹೊಂದಬೇಕೆಂಬ ಭಕ್ತನ ತೀವ್ರವಾದ ಅಭೀಪ್ಸೆಯೇ ನನಗೆ ಮುಖ್ಯ ಎಂದು ಪರಶಿವನು ಪಾರ್ವತಿಗೆ ತಿಳಿಸುತ್ತಾನೆ. ಅಲ್ಲದೇ –

ಸತ್ಯಪುಷ್ಪಂ ಕ್ಷಮಾಪುಷ್ಪಂ ವಸ್ತುಷೂಚ್ಚಾವಚೇಷ್ವಪಿ।
ಅನನ್ಯಪೀಡನಂ ಪುಷ್ಪಂ ಪರೋಪಕೃತಿಮುತ್ತಮಾಮ್ ॥
ಸುಹೃನ್ಮಿತ್ರಾರ್ಯುದಾಸೀನ–ಮಧ್ಯಸ್ಥದ್ವೇಷ್ಯಬಂಧುಷು।
ಸಾಧುಷ್ವಪಿ ಚ ಪಾಪೇಷು ದುರ್ಜನೇಷು ಜನೇಷ್ವಪಿ ॥
ಸ್ವಮತೇ ವಿಮತೇ ಮೂಢೇ ಪರಾರಾವುಪಕರ್ತರಿ।
ಸರ್ವತ್ರ ಭಾವಯೇದೇಕಂ ವೀರಶೈವಮತೇ ಶಿವೇ ॥
ಯಃ ಪೂಜಯೇನ್ಮಾಮೀಶಾನಿ ಪುಷ್ಪೈರೇತೈರತಂದ್ರಿತಃ।
ಸರ್ವದಾ ಸರ್ವದಾ ಶಂಭುಂ ವೀರಶೈವಃಸ ಉಚ್ಯತೇ ॥
ರಾಗದ್ವೇಷವಿಮುಕ್ತಾನಾಂ ಲಿಂಗಿನಾಂ ವೀರಶೈವಿನಾಮ್।[೭೮]
ಅಭಿತಃ ಶಿವಕೈವಲ್ಯಂ ಕರಸ್ಥಂ ವಿದಿತಾತ್ಮನಾಮ್ ॥

ಸತ್ಯವೆಂಬ ಪುಷ್ಪ, ಕ್ಷಮೆಯೆಂಬ ಪುಷ್ಪ, ಇಂದ್ರಿಯನಿಗ್ರಹವೆಂಬ ಪುಷ್ಪ, ಸರ್ವಪ್ರಾಣಿಗಳಲ್ಲಿ ದಯೆಯೆಂಬ ಪುಷ್ಪ, ಉತ್ತಮ ಭಾವನೆಯೆಂಬ ಪುಷ್ಪ, ಬಹುವೈವಿಧ್ಯಮಯವಾದ ವಸ್ತುಗಳಲ್ಲಿ ಕೂಡ ಸತ್ಯವೆಂಬ ಭಾವನೆಯ ಪುಷ್ಪ, ಕ್ಷಮಾಭಾವನೆಯೆಂಬ ಪುಷ್ಪ, ಬೇರೆಯವರನ್ನು ಪೀಡಿಸದಿರುವೆನೆಂಬ ಪುಷ್ಪ,

---

೭೬. ಕಾ.ಆ.ಕ್ರಿ.ಪಾ. ಪಟಲ ೪, ಶ್ಲೋಕ ಸಂಖ್ಯೆ ೫೧–೫೨
೭೭. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೧೨–೧೩
೭೮. ಪಾ.ಆ. ಪಟಲ ೧೦, ಶ್ಲೋಕ ಸಂಖ್ಯೆ ೬೨–೬೬

ಪರೋಪಕಾರವೆಂಬ ಪುಷ್ಪ, ಸಹೃದಯ-ಗೆಳೆಯ-ವೈರಿ-ತಟಸ್ಥ-ಮಧ್ಯಸ್ಥ-ದ್ವೇಷಕ್ಕೆ ಯೋಗ್ಯ-ಬಂಧು-ಸಾಧು-ಪಾಪಿ-ದುರ್ಜನ-ಸಾಮಾನ್ಯ ಜನರೆಲ್ಲರಲ್ಲಿ ಒಂದೇ ಭಾವನೆಯೆಂಬ ಪುಷ್ಪ, ಇವೆಲ್ಲವನ್ನು ವೀರಶೈವಮತದಲ್ಲಿ ಪರಮಾತ್ಮನಿಗೆ ಅರ್ಪಿಸಬೇಕು. ಯಾರು ಈ ಎಲ್ಲಾ ಪುಷ್ಪಗಳಿಂದ ಆಲಸ್ಯವಿಲ್ಲದೆ ಸದಾಕಾಲವೂ ಶಂಭುವನ್ನು ಪೂಜಿಸುವನೋ ಅವನು ವೀರಶೈವನೆಂದು ಕರೆಯಲ್ಪಡುತ್ತಾನೆ. ರಾಗ-ದ್ವೇಷಗಳಿಂದ ಮುಕ್ತರಾದ, ಲಿಂಗಧಾರಿಗಳಾದ, ಆತ್ಮಜ್ಞಾನಿಗಳಾದ ವೀರಶೈವರಿಗೆ ಎಲ್ಲೆಡೆಯೂ ಶಿವನೇ ಎಂಬ ಭಾವನೆಯು ಕರಗತವಾಗುತ್ತದೆ ಎಂದು ತಿಳಿಸುತ್ತದೆ.

ಇದೇ ಭಾವವನ್ನೇ ಚೆನ್ನಬಸವಣ್ಣನವರ ವಚನದಲ್ಲಿ ಕಾಣಬಹುದು –

> "ಹೊರಗನೆ ಕೊಯ್ದು ಹೊರಗನೆ ಪೂಜಿಸಿದಡೆ
> ಪರಿಣಾಮವಿಲ್ಲ, ಪ್ರಯೋಜನವಿಲ್ಲ, ಸುಖ ದೊರೆಕೊಳ್ಳದು ನೋಡಾ; ಅದೆಂತೆಂದಡೆ:
> ಸರ್ವಜೀವಂಗಳಲ್ಲಿ ಜೀವಹಿಂಸೆಯ ಮಾಡದಿರಬಲ್ಲಡೆ ಪ್ರಥಮ ಪುಷ್ಪ;
> ಸರ್ವೇಂದ್ರಿಯಂಗಳ ನಿಗ್ರಹಿಸಿಕೊಂಡಿರಬಲ್ಲಡೆ ದ್ವಿತೀಯ ಪುಷ್ಪ;
> ಸರ್ವಾಹಂಕಾರವರತು ಶಾಂತನಾಗಿರಬಲ್ಲಡೆ ತೃತೀಯ ಪುಷ್ಪ;
> ಸರ್ವವ್ಯಾಪಾರವಳಿದು ನಿರ್ವ್ಯಾಪಾರಿಯಾಗಿರಬಲ್ಲಡೆ ಚತುರ್ಥ ಪುಷ್ಪ;
> ದುರ್ಭಾವ ಪ್ರಕೃತಿಯಳಿದು ಸದ್ಭಾವವೆಡೆಗೊಂಡಿರಬಲ್ಲಡೆ ಪಂಚಮ ಪುಷ್ಪ;
> ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯಾಗಿರಬಲ್ಲಡೆ ಷಷ್ಠ ಪುಷ್ಪ;
> ಅನೃತವ ಮರೆದು ಸತ್ಯವ ನುಡಿಯಬಲ್ಲಡೆ ಸಪ್ತಮ ಪುಷ್ಪ:
> ಸಕಲಪ್ರಪಂಚವಳಿದು ಶಿವಜ್ಞಾನಸಂಪನ್ನರಾಗಿರಬಲ್ಲಡೆ ಅಷ್ಟಮ ಪುಷ್ಪ;
> ಇಂತೀ ಅಷ್ಟದಳಕಮಲದಲ್ಲಿ ಸಹಜಪೂಜೆ ಮಾಡಬಲ್ಲ ಶರಣರು
> ನಿಮ್ಮ ಪ್ರತಿಬಿಂಬದಂತಿಪ್ಪರು ಕಾಣಾ, ಕೂಡಲಚೆನ್ನಸಂಗಮದೇವಾ".[೭೯]

ಎಂದಿದ್ದಾರೆ. ಹೀಗೆ ಶಿವಾಗಮ ಮತ್ತು ವಚನಗಳೆರಡೂ ಬಾಹ್ಯ ಪುಷ್ಪಗಳಿಗಿಂತ ಭಾವಪೂರ್ಣವಾದ ಪುಷ್ಪಗಳಿಂದ ಪೂಜೆಯನ್ನು ವೀರಶೈವನು ಕೈಕೊಳ್ಳಬೇಕೆಂದು ಸಾರಿವೆ.

ಇಷ್ಟಲಿಂಗ ಪೂಜೆಯಲ್ಲಿ ದಿಕ್ಕುಗಳ ನಿರ್ದೇಶ

> ಸದಾ ಪೂರ್ವಮುಖಃ ಪೂಜಾಂ ಕುರ್ಯಾಲ್ಲಿಂಗಸ್ಯ ಶಾಂಕರಿ
> ಆಯುಃ ಶ್ರಿಯಂ ಯಶೋ ವರ್ಚಃ ಪ್ರಜಾಂ ಪುಷ್ಟಿ ಯದೀಚ್ಛತಿ
> ದಕ್ಷಿಣಾಭಿಮುಖಃ ಕುರ್ಯಾನ್ಮಾರಣಾದಿಷು ಸುಂದರಿ।
> ಕಾಮಾರ್ಥೀ ಪಶ್ಚಿಮಮುಖೋ ಜ್ಞಾನಾರ್ಥೀಸ್ಯಾದುದಙ್ಮುಖಃ
> ಪ್ರಾತರ್ಮಧ್ಯಾಹ್ನಯೋಃ ಪೂರ್ವಮುಖಃ ಪೂಜಾಂ ಸಮಾಚರೇತ್।
> ರಾತ್ರಾವುದಙ್ಮುಖಂ ಕುರ್ಯಾದ್ವಿಧಿರೇಷ ಸಮರ್ಚನೇ

---

೭೯. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೭೦೨, ಪುಟ ೬೨೭

ವ್ಯತ್ಯಸ್ತಂ ನೈವ ಕುರ್ವೀತ ವಿನ್ಯೈಹಿಕಫಲಂ ಶಿವೇ।
ಯದಿ ಸ್ಯಾಜ್‌ಜ್ಞಾನಮೋಕ್ಷಾರ್ಥೀ ಪೂಜಯೇದುತ್ತರಾನನಃ
ನಿಸ್ಪೃಹಃ ಸರ್ವಕಾಮೇಷು ಮುಮುಕ್ಷುರ್ವಿಜಿತೇಂದ್ರಿಯಃ।
ಉಕ್ತಲಕ್ಷಣವಾನ್ ಜ್ಞಾನೀ ಸರ್ವಸ್ಯ ಸರ್ವದಾ ಭವೇತ್
ತೇಜಸ್ಕಾಮ್ಯಗ್ನಿವದನಃ ಪ್ರಜಾಕಾಮೀ ಮರುನ್ಮುಖಃ।
ಶತ್ರುಕ್ಷಯಾರ್ಥೀ ಹೀಶಾನೇ ಪ್ರಜಾರ್ಥೀ ಪ್ರತ್ಯಗುತ್ತರಃ
ಸಂಧ್ಯಾಸು ಪೂರ್ವವದನೋ ಹ್ಯಭಿಚಾರಕಕರ್ಮಣಿ।
ಅರ್ಚನ್ನಿರ್ಋತಿದಿಗ್ವಕ್ತ್ರಃ ಸರ್ವಾರ್ಥೀ ಸರ್ವತೋಮುಖಃ [೮೦]

"ಆಯಸ್ಸು, ಸಂಪತ್ತು, ಯಶಸ್ಸು, ವರ್ಚಸ್ಸು, ಸಂತಾನ, ಪುಷ್ಟಿಗಳನ್ನು ಇಚ್ಛಿಸುವವನು ಸದಾ ಪೂರ್ವಾಭಿಮುಖನಾಗಿ ಲಿಂಗಪೂಜೆಯನ್ನು ಮಾಡಬೇಕು. ಮಾರಣಾದಿಗಳಲ್ಲಿ (ಶತ್ರುನಾಶದ ಸಂದರ್ಭದಲ್ಲಿ) ದಕ್ಷಿಣಾಭಿಮುಖನಾಗಿ ಪೂಜೆ ಮಾಡಬೇಕು. ಕಾಮನೆಗಳನ್ನು ಪೂರೈಸಿಕೊಳ್ಳ ಬಯಸುವವನು ಪಶ್ಚಿಮಾಭಿಮುಖನಾಗಿಯೂ, ಜ್ಞಾನ–ಮೋಕ್ಷಗಳನ್ನು ಬಯಸುವವನಾಗಿದ್ದರೆ ಉತ್ತರಾಭಿಮುಖನಾಗಿ ಪೂಜೆ ಮಾಡಬೇಕು. ಬೆಳಿಗ್ಗೆ ಮಧ್ಯಾಹ್ನಗಳಲ್ಲಿ ಪೂರ್ವಾಭಿಮುಖನಾಗಿ ಮತ್ತು ರಾತ್ರಿಯಲ್ಲಿ ಉತ್ತರಾಭಿಮುಖನಾಗಿ ಪೂಜೆಯನ್ನು ಆಚರಿಸಬೇಕು, ಇದು ಅರ್ಚನೆಯ ವಿಷಯದಲ್ಲಿರುವ ವಿಧಿ." ಐಹಿಕಫಲದ ಉದ್ದೇಶವಿಲ್ಲದಿದ್ದರೆ ಮೇಲೆ ಹೇಳಿದ ವಿಧಿಯಲ್ಲಿ ವ್ಯತ್ಯಾಸ ಮಾಡಬಾರದು ಎಂದು ನಾಲ್ಕು ದಿಕ್ಕಿನಲ್ಲಿ ಮಾಡುವ ಪೂಜಾಫಲವನ್ನು ತಿಳಿಸಿ, ಉಪದಿಕ್ಕುಗಳ ಫಲವನ್ನೂ ತಿಳಿಸುತ್ತದೆ – "ತೇಜಸ್ಸನ್ನು ಬಯಸುವವನು ಅಗ್ನಿದಿಕ್ಕಿಗೆ ಮುಖಮಾಡಿ, ಸಂತತಿಯನ್ನು ಇಚ್ಛಿಸುವವನು ಮರುತ್‌ದಿಕ್ಕಿಗೆ ಮುಖಮಾಡಿ, ಶತ್ರುನಾಶವನ್ನು ಬಯಸುವವನು ಈಶಾನ್ಯಕ್ಕೆ ಮುಖಮಾಡಿ, ಸಂತಾನಕಾಮನು ವಾಯುವ್ಯಕ್ಕೆ ಮುಖ ಮಾಡಿ ಪೂಜಿಸಬೇಕು. ಮೂರು ಸಂಧ್ಯೆಗಳಲ್ಲಿ ಪೂರ್ವಾಭಿ ಮುಖನಾಗಿ, ಅಭಿಚಾರ ಕರ್ಮದಲ್ಲಿ ನೈರುತ್ಯಕ್ಕೆ ಮುಖಮಾಡಿ ಪೂಜಿಸಬೇಕು. ಎಲ್ಲವನ್ನೂ ಇಚ್ಛಿಸುವವನು ಎಲ್ಲಾ ದಿಕ್ಕುಗಳಿಗೂ ಮುಖಮಾಡಿ ಪೂಜಿಸಬೇಕು. ಅಂದರೆ ಇಚ್ಛೆಗೆ ಅನುಸಾರವಾಗಿ ಆಯಾಯ ದಿಕ್ಕಿಗೆ ಮುಖಮಾಡಿ ಪೂಜಿಸಬೇಕು. ಎಲ್ಲಾ ಬಯಕೆಗಳಿಂದ ದೂರನಾಗಿ, ಜಿತೇಂದ್ರಿಯನಾಗಿ, ಮೋಕ್ಷಾಕಾಂಕ್ಷಿಯಾದ ಜ್ಞಾನಿಗೆ ಯಾವ ದಿಕ್ಕಾದರೂ ಸರಿ" ಎಂದು ಇಷ್ಟಲಿಂಗ ಪೂಜೆಯಲ್ಲಿ ದಿಕ್ಕುಗಳ ನಿರ್ದೇಶ ಮಾಡಿ ಇಷ್ಟಲಿಂಗವನ್ನು ಎಲ್ಲಾ ಪೀಠಗಳಿಗಿಂತ ಪಾಣಿಪೀಠದಲ್ಲಿಯೇ ಪೂಜಿಸುವದು ಶ್ರೇಷ್ಠವೆಂದು ತಿಳಿಸಿ ಪಾಣಿಪೀಠದ ಸ್ವರೂಪವನ್ನು ನಿರೂಪಣೆ ಮಾಡಲಾಗಿದೆ.

ಪಾಣಿಪೀಠದ ಸ್ವರೂಪ ನಿರೂಪಣೆ

ತತ್ಸ್ವರೂಪಂ ವಿಶೇಷೇಣ ಹ್ಯಾಕರ್ಣಯ ವದಾಮಿ ತೇ ।
ಸ್ವವಾಮಹಸ್ತಂ ಕಮಲಂ ಧ್ಯಾತ್ವಾ ಪಂಚದಲಂ ಶುಭಮ್ ॥

---

೮೦. ಪಾ.ಆ. ಪಟಲ ೧೪, ಶ್ಲೋಕ ಸಂಖ್ಯೆ ೫೪–೬೫

ಪಂಚಾಂಗುಲೀಃ ಪಂಚದಲಂ ಕರ್ಣೀ ಕರತಲಂ ತಥಾ।
ರೇಖಾ ಹಸ್ತಗತಾಃ ಸರ್ವಾ ಧ್ಯಾಯೇತ್ ಕಮಲಕೇಸರಾನ್ ॥
ಪಂಚಾಂಗುಲೀಷು ದೇವೇಶಿ ಪಂಚಬ್ರಹ್ಮಾನುವಾಕಕೈಃ।
ಪಂಚಬ್ರಹ್ಮಾತ್ಮನೋ ಧ್ಯಾಯೇತ್ ಕರ್ಣಿಕಾಯಾಂ ಗಿರೀಂದ್ರಜಾಮ್ ॥
ಅಂಗುಷ್ಠಾದಿ ಕನಿಷ್ಠಾಂತಂ ಪ್ರಾದಕ್ಷಿಣ್ಯೇನ ಸುಂದರಿ।
ಗಾರ್ಹಪತ್ಯಂ ದಕ್ಷಿಣಾಗ್ನಿಂ ಮಧ್ಯಮಾಹವನೀಯಕಮ್ ॥
ಸಭ್ಯಾಽಽವಸಥ್ಯೋ ಕ್ರಮಶಃ ಪಂಚಾಗ್ನೀನ್ ಭಾವಯೇತ್ಸುಧೀಃ।
ಶಿವಸ್ಯ ಪಂಚವಕ್ತ್ರಾಣಿ ಧ್ಯಾಯೇತ್ ಪಂಚಾಂಗುಲೀ ಶಿವೇ ॥[೮೧]

ತನ್ನ ಎಡ ಅಂಗೈಯನ್ನು ಶುಭವಾದ ಪಂಚದಲ ಕಮಲವೆಂದು ಧ್ಯಾನಿಸಿ, ಐದು ಬೆರಳುಗಳನ್ನು ಐದು ದಲಗಳನ್ನಾಗಿ ಕರತಲವನ್ನು ಕರ್ಣಿಕೆಯೆಂದು ಹಾಗೆಯೇ ಧ್ಯಾನಿಸಿ, ಹಸ್ತದಲ್ಲಿರುವ ಎಲ್ಲಾ ರೇಖೆಗಳನ್ನು ಕಮಲದ ಕೇಸರಗಳೆಂದು ಭಾವಿಸಬೇಕು. ಐದು ಬೆರಳುಗಳಲ್ಲಿ ಪಂಚಬ್ರಹ್ಮ ಮಂತ್ರಗಳ ಮೂಲಕ ಪಂಚಬ್ರಹ್ಮ ಮಂತ್ರ ಸ್ವರೂಪಗಳನ್ನು ಮತ್ತು ಕರ್ಣಿಕೆಯಲ್ಲಿ ಪಾರ್ವತಿಯನ್ನು ಭಾವಿಸಬೇಕು. ಅಂಗುಷ್ಠದಿಂದ ಕನಿಷ್ಠದವರೆಗೆ ಪ್ರದಕ್ಷಿಣೆಯ ಕ್ರಮದಲ್ಲಿ ಗಾರ್ಹಪತ್ಯ, ದಕ್ಷಿಣಾಗ್ನಿ, ಅಹವನೀಯ, ಸಭ್ಯ ಮತ್ತು ಆವಸಥ್ಯ ಎಂಬ ಐದು ಅಗ್ನಿಗಳನ್ನು ಜ್ಞಾನಿಯು ಭಾವಿಸಬೇಕು. ಶಿವನ ಐದು ಮುಖಗಳನ್ನು (ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಸ್ವರೂಪಗಳನ್ನು) ಐದು ಬೆರಳುಗಳಲ್ಲಿ ಧ್ಯಾನಿಸಬೇಕು ಎಂದು ಕರಪೀಠದ ಸ್ವರೂಪವನ್ನು ವಿವರಿಸಲಾಗಿದೆ.

ಇಷ್ಟಲಿಂಗ ಪೂಜಾ ವಿಧಾನ

ಮೊದಲು ಭಕ್ತನು ಸ್ನಾನಾದಿ ಕ್ರಿಯೆಗಳಿಂದ ಶುಚಿರ್ಭೂತನಾಗಿ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಮಡಿಬಟ್ಟೆಗಳನ್ನು ಧರಿಸಿ ಭಸ್ಮ ಮತ್ತು ರುದ್ರಾಕ್ಷಿಗಳನ್ನು ಧಾರಣ ಮಾಡಿಕೊಂಡು ಪುಷ್ಪ ಮುಂತಾದ ಪಾತ್ರೆಗಳನ್ನು ಸಂಗ್ರಹಿಸಿಕೊಂಡು. ನಂತರ ಭದ್ರ ಮೊದಲಾದ ಮಂಡಲದಲ್ಲಿ ವ್ಯವಸ್ಥಿತವಾಗಿ ಪೂಜಾಪಾತ್ರೆಗಳನ್ನು ಇರಿಸಿ ಸುಖಾಸನದಲ್ಲಿ ಕುಳಿತುಕೊಂಡು ಎರಡು ಅಥವಾ ನಾಲ್ಕು ದೀಪವನ್ನು ಬೆಳಗಿಸಬೇಕು. ನಂತರ ಗಣಂಗಳ ಆಜ್ಞೆಯನ್ನು ಪಡೆದು, ಘಂಟೆಯನ್ನು ಬಾರಿಸಿ, ಶಿವನಾಮಗಳನ್ನು ಹೇಳುತ್ತಾ ಆಚಮನ ಮಾಡಬೇಕು. ಶಕ್ತಿಗೆ ಅನುಗುಣವಾಗಿ ಪ್ರಾಣಾಯಾಮ ಮಾಡಿ, ದೇಶ–ಕಾಲಾದಿಗಳನ್ನು ಉಲ್ಲೇಖಿಸಿ ಸಂಕಲ್ಪ ಮಾಡಬೇಕು.[೮೨]

ಪೂಜಾದೌ ತು ಶಿವಂ ಧ್ಯಾತ್ವಾ ಜಪ್ತ್ವಾ ಪಂಚಾಕ್ಷರಂ ಮನುಮ್।[೮೩]
ತತಃ ಸಂಪೂಜಯೇದ್ದೇ ವಂ ವೀರಶೈವಕ್ರಮೋ ಭವೇತ್॥

೮೧. ಪಾ.ಆ. ಪಟಲ ೧೩, ಶ್ಲೋಕ ಸಂಖ್ಯೆ ೧೭–೨೧
೮೨. ಕಾ.ಆ.ಕ್ರಿ.ಪಾ. ಪಟಲ ೭, ಶ್ಲೋಕ ಸಂಖ್ಯೆ ೩–೬
೮೩. ಸೂ. ಆ. ಪಟಲ ೬, ಶ್ಲೋಕ ಸಂಖ್ಯೆ ೩೬

"ಶಿವಪೂಜೆಯ ಆರಂಭದಲ್ಲಿ ಶಿವನನ್ನು ಧ್ಯಾನಿಸಿ, ಪಂಚಾಕ್ಷರ ಮಂತ್ರವನ್ನು ಜಪಿಸಿದ ನಂತರ ಶಿವನನ್ನು ಪೂಜಿಸುವುದು ವೀರಶೈವರ ಪೂಜಾಕ್ರಮ" ಎಂಬ ಸೂಕ್ಷ್ಮಾಗಮದ ಆದೇಶಾನುಸಾರ ನಿರ್ಮಲವಾದ ಮನಸ್ಸಿನಿಂದ ಶಿವನನ್ನು ಧ್ಯಾನಿಸಿ, ಶಿವವಾಚಕವಾದ ಪಂಚಾಕ್ಷರ ಮಂತ್ರವನ್ನು ತನ್ನ ಸಂಕಲ್ಪದಂತೆ ಜಪಿಸಿದ ನಂತರ ಎಡ ಹಸ್ತದಲ್ಲಿ ಭಸ್ಮದಿಂದ ಷಟ್‌ಕೋಣದ ಆಕೃತಿಯನ್ನು ರಚಿಸಿ, 'ಓಂ'ಕಾರವನ್ನು ಭಸ್ಮದ ಮುಖದಲ್ಲಿ, 'ವಾ' ಮತ್ತು 'ಯ' ಕಾರಗಳನ್ನು ಅದರ ಎರಡು ಭುಜಗಳಲ್ಲಿ, 'ಶಿ'ಕಾರವನ್ನು ಯಂತ್ರದ ಮಧ್ಯದಲ್ಲಿಯೂ, 'ನ' ಮತ್ತು 'ಮಃ' ಕಾರಗಳನ್ನು ಷಟ್‌ಕೋಣದ ಎರಡೂ ಪಾದಗಳಲ್ಲಿ ಕ್ರಮವಾಗಿ ಬರೆದು, ಅದನ್ನು ಪಂಚಾಕ್ಷರಿ ಮಂತ್ರದಿಂದ ಆರು ಸಲ ಮಂತ್ರಿಸಿ[೮೪] "ಸರ್ವಲಿಂಗಂ ಸ್ಥಾಪಯತಿ" ಎಂಬ ಮಂತ್ರದಿಂದ ಅಂಗೈ ಮೇಲೆ ಇಷ್ಟಲಿಂಗವನ್ನಿರಿಸಿಕೊಳ್ಳಬೇಕು ನಂತರ ನೀರಾಜನ, ಭಸ್ಮಪ್ರೋಕ್ಷಣೆ, ಪಾದ್ಯ, ಅರ್ಘ್ಯ ಮುಂತಾದವುಗಳ ಅರ್ಪಣೆ, ಶ್ರೀ ರುದ್ರಾಧ್ಯಾಯದಿಂದ ಅಭಿಷೇಕ, ಭಸ್ಮಲೇಪನ, ಗಂಧ–ಪುಷ್ಪಾದಿಗಳ ಅರ್ಪಣೆ, ಧೂಪಹಾಕುವುದು, ನೀರಾಜನ, ಜಪ, ನೈವೇದ್ಯ ಸಮರ್ಪಣೆ, ಮಂತ್ರ ಪುಷ್ಪ ಸಮರ್ಪಣೆ, ಜಪ ಅನಂತರ ಛತ್ರ, ಚಾಮರ, ವ್ಯಜನ, ತಾಳೆಯ ಬೀಸಣಿಕೆ, ದರ್ಪಣ ಮುಂತಾದವುಗಳ ಸೇವೆ ಮಾಡಿ, ಘಂಟಾನಾದವನ್ನು ಕೇಳಿಸಿ, ಶಂಖವನ್ನು ಊದಿ, ಧೂಪ–ದೀಪ–ನೀರಾಜನಗಳೊಂದಿಗೆ ಪೂಜಿಸಬೇಕು. ಆಮೇಲೆ ಮಹಾನೀರಾಜನ, ಮಂತ್ರಪುಷ್ಪ, ಮತ್ತೆ ನೀರಾಜನ, ಹೀಗೆ ಕ್ರಮವಾಗಿ ಪೂಜೆಯನ್ನು ಆಚರಿಸಬೇಕು ಎಂದು ತಿಳಿಸುತ್ತಾ ಆಯಾಯ ಸ್ಥಲಗಳಿಗೆ ಸಂಬಂಧಿಸಿದಂತೆ ಇರುವ ವಿಧಿಯಂತೆ ಪೂಜೆಯನ್ನು ಮಾಡಬೇಕೆಂದು ತಿಳಿಸಿದೆ.

ನಿರೀಕ್ಷಣ, ಪ್ರೋಕ್ಷಣ, ತಾಡನ, ಅವಕುಂಠನ ಮತ್ತು ಅಭ್ಯುಕ್ಷಣ ಮುದ್ರೆಗಳಿಂದ ಲಿಂಗವನ್ನು ಸಂಸ್ಕರಿಸಿ, ದೇನುಮುದ್ರೆಯಿಂದ ಅಮೃತೀಕರಣ ಮಾಡಿ, ಪದ್ಮ ಮತ್ತು ಲಿಂಗ ಮುದ್ರೆಗಳನ್ನು ಲಿಂಗಕ್ಕೆ ಪ್ರದರ್ಶಿಸಬೇಕು. ಪಾದ್ಯ, ಅರ್ಘ್ಯ, ಆಚಮನ ಮುಂತಾದ ಪಾತ್ರೆಗಳನ್ನು ಸಜ್ಜುಗೊಳಿಸಿಕೊಂಡು ಮಂತ್ರಪೂರ್ವಕವಾಗಿ ನೀರು, ಭಸ್ಮ, ಗಂಧ, ಪುಷ್ಪಗಳಿಂದ ಕ್ರಮವಾಗಿ ಇಷ್ಟಲಿಂಗ ಪೂಜೆಯನ್ನು ಮಾಡುವದು ಭಕ್ತಸ್ಥಲದ ಪೂಜಾವಿಧಾನ.[೮೫]

ಹಸ್ತ ಶುದ್ಧಿ ಮಾಡಿಕೊಂಡು ಪೂಜಿಸಿ, ಭಸ್ಮ ಸ್ನಾನ ಮಾಡಿ, ಇಷ್ಟಲಿಂಗವನ್ನು ಕರಪೀಠಕ್ಕೆ ತಂದು, ಷಡಂಗನ್ಯಾಸ, ಷಡಕ್ಷರ ಮಂತ್ರ ಜಪವನ್ನು ಏಕಾಗ್ರತೆಯಿಂದ ಜಪಿಸುವದು ಮಾಹೇಶ್ವರ ಸ್ಥಲದ ಪೂಜಾವಿಧಾನ.[೮೬]

ಭಸ್ಮದಿಂದ ಲಿಂಗಕ್ಕೆ ಅಭ್ಯುಕ್ಷಣ ಮಾಡಿ, ಅನುಧ್ಯಾನ ಮಾಡಿ, ದಶಾವಧಾನ ವಿಧಿಯಿಂದ, ನಿರೀಕ್ಷಣ, ನೀರಾಜನಾದಿಗಳನ್ನು ಮಾಡುತ್ತಾ ಪೂಜೆ ಮಾಡುವದು

---

೮೪. ಕಾ.ಆ.ಕ್ರಿ.ಪಾ. ೩ ನೇ ಪಟಲ,ಶ್ಲೋ.ಸಂ. ೪೫–೪೬

೮೫. ಕಾ.ಆ.ಕ್ರಿ.ಪಾ. ಪಟಲ ೭, ಶ್ಲೋಕ ಸಂಖ್ಯೆ ೯–೨೨

೮೬. ಕಾ.ಆ.ಕ್ರಿ.ಪಾ. ಪಟಲ ೭, ಶ್ಲೋಕ ಸಂಖ್ಯೆ ೨೨–೨೪

ಪ್ರಸಾದಿಸ್ಥಲದ ಪೂಜಾವಿಧಾನ.[೮೭]

ಲಿಂಗಕ್ಕೆ ಭಸ್ಮ ಧರಿಸಿ, ಪುಷ್ಪಗಳಿಂದ ಅಲಂಕರಿಸಿ, ನೀರಾಜನ ಮಾಡಿ ಪಾದ್ಯ, ಅರ್ಘ್ಯ ಮುಂತಾದವುಗಳಿಂದ ಕ್ರಮವಾಗಿ ಲಿಂಗಕ್ಕೆ ಅಭಿಷೇಕ ಮಾಡಬೇಕು. ಲಿಂಗದೇವನ ಪಾದ ತೊಳೆಯಲು ಪಾದ್ಯ, ಹಸ್ತ ಶುದ್ಧಿಗಾಗಿ ಅರ್ಘ್ಯ, ಮುಖ ಶುದ್ಧಿಗಾಗಿ ಆಚಮನೀಯ ಮುಂತಾಗಿ ಭಾವಿಸಿ, ಶ್ರೀ ರುದ್ರ ನಮಕ–ಚಮಕಗಳಿಂದ ಪುರುಷಸೂಕ್ತದಿಂದ ಅಭಿಷೇಕವನ್ನು ಮಾಡಿ, ಷೋಡಶೋಪಚಾರ ಪೂಜೆಯನ್ನು ವೈಭವದಿಂದ ಮಾಡುವದು ಪ್ರಾಣಲಿಂಗಿಸ್ಥಲ ಪೂಜಾವಿಧಾನ.[೮೮]

ಭೋಜ್ಯ ಪದಾರ್ಥಗಳು ವ್ಯಾಹೃತಿಗಳಿಂದ (ಓಂ ಭೂಃ ಭುವಃ ಸ್ವಃ....) ಶ್ರೀ ರುದ್ರ ಗಾಯತ್ರಿ, ಸಾವಿತ್ರೀ ಮಂತ್ರಗಳಿಂದ ಪರಿಷೇಚಿಸಿ, ಅವುಗಳನ್ನು ಸ್ವಾಹಾಂತವಾಗಿ ಆಚಾರಾದಿ ಆರು ಲಿಂಗಗಳಿಗೆ ಅರ್ಪಿಸುವದು ಶರಣಸ್ಥಲ ಪೂಜಾವಿಧಾನ.[೮೯]

ಲಿಂಗದ ಮೇಲೆ ಪುಷ್ಪವನ್ನು ಧರಿಸಿ ಧೂಪ, ನೀರಾಜಗಳನ್ನು ಮಾಡಿ, ಪುಷ್ಪಾಂಜಲಿ ಅರ್ಪಿಸಿ, ತೀರ್ಥಪ್ರಸಾದಗಳನ್ನು ಸೇವಿಸಿ, ಇಷ್ಟಲಿಂಗವನ್ನು ಕರಡಿಗೆಯಲ್ಲಿಟ್ಟು ಪೂಜೆ ಮುಗಿಸುವದು ಐಕ್ಯಸ್ಥಲದ ಪೂಜಾವಿಧಾನ.[೯೦] ಇದು ಮಹಾರ್ಚನ ವಿಧಿ. ಇಂತಹ ಅರ್ಚನೆಯನ್ನು ಮಾಡಿದ ಪುಣ್ಯಾತ್ಮನಿಗೆ ಪುನರ್ಜನ್ಮದ ಭಯವಿಲ್ಲ ಎಂದು ತಿಳಿಸುತ್ತವೆ. ಕಾರಣ –

ಪೂಜಾರ್ಚನಾದಿಕೋ ಭೇದಶ್ಚೋದಯಾಯ್ಯೈವ ಶಾಂಕರಿ।
ಭಕ್ತೇರ್ಜ್ಞಾನಸ್ಯ ದಾರ್ಢ್ಯಾಯ ಕೇವಲಂ ತ್ವಾಪ್ತಯೇ ಸ್ಫುಟಮ್ ॥[೯೧]

ಪೂಜೆ, ಅರ್ಚನೆ ಮುಂತಾದ ಆಚರಣೆಗಳು ಮಾನವ ಕಲ್ಯಾಣಕ್ಕಾಗಿಯೇ ಇವೆ. ಇವುಗಳಿಂದ ಭಕ್ತಿ ಮತ್ತು ಜ್ಞಾನಗಳು ಗಟ್ಟಿಗೊಳ್ಳುವವು. ತನ್ಮೂಲಕ ಕೈವಲ್ಯಪ್ರಾಪ್ತಿಯಾಗುವದು ಎಂದು ಆಗಮಗಳು ಅರುಹುತ್ತ ಪೂಜೆಯನ್ನು ನಿಷ್ಕಾಮ ಭಕ್ತಿಯಿಂದ ಕೈಕೊಳ್ಳಬೇಕು ಎಂದು ತಿಳಿಸುತ್ತ –

ಕರ್ಮಯಜ್ಞೋ ದ್ವಿಧಾಃ ಜ್ಞೇಯಃ ಸಕಾಮಾಕಾಮಭೇದತಃ।
ಸಕಾಮೇ ತು ಫಲಂಭುಕ್ತ್ವಾ ಜಾಯತೇ ಭುವಿ ಪೂರ್ವವತ್ ।
ನಿಷ್ಕಾಮೇಽಪಿ ಪರಂಜ್ಞಾನಂ ಲಬ್ಧ್ವಾ ಮೋಕ್ಷಮವಾಪ್ನುಯಾತ್ ॥[೯೨]

ಸಕಾಮ ಪೂಜೆಯಿಂದ ಫಲವನ್ನು ಅನುಭವಿಸಿ ಮೊದಲಿನಂತೆ ಭೂಮಂಡಲದಲ್ಲಿ ಹುಟ್ಟಬೇಕಾಗುತ್ತದೆ. ಆದರೆ ನಿಷ್ಕಾಮ ಪೂಜೆ ಶ್ರೇಷ್ಠವಾಗಿದ್ದು,

---

೮೭. ಕಾ.ಆ.ಕ್ರಿ.ಪಾ. ಪಟಲ ೭, ಶ್ಲೋಕ ಸಂಖ್ಯೆ ೨೫–೨೬
೮೮. ಕಾ.ಆ.ಕ್ರಿ.ಪಾ. ಪಟಲ ೭, ಶ್ಲೋಕ ಸಂಖ್ಯೆ ೨೭–೫೭
೮೯. ಕಾ.ಆ.ಕ್ರಿ.ಪಾ. ಪಟಲ ೩, ಶ್ಲೋಕ ಸಂಖ್ಯೆ ೫೮–೬೭
೯೦. ಕಾ.ಆ.ಕ್ರಿ.ಪಾ. ಪಟಲ ೩, ಶ್ಲೋಕ ಸಂಖ್ಯೆ ೬೮–೭೩
೯೧. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೯೦
೯೨. ಸೂ.ಆ. ಪಟಲ ೬, ಶ್ಲೋಕ ಸಂಖ್ಯೆ ೨೭

ಇದರಿಂದ ಜ್ಞಾನವುಂಟಾಗಿ ಮೋಕ್ಷವನ್ನು ಪಡೆಯುತ್ತಾನೆ ಎಂದು ಪ್ರತಿಪಾದಿಸಿದೆ. ವೈಭವೋಪೇತವಾದ ಪೂಜಾಕ್ರಮವನ್ನು ಕುರಿತು ವಚನಕಾರರು ತಮ್ಮ ವಚನದಲ್ಲಿ –

> ಹದಿನಾರು ತೆರದಿಂದ ಭಕ್ತಿಯ ಮಾಡುವೆನು,
> ಷೋಡಶೋಪಚಾರಂಗಳನೆ ಮಾಡುವೆನು,
> ಬಂದುದಕ್ಕೆ ಪರಿಣಾಮವ ಕೊಡುವೆನು, ಇದ್ದುದಕ್ಕೆ ಇಂಬುಗೊಡುವೆನು,
> ಆಯತದಿಂದ ಲಿಂಗಾರ್ಚನೆಯ ಮಾಡುವೆನು,
> ಸ್ವಾಯತದಿಂದ ಲಿಂಗಭೋಗೋಪಭೋಗವ ಮಾಡುವೆನು
> ಕೂಡಲಚೆನ್ನಸಂಗಯ್ಯಾ[೯೩]

ಎಂದಿದ್ದಾರೆ. ಇದನ್ನೇ ಬಸವಣ್ಣನವರು "ಅಷ್ಟವಿಧಾರ್ಚನೆಯ ಮಾಡುವದು, ಮಾಡಿದ ಪೂಜೆಯ ನೋಡುವುದು, ಶಿವತತ್ವ ಗೀತವ ಪಾಡುವುದು, ಶಿವನ ಮುಂದೆ ಕುಣಿದಾಡುವುದು, ಕೂಡಲಸಂಗಮದೇವರ ಕೂಡುವದು."[೯೪] ಎಂದು ಇಷ್ಟಲಿಂಗದ ವೈಭವೋಪೇತ ಪೂಜೆಯನ್ನು ಮಾಡುವದು, ನೋಡುವದು ಪುಣ್ಯಕರವೆಂದು ತಿಳಿಸಿದ್ದಾರೆ. ಆದರೆ ಅಂತರಂಗದ ದುಷ್ಟಗುಣಗಳನ್ನು ಪರಿಹರಿಸಿಕೊಳ್ಳದೇ ಮಾಡುವ ಪೂಜೆಯು ವ್ಯರ್ಥವೆಂದು ವಚನಕಾರರು ತಿಳಿಸುತ್ತಾ –

'ಅಷ್ಟವಿಧಾರ್ಚನೆ ಮಾಡಿದರೇನು, ತನುಗುಣಂಗಳ ಮೆಟ್ಟಮುರಿಯದನ್ನಕ್ಕರ? ಷೋಡಶೋಪಚಾರವ ಮಾಡಿದರೇನು ಸೂಳೆಯರಂತೆ? ಹಲವು ಕಡೆಗೆ ಹೋಹಮನವ ನೆನಹಿನ ಹಸ್ತದಿಂದಲಿ ಹಿಡಿದು, ಇಷ್ಟಲಿಂಗದಲ್ಲಿ ನೆನೆವ ಗಟ್ಟಿಗೊಳಿಸಿ, ಕೃತನಿಶ್ಚಯದಿಂ ದೃಢವಿಡಿದು ಅನಿಷ್ಟ ಪರಿಹರಿಸಬಲ್ಲಡೆ, ಆತನೇ ಶಿವಲಿಂಗಾರ್ಚಕನು, ಲಿಂಗಧ್ಯಾನ ಸಂಪನ್ನನು, ಲಿಂಗವನಲ್ಲದನ್ಯವನರಿಯದ ಅಚಲಿತ ಮಹಿಮನು ನೋಡಾ, ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.'[೯೫] ಎಂದು ಇಷ್ಟಲಿಂಗ ಪೂಜಕನು ತನ್ನಲ್ಲಿಯ ಅವಗುಣಂಗಳನು ಅಳಿದಿರಬೇಕೆಂಬುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವರು.

ವಾರ, ದಿನ, ನೋಡಿ ಪೂಜಿಸುವದು ಸಲ್ಲ

ಸೋಮವಾರ, ಸಂಕ್ರಾಂತಿ ದಿನಗಳಂದು, ಶಿವರಾತ್ರಿ ದಿನದಂದು, ಕಾರ್ತಿಕ ಸೋಮವಾರಗಳಂದು ಕೈಕೊಳ್ಳುವ ವಿಶೇಷ ಪೂಜೆ ಹಾಗೂ ದೀಪಾರಾಧನೆಗೆ ಹೆಚ್ಚಿನ ಫಲವುಂಟೆಂದು ಕಾರಣಾಗಮದಲ್ಲಿ ತಿಳಿಸಲಾಗಿದೆ.[೯೬] ಆದರೆ ವಾತುಲಾಗಮದಲ್ಲಿ ಸೋಮವಾರ, ಮಂಗಳವಾರ, ವ್ಯತಿಪಾತ, ಸಂಕ್ರಾಂತಿ, ಶಿವರಾತ್ರಿ ಎಂದು ಉಪವಾಸ ವ್ರತಾಚರಣೆ ಮಾಡುವವರು ಘೋರ ನರಕಕ್ಕೆ ಹೋಗುವರೆಂದು ತಿಳಿಸಿದೆ. ವಚನಕಾರರು

---

೯೩. ಚೆನ್ನಬಸವಣ್ಣನವರ ವ.ಸಂ.. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೯೦ ಪುಟ ೨೬

೯೪. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ(ಸನ್೧೯೨೩) ವಚನಸಂಖ್ಯೆ ೧೮, ಪುಟ ೧೮೩

೯೫. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ(ಸನ್೧೯೨೩) ವಚನಸಂಖ್ಯೆ ೨೧, ಪುಟ ೧೮೪

೯೬. ಕಾ.ಆ. ಪಟಲ ೫, ಶ್ಲೋಕ ಸಂಖ್ಯೆ ೬೫ – ೬೭

ವಾತುಲಾಗಮದ ಆಭಿಪ್ರಾಯವನ್ನೇ ಅಂಗೀಕರಿಸುತ್ತಾ –

ಸೋಮವಾರ ಮಂಗಳವಾರ ಶಿವರಾತ್ರಿಯೆಂದು ಮಾಡುವ ಭಕ್ತರ
ಲಿಂಗಭಕ್ತಂಗೆ ನಾನೆಂತು ಸರಿಯೆಂಬೆನಯ್ಯಾ?
ದಿನ ಶ್ರೇಷ್ಠವೋ? ಲಿಂಗ ಶ್ರೇಷ್ಠವೋ? ದಿನ ಶ್ರೇಷ್ಠವೆಂದು ಮಾಡುವ
ಪಂಚಮಹಾಪಾತಕರ ಮುಖವ ನೋಡಲಾಗದು.
ಸೋಮೇ ಭೌಮೇ ವ್ಯತೀಪಾತೇ ಸಂಕ್ರಾಂತಿಶಿವರಾತ್ರಯೋಃ।
ಏಕಭಕ್ತೋಪವಾಸೇನ ನರಕೇ ಕಾಲಮಕ್ಷಯಂ॥
ಇದು ಕಾರಣ ಕೂಡಲಚೆನ್ನಸಂಗಯ್ಯಾ[೯೭]
ಇಂಥವರ ಮುಖವ ನೋಡಲಾಗದು.

ಎಂದು ವಾತುಲಾಗಮದ ಉಲ್ಲೇಖದೊಂದಿಗೆ ವಾರ, ದಿನ ನೋಡಿ ಪೂಜಿಸುವದು ಸಲ್ಲದೆಂಬ ಅಭಿಪ್ರಾಯವನ್ನು ಮನ್ನಿಸಿದ್ದಾರೆ.

ಆಗಮಗಳಲ್ಲಿ ವಿಸ್ತೃತವಾದ ಪೂಜಾವಿಧಾನ ಹಾಗೂ ಆಯಾ ಸಂದರ್ಭದಲ್ಲಿ ಉಚ್ಚರಿಸಬೇಕಾದ ಮಂತ್ರಗಳನ್ನು ನಿರೂಪಿಸಿದ್ದರೂ ಸಹ ಸಾಧಕನು ಆಧ್ಯಾತ್ಮಿಕ ಹಂತವನ್ನು ಮೇಲೇರಿದಂತೆಲ್ಲ ಆತನ ಲಿಂಗಪೂಜೆಯು ಒಂದು ನಿರಂತರ ಪ್ರಕ್ರಿಯೆಯಾಗಿ ಅದಕ್ಕೆ ಯಾವುದೇ ನಿಯಮಗಳು ಹಾಗೂ ಬಂಧನಗಳೂ ಇಲ್ಲ ಎಂದು ತಿಳಿಸುತ್ತಾ –

ನ ಬ್ರಹ್ಮಚರ್ಯನಿಯಮೋ ನ ವಾನಪ್ರಸ್ಥಲಕ್ಷಣಮ್ ॥
ನ ಸಂನ್ಯಾಸೋ ನ ವೈರಾಗ್ಯಂ ಯದಿ ಲಿಂಗಾರ್ಚನೇ ರತಿಃ।
ನ ಮುಂಡನಂ ನಾಪಿ ಶಿಖಾ ನ ಶುಕ್ಲೋ ನಾರುಣಃ ಪಟಃ ॥
ನಾನೇಕಶಾಟ್ಯೇಕಶಾಟಃ ಸ್ವೇಚ್ಛಾಭೋಗಾ ಹಿ ಲಿಂಗಿನಃ।[೯೮]

ಶಿವಭಕ್ತನಿಗೆ ಇಷ್ಟಲಿಂಗಪೂಜೆಯಲ್ಲಿ ಪ್ರೀತಿಯಿದ್ದುದಾದರೆ, ಅವನಿಗೆ ಬ್ರಹ್ಮಚರ್ಯದ ನಿಯಮವಿಲ್ಲ, ವಾನಪ್ರಸ್ಥದ ನಿಯಮವಿಲ್ಲ, ಸಂನ್ಯಾಸವಿಲ್ಲ, ವೈರಾಗ್ಯವಿಲ್ಲ, ಮುಂಡನ (ತಲೆ ಬೋಳಿಸುವುದು), ಶಿಖೆ ಬಿಡುವುದು, ಬಿಳಿ ಅಥವಾ ಕೆಂಪು ವಸ್ತ್ರ, ಅನೇಕ ಶಾಟಿ (ಅನೇಕ ಬಟ್ಟೆಯುಳ್ಳವನು), ಏಕಶಾಟಿ (ಒಂದೇ ಬಟ್ಟೆಯುಳ್ಳವನು)ಇತ್ಯಾದಿ ನಿಯಮಗಳಿಲ್ಲ.

ಯಥೋಪವಿಶ್ಯ ಪೀಠಾದೌ ಶಿವಯೋಗೀ ಪ್ರವರ್ತತೇ
ತಥೋಪವಿಷ್ಟ ಏವಾಸೌ ಧಾವನ್ ಪೂಜಿತವಾನಪಿ
ನ ಕಾಯಕ್ಲೇಶಸಹನಂ ನೋಪವಾಸಾದಿಪೀಡನಮ್[೯೯]

---

೯೭. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೭೫. ಪುಟ ೫೨
೯೮. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೪೯–೫೦
೯೯. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೨೯, ೩೦

ಹೇಗೆ ಶಿವಯೋಗಿಯು ಆಸನ ಮುಂತಾದವುಗಳಲ್ಲಿ ಕುಳಿತು ಪೂಜೆಯನ್ನು ನಡೆಸುತ್ತಾನೆಯೋ ಹಾಗೆಯೇ ಕುಳಿತೋ ಓಡುತ್ತಲೋ ಪೂಜೆ ಮಾಡಬಹುದು. ಇದಕ್ಕಾಗಿ ದೇಹದ ಕಷ್ಟಗಳನ್ನು ಸಹಿಸುವುದಾಗಲಿ ಉಪವಾಸ ಮುಂತಾದ ಪೀಡೆಯಾಗಲಿ ಅಪೇಕ್ಷಿತವಲ್ಲ ಎಂದು ತಿಳಿಸಿ; ನಡೆಯುತ್ತಾ, ನಿಂತುಕೊಂಡು, ನಿದ್ರೆ ಮಾಡುತ್ತಾ, ಭೋಗಗಳನ್ನು ಅನುಭವಿಸುತ್ತಾ, ಎಚ್ಚರವಾಗಿ, ನಗುತ್ತಾ, ಊಟ ಮಾಡುತ್ತಾ, ನೀರು ಕುಡಿಯುತ್ತಾ ಲಿಂಗಪೂಜೆಯನ್ನು ಮಾಡಬಹುದೆಂದು[೧೦೦] ತಿಳಿಸಿ ಬಾಹ್ಯ ಪೂಜೆಯೊಂದಿಗೆ ನಿರಂತರವಾಗಿ ಆಂತರಿಕ ಪೂಜೆಯನ್ನುಗೈಯಬೇಕೆಂದು ಆಗಮಗಳಲ್ಲಿ ಪ್ರತಿಪಾದಿಸುತ್ತ ವೀರಶೈವರು ದೀಕ್ಷೆಯನ್ನು ಹೊಂದಿ ಲಿಂಗಧಾರಣೆ ಮಾಡಿಕೊಳ್ಳುವುದರಿಂದ ಇಲ್ಲಿ ಲಿಂಗಭೇದವಿಲ್ಲ. ವಯೋಭೇದವಿಲ್ಲ; ವರ್ಣಾದಿ ಕುಲ ಪಂಥ ಭೇದವಿಲ್ಲ ಎಂದು ಸಾರುತ್ತವೆ.

ಲಿಂಗಧಾರಿಗಳೆಲ್ಲ ಒಂದೆ

ವೀರಶೈವ ಮತದಲ್ಲಿ ಲಿಂಗದೀಕ್ಷೆಯನ್ನು ಪಡೆದ ನಂತರ ಎಲ್ಲರೂ ಸರ್ವಸಮಾನರಾಗುತ್ತಾರೆಂದು ಆಗಮದಲ್ಲಿ ಪ್ರತಿಪಾದಿಸಲಾಗಿದೆ.

ಲೀಲಾರ್ಥಕಮಪಿ ಶ್ವೀಶಿ ಯತ್ತಲ್ಲಿಂಗಮುದಾಹೃತಮ್।
ತಲ್ಲಿಂಗಮಯಮಿತ್ಯೇತಚ್ಛರೀರಂ ತಸ್ಯ ಧಾರಣಾತ್॥[೧೦೧]

ಅರ್ಥಾತ್ ಜಗತ್ತಿನ ಸೃಷ್ಟಿ ಸ್ಥಿತಿ, ಲಯಗಳಿಗೆ ಕಾರಣವಾದ ಲಿಂಗವನ್ನು ಧರಿಸುವುದರಿಂದ ಶರೀರವು ಲಿಂಗಮಯವಾಗುತ್ತದೆ. ಹೀಗಾಗಿ ಲಿಂಗಧಾರಣೆಯಿಂದ ಎಲ್ಲರೂ ಶಿವನ ಸ್ವರೂಪವನ್ನೇ ಹೊಂದುವುದರಿಂದ ಜಾತಿಭೇದಗಳಾಗಲೀ ಲಿಂಗಭೇದಗಳಾಗಲೀ ತೊಡೆದು ಹೋಗುತ್ತವೆ. ಗುರು ಕಾರುಣ್ಯದಿಂದ, ಲಿಂಗಧಾರಣೆಯಿಂದ ಜಾತಿ, ವರ್ಣ, ಆಶ್ರಮಗಳ ಭೇದವಾಗಲೀ; ಸ್ತ್ರೀ ಪುರುಷರೆಂಬ ಲಿಂಗ ಭೇದವಾಗಲಿ ಕಳಚಿಹೋಗುತ್ತವೆ.[೧೦೨] ಕಾರಣ

ಸ್ತ್ರಿಯೋ ಬಾಲಾಸ್ತಥಾವೃದ್ಧಾ ಖಂಜಾಃ ಕುಬ್ಜಾಂಧಪಂಗವಃ।
ಉತ್ಮತ್ತಾ ಬಧಿರಾ ಕಾಣಾಃ ಶಠಾ ದೂರ್ತಾಶ್ಚ ವಂಚಕಾಃ
ಚೋರಾ ಜಾರಾಸ್ತಥಾ ವೇಶ್ಯಾ ಆಚಾಂಡಾಲಾಂತಸಂಭವಾ।
ಮಲ್ಲಿಂಗಧಾರಣಾದೇವ ಮದ್ರೂಪಾ ಏವ ತೇ ಪ್ರಿಯೇ॥[೧೦೩]

ಸ್ತ್ರೀಯರು, ಬಾಲಕರು, ವೃದ್ಧರು, ಷಂಡರು, ಕುಳ್ಳರು, ಕುರುಡರು, ಕುಂಟರು, ಹುಚ್ಚರು, ಕಿವುಡರು, ಗೆಜ್ಜಗಗಣ್ಣಿನವರು, ಶಠರು, ಧೂರ್ತರು, ವಂಚಕರು, ಕಳ್ಳರು,

---

೧೦೦. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೨೮, ೨೯
೧೦೧. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೯೩
೧೦೨. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೯೩, ೪೪, ೪೮
೧೦೩. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೪೯, ೬೦

ಸ್ತ್ರೀ ಲಂಪಟರು, ವೇಶ್ಯೆಯರು, ಚಾಂಡಲರು ಹಾಗೂ ಎಲ್ಲ ಜಾತಿಯವರೂ ಶಿವಲಿಂಗಧಾರಣೆ ಮಾತ್ರದಿಂದ ಶಿವನ ರೂಪವನ್ನೇ ಹೊಂದುತ್ತಾರೆ ಎಂದು ಪಾರಮೇಶ್ವರಾಗಮವು ಪ್ರತಿಪಾದಿಸುತ್ತದೆ. ಇದನ್ನೇ ಷಣ್ಮುಖಸ್ವಾಮಿಗಳು –

ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ, ಆವ ಜಾತಿಯಲ್ಲಿ ಹುಟ್ಟಿದಾತನಾದರೂ ಆಗಲಿ, ಗುರುಕಾರುಣ್ಯವ ಪಡೆದು, ಅಂಗದ ಮೇಲೆ ಲಿಂಗವ ಧರಿಸಿದವನು, ಆಚಾರ ಸಂಪನ್ನ ಸತ್‌ಕ್ರಿಯನಾದ ಮಹಾತ್ಮನೇ ಮೂರು ಲೋಕಕ್ಕೆ ಅಧಿಕಾರಿಯು ನೋಡಾ ಅಖಂಡೇಶ್ವರಾ.[೧೦೪] ಎಂದಿದ್ದಾರೆ. ಇದನ್ನೇ ಬಸವಣ್ಣನವರು "ಪಟ್ಟವ ಕಟ್ಟಿದ ಬಳಿಕ, ಲಕ್ಷಣವನರಸುವರೇ? ಲಿಂಗದೇವನ ಪೂಜಿಸಿ, ಕುಲವ ನರಸುವರೇ,"[೧೦೫] ಎಂದಿದ್ದಾರೆ. ಇದನ್ನೇ ಮಣ್ಣು ಮತ್ತು ಮಡಿಕೆಯ ಹೋಲಿಕೆಯೊಂದಿಗೆ ಚೆನ್ನಬಸವಣ್ಣನವರು –

ಅಂಗದ ಮೇಲೆ ಲಿಂಗಧಾರಣವಾದ ಬಳಿಕ
ಮರಳಿ ಭವಿ ನಂಟನೆಂದು ಬೆರಸಿದರೆ
ಕೊಂಡ ಮಾರಿಂಗೆ ಹೋಹದು ತಪ್ಪದು.
ಹಸಿಯ ಮಣ್ಣಿನಲ್ಲಿ ಮಾಡಿದ ಮಡಕೆ ಅಗ್ನಿಮುಖದಿಂದಾದ ಬಳಿಕ
ಅದು ತನ್ನ ಪೂರ್ವಕುಲವ ಬೆರಸೂದೆ?
ಅಗ್ನಿದಗ್ಧಘಟಃ ಪ್ರಾಹುರ್ನ ಭೂಯೋ ಮೃತ್ತಿಕಾಯತೇ।
ತಚ್ಛಿವಾಚಾರಸಂಗೇನ ನ ಪುನರ್ಮಾನುಷೋ ಭವೇತ್॥
ಇದು ಕಾರಣ ಪೂರ್ವ ನಾಸ್ತಿಯಾದ ಭಕ್ತನಪೂರ್ವ,
ಕೂಡಲಚೆನ್ನಸಂಗಮದೇವಾ.[೧೦೬]

ಎಂದಿದ್ದಾರೆ. ಹೀಗೆ ಲಿಂಗಧಾರಣೆಯು ಅಸ್ಪೃಶ್ಯರಿಂದ ಹಿಡಿದು ಅತ್ಯುಚ್ಚವರ್ಗದವರೆಗೂ ಇರುವ ಎಲ್ಲ ಜಾತಿಗಳನ್ನೂ ವರ್ಣಗಳನ್ನೂ ಹೊಡೆದುಹಾಕಿ ಧಾರ್ಮಿಕ ಸಮಾನತೆಯನ್ನು ತಂದುಕೊಡುತ್ತದೆ ಎಂಬುದನ್ನು ಆಗಮಗಳು ತಿಳಿಸುತ್ತಾ –

ಧೃತಲಿಂಗಾರ್ಚಕಾಃ ಸರ್ವೇ ಪಾವನಾಃ ಪಂಕ್ತಿಕರ್ಮಸು॥
ಧೃತಲಿಂಗಶರೀರತ್ವಾತ್ ಪ್ರದಾತು ಜ್ಞಾನಸಂಭವಾತ್॥
ಶುಚಿರೇವ ಸದಾ ತಸ್ಯ ನಾಶುದ್ಧಿರ್ನೈವ ಚಾಶುಚಿಃ।[೧೦೭]

ಲಿಂಗವನ್ನು ಶರೀರದ ಮೇಲೆ ಧರಿಸಿಕೊಂಡದ್ದರಿಂದ, ಗುರುವು ಕೊಟ್ಟ ಜ್ಞಾನ ದೊರೆತದ್ದರಿಂದ ಇಷ್ಟಲಿಂಗವನ್ನು ಪೂಜಿಸುವ ಎಲ್ಲರೂ ಏಕಪಂಕ್ತಿಯಲ್ಲಿ ಕುಳಿತುಕೊಳ್ಳಲು ಪಾವನರು. ಲಿಂಗಧಾರಿಗೆ ಎಲ್ಲವೂ ಶಿವಮಯವಾದ್ದರಿಂದ ಯಾವಾಗಲೂ

೧೦೪. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್ ೧೯೨೩) ವಚನಸಂಖ್ಯೆ ೧, ಪುಟ ೭೩
೧೦೫. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ(ಸನ್ ೧೯೨೩) ವಚನಸಂಖ್ಯೆ ೨, ಪುಟ ೩೨೬
೧೦೬. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೬೯ ಪುಟ ೫೦
೧೦೭. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೨೬–೨೮

ಅಶುದ್ಧಿಯಾಗಲಿ ಅಶುಚಿಯಾಗಲಿ ಸ್ಪರ್ಶದೋಷವಾಗಲಿ, ಸೂತಕಗಳಾಗಲೀ ಇಲ್ಲವೇ ಇಲ್ಲ[೧೦೮] ಎಂದು ತಿಳಿಸುತ್ತವೆ.

ಲಿಂಗಧಾರಿಗೆ ನಿಷೇಧಗಳು

ಪಾರಮೇಶ್ವರಾಗಮವು ಲಿಂಗಧಾರಿಯು ನಿಷೇಧಿಸಬೇಕಾದ ಸಂಗತಿಗಳ ಕುರಿತು ಅಲಂಕಾರಿಕವಾಗಿ–

ಅಂಧಾ ಯೇ ಲಿಂಗಿನೋ ದೇವಿ ಪರಸ್ತ್ರೀರೂಪದರ್ಶನೇ।
ಯುವಾನಶ್ಚಾಪಿ ಷಟವಸ್ತೇ ವೀರಾಃ ಶಿವಯೋಗಿನಃ ॥
ಯೇ ಮೂಕಾ ಲಿಂಗಿನೋ ದೇವಿ ಪರದೋಷಾನುವಾದನೇ।
ಸರ್ವಜ್ಞಾ ಅಪಿ ವಾ ಬಾಲಾಸ್ತೇ ವೀರಾಃ ಶಿವಯೋಗಿನಃ ॥
ಯೇ ಷಂಡಾಃ ಪರಕಾಂತಾಸು ಪಂಗವೋ ಯೇನ್ಯಪೀಡನೇ ।
ಅಜಿಹ್ವಾ ಯೇ ರಸಾಸ್ವಾದೇ ವೀರಾಸ್ತೇ ಶಿವಯೋಗಿನಃ ॥[೧೦೯]

ಲಿಂಗಧಾರಿಗಳು ಪರಸ್ತ್ರೀಯ ರೂಪವನ್ನು ನೋಡುವುದರಲ್ಲಿ ಕುರುಡರು, ತರುಣರಾಗಿದ್ದರೂ ಎಲ್ಲಾ ಇಂದ್ರಿಯಗಳ ಮೇಲೆ ನಿಯಂತ್ರಣವುಳ್ಳವರು, ಪರದೋಷಗಳನ್ನು ಎತ್ತಿ ಹೇಳುವ ವಿಷಯದಲ್ಲಿ ಮೂಕರು, ಸರ್ವಜ್ಞರಾದರೂ ಬಾಲರಂತೆ ಮುಗ್ದರಾಗಿ ಇರುವವರು, ಪರರ ಪತ್ನಿಯರ ವಿಷಯದಲ್ಲಿ ನಪುಂಸಕರು, ಬೇರೆಯವರನ್ನು ಪೀಡಿಸುವ ವಿಷಯದಲ್ಲಿ ಕುಂಟರು, ಮತ್ತು ರುಚಿಯನ್ನು ನೋಡುವ ವಿಷಯದಲ್ಲಿ ನಾಲಿಗೆಯಿಲ್ಲದವರಾಗಿರಬೇಕು. ಅಂತಹ ಶಿವಯೋಗಿಗಳೇ ವೀರಶೈವರು ಎಂದು ತಿಳಿಸುತ್ತಾ–

ನ ಮಾಂಸಂ ಭಕ್ಷಯೇಲ್ಲಿಂಗೀ ನಾಪ್ಯಪೇಯಂ ಪಿಬೇತ್ ಕ್ವಚಿತ್।
ನಾಭಕ್ಷ್ಯಂ ಭಕ್ಷಯೇದ್ದೇವಿ ನಾನಾವಶ್ಯನಿಮಿತ್ತಕಮ್ ।
ನಾತ್ಮಾರ್ಥಂ ಪಾಚಯೇದನ್ನಂ ನಾದ್ಯಾನ್ನಾತಿಥ್ಯನರ್ಪಿತಮ್।[೧೧೦]

ಲಿಂಗಧಾರಿಯು ಮಾಂಸವನ್ನು ತಿನ್ನಬಾರದು, ನಿಷಿದ್ಧವಾದ (ಮದ್ಯ ಮುಂತಾದ) ಪಾನೀಯಗಳನ್ನು ಕುಡಿಯಬಾರದು. ನಾನಾ ರೀತಿಯ ಅವಶ್ಯಕತೆಗಳ ನಿಮಿತ್ತವಾಗಿ ಕೂಡ ಅಭಕ್ಷ್ಯವನ್ನು ಸೇವಿಸಬಾರದು. ತನಗೋಸ್ಕರ ಅನ್ನವನ್ನು ಬೇಯಿಸಬಾರದು. ಅತಿಥಿಗೆ ಅರ್ಪಿಸದೆ ಊಟ ಮಾಡಬಾರದು ಎಂಬ ನಿಯಮವನ್ನು ವಿಧಿಸುತ್ತದೆ.

ಅಂಬಿಗರಚೌಡಯ್ಯನು ಸಹ ಆಗಮಗಳ ಅಭಿಪ್ರಾಯವನ್ನೇ ಮನ್ನಿಸಿ "ಅಯ್ಯಾ, ಅಷ್ಟಾವರಣ ಪಂಚಾಚಾರವುಳ್ಳ ಸದ್ಭಕ್ತರ ಉದರದಲ್ಲಿ ಜನಿಸಿ, ಭವಿಸಂಗ ಮಾಡುವುದೇ ಪಾಪ. ಭವಿ ಸಂಗಕ್ಕಿಂತಲು ಸುರಾಪಾನಿಯ ಸಂಗ ಪಾಪ. ಸುರಾಪಾನಿಯ ಸಂಗಕ್ಕಿಂತಲು

೧೦೮. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೫೫
೧೦೯. ಪಾ.ಆ. ಪಟಲ ೮, ಶ್ಲೋಕ ಸಂಖ್ಯೆ ೯–೧೧
೧೧೦. ಪಾ.ಆ. ಪಟಲ ೭, ಶ್ಲೋಕ ಸಂಖ್ಯೆ ೪೦–೪೧

ಮಾಂಸಾಹಾರಿಯ ಸಂಗ ಪಾಪ. ಮಾಂಸಾಹಾರಿಯ ಸಂಗಕ್ಕಿಂತಲು ಭಂಗೀಭಕ್ಷಕನ ಸಂಗ ಮಹಾಪಾಪ. ಭಂಗೀಭಕ್ಷಕನ ಸಂಗಕ್ಕಿಂತಲೂ ನಾಶಿತಂಬಾಕು ಮಾಡುವವನ ಸಂಗ ಮಹಾಪಾಪ."[೧೧೧] ಎನ್ನುತ್ತಾ ಅಭಕ್ಷ ಹಾಗೂ ಅಪೇಯಗಳನ್ನು ಸೇವಿಸುವ ವ್ಯಕ್ತಿಗಳ ಸಂಗವನ್ನೂ ಸಹ ಲಿಂಗಧಾರಿಯು ಮಾಡಕೂಡದೆಂದು ತಿಳಿಸಿದ್ದಾನೆ.

ಚೆನ್ನಬಸವಣ್ಣನವರೂ "ಮದ್ಯಪಾನಿಗೆ ಲಿಂಗಸಾಹಿತ್ಯವ ಮಾಡಿದಾತ ಹಿಂಗದೆ ನರಕದಲಾಳುತ್ತಿಪ್ಪನು. ಮಾಂಸಾಹಾರಿಗೆ ಲಿಂಗಸಾಹಿತ್ಯವ ಮಾಡಿದಾತನ ವಂಶಕ್ಷಯವೆಂದುದು. ಜೂಜುಗಾರಂಗೆ ಲಿಂಗಸಾಹಿತ್ಯವ ಮಾಡಿದಾತ ರೌರವನರಕಕ್ಕೆ ಹೋಹನು. ಸೂಳೆಗೆ ಲಿಂಗಸಾಹಿತ್ಯವ ಮಾಡಿದಾತ ಏಳೇಳು ಜನ್ಮದಲ್ಲೂ ಶ್ವಾನನ ಗರ್ಭದಲ್ಲಿ ಬರುತ್ತಿಪ್ಪನು. ಅಂಗಹೀನಂಗೆ ಲಿಂಗಸಾಹಿತ್ಯವ ಮಾಡಿದಾತ ಲಿಂಗದ್ರೋಹಿ, ಆತನ ಮುಖವ ನೋಡಲಾಗದು. ಶ್ಲೋ॥ ಮದ್ಯಪಾನೀ ಮಾಂಸಭಕ್ಷೀ ಶಿವದೀಕ್ಷಾವಿವರ್ಜಿತಃ। ದ್ಯೂತೀ ವೇಶ್ಯಾಂಗಹೀನಶ್ಚ ತದ್ಗುರೋರ್ದರ್ಶನಂ ತ್ಯಜೇತ್॥ ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ವಿಚಾರಿಸದೆ ಲಿಂಗವ ಕೊಟ್ಟಗುರುವಿಂಗೆ ನರಕತಪ್ಪದು."[೧೧೨] ಎಂದು ಅಭಕ್ಷ ಹಾಗೂ ಅಪೇಯಗಳನ್ನು ಸ್ವೀಕರಿಸುವ ವ್ಯಕ್ತಿಗೆ ಲಿಂಗಧಾರಣವನ್ನು ಮಾಡಕೂಡದೆಂದು ತಿಳಿಸಿರುವರು.

ಲಿಂಗಧಾರಿಗಳು ಸದಾಚಾರಿಯಾಗಿರತಕ್ಕದ್ದು

ವಿವಿಕ್ತದೇಶಃ ಸಂತೋಷಸ್ತೃಪ್ತಿರಾಚಾರ್ಯಸೇವನಮ್।
ಅನೀಹಾಚಾರಮೌನಾನಿ ಸ್ವಾಧ್ಯಾಯಸ್ತಪ ಆರ್ಜವಮ್ ॥
ಅಹಿಂಸಾಸ್ತೇಯಸತ್ಯಾನಿ ದಯಾತ್ಮಸಮತಾಖಿಲೇ।
ತಿತೀಕ್ಷಾ ಚಾಪ್ರಮಾದಶ್ಚ ಬ್ರಹ್ಮಚರ್ಯವ್ರತಂ ಪ್ರಿಯಮ್ ॥
ಅಸನ್ನೀತಾಖಿಲಾಪೇಕ್ಷಾ ಹ್ರೀರಹಂಮತಿವರ್ಜನಂ।
ಜಾತಿಕ್ರಮವಿಭೇದಾಶ್ಚ ಸುಖತ್ಯಾಗೋಽನ್ಯಸಂಮತಮ್ ॥
ಯದೃಚ್ಛಾಲಾಭವಿಜಯಸ್ತ್ವನಪೇಕ್ಷಾಪಿ ಹಸ್ತಗೇ।
ಸ್ಮೃತಿರೀಶ್ವರ ಚಿಂತಾ ಚ ತುಷ್ಟಿ ಪರಹಿತಕ್ರಿಯಾ ॥
ಆಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು।
ಸುಖದುಃಖಾತ್ಮಸುಮತಾ ಪರೇಷಾಂ ಚ ದ್ವಿಷಾಮಪಿ ॥
ಸಾಕ್ಷ್ಯವಸ್ಥಾತ್ರಯೇ ಚಾಪಿ ಪರೋಪಕೃತಿಚೇತನಮ್।
ಆತ್ಮಹಿತಾರ್ಥನಿರ್ಬಂಧಃ ಪ್ರತೀಕಾರಾನಪೇಕ್ಷಿತಾ ॥
ಗುರುಶಾಸ್ತ್ರೇಶಸದ್ಭಕ್ತಿರಾದರೋ ಭಕ್ತಭಕ್ತಿಷು।
ಧ್ಯಾನಂ ಮಮಾಭಿಧಾನಾನಾಮನುಸ್ಮರನಮನ್ವಹಮ್ ॥

೧೧೧.ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್ ೧೯೨೩) ವಚನಸಂಖ್ಯೆ ೧೫, ಪುಟ ೨೮೩
೧೧೨.ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೫೫ ಪುಟ ೪೬

ತೇಜಸ್ವಿತಾಪಿ ವಾಗ್ಮಿತ್ವಮಪ್ರಾಗಲ್ಭ್ಯಪ್ರದರ್ಶನಮ್।
ಅಸಂಗ ಆತ್ಮಚಿಂತಾನಾಂ ಶಿಶ್ನೋದರತೃಷಾಂ ಕ್ವಚಿತ್ ॥
ಅಹೇರಿವ ಗುಣಾದ್ ಭೀತಿಃ ಸಂಗಮಾನ್ಮರಣಾದಿವ ।
ಕುಣಪಾದಿವ ಮೋಷಿದ್ಭ್ಯೋ ಧೈರ್ಯಂ ಪುತ್ರಿಷು ತೇಷ್ವಪಿ ॥ ೧೧೩

ಏಕಾಂತವಾಸ, ಸಂತೋಷ, ತೃಪ್ತಿ, ಗುರುಸೇವೆ, ಇಚ್ಛೆಗಳ ತ್ಯಾಗ, ಆಚಾರ ಹಾಗೂ ಮೌನವ್ರತಪಾಲನೆ, ಶಾಸ್ತ್ರಾಧ್ಯಯನ, ತಪಸ್ಸು ಹಾಗೂ ನಮ್ರತೆ, ಅಹಿಂಸಾ, ಅಸ್ತೇಯ, ಸತ್ಯ, ದಯೆ, ಸಮದರ್ಶಿತ್ವ, ತತೀಕ್ಷೆ, ಆಲಸ್ಯವಿಲ್ಲದಿರುವಿಕೆ, ಬ್ರಹ್ಮಚರ್ಯ, ಸತ್ಯ ಮತ್ತು ಪ್ರಿಯಮಾತು; ಅನಿತ್ಯವಸ್ತುಗಳ ಲಜ್ಜೆ ಮತ್ತು ಅಹಂಕಾರದ ತ್ಯಾಗ, ಜಾತ್ಯತೀತ ಬುದ್ಧಿ, ಸುಖಾಪೇಕ್ಷೆಯ ತ್ಯಾಗ, ಅನ್ಯಮತಗೌರವ, ಅಲ್ಪತೃಪ್ತಿ, ಹಸ್ತಗತ ಪದಾರ್ಥದಲ್ಲೂ ಆಸೆ ಹೊಂದದಿರುವದು, ಈಶ್ವರ ಸ್ಮರಣೆ, ಶಿವಚಿಂತೆ, ಆನಂದ, ತೃಪ್ತಿ, ಪರಹಿತಕ್ಕಾಗಿ ಶ್ರಮಿಸುವದು, ವಿಷಯಗಳಲ್ಲಿ ನಿರಾಸಕ್ತಿ, ಪುತ್ರ–ಪತ್ನಿ–ಮನೆ ಮುಂತಾದವುಗಳಲ್ಲಿ ಅನಾಸಕ್ತಿ, ಸುಖದುಃಖಗಳಲ್ಲಿ ತಾಟಸ್ಥ್ಯ, ಮಿತ್ರ–ಶತ್ರುಗಳಲ್ಲಿ ಸಮದೃಷ್ಟಿ, ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಈ ಮೂರೂ ಅವಸ್ಥೆಗಳಲ್ಲೂ ಸದಾ ಪರೋಪಕಾರ ಚಿಂತನೆ, ಸ್ವಹಿತವನ್ನು ಕಡೆಗಣಿಸುವದು, ವೈರಿಗಳಲ್ಲಿ ಪ್ರತಿಕಾರವನ್ನು ತೊರೆಯುವುದು, ಗುರು, ಶಾಸ್ತ್ರ, ಮತ್ತು ಪರಶಿವನ ಕುರಿತು ಭಕ್ತಿಪ್ರದರ್ಶನ, ಭಕ್ತರನ್ನು ಹಾಗೂ ಭಕ್ತಿಭಾವನೆಗಳನ್ನು ಗೌರವಿಸುವದು, ನಿತ್ಯ ಶಿವಧ್ಯಾನ ಹಾಗೂ ಶಿವಸ್ಮರಣೆ, ತನ್ನ ವಾಕ್ಪಟುತ್ವ ಹಾಗೂ ಉತ್ಸಾಹಗಳನ್ನು ಅನವಶ್ಯಕವಾಗಿ ಪ್ರದರ್ಶಿಸದಿರುವದು, ಆಹಾರ–ಮೈಥುನಗಳಲ್ಲಿ ವ್ಯಸ್ತರಾದವರ ಸಂಗ ಮಾಡದಿರುವದು, ವಿಷಪೂರಿತ ಹಾವಿಗೆ ಹೆದರುವಂತೆ ದುರ್ಗುಣಗಳಿಂದ ದೂರವಿರುವುದು, ದುರ್ಜನಸಂಗವನ್ನು ಮೃತ್ಯುವಿನಂತೆ ತಿಳಿದು ಭಯಪಡುವುದು. ಸ್ತ್ರೀಯರನ್ನು ಮೃತದೇಹದಂತೆ ತಿಳಿದು ದೂರವಿರುವುದು ಮತ್ತು ಗೃಹಸ್ಥರನ್ನು ಕಂಡು ಧೈರ್ಯವನ್ನು ತೋರುವುದು ಈ ಎಲ್ಲ ಗುಣಗಳು ಇಷ್ಟಲಿಂಗಧಾರಿಗೆ ಅತ್ಯಂತ ಅವಶ್ಯಕ ಎಂದು ಆಗಮಗಳು ಅರುಹಿವೆ.

ಬಸವಣ್ಣನವರು ಇದೇ ಅಭಿಪ್ರಾಯವನ್ನು ಸಮರ್ಥಿಸುತ್ತ ಅಂಗದ ಮೇಲೆ ಲಿಂಗವನ್ನು ಧರಿಸಿದರಷ್ಟೇ ಸಾಲದು; ನಡೆ–ನುಡಿ, ಆಚಾರ–ವಿಚಾರಗಳು ಲಿಂಗ ಮೆಚ್ಚಿ ಅಹುದಹುದೆನ್ನುವಂತಿರಬೇಕು ಎಂದಿದ್ದಾರೆ. ಅಲ್ಲದೇ

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ,
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ, ೧೧೪
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ,

ಎಂಬ ಪರಧನ, ಪರಸತಿ, ಪರದೈವಗಳನ್ನು ಆಶಿಸದ ಮನೋಭಾವ ಇಷ್ಟಲಿಂಗಧಾರಿಗೆ ಇರಬೇಕೆಂದು ಪ್ರತಿಪಾದಿಸಿರುವರು.

೧೧೩.ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೯೪–೧೦೨
೧೧೪.ಬ.ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೬೭೭ ಪುಟ ೧೮೯

ಇಷ್ಟಲಿಂಗಧಾರಿಗೆ ಕಾಯಕ, ದಾಸೋಹ ಅವಶ್ಯಕ. ಕಾರಣ ಲಿಂಗಧಾರಿಯಾದ ಭಕ್ತನು ಧರ್ಮಮಾರ್ಗದಿಂದ ಗಳಿಸಿದ ತನ್ನ ಸಂಪತ್ತಿನ ಬಗ್ಗೆ ವಂಚನೆ ಮಾಡದೇ ತನ್ನ ಶಕ್ತ್ಯಾನುಸಾರ ಗುರು ಜಂಗಮರಿಗೆ ದಾನಮಾಡಬೇಕೆಂದು ತಿಳಿಸುತ್ತ ಚಂದ್ರಜ್ಞಾನಾಗಮವು-

ತಸ್ಮಾದ್ಧನಾನಿ ರತ್ನಾನಿ ಕ್ಷೇತ್ರಾಣಿ ಚ ಗೃಹಾಣಿ ಚ।
ಭೂಷಣಾನಿ ಚ ವಾಸಾಂಸಿ ಯಾನಶಯ್ಯಾಸನಾನಿ ಚ ॥
ಏತಾನಿ ಗುರುವೇ ದದ್ಯಾದ್ ಭಕ್ತ್ಯಾ ವಿತ್ತಾನುಸಾರತಃ।
ವಿತ್ತಶಾಠ್ಯಂ ಕುರ್ವೀತ ಯದೀಚ್ಛೇತ್ ಪರಮಾಂ ಗತಿಮ್॥[೧೧೫]

ವಿವಿಧ ಸಂಪತ್ತು, ರತ್ನಗಳು, ಕ್ಷೇತ್ರಗಳು, ಮನೆಗಳು, ಭೂಷಣಗಳು, ಬಟ್ಟೆ-ಬರೆಗಳು, ವಾಹನ, ಶಯನ ಸಾಮಗ್ರಿಗಳು ಮುಂತಾದವುಗಳನ್ನು ಭಕ್ತನು ತನ್ನ ಶಕ್ತ್ಯಾನುಸಾರ ದಾನಮಾಡಬೇಕು. ಪರಮಗತಿಯನ್ನು ಹೊಂದುವ ಇಚ್ಛೆಯಿದ್ದರೆ ಭಕ್ತನು ತನ್ನ ಸಂಪತ್ತಿನ ಬಗ್ಗೆ ವಂಚನೆ ಮಾಡಬಾರದು ಎಂದು ತಿಳಿಸಿದೆ.

ಆಗಮದ ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತ ಅಂಬಿಗರ ಚೌಡಯ್ಯನವರು –'ಕೂಡಿದ ಧನವನೆಲ್ಲವನು ಗುರುಲಿಂಗ ಜಂಗಮಕ್ಕೆ ವಂಚನೆಯ ಮಾಡಿ ಒಳಗಿಟ್ಟುಕೊಂಡು, ನೆಲನತೋಡಿ ಬಚ್ಚಿಟ್ಟುಕೊಂಡು ಹಲವು ತೆರದ ಆಭರಣಂಗಳಂ ಮಾಡಿಸಿ, ಕರ ಚರಣ ಉರ ಕರ್ಣದೊಳಗಿಟ್ಟು, ಮತ್ತಿಷ್ಟು ಬದುಕಾಗಲೆಂದು ತನ್ನ ಕೈಯ್ಯೊಳಗಿನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡುವ ಲಿಂಗಪೂಜೆಯ ಪರಿ ಎಂತೆಂದೊಡೆ, ಆ ಭಕ್ತನು ಪಂಚಾಭಿಷೇಕದಿಂದ ಲಿಂಗಕ್ಕೆ ಮಜ್ಜನವ ನೀಡಿದರೆ, ಲಿಂಗದ ಚಿತ್ತದಲ್ಲಿ ಸುಣ್ಣದ ನೀರನೆತ್ತಿ ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಪನ್ನೀರಿನಿಂದ ಮಜ್ಜನವ ನೀಡಿದರೆ, ಲಿಂಗದ ಚಿತ್ತದಲ್ಲಿ ತಣ್ಣೀರೊಳಗೆದ್ದಿ ಬಾಧಿಸಿದಂತಾಯಿತ್ತಯ್ಯ. ಆ ಭಕ್ತ ವಿಭೂತಿ ಧರಿಸಿದರೆ ಲಿಂಗದ ಚಿತ್ತದಲ್ಲಿ ಬೂದಿಯ ಬೊಕ್ಕಣಕಟ್ಟಿ ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಗಂಧವ ಧರಿಸಿದರೆ, ಲಿಂಗದ ಚಿತ್ತದಲ್ಲಿ ಚಂಡಿಟ್ಟು ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಅಕ್ಷತೆಯನೇರಿಸಿದರೆ, ಲಿಂಗದ ಚಿತ್ತದಲ್ಲಿ ಕಲ್ಲು ಹೊರೆಸಿ ಭಾವಿಸಿದಂತಾಯಿತ್ತಯ್ಯ.ಆ ಭಕ್ತನು ಪುಷ್ಪವ ಧರಿಸಿದರೆ, ಲಿಂಗದ ಚಿತ್ತದಲ್ಲಿ ಹೇರು ಹೊರಿಸಿದಂತಾಯಿತ್ತಯ್ಯ. ಭಕ್ತನು ಧೂಪವ ಬೀಸಿದರೆ ಲಿಂಗದ ಚಿತ್ತದಲ್ಲಿ ಅರಗವನಿಕ್ಕಿ ಬಾಧಿಸಿದಂತಾಯಿತ್ತಯ್ಯ, ಆ ಭಕ್ತನು ಧೂಪಾರತಿಯ ನೆತ್ತಿದರೆ, ಲಿಂಗದ ಚಿತ್ತದಲ್ಲಿ ಪಂಜುಗಳ್ಳರು ಬಂದು ಮೋರೆಯ ಸುಟ್ಟು ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಸ್ತೋತ್ರ ಮಂತ್ರವ ನುಡಿಸಿದರೆ, ಲಿಂಗದ ಚಿತ್ತದಲ್ಲಿ ಕರ್ಣದೊಳು ತೊನಸಿ ಹೊಕ್ಕು ಗೋಳಿಟ್ಟು ಬಾಧಿಸಿದಂತಾಯಿತ್ತಯ್ಯ. ಇಂತಪ್ಪ ಲಿಂಗಬಾಧಕರನ ಲಿಂಗ ಪೂಜಕರೆನಬಹುದೇ? ಆತನ ಅಂಗಣವ ಮೆಟ್ಟಬಹುದೇ? ಇದರ ಇಂಗಿತವ ನಿಜಭಾವವುಳ್ಳ ಶರಣರು ನೀವೇ ತಿಳಿದು ನೋಡಿರೆಂದಾತ ನಮ್ಮ ಅಂಬಿಗರ ಚೌಡಯ್ಯನು.'[೧೧೬]

೧೧೫.ಚಂ.ಆ, ಕ್ರಿ.ಪಾ, ಪಟಲ ೨, ಶ್ಲೋಕ ಸಂಖ್ಯೆ ೭೦-೭೧
೧೧೬. ವಚನ ಶಾಸ್ತ್ರಸಾರ-ಫ.ಗು.ಹಳಕಟ್ಟಿ(ಸನ್೧೯೨೩)-ಪುಟ ೧೯೧-ವಚನಸಂಖ್ಯೆ ೬

ಎನ್ನುತ್ತ ಲಿಂಗಧಾರಿಯಾದವನು ಲೌಕಿಕ ಸಂಪತ್ತಿನ ವ್ಯಾಮೋಹಿಯಾಗಿರದೇ ನಿಸ್ವಾರ್ಥಪರನಾಗಿರಬೇಕೆಂದು ತಿಳಿಸಿ, ಲಿಂಗಧಾರಿಗೆ "ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಾಪೇಕ್ಷೆ, ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದ ನೆಲೆಗೊಂಡಿರಬೇಕು"[೧೧೭] ಎಂದು ವಚನಗಳಲ್ಲಿ ಪ್ರತಿಪಾದಿಸಲಾಗಿದೆ.

ಲಿಂಗಧಾರಿಯು ತೀರ್ಥಯಾತ್ರೆಗಳಿಗೆ ಹೋಗಬೇಕಾಗಿಲ್ಲ

ವೀರಶೈವಃ ಪರೋ ಯಸ್ತು ಯತ್ರ ತಿಷ್ಠತಿ ಪಾರ್ವತಿ।
ತತ್ತೀರ್ಥಂ ತತ್ತಪಃ ಶಾಂತಿಸ್ತತ್ರ ತಿಷ್ಠಾಮಿ ಸರ್ವದಾ ॥

ತೀರ್ಥಯಾತ್ರಾದಿಕಂ ತೇಷಾಂ ನಾಸ್ತಿ ಚಾನ್ಯತ್ರ ಪಾರ್ವತಿ।
ಕೈಲಾಸಾದಿಪದಾಪೇಕ್ಷಾಂ ತ್ಯಜೇಲ್ಲಿಂಗಾಂಗಯೋಗಭಾಕ್ ॥ [೧೧೮]

ವೀರಶೈವನು ವಾಸ ಮಾಡುವ ನೆಲೆಯೇ ತೀರ್ಥಕ್ಷೇತ್ರ, ತಪೋಭೂಮಿ, ಶಾಂತಿಸದನ. ಅಲ್ಲಿ ಶಿವನು ಸದಾ ವಾಸಿಸುತ್ತಾನೆ. ವೀರಶೈವರು ಬೇರೆ ತೀರ್ಥಯಾತ್ರಾದಿ ಗಳಿಗೆ ಹೋಗಬೇಕಾಗಿಲ್ಲ. ಲಿಂಗಾಂಗಯೋಗ ಉಳ್ಳವನು ಕೈಲಾಸಾದಿ ಸ್ಥಾನಮಾನಗಳನ್ನು ಅಪೇಕ್ಷೆ ಮಾಡಬಾರದು ಎಂದು ಸೂಕ್ಷ್ಮಾಗಮವು ತಿಳಿಸಿದೆ.

ಜೇಡರದಾಸಿಮಯ್ಯನು ತೀರ್ಥಯಾತ್ರೆ ಮಾಡುವವನನ್ನು ಡೊಂಬನಿಗೆ ಹೋಲಿಸುತ್ತಾ "ಜಂಬೂದ್ವೀಪವನೆಲ್ಲ ತಿರಿಗಿದಡೇನು? ಜಂಬುಕ ಶಂಭು ಧ್ಯಾನದಲ್ಲಿ ಸ್ವೈರೆಗಪ್ಪುದೇ? ಕುಂಭಿನಿಯ ತಿರುಗಿ, ಕೋಟಿ ತೀರ್ಥವ ಮಿಂದಡೇನು? ಶಂಭು, ನಿಮ್ಮಲ್ಲಿ ಸ್ವಯವಾಗದವನು ಕುಂಭಿನಿಯ ತಿರಿಗಿದ ಡೊಂಬನಂತೆ ಕಾಣಾ, ರಾಮನಾಥಾ."[೧೧೯] ಎಂದಿರುವರು.

ಲಿಂಗಧಾರಿಗಳು ತೀರ್ಥಯಾತ್ರೆ ಮಾಡುವದು ವ್ಯರ್ಥ ಎಂದು ತೋಂಟದ ಸಿದ್ಧಲಿಂಗ ಯತಿಗಳು "ಅಷ್ಟಾ ಷಷ್ಟಿಕೋಟಿ ತೀರ್ಥವ ಮಿಂದರಿಲ್ಲ, ಕಾಣಿರಣ್ಣಾ. ಲಕ್ಷಾಲಕ್ಷ ಕೋಟಿ ಜಪವ ನೆಣಿಸಿ, ಧ್ಯಾನ, ಮೌನ, ಹೋಮ, ನೇಮ, ಅನುಷ್ಠಾನವ ಮಾಡಿದರಿಲ್ಲ, ಕಾಣಿರಣ್ಣಾ. ನೂರಿಪ್ಪತ್ತು ವೇಳೆ ಭೂಪ್ರದಕ್ಷಿಣೆಯ ಮಾಡಿದರಿಲ್ಲ, ಕಾಣಿರಣ್ಣಾ. ಕಾಶೀ, ಕೇದಾರ, ಶ್ರೀಶೈಲ, ಶಿವಲಿಂಗೆಗೆ ಹೋದರಿಲ್ಲ, ಕಾಣಿರಣ್ಣಾ. ಇವು ಎಲ್ಲ ಬರಿಯ ಭ್ರಾಂತಿ, ಕೇಳಿರಣ್ಣಾ. ಇಪ್ಪ ಠಾವು ಹೇಳಿಹೆ, ಕೇಳಿರಣ್ಣಾ. ಶ್ರೀಗುರು ಕರುಣದಿಂದೆ, ಬಿಜಯಂಗೈಸಿ ಕೊಟ್ಟ ಪರಮಲಿಂಗ ತನ್ನ ಕರದಲ್ಲಿ ತುಂಬಿಪ್ಪುದಯ್ಯ. ಹಲವು ಕಡೆಗೆ ಹೋಹ ಮನವ ಧ್ಯಾನವೆಂಬ ಹಸ್ತದಲ್ಲಿ ಹಿಡಿದು, ಆ ಲಿಂಗದ ಗೊತ್ತಿನಲ್ಲಿ ಕಟ್ಟಿ, ನೆರೆಯ ಬಲ್ಲರೆ, ಅಲ್ಲಿಪ್ಪನು ಶಂಭು ಪರಮೇಶ್ವರನು. ಇದೇ

---

೧೧೭. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್೧೯೨೩)–ಪುಟ ೧೦೧–ವಚನಸಂಖ್ಯೆ ೮
೧೧೮. ಸೂ. ಆ. ಪಟಲ ೭, ಶ್ಲೋಕ ಸಂಖ್ಯೆ ೮೧,೮೨
೧೧೯. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್೧೯೨೩)–ಪುಟ ೨೯೪–ವಚನಸಂಖ್ಯೆ ೮

ನಿಶ್ಚಯ, ಉಳಿದುದೆಲ್ಲ ಹುಸಿ ಕಂಡೆಯಾ, ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ."[೧೨೦] ಎಂದಿದ್ದಾರೆ.

ಇದನ್ನೇ ಸಿದ್ಧರಾಮರು "ನಿಶ್ಚಲ ಶರಣನ ಅಂಗಣದಲ್ಲಿ ಅಷ್ಟಾಷಷ್ಟಿ ತೀರ್ಥಂಗಳು ನೆಲಸಿರ್ಪವಯ್ಯ। ನೀನು ಇನಿಸುವೆರಸಿ ಒಲಿದಲ್ಲಿ ನೆಲಸಿರ್ಪವಯ್ಯ, ಕಪಿಲಸಿದ್ಧ ಮಲ್ಲಿನಾಥಯ್ಯ."[೧೨೧] ಎಂದು ಲಿಂಗಧಾರಿ ನೆಲೆಸಿರುವಲ್ಲಿಯೇ ಸಕಲತೀರ್ಥಗಳು ನೆಲೆಸಿರುವುದಾಗಿ ತಿಳಿಸಿದ್ದಾರೆ.

ಅನ್ಯದೇವತೆಗಳನ್ನು ಭಜಿಸಬೇಡ

ಯಾತ್ರಾನ್ಯದೇವತಾಪೂಜಾ ತತ್‌ಸ್ಥಾನಂ ಪರಿವರ್ಜಯೇತ್।
ಶಿವಭಕ್ತಿವಿಹೀನಂ ಚ ಜನಂ ನೈವ ಸಮಾಶ್ರಯೇತ್ ॥[೧೨೨]

ಇಷ್ಟಲಿಂಗಧಾರಿಯು ಬೇರೆ ದೇವರ ಪೂಜೆ ಎಲ್ಲಿ ನಡೆಯುತ್ತದೆಯೋ ಅಲ್ಲಿಗೆ ಹೋಗಬಾರದು. ಶಿವಭಕ್ತಿ ಇಲ್ಲದವರನ್ನು ಎಂದಿಗೂ ಆಶ್ರಯಿಸಬಾರದು ಎಂದು ಸೂಕ್ಷ್ಮಾಗಮವು ಇಷ್ಟಲಿಂಗದ ಹೊರತಾಗಿ ಅನ್ಯ ದೇವರ ಉಪಾಸನೆ ಮಾಡುವುದನ್ನು ಖಂಡಿಸಿದೆ.

ಇದೇ ಅಭಿಪ್ರಾಯದ **ವೀರಾಗಮದ** ಶ್ಲೋಕವೊಂದನ್ನು ಉದಾಹರಿಸುತ್ತಾ ಮಡಿವಾಳ ಮಾಚಿದೇವರು "ಸೂಳೆ, ಸುರೆ, ಮೃಗ, ಭವಿ, ಅನ್ಯದೈವಯುಳ್ಳನ್ನಕ್ಕರ ಭಕ್ತನಲ್ಲ, ಶಿವದ್ರೋಹಿ, ವೃತಗೇಡಿ. ಅದೆಂತೆಂದೊಡೆ. ವೀರತಂತ್ರೆ ॥ಶ್ಲೋ॥ ಮೃಗಯಾಮದ್ಯ ವೇಶ್ಯಾ ಅನ್ಯದೈವಸ್ಯ ಪೂಜಕಃ। ತತ್ಸಂಗೀಚ ಮಹಾದ್ರೋಹಿನಲಿಂಗೀ. ಭವಿನೋಪಮಃ॥ ಎಂಬುದಾಗಿ, ಸೂಕರನು ಅಶುದ್ಧವ ತಿಂದು, ಅದು ಒಂದರ ಮುಸುಡಿ ಒಂದು ಮೂಸಿನೋಡುವಂತೆ, ಇಂತಪ್ಪ ಅನಾಚಾರಿಗಳಂ ಬಿಡದವನು ಆ ಸೂಕರನೋಪಾದಿ ಕಾಣಾ ಕಲಿದೇವರ ದೇವಾ"[೧೨೩] ಎಂದು ಅನ್ಯದೈವವನ್ನು ಪೂಜಿಸುವುದಿರಲಿ ಅಂಥ ಅನ್ಯದೈವಪೂಜಕನ ಸಂಗ ಮಾಡುವವನ್ನು ಸೂಕರನಿಗೆ ಹೋಲಿಸಿದ್ದಾರೆ.

ಇದನ್ನೇ ಷಣ್ಮುಖ ಸ್ವಾಮಿಗಳು "ಶ್ರೀಗುರುಸ್ವಾಮಿ ಕರುಣಿಸಿಕೊಟ್ಟ ಇಷ್ಟಲಿಂಗವನ್ನು ಉರದಲ್ಲಿ ಧರಿಸಿಕೊಂಡು, ಅದು ದೇವರೆಂದು ನಂಬದೆ, ಧರೆಯ ಮೇಲೆ ಕಂಡ ಕಂಡ ದೇವರ ಕಂಡು, ಕಲ್ಪಿಸಿ, ಹರಿದಾಡುವ ಭಂಡ ಮಾದಿಗರ ಭಕ್ತರೆಂದರೆ, ಅಘೋರನರಕ ತಪ್ಪದಯ್ಯ ಅಖಂಡೇಶ್ವರಾ"[೧೨೪] ಎಂದಿದ್ದಾರೆ.

ಬಸವಣ್ಣನವರು "ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣಿರೋ ನಂಬಬಲ್ಲ

---

೧೨೦. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್೧೯೨೩)–ಪುಟ ೨೯೩–ವಚನಸಂಖ್ಯೆ ೭
೧೨೧. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್೧೯೨೩)–ಪುಟ ೨೯೫–ವಚನಸಂಖ್ಯೆ ೧೪
೧೨೨. ಸೂ. ಆ. ಪಟಲ ೭, ಶ್ಲೋಕ ಸಂಖ್ಯೆ ೮೩
೧೨೩. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್೧೯೨೩)–ಪುಟ ೧೬೫–ವಚನಸಂಖ್ಯೆ ೫೧
೧೨೪. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್೧೯೨೩)–ಪುಟ ೨೮೧–ವಚನಸಂಖ್ಯೆ ೧

ಭಕ್ತಂಗೆ ದೇವನೊಬ್ಬನೇ ಕಾಣಿರೋ, ಬೇಡ ಬೇಡ, ಅನ್ಯದೈವದ ಸಂಗ ಹೊಲ್ಲ. ಅನ್ಯದೈವವೆಂಬುದು ಹಾದರ ಕಾಣಿರೋ. ಕೂಡಲಸಂಗಮದೇವರು ಕಂಡರೆ, ಮೂಗ ಕೊಯ್ಯುವ ಕಾಣಿರೋ".[೧೨೫] ಎಂದು ಸ್ವಲ್ಪ ಕಟುವಾಗಿಯೇ ಹೇಳಿದ್ದಾರೆ.

ಅಂಬಿಗರ ಚೌಡಯ್ಯನು,"ಒಬ್ಬ ತಂದೆಯ ಬಸಿರಲ್ಲಿ ಒಂಬತ್ತು ಮಕ್ಕಳು ಹುಟ್ಟಿದರೇನಯ್ಯ? ಅವರೊಳಗೆ ಶರಗವ ಒಬ್ಬಗೆ ಕಟ್ಟಿ ಮದುವೆಯ ಮಾಡಿದ ಬಳಿಕ, ಆತಂಗೆ ತನ್ನ ಅಂಗದ ಸುಖವನ್ನು ಒಪ್ಪಿಸಬೇಕಲ್ಲದೆ, ಉಳಿದಾದ ಭಾವ ಮೈದುನರಿಗೆ ಅವನ ಮಕ್ಕಳೆಂದು ಅವರಿಗೆ ತನ್ನ ಶರಗು ಹಾಕಿದವಳನ್ನು ಒಪ್ಪುವರೇ ಲೋಕದೊಳಗೆ? ಪರಮೇಶ್ವರನೆಂಬ ಶಿವಂಗೆ ಹುಟ್ಟದಾತ ವಿನಾಯಕ, ಆತಂಗೆ ಸಾಕಾರವಾಗಿ ಹುಟ್ಟದಾತ ವೀರಭದ್ರ. ಇವರೆಲ್ಲರು ಶಿವನ ಮಕ್ಕಳು. ಆದರೆ ತನಗೊಂದು ಪ್ರಾಣಲಿಂಗವೆಂದು ಕಂಕಣವಕಟ್ಟಿ ಕರಸ್ಥಲದಲ್ಲಿ ಪಡೆದ ಬಳಿಕ, ಅದೇನೆಂದರೆ ಅನ್ಯದೈವಕ್ಕೆರಗಿದಾತಂಗೆ ನಾಯಕ ನರಕ ತಪ್ಪದು"[೧೨೬] ಎನ್ನುತ್ತಾ ಬಹುದೇವತಾ ರಾಧನೆಯನ್ನು ಅತ್ಯಂತ ಉಗ್ರವಾಗಿ ಖಂಡಿಸಿದ್ದಾರೆ.

"ಅಂಗದ ಮೇಲಣ ಲಿಂಗವ ಹಿಂಗಿ, ಸ್ಥಾವರಲಿಂಗಕ್ಕೆರಗುವ ಭಂಗಿತರ ಮುಖವ ನೋಡಲಾಗದು. ಅದೆಂತೆಂದೊಡೆ, ತನ್ನ ಗಂಡನ ಬಿಟ್ಟು ಅನ್ಯಗಂಡರಿಗೆರಗುವ ಹದರಗಿತ್ತಿಯಂತೆ ಅವಂದಿರ ಭಕ್ತಿ. ಅಂತಪ್ಪ ಪಂಚಮಹಾಪಾತಕರ ತೋರದಿರಾ ಗುಹೇಶ್ವರಾ."[೧೨೭] ಎನ್ನುವಷ್ಟು ಕಠಿಣವಾಗಿ ಅಲ್ಲಮಪ್ರಭುಗಳು ಬಹುದೇವೋಪಾಸನೆಯನ್ನು ಖಂಡಿಸಿದ್ದಾರೆ.

'ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ ಹೊಟ್ಟಡಿಯಾಗಿ ಬೀಳುವ ಲೊಟ್ಟೆಮೂಳನ ಕಂಡಡೆ ಮೆಟ್ಟಿರ್ದ ಎಡಪಾದದರಕ್ಷೆಯ ತಗೊಂಡು ಲಟಲಟನೆ ಹೊಡಿ'[೧೨೮] ಎನುವಷ್ಟು ಉಗ್ರವಾಗಿ ಅಂಬಿಗರ ಚೌಡಯ್ಯನು ಅನ್ಯದೈವೋಪಾಸನೆಯನ್ನು ಖಂಡಿಸಿದ್ದಾನೆ.

ಹೀಗೆ ಭಕ್ತಿಯ ಹೆಸರಿನಲ್ಲಿ ನೂರಾರು ದೇವರುಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ಮೊರೆ ಹೋಗುತ್ತಾ, ಮರನ ಕಂಡಲ್ಲಿ ಸುತ್ತುತ್ತಾ, ನೀರ ಕಂಡಲ್ಲಿ ಮುಳುಗುತ್ತಾ, ಲೌಕಿಕ ಪ್ರತಿಫಲಾಪೇಕ್ಷೆಗಾಗಿ ಮಾಡುವ ಬಹುದೇವತಾ ಉಪಾಸನೆಯನ್ನು ಆಗಮಗಳು ಹಾಗೂ ಶರಣರು ಖಂಡಿಸಿ ಇಷ್ಟಲಿಂಗದ ಹೊರತಾಗಿ ಬೇರೆ ದೇವರ ಉಪಾಸನೆಯನ್ನು ತಿರಸ್ಕರಿಸಿದ್ದಾರೆ. 'ಪರಮ ಪತಿವ್ರತೆಗೆ ಗಂಡನೊಬ್ಬ' ಎಂಬಂತಹ ನಿಷ್ಠೆ ಸಾಧಕನಿಗೆ ಅವಶ್ಯಕ ಎಂದು ಸಾರಿವೆ.

---

೧೨೫. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್೧೯೨೩)–ಪುಟ ೨೮೩–ವಚನಸಂಖ್ಯೆ ೧೭

೧೨೬. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್೧೯೨೩)–ಪುಟ ೨೮೮–ವಚನಸಂಖ್ಯೆ ೬

೧೨೭. ಅಲ್ಲಮಪ್ರಭುದೇವರ ವ.ಸಂ. ಸಮಗ್ರ ವಚನ ಸಂಪುಟ ೨, ವಚನ ಸಂಖ್ಯೆ ೭೦೪ ಪುಟ ೧೯೩

೧೨೮. ಸಮಗ್ರ ವಚನ ಸಂಪುಟ ೬, ಸಂಕೀರ್ಣವ. ಸಂ. ೧, ವಚನ ಸಂಖ್ಯೆ ೯೩ ಪುಟ ೩೨

ದೀಕ್ಷೆ ಹೊಂದಿದವನು ಅಂಗದಿಂದ ಲಿಂಗವನ್ನು ಬೇರ್ಪಡಿಸಕೂಡದು

ಸಾಧಕನ ಆತ್ಮಸ್ವರೂಪವನ್ನು ಪ್ರತಿಬಿಂಬಿಸುವ ಕನ್ನಡಿ ಇಷ್ಟಲಿಂಗ. ಸ್ಥೂಲತನುವಿನ ಭವಿತನ ಹೋಗಲಾಡಿಸಲು ಇಷ್ಟಲಿಂಗದ ಅವಶ್ಯಕತೆ ಇರುವಂತೆ ಸೂಕ್ಷ್ಮ ಕಾರಣ ಶರೀರಗಳನ್ನೊಳಗೊಂಡ ಅಂಗತ್ರಯವನ್ನು ಲಿಂಗತ್ರಯವನ್ನಾಗಿ ಮಾಡುವಲ್ಲೂ ಇಷ್ಟಲಿಂಗದ ಶಕ್ತಿಯೂ ದಿವ್ಯವಾಗಿದೆ. ಇದನ್ನು ಧರಿಸಿದ ಸಾಧಕನು ಅಜೀವಪರ್ಯಂತ ಪೂಜಿಸಬೇಕು. ಇಷ್ಟಲಿಂಗವನ್ನು ದೇಹದಿಂದ ಎಂದೂ ಬೇರ್ಪಡಿಸಬಾರದೆಂದು ಎಚ್ಚರಿಸುತ್ತದೆ.

ಜಾತಕೇ ಮೃತಕಾಶೌಚೇ ಮಲಮೂತ್ರವಿಸರ್ಜನೇ
ರತಾವಶುದ್ಧಾವುದ್ಯೋಗೇ ರಣೇ ನಿದ್ರಾದಿಷು ಪ್ರಿಯೇ।
ಕರ್ಮಣಾ ಮನಸಾ ವಾಚಾ ಜಾಗ್ರತ್‌ಸ್ವಪ್ನಸುಷುಪ್ತಿಷು॥
ನ ಲಿಂಗಮುತ್ಸೃಜೇತ್ ಕ್ವಾಪಿ...।[೧೨೯]

ದೀಕ್ಷೆ ಹೊಂದಿದ ವ್ಯಕ್ತಿಯು ಯಾವುದೇ ಸಂದರ್ಭ ಬಂದರೂ ಇಷ್ಟಲಿಂಗವನ್ನು ದೇಹದಿಂದ ಬೇರ್ಪಡಿಸಕೂಡದು. ಜನನ ಸೂತಕ ಮತ್ತು ಮರಣ ಸೂತಕಗಳಲ್ಲಿ, ಮಲ-ಮೂತ್ರ ವಿಸರ್ಜನೆಯ ಸಮಯದಲ್ಲಿ, ರತಿಕಾಲದಲ್ಲಿ, ಯಾವುದೇ ಅಶುದ್ಧ ಕಾರ್ಯ ಮಾಡುವಾಗ, ಯುದ್ಧದಲ್ಲಿ, ನಿದ್ರೆ ಮುಂತಾದವುಗಳ ಸಮಯದಲ್ಲಿ, ಜಾಗ್ರತ್, ಸ್ವಪ್ನ, ಸುಷುಪ್ತಿ ಅವಸ್ಥೆಗಳಲ್ಲಿ ಕ್ರಿಯೆ, ಮನಸ್ಸು, ಮಾತುಗಳಿಂದ ಇಷ್ಟಲಿಂಗವನ್ನು (ದೇಹದಿಂದ) ಬೇರ್ಪಡಿಸುವ ವಿಚಾರ ಮಾಡಬಾರದೆಂದು ಆಗಮಗಳು ಎಚ್ಚರಿಸುತ್ತವೆ. ಕಾರಣ ಮರಣ ಹೊಂದಿದಾಗಲೂ ಆತನ ಸ್ಥೂಲ ಕಾಯದೊಂದಿಗೆ ಇಷ್ಟಲಿಂಗವನ್ನು ನಿಕ್ಷೇಪಗೊಳಿಸುವ ಪದ್ಧತಿ ಆಗಮಕಾಲದಿಂದಲೂ ನಡೆದುಕೊಂಡು ಬಂದಿದೆ.

ಇಷ್ಟಲಿಂಗ ವಿಯೋಗವಾದರೆ ಪ್ರಾಣ ಬಿಡಬೇಕು ಎಂಬ ವಿಚಾರ ಕುರಿತು-

ಲಿಂಗಂ ಪತಿಃ ಸತೀ ಚಾಹಂ ಭಾವೋಽಯಂ ವೀರಶೈವಿನಾಮ್ ॥
ತಸ್ಮಾಲ್ಲಿಂಗಾತ್ಯಯೇ ದೇವಿ ಸದ್ಯಃ ಪ್ರಾಣಾನ್ ಪರಿತ್ಯಜೇತ್ ॥
ದೀಕ್ಷಾಯಾಂ ಗುರುಣಾ ಲಿಂಗಂ ಧಾರಿತಂ ಗಿರಿಜೇ ಯದಾ ।
ತದಾಪ್ರಭೃತಿ ಲಿಂಗಾಂಗಸಂಬಂಧೀ ಸ್ಯಾನ್ನಿರಂತರಮ್ ॥
ಇಷ್ಟಲಿಂಗೇ ಪರೇ ಲುಪ್ತೇ ಲಿಂಗಮನ್ಯನ್ನ ಧಾರಯೇತ್ ।[೧೩೦]

ಲಿಂಗವೇ ಪತಿ ಮತ್ತು ನಾನು (ಅಂಗ) ಸತಿ ಎಂಬ ಭಾವ ವೀರಶೈವನಿಗಿರಬೇಕು. ಆದ್ದರಿಂದ ಲಿಂಗವು ಕಳೆದುಹೋದರೆ ಕೂಡಲೇ ಪ್ರಾಣವನ್ನು ಬಿಡಬೇಕು. ದೀಕ್ಷಾಕಾಲದಲ್ಲಿ ಗುರು ಕರುಣಿಸಿದ ಲಿಂಗವನ್ನು ಅಂದಿನಿಂದ ಕೊನೆಯವರೆಗೂ ಬಿಡದೆ ಧರಿಸಬೇಕು. ನಿರಂತರ ಲಿಂಗಸಂಬಂಧಿಯಾಗಿರಬೇಕು. ಇಷ್ಟಲಿಂಗವು ಒಂದು ವೇಳೆ ಕಳೆದುಹೋದರೆ, ಬೇರೊಂದು ಲಿಂಗವನ್ನು ಧರಿಸಬಾರದು ಎಂದು ಆಗಮಗಳು ಅರುಹುತ್ತವೆ. ಕಾರಣ

---

೧೨೯. ಪಾ. ಆ. ಪಟಲ ೨ ಶ್ಲೋಕ ಸಂಖ್ಯೆ ೧೮-೨೦

೧೩೦. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೫೨-೫೪

'ವೀರಶೈವನಾದವನು ಇಷ್ಟಲಿಂಗವನ್ನು ಕಳೆದುಕೊಂಡರೆ ಪ್ರಾಣವನ್ನು ತ್ಯಜಿಸಬೇಕೆಂಬ ಅಭಿಪ್ರಾಯ ಆಗಮಗಳಲ್ಲಿ ಹಲವು ಬಾರಿ ಸ್ಪಷ್ಟವಾಗಿ ಹೇಳಲಾಗಿದೆ.

ವಾತುಲಶುದ್ಧಾಗಮದಲ್ಲಿ ಇಷ್ಟಲಿಂಗ ವಿಯೋಗವಾದಾಗ "ಶುದ್ಧಶೈವನು 'ಓಂ ಅಘೋರೇಭ್ಯೋಥ ಘೋರೇಭ್ಯೋ ಘೋರಘೋರತರೇಭ್ಯಃ। ಸರ್ವೇಭ್ಯಸ್ಸರ್ವ ಶರ್ವೇಭ್ಯೋ ನಮಸ್ತೇ ಅಸ್ತು ರುದ್ರರೂಪೇಭ್ಯಃ॥' ಎಂಬ ಅಘೋರಮಂತ್ರವನ್ನು ಒಂದು ಲಕ್ಷ ಜಪ ಮಾಡಿ ಪುನಃ ಸದ್ಗುರುಗಳಿಂದ ಬೇರೊಂದು ಲಿಂಗವನ್ನು ಸಂಸ್ಕಾರ ಪೂರ್ವಕವಾಗಿ ಪಡೆಯತಕ್ಕದ್ದು"[೧೩೧] ಎಂದು ತಿಳಿಸಿ, ವೀರಶೈವನಿಗೆ ಮಾತ್ರ ಪ್ರಾಯಶ್ಚಿತ್ತ ಕರ್ಮಗಳನ್ನು ಹೇಳಿರುವುದಿಲ್ಲ. ಅರ್ಥಾತ್ ವೀರಶೈವರು ಎಂದೂ ಪ್ರಮಾದವನ್ನು ಮಾಡಬಾರದೆಂಬ ಅಭಿಪ್ರಾಯವು ಪ್ರತಿಪಾದಿಸಲ್ಪಟ್ಟಿದೆ.

ಕಾರಣಾಗಮದಲ್ಲಿ[೧೩೨] ಇಪ್ಪತ್ತೊಂದು ದಿನ ನಿರಾಹಾರದ ಉಪವಾಸ ವ್ರತವನ್ನು ಆಚರಿಸಿ ಪುನಃ ಗುರುಗಳಿಂದ ದೀಕ್ಷೆ ಹೊಂದುವಂತೆ ಪ್ರಾಯಶ್ಚಿತವನ್ನು ತಿಳಿಸಿದ್ದರೂ ಭಕ್ತಿಯೋಗದಿಂದ ಪ್ರಾಣತ್ಯಾಗವೇ ಶ್ರೇಷ್ಠವೆಂದು ಪ್ರತಿಪಾದಿಸಿದೆ. ಹಾಗೂ ಪಾರಮೇಶ್ವರಾಗಮದಲ್ಲಿಯೂ[೧೩೩] ಲಿಂಗ ವಿಯೋಗವಾದರೆ ಪುನಃ ದೀಕ್ಷೆ ಹೊಂದಿ ಲಿಂಗ ಧರಿಸಬಹುದೆಂದು ಹೇಳಿದ್ದರೂ ಸಹ–

ಯಲ್ಲಿಂಗಮಾದಿತೋ ಲಬ್ಧಂ ಯಾವಜ್ಜೀವಂ ತದೇವ ಹಿ।
ನಾನ್ಯಲಿಂಗಂ ಭವೇನ್ಮಧ್ಯೇ ಯದಿ ಸ್ಯಾತ್ ಸ ತು ಪಾತಕೀ।[೧೩೪]

ಯಾವ ಲಿಂಗವು ಆರಂಭದಲ್ಲಿ ದೊರೆತದ್ದೋ ಅದೇ ಜೀವನ ಪರ್ಯಂತ ಇರಬೇಕು. ಮಧ್ಯದಲ್ಲಿ ಬೇರೆ ಲಿಂಗವು ಬೇಡ. ಹಾಗೇನಾದರೂ ಆದರೆ ಅವನು ಪಾತಕಿಯಾಗುತ್ತಾನೆ. ಗುರುಕೊಟ್ಟ ಲಿಂಗವು ಪ್ರಾಣಲಿಂಗವಾಗಿದ್ದು, ಪ್ರಮಾದದಿಂದ ಅದು ಕಳೆದು ಹೋದರೆ ದೇಹವನ್ನೇ ತ್ಯಜಿಸಬೇಕು[೧೩೫] ಎಂದು ಹೇಳಿದೆ. ಕಾರಣ ಆಗಮಗಳು 'ವೀರಶೈವನಾದವನು ಇಷ್ಟಲಿಂಗ ವಿಯೋಗವಾದರೆ ಪ್ರಾಣವನ್ನು ತ್ಯಜಿಸುವದು ಸೂಕ್ತವೆಂದು ಅಭಿಪ್ರಾಯ ಪಡುತ್ತವೆ.

ಆದರೆ ವಚನಕಾರರು ಇಷ್ಟಲಿಂಗ ಹೋದರೆ ಆತ್ಮಘಾತ ಮಾಡಿಕೊಳ್ಳಬೇಕೆಂಬ ಆಗಮದ ಅಭಿಪ್ರಾಯವನ್ನು ಕಟುವಾಗಿ ಖಂಡಿಸಿದ್ದಾರೆ.

ಅಂಗದ ಮೇಲಣ ಲಿಂಗ ಹಿಂಗಿತ್ತೆಂದು
ಆತ್ಮಘಾತವ ಮಾಡಬೇಕೆಂಬ ಅಜ್ಞಾನಿಗಳು

---

೧೩೧. ವಾತುಲಶುದ್ಧಾಗಮ, ಪಟಲ ೧೦, ೫೭–೬೦
೧೩೨. ಕಾ.ಆ.ಕ್ರಿ.ಪಾ. ಪಟಲ ೧೦, ಶ್ಲೋಕ ಸಂಖ್ಯೆ ೩೨–೩೩
೧೩೩. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೯೫–೯೯
೧೩೪. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೧೦೦
೧೩೫. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೧೦೩

ಅಂಗವಾವುದು ಲಿಂಗವಾವುದೆಂದವರೆತ್ತ ಬಲ್ಲರು?
ಅಂಗವೇ ಆತ್ಮ, ಲಿಂಗವೇ ಸಂವಿತ್ತು.
ಎರಡರ ಸಂಬಂಧ ಸಂಚ ತಿಳಿಯದೆ ಅಂಗದ ಲಿಂಗ ಹಿಂಗಿತ್ತೆಂಬರಿಗೆ
ಪ್ರಾಣಲಿಂಗನಾಸ್ತಿ, ಪ್ರಸಾದವೆಲ್ಲಿಯದೋ ಕೂಡಲ ಚೆನ್ನಸಂಗಮದೇವಾ.[೧೩೬]

ಎಂದು ಚೆನ್ನಬಸವಣ್ಣ ಸ್ಪಷ್ಟವಾಗಿ ಹೇಳಿದ್ದಾನೆ. ಇದೇ ಅಭಿಪ್ರಾಯವನ್ನು ಅಲ್ಲಮಪ್ರಭುಗಳು, 'ಇಷ್ಟಲಿಂಗವನು ಪ್ರಾಣಲಿಂಗವೆಂಬ ಕಷ್ಟವೆಲ್ಲಿಯದೋ ಇಷ್ಟಲಿಂಗ ಹೋದರೆ ಪ್ರಾಣಲಿಂಗ ಹೋಗದು ನೋಡಾ' ಎಂದು ಹೇಳುತ್ತಾ 'ಅಂಗದೊಳಗೆ ಮಹಾಲಿಂಗವಿರಲು ಕೈಯ ಲಿಂಗವ ಬಿದ್ದಿತೆಂದು ನೆಲದೊಳಗಂಗವ ಹೂಣುವರು ಭಂಗಪಡುವರಲ್ಲಾ' ಎಂದು 'ಲಿಂಗವನರಿಯದ ಜಡರು'ಗಳಿಗಾಗಿ ಮರುಗಿದ್ದಾರೆ.

ತೆರಹಿಲ್ಲದ ಘನವು ಭಿನ್ನವಾಯಿತ್ತೆಂದು
ತನುವಿನ ಮೇಲೆ ಶಸ್ತ್ರವನಿಕ್ಕಿಕೊಂಬ
ಶಿವದ್ರೋಹಿಯ ಮುಖವ ನೋಡಲಾಗದು, ಕಲುಕುಟಿಗ ಮುಟ್ಟಿ ಚಕ್ಕೆಳುವಾಗ,
ಪ್ರಾಣಲಿಂಗ ಭಿನ್ನವಾಯಿತ್ತೆ? ಭಾವಲಿಂಗ ಭಿನ್ನವಾಯಿತ್ತೆ?
ಪೂಜಾಲಿಂಗ ಭಿನ್ನವಾಯಿತ್ತಲ್ಲದೆ,
ಇಂತೀ ನಿರಾಳದ ನೆಲೆಯ ಸೋಂಕನಾರೂ ಅರಿಯರು,
ಇಷ್ಟಲಿಂಗ ಬಿದ್ದಿತ್ತೆಂಬ ಕಷ್ಟವ ನೋಡಾ ಕೂಡಲಚೆನ್ನಸಂಗಮದೇವಾ.[೧೩೭]

ಎಂದು ಲಿಂಗ ಕಳೆದುಕೊಂಡರೆ ಪ್ರಾಣ ಬಿಡಬೇಕು ಎನ್ನುವ ವಿಚಾರವನ್ನು ವಚನಕಾರರು ಖಂಡಿಸಿರುವರು. ವಚನಕಾರರ ಇಂತಹ ಮಾತುಗಳಿಂದ ಇಷ್ಟಲಿಂಗದ ಮಹತ್ವವನ್ನು ಅವರು ಕಡೆಗಣಿಸಿದರೆಂದಲ್ಲ; ಇಷ್ಟಲಿಂಗ ಧಾರಣೆಯ ಉದ್ದೇಶವನ್ನು ತಿಳಿಸಿದ್ದಾರೆ. ಕಾರಣ ಇಂದಿನ ಪರಿಸ್ಥಿತಿಯಲ್ಲಿ ಆಗಮ ಪ್ರತಿಪಾದಿತವಾದ ವೀರವ್ರತವನ್ನು ಪರಿಪಾಲಿಸುವ ಸಾಮರ್ಥ್ಯವು ಸಾಧಕರಲ್ಲಿ ಇರದ ಕಾರಣ ತಮ್ಮಿಂದ ಇಷ್ಟಲಿಂಗ ವಿಯೋಗ ಅಥವಾ ವ್ರತಗಳ ಲೋಪಗಳುಂಟಾದಾಗ ಸದ್ಗುರುಗಳಲ್ಲಿಗೆ ಹೋಗಿ ತನ್ನ ಅಪರಾಧವನ್ನು ಅವರಿಗೆ ನಿವೇದಿಸಿಕೊಂಡು ಅವರು ಉಪದೇಶಿಸಿದ ಮಾರ್ಗದಲ್ಲಿ ನಡೆಯುವುದು ಸೂಕ್ತವಾದದ್ದು.

ಲಿಂಗ ಕಳೆದುಕೊಂಡರೆ ಪ್ರಾಣ ಬಿಡಬೇಕು ಎನ್ನುವ ವಿಚಾರಕ್ಕೆ ಅಂಟಿಕೊಂಡು ಅದರ ವಾಚ್ಯಾರ್ಥ ಹಿಡಿಯದೆ ಲಿಂಗವೆಂದರೆ ಪ್ರಾಣ ಎನ್ನುವಷ್ಟರ ಮಟ್ಟಿಗೆ ಪ್ರೇಮಭಾವ ಹೊಂದಿರಬೇಕೆಂದು ಅರ್ಥೈಸಿಕೊಳ್ಳಬೇಕು. ಅಲ್ಲದೇ ವಚನಕಾರರೂ ಸಹ ಗುರುವಿತ್ತ

---

೧೩೬. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೪೧೮ ಪುಟ ೧೩೦

೧೩೭. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೨೭೩ ಪುಟ ೪೪೮

ಲಿಂಗವ ತೊರೆದು ಮರಳಿ ಮರಳಿ ಧರಿಸುವದು ಯೋಗ್ಯವಲ್ಲವೆಂದು ಉದಾಹರಣೆಯ ಮೂಲಕ ತಿಳಿಸುತ್ತಾ –

ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತುವ ಕಿತ್ತಿ ಕಿತ್ತಿ ಮತ್ತೆ ಬಿತ್ತುತ್ತ ಹೋದಡೆ,
ಆ ಬಿತ್ತು ಮೊಳೆತು ಕಳೆಯೇರಿ ಬೆಳೆದು
ಬೆಳಸನೀವ ಪರಿಯಿನ್ನೆಂತೊ, ಮರುಳು ಮಾನವಾ?
ಗುರುವಿತ್ತ ಲಿಂಗವ ತೊರೆ ತೊರೆದು ಮರಳಿ ಮರಳಿ ಧರಿಸಿದಡೆ
ಆ ಇಷ್ಟಲಿಂಗವು ಅನಿಷ್ಟವ ಕಳೆದು ಇಷ್ಟಾರ್ಥವನೀವ ಪರಿಯಿನ್ನೆಂತೊ?
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಮುಕ್ತಿಯನರಸುವಡೆ[೧೩೮]
ಅಂಗನಲ್ಲಿ ಹೆರೆಹಿಂಗದೆ ಲಿಂಗವ ಧರಿಸಬೇಕು.

ಎಂದು ಗುರುವಿತ್ತ ಲಿಂಗವ ಅಂಗದಲ್ಲಿ ಹೆರೆಹಿಂಗದೆ ಧರಿಸಬೇಕೆಂದು ಆಗಮ ವಾಕ್ಯವನ್ನು ಸಮರ್ಥಿಸಿದ್ದಾರೆ. ಏಕೆಂದರೆ ಇಷ್ಟಲಿಂಗವು ಸಾಕ್ಷಾತ್ ಪರಶಿವನ ವ್ಯಕ್ತರೂಪವಾಗಿದ್ದು ಅದನ್ನು ಅತ್ಯಂತ ಅವಧಾನದಿಂದ ಅಂಗದ ಮೇಲೆ ಧರಿಸಬೇಕು. ಗುರು ಕಾರುಣ್ಯದಿಂದ ಲಭಿಸಿದ ಇಷ್ಟಲಿಂಗದ ಅನುಸಂಧಾನದ ಮೂಲಕವೇ ಪ್ರಾಣಲಿಂಗ ಮತ್ತು ಭಾವಲಿಂಗಗಳ ಸ್ವರೂಪಸಾಕ್ಷಾತ್ಕಾರ ಹಾಗೂ ಪೂಜೆ–ಧ್ಯಾನಗಳನ್ನು ಮಾಡಬೇಕೆಂದು ಆಗಮ ಹಾಗೂ ವಚನಗಳು ಅರುಹುತ್ತವೆ.

ಒಟ್ಟಿನಲ್ಲಿ ಲಿಂಗದ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ, ಶಿವಾಗಮಗಳು ಲಿಂಗವೆಂದರೆ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣೀಭೂತವಾದ ಪರಶಿವಬ್ರಹ್ಮ ಎಂದು ಪ್ರತಿಪಾದಿಸಿವೆ. ಆ ಮಹಾಲಿಂಗವೇ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳೆಂದು ಮೂರಾಗಿ ಆವಿರ್ಭವಗೊಳ್ಳುವ ಬಗೆಯನ್ನು ವಿವರಿಸಿ, ಲಿಂಗತ್ರಯಗಳನ್ನು ಅರ್ಚಿಸುವ ವಿಧಾನವನ್ನು ಮನೋಜ್ಞವಾಗಿ ವಿವರಿಸಿವೆ.

ಇಷ್ಟಲಿಂಗವನ್ನು ಪೂಜಿಸಿ ಅದರಲ್ಲಿ ದೃಷ್ಟಿಯೋಗವನ್ನು ಸಾಧಿಸಿ, ಪ್ರಾಣಲಿಂಗದಲ್ಲಿ ಮನಸ್ಸನ್ನು ನೆಲೆಗೊಳಿಸಿ, ನಿರಾಕಾರ, ನಿಷ್ಕಲ–ಭಾವಲಿಂಗದ ಭಾವನೆಯನ್ನು ಬಲಿಸಿಕೊಂಡು ಮಹಾಲಿಂಗದಲ್ಲಿ ಒಂದಾಗಬೇಕು. ಕಾರಣ ಆತ್ಮಸಾಕ್ಷಾತ್ಕಾರಕ್ಕೆ ಆತ್ಮಸಿದ್ಧಿಗಾಗಿ ಇಷ್ಟಲಿಂಗಪೂಜೆಯು ಸಾಧನವಾಗಿದ್ದು ವಿಶ್ವರೂಪದ ಲಿಂಗವನ್ನು ಪೂಜಿಸುವುದರಿಂದ ವಿಶ್ವಾತ್ಮನಾದ ಪರಶಿವನಲ್ಲಿ ಬೆರೆತು ಬೇರಾಗದಂತಹ ಕೌಶಲ ಸಿದ್ಧಿಸುತ್ತದೆ ಎಂದು ಲಿಂಗಾರಾಧನೆಯ ಮಹಿಮೆಯನ್ನು ಹೇಳಿ ಗುರುವಿನಿಂದ ಕೊಡಲ್ಪಟ್ಟ ಲಿಂಗವೇ ಉತ್ತಮೋತ್ತಮ ಮತ್ತು ಎಲ್ಲಾ ಇಚ್ಛಿಸಿದ ವಸ್ತುಗಳನ್ನು ನೀಡುವಂತಹದು ಎಂದು ಆಗಮಗಳಲ್ಲಿ ತಿಳಿಸಲಾಗಿದೆ. ಲಿಂಗವು ಬಿಂದು–ನಾದಾತ್ಮಕ ಹಾಗೂ ಶಿವಶಕ್ತ್ಯಾತ್ಮಕವೆಂದು ವಿವರಿಸಿ, ಚಿತ್ಕಲಾ ಸ್ವರೂಪದ ಇಷ್ಟಲಿಂಗವನ್ನು ದೇಹದ

೧೩೮. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೦೭೧ ಪುಟ ೩೬೧

ಯಾವ ಯಾವ ಭಾಗಗಳಲ್ಲಿ ಧರಿಸಬೇಕೆಂದು ಆಗಮಗಳಲ್ಲಿ ನಿರೂಪಿಸಲಾಗಿದೆ.

ಇಷ್ಟಲಿಂಗ ಧಾರಣೆ ಅಗತ್ಯತೆ, ಹಾಗೂ ಷಟ್‌ಸ್ಥಲಾತ್ಮಕವಾದ ಪೂಜಾಕ್ರಮಗಳನ್ನು ತಿಳಿಸಿ ಪೂಜೆ, ಅರ್ಚನೆ ಮುಂತಾದ ಆಚರಣೆಗಳು ಮಾನವ ಕಲ್ಯಾಣಕ್ಕಾಗಿಯೇ ಇವೆ. ಇವುಗಳಿಂದ ಭಕ್ತಿ ಮತ್ತು ಜ್ಞಾನಗಳು ಗಟ್ಟಿಗೊಳ್ಳುವವು. ತನ್ಮೂಲಕ ಕೈವಲ್ಯಪ್ರಾಪ್ತಿಯಾಗುವದು ಎಂದು ಆಗಮಗಳು ಅರುಹುತ್ತ ಇಷ್ಟಲಿಂಗದ ವೈಭವೋಪೇತ ಪೂಜೆಯನ್ನು ಮಾಡುವದು, ನೋಡುವದು ಪುಣ್ಯಕರವೆಂದು ತಿಳಿಸಿದ್ದಾರೆ. ಸಕಾಮ ಪೂಜೆಯಿಂದ ಫಲವನ್ನು ಅನುಭವಿಸಿ ಮೊದಲಿನಂತೆ ಭೂಮಂಡಲದಲ್ಲಿ ಹುಟ್ಟಬೇಕಾಗುತ್ತದೆ. ಆದರೆ ನಿಷ್ಕಾಮ ಪೂಜೆ ಶ್ರೇಷ್ಠವಾಗಿದ್ದು, ಇದರಿಂದ ಜ್ಞಾನವುಂಟಾಗಿ ಮೋಕ್ಷವನ್ನು ಪಡೆಯುತ್ತಾನೆ ಎಂದು ಪ್ರತಿಪಾದಿಸಿದೆ.

ದಿನಕ್ಕೆ ಆರು ಸಲ ಅಥವಾ ಕನಿಷ್ಠ ಮೂರು ಬಾರಿಯಾದರೂ ಇಷ್ಟಲಿಂಗಪೂಜೆಯನ್ನು ಆಚರಿಸಬೇಕೆಂದು ತಿಳಿಸಿ ಶಿವಪೂಜೆಯ ಸಮಯದಲ್ಲಿ ಪೂಜಕನು ಪೂಜಾ ಸಾಮಗ್ರಿಗಳನ್ನು ಮೊದಲೇ ಶೇಖರಿಸಿಕೊಂಡಿರಬೇಕು. ಪೂಜೆಯ ಮಧ್ಯೆ ಮನಸ್ಸು ಚಂಚಲವಾಗಬಾರದು. ವಿಷಯಾಸಕ್ತಿ ಅಳಿದಿರಬೇಕು. ದೊರೆತಷ್ಟು ಸಾಮಗ್ರಿಯಿಂದಲೇ ಭಕ್ತಿಯಿಂದ ಪೂಜೆಮಾಡಬೇಕು ಎಂದು ತಿಳಿಸಿವೆ.

ಶಿವನಿಗೆ ಅರ್ಪಿಸುವ ಹೂ, ಪತ್ರೆ, ಫಲಾದಿಗಳನ್ನು ತನ್ನ ದುಡಿಮೆಯಿಂದ ಸಂಪಾದಿಸಿರಬೇಕು ಎಂದು ಹೇಳುತ್ತಾ ಅಪವಿತ್ರನಾಗಿ, ಮನಸ್ಸು ಬೇರೆ ಪ್ರಭಾವಕ್ಕೊಳಗಾದಾಗ, ಅಕಾಲದಲ್ಲಿ, ಅನಾದರದಿಂದ ಲಿಂಗವನ್ನು ಪೂಜಿಸಬಾರದು. ಬೇರೆ ಕಾರ್ಯದಲ್ಲಿ ನಿರತನಾಗಿ ಅಥವಾ ಪ್ರಲಾಪವನ್ನು ಮಾಡುವವನಾಗಿ ಕ್ರೋಧಚಿತ್ತನಾಗಿ, ಅವಸರದಿಂದ ಲಿಂಗವನ್ನು ಪೂಜಿಸಬಾರದು ಎಂದು ಎಚ್ಚರಿಸಿವೆ.

ಆಗಮಗಳಲ್ಲಿ ಇಷ್ಟಲಿಂಗಪೂಜೆಯ ಲಘ್ವೀ, ಗುರ್ವೀ ಮತ್ತು ಮಹತೀ (ಸಂಕ್ಷಿಪ್ತ, ದೊಡ್ಡ ಮತ್ತು ಮಹತ್ತರ) ಎಂಬ ಮೂರು ವಿಧಗಳು ವರ್ಣಿಸಲ್ಪಟ್ಟಿವೆ. ಶಿವಪೂಜೆಗೆ ಯೋಗ್ಯವಾದ ಹೂವುಗಳು, ಋತುಭೇದದಿಂದ ಪುಷ್ಪವಿಶೇಷಗಳ ಸಮರ್ಪಣ, ಅವುಗಳ ಫಲ, ನಿಷಿದ್ಧ ಪತ್ರ ಪುಷ್ಪಗಳ ಬಗ್ಗೆ ಹೇಳಿ ಹೂವುಗಳನ್ನು ಮೇಲ್ಮುಖವಾಗಿಯೂ ಪತ್ರೆಗಳನ್ನು ಕೆಳಮುಖವಾಗಿ ಧರಿಸಬೇಕು. ಎಲ್ಲ ಹೂವುಗಳ ಮೇಲೆ ಬಿಲ್ವಪತ್ರೆ ಧರಿಸಬೇಕು. ಬಿಲ್ವಪತ್ರದ ಮೇಲೆ ಮತ್ತು ಭಸ್ಮದ ಮೇಲೆ ಮತ್ತೇನನ್ನೂ ಇಡ(ಧರಿಸ)ಬಾರದು ಎಂದು ಪೂಜಾ ವಿಧಾನವನ್ನು ಅರುಹಿವೆ.

ಪ್ರಾಣವು ಹೋಗುವಂತಿದ್ದರೂ ಕುಲವೇ ನಾಶವಾಗುತ್ತದೆ ಎಂಬಷ್ಟು ಮಟ್ಟಿಗೆ ಉತ್ಕಟ ಸಂಕಟ ಬಂದಾಗಲೂ ಇಷ್ಟಲಿಂಗ ಪೂಜೆಯನ್ನು ಬಿಡಬಾರದು ಎಂದು ಆಗಮಗಳು ಸ್ಪಷ್ಟವಾಗಿ ಹೇಳಿವೆ. ಅಲ್ಲದೇ ಹುಟ್ಟು ಮತ್ತು ಸಾವುಗಳಿಂದ ಅಶೌಚವು ಉಂಟಾದಾಗಲೂ ಕೂಡ ಇಷ್ಟಲಿಂಗ ಪೂಜೆಯನ್ನು ನಿಲ್ಲಿಸಬಾರದು. ಅಂತಹ ಸನ್ನಿವೇಶದಲ್ಲಿ ಉಪಾಂಶು ವಿಧಿಯಿಂದ (ಬೇರೆಯವರಿಗೆ ಕೇಳಿಸದಂತೆ ಮಂತ್ರೋಚ್ಚಾರಣೆ ಮಾಡುವದು) ಪೂಜೆಯನ್ನು ಮಾಡಬೇಕೆಂದು ಆದೇಶಿಸುತ್ತದೆ ಹಾಗೂ ಸ್ತ್ರೀಯರೂ ಸಹ ಕಡ್ಡಾಯವಾಗಿ ಇಷ್ಟಲಿಂಗ ಪೂಜೆಗೈಯಬೇಕೆಂದು ತಿಳಿಸುತ್ತದೆ.

ಇಷ್ಟಲಿಂಗ ಪೂಜೆಯಲ್ಲಿ ದಿಕ್ಕುಗಳ ನಿರ್ದೇಶ ಮಾಡಿದರೂ ಸಹ ಎಲ್ಲಾ ಬಯಕೆಗಳಿಂದ ದೂರನಾಗಿ, ಜಿತೇಂದ್ರಿಯನಾಗಿ, ಮೋಕ್ಷಾಕಾಂಕ್ಷಿಯಾದ ಜ್ಞಾನಿಗೆ ಯಾವ ದಿಕ್ಕಾದರೂ ಸರಿ ಎಂದು ತಿಳಿಸಿವೆ. ಇಷ್ಟಲಿಂಗವನ್ನು ಎಲ್ಲಾ ಪೀಠಗಳಿಗಿಂತ ಪಾಣಿಪೀಠದಲ್ಲಿಯೇ ಪೂಜಿಸುವದು ಶ್ರೇಷ್ಠವೆಂದು ತಿಳಿಸಿ ಪಾಣಿಪೀಠದ ಸ್ವರೂಪವನ್ನು ನಿರೂಪಣೆ ಮಾಡಲಾಗಿದೆ. ಪೂಜೆಗೆ ಉಚಿತವಾದ ಪತ್ರಿ ಪುಷ್ಪಗಳ ಬಗ್ಗೆ ತಿಳಿಸಿದರೂ ಸತ್ಯವೆಂಬ ಪುಷ್ಪ, ಕ್ಷಮೆಯೆಂಬ ಪುಷ್ಪ, ಇಂದ್ರಿಯನಿಗ್ರಹವೆಂಬ ಪುಷ್ಪ, ಸರ್ವಪ್ರಾಣಿಗಳಲ್ಲಿ ದಯೆಯೆಂಬ ಪುಷ್ಪ, ಉತ್ತಮ ಭಾವನೆಯೆಂಬ ಪುಷ್ಪ, ಸತ್ಯವೆಂಬ ಪುಷ್ಪಗಳಿಂದ ಲಿಂಗವನ್ನು ಅರ್ಚಿಸಬೇಕೆಂದು ತಿಳಿಸಿವೆ.

ವೀರಶೈವನು ಲಿಂಗದಲ್ಲಿ ಭಕ್ತಿ, ಲಿಂಗಪೂಜೆ, ಲಿಂಗಸೇವೆ, ಲಿಂಗಧ್ಯಾನ, ಲಿಂಗದಲ್ಲಿ ಮನವುಳ್ಳವನಾಗಿರಬೇಕು. ಕೈಗಳೆರಡೂ ಲಿಂಗೋಪಚಾರದಲ್ಲಿಬೇಕು. ಕಿವಿಗಳೆರಡು ಲಿಂಗದ ಗುಣಗಾನ ಶ್ರವಣದಲ್ಲಿ ತತ್ಪರವಾಗಿರಬೇಕು ಎಂದು ತಿಳಿಸುತ್ತಾ ಯಾವ ಜಾತಿಯವರಾದರೂ ಅವರು ಶಿವಲಿಂಗಧಾರಣೆ ಮಾತ್ರದಿಂದ ಶಿವನ ರೂಪವನ್ನೇ ಹೊಂದುತ್ತಾರೆ ಎಂದು ಪಾರಮೇಶ್ವರಾಗಮವು ಪ್ರತಿಪಾದಿಸುತ್ತದೆ.

ವೀರಶೈವನು ವಾಸ ಮಾಡುವ ನೆಲೆಯೇ ತೀರ್ಥಕ್ಷೇತ್ರ, ತಪೋಭೂಮಿ, ಶಾಂತಿಸದನ. ಅಲ್ಲಿ ಶಿವನು ಸದಾ ವಾಸಿಸುತ್ತಾನೆ. ವೀರಶೈವರು ಬೇರೆ ತೀರ್ಥಯಾತ್ರಾದಿಗಳಿಗೆ ಹೋಗಬೇಕಾಗಿಲ್ಲ. ಲಿಂಗಾಂಗಯೋಗ ಉಳ್ಳವನು ಕೈಲಾಸಾದಿ ಸ್ಥಾನಮಾನಗಳನ್ನು ಅಪೇಕ್ಷೆ ಮಾಡಬಾರದು ಎಂದು ತಿಳಿಸುತ್ತವೆ. ಹಾಗೂ ಲಿಂಗಧಾರಿಗಳು ಸದಾಚಾರಿಗಳಾಗಿರತಕ್ಕದ್ದೆಂದು ತಿಳಿಸಿ ಧರಿಸಿದ ಲಿಂಗವನ್ನು ಅಂಗದಿಂದ ಬೇರ್ಪಡಿಸಕೂಡದು ಎಂದು ತಿಳಿಸಿ ಇಷ್ಟಲಿಂಗ ವಿಯೋಗವಾದರೆ ಪ್ರಾಣ ತ್ಯಜಿಸಬೇಕೆಂದು ಬೋಧಿಸುತ್ತದೆ.

ವಚನಗಳಲ್ಲಿಯೂ ಮೂರು ಲಿಂಗಗಳ ಸ್ವರೂಪ, ಇಷ್ಟಲಿಂಗಧಾರಣೆಯ ಪ್ರಾಚೀನತೆ, ಇಷ್ಟಲಿಂಗ ಪೂಜಾ ವಿಧಾನ ನಿರೂಪಣೆಯಾಗಿದ್ದರೂ ಇಷ್ಟಲಿಂಗ ಪೂಜೆಯ ದಿಕ್ಕುಗಳ ನಿರ್ದೇಶ, ಪೂಜೆಗೆ ಉಚಿತವಾದ ಪುಷ್ಪಗಳ ವಿವರಣೆಯು ನಿರೂಪಣೆಯಾಗಿಲ್ಲ. ವಚನಗಳಲ್ಲಿ ವೈಭವೋಪೇತ ಪೂಜೆಗಿಂತ ಅಂತರಂಗಿಕವಾದ ಪೂಜೆಯ ನಿರೂಪಣೆಗಳು ಹೆಚ್ಚಾಗಿ ಕಂಡುಬರುತ್ತವೆ.

ಲಿಂಗ ವಿಯೋಗವಾದರೆ ಪ್ರಾಣ ತ್ಯಜಿಸಬೇಕೆಂಬ ಆಗಮದ ವಿಚಾರವನ್ನು ಖಂಡಿಸಿದರೂ ಸಹ ಇಷ್ಟಲಿಂಗವನ್ನು ಎಚ್ಚರಿಕೆಯಿಂದ ಸದಾಕಾಲ ಧರಿಸಿಕೊಳ್ಳಬೇಕೆಂದು ತಿಳಿಸಿವೆ. ಹೀಗೆ 'ಲಿಂಗ' ವಿಷಯ ಪ್ರತಿಪಾದನೆಯಲ್ಲಿ ಕೆಲವೇ ವ್ಯತ್ಯಾಸಗಳನ್ನು ಹೊರತುಪಡಿಸಿ, ವಚನಗಳು ಶಿವಾಗಮಗಳ ಮೂಲ ಜಾಡನ್ನು ಬಿಡದೆ ವಿಷಯ ವಸ್ತುವನ್ನು ಪ್ರತಿಪಾದಿಸಿವೆ.

೫.೧.೩ ಜಂಗಮ

ಜಂಗಮವು ವೀರಶೈವದ ವಿಶಿಷ್ಟ ಪರಿಕಲ್ಪನೆಯಾಗಿದ್ದು ಭಕ್ತೋದ್ಧಾರಕ್ಕಾಗಿ ಸದಾ ಸಂಚರಿಸುವ ಶಿವಯೋಗಿಯೇ ಜಂಗಮನೆಂದು ಕರೆಯಲ್ಪಡುತ್ತಾನೆ. ವಿರಕ್ತಿ, ಭಕ್ತಿ ಮತ್ತು ಶಿವಜ್ಞಾನಗಳ ಸಂಗಮವೇ ಜಂಗಮತತ್ವವಾಗಿದ್ದು, ಭಕ್ತರ ಆಧ್ಯಾತ್ಮಿಕ ವಿಕಾಸ ಹಾಗೂ ಲೋಕಸಂಗ್ರಹ ಕಾರ್ಯವೇ ಜಂಗಮನ ಹೊಣೆಯಾಗಿದೆ.

ಜಂಗಮದ ಶಾಬ್ದಿಕ/ತಾತ್ವಿಕ ಅರ್ಥ–

"ಚರಿಷ್ಣು ಜಂಗಮ ಚರಂ ತ್ರಸಮಿಂಗಂ ಚರಾಚರಮ್" ಎಂಬ ಅಮರಕೋಶದ ವಾಕ್ಯಾನುಸಾರವಾಗಿ 'ಸಂಚರಿಸುವವ', 'ಚಲಿಸುವವ' ಎಂಬುದು ಜಂಗಮ ಪದದ ಶಬ್ದಾರ್ಥವಾಗಿದೆ. ವೀರಾಗಮವು –

ಸರ್ವಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ।
ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೇ॥[೧]

'ಸರ್ವ ಲೋಕೋಪಕಾರಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಸಂಚಾರ ಕೈಗೊಳ್ಳುವಂತಹ ಸಾಕ್ಷಾತ್ ಶಿವನೇ ಜಂಗಮನು' ಎಂದು ತಿಳಿಸುತ್ತದೆ. ಇದನ್ನೇ ಬಸವಣ್ಣನವರು –

ಸ್ಥಾವರಭಕ್ತಂಗೆ ಸೀಮೆಯಲ್ಲದೆ ಘನಲಿಂಗಜಂಗಮಕ್ಕೆ ಸೀಮೆಯೆಲ್ಲಿಯದು?
ಅಂಬುಧಿಗೆ ಸೀಮೆಯಲ್ಲದೆ ಹರಿವ ನದಿಗೆ ಸೀಮೆಯೆಲ್ಲಿಯದು?
ಭಕ್ತಂಗೆ ಸೀಮೆಯಲ್ಲದೆ ಜಂಗಮಕ್ಕೆ ಸೀಮೆಯುಂಟೆ? ಕೂಡಲಸಂಗಮದೇವ.[೨]

ಎಂದು ಅನಿಕೇತನನಾಗಿ ಜಗದ್ಭರಿತನಾಗಿ ಸಂಚರಿಸುವವನು ಜಂಗಮ ಎಂದು ಅರ್ಥೈಸಿದ್ದಾರೆ. ಇನ್ನೊಂದು ವಿಶ್ಲೇಷಣೆಯಂತೆ ಜಂಗಮ ಶಬ್ದವು "ಗಮ್‌ಲೃಗತೌ" ಎಂಬ ಧಾತುವಿನಿಂದ ನಿಷ್ಪನ್ನವಾಗಿದ್ದು, "ಗಮ್‌ಲೃಗತೌ" ಧಾತುವಿಗೆ 'ಜ್ಞಾನ' ಎಂಬ ಅರ್ಥವೂ ಇರುವುದರಿಂದ ಜಂಗಮ ಎಂದರೆ 'ಶಿವಜ್ಞಾನಸಂಪನ್ನ' ಎಂದು ಅರ್ಥವಾಗುತ್ತದೆ. ಆದುದರಿಂದ ಆಗಮಗಳಲ್ಲಿ ಜಂಗಮನನ್ನು 'ಶಿವಜ್ಞಾನಿ, ಶಿವಯೋಗಿ' ಎಂದು ಕರೆಯಲಾಗಿದೆ. ಕಾರಣ ಜಂಗಮ ಎಂಬುದೊಂದು ಆದ್ಯಾತ್ಮಿಕ ನಿಲುವು; ಅನುಭಾವದ ತುತ್ತತುದಿಯಾಗಿದೆ. ಆ ನಿಲುವಿಗೇರಿದವರು ಯಾರೇ ಆಗಲಿ ಅವರೇ ಜಂಗಮರು. ಪಾರಮೇಶ್ವರಾಗಮವು–

ಏತದಷ್ಟಗುಣಂ ಚಿಹ್ನಂ ಯಸ್ಮಿನ್ ಮ್ಲೇಚ್ಛೇಪಿ ದೃಶ್ಯತೆ।
ಸ ಏವಾತಿ ಪ್ರಿಯೋ ಭಕ್ತೋ ಮಮ ಯೋಗೀ ಸ ಏವ ಹಿ॥[೩]

---

೧. ಅಷ್ಟಾವರಣ, ಲೇ–ಶ್ರೀಶಿವಕುಮಾರಸ್ವಾಮಿಗಳು, ಪ್ರ–ಚಿದಂಬರಾಶ್ರಮ ಶ್ರೀಸಿದ್ಧಾರೂಢಮಠ, ಬೀದರ, ೧೯೮೧, ಪುಟ ೬೧

೨. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೪೭೯ ಪುಟ ೧೧೧

೩. ಪಾ.ಆ. ಪಟಲ ೧೭, ಶ್ಲೋಕ ಸಂಖ್ಯೆ ೮೬

"ಜಂಗಮನ ಎಂಟು ಬಗೆಯ ಚಿಹ್ನೆಗಳನ್ನು ತಿಳಿಸಿ, ಈ ಎಂಟು ಗುಣಗಳಿಂದ ಕೂಡಿದವನು ಮ್ಲೇಚ್ಛನಾಗಿದ್ದರೂ ಸರಿ ಅವನು ಶಿವಯೋಗಿ" ಎಂದು ಘೋಷಿಸುತ್ತದೆ. ಒಬ್ಬ ವ್ಯಕ್ತಿ ಯಾವುದೇ ಜಾತಿಯಿಂದ ಬಂದರೂ ಗುರುವಿನಿಂದ ದೀಕ್ಷೆಯನ್ನು ಪಡೆದು ವೀರಶೈವನಾಗಿ, ಲಿಂಗಾಂಗಸಾಮರಸ್ಯವನ್ನು ಹೊಂದಿ ಜಂಗಮನಾಗಬಹುದೆಂದು ನುಡಿದಿದೆ. ಇದನ್ನೇ ಚೆನ್ನಬಸವಣ್ಣನವರು – "ಜಾತಿವಿಡಿದು ಜಂಗಮವ ಮಾಡಬೇಕೆಂಬ ಪಾತಕರು ನೀವು ಕೇಳಿರೊ; ಜಾತಿ ಘನವೊ ಗುರುದೀಕ್ಷೆ ಘನವೋ? ...ಆವ ಕುಲವಾದಡೇನು, ದೇವನೊಲಿದಾತನೆ ಕುಲಜ."[೪] ಎಂದು ಗುರುವಿನಿಂದ ದೀಕ್ಷೆ ಹೊಂದಿ ವೀರಶೈವರಾದ ಮೇಲೆ ಯಾವುದೇ ಜಾತಿಯ ಹಿನ್ನೆಲೆ ಇರಲಿ ಲಿಂಗಾಂಗಸಂಗಿಗಳಾದವರು ಜಂಗಮರು ಎಂದು ಆಗಮದ ಶ್ಲೋಕದೊಂದಿಗೆ ಸಮರ್ಥಿಸಿದ್ದಾರೆ. ಹೀಗೆ ಜಂಗಮ ಜಾತಿ, ಕುಲ, ದೇಶ, ಕಾಲಗಳ ಯಾವ ಪರಿಮಿತಿಗೂ ಬಂಧಿತನಾಗದೆ ತನ್ನ ಸಾಧನೆಯಿಂದ ಜಗದ್ಭರಿತನಾಗಿ ಬೆಳೆದ ಒಂದು ಮಹಾಚೇತನ. ಆದರೆ ವ್ಯವಹಾರದಲ್ಲಿ 'ಜಂಗಮ' ಶಬ್ದವು ಜಾತಿವಾಚಕವಾಗಿ ಬಳಸಲ್ಪಡುವದು.

ವ್ಯವಹಾರದಲ್ಲಿ ಜಂಗಮ ಶಬ್ದದ ಅರ್ಥ

'ಬ್ರಹ್ಮಜ್ಞಾನಿ'ವಾಚಕವಾದ 'ಬ್ರಾಹ್ಮಣ' ಶಬ್ದದಿಂದ ಲೋಕದಲ್ಲಿ ಯಾವ ರೀತಿ ಬ್ರಾಹ್ಮಣ ಶಬ್ದವು ಜಾತಿಬೋಧಕವಾಗಿರುವದೋ ಹಾಗೆಯೇ 'ಶಿವಜ್ಞಾನಿ'ವಾಚಕವಾದ 'ಜಂಗಮ' ಶಬ್ದದಿಂದ ಜಂಗಮವೂ ಸಹ ಜಾತಿಬೋಧಕವಾಗಿದೆ. ಆದುದರಿಂದ ವೀರಮಾಹೇಶ್ವರ ವಂಶದಲ್ಲಿ ಜನಿಸಿದವರೂ ಸಹ ಜಂಗಮರೆಂದು ಕರೆಯಲ್ಪಡುತ್ತಾರೆ. ಕಾರಣ ಚಂದ್ರಜ್ಞಾನಾಗಮ ಹಾಗೂ ಪಾರಮೇಶ್ವರಾಗಮಗಳು "ಮಾಹೇಶ್ವರ, ವೀರಮಾಹೇಶ್ವರ" ಎಂಬ ಪದಗಳು ಜಂಗಮದ ಪರ್ಯಾಯ ಹೆಸರುಗಳೆಂದು ಸಮರ್ಥಿಸುತ್ತವೆ.[೫] ಚತುರ್ವರ್ಣಗಳಲ್ಲಿ ಬ್ರಾಹ್ಮಣರಿಗೆ ಪ್ರಾಶಸ್ತ್ಯವಿರುವಂತೆ, ವೀರಶೈವ ಪರಂಪರೆಯಲ್ಲಿ ವೀರಮಾಹೇಶ್ವರ ವಂಶದಲ್ಲಿ ಹುಟ್ಟಿದ ಜಂಗಮರಿಗೂ ಸಹ ಹೆಚ್ಚು ಪ್ರಾಶಸ್ತ್ಯವಿದೆ. ಆದುದರಿಂದ ಧಾರ್ಮಿಕ ಕಾರ್ಯಗಳಲ್ಲಿ ಹಾಗೂ ಹಬ್ಬಗಳಲ್ಲಿ ಎಲ್ಲ ವೀರಶೈವರೂ ಸಹ ಸದಾಚಾರಶೀಲನಾದ ಜಂಗಮನನ್ನು ಕರೆದು ಪಾದಪೂಜಾದಿಗಳನ್ನು ಮಾಡಿ ಭೋಜನ–ದಕ್ಷಿಣೆಗಳಿಂದ ಸಂತೃಪ್ತಿಗೊಳಿಸುವರು. ಪ್ರಚಲಿತವಿರುವ ಈ ಪರಂಪರೆಯ ಅವಲೋಕನದಿಂದ ತಿಳಿಯುವುದೇನೆಂದರೆ ಈ ಜಂಗಮ ವಂಶದಲ್ಲಿ ಬಹುಪ್ರಾಚೀನಕಾಲದಿಂದಲೇ ಶಿವಜ್ಞಾನಿಗಳ ಪರಂಪರೆಯು ಬಂದಿದೆ ಎಂದರ್ಥವಾಗುತ್ತದೆ. ಜಂಗಮ ವಂಶದಲ್ಲಿ ಹುಟ್ಟಿದ ಎಲ್ಲರಿಗೂ ಆ ಬಗೆಯ ಶಿವಜ್ಞಾನದ ಅಭಾವವಿದ್ದರೂ ಸಹ ಶಿವಜ್ಞಾನಿಗಳ ಸಂತತಿ ಎನ್ನುವ ಕಾರಣದಿಂದ ಇಂದಿಗೂ ಅವರ ಮಹಿಮೆ ಲೋಕದಲ್ಲಿದೆ. ಈ ಅವಸ್ಥೆಯು ಬ್ರಾಹ್ಮಣ ಪರಂಪರೆಯಲ್ಲಿಯೂ ಸಮಾನವಾಗಿದೆ. ಎಲ್ಲ ಬ್ರಾಹ್ಮಣರೂ ಬ್ರಹ್ಮಜ್ಞಾನಿಗಳಾಗಿರುವುದಿಲ್ಲ, ಆದರೂ ಸಹ

---

೪. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೨೩೦, ಪುಟ ೪೨೬

೫. ಪಾ. ಆ. ಪಟಲ ೧೦, ಶ್ಲೋಕ ಸಂಖ್ಯೆ ೬೭–೬೮

ಬ್ರಹ್ಮಜ್ಞಾನಿಗಳ ಸಂತತಿ ಎನ್ನುವ ಕಾರಣದಿಂದ ಎಲ್ಲ ಬ್ರಾಹ್ಮಣರಿಗೂ ಗೌರವವಿದೆ. ಈ ಪ್ರಕಾರ ತಾತ್ವಿಕ ದೃಷ್ಟಿಯಿಂದ ಮತ್ತು ವ್ಯಾವಹಾರಿಕ ದೃಷ್ಟಿಯಿಂದ ಜಂಗಮ-ಬ್ರಾಹ್ಮಣ ಶಬ್ದಗಳು ಸಮಾನಾರ್ಥಕಗಳಾಗಿವೆ.

ಜಂಗಮನ ಆಧ್ಯಾತ್ಮಿಕ/ಸಾಮಾಜಿಕ ಹೊಣೆ-

ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತ ವೀರಶೈವಧರ್ಮದ ತತ್ವ, ನೀತಿ, ಆಚಾರಗಳನ್ನು ಜನರಿಗೆ ಬೋಧಿಸುವ ಹಾಗೂ ವೀರಶೈವರ ಆಚಾರ ವಿಚಾರಗಳನ್ನು ಪರಿಶೀಲಿಸುವದೇ ಜಂಗಮನ ಹೊಣೆಯಾಗಿದೆ. ಕಾರಣ ಲಿಂಗತತ್ವದ ರಹಸ್ಯವನ್ನು ಅರಿತು, ಅಳವಡಿಸಿಕೊಂಡು, ಆ ಶಿವಜ್ಞಾನವನ್ನು ಶಿಷ್ಯರಿಗೆ ತಿಳಿಸಿಕೊಡುತ್ತ, ಭಕ್ತೋದ್ಧಾರಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಶಿವಯೋಗಿಯೇ ಜಂಗಮ ಎಂದು ವಚನಕಾರರು,

> ಜಂಗಮ ಸುಳಿಹು ಎಂತಿರಬೇಕೆಂದಡೆ ತನ್ನ ನಂಬಿದ ಸಜ್ಜನ ಸದ್ಭಕರಲ್ಲಿಗೆ
> ಲಿಂಗವಾಗಿ ಗಮಿಸಿ. ತಾ ಕಂಡ ಲಿಂಗಾಂಗವನು ಅಲ್ಲಿಯೇ
> ನಿಕ್ಷೇಪಿಸಿ, ತಾ ನಿರ್ಗಮನಿಯಾದ ಸುಳಿಯಬಲ್ಲರೆ, ಜಂಗಮ ಲಿಂಗವದು.

ಎಂದಿದ್ದಾರೆ. ಗುರೂಪದೇಶಕ್ಕನುಗುಣವಾದ ಮಾರ್ಗದಲ್ಲಿ ಸಾಧಕರು ನಡೆಯುತ್ತಿರುವರೊ ಇಲ್ಲವೊ ಎಂಬುದನ್ನು ಪರೀಕ್ಷಿಸುತ್ತ, ಅವರ ಆಚಾರದಲ್ಲಿ ಲೋಪ-ದೋಷಗಳಿದ್ದರೆ ತಿದ್ದುತ್ತ, ಪ್ರಸಾದ ಪ್ರದಾನ ಮಾಡುತ್ತ ಸಂಚರಿಸುವುದೇ ಜಂಗಮನ ಕಾರ್ಯ. ಕಾರಣ ಒಂದರ್ಥದಲ್ಲಿ ಗುರುವಿಗಿಂತ ಮುಂದಿನ ನಿಲುವಿನಲ್ಲಿರುವವನು ಜಂಗಮ. ಭಕ್ತರ ಅನುಗ್ರಹಕ್ಕಾಗಿ ಗುರು ಮನೆ ಮಠಗಳನ್ನು ಕಟ್ಟಿಕೊಂಡು ಒಂದು ಕಡೆ ನೆಲೆಸಿ ತಾನು ಸಾಧನೆಯಲ್ಲಿ ಮಗ್ನನಾಗಿರುತ್ತಾನೆ. ಆದರೆ ಜಂಗಮನು ಈ ಹಂತವನ್ನು ಮೀರಿ ನಿಂತ ಸರ್ವಸಂಗಪರಿತ್ಯಾಗಿ ಎಂದು ವರ್ಣಿಸುವುದರೊಂದಿಗೆ ಗುರು-ಲಿಂಗಕ್ಕಿಂತ ಜಂಗಮನೇ ಶ್ರೇಷ್ಠವೆಂದು ಸಾರಿವೆ.

ಜಂಗಮ ಶ್ರೇಷ್ಠತೆ –

ಆಗಮಗಳು 'ಏಕಮೂರ್ತೇಸ್ತ್ರಯೋ ಭಾಗಾ ಗುರುರ್ಲಿಂಗಂ ಚ ಜಂಗಮಃ'[೬] ಎಂದು ಗುರು, ಲಿಂಗ, ಜಂಗಮರು ಪರಶಿವನ ಮೂರು ರೂಪಗಳೆಂದು ಪ್ರತಿಪಾದಿಸುತ್ತವೆ. ಪರಶಿವನೇ ಭಕ್ತೋದ್ಧಾರಕ್ಕಾಗಿ ಗುರುರೂಪದಿಂದ, ಲಿಂಗರೂಪದಿಂದ, ಜಂಗಮರೂಪದಿಂದ ಶೋಭಿಸುತ್ತಿರುವನು. ಕಾರಣ ಗುರು-ಲಿಂಗ-ಜಂಗಮರು ಅವ್ಯಕ್ತ ಪರಶಿವನ ವ್ಯಕ್ತಸ್ವರೂಪವಾಗಿರುತ್ತವೆ. ಸಚ್ಚಿದಾನಂದರೂಪ ಪರಶಿವನ ಸತ್‌ರೂಪವೆ ಗುರುವಾಗಿ, ಚಿತ್‌ರೂಪವೆ ಇಷ್ಟಲಿಂಗವಾಗಿ, ಆನಂದರೂಪವೇ ಜಂಗಮವಾಗಿ ಅಂಗನಿಗೆ ಉಪಾಸ್ಯನಾಗುತ್ತಾನೆ ಹಾಗೂ ಅವನ ಉದ್ಧಾರಕ್ಕೆ ಕಾರಣನಾಗುತ್ತಾನೆ.

ಗುರು-ಲಿಂಗ-ಜಂಗಮರು ನೆರವೇರಿಸುವ ಕ್ರಿಯಾ ಭೇದದಿಂದ ಅವರಲ್ಲಿ

---

೬ ಚಂ.ಆ.ಕ್ರಿ.ಪಾ. ಪಟಲ ೫, ಶ್ಲೋಕ ಸಂಖ್ಯೆ ೧೫

ತರತಮಭಾವನೆ ಸಹಜವೆಂಬಂತೆ ಹೊರನೋಟಕ್ಕೆ ಕಂಡುಬರುತ್ತದೆ. ಆದರೆ ಈ ತಾರತಮ್ಯ ತೋರಿಕೆಯದಾಗಿದೆ. ಗುರು–ಲಿಂಗ–ಜಂಗಮವು ಮೂಲತಃ ಒಂದೇ ತತ್ವದ ಮೂರು ರೂಪಗಳು. ಆದುದರಿಂದ ಆರಂಭದಲ್ಲಿ ಕ್ರಿಯಾಭೇದದಿಂದ ತೋರುವ ತರ–ತಮ ಭಾವವು ಸಾಮರಸ್ಯದಲ್ಲಿ ಇಲ್ಲವಾಗಿ ಎಲ್ಲವೂ ಏಕವಾಗಿ ಬಿಡುತ್ತದೆ. ಏಕೆಂದರೆ ಗುರು–ಲಿಂಗ–ಜಂಗಮರ ಮುಖ್ಯ ಉದ್ದೇಶವು ಸ್ವಸ್ವರೂಪ ಜ್ಞಾನವನ್ನು ಮರೆತ ಅಂಗವನ್ನು ಉದ್ಧರಿಸುವುದು.

ಚೆನ್ನಬಸವಣ್ಣನವರು ಸಹ ಆಗಮ ಶ್ಲೋಕವನ್ನು ಉಲ್ಲೇಖಿಸಿ ಗುರು–ಲಿಂಗ–ಜಂಗಮ ಒಂದೇ ಎಂಬ ತತ್ತ್ವವನ್ನೇ ನಿರೂಪಿಸಿದ್ದಾರೆ –

> "ಏಕಮೂರ್ತಿಸ್ತ್ರಯೋ ಭಾಗಾ ಗುರುರ್ಲಿಂಗಂತು ಜಂಗಮಃ ಎಂದುದಾಗಿ
> ಪರತರಪರಂಜ್ಯೋತಿಯಪ್ಪ ಮಹಾಲಿಂಗವೆ ಲೋಕಾನುಗ್ರಹಕ್ಕಾಗಿ
> ಅಗ್ಗಣಿಯೆ ಆಣಿಕಲ್ಲಾದಂತೆ, ಕರಗಿದ ತುಪ್ಪವೆ ಹೆತ್ತುಪ್ಪವಾದಂತೆ[೭]
> ಗುರು ಲಿಂಗ ಜಂಗಮವಾಗಿ ಪರಿಣಮಿಸಿರ್ಪುದು ಕಾಣಾ।

ಎಂದಿದ್ದಾರೆ. ಆದರೂ ಪರಶಿವನ ಈ ಮೂರೂ ರೂಪಗಳಲ್ಲಿ ಜಂಗಮವೇ ಶ್ರೇಷ್ಠವೆಂದು ಆಗಮ ಮತ್ತು ವಚನಗಳು ಪ್ರತಿಪಾದಿಸಿವೆ.

ಚಂದ್ರಜ್ಞಾನಾಗಮವು ಜಂಗಮ ಶ್ರೇಷ್ಠತೆಯನ್ನರಹುತ್ತಾ "ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಹೆಚ್ಚು ಭಕ್ತಿಯಿರುವುದು ಉತ್ತಮ ಭಕ್ತಿ; ಇಷ್ಟಲಿಂಗ ಮತ್ತು ಜಂಗಮರಲ್ಲಿ ಸಮಾನವಾದ ಭಕ್ತಿಯು ಮಧ್ಯಮ ಭಕ್ತಿ; ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಕಡಿಮೆ ಭಕ್ತಿಯಿಂದಿರುವುದು ಕನಿಷ್ಠಭಕ್ತಿ ಎನಿಸುತ್ತದೆ" ಎಂದು ಮೂರು ವಿಧದ ಭಕ್ತಿಗಳನ್ನು ನಿರೂಪಿಸಿ, "ಈ ಮೂರರಲ್ಲಿ ಮೊದಲನೆಯದಾದ ಉತ್ತಮಭಕ್ತಿಯನ್ನು ಕುಶಲನಾದವನು ಆಶ್ರಯಿಸುತ್ತಾನೆ" ಎಂದು ಪ್ರತಿಪಾದಿಸುತ್ತದೆ.

> ಚರೇಧಿಕಾರ ಸ್ವೇಷ್ಟಲಿಂಗಾದುತ್ತಮಾ ಭಕ್ತಿರುಚ್ಯತೇ।
> ಚರೇಷ್ಟಲಿಂಗಯೋಸ್ತುಲ್ಯಾ ಮಧ್ಯಮೇತಿ ನಿಗದ್ಯತೇ ॥
> ಚರೇ ನ್ಯೂನಾ ಸ್ವೇಷ್ಟಲಿಂಗಾತ್ ಕನಿಷ್ಠಾ ಭಕ್ತಿರುಚ್ಯತೇ।
> ತಸ್ಮಾದ್ಧಿ ಕುಶಲೋ ನಿತ್ಯಯುತ್ತಮಾಂ ಭಕ್ತಿಮಾಶ್ರಯೇತ್ ॥[೮]

ಗುರು–ಲಿಂಗ–ಜಂಗಮರಲ್ಲಿ ಸಾಧಕನಿಗೆ ಸಮಾನ ಭಕ್ತಿಯಿರಬೇಕಾಗಿದ್ದರೂ ಪ್ರಸ್ತುತ ಸಂದರ್ಭದಲ್ಲಿ ಜಂಗಮನ ಶ್ರೇಷ್ಠತ್ವವನ್ನು ನಿರೂಪಿಸಲು ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಹೆಚ್ಚು ಭಕ್ತಿಯಿಂದಿರುವುದು ಉತ್ತಮ ಭಕ್ತಿ ಎಂದು ಚಂದ್ರಜ್ಞಾನಾಗಮವು ತಿಳಿಸುತ್ತದೆ. ಏಕೆಂದರೆ ಲಿಂಗವು ಅಚರ ಮತ್ತು ಚರ ಎಂದು ಎರಡು ವಿಧ. ಇಷ್ಟಲಿಂಗವು ಅಚರ ಜಂಗಮ. ಅಚರಜಂಗಮವು ಎಲ್ಲಿಯೂ ಸ್ವತಂತ್ರವಾಗಿ ಸುಳಿದಾಡುವುದಿಲ್ಲ

---

೭. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೦೬೧. ಪುಟ ೩೫೭
೮. ಚಂ.ಆ. ಕ್ರಿ. ಪಾ. ಪಟಲ ೪, ಶ್ಲೋಕ ಸಂಖ್ಯೆ ೩೧–೩೨

ಮತ್ತು ಯಾರಿಗೂ ಏನನ್ನೂ ಬೋಧಿಸುವುದೂ ಇಲ್ಲ. ಆದರೆ ಶಿವಯೋಗ ಸಿದ್ಧಿಯನ್ನು ಪಡೆದ ಜಂಗಮನು ಸುಳಿದಾಡುವ ಶಿವಲಿಂಗವೇ ಆಗಿದ್ದಾನೆ. ದೀಕ್ಷಾಕಾಲದಲ್ಲಿ ಗುರುವಿನಿಂದ ಕೊಡಲ್ಪಡುವ ಇಷ್ಟಲಿಂಗವು ಶಿಲಾನಿರ್ಮಿತವಾಗಿದ್ದು, ಶಿಲೆಯಲ್ಲಿನ ಜಡತ್ವವನ್ನು ದೂರೀಕರಿಸಿ ಶಿವಕಲೆಯನ್ನು ಸಂಯೋಜಿಸಲು ಆಗಮೋಕ್ತ ವಿಧಿವಿಧಾನಗಳಿಂದ ಪ್ರಾಣಪ್ರತಿಷ್ಠಾಪನೆಯನ್ನು ಮಾಡಿದಾಗ ಅದು ಪೂಜ್ಯನೀಯವಾಗುತ್ತದೆ. ಆದರೆ ಶಿವಯೋಗಿಯಲ್ಲಿ ಶಿವನು ಸದಾ ಸನ್ನಿಹಿತನಾಗಿರುತ್ತಾನೆ. ಹೀಗೆ ಲಿಂಗದಲ್ಲಿರುವುದು ಗುರುಸಂಸ್ಕಾರಜನ್ಯ ಶಿವಚೇತನ, ಶಿವಯೋಗಿಯಾದ ಜಂಗಮದಲ್ಲಿರುವುದು ಸಹಜ ಶಿವಚೇತನ. ಆದ್ದರಿಂದಲೇ ಚಂದ್ರಜ್ಞಾನಾಗಮವು ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಭಕ್ತಿಯಿಂದಿರುವುದು ಉತ್ತಮಭಕ್ತಿ ಎಂದು ಹೇಳಿ, ಕುಶಲನಾದ ಭಕ್ತನು ಉತ್ತಮವಾದ ಭಕ್ತಿಯನ್ನು ಆಶ್ರಯಿಸುತ್ತಾನೆ. ಅರ್ಥಾತ್ ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಹೆಚ್ಚು ಭಕ್ತಿಯಿಂದಿರುತ್ತಾನೆ ಎಂದು ಪ್ರತಿಪಾದಿಸುತ್ತದೆ.

ಇನ್ನು ಲಿಂಗಪೂಜಾ ಸಮಯದಲ್ಲಿ ಗುರು, ಜಂಗಮರಿಬ್ಬರೂ ಇದ್ದಾಗ, ಯಾರಲ್ಲಿ ಪೂಜೆಯನ್ನು ಆಚರಿಸಬೇಕು? ಎಂಬ ಪ್ರಶ್ನೆ ಬಂದಾಗ ಚೆನ್ನಬಸವಣ್ಣನವರ ವಚನಗಳಲ್ಲಿ ಇದಕ್ಕೆ ಉತ್ತರ ದೊರೆಯುತ್ತದೆ. ವೀರಶೈವ ದರ್ಶನದ ಪ್ರಕಾರ ಗುರು ದೀಕ್ಷಾಮೂರ್ತಿ, ಲಿಂಗ ಪೂಜಾಮೂರ್ತಿ, ಮತ್ತು ಜಂಗಮ ಭೋಗಮೂರ್ತಿ. ಪೂಜಾ ಸಮಯದಲ್ಲಿ ಅರ್ಚನ ಅರ್ಪಣಗಳು ನಡೆಯಬೇಕು. ಅರ್ಪಣವಿಲ್ಲದೆ ಪದಾರ್ಥ ಪ್ರಸಾದವಾಗಲಾರದು. ಆದುದರಿಂದ ಪ್ರಸಾದ ಭೋಗ ಸಂದರ್ಭದಲ್ಲಿ ಜಂಗಮಮೂರ್ತಿಗೆ ಪ್ರಾಧಾನ್ಯ. ಏಕೆಂದರೆ ಅವನು ಭೋಗಮೂರ್ತಿ.

ವ್ಯವಹಾರದೃಷ್ಟಿಯಿಂದಲೂ ಇದನ್ನು ಪರಿಶೀಲಿಸಲಾಗಿ ಶಿಷ್ಯನಿಗೆ ಗುರು ತಂದೆ. ಏಕೆಂದರೆ ಶಿಷ್ಯನು ಗುರುವಿನ ಕರಕಮಲಸಂಜಾತ. ಪೂಜಾಸಮಯದಲ್ಲಿ ಮನೆಗೆ ಬಂದ ಜಂಗಮ "ಅತಿಥಿ"ಯಾಗುತ್ತಾನೆ. ನಮ್ಮ ಸಂಸ್ಕೃತಿಯಲ್ಲಿ "ಅತಿಥಿ ದೇವೋಭವ" ಎಂದು ಪರಿಗಣಿಸಲ್ಪಡುತ್ತಾನೆ. ಆದುದರಿಂದ ಅತಿಥಿಯಾದ ಜಂಗಮನಿಗೇ ಅರ್ಚನೆ ಅರ್ಪಣೆಗಳು ಸಲ್ಲಬೇಕು. ಹೀಗೆ ತಾತ್ವಿಕ ಮತ್ತು ವ್ಯವಹಾರ ಎರಡೂ ದೃಷ್ಟಿಯಿಂದ ವಿಚಾರಿಸಿದಾಗ ಜಂಗಮಕ್ಕೇ ಪ್ರಾಧಾನ್ಯವಿರುವುದರಿಂದ, ಜಂಗಮದಲ್ಲಿಯೆ ಗುರು, ಲಿಂಗಗಳ ಸಂಬಂಧವನ್ನು ಕಲ್ಪಿಸಿ ಜಂಗಮಕ್ಕೇ ಅರ್ಚನೆ ಅರ್ಪಣೆಗಳನ್ನು ಮಾಡಬೇಕಾಗುತ್ತದೆ. ಆದುದರಿಂದ ಲಿಂಗಾರ್ಪಣೆ ಲಿಂಗಪ್ರಸಾದಕ್ಕಿಂತ ಜಂಗಮಾರ್ಪಣೆ ಜಂಗಮಪ್ರಸಾದಗಳು ಮುಖ್ಯವಾಗುತ್ತವೆ. ಕಾರಣ –

> ಗುರುಸ್ಥಲ ಘನವೆಂಬೇನೇ? ಗುರುವಿಂಗೆ ಲಿಂಗವುಂಟು.
> ಲಿಂಗಸ್ಥಲ ಘನವೆಂಬೆನೇ? ಲಿಂಗಕ್ಕೆ ಜಂಗಮವುಂಟು
> ಆ ಜಂಗಮವೇ ಘನವೆಂದು ಎನ್ನ ಮನ ಕಂಡು ಹಿಡಿದಿತ್ತಾಗಿ,
> ಆ ಜಂಗಮದ ಗುಣದಿಂದೆನ್ನ ಹಿಂದಣ ಏಳೇಳು ಭವಗಳ ಸೂತಕ ಹರಿಯಿತ್ತಾಗಿ[೯]
> ನಿನ್ನಿಂದರೆ ಕಾಸೂ ಹರಿಯದು ಕಾಣಾ ಕೂಡಲಸಂಗಮದೇವಾ.

೯. ಅಷ್ಟಾವರಣ, ಲೇ–ಶ್ರೀಶಿವಕುಮಾರಸ್ವಾಮಿಗಳು, ಪ್ರ–ಚಿದಂಬರಾಶ್ರಮ ಶ್ರೀಸಿದ್ಧಾರೂಢಮಠ, ಬೀದರ, ೧೯೮೧, ಪುಟ ೬೭

ಎಂದು ಜಂಗಮನ ಶ್ರೇಷ್ಠತೆಯನ್ನು ಸಾರಿದ್ದಾರೆ. ಗುರು ಹಾಗೂ ಇಷ್ಟಲಿಂಗಕ್ಕಿಂತಲೂ ಜಂಗಮ ಶ್ರೇಷ್ಠನೆಂದು ಆಗಮ ಮತ್ತು ವಚನಗಳಲ್ಲಿ ಸಾರಲಾಗಿದೆ. ಇಂಥ ಜಂಗಮನು ಹೊಂದಿರಬೇಕಾದ ಗುಣಲಕ್ಷಣಗಳನ್ನು ಹೀಗೆ ವಿವರಿಸಲಾಗಿದೆ –

ಜಂಗಮನ ಗುಣಲಕ್ಷಣಗಳು –

ಆಗಮಗಳು ಜಂಗಮರಲ್ಲಿ ಬ್ರಹ್ಮಚಾರೀ, ಗೃಹಸ್ಥ ಮತ್ತು ನಿರಾಭಾರೀ ಎಂದು ಮೂರು ವಿಧಗಳನ್ನು ಮಾಡಿದ್ದು[೧೦] ಮೊದಲು ಜಂಗಮರ ಸಾಮಾನ್ಯ ಗುಣಲಕ್ಷಣಗಳನ್ನು ತಿಳಿಸಿ ನಂತರ ನಿರಾಭಾರಿ ಜಂಗಮನು ಹೊಂದಿರಬೇಕಾದ ಗುಣಲಕ್ಷಣಗಳನ್ನು ವಿವರಿಸಿವೆ. ಚಂದ್ರಜ್ಞಾನಾಗಮವು ಜಂಗಮನ ಹತ್ತು ಬಗೆಯ ಬಾಹ್ಯ ಲಕ್ಷಣಗಳನ್ನು ಮತ್ತು ಮೂರು ಅಂತರಂಗ ಲಕ್ಷಣಗಳನ್ನು ನಿರೂಪಿಸುತ್ತದೆ.[೧೧] ಅದರಂತೆ ೧. ಭಸ್ಮ–ರುದ್ರಾಕ್ಷ–ಇಷ್ಟಲಿಂಗವೇ ಮೊದಲಾದ ಶಿವಚಿಹ್ನೆಗಳನ್ನು ಆದರದಿಂದ ಧರಿಸಿಕೊಳ್ಳುವುದು. ೨. ಸದ್ಗುರುವಿನ ಸೇವೆಗೈಯುವದು. ೩. ಶಿವಸ್ತುತಿಯನ್ನು ಮಾಡುವುದು. ೪. ಶಿವನಾಮೋ ಚ್ಚಾರಣೆಗೈಯುವದು. ೫. ಶಿವಪೂಜೆ ಮಾಡುವದು. ೬. ಶಿವಾಗಮಗಳ ಅರ್ಥಾನುಸಂಧಾನ. ೭. ಶಿವಪುರಾಣಾದಿಗಳ ಶ್ರವಣ ಮಾಡುವದು. ೮. ಗುರು–ಜಂಗಮರಿಗೆ ನಮಸ್ಕಾರ ೯. ಶಿವಭಕ್ತರ ಮನೆಯಲ್ಲಿಯೇ ಭೋಜನ ಮಾಡುವುದು ಅಥವಾ ಶಿವಭಕ್ತರಿಗೆ ಭೋಜನವನ್ನು ಏರ್ಪಡಿಸುವುದು ೧೦. ತನ್ನ ಶಕ್ತ್ಯಾನುಸಾರವಾಗಿ ಗುರು–ಜಂಗಮರಿಗೆ ದಾನ ಮಾಡುವುದು – ಈ ಹತ್ತು ಜಂಗಮನ ಬಾಹ್ಯ ಲಕ್ಷಣಗಳು. ಹೀಗೆಯೇ

೧. ಮಾನಸೀ ಜಪ

೨. ಮಾನಸೀ ಪೂಜೆ ಮತ್ತು

೩. ಅಂತರಂಗದಲ್ಲಿ ಶಿವಸಾಕ್ಷಾತ್ಕಾರ – ಈ ಮೂರು ಜಂಗಮನ ಅಂತರಂಗ ಲಕ್ಷಣಗಳೆಂದು ಚಂದ್ರಜ್ಞಾನಾಗಮವು ತಿಳಿಸಿದರೆ ಪಾರಮೇಶ್ವರಾಗಮದ ಹದಿನೇಳನೆಯ ಪಟಲದಲ್ಲಿ ಜಂಗಮನ ಎಂಟು ಬಗೆಯ ಚಿಹ್ನೆಗಳು ಹೀಗೆ ನಿರೂಪಿತವಾಗಿದೆ.

ಯ ಏವಂ ವರ್ತತೇ ಯೋಗೀ ಸ ವೈ ಮಾಹೇಶ್ವರೋತ್ತಮಃ।
ಅಷ್ಟದಾ ಲಕ್ಷಣಂ ದೇವಿ ಶಿವಧರ್ಮಾಧಿಕಾರಿಣಃ॥
ಶಿವಭಕ್ತೇಷು ವಾತ್ಸಲ್ಯಂ ಪೂಜಾಯಾಂ ಚಾನುಮೋದನಮ್।
ಸ್ವಯಮಭ್ಯರ್ಚನಂ ಚೈವ ತದರ್ಥಂ ಚಾಂಗಚೇಷ್ಟನಮ್।
ತತ್ಕಥಾಶ್ರವಣೇ ಭಕ್ತಿಃ ಸ್ವರನೇತ್ರಾಂಗವಿಕ್ರಿಯಾಃ।
ಶಿವಾನುಸ್ಮರಣಂ ನಿತ್ಯಂ ಸರ್ವದಾ ತದಕೈತವಮ್॥[೧೨]

---

೧೦. ಚಂ.ಆ. ಕ್ರಿ. ಪಾ. ಪಟಲ ೪ ಶ್ಲೋಕ ಸಂಖ್ಯೆ ೮

೧೧. ಚಂ.ಆ. ಕ್ರಿ.ಪಾ. ಪಟಲ ೪, ಶ್ಲೋಕ ಸಂಖ್ಯೆ ೧೨–೧೯

೧೨. ಪಾ.ಆ. ಪಟಲ ೧೭, ಶ್ಲೋಕ ಸಂಖ್ಯೆ ೮೩–೮೫

"ಶಿವಭಕ್ತರಲ್ಲಿ ವಾತ್ಸಲ್ಯ, ಶಿವಪೂಜೆಗೆ ಪ್ರೋತ್ಸಾಹ ಮಾಡುವುದು, ಸ್ವಯಂ ಶಿವಪೂಜೆ ಮಾಡುವದು, ಪೂಜೆಗಾಗಿ ಶಾರೀರಿಕ ಶ್ರಮ (ಪೂಜಾ ಸಾಮಾಗ್ರಿಗಳ ಸಂಗ್ರಹಕ್ಕಾಗಿ ಶರೀರವನ್ನು ದಂಡಿಸುವುದು), ಶಿವಕಥೆಯ ಶ್ರವಣದಲ್ಲಿ ಭಕ್ತಿ, ಭಕ್ತಿಯ ಆವೇಗದಿಂದ ಸ್ವರ–ನೇತ್ರ–ಅಂಗಗಳ ಕಂಪನ, ನಿತ್ಯವು ಶಿವನ ಸ್ಮರಣೆ ಮಾಡುವುದು ಮತ್ತು ಕಪಟವಿಲ್ಲದಿರುವುದು – ಈ ಎಂಟು ಗುಣಗಳ ಚಿಹ್ನೆಯು ಯಾರಲ್ಲಿ ಕಂಡುಬರುತ್ತವೆಯೋ ಅವನೇ ಶಿವಯೋಗಿ" ಎಂದು ನಿರೂಪಿಸಿ, ನಿರಾಭಾರಿ ಜಂಗಮನು ಹೊಂದಿರಬೇಕಾದ ಗುಣಲಕ್ಷಣಗಳನ್ನು ವರ್ಣಿಸಿವೆ.

ನಿರಾಭಾರಿ ಜಂಗಮನ ಲಕ್ಷಣಗಳು –

ವೀರಾಗಮವು "ನಿಸ್ಸಂಗತ್ವ, ನಿರಾಭಾರಿತ್ವ, ನಿಸ್ಸೀಮತ್ವ, ನಿರುಪಾಧಿಕತ್ವ, ನಿರ್ದೇಹತ್ವ, ನಿರ್ಮಲತ್ವ, ನಿತ್ಯತ್ವ –ಇವೇ ಜಂಗಮದ ಲಕ್ಷಣಗಳೆಂದು ಹೇಳುತ್ತದೆ.[೧೩] ಇದನ್ನೇ ಸಂಗನಬಸವೇಶ್ವರ ಅಂಕಿತದ ಒಬ್ಬ ವಚನಕಾರ ತನ್ನ ಒಂದು ವಚನದಲ್ಲಿ ಹೀಗೆ ನಿರೂಪಿಸಿದ್ದಾನೆ:

'.......... ಜಂಗಮವೆಂತಹನೆಂದೊಡೆ–
ನಿರ್ಲೇಪ, ನಿರುಪಾಧಿಕ, ನಿರ್ಬೋಧ, ನಿರಾಶ್ರಿತ, ನಿಷ್ಕಾರಣ, ನಿರ್ಲಂಪಟ;
ಈ ಷಡ್ಗುಣಭರಿತನಾದಡೆ, ಜಂಗಮವೆಂಬೆನಯ್ಯಾ.[೧೪] ಎಂದಿದ್ದಾರೆ.

ವೀರಾಗಮವು ಜಂಗಮನ ಬಾಹ್ಯ ಲಕ್ಷಣಗಳ ಬಗ್ಗೆ ಅರಹುತ್ತ –

ಸರ್ವಪ್ರಾಣಿಹಿತಾರ್ಥಾಯ ಮುದ್ರಾಪಂಚಕ ಧಾರಿಣಃ॥
ಷಟ್ಸ್ಥಲಜ್ಞಾನವಂತಶ್ಚಾನಾದಿ ಜಂಗಮಮೂರ್ತಯಃ।

ಷಟಸ್ಥಲಗಳಲ್ಲಿ ಜ್ಞಾನವುಳ್ಳ ನಿರಾಭಾರಿ ಜಂಗಮ ಮೂರ್ತಿಗಳು ಸರ್ವಪ್ರಾಣಿ ಹಿತಕ್ಕೋಸ್ಕರ ಭಸ್ಮ, ರುದ್ರಾಕ್ಷಿ, ಕಂಥೆ, ದಂಡ, ಬಿಕ್ಷಾಪಾತ್ರೆಗಳೆಂಬ ಪಂಚಮುದ್ರೆಗಳನ್ನು ಧರಿಸಿದವನಾಗಿ ಸಂಚರಿಸುತ್ತಾನೆಂದು ಜಂಗಮನ ಬಾಹ್ಯವೇಷವನ್ನು ಕುರಿತು ತಿಳಿಸುತ್ತದೆ. ಆದರೆ ಪಾಶುಪತಾಗಮವು ಜಂಗಮನು ಧರಿಸಬೇಕಾದ ಆ ಪಂಚಮುದ್ರೆಗಳನ್ನು ವಿಶ್ಲೇಷಿಸುತ್ತಾ –

ಸಮತೈವ ಚ ಕಂಥಾ ಸ್ಯಾದ್ದಂಡೋ ಜ್ಞಾನಂ ತಥೈವ ಚ ॥
ಕಮಂಡಲುರ್ದಯೈವಾಸೀದ್ವೈರಾಗ್ಯಂ ಭೈಕ್ಷ ಪಾತ್ರಕಮ್ ।
ಕ್ಷಮೈವ ಭಸ್ಮಘಟಕಾ ತ್ವೇವಂ ಚಾಂತೇಽಪಿ ಧಾರಯೇತ್ ॥[೧೫]

೧೩. ವೀರಶೈವ ಧರ್ಮದ ಕೈಪಿಡಿ, – ಡಾ. ಎಸ್. ಸಿ. ನಂದಿಮಠ, ಅನುವಾದ – ಶ್ರೀಮತಿ ಪ್ರೇಮಾಬಾಯಿ ಮಳಿಮಠ, ಪುಟ ೪೬, ಮುದ್ರಣ ೧೯೯೬

೧೪. ವೀರಶೈವ ಧರ್ಮದ ಕೈಪಿಡಿ, – ಡಾ. ಎಸ್. ಸಿ. ನಂದಿಮಠ, ಅನುವಾದ– ಶ್ರೀಮತಿ ಪ್ರೇಮಾಬಾಯಿ ಮಳಿಮಠ, ಪುಟ ೪೫, ಮುದ್ರಣ ೧೯೯೬

೧೫. ಪಾಶುಪತಾಗಮ, ಪಟಲ ೧, ಶ್ಲೋಕ ಸಂಖ್ಯೆ ೧೪೩ – ೧೪೪

ಜಂಗಮನ ಪಂಚಮುದ್ರೆಗಳೆಂದರೆ ಸಮತೆಯೇ ಜೋಳಿಗೆ, ಶಿವಜ್ಞಾನವೇ ದಂಡ, ದಯೆಯೇ ಕಮಂಡಲು, ವೈರಾಗ್ಯವೇ ಭಿಕ್ಷಾ ಪಾತ್ರೆ, ಕ್ಷಮೆಯೇ ಭಸ್ಮದ ಗಟ್ಟಿಯಾಗಿರಬೇಕೆಂದು ತಿಳಿಸುತ್ತದೆ. ಈ ಭಾವವನ್ನೇ ವಿವರಿಸುತ್ತ ಸಿದ್ಧರಾಮರು –

ಸಮತೆಯೆಂಬ ಕಂಥೆಯ ಧರಿಸಿಪ್ಪ ನೋಡಾ ಜಂಗಮನು.
ಅಮಿತವೆಂಬ ಭಸ್ಮವ ಧರಿಸಿಪ್ಪ ನೋಡಾ ಜಂಗಮನು.
ಲಿಂಗವೆಂಬ ಕರ್ಪರವ ಕರಸ್ಥಲದಲ್ಲಿ ಧರಿಸಿಪ್ಪ ನೋಡಾ ಜಂಗಮನು.
ಸರ್ವಜೀವ ದಯಾಪಾರಿಯೆಂಬ ವಿಮಲ ರುದ್ರಾಕ್ಷಿಯ
ಧರಿಸಿಪ್ಪ ನೋಡಾ ಜಂಗಮನು.
ನಿರ್ಮೋಹವೆಂಬ ಕೌಪೀನವ ಧರಿಸಿಪ್ಪ ನೋಡಾ ಜಂಗಮನು
ನಿಸ್ಸಂಗವೆಂಬ ಮೇಖಲಾಪರಿಪೂರ್ಣ ನೋಡಾ ಜಂಗಮನು.
ಸುಮ್ಮಾನವೆ ಕಿರೀಟವಾಗಿ, ಶುದ್ದ ಜ್ಞಪ್ತಿಯೆ ಮುಕುಟವಾಗಿ,
ನಿರಹಂಕಾರವೇ ಬಹಿರ್ವಾಸಯಾಗಿ
ದುರ್ವ್ಯಸನ ದುರ್ಭ್ರಮೆ ಹೃಷೀಕೋತ್ಪಾತವಿಜಯ ಶಿವಯೋಗವಾಗಿ
ಚರಿಸುವನು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಮಹಾಜಂಗಮನು.[೧೬]

ಜಂಗಮನೆಂಬುವವನು ಅಮಿತವೆಂಬ ಭಸ್ಮ, ಸಮತೆ ಎಂಬ ಕಂಥೆ, ಸರ್ವಜೀವ ದಯಾಪಾರಿ ಎಂಬ ವಿಮಲ ರುದ್ರಾಕ್ಷಿಗಳನ್ನು ಧರಿಸಿರಬೇಕೆಂದು ವರ್ಣಿಸಿದ್ದಾರೆ.

ಪಾಶುಪತಾಗಮವು ಜಂಗಮನ ಪರಿವಾರವನ್ನು ಅತ್ಯಂತ ಮನೋಜ್ಞವಾಗಿ ವರ್ಣಿಸುತ್ತ –

ಸತೀ ವಿದ್ಯಾ ಸುತಸ್ತೋಷೋ ವೈರಾಗ್ಯಂ ಭಾಂಧವಃ ಸ್ಮೃತಃ ॥
ಕ್ಷಮೈವ ಪರಿವಾರಸ್ತು ಸಖಾ ಶಾಂತಿರಿತೀರಿತಃ ।
ಭಕ್ತಿರ್ಮಾತಾ ಸದಾಚಾರಃ ಪಿತಾ ಸತ್ಯಂ ಸುತಾ ಮತಾ ॥
ಸ್ನುಷಾ ಶ್ರದ್ಧೈವ ಸಂಪ್ರೋಕ್ತಾ ಪೌತ್ರಾ ಮೈತ್ರಾದಿ ಸದ್ಗುಣಾಃ ।
ಜ್ಞಾನಮೇವ ಶರೀರಂ ಸ್ಯಾದ್ವಿಚಾರಃ ಕ್ಷೇತ್ರ ಮೇವ ಚ ॥
ದಾಶೀ ತ್ವಹಿಂಸಾ ಸಂಪ್ರೋಕ್ತಾ ದಾಸಸ್ತ್ವಾಸ್ಥಾ ತಥೈವ ಚ ।
ಧರ್ಮೋ ವಾಹನಮಿತ್ಯುಕ್ತಂ ತ್ವಾಚಾರೋ ದಮ ಏವ ಚ ॥
ಮುಕ್ತಿ ರೇವ ಪರೋ ದೇಶ ಇತಿ ನಿಶ್ಚಿತಧೀಃ ಸದಾ।[೧೭]

ಜಂಗಮನಿಗೆ ವಿದ್ಯೆಯೇ ಸತಿ, ಸಂತೋಷವೇ ಮಗ, ವೈರಾಗ್ಯವೇ ಬಂಧುಗಳು, ಕ್ಷಮೆಯೇ ಸೇವಕರು, ಶಾಂತಿಯೇ ಮಿತ್ರ, ಭಕ್ತಿಯೇ ತಾಯಿ, ಸದಾಚಾರವೇ ತಂದೆ,

---

೧೬. ಸಮಗ್ರ ವಚನ ಸಂಪುಟ ೪, ವ.ಸಂ. ೧೭೬೩ ಪುಟ ೫೦೨

೧೭. ಪಾಶುಪತಾಗಮ, ಪಟಲ ೧, ಶ್ಲೋಕ ಸಂಖ್ಯೆ ೧೩೭ – ೧೪೧

ಸತ್ಯವೇ ಮಗಳು, ಶ್ರದ್ಧೆಯೇ ಸೊಸೆ, ಮೈತ್ರೀ, ಕರುಣಾ ಮಂದಿತೆ ಮತ್ತು ಉಪೇಕ್ಷೆ ಎಂಬ ಸದ್ಗುಣಗಳೇ ಮೊಮ್ಮಕ್ಕಳು, ಜ್ಞಾನವೇ ಶರೀರ, ವಿಚಾರವೇ ಕ್ಷೇತ್ರ, ಅಹಿಂಸೆಯೇ ದಾಸಿ, ನಂಬುಗೆಯೇ ದಾಸ, ಧರ್ಮವೇ ವಾಹನ, ಆಚಾರವೇ ಧರ್ಮ, ಮುಕ್ತಿಯೇ ಗಮ್ಯಸ್ಥಾನ ಎಂಬ ವಿಚಾರವು ಅವನಿಗೆ ದೃಢಪಟ್ಟಿರುತ್ತದೆ ಎಂದು ಅತ್ಯಂತ ಮನೋಹರವಾಗಿ ಜಂಗಮನ ಗುಣಶೀಲಗಳನ್ನು ವರ್ಣಿಸುತ್ತದೆ. ಅಲ್ಲದೇ ಸರ್ವಸಂಗ ಪರಿತ್ಯಾಗಿಯಾದ ನಿರಾಭಾರಿ ಜಂಗಮರಾದವರಿಗೆ ಸ್ತ್ರೀಸಂಗ ಸಲ್ಲದೆಂಬ ಆಗಮದ ಅಭಿಪ್ರಾಯವನ್ನು ವಚನಕಾರರು ತಮ್ಮ ವಚನದಲ್ಲಿ ಉಲ್ಲೇಖಿಸುತ್ತ –

> ಜಟೆಯಾಗಲಿ, ಮುಡಿಯಾಗಲಿ, ಶಿಖಿಯಾಗಲಿ, ಪಂಚಮುದ್ರೆ
> ಪರಿಪೂರ್ಣವಾಗಿಹ ಜಂಗಮವಾಗಲಿ, ಪ್ರಮಾದವಶದಿಂದ ಮೈಥುನವ
> ಮಾಡಿದನಾದಡೆ ಅವರ ಶಿವದ್ರೋಹಿಗಳೆಂದುದು ನೋಡಾ.
> ಇದಕ್ಕೆ **ಶಿವಾಗಮೇ:**
> "ಜಟೀ ಮುಂಡೀ ಶಿಖೀ ವಾಪಿ ಮುದ್ರಾಪಂಚಕ ಭೂಷಿತಂ।
> ಪ್ರಮಾದೇ ಮೈಥುನಂ ಕುರ್ಯಾತ್ ಶಿವದ್ರೋಹೀನ ಸಂಶಯಃ॥ಇಂತೆಂದುದಾಗಿ,"[೧೮]

ಎಂದು ಆಗಮೋಲ್ಲೇಖಗಳೊಂದಿಗೆ ಜಂಗಮನು ಎಲ್ಲ ಮೋಹಪಾಶ, ವಾಸನಾದಿಗಳಿಂದ ವಿಮುಕ್ತನಾಗಿರಬೇಕು. ಆಸೆಯ ಧಿಕ್ಕರಿಸಿ ನಿರಾಸೆಯನಿಂಬುಗೊಂಡವನೇ ಮಹಾಜಂಗಮನೆಂದು ತಿಳಿಸುತ್ತದೆ.

ಸೂಕ್ಷ್ಮಾಗಮದಲ್ಲಿ ಪರಶಿವನು ಪಾರ್ವತಿಗೆ ಜಂಗಮನು ಪಾಲಿಸಬೇಕಾದ ನಿಯಮಾಚರಣೆಗಳನ್ನು ಕುರಿತು ಉಪದೇಶಿಸುತ್ತಾ –

> ಕಾಮಕ್ರೋಧಾದಿರಹಿತಃ ಶಿವಜ್ಞಾನೀ ಜಿತೇಂದ್ರಿಯಃ।
> ಜಂಗಮಸ್ತು ಚರೇದ್ಭಿಕ್ಷಾಂ ಯಾವತ್ ಸ್ವೋದರಪೂರಣಮ್
> ಚರೇನ್ಮಾಧುಕರೀಂ ಭಿಕ್ಷಾಂ ನಿರಾಭಾರೋ ದಯಾಪರಃ।
> ಏಕಾನ್ನಂ ತು ನ ಚಾಶ್ನೀಯಾದ ದೇವಿ ತದ್ದೋಷಕೃದ್ಯತಃ
> ಯಥಾ ಮಧುಕರಃ ಪುಷ್ಪಾನ್ಮಧು ಗೃಹ್ಣಾತಿ ಪಾರ್ವತಿ।
> ತಥಾ ಗೃಹಸ್ಥಾದ್ಭಿಕ್ಷೇತ ಉಪವಾಸಸಮೋ ವಿಧಿಃ
> ನ ವಸ್ತುಸಂಗ್ರಹಂ ಕುರ್ಯಾದ್ಯತ್ರ ಕುತ್ರಾಪಿ ಜಂಗಮಃ।
> ದತ್ತಂ ದದ್ಯಾಚ್ಚ ಭಕ್ತೇಭ್ಯೋ ದರಿದ್ರೇಭ್ಯೋ ದಯಾನ್ವಿತಃ
> ಸುವರ್ಣರತ್ನಧಾನ್ಯಾದಿ ವಸ್ತುವೃದ್ಧ್ಯುಪಜೀವನಾತ್।
> ಅತ್ಯಾಶ್ರಮೀ ಯದಿ ಚರೇತ್ ಸೋಽಯಂ ಪಾತಕಿನಾಂ ವರಃ
> ಛಿನ್ನಭಿನ್ನಾದಿದುಷ್ಟಂ ಚ ಯದ್ವಲ್ಲಿಂಗಂ ನ ಪೂಜ್ಯತೇ ।
> ಲಿಂಗಾಚಾರವ್ರತಭ್ರಷ್ಟೋ ಜಂಗಮಸ್ತು ನ ಪೂಜ್ಯತೇ॥[೧೯]

---

೧೮. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ ೮, ವಚನ ಸಂಖ್ಯೆ ೭೭೨. ಪುಟ ೩೪೯

೧೯. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೬೮–೭೩, ೭೬

ಶಿವಭಕ್ತಿ ಶಿವಜ್ಞಾನಂ ಶಿವಮುದ್ರಾ ಶಿವವ್ರತಮ್ ।
ಶಿವಲಿಂಗಾರ್ಚನಂ ಶ್ರದ್ಧಾವೃತ್ಯಂತರನಿರೋಧನಮ್ ।
ಏತೇ ಧರ್ಮಾ ಯತ್ರ ಸಂತಿ ಸ ಭಾರಾಭಾರವರ್ಜಿತಃ॥[೨೦]

ಜಂಗಮನು ಕಾಮ ಕ್ರೋದಾಧಿಗಳಿಂದ ರಹಿತನಾಗಿ, ಶಿವಜ್ಞಾನಿಯಾಗಿ, ಜಿತ್ರೇಂದ್ರಿಯನಾಗಿರಬೇಕು. ಹೊಟ್ಟೆ ತುಂಬುವ ಮಟ್ಟಿಗೆ ಮಾತ್ರ ಭಿಕ್ಷೆಯನ್ನು ಬೇಡಬೇಕು. ದಯಾಪರನಾದ ಜಂಗಮನು ಮಧುಕರಿ ಭಿಕ್ಷೆಗೆ ಹೋಗಬೇಕು. ಒಂದೇ ಮನೆಯಲ್ಲಿ ಭಿಕ್ಷಾನ್ನವನ್ನು ಸ್ವೀಕಾರ ಮಾಡಬಾರದು, ಅದು ದೋಷವಾಗುತ್ತದೆ. ದುಂಬಿಯು ಹೂವಿನಿಂದ ಹೂವಿಗೆ ಹಾರಿ ಮಧುವನ್ನು ಪಡೆಯುವಂತೆ, ನಿರಾಭಾರಿಯು ಮನೆಮನೆಗೂ ಹೋಗಿ ಭಿಕ್ಷಾಟನೆಯನ್ನು ಮಾಡಬೇಕು. ಅದು ಉಪವಾಸ ವಿಧಿಗೆ ಸಮವಾಗುತ್ತದೆ. ಜಂಗಮನು ಎಲ್ಲಿಯೂ ಯಾರಲ್ಲಿಯೂ ವಸ್ತುಸಂಗ್ರಹವನ್ನು ಮಾಡಬಾರದು. ಒಂದು ವೇಳೆ ಭಕ್ತರು ಕೊಟ್ಟರೆ ದಯಾನ್ವಿತನಾಗಿ ಭಕ್ತರಿಗೂ ಬಡವರಿಗೂ ಕೊಟ್ಟು ಬಿಡಬೇಕು. ಅತ್ಯಾಶ್ರಮಿಯಾದ ಜಂಗಮನು ತನ್ನ ಉಪಜೀವನಕ್ಕಾಗಿ ಚಿನ್ನ, ರನ್ನ, ಧಾನ್ಯಾದಿ ವಸ್ತುಗಳನ್ನು ಹೆಚ್ಚು ಹೆಚ್ಚು ಸಂಗ್ರಹಿಸಿದರೆ, ಅವನಿಗಿಂತ ಪಾಪಿಯು ಬೇರೆ ಯಾರೂ ಇಲ್ಲ. ಭಿನ್ನ-ಭಿನ್ನವಾಗಿ ದೋಷಯುತವಾದ ಲಿಂಗವು ಪೂಜೆಗೆ ಯೋಗ್ಯವಾಗದಿರುವಂತೆ, ಲಿಂಗಾಚಾರ-ಲಿಂಗವ್ರತ ಭ್ರಷ್ಟನಾದ ಜಂಗಮನು ಪೂಜ್ಯನಾಗುವುದಿಲ್ಲ. ಶಿವಭಕ್ತಿ, ಶಿವಜ್ಞಾನ, ಶಿವಮುದ್ರೆ, ಶಿವವ್ರತ, ಶಿವಲಿಂಗಪೂಜೆಯಲ್ಲಿ ಶ್ರದ್ಧೆ, ಚಿತ್ತವೃತ್ತಿಯ ನಿರೋಧ, ಈ ಎಲ್ಲ ಧರ್ಮಾಚರಣೆಗಳು ಯಾರಲ್ಲಿರುತ್ತವೆಯೋ ಅವರೇ ವಾಸ್ತವಿಕವಾಗಿ ನಿರಾಭಾರಿ ವೀರಶೈವರು (ಜಂಗಮರು). ಲಿಂಗನಿಷ್ಠೆಯಿಲ್ಲವಾದರೆ ಜಂಗಮನು ಭ್ರಷ್ಟನೆನಿಸಿಕೊಳ್ಳುತ್ತಾನೆ. ಅಪೂಜ್ಯನಾಗುತ್ತಾನೆ. ಅವನಲ್ಲಿ ವಿನಯಭಾವ, ಶಿವಭಾವಗಳಿರಬೇಕೆಂದು ಆಗಮಗಳು ತಿಳಿಸುತ್ತವೆ. ಹೀಗೆ ಆಗಮ ಮತ್ತು ವಚನಗಳಲ್ಲಿ ಜಂಗಮನು ಸರ್ವಸಂಗ ನಿವೃತ್ತನೂ, ತತ್ವಾರ್ಥಬೋಧಕನೂ, ಲಿಂಗನಿಷ್ಠೆಯುಳ್ಳವನೂ ಆಗಿರಬೇಕೆಂದು ತಿಳಿಸುತ್ತವೆ. ಇಂಥ ಗುಣಲಕ್ಷಣಗಳನ್ನುಳ್ಳ ಜಂಗಮನು ಸಾಕ್ಷಾತ್ ಶಿವಸ್ವರೂಪಿಯಾಗಿದ್ದುದರಿಂದ ಜಂಗಮನನ್ನು ಉಪೇಕ್ಷಿಸಕೂಡದೆಂದು ತಿಳಿಸುತ್ತವೆ.

ಜಂಗಮನ ಉಪೇಕ್ಷೆ ಸಲ್ಲದು

ಜಂಗಮನ ಬಾಹ್ಯ ವೇಷವನ್ನು ಕಂಡು ಇವನು ಉತ್ತಮ, ಮಧ್ಯಮ ಎಂದು ಪರಿಗಣಿಸಬಾರದೆಂದು ವಚನಗಳು ತಿಳಿಸುತ್ತ –

"ಉತ್ತಮ ಮಧ್ಯಮ ಕನಿಷ್ಟವೆಂದು ಬಂದ ಜಂಗಮವನೆಂದೆನಾದಡೆ ನೊಂದೆನಯ್ಯಾ,
ಬೆಂದೆನಯ್ಯಾ, ಎನ್ನ ಕಿಚ್ಚು ಎನ್ನ ಸುಟ್ಟಿತ್ತು
ಸುಖಿಜಂಗಮ, ಸಾಮಾನ್ಯ ಜಂಗಮ ಉಂಟೆ ಕೂಡಲಸಂಗಮದೇವ?"[೨೧]

---

೨೦. ಸೂ.ಆ, ಪಟಲ ೭, ಶ್ಲೋಕ ಸಂಖ್ಯೆ ೭೯

೨೧. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೪೦೧, ಪುಟ ೯೭

ಎಂದು ಹೊರವೇಷಕ್ಕೆ ಮಹತ್ವ ಕೊಟ್ಟು ಜಂಗಮರನ್ನು ವರ್ಗೀಕರಿಸಬಾರದೆಂದು ಬಸವಣ್ಣವನರು ಹೇಳಿದ್ದಾರೆ. ಇದನ್ನೇ–

" ಉಟ್ಟು–ತೊಟ್ಟು ಪೂಜ್ಯನಾಗಿ ಬಂದ ಜಂಗಮ ವಿಶೇಷವೆಂದು
ಕಂತೆ–ಬೊಂತೆಯ ಜಂಗಮ ಬಂದೆಡೆ ಹೀನವೆಂದು
ಕಂಡೆನಾದಡೆ ಪಂಚಮಹಾಪಾತಕ"[೨೨]

ಎಂದು ನುಡಿದು ಜಂಗಮ ಸಾಕ್ಷಾತ್ ಶಿವಸ್ವರೂಪನಾಗಿರುವುದರಿಂದ ಆತನ ಉಪೇಕ್ಷೆ ಸಲ್ಲದೆಂದು ತಿಳಿಸುತ್ತವೆ. ಅಲ್ಲದೇ ಅವರನ್ನು ಸಾಮಾನ್ಯಜನರೆಂದು ತಿಳಿದು ಅವಮಾನಿಸಬಾರದೆಂದು ಆಗಮಗಳು ತಿಳಿಸುತ್ತಾ–

ಯಥಾ ವಹ್ನಿಸಮಾವೇಶಾದಯೋ ಭವತಿ ಕೇವಲಮ್।
ತಥೈವ ಶಿವಸಾನ್ನಿಧ್ಯಾನ್ನ ತೇ ಕೇವಲಮಾನುಷಾಃ ॥
ಹಸ್ತಪಾದಾದಿಸಾಧರ್ಮ್ಯಾದ್‌ರುದ್ರಾನ್ ಮರ್ತ್ಯವಪುರ್ಧರಾನ್।
ಪ್ರಾಕೃತಾನಿವ ಮನ್ವಾನೋ ನಾವಜಾನೀತ ಪಂಡಿತಃ ॥
ಅವಜ್ಞಾನಂ ಕೃತಂ ತೇಷಾಂ ನರೈರ್ವಾ ಮೂಢಮಾನಸೈಃ।
ಆಯುಃ ಶ್ರಿಯಂ ಕುಲಂ ಶೀಲಂ ಹೃತ್ವಾ ನಿರಯಮಾವಹೇತ್ ॥
ಬ್ರಹ್ಮವಿಷ್ಣುಮಹೇಂದ್ರಾಣಾಮಪಿ ತೂಲಾಯತೇ ಪದಮ್।
ಶಿವಾದನ್ಯದ (ನ್ಯಾನ) ಪೇಕ್ಷಣಾಮುತ್ತಮಾನಾಂ ಮಹಾತ್ಮನಾಮ್ ॥
ಶಿವಜ್ಞಾನವತಾಂ ಪುಂಸಾಂ ಮೋಕ್ಷಸ್ತಸ್ಯ ಕರಾಂಬುಜೇ।[೨೩]

ಹೇಗೆ ಬೆಂಕಿಯ ಸಂಪರ್ಕದಿಂದ ಲೋಹವು ಕೇವಲ ಬೆಂಕಿಯ ರೂಪವನ್ನೇ ಹೊಂದುವುದೋ ಹಾಗೆಯೇ ಶಿವಸ್ಮರಣೆಯಿಂದ ಶಿವಯೋಗಿಗಳು ಸ್ವಯಂ ರುದ್ರರೇ ಆಗಿರುವರು. ಮರ್ತ್ಯದೇಹವನ್ನು ಧರಿಸಿದ ಶಿವಯೋಗಿಗಳನ್ನು ಕೈ–ಕಾಲು ಮುಂತಾದವುಗಳ ಸಾಮ್ಯದಿಂದ ಸಾಮಾನ್ಯ ಜನರೆಂದು ತಿಳಿದು ಅವಮಾನಿಸಬಾರದು. ಮೂರ್ಖರಾದ ನರರಿಂದ ಮಾಡಲ್ಪಟ್ಟ ಅವರ ಅನಾದರವು ಆಯಸ್ಸು, ಸಂಪತ್ತು, ಕುಲ, ಶೀಲಗಳನ್ನು ನಾಶಗೊಳಿಸಿ ನರಕಕ್ಕೆ ಕೊಂಡೊಯ್ಯುವುದು. ಶಿವಪದವನ್ನು ಹೊರತಾಗಿ ಏನನ್ನೂ ಅಪೇಕ್ಷಿಸದ ಉತ್ತಮ ಮಹಾತ್ಮರಿಗೆ ಬ್ರಹ್ಮ, ವಿಷ್ಣು, ಇಂದ್ರರ ಪದವಿಗಳೂ ತುಚ್ಛವಾಗಿ ಕಾಣುತ್ತವೆ. ಈ ತರಹ ಶಿವಜ್ಞಾನಸಂಪನ್ನರಾದ ವ್ಯಕ್ತಿಗಳಿಗೆ ಮೋಕ್ಷವು ಅವರ ಕೈಯಲ್ಲೇ ಇರುತ್ತದೆ. ಕಾರಣ –

ಭಕ್ತೈರ್ಗೃಸ್ಥೈಃ ಸಂಪೂಜ್ಯ ಏತೇ ಮಾಹೇಶ್ವರಾ ಜನಾಃ।
ಏತಾನ್ವಿನಾ ಕೃತಾ ಪೂಜಾ ನಿತರಾಂ ನಿಷ್ಫಲಾ ಭವೇತ್॥[೨೪]

---

೨೨. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೪೧೨, ಪುಟ ೯೯
೨೩. ಪಾ.ಆ. ಪಟಲ ೧೨ ಶ್ಲೋಕ ಸಂಖ್ಯೆ ೪೧–೪೫
೨೪. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೭೧

ಜಂಗಮಂ ದ್ವೇಷ್ಟಿ ಯೋ ಮೋಹಾತ್ ಸ ತು ಮಾಂ ದ್ವೇಷ್ಟಿ ಶಾಂಕರಿ। [೨೫]

ಗೃಹಸ್ಥರಾದ ಸದ್ಭಕ್ತರು ಮಾಹೇಶ್ವರರನ್ನು (ಜಂಗಮರನ್ನು) ಪೂಜಿಸಬೇಕು. ಈ ಜಂಗಮರನ್ನು ಪೂಜಿಸದೇ ಮಾಡಿದ ದೇವಪೂಜೆಯು ಸಂಪೂರ್ಣ ನಿಷ್ಫಲವಾಗುತ್ತದೆ. ಅರಿಯದೆ ಜಂಗಮನನ್ನು ದ್ವೇಷಿಸುವವನು ಶಿವದ್ವೇಷಿಯೂ ಆಗುತ್ತಾನೆ ಎಂದು ಪ್ರತಿಪಾದಿಸಿವೆ. ಇದೇ ಅಭಿಪ್ರಾಯವನ್ನು ವಚನಗಳಲ್ಲಿಯೂ ಕಾಣಬಹುದು.

“ನಿಮ್ಮ ಜಂಗಮವ ಕಂಡು ಉದಾಸೀನವ ಮಾಡಿದಡೆ, ಒಂದನೆಯ ಪಾತಕ.
ನಿಮ್ಮ ಜಂಗಮದ ಸಮಯೋಚಿತವ ನಡೆಸದಿದ್ದಡೆ ಎರಡನೆಯ ಪಾತಕ.
ನಿಮ್ಮ ಜಂಗಮದ ಕೂಡೆ ಮಾರುತ್ತರವ ಕೊಟ್ಟಡೆ ಮೂರನೆಯ ಪಾತಕ.
ನಿಮ್ಮ ಜಂಗಮದ ಸಕಲಾರ್ಥಕ್ಕೆ ಸಲ್ಲದಿದ್ದಡೆ ನಾಲ್ಕನೆಯ ಪಾತಕ
ನಿಮ್ಮ ಜಂಗಮಕ್ಕೆ ಮಾಡಿದೆನೆಂದು ಮನದಲ್ಲಿ ಹೊಳೆದಡೆ ಐದನೆಯ ಪಾತಕ
ನಿಮ್ಮ ಜಂಗಮವು ಅಂಥವರಿಂಥವರೆಂದು ನುಡಿದಡೆ ಆರನೆಯ ಪಾತಕ
ನಿಮ್ಮ ಜಂಗಮವೆ ಲಿಂಗವೆಂದು ನಂಬದಿದ್ದಡೆ ಏಳನೆಯ ಪಾತಕ
ನಿಮ್ಮ ಜಂಗಮದ ಕೂಡೆ ಸುಖಸಂಭಾಷಣೆಯ ಮಾಡದಿದ್ದಡೆ,
ಎಂಟನೆಯ ಪಾತಕ
ನಿಮ್ಮ ಜಂಗಮಕ್ಕೆ ಸಕಲ ಪದಾರ್ಥವನೀಡದೆ,
ತನ್ನ ಲಿಂಗಕ್ಕೆ ಕೊಡುವುದು ಒಂಭತ್ತನೆಯ ಪಾತಕ
ನಿಮ್ಮ ಜಂಗಮದ ಪಾದೋದಕ, ಪ್ರಸಾದವನು ತಂದು,
ತನ್ನ ಲಿಂಗಕ್ಕೆ ಕೊಟ್ಟು ಕೊಳದಿಹುದು ಹತ್ತನೆ ಪಾತಕ
ಇಂತೀ ಹತ್ತು ಪಾತಕ ಕಳೆದಲ್ಲದೆ, ಭಕ್ತನಲ್ಲ, ಮಹೇಶ್ವರನಲ್ಲ, ಪ್ರಸಾದಿಯಲ್ಲ,
ಪ್ರಾಣಲಿಂಗಿಯಲ್ಲ, ಶರಣನೈಕ್ಯನೆಂತೂ ಆಗಲರಿಯ.
ಇದು ಕಾರಣ ಕೂಡಲಚೆನ್ನಸಂಗಮದೇವಾ
ಭಕ್ತಹೀನ ಜಡಜೀವಿಗಳು ನಿಮಗೆಂದೂ ದೂರವಯ್ಯಾ। [೨೬]

ಎಂದಿದ್ದಾರೆ. ಕಾರಣ ಸಾಕ್ಷಾತ್ ಶಿವಸ್ವರೂಪಿಯಾದ ಜಂಗಮ ಸಂತೃಪ್ತಿಯೇ ಲಿಂಗ ಸಂತೃಪ್ತಿಯೆಂದು ಆಗಮ ಮತ್ತು ವಚನಗಳಲ್ಲಿ ಪ್ರತಿಪಾದಿಸಲಾಗಿದೆ.

ಜಂಗಮ ತೃಪ್ತಿಯೇ ಲಿಂಗ ತೃಪ್ತಿ

‘ಜಂಗಮಕ್ಕೆರೆದರೆ ಸ್ಥಾವರ ನೆನೆಯಿತು’ ಎಂಬಂತೆ ‘ಲಿಂಗದ ಮುಖವೇ ಜಂಗಮ’ ಆಗಿದ್ದಾನೆ. ಶಿವಯೋಗಿಯೂ, ಶಿವಸ್ವರೂಪಿಯೂ ಆದ ಜಂಗಮನು ಸಂತೃಪ್ತನಾದರೆ

---

೨೫. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೭೮
೨೬. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೩೧೨, ಪುಟ.೪೬೫

ಶಿವನು ಸಂತೃಪ್ತ. ಅದರಿಂದ ಸ್ಥಾವರ ಜಂಗಮಾತ್ಮಕವಾದ ಪ್ರಪಂಚವೆಲ್ಲವೂ ತೃಪ್ತಿಹೊಂದುವುದು.

'ಅಗ್ನಿಯಾಧಾರದಲ್ಲಿ ಕಬ್ಬಿಣ ನೀರುಂಬುದಯ್ಯಾ,
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ,
ಜಂಗಮಕ್ಕೆ ಅಪ್ಯಾಯನವಾದರೆ ಲಿಂಗಸಂತೃಪ್ತಿಯಹುದಯ್ಯಾ'

ಎಂದು ಚೆನ್ನಬಸವಣ್ಣನವರೂ ಲಿಂಗಕ್ಕೆ ಸಂತೃಪ್ತಿಯಾಗಬೇಕಾದರೆ ಅದು ಜಂಗಮದ ಮೂಲಕವೇ ಎಂದು 'ಲಿಂಗವೇ ಕ್ಷೇತ್ರ, ಜಂಗಮವೇ ಬೀಜ' ಎಂದಿದ್ದಾರೆ. ಕಾರಣ ಚಂದ್ರಜ್ಞಾನಾಗಮದಲ್ಲಿ "ಮಂತ್ರ ಸಾಮರ್ಥ್ಯದಿಂದ ಶಿವಸ್ವರೂಪವನ್ನು ಆವಾಹಿಸಲ್ಪಟ್ಟ ಇಷ್ಟಲಿಂಗವನ್ನು ಮಾಂತ್ರಿಕ ಜಂಗಮನೆಂದೂ, ಮಾಹೇಶ್ವರನನ್ನು ಸಹಜ ಜಂಗಮನೆಂದು ಕರೆಯಲಾಗಿದೆ.[೨೭] ಲಿಂಗ ಜಂಗಮರ ಅಭೇದ್ಯ ಸಂಬಂಧವನ್ನು ಸಿದ್ಧರಾಮರು ಹೀಗೆ ಹೇಳಿದ್ದಾರೆ : "ಸಕ್ಕರೆಯ ಬಿಟ್ಟು ರುಚಿಯ ತೆಗೆಯಬಹುದೇ? ಬೆಣ್ಣೆಯ ಬಿಟ್ಟು ಘೃತವ ತೆಗೆಯಬಹುದೇ? ಭೂಮಿಯ ಬಿಟ್ಟು ಜಗವ ಮಾಡಬಹುದೇ? ಜಂಗಮ ವಿರಹಿತ ಲಿಂಗವಿಲ್ಲ; ಲಿಂಗವಿರಹಿತ ಜಂಗಮವಿಲ್ಲ ಕೇಳಾ ಕಪಿಲಸಿದ್ಧ ಮಲ್ಲಿಕಾರ್ಜುನ"[೨೮] ಎಂದಿದ್ದಾರೆ. ಬಸವಣ್ಣನವರು ಲಿಂಗ ಮತ್ತು ಜಂಗಮ ಸಂಬಂಧವನ್ನು ವೃಕ್ಷ ಮತ್ತು ಬೇರಿಗೆ ಹೋಲಿಸುತ್ತಾ–"ಮರಕ್ಕೆ ಬೇರು ಬಾಯಿಯೆಂದು ತಳಯಿಂಕೆ ನೀರನೆರೆದಡೆ ಮೇಲೆ ಪಲ್ಲವಿಸಿತ್ತು ನೋಡಾ. ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡದಡೆ ಮುಂದೆ ಸಕಳಾರ್ಥವನೀವನು"[೨೯] ಎಂದು ತಳಕ್ಕೆ ನೀರೆರೆದರೆ ವೃಕ್ಷ ಮೇಲೆ ಪಲ್ಲವಿಸುವಂತೆ, ಲಿಂಗದ ಮುಖ ಜಂಗಮ. ಜಂಗಮಕ್ಕೆರೆದರೆ ಸ್ಥಾವರ ನೆನೆಯುತ್ತದೆ ಎಂದಿದ್ದಾರೆ. ಇದನ್ನೇ ಚೆನ್ನಬಸವಣ್ಣನವರು –

"ಶ್ರೀ ಗುರು ಸಾಹಿತ್ಯಸಂಬಂಧವ ಮಾಡುವಲ್ಲಿ;.............
ವೃಕ್ಷದ ಆಧಾರವೇ ಪೃಥ್ವಿ, ಪೃಥ್ವಿಯೆ ಜಂಗಮ, ಶಾಖೆಯೆ ಲಿಂಗವು
ದೇಹದ ಮೇಲೆ ಸಕಲ ಪದಾರ್ಥಂಗಳ ತಂದಿರಿಸಿದಡೆ ತೃಪ್ತಿಯಹುದೆ?
ಮುಖವ ನೋಡಿ ಒಳಯಿಂಕೆ ನೀಡಬೇಕಲ್ಲದೆ.
ಅದು ಕಾರಣವಾಗಿ–ಅವಯವಂಗಳು ಕಾಣಲ್ಪಟ್ಟ ಮುಖವುಳ್ಳುದೆ ಜಂಗಮ,
ದೇಹವೆ ಲಿಂಗ, ಲಿಂಗವೆಂಬುದು ಜಂಗಮದೊಂದಂಗ ಕಾಣಾ,
ಕೂಡಲಚೆನ್ನಸಂಗಮದೇವಾ।[೩೦]

ಎಂದಿದ್ದಾರೆ. ಇದನ್ನೇ ಬಸವಣ್ಣನವರು ಭೇರುಂಡ ಪಕ್ಷಿಯ ಹೋಲಿಕೆಯೊಂದಿಗೆ

---

೨೭. ಚಂ.ಆ. ಕ್ರಿಪಾ. ಪಟಲ ೪, ಶ್ಲೋಕ ಸಂಖ್ಯೆ ೬–೭
೨೮. ವಚನಗಳಲ್ಲಿ ವೀರಶೈವಧರ್ಮ ಡಾ॥ ಎಚ್. ತಿಪ್ಪೇರುದ್ರಸ್ವಾಮಿ ಪುಟ ೧೯೭
೨೯. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೪೨೧ ಪುಟ ೧೦೨
೩೦. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೧೬೨೬. ಪುಟ ೫೯೪

ಯಥಾ ಭೇರುಂಡ ಪಕ್ಷೀ ಚ ದ್ವಿಮುಖೇನ ಪ್ರಭುಂಜತೇ।
ತಥಾ ಚಾಹಮುಮಾದೇವಿ ಉಭಯೋರ್ಲಿಂಗ ಜಂಗಮಯೋಃ॥
ಭೇರುಂಡ ಪಕ್ಷಿಗೆ ದೇಹವೊಂದೆ, ತಲೆಯೆರಡರ ನಡುವೆ ಕನ್ನಡವ ಕಟ್ಟಿ
ಒಂದು ತಲೆಯಲ್ಲಿ ಹಾಲನೆರದು. ಒಂದು ತಲೆಯಲ್ಲಿ ವಿಷವನೆರೆದೊಡೆ,
ದೇಹವೊಂದೇ ವಿಷವ ಬಿಡುವುದೆ?
ಅಯ್ಯಾ, ಲಿಂಗದಲ್ಲಿ ಪೂಜೆಯ ಮಾಡಿ ಜಂಗಮದಲ್ಲಿ ನಿಂದೆಯ ಮಾಡಿದೊಡೆ
ನಾನು ಬೆಂದೆ ಕಾಣಾ ಕೂಡಲ ಸಂಗಮದೇವಾ"

ಎಂದು ಭೇರುಂಡ ಪಕ್ಷಿಯ ಎರಡು ತಲೆಗಳಲ್ಲಿ ಒಂದು ತಲೆಗೆ ವಿಷ ಉಣಿಸಿ ಇನ್ನೊಂದು ತಲೆ ಬದುಕಿರಲೆಂದರೆ ಅಸಂಭವ. ಕಾರಣ ಜಂಗಮನ ಸೇವೆಯೇ ಶಿವನ ಸೇವೆಯಾಗಿರುತ್ತದೆ. ಜಂಗಮಸೇವೆ ಇಲ್ಲದೆ ಲಿಂಗ ಸಾಧನೆ ಪೂರ್ಣವಾಗಲಾರದು ಎಂದು – "ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ? ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ? ಜಂಗಮವಿಲ್ಲದೆ ಲಿಂಗಾರ್ಚನೆಯ ಮಾಡಬಹುದೆ? ರೂಢೀಶ್ವರನ ಭೇದಿಸಬಹುದೆ ಒಡಲಿಲ್ಲದೆ? ನಿರಾಳಕರ್ತೃ ಕೂಡಲಸಂಗಮದೇವ ಜಂಗಮಮುಖ ಲಿಂಗವಾದನಾಗಿ ಮತ್ತೊಂದನರಿಯೆನಯ್ಯಾ."[೩೨] ಎಂದು ಗೋಡೆಯ ಆಧಾರವಿಲ್ಲದೆ ಚಿತ್ರ ಬರೆಯುವುದಾಗಲಿ, ಭೂಮಿಯ ಆಧಾರವಿಲ್ಲದೆ ಬೀಜ ಬಿತ್ತಿ ಬೆಳೆ ತೆಗೆಯುವು ದಾಗಲಿ, ಲಿಂಗಕ್ಕಾಧಾರವಾದ ಜಂಗಮ ಕ್ಷೇತ್ರವಿಲ್ಲದೆ ಲಿಂಗಾರ್ಚನೆ ಮಾಡುವುದಾಗಲಿ ಸಾಧ್ಯವಿಲ್ಲವೆಂದು ಮಾರ್ಮಿಕವಾಗಿ ಬಸವಣ್ಣನವರು ನುಡಿದಿದ್ದಾರೆ. ಕಾರಣ ಲಿಂಗದ ಸ್ವರೂಪವೇ ಜಂಗಮ ಎನ್ನುತ್ತ ಪರಶಿವನಿಗೂ ಹಾಗೂ ಜಂಗಮನಿಗೂ ಅಭೇದವನ್ನು ಕಲ್ಪಿಸಿ ವಚನದಲ್ಲಿ ವೀರಾಗಮದ ಉಲ್ಲೇಖದೊಂದಿಗೆ ಜಂಗಮನ ಸ್ವರೂಪವನ್ನು ಕುರಿತು–

"ವ್ಯೋಮಾಕಾಶವೇ ಶರೀರ, ಆಕಾಶವೇ ಮುಖ, ಚಂದ್ರಾರ್ಕವಹ್ನಿಯೇ ನೇತ್ರಂಗಳು, ಮಹಾಮೇರು ಪರ್ವತವೇ ಲಿಂಗ, ಬ್ರಹ್ಮಾಂಡವೇ ಮಕುಟ, ಪಾತಾಳವೇ ಪಾದದ್ವಯಂಗಳು. ದಶದಿಕ್ಕುಗಳೇ ಬಾಹು, ಮೇಘಂಗಳೇ ಜಟಮಯ, ಚಂದ್ರಜ್ಯೋತಿಯೇ ವಿಭೂತಿ, ವೇದಂಗಳೆ ಸರ್ವಕ್ರಿಯಾಮಯ. ನಕ್ಷತ್ರಂಗಳೇ ಪುಷ್ಪ ಸಪ್ತ ಕುಲಪರ್ವತಂಗಳೇ ರುದ್ರಾಕ್ಷಿ, ಸಪ್ತ ಸಮುದ್ರಂಗಳೇ ಜಲಪಾತಂಗಳು. ಸೃಷ್ಟಿಮಯವೇ ಕಂಠ, ಪೃಥ್ವಿಯೇ ಆಸನ, ಅಹೋ ರಾತ್ರಿಯೇ ಮಠ. ತ್ರಿಕಾಲಜ್ಞಾನವೇ ಸೌಭಾಗ್ಯ, ಷಡುಸ್ಥಲಬ್ರಹ್ಮವೇ ಅರಿವು, ಮಹಾಶೇಷನೆ ಕಟಿಸೂತ್ರ, ಮಹಾಜ್ಞಾನಸಮುದ್ರವೇ ವಾಙ್ಮಯ. ಮಹಾಮೇರುವೇ ದಂಡಕೋಲು, ಸದ್ಗುಣವೇ ಪಾತ್ರ, ಕುಲ ಶಿವಕುಲ. ವನಸ್ಪತಿಯೇ ರೋಮಂಗಳು, ಮಕುಟದಲಿ ಶೂನ್ಯಲಿಂಗ ಚಿದಾಭಾಸ ಚಿದಂಬರ–ಇಂಥ ಮಹಾಮಹಿಮ ಜಂಗಮ ಚತುರ್ದಶಭುಜವನೊಳಕೊಂಡು, ಬ್ರಹ್ಮಾಂಡವೇ ಮಕುಟ, ಪಾತಾಳವೇ

೩೧. ಅಷ್ಟಾವರಣ, ಶ್ರೀ ಶಿವಕುಮಾರಸ್ವಾಮಿ ೧೯೮೧, ಪುಟ ೬೨
೩೨. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೩೯೯ ಪುಟ ೯೬

ಪಾದದ್ವಯವಾಗಿ ಸುಳಿದನು ನೋಡಾ."[೩೩] ಎನ್ನುತ್ತ ಜಂಗಮನು ಸಾಕ್ಷಾತ್ ಶಿವಸ್ವರೂಪಿ ಎಂದು ವರ್ಣಿಸಲಾಗಿದೆ. ಕಾರಣ

ಚರೋ ಲೋಕಹಿತಾರ್ಥೀ ಸ್ಯಾದಹಃ ಚರಹಿತೇ ರತಃ।
ಇತಿ ಚರಾನ್ ಸುಯಷ್ಟವ್ಯಮಿತ್ಯೇತಚ್ಛಿವಶಾಸನಮ್॥[೩೪]

ಲೋಕಹಿತಕ್ಕಾಗಿ ಸಂಚರಿಸುತ್ತಿರುವ ಜಂಗಮನ ತೃಪ್ತಿಯೇ ಪ್ರತಿಯೊಬ್ಬ ಗೃಹಸ್ಥನ ಕರ್ತವ್ಯವೆಂದು ಶಿವಶಾಸನವಿರುತ್ತದೆ ಎಂದು ನಿರೂಪಿಸಿ, ಜಂಗಮನನ್ನು ಸತ್ಕರಿಸುವ ಬಗೆಯನ್ನು ಆಗಮ ಮತ್ತು ವಚನಗಳು ವಿವರಿಸಿವೆ.

ಜಂಗಮನನ್ನು ಸತ್ಕರಿಸುವ ಬಗೆ

ತದಾಗತಂ ಗೃಹೇ ವೀಕ್ಷ್ಯ ಪ್ರತ್ಯುತ್ಥಾಯಾಭಿವಾದಯೇತ್।
ಶ್ರಮಾಪನೋದನಂ ಕುರ್ಯಾದ್ ಯಜನಾದಿಭಿರಾದರಾತ್ ॥
ಪ್ರಣಮ್ಯ ಸ್ವಾಗತಂ ಬ್ರೂಯಾತ್ ಪಾದಪ್ರಕ್ಷಾಲನಂ ಚರೇತ್।
ಪ್ರಥಮಂ ಪೂಜಯೇದ್ ಗಂಧಪುಷ್ಪೈಃ ಸಂಕ್ಷಾಲಯೇತ್ತತಃ ॥[೩೫]

ಮನೆಗೆ ಬಂದ ಜಂಗಮ (ಶಿವಯೋಗಿ) ವಯಸ್ಸಿನಲ್ಲಿ ಹಿರಿಯನಾಗಿರಲಿ ಕಿರಿಯನಾಗಿರಲಿ ಅವನನ್ನು ನೋಡಿ ಎದ್ದು ನಿಂತು ಗೃಹಸ್ಥನು ನಮ್ರನಾಗಿ ನಮಸ್ಕರಿಸಬೇಕು. ಆದರ ಪೂರ್ವಕವಾಗಿ ಬೀಸಣಿಗೆ ಮುಂತಾದವುಗಳಿಂದ ಸೇವೆ ಮಾಡಿ ಅವನ ಶ್ರಮಪರಿಹಾರವನ್ನು ಮಾಡಬೇಕು. ನಮಸ್ಕರಿಸಿ ಸ್ವಾಗತವನ್ನು ಹೇಳಬೇಕು; ಮೊದಲು ಪಾದಗಳನ್ನು ತೊಳೆಯಬೇಕು, ಗಂಧ-ಪುಷ್ಪ ಮುಂತಾದವುಗಳಿಂದ ಪೂಜಿಸಬೇಕು, ಮತ್ತೆ ಅವುಗಳನ್ನು ತೊಳೆಯಬೇಕು. ಎಂದು ತಿಳಿಸಿದೆ. ವಚನಗಳೂ ಸಹ ಇದನ್ನೇ ಪ್ರತಿಪಾದಿಸುತ್ತ –

ಜಂಗಮಭಕ್ತಿಯ ವಿವರ ಅದೆಂತೆಂದಡೆ:
ಶುದ್ಧವಹ ಪಾಕಪ್ರಯತ್ನಂಗಳಿಂದ, ಪ್ರಿಯವಾಕ್ಯಂಗಳಿಂದ,
ಬಾಹ್ಯಪರಿಚಾರಂಗಳಿಂದ, ಸಹಜಹಸ್ತದಿಂದ, ಕುಲ ಛಲ ಧನ ಯವ್ವನ
ರೂಪು ವಿದ್ಯೆ ರಾಜ್ಯ ತಪವೆಂಬ ಅಷ್ಟಮದಂಗಳ ಬಿಟ್ಟು,
ಅಹಂಕಾರವಂ ಬಿಟ್ಟು ನಿರಹಂಕಾರಭರಿತನಾಗಿ, ಉಪಾಧಿಯಬಿಟ್ಟು
ನಿರುಪಾಧಿಕನಾಗಿ ದೇಹಾದಿಗುಣಂಗಳ ಬಿಟ್ಟು ನಿರ್ದೇಹಿಕನಾಗಿ,
ಅಪೇಕ್ಷೆಯಂ ಬಿಟ್ಟು ನಿರಾಪೇಕ್ಷಿತನಾಗಿ, ಜಂಗಮವೇ
ಲಿಂಗವೆಂದು ಮನಶುಚಿಯಿಂದ ಮಾಡುವುದೀಗ ಜಂಗಮಭಕ್ತಿ ನೋಡಾ,
ಅಪ್ರಮಾಣಕೂಡಲಸಂಗಮದೇವಾ.[೩೬]

೩೩. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ ೮, ವಚನ ಸಂಖ್ಯೆ ೭೭೦ ಪುಟ ೩೪೭
೩೪. ಚಂ.ಆ.ಕ್ರಿ ಪಾ. ಪಟಲ ೪, ಶ್ಲೋಕ ಸಂಖ್ಯೆ ೩೫
೩೫. ಪಾ.ಆ. ಪಟಲ ೭, ಶ್ಲೋಕ ಸಂಖ್ಯೆ ೪೬-೪೭
೩೬. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವಚನ ಸಂ. ೮, ವಚನ ಸಂಖ್ಯೆ ೩೬೨ ಪುಟ೧೬೫

ಎಂದು ಚರಲಿಂಗ ರೂಪಿ ಜಂಗಮನನ್ನು ತನ್ನ ಮನೆಗೆ ಕರೆತಂದು ಪೀಠದ ಮೇಲೆ ಆಸನ ಹಾಕಿ ಕೂಡ್ರಿಸಿ, ತನ್ನಲ್ಲಿಯ ಅಷ್ಟಮದಗಳನ್ನು ಬಿಟ್ಟು, ನಿರುಪಾಧಿಕನಾಗಿ, ನಿರಪೇಕ್ಷಿತನಾಗಿ, ಮನಃಶುದ್ಧಿಯಿಂದ, ಷೋಡಶೋಪಚಾರದಿಂದ ಪೂಜಿಸಬೇಕೆಂದು ಪ್ರತಿಪಾದಿಸುತ್ತವೆ. ಈ ಬಗೆಯಾಗಿ ಜಂಗಮನ ಸೇವೆ ಮಾಡುವವನಿಗೆ ಭೋಗ ಮೋಕ್ಷಗಳೆರಡರ ಲಾಭ ದೊರೆಯುತ್ತದೆ ಎಂದು ಜಂಗಮನ ಪೂಜಾಫಲವನ್ನು ಹಾಗೂ ಮಹಿಮೆಯನ್ನು ಆಗಮ ಮತ್ತು ವಚನಗಳಲ್ಲಿ ವರ್ಣಿಸಲಾಗಿದೆ.

ಜಂಗಮನ ಮಹಿಮೆ/ಪೂಜಾಫಲ–

ಜಂಗಮನ ದರ್ಶನ ಮಾತ್ರದಿಂದ ಸರ್ವಸಿದ್ಧಿಗಳುಂಟಾಗುವವು. ಅಲ್ಲದೇ ಆತನನ್ನು ಪೂಜಿಸಿ, ವಂದಿಸಿ, ಧನ, ಕನಕ, ವಸ್ತ್ರಾದಿಗಳನ್ನು ಸಮರ್ಪಿಸಿ ಅತಿಥಿಯೆಂದು ಸತ್ಕಾರ ಮಾಡಿದಡೆ ಕೋಟಿಯಾಗಗಳ ಪುಣ್ಯಲಾಭ ಉಂಟಾಗುವದು ಹಾಗೂ ಆತನ ಪಾದಪೂಜೆ ಮಾಡುವವನಿಗೆ ಭೋಗಯೋಗಗಳೆರಡರ ಲಾಭ ದೊರೆಯುತ್ತದೆ. ಜಂಗಮ ಮೂರ್ತಿಯ ಪಾದದ ಧೂಳಿಯು ಯಾವನ ಮನೆಯಲ್ಲಿ ಬೀಳುವುದೋ ಅವನ ಮನೆ ಪಾವನವಾಗುವುದು ಎಂದು ಆಗಮಗಳು ಅರುಹುತ್ತವೆ. ಕಾರಣಾಗಮದಲ್ಲಿ ಪರಶಿವನು ಪಾರ್ವತಿಗೆ –

ಮತ್ತೋಽಧಿಕೋ ಜಂಗಮೋ ಹಿ ಸ ಪೂಜ್ಯೋ ಗೃಹಮಾಗತಃ।[೩೭]
ಅನ್ನಪಾನಾದಿಭಿಶ್ಚೈವ ತದಭೀಷ್ಟಪ್ರದಾನತಃ॥

ಜಂಗಮನು ನನಗಿಂತಲೂ ಶ್ರೇಷ್ಠನಾಗಿದ್ದು ಅವನು ಮನೆಗೆ ಬಂದರೆ ಅನ್ನಪಾನಾದಿಗಳಿಂದಲೂ ಇಷ್ಟವಸ್ತುಗಳನ್ನು ಕೊಡುವುದರಿಂದಲೂ ಅವನನ್ನು ಪೂಜಿಸಬೇಕು ಎಂದು ಅರುಹುತ್ತಾನೆ. ಚಂದ್ರಜ್ಞಾನಾಗಮವೂ ಜಂಗಮನ ಮಹಿಮೆಯನ್ನು ಕುರಿತು –

ಐಹಿಕಾಮುಷ್ಮಿಕಾ ಭೋಗಾ ಮೋಕ್ಷಸ್ತತ್ಸಂಗತೋ ಭವೇತ್।
ಚರಸಂಗಸ್ತು ಸರ್ವೇಷಾಂ ಸರ್ವಕಾಮಫಲಪ್ರದಃ॥
ತತ್ಪಾದಪಾಂಶುಭಿಃ ಪೂತಂ ಭವನಂ ಚೇತರದ್ವನಮ್ ॥
ತದ್ಯಥಾಶಕ್ತಿ ಸಂಪೂಜ್ಯಾ ಜಂಗಮಾ ಹಿ ಹಿತೇಪ್ಸುನಾ॥[೩೮]
ಯದಮೀ ಮಾನುಷಾಕಾರಾಃ ಪ್ರತ್ಯಕ್ಷಪರಮೇಶ್ವರಾಃ॥

ಅರ್ಥಾತ್ "ಲೌಕಿಕ–ಪರಲೌಕಿಕ ಭೋಗಗಳು ಮಾತ್ರವಲ್ಲ, ಮೋಕ್ಷವೂ ಸಹ ಜಂಗಮ ಪೂಜೆಗೈಯುವವನಿಗೆ ಅನಾಯಾಸವಾಗಿ ದೊರೆಯುತ್ತದೆ. ಆದ್ದರಿಂದ ಜಂಗಮನ ಸಹವಾಸವನ್ನು ಅಪೇಕ್ಷಿಸುವವರೆಲ್ಲರ ಇಷ್ಟಾರ್ಥಗಳು ಫಲಪ್ರದವಾಗುತ್ತವೆ. ಜಂಗಮನ ಪಾದದೂಳಿನಿಂದ ಪವಿತ್ರವಾದುದೇ ಮನೆ, ಉಳಿದದ್ದೆಲ್ಲವೂ ಕಾಡು. ಆದುದರಿಂದ

೩೭. ಕಾ.ಆ.ಕ್ರಿ.ಪಾ.ಪಟಲ ೩, ಶ್ಲೋಕ ಸಂಖ್ಯೆ ೭೪
೩೮. ಚಂ.ಆ. ಕ್ರಿ.ಪಾ. ಪಟಲ ೪, ಶ್ಲೋಕ ಸಂಖ್ಯೆ ೨೯–೩೦

ಸ್ವಹಿತವನ್ನು ಬಯಸುವವನು ಯಥಾಶಕ್ತಿ ಜಂಗಮನನ್ನು ಪೂಜಿಸಬೇಕು. ಏಕೆಂದರೆ ಜಂಗಮನು ಮನುಷ್ಯರೂಪದಲ್ಲಿರುವ ಸಾಕ್ಷಾತ್ ಪರಮೇಶ್ವರನೇ ಸರಿ." ಎಂದು ವಿವರಿಸಿದೆ. ಅಂತೆಯೇ ಸೂಕ್ಷ್ಮಾಗಮವೂ ಸಹ ಜಂಗಮನ ಮಹಿಮೆಯನ್ನು ಹೀಗೆ ವರ್ಣಿಸುತ್ತದೆ.

ಷಟ್‌ಸ್ಥಲಜ್ಞಾನಸಂಪನ್ನಃ ಷಡಂಗಾಂಗಸಮಾಧಿಮಾನ್।
ಆತ್ಮವತ್ ಪರಿದ್ರಷ್ಟಾ ಚ ಸ ಏವಾಹಂ ನ ಸಂಶಯಃ॥
ವೀರಶೈವಃ ಪರೋ ಯಸ್ತು ಯತ್ರ ತಿಷ್ಠತಿ ಪಾರ್ವತಿ।
ತತ್ತೀರ್ಥಂ ತತ್ತಪಃ ಶಾಂತಿಸ್ತತ್ರ ತಿಷ್ಠಾಮಿ ಸರ್ವದಾ॥ [೩೯]

"ಷಟ್‌ಸ್ಥಲಜ್ಞಾನಸಂಪನ್ನನೂ, ಶಿವನ ಸರ್ವಜ್ಞತಾ, ತೃಪ್ತಿ, ಅನಾದಿಬೋಧ, ಸ್ವತಂತ್ರತಾ, ಅನಂತಶಕ್ತಿ, ಮತ್ತು ಆಲುಪ್ತಶಕ್ತಿಗಳೆಂಬ ಷಡಂಗಗಳಲ್ಲಿ ಸಮಾಹಿತ ಮನಸ್ಸುಳ್ಳ, ತನ್ನಂತೆಯೇ ಇತರರನ್ನು ಕಾಣುವವನು ನಿಸ್ಸಂಶಯವಾಗಿಯೂ ಶಿವ ಸ್ವರೂಪಿಯೇ ಆಗಿರುತ್ತಾನೆ. ಇಂತಹ ಮಹಿಮೆಯುಳ್ಳ ಶ್ರೇಷ್ಠನಾದ ವೀರಶೈವನು ಎಲ್ಲಿರುವನೋ ಅದೇ ತೀರ್ಥ, ಅದೇ ತಪಸ್ಸು, ಅದೇ ಶಾಂತಿನಿವಾಸ ಮತ್ತು ಶಿವನು ಸದಾ ಅಲ್ಲಿಯೇ ನೆಲೆಸಿರುತ್ತಾನೆ." ಎಂದು ತಿಳಿಸಿದೆ. ಅಂತೆಯೇ ಚಂದ್ರಜ್ಞಾನಾಗಮವು –

ಸರ್ವತೀರ್ಥಾಭಿಷೇಕಾಚ್ಚ ಸರ್ವಯಜ್ಞವಿಧಾನತಃ।
ಸರ್ವದೇವಾರಾಧನಾಚ್ಚ ಚರಪೂಜಾ ಗರೀಯಸೀ
ದೂರೇ ವಿಲೋಕ್ಯ ಮಾಹೇಶಾನಭಿಗಮ್ಯಾಭಿವಾದ್ಯ ಚ ।
ಗೃಹಮಾನೀಯ ಯಷ್ಟವ್ಯಮಿತ್ಯೇತಚ್ಛಿವಶಾಸನಮ್
ಚರೋ ಲೋಕಹಿತಾರ್ಥೀ ಸ್ಯಾದಹಃ ಚರಹಿತೇ ರತಃ।
ಇತಿ ಚರಾನ್ ಸುಯಷ್ಟವ್ಯಮಿತ್ಯೇತಚ್ಛಿವಶಾಸನಮ್
ಜಂಗಮಾನಸಮಚ್ಯೈರ್ವ ಮತ್ಪೂಜಾ ಕ್ರಿಯತೇ ಯದಿ
ಸಾ ಪೂಜಾ ವಿಫಲೈವ ಸ್ಯಾದಿತ್ಯೇತಚ್ಛಿವಶಾಸನಮ್
ತದಾತ್ಮಹಿತಮಾಕಾಂಕ್ಷಮಾಣಃ ಸಂಪೂಜಯೇಚ್ಚರಾನ್
ತೇಷಾಂ ಯಥಾ ಮನಸ್ತೃಪ್ತಿಃ ಸೈವ ಪೂಜಾ ನಿಗದ್ಯತೇ॥ [೪೦]

ಎಂದು ಎಲ್ಲ ಪುಣ್ಯಕ್ಷೇತ್ರಗಳಲ್ಲಿನ ತೀರ್ಥಸ್ನಾನ, ಎಲ್ಲ ಬಗೆಯ ಯಜ್ಞಾನುಷ್ಠಾನ ಮತ್ತು ಸಮಸ್ತ ದೇವತೆಗಳ ಪೂಜೆ ಇವೆಲ್ಲವುಗಳಿಗಿಂತಲೂ ಜಂಗಮ ಪೂಜೆಯು ಮಿಗಿಲಾದುದು. ಜಂಗಮನನ್ನು ಪೂಜಿಸದೆ ಶಿವನನ್ನು ಪೂಜಿಸಿದ್ದೇ ಆದರೆ ಅಂತಹ ಪೂಜೆಯು ನಿಷ್ಫಲವಾಗುತ್ತದೆ ಎಂದು ಜಂಗಮನ ಉತ್ಕೃಷ್ಟತೆಯನ್ನು ಸಾರುತ್ತದೆ.

ವಚನಗಳಲ್ಲಿಯೂ ಇದೇ ಅಭಿಪ್ರಾಯ ಬಿಂಬಿತವಾಗಿದ್ದು ಷಣ್ಮುಖ ಶಿವಯೋಗಿಗಳು ತಮ್ಮ ವಚನದಲ್ಲಿ –

"ಜಂಗಮವೇ ಜಗದ್ಭರಿತನು ನೋಡಾ, ಜಂಗಮವೇ ಜಗದೀಶ್ವರನು ನೋಡಾ

---

೩೯. ಸೂ.ಆ.ಕ್ರಿ.ಪಾ. ಪಟಲ ೭, ಶ್ಲೋಕ ಸಂಖ್ಯೆ ೮೦–೮೧
೪೦. ಚಂ.ಆ. ಪಟಲ ೪, ಶ್ಲೋಕ ಸಂಖ್ಯೆ ೩೩–೩೭

ಜನನನಾಶ ಮರಣ ವಿರಹಿತನಾದ ಒಬ್ಬ ಪರಮ
ಜಂಗಮನ ದರ್ಶನವ ಮಾಡಿದರೆ ಒಂದು
ಕೋಟಿ ಲಿಂಗಂಗಳ ದರ್ಶನವಾದಂತೆ ನೋಡಾ
ಆ ಜಂಗಮದ ಚರಣ ಕಮಲದ ಮೇಲೆ ಲಲಾಟವನ್ನಿಟ್ಟು
ಶರಣು ಮಾಡಿದರೆ ಶತಕೋಟಿ ದೋಷ ಪರಿಹಾರ ನೋಡಾ...[೪೧]

ಎಂದು ಜಂಗಮನ ಶ್ರೇಷ್ಠತೆ ಮತ್ತು ಜಂಗಮರ ದರ್ಶನ ಫಲಗಳನ್ನು ಹೇಳಿರುವರು. ಅಲ್ಲದೇ ತಮ್ಮ ಇನ್ನೊಂದು ವಚನದಲ್ಲಿ –

"ಚತುರ್ವೇದಿಗಳಾದ ಶತಕೋಟಿ ಬ್ರಾಹ್ಮಣರಿಗೆ ನಿತ್ಯಭೋಜನ ಮಾಡಿಸಿದ ಫಲವು,
ಒಬ್ಬ ಜಂಗಮಕ್ಕೆ ತುತ್ತು ಭಿಕ್ಷವ ನೀಡಿದ ಫಲಕ್ಕೆ ಸರಿಯಿಲ್ಲ ನೋಡಿರೋ..."[೪೨]

ಎಂದು ಜಂಗಮನ ಮಹಿಮೆಯನ್ನು ಆಗಮ ಮತ್ತು ವಚನಗಳೆರಡೂ ಸಾರುತ್ತವೆ.

ಒಟ್ಟಿನಲ್ಲಿ ಜಂಗಮ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ತಿಳಿದುಬರುವ ವಿಷಯವೇನೆಂದರೆ ಶಿವಾಗಮಗಳಲ್ಲಿ 'ಸರ್ವ ಲೋಕೋಪಕಾರಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಸಂಚಾರ ಕೈಗೊಳ್ಳುವಂತಹ ಸಾಕ್ಷಾತ್ ಶಿವನೇ ಜಂಗಮನು' ಎಂದು ತಿಳಿಸುತ್ತದೆ. ಶಿವಜ್ಞಾನಿ, ಶಿವಯೋಗಿ, ಮಾಹೇಶ್ವರ, ವೀರಮಾಹೇಶ್ವರ –ಇವೆಲ್ಲವೂ ಜಂಗಮ ಶಬ್ದದ ಪರ್ಯಾಯ ಪದಗಳೆಂದು ತಿಳಿಸಿ ಗುರು ಲಿಂಗಕ್ಕಿಂತ ಜಂಗಮನ ವಿಷಯದಲ್ಲಿ ಹೆಚ್ಚು ಭಕ್ತಿಯಿಂದಿರುವುದು ಉತ್ತಮ ಭಕ್ತಿ ಎಂದು ಚಂದ್ರಜ್ಞಾನಾಗಮವು ತಿಳಿಸುತ್ತದೆ. ಅಲ್ಲದೆ ಜಂಗಮನ ಬಾಹ್ಯ ಲಕ್ಷಣಗಳನ್ನು ಮತ್ತು ಅಂತರಂಗ ಲಕ್ಷಣಗಳನ್ನು ನಿರೂಪಿಸುತ್ತ ನಿಸ್ಸಂಗತ್ವ, ನಿರಾಭಾರಿತ್ವ, ನಿಸ್ಸೀಮತ್ವ, ನಿರುಪಾಧಿಕತ್ವ, ನಿರ್ದೇಹತ್ವ, ನಿರ್ಮಲತ್ವ, ನಿತ್ಯತ್ವ – ಇವೇ ಜಂಗಮದ ಲಕ್ಷಣಗಳೆಂದು ತಿಳಿಸಿ ಆ ನಿಲುವಿಗೇರಿದವರು ಯಾರೇ ಆಗಿರಲಿ ಅವನು ಶಿವಯೋಗಿ" ಎಂದು ಘೋಷಿಸುತ್ತದೆ. ಜಂಗಮ ಸಾಕ್ಷಾತ್ ಶಿವಸ್ವರೂಪನಾಗಿರುವುದರಿಂದ ಜಂಗಮನು ಸಂತೃಪ್ತನಾದರೆ ಶಿವನು ಸಂತೃಪ್ತನಾಗುವನು. ಆದುದರಿಂದ ಆತನ ಉಪೇಕ್ಷೆ ಸಲ್ಲದೆಂದು ತಿಳಿಸುತ್ತ ಜಂಗಮನನ್ನು ಸತ್ಕರಿಸುವ ಬಗೆಯನ್ನು ವಿವರಿಸಿವೆ. ಶಿವಸ್ವರೂಪಿಯಾದ ಜಂಗಮನನ್ನು ಪೂಜೆಗೈಯುವದರಿಂದ ಲೌಕಿಕ–ಪರಲೌಕಿಕ ಭೋಗಗಳು ಮಾತ್ರವಲ್ಲ, ಮೋಕ್ಷವೂ ಸಹ ಅನಾಯಾಸವಾಗಿ ದೊರೆಯುತ್ತದೆ. ಎಲ್ಲ ಪುಣ್ಯಕ್ಷೇತ್ರಗಳಲ್ಲಿನ ತೀರ್ಥಸ್ನಾನ, ಎಲ್ಲ ಬಗೆಯ ಯಜ್ಞಾನುಷ್ಠಾನ ಮತ್ತು ಸಮಸ್ತ ದೇವತೆಗಳ ಪೂಜೆ ಇವೆಲ್ಲವುಗಳಿಗಿಂತಲೂ ಜಂಗಮ ಪೂಜೆಯು ಮಿಗಿಲಾದುದು. ಜಂಗಮನನ್ನು ಪೂಜಿಸದೆ ಶಿವನನ್ನು ಪೂಜಿಸಿದ್ದೇ ಆದರೆ ಅಂತಹ ಪೂಜೆಯು ನಿಷ್ಫಲವಾಗುತ್ತದೆ ಎಂದು ಪ್ರತಿಪಾದಿಸಿವೆ. ಜಂಗಮನ ಕುರಿತು ಇದೇ ವಿವರಣೆಯೇ ವಚನಗಳಲ್ಲಿ ಪ್ರತಿಪಾದನೆಗೊಂಡಿದ್ದು, ವಚನಕಾರರು ತಮ್ಮ ಅನೇಕ ವಚನಗಳಲ್ಲಿ ಆಗಮೋಲ್ಲೇಖಗಳನ್ನು ಬಳಸಿ ವಿಷಯವನ್ನು ಪ್ರತಿಪಾದಿಸಿದ್ದಾರೆ.

---

೪೧. ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವಚನ ಸಂ. ೯, ವಚನ ಸಂಖ್ಯೆ ೩೫೭ ಪುಟ೨೦೮
೪೨. ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವಚನ ಸಂ. ೯, ವಚನ ಸಂಖ್ಯೆ ೩೫೮ ಪುಟ೨೦೮

೫.೧.೪ ಪಾದೋದಕ

ಅಷ್ಟಾವರಣದಲ್ಲಿ ನಾಲ್ಕನೇ ಸೋಪಾನವೇ ಪಾದೋದಕ. ವೀರಶೈವರಲ್ಲಿ ಪಾದೋದಕ ಪದ್ಧತಿಯು ಅತ್ಯಂತ ವಿಶಿಷ್ಟವಾಗಿದ್ದು, ಗುರು-ಲಿಂಗ-ಜಂಗಮರಿಗೆ ತನು-ಮನ-ಧನಗಳನ್ನು ಅರ್ಪಿಸುವುದರ ಪ್ರತೀಕವಾಗಿದೆ.

ಪಾದೋದಕದ ಶಾಬ್ದಿಕ ಮತ್ತು ತಾತ್ವಿಕ ವಿವೇಚನೆ, ಪಾದೋದಕದ ವಿಧಗಳು, ಪಾದೋದಕ ಮಾಡಿಕೊಳ್ಳುವ ವಿಧಾನ, ಲಭ್ಯ ಪಾದೋದಕದಲ್ಲಿಯೇ ತ್ರಿವಿಧ ಪಾದೋದಕವೆಂದು ಪರಿಭಾವಿಸುವಿಕೆ, ಪಾದೋದಕ ಸ್ವೀಕರಿಸುವ ವಿಧಾನ, ಪಾದೋದಕದ ಮಹಿಮೆ ಮುಂತಾದವುಗಳ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅದು ಇಂತಿದೆ –

ಪಾದೋದಕದ ಶಾಬ್ದಿಕ ಮತ್ತು ತಾತ್ವಿಕ ವಿವೇಚನೆ

ಸಾಮಾನ್ಯರ್ಥದಲ್ಲಿ 'ಪಾದಸ್ಯ ಉದಕಂ ಪಾದೋದಕಂ' ಎಂಬ ವಿಗ್ರಹದಂತೆ 'ವೀರಶೈವರ ಉಪಾಸ್ಯ ಮೂರ್ತಿಗಳಾದ ಗುರು-ಜಂಗಮರ ಪಾದಪದ್ಮಗಳ ಮೇಲೆ ಮಂತ್ರ ಪೂರ್ವಕವಾಗಿ ಎರೆದ ಉದಕವೇ ಪಾದೋದಕ' ವೆಂದು ಅರ್ಥೈಸಿದರೆ, ಇದನ್ನೇ ತಾತ್ವಿಕವಾಗಿ ಶಿವಯೋಗಿ ಶಿವಾಚಾರ್ಯರು ಹೀಗೆ ವಿಶ್ಲೇಷಿಸಿದ್ದಾರೆ–

ಪಾದಶಬ್ದೇನ ಗುರುದೇವ ನಿಗದ್ಯತೇ
ಶಿಷ್ಯಶ್ಚೋದಕ ಶಬ್ದೇನ ತಯೋರ್ರೈಕ್ಯಂ ತು ದೀಕ್ಷಾಯಾ[೧]
ಪರಸಂವಿತ್ ಪ್ರಕಾಶಾತ್ಮಾ ಪರಮಾನಂದ ಭಾವನಾಂ

ಅರ್ಥಾತ್ 'ಪಾದ' ಶಬ್ದವು 'ಗುರು'ವನ್ನು 'ಉದಕ' ಶಬ್ದವು ಶಿಷ್ಯನನ್ನು ಹಾಗೂ ಇವರೀರ್ವರ ಐಕ್ಯತೆಯನ್ನು ಸೂಚಿಸುವುದೇ 'ಪಾದೋದಕ' ವೆಂದು ಅರ್ಥೈಸಿದ್ದಾರೆ. ಇಲ್ಲಿ 'ಗುರು'ವನ್ನು ಪಾದಕ್ಕೆ ಹೋಲಿಸಿದುದರ ಅರ್ಥವು ಅತ್ಯಂತ ವಿಲಕ್ಷಣವಾಗಿದೆ. ಪಾದವು ಕರ್ಮೇಂದ್ರಿಯವಾಗಿದ್ದು, ಅದು ಕ್ರಿಯೆ, ನಡತೆ ಮತ್ತು ಆಚರಣೆ ಎಂಬರ್ಥವನ್ನು ಸೂಚಿಸುತ್ತದೆ. ಕಾರಣ ಜಗತ್ತಿಗೆ ಮಾರ್ಗದರ್ಶಕನಾದ ಸದ್ಗುರುವು ಕೇವಲ ಆತ್ಮಕಲ್ಯಾಣಕ್ಕಾಗಿ ಜ್ಞಾನವನ್ನು ಸಂಪಾದಿಸಿಕೊಂಡರೆ ಸಾಲದು, ಆತನು ಸದಾಚಾರ ಸಂಪನ್ನನೂ, ಚಾರಿತ್ರ್ಯವಂತನೂ ಆಗಿರಬೇಕೆಂಬ ಉದ್ದೇಶದಿಂದ ಪಾದ ಶಬ್ದಕ್ಕೆ ಗುರುವೆಂದು ಅರ್ಥೈಸಿದ್ದಾರೆ.

ಇನ್ನು 'ಶಿಷ್ಯ'ನನ್ನು 'ಉದಕ'ಕ್ಕೆ ಹೋಲಿಸಿದ್ದುದರ ಅರ್ಥವು 'ಪಾದಕ್ಕೆ ಉದಕವು ಸಮರ್ಪಿತವಾಗುವಂತೆ ಶಿಷ್ಯನು ಗುರುವಿಗೆ ಸಮರ್ಪಿತನಾಗಬೇಕೆಂಬ ಅರ್ಥ'ವನ್ನು ನೀಡುತ್ತದೆ. ಅಲ್ಲದೇ ನೀರಿನಲ್ಲಿರುವ ಗುಣಗಳಾದ ಶೀತಲ, ಶುದ್ಧ, ಹಾಗೂ ನಿರಾಕಾರ ಗುಣದಂತೆ ಶಿಷ್ಯನೂ ಸಹ ಶಾಂತನೂ, ಚಾರಿತ್ರಿಕವಾಗಿ ಹಾಗೂ ಮಾನಸಿಕವಾಗಿ

---

೧. ಸಿದ್ಧಾಂತ ಶಿಖಾಮಣಿ, ಪರಿಚ್ಛೇದ ೧೯, ಶ್ಲೋಕ ಸಂಖ್ಯೆ ೭

ಪರಿಶುದ್ಧನೂ, ಹಾಗೂ ನಿರಹಂಕಾರಿಯೂ ಆಗಿರಬೇಕೆಂಬ ಉದ್ದೇಶದಿಂದ ಶಿಷ್ಯನನ್ನು ಉದಕಕ್ಕೆ ಹೋಲಿಸಲಾಗಿದೆ.

ಹೀಗೆ ತ್ರಿಕರ್ಣಶುದ್ಧನಾಗಿ ಗುರುವಿಗೆ ಶರಣಾಗತನಾದ ಶಿಷ್ಯನನ್ನು ಗುರುವು ಅನುಗ್ರಹಿಸಿ ತ್ರಿವಿಧ ದೀಕ್ಷಾದಿ ಸಂಸ್ಕಾರದಿಂದಲೂ, ತತ್ವಜ್ಞಾನೋಪದೇಶದಿಂದಲೂ ಶಿಷ್ಯನ ಅಜ್ಞಾನ ಹಾಗೂ ಮಲಗಳ ನಿವೃತ್ತಿಗೊಳಿಸಿ, ನಿರ್ಮಲ ಶಿವಜ್ಞಾನವನ್ನು ಬೋಧಿಸಿದಾಗ ಉಂಟಾಗುವ ಗುರು ಶಿಷ್ಯರ ಐಕ್ಯತೆಯ ಸಂಬಂಧವೇ ಪಾದೋದಕವೆಂದು ಅರ್ಥೈಸಿದ್ದಾರೆ. ಆದರೆ ಈ ಗುರು ಶಿಷ್ಯರ ಐಕ್ಯವು ಶಾರೀರಿಕವಾಗಿ ಅಥವಾ ಮಾನಸಿಕವಾಗಿ ಅಲ್ಲ. ಬದಲಾಗಿ ಅವರು ಅನುಭವಿಸುವ ಪರಶಿವಾನಂದ ಸ್ವರೂಪದ್ದಾಗಿರುತ್ತದೆ. ಹೀಗೆ ಗುರುವಿನಿಂದ ಪ್ರಾಪ್ತವಾದ ಪರಶಿವನ ಸ್ವರೂಪಾನಂದ ಜ್ಞಾನವೇ ಪಾದೋದಕವಾಗಿದೆ. ಕಾರಣ–

ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ।
ಜ್ಞಾನಂ ಚೋದಕ ಶಬ್ದೇನ ಪಾದೋದಕಮಿತಿ ಸ್ಮೃತಮ್॥[೨]

'ಪಾದ' ಶಬ್ದವು 'ಪರಮಾನಂದ' ಎಂಬ ತಾತ್ಪರ್ಯವನ್ನೂ, 'ಉದಕ' ಶಬ್ದವು 'ನಿರ್ಮಲವಾದ ಜ್ಞಾನ' ಎಂಬರ್ಥವನ್ನು ನೀಡುತ್ತದೆ. ಕಾರಣ ಪರಶಿವನ ಪರಮಾನಂದ ಸ್ವರೂಪದ ನಿರ್ಮಲ ಜ್ಞಾನವೇ 'ಪಾದೋದಕ' ಎಂದು ಕರೆದಿದ್ದಾರೆ. ಶಿವನು ಜ್ಞಾನಾನಂದ ಸ್ವರೂಪನೆಂದು ಹೇಳಲಾಗುತ್ತದೆ. ಅಂತೆಯೇ 'ಪಾದೋದಕ'ವೂ ಸಹ ಶಿವಾನಂದ, ಶಿವಜ್ಞಾನಗಳ ಸಮನ್ವಯವನ್ನು ಪ್ರತಿನಿಧಿಸುತ್ತದೆ.

ಗುರುವಿನಿಂದ ಉಪಲಭ್ಯವಾದ ಶಿವಜ್ಞಾನವನ್ನು ನಿರಂತರವಾಗಿ ಅನುಚಿಂತನ ರೂಪದಿಂದ ಮನನ ಮಾಡಲು ಶಿಷ್ಯನಲ್ಲಿಯ ದ್ವೈತಭಾವನೆಯು ನಷ್ಟವಾಗಿ, ಆತ ತನ್ನಂತರಂಗದಲ್ಲಿಯ ಜ್ಯೋತಿರ್ಲಿಂಗವನ್ನು ಅನುಸಂಧಾನಗೈದು 'ಶಿವೋಹಂ' ಭಾವದಿಂದ ಸಾಧನೆಗೈದು ಲಿಂಗಾಂಗ ಸಾಮರಸ್ಯವನ್ನು ಹೊಂದಿ ಅದ್ವೈತಾನಂದವನ್ನು ಅನುಭವಿಸುತ್ತಾನೆ. ಇಲ್ಲಿ ಶಿಷ್ಯನ ಚಿತ್ಕಲೆಯಲ್ಲಿಯ ಪ್ರಣವಸ್ವರೂಪದ ಆ ಪರಶಿವನೇ ಪದ. ಅದರಿಂದ ಉದಯಿಸಿದ ಕಾರಣ ಪಾದ. ಅದು ಚಿದ್ರಸವಾದುದರಿಂದ ಪಾದೋದಕವೆಂಬ ಹೆಸರು ಅನ್ವಯವಾಗುತ್ತದೆ. ಕಾರಣ ಶಿಷ್ಯನಿಗುಂಟಾಗುವ 'ಪರಮಾನಂದ ಪ್ರಜ್ಞೆಯೇ ಪಾದೋದಕ' ವೆಂದು ತಾತ್ವಿಕವಾಗಿ ಅರ್ಥೈಸಲಾಗಿದೆ.

ಈ ತಾತ್ವಿಕವಾದ ಪಾದೋದಕವನ್ನು ಕುರಿತು ಚೆನ್ನಬಸವಣ್ಣನವರು –

ನಿತ್ಯನೆಂಬ ಭಕ್ತನ ಮನೆಗೆ ಘನಚೈತನ್ಯವೆಂಬ ಜಂಗಮ ಬಂದಡೆ,
ಜಲವಿಲ್ಲದ, ಜಲದಲ್ಲಿ ಪಾದಾರ್ಚನೆಯ ಮಾಡಿದಡೆ
ಆ ಪಾದೋದಕವೆ ಮಹಾಪದವಯ್ಯಾ.
ಸ್ವಜ್ಞಾನಂದ ಜಲೇ ನಿತ್ಯಂ ಪ್ರಕ್ಷಾಲ್ಯ ಚರಪಾದುಕಾಂ।
ತಚ್ಛ ಪಾದೋದಕಂ ಪೀತ್ವಾ ಸ ಮುಕ್ತೋ ನಾತ್ರ ಸಂಶಯಃ। ಎಂದುದಾಗಿ

೨. ಸಿದ್ಧಾಂತ ಶಿಖಾಮಣಿ, ಪರಿಚ್ಛೇದ ೧೯, ಶ್ಲೋಕ ಸಂಖ್ಯೆ ೮

ಆ ಪಾದೋದಕದಲ್ಲಿ ಪರಮಪರಿಣಾಮಿ
ಕೂಡಲಚೆನ್ನಸಂಗಾ ನಿಮ್ಮ ಶರಣ.[೩]

ಎಂದು ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯ ಮಾಡುವುದು ಎನ್ನುತ್ತಾ, ಅದನ್ನು ಮಾಡುವ ಭಕ್ತ ನಿತ್ಯ, ಮಾಡಿಸಿಕೊಂಬ ಜಂಗಮ ಘನ ಚೈತನ್ಯ. ಅವರಿಂದುಂಟಾದುದು ಮಹಾ ಪಾದೋದಕ ಎಂದು ಅತ್ಯಂತ ಮನೋಜ್ಞವಾಗಿ ನುಡಿದಿದ್ದಾರೆ. ಕಾರಣ ಷಣ್ಮುಖ ಸ್ವಾಮಿಗಳು, "ಪಾದತೀರ್ಥವೆಂದಡೆ ಪರಾತ್ಪರವು ತಾನೆ ನೋಡಾ. ಪಾದತೀರ್ಥವೆಂದಡೆ ಪರಿಪೂರ್ಣ ಮಹಾಜ್ಞಾನವು ತಾನೆ ನೋಡಾ."[೪] ಎಂದಿದ್ದಾರೆ. ಹೀಗೆ ಪರಶಿವನ ಸ್ವರೂಪಾನಂದದ ಆಸ್ವಾದನೆಯೇ ತಾತ್ವಿಕವಾದ 'ಪಾದೋದಕ' ಸೇವನೆಯಾಗಿದೆ. ಈ ತಾತ್ವಿಕ ಪಾದೋದಕವು ಅಂತಃಕರಣ ಶುದ್ಧಿಗೊಂಡಾಗ ಮಾತ್ರ ಪ್ರಾಪ್ತವಾಗುವದು. ಕಾರಣ ಅಂತಃಕರಣ ಶುದ್ಧಿಗೊಸ್ಕರ ವೀರಶೈವ ಸಿದ್ಧಾಂತದಲ್ಲಿ ಗುರು-ಲಿಂಗ-ಜಂಗಮರ ಚರಣಾಮೃತವನ್ನು ಸೇವನೆ ಮಾಡುವ ವಿಧಾನವನ್ನು ಉಪದೇಶಿಸಲಾಗಿದೆ. ಅಲ್ಲದೇ ಗುರು, ಜಂಗಮರ ಪಾದದ ಪ್ರತಿ ಬೆರಳಿಗೂ ಪ್ರಣವದ ಬಾಂಧವ್ಯವಿದೆ. ಅಂತಹ ಪವಿತ್ರ ಪಾದದಿಂದ ಎರೆದು ತೆಗೆದ ಉದಕವು ಪಾದಗಳ ತೇಜಸ್ಸಿನಿಂದ ನಿರ್ಮಲವಾಗುತ್ತದೆ. ಆದುದರಿಂದ ಪಾದೋದಕವು ಪ್ರತ್ಯಕ್ಷ ಚಿದ್ರೂಪವೇ ಆಗಿದೆ ಎಂಬ ಭಾವನೆ ವೀರಶೈವರದ್ದು.

ಪಾದೋದಕದ ವಿಧಗಳು

ವೀರಶೈವರಿಗೆ ಗುರು, ಲಿಂಗ ಜಂಗಮರು ಅತ್ಯಂತ ಪೂಜನೀಯರಾಗಿರುವದರಿಂದ ಅವರ ಪಾದ ಪೂಜೆಯಿಂದ ಉಪಲಬ್ಧವಾದ ಪಾದೋದಕದಲ್ಲಿ ಮೂರು ವಿಧಗಳನ್ನು ಮಾಡಲಾಗಿದೆ. ಅವು ಗುರುಪಾದೋದಕ, ಲಿಂಗಪಾದೋದಕ, ಜಂಗಮ ಪಾದೋದಕ.

ಪಾದತೀರ್ಥಂ ತ್ರಿಧಾ ಶಂಭೋರ್ಗುರು ಜಂಗಮಯೋರಪಿ।
ದೀಕ್ಷಾ ಶಿಕ್ಷಾ ಜ್ಞಾನಮಿತಿ ತ್ರಿಸಂಜ್ಞಂ ತದ್ವವತ್ಯಹೋ॥[೫]

ಗುರುವಿನ ಪಾದಪೂಜೆಯಿಂದ ಲಭ್ಯವಾಗುವುದು ಗುರುಪಾದೋದಕ, ಇಷ್ಟಲಿಂಗ ಪೂಜೆಯಿಂದ ಲಿಂಗ ಪಾದೋದಕ ಮತ್ತು ಜಂಗಮ ಪೂಜೆಯಿಂದ ಜಂಗಮ ಪಾದೋದಕಗಳು ಲಭ್ಯವಾಗುತ್ತವೆ. ಇವನ್ನೇ ಕ್ರಮವಾಗಿ ದೀಕ್ಷಾ ಪಾದೋದಕ, ಶಿಕ್ಷಾಪಾದೋದಕ ಮತ್ತು ಜ್ಞಾನಪಾದೋದಕ ಎಂದು ಕರೆಯಲಾಗುವದು ಎಂದು ಆಗಮಗಳು ವಿಭಾಗಿಸಿದ್ದರೆ, ವಚನಗಳಲ್ಲಿ ಇವುಗಳನ್ನೇ-"ಕರುಣಜಲ, ವಿನಯಜಲ, ಸಮತಾಜಲ; ಕರುಣಜಲವೆ ಗುರುಪಾದೋದಕ; ವಿನಯಜಲವೆ ಲಿಂಗಪಾದೋದಕ; ಸಮತಾಜಲವೆ ಜಂಗಮ ಪಾದೋದಕ"[೬] ಎಂದು ಚೆನ್ನಬಸವಣ್ಣನವರು ಗುರು,

---

೩. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೮೦೦. ಪುಟ ೨೩೬

೪. ಸಮಗ್ರ ವಚನಸಂಪುಟ ೧೪, ಸಂಕೀರ್ಣ ವಚನಸಂಪುಟ ೯, ವಚನ ಸಂಖ್ಯೆ ೭೭೭, ಪುಟ೩೫೩

೫. ಚಂ.ಆ.,ಕ್ರಿಪಾ., ಪಟಲ ೫. ಶ್ಲೋಕ ಸಂಖ್ಯೆ ೫

೬ ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೯೫. ಪುಟ ೩೭೩

ಲಿಂಗ, ಜಂಗಮ ಪಾದೋದಕಕ್ಕೆ ಕ್ರಮವಾಗಿ ಕರುಣಜಲ, ವಿನಯಜಲ, ಸಮತಾಜಲವೆಂಬ ಪರ್ಯಾಯ ಹೆಸರಿನಿಂದ ಕರೆದಿದ್ದಾರೆ.

ಪಾದೋದಕ ಮಾಡಿಕೊಳ್ಳುವ ವಿಧಾನ –

ವೀರಶೈವ ಪರಂಪರೆಯಲ್ಲಿ ಕೇವಲ ಗುರು, ಲಿಂಗ, ಜಂಗಮರ ಪಾದತೊಳೆದ ಜಲವನ್ನು ಪಾದೋದಕವೆಂದು ಕರೆಯುವುದಿಲ್ಲ. ಇಲ್ಲಿ ಪಾದೋದಕವನ್ನು ಸಿದ್ಧಪಡಿಸುವ ಒಂದು ವಿಶೇಷವಾದ ವಿಧಿಯೇ ಇದೆ. ಗುರು ಜಂಗಮರ ಪಾದಾಂಗುಷ್ಠ ಹಾಗೂ ಶಿಷ್ಯನ ಹಸ್ತಾಗ್ರ ಇವುಗಳು ಪಾದೋದಕ ಪ್ರಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ.

ಪಾರಮೇಶ್ವರ ಆಗಮದಲ್ಲಿ ಪ್ರತಿಪಾದಿಸಿದಂತೆ ಗುರು ಅಥವಾ ಜಂಗಮರ ಪಾದಪೂಜೆಯ ಸಂದರ್ಭದಲ್ಲಿ ಮೊದಲಿಗೆ ಪಾದಗಳನ್ನು ತೊಳೆದು ಗಂಧ-ಪುಷ್ಪಾದಿಗಳಿಂದ ಪೂಜಿಸಿ,

ಅಂಗುಷ್ಠೇ ಭಾವಯೇದ್ರುದ್ರಂ ತರ್ಜನ್ಯಾಂ ಶಂಕರಂ ಸ್ಮರೇತ್।
ಮಧ್ಯಮಾಯಾಂ ಮಹಾದೇವಮನಾಮಿಕ್ಯಾಂ ತ್ರಿಯಂಬಕಮ್॥
ಕನಿಷ್ಠಿಕಾಯಾಮೀಶಾನಂ ಪಾದೋಪರಿ ಕಪರ್ದಿನಮ್।[೭]
ಪಾದಾಧಃ ಪಂಚವದನಂ ಗುಲ್ಫಯೋರುಗ್ರಭರ್ಗಕೌ॥

ಅಂಗುಷ್ಠದಲ್ಲಿ ರುದ್ರನನ್ನು, ತರ್ಜನಿಯಲ್ಲಿ ಶಂಕರನನ್ನು, ಮಧ್ಯಮದಲ್ಲಿ ಮಹಾದೇವನನ್ನು, ಅನಾಮಿಕದಲ್ಲಿ ತ್ರಿಯಂಬಕನನ್ನು, ಕನಿಷ್ಠದ ಬೆರಳಿನಲ್ಲಿ ಈಶಾನನನ್ನು, ಪಾದಗಳ ಮೇಲ್ಭಾಗದಲ್ಲಿ ಕಪರ್ದಿಯನ್ನು, ಪಾದಗಳ ಕೆಳಭಾಗದಲ್ಲಿ ಸದಾಶಿವನನ್ನು, ಗುಲ್ಫ(ಕಾಲಿನ ಗಂಟು)ಗಳಲ್ಲಿ ಉಗ್ರ ಮತ್ತು ಭರ್ಗ(ಪರಶಿವ)ರನ್ನು ಈ ರೀತಿಯಾಗಿ ಪಾದಗಳು ಹಾಗೂ ಎಲ್ಲ ಅಂಗಾಂಗಗಳಲ್ಲಿ ಶಿವನ ಅನೇಕ ಮೂರ್ತಿಗಳನ್ನು ಭಾವಿಸಿಕೊಂಡು, ಮತ್ತೊಮ್ಮೆ ಆ ಪಾದಗಳ ಕನಿಷ್ಠದಿಂದ ಅಂಗುಷ್ಠದವರೆಗಿನ ಬೆರಳುಗಳಲ್ಲಿ ಕ್ರಮವಾಗಿ ನಕಾರದಿಂದ ಯಕಾರದವರೆಗಿನ ಪಂಚಾಕ್ಷರ ಮಹಾಮಂತ್ರವನ್ನು ಬರೆದು, ಪಾದಗಳನ್ನು ಸಾಕ್ಷಾತ್ ಶಿವಸ್ವರೂಪವೆಂದು ಧ್ಯಾನಿಸಬೇಕು. ಅನಂತರ ಪಾದಗಳ ಕೆಳಭಾಗದಲ್ಲಿ ವಿಶೇಷವಾದ ಪಾತ್ರೆಯೊಂದನ್ನಿಟ್ಟು ಅಂಗುಷ್ಠಗಳ ಮೇಲ್ಭಾಗದಲ್ಲಿ ನೀರನ್ನು ಸುರಿದು, ಆ ಪಾತ್ರೆಯಲ್ಲಿ ಸಂಗ್ರಹಿಸಬೇಕು. ಈ ವಿಧಿಯಿಂದ ಸಂಗ್ರಹಿಸಿದ ಚರಣಾಮೃತವೇ ಪಾದೋದಕವೆಂದು ಕರೆಯಲ್ಪಟ್ಟಿದೆ.

ಈ ಪಾದೋದಕ ಮಾಡಿಕೊಳ್ಳುವ ವಿಧಾನವು ಇನ್ನೂ ವಿಸ್ತೃತವಾಗಿ ವಚನಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಚೆನ್ನಬಸವಣ್ಣನವರ ವಚನಗಳಲ್ಲಿ ಪ್ರಾಯೋಗಿಕವಾಗಿ ಗುರುಪಾದಪೂಜೆ ಮತ್ತು ಜಂಗಮಪಾದಪೂಜೆಗಳ ಎಲ್ಲಾ ವಿವರಗಳಿಗೂ ದೊರೆಯುತ್ತವೆ.

---

೭. ಪಾ.ಆ. ಪಟಲ ೭. ಶ್ಲೋಕ ಸಂಖ್ಯೆ ೪೮-೪೯

"......ಮಹಾಂತನ ಪಾದವನ್ನು ಪಡೆದುಕೊಂಬಂತಹ ಭಕ್ತನು ಆ ಮಹೇಶ್ವರನ ಉನ್ನತಾಸನದಲ್ಲಿ ಮೂರ್ತಗೊಳಿಸಿ ಪಾದಪ್ರಕ್ಷಾಲನೆಯ ಮಾಡಿದ ನಂತರದಲ್ಲಿ ದೀಕ್ಷಾಪಾದೋದಕವ ಮಾಡಿ, ಶುಭ್ರವಸ್ತ್ರದಿಂದ ದ್ರವವ ತೆಗೆದು ಅಷ್ಟವಿಧಾರ್ಚನೆಯಿಂದ ಲಿಂಗಪೂಜೆಯ ಮಾಡಿಸಿ ಮರಳಿ ತಾನು ಚೈತನ್ಯಂ ಶಾಶ್ವತಂ ಶಾಂತಂ ವ್ಯೋಮಾತೀತಂ ನಿರಂಜನಂ। ನಾದಬಿಂದುಕಲಾತೀತಂ ತಸ್ಮೈ ಶ್ರೀಗುರುವೇ ನಮಃ॥ ಎಂದು ಅಷ್ಟಾಂಗಯುಕ್ತನಾಗಿ ವಂದನಂಗೈದು ಪಾದಪೂಜೆಗೆ ಅಪ್ಪಣೆಯ ತೆಗೆದುಕೊಂಡು, ಅವರ ಸಮ್ಮುಖದಲ್ಲಿ ಗದ್ದುಗೆಯ ಹಾಕಿಕೊಂಡು, ಅದರ ಮೇಲೆ ಮೂರ್ತವ ಮಾಡಿಕೊಂಡು, ತನ್ನ ಲಿಂಗವ ನಿರೀಕ್ಷಿಸಿ, ವಾಮಹಸ್ತದಲ್ಲಿ ನಿರಂಜನ ಪ್ರಣವವ ಲಿಖಿಸಿ ಪೂಜೆಯ ಮಾಡಿ, ಆಮೇಲೆ ಜಂಗಮದ ಪಾದವ ಹಿಡಿದು ಪೂಜೆಯಮಾಡಿ ಆ ಪೂಜೆಯನಿಳುಹಿ, ಅದೇ ಉದಕದ ಪಾತ್ರೆಯಲ್ಲಿ ಶಿಕ್ಷಾಪಾದೋದಕವ ಮಾಡಿ, ಪಾದದ್ರವವ ತೆಗೆದು ಐದಂಗುಲಿಗಳಲ್ಲಿ ಪಂಚಾಕ್ಷರವ ಲೇಖನವ ಮಾಡಿ, ಮಧ್ಯದಲ್ಲಿ ಮೂಲಪ್ರಣವವ ಬರೆದು, ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಪೂಜೆಯ ಮಾಡಬೇಕು. – ಆಮೇಲೆ ಆ ಮೂರ್ತಿಯ ಉಭಯಪಾದಗಳ ಹಿಮ್ಮಡ ಸೋಂಕುವಂತೆ ಹಸ್ತವ ಮಡಗಿ ಲಲಾಟವ ಮುಟ್ಟಿ ನಮಸ್ಕರಿಸಿ ಆ ಪೂಜೆಯನಿಳುಹಿ, ಆ ಶಿಕ್ಷಾಪಾದೋದಕವನು ಬಲದಂಗುಷ್ಠದ ಮೇಲೆ ಷಡಕ್ಷರಮಂತ್ರವ ಆರುವೇಳೆ ಸ್ಮರಿಸುತ್ತ ನೀಡಿ, ಅಲ್ಲಿ ಇಷ್ಟಲಿಂಗವೆಂದು ಭಾವಿಸಿ, ಎಡದಂಗುಷ್ಠದ ಮೇಲೆ ಪಂಚಾಕ್ಷರೀಮಂತ್ರವ ಐದುವೇಳೆ ಸ್ಮರಿಸುತ್ತ ನೀಡಿ, ಅಲ್ಲಿ ಪ್ರಾಣಲಿಂಗವೆಂದು ಭಾವಿಸಿ, ಮಧ್ಯದಲ್ಲಿ ಒಂದು ಪುಷ್ಪವ ಧರಿಸಿ ಸ್ಮರಿಸುತ್ತ ನೀಡಿ, ಅಲ್ಲಿ ಭಾವಲಿಂಗವೆಂದು ಭಾವಿಸಿ, ನೀಡಿದ ಉದಕವೆ ಬಟ್ಟಲಲಿ ನಿಂದು ಮಹತ್ವಾದವೆಂದೆನಿಸುವುದು, ಈ ಮಹಾತ್ವಾದದಲ್ಲಿ ದ್ರವವ ತೆಗೆದು ಮತ್ತೆ ಪೂಜಿಸಬೇಕಾದಡೆ, ಬಹುಪುಷ್ಪವ ಧರಿಸದೆ ಒಂದೆ ಪುಷ್ಪವ ಧರಿಸಬೇಕು. ಅದೇನು ಕಾರಣವೆಂದಡೆ; ಪಶ್ಚಿಮಚಕ್ರದಲ್ಲಿ ಸಂಬಂಧವಾದ ನಿರಂಜನ ಜಂಗಮಕ್ಕೆ ಏಕದಳವನುಳ್ಳ ಒಂದೆ ಪುಷ್ಪವು ಮುಖ್ಯವಾದ ಕಾರಣ, ಏಕ ಕುಸುಮವನೆ ಧರಿಸಿ ಪೂಜೆಯಮಾಡಿ ನಮಸ್ಕರಿಸುವದೆ ಜಂಗಮಪೂಜೆ. ಆ ಪೂಜೆಯ ತೆಗೆದ ಶಿಷ್ಯನು ಶರಣಾರ್ಥಿ ಸ್ವಾಮಿ ಎಂದು ಬಟ್ಟಲವನೆತ್ತಿಕೊಟ್ಟಲ್ಲಿ, ಕರ್ತೃವಾದ ಜಂಗಮವು ಆ ಬಟ್ಟಲಲ್ಲಿರ್ದ ತೀರ್ಥವನು ತಮ್ಮ ಪಂಚಾಂಗುಲಿಗಳ ಪಂಚಪ್ರಾಣವೆಂದು ಭಾವಿಸಿ, ಮೂಲಮಂತ್ರದಿಂದ ಮೂರುವೇಳೆ ಪ್ರದಕ್ಷಿಣವ ಮಾಡಿ ನಮಸ್ಕರಿಸಿ, ಲಿಂಗದ ಮಸ್ತಕದ ಮೇಲೆ ಮೂರುವೇಳೆ ಚತುರಂಗುಲ ಪ್ರಮಾಣಿನಲ್ಲಿ ಲಿಂಗವ ಮುಟ್ಟದೆ ನೀಡಿ, ಆ ಪಂಚಾಂಗುಲಿಗಳ ತಮ್ಮ ಜಿಹ್ವೆಯಲ್ಲಿ ಸ್ವೀಕರಿಸುವಲ್ಲಿ ಗುರುಪಾದೋದಕವೆನಿಸುವದು; ಅದೇ ದೀಕ್ಷಾಪಾದೋದಕ. ತಾವು ಲಿಂಗವನ್ನೆತ್ತಿ ಸಲಿಸಿದುದೆ ಲಿಂಗಪಾದೋದಕ ವೆನಿಸುವದು; ಅದೇ ಶಿಕ್ಷಾಪಾದೋದಕ. ಬಟ್ಟಲನೆತ್ತಿ ಸಲ್ಲಿಸಿದಲ್ಲಿ ಜಂಗಮ ಪಾದೋದಕವೆನಿಸುವದು; ಅದೇ ಜ್ಞಾನಪಾದೋದಕ. ಈ ರೀತಿಯಲ್ಲಿ ಮಾಹೇಶ್ವರನು ಸಲಿಸಿದ ಬಳಿಕ ಶರಣಾರ್ಥಿ ಎಂದು ಶಿಷ್ಯೋತ್ತಮನು ಎದ್ದು ಲಲಾಟಂ ಚ ಭುಜದ್ವಂದ್ವಂ ಪಾಣಿಯುಗ್ಮಮುರಸ್ತಥಾ। ಅಂಗುಷ್ಠಯುಗಲಂ ಪ್ರೋಕ್ತಂ ಪ್ರಣಾಮೋಷ್ಟಾಂಗಮುಚ್ಯತೇ॥ ಎಂದು ಭೃತ್ಯೋಪಚಾರಗಳಿಂದ ಪ್ರಣತಿಂಗೈದು ಅಪ್ಪಣೆಯ ಪಡೆದುಕೊಂಡು ಬಂದು,

ಆ ಜಂಗಮದ ಮರ್ಯಾದೆಯಲ್ಲಿಯೆ ತಾನು ಸ್ವೀಕರಿಸುವುದು.[೮] –ಎಂಬ ವಚನದಲ್ಲಿ ಪಾದೋದಕ ಮಾಡಿಕೊಳ್ಳುವ ಸಮಗ್ರವಾದ ಚಿತ್ರವನ್ನು ನೋಡಬಹುದು. ಇಲ್ಲಿ ಪಾದಪೂಜೆಗೆ 'ಪಡಕೊಳ್ಳುವುದು' ಎಂಬ ಶಬ್ದ ಬಳಕೆಯಾಗಿದೆ. ಹೀಗೆ ದೀಕ್ಷಾ, ಶಿಕ್ಷಾ, ಜ್ಞಾನ ಪಾದೋದಕಗಳನ್ನು ಗುರುಪಾದೋದಕ, ಲಿಂಗಪಾದೋದಕ ಮತ್ತು ಜಂಗಮಪಾದೋದಕವೆಂದು ಮೂರು ಪ್ರಕಾರಗಳೆಂದು ಶಾಸ್ತ್ರಗಳಲ್ಲಿ ಹೇಳಿದ್ದರೂ ಅನುಭವದಲ್ಲಿ ಹೀಗೆ ಗುರುಪಾದಪೂಜೆ ಅಥವಾ ಜಂಗಮಪಾದಪೂಜೆಗಳಲ್ಲಿ ಮೂರರ ಸಮನ್ವಯ ಮಾಡಿ ಸ್ವೀಕರಿಸಬೇಕು ಎಂದು ತಿಳಿಸಿದೆ.

ಲಭ್ಯ ಪಾದೋದಕದಲ್ಲಿಯೇ ತ್ರಿವಿಧ ಪಾದೋದಕವೆಂದು ಪರಿಭಾವಿಸುವಿಕೆ –

ಪಾದತೀರ್ಥಂ ಸದಾ ಪೇಯಂ ಭವಬಂಧಮುಮುಕ್ಷುಭಿಃ।
ಗುರೋರಪೀಷ್ಟಲಿಂಗಸ್ಯ ಚರಸ್ಯಾಪಿ ವಿಶೇಷತಃ॥[೯]

"ಭವಬಂಧನದಿಂದ ಮುಕ್ತಿಯನ್ನು ಪಡೆಯಲು ಇಚ್ಛಿಸುವವರು ಗುರು, ಲಿಂಗ ಮತ್ತು ಜಂಗಮರ ಪಾದೋದಕವನ್ನು ಪ್ರತಿನಿತ್ಯವೂ ಸ್ವೀಕರಿಸಬೇಕು." ಎಂಬ ಆಗಮೋಕ್ತಿಯಂತೆ ವೀರಶೈವರು ಪ್ರತಿದಿನವೂ ತ್ರಿವಿಧ ಪಾದೋದಕವನ್ನು ಸ್ವೀಕರಿಸಬೇಕು. ಒಂದು ವೇಳೆ ಒಂದು ಅಥವಾ ಎರಡರ ಪಾದೋದಕವು ಲಭ್ಯವಿದ್ದು, ಯಾವುದರ ಪಾದತೀರ್ಥವು ದೊರೆತಿರುವುದಿಲ್ಲವೋ ಅದರ ಭಾವನೆಯಿಂದ ಸಂಬಂಧವನ್ನು ಆಚರಿಸಬೇಕೆಂದು ಚಂದ್ರಜ್ಞಾನಾಗಮವು ಆದೇಶಿಸಿದೆ.

ಗುರೋಶ್ಚರಸ್ಯ ಚಾಲಾಭೇ ಇಷ್ಟಲಿಂಗಪದೋದಕಮ್।
ಲಬ್ಧ್ವಾ ಗುರ್ವಾದಿಪಾದೋದಂ ಭಾವಯೇನ್ಮನಸೈವ ತತ್॥
ಚರವರ್ಜಂ ಗುರೋರ್ಲಾಭೇ ಲಬ್ಧ್ವಾ ಗುರುಪದೋದಕಮ್।
ಗುರುಜಂಗಮಪಾದೋದಂ ಲಬ್ಧವಾನಿತಿ ಭಾವಯೇತ್॥
ಗುರುವರ್ಜಂ ಚರಪ್ರಾಪ್ತೌ ಲಬ್ಧ್ವಾ ಚರಪದೋದಕಮ್।[೧೦]
ತದೇವ ಗುರುಪಾದೋದಂ ಮತ್ವಾ ಪಿಬೇತ್ ತದಾ॥

ಅರ್ಥಾತ್ ಗುರು–ಲಿಂಗ–ಜಂಗಮರಲ್ಲಿ ಯಾರೊಬ್ಬರಿದ್ದರೂ ಅವರ ಪಾದೋದಕವನ್ನೇ ಎಲ್ಲರ ಪಾದೋದಕವೆಂದು ಭಾವಿಸಿ ಸೇವಿಸಬೇಕೆಂದು ಆಗಮಗಳು ಅರುಹುತ್ತವೆ. ಗುರು–ಜಂಗಮರು ದೊರೆಯದಿದ್ದರೆ ಇಷ್ಟಲಿಂಗ ಪಾದೋದಕವನ್ನೇ ಪಡೆದು ಅದನ್ನೇ ಗುರು–ಜಂಗಮ ಪಾದೋದಕವೆಂದು ಮನಸಿನಲ್ಲಿ ಭಾವಿಸಬೇಕು. ಜಂಗಮನಿಲ್ಲದೆ ಗುರುವು ದೊರೆತರೆ ಗುರುಪಾದೋದಕವನ್ನೇ ಪಡೆದು ಅದನ್ನೆ ಗುರು–ಜಂಗಮ ಪಾದೋದಕವೆಂದು ಭಾವಿಸಬೇಕು. ಗುರುವಿಲ್ಲದೆ ಜಂಗಮ ದೊರೆತರೆ ಜಂಗಮ ಪಾದೋದಕವನ್ನು ಪಡೆದು ಅದನ್ನೇ ಗುರುಪಾದೋದಕವೆಂದು ತಿಳಿದು ಸೇವಿಸಬೇಕೆಂದು

೮. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೨೩೪. ಪುಟ ೪೨೯
೯. ಚಂ.ಜ್ಞಾ, ಕ್ರಿಪಾ, ಪಟಲ ೫. ಶ್ಲೋಕ ಸಂಖ್ಯೆ ೬
೧೦.ಚಂ.ಜ್ಞಾ, ಕ್ರಿಪಾ, ಪಟಲ ೫. ಶ್ಲೋಕ ಸಂಖ್ಯೆ ೭–೯

ತಿಳಿಸುತ್ತಾ ಗುರು-ಲಿಂಗ-ಜಂಗಮರಲ್ಲಿ ಒಬ್ಬೊಬ್ಬರ ಪಾದೋದಕದಲ್ಲಿಯೂ ತ್ರಿವಿಧ ಪಾದೋದಕವೂ ಸಮಾವೇಶಗೊಳ್ಳುವುದು ಎಂದು ಅರುಹಿದೆ.

ಶಿವಾಗಮದ ಈ ನಿಯಮವನ್ನೇ ಚೆನ್ನಬಸವಣ್ಣನವರು ತಮ್ಮ ವಚನದಲ್ಲಿ ಹೀಗೆ ನಿರೂಪಿಸಿರುವರು-

..... ಜಂಗಮದಲ್ಲಿ ಗುರು ಲಿಂಗಗಳುಂಟೆಂದು ತಿಳಿದು
ತ್ರಿವಿಧ ಪಾದೋದಕವನಲ್ಲಿ ಪಡೆವುದು. ಇದೆ ಸದಾಚಾರ
ಆ ಜಂಗಮವಿಲ್ಲದೆ ಗುರು ಒರ್ವನೆ ಬಿಜಯಂಗೈಯೆ,
ಆ ಗುರುವಿನ ವಿಧಿಗನುಗುಣವಾಗಿ ಜಂಗಮವನನುಸಂಧಾನಿಸಿ,
ಗುರುವಿನಲ್ಲಿ ಲಿಂಗವು ಸಹಜವಾಗಿರ್ಪುದರಿಂದ,
ಅಲ್ಲಿ ತ್ರಿವಿಧೋದಕವ ಪಡೆವುದು. ಇದೊಂದು ಸಹಜಸಂಬಂಧವು.
ಗುರುಜಂಗಮರಿರ್ವರೂ ಸಮಯಕ್ಕೊದಗದಿರ್ಪಲ್ಲಿ
ಆ ಗುರುಜಂಗಮ ತನ್ನ ಇಷ್ಟಲಿಂಗದಲ್ಲಿ ಕ್ರಮವರಿತು ಅನುಸಂಧಾನಿಸಿ
ಅಲ್ಲಿ ತ್ರಿವಿದೋದಕವ ಪಡೆವುದು. ಇದೊಂದು ಕೇವಲ ಸಂಬಂಧವು
ಇಂತೀ ಸಹಜಸಂಬಂಧದ ಭೇದವನರಿದು, ಅರಿದಂತಾಚರಿಸಿ,
ನಮ್ಮ ಶರಣರು ಕೂಡಲಚೆನ್ನಸಂಗಯ್ಯನಲ್ಲಿ ಅಚ್ಚಸುಖಿಗಳಾದರು.[೧೧]

ಎಂದು ಸಹಜ ಆಚರಣೆಯ ಮೂಲಕ ಗುರುವಿನಿಂದ ಪಡೆಯುವದು ಗುರುಪಾದೋದಕ, ಲಿಂಗದಿಂದ ಪಡೆಯುವದು ಲಿಂಗೋದಕ, ಜಂಗಮರಿಂದ ಪಡೆಯುವದು ಜಂಗಮ ಪಾದೋದಕ. ಗುರುವು ದೊರೆತಾಗ ಗುರುವಿನಲ್ಲಿ ಸಹಜಾಚರಣೆಯಾದರೆ, ಆ ಗುರುವಿನಲ್ಲಿ ಲಿಂಗ-ಜಂಗಮರ ಸಂಬಂಧಾಚರಣೆ ನಡೆಯುತ್ತದೆ. ಅಂತೆಯೇ ಜಂಗಮವು ದೊರೆತಾಗ, ಅ ಜಂಗಮದಲ್ಲಿ ಸಹಜಾಚರಣೆಯಾದರೆ, ಗುರು-ಲಿಂಗಗಳ ಸಂಬಂಧಾಚರಣೆ ಆ ಜಂಗಮದಲ್ಲಿ ನಡೆಯುತ್ತದೆ. ಈ ಇಬ್ಬರೂ ದೊರೆಯದೇ ಇದ್ದಾಗ ತನ್ನ ಇಷ್ಟಲಿಂಗದಲ್ಲಿಯೇ ಗುರು ಜಂಗಮತ್ವವನ್ನು ಅನುಸಂಧಾನ ಮಾಡಿಕೊಂಡು ಲಿಂಗದಲ್ಲಿಯೇ ತ್ರಿವಿಧ ಪಾದೋದಕವಾಗುತ್ತದೆ ಎಂದು ಆಗಮ ಅಭಿಪ್ರಾಯವನ್ನೇ ಪ್ರತಿಪಾದಿಸಿದ್ದಾರೆ. ವೀರಶೈವನ ದಿನನಿತ್ಯದ ಇಷ್ಟಲಿಂಗಾರ್ಚನೆಯಲ್ಲಿ ಈ ಪ್ರಕ್ರಿಯೆಯು ಭಾವನಾತ್ಮಕವಾಗಿಯೇ ನಡೆಯುತ್ತಾ ಇರುತ್ತದೆ. ಇದಕ್ಕೆ ಪ್ರಮುಖ ನಿದರ್ಶನವೆಂದರೆ, ಪೂಜೆಯ ಕಡೆಯಲ್ಲಿ ತನ್ನ ಇಷ್ಟಲಿಂಗಕ್ಕೆ ಪಾದೋದಕವನ್ನು ಗುರು ಪಾದೋದಕ, ಲಿಂಗ ಪಾದೋದಕ, ಜಂಗಮ ಪಾದೋದಕವೆಂದು ಮೂರು ಸಾರಿ ಎರೆಯುವ ಪ್ರಕ್ರಿಯೆಯೇ ಆಗಿರುತ್ತದೆ.

---

೧೧. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೬೫೫. ಪುಟ ೩೦೫

ಪಾದೋದಕ ಸ್ವೀಕರಿಸುವ ವಿಧಾನ

ಪೂರ್ವೋಕ್ತ ವಿಧಿಯಿಂದ ಪಾದೋದಕವನ್ನು ಸಿದ್ಧಪಡಿಸಿದ ನಂತರ ಗುರು–ಜಂಗಮರ ಪಾದಪೂಜೆಯಲ್ಲಿ ಸಮ್ಮಿಲಿತವಾಗಿರುವ ಎಲ್ಲ ವೀರಶೈವ ದೀಕ್ಷಿತರಾಗಿರುವ ಭಕ್ತರು ಹಾಗೂ ಮಾಹೇಶ್ವರರು ಕ್ರಮವಾಗಿ ಒಬ್ಬೊಬ್ಬರೇ ಬಂದು ಶ್ರೀಗುರು ಅಥವಾ ಜಂಗಮನಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಮರ್ಪಿಸಿ ತಮ್ಮ ಇಷ್ಟಲಿಂಗಕ್ಕೆ ಮೂರು ಸಲ ಮಜ್ಜನ ಮಾಡಿ, ಸಾವಧಾನದಿಂದ ಮಂತ್ರವನ್ನುಚ್ಚರಿಸುತ್ತಾ ಲಿಂಗಕ್ಕೆ ಎರೆದ ಆ ಪಾದೋದಕವನ್ನು ಸ್ವೀಕರಿಸುತ್ತಾರೆ ಮತ್ತು ಸರ್ವಾಂಗಗಳಿಗೆ ಅದನ್ನು ಲೇಪನಮಾಡಿ ಕೊಳ್ಳುತ್ತಾರೆ. ಆದರೆ–

"ಗುರುಜಂಗಮದ ಪಾದತೀರ್ಥವು ಲಿಂಗಾಭಿಷೇಕಕ್ಕೆ ಸಲ್ಲದು" ಎಂದು ಹೇಳುವವರ ಮಾತನ್ನು ಖಂಡಿಸಿ ಚೆನ್ನಬಸವಣ್ಣನವರು ಆಗಮೋಕ್ತವಾದ ವಿಷಯವನ್ನು ಉಲ್ಲೇಖಿಸಿ –

"ಸಂಸ್ಕಾರ ವಿಶಿಷ್ಟವಾದ ಲಿಂಗಕ್ಕೆಯೂ ಜಂಗಮಕ್ಕೆಯೂ,
ಅಭೇದವೆಂಬುದನು ಆಗಮೋಕ್ತಿ,
'ಪದೋದಾದಭಿಷೇಚನಂ' ಎಂದು ಸಾರುತ್ತಿಹುದು ಕಾಣಿರೊ !
ಇದು ಕಾರಣ, ಅಂತಪ್ಪ ಗುರುಜಂಗಮದ ಪಾದತೀರ್ಥವು ಅಯೋಗ್ಯವೆಂದಡೆ,
ನಮ್ಮ ಕೂಡಲ ಚೆನ್ನಸಂಗಯ್ಯನ ವಚನವ ನಿರಾಕರಿಸಿದಂತಕ್ಕು ಕಾಣಿರೋ!"[೧೨]

ಎಂದು ಮಾರ್ಗದರ್ಶನ ಮಾಡಿರುವರು. ಅಲ್ಲದೇ ತಮ್ಮ ಇನ್ನೊಂದು ವಚನದಲ್ಲಿಯೂ ಜಂಗಮ ಪಾದತೀರ್ಥವನ್ನು ಲಿಂಗಕ್ಕೆ ಅರ್ಪಿಸಬೇಕು ಎಂದು ಆಗಮೋಲ್ಲೇಖದೊಂದಿಗೆ ಪ್ರತಿಪಾದಿಸಿದ್ದಾರೆ.

.......ಜಂಗಮದ ಪಾದತೀರ್ಥಪ್ರಸಾದವ ಲಿಂಗಕ್ಕೆ ಕೊಟ್ಟು ಕೊಳಲಾಗದೆಂಬ
ಪಂಚಮಹಾಪಾತಕರ ಮಾತ ಕೇಳಲಾಗದು.
ಅದೆಂತೆಂದಡೆ: **ವೀರಾಗಮದಲ್ಲಿ,**
ಜಂಗಮಾನಾಮಹಂ ಪ್ರಾಣೋ ಮಮ ಪ್ರಾಣೋ ಹಿ ಜಂಗಮಃ।
ಜಂಗಮೇನ ತ್ವಹಂ ಪೂಜ್ಯೋ ಮಯಾ ಪೂಜ್ಯೋ ಹಿ ಜಂಗಮಃ॥
ಪರಸ್ಪರಮಭೇದತ್ವಾಜ್ಜಂಗಮಸ್ಯ ಮಮಾಪಿ ಚ ।
ಪಾದೋದಕಪ್ರಸಾದಾಭ್ಯಾಂ ವಿನಾ ತೃಪ್ತಿರ್ನ ಜಾಯತೇ॥
ಇಂತೆಂಬ ಶಿವನ ವಾಕ್ಯವನರಿದು, ಜಂಗಮದ ಪಾದತೀರ್ಥವ
ಲಿಂಗಕ್ಕೆ ಮಜ್ಜನಕ್ಕೆರೆದು ಪ್ರಸಾದವ ಲಿಂಗಕ್ಕೆ ನೈವೇದ್ಯವ ಸಮರ್ಪಿಸಿ
ಭೋಗಿಸುವಾತನೆ ಸದ್ಭಕ್ತ, ಆತನೆ ಮಾಹೇಶ್ವರ, ಆತನೆ ಪ್ರಸಾದಿ,

---

೧೨. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೧೫೭. ಪುಟ೩೯೮

ಆತನೆ ಪ್ರಾಣಲಿಂಗಿ, ಆತನೆ ಶರಣ, ಆತನೆ ಐಕ್ಯನು.
ಇಂತಪ್ಪ ಷಟ್‌ಸ್ಥಲಬ್ರಹ್ಮಿಗೆ ನಮೋ ನಮೋ ಎಂಬೆ.
ಇಂತಲ್ಲದೆ ಜಂಗಮದ ಪಾದತೀರ್ಥಪ್ರಸಾದರಹಿತನಾಗಿ
ಆವನೊಬ್ಬನು ತನ್ನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ
ಷೋಡಶೋಪಚಾರಕ್ರೀಯಿಂದ ಪೂಜೆಯ ಮಾಡುವಲ್ಲಿ
ಅವನು ಶುದ್ಧಶೈವನು, ಅವನ್ಗಿಗೆ ಮುಕ್ತಿಯಿಲ್ಲ ಕಾಣಾ
ಕೂಡಲಚೆನ್ನಸಂಗಮದೇವಾ।[13]

ಎಂದು ಸಾಕ್ಷಾತ್ ಶಿವಸ್ವರೂಪಿಯಾದ ಜಂಗಮನನ್ನು ಆದರಪೂರ್ವಕವಾಗಿ ಬರಮಾಡಿಕೊಂಡು ಅವರ ಪಾದತೀರ್ಥಪ್ರಸಾದಗಳ ಕೊಳ್ಳುವಾತನೇ ನಿಜವಾದ ಸದ್ಭಕ್ತನೆಂದು ತಿಳಿಸಿದೆ.

ಪಾದೋದಕದ ಮಾಡಿಕೊಳ್ಳುವ ಪ್ರಕ್ರಿಯೆಯನ್ನಾಧರಿಸಿ ವಚನಗಳಲ್ಲಿ ಪಾದೋದಕದ ಒಟ್ಟು ಹತ್ತು ಪ್ರಕಾರಗಳನ್ನು ಹೇಳುವುದುಂಟು. ಗುರು ಪಾದೋದಕ, ಲಿಂಗ ಪಾದೋದಕ, ಜಂಗಮ ಪಾದೋದಕ, ಸ್ಪರ್ಶನೋದಕ (ಪುಷ್ಪೋದಕ), ಅವಧಾನೋದಕ, ಅಪ್ಯಾಯನ ಪಾದೋದಕ, ಹಸ್ತೋದಕ, ಪರಿಣಾಮ ಪಾದೋದಕ, ನಿರ್ನಾಮ ಪಾದೋದಕ ಮತ್ತು ಸತ್ಯೋದಕ (ನಿತ್ಯೋದಕ) ಎಂಬ ದಶವಿಧ ಪಾದೋದಕವನ್ನು[14] ವಚನಗಳಲ್ಲಿ ಹೇಳಲ್ಪಟ್ಟರೂ, ಅವು ಪಾದೋದಕ ಸ್ವೀಕಾರದ ಪ್ರಕ್ರಿಯೆಯಲ್ಲಿನ ವಿವಿಧ ಹಂತಗಳೇ ಆಗಿವೆ.

ಈ ಪಾದೋದಕ ಸ್ವೀಕಾರದಲ್ಲಿ ಅಶುದ್ಧಿಯಾಗಲೀ ಅಯುಕ್ತವಾದುದಾಗಲೀ ಏನೂ ಇಲ್ಲ. ಇದು ಸಂಪೂರ್ಣ ಶ್ರದ್ಧಾಮೂಲವಾಗಿದ್ದು ವೀರಶೈವದಲ್ಲಿ ಗುರು ಮತ್ತು ಜಂಗಮರ ಬಗೆಗಿರುವ ಭಕ್ತಿಯ ಅಧಿಕ್ಯವನ್ನು ಸೂಚಿಸುತ್ತದೆ.

ಪಾದೋದಕ ಸ್ವೀಕರಿಸುವಲ್ಲಿ ಉದಾಸೀನ ಭಾವ ತಾಳಿದರೆ ಪ್ರಳಯಕಾರಿ

ಪಾದಾರ್ಚನೆಯು ಒಂದು ಭಾವಕ್ರಿಯೆಯಾಗಿದೆ. ಈ ಪಾದೋದಕವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಸ್ವೀಕರಿಸಿದರೆ ಮಾತ್ರ ಅದು ಪರಿಣಾಮಕಾರಿ ಇಲ್ಲದಿದ್ದಡೆ ಅದು ಕಾಲಜಲವೆಂದು ರೂಪಕಾಲಂಕಾರದಲ್ಲಿ ರಮ್ಯವಾಗಿ ವಚನದಲ್ಲಿ ಬಳಸಿದ್ದಾರೆ.

ಸಮಯವಿರೋಧವಾದೀತೆಂದು ಪಾದಾರ್ಚನೆಯ ಮಾಡುವರಯ್ಯಾ
ಲಿಂಗಜಂಗಮಕ್ಕೆ ಪಾದವಾವುದು? ಅರ್ಚನೆ ಯಾವುದು?
ಎಂಬ ತುದಿ ಮೊದಲನರಿಯರು. ಉದಾಸೀನದಿಂದ ಪಾದಾರ್ಚನೆಯ ಮಾಡಿ,

---

೧೩. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೩೮೬. ಪುಟ ೪೯೪

೧೪. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೩೬೧, ೧೩೬೨. ಪುಟ ೪೮೨, ವಚನ ಸಂಖ್ಯೆ ೧೫೬೪, ಪುಟ ೫೬೮

ಪಾದೋದಕ ಧರಿಸಿದಡೆ ಅದೇ ಪ್ರಳಯಕಾಲಜಲ.
ಮರ್ಮವನರಿದು ಕೊಂಡಡೆ ತನ್ನ ಭವಕ್ಕೆ ಪ್ರಳಯಕಾಲಜಲ!
ಈ ಉಭಯವ ಭೇದಿಸಿ ಸಂಸಾರಮಲಿನವ ತೊಳೆವಡೆ
ಕೂಡಲಚೆನ್ನಸಂಗಾ ಈ ಅನುವ ನಿಮ್ಮ ಶರಣ ಬಲ್ಲ.[೧೫]

ಎಂದು ಪಾದೋದಕ ಸ್ವೀಕರಿಸುವಲ್ಲಿ ಉದಾಸೀನ ಭಾವ ತಾಳಿದರೆ ಪ್ರಳಯಕಾರಿಯಾಗಿ ಅದು ತನ್ನನ್ನೇ ಪ್ರಳಯಿಸುತ್ತದೆ. ಭಕ್ತಿ ಭಾವದಿಂದ ಸೇವಿಸಿದರೆ ಅದು ತನ್ನ ಭವವನ್ನು ಪ್ರಳಯಿಸಿ ನಾಶಗೊಳಿಸುತ್ತದೆ ಎಂದು ತಿಳಿಸಿದ್ದಾರೆ. ಇದನ್ನೇ ಷಣ್ಮುಖ ಸ್ವಾಮಿಗಳು–

......ಜಂಗಮದ ಪಾದತೀರ್ಥಕ್ಕೆ, ಭಕ್ತನಾದಡೂ ಆಗಲಿ,
ಮಹೇಶ್ವರನಾದಡೂ ಆಗಲಿ
ಆರಾದಡೇನು ಅಡಿಯಿಟ್ಟು ನಡೆದು ಬಂದು ಭಯಭಕ್ತಿಯಿಂದ ಅಡ್ಡಬಿದ್ದು,
ಜಂಗಮದ ಪಾದತೀರ್ಥವನು ಶುದ್ಧ ಸಾವಧಾನದಿಂದೆ,
ತನ್ನ ಲಿಂಗಕ್ಕೆ ಅರ್ಪಿಸಿ, ಅಂಗಕ್ಕೆ ಕೊಳ್ಳಬಲ್ಲಡೆ, ಆ ಮಹಾತ್ಮನೆ
ಆದಿ ಪುರಾತನನೆಂಬೆ, ಅಭೇದ್ಯ ಭೇದಕನೆಂಬೆ,
ಹೀಗಲ್ಲದೆ ಭಕ್ತಿಹೀನನಾಗಿ, ಯುಕ್ತಿ ಶೂನ್ಯನಾಗಿ ಗರ್ವದ ಪರ್ವತವನೇರಿ ಹೆಮ್ಮೆ
ಹಿರಿತನವು ಮುಂದುಗೊಂಡು ಆ ಜಂಗಮದ ಪಾದತೀರ್ಥವನು
ಕಾಲಿಲ್ಲದ ಹೆಳವನಂತೆ ತಾನಿದ್ದಲ್ಲಿಗೆ ತರಸಿಕೊಂಡು ಅವಿಶ್ವಾಸದಿಂದೆ[೧೬] ಕೊಂಬ
ಜೀವಗಳ್ಳರ ಎನಗೊಮ್ಮೆ ತೋರದಿರಯ್ಯಾ ಅಖಂಡೇಶ್ವರಾ.

ಕಾರಣ ಪಾದಪೂಜೆಯಲ್ಲಿ ಭಾಗವಹಿಸಿರುವ ಎಲ್ಲರೂ ಸಹ ಭಕ್ತಿಭಾವದಿಂದ ಪಾದೋದಕವನ್ನು ಸ್ವೀಕರಿಸಬೇಕೆಂದು ತಿಳಿಸಲಾಗಿದೆ. ಆದರೆ ಕ್ರಿಯಾಚಾರವಿಲ್ಲದ ಗುರು–ಜಂಗಮರಿಂದ ಪಾದೋದಕವನ್ನು ಸ್ವೀಕರಿಸಬಾರದೆಂದು ಎಚ್ಚರಿಸಲಾಗಿದೆ.

ಕ್ರಿಯಾಚಾರವಿಲ್ಲದ ಗುರು–ಜಂಗಮರಿಂದ ಪಾದೋದಕವನ್ನು ಸ್ವೀಕರಿಸಬಾರದು –

'ಕ್ರಿಯಾಚಾರವಿಲ್ಲದ ಗುರುವಿನ ಕೈಯಿಂದ ದೀಕ್ಷೆ, ಉಪದೇಶವ ಕೊಳ್ಳಲಾಗದು.
ಕ್ರಿಯಾಚಾರವಿಲ್ಲದ ಶಿಲೆಯ ಲಿಂಗವೆಂದು ಪೂಜಿಸಲಾಗದು.
ಕ್ರಿಯಾಚಾರವಿಲ್ಲದ ಭೂತ ಪ್ರಾಣಿಗಳಲ್ಲಿ ಜಂಗಮವೆಂದು
ಪಾದೋದಕ ಪ್ರಸಾದವ ಕೊಳಲಾಗದು.
ಇಂತಪ್ಪ ಆಚಾರವಿಲ್ಲದ, ಅನಾಚಾರವ ಬಳಸುವ
ದುರಾಚಾರಿಗಳಲ್ಲಿ ಉಪದೇಶವ ಪಡೆದು, ಪಾದೋದಕ

---

೧೫. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವ. ಸಂಖ್ಯೆ ೧೬೪೭. ಪುಟ ೬೦೨
೧೬. ಸಮಗ್ರ ವಚನಸಂಪುಟ ೧೪, ಸಂಕೀರ್ಣ ವಚನಸಂಪುಟ ೯, ವ.ಸಂಖ್ಯೆ ೭೭೮, ಪುಟ೩೫೪

ಪ್ರಸಾದವ ಕೊಂಡವಂಗೆ ಅಘನಾಸ್ತಿಯಾಗದು, ಮುಂದೆ
ಅಘೋರ ನರಕ ತಪ್ಪದು ಕಾಣಾ ಕೂಡಲಸಂಗಮದೇವಾ'[೧೭]

ಎಂದು ಬಸವಣ್ಣನವರು ಕ್ರಿಯಾಚಾರವಿಲ್ಲದ ಗುರು–ಜಂಗಮರಿಂದ ಪಾದೋದಕವನ್ನು ಸ್ವೀಕರಿಸಬಾರದು ಒಂದು ವೇಳೆ ಅನಾಚಾರಿಗಳಿಂದ ಪಾದೋದಕ ಸ್ವೀಕರಿಸಿದ್ದೇ ಆದರೆ ಅಘೋರ ನರಕ ತಪ್ಪದು ಎಂದಿದ್ದಾರೆ. ಕಾರಣ ಸದ್ಧರ್ಮಶೀಲ ಪುಣ್ಯಪುರುಷರಿಂದ ಪಾದೋದಕವನ್ನು ಭಕ್ತಿ, ಶ್ರದ್ಧೆಗಳಿಂದ ಪಡೆಯಬೇಕೆಂದು ತಿಳಿಸಲಾಗಿದೆ.

ಪಾದೋದಕದ ಮಹಿಮೆ

ಪಾದೋದಕ ಸೇವನೆಯಿಂದ ಎಲ್ಲಾ ತೀರ್ಥ ಕ್ಷೇತ್ರಗಳ ಸೇವಾಫಲವು ಲಭಿಸುತ್ತದೆಂದು ಪ್ರತಿಪಾದಿಸುತ್ತ ಚಂದ್ರಜ್ಞಾನಾಗಮದಲ್ಲಿ–

ಪಾದಾಂಗುಷ್ಠೇ ಸಮಸ್ತಾನಿ ತೀರ್ಥಾನಿ ನಿವಸಂತಿ ಹಿ।
ಗುಲ್ಫೇ ತಸ್ಯ ಮಹಾದೇವಿ ತಿಷ್ಠಂತಿ ಗಣತಾರಕಾಃ॥[೧೮]

ಶ್ರೀಗುರುವಿನ ಪಾದಾಂಗುಷ್ಠದಲ್ಲಿ ಎಲ್ಲಾ ತೀರ್ಥಗಳು ನೆಲೆಸಿವೆ. ಹಿಮ್ಮಡಿಯ ಗಂಟಿನಲ್ಲಿ ಗಣದೇವತೆಗಳು ತಾರಾಮಂಡಲಗಳಿವೆ. ಪಾದದಡಿಯಲ್ಲಿ ಎಲ್ಲ ಸಮುದ್ರಗಳಿವೆ. ಪಾದದ ಮೇಲ್ಭಾಗದಲ್ಲಿ ಕುಲಪರ್ವತಗಳಿವೆ ಮತ್ತು ಮೊಣಕಾಲುಗಳೆರಡರಲ್ಲಿ ಮೂವತ್ತಾರು ತತ್ವಪುಂಜಗಳಿವೆ. ಸಕಲವಿದ್ಯೆಗಳ ನಿವಾಸವಾದ ಶ್ರೀ ಗುರುವಿನ ಪಾದಯುಗಲವನ್ನು ಮೂರುಲೋಕಗಳೂ ಆಶ್ರಯಿಸಿವೆ ಎಂದು ಆಗಮಗಳು ಸಾರುತ್ತವೆ. ಕಾರಣ ಇಂಥ ಮಹಿಮಾನ್ವಿತ ಪಾದಗಳ ಪೂಜೆಯಿಂದ ಲಭಿಸಿದ ಪಾದೋದಕವನ್ನು ಸದಾ ಭಕ್ತಿಯಿಂದ ಸ್ವೀಕರಿಸುತ್ತಾನೋ ಅವನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ ಎಂದು ತಿಳಿಸಿದೆ.[೧೯]

ಮಕುಟಾಗಮದ ಚರ್ಯಾಪಾದದಲ್ಲಿ ಪಾದೋದಕದ ಪ್ರಭಾವ, ಮಹಿಮೆಯನ್ನು ವಿವರಿಸುತ್ತ–

ಸರ್ವಜನ್ಮಾರ್ಜಿತಾನೀಹ ಪಾತಕಾನಿ ಮಹಂತ್ಯಪಿ।
ಲಿಂಗಜಂಗಮಗುರ್ವಂಘ್ರಿತೀರ್ಥಪ್ರಾಶನತಸ್ತಥಾ।
ನಶ್ಯಂತಿ ತತ್ ಕ್ಷಣಾದೇವ ನಾತ್ರ ಕಾರ್ಯಾ ವಿಚಾರಣಾ ॥
ಮಹಾಶೈವವ್ರತಸ್ಥಾನಾಂ ಮದ್ಭಾಕ್ತಾನಾಂ ವಿಶೇಷತಃ।
ನ ನಿಷ್ಕೃತ್ಯಂತರಂ ಮುಖ್ಯಂ ಮತ್ತೀರ್ಥಪ್ರಾಶನಾದೃತೇ॥[೨೦]

---

೧೭. ಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೧, ವಚನ ಸಂಖ್ಯೆ ೧೧೬೫. ಪುಟ ೩೧೮

೧೮. ಸೂ.ಆ., ಕ್ರಿಪಾ., ಪಟಲ ೫. ಶ್ಲೋಕ ಸಂಖ್ಯೆ ೧೭

೧೯. ಚಂ.ಆ., ಕ್ರಿಪಾ., ಪಟಲ ೨. ಶ್ಲೋಕ ಸಂಖ್ಯೆ ೨೨

೨೦. ಮ.ಆ.ಚರ್ಯಾಪಾದ, ಪಟಲ ೨. ಶ್ಲೋಕ ಸಂಖ್ಯೆ ೩೨–೩೩

ಹಿಂದಿನ ಎಲ್ಲ ಜನ್ಮಗಳಲ್ಲಿ ಮಾಡಿದ ಮಹಾಪಾತಕಗಳು ಕೂಡ ಗುರು, ಲಿಂಗ ಮತ್ತು ಜಂಗಮರ ಪಾದೋದಕವನ್ನು ಸೇವಿಸುವುದರಿಂದ ತತ್‌ಕ್ಷಣದಲ್ಲಿಯೇ ನಾಶವಾಗುತ್ತವೆ. ಇದರಲ್ಲಿ ಯಾವುದೇ ರೀತಿಯ ಸಂದೇಹವೂ ಇಲ್ಲ ಎಂದು ಸಾರಿದೆ. ಮಹಾಮಹಿಮೆಯುಳ್ಳ ಶಿವವ್ರತವನ್ನು ಆಚರಿಸುವ ಭಕ್ತರಿಗೆ ಪಾದೋದಕ ಸೇವನೆಗಿಂತಲೂ ಮಿಗಿಲಾದ ಬೇರೊಂದು ಪ್ರಾಯಶ್ಚಿತ್ತವಿಲ್ಲ ಎಂದು ತಿಳಿಸುವುದರ ಜೊತೆಗೆ ಅಂತ್ಯಕಾಲದಲ್ಲಿ ಪಾದೋದಕವನ್ನು ಸೇವಿಸಿದರೆ ಆತನು ಸದ್ಗತಿಯನ್ನು ಪಡೆಯುತ್ತಾನೆ ಎಂದು ಪ್ರತಿಪಾದಿಸಿದೆ.

ಚೆನ್ನಬಸವಣ್ಣನವರು ಶೈವಾಗಮೋಕ್ತಿಯೊಂದನ್ನು ಉಲ್ಲೇಖಿಸಿ ಪವಿತ್ರ ಪಾದೋದಕದಿಂದ ಭಕ್ತರೆಲ್ಲಾ ಪರಿಶುದ್ಧರಾದರೆಂದು ಅವರು ಹೇಳಿದ್ದಾರೆ:

"ಗುರುಜಂಗಮ ಪಾದೋದಕ ಪ್ರಸಾದವ ಭಕ್ತಿಯಿಂದ ಪಡೆದು,
ನಿಚ್ಚ ನಿಚ್ಚ ಸೇವಿಸಬಲ್ಲಡೆ
ಆ ಭಕ್ತನ ಕಾಯಕರಣಾದಿಗಳ ಸೋಂಕಲಮ್ಮದೆ ದುರಿತವು ದೂರಾಗಿಪ್ಪುದು
ಆ ಸದ್ಭಕ್ತನೆ ಸದ್ಬ್ರಾಹ್ಮಣನೆಂದು ಶಾಸ್ತ್ರವು ಹೊಗಳುತ್ತಿಪ್ಪುದು
'ಪಾದೋದಕಂ ಚ ನಿರ್ಮಾಲ್ಯಂ ಭಕ್ತ್ಯಾ ಧಾರ್ಯಂ ಪ್ರಯತ್ನತಃ।
ನ ತಾನ್ ಸ್ಪೃಶಂತಿ ಪಾಪಾನಿ ಮನೋವಾಕ್ಕಾಯಜಾನ್ಯಪಿ॥
ಭಕ್ಷಯೇದ್ಯೋಗಿನಾ ಭಕ್ತ್ಯಾ ಪವಿತ್ರಮಿತಿ ಶಂಸಿತಂ।
ಶುದ್ಧಾತ್ಮಾ ಬ್ರಾಹ್ಮಣಸ್ತಸ್ಯ ಪಾಪಂ ಕ್ಷಿಪ್ರಂ ವಿನಶ್ಯತಿ॥' ಎಂದುದಾಗಿ
ಇಂತೀ ಪವಿತ್ರವಾದ ಪಾದೋದಕವ ಪಡೆದು
ಕೂಡಲಚೆನ್ನಸಂಗಯ್ಯನ ಶರಣರು ಪರಿಶುದ್ಧರಾದರು"[೨೧]

ಎಂದು ಪಾದೋದಕದ ಮಹಿಮೆಯನ್ನು ತಿಳಿಸಿದ್ದಾರೆ. ಶಿವಾಗಮಗಳು ಈ ತ್ರಿವಿಧ ಪಾದೋದಕಗಳ ಮಹಿಮೆಯನ್ನು ಪ್ರತ್ಯೇಕವಾಗಿ ಹೀಗೆ ನಿರೂಪಿಸುತ್ತವೆ.

ಗುರು ಪಾದೋದಕದ ಮಹಿಮೆ

ಶೋಷಣಂ ಪಾಪಪಂಕಸ್ಯ ದೀಪನಂ ಜ್ಞಾನತೇಜಸಃ।
ಗುರೋಃ ಪಾದೋದಕಂ ಚಿತ್ರಂ ಸಂಸಾರದ್ರುಮನಾಶನಮ್ ॥
ಸರ್ವತೀರ್ಥಾಭಿಷೇಕೇ ಯಾ ಶುದ್ಧಿರ್ಮನಸಿ ಜಾಯತೇ।
ಗುರೋರಂಘ್ರಿಸ್ಪರ್ಶಜಲೇ ಶಿರಸಾ ಧಾರಿತೇ ಹಿ ಸಾ ॥
ಸಪ್ತಸಾಗರಪರ್ಯಂತಂ ತೀರ್ಥಸ್ನಾನಫಲಂ ಸದಾ।
ಗುರೋರಂಘ್ರಿಪಯೋಬಿಂದುಸಹಸ್ರಾಂಶಂ ನ ಪೂರಯೇತ್ ॥[೨೨]

೨೧. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೧೫೯. ಪುಟ ೩೯೮

೨೨. ಚ.ಆ.ಕ್ರಿ. ಪಟಲ ೫. ಶ್ಲೋಕ ಸಂಖ್ಯೆ ೧೬-೧೮

ಗುರುವಿನ ಪಾದೋದಕವು ಪಾಪದ ಕೆಸರನ್ನು ಒಣಗಿಸುತ್ತದೆ. ಜ್ಞಾನವೆಂಬ ತೇಜಸ್ಸನ್ನು ಬೆಳಗಿಸುತ್ತದೆ ಮತ್ತು ಸಂಸಾರವೆಂಬ ವೃಕ್ಷವನ್ನು ನಾಶಮಾಡುತ್ತದೆ. ಎಲ್ಲಾ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಯಾವ ಮಾನಸಿಕ ಶುದ್ಧಿಯು ಉಂಟಾಗುತ್ತದೆಯೋ ಅದೇ ಗುರುವಿನ ಪಾದಗಳನ್ನು ಸ್ಪರ್ಶಿಸಿದ ಜಲವನ್ನು (ಗುರುಪಾದೋದಕವನ್ನು) ತಲೆಯ ಮೇಲೆ ಧರಿಸಿದಾಗ(ಸಿಂಪಡಿಸಿಕೊಂಡಾಗ) ಉಂಟಾಗುತ್ತದೆ. ಏಳು ಸಾಗರಗಳವರೆಗಿನ ಎಲ್ಲಾ ತೀರ್ಥಗಳಲ್ಲಿ ಸ್ನಾನ ಮಾಡಿದ ಫಲವು ಗುರುವಿನ ಪಾದೋದಕದ ಸಹಸ್ರ ಬಿಂದುಗಳಲ್ಲಿ ಒಂದು ಅಂಶದ ಫಲವನ್ನು ತುಂಬಿಕೊಡಲಾರದು ಅಂದರೆ ಅದಕ್ಕೆ ಸಮನಾಗಲಾರದು ಎಂದು ವಿವರಿಸಿದೆ.

ಲಿಂಗ ಪಾದೋದಕದ ಮಹಿಮೆ

ಅಕಾಲಮೃತ್ಯುಮಥನಂ ಸರ್ವವ್ಯಾಧಿವಿನಾಶನಮ್।
ಸರ್ವಪಾಪೋಪಶಮನಂ ಶಂಭೋಃ ಪಾದೋದಕಂ ಶುಭಮ್॥
ಮಂಗಲಂ ಮಂಗಲಾನಾಂ ಚ ಸರ್ವಪಾವನಪಾವನಮ್।
ದುಷ್ಟಗ್ರಹೋಪಶಮನಮ್ ಇಷ್ಟಸಿದ್ಧಿಪ್ರದಾಯಕಮ್॥
ಸರ್ವದುಃಖಪ್ರಶಮನಂ ಸರ್ವೋಪದ್ರವನಾಶನಮ್।
ಸರ್ವಸಿದ್ಧಿಪ್ರದಂ ಸದ್ಯಃ ಸರ್ವೇಷಾಂ ಮುಕ್ತಿದಾಯಕಮ್॥[೨೩]

ಶಂಭುವಿನ ಪಾದೋದಕವು ಅಕಾಲಮೃತ್ಯುವನ್ನು ಇಲ್ಲವಾಗಿಸುತ್ತದೆ. ಎಲ್ಲಾ ರೋಗಗಳನ್ನು ನಾಶಗೊಳಿಸುತ್ತದೆ. ಎಲ್ಲಾ ಪಾಪಗಳನ್ನು ಉಪಶಮನಗೊಳಿಸುತ್ತದೆ. ಇದು ಮಂಗಲಕರವಾದವುಗಳಿಗೆ ಮಂಗಲಕರ. ಎಲ್ಲಾ ಪವಿತ್ರವಾದವುಗಳಿಗೆ ಪವಿತ್ರಕರ. ಇದು ಕೆಟ್ಟಗ್ರಹಗಳನ್ನು ಶಾಂತಗೊಳಿಸುವುದು. ಬಯಸಿದ್ದನ್ನು ಸಿದ್ಧಿಸುವಂತೆ ಮಾಡುವುದು. ಎಲ್ಲಾ ದುಃಖಗಳನ್ನು ಕೊನೆಗೊಳಿಸುವುದು. ಎಲ್ಲಾ ಉಪದ್ರವಗಳನ್ನು ದೂರಮಾಡುವುದು. ಕೂಡಲೆ ಎಲ್ಲಾ ಸಿದ್ಧಿಗಳನ್ನು ಕೊಡುವಂತಹದು ಮತ್ತು ಎಲ್ಲರಿಗೂ ಮುಕ್ತಿಯನ್ನು ನೀಡುವುದು ಎಂದು ವಿವರಿಸಿದೆ.

ಜಂಗಮ ಪಾದೋದಕದ ಮಹಿಮೆ

ಚರಪಾದೋದಮಹಿಮಾ ವರ್ಣಿತುಂ ಕೇನ ಶಕ್ಯತೇ।
ತದ್ಧಿ ಮೋಚಯಿತುಂ ಸದ್ಯಃ ಶಕ್ನುತೇ ಯಚ್ಚರಾಚರಮ್ ॥[೨೪]

ಜಂಗಮನ ಪಾದೋದಕದ ಮಹಿಮೆಯನ್ನು ಯಾರು ವರ್ಣಿಸಲು ಶಕ್ತರು? ಗುರು-ಲಿಂಗ ಪಾದೋದಕ ಸೇವನೆಗಿಂತ ಜಂಗಮ ಪಾದೋದಕ ಸೇವನೆ ವಿಶೇಷ ಫಲದಾಯಕವಾಗಿದ್ದು, ಅದು ಕೂಡಲೆ ಚರಾಚರಗಳನ್ನು ಮುಕ್ತಗೊಳಿಸಲು ಶಕ್ತವಾಗಿದೆ

---

೨೩. ಚ.ಆ.ಕ್ರಿ ಪಟಲ ೫. ಶ್ಲೋಕ ಸಂಖ್ಯೆ ೧೨-೧೪
೨೪. ಚ.ಆ.ಕ್ರಿಪಾ., ಪಟಲ ೫. ಶ್ಲೋಕ ಸಂಖ್ಯೆ ೧೯

ಎಂದು ಜಂಗಮ ಪಾದೋದಕದ ಮಹಿಮೆಯನ್ನು ಕೊಂಡಾಡಿದೆ. ಇದನ್ನೇ ವಚನಕಾರರು –

"ಜಂಗಮದ ಪಾದತೀರ್ಥವು ಭವರೋಗ ವೈದ್ಯವಯ್ಯಾ,
ಜಂಗಮದ ಪಾದತೀರ್ಥವು ಶಿವಸಾಯುಜ್ಯವಯ್ಯಾ,
ಜಂಗಮದ ಪಾದತೀರ್ಥವು ಜೀವನ್ಮುಕ್ತಿಯಯ್ಯಾ,
ಜಂಗಮದ ಪಾದತೀರ್ಥವು ಆದಿ ವ್ಯಾಧಿ ವಿಪತ್ತು
ರೋಗರುಜಿನಂಗಳ ಶೋಧಿಸಿ ಕಿತ್ತು ಬಿಸುಟುವುದಯ್ಯಾ,
ಜಂಗಮದ ಪಾದತೀರ್ಥವು ಅಂಗದ ಅವಗುಣವ ಕಳೆವುದಯ್ಯಾ,"[೨೫]

ಎಂದು ಜಂಗಮ ಪಾದೋದಕ ಕುರಿತಾದ ಆಗಮ ಅಭಿಮತವನ್ನು ಪುಷ್ಟೀಕರಿಸಿದ್ದಾರೆ. ಚೆನ್ನಬಸವಣ್ಣನವರು ತ್ರಿವಿಧ ಪಾದೋದಕದ ಮಹಿಮೆಯನ್ನು ಕುರಿತು –

– – ಗುರು ಪಾದೋದಕದಿಂದ ಸಂಚಿತಕರ್ಮ ನಾಸ್ತಿ
ಲಿಂಗ ಪಾದೋದಕದಿಂದ ಪ್ರಾರಬ್ಧಕರ್ಮನಾಸ್ತಿ
ಜಂಗಮ ಪಾದೋದಕದಿಂದ ಆಗಾಮಿಕರ್ಮನಾಸ್ತಿ
ಇಂತೀ ತ್ರಿವಿಧೋದಕದಲ್ಲಿ ತ್ರಿವಿಧಕರ್ಮನಾಸ್ತಿ
ಇದು ಕಾರಣ, ಕೂಡಲಚೆನ್ನಸಂಗಮದೇವಾ,
ತ್ರಿವಿಧೋದಕವ ನಿಮ್ಮ ಶರಣನೆ ಬಲ್ಲ"[೨೬]

ಎಂದು ಪಾದೋದಕದಿಂದ ಇಹಪರದಲ್ಲಿ ಸೌಖ್ಯ ಉಂಟಾಗುವುದೆಂದು ಪ್ರತಿಪಾದಿಸಿದ್ದಾರೆ. ಈ ಗುರು, ಲಿಂಗ ಹಾಗೂ ಜಂಗಮ ಪಾದೋದಕದ ಪ್ರಭಾವ, ಪರಿಣಾಮವನ್ನು ಸಿದ್ಧರಾಮೇಶ್ವರು–

ಗುರುಪಾದೋದಕದಿಂದ ಸ್ಥೂಲ ದೇಹಶುದ್ಧಿ,
ಕ್ರಿಯಾಪಾದೋದಕದಿಂದ ಸೂಕ್ಷ್ಮ ದೇಹಶುದ್ಧಿ,
ಜ್ಞಾನಪಾದೋದಕದಿಂದ ಕಾರಣ ದೇಹಶುದ್ಧಿ
ಗುರುಪಾದೋದಕದಲ್ಲಿ ಇಷ್ಟಲಿಂಗ ಸಂಬಂಧ
ಕ್ರಿಯಾಪಾದೋದಕದಲ್ಲಿ ಪ್ರಾಣಲಿಂಗ ಸಂಬಂಧ,
ಜ್ಞಾನಪಾದೋದಕದಲ್ಲಿ ಭಾವಲಿಂಗ ಸಂಬಂಧ
ಅದು ಕಾರಣ ಪಾದೋದಕವೇ ಪ್ರತ್ಯಕ್ಷ ಪರಬ್ರಹ್ಮ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನ[೨೭]

---

೨೫. ಸಮಗ್ರ ವಚನಸಂಪುಟ ೧೪,ಸಂಕೀರ್ಣ ವಚನಸಂಪುಟ ೯,ವಚನ ಸಂಖ್ಯೆ ೭೭೮, ಪುಟ೩೫೪
೨೬. ಚೆನ್ನಬಸವಣ್ಣನವರ ವ.ಸಂ.ಸಮಗ್ರ ವಚನಸಂಪುಟ ೩,ವಚನ ಸಂಖ್ಯೆ ೧೯೫. ಪುಟ೩೭೩
೨೭. ಸಿದ್ಧರಾಮೇಶ್ವರ ವ.ಸಂ. ಸಮಗ್ರ ವಚನ ಸಂಪುಟ ೪, ವಚನ ಸಂಖ್ಯೆ ೪೯೮. ಪುಟ ೧೪೧

ಎಂದು ತ್ರಿವಿಧ ಪಾದೋದಕದ ಮಹಿಮೆಯನ್ನು ಕೊಂಡಾಡಿದ್ದಾರೆ. ತ್ರಿವಿಧ ಪಾದೋದಕದಿಂದ ಸಂಚಿತಕರ್ಮ, ಪ್ರಾರಬ್ಧಕರ್ಮ, ಆಗಮಿಕ ಕರ್ಮಗಳು ದೂರಾಗಿ, ಭಕ್ತನ ಸ್ಥೂಲ, ಸೂಕ್ಷ್ಮ ಹಾಗೂ ಕಾರಣ ಶರೀರದ ಶುದ್ಧೀಕರಣವಾಗುತ್ತದೆ ಎಂದು ಆಗಮ ಮತ್ತು ವಚನಗಳಲ್ಲಿ ಪ್ರತಿಪಾದಿಸಲಾಗಿದೆ. ಹೀಗೆ ಪಾದೋದಕ ಪ್ರಕ್ರಿಯೆಯು ಸಂಪೂರ್ಣ ಶ್ರದ್ಧಾಮೂಲವಾಗಿದ್ದು ವೀರಶೈವದಲ್ಲಿ ಗುರು ಮತ್ತು ಜಂಗಮರ ಬಗೆಗಿರುವ ಭಕ್ತಿಯ ಅಧಿಕ್ಯವನ್ನು ಸೂಚಿಸುವುದರೊಂದಿಗೆ ವ್ಯಕ್ತಿಯಲ್ಲಿಯ ಅಹಂಕಾರ ನಿರಸನಗೈದು ವಿನಮ್ರತೆ, ಸಮರ್ಪಣಾಭಾವವನ್ನು ಪ್ರೇರೆಪಿಸುವುದರೊಂದಿಗೆ ಅಂತಃಕರಣ ಶುದ್ಧಿಗೊಳಿಸಿ, ಗುರು-ಜಂಗಮರಲ್ಲಿ ಪರಶಿವನನ್ನು ಕಂಡು ಆನಂದಿಸುವ ಮನೋಭಾವವನ್ನು ಬೆಳೆಸಿ ಕ್ರಮೇಣ ಸ್ವಸ್ವರೂಪಜ್ಞಾನವನ್ನು ಒದಗಿಸುವದು.

ಒಟ್ಟಿನಲ್ಲಿ ಪಾದೋದಕ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ತಿಳಿದುಬರುವ ವಿಷಯವೇನೆಂದರೆ ಪರಶಿವನ ಪರಮಾನಂದ ಸ್ವರೂಪದ ನಿರ್ಮಲ ಜ್ಞಾನವೇ ತಾತ್ವಿಕವಾದ 'ಪಾದೋದಕ' ಸೇವನೆಯಾಗಿದೆ. ಈ ತಾತ್ವಿಕ ಪಾದೋದಕವು ಅಂತಃಕರಣ ಶುದ್ಧಿಗೊಂಡಾಗ ಮಾತ್ರ ಪ್ರಾಪ್ತವಾಗುವದು. ಕಾರಣ ಆಗಮಗಳಲ್ಲಿ ಅಂತಃಕರಣ ಶುದ್ಧಿಗೊಸ್ಕರ ಗುರು-ಲಿಂಗ-ಜಂಗಮರ ಚರಣಾಮೃತವನ್ನು ಸೇವನೆ ಮಾಡುವ ವಿಧಾನವನ್ನು ಉಪದೇಶಿಸಲಾಗಿದೆ. ಗುರುವಿನ ಪಾದಪೂಜೆಯಿಂದ ದೊರೆತದ್ದು ಗುರುಪಾದೋದಕ ವೆಂದೂ, ಜಂಗಮನ ಪಾದಪೂಜೆಯಿಂದ ಲಭ್ಯವಾದದ್ದು ಜಂಗಮ ಪಾದೋದಕವೆಂದೂ ಮತ್ತು ಇಷ್ಟಲಿಂಗದ ಪೂಜೆಯಿಂದ ಲಭ್ಯವಾದುದು ಲಿಂಗ ಪಾದೋದಕವೆಂದು ಮೂರುವಿಧವಾಗುತ್ತದೆ. ಈ ತ್ರಿವಿಧ ಪಾದೋದಕಗಳನ್ನು ಸಾಕ್ಷಾತ್ ಆಚಾರದಿಂದಲೋ ಅಥವಾ ಸಂಬಂಧಾಚಾರದಿಂದಲೋ ಪ್ರತಿನಿತ್ಯ ಸೇವಿಸುವುದರಿಂದ ಸ್ಥೂಲ, ಸೂಕ್ಷ್ಮ ಮತ್ತು ಕಾರಣಶರೀರಗಳು ಪರಿಶುದ್ಧವಾಗುತ್ತವೆ ಎಂದು ಆಗಮಗಳು ಪ್ರತಿಪಾದಿಸಿವೆ. ಪಾದೋದಕ ಮಾಡಿಕೊಳ್ಳುವ ವಿಧಾನವು ಶಿವಾಗಮಗಳಲ್ಲಿ ಪ್ರತಿಪಾದನೆಗೊಂಡಿದ್ದರೂ ವಚನಗಳಲ್ಲಿ ಅತ್ಯಂತ ವಿಸ್ತೃತವಾಗಿ ಪ್ರತಿಪಾದಿಸಲ್ಪಟ್ಟಿದೆ. ಚೆನ್ನಬಸವಣ್ಣನವರ ವಚನಗಳಲ್ಲಿ ಪ್ರಾಯೋಗಿಕವಾಗಿ ಗುರುಪಾದಪೂಜೆ ಮತ್ತು ಜಂಗಮಪಾದಪೂಜೆಗಳ ಎಲ್ಲಾ ವಿವರಗಳಿಗೂ ದೊರೆಯುತ್ತವೆ. ಪಾದೋದಕವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಸ್ವೀಕರಿಸಿದರೆ ಮಾತ್ರ ಅದು ಪರಿಣಾಮಕಾರಿ ಇಲ್ಲದಿದ್ದಡೆ ಅದು ಕಾಲಜಲವೆಂದು ರೂಪಕಾಲಂಕಾರದಲ್ಲಿ ರಮ್ಯವಾಗಿ ವಚನದಲ್ಲಿ ಬಳಸಿದ್ದಾರೆ. ಆದರೆ ಕ್ರಿಯಾಚಾರವಿಲ್ಲದ ಗುರು-ಜಂಗಮರಿಂದ ಪಾದೋದಕವನ್ನು ಸ್ವೀಕರಿಸಬಾರ ದೆಂದು ವಚನಗಳಲ್ಲಿ ಎಚ್ಚರಿಸಲಾಗಿದೆ. ಅಲ್ಲದೇ ಪಾದೋದಕ ಸೇವನೆಯು ಕೇವಲ ಕ್ರಿಯಾ ವಿಧಾನವಾಗಿರದೇ ಜ್ಞಾನಾನುಭವದ ವಿಧಾನವಾಗಬೇಕೆಂಬ ವಿವರಣೆ ವಚನದಲ್ಲಿದೆ. ಹೀಗೆ ವಚನಗಳು ಶಿವಾಗಮಗಳಲ್ಲಿಯ ಸಿದ್ಧಾಂತದ ಮೂಲ ಜಾಡನ್ನು ಬಿಡದೆ ತಮ್ಮ ಅನುಭವವನ್ನು ಅದರಲ್ಲಿ ಮಿಶ್ರಣಗೊಳಿಸಿ ಅತ್ಯಂತ ವಿಸ್ತೃತವಾಗಿ ಪಾದೋದಕ ವಿಷಯವನ್ನು ಪ್ರತಿಪಾದಿಸಿವೆ.

೫.೧.೫ ಪ್ರಸಾದ

ಜಗತ್ತಿನ ಸಕಲ ಪದಾರ್ಥಗಳೆಲ್ಲವೂ ಶಿವನ ಅನುಗ್ರಹದಿಂದಲೇ ಬಂದವುಗಳು. ಆದುದರಿಂದ ಪ್ರತಿಯೊಂದು ಪದಾರ್ಥವೂ ಮೊದಲು ಆ ದೇವನಿಗೆ ಅರ್ಪಿತವಾಗಬೇಕು. ಹೀಗೆ ಮನಃಪೂರ್ವಕವಾಗಿ ಭಕ್ತಿಭಾವದಿಂದ ಶಿವನಿಗೆ ಅರ್ಪಿಸಿದ್ದೇ ಪ್ರಸಾದ. ಈ ಪ್ರಸಾದದ ತಳಹದಿ 'ಅರ್ಪಣ'. ಮಾನವನ ಅಹಂಕಾರ ನಿರಸನಕ್ಕೆ ಈ ಅರ್ಪಣ ತತ್ವವು ಅತ್ಯಂತ ಮಹತ್ವವಾದುದು. ಆದುದರಿಂದ ವೀರಶೈವ ಧರ್ಮದಲ್ಲಿ ಪ್ರಸಾದಕ್ಕೆ ಅತ್ಯಂತ ಉನ್ನತ ಸ್ಥಾನವಿದೆ.

ಪ್ರಸಾದದ ಶಾಬ್ದಿಕ ಮತ್ತು ತಾತ್ವಿಕ ಅರ್ಥ, ಪ್ರಸಾದದ ವಿಧಗಳು, ಪ್ರಸಾದವನ್ನು ಸಮರ್ಪಿಸುವ ಬಗೆ, ಪ್ರಸಾದದ ಮಹಿಮೆ ಮುಂತಾದವುಗಳ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅದು ಇಂತಿದೆ –

ಪ್ರಸಾದದ ಶಾಬ್ದಿಕ ಮತ್ತು ತಾತ್ವಿಕ ಅರ್ಥ–

'ಪ್ರ' ಉಪಸರ್ಗ ಪೂರ್ವಕವಾದ 'ಸದ್' ಧಾತುವಿನಿಂದ ನಿಷ್ಪನ್ನವಾದ 'ಪ್ರಸಾದ' ಪದಕ್ಕೆ ಅಮರಕೋಶದಲ್ಲಿ 'ಪ್ರಸನ್ನತೆ', 'ಶಿವಾನುಗ್ರಹ', 'ನಿರ್ಮಲತೆ', 'ಕಾವ್ಯಗುಣ' ಎಂಬ ಸಾಮಾನ್ಯ ಅರ್ಥಗಳಿವೆ. 'ಪ್ರಸಾದಸ್ತು ಪ್ರಸನ್ನತಾ' ಎಂಬಂತೆ ಮನಸ್ಸಿಗೆ ಪ್ರಸನ್ನತೆಯನ್ನು ನೀಡುವುದೇ ಪ್ರಸಾದವೆನಿಸುವದು. ವೀರಾಗಮದಲ್ಲಿ –

ಪಕಾರಂ ಪಾಪನಾಶಂ ಚ ರೇಫೋಭೋಗಂ ವಹೇತ್ಸದಾ ।
ತಯೋರ್ದ್ವಿ ತಯಸಂಯುಕ್ತಂ ಮಾತೃಕಂ ನ್ಯಾಸಗರ್ಭಿತಂ ॥[೧]

'ಪ'ಕಾರವು ಪಾಪನಾಶನವನ್ನೂ, 'ರ' ಎಂಬುದು ಸರ್ವಭೋಗವನ್ನು ಹಾಗೂ ಮುಂದಿನ 'ಸಾ–ದ' ಎಂಬುದು ಎರಡನ್ನೂ ನೀಡುವದು ಎಂಬರ್ಥವನ್ನು ನೀಡುತ್ತದೆ. ಕಾರಣ ನಮ್ಮ ಸರ್ವಪಾಪಗಳನ್ನೂ ನಾಶಮಾಡಿ ಸರ್ವಭೋಗಗಳನ್ನೂ ನೀಡುವುದೇ ಪ್ರಸಾದದ ಶಬ್ದಾರ್ಥವಾಗಿದೆ ಎಂದು ಅರ್ಥೈಸಿದೆ. ಅಲ್ಲದೇ ಚಂದ್ರಜ್ಞಾನಾಗಮವು ಪ್ರಸಾದಕ್ಕೆ ಮೂರು ಅರ್ಥಗಳನ್ನು ಕೊಡುತ್ತದೆ.

೧. ಗುರು–ಲಿಂಗ–ಜಂಗಮರಿಗೆ ಸಮರ್ಪಿತವಾದ ಪದಾರ್ಥ[೨]
(ಗುರು ಲಿಂಗ ಜಂಗಮಾನಾಂ ಭುಕ್ತಶೇಷಃ ಪ್ರಸಾದಕಃ॥)

೨. ದೇವರ ಅನುಗ್ರಹ ಅಥವಾ ಪ್ರಸನ್ನತೆ (ಸಮರ್ಪಿತಃ ಪ್ರಸಾದೈಕಾರಣತ್ವಾನ್ಮಹೇಶಿತುಃ।)[೩]

೩. ಮಾನಸಿಕ ಪರಮಾನಂದ (ಪ್ರಸಾದತ್ವೇನ ವಿಖ್ಯಾತಃ ಪರಮಾನಂದದಾಯಕಃ॥)[೪]

---

೧. ವೀರಾಗಮ ಪಟಲ ೭, ಶ್ಲೋಕ ಸಂಖ್ಯೆ ೨೩೮, ಪುಟ ೫೨೪
೨. ಚಂ.ಆ.ಕ್ರಿ.ಪಾ, ಪಟಲ ೫. ಶ್ಲೋಕ ಸಂಖ್ಯೆ ೨೦
೩. ಚಂ.ಆ.ಕ್ರಿ.ಪಾ, ಪಟಲ ೫. ಶ್ಲೋಕ ಸಂಖ್ಯೆ ೩೩
೪. ಚಂ.ಆ.ಕ್ರಿ.ಪಾ, ಪಟಲ ೫. ಶ್ಲೋಕ ಸಂಖ್ಯೆ ೩೩

ಇವುಗಳಲ್ಲಿ ಮೊದಲನೆಯದು ಬಹಿರಂಗದ ಪ್ರಸಾದವಾದರೆ, ಉಳಿದೆರಡು ಆಂತರಿಕ ಅರ್ಥವನ್ನು ಸೂಚಿಸುತ್ತವೆ. ಶಿವಸ್ವರೂಪಿಗಳಾದ ಗುರು ಲಿಂಗ ಜಂಗಮರಲ್ಲಿ ನಿಷ್ಠೆಯುಳ್ಳವನಾಗಿ ಅವರಿಗೆ ಭಕ್ತಿಯಿಂದ ಸಮರ್ಪಿಸಿದ ಅನ್ನವನ್ನೇ ಸೇವಿಸುತ್ತ ಶಿವನ ಕೃಪೆಗೆ ಪಾತ್ರನಾಗಿ ಆತನ ಅನುಗ್ರಹ ಬಲದಿಂದ ಮಾನಸಿಕ ಪ್ರಸನ್ನತೆಯನ್ನು ಹೊಂದುವುದೇ ಪ್ರಸಾದವಾಗಿದೆ. ಕಾರಣ 'ಪ್ರಸನ್ನ ಚಿತ್ತತೆಯನ್ನುಂಟು ಮಾಡುವುದು ಯಾವುದೋ ಅದೇ ಪ್ರಸಾದ' ಎಂದು ಆಗಮಗಳಲ್ಲಿ ವರ್ಣಿಸಲಾಗಿದೆ. ಇದೇ ಅಭಿಪ್ರಾಯವನ್ನೇ ವಚನಕಾರರು ಪುಷ್ಟೀಕರಿಸುತ್ತ –

ಪ್ರಸಾದವೇ ಪರಮಜ್ಞಾನ, ಪ್ರಸಾದವೆ ಪರಾಪರ,
ಪ್ರಸಾದವೇ ಪರಬ್ರಹ್ಮ, ಪ್ರಸಾದವೆ ಪರಮಾನಂದ,
ಪ್ರಸಾದವೇ ಪರಿಪೂರ್ಣ, ಸೌರಾಷ್ಟ್ರ ಸೋಮೇಶ್ವರ ಲಿಂಗದ,
ಪ್ರಸನ್ನತೆಯೇ ಪ್ರಸಾದ ಇಂತಪ್ಪ ಪ್ರಸಾದದಮಹಾತ್ಮೆಗೆ ನಮೋನಮೋ ಎನುತಿರ್ದೆನು.[೫]

ಎಂದು ಪ್ರಸಾದವೇ ಪರಮಜ್ಞಾನ, ಪ್ರಸಾದವೇ ಪರಬ್ರಹ್ಮ, ಪ್ರಸಾದವೆ ಪರಮಾನಂದ ಎಂದು ಅರ್ಥೈಸಿದ್ದಾರೆ. ಅಲ್ಲದೇ –

ಒಕ್ಕುದು ಪ್ರಸಾದವಲ್ಲ, ಮಿಕ್ಕುದು ಪ್ರಸಾದವಲ್ಲ. ಹತ್ತೆ ಕರೆದಿಕ್ಕುವದು ಪ್ರಸಾದವಲ್ಲ
ತರ್ಕೈಸಿ ನಿಮ್ಮುವನಪ್ಪಿಕೊಂಡಡೆ, ನಿಶ್ಚಯ ಪ್ರಸಾದ ಕಾಣಾ ರಾಮನಾಥಾ[೬]

ಎಂದು ಪರಶಿವನ ಪರಮಾನುಗ್ರಹ ಪಡೆದು ಪರಮಾನಂದ ಹೊಂದುವುದೇ ಪ್ರಸಾದವೆಂದು ಅರುಹಿದ್ದಾರೆ. ಕಾರಣ ಇಂಥ ಪರಮಾನಂದವನ್ನು ಅನುಭವಿಸಬೇಕಾದರೆ ಬಾಹ್ಯ ಪದಾರ್ಥಗಳನ್ನೆಲ್ಲ ಗುರು ಲಿಂಗ ಜಂಗಮಕ್ಕೆ ಸಮರ್ಪಿಸಿಯೇ ಸ್ವೀಕರಿಸಬೇಕೆಂದು ಆಗಮ ಮತ್ತು ವಚನಗಳಲ್ಲಿ ಪ್ರತಿಪಾದಿಸಲಾಗಿದೆ.

ಪರಶಿವನಿಗೆ ಸಮರ್ಪಿಸದೇ ಏನನ್ನೂ ಸ್ವೀಕರಿಸಬಾರದು –

ಮನದ ಶುದ್ಧಾಶುದ್ಧತೆಯು ನಾವು ಸೇವಿಸುವ ಅನ್ನವನ್ನು ಅವಲಂಬಿಸಿರುತ್ತದೆ. ಪರಿಶುದ್ಧ, ಪವಿತ್ರ ಆಹಾರ ಸೇವಿಸುವುದರಿಂದ ಮನವು ಪರಿಶುದ್ಧವೂ ಮತ್ತು ಪವಿತ್ರವೂ ಆಗುವುದು. ಇದರಂತೆ ಅಶುದ್ಧ ಹಾಗೂ ಅಪವಿತ್ರ ಅನ್ನದ ಸೇವನೆಯಿಂದ ಮನವು ಅಶುದ್ಧವೂ, ಅಪವಿತ್ರವೂ ಆಗುವುದು. ಏಕೆಂದರೆ ನಾವು ಸೇವಿಸಿದ ಅನ್ನದ ಸೂಕ್ಷ್ಮಭಾಗವು ಮನಸ್ಸಾಗಿ ರೂಪುಗೊಳ್ಳುವುದರಿಂದ ಮನಸ್ಸನ್ನು ನಿರ್ಮಲ ಗೊಳಿಸಬೇಕಾದರೆ ಅದನ್ನು ಅನ್ನದಿಂದಲೇ ಪ್ರಾರಂಭಿಸಬೇಕು. ಮನವು ಪವಿತ್ರವಾಗ ಬೇಕಾದರೆ ನಾವು ಸೇವಿಸುವ ಅನ್ನವು ಪವಿತ್ರವಾಗಬೇಕು ಅದನ್ನು ಶುದ್ಧಗೊಳಿಸಬೇಕು.

ಸಾಮಾನ್ಯವಾಗಿ ಪದಾರ್ಥಗಳಿಗೆ ಸಂಬಂಧಪಟ್ಟಂತೆ ಎರಡು ಪ್ರಕಾರದ ದೋಷಗಳಿರುತ್ತವೆ.

---

೫. ಸಮಗ್ರ ವಚನಸಂಪುಟ ೬, ಸಂಕೀರ್ಣ ವಚನಸಂಪುಟ ೧,ವಚನ ಸಂಖ್ಯೆ ೧೦೨೬.ಪುಟ ೩೧೬
೬. ಸಮಗ್ರ ವಚನಸಂಪುಟ ೭, ಸಂಕೀರ್ಣ ವಚನಸಂಪುಟ ೨, ವಚನ ಸಂಖ್ಯೆ ೭೫೪, ಪುಟ ೨೪೯

೧) ಪದಾರ್ಥಗತ ದೋಷ

೨) ವ್ಯಕ್ತಿಗತದೋಷ

ದವಸಧಾನ್ಯಗಳಲ್ಲಿ ಸ್ಥೂಲವಾಗಿ ಕಂಡು ಬರುವ ಕಸ-ಕಡ್ಡಿ, ಮಣ್ಣು-ಹರಳುಗಳು ಪದಾರ್ಥಗತ ದೋಷಗಳಾದರೆ, ಈ ಪದಾರ್ಥವು ನನ್ನದೇ ಎಂಬ ಅಭಿಮಾನ ಮತ್ತು ಇದನ್ನು ಯಾರಿಗೂ ಕೊಡದೇ ನಾನೇ ಅನುಭವಿಸಬೇಕೆಂಬ ಸ್ವಾರ್ಥ ಇವು ಪದಾರ್ಥಕ್ಕೆ ಸಂಬಂಧಿಸಿದಂತೆ ವ್ಯಕ್ತಿಗತ ದೋಷಗಳು. ಪದಾರ್ಥಗತ ದೋಷಗಳನ್ನು ಹಸನುಗೊಳಿಸುವದರ ಮೂಲಕ ಪರಿಶುದ್ಧಗೊಳಿಸಬಹುದು. ಆದರೆ ಪದಾರ್ಥಕ್ಕೆ ಸಂಬಂಧಿಸಿದ ವ್ಯಕ್ತಿಗತ ದೋಷಗಳು ನಷ್ಟವಾಗಬೇಕಾದರೆ ಪದಾರ್ಥವನ್ನು ದೇವರಿಗೆ ಸಮರ್ಪಿಸಬೇಕಾಗುತ್ತದೆ. ವೀರಶೈವ ಧರ್ಮದಲ್ಲಿ ಅನ್ನವನ್ನು ಶಿವನಿಗೆ ಹಾಗೂ ಶಿವಸ್ವರೂಪರಾದ ಗುರು-ಲಿಂಗ-ಜಂಗಮರಿಗೆ ಸಮರ್ಪಿಸುವ ಮೂಲಕ ಪ್ರಸಾದವನ್ನಾಗಿ ಮಾಡಿಕೊಂಡು ಸೇವಿಸುವುದರಿಂದ ಅನ್ನ ಶುದ್ಧಿಯಾಗುವುದೆಂದು ಪ್ರತಿಪಾದಿಸಲಾಗಿದೆ. ಏಕೆಂದರೆ ಪದಾರ್ಥವನ್ನು ಪರಮೇಶ್ವರನಿಗೆ ಅರ್ಪಿಸಿದಾಗ ಅದು ಪ್ರಸಾದವಾಗುತ್ತದೆ. ಪ್ರಸಾದದಲ್ಲಿ ಇದು ನನ್ನದೆಂಬ ಮಮಕಾರವಾಗಲಿ, ಇದನ್ನು ನಾನೇ ಉಪಯೋಗಿಸಬೇಕೆಂಬ ಸ್ವಾರ್ಥವಾಗಲಿ ಉಳಿಯುವುದಿಲ್ಲ. ಹೀಗಾಗಿ ಅನ್ನವನ್ನು ಭಗವಂತನಿಗೆ ಸಮರ್ಪಿಸಿ ಪ್ರಸಾದವನ್ನು ಉಪಯೋಗಿಸುವುದರಿಂದ ಮನುಷ್ಯನಲ್ಲಿ ನೆಲೆಸಿರುವ ಅನ್ನಕ್ಕೆ ಸಂಬಂಧಿಸಿದ ಭಾವನಾತ್ಮಕ ದೋಷಗಳೂ ಸಹ ದೂರವಾಗುತ್ತವೆ. ಇಂತಹ ಪ್ರಸಾದವನ್ನು ಭೋಗಿಸುವುದರಿಂದ ಮನೋನ್ನೈರ್ಮಲ್ಯ ನೆಲೆಗೊಂಡು ಮಾನಸಿಕವಾದ ಶಾಶ್ವತ ಪ್ರಸನ್ನತೆ ಅಳವಡುವುದು. ಕಾರಣ ಶಿವಾಗಮಗಳು-

ಭುಂಜತೇ ಯೇ ತು ಸಂಮೂಢಾಸ್ತ್ರ್ಯಂಬಕಾಯಾ ಸಮರ್ಪಿತಮ್।
ತೇ ಭುಂಜತೇ ಕ್ರಿಮೀನೇನಾಂಸ್ಯಧೋ ಗಚ್ಛತಿ ಶಾಶ್ವತಮ್॥[೭]

ಪರಮಾತ್ಮನಿಗೆ ಅರ್ಪಿಸದೆ ಏನನ್ನೂ ಸ್ವೀಕರಿಸಬಾರದು; ಹಾಗೆ ಮಾಡಿದರೆ ಕ್ರಿಮಿ, ಕ್ರೀಟ, ಪಾಪಪುಂಜಗಳನ್ನೇ ತಿಂದಂತೆ; ಅಂಥವರು ಶಾಶ್ವತವಾಗಿ ಅಧೋಲೋಕಕ್ಕೆ ಹೋಗುವರು ಎಂದು ಎಚ್ಚರಿಸುತ್ತವೆ. ಇದನ್ನೇ ಚೆನ್ನಬಸವಣ್ಣನವರು ತಮ್ಮ ಶೈಲಿಯಲ್ಲಿ ಹೀಗೆ ಹೇಳಿದ್ದಾರೆ:

"ಲಿಂಗಕ್ಕೀಯದೆ ಅಂಗಸುಖಕ್ಕಾಗಿ ಅನ್ನೋದಕವ ಕೊಂಡ
ಅಜ್ಞಾನಿಯನೇಂದು ಸುಡಿವೆನಯ್ಯಾ?
ಆತನು ಪತಿತನಾಗಿ ನರಕದಲ್ಲಿ ಹೊರಳುತಿರ್ಪನು
ಅಸಮರ್ಪ್ಯ ಪ್ರಾಣಲಿಂಗೇ ಜಲಂ ವಾ ಫಲಮೇವ ವಾ।
ಸ್ವೀಕುರ್ಯಾದ್ಯದಿ ಮೋಹೇನ ಪತಿತೋ ನರಕಂವ್ರಜೇತ್॥ ಎಂಬುದಾಗಿ,
ಆವ ಪದಾರ್ಥವ ನಾದಡೆಯೂ ಲಿಂಗಕ್ಕೆ ಕೊಡದೆ ಕೊಳಲಾಗದೆಂದುದು

---

೭. ಚಂ.ಆ.ಕ್ರಿ.ಪಾ, ಪಟಲ ೫. ಶ್ಲೋಕ ಸಂಖ್ಯೆ ೨೩

ನಮ್ಮ ಕೂಡಲಚೆನ್ನಸಂಗಯ್ಯನ ವಚನ"[೮]

ಎಂದು ಶೈವಾಗಮದ ಉಲ್ಲೇಖದೊಂದಿಗೆ ತಿಳಿಸಿದ್ದಾರೆ. ಕಾರಣ ಗುರುಲಿಂಗ, ಜಂಗಮಕ್ಕೆ ಮೊದಲು ನೈವೇದ್ಯ ಅರ್ಪಿಸಿ, ಆಮೇಲೆ ತಾನು ಸೇವಿಸಬೇಕು ಎನ್ನುವ ಪ್ರಸಾದ ತತ್ವದಲ್ಲಿ ತನ್ನದೆಂಬುದು, ಎಲ್ಲರದೂ ಎಂಬ ಮನೋಭಾವ ಅಡಕವಾಗಿರುತ್ತದೆ.

ಪ್ರಸಾದದ ವಿಧಗಳು

ವೀರಶೈವ ಸಿದ್ಧಾಂತದಲ್ಲಿ ಗುರು, ಲಿಂಗ ಮತ್ತು ಜಂಗಮ ಎಂಬ ಮೂರನ್ನು ಪೂಜನೀಯವಾದವುಗಳೆಂದು ಅಂಗೀಕರಿಸಿರುವುದರಿಂದ ಇಷ್ಟಲಿಂಗದಂತೆಯೇ ಗುರು-ಜಂಗಮರಿಗೂ ಸಹ ತಾವು ಭೋಗಿಸುವ ಮತ್ತು ಧರಿಸುವ ಎಲ್ಲ ವಸ್ತುಗಳನ್ನು ನಿರ್ವಂಚನೆಯಿಂದ ಅರ್ಪಿಸಿ, ಅವರು ಸ್ವೀಕರಿಸಿ ಉಳಿದ ಪ್ರಸಾದವನ್ನು ಪ್ರತಿದಿನವೂ ಸ್ವೀಕರಿಸುವಂತೆ ಬೋಧಿಸಲಾಗಿದೆ. ಕಾರಣವೇನೆಂದರೆ ಶಿವಲಿಂಗಕ್ಕರ್ಪಿಸಿದ ಪ್ರಸಾದದಂತೆ ಗುರು-ಜಂಗಮರ ಪ್ರಸಾದವೂ ಸಹ ಮನಸ್ಸನ್ನು ಶುದ್ಧಿಗೊಳಿಸುವ ಸಾಧನವಾಗಿದೆ. ಹೀಗೆ ಪೂಜನೀಯವಾದ ಗುರು-ಲಿಂಗ-ಜಂಗಮರೆಂಬ ಮೂವರು ಸ್ವೀಕರಿಸಿ ಉಳಿಸಿದ ಪ್ರಸಾದವೂ ಸಹ ಗುರುಪ್ರಸಾದ, ಲಿಂಗಪ್ರಸಾದ ಮತ್ತು ಜಂಗಮಪ್ರಸಾದವೆಂದು ಮೂರು ವಿಧವಾಗುತ್ತದೆ.

.....ಗುರುಲಿಂಗಜಂಗಮಾನಾಂ ಭುಕ್ತಶೇಷಃ ಪ್ರಸಾದಕಃ।
ಶುದ್ಧಸಿದ್ಧಪ್ರಸಿದ್ಧಾಖ್ಯಃ ಸ ಹಿ ಮುಕ್ತ್ಯೇಕಸಾಧನಃ।[೯]

ಎಂಬ ಆಗಮೋಕ್ತಿಯಂತೆ ಸದ್ಗುರುವು ಸೇವಿಸಿದ ನಂತರ ಅನುಗ್ರಹಿಸಿ ಉಳಿಯುವುದು ಶುದ್ಧ ಪ್ರಸಾದ, ಲಿಂಗಕ್ಕೆ ನೈವೇದ್ಯ ಮಾಡಿದ್ದು ಸಿದ್ಧಪ್ರಸಾದ ಮತ್ತು ಜಂಗಮನು ಸೇವಿಸಿದ ನಂತರ ಅನುಗ್ರಹಿಸಿ ಉಳಿದದ್ದು ಪ್ರಸಿದ್ಧ ಪ್ರಸಾದವೆಂದು ತಿಳಿಸುತ್ತದೆ. ಆದರೆ ಗುರು ಜಂಗಮರು ಸೇವಿಸಿ ಉಳಿದ ಈ ಪ್ರಸಾದಕ್ಕೆ ಎಂಜಲಿನ ದೋಷವಿಲ್ಲವೆಂದು ವಚನಗಳು ಸಾರುತ್ತ-

"ನಮಗೊಬ್ಬರ ಎಂಜಿಲು ಸೇರದಂದು ಶುಚಿತನದಲ್ಲಿ
ಬದುಕುತ್ತೈ(ದೇ)ನೆಂಬ ಬರಿಯ ಮಾತಿನ ಭುಂಜಕರು ನೀವು ಕೇಳಿರೋ।
ನೀವು ತಂದು ಕುಡಿವ ನೀರು ಜಲಚರದೆಂಜಲ, ಮೃಗ ಪಕ್ಷಿಗಳ ಎಂಜಲು,
ಬಳಸಿ ಹೋದಲ್ಲಿ ಕೈ ಕಾಲ ತೊಳೆದು, ಬಾಯ ಮುಕ್ಕಳಿಸುವಲ್ಲಿ
ನರ ಮನುಷ್ಯರೆಂಜಲು. ಇಂತೀ ಹಲವು ಎಂಜಲು ಬೆರಸಿದ
ಸಕಲ ಪದಾರ್ಥವನು ಆ ಜಲದಿಂದ ಪಾಕವನು ಮಾಡಿ,
ನಲಿನಲಿದುಂಡು ಕೊಡುವಲ್ಲಿ, ಆ ಎಂಜಲು ಹಿಂಗಿದ ತಾವು ತೋರಿರಣ್ಣಾ?
ಇದ ಬಲ್ಲ ಭಕ್ತರು, ಸರ್ವಪದಾರ್ಥವನು ಶಿವಮಂತ್ರ ಹಸ್ತಸ್ಪರ್ಶವಿಭೂತಿಯಿಂದೆ

---

೮. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೫೧೨. ಪುಟ೫೫೧
೯. ಚಂ.ಆ.ಕ್ರಿ.ಪಾ, ಪಟಲ ೫. ಶ್ಲೋಕ ಸಂಖ್ಯೆ ೨೦-೨೧

ಶುದ್ಧಮಾಡಿ, ಕೊಟ್ಟು ಕೊಂಬಲ್ಲಿ ಗುರು ಪ್ರಸಾದವಾಯಿತ್ತು. ಹೀಗೆ
ಶುದ್ಧ ಸಿದ್ಧ, ಪ್ರಸಿದ್ಧ ಪ್ರಸಾದವನು ಕೊಟ್ಟು ಕೊಂಬ ಭಕ್ತ ನೀಗಲೇ ಸರ್ವರೆಂಜಲ
ಹೊಲೆಯನೀಗಿದ. ಇದನರಿಯದಿರ್ದೊಡೆ. ಸರ್ವರೆಂಜಲ ಹೊಲೆಯೊಳಗೆ ಮುಳುಗಿ
ಹೋದರೆಂದಾತ ನಮ್ಮ ಅಂಬಿಗರ ಚೌಡಯ್ಯ"[೧೦]

ಎಂದು ಅಂಬಿಗರ ಚೌಡಯ್ಯನವರು ಅರುಹಿದ್ದಾರೆ. ಇದನ್ನು ಸಮರ್ಥಿಸುತ್ತ ಚೆನ್ನಬಸವಣ್ಣನವರು–

"ಅನರ್ಪಿತ ಭುಂಜಕಂಗೆ ಎಂಜಲುಂಟಲ್ಲದೆ
(ಅರ್ಪಿತ) ಭುಂಜಕರಿಗೆ ಎಂಜಿಲೆಲ್ಲಿಯದು?
ಶಿವಭೋಜನವ ಮಾಡಲು ಭಾಜನವಾದಾತಂಗೆ
ಪ್ರಸಾದ ಭೋಗಿಗೆಂಜಲೆಲ್ಲಿಯದೊ"?
ಕರ್ಮಭೋಗೇ ಶಿವಶ್ಚೈವ ಉಪಭೋಗ ವಿಶೇಷತಃ।
ಅಶಿರೀರ ಮಿದಂ ಗ್ರಾಹ್ಯಂ ಲಿಂಗಸಾರಾಯ ಸಂಯುತಂ॥
ಎಂದುದಾಗಿ ಇದು ಕಾರಣ, ಕೂಡಲಚೆನ್ನಸಂಗಮದೇವಾ
ನಿಮ್ಮ ಶರಣಂಗೆಂಜಲು ಸೂತಕ ಹೊದ್ದಲೆಲ್ಲಿಯದೊ?[೧೧]

ಎಂದು ಸ್ಪಷ್ಟಪಡಿಸಿದ್ದರೂ ಸಹ "ನಾಶ್ನಾತಿ ನತ್ಯಜೇನ್ಮಹ್ಯಾಮರ್ಪಿತಂ ಕೃಚ್ಛ್ರಗೋಽಪಿ ವಾ॥ ಸೋಽಯಂ ಪ್ರಸಾದೀ ಕಥಿತ:"[೧೨] ಎಂಬುದಾಗಿ 'ಪ್ರಸಾದದಲ್ಲಿ ಸ್ವಲ್ಪೂ ಸಹ ಬಿಡದೇ ಎಲ್ಲವನ್ನು ಸೇವಿಸುವರೋ ಅವರು ಪ್ರಸಾದಿ' ಎಂಬ ಆಗಮ ವಾಕ್ಯಾನುಸಾರ ಗುರು ಜಂಗಮರೂ ಸಹ ಪ್ರಸಾದವನ್ನು ಶೇಷ ಉಳಿಸಲಾರರು. ಕಾರಣ 'ಭುಕ್ತಶೇಷ' ಎಂದರೆ 'ತಿಂದು ಉಳಿದದ್ದು' ಎಂದು ಅರ್ಥೈಸದೇ ಅವರು ಕೃಪೆದೋರಿ ಅನುಗ್ರಹಿಸಿದ್ದು ಅಥವಾ ಸ್ಪರ್ಶದಿಂದ ಪವಿತ್ರೀಕರಿಸಿದ್ದು ಎಂದು ಅರ್ಥೈಸಬಹುದು. ಕಾರಣ–

ಪೂರ್ವಸರ್ವಗುಣತ್ಯಾಗಃ ಕಾಮಕ್ರೋಧಾದಿ ವರ್ಜನಮ್।
ಗುರುಭುಕ್ತ ಪ್ರಸಾದೋ ಯಃ ಸ ಶುದ್ಧಃ ಪ್ರಕೀರ್ತಿತಃ॥
ಜ್ಞಾತ್ವಾ ಲಿಂಗತ್ರಯಂ ಸಮ್ಯಕ್ ತದೈಕ್ಯಂ ಚ ವರಾನನೇ।
ಲಿಂಗಾರ್ಪಿತಪ್ರಸಾದೋಯಂ ಸಿದ್ಧ ಇತ್ಯಾಭಿಧೀಯತೇ॥
ಶಿವೋಽಹಂ ಭಾವನಾಯುಕ್ತೋ ನಿಶ್ಚಲೀಕೃತಮಾನಸಃ।
ಚರಾರ್ಪಿತಪ್ರಸಾದೋಽಯಂ ಪ್ರಸಿದ್ಧಃ ಪರಿಕೀರ್ತಿತಃ॥[೧೩]

ತನ್ನ ಪ್ರಾಕೃತಿಕ ಗುಣಗಳನ್ನು ಬಿಟ್ಟಂತಹ ಕಾಮ, ಕ್ರೋಧ ಮುಂತಾದ

---

೧೦. ಸಮಗ್ರ ವಚನಸಂಪುಟ ೬, ಸಂಕೀರ್ಣ ವಚನಸಂಪುಟ ೧, ವಚನ ಸಂಖ್ಯೆ ೧೬೯, ಪುಟ೫೬
೧೧. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೪೩೯. ಪುಟ೧೩೬
೧೨. ಪಾ.ಆ ಪಟಲ ೬. ಶ್ಲೋಕ ಸಂಖ್ಯೆ ೧೭–೧೮
೧೩. ಸೂ.ಆ. ಪಟಲ ೮. ಶ್ಲೋಕ ಸಂಖ್ಯೆ ೨೩–೨೫

ದುಷ್ಟವೃತ್ತಿಗಳಿಂದ ಮುಕ್ತನಾದ ಗುರುಭಕ್ತನಿಗೆ ತನ್ನ ಗುರುವಿನ ಮೂಲಕ ದೊರೆತ ಪ್ರಸಾದವು 'ಶುದ್ಧಪ್ರಸಾದ'ವೆಂದು ಕರೆಯಲ್ಪಡುತ್ತದೆ. ಇಷ್ಟ, ಪ್ರಾಣ, ಭಾವ ಲಿಂಗತ್ರಯವನ್ನು ಮತ್ತು ಅವುಗಳ ಐಕ್ಯವನ್ನು ತಿಳಿದು ಲಿಂಗಕ್ಕೆ ಅರ್ಪಿಸಲ್ಪಟ್ಟ ಪ್ರಸಾದವು 'ಸಿದ್ಧಪ್ರಸಾದ'ವೆಂದು ಹೇಳಲ್ಪಡುತ್ತದೆ. 'ಶಿವೋಽಹಂ' ಭಾವನೆಯಿಂದ ಕೂಡಿದ ನಿಶ್ಚಲವಾದ ಮನಸ್ಸುಳ್ಳ ಭಕ್ತನಿಗೆ ಜಂಗಮನಿಂದ ದೊರೆತ ಪ್ರಸಾದವು 'ಪ್ರಸಿದ್ಧಪ್ರಸಾದ'ವೆಂದು ವರ್ಣಿಸಲ್ಪಡುತ್ತದೆ. ಮಾನಸಿಕ ಪ್ರಸನ್ನತೆಯನ್ನು ಬಯಸುವ ಪ್ರತಿಯೊಬ್ಬ ಸಾಧಕನೂ ಸಹ ಈ ಮೂರು ಬಗೆಯ ಪ್ರಸಾದವನ್ನು ಪ್ರತಿದಿನವೂ ತಪ್ಪದೆ ಸ್ವೀಕರಿಸಬೇಕು. ಗುರು–ಜಂಗಮರ ಪ್ರಸಾದವು ದೊರೆಯದಿದ್ದರೆ, ಲಿಂಗಪ್ರಸಾದವನ್ನೇ ಗುರು–ಜಂಗಮರ ಪ್ರಸಾದವೆಂಬ ಭಾವನೆಯಿಂದ ಸೇವಿಸಬೇಕು. ಹೀಗೆ ಲಿಂಗಪ್ರಸಾದ ಒಂದರಲ್ಲಿಯೇ ಮೂರು ಪ್ರಸಾದಗಳ ಸತ್ತ್ವವಿರುವುದರಿಂದ ಪ್ರಸಾದವು ಮೂರು ವಿಧವಾಗಿದೆ. ಈ ಮೂರು ಪ್ರಸಾದಗಳಲ್ಲಿ ಮೂರೂ ದೊರೆಯಲಿ ಅಥವಾ ಎರಡು ದೊರೆಯಲಿ ಪಾದೋದಕದಂತೆ ಎಲ್ಲರದೂ ಎಂದು ಭಾವಿಸಿ ಸ್ವೀಕರಿಸಬೇಕೆಂದು ತಿಳಿಸಿದೆ. ಇದೇ ಅರ್ಥವನ್ನು ಬಸವಣ್ಣನವರ ವಚನದಲ್ಲಿ ಕಾಣಬಹುದು.

> ಶುದ್ಧವ ಗುರುವಿಂಗೆ ಕೊಟ್ಟು, ಶುದ್ಧವಾಯಿತ್ತೆಂಬೆನಯ್ಯಾ,
> ಸಿದ್ಧವ ಲಿಂಗಕ್ಕೆ ಕೊಟ್ಟು, ಸಿದ್ಧವಾಯಿತ್ತೆಂಬೆನಯ್ಯಾ,
> ಪ್ರಸಿದ್ಧವ ಜಂಗಮಕ್ಕೆ ಕೊಟ್ಟು, ಪ್ರಸಿದ್ಧವಾಯಿತ್ತೆಂಬೆನಯ್ಯಾ,
> ಗುರುಲಿಂಗಜಂಗಮವ ಏಕತ್ರಯವಾಗಿ ಕಾಣಲರಿಯದಿದ್ದಡೆ
> ಶುದ್ಧ ಸಿದ್ಧ ಪ್ರಸಿದ್ಧೊಡನೆ ನಗುತ್ಯೆದಾವೆ,
> ತನು ಮನ ಧನವ ನಿವೇದಿಸಲರಿಯನಾಗಿ
> ಕೂಡಲಸಂಗಮದೇವ, ಒಲಿ ಎಂದಡೆಂತೊಲಿವ? [೧೪]

ಎಂದಿದ್ದಾರೆ. ಹೀಗೆ ಆಗಮದಲ್ಲಿ ಪ್ರತಿಪಾದಿತವಾದ ತ್ರಿವಿಧ ಪ್ರಸಾದಗಳನ್ನು ವಚನಕಾರರು ಅಂಗೀಕರಿಸಿದ್ದರೂ ಸಹ ಪ್ರಸಾದದ ಪ್ರಕಾರಗಳನ್ನು ವಿವರಿಸುವಾಗ ವಚನಕಾರರಲ್ಲಿ ಒಮ್ಮತವಿಲ್ಲ. ಕೆಲವರು ಪ್ರಸಾದವು ತ್ರಿವಿಧವೆಂದೂ, ಮತ್ತೆ ಕೆಲವರು ಪ್ರಸಾದವು ಏಕಾದಶ ವಿಧವೆಂದೂ ಹೇಳಿದರೆ, ಮತ್ತೆ ಕೆಲವರು ಪ್ರಸಾದವನ್ನು ತಾತ್ವಿಕವಾಗಿ ವಿವೇಚಿಸಿ ಚತುರ್ವಿಧವೆಂದು ಹೇಳಿದ್ದಾರೆ. ಚತುರ್ವಿಧ ಪ್ರಸಾದದ ಬಗ್ಗೆಯೂ ವಚನಕಾರರಲ್ಲಿ ಒಮ್ಮತವಿಲ್ಲ. ಚತುರ್ವಿಧ ಪ್ರಸಾದದ ಬಗೆಗೆ ಕನಿಷ್ಠ ಮೂರು ಅಭಿಪ್ರಾಯಗಳಿವೆ.

೧. ಕಾಡಸಿದ್ಧೇಶ್ವರ ಎಂಬ ಶರಣರು ಅಚ್ಚ, ನಿಚ್ಚ, ಸಿದ್ಧ, ಮತ್ತು ಸಮಯವೆಂಬ ನಾಲ್ಕು ವಿಧದ ಪ್ರಸಾದವೆನ್ನುತ್ತಾರೆ.[೧೫]

---

೧೪. ಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೧, ವಚನ ಸಂಖ್ಯೆ ೭೮೪. ಪುಟ ೧೯೯
೧೫. ಸಮಗ್ರ ವಚನಸಂಪುಟ ೧೫, ಪುಟ ೧೪೯

ಅ. ಗುರುವು ಶುದ್ಧ ಪ್ರಸಾದದ ಪ್ರತೀಕ. ಅವನಿಂದ ದೀಕ್ಷೆ ಪಡೆದ ಭಕ್ತನು ತಾನೂ ಗುರುವಿನಂತಾಗಬೇಕು ಎಂದು ಪ್ರತಿಜ್ಞೆ ಮಾಡಬೇಕು. ಹೀಗೆ ಶುದ್ಧ ಪ್ರಸಾದ ಸ್ವರೂಪದ ಗುರುವನ್ನು ತನುವಿನಲ್ಲಿ ಸ್ವಾಯತ ಮಾಡಿಕೊಂಡು ಆ ಮೂಲಕ ತನುವಿನ ಕೆಟ್ಟ ಗುಣಗಳನ್ನು ನಷ್ಟಮಾಡಿಕೊಂಡರೆ ಅದು ಅಚ್ಚ ಪ್ರಸಾದ.

ಬ. ಗುರುವು ಕರುಣೆಯಿಂದ ಕೊಡುವ ಇಷ್ಟಲಿಂಗವೂ ಒಂದು ಪ್ರಸಾದವೇ. ಗುರು ಕೊಟ್ಟ ಸಿದ್ಧ ಪ್ರಸಾದರೂಪವಾದ ಲಿಂಗವನ್ನು ಭಕ್ತನು ಮನಸ್ಸಿನಲ್ಲಿ ಸ್ವಾಯತ ಮಾಡಿಕೊಂಡು, ಅದರಿಂದ ಮನಸ್ಸಿನ ದುರ್ಗುಣಗಳನ್ನು ನಷ್ಟಮಾಡಿಕೊಂಡರೆ, ಅದು ನಿಚ್ಚ(ನಿತ್ಯ) ಪ್ರಸಾದ. ಲಿಂಗವು ನಿತ್ಯವಾದುದರಿಂದ ಹಾಗೂ ಲಿಂಗವೇ ಪ್ರಸಾದವಾದುದರಿಂದ ಅದು ನಿತ್ಯ ಪ್ರಸಾದ ಎನಿಸಿಕೊಳ್ಳುತ್ತದೆ.

ಕ. ಗುರು ಮತ್ತು ಲಿಂಗ ಹೇಗೆ ಪ್ರಸಾದಗಳೋ ಹಾಗೆಯೇ ಜಂಗಮವೂ ಸಹ ಒಂದು ಪ್ರಸಾದವೇ. ಸಿದ್ಧ ಪ್ರಸಾದ ರೂಪನಾದ ಜಂಗಮವನ್ನು ಆತ್ಮದಲ್ಲಿ ಸ್ವಾಯತ ಮಾಡಿಕೊಂಡರೆ ಆಗ ಆತ್ಮದ ಜೀವತ್ವ ಭಾವ ನಷ್ಟವಾಗುತ್ತದೆ ಅದು ಸಮಯ ಪ್ರಸಾದ.

ಡ. ಶುದ್ಧ, ಸಿದ್ಧ ಮತ್ತು ಪ್ರಸಾದ ಸ್ವರೂಪವಾದ ಮಹಾಲಿಂಗವೂ ಒಂದು ಪ್ರಸಾದವೇ. ಆ ಮಹಾಲಿಂಗವನ್ನು ನಾವು ನಮ್ಮ ಸರ್ವಾಂಗದಲ್ಲಿ ಸ್ವಾಯತ ಮಾಡಿಕೊಂಡರೆ, ಆಗ ಸರ್ವಾಂಗಗಳ ದುಷ್ಟಗುಣಗಳು ನಷ್ಟವಾಗಿ, ಪೂರ್ಣಭಕ್ತಿ ನೆಲೆಸುತ್ತದೆ. ಹೀಗೆ ಪೂರ್ಣ ಭಕ್ತಿ ನೆಲೆಸಿದರೆ, ನಾವು ತೆಗೆದುಕೊಳ್ಳುವ ಪ್ರಸಾದ ಏಕ ಪ್ರಸಾದ. ಆದರೆ ಈ ಚತುರ್ವಿಧ ಪ್ರಸಾದವು ಪ್ರಸಾದಿಗಿಂತ ಭಿನ್ನವಾಗಿದೆ ಎಂದು ವಿವರಿಸಿದ್ದಾರೆ.

೨. ಕುಷ್ಟಗಿ ಕರಿಬಸವೇಶ್ವರ ಎಂಬ ವಚನಕಾರರ ಪ್ರಕಾರ ಗುರುಪ್ರಸಾದ, ನಿತ್ಯಪ್ರಸಾದ, ಜ್ಞಾನಪ್ರಸಾದ ಮತ್ತು ಸಿದ್ಧ ಪ್ರಸಾದ ಎಂಬ ನಾಲ್ಕು ವಿಧದ ಪ್ರಸಾದಗಳಿವೆ. [೧೬]

ಅ. ಗುರುವಿನ ಮುಖಾಂತರ ಬಂದುದು ಗುರುಪ್ರಸಾದ;

ಬ. ಲಿಂಗದ ಮುಖಾಂತರ ಬಂದುದು ನಿತ್ಯ ಪ್ರಸಾದ; ಲಿಂಗವು ನಿತ್ಯವಾದುದರಿಂದ, ಲಿಂಗಮುಖದಿಂದ ಬಂದುದು ನಿತ್ಯಪ್ರಸಾದವೆನಿಸಿಕೊಳ್ಳುತ್ತದೆ.

ಕ. ಜಂಗಮದ ಮುಖಾಂತರ ಬಂದುದು ಜ್ಞಾನಪ್ರಸಾದ; ಜಂಗಮವೆಂದರೆ ಲಿಂಗಾಂಗ ಸಾಮರಸ್ಯದ ಮೂಲಕ ಜ್ಞಾನ ಪಡೆದಾತ. ಅಂಥವನು ಮಾತ್ರ ಬೇರೆಯವರಿಗೆ ಜ್ಞಾನವನ್ನು ನೀಡಬಲ್ಲ. ಅವನಿಂದ ಬಂದ ಜ್ಞಾನವೂ ಒಂದು ಪ್ರಸಾದವೇ. ವಾಸ್ತವವಾಗಿ, ಜ್ಞಾನಪ್ರಸಾದವು ಹಣ್ಣು, ಹಾಲು, ಮುಂತಾದ ಭೌತಿಕ ಪ್ರಸಾದಗಳಿಗಿಂತ ಹೆಚ್ಚು ಶ್ರೇಷ್ಠವಾದುದು.

ಡ. ಜ್ಞಾನದ ಮುಖಾಂತರ ಬಂದುದು ಸಿದ್ಧ ಪ್ರಸಾದ. ಜಂಗಮನಿಂದ ಪಡೆದ

೧೬. ಸಮಗ್ರ ವಚನಸಂಪುಟ ೧೫, ಪುಟ ೧೫೦

ಜ್ಞಾನದ ಮೂಲಕ ಭಕ್ತನು ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದು, ಸಿದ್ಧನೆನಿಸಿಕೊಳ್ಳುತ್ತಾನೆ; ಅಥವಾ ಜ್ಞಾನ ಮುಖದಲ್ಲಿ ಬಂದ ಪ್ರಸಾದವು ಸಿದ್ಧ ಪ್ರಸಾದವೆನಿಸಿಕೊಳ್ಳುತ್ತದೆ.

3. ಗುರುಸಿದ್ಧ ದೇವರು ಎಂಬ ವಚನಕಾರರ ಪ್ರಕಾರ ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ, ಮತ್ತು ನಿಜಪ್ರಸಾದಗಳೆಂಬ ಚತುರ್ವಿಧ ಪ್ರಸಾದಗಳಿವೆ.[17] ಮೇಲೆ ಹೇಳಿದ ಪದಗಳೇ ಇಲ್ಲಿಯೂ ಬಳಕೆಯಾಗಿದ್ದರೂ, ಅವುಗಳ ಅರ್ಥದಲ್ಲಿ ಭಿನ್ನತೆಯಿದೆ. ಇವರ ಪ್ರಕಾರ,

ಅ. ಗುರುವು ಶಿಷ್ಯನಿಗೆ ಕೊಡುವ ಇಷ್ಟಲಿಂಗವೇ ಗುರು ಪ್ರಸಾದ;

ಬ. ಗುರುವು ಶಿಷ್ಯನಿಗೆ ದಶವಿಧ ಪಾದೋದಕ ಮತ್ತು ಏಕಾದಶ ಪ್ರಸಾದವನ್ನು ಕರುಣಿಸುವುದೇ ಲಿಂಗಪ್ರಸಾದ.

ಕ. ಸೃಷ್ಟಿ ವಿಚಾರ, ಆತ್ಮ ವಿಚಾರ, ಹಾಗೂ ಮನುಷ್ಯನಲ್ಲಿರುವ ಯಾವ ಕಲಾಶಕ್ತಿಗೆ ಯಾರು ಅಧಿದೇವತೆ, ಯಾವ ಭಕ್ತಿಗೆ ಯಾವ ಲಿಂಗ, ಯಾವ ಚಕ್ರದಲ್ಲಿ ಯಾವ ಲಿಂಗವಿದೆ ಇತ್ಯಾದಿ ಸಕೀಲಗಳ ರಹಸ್ಯವನ್ನು ಜಂಗಮನ ಮೂಲಕ ಪಡೆದುಕೊಂಡ ಶಿಷ್ಯನು ಆ ಬೋಧನೆಗನುಗುಣವಾಗಿ ನಡೆದುಕೊಂಡು ಸರ್ವಾಚಾರ ಸಂಪತ್ತಿನೊಡಗೂಡಿ ಭಿನ್ನಭಾವವ ತ್ಯಜಿಸಿ, ತಾನು ಮತ್ತು ಲಿಂಗ (ಪರಶಿವ) ಒಂದೇ ಎಂಬ ಐಕ್ಯ ಭಾವವನ್ನು ಅನುಭಾವದ ಮೂಲಕ ಪಡೆದುಕೊಂಡರೆ ತಾನೇ ನಿಜ ಪ್ರಸಾದವಾಗುತ್ತಾನೆ.

ವಾಸ್ತವವಾಗಿ, ಅಲ್ಪ ಸ್ವಲ್ಪ ಬದಲಾವಣೆಗಳನ್ನು ಹೊರತುಪಡಿಸಿ, ಚತುರ್ವಿಧ ಪ್ರಸಾದದ ಬಗೆಗಿನ ಈ ಶರಣರ ಕಲ್ಪನೆಗಳು ಒಂದೇ ತೆರನಿದ್ದು, ಅವುಗಳ ಹೆಸರುಗಳಷ್ಟೇ ಭಿನ್ನವಾಗಿವೆ ಎಂಬುದನ್ನು ನಾವು ಗಮನಿಸಬಹುದು. ಪ್ರಸಾದದ ಅರ್ಥವನ್ನು ಇನ್ನೂ ವಿಶಾಲಗೊಳಿಸುತ್ತ ಹೋಗಿ ವಚನಗಳಲ್ಲಿ ಮತ್ತೆ ಏಕಾದಶ ಪ್ರಸಾದ ಕ್ರಮವಿರುವುದು.[೧೮]

೧. ಪೂಜಾನಂತರದಲ್ಲಿ ಭಸ್ಮಧರಿಸಿದ ಹಸ್ತದಿಂದ ಭೋಗ್ಯ ಪದಾರ್ಥವನ್ನು ಶುದ್ಧಗೊಳಿಸುವುದು ಶುದ್ಧಪ್ರಸಾದ.

೨. ಈ ಶುದ್ಧ ಪ್ರಸಾದವನ್ನು ಲಿಂಗಕ್ಕರ್ಪಿಸಿದರೆ ಅದು ಸಿದ್ಧ ಪ್ರಸಾದ.

೩. ಸಿದ್ಧಪ್ರಸಾದವನ್ನು ಜಂಗಮಾರ್ಪಣ ಭಾವದಿಂದ ನಾಲಗೆಯ ಮೇಲಿಟ್ಟು ಭುಂಜಿಸುವುದೇ ಪ್ರಸಿದ್ಧ ಪ್ರಸಾದ.

೪. ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದದಿಂದ ಉಂಟಾದ ತೃಪ್ತಿ ಹಾಗೂ ಮನೋವಿಕಾಸವೇ ಆಪ್ಯಾಯನ ಪ್ರಸಾದ.

೫. ಇತರ ಪದಾರ್ಥಗಳನ್ನು ಅನರ್ಪಿತವೆಂದು ತಿಳಿದು ಅವುಗಳತ್ತ ಮನವಿಡದಿ

---

೧೭. ಸಮಗ್ರ ವಚನಸಂಪುಟ ೧೫, ಪುಟ ೧೫೦

೧೮. ವಚನಗಳಲ್ಲಿ ವೀರಶೈವ ಧರ್ಮ, ಡಾ॥ ಎಚ್.ತಿಪ್ಪೇರುದ್ರಸ್ವಾಮಿ, ಪುಟ ೨೨೮

ರುವದು ಸಮಯ ಪ್ರಸಾದವಾಗಿದೆ.

೬. ಇತರ ವಿಷಯಗಳ ಕಡೆಗೆ ಪಂಚೇಂದ್ರಿಯಗಳನ್ನು ಹೋಗಗೊಡದಿರುವುದೇ ಪಂಚೇಂದ್ರಿಯ ವಿರಹಿತ ಪ್ರಸಾದವಾಗಿರುತ್ತದೆ.

೭. ಇತರ ಸಂಕಲ್ಪಾದಿಗಳಿಗೆ ಅಂತಃಕರಣ ಸುಳಿಯದಂತೆ ಮಾಡಿ, ನಿಶ್ಚಲತೆಯಿಂದ ಪ್ರಸಾದ ಸೇವಿಸುವುದೇ ಅಂತಃಕರಣ ವಿರಹಿತ ಪ್ರಸಾದವಾಗಿರುತ್ತದೆ.

೮. ಗುರುಲಿಂಗ ಜಂಗಮರಿಂದ ಪಡೆದ ಪ್ರಸಾದದೊಡನೆ ತನ್ನ ಪ್ರಸಾದವನ್ನೂ ಸಮರಸ ಭೋಗ ಮಾಡಿ ಭುಂಜಿಸುವುದು ಪ್ರಸಾದಿಯ ಪ್ರಸಾದವಾಗಿದೆ.

೯. ಸದ್ಭಾವದಿಂದ ಪ್ರಸಾದವನ್ನು ಭೋಗಿಸುವುದು ಸದ್ಭಾವ ಪ್ರಸಾದವಾಗಿದೆ.

೧೦. ಪ್ರಸಾದ ಸೇವನೆಯಿಂದ ಶಾಂತಿ ಸಹನೆಯನ್ನು ಪಡೆಯುವುದೇ ಸಮತಾ ಪ್ರಸಾದವಾಗಿದೆ.

೧೧. ಸಮತಾ ಪ್ರಸಾದದಿಂದ ತಾನು ಪ್ರಸಾದಕಾಯನಾಗಿರುವೆನೆಂಬ ಸುಜ್ಞಾನವೇ ಜ್ಞಾನಪ್ರಸಾದವಾಗಿದೆ.

ಹೀಗೆ ವಿವಿಧ ಬಗೆಯ ಪ್ರಸಾದದ ವಿಧಗಳು ವಚನಗಳಲ್ಲಿ ಪ್ರತಿಪಾದಿತವಾಗಿದ್ದರೂ ಸಹ ಅವುಗಳಲ್ಲಿ ಮೂರು ಪ್ರಸಾದಗಳೇ ಪ್ರಮುಖವಾಗಿದ್ದು ಉಳಿದವು ಪ್ರಸಾದಸೇವನೆಯ ಪ್ರಕ್ರಿಯೆಯಲ್ಲಿನ ಅಂಶಗಳಾಗಿವೆ.

ಪ್ರಸಾದವನ್ನು ಸಮರ್ಪಿಸುವ ಬಗೆ –

ಪ್ರಸಾದವನ್ನು ಸಮರ್ಪಿಸುವ ಬಗ್ಗೆ ಶೈವಾಗಮಗಳು ಬಹು ಮಾರ್ಮಿಕವಾದ ವಿಚಾರಗಳನ್ನು ತಿಳಿಸುತ್ತವೆ. ಗುರು ಲಿಂಗ ಜಂಗಮರನ್ನು ಪೂಜಿಸಿ, ತನು ಮನ ಧನಗಳನ್ನು ಅರ್ಪಿಸಿ ಪ್ರಸಾದ ಪಡೆಯಬೇಕಾಗುತ್ತದೆ. ಅರ್ಪಿಸಿದ ಆಹಾರವಷ್ಟೇ ಪ್ರಸಾದವಲ್ಲ. ಬೋಗಿಸುವ ಷಡ್ವಿಷಯ, ದೇಹೇಂದ್ರಿಯಗಳೂ ಪ್ರಸಾದವೆನಿಸುತ್ತವೆ.

ಪತ್ರಂ ಪುಷ್ಪಂ ಫಲಂತೋಯಮನ್ನಪಾನಾದ್ಯಮೌಷಧಮ್।
ಅಸಮರ್ಪ್ಯನ ಭುಂಜೀತ ಭಗವಂತಂ ಸದಾಶಿವಮ್॥
ಶಬ್ದ–ಸ್ಪರ್ಶ–ರೂಪ–ರಸ–ಗಂಧ ತನ್ಮಾತ್ರ–ಪಂಚಕಮ್।
ಅಸಮರ್ಪ್ಯ ಭುಂಜೀತ ಭಗವಂತಮುಮಾಪತಿಮ್॥
ಯದಿಂದ್ರಿಯಾಗತಂ ಕಿಂಚಿದ್ ಯತ್ಸುಖಂ ತಚ್ಛಿವಾರ್ಪಿತಮ್।
ತತ್ಪ್ರಸಾದಂ ಚ ಭೋಕ್ತವ್ಯಂ ತದಿಂದ್ರಿಯಮುಖೇನ ಚ ॥[೧೯]

ಪತ್ರೆ, ಪುಷ್ಪ, ಹಣ್ಣು, ಜಲ, ಅನ್ನ, ಪಾನ, ಔಷದ, ಇವೆಲ್ಲವನ್ನೂ ಸದಾಶಿವನಿಗೆ ಅರ್ಪಿಸದೆ ಸ್ವೀಕರಿಸಬಾರದು. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ತನ್ಮಾತ್ರಗಳನ್ನು ಭಗವಂತನಿಗೆ ಅರ್ಪಿಸದೆ ಸವಿಯಬಾರದು. ಯಾವ ಯಾವ

---

೧೯. ಚಂ.ಆ.ಕ್ರಿ.ಪಾ, ಪಟಲ ೫. ಶ್ಲೋಕ ಸಂಖ್ಯೆ ೨೪–೨೬

ಇಂದ್ರಿಯದಿಂದ ಯಾವ ಸುಖ ದೊರೆಯುತ್ತದೆಯೋ ಅದನ್ನು ಶಿವನಿಗೆ ಅರ್ಪಿಸಿ ಆಯಾಯ ಇಂದ್ರಿಯದ ಮೂಲಕ ಪ್ರಸಾದ ರೂಪದಲ್ಲಿ ಸ್ವೀಕರಿಸಬೇಕು. ಈ ಸಮರ್ಪಣೆ ಸ್ಥೂಲ ಮತ್ತು ಸೂಕ್ಷ್ಮವೆಂದು ಎರಡು ವಿಧವಾಗಿದ್ದು ಸೂಕ್ಷ್ಮಸಮರ್ಪಣದ ವಿಧಾನವು ಶೈವಾಗಮಗಳಲ್ಲಿ ವಿಸ್ತಾರವಾಗಿ ಬಂದಿದೆ. ಉದಾಹರಣೆಗೆ ಚಂದ್ರಜ್ಞಾನಾಗಮದಲ್ಲಿ ಹೀಗೆ ಹೇಳಿದೆ :

ಯದಾ ಯೇನೇಂದ್ರಿಯೇಣೈವ ವಿಷಯೋ ಹ್ಯುಪಭುಜ್ಯತೇ।
ತದಿಂದ್ರಿಯಗತೇ ಲಿಂಗೇ ಹ್ಯರ್ಪಣಂ ಸೂಕ್ಷ್ಮಮೀರಿತಮ್॥
ಸಮರ್ಪಣವಿಶೇಷಂ ಯೇ ಭಕ್ತಾಃ ಸಮ್ಯಗ್ ವಿಜಾನತೇ।
ಶಂಭೋಃ ಪ್ರಸಾದಮತುಲಮಶ್ರಮಂ ವಿಂದತೇ ಹಿ ತೇ॥[೨೦]

ಯಾವಾಗ ಯಾವ ಇಂದ್ರಿಯದ ಮೂಲಕ ಯಾವ ವಿಷಯವು ಸೇವಿಸಲ್ಪಡುತ್ತದೆಯೋ ಅದನ್ನು ಆಯಾಯ ಇಂದ್ರಿಯದಲ್ಲಿರುವ ಲಿಂಗಕ್ಕೆ ಅರ್ಪಿಸುವುದು ಸೂಕ್ಷ್ಮಸಮರ್ಪಣವೆಂದು ಹೆಸರು. ಯಾವ ಭಕ್ತರು ಈ ಸಮರ್ಪಣ ವಿಶೇಷವನ್ನು ಸರಿಯಾಗಿ ತಿಳಿದುಕೊಳ್ಳುವರೋ ಅವರು ಶಂಭುವಿನ ಎಣೆಯಿಲ್ಲದ ಪ್ರಸಾದವನ್ನು ಶ್ರಮವಿಲ್ಲದೆ ಹೊಂದುತ್ತಾರೆ ಎಂದು ತಿಳಿಸಿದೆ. ಇದನ್ನೇ ವಚನಗಳೂ ಪ್ರತಿಪಾದಿಸುತ್ತ

"ಅಧರ ತಾಗುವ ರುಚಿಯ, ಉದರ ತಾಗುವ ಸುಖವಲಿಂಗಾರ್ಪಿತವಿಲ್ಲದೆ ಕೊಂಡರೆ
ಕಿಲ್ಬಿಷ ನೋಡಾ। ನೇತ್ರ, ಶ್ರೋತ್ರ ಜಿಹ್ವೆ, ಘ್ರಾಣ, ತ್ವಕ್ಕು ಮೊದಲಾದ
ಸರ್ವೇಂದ್ರಿಯಂಗಳಲ್ಲಿ ಮುಟ್ಟಿದ ಸಕಲಪದಾರ್ಥಂಗಳನ್ನು ಲಿಂಗಕ್ಕೆ ಕೊಟ್ಟು ಕೊಂಡರೆ,
ಅದು ಮಹಾ ಪ್ರಸಾದವಯ್ಯಾ ಕೂಡಲ ಚೆನ್ನಸಂಗಮದೇವಾ,[೨೧]

ಎಂದು ಚೆನ್ನಬಸವಣ್ಣನವರು ನೇತ್ರ, ಶ್ರೋತ್ರ ಜಿಹ್ವೆ, ಘ್ರಾಣ, ತ್ವಕ್ಕು ಮೊದಲಾದ ಸರ್ವೇಂದ್ರಿಯಂಗಳಲ್ಲಿ ಮುಟ್ಟಿದ ಸಕಲಪದಾರ್ಥಂಗಳನ್ನು ಲಿಂಗಕ್ಕೆ ಕೊಟ್ಟು ಕೊಂಡರೆ, ಅದು ಮಹಾ ಪ್ರಸಾದವೆಂದು ಆಗಮ ಅಭಿಪ್ರಾಯವನ್ನೇ ಸಮರ್ಥಿಸಿದ್ದಾರೆ. ಇದನ್ನೇ ಉರಿಲಿಂಗಪೆದ್ದಿಗಳು –

ದೇಹವೆಂಬ ಮನೆಯಲ್ಲಿ ಮಹಾಲಿಂಗವೆಂಬರಸು
ಮನವೆಂಬ ಪೀಠದ ಮೇಲೆ ಮೂರ್ತಿಗೊಂಡಿರಲು,
ಅಂತಃಕರಣಗಳೆಂಬ ಪರಿಚಾರುಕರ ಕೈಯಿಂದ
ಪಂಚೇಂದ್ರಿಯಗಳೆಂಬ ಪರಿಯಾಣದಲ್ಲಿ ಶಬ್ದ,
ಸ್ಪರ್ಶ, ರೂಪ, ರಸ, ಗಂಧಂಗಳೆಂಬ ಪದಾರ್ಥಂಗಳನು

---

೨೦. ಚಂ.ಆ.ಕ್ರಿ.ಪಾ, ಪಟಲ ೫. ಶ್ಲೋಕ ಸಂಖ್ಯೆ ೩೧–೩೨
೨೧. ಚೆ.ಬ.ವ.ಸಂ.೩, ವಚನ ಸಂಖ್ಯೆ ೨೩೬. ಪುಟ ೭೭

ಎಡೆಮಾಡಿಸಿಕೊಂಡು ಸವಿಯುತ್ತಿರಲು, ಆನಂದವೇ
ಮಹಾಪ್ರಸಾದವಾಗಿ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು ಸದಾ ಸನ್ನಿಹಿತ ಕಾಣಿರೆ[೨೨]

ಎನ್ನುತ್ತ ಸರ್ವ ಇಂದ್ರಿಯಗಳ ಸುಖವನ್ನು ಲಿಂಗಕ್ಕೆ ಸಮರ್ಪಿಸುವುದೇ ಮಹಾಪ್ರಸಾದವೆಂದು ಸಾರಿದ್ದಾರೆ. ಈ ಸಮರ್ಪಣೆಗೆ ಸಂಬಂಧಪಟ್ಟಂತೆ ಕಾರಣಾಗಮವು

ಭಕ್ತಸ್ಥಲೇ ಕ್ರಿಯಾಶಕ್ತಿಯುತೇ ವೈ ನಾಸಿಕಾಂಗಗೇ।
ಆಚಾರಲಿಂಗಸಂಜ್ಞೇಽಸ್ಮಿನ್ ಸದ್ಯೋಜಾತಮುಖಾತ್ಮಕೇ॥
ಗಂಧಪ್ರಸಾದಂ ಸದ್ಭಕ್ತ್ಯಾ ಚಿತ್ತಹಸ್ತೇನ ಚಾರ್ಪಯೇತ್॥[೨೩]

'ಭಕ್ತಸ್ಥಲದಲ್ಲಿ ಕ್ರಿಯಾಶಕ್ತಿಯುಕ್ತವಾದ, ಸದ್ಯೋಜಾತ ಮುಖರೂಪದ, ಆಚಾರ ಲಿಂಗಕ್ಕೆ, ಸದ್ಭಕ್ತಿ (ಶ್ರದ್ಧಾಭಕ್ತಿ)ಯಿಂದ, ಸುಚಿತ್ತವೆಂಬ ಹಸ್ತದಿಂದ, ಗಂಧಪದಾರ್ಥವನ್ನು ನ-ಕಾರ ಮಂತ್ರವನ್ನು ಉಚ್ಚರಿಸುತ್ತಾ ನಾಸಿಕದ ಮೂಲಕ ಅರ್ಪಿಸಬೇಕು. ಅದನ್ನೇ ಪ್ರಸಾದವೆಂದು ಅದೇ ಇಂದ್ರಿಯದ ಮೂಲಕ ಸ್ವೀಕರಿಸಿ ತೃಪ್ತರಾಗಬೇಕು.'

ಮಾಹೇಶ್ವರಸ್ಥಲೇ ಜ್ಞಾನಶಕ್ತಿಕೇ ರಸನಾಂಗಗೇ।
ಗುರುಲಿಂಗಾಭಿಧೇ ವಾಮದೇವವಕ್ತ್ರೇ ವಿಶೇಷತಃ॥
ಬುದ್ಧಿಹಸ್ತೇನ ತು ರುಚಿಂ ನಿಷ್ಠಾಭಕ್ತ್ಯಾ ಸಮರ್ಪಯೇತ್॥[೨೪]

"ಮಾಹೇಶ್ವರ ಸ್ಥಲದಲ್ಲಿ ಜ್ಞಾನಶಕ್ತಿ ವಿಶಿಷ್ಟವಾದ, ಮಾಮದೇವ ಮುಖರೂಪದ, ಗುರುಲಿಂಗಕ್ಕೆ, ನಿಷ್ಠಾಭಕ್ತಿಯಿಂದ, ಸುಬುದ್ಧಿಯೆಂಬ ಹಸ್ತದಿಂದ, ರಸಪದಾರ್ಥವನ್ನು, ಮಃ-ಕಾರ ಮಂತ್ರವನ್ನು ಪಠಿಸುತ್ತಾ, ರಸನೇಂದ್ರಿಯದ ಮೂಲಕ ಅರ್ಪಿಸಿ, ಅದನ್ನೇ ಪ್ರಸಾದವೆಂದು ಅದೇ ಇಂದ್ರಿಯದ ಮೂಲಕ ಸ್ವೀಕರಿಸಿ ತೃಪ್ತರಾಗಬೇಕು.'

ಸ್ಥಲೇ ಪ್ರಸಾದಿಸಂಜ್ಞೇಽಸ್ಮಿನ್ ಇಚ್ಛಾಶಕ್ತಿ ಸಮನ್ವಿತೇ।
ದೃಗಂಗಕೇಽಘೋರಮುಖೇ ಶಿವಲಿಂಗಾಭಿದೇ ಪುನಃ॥
ಭಕ್ತ್ಯಾಽವಧಾನಯಾ ರೂಪಮಹಂಕಾರೇಣ ಚಾರ್ಪಯೇತ್॥[೨೫]

'ಪ್ರಸಾದಿಸ್ಥಲದಲ್ಲಿ ಇಚ್ಛಾಶಕ್ತಿ ವಿಶಿಷ್ಟವಾದ, ಅಘೋರಮುಖರೂಪದ ಶಿವಲಿಂಗಕ್ಕೆ, ಸಾವಧಾನ (ಅವಧಾನ)ಭಕ್ತಿಯಿಂದ, ಅಹಂಕಾರ ಹಸ್ತದಿಂದ ರೂಪಪದಾರ್ಥವನ್ನು ಶಿ-ಕಾರ ಮಂತ್ರವನ್ನುಚ್ಚರಿಸಿ ನೇತ್ರೇಂದ್ರಿಯದ ಮೂಲಕ ಅರ್ಪಿಸಿ, ಅದನ್ನೇ ಪ್ರಸಾದವೆಂದು ಅದೇ ಇಂದ್ರಿಯದ ಮೂಲಕ ಸೇವಿಸಬೇಕು.'

---

೨೨. ಸಮಗ್ರ ವಚನಸಂಪುಟ ೬, ಸಂಕೀರ್ಣ ವಚನಸಂಪುಟ ೧, ವಚನ ಸಂಖ್ಯೆ ೧೪೧೦, ಪುಟ ೪೮೩

೨೩. ಕಾ.ಆ. ಪಟಲ ೭. ಶ್ಲೋಕ ಸಂಖ್ಯೆ ೬೦

೨೪. ಕಾ.ಆ. ಪಟಲ ೭. ಶ್ಲೋಕ ಸಂಖ್ಯೆ ೬೧

೨೫. ಕಾ.ಆ. ಪಟಲ ೭. ಶ್ಲೋಕ ಸಂಖ್ಯೆ ೬೨

ಪ್ರಾಣಲಿಂಗಿಸ್ಥಲೇ ತ್ವಾದಿಶಕ್ತಿಯುಕ್ತೇ ತ್ವಗಂಗಕೇ।
ಚರಲಿಂಗಾಽಭಿಧೇ ತತ್ಪೂರುಷವಕ್ತ್ರೇ ದೃಢವ್ರತಃ॥
ಭಕ್ತ್ಯನುಭವಯಾ ಮನೋಹಸ್ತೇನ ಸ್ಪರ್ಶಮರ್ಪಯೇತ್॥[೨೬]

'ಪ್ರಾಣಲಿಂಗಿ ಸ್ಥಲದಲ್ಲಿ ಆದಿಶಕ್ತಿಯುಕ್ತವಾದ, ತತ್ಪುರುಷ ಮುಖರೂಪದ ಜಂಗಮ ಲಿಂಗಕ್ಕೆ ಅನುಭವ ಭಕ್ತಿಯಿಂದ, ಸುಮನಸ್ಸೆಂಬ ಹಸ್ತದಿಂದ, ಸ್ಪರ್ಶಪದಾರ್ಥವನ್ನು ಚರ್ಮೇಂದ್ರಿಯದ ಮೂಲಕ, ವಾ-ಕಾರ ಮಂತ್ರಪುನರುಚ್ಚರಿಸುತ್ತಾ ಸಮರ್ಪಿಸಿ, ಅದನ್ನೇ ಪ್ರಸಾದವೆಂದು ಅದೇ ಇಂದ್ರಿಯದ ಮೂಲಕ ಸವಿದು ಆನಂದಿಸುತ್ತಾರೆ.'

ಶರಣಸ್ಥಲೇ ತು ಪರಯಾ ಶಕ್ತ್ಯಾ ಯುಕ್ತೇ ಶ್ರವೋಽಂಗಗೇ।
ಪ್ರಸಾದಲಿಂಗೇ ತ್ವೀಶಾನಮುಖೇ ಶಬ್ಧಪ್ರಸಾದಕಮ್॥
ಆನಂದಭಕ್ತ್ಯಾ ಸುಜ್ಞಾನಹಸ್ತೇನೈವ ಸಮರ್ಪಯೇತ್॥[೨೭]

'ಶರಣಸ್ಥಲದಲ್ಲಿ (ಶರಣನು) ಪರಾಶಕ್ತಿ ವಿಶಿಷ್ಟವಾದ, ಈಶಾನಮುಖರೂಪದ ಪ್ರಸಾದಲಿಂಗಕ್ಕೆ ಆನಂದಭಕ್ತಿಯಿಂದ ಸುಜ್ಞಾನವೆಂಬ ಹಸ್ತದಿಂದ ಶಬ್ದ ಪದಾರ್ಥವನ್ನು ಯ-ಕಾರ ಮಂತ್ರವನ್ನು ಜಪಿಸುತ್ತಾ ಶ್ರೋತ್ರೇಂದ್ರಿಯದ ಮೂಲಕ ಸಮರ್ಪಿಸಿ, ಅದನ್ನೇ ಪ್ರಸಾದವೆಂದು ಅದೇ ಇಂದ್ರಿಯದ ಮೂಲಕ ಸ್ವೀಕರಿಸಿ ಆನಂದಿಸುತ್ತಾರೆ.'

ಐಕ್ಯಸ್ಥಲೇ ತು ಚಿಚ್ಛಕ್ತಿಯುತೇ ವೈ ಮಾನಸಾಂಗಗೇ।
ಮಹಾಲಿಂಗೇ ಪರಶಿವಮುಖೇ ಸಂಕಲ್ಪಮರ್ಪಯೇತ್॥
ಸದ್ಭಾವಾಭಿಖ್ಯಸ್ತೇನ ಭಕ್ತ್ಯಾಹ ಸಮರಸಾಖ್ಯಯಾ॥[೨೮]

'ಐಕ್ಯಸ್ಥಲದಲ್ಲಿ ಚಿಚ್ಛಕ್ತಿ ವಿಶಿಷ್ಟವಾದ, ಪರಶಿವಮುಖ ಸ್ವರೂಪದ ಮಹಾ ಲಿಂಗಕ್ಕೆ, ಸಮರಸ ಭಕ್ತಿಯ ಮೂಲಕ, ಸದ್ಭಾವವೆಂಬ ಹಸ್ತದಿಂದ, ಸಂಕಲ್ಪವೆಂಬ ಪದಾರ್ಥವನ್ನು, ಓಂ-ಕಾಂ ಮಂತ್ರವನ್ನು ಜಪಿಸುತ್ತಾ, ಮನಸ್ಸಿನ ಮೂಲಕ ಸಮರ್ಪಿಸಿ, ಅದನ್ನೇ ಪ್ರಸಾದವೆಂದು ಅದೇ ಇಂದ್ರಿಯದ ಮೂಲಕ ಸ್ವೀಕರಿಸಿ ಆನಂದಿಸುತ್ತಾರೆ.'

ಈ ಸಮರ್ಪಣೆಯ ಎಲ್ಲಾ ವಿವರಗಳನ್ನು ಆಯಾಯ ಸ್ಥಲಕ್ಕೆ ಸಂಬಂಧಿಸಿದಂತೆ ಮಹಾಭೂತ, ಸಾದಾಖ್ಯ ಮತ್ತು ಕಲೆಗಳನ್ನು ಜೋಡಿಸಿ ಚೆನ್ನಬಸವಣ್ಣನವರು ತಮ್ಮ ಆರು ವಚನಗಳಲ್ಲಿ ನೀಡಿದ್ದಾರೆ.

೧. 'ಭಕ್ತಂಗೆ ಪೃಥ್ವಿಯ ಅಂಗ, ಆ ಅಂಗಕ್ಕೆ ಸುಚಿತ್ತವೆ ಹಸ್ತ,
ಆ ಹಸ್ತಕ್ಕೆ ಕರ್ಮಸಾದಾಖ್ಯ, ಆ ಸಾದಾಖ್ಯಕ್ಕೆ ಕ್ರಿಯಾಶಕ್ತಿ,
ಆ ಶಕ್ತಿಗೆ ಆಚಾರವೇ ಲಿಂಗ, ಆ ಲಿಂಗಕ್ಕೆ ನಿವೃತ್ತಿಯೆ ಕಲೆ,

೨೬. ಕಾ.ಆ. ಪಟಲ ೭. ಶ್ಲೋಕ ಸಂಖ್ಯೆ ೬೩
೨೭. ಕಾ.ಆ. ಪಟಲ ೭. ಶ್ಲೋಕ ಸಂಖ್ಯೆ ೬೪
೨೮. ಕಾ.ಆ. ಪಟಲ ೭. ಶ್ಲೋಕ ಸಂಖ್ಯೆ ೬೫

ಆ ಕಲೆಗೆ ಘ್ರಾಣೇಂದ್ರಿಯವೆ ಮುಖ
ಆ ಮುಖಕ್ಕೆ ಸುಪರಿಮಳ ದ್ರವ್ಯಂಗಳನು
ರುಚಿ ತೃಪ್ತಿಯನರಿದು ಸದ್ಭಕ್ತಿಯಿಂದರ್ಪಿಸಿ
ಸುಗಂಧ ಪ್ರಸಾದ ಭೋಗಿಸಿ ಸುಖಿಸುತ್ತಿಹನು[೨೯]
ಕೂಡಲಚೆನ್ನಸಂಗಾ, ನಿಮ್ಮ ಭಕ್ತನು"

೨. "ಮಾಹೇಶ್ವರಂಗೆ ಅಪ್ಪುವೆ ಅಂಗ, ಆ ಅಂಗಕ್ಕೆ ಸುಬುದ್ಧಿಯೆ ಹಸ್ತ,
ಆ ಹಸ್ತಕ್ಕೆ ಕರ್ತೃಸಾದಾಖ್ಯ, ಆ ಸಾದಾಖ್ಯಕ್ಕೆ ಜ್ಞಾನಶಕ್ತಿ,
ಆ ಶಕ್ತಿಗೆ ಗುರುಲಿಂಗ, ಆ ಲಿಂಗಕ್ಕೆ ಪ್ರತಿಷ್ಠೆಯೆ ಕಲೆ
ಆ ಕಲೆಗೆ ಜಿಹ್ವೇಂದ್ರಿಯವೆ ಮುಖವು
ಆ ಮುಖಕ್ಕೆ ಸುರಸದ್ರವ್ಯಂಗಳ ರೂಪು-ರುಚಿ-ತೃಪ್ತಿಯನರಿದು
ನೈಷ್ಠಿಕ ಭಕ್ತಿಯಿಂದರ್ಪಿಸಿ ಸುಪ್ರಸಾದವ ಭೋ[೩೦]ಗಿಸಿ ಸುಖಿಸುತ್ತಿಹನು,
ಕೂಡಲಚೆನ್ನಸಂಗ, ನಿಮ್ಮ ಮಾಹೇಶ್ವರ."

೩. "ಪ್ರಸಾದಿಗೆ ಅಗ್ನಿಯೆ ಅಂಗ, ಆ ಅಂಗಕ್ಕೆ ನಿರಹಂಕಾರವೆ ಹಸ್ತ,
ಆ ಹಸ್ತಕ್ಕೆ ಮೂರ್ತಿ (ಮೂರ್ತ) ಸಾದಾಖ್ಯ, ಆ ಸಾದಾಖ್ಯಕ್ಕೆ ಇಚ್ಛಾಶಕ್ತಿ
ಆ ಶಕ್ತಿಗೆ ಶಿವನೇ ಲಿಂಗ, ಆ ಲಿಂಗಕ್ಕೆ ವಿದ್ಯೆಯ ಕಲೆ
ಆ ಕಲೆಗೆ ನೇತ್ರೇಂದ್ರಿಯವೆ ಮುಖ
ಆ ಮುಖಕ್ಕೆ ಸುರೂಪದ್ರವ್ಯಂಗಳನು,
ರೂಪು ರುಚಿ ತೃಪ್ತಿಯನರಿದು ಅವಧಾನ ಭಕ್ತಿಯಿಂದರ್ಪಿಸಿ,
ಆ ಸುರೂಪ ಪ್ರಸಾದವನು ಭೋಗಿಸಿ ಸುಖಿಸುತಿಹನು,
ಕೂಡಲಚೆನ್ನಸಂಗಾ, ನಿಮ್ಮ ಪ್ರಸಾದಿ."[೩೧]

೪. "ಪ್ರಾಣಲಿಂಗಿಗೆ ವಾಯುವೆ ಅಂಗ, ಆ ಲಿಂಗಕ್ಕೆ ಸುಮನವೆ ಹಸ್ತ,
ಆ ಹಸ್ತಕ್ಕೆ ಅಮೂರ್ತಿ (ಅಮೂರ್ತ) ಸಾದಾಖ್ಯ, ಆ ಸಾದಾಖ್ಯಕ್ಕೆ ಆದಿಶಕ್ತಿ
ಆ ಶಕ್ತಿಗೆ ಜಂಗಮಲಿಂಗ, ಆ ಲಿಂಗಕ್ಕೆ ಶಾಂತಕಲೆ,
ಆ ಕಲೆಗೆ ತ್ವಗಿಂದ್ರಿಯ ಮುಖ.
ಆ ಮುಖಕ್ಕೆ ಸ್ಪರ್ಶದ್ರವ್ಯಂಗಳನು
ರೂಪು-ರುಚಿ-ತೃಪ್ತಿಯನರಿದು, ಅನುಭಾವಭಕ್ತಿಯಿಂದರ್ಪಿಸಿ,
ಆ ಸುಸ್ಪರ್ಶ ಪ್ರಸಾದವನು ಭೋಗಿಸಿ ಸುಖಿಸುತ್ತಿಹನು,
ಕೂಡಲ ಚೆನ್ನಸಂಗಾ, ನಿಮ್ಮ ಪ್ರಾಣಲಿಂಗೀ."[೩೨]

೨೯.ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೪೦೫. ಪುಟ೫೦೧
೩೦.ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೪೮೧. ಪುಟ೫೪೧
೩೧.ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೩೬೬. ಪುಟ೪೮೪
೩೨.ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೩೬೨. ಪುಟ೪೮೬

೫. “ಶರಣಂಗೆ ಆಕಾಶವೆ ಅಂಗ, ಆ ಅಂಗಕ್ಕೆ ಸುಜ್ಞಾನವೆ ಹಸ್ತ,
ಆ ಹಸ್ತಕ್ಕೆ ಶಿವಸಾದಾಖ್ಯ, ಆ ಸಾದಾಖ್ಯಕ್ಕೆ ಪರಾಶಕ್ತಿ,
ಆ ಶಕ್ತಿಗೆ ಪ್ರಸಾದವೆ ಲಿಂಗ, ಆ ಲಿಂಗಕ್ಕೆ ಶಾಂತ್ಯತೀತವೆ ಕಲೆ,
ಆ ಕಲೆಗೂ ಶ್ರೋಲೇತ್ರೇಂದ್ರಿಯವೆ ಮುಖ
ಆ ಮುಖಕ್ಕೆ ಸುಶಬ್ದ ದ್ರವ್ಯಂಗಳನು
ರೂಪು ರುಚಿ ತೃಪ್ತಿಯನರಿದು ಆನಂದಭಕ್ತಿಯಿಂದರ್ಪಿಸಿ,
ಆ ಸುಶಬ್ದ ಪ್ರಸಾದವ ಭೋಗಿಸಿ ಸುಖಿಸುತ್ತಿಹನು,
ಕೂಡಲಚೆನ್ನಸಂಗಾ, ನಿಮ್ಮ ಶರಣ”[೩೩]

೬. “ಐಕ್ಯಂಗೆ ಆತ್ಮನೆ ಅಂಗ, ಅಂಗಕ್ಕೆ ಸದ್ಭಾವವೇ ಹಸ್ತ,
ಆ ಹಸ್ತಕ್ಕೆ ಮಹಾಸಾದಾಖ್ಯ, ಆ ಸಾದಾಖ್ಯಕ್ಕೆ ಚಿಚ್ಛಕ್ತಿ,
ಆ ಶಕ್ತಿಗೆ ಮಹಾಲಿಂಗ, ಆ ಲಿಂಗಕ್ಕೆ ಶಾಂತ್ಯತೀತೋತ್ತರವೆ ಕಲೆ,
ಆ ಕಲೆಗೆ ಹೃದಯೇಂದ್ರಿಯವೆ ಮುಖ
ಆ ಮುಖಕ್ಕೆ ಸುಪರಿಣಾಮ ದ್ರವ್ಯಂಗಳನ್ನು
ರೂಪು ರುಚಿ ತೃಪ್ತಿಯನರಿದು ಸಮರಸಭಕ್ತಿಯಿಂದರ್ಪಿಸಿ,
ಆ ಸುಪರಿಣಾಮ ಪ್ರಸಾದವ ಭೋಗಿಸಿ ಸುಖಿಸುತ್ತಿಹನು
ಕೂಡಲ ಚೆನ್ನಸಂಗಾ, ನಿಮ್ಮ ಲಿಂಗೈಕ್ಯನು”[೩೪]

ಹೀಗೆ ಶಬ್ದ ಮುಂತಾದ ವಿಷಯಗಳನ್ನು ಆಯಾಯ ಇಂದ್ರಿಯಗಳ ಮೂಲಕ ಆಯಾಯ ಭಕ್ತಿಗಳಿಂದ ಆಯಾಯ ಲಿಂಗಗಳಿಗೆ ಅರ್ಪಿಸಿ ಮತ್ತೆ ಅವುಗಳನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸಿ ಆನಂದಿಸುವ ಸೂಕ್ಷ್ಮಾರ್ಪಣದ ಮರ್ಮವನ್ನು ಸಕಲ ಪರಿಕರಗಳೊಂದಿಗೆ ಚನ್ನಬಸವಣ್ಣನವರು ಬಿಚ್ಚಿಟ್ಟಿದ್ದಾರೆ. ಅವರ ‘ಮಿಶ್ರಾರ್ಪಣ’ದಲ್ಲಿ ಕ್ರಿಯಾರ್ಪಣ ಕಾಯರ್ಪಣ ಕರಣಾರ್ಪಣ ಲಿಂಗಾರ್ಪಣಗಳ ವಿವರಗಳು ಮೊದಲು ಬರುತ್ತವೆ. ಅವೆಲ್ಲವೂ ಆರಾರು ವಿಧ. ಆಚಾರ ಮುಂತಾದ ಆರು ಲಿಂಗಗಳಿಗೆ ಗಂಧ ಮುಂತಾದ ಪದಾರ್ಥಗಳು ಒಂದೊಂದೂ ಆರಾಗಿ ಆ ಆರು ಒಂದೊಂದು ಲಿಂಗಕ್ಕೂ ಅರ್ಪಿತವಾಗುತ್ತವೆ. ಇದನ್ನು ಅತ್ಯಂತ ಸುಂದರವಾಗಿ –

ತನುವೇ ಭಾಂಡವಾಗಿ, ಮನವೇ ಸುಯಿಧಾನವಾಗಿ
ಜ್ಞಾನಾಗ್ನಿಯಲ್ಲಿ ಪದಾರ್ಥವ ಮಾಡಿ,
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ಸ್ಪರ್ಶನ ಮೂರ್ತಿ ನೀನೇ !
ನಿನ್ನ ಪ್ರಸಾದಕ್ಕೆ ನಮೋನಮೋ ಎಂಬೆ
ಕೂಡಲ ಚೆನ್ನಸಂಗಮದೇವಾ![೩೫]

೩೩.ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೫೭೭. ಪುಟ೫೭೪
೩೪.ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೦೬೩. ಪುಟ೩೫೮
೩೫.ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೪೫೩. ಪುಟ ೧೪೦

ಎಂದು ಪ್ರತಿಪಾದಿಸಿದ್ದಾರೆ. ಆ ಪರಶಿವನ ಪರಮಾನುಗ್ರಹವೇ ಪ್ರಸಾದ. ಆತನ ಆ ಅನುಗ್ರಹದಿಂದ ಪ್ರಸನ್ನನಾದ ಜೀವನೂ ಸಹ ಪ್ರಸಾದಸ್ವರೂಪನಾಗುತ್ತಾನೆ; ಜಗತ್ತೂ ಪ್ರಸಾದವಾಗಿ ಪರಿಣಮಿಸುತ್ತದೆ. ಹೀಗೆ ಈ ಪಿಂಡಾಂಡ-ಬ್ರಹ್ಮಾಂಡಗಳೆರಡನ್ನೂ ಪ್ರಸಾದವನ್ನಾಗಿಸುವುದೇ ಪ್ರಸಾದಿಯ ಮುಖ್ಯ ಗುರಿ. ಇಲ್ಲಿ ತಾನು, ತನ್ನ ತನು, ಕರಣಗಳು, ತನಗೆ ಬೇಕಾದ ಪಡಿಪದಾರ್ಥಗಳು, ಪ್ರತಿವಿಷಯಗಳು ಮತ್ತು ಮನದ ಸಂಕಲ್ಪಗಳು ಸಹ ಪ್ರಸಾದವಾಗಿ ಪರಿಣಮಿಸುತ್ತವೆ.

ಕಾರಣ 'ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ' ಎಂಬ ಭಾವನೆಯಿಂದ, ತಮ್ಮೆಲ್ಲ ಸಂಪಾದನೆಯ ಮೇಲೆ ತಮ್ಮ ಹಕ್ಕು ಅಹಂಕಾರಗಳಿಲ್ಲ, ಸಕಲವೂ ಪರಶಿವನ ಕೊಡುಗೆ, ಅವನು ಕೊಟ್ಟದ್ದನ್ನು ಅವನಿಗೇ ಮುಟ್ಟಿಸಿ, ಪ್ರಸಾದ ಭಾವನೆಯಿಂದ ಅಗತ್ಯವಿದ್ದಷ್ಟನ್ನು ಮಾತ್ರ ಸ್ವೀಕರಿಸಬೇಕು. ಅಂತೆಯೇ ಪ್ರತಿ ವಸ್ತುವಿನಲ್ಲೂ ರೂಪ, ರುಚಿ, ತೃಪ್ತಿ ಇವೆ. ಇವು ಆಯಾ ವಸ್ತುವಿನ ರೂಪದಲ್ಲಿ ಸಮರ್ಪಿತವಾಗಬೇಕು. ಇಷ್ಟಲಿಂಗಕ್ಕೆ ರೂಪವನ್ನೂ, ಪ್ರಾಣಲಿಂಗಕ್ಕೆ ರುಚಿಯನ್ನೂ, ಭಾವಲಿಂಗಕ್ಕೆ ತೃಪ್ತಿಯನ್ನೂ ಅರ್ಪಿಸಿ ಆ ವಸ್ತುವನ್ನು ಲಿಂಗ ಪ್ರಸಾದವೆಂದೂ ಗುರುಜಂಗಮ ಪ್ರಸಾದವೆಂದೂ ಭಾವಿಸಿ ಭೋಗಿಸಬೇಕು.

ಪ್ರಸಾದದ ಮಹಿಮೆ

ಪ್ರಸಾದಂ ಪಾವನಂ ಬ್ರಹ್ಮ ಭಾಗ್ಯದಂ ಪಾಪನಾಶನಂ।
ಭೂರುದ್ರಾಣಾಂ ಜಂಗಮಾನಾಂ ಲೋಕೇ ಪ್ರಾಕೃತದೇಹಿನಾಂ॥ [೩೬]

ಗುರು ಲಿಂಗ ಜಂಗಮರ ಪ್ರಸಾದವು ಲೋಕದಲ್ಲಿ ಮಾಯಾಪಾಶಬದ್ಧರಾದ ಜೀವಿಗಳ ಪಾಪಗಳನ್ನು ನಾಶಗೈದು, ಅವರನ್ನು ಪಾವನಗೊಳಿಸಿ, ಪರಶಿವಬ್ರಹ್ಮನ ಭಾಗ್ಯವನ್ನುಂಟು ಮಾಡುವದು.

'ರೋಗಕ್ಕೆ ಔಷಧವಿದ್ದಂತೆ ಯೋಗಕ್ಕೆ ಮೂಲ ಈ ಪ್ರಸಾದವಾಗಿದೆ.' ಶರೀರದ ರೋಗಗಳನ್ನು ಔಷಧದಿಂದ ದೂರಮಾಡಿಕೊಂಡಂತೆ ಈ ಪ್ರಸಾದ ಸೇವನೆಯಿಂದ ಭವರೋಗವನ್ನು ಕಳೆದುಕೊಳ್ಳಬಹುದಾಗಿದೆ. ತ್ರಿವಿಧ ಪ್ರಸಾದ ಸೇವನೆಯಿಂದ ಮಾನವ ಪವಿತ್ರನಾಗುತ್ತಾನೆ. ನಾವು ಸ್ವೀಕರಿಸುವ ಎಲ್ಲವನ್ನೂ 'ಪ್ರಸಾದ' ಎಂದೇ ಸ್ವೀಕರಿಸಿದರೆ ಅದರಲ್ಲಿ ರುಚಿ ತೃಪ್ತಿಗಳು ಬೆರೆತು ಆತ್ಮಬಲ ಪ್ರಾಪ್ತವಾಗುತ್ತದೆ. ಯಾವುದೇ ವಸ್ತುವಿರಲಿ ಭಕ್ತಿಯಿಂದ ಭಗವಂತನಿಗೆ ಅರ್ಪಿಸಿ ಅದನ್ನು ಪ್ರಸಾದ ರೂಪವಾಗಿ ನಾವು ಭೋಗಿಸಿದರೆ ರಾಗದ್ವೇಷಗಳೂ, ಕಾಮಕ್ರೋಧಗಳೂ ದೂರವಾಗಿ ನಮ್ಮಲ್ಲಿ ಭಾವಶುದ್ಧಿ ಭಕ್ತಿವಿಕಾಸ ಉಂಟಾಗುತ್ತದೆ.

ಭಕ್ತನ ಜ್ಞಾನಪ್ರಕಾಶಗಳ ಬೆಳವಣಿಗೆಗೂ, ಮಲಪರಿಹಾರಕ್ಕೂ ಪ್ರಸಾದವು

---

೩೬. ವೀರಾಗಮ, ಪಟಲ ೭. ಶ್ಲೋಕ ಸಂಖ್ಯೆ ೧೩೪, ಪುಟ ೫೦೦

ಪರಮೋಪಾಯವೆನಿಸಿರುವುದರಿಂದ ಭಕ್ತನಿಗೆ ರಕ್ಷಾಕವಚದಂತೆ ಅದು ಆವರಣವಾಗಿದೆ. ಕಾರಣ

'ಚತುರ್ವಿಧ ಫಲಭೇದ, ಅಣಿಮಾದಿ ಸಿದ್ಧಿಗಳು ಬೇಡ
ನಿಮ್ಮ ಶರಣರು ಉಂಡುಳಿದುದು ಕೊಂಡುಮಿಕ್ಕಿದ
ಪರಮ ಪ್ರಸಾದಕ್ಕೆ ಯೋಗ್ಯನ ಮಾಡಿ ಬದುಕಿಸು'

ಎಂದು ಶರಣರು ಪ್ರಸಾದದ ಹಿರಿಮೆಯನ್ನು ಕುರಿತು ಹಾಡಿದ್ದಾರೆ. ಕಾರಣ ತ್ರಿವಿಧಾಂಗದಲ್ಲಿ ಪ್ರಸನ್ನತೆಯನ್ನು ಹುಟ್ಟಿಸುವುದೆ ಪ್ರಸಾದ. ತನುವಿಕಾರ, ಮನವಿಕಾರ, ಭಾವವಿಕಾರಗಳನ್ನು ಕಳೆವುದೆ ಪ್ರಸಾದ. ಜೀವ ಶಿವನಾಗಲು ಅಂದರೆ ಅಂಗ ಲಿಂಗವಾಗಲು ಪ್ರಸಾದವೇ ಪ್ರಮುಖವಾಗಿದೆ.

ನಾವು ಸ್ವೀಕರಿಸುವ ಆಹಾರವೆಲ್ಲವೂ ಶಿವನ ಪ್ರಸಾದ. ಆತನ ಕೃಪೆಯಿಂದ ಬೆಳೆದು ಬಂದುದು. ಆತನ ಸಾಕ್ಷಾತ್ಕಾರವನ್ನು ಪಡೆಯಲು ಸಾಧಕವಾದ ಈ ದೇಹಕ್ಕೆ ಚೈತನ್ಯವನ್ನೊದಗಿಸುವ ದಿವ್ಯಶಕ್ತಿ ಅನ್ನ. ಕಾರಣ ಅದನ್ನು ಅತಿ ಪವಿತ್ರವಾದ ಭಾವನೆಯಿಂದ ಸ್ವೀಕರಿಸಬೇಕೆಂದು

'ತನ್ನ ಲಿಂಗಕ್ಕೆ ಕೊಡಬಾರದ ಠಾವಿನಲ್ಲಿ ಪ್ರಸಾದವಕೊಂಡು
ತುಡುಗಣಿ ನಾಯಿಯಂತೆ ತಿಂಬುವವರನೇನೆಂಬೆನಯ್ಯ?
ಅದು ತನ್ನ ಒಡಲ ಹೊರೆವುದಲ್ಲದೆ ಹಿಡಿದ ಕುಳಕ್ಕೆ ಸಲ್ಲದು,
'ದ್ರವ್ಯಂ ಧಾತು ಶುಭಂ ಭವೇತ್' ಎಂಬುದಾಗಿ ಕೂಡಲ ಚೆನ್ನಸಂಗಯ್ಯನಲ್ಲಿ
ಅದುತಾ ಬೀಸರವಾದ ವ್ರತಗೇಡಿ, ಮೂಳರನೆನಗೆ ತೋರದಿರಯ್ಯ'[೩೭]

ಎನ್ನುತ್ತ ಗುರುಕಾರಣ್ಯ ಪಡೆದು ದೀಕ್ಷೆ ಹೊಂದಿದವನು ತಾನು ಭೋಗಿಸುವ ಅನ್ನವನ್ನು ಗುರು-ಲಿಂಗ-ಜಂಗಮಕ್ಕೆ ಸಮರ್ಪಿಸಿ ಪೂಜ್ಯಭಾವದಿಂದ ಸ್ವೀಕರಿಸಬೇಕೇ ವಿನಃ ಹಸಿವೆಯೆಂದು ಆಸೆಪಟ್ಟು, ಉಣ್ಣಬಾರದು ಹಾಗೆ ಮಾಡಿದರೆ ಅದು ಗುರುದ್ರೋಹ ಪ್ರಸಾದದ್ರೋಹ ಎಂದೂ ಹೇಳಿದ್ದಾರೆ. ಇಲ್ಲಿ ಪ್ರಸಾದವನ್ನು ಕೆಡಿಸಬಾರದು, ಸಮಾಧಾನದಿಂದ ಸೇವಿಸಿಬೇಕು ಎಂಬಲ್ಲಿ ನಾವು ಸೇವಿಸುವ ಅನ್ನವನ್ನು ಪೂಜ್ಯಭಾವನೆ ಯಿಂದ ಸೇವಿಸಬೇಕೆಂದು ಪ್ರತಿಪಾದಿಸಲಾಗಿದೆ.

ಒಟ್ಟಿನಲ್ಲಿ ಪ್ರಸಾದ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ತಿಳಿದುಬರುವ ವಿಷಯವೇನೆಂದರೆ ಯಾವುದರ ಸಮರ್ಪಣೆಯಿಂದ ಮಹೇಶ್ವರನಿಗೆ ಪ್ರಸನ್ನತೆ ಉಂಟಾಗುವದೋ, ಹಾಗೂ ಯಾವದು ನಮಗೆಲ್ಲ ಪರಮಾನಂದವನ್ನು ಕೊಡುವ ಪದಾರ್ಥವೋ ಅದೇ ಪ್ರಸಾದ ಎಂದು ಆಗಮಗಳು ವ್ಯಾಖ್ಯಾನಿಸಿವೆ.

---

೩೭. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೨೪೪. ಪುಟ ೪೩೪

ಶಿವಸ್ವರೂಪಿಗಳಾದ ಗುರು ಲಿಂಗ ಜಂಗಮರಲ್ಲಿ ನಿಷ್ಠೆಯುಳ್ಳವನಾಗಿ ಅವರಿಗೆ ಭಕ್ತಿಯಿಂದ ಸಮರ್ಪಿಸಿದ ಅನ್ನವನ್ನೇ ಸೇವಿಸುತ್ತ ಶಿವನ ಕೃಪೆಗೆ ಪಾತ್ರನಾಗಿ ಆತನ ಅನುಗ್ರಹ ಬಲದಿಂದ ಮಾನಸಿಕ ಪ್ರಸನ್ನತೆಯನ್ನು ಹೊಂದುವುದೇ ಪ್ರಸಾದವಾಗಿದೆ. ಕಾರಣ 'ಪ್ರಸನ್ನ ಚಿತ್ತತೆಯನ್ನುಂಟು ಮಾಡುವುದು ಯಾವುದೋ ಅದೇ ಪ್ರಸಾದ' ಎಂದು ಆಗಮಗಳಲ್ಲಿ ವರ್ಣಿಸಲಾಗಿದೆ.

ಇಷ್ಟಲಿಂಗಕ್ಕೆ ರೂಪವನ್ನೂ, ಪ್ರಾಣಲಿಂಗಕ್ಕೆ ರುಚಿಯನ್ನೂ ಭಾವಲಿಂಗಕ್ಕೆ ತೃಪ್ತಿಯನ್ನೂ ಅರ್ಪಿಸಿ ಅದನ್ನು ಗುರು-ಲಿಂಗ-ಜಂಗಮ ಪ್ರಸಾದವೆಂದು ಭಾವಿಸಿ ಭೋಗಿಸಬೇಕು. ಗುರು ಲಿಂಗ ಜಂಗಮರ ಪ್ರಸಾದವು ಲೋಕದಲ್ಲಿ ಮಾಯಾಪಾಶಬದ್ಧರಾದ ಜೀವಿಗಳ ಪಾಪಗಳನ್ನು ನಾಶಗೈದು, ಅವರನ್ನು ಪಾವನಗೊಳಿಸಿ, ಪರಶಿವಬ್ರಹ್ಮನ ಭಾಗ್ಯವನ್ನುಂಟು ಮಾಡುವದು ಎಂದು ಆಗಮಗಳು ಪ್ರತಿಪಾದಿಸಿವೆ.

ಆಗಮದಲ್ಲಿ ಪ್ರತಿಪಾದಿತವಾದ ತ್ರಿವಿಧ ಪ್ರಸಾದಗಳನ್ನು ವಚನಕಾರರು ಅಂಗೀಕರಿಸಿದ್ದರೂ ಸಹ ಪ್ರಸಾದದ ಪ್ರಕಾರಗಳನ್ನು ವಿವರಿಸುವಾಗ ವಚನಕಾರರಲ್ಲಿ ಒಮ್ಮತವಿಲ್ಲ. ಕೆಲವರು ಪ್ರಸಾದವು ತ್ರಿವಿಧವೆಂದೂ, ಮತ್ತೆ ಕೆಲವರು ಪ್ರಸಾದವು ಏಕಾದಶ ವಿಧವೆಂದೂ ಹೇಳಿದರೆ, ಮತ್ತೆ ಕೆಲವರು ಪ್ರಸಾದವು ಚತುರ್ವಿಧವೆಂದು ಹೇಳಿದ್ದಾರೆ. ಚತುರ್ವಿಧ ಪ್ರಸಾದದ ಬಗ್ಗೆಯೂ ವಚನಕಾರರಲ್ಲಿ ಒಮ್ಮತವಿಲ್ಲ. ಚತುರ್ವಿಧ ಪ್ರಸಾದದ ಬಗೆಗೆ ಕನಿಷ್ಠ ಮೂರು ಅಭಿಪ್ರಾಯಗಳಿವೆ. ಇನ್ನು ಗುರು, ಲಿಂಗ, ಜಂಗಮರಿಗೆ ಅರ್ಪಿಸಿ ಪಡೆದ ಪ್ರಸಾದವನ್ನು ಹನ್ನೊಂದು ವಿಧವಾಗಿ ವಿಂಗಡಿಸಿರುವರು. ಈ ಹನ್ನೊಂದು ವಿಧದ ಪ್ರಸಾದಗಳು ಎರಡು ಬಗೆಯಲ್ಲಿರುವವು. ಹೀಗೆ ವಚನಗಳಲ್ಲಿ ಪ್ರಸಾದಗಳ ವಿಧಗಳ ಬಗೆಗೆ ಒಮ್ಮತ ಕಂಡುಬರದಿದ್ದರೂ ಸಹ ಇಲ್ಲಿ ವಚನಕಾರರ ಸೂಕ್ಷ್ಮವಿಶ್ಲೇಷಣಾ ದೃಷ್ಟಿಕೋನವನ್ನು ಕಾಣಬಹುದು.

ಪ್ರಸಾದವನ್ನು ಸಮರ್ಪಿಸುವ ಬಗ್ಗೆ ಶಿವಾಗಮಗಳು ಬಹು ಮಾರ್ಮಿಕವಾದ ವಿಚಾರಗಳನ್ನು ತಿಳಿಸುತ್ತವೆ. ಅರ್ಪಿಸಿದ ಆಹಾರವಷ್ಟೇ ಪ್ರಸಾದವಲ್ಲ. ಭೋಗಿಸುವ ಷಡ್ವಿಷಯ, ದೇಹೇಂದ್ರಿಯಗಳೂ ಪ್ರಸಾದವೆನಿಸುತ್ತವೆ. ಯಾವ ಯಾವ ಇಂದ್ರಿಯದಿಂದ ಯಾವ ಸುಖ ದೊರೆಯುತ್ತದೆಯೋ ಅದನ್ನು ಶಿವನಿಗೆ ಅರ್ಪಿಸಿ ಆಯಾಯ ಇಂದ್ರಿಯದ ಮೂಲಕ ಪ್ರಸಾದ ರೂಪದಲ್ಲಿ ಸ್ವೀಕರಿಸಬೇಕು. ಈ ಸಮರ್ಪಣೆಯು ಸ್ಥೂಲ ಮತ್ತು ಸೂಕ್ಷ್ಮವೆಂದು ಎರಡು ವಿಧಗಳಾಗಿದ್ದು, ಸೂಕ್ಷ್ಮಸಮರ್ಪಣದ ವಿಧಾನವು ಶಿವಾಗಮಗಳಲ್ಲಿ ವಿಸ್ತಾರವಾಗಿ ಬಂದಿದೆ. ಶಿವಾಗಮಗಳಲ್ಲಿ ಪ್ರತಿಪಾದಿತವಾದ ಈ ಸೂಕ್ಷ್ಮಸಮರ್ಪಣದ ವಿಧಾನವನ್ನೇ ಚೆನ್ನಬಸವಣ್ಣನವರು ತದ್ರೂಪವಾಗಿ ಕನ್ನಡದಲ್ಲಿ ನಿರೂಪಿಸಿದ್ದಾರೆ. ಕಾರಣ ಪ್ರಸಾದ ವಿಷಯದ ನಿರೂಪಣೆ ಶಿವಾಗಮ ಮತ್ತು ವಚನಗಳಲ್ಲಿ ಒಂದೇ ಬಗೆಯಾಗಿ ನಿರೂಪಣೆಯಾಗಿದೆ.

೫.೧.೬ ವಿಭೂತಿ

ಅಷ್ಟಾವರಣಗಳಲ್ಲಿ ಆರನೆಯ ಆವರಣವಾದ ಭಸ್ಮವು ಕೇವಲ ಬಹಿರಂಗಧಾರಣೆಯ ಸಾಧನವಾಗಿರದೇ ಅದು ಆಂತರಿಕ ಅರಿವಿನ ವಿಕಾಸಕ್ಕೆ ಪ್ರೇರಕವಾಗುವ ಶಿವತತ್ವದ ಸಂಕೇತವಾಗಿದೆ.

ಭಸ್ಮದ ತಾತ್ವಿಕ ಅರ್ಥ–

ಸಂಸ್ಕೃತದಲ್ಲಿ 'ವಿಭೂತಿ' (ಭಸ್ಮ) ಶಬ್ದಕ್ಕೆ 'ಮಹಾಸಮೃದ್ಧಿ', 'ಮಂಗಲಕರ' ಎಂಬ ಅರ್ಥಗಳಿವೆ. ನಿಗಮಾಗಮಗಳ ಉಕ್ತಿಗಳಲ್ಲಿ ಭಸ್ಮವೆಂದರೆ 'ಪರಶಿವನ ಪ್ರಕಾಶ' ಹಾಗೂ 'ಗೋಮಯದಿಂದ ಶಾಸ್ತ್ರೋಕ್ತವಾಗಿ ನಿರ್ಮಿತವಾದ ಭಸ್ಮ' ಎಂದು ಎರಡು ಅರ್ಥಗಳಾಗುತ್ತವೆ.

"ಭಸ್ಮಜ್ಯೋತಿಃ ಸಮಾಮ್ನಾತಮ್'[1] 'ಭಸ್ಮೇದಂ ಶಾಂಭವಂ ಜ್ಯೋತಿಃ"[2] ಎಂಬ ಆಗಮೋಕ್ತಿಗ್ಗಳಂತೆ 'ಪರಶಿವನು ಪರಂಜ್ಯೋತಿ ಸ್ವರೂಪನು. ಆತನ ಪ್ರಕಾಶದಿಂದಲೇ ಪ್ರಪಂಚವೆಲ್ಲ ಪ್ರಕಾಶಿಸುತ್ತದೆ. ಇಂತಹ ಪರಶಿವನ ದಿವ್ಯ ತೇಜದ ಸಂಕೇತವೇ ಭಸ್ಮ. ಕಾರಣ ಆ ದಿವ್ಯ ತೇಜಸ್ಸನ್ನು ಸದಾಕಾಲ ಬಾಹ್ಯವಾಗಿ ಹಾಗೂ ಆಂತರಿಕವಾಗಿ ಧಾರಣೆ ಮಾಡಿಕೊಳ್ಳುವುದೇ ಚಿದ್ಭಸ್ಮಧಾರಣೆ' ಎಂದು ಪ್ರತಿಪಾದಿಸಲಾಗಿದೆ.

ವಚನ ಸಾಹಿತ್ಯದಲ್ಲಿಯೂ ಭಸ್ಮವೆಂದರೆ 'ಪರಶಿವನ ಪ್ರಕಾಶ'ವೆಂದೇ ಅರ್ಥೈಸಲಾಗಿದ್ದು, ಚೆನ್ನಬಸವಣ್ಣನವರು, 'ಅಯ್ಯಾ ಕೂಡಲ ಚೆನ್ನಸಂಗಮದೇವ ಶ್ರೀ ಮಹಾವಿಭೂತಿಯೆಂಬ ಪರಂಜ್ಯೋತಿ ನೀವಾದಿರಾಗಿ ಎನಗೆ ವಿಭೂತಿಯೇ ಸರ್ವ ಸಾಧನ'[3] ಎಂಬುದಾಗಿ ಚಿದ್ಭಸ್ಮದ ವಿಷಯವಾಗಿ ಹೇಳಿರುವುದು ಕಂಡುಬರುತ್ತದೆ. ನಿಜಗುಣ ಶಿವಯೋಗಿಗಳು, "ಶಿವನ ಮೈವೆಳಗು ತಾನಾದ ಭಸಿತವನು"[4] ಎಂದು ಹೇಳಿದ್ದಾರೆ. 'ಅನಾದಿ ಪರಶಿವನಲ್ಲಿ ಅಂತರ್ಗತವಾಗಿರ್ದ ಮಹಾಪ್ರಕಾಶವೇ ಬಹಿಷ್ಕರಿಸಿ ಚಿತ್ ಎನಿಸಿತ್ತು. ಆ ಚಿದಂಗದಲ್ಲಿ ತೋರಿದ ಚಿದ್ವಿಭೂತಿಯನೊಲಿದು ಧರಿಸಿದ ಶರಣ ಜ್ಯೋತಿರ್ಲಿಂಗವಪ್ಪುದು ತಪ್ಪದು ಕಾಣಾ ಉರಿಲಿಂಗಪೆದ್ದಿಪ್ರಿಯ ಗುರುವಿಶ್ವೇಶ್ವರಾ"[5] ಎಂದಿದ್ದಾರೆ.

ಹೀಗೆ ತಾತ್ವಿಕ ಅರ್ಥದಲ್ಲಿ ಭಸ್ಮವು 'ಪರಶಿವನ ಪ್ರಕಾಶ', 'ಚಿದ್ಭಸ್ಮ' ಎಂದು ಕರೆಯಲ್ಪಟ್ಟರೆ, ಇನ್ನೊಂದು ಅರ್ಥದಲ್ಲಿ 'ಜ್ಞಾನವೆಂಬ ಅಗ್ನಿಯಲ್ಲಿ ಎಲ್ಲ ಸ್ವಾರ್ಥಪರ ಕಾಮ(ಆಸೆ)ಗಳನ್ನು ದಹಿಸುವುದೇ ನಿಜವಾದ ಭಸ್ಮಧಾರಣೆ ಎಂದು ಅರ್ಥೈಸಲಾಗಿದೆ. ಇದನ್ನೇ ವಚನಕಾರರು, 'ಸಕಲಕಾಮಂಗಳ ಬಯಕೆಯ ಸುಟ್ಟು, ನಿಃಕಾಮರೂಪಿನಿಂ

---

೧. ಚಂ.ಆ.ಕ್ರಿಪಾ. ಪಟಲ ೬, ಶ್ಲೋಕ ಸಂಖ್ಯೆ ೬೪

೨. ಚಂ.ಆ.ಕ್ರಿಪಾ. ಪಟಲ ೬, ಶ್ಲೋಕ ಸಂಖ್ಯೆ ೬೬

೩. ಚೆ.ಬ.ವ.ಸಂ. ಸಮಗ್ರ ವಚನ ಸಂಪುಟ ೩, ವ.ಸಂ. ೯೧೮. ಪುಟ ೨೮೪

೪. ಚಂದ್ರಜ್ಞಾನಾಗಮ ವಿಚಾರ ರಶ್ಮಿ, ಡಾ॥ ಎಂ. ಶಿವಕುಮಾರ ಸ್ವಾಮಿ, ಪುಟ ೬೭

೫. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ.೧, ವಚನ ಸಂಖ್ಯೆ ೧೨೮೦ ಪುಟ ೪೦೬

ಭಸಿತವಾಯಿತ್ತು"[೬] ಎಂದು ಪ್ರತಿಪಾದಿಸಿದ್ದಾರೆ.

ಇಂತಹ ತಾತ್ವಿಕ ಭಸ್ಮದ ಅರಿವು ಪ್ರಾಪ್ತಿಯಾಗಬೇಕಾದರೆ ಮೊದಲು ಕ್ರಿಯಾಪ್ರಧಾನವಾದ ಭಸ್ಮವನ್ನು ಧರಿಸಬೇಕೆಂದು ಆಗಮ ಮತ್ತು ವಚನಗಳು ಪ್ರತಿಪಾದಿಸುತ್ತವೆ. ಬಹಿರಂಗದ ವೇಷಕ್ಕೆ ಯಾವ ಮಹತ್ವವನ್ನೂ ಕೊಡದ ಅಲ್ಲಮಪ್ರಭುಗಳೂ ಸಹಿತ, 'ಗುಹೇಶ್ವರಲಿಂಗವ ಕಾಂಬುವುದಕ್ಕೆ ಆ ಮಹಾವಸ್ತುವಿನ ಪರಮ ಪ್ರಕಾಶದಿಂದೊದಗಿದ ಭಸಿತವೇ ಮುಖ್ಯ ಕಾಣಿರಣ್ಣಾ"[೭] ಎಂದಿದ್ದಾರೆ. ಇನ್ನೊರ್ವ ಶರಣರು "ಅಯ್ಯಾ ಶ್ರೀ ವಿಭೂತಿಯಿಂದ ಕಂಡೆ ಆ ನಿಮ್ಮ ದಿವ್ಯ ಬೆಳಗಿನ ಹೊಳಹ"[೮] ಎಂದಿರುವರು. ಕಾರಣ ವಿಭೂತಿಯೆಂದರೆ ಬರಿ ಸಾಮಾನ್ಯ ಬೂದಿಯಲ್ಲ. ಅದು ಸದ್ಗುಣಿಯಾದ ವಿದ್ಯಾವಂತ ಧಾರ್ಮಿಕ ವ್ಯಕ್ತಿಯೊಬ್ಬನಿಂದ ನಿರ್ದಿಷ್ಟ ವಿಧಾನಾನುಸಾರ ಪಂಚಬ್ರಹ್ಮ ಮಂತ್ರನ್ಯಾಸಾದಿ ಸಂಬಂಧದಿಂದ ಹಾಗೂ ಶಿವಮಂತ್ರ ಪೂರ್ವಕವಾಗಿ ಅಗ್ನಿ ಸಂಬಂಧದಿಂದ ಸಿದ್ಧಗೊಂಡದ್ದೇ ಭಸ್ಮವಾಗಿದೆ. ಕಾರಣ ಎಲ್ಲ ಶೈವಪಂಥಗಳೂ ವಿಭೂತಿಯನ್ನು ತುಂಬಾ ಪವಿತ್ರವಾದುದೆಂದೂ ನಂಬುತ್ತವೆ. ಇಂಥ ಪವಿತ್ರ ಭಸ್ಮ ಧಾರಣೆಯಿಂದ ಉಂಟಾಗುವ ಸತ್ಫಲವನ್ನಾಧರಿಸಿ ಆಗಮಗಳು ವಿಭೂತಿಯನ್ನು ಐದು ಹೆಸರುಗಳಿಂದ ನಿರೂಪಿಸುತ್ತದೆ.

ಭಸ್ಮದ ಪರ್ಯಾಯ ನಾಮಗಳು

ಭಸನಾದ್ಭಸಿತಂ ಪ್ರೋಕ್ತಂ ಭಸ್ಮ ಕಲ್ಮಷಭಕ್ಷಣಾತ್॥
ಭೂತಿರ್ಭೂತಿಕರೀ ಯಸ್ಮಾದ್ ರಕ್ಷಾ ರಕ್ಷಾಕರೀ ಯತಃ।[೯]

ತೇಜಸ್ವಿಯನ್ನಾಗಿ ಮಾಡುವುದರಿಂದ ಭಸಿತ, ಪಾಪಗಳನ್ನು ಭಕ್ಷಿಸುವುದರಿಂದ ಭಸ್ಮ, ಐಶ್ವರ್ಯದಾಯಕವಾದದ್ದರಿಂದ ಭೂತಿ, ಮತ್ತು ರಕ್ಷಿಸುವುದರಿಂದ ರಕ್ಷಾ ಎಂದು ವಿಭೂತಿಯ ಪರ್ಯಾಯ ನಾಮಗಳನ್ನು ಪಾರಮೇಶ್ವರಾಗಮವು ತಿಳಿಸುತ್ತದೆ.

ಅರ್ಥಾತ್ ಅಣಿಮಾದಿ ಅಷ್ಟಸಿದ್ಧಿಗಳು ಹಾಗೂ ಐಶ್ವರ್ಯವನ್ನುಂಟು ಮಾಡುವುದರಿಂದ 'ವಿಭೂತಿ' ಎಂದೂ, ಶಿವತತ್ವವನ್ನು ಭಾಸನಗೊಳಿಸಿ ತೇಜಸ್ವಿಯನ್ನಾಗಿಸುವುದರಿಂದ 'ಭಸಿತ'ವೆಂದೂ, ಮನಸ್ಸು-ವಾಕ್-ಕಾಯಗಳಿಂದ ಘಟಿಸಬಹುದಾದ ಪಾಪಗಳನ್ನು ಭರ್ತ್ಸನಗೊಳಿಸುವುದರಿಂದ 'ಭಸ್ಮ'ವೆಂದೂ, ಆಧ್ಯಾತ್ಮಿಕಾದಿ ತಾಪತ್ರಯಗಳಿಂದ ತೋರುವ ವಿಪತ್ತುಗಳನ್ನು ಕ್ಷಾರಣ(ನಾಶ) ಗೊಳಿಸುವುದರಿಂದ 'ಕ್ಷಾರ' ಎಂದೂ, ಗ್ರಹಾದಿಗಳ ಭೀತಿಯಿಂದ ರಕ್ಷಿಸುವ ಕಾರಣ 'ರಕ್ಷೆ' ಎಂದೂ ಕರೆಯಲಾಗುತ್ತದೆ ಎಂದು ಆಗಮಗಳು ನಿರೂಪಿಸುತ್ತವೆ. ಇದೇ ಪ್ರಕಾರದ ವಿವರಣೆ ವಚನಗಳಲ್ಲಿಯೂ ಕಂಡುಬರುತ್ತಿದ್ದು-

---

೬ ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ.೧, ವಚನ ಸಂಖ್ಯೆ ೧೦೦೪ ಪುಟ ೩೦೫
೭. ಅಲ್ಲಮಪ್ರಭುದೇವರ ವ.ಸಂ. ಸಮಗ್ರ ವ.ಸಂ.೨, ವಚನ ಸಂಖ್ಯೆ ೧೧೮೪, ಪುಟ ೩೫೦
೮. ಚಂದ್ರಜ್ಞಾಗಮ ವಿಚಾರ ರಶ್ಮಿ, ಸಂ. ಡಾ॥ ಎಂ. ಶಿವಕುಮಾರಸ್ವಾಮಿ, ಪುಟ ೭೭
೯. ಪಾ.ಆ. ಪಟಲ ೧೭, ಶ್ಲೋಕ ಸಂಖ್ಯೆ ೬೦-೬೧

......ಶಿವಜ್ಞಾನಸುಖದ ಮಹದೈಶ್ವರ್ಯ ಸ್ವರೂಪಿನಿಂ ವಿಭೂತಿಯಾಯಿತ್ತು
ಸಕಲಕಾಮಂಗಳ ಬಯಕೆಯ ಸುಟ್ಟು, ನಿಃಕಾಮರೂಪಿನಿಂ ಭಸಿತವಾಯಿತ್ತು
ಪೂರ್ವಕರ್ಮಗಳನುರುಪಿ ನಿಃಕರ್ಮರೂಪದಿಂ ಭಸ್ಮವಾಯಿತ್ತು
ಮಲಮಾಯೆಯ ಕೆಳವುದರಿಂ ಕ್ಷಾರವಾಯಾಯಿತ್ತು
ಭೂತ, ಪ್ರೇತ,ಪಿಶಾಚ ರಾಕ್ಷಸಂಗಳ ಹೊದ್ದಲೀಯದಿರ್ಪುದರಿಂ ರಕ್ಷೆಯಾಯಿತ್ತು
ಇಂತಿಪ್ಪ ವಿಭೂತಿಯ ಮಹಾತ್ಮೆಯನ್ನು ಅರಿತು ನೀನೊಲಿದ ವಿಭೂತಿಯ
ಆನು ಧರಿಸಿ ಬದುಕಿದೆನು ಕಾಣಾ ಸೌರಾಷ್ಟ್ರಸೋಮೇಶ್ವರಾ[೧೦]

ಎಂದು ಆಗಮದ ಅರ್ಥವಿಶ್ಲೇಷಣೆಯನ್ನೇ ವಚನದಲ್ಲಿ ಅಂಗೀಕರಿಸಲಾಗಿದೆ. ಅಲ್ಲದೇ ಭಸ್ಮಕ್ಕೆ ಈ ಪಂಚನಾಮಗಳು ಉಂಟಾಗಲು ಪಂಚಗೋವುಗಳ ಗೋಮಯವೇ ಕಾರಣವೆಂದು ಭಸ್ಮ ಉತ್ಪತ್ತಿಯ ಅಲೌಕಿಕ ವಿಧಾನವನ್ನು ಆಗಮ ಮತ್ತು ವಚನಗಳೆರಡೂ ಸಾರುತ್ತವೆ.

ಪಂಚ ವಿಭೂತಿಗಳ ಉತ್ಪತ್ತಿ

ಭಸ್ಮಕ್ಕೆ ಐದು ಹೆಸರುಗಳುಂಟಾಗಲು ಐದು ತರದ ಗೋವುಗಳ ಸಗಣಿಯ ಭೇದವೇ ಕಾರಣವೆಂದು ವೀರಾಗಮವು ಅರುಹುತ್ತದೆ.

"ಪಂಚಕಲ್ಪಾನ್ವಿತಂ ಭಸ್ಮ ಪಂಚಧೇನು ಸಮನ್ವಿತಂ॥"[೧೧]

ಎಂಬ ಉಕ್ತಿಯಂತೆ ಸದಾಶಿವನ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನಗಳೆಂಬ ಪಂಚಮುಖಗಳಿಂದ ಪಂಚಮಹಾಭೂತಗಳು, ಪಂಚ ಕಲೆಗಳೂ, ಪಂಚಗೋವುಗಳೂ ಉತ್ಪನ್ನವಾದವು. ಶಿವನ ಪಂಚ ಮುಖಗಳಿಂದ ಪ್ರಾದುರ್ಭವಿಸಿದ ನಂದಾ, ಭದ್ರಾ, ಸುರಭಿ ಸುಶೀಲಾ ಹಾಗೂ ಸುಮನಾ ಎಂಬ ಪಂಚ ಗೋವುಗಳ ಗೋಮಯದಿಂದ ನಿರ್ಮಿತವಾದುದೇ ಭಸ್ಮ. ಅವುಗಳಲ್ಲಿ ಕಪಿಲವರ್ಣದ ನಂದಾದಿಂದ ವಿಭೂತಿಯು, ಕೃಷ್ಣವರ್ಣದ ಭದ್ರಾದಿಂದ ಭಸಿತವೂ, ಧವಲವರ್ಣದ ಸುರಭಿಯಿಂದ ಭಸ್ಮವೂ, ಧೂಮ್ರವರ್ಣದ ಸುಶೀಲಾದಿಂದ ಕ್ಷಾರವೂ, ರಕ್ತವರ್ಣದ(ಕೆಂಪುಬಣ್ಣ) ಸುಮನಾದಿಂದ ರಕ್ಷೆಯು ನಿರ್ಮಾಣಗೊಳ್ಳುವುದು. ಹೀಗೆ ವಿವಿಧ ಗೋವುಗಳ ಸಗಣಿಯನ್ನು ಪ್ರತ್ಯೇಕವಾಗಿ ಸಂಗ್ರಹಿಸಿ, ಶಾಸ್ತ್ರೋಕ್ತ ಕ್ರಮದಿಂದ ವಿವಿಧ ಭಸ್ಮಗಳ ನಿರ್ಮಾಣ ಮಾಡಲಾಗುತ್ತದೆಂದು ಆಗಮಗಳು ಅರುಹುತ್ತವೆ. ಇದನ್ನೇ ವಚನಗಳಲ್ಲಿ –

ವಿಭೂತಿ ಭಸಿತ ಭಸ್ಮ ಕ್ಷಾರ ರಕ್ಷೆ
ಎಂಬ ಪಂಚವಿಭೂತಿ ಉತ್ಪತ್ಯವೆಂತೆಂದಡೆ :

---

೧೦. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ. ೧, ವಚನ ಸಂಖ್ಯೆ ೧೦೦೪ ಪುಟ ೩೦೫
೧೧. ವೀರಾಗಮ, ೧ ನೇ ಪಟಲ, ಶ್ಲೋಕ ಸಂ. ೨೧೮, ಪುಟ ೪೮

ಸದ್ಯೋಜಾತ ವಾಮದೇವ ಅಘೋರ
ತತ್ಪುರುಷ ಈಶಾನವೆಂಬ ಪಂಚಮುಖದಲ್ಲಿ,
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಉತ್ಪತ್ಯವಾಯಿತ್ತು.
ಆ ಪೃಥ್ವಿಯಪ್ಪು ತೇಜ ವಾಯುವಾಕಾಶದಿಂದಲ್ಲಿ
ನಿವೃತ್ತಿ ಪ್ರತಿಷ್ಠೆ ವಿದ್ಯಾ ಶಾಂತಿ ಶಾಂತ್ಯಾತೀತಯೆಂಬ
ಪಂಚಕಲೆಗಳುತ್ಪತ್ಯವಾಯಿತ್ತು
ಆ ಪಂಚಕಲೆಗಳಿಂದ ನಂದೆ ಭದ್ರೆ ಸುರಭಿ ಸುಶೀಲೆ ಸುಮನೆಯೆಂಬ
ಪಂಚಗೋವುಗಳುತ್ಪತ್ಯವಾಯಿತ್ತು. ಆ ಪಂಚಗೋವುಗಳ ಗೋಮಯದಲ್ಲಿ,
ವಿಭೂತಿ ಭಸಿತ ಭಸ್ಮ ಕ್ಷಾರ ರಕ್ಷೆಯೆಂಬ ಪಂಚವಿಭೂತಿ ಉತ್ಪತ್ಯವಾಯಿತ್ತು.[೧೨]

ಎಂಬಂತೆ ಪಂಚ ಗೋವುಗಳ ಹಾಗೂ ಪಂಚ ಭಸ್ಮಗಳ ಉತ್ಪತ್ತಿಯ ವಿವರಣೆಯಲ್ಲಿಯೂ ಆಗಮ ಮತ್ತು ವಚನಗಳಲ್ಲಿ ಸಾಮ್ಯತೆಯನ್ನು ಕಾಣಬಹುದು. ಹೀಗೆ ಪರಶಿವನ ಪಂಚಮುಖಗಳಿಂದ ಪ್ರಾದುರ್ಭವಿಸಿದ ಪಂಚಗೋವುಗಳ ಗೋಮಯದಿಂದ ನಿರ್ಮಾಣಗೊಂಡ ವಿಭೂತಿಯನ್ನು ವೀರಶೈವರು ತಮ್ಮ ನಿತ್ಯ ಕರ್ಮವನ್ನು ಆಚರಿಸುವ ಸಂದರ್ಭದಲ್ಲಿ ಅವಶ್ಯವಾಗಿ ಧರಿಸಬೇಕೆಂದು ಆಗಮಗಳು ತಿಳಿಸಿವೆ.

"ಧಾರಯೇನಿತ್ಯಕಾರ್ಯೇಷು ವಿಭೂತಿಂ ಚ ಪ್ರಯತ್ನಿತ"

ಎಂಬ ಆಗಮೋಕ್ತಿಗನುಸಾರವಾಗಿ ವೀರಶೈವರು ನಿತ್ಯವು ಆಚರಿಸುವ ಕರ್ಮಗಳೆಂದರೆ ಲಿಂಗಧಾರಣೆ, ಲಿಂಗಪೂಜೆ, ಪಂಚಾಕ್ಷರ ಮಹಾಮಂತ್ರದ ಜಪ, ಶಿವಧ್ಯಾನ, ಶಿವಾಗಮ ಶಾಸ್ತ್ರದ ಅಧ್ಯಯನ ಮುಂತಾದ ಕ್ರಿಯೆಗಳೇ ನಿತ್ಯಕರ್ಮಗಳು. ಈ ನಿತ್ಯಕರ್ಮಗಳನ್ನಾಚರಿಸುವ ಸಂದರ್ಭದಲ್ಲಿ ವಿಭೂತಿಯನ್ನು ಧರಿಸದೆ ಹೋದರೆ ನಿತ್ಯ ಕರ್ಮವು ಅಪೂರ್ಣವೆನಿಸುವುದು ಎಂದು ಆಗಮಗಳ ಅಭಿಮತ.

ವಚನಕಾರರಲ್ಲಿಯೂ ಸಹ ಇದೇ ಅಭಿಪ್ರಾಯ ವ್ಯಕ್ತವಾಗಿದ್ದು, ಬಸವಣ್ಣನವರು –

ಶ್ರೀವಿಭೂತಿಯ ಬಿಟ್ಟು ತಪಸ್ಸು ಮಾಡಿದಡೆ ಆ ತಪಃಸಿದ್ಧಿ ಬಯಲು,
ಶ್ರೀವಿಭೂತಿಯ ಬಿಟ್ಟು ದೀಕ್ಷೆಯ ಕೊಂಡಡೆ ಆ ದೀಕ್ಷೆ ಬಯಲು,
ಶ್ರೀವಿಭೂತಿಯ ಬಿಟ್ಟು ಮಂತ್ರಗಳ ಸಾಧಿಸಿದಡೆ ಆ ಮಂತ್ರಸಿದ್ಧಿ ಬಯಲು,
ಶ್ರೀವಿಭೂತಿಯ ಬಿಟ್ಟು ಯಜ್ಞಂಗಳ ಸಾಧಿಸಿದಡೆ ಆ ಯಜ್ಞಸಿದ್ಧಿ ಬಯಲು,
ಶ್ರೀವಿಭೂತಿಯ ಬಿಟ್ಟು ದೇವತಾರ್ಚನೆ ಮಾಡಿದಡೆ ಆ ದೇವತಾರ್ಚನೆ ಬಯಲು,
ಶ್ರೀವಿಭೂತಿಯ ಬಿಟ್ಟು ವಿದ್ಯವ ಸಾಧಿಸಿದಡೆ ಆ ವಿದ್ಯಾಸಿದ್ಧಿ ಬಯಲು,
ಹಲವು ಕಾಲ ಕೊಂದ ಸೂನೆಗಾರನ ಕೈಯ್ಯ ಕತ್ತಿಯಾದಡೇನು

೧೨. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೩೩೩, ಪುಟ ೧೩೮

ಪರುಷ ಮುಟ್ಟಲು ಹೊನ್ನಾಗದೇ ಅಯ್ಯಾ? ಲಲಾಟದಲ್ಲಿ ವಿಭೂತಿಯ ಧರಿಸಲ್ಕೆ, ಪಾಪಂಗಳು ಬೆಂದು ಹೋಗದಿಹವೇ ಕೂಡಲಸಂಗಮದೇವಾ?[೧೩]

ಎಂಬಂತೆ ಭಸ್ಮವನ್ನು ಧರಿಸದೇ ಆಚರಿಸಿದ ಕರ್ಮವು ಸಕಲರೀತಿಯಿಂದಲೂ ನಿಷ್ಫಲವಾಗುವುದು ಎಂಬ ಮಾತನ್ನು ವಚನಕಾರರೂ ಅಂಗೀಕರಿಸಿದ್ದಾರೆ. ಹೀಗೆ ವೀರಶೈವರ ಎಲ್ಲ ದೈನಂದಿನ ಕಾರ್ಯಗಳಲ್ಲೂ ಅತೀ ಅಗತ್ಯವಾದ ಈ ಭಸ್ಮವನ್ನು ಸಿದ್ಧಪಡಿಸುವಾಗ ಪಾಲಿಸಬೇಕಾದ ಕೆಲವು ಕಟ್ಟುನಿಟ್ಟಾದ ನಿಯಮಗಳನ್ನು ಆಗಮಗಳು ತಿಳಿಸುತ್ತವೆ. ಅಲ್ಲದೇ ಹಸುವಿನ ಸಗಣಿಯನ್ನು ಹೇಗೆ ಸಂಗ್ರಹಿಸಬೇಕು? ಹೇಗೆ ಒಣಗಿಸಬೇಕು? ಮಂತ್ರೋಚ್ಚಾರಣೆಯ ಮೂಲಕ ಅದನ್ನು ಹೇಗೆ ಸುಡಬೇಕು? ಅದರಲ್ಲಿ ಬೇರೆ ಕೆಲವು ಪವಿತ್ರ ವನಸ್ಪತಿಗಳನ್ನು ಹೇಗೆ ಬೆರೆಸಬೇಕು? ಇಂತಹ ವಿವರಗಳನ್ನು ಆಗಮಗಳಲ್ಲಿ ಸವಿಸ್ತಾರವಾಗಿ ಹೇಳಲಾಗಿದೆ.

ಭಸ್ಮ ನಿರ್ಮಾಣ ವಿಧಿ

ಯಾವ ಗೋವಿನ ಗೋಮಯದಿಂದ ಭಸ್ಮವನ್ನು ನಿರ್ಮಿಸಬೇಕಾಗಿದೆಯೋ ಆ ಗೋವನ್ನು ಹಾಗೂ ಸೇವಿಸುವ ಆಹಾರ ಮತ್ತು ನೀರನ್ನು ಪಂಚಾಕ್ಷರ ಮಂತ್ರದಿಂದ ಅಭಿಮಂತ್ರಿಸಬೇಕು. ಭಸ್ಮ ತಯಾರಕನು ಕೂಡ ಶುಕ್ಲಪಕ್ಷ ಇಲ್ಲವೆ ಕೃಷ್ಣಪಕ್ಷದ ಚತುರ್ದಶಿಯಿಂದ ಉಪವಾಸ ವ್ರತವನ್ನಾಚರಿಸಿ, ಮೂರನೆಯ ದಿನ ಪ್ರಾತಃ ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಸ್ನಾನಾದಿಗಳಿಂದ ಶುಚಿರ್ಭೂತನಾಗಿ ಮಡಿವಸ್ತ್ರವನ್ನು ಧರಿಸಿಕೊಳ್ಳಬೇಕು. ಹೀಗೆ ಪವಿತ್ರನಾದ ವ್ಯಕ್ತಿಯು ಮಂತ್ರಪೂತವಾದ ಆ ಆಕಳನ್ನು ಸಮೀಪಿಸಿ ಹಾಲು ಕರೆಯುವುದಕ್ಕೋಸ್ಕರ(ಹಿಂಡುವುದಕ್ಕಾಗಿ) ಕರುವನ್ನು ಗೋವಿನ ಹತ್ತಿರ ಬಿಡಬೇಕು. ಆ ಸಮಯದಲ್ಲಿ ಗೋವು ಮೂತ್ರ ವಿಸರ್ಜನೆ ಮಾಡಿದರೆ ಅದನ್ನು ಪಾತ್ರೆಗಳಲ್ಲಾಗಲಿ ಅಥವಾ ಕಮಲದ ಇಲ್ಲವೆ, ಪಲಾಶಪತ್ರಗಳಿಂದ ನಿರ್ಮಿತವಾದ ಪಾತ್ರೆಯಲ್ಲಾಗಲಿ ಅಥವಾ ಗೋಶೃಂಗ(ಆಕಳಕೊಂಬು)ದಲ್ಲಾಗಲಿ ಹಿಡಿಯಬೇಕು. ಇದರಂತೆಯೇ ಗೋಮಯವನ್ನು ಅದು ಭೂಮಿಗೆ ಬೀಳುವ ಮುನ್ನವೇ ಮೇಲೆ ತಿಳಿಸಿದ ಪಾತ್ರೆಗಳಲ್ಲಿ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತ ಸಂಗ್ರಹಿಸಬೇಕು. ನಂತರ ಹತ್ತು ಬಾರಿ ಪಂಚಾಕ್ಷರಿ ಮಂತ್ರ ಜಪಿಸುತ್ತ ಗೋಮೂತ್ರವನ್ನು, ಎಂಟು ಬಾರಿ ಅದೇ ಮಂತ್ರವನ್ನು ಪಠಿಸುತ್ತ ಗೋಮಯವನ್ನು ಪರಿಶುದ್ಧಗೊಳಿಸಿ 'ಭವಾಯ ನಮಃ' ಎಂಬ ಮಂತ್ರ ಜಪಿಸುತ್ತ ಗೋಮಯ ಮತ್ತು ಗೋಮೂತ್ರವನ್ನು ಕೂಡಿಸಿ ಕಲೆಸಬೇಕು. ಆ ಬಳಿಕ 'ಶರ್ವಾಯ ನಮಃ' ಎಂಬ ಮಂತ್ರವನ್ನು ಜಪಿಸುತ್ತ ಅದರಿಂದ ಹದಿನಾಲ್ಕು ಉಂಡೆಗಳನ್ನು (ಕುರುಳು) ತಯಾರಿಸಿ, ನಂತರ ಏಳು ಬಾರಿ ಪಂಚಾಕ್ಷರ ಮಂತ್ರವನ್ನು ಜಪಿಸುತ್ತ ಅವುಗಳನ್ನು ಬಿಸಿಲಿನಲ್ಲಿ ಒಣಹಾಕಬೇಕು. ಅವು ಒಣಗಿದ ಮೇಲೆ ಅವುಗಳನ್ನು ಮೊದಲಿನ ಪಾತ್ರೆಗಳಲ್ಲಿ ಸಂಗ್ರಹಿಸಬೇಕು. ನಂತರ ಆಗಮೋಕ್ತವಿಧಿಯಂತೆ ಅಗ್ನಿಯನ್ನು ಪ್ರತಿಷ್ಠಾಪಿಸಿ, ಅದನ್ನು ಪೂಜಿಸಿ ಅದರಲ್ಲಿ

---

೧೩. ಬ.ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೧೩೬೯. ಪುಟ ೩೭೮.

ಈ ಕುರುಳುಗಳನ್ನು 'ಓಂ ನಮಃ ಶಿವಾಯ ಓಂ ಸ್ವಾಹಾ' ಎನ್ನುತ್ತಾ ಹಾಕಬೇಕು. ನಂತರ ಷಡಕ್ಷರ ಮಂತ್ರವನ್ನು ಅನುಲೋಮ ವಿಲೋಮಕ್ರಮದಲ್ಲಿ ಪಠಿಸುತ್ತ ಸ್ವಾಹಾ ಪದವನ್ನು ಜೋಡಿಸಿ ಅಗ್ನಿಯಲ್ಲಿ ಹಾಕಬೇಕು. ಆಗ ಇಂದ್ರೀಯ ನಿಗ್ರಹವನ್ನು ಸಾಧಿಸಿದ ಸಾಧಕನು ಮೂಲಮಂತ್ರ ಜಪಿಸುತ್ತ ಅಜ್ಯದ ಆಹುತಿಯನ್ನು ಕೊಡಬೇಕು (ತುಪ್ಪ ಹಾಕಬೇಕು). ನಂತರ 'ನಿಧನಪತಯೇ ನಮಃ' ಎಂಬ ಮಂತ್ರದಿಂದ ಇಪ್ಪತ್ಮೂರು ಬಾರಿ ಆಹುತಿಯನ್ನು ನೀಡಿ, ಪಂಚಬ್ರಹ್ಮಮಂತ್ರದಿಂದ ಮತ್ತು 'ನಮೋ ದೇವಾಯ ಶಂಭವೇ' ಎಂಬ ಮಂತ್ರಗಳಿಂದಲೂ ತುಪ್ಪದ ಆಹುತಿಯನ್ನು ಕೊಡಬೇಕು. ಆ ಬಳಿಕ 'ಭವಾಯ ಶಿವಾಯ ನಮಃ', 'ಶರ್ವಾಯ ಶಿವಾಯ ನಮಃ', 'ಮೃಡಾಯ ಶಿವಾಯ ನಮಃ', 'ರುದ್ರಾಯ ಶಿವಾಯ ನಮಃ', 'ಹರಾಯ ಶಿವಾಯ ನಮಃ', 'ಶಂಭವೇ ಶಿವಾಯ ನಮಃ' 'ಮಹೇಶ್ವರಾಯ ಶಿವಾಯ ನಮಃ' ಹಾಗೂ 'ಶಿವಾಯ ಶಿವಾಯ ನಮಃ' ಎಂಬ ಎಂಟು ಮಂತ್ರಗಳಿಂದಲೂ ಆಹುತಿಯನ್ನು ಮತ್ತು ೧೦೮ ಬಾರಿ ಮೂಲ ಪಂಚಾಕ್ಷರ ಮಂತ್ರವನ್ನು ಪಠಿಸುತ್ತ ಪೂರ್ಣಕುಂಭದ ನೀರಿನಿಂದ ಅರ್ಪಣ ಕೊಡಬೇಕು. ನಂತರ ಶಿವಭಕ್ತರಿಗೆ ದಕ್ಷಿಣೆಯನ್ನು ಕೊಟ್ಟು ಧಾನ್ಯದ ಹೊಟ್ಟಿನಿಂದ ಅಗ್ನಿಯನ್ನು ಮುಚ್ಚಬೇಕು. ಮೂರುದಿನಗಳ ತರುವಾಯ ಪ್ರಾತಃ ಬ್ರಾಹ್ಮೀಮುಹೂರ್ತದಲ್ಲಿ ಸ್ನಾನಾದಿಗಳಿಂದ ಶುಚಿರ್ಭೂತನಾಗಿ ಮಡಿವಸ್ತ್ರವನ್ನು ಧರಿಸಿಕೊಂಡ ಬಳಿಕ ಸದ್ಯೋಜಾತಮಂತ್ರದಿಂದ ಭಸ್ಮವನ್ನು ಸಂಗ್ರಹಿಸಿ, ವಾಮದೇವ ಮಂತ್ರದಿಂದ ಚೂರ್ಣೀಕರಿಸಿ, ಅದರಲ್ಲಿ ಸುಗಂಧಜಲ, ಕಸ್ತೂರಿ, ಚಂದನ, ಕರ್ಪೂರ, ಕುಂಕುಮ, ಉಶೀರ ಮೊದಲಾದ ಸುಗಂಧದ್ರವ್ಯಗಳನ್ನು ಪ್ರಣವವನ್ನು ಜಪಿಸುತ್ತ ಕೂಡಿಸಿ ಕಲೆಸಬೇಕು. ನಂತರ ಅಘೋರ ಹಾಗೂ ಪಂಚಾಕ್ಷರ ಮಂತ್ರಗಳನ್ನು ಹತ್ತು ಬಾರಿ ಪಠಿಸುತ್ತ ಭಸ್ಮದ ಹೋಲಿಕೆಗಳನ್ನು(ಗೋಲಕಗಳನ್ನು) ಸಿದ್ಧಪಡಿಸಬೇಕೆಂದು ಭಸ್ಮನಿರ್ಮಾಣ ವಿಧಿಯನ್ನು ಸವಿಸ್ತಾರವಾಗಿ ಚಂದ್ರಜ್ಞಾನಾಗಮದಲ್ಲಿ[೧೪] ನಿರೂಪಿಸಲಾಗಿದೆ.

ಇಷ್ಟು ವಿಸ್ತಾರವಾದ ವಿಧಿಯಿಂದ ಭಸ್ಮವನ್ನು ನಿರ್ಮಿಸುವುದು ಸಾಧ್ಯವಾಗದಿರುವವರಿಗಾಗಿ ಸಂಕ್ಷಿಪ್ತ ಭಸ್ಮರ್ಮಾಣ ವಿಧಿಯನ್ನೂ ಚಂದ್ರಜ್ಞಾನಾಗಮದಲ್ಲಿ ಹೇಳಲಾಗಿದೆ.

> ಸದ್ಯೇನ ಗೋಶಕೃದ್ಗ್ರಾಹ್ಯಂ ವಾಮೇನ ತ್ವಭಿಮಂತ್ರಯೇತ್
> ಅಘೋರೇಣ ದಹೇತ್ ಪಿಂಡಂ ಗ್ರಾಹ್ಯಂ ತತ್ಪುರುಷೇಣ ತು।
> ನಿತ್ಯಮೀಶಾನಮಂತ್ರೇಣ ಸ್ವಾಂಗೇ ಧಾರ್ಯಂ ಪ್ರಯತ್ನತಃ॥[೧೫]

ಅರ್ಥಾತ್ ಸದ್ಯೋಜಾತಮಂತ್ರವನ್ನು ಉಚ್ಚರಿಸುತ್ತ ಗೋಮಯವನ್ನು ತಂದು, ವಾಮದೇವ ಮಂತ್ರವನ್ನು ಉಚ್ಚರಿಸುತ್ತ ಅದನ್ನು ಅಭಿಮಂತ್ರಿಸಿ ಒಣಗಿಸಿ, ಅಘೋರ ಮಂತ್ರವನ್ನು ಪಠಿಸುತ್ತ ಅದನ್ನು ದಹಿಸಿ, ತತ್ಪುರುಷ ಮಂತ್ರವನ್ನು ಜಪಿಸುತ್ತ ಅದನ್ನು ಸಂಗ್ರಹಿಸಬೇಕು. ಹೀಗೆ ನಿರ್ಮಿತವಾದ ಭಸ್ಮವನ್ನು ಈಶಾನ ಮಂತ್ರವನ್ನು ಉಚ್ಚರಿಸುತ್ತ

---

೧೪. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೬-೨೮

೧೫. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೨೯-೩೦

ತನ್ನ ಶರೀರದ ತುಂಬೆಲ್ಲ ಧರಿಸಿಕೊಳ್ಳಬೇಕು ಎಂದು ತಿಳಿಸಿದೆ.

ವಚನದಲ್ಲಿಯೂ ಸಹ ವಿಭೂತಿ ತಯಾರಿಸುವ ಆಗಮದ ಕ್ರಮವನ್ನೇ ಪ್ರತಿಪಾದಿಸಲಾಗಿದೆ. "ನಂದಿ, ಭದ್ರೆ, ಸುರಭಿ, ಸುಶೀಲೆ, ಸುಮನವೆಂಬ ಕಪಿಲ, ಕರಿದು, ಕೆಂದು, ಬಿಳಿದು, ಚಿತ್ರವರ್ಣದ ಗೋವುಗಳ ಗುಣಧರ್ಮಂಗಳ ವಿಚಾರಿಸಿ ಆ ಗೋವುಗಳ ಶುದ್ಧಮುಖದಲ್ಲಿ ಬಂಧನವಂ ಮಾಡಿ, ಆಹಾರ ತೃಪ್ತಿಗಳರಿದು ಸಲಹುತ, ಆ ಪಂಚಗೋವುಗಳ ಗೋಮಯಮಂ ಊರ್ಧ್ವ ಕಬಳಮಂ ಬಿಟ್ಟು ಅರ್ಧಕಬಳಮಂ ತ್ಯಜಿಸಿ ಮದ್ಯದಲ್ಲಿ ಗೋಮಯವ ಸದ್ಯೋಜಾತಮಂತ್ರದಿಂ ಪಿಡಿದು ವಾಮದೇವ ಮಂತ್ರದಿಂ ಕಬಳಗಳ ಮಾಡಿ, ತತ್ಪುರುಷ ಮಂತ್ರದಿಂದ ಒಣಗಿಸಿ ಶುದ್ಧವಹ ಭೂಮಿಯಾಗಿಹ ವನಾಂತರದಲ್ಲಿ ವೃಕ್ಷದಡಿಯಲ್ಲಿ ಚಕ್ರಾಕಾರ ಕುಂಡವಂ ಮಾಡಿಸಿ, ಸಮಾರ್ಜನೆಯಿಂದ ಷಡು ಅನುಲೇಪನದಿಂ ಶುದ್ಧ ಭೂಮಿಯಲ್ಲಿ ಪಂಚವರ್ಣದ ರಂಗವೋಲೆಯಂ ತುಂಬಿ, ಪಂಚಫಲ ಪಂಚಭಕ್ಷ ಪರಮಾನಂದದಿಂದೆ ಅಷ್ಟವಿಧಾರ್ಚನೆ ಕ್ರಮವಿಡಿದು ಪಂಚ ಅಧಿದೇವತೆಯಪ್ಪ ಮಾಂತ್ರಿಕ ಮೂರ್ತಿಗಳಂ ಕೂಡಿಕೊಂಡು, ಒಣಗಿದ ಗೋಮಯ ಕಬಳಗಳಂ ಧೂಳ ಪಾದೋದಕದಿಂ ಅಗ್ರೋದಕದಿಂ ಚಿಂಪಿಸಿ, ಅರ್ಘ್ಯ ಪಾದ್ಯಾಚಮನಾದಿಗಳಿಂದರ್ಚಿಸಿ ಅಘೋರ ಮಂತ್ರದಿಂದ ದಹನವಂ ಮಾಡುವ ಸಮಯ ಅಖಂಡ ಗೋಳಕಾಕಾರದ ತೇಜೋಮೂರ್ತಿಯಂ ಧ್ಯಾನಿಸಿ ದಹನವಂ ಮಾಡಿ, ಆ ಪಂಚಭಸ್ಮವಂ ಈಶಾನ್ಯ ಮಂತ್ರದಿಂದ ಎಲೆ ಮೃಣ್ಮಯಾದಿ ಬಿಲ್ವ ಅಶೋಕ ಶಿಲೆಯ ಪಂಚಲೋಹಾಂತ್ಯಮಾದ ಪಾತ್ರಗಳೆಂಬ ಭರಣಿಗಳಲ್ಲಿ ತುಂಬಿದ ಭಸ್ಮಮಂಥನ ದೋಪಾದಿಯಲ್ಲಿ ಸಂಪಾದಿಸಿಕೊಳುತ ......"[೧೬] ಎಂದು ಸವಿಸ್ತಾರವಾಗಿ ಭಸ್ಮ ತಯಾರಿಕೆಯ ವಿಧಾನವನ್ನು ವಿವರಿಸಿದ್ದಾರೆ. ಇದನ್ನೇ ಚೆನ್ನಬಸವಣ್ಣನವರು –

ಅಯ್ಯಾ, ಶ್ರೀವಿಭೂತಿಯ ಸತ್ಕ್ರಿಯೆಯಿಂದ (ಮಾಡಿ)ಧರಿಸುವ ಭೇದವೆಂತೆಂದಡೆ:
ಆವವರ್ಣದ ಗೋವಾದಡೆಯೂ ಸರಿಯೆ, ಅವಯವಂಗಳು ನೂನು – ಕೂನಿಲ್ಲದೆ,
ಬರೆಗಳ ಹಾಕದೆ ಇರುವಂತಹ ಗೋವ ತಂದು,
ಅದಕ್ಕೆ ಧೂಳಪಾದೋದಕ ಸ್ನಾನವ ಮಾಡುವಂತಹದೆ
ಕ್ರಿಯಾಲಿಂಗ ಧಾರಣದೀಕ್ಷೆ; ಧೂಳಪಾದೋದಕಸೇವನೆಯೆ ಮಹಾತೀರ್ಥ.
ಭಕ್ತ ಆತನ ಭಾಂಡದಲ್ಲಿರುವ ಪದಾರ್ಥವ
ಹಸ್ತ ಮುಟ್ಟಿ ಹಾಕಿದ ಮೇಲೆ ಮಹಾಪ್ರಸಾದವಾಯಿತು.
ಇಂತಹ ಆಚಾರಯುಕ್ತವಾದ ಗೋವಿನ ಸಗಣಿಯ
ಸ್ವಚ್ಛವಾದ ಸ್ಥಳದಲ್ಲಿ ಚೂರ್ಣ ಮಾಡಿ ಒಣಗಿಸಿ
ಕ್ರಿಯಾಗ್ನಿಯಿಂದ ದಹಿಸಿದ ಬೂದಿಯ ಧೂಳಪಾದೋದಕದಲ್ಲಿ ಶೋಧಿಸಿ,
ಅದರೊಳಗೆ ತಿಳಿಯ ತೆಗೆದು ಘಟ್ಟಿಯ ಮಾಡಿ.[೧೭]

---

೧೬. ವಚನಗಳಲ್ಲಿ ವೀರಶೈವಧರ್ಮ, ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ೧೯೯೭, ಪುಟ ೨೩೪

೧೭. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೯೩೨, ಪುಟ ೨೯೫

ಎಂದು ಭಸ್ಮ ತಯಾರಿಕೆಯ ವಿಧಾನವನ್ನು ಸಂಕ್ಷಿಪ್ತವಾಗಿ ಮನೋಜ್ಞವಾಗಿ ವಿವರಿಸಿದ್ದಾರೆ. ಈ ಭಸ್ಮ ನಿರ್ಮಾಣ ವಿಧಿಯನ್ನು ಪ್ರತಿಪಾದಿಸುವ ಸಂದರ್ಭದಲ್ಲಿ ಗೋಮಯವನ್ನು ಸಂಗ್ರಹಿಸುವ ವಿಧಾನವನ್ನುಸರಿಸಿ ಭಸ್ಮದ ಅನೇಕ ಭೇದಗಳು ಶಿವಾಗಮಗಳಲ್ಲಿ ಪ್ರತಿಪಾದಿಸಿಲ್ಪಟ್ಟಿವೆ.

ಗೋಮಯ ಸಂಗ್ರಹಣೆಯ ವಿಧಾನ ಹಾಗೂ ಅವುಗಳ ಭೇದಗಳು:

ಗೋಮಯವನ್ನು ಹಿಡಿಯುವ ಪದ್ದತಿಯೇ ಗೋಮಯ ಸಂಗ್ರಹಣೆಯೆಂದು ಕರೆಯಲ್ಪಡುತ್ತದೆ. ಈ ಗೋಮಯವನ್ನು ಸಂಗ್ರಹಿಸುವಲ್ಲಿ ಭೇದವುಂಟಾದರೆ ಭಸ್ಮಗಳಲ್ಲಿಯೂ ಭೇದವುಂಟಾಗುತ್ತದೆ. ಈ ವಿಧಾನವನ್ನುಸರಿಸಿಯೇ ಚಂದ್ರ ಜ್ಞಾನಾಗಮದಲ್ಲಿ ಶಾಂತಿಕ, ಪೌಷ್ಠಿಕ ಹಾಗೂ ಕಾಮದ ಎಂಬ ಮೂರುವಿಧ ಭಸ್ಮಗಳು ಪ್ರತಿಪಾದಿಸಲ್ಪಟ್ಟಿವೆ.

೧. ಶಾಂತಿಕಭಸ್ಮ :

ಗೋಮಯಂ ಯೋನಿಸಂಬಂಧ್ಧಂ ಯದ್ಧಸ್ತೇನೈವ ಗೃಹ್ಯತೇ।
ಬ್ರಹ್ಮಮಂತ್ರೈಶ್ಚ ಸಂದಗ್ಧಂ ತಚ್ಛಾಂತಿಕಮಿಹೋಚ್ಯತೇ॥[೧೮]

ಎಂಬ ಚಂದ್ರಜ್ಞಾನಾಗಮದ ಉಕ್ತಿಯಂತೆ ಗೋಮಯವು ಗೋಯೋನಿಯಿಂದ ಹೊರಗೆ ಬರುತ್ತಿದ್ದಂತೆಯೇ ಅದನ್ನು ಕೈಯಲ್ಲಿ ಹಿಡಿದು ಮೇಲೆ ತಿಳಿಸಿದ ವಿಧಿಯಿಂದ ತಯಾರಿಸಿದ ಭಸ್ಮವೇ ಶಾಂತಿಕ ಭಸ್ಮವೆನ್ನುವರು. ಈ ವಿಧಿಯಿಂದ ಸಂಗ್ರಹಿಸಿ ತಯಾರಿಸಿದ ಭಸ್ಮವನ್ನು ಧರಿಸುವದರಿಂದ ಮನದ ಶಾಂತಿಯುಂಟಾಗುವುದರಿಂದ ಇದಕ್ಕೆ ಶಾಂತಿಕ ಭಸ್ಮವೆಂದು ಕರೆಯಲಾಗಿದೆ.

೨. ಪೌಷ್ಟಿಕ ಭಸ್ಮ :

ಸಾವಧಾನೇನ ಗೋಯೋನಿನಿಸ್ಸೃತಂ ಗೋಮಯಂ ತು ಯತ್।
ಅಂತರಿಕ್ಷೇ ಗೃಹೀತ್ವಾ ತಂ ಷಡಂಗೇನ ದಹೇತ್ತತಃ॥
ಪೌಷ್ಟಿಕಂ ತು ಸಮಾಖ್ಯಾತಂ॥[೧೯]

ಈ ಆಗಮೋಕ್ತಿಯಂತೆ ಗೋಮಯವು ಗೋಯೋನಿಯ ಕೆಳಗೆ ಬಂದು ಭೂಮಿಯನ್ನು ತಲುಪುವ ಮೊದಲೇ ಅದನ್ನು ಹಿಡಿದು ಕ್ರಿಯಾವಿಧಾನದಿಂದ ನಿರ್ಮಿಸಿದ ಭಸ್ಮವನ್ನು ಪೌಷ್ಟಿಕ ಭಸ್ಮವೆನ್ನುವರು. ಇದನ್ನು ಧರಿಸುವವನ ಮೈಮನಗಳು ಪುಷ್ಟಿಗೊಳ್ಳುವುದರಿಂದ ಇದು ಪೌಷ್ಟಿಕ ಭಸ್ಮವೆನಿಸಿಕೊಳ್ಳುವುದು.

---

೧೮. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೩೧
೧೯. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೩೨

೩. ಕಾಮದ ಭಸ್ಮ

ಸುಶುದ್ಧೇ ಭೂತಲೇ ದೈವಾತ್ ಪತಿತಂ ಗೋಮಯ್ಯಂ ತು ಯತ್।
ಪ್ರಸಾದೇನ ದಹೇದೇವಮೇತತ್ ಕಾಮದಮುಚ್ಯತೇ॥[೨೦]

ಎಂಬ ಶಿವಾಗಮೋಕ್ತಿಯಂತೆ ಪರಿಶುದ್ಧಗೊಳಿಸಿದ ಭೂಮಿಯಲ್ಲಿ ಬಿದ್ದ ಗೋಮಯದಿಂದ ನಿರ್ಮಿಸಿದ ಭಸ್ಮಕ್ಕೆ ಕಾಮದ ಭಸ್ಮವೆನ್ನುವರು. ಇದನ್ನು ಧರಿಸುವವನ ಕಾಮನೆಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯವು ಈ ಭಸ್ಮಕ್ಕಿರುವದರಿಂದ ಇದಕ್ಕೆ ಕಾಮದಭಸ್ಮವೆನ್ನುವರು.

ಹೀಗೆ ಗೋಮಯವನ್ನು ಸಂಗ್ರಹಿಸುವ ವಿಧಾನವನ್ನುಸರಿಸಿ ಶಿವಾಗಮಗಳಲ್ಲಿ ನಿರೂಪಿಸಲ್ಪಟ್ಟ ಈ ಭಸ್ಮದ ಭೇದಗಳು ವಚನಗಳಲ್ಲಿ ಪ್ರತಿಪಾದಿಸಲ್ಪಟ್ಟಿಲ್ಲ. ಆದರೆ ಚೆನ್ನಬಸವಣ್ಣನವರು ಭಸ್ಮವನ್ನು ಪಾದೋದಕದಿಂದ ಶುದ್ಧೀಕರಿಸುವ ವಿಧಾನವನ್ನು ಆಧರಿಸಿ ದೀಕ್ಷಾಭಸಿತ, ಶಿಕ್ಷಾಭಸಿತ, ಕ್ರಿಯಾಭಸಿತ (ಜ್ಞಾನಭಸಿತ)ವೆಂದು ಮೂರು ಬಗೆಯಾಗಿ ವಿಂಗಡಿಸಿದ್ದಾರೆ. ಕ್ರಿಯಾಗ್ನಿಯಿಂದ ದಹಿಸಿದ ಭಸ್ಮದಲ್ಲಿ ಗುರುಪಾದೋದಕವನ್ನು ಸೇರಿಸಿ ನಿರ್ಮಿಸಿದ ಭಸಿತವು ದೀಕ್ಷಾಭಸಿತ, ಗುರುಪಾದೋದಕ ಲಿಂಗಪಾದೋದಕಗಳೆರಡನ್ನೂ ಸೇರಿಸಿ ಷಡಕ್ಷರ ಮಂತ್ರದಿಂದ ಸಂಸ್ಕಾರಗೊಳಿಸಿದುದು ಶಿಕ್ಷಾಭಸಿತ, ಗುರುಲಿಂಗ ಪಾದೋದಕ ಹಾಗೂ ಷಡಕ್ಷರ ಮಂತ್ರದ ಜೊತೆಗೆ ೨೧ ಪ್ರಣವಗಳನ್ನು ಸ್ಥಾಪಿಸಿ ಸಿದ್ಧಗೊಳಿಸಿದುದು ಕ್ರಿಯಾಭಸಿತ(ಜ್ಞಾನಭಸಿತ) ಎಂದು ವಿಭಾಗಿಸಲಾಗಿದೆ. ದೀಕ್ಷಾಭಸಿತದಿಂದ ವಿಧಿಲಿಖಿತ ತೊಡೆದು ಶಿವಲಿಖಿತ ಉಂಟಾಗುತ್ತದೆ. ಶಿಕ್ಷಾಭಸಿತದಿಂದ ಲಿಂಗನಿಷ್ಠಾಪರವಾದ ಭಕ್ತಿಯು ತಲೆದೋರುತ್ತದೆ. ಕ್ರಿಯಾಭಸಿತದಿಂದ ಸರ್ವಾಚಾರಸಂಪತ್ತು ಮತ್ತು ಜಂಗಮಾನುಭವ ದೊರೆಯುತ್ತದೆಂದು ವಿವರಿಸಲಾಗಿದೆ.[೨೧]

ಹೀಗೆ ಶಾಸ್ತ್ರೋಕ್ತ ವಿಧಾನದಿಂದ ನಿರ್ಮಿತವಾದ ಭಸ್ಮವನ್ನು ಧರಿಸುವ ವಿಧಾನ ಮತ್ತು ದೇಹದ ಯಾವ ಯಾವ ಸ್ಥಾನಗಳಲ್ಲಿ ಇದನ್ನು ಧರಿಸಬೇಕೆಂಬುದರ ಬಗ್ಗೆ ಆಗಮ ಮತ್ತು ವಚನಗಳಲ್ಲಿ ಸಾಮ್ಯತೆಯನ್ನು ಕಾಣಬಹುದು.

ಭಸ್ಮಧಾರಣಾ ವಿಧಿ

ಶಾಸ್ತ್ರೋಕ್ತವಾಗಿ ನಿರ್ಮಿಸಲ್ಪಟ್ಟ ಭಸ್ಮವನ್ನು ಗುರು ಪಾದೋದಕ ಮೊದಲಾದವುಗಳಿಂದ ಶುದ್ಧಿಕರಿಸಿ ಅದನ್ನು ಶಾಸ್ತ್ರೋಕ್ತವಿಧಾನದಿಂದ ಧರಿಸುವ ಪದ್ಧತಿಯೇ ಭಸ್ಮ ಧಾರಣ ವಿಧಿಯು. ಇದು ಭಸ್ಮೋದ್ಧೂಲನ, ಭಸ್ಮಾವಗುಂಠನ ಅಥವಾ ಭಸ್ಮಸ್ನಾನ ಹಾಗೂ ತ್ರಿಪುಂಡ್ರಧಾರಣೆ ಎಂದು ಮೂರು ವಿಧವಾಗಿದೆ.

---

೨೦. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೩೩

೨೧. ವಚನಗಳಲ್ಲಿ ವೀರಶೈವ ಧರ್ಮ, ಡಾ॥ ಎಚ್. ತಿಪ್ಪೇರುದ್ರಸ್ವಾಮಿ ಪುಟ ೨೩೫

೧. ಭಸ್ಮೋದ್ಧೂಲನ :

ಮಂಗಲಮಯವಾದ ಭಸ್ಮದ ಒಣಪುಡಿಯನ್ನು ತೆಗೆದುಕೊಂಡು ಅದನ್ನು ಶರೀರದ ತುಂಬ ಧರಿಸಿಕೊಳ್ಳುವುದನ್ನು ಉದ್ಧೂಲನ ಎಂದು ಕರೆಯುವರು. ಆಗಮಗಳು ಈ ಭಸ್ಮೋದ್ಧೂಲನ ಕ್ರಮವನ್ನು ಕುರಿತು ಹೀಗೆ ವಿವರಿಸಿವೆ –

ಪಂಚಭಿರ್ಬ್ರಹ್ಮಭಿರ್ವಾಽಪಿ ಮೂಲಮಂತ್ರೇಣ ವಾ ಪುನಃ।
ಸಂಮಂತ್ರ್ಯ ನಿರ್ಜಲಂ ಭಸ್ಮ ತೇನ ಲಿಂಪೇತ್ ಸುಸಂಯತಃ।
ಸರ್ವಾಂಗಮಾಪಾದಶಿಖಮೂದ್ಧೂಲನಮಿದಂ ಸ್ಮೃತಮ್॥ [೨೨]

ಎಂಬಂತೆ ಪಂಚಬ್ರಹ್ಮಮಂತ್ರದಿಂದ ಅಥವಾ ಮೂಲ ಪಂಚಾಕ್ಷರ ಮಂತ್ರದಿಂದ ಅಭಿಮಂತ್ರಿಸುತ್ತ ಸರ್ವಾಂಗದಲ್ಲೆಲ್ಲ ಭಸ್ಮವನ್ನು ಪ್ರೋಕ್ಷಿಕೊಳ್ಳುವುದೇ ಭಸ್ಮೋದ್ಧೂಲನವೆಂದು ಕರೆಯಲ್ಪಡುತ್ತದೆ. ಈಶಾನ ಮಂತ್ರದಿಂದ ಉಚ್ಚರಿಸುತ್ತ ಶಿರಸಿನಲ್ಲಿ ಐದು ಸಾರಿ, ತತ್ಪುರುಷ ಮಂತ್ರದಿಂದ ಮುಖದಲ್ಲಿ ನಾಲ್ಕು ಬಾರಿ, ಅಘೋರ ಮಂತ್ರ ಪಠಿಸುತ್ತ ಹೃದಯದಲ್ಲಿ ಎಂಟು ಬಾರಿ, ವಾಮದೇವ ಮಂತ್ರವನ್ನು ಪಠಿಸುತ್ತ ಗುಹ್ಯದಲ್ಲಿ ಹದಿಮೂರು ಸಾರಿ, ಸದ್ಯೋಜಾತ ಮಂತ್ರವನ್ನು ಪಠಿಸುತ್ತ ಪಾದಗಳಲ್ಲಿ ಎಂಟುಬಾರಿ ಭಸ್ಮೋದ್ಧೂಲನ ಮಾಡಿಕೊಂಡು ನಂತರ ಶರೀರ ತುಂಬೆಲ್ಲಾ ಪುನಃ ಮೂಲ ಮಂತ್ರದಿಂದ ಭಸ್ಮವನ್ನು ಪ್ರೋಕ್ಷಿಸಿಕೊಳ್ಳಬೇಕು.[೨೩] ಎಂದು ಭಸ್ಮೋದ್ಧೂಲನ ವಿಧಾನವನ್ನು ವಿವರಿಸಲಾಗಿದೆ.

ಈ ವಿಧಾನವನ್ನೆ " ಸದ್ಭಕ್ತ ಶರಣ ಗಣಂಗಳು ಅಪಾದ ಮಸ್ತಕ ಪರ್ಯಂತರ ಸ್ನಾನ ಧೂಳನವ ಮಾಡಿ"[೨೪] ಎಂಬುದಾಗಿ ಚೆನ್ನಬಸವಣ್ಣನವರು ಭಸ್ಮೋದ್ಧೂಲನ ವಿಧಾನವನ್ನು ಹೇಳಿದ್ದಾರೆ.

೨. ಭಸ್ಮಸ್ನಾನ/ಭಸ್ಮಾವಗುಂಠನ :

ಅವಗುಂಠನ ಎಂದರೆ ಪರದೆ, ಮುಸುಕು ಎಂದರ್ಥ. ಸಜಲ ಭಸ್ಮದಿಂದ ನಮ್ಮ ಇಡೀ ಶರೀರಕ್ಕೆ ಪರದೆಯಂತೆ ಧರಿಸಿಕೊಳ್ಳುವುದೇ ಭಸ್ಮಾವಗುಂಠನ. ಅರ್ಥಾತ್ ಭಸ್ಮಕ್ಕೆ ಜಲವನ್ನು ಮಿಶ್ರಣ ಮಾಡಿ ಕಲಸಿ ಅದನ್ನು ಇಡೀ ಶರೀರಕ್ಕೆ ಧರಿಸಿಕೊಳ್ಳುವುದಕ್ಕೆ ಅವಗುಂಠನ ಎನ್ನುವರು.[೨೫]

ಭಸ್ಮಮುಷ್ಟಿಂ ಸಮಾದಾಯ ಸಂಹಿತಾಮಂತ್ರಮಂತ್ರಿತಮ್।
ಮಸ್ತಕಾತ್ ಪಾದಪರ್ಯಂತಂ ಭಸ್ಮಸ್ನಾನಂ ಸಮಾಚರೇತ್॥ [೨೬]

ಎಂಬ ಆಗಮೋಕ್ತಿಯಂತೆ ಮುಷ್ಟಿಯಲ್ಲಿ ಭಸ್ಮವನ್ನು ತೆಗೆದುಕೊಂಡು ಸಂಹಿತಾ ಮಂತ್ರದಿಂದ

---

೨೨. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೪೧
೨೩. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೩೮–೩೯
೨೪. ಚಂದ್ರಜ್ಞಾನಾಗಮ ವಿಚಾರ ರಶ್ಮಿ ಸಂ. – ಡಾ॥ ಎಂ. ಶಿವಕುಮಾರಸ್ವಾಮಿ ಪುಟ ೭೨
೨೫. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೪೨
೨೬. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೩೭

ಅದನ್ನು ಶುದ್ಧಿಕರಿಸಿ ಅದರಲ್ಲಿ ಸ್ವಲ್ಪ ನೀರನ್ನು ಕೂಡಿಸಿ ಅದನ್ನು ಶರೀರದೆಲ್ಲೆಡೆಯಲ್ಲಿ ಧರಿಸಿಕೊಳ್ಳುವುದೇ ಭಸ್ಮಸ್ನಾನ. ಭಸ್ಮಸ್ನಾನವನ್ನು ಮಾಡುವವನು 'ಮೊದಲು ಕೈಕಾಲುಗಳನ್ನು ನಿರ್ಮಲ ನೀರಿನಿಂದ ತೊಳೆದು, ಎಡಗೈಯಲ್ಲಿ ಭಸ್ಮವನ್ನಿರಿಸಿ, ಬಲತೊಡೆಯಮೇಲಿಟ್ಟು ಅದರ ಮೇಲೆ ಬಲಗೈಯನ್ನು ಮುಚ್ಚಿ ಮೂಲಮಂತ್ರದಿಂದ ಎಂಟು ಸಲ ಆ ಭಸ್ಮವನ್ನು ಅಭಿಮಂತ್ರಿಸಿ ಬಳಿಕ ಈಶಾನ ಮಂತ್ರಯುಕ್ತವಾಗಿ ಶಿರಸ್ಸನ್ನು, ತತ್ಪುರುಷ ಮಂತ್ರದಿಂದ ಮುಖವನ್ನು, ಅಘೋರ ಮಂತ್ರದಿಂದ ಹೃದಯವನ್ನೂ, ವಾಮದೇವ ಮಂತ್ರದಿಂದ ಗುಹ್ಯಸ್ಥಾನವನ್ನೂ, ಸದ್ಯೋಜಾತಮಂತ್ರದಿಂದ ಕಾಲುಗಳನ್ನೂ, ಓಂಕಾರದಿಂದ ಸರ್ವಾಂಗವನ್ನೂ, ಭಸ್ಮದಿಂದ ಪ್ರೋಕ್ಷಿಸಲು ಆಗ್ನೆಯ ಸ್ನಾನವೆನ್ನಿಸುತ್ತದೆ. ಈ ಅಭಿಪ್ರಾಯವನ್ನೇ ವಚನಕಾರರು ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ –

> ಬೊಟ್ಟಿನಷ್ಟು ವಿಭೂತಿಯನಿಟ್ಟಡೆ ಬೆಟ್ಟದಷ್ಟು ಪಾಪ ಹರಿವುದು
> ನೆಚ್ಚನೆಯರಿದು ಸರ್ವಾಂಗದಲ್ಲಿ ಭಸ್ಮವ ಧರಿಸಿದ ಶರಣಂಗೆ
> ಮುಂದೆ ಹುಟ್ಟಲು ಹೊಂದಲು ಇಲ್ಲ ನೋಡಾ
> ಅಷ್ಟಾಷಷ್ಠಿತೀರ್ಥವಂ ಮಿಂದ ಫಲ ಒಂದು ದಿನದ ಭಸ್ಮಸ್ನಾನಕ್ಕೆ ಸರಿಬಾರದು
> ಇದು ಕಾರಣ, ಮುನ್ನ ಆದಿಯ ಋಷಿಜನಂಗಳು
> ಭಸ್ಮ ಸ್ನಾನದಿಂದ ಕೃತಕೃತ್ಯರಾದರು.

ಎಂದು ಭಸ್ಮಸ್ನಾನದ ಮಹತ್ವವನ್ನು ಅರುಹಿದ್ದಾರೆ. ಧರ್ಮಶಾಸ್ತ್ರಗಳಲ್ಲಿ ಹೇಳಲಾದ ಮಂತ್ರ, ಭೌಮ, ಆಗ್ನೇಯ, ವಾಯುವ್ಯ, ದಿವ್ಯ, ವಾರುಣ ಮತ್ತು ಮಾನಸವೆಂಬ ಸಪ್ತಸ್ನಾನಗಳಲ್ಲಿ ಭಸ್ಮಸ್ನಾನವು ಅತಿ ಮುಖ್ಯವಾದುದು ಎಂದು ಹೇಳಲ್ಪಟ್ಟಿದೆ. ಇವುಗಳಲ್ಲಿ

೧. ಮಂತ್ರಗಳನ್ನುಚ್ಚರಿಸುತ್ತ ಮಸ್ತಕದಲ್ಲಿ ಜಲವನ್ನು ಪ್ರೋಕ್ಷಿಸಿಕೊಳ್ಳುವುದು ಮಂತ್ರಸ್ನಾನ.
೨. ಗಂಗಾ ಮುಂತಾದ ಪವಿತ್ರ ನದಿಗಳಲ್ಲಿಯ ಮಣ್ಣಿನಿಂದ ತಿಲಕವನ್ನು ಧರಿಸಿಕೊಳ್ಳುವದು ಭೌಮಸ್ನಾನ.
೩. ಭಸ್ಮಸ್ನಾನವೇ ಆಗ್ನೇಯ ಸ್ನಾನ.
೪. ಗೋವಿನ ಧೂಳು ಮಿಶ್ರಿತವಾಗಿರುವ ವಾಯುವನ್ನು ಶರೀರಕ್ಕೆ ಸ್ಪರ್ಷ ಮಾಡಿಕೊಳ್ಳುವುದು ವಾಯವ್ಯಸ್ನಾನ.
೫. ಬಿಸಿಲಿನಿಂದ ಕೂಡಿದ ಮಳೆಯ ನೀರಿನಿಂದ ಸ್ನಾನ ಮಾಡುವುದು ದಿವ್ಯಸ್ನಾನ.
೬. ನದಿ ಅಥವಾ ಸರೋವರಗಳಲ್ಲಿ ಸ್ನಾನ ಮಾಡುವದು ವಾರುಣಸ್ನಾನ.
೭. ಭಗವಂತನ ಸ್ಮರಣೆಯನ್ನು ಮಾಡುವುದು ಮಾನಸಸ್ನಾನ.

ಈ ಸಪ್ತಸ್ನಾನಗಳಲ್ಲಿ ಮಾನಸ ಸ್ನಾನವು ಕೇವಲ ಆಂತರಿಕ ದೋಷವನ್ನು ದೂರಗೊಳಿಸುವದು ಮತ್ತು ಮಂತ್ರ, ಭೌಮ, ದಿವ್ಯ, ವಾರುಣಸ್ನಾನಗಳು ಕೇವಲ ಬಾಹ್ಯ ದೋಷಗಳನ್ನು ದೂರಗೊಳಿಸುವವು ಆದರೆ ಭಸ್ಮಸ್ನಾನವು ಆಂತರಿಕ ಹಾಗೂ ಬಾಹ್ಯದೋಷಗಳೆರಡನ್ನೂ ಉಪಶಮನಗೊಳಿಸುವುದರಿಂದ ಎಲ್ಲ ಸ್ನಾನಗಳಲ್ಲಿ ಭಸ್ಮಸ್ನಾನವೇ ಶ್ರೇಷ್ಠವಾದುದು ಎಂದು ತಿಳಿಸಲಾಗಿದೆ.

೩. ತ್ರಿಪುಂಡ್ರಧಾರಣೆ ಮತ್ತು ಅದರ ಸ್ಥಾನಗಳು :

ಭಸ್ಮೋದ್ಧೂಲನಕ್ಕಿಂತ ಮತ್ತು ಭಸ್ಮಸ್ನಾನಕ್ಕಿಂತ ತ್ರಿಪುಂಡ್ರಧಾರಣೆಯೇ ಅತ್ಯಂತ ಶ್ರೇಷ್ಠವೆಂದು ಆಗಮಗಳು ಅರುಹುತ್ತವೆ. ಏಕೆಂದರೆ –

ತ್ರಿಪುಂಡ್ರಂ ಕಾರಯೇದ್ಧೀಮಾನ್ ಬ್ರಹ್ಮವಿಷ್ಣುಶಿವಾತ್ಮಕಮ್।
ಮಧ್ಯಾಂಗುಲೀಬಿರಾದಾಯ ತಿಸೃಭಿರ್ಮೂಲಮಂತ್ರಿತಮ್॥[೨೭]

ಎಂಬಂತೆ ತ್ರಿಪುಂಡ್ರವು ಬ್ರಹ್ಮ, ವಿಷ್ಣು ಹಾಗೂ ಶಿವನ ಸ್ವರೂಪವಾಗಿದ್ದು, ಈ ತ್ರಿಪುಂಡ್ರವನ್ನು ಮಧ್ಯದ ಮೂರು (ಅನಾಮಿಕ ಮಧ್ಯಮ ಮತ್ತು ತರ್ಜನಿ) ಬೆರಳುಗಳಿಂದ ಮೂಲ ಮಂತ್ರವನ್ನುಚ್ಚರಿಸುತ್ತ ಲಲಾಟ ಮುಂತಾದ ಅಂಗಾಂಗಗಳಲ್ಲಿ ಧರಿಸಬೇಕೆಂದು ತಿಳಿಸಲಾಗಿದೆ. ಕಾರಣಾಗಮದಲ್ಲಿ ತ್ರಿಪುಂಡ್ರ ಧರಿಸುವ ಕ್ರಮವನ್ನು ಹೀಗೆ ವಿವರಿಸಲಾಗಿದೆ.

ವಾಮಪಾಣಿತಲನ್ಯಸ್ತೇ ಷಟ್ಕೋಣಂ ಭಸ್ಮನಿ ನ್ಯಸೇತ್।
ಪ್ರಣವಂ ತನ್ಮುಖೇ ಚೈವ ವಾಯಕಾರೌ ಭುಜದ್ವಯೇ॥
ಶಿಕಾರಂ ಯಂತ್ರಮಧ್ಯೇ ಚ ನಮಃಕಾರೌ ಪದದ್ವಯೇ।
ವಿಲಿಖ್ಯ ಮೂಲಮಂತ್ರೇಣ ಷಡ್ವಾರಮಭಿಮಂತ್ರಯೇತ್॥[೨೮]

ಎಡಗೈಯಲ್ಲಿ ಭಸ್ಮವನ್ನು ಹಿಡಿದು ಅದರ ಮೇಲೆ ಷಟ್ಕೋಣಾಕೃತಿಯನ್ನು ಬರೆಯಬೇಕು. ಓಂಕಾರವನ್ನು ಅದರ ಮುಖದಲ್ಲಿ, ವಾ ಮತ್ತು ಯ ಕಾರಗಳನ್ನು ಅದರ ಎರಡು ಭುಜಗಳಲ್ಲಿ, ಶಿಕಾರವನ್ನು ಯಂತ್ರದ ಮಧ್ಯದಲ್ಲಿಯೂ, ನ ಮತ್ತು ಮಃ ಕಾರಗಳನ್ನು ಷಟ್ಕೋಣದ ಎರಡೂ ಪಾದಗಳಲ್ಲಿ ಕ್ರಮವಾಗಿ ಬರೆದು, ಅದನ್ನು ಪಂಚಾಕ್ಷರಿ ಮಂತ್ರದಿಂದ ಆರು ಸಲ ಮಂತ್ರಿಸಬೇಕು. ಹೀಗೆ ಮಂತ್ರದಿಂದ ಪವಿತ್ರವಾದ ಭಸ್ಮವನ್ನು ವಾಮಹಸ್ತದಲ್ಲಿ ಭಸ್ಮವನ್ನು ತೆಗೆದುಕೊಂಡು "ಅಗ್ನಿರಿತಿ ಭಸ್ಮ ವಾಯುರಿತಿ ಭಸ್ಮ" ಎಂಬ ಮಂತ್ರದಿಂದ ಅಭಿಮಂತ್ರಿಸಿ ಮಾನಸ್ತೋಕೆ ತನಯೇ ಮಾ ನ" ಎಂಬ ಮಂತ್ರದಿಂದ ಅದರಲ್ಲಿ ಜಲವನ್ನು ಮಿಶ್ರಣ ಮಾಡಿ ನಂತರ ಮೂಲಮಂತ್ರದಿಂದ ಎಂಟು ಬಾರಿ ಅಭಿಮಂತ್ರಿಸಿ 'ಶಿವಾಯ ನಮಃ' ಎನ್ನುತ್ತಾ ತ್ರಿಪುಂಡ್ರವನ್ನು ಧರಿಸಿಕೊಳ್ಳಬೇಕು ಎಂದು ತಿಳಿಸಿದೆ. ಇದನ್ನೇ ವಚನದಲ್ಲಿಯೂ ಅಂಗೀಕರಿಸಿದ್ದು ಕಂಡುಬರುತ್ತದೆ –

"........ವಿಭೂತಿಯಂ ಸುಕೃತದಿಂ ತೆಗೆದುಕೊಂಡು
ಎಡದ ಹಸ್ತದೊಳ್ಪಿಡಿದುಕೊಂಡು, ಬಲದ ಹಸ್ತದಿಂ ಮುಚ್ಚಿ
ಜಲಮಿಶ್ರವಂ ಮಾಡಿ, ಲಲಾಟ ಮೊದಲಾಗಿ ದಿವ್ಯಸ್ಥಾನಂಗಳೊಳು ಧರಿಸಿ
ಲಿಂಗಾರ್ಚನೆಯಂ ಮಾಡುವ ಶರಣ, ಆತನೇ ವೇದವಿತ್ತು,
ಆತನೆ ಶಾಸ್ತ್ರಜ್ಞ, ಆತನೇ ಸದ್ಯೋನ್ಮುಕ್ತನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.'[೨೯]

---

೨೭. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೪೩
೨೮. ಕಾರಣಾಗಮ ಕ್ರಿಯಾಪಾದ, ೩ ನೇಪಟಲ, ಶ್ಲೋ.ಸಂ. ೪೫–೪೬
೨೯. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ.೧, ವಚನ ಸಂಖ್ಯೆ ೧೪೨೮ ಪುಟ ೪೯೩

ಎಂದು ಭಸ್ಮ ಧರಿಸುವ ವಿಧಿಯನ್ನು ವಿವರಿಸಿದ್ದಾರೆ. ಆಗಮಗಳಲ್ಲಿ ಭಸ್ಮಧರಿಸುವ ಸ್ಥಾನಗಳನ್ನು ಹೇಳುವ ಸಂದರ್ಭದಲ್ಲಿ ವಿಕಲ್ಪವಾಗಿ ಮೂವತ್ತೆರೆಡು, ಹದಿನಾರು, ಎಂಟು ಹಾಗೂ ಐದು ಸ್ಥಾನಗಳು ಹೇಳಲ್ಪಟ್ಟಿವೆ. [೩೦]

ಉತ್ತಮಾಂಗೇ ಲಲಾಟೇ ಚ ಕರ್ಣಯೋರ್ನೇತ್ರಯೋರ್ದ್ವಯೋಃ।
ನಾಸಾವಕ್ತ್ರಗಲೇಷ್ವೇವಮಂಸದ್ವಯಮ್ ಅನಂತರಮ್॥
ಕೂರ್ಪರೇ ಮಣಿಬಂಧೇ ಚ ಹೃದಯೇ ಪಾರ್ಶ್ವಯೋರ್ದ್ವಯೋಃ।
ನಾಭೌ ಗುಹ್ಯದ್ವಯೇ ಚೈವ ಊರ್ವೋಃ ಸ್ಫಿಗ್ಬಿಂಬಜಾನುಷು॥
ಜಂಘಾದ್ವಯೇ ಪಾದಯೋಶ್ಚ ದ್ವಾತ್ರಿಂಶತ್‌ಸ್ಥಾನಮುತ್ತಮಮ್।[೩೧]

ಉತ್ತಮಾಂಗ, ಲಲಾಟ, ಎರಡು ಕಿವಿಗಳು, ಎರಡು ಕಣ್ಣುಗಳು, ಮೂಗಿನ ಹೊಳ್ಳೆಗಳು, ಬಾಯಿ, ಕತ್ತು, ಎರಡೂ ಭುಜಗಳು, ಎರಡೂ ಮೊಣಕೈಗಳಲ್ಲಿ, ಎರಡೂ ಮುಂಗೈಗಳಲ್ಲಿ, ಹೃದಯ, ಎರಡು ಪಕ್ಕೆಗಳು, ನಾಭಿ, ಗುದ, ಗುಹ್ಯ, ಎರಡೂ ತೊಡೆಗಳು, ಎರಡು ಪಿರ್‍ರೆಗಳಲ್ಲಿ, ಎರಡೂ ಮೊಳಕಾಲುಗಳು, ಎರಡೂ ಮೀನಕಂಡಗಳು ಹಾಗೂ ಎರಡೂ ಪಾದಗಳು– ಇವು ಮೂವತ್ತೆರಡು ಸ್ಥಾನಗಳು. ಶಿರಸ್ಸು, ಹಣೆ, ಎರಡು ಕಿವಿಗಳು, ಎರಡು ಭುಜಗಳು, ಎರಡು ಮೊಣಕೈಗಳು, ಎರಡು ಮುಂಗೈಗಳು, ಹೃದಯ, ನಾಭಿ, ಎರಡು ಪಕ್ಕೆಗಳು, ನಿತಂಬ ಹಾಗೂ ಬೆನ್ನು –ಇವು ಹದಿನಾರು ಸ್ಥಾನಗಳು. ಶಿರಸ್ಸು, ಹಣೆ, ಎರಡು ಕಿವಿಗಳು, ಎರಡು ಭುಜಗಳು, ಹೃದಯ ಹಾಗೂ ನಾಭಿ ಇವು ಎಂಟು ಸ್ಥಾನಗಳು ಇದರಂತೆ ಹಣೆ, ಭುಜಗಳೆರಡು ಹೃದಯ ಮತ್ತು ನಾಭಿ ಇವು ಐದು ಸ್ಥಾನಗಳು ಎಂದು ಭಸ್ಮ ಧಾರಣೆಯ ಸ್ಥಾನಗಳು ಹೇಳಲ್ಪಟ್ಟಿವೆ.

ಈ ಭಸ್ಮಧಾರಣ ಸ್ಥಾನಗಳನ್ನು ಚೆನ್ನಬಸವಣ್ಣನವರು ಎಂಟು, ಹದಿನಾರು, ಮೂವತ್ತೆರಡು, ಮೂವತ್ತಾರು, ನಲವತ್ನಾಲ್ಕು ಮತ್ತು ನಲವತ್ತೆಂಟು ಎಂದು ವಿಕಲ್ಪವಾಗಿ ಹೇಳಿರುವರು.

ಅಯ್ಯಾ, ಶ್ರೀವಿಭೂತಿಯ ಧರಿಸುವ ಭೇದವೆಂತೆಂದಡೆ:
ಸಹಜಲಿಂಗಧಾರಕರು ಎಂಟುಸ್ಥಾನದಲ್ಲಿ ಧರಿಸುವುದಯ್ಯಾ.
ಕ್ರಿಯಾದೀಕ್ಷಾನ್ವಿತರಾದ ಉಪಾಧಿಭಕ್ತರು ಹದಿನಾರು ಸ್ಥಾನದಲ್ಲಿ ಧರಿಸುವುದಯ್ಯಾ.
ಮಂತ್ರದೀಕ್ಷೆಯುಕ್ತರಾದ ನಿರುಪಾಧಿಭಕ್ತರು
ಮೂವತ್ತೆರಡು ಸ್ಥಾನದಲ್ಲಿ ಧರಿಸುವುದಯ್ಯಾ.
ಕ್ರಿಯಾದೀಕ್ಷೆ ಮಂತ್ರದೀಕ್ಷೆ ವೇಧಾದೀಕ್ಷೆಯುಕ್ತರಾದ ಸಹಜಭಕ್ತರು
ಮೂವತ್ತಾರು ಸ್ಥಾನದಲ್ಲಿ ಧರಿಸುವುದಯ್ಯಾ.
ಕ್ರಿಯಾದೀಕ್ಷೆ ಮಂತ್ರದೀಕ್ಷೆ ವೇಧಾದೀಕ್ಷೆ ಸಚ್ಚಿದಾನಂದದೀಕ್ಷಾಯುಕ್ತರಾದ
ನಿರ್ವಂಚನಭಕ್ತರು ನಾಲ್ವತ್ತುನಾಲ್ಕು ಸ್ಥಾನದಲ್ಲಿ ಧರಿಸುವುದಯ್ಯಾ.
ಕ್ರಿಯಾ–ಮಂತ್ರ–ವೇದಾ–ಸಚ್ಚಿದಾನಂದ–ನಿರ್ವಾಣಪದದೀಕ್ಷಾ ಸಮನ್ವಿತರಾದ

೩೦. ಚಂ.ಆ.ಕ್ರಿಪಾ. ಪಟಲ ೬, ಶ್ಲೋಕ ಸಂಖ್ಯೆ ೪೩–೪೪
೩೧. ಚಂ.ಆ.ಕ್ರಿಪಾ. ಪಟಲ ೬, ಶ್ಲೋಕ ಸಂಖ್ಯೆ ೪೫–೪೬

ಸದ್ಭಕ್ತಶರಣಗಣಂಗಳು, ಅಪಾದಮಸ್ತಕ ಪರಿಯಂತರ
ಸ್ನಾನ ಧೂಳನವ ಮಾಡಿ ನಾಲ್ವತ್ತೆಂಟು ಸ್ಥಾನದಲ್ಲಿ
ಮಂತ್ರಸ್ಮರಣೆಯಿಂದ ತ್ರಿಪುಂಡ್ರವ್ವ ಧರಿಸುವುದಯ್ಯಾ
ಕೂಡಲಚೆನ್ನ ಸಂಗಮದೇವಾ.

ಎಂದಿದ್ದಾರೆ. ಹೀಗೆ ತ್ರಿಪುಂಡ್ರಧಾರಣೆಯ ಸ್ಥಾನಭೇದಗಳು ವಚನಸಾಹಿತ್ಯದಲ್ಲಿ ಹೆಚ್ಚಾಗಿ ಪ್ರತಿಪಾದಿತವಾಗಿದ್ದರೂ ಅವು ಅಧಿಕಾರಿ ಭೇದದಿಂದ ಕೂಡಿಕೊಂಡಿವೆ. ಆಯಾ ಅಧಿಕಾರಿಯೇ ಇವುಗಳನ್ನು ನಿರ್ದಿಷ್ಟವಾಗಿ ಧರಿಸಬೇಕೆಂದು ಹೇಳಲಾಗಿದೆ.

ವಿಭೂತಿ ಮಹಿಮೆ –

ಭಸ್ಮನಿರ್ಮಾಣದ ವಿಧಿಯನ್ನು ಅನುಸರಿಸಿ ನಿರ್ಮಿಸಲಾದ ಭಸ್ಮವನ್ನು ಧರಿಸುವುದರಿಂದ ಸಕಲತೀರ್ಥ ಯಾತ್ರೆಗಳ ಫಲವು ದೊರೆಯುವುದು ಹಾಗೂ ಅನಂತಪಾಪಗಳು ನಷ್ಟವಾಗುವವು ಎಂದು ಚಂದ್ರಜ್ಞಾನಾಗಮವು–

ಭಸ್ಮಜ್ಯೋತಿಃ ಸಮಾಮ್ನಾತಮವಶ್ಯಂ ತಸ್ಯ ಧಾರಣಾತ್।
ಸಂಸಾರಸಾಗರಂ ತೀರ್ತ್ವಾ ಕೈವಲ್ಯಫಲಮಶ್ನುತೇ ॥
ಭಸ್ಮಸಂಧಾರಣಾದೇವ ಸರ್ವತೀರ್ಥಫಲಂ ಭವೇತ್।
ಭಸ್ಮಸಂಧಾರಣಾತ್ಸರ್ವಂ ಭಸ್ಮೀಭವತಿ ಕಿಲ್ಬಿಷಮ್ ॥
ಭಸ್ಮೇದಂ ಶಾಂಭವಂ ಜ್ಯೋತಿಸ್ತದ್ಧ್ಯಾನಾದ್ ಧ್ಯಾತ ಈಶ್ವರಃ।
ಭಸ್ಮಸಂದರ್ಶನಾದೇವ ಶಿವದರ್ಶನಮಶ್ನುತೇ ॥
ಭೂತಪ್ರೇತಪಿಶಾಚಾಶ್ಚ ಮಹಾರೋಗಾಶ್ಚ ದುಸ್ಸಹಾಃ।
ಭಸ್ಮದರ್ಶನಮಾತ್ರೇಣ ಪಲಾಯಂತೇ ನ ಸಂಶಯಃ ॥
ಭೂವಿದ್ರಾವಣೇ ಪಾಪಸಂಹೃತೌ ಮುಕ್ತಿಸಾಧನೇ।
ನ ಭಸ್ಮನೋಽನ್ಯತ್ ಸದೃಶಮಿತ್ಯೇತಚ್ಛಿವಶಾಸನಮ್ ॥
ಭಸ್ಮನೋ ಮಹಿಮಾಽಗಣ್ಯಸ್ತಂ ವಕ್ತುಂ ಕೇನ ಶಕ್ಯತೇ।
ತಥಾಪಿ ಕಶ್ಚಿದ್ ಗದಿತಃ ಕಿಮನ್ಯಚ್ಛ್ರೋತುಮಿಚ್ಛಸಿ॥೩೩

ಭಸ್ಮವನ್ನು ಧರಿಸುವುದರಿಂದ ನಿಶ್ಚಿತವಾಗಿ ಸಂಸಾರ ಸಾಗರವನ್ನು ದಾಟಿ ಕೈವಲ್ಯ ಫಲವನ್ನು ಹೊಂದುವನು. ಭಸ್ಮವನ್ನು ಧರಿಸುವ ಮಾತ್ರದಿಂದ ಎಲ್ಲಾ ತೀರ್ಥಗಳಲ್ಲಿ ಮಿಂದ ಫಲವು ದೊರೆಯುತ್ತದೆ. ಭಸ್ಮವನ್ನು ಧರಿಸುವ ಮಾತ್ರದಿಂದ ಎಲ್ಲಾ ಪಾಪವೂ ಭಸ್ಮವಾಗುತ್ತದೆ. ಭಸ್ಮವೆಂಬುದು ಶಂಭುವಿನ ಜ್ಯೋತಿ. ಅದನ್ನು ಧ್ಯಾನ ಮಾಡುವುದರಿಂದ ಈಶ್ವರನನ್ನು ಧ್ಯಾನಿಸಿದಂತಾಗುತ್ತದೆ. ಭಸ್ಮದ ದರ್ಶನ ಮಾತ್ರದಿಂದ ಶಿವನ ದರ್ಶನವಾಗುತ್ತದೆ. ಭಸ್ಮದ ದರ್ಶನ ಮಾತ್ರದಿಂದ ಭೂತ, ಪ್ರೇತ, ಪಿಶಾಚಿಗಳು, ದುಸ್ಸಹವಾದ ಮಹಾರೋಗಗಳು ಪಲಾಯನ ಮಾಡುತ್ತವೆ. ಈ ವಿಷಯದಲ್ಲಿ ಸಂಶಯವಿಲ್ಲ. ಭೂತಗಳನ್ನು ಹೆದರಿಸಿ ಓಡಿಸುವುದರಲ್ಲಿ, ಪಾಪವನ್ನು ಸಂಹರಿಸುವಲ್ಲಿ,

೩೨. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೯೩೧, ಪುಟ೨೯೫
೩೩. ಚಂ.ಆ.ಕ್ರಿ.ಪಾ. ಪಟಲ ೬, ಶ್ಲೋಕ ಸಂಖ್ಯೆ ೬೪–೬೯

ಮುಕ್ತಿಯನ್ನು ಸಾಧಿಸಿಕೊಡುವಲ್ಲಿ ಭಸ್ಮಕ್ಕೆ ಸದೃಶವಾದುದು ಯಾವುದೂ ಇಲ್ಲ. ಇದು ಶಿವನ ಶಾಸನ ಎಂಬುದಾಗಿ ನಿರೂಪಿಸಲಾಗಿದೆ.

ಶರಣರು ಸಹ ತಮ್ಮ ವಚನಗಳಲ್ಲಿ ತ್ರಿಪುಂಡ್ರಧಾರಣೆಯಿಂದ ಲಲಾಟದಲ್ಲಿ ಲಿಖಿಸಿದ ದುರಕ್ಷರಗಳು ದುಷ್ಕರ್ಮಗಳು ದೂರವಾಗಿ ಶಿವಧರ್ಮಿಯಾಗಿ ಶೋಭಿಸುತ್ತಾನೆಂದು ವಿಭೂತಿಯ ಮಹಿಮೆಯನ್ನು ಹೃದಯತುಂಬಿ ಹೊಗಳಿದ್ದಾರೆ. ಬಸವಣ್ಣನವರು ಭಸ್ಮದ ಮಹತಿಯನ್ನು ತಿಳಿಸುತ್ತ,

ಸಕಲಕ್ರಿಯೆಗಳಿಗಿದು ಕವಚ, ಸಕಲವಶ್ಯಕ್ಕಿದು ಶುಭತಿಲಕ,
ಸಕಲಸಂಪದಕ್ಕೆ ತಾಣವಿದು,
ಅಘಟಿತ ಘಟಿತವೆನಿಸುವ ಅನುಪಮ ತ್ರಿಪುಂಡ್ರ
ಅಣುಮಾತ್ರ ವಿಭೂತಿ ಪಣೆಯೊಳಿಡೆ
ಎಣಿಕೆಯಿಲ್ಲದ ಭವನಾಶ ಪರಿವುದು
ತ್ರಿಣಯ ನೀನೋಲಿದು ಧರಿಸಿದೆಯೆಂದೆನೆ;[೩೪]
ಆನು ಧರಿಸಿ ಬದುಕಿದೆ ಕೂಡಲಸಂಗಯ್ಯಾ

ಎಂದು ಭಸ್ಮವು ಭವನಾಶನವನ್ನು ಮಾಡಿ ಸಕಲಸಂಪದವನ್ನು ನೀಡುವುದೆಂದು ಆಗಮವಾಕ್ಯಗಳ ಸಮರ್ಥನೆಯನ್ನು ಮಾಡಿದ್ದಾರೆ. ಇದನ್ನೇ –

ಆದಿ ಆಧಾರದಲ್ಲಿ ವೇಧಿಸಿದ ಚಿದ್ಭಸ್ಮವ
ಭೇದಿಸಿ ಬಹಿಷ್ಕರಿಸಿ ಸರ್ವಾಂಗದಲ್ಲಿ ಧರಿಸಲು
ಭವಬಂಧನ ದುರಿತದೋಷಂಗಳು ಪರಿಹರವಪ್ಪುದು ತಪ್ಪದು ನೋಡ
ಇದು ಕಾರಣ ಅಡಿಗಡಿಗೆ ಶ್ರೀವಿಭೂತಿಯನೆ ಧರಿಸಿ
ಮಲತ್ರಯಂಗಳ ತೊಳೆದೆನು ನೋಡ.
ಮಲತ್ರಯಂಗಳು ಪರಿಹರವಾಗದ ಮುನ್ನ
ಭವಬಂಧನದ ಬೇರುಗಳ ಸಂಹರಿಸಿ
ಜನನ ಮರಣಂಗಳ ಒತ್ತಿ ಒರಸುವುದು ನೋಡ,[೩೫]
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ।

ಎಂದು ವಿಭೂತಿಯು ಪರಾತ್ಪರ ಮಹಾವಸ್ತುವಿನ ದಿವ್ಯ ತೇಜಸ್ಸೆಂದು ಕೊಂಡಾಡಿದ್ದಾರೆ. ಅದು ಶಿವಸ್ವರೂಪವನ್ನು ಪ್ರಕಾಶಪಡಿಸುವ ಶುಭ್ರರೇಣು. ಇದರ ಧಾರಣೆಯಿಂದ ಮಲತ್ರಯ, ಕರ್ಮತ್ರಯಗಳು ನಾಶವಾಗುತ್ತವೆ; ಭವಬಂಧನದ ಬೇರು ಕಳಚುತ್ತದೆ; ಜನನ–ಮರಣಗಳ ಗೆಲ್ಲಬಲ್ಲ ಸಾಮರ್ಥ್ಯವುಂಟಾಗುತ್ತದೆ ಎಂದು ತೋಂಟದ ಸಿದ್ಧಲಿಂಗ ಶಿವಯೋಗಿಗಳು ಸ್ಪಷ್ಟಪಡಿಸಿದ್ದಾರೆ. ಆದುದರಿಂದ ಚೆನ್ನಬಸವಣ್ಣನವರು –

"ಅಯ್ಯಾ ಎನಗೆ ವಿಭೂತಿಯೆ ಕುಲದೈವ; ಅಯ್ಯಾ ಎನಗೆ ವಿಭೂತಿಯೆ ಮನೆದೈವ; ಅಯ್ಯಾ ಎನಗೆ ವಿಭೂತಿಯೆ ಸರ್ವಕಾರಣ; ಅಯ್ಯಾ ಎನಗೆ ವಿಭೂತಿಯೆ

೩೪. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೧೩೭೪ ಪುಟ ೩೮೦
೩೫. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ.೬, ವಚನ ಸಂಖ್ಯೆ ೧೮೫ ಪುಟ ೮೬

ಸರ್ವಸಿದ್ಧಿ; ಅಯ್ಯಾ ಎನಗೆ ವಿಭೂತಿಯೆ ಸರ್ವವಶ್ಯ"[೩೬] ಎಂದಿದ್ದಾರೆ. ಕಾರಣ ವಿಭೂತಿಯನ್ನು ಶ್ರದ್ಧೆಯಿಂದ ಧರಿಸಿದವ ಶುದ್ಧಾತ್ಮನಾಗಿ ಜೀವನ್ಮುಕ್ತನಾಗಬಲ್ಲ ಎಂದಿದ್ದಾರೆ. ನಾಸ್ತಿಕನೂ, ಪಾಪಕರ್ಮದಿಂದ ಕೂಡಿದ ಮಾನವರೂ ಸಹ ಭಸ್ಮವನ್ನು ಧರಿಸಿದರೆ ಸಮಸ್ತ ಪಾಪಗಳಿಂದ ಮುಕ್ತರಾಗುವರೆಂದು ಆಗಮಗಳು ತಿಳಿಸುತ್ತವೆ.

> ಭಸ್ಮ ತ್ರಿಪುಂಡ್ರಂ ಯೇ ಕೇಚಿತ್ಪಾತಕಾನ್ವಿತ ಮಾನವಾಃ।
> ದೃಶುಸ್ತೇಷಾಂ ಮಹಾಶ್ರೇಷ್ಠಂ ಸಾಯುಜ್ಯಂ ಪ್ರಮಥಾನ್ವಿತಂ॥[೩೭]

ಈ ಅಭಿಪ್ರಾಯವನ್ನೇ ಸಮರ್ಥಿಸುತ್ತ ಜಗಜ್ಯೋತಿ ಬಸವೇಶ್ವರರು –

> ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ
> ಕಹಿ ಸೋರೆಯ ಕಾಯ ತಂದು ವಿಭೂತಿಯ ತುಂಬಿದಡೆ
> ಸಿಹಿಯಾಗದೆ ಮೂರು ದಿವಸಕ್ಕಯ್ಯಾ?
> ಹಲವು ಕಾಲ ಕೊಂದ ಸೂನೆಗಾರನ ಕತ್ತಿಯಾದಡೇನು
> ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ ?
> ಲಲಾಟದಲ್ಲಿ ಶ್ರೀ ವಿಭೂತಿಯ ಬರೆಯಲಿಕೆ ಪಾಪ ಪಲ್ಲಟವಾಗದೆ
> ಕೂಡಲಸಂಗಮದೇವಾ

ಎಂಬುದಾಗಿ ಸೋರೆಯ ಕಾಯಿಯ ಹಾಗೂ ಪರುಷದ ಉದಾಹರಣೆಯ ಮೂಲಕ ಭಸ್ಮವು ಪಾಪಪರಿಹಾರಕವೆಂಬುದನ್ನು ನಿರೂಪಿಸಿರುವುದರ ಜೊತೆಗೆ "ಕೂಡಲ ಸಂಗನಶರಣರ ನೊಸಲಿಗೆ ವಿಭೂತಿಯೇ ಶೃಂಗಾರ" ಎಂದು ನುಡಿದಿದ್ದಾರೆ. ಶ್ರೀ ಸಿದ್ಧರಾಮೇಶ್ವರರು ಇನ್ನೂ ಮುಂದುವರೆದು, "ಬಸ್ಮವ ಹೂಸಿದಡೆ ಶರಣನೇ? ಅಲ್ಲಲ್ಲ. ಮಾಡುವ ಕ್ರಿಯೆ ಭಸ್ಮವಾದಡೆ ಶರಣ"[೩೯] ಎಂಬುದಾಗಿ ಮಾಡುವ ಪ್ರತಿಯೊಂದು ಕಾರ್ಯದಲ್ಲಿಯೂ ಸ್ವಾರ್ಥಪರವಾದ ಕಾಮ(ಆಸೆ)ಗಳನ್ನು ದಹಿಸಿ, ಪರಮ ಪ್ರಕಾಶ ಸ್ವರೂಪನಾದ ಪರಶಿವನನ್ನು ಮನದಲ್ಲಿ ಸದಾ ಚಿಂತನೆಗೈಯುವವನು ನಿಜವಾದ ಶರಣನೆಂದು ತಿಳಿಸಿದ್ದಾರೆ. ಕಾರಣ ಶ್ರೀ ತೋಂಟದ ಸಿದ್ಧಲಿಂಗರು, "ಕಾಲನ ಸುಟ್ಟ ಭಸ್ಮವ ಧರಿಸಿದೆನಯ್ಯಾ. ತನುತ್ರಯಗಳೆಂಬ ತ್ರಿಪುರವ ಚಿತ್ ಶಿಖಿಯೆಂಬ ಜ್ಞಾನಾಗ್ನಿಯಿಂದ ದಹಿಸಿದ ಭಸ್ಮವ ಧರಿಸಿದೆನಯ್ಯಾ. ಸಂಚಿತ, ಪ್ರಾರಬ್ಧ, ಆಗಾಮಿಯೆಂಬ ಕರ್ಮತ್ರಯಂಗಳ ದಹಿಸಿದ ಭಸ್ಮವ ಧರಿಸಿದೆನಯ್ಯ. ಸತ್ವ ರಜ ತಮಂಗಳ ಸುಟ್ಟುರುಹಿದ ಭಸ್ಮವ ಧರಿಸಿದೆನಯ್ಯಾ. ಆಣವ, ಮಾಯಾ, ಕಾರ್ಮಿಕವೆಂಬ ಮಲತ್ರಯಂಗಳ ದಹಿಸಿದ ಭಸ್ಮವ ಧರಿಸಿದೆನಯ್ಯಾ. ಜೀವಭಾವ, ಇಂದ್ರಿಯಭಾವ, ವಿಷಯಭಾವ, ಭೂತಭಾವ, ಜನನಭಾವ, ಬೀಜಭಾವವೆಂಬ ಭಾವಾಶ್ರಯವ ಜ್ಞಾತೃ– ಜ್ಞಾನ–ಜ್ಞೇಯವೆಂಬ ತ್ರಿಪುಟಿ ಯೇಕಾರ್ಥವಾದ ಅಗ್ನಿಯಿಂದೆ ದಹಿಸಿದ ಭಸ್ಮವ ಧರಿಸಿದೆನಯ್ಯಾ. ಇದು ಕಾರಣ, ಚಿದ್ವಿಭೂತಿಯನೆ ಸದಾ ಧರಿಸಿ ಶುದ್ಧ ಚಿದ್ರೂಪನಾಗಿರ್ದೆನು ನೋಡಾ."[೪೦]

೩೬. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೯೧೮. ಪುಟ೨೮೪
೩೭. ವೀರಾಗಮ, ಪಟಲ ೧, ಶ್ಲೋಕ ಸಂಖ್ಯೆ ೨೪೦, ಪುಟ ೫೩
೩೮. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೭೩ ಪುಟ ೨೧
೩೯. ಸಿದ್ಧರಾಮೇಶ್ವರ ವ.ಸಂ. ಸಮಗ್ರ ವಚನ ಸಂಪುಟ ೪, ವಚನ ಸಂಖ್ಯೆ ೧೭೧೬ ಪುಟ ೪೮೬

ಹೀಗೆ ಆಧ್ಯಾತ್ಮಿಕವಾಗಿ ವಿಭೂತಿ ಧರಿಸುವುದರಿಂದ ಹರನ ಸಾಮಿಪ್ಯ ದೊರಕುವುದು, ಪಾಪಕ್ಷಯವಾಗುವುದೆಂದು ಅದರ ಅಸಾಧಾರಣತೆಯನ್ನು ವಿವರಿಸಿದರೆ, ಭೌತಿಕವಾಗಿ ಅದರ ಧಾರಣೆಯಿಂದ ಅನೇಕ ಚರ್ಮರೋಗಗಳು ನಾಶವಾಗುತ್ತವೆ. ಅಲ್ಲದೇ ಕ್ರಿಯಾಭಸ್ಮದಿಂದಾಚರಿಸಿದ ಸರ್ವಾಂಗ ಭಸ್ಮಸ್ನಾನ(ಲೇಪನ)ದಿಂದ ಶೀತಾದಿ ಯಾವ ದೋಷಗಳೂ ಬಾಧಿಸಲಾರವು ಎಂಬುದು ವೈಜ್ಞಾನಿಕ ಸತ್ಯ.

ಒಟ್ಟಿನಲ್ಲಿ ಭಸ್ಮದ ವಿಷಯವಾಗಿ ದೊರೆಯುವ ಪ್ರಮಾಣಗಳನ್ನು ಅವಲೋಕಿಸಲಾಗಿ ಚಿದ್ಭಸ್ಮದ ಮೂಲ ಕಲ್ಪನೆಯು ಆಗಮಗಳಲ್ಲಿ ಪ್ರತಿಪಾದಿತವಾಗಿದ್ದು ಇವುಗಳನ್ನಾಧರಿಸಿಯೇ ವಚನ ಸಾಹಿತ್ಯದಲ್ಲಿ ಭಸ್ಮದ ವಿಷಯವನ್ನು ಪ್ರತಿಪಾದಿಸಲಾಗಿದೆ. ಆಗಮದಲ್ಲಿ ಪ್ರತಿಪಾದಿತವಾದ ಭಸ್ಮ ನಿರ್ಮಾಣದ ವಿಸ್ತೃತವಾದ ವಿಧಾನವು ಕ್ರಮವಾಗಿ ಸಂಕುಚಿತಗೊಳ್ಳುತ್ತಾ ಬಂದಿದ್ದು, ವಚನಗಳಲ್ಲಿ ಭಸ್ಮ ನಿರ್ಮಾಣದ ಸಂಕ್ಷಿಪ್ತ ವಿಧಾನವು ಪ್ರತಿಪಾದಿಸಲ್ಪಟ್ಟಿದೆ. ಇನ್ನು ಆಗಮದಲ್ಲಿ ಹೇಳಲಾದ ಶಾಂತಿಕ, ಪೌಷ್ಟಿಕ ಮೊದಲಾದ ಭಸ್ಮದ ಭೇದಗಳು ಹಾಗೂ ಆಹುತಿಗಳು, ತರ್ಪಣಗಳು ವಚನ ಸಾಹಿತ್ಯದಲ್ಲಿ ಕಂಡು ಬರುವದಿಲ್ಲ. ಅಲ್ಲದೇ ವಚನಗಳು ಇವುಗಳನ್ನು ಪ್ರತ್ಯೇಕವಾಗಿ ಪ್ರತಿಪಾದಿಸದೆ ಇವೆಲ್ಲವುಗಳನ್ನು ಒಂದರಲ್ಲಿಯೇ ಸಮಾವೇಶಗೊಳಿಸಿ ಹೇಳಿರುವುದು ಕಂಡು ಬರುತ್ತದೆ.

ಭಸ್ಮೋದ್ಧೂಲನ, ಭಸ್ಮಸ್ನಾನ ಮತ್ತು ತ್ರಿಪುಂಡ್ರಧಾರಣೆಯೆಂಬ ಮೂರು ಪ್ರಕಾರದ ಭಸ್ಮಧಾರಣ ವಿಧಿಗಳು ಶಿವಾಗಮಗಳಲ್ಲಿ ಮತ್ತು ವಚನಸಾಹಿತ್ಯದಲ್ಲಿ ಸಮನಾಗಿ ಹೇಳಲ್ಪಟ್ಟಿವೆ. ಆದರೆ ತ್ರಿಪುಂಡ್ರಧಾರಣೆಯ ಸ್ಥಾನಗಳ ವಿಷಯದಲ್ಲಿ ಕೆಲವು ವ್ಯತ್ಯಾಸಗಳು ಕಂಡು ಬರುತ್ತವೆ. ಆಗಮಗಳಲ್ಲಿ ಐದು, ಎಂಟು, ಹದಿನಾರು ಮತ್ತು ಮೂವತ್ತೆರಡು ಸ್ಥಾನಗಳು ಹೇಳಲ್ಪಟ್ಟಿದೆ. ಆದರೆ ವಚನ ಸಾಹಿತ್ಯದಲ್ಲಿ ಈ ಭೇದಗಳು ಇನ್ನಷ್ಟು ಅಧಿಕವಾಗಿ ಎಂಟು, ಹದಿನಾರು, ಮೂವತ್ತೆರಡು, ಮೂವತ್ತಾರು, ನಲವತ್ನಾಲ್ಕು ಮತ್ತು ನಲವತ್ತೆಂಟು ಸ್ಥಾನಗಳು ನಿರೂಪಿಸಲ್ಪಟ್ಟಿವೆ. ಹೀಗೆ ತ್ರಿಪುಂಡ್ರಧಾರಣೆಯ ಸ್ಥಾನಭೇದಗಳು ವಚನಸಾಹಿತ್ಯದಲ್ಲಿ ಹೆಚ್ಚಾಗಿ ಪ್ರತಿಪಾದಿತವಾಗಿದ್ದರೂ ಅವು ವಿಕಲ್ಪವಾಗಿರದೇ ಅಧಿಕಾರ ಭೇದದಿಂದ ಕೂಡಿಕೊಂಡಿವೆ. ಆಯಾ ಅಧಿಕಾರಿಯೇ ಅವುಗಳನ್ನು ನಿರ್ಧಿಷ್ಟವಾಗಿ ಧರಿಸಬೇಕೆಂಬುದಾಗಿ ಹೇಳಲಾಗಿದೆ. ಹೀಗೆ ತ್ರಿಪುಂಡ್ರಧಾರಣೆಯ ಸ್ಥಾನಗಳ ಭೇದಗಳಲ್ಲಿ ಬೆಳವಣಿಗೆಯಾದುದು ಕಂಡುಬರುತ್ತದೆ.

ಹೀಗೆ ಸಾಧಕರ ಅನುಕೂಲತೆಗಾಗಿ ಕೆಲವೇ ಕೆಲವು ಚಿಕ್ಕ ಪುಟ್ಟ ವ್ಯತ್ಯಾಸಗಳು ಮಾಡಿಕೊಂಡರೂ ವಚನಗಳು ಶಿವಾಗಮಗಳ ಮೂಲ ಜಾಡನ್ನು ಬಿಡದೆ ತಮ್ಮ ಅನುಭವವನ್ನು ಅದರಲ್ಲಿ ಮಿಶ್ರಣಗೊಳಿಸಿ ವಿಷಯ ವಸ್ತುವನ್ನು ಪ್ರತಿಪಾದಿಸಿವೆ. ಕಾರಣ 'ಶಾಸ್ತ್ರೋಕ್ತ ಕ್ರಮದಿಂದ ನಿರ್ಮಿಸಲಾದ ಭಸ್ಮವನ್ನು ಧರಿಸುವುದರಿಂದ ಅದು ತಾತ್ವಿಕ ಭಸ್ಮವಾದ ಶಿವನ ಚಿತ್ಸ್ವರೂಪದ ಅರಿವಿಗೆ ಕಾಣವಾಗುತ್ತದೆ; ಮೋಕ್ಷಕ್ಕೆ ಸಾಧನವಾಗುತ್ತದೆ' ಎಂದು ಶಿವಾಗಮಗಳು ಮತ್ತು ವಚನಗಳೆರಡೂ ಸಾರುತ್ತವೆ.

---

೪೦. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ.೬, ವಚನ ಸಂಖ್ಯೆ ೧೯೧. ಪುಟ ೮೯

೫.೧.೭ ರುದ್ರಾಕ್ಷಿ

ಅಷ್ಟಾವರಣಗಳಲ್ಲಿ ಏಳನೆಯ ಆವರಣವೇ ರುದ್ರಾಕ್ಷಿ. ಪರಶಿವನ ಜ್ಞಾನಚಕ್ಷುವಿನಿಂದ ಉದಯವಾದವೆಂದು ಭಾವಿಸುವ ಈ ರುದ್ರಾಕ್ಷಿಗಳನ್ನು ಬಹಿರಂಗದಲ್ಲಿ ವಿದ್ಯುಕ್ತವಾಗಿ, ನಿಷ್ಠಾಪೂರ್ವಕವಾಗಿ ಧಾರಣ ಮಾಡುವುದರ ಜೊತೆಗೆ ಅಂತರಂಗದಲ್ಲಿ 'ಸರ್ವಂ ಶಿವಮಯಂ ಜಗತ್' ಎಂಬ ಶಿವಜ್ಞಾನ, ಶಿವದೃಷ್ಟಿಯನ್ನು ಹೊಂದುವುದೇ ರುದ್ರಾಕ್ಷಧಾರಣೆಯ ಉದ್ದೇಶವಾಗಿದೆ. ಈ ರುದ್ರಾಕ್ಷಿ ಪದದ ತಾತ್ವಿಕ ವಿವೇಚನೆ, ರುದ್ರಾಕ್ಷೋತ್ಪತ್ತಿ, ರುದ್ರಾಕ್ಷ ಪರೀಕ್ಷಣ, ರುದ್ರಾಕ್ಷ ಸಂಸ್ಕರಣ, ರುದ್ರಾಕ್ಷದ ಮುಖಗಳು, ರುದ್ರಾಕ್ಷ ಧಾರಣ ವಿಧಿ, ರುದ್ರಾಕ್ಷಮಾಲೆ ತಯಾರಿಸುವ ಕ್ರಮ, ರುದ್ರಾಕ್ಷಧಾರಣೆಯ ಫಲ ಮುಂತಾದವುಗಳ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅದು ಇಂತಿದೆ –

ರುದ್ರಾಕ್ಷಿ ಪದದ ಶಾಬ್ದಿಕ ಮತ್ತು ತಾತ್ವಿಕ ವಿವೇಚನೆ –

'ರುದ್ರಸ್ಯ ಅಕ್ಷಃ ರುದ್ರಾಕ್ಷ' ಎಂಬ ವ್ಯುತ್ಪತ್ತಿಯ ಮೇರೆಗೆ ರುದ್ರಾಕ್ಷಿಯೆಂದರೆ ರುದ್ರನೇತ್ರ ಅಥವಾ ರುದ್ರದೃಷ್ಟಿ ಎಂಬ ಅರ್ಥವಾಗುತ್ತದೆ. ರುದ್ರದೃಷ್ಟಿ ಎಂದರೆ ಸಕಲ ಚರಾಚರಾತ್ಮಕವಾದ ಪ್ರಪಂಚವನ್ನೆಲ್ಲ ರುದ್ರನೇ (ಶಿವನೇ) ವ್ಯಾಪಿಸಿರುವನು ಹಾಗೂ ಎಲ್ಲರೂ ರುದ್ರನ ಸ್ವರೂಪರೇ ಆಗಿರುವರು ಎಂಬ ಸಮದೃಷ್ಟಿಯಿಂದ ನೋಡುವುದು ರುದ್ರದೃಷ್ಟಿಯೆನಿಸಿಕೊಳ್ಳುತ್ತದೆ. ಇಂತಹ ದೃಷ್ಟಿ ಸಂಪನ್ನನಾದವನು ಬ್ರಾಹ್ಮಣ, ಚಂಡಾಲ, ಗೋವು, ಆನೆ ಮತ್ತು ನಾಯಿ ಇವರೆಲ್ಲರನ್ನು ಸಮನಾಗಿ ಕಾಣುತ್ತಾನೆ[೧]. ಇಂತಹ ಸಮದೃಷ್ಟಿಯೇ ಸಮಾಜದಲ್ಲಿ ಶಾಂತಿ ಸ್ಥಾಪನೆಗೆ ಮೂಲಕಾರಣವಾಗುತ್ತದೆ. ಹೀಗೆ ಸರ್ವರಲ್ಲಿ ಶಿವನನ್ನೇ ಕಂಡು ಸಮಸ್ತ ಮನುಕುಲದ ಉನ್ನತಿಗಾಗಿ ಶ್ರಮಿಸುವ ಭಾವವೇ ಅಂತರಂಗದ ರುದ್ರಾಕ್ಷಧಾರಣವು. ಇದನ್ನೇ ಶ್ರೀ ಸಿದ್ಧರಾಮೇಶ್ವರರು, "ನೋಡುವ ಕೃತ್ಯ ರುದ್ರಾಕ್ಷಿಯಾದಡೆ ಶರಣ ನೋಡಾ"[೨] ಎಂದು ಅಂತರಂಗ ರುದ್ರಾಕ್ಷದ ಅವಶ್ಯಕತೆಯನ್ನು ಬಿತ್ತರಿಸಿರುವರು. ಇದಕ್ಕೇನೆ ತಾತ್ವಿಕ ರುದ್ರಾಕ್ಷಿಯೆಂದು ಕರೆಯುವುದುಂಟು.

> ತತ್ವಚಿಂತಾಮಣಿಗಳೆಂಬ ರುದ್ರಾಕ್ಷೆಗಳ ಭಕ್ತಿದಾರದಲ್ಲಿ ಸರಗೊಳಿಸಿ,
> ಯುಕ್ತಿವಿಧಾನವಿಡಿದು ಧರಿಸಿ ಸದ್ಯೋನ್ಮುಕ್ತನಾದೆನಯ್ಯ,
> ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ॥

ಎಂಬ ಮಾತು ರುದ್ರಾಕ್ಷಿಯ ಆಂತರಿಕ ಅರ್ಥವನ್ನು ಅರುಹುತ್ತದೆ. ಇಂತಹ ತಾತ್ವಿಕ ರುದ್ರಾಕ್ಷದ ಪ್ರಾಪ್ತಿಯಾಗಬೇಕಾದರೆ ಮೊದಲು ಶಿವನ ನೇತ್ರಬಿಂದು ಪ್ರತೀಕಗಳಾದ ಬಹಿರಂಗ ರುದ್ರಾಕ್ಷಿಗಳನ್ನು ಧರಿಸಬೇಕು. ಅಂತೆಯೇ ಬಸವಣ್ಣನವರು ರುದ್ರಾಕ್ಷಿ ಧರಿಸಿದವರನ್ನು ಲಿಂಗಸ್ವರೂಪದಲ್ಲಿ ಕಂಡಿದ್ದಾರೆ.

---

೧. ಪಾ.ಆ. ಪಟಲ ೯, ಶ್ಲೋಕ ಸಂಖ್ಯೆ ೯೪

೨. ಸಮಗ್ರ ವಚನ ಸಂಪುಟ ೪, ವಚನ ಸಂಖ್ಯೆ ೧೭೧೬, ಪುಟ ೪೮೬

೩. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ. ೬, ವಚನ ಸಂಖ್ಯೆ ೧೯೪, ಪುಟ ೯೨

"ಶ್ರೀ ರುದ್ರಾಕ್ಷಿಯ ಧರಿಸಿದಾತನೆ ಲಿಂಗವೆಂಬೆ,
ಶ್ರೀ ರುದ್ರಾಕ್ಷಿಯ ಧರಿಸದ ಅಧಮರನೆ ಭವಿಯೆಂಬೆ
ಕೂಡಲಸಂಗಮದೇವಯ್ಯಾ ಶ್ರೀ ರುದ್ರಾಕ್ಷಿಯ ಧರಿಸುವ ಭಕ್ತರ ನೀನೆಂಬೆ"[೪]

ಎಂದು ರುದ್ರಾಕ್ಷಿಗೆ ಬಸವಣ್ಣನವರು ಮಹತ್ವ ನೀಡಿರುವರು. ಇಂಥಹ ಬಹಿರಂಗ ರುದ್ರಾಕ್ಷಗಳ ಉತ್ಪತ್ತಿಯನ್ನು ಚಂದ್ರಜ್ಞಾನಾಗಮವು ನಿರೂಪಿಸುತ್ತದೆ –

ರುದ್ರಾಕ್ಷೋತ್ಪತ್ತಿ :

ತ್ರಿಪುರಾಣಾಂ ವಧಾರ್ಥಾಯ ವಿಭುನಾ ಶಂಭುನಾ ಪುರಾ ।
ಉನ್ಮೀಲಿತಾನಿ ಚಕ್ಷೂಂಷಿ ದಿವ್ಯಂ ವರ್ಷಸಹಸ್ರಕಮ್॥
ಉಬಾಭ್ಯಾಂ ಚಾರುಪಕ್ಷ್ಮಭ್ಯಾಂ ಪತಿತಾ ಜಲಬಿಂದವಃ।
ತ ಏವ ಬಿಂದವೋ ಜಾತಾ ಮಹಾರುದ್ರಾಕ್ಷವೃಕ್ಷಕಾಃ॥
ಸ್ಥಾವರತ್ವಮ್ ಅನುಪ್ರಾಪುರ್ಭಕ್ತಾನುಗ್ರಹಕಾರಣಾತ್॥[೫]

ಎಂಬ ಉಕ್ತಿಯಂತೆ ಲೋಕಕಂಟಕರಾದ ತಾರಕಾಕ್ಷ, ಕಮಲಾಕ್ಷ ಹಾಗೂ ವಿದ್ಯುನ್ಮಾಲಿ ಎಂಬ ರಾಕ್ಷಸರ ತ್ರಿಪುರಗಳನ್ನು ಸಂಹರಿಸುವುದಕ್ಕಾಗಿ ಶಿವನು ತನ್ನ ಕಣ್ಣುಗಳನ್ನು ಸಾವಿರ ವರ್ಷಗಳವರೆಗೆ ತೆರೆದು(ಎವೆಯಿಕ್ಕದೆ) ನೋಡಿದನು. ಆ ಸಮಯದಲ್ಲಿ ಶಿವನ ನೇತ್ರಗಳಿಂದ ಜಲಬಿಂದುಗಳು ಭೂಮಿಯಲ್ಲಿ ಬಿದ್ದವು. ರುದ್ರನ ನೇತ್ರಗಳಿಂದ ನೆಲಕ್ಕೆ ಬಿದ್ದ ಆ ಜಲಬಿಂದುಗಳೇ ಭಕ್ತರ ಅನುಗ್ರಹಕ್ಕೋಸ್ಕರ ರುದ್ರಾಕ್ಷಿಗಳಾದವು. ಇದೇ ವಿಷಯವನ್ನೇ ವಚನಗಳಲ್ಲಿಯೂ[೬] ಪ್ರತಿಪಾದಿಸಲಾಗಿದೆ.

ದುಷ್ಟಸಂಹಾರದ ಶಿಷ್ಟ ಪರಿಪಾಲನೆಯ ಸಮಯದಲ್ಲಿ ಹೊರಹೊಮ್ಮಿದ ಅಶ್ರುಗಳಿಂದ ಈ ರುದ್ರಾಕ್ಷಗಳು ಉತ್ಪನ್ನವಾಗಿರುವುದರಿಂದ ಇವುಗಳಲ್ಲಿ ದುರ್ಭಾವನೆಯನ್ನು ಇಲ್ಲವಾಗಿಸುವ ಸದ್ಭಾವನೆಯನ್ನು ಜಾಗ್ರತಗೊಳಿಸುವ ಸಾಮರ್ಥ್ಯವೂ ಹಾಗೂ ರಜೋ, ತಮೋ ಗುಣಗಳನ್ನು ಸಂಸ್ಕರಿಸಿ ಸತ್ವಗುಣ ಬೆಳೆಸುವ ಶಕ್ತಿಯೂ ಇದೆ. ಕಾರಣ ವೀರಶೈವರು ಈ ರುದ್ರಾಕ್ಷಗಳನ್ನು ರಕ್ಷಾಕವಚಗಳ ರೂಪಗಳಾದ ಅಷ್ಟಾವರಣಗಳಲ್ಲಿ ಒಂದನ್ನಾಗಿ ಸ್ವೀಕರಿಸಿರುವರು.

ರುದ್ರಾಕ್ಷ ಪರೀಕ್ಷಣ

ಎಲ್ಲ ರುದ್ರಾಕ್ಷಗಳು ಧರಿಸಲು ಅರ್ಹವಲ್ಲ. ಕೆಲವು ಗ್ರಾಹ್ಯ ಹಾಗೂ ಕೆಲವು ತಾಜ್ಯ ರುದ್ರಾಕ್ಷಗಳು ಇವೆ ಎಂದು ಆಗಮದಲ್ಲಿ ವಿವರಿಸಲಾಗಿದೆ.

---

೪. ಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೧, ವಚನ ಸಂಖ್ಯೆ ೧೩೬೮, ಪುಟ ೩೭೮

೫. ಚಂ. ಆ. ಕ್ರಿ. ಪಾ. ಪಟಲ ೭, ಶ್ಲೋಕ ಸಂಖ್ಯೆ ೪–೫

೬ ತ್ರಿಪುರ ಸಂಹಾರವ ಮಾಡುವಲ್ಲಿ ಶಿವನ ಉನ್ಮೀಷೋನ್ಮೀಲ ದೃಷ್ಟಿಯಿಂಪುಳಕ'ಬಿಂದು ಕಾಶ್ಯಪಿಯ ಮೇಲೆ ಬೀಳಲುಣ್ಮಿದ ರುದ್ರಾಕ್ಷಿ – ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ. ೧, ವಚನ ಸಂಖ್ಯೆ ೯೭೧, ಪುಟ ೨೯೪

ತಾಮ್ರಾಃ ಸ್ನಿಗ್ಧಾ ದೃಢಾಃ ಸ್ಥೂಲಾಃ ಕಂಟಕೈಃ ಸಂಯುತಾಃ ಶುಭಾಃ।
ಕ್ರಿಮಿದಷ್ಟಂ ಭಿನ್ನಭಿನ್ನಂ ಕಂಟಕೈರ್ಹೀನಮೇವ ಚ ॥
ವ್ರಣಯುಕ್ತಮವೃತ್ತಂ ಚ ಷಡ್ ರುದ್ರಾಕ್ಷಾನ್ ವಿವರ್ಜಯೇತ್॥[೭]

ಎಂಬುದಾಗಿ ಗ್ರಾಹ್ಯ ಹಾಗೂ ತಾಜ್ಯ ರುದ್ರಾಕ್ಷಗಳ ಲಕ್ಷಣಗಳನ್ನು ಹೇಳಲಾಗಿದೆ. ತಾಮ್ರವರ್ಣದ, ಸ್ನಿಗ್ಧಗಳಾದ, ಸದೃಢವಾದ, ದೊಡ್ಡದಾದ ಮತ್ತು ಮುಳ್ಳುಮುಳ್ಳಾದ ರುದ್ರಾಕ್ಷಿಗಳು ಧರಿಸಲು ಯೋಗ್ಯವಾದವುಗಳು. ಕೀಡೆಗಳಿಂದ ಭಿನ್ನಭಿನ್ನವಾದ, ಮುಳ್ಳುರಹಿತವಾದ ರೋಗಬಿದ್ದ ಹಾಗೂ ಗೋಲಾಕಾರವಲ್ಲದ ರುದ್ರಾಕ್ಷಗಳು ವರ್ಜ್ಯವಾದವುಗಳು.

ಇದಲ್ಲದೇ ನೆಲ್ಲಿಕಾಯಿ ಗಾತ್ರದ ರುದ್ರಾಕ್ಷಗಳು ಶ್ರೇಷ್ಠವೆಂದೂ, ಬಾರಿಬೀಜದ ಗಾತ್ರದ ರುದ್ರಾಕ್ಷಗಳು ಮಧ್ಯಮವೆಂದೂ, ಕಡಲೇಕಾಳಿನ ಗಾತ್ರದವುಗಳು ಕನಿಷ್ಠವೆಂದು ತಿಳಿಯಬೇಕೆಂದು ಆಗಮದಲ್ಲಿ[೮] ಪ್ರತಿಪಾದಿಸಲಾಗಿದೆ. ಮತ್ತು ರುದ್ರಾಕ್ಷದಲ್ಲಿ ತಾನಾಗಿಯೇ ದಾರ ಪೋಣಿಸುವ ರಂದ್ರ ಉಂಟಾಗಿದ್ದರೆ ಅದು ಶ್ರೇಷ್ಠವೆಂತಲೂ, ಪುರುಷ ಪ್ರಯತ್ನದಿಂದ ಭೇದ ಮಾಡಿದ್ದರೆ ಅದು ಮಧ್ಯಮವೆಂತಲೂ[೯] ಹೇಳಲ್ಪಟ್ಟಿದೆ.

ರುದ್ರಾಕ್ಷ ಸಂಸ್ಕರಣ

ಶ್ರೇಷ್ಠರಾದ ಗುರು ಅಥವಾ ಮಹಾತ್ಮರು ಸಂಸ್ಕರಿಸಿದ ರುದ್ರಾಕ್ಷಿಗಳನ್ನು ಧರಿಸುವುದರಿಂದ ಅವರ ಸಂಸ್ಕಾರದ ಪ್ರಭಾವವು ನಮ್ಮ ಮೇಲೆ ಉಂಟಾಗುವುದು. ಅದಕ್ಕಾಗಿ ರುದ್ರಾಕ್ಷಿಗಳನ್ನು ಗುರುಗಳಿಂದ ಸಂಸ್ಕರಿಸಿ ಧರಿಸುವುದೇ ಸೂಕ್ತ. ಶ್ರೀಗುರುವು ಅದನ್ನು ಶಾಸ್ತ್ರೋಕ್ತ ವಿಧಿಯಿಂದ ಶುದ್ಧಗೊಳಿಸಿದಾಗ ಮಾತ್ರ ರುದ್ರಾಕ್ಷಮಾಲೆಯು ಜಪೋಪಯೋಗಿಯಾಗುವುದು. ಕಾರಣ ಆ ಸಂಸ್ಕರಣ ಕ್ರಮವನ್ನು ಸೂಕ್ಷ್ಮಾಗಮವು ಹೀಗೆ ನಿರೂಪಿಸುತ್ತದೆ.

ಪಂಚಾಮೃತೈಃ ಪಂಚಗವ್ಯೈರಭಿಷಿಚ್ಯ ಯಥಾವಿಧಿ।
ಜಪೇತ್ ಪಂಚಾಕ್ಷರಂ ಮಂತ್ರಮಷ್ಟೋತ್ತರಸಹಸ್ರಕಮ್॥
ವರ್ಣಾತ್ಮಕಂ ತತೋ ಧ್ಯಾತ್ವಾ ದದ್ಯಾಚ್ಛಿಷ್ಯಾಯ ದೇಶಿಕಃ।
ಏವಂ ಕೃತ್ವಾಕ್ಷಮಾಲಾಂ ಚ ಜಪೇನ್ನಿತ್ಯಂ ನ ಧಾರಯೇತ್॥[೧೦]

"ಶ್ರೀಗುರುವು ಶಾಸ್ತ್ರೋಕ್ತ ವಿಧಿಯಂತೆ ಪಂಚಾಮೃತಗಳಿಂದ, ಪಂಚಗವ್ಯಗಳಿಂದ ಅಕ್ಷಮಾಲೆಗೆ ಅಭಿಷೇಕ ಮಾಡಿ ೧೦೦೮ ಸಲ ಪಂಚಾಕ್ಷರ ಮಂತ್ರವನ್ನು ಜಪಿಸಬೇಕು. ಅನಂತರ ಶಿವಧ್ಯಾನ ಮಾಡಿ ಶಿಷ್ಯನಿಗೆ ಕೊಡಬೇಕು. ಶ್ರೀಗುರುವಿನ ಅನುಗ್ರಹದಿಂದ

---

೭. ಚಂ. ಆ. ಕ್ರಿ. ಪಾ. ಪಟಲ ೭, ಶ್ಲೋಕ ಸಂಖ್ಯೆ ೧೪
೮. ಚಂ. ಆ. ಕ್ರಿ. ಪಾ. ಪಟಲ ೭, ಶ್ಲೋಕ ಸಂಖ್ಯೆ ೯-೧೦
೯. ಚಂ. ಆ. ಕ್ರಿ. ಪಾ. ಪಟಲ ೭, ಶ್ಲೋಕ ಸಂಖ್ಯೆ ೧೫
೧೦. ಸೂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೬೯-೭೦

ಲಭಿಸಿದ ಪರಿಶುದ್ಧವಾದ ಜಪಮಾಲೆಯನ್ನು ಶಿಷ್ಯನು ಪ್ರತಿನಿತ್ಯವೂ ಜಪಕ್ಕೆ ಉಪಯೋಗಿಸಬೇಕು. ಅದನ್ನೇ ಪಾರಮೇಶ್ವರಾಗಮದಲ್ಲಿ –

ಯಥಾಶಕ್ತ್ಯಥ ರುದ್ರಾಕ್ಷಾನ್ ಧಾರಯೇತ್ತಂ ಸ್ವಯಂ ಗುರುಃ।
ಸಂಪ್ರದಾಯಾನುಸಾರೇಣ ದೀಕ್ಷಾ ರುದ್ರಾಕ್ಷಭಸ್ಮನೋಃ॥[೧೧]

ಸ್ವತಃ ಗುರುವೇ ಶಕ್ತ್ಯಾನುಸಾರವಾಗಿ, ಸಂಪ್ರದಾಯಬದ್ಧವಾಗಿ, ರುದ್ರಾಕ್ಷಿ ದೀಕ್ಷೆಯನ್ನಿತ್ತು ಶಿಷ್ಯನಿಗೆ ರುದ್ರಾಕ್ಷಿಗಳನ್ನು ಅನುಗ್ರಹಿಸಬೇಕು ಎಂದು ತಿಳಿಸಿದೆ. ಇದೇ ಅಭಿಪ್ರಾಯವನ್ನು ಶ್ರೀ ಚೆನ್ನಬಸವಣ್ಣನವರು–

ಅಯ್ಯಾ, ಕ್ರಿಯಾ ________________
ಚಿದ್ರುದ್ರಾಕ್ಷಿಯ ಧರಿಸಿ ಮಂತ್ರಧ್ಯಾನವ ಮಾಡಬೇಕಾದ ನಿಮಿತ್ತ,
ಪ್ರಥಮದಲ್ಲಿ ರುದ್ರಾಕ್ಷಮಣಿಗಳ ಕ್ರಮವ ಮಾಡದೆ,
ಅವರು ಹೇಳಿದಂತೆ ಕ್ರಯವ ಕೊಟ್ಟು ಮುಖಭಿನ್ನವಾದುದನುಳಿದು
ಸ್ವಚ್ಛವಾದ ರುದ್ರಾಕ್ಷಿಗಳ ಶ್ರಿ ಗುರುಲಿಂಗಜಂಗಮದ ಸನ್ನಿಧಿಗೆ ತಂದು
ವೃತ್ತಸ್ಥಾನದ ಪರಿಯಂತರವು ಧೂಳಪಾದೋದಕವ ಮಾಡಿ,
ಆ ರುದ್ರಾಕ್ಷಿಯ ಪೂರ್ವಾಶ್ರಯವ ಕಳೆದು,
ಲಿಂಗಧಾರಕಭಕ್ತರಿಂದ ಗುರುಪಾದೋದಕ ಮೊದಲಾಗಿ
ಶಿವಪಂಚಾಮೃತದಿಂದ ಇಪ್ಪತ್ತೊಂದು ಪೂಜೆಯ ಮಾಡಿಸಿ
ಆಮೇಲೆ ಶ್ರೀಗುರುಲಿಂಗಜಂಗಮದ ಪಾದಪೂಜೆಗೆ ಧರಿಸಿ,
ಆಮೇಲೆ ಲಿಂಗಜಂಗಮಕ್ಕೆ ಸಮರ್ಪಿಸಿ, ಅವರಿಂದ ದಯಚಿತ್ತವ ಪಡೆದು,
ಶರಣುಹೊಕ್ಕು ಮಹಾಪ್ರಸಾದವೆಂದು ಬೆಸಗೊಂಡು,[೧೨]
ಆ ಕರುಣಾಕಟಾಕ್ಷ ಮಾಲೆಗಳ ____

ಎಂಬುದಾಗಿ ನೂತನ ರುದ್ರಾಕ್ಷಗಳನ್ನು ತಂದು ಗುರುಲಿಂಗ ಜಂಗಮದ ಪಾದೋದಕದಿಂದ ಪರಿಶುದ್ಧಗೊಳಿಸಬೇಕೆಂದು ತಿಳಿಸಿರುವರು.

ಒಟ್ಟಿನಲ್ಲಿ ಹೊಳಪುಳ್ಳ, ತಾಮ್ರವರ್ಣದ, ಸ್ವಚ್ಛ, ಸದೃಢ, ನೆಲ್ಲಿಕಾಯಿಗಾತ್ರದ, ವಿಶಾಲ, ರೋಗರಹಿತ ಹಾಗೂ ಭೇದಯುಕ್ತವಾದ ರುದ್ರಾಕ್ಷಿಗಳನ್ನೇ ಧರಿಸಬೇಕು. ಇವು ಇನ್ನೊಬ್ಬರಿಂದ ಧರಿಸಲ್ಪಟ್ಟುವುಗಳಾಗಿರಬಾರದು. ಇಂತಹ ರುದ್ರಾಕ್ಷಿಗಳನ್ನು ಗುರುಲಿಂಗ ಜಂಗಮರ ಪಾದೋದಕದಿಂದ ಪರಿಶುದ್ಧಗೊಳಿಸಿದಾಗ ಮಾತ್ರ ಅವು ಧರಿಸಲರ್ಹವಾಗುತ್ತವೆ.

---

೧೧. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೨೪

೧೨. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೯೨೦, ಪುಟ ೨೮೪

ರುದ್ರಾಕ್ಷದ ಮುಖಗಳು :

ರುದ್ರಾಕ್ಷಗಳ ಮೇಲೆ ನೈಸರ್ಗಿಕವಾಗಿ ಉಂಟಾಗಿರುವ ರೇಖೆಗಳನ್ನೇ ರುದ್ರಾಕ್ಷ ಮುಖಗಳೆಂದು ಕರೆಯಲಾಗುತ್ತದೆ.ಇವು ಒಂದರಿಂದ ಹದಿನಾಲ್ಕರವರೆಗೆ ಇವೆ. ಚಂದ್ರಜ್ಞಾನಾಗಮದಲ್ಲಿ ಎಲ್ಲ ಮುಖದ ರುದ್ರಾಕ್ಷಿಗಳ ಸ್ವರೂಪ, ಅವುಗಳ ಮೂಲದೇವತೆ ಹಾಗೂ ಅವುಗಳ ಮಹಿಮೆಯನ್ನು ಪ್ರತಿಪಾದಿಸಲಾಗಿದೆ.[೧೩]

ಏಕವಕ್ತ್ರಂತು ರುದ್ರಾಕ್ಷಂ ಪರತತ್ತ್ವಸ್ವರೂಪಕಮ್ ।
ತದ್ಧಾರಣಾತ್ ಪರೇ ತತ್ತ್ವೇ ಲೀಯತೇ ವಿಜಿತೇಂದ್ರಿಯಃ
ದ್ವಿವಕ್ತ್ರಂ ಚೈವ ರುದ್ರಾಕ್ಷಮರ್ಧನಾರೀಶ್ವರಾತ್ಮಕಮ್ ।
ಧಾರಣಾದರ್ಧನಾರೀಶಃ ಪ್ರೀಯತೇ ತಸ್ಯ ನಿತ್ಯಶಃ॥
ತ್ರಿವಕ್ತ್ರಮನಲಃ ಸಾಕ್ಷಾತ್ ಸ್ತ್ರೀಹತ್ಯಾಂ ದಹತಿ ಕ್ಷಣಾತ್ ।
ತ್ರಿಮುಖಂ ಚೈವ ರುದ್ರಾಕ್ಷಮಗ್ನಿತ್ರಯಮುದಾಹೃತಮ್ ॥
ತದ್ಧಾರಣೇನ ಹುತಭುಕ್ ತುಷ್ಯತಿ ಸ್ಫುಟಕಾಮದಃ
ಚತುರ್ಮುಖಂ ತು ರುದ್ರಾಕ್ಷಂ ಬ್ರಹ್ಮರೂಪಮುದಾಹೃತಮ್ ।
ಪಂಚವಕ್ತ್ರಂ ತು ರುದ್ರಾಕ್ಷಂ ಪಂಚಬ್ರಹ್ಮಸ್ವರೂಪಕಮ್
ಪಂಚವಕ್ತ್ರಂ ಸ್ವಯಂ ಬ್ರಹ್ಮ ಬ್ರಹ್ಮಹತ್ಯಾಂ ವ್ಯಪೋಹತಿ ।
ತಸ್ಯ ಧಾರಣಮಾತ್ರೇಣ ಸಂತುಷ್ಯತಿ ಸದಾಶಿವಃ
ಷಡ್ವಕ್ತ್ರಂ ತು ರುದ್ರಾಕ್ಷಂ ಕಾರ್ತಿಕೇಯಾಧಿದೈವತಮ್ ।
ವಿನಾಯಕಾಧಿದೈವಂ ಚ ದತ್ತೇವಿಘ್ನಂ ಶ್ರಿಯಂ ವರಾನ್
ಸಪ್ತವಕ್ತ್ರಂತು ರುದ್ರಾಕ್ಷಂ ಸಪ್ತಮಾತ್ರಧಿದೈವತಮ್ ।
ತದ್ಧಾರಣೇನ ಸುಪ್ರೀತಾ ಜಯಂ ದದತಿ ಮಾತರಃ
ಅಷ್ಟವಕ್ತ್ರಂ ತು ರುದ್ರಾಕ್ಷಂ ದಿಗಧೀಶಾಧಿದೈವತಮ್ ।
ವಸ್ವಷ್ಟಕಪ್ರಿಯಂ ಚೈವ ಗಂಗಾಪ್ರೀತಿಕರಂ ಶುಭಮ್ ॥
ತದ್ಧಾರಣಾದಿಮೇ ಪ್ರೀತಾ ದದತೇ ತಸ್ಯ ವಾಂಛಿತಮ್
ನವವಕ್ತ್ರಂ ತು ರುದ್ರಾಕ್ಷಂ ನವಶಕ್ತ್ಯಧಿದೈವತಮ್ ।
ತಸ್ಯ ಧಾರಣಮಾತ್ರೇಣ ಪ್ರೀಯಂತೇ ನವಶಕ್ತಯಃ
ದಶವಕ್ತ್ರಂತು ರುದ್ರಾಕ್ಷಂ ಯಮದೈವತಮುದಾಹೃತಮ್ ।
ತಥಾಸ್ಯ ಪ್ರೀತಿಜನಕಂ ಧಾರಣೇ ನಾತ್ರ ಸಂಶಯಃ
ಏಕಾದಶಮುಖಂ ಚಾಕ್ಷಂ ರುದ್ರೈಕಾದಶದೈವತಮ್ ।
ತದಿಂದ್ರದೈವತಂ ಪ್ರೋಕ್ತಂ ಸದಾ ಸೌಭಾಗ್ಯವರ್ಧಮ್
ರುದ್ರಾಕ್ಷಂ ದ್ವಾದಶಮುಖಂ ಮಹಾವಿಷ್ಣುಸ್ವರೂಪಕಮ್।
ದ್ವಾದಶಾದಿತ್ಯದೈವಂ ಚ ದೇವತಾಪ್ರೀತಿವರ್ಧನಮ್
ತ್ರಯೋದಶಮುಖಂ ಚಾಕ್ಷಂ ಕಾಮದಂ ಶುದ್ಧಿದಂ ಶುಭಮ್ ।

---

೧೩. ಚಂ. ಆ. ಕ್ರಿ. ಪಾ. ಪಟಲ ೭, ಶ್ಲೋಕ ಸಂಖ್ಯೆ ೨೫–೩೯

ತಸ್ಯ ಧಾರಣಮಾತ್ರೇಣ ಕಾಮದೇವಃ ಪ್ರಸೀದತಿ
ಚತುರ್ದಶಮುಖಂ ಚಾಕ್ಷಂ ರುದ್ರನೇತ್ರಸಮದ್ಭವಮ್ ।
ಸರ್ವವ್ಯಾಧಿಹರಂ ಚೈವ ಸದಾಽರೋಗ್ಯಮವಾಪ್ನುಯಾತ್
ತನ್ಮುಖಂ ರುದ್ರಮಿತ್ಯಾಹುಸ್ತದಿಂದುಃ ಸರ್ವದೇವತಾಃ ।
ರುದ್ರಾಕ್ಷದಾರಣಾತ್ ಸದ್ಯಃ ಸರ್ವಪಾಪ್ಯೈಃ ಪ್ರಮುಚ್ಯತೇ॥

ಅರ್ಥಾತ್ ಒಂದು ಮುಖದ ರುದ್ರಾಕ್ಷಿಯು ಪರಶಿವಸ್ವರೂಪವಾದುದು ಇದರ ಧಾರಣೆಯಿಂದ ಇಂದ್ರಿಯ ನಿಗ್ರಹವಾಗಿ ಕೊನೆಗೆ ಶಿವಸಾಯುಜ್ಯವು ಪ್ರಾಪ್ತಿಯಾಗಿ ಪರತತ್ವದಲ್ಲಿ ಲೀನನಾಗುತ್ತಾನೆ. ಎರಡು ಮುಖದ ರುದ್ರಾಕ್ಷವು ಅರ್ಧನಾರೀಶ್ವರ ಸ್ವರೂಪವಾಗಿದ್ದು ಇದರ ಧಾರಣೆಯಿಂದ ಅರ್ಧನಾರೀಶ್ವರನ ಕೃಪೆಯಾಗುವುದು ಹಾಗೂ ಗೋಹತ್ಯೆ ಪಾಪವು ನಿವಾರಣೆಯಾಗುವುದು. ಮೂರು ಮುಖದ ರುದ್ರಾಕ್ಷವು ಸಾಕ್ಷಾತ್ ಅಗ್ನಿಯ ಸ್ವರೂಪವಾದುದು ಇದನ್ನು ಧರಿಸುವದರಿಂದ ಅಗ್ನಿದೇವತೆಯು ಪ್ರಸನ್ನನಾಗುವನು ಅಲ್ಲದೆ ಸ್ತ್ರೀಹತ್ಯೆ ದೋಷವು ನಿವಾರಣೆಯಾಗುವದು ಹಾಗೂ ಸಕಲ ವಿದ್ಯೆಗಳ ಜ್ಞಾನವು ವರ್ಧಿಸುತ್ತದೆ. ನಾಲ್ಕು ಮುಖದ ರುದ್ರಾಕ್ಷವು ಚತುರ್ಮುಖನಾದ ಬ್ರಹ್ಮಸ್ವರೂಪವಾದುದು ಇದರ ದರ್ಶನ ಮತ್ತು ಧಾರಣೆಗಳಿಂದ ಧರ್ಮ, ಅರ್ಥ ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳು ಪ್ರಾಪ್ತಿಯಾಗುತ್ತವೆ. ಐದು ಮುಖದ ರುದ್ರಾಕ್ಷವು ಪಂಚಮುಖವುಳ್ಳ ಸದಾಶಿವನ ಸ್ವರೂಪವಾದುದು ಇದರ ಧಾರಣೆಯಿಂದ ಅಭಕ್ಷ್ಯ ಭಕ್ಷಣದಿಂದ ಉಂಟಾದ ಪಾಪವು ದೂರಾಗುವುದು ಮತ್ತು ಸಕಲ ಮನೋರಥಗಳು ನೆರವೇರುವುದಲ್ಲದೆ ಶಿವಸಾಯುಜ್ಯವು ಉಂಟಾಗುವುದು. ಆರು ಮುಖದ ರುದ್ರಾಕ್ಷವು ಷಣ್ಮುಖನ ಸ್ವರೂಪವಾಗಿದ್ದು ಇದರ ಧಾರಣೆಯಿಂದ ಅವಿಘ್ನವು ಹಾಗೂ ಸಂಪತ್ತು ಪ್ರಾಪ್ತವಾಗುತ್ತದೆ. ಏಳು ಮುಖದ ರುದ್ರಾಕ್ಷಿಯು ಬ್ರಾಹ್ಮಿ ಮಾಹೇಶ್ವರಿ ಮೊದಲಾದ ಸಪ್ತ ಮಾತೃಕೆಯರ ಸ್ವರೂಪವಾಗಿದ್ದು ಇದರ ಧಾರಣೆಯಿಂದ ಧನಸಂಪತ್ತು, ಜ್ಞಾನಸಂಪತ್ತು ಹಾಗೂ ಜಯ ಲಭಿಸುವುದು. ಎಂಟು ಮುಖದ ರುದ್ರಾಕ್ಷವು ಅಷ್ಟ ದಿಕ್ಪಾಲಕರ ಸ್ವರೂಪವಾದುದು ಇದರ ಧಾರಣೆಯಿಂದ ಆಯುಷ್ಯವೃದ್ಧಿ, ಶಿವಸಾಯುಜ್ಯ ಮತ್ತು ಗಂಗಾ ಅನುಗ್ರಹ ದೊರೆಯುವುದು. ಒಂಬತ್ತು ಮುಖದ ರುದ್ರಾಕ್ಷವು ನವಶಕ್ತಿಯರ ಸ್ವರೂಪವಾದುದು ಇದರ ಧಾರಣೆಯಿಂದ ಅನಂತ ಪಾಪಗಳ ನಿವಾರಣೆಯಾಗಿ ಧರಿಸಿದವನು ಸರ್ವೇಶ್ವರನಾಗುವನು. ಹತ್ತು ಮುಖದ ರುದ್ರಾಕ್ಷವು ಯಮದೇವನ ಸ್ವರೂಪವಾಗಿದ್ದು ಇದರ ಧಾರಣೆಯಿಂದ ಗ್ರಹ, ಯಕ್ಷ, ಪಿಶಾಚ ಮುಂತಾದವುಗಳ ಪೀಡೆಯು ತೊಲಗಿ ಮನೋರಥಗಳು ಈಡೇರುತ್ತವೆ. ಹನ್ನೊಂದು ಮುಖದ ರುದ್ರಾಕ್ಷವು ಏಕಾದಶ ರುದ್ರರ ಸ್ವರೂಪವಾಗಿದ್ದು ಈ ರುದ್ರಾಕ್ಷದ ಧಾರಣೆಯಿಂದ ವಿಜಯ ಮತ್ತು ಸೌಭಾಗ್ಯಗಳು ಪ್ರಾಪ್ತವಾಗುತ್ತವೆ. ಹನ್ನೆರಡು ಮುಖದ ರುದ್ರಾಕ್ಷಿಯು ದ್ವಾದಶ ಸೂರ್ಯರ ಮತ್ತು ವಿಷ್ಣುವಿನ ಸ್ವರೂಪವಾದುದು ಇದರ ಧಾರಣೆಯಿಂದ ದೇವತೆಗಳ ಸಂಪ್ರೀತಿ ಪ್ರಾಪ್ತವಾಗುವದು. ಹದಿಮೂರು ಮುಖದ ರುದ್ರಾಕ್ಷವು ಕಾಮದೇವನ ಸ್ವರೂಪವಾಗಿದ್ದು ಇದರ ಧಾರಣೆಯಿಂದ ಕಾಮದೇವ ಪ್ರಸನ್ನನಾಗಿ ಅನಂತ ಮಂಗಲಗಳನ್ನು

ಭೋಗಗಳನ್ನು ನೀಡುವನು. ಹದಿನಾಲ್ಕು ಮುಖದ ರುದ್ರಾಕ್ಷವು ಪರಶಿವಸ್ವರೂಪದ್ದಾಗಿದ್ದು ಇದರ ಧಾರಣೆಯಿಂದ ಸಮಸ್ತರೋಗಗಳು ಮತ್ತು ಸಕಲ ದುರಿತಗಳು ದೂರಾಗಿ ಸರ್ವ ಸಿದ್ಧಿಗಳುಂಟಾಗುತ್ತವೆ. ಈ ರೀತಿಯಾಗಿ ವಿವಿಧ ಮುಖಗಳ ರುದ್ರಾಕ್ಷಿಗಳ ಸ್ವರೂಪ ಹಾಗೂ ಮಹಿಮೆಯನ್ನು ಚಂದ್ರಜ್ಞಾನಾಗಮದಲ್ಲಿ ವಿವರಿಸಲಾಗಿದೆ.

ಇನ್ನು ಯಾವ ಯಾವ ಮುಖದ ರುದ್ರಾಕ್ಷಗಳನ್ನು ಯಾವ ಸ್ಥಾನದಲ್ಲಿ ಧರಿಸಬೇಕು ಎಂಬ ವಿಷಯವನ್ನು ಪ್ರತಿಪಾದಿಸುತ್ತ ಆದಯ್ಯನವರು –

ಏಕಮುಖದ ರುದ್ರಾಕ್ಷಿಯನೊಂದನೇ ಶಿಖಿಯಲ್ಲಿ ಧರಿಸುವುದಯ್ಯಾ.
ದ್ವಿತ್ರಿದ್ವಾಶಮುಖದ ಮೂರು ಮಣಿಯ ಮೂರ್ದ್ನಿಯಲ್ಲಿ ಧರಿಸುವುದಯ್ಯಾ.
ಏಕಾದಶಮುಖದ ಮೂವತ್ತಾರು ಮಣಿಯ ಶಿರವ ಬಳಸಿ ಧರಿಸುವುದಯ್ಯಾ.
ಐದು, ಏಳು, ಹತ್ತುಮುಖದ ರುದ್ರಾಕ್ಷಿಯ
ಒಂದೊಂದು ದ್ವಿಕರ್ಣದಲ್ಲಿ ಧರಿಸುವುದಯ್ಯಾ
ಷಡಾಷ್ಟಮುಖದ ದ್ವಾತ್ರಿಂಶತ್ ರುದ್ರಾಕ್ಷಿಯ ಕಂಠದಲ್ಲಿ ಧರಿಸುವುದಯ್ಯಾ.
ಚತುರ್ಮುಖದ ಪಂಚಾಶತ್ ರುದ್ರಾಕ್ಷಿಯ ಉರಮಾಲೆಯಾಗಿ ಧರಿಸುವುದಯ್ಯಾ
ತ್ರಿದಶಮುಖದ ದ್ವಾತ್ರಿಂಶ ರುದ್ರಾಕ್ಷಿಯ ದ್ವಿಬಾಹುಗಳಲ್ಲಿ ಧರಿಸುವುದಯ್ಯಾ
ನವ ಮುಖದ ಚತುರ್ವಿಂಶ ರುದ್ರಾಕ್ಷಿಯ ದ್ವಿಮಣಿಬಂಧದಲ್ಲಿ ಧರಿಸುವುದಯ್ಯಾ.
ಚತುರ್ದಶಮುಖದ ರುದ್ರಾಕ್ಷಿಯಅಷ್ಟೋತ್ತರಶತವ ಉಪವೀತದಂತೆ ಧರಿಸುವದಯ್ಯಾ.
ಇಂತರಿದು ಧರಿಸಿದ ಶಿವಮಾಹೇಶ್ವರನ ಹೆಜ್ಜೆ ಹೆಜ್ಜೆಗೆ
ಅಶ್ವಮೇಧ ಯಾಗದ ಫಲ ತಪ್ಪದಯ್ಯ ಸೌರಾಷ್ಟ್ರ ಸೋಮೇಶ್ವರ.[೧೪]

ಹೀಗೆ ಯಾವ ಮುಖದ ರುದ್ರಾಕ್ಷಗಳನ್ನು ಎಲ್ಲಿ ಧರಿಸಬೇಕೆಂಬುದರ ಬಗ್ಗೆ ಅಭಿಪ್ರಾಯವನ್ನು ಅಭಿವ್ಯಕ್ತಗೊಳಿಸಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಎಲ್ಲ ಮುಖಗಳ ರುದ್ರಾಕ್ಷಗಳು ದೊರೆಯುವುದೇ ಇಲ್ಲ. ದೊರೆತರೂ ಅಷ್ಟೊಂದು ಸಂಖ್ಯೆಯಲ್ಲಿ ದೊರೆಯುವದಿಲ್ಲ ಮತ್ತು ಅವುಗಳ ಬೆಲೆಯೂ ಕೂಡ ಗಗನಚುಂಬಿಯಾದುದು. ಆದರೆ ಐದು ಮುಖದ ರುದ್ರಾಕ್ಷಗಳು ಗರಿಷ್ಠ ಪ್ರಮಾಣದಲ್ಲಿ ದೊರೆಯುವವು ಮತ್ತು ಅವುಗಳ ಬೆಲೆಯೂ ಸಾಮಾನ್ಯರಿಗೆ ಅನುಕೂಲವಾಗುವಷ್ಟು ಕಡಿಮೆಯಾದುದರಿಂದ ನೆಲ್ಲಿಕಾಯಿ ಗಾತ್ರದ ಐದು ಮುಖಗಳ ರುದ್ರಾಕ್ಷಗಳಲ್ಲಿಯೇ ಆಯಾ ಮುಖದ ರುದ್ರಾಕ್ಷಿಗಳ ಕಲ್ಪನೆಯನ್ನು ಮಾಡಿಕೊಂಡು ಆಯಾ ಅವಯವಗಳಲ್ಲಿ ಧರಿಸಿಕೊಳ್ಳಬಹುದು. ಹೀಗೆ ಇಷ್ಟಲಿಂಗ ಪೂಜೆಯಲ್ಲಿ ಐದು ಮುಖದ ರುದ್ರಾಕ್ಷಗಳನ್ನು ಧರಿಸಿಕೊಂಡರೂ ಪೂರ್ವೋಕ್ತವಾದ ಫಲಗಳು ಲಭಿಸುವವು.

ಎಲ್ಲ ಮುಖದ ರುದ್ರಾಕ್ಷಿಗಳಲ್ಲಿ ದೋಷನಿವಾರಣಾ ಸಾಮರ್ಥ್ಯವು ಮತ್ತು ಇಷ್ಟಾರ್ಥವನ್ನು ಈಡೇರಿಸುವ ಸಾಮರ್ಥ್ಯವು ಇರುವುದರಿಂದ ಯಾರು ಅತ್ಯಂತ ನಿಷ್ಠಾಪೂರ್ವಕವಾದ ಭಾವನೆಯಿಂದ ರುದ್ರಾಕ್ಷಿಗಳನ್ನು ಧರಿಸುವರೋ ಅವರು ಅಷ್ಟೇ ಶ್ರೇಷ್ಠಾತಿಶ್ರೇಷ್ಠವಾದ ಫಲವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಅಂತೆಯೇ

---

೧೪. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ. ೧, ವಚನ ಸಂಖ್ಯೆ ೮೪೭, ಪುಟ ೨೫೬

ಬಸವಣ್ಣನವರು ತಮ್ಮ ವಚನದಲ್ಲಿ –

“ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಪಾವನವು,
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಕಾರಣವು,
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಸಾಧನವು,
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ,
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವ ಪಾಪಕ್ಷಯವು.
ಅಯ್ಯಾ ನಿಮ್ಮ ಪಂಚವಕ್ತ್ರಂಗಳೇ ಪಂಚಮುಖದ ರುದ್ರಾಕ್ಷಿಗಳಾದವಾಗಿ,
ಅಯ್ಯಾ ಕೂಡಲಸಂಗಮದೇವಯ್ಯಾ
ಎನ್ನ ಮುಕ್ತಿಪಥಕ್ಕೆ ಶ್ರೀಮಹಾರುದ್ರಾಕ್ಷಿಯೇ ಸಾಧನವಯ್ಯಾ”[೧೫]

ಎಂದು ರುದ್ರಾಕ್ಷಿ ಪುರುಷಾರ್ಥಗಳಲ್ಲಿ ಕೊನೆಯದಾದ ಮೋಕ್ಷದ ಮಾರ್ಗಕ್ಕೆ ಸಾಧನವೆಂದು ತಿಳಿಸಿದ್ದಾರೆ.

ರುದ್ರಾಕ್ಷ ಧಾರಣವಿಧಿ

ಚಂದ್ರಜ್ಞಾನಾಗಮದಲ್ಲಿ[೧೬] ರುದ್ರಾಕ್ಷಗಳನ್ನು ಧರಿಸುವ ಸ್ಥಾನವನ್ನು ವಿವರಿಸುತ್ತ ಶಿಖೆಯಲ್ಲಿ ಒಂದು, ಶಿರದಲ್ಲಿ ಮೂವತ್ತು, ಕೊರಳಲ್ಲಿ ಮೂವತ್ತೆರಡು, ಎರಡು ತೋಳುಗಳಲ್ಲಿ ಹದಿನಾರು ಹದಿನಾರು, ಎರಡೂ ಮಣಿಬಂಧಗಳಲ್ಲಿ ಹನ್ನೆರಡು ಹನ್ನೆರಡು, ಎದೆಯಲ್ಲಿ ಐದುನೂರು ರುದ್ರಾಕ್ಷಿಗಳನ್ನು ಧರಿಸಲು ತಿಳಿಸಲಾಗಿದೆ. ಇದಲ್ಲದೆ ಕಂಠದಲ್ಲಿ ಎರಡು ಸರ ಮೂರು ಸರ ಐದು ಸರ, ಅಥವಾ ಏಳು ಸರಗಳನ್ನು ವಿಕಲ್ಪವಾಗಿ ಧರಿಸಿಕೊಳ್ಳಲು ತಿಳಿಸಲಾಗಿದೆ.

ವಚನಸಾಹಿತ್ಯದಲ್ಲೂ ಸಹ ರುದ್ರಾಕ್ಷಗಳನ್ನು ಧರಿಸುವ ಸ್ಥಾನ ಮತ್ತು ಸಂಖ್ಯೆಗಳನ್ನು ಇದೇ ರೀತಿಯಾಗಿ ವಿವರಿಸಲಾಗಿದೆ.

“ಹಸ್ತ ತೋಳು ಉರ ಕಂಠ ಕರ್ಣ ಮಸ್ತಕದಲ್ಲಿ
ರುದ್ರಾಕ್ಷಿಯ ಧರಿಸಿಪ್ಪ ಸದ್ಭಕ್ತನೆ ರುದ್ರನು ನೋಡಾ. ಅದೆಂತೆಂದಡೆ:
ಹಸ್ತೇ ಚೋರಸಿ ಕಂಠೇ ವಾ ಮಸ್ತಕೇ ವಾಪಿ ಧಾರಯೇತ್।
ಮುಚ್ಯತೇ ಸರ್ವಪಾಪೇಭ್ಯಃ ಸ ರುದ್ರೋ ನಾತ್ರ ಸಂಶಯಃ॥ ಇಂತೆಂದುದಾಗಿ,
ಸಮಸ್ತ ಪಾಪಂಗಳ ಕಳೆದು, ಕೂಡಲಸಂಗಯ್ಯ ತನ್ನಂತೆ ಮಾಡುವನು”[೧೭]

ಎಂದು ಬಸವಣ್ಣನವರು ರುದ್ರಾಕ್ಷಧಾರಣ ಮಾಡುವುದರಿಂದ ಸಕಲಪಾಪಗಳು ಕಳೆದು ಸಾಕ್ಷಾತ್ ಶಿವ ಸ್ವರೂಪನಾಗುವನೆಂದು ತಿಳಿಸಿದ್ದಾರೆ. ರುದ್ರಾಕ್ಷಧಾರಣೆಯನ್ನು ಕುರಿತು ತೋಂಟದ ಸಿದ್ಧಲಿಂಗಯತಿಗಳು –

---

೧೫. ಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೧, ವಚನ ಸಂಖ್ಯೆ ೯೮೩, ಪುಟ ೨೮೬
೧೬. ಚಂ. ಆ. ಕ್ರಿ. ಪಾ. ಪಟಲ ೭, ಶ್ಲೋಕ ಸಂಖ್ಯೆ ೧೮–೨೨
೧೭. ಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೧, ವಚನ ಸಂಖ್ಯೆ ೧೪೦೩, ಪುಟ ೩೮೮

ಪರಶಿವನ ಜ್ಞಾನಚಕ್ಷುವಿನಲ್ಲಿ ಉದಯವಾದ ರುದ್ರಾಕ್ಷೆಯ
ಹಸ್ತ ತೋಳು ಉರ ಕಂಠ ಕರ್ಣ ಮಸ್ತಕದಲ್ಲಿ
ಧರಿಸಿದ ಶಿವಶರಣನೇ ರುದ್ರನು.
ಆ ರುದ್ರಾಕ್ಷೆಯ ಜಪಿಸಿದಾತನೇ ಸದ್ಯೋನ್ಮುಕ್ತನು.ಇದು ಕಾರಣ,
ಅಜ ಹರ ಸುರ ಮನು ಮುನೀಶ್ವರರು
ಶ್ರೀವಿಭೂತಿ ರುದ್ರಾಕ್ಷೆಯನೆ ಧರಿಸಿ, ಶಿವಲಿಂಗಾರ್ಚನೆಯ ಮಾಡುತಿಪ್ಪರು;
ಪ್ರಮಥಗಣ ರುದ್ರಗಣ ಮುಖ್ಯವಾದ ಗಣಾಧೀಶ್ವರರು
ವಿಭೂತಿ ರುದ್ರಾಕ್ಷೆಯನೆ ಧರಿಸಿ,ಪ್ರಣವ ಪಂಚಾಕ್ಷರಿಯನೆ ಜಪಿಸಿ,
ಪ್ರಣವ ಸ್ವರೂಪಿಗಳಾಗುತ್ತಿಪ್ಪರು.
ನೋಡಿದವರು ಮುಟ್ಟಿದವರು ಧರಿಸಿದವರು ಜಪಿಸಿದವರೆಲ್ಲ
ಸಕಲ ಪ್ರಪಂಚವನಳಿದು ಪರಶಿವ ಸ್ವರೂಪರಪ್ಪುದು ತಪ್ಪದು ನೋಡ.
ಇದು ಕಾರಣ, ನಾನು ವಿಭೂತಿ ರುದ್ರಾಕ್ಷೆಯನೆ ಧರಿಸಿ,
ಶಿವಲಿಂಗಾರ್ಚನೆಯನೆ ಮಾಡಿ ಪ್ರಣವ ಪಂಚಾಕ್ಷರಿಯನೆ ಜಪಿಸುತ್ತಿದ್ದೆನಯ್ಯ,[೧೮]

ಅಜ, ಹರ, ಸುರ, ಮನು, ಮುನೀಶ್ವರರು, ಪ್ರಮಥಗಣ, ರುದ್ರಗಣ, ಗಣಾಧೀಶ್ವರರು, ಮೊದಲಾದವರೆಲ್ಲ ರುದ್ರಾಕ್ಷಿಯನ್ನು ಧರಿಸಿ ಪ್ರಣವ ಸ್ವರೂಪಿಗಳಾಗಿದ್ದಾರೆ. ಕಾರಣ ರುದ್ರಾಕ್ಷಿ ನೋಡಿದವರು, ಮುಟ್ಟಿದವರು, ಧರಿಸಿದವರು, ಜಪಿಸಿದವರೆಲ್ಲ ಪರಶಿವ ಸ್ವರೂಪರಾಗುವರೆಂದು ತಿಳಿಸಿದ್ದಾರೆ. ಈ ರುದ್ರಾಕ್ಷಧಾರಣೆಯ ಮಹಿಮೆಯನ್ನು ಉರಿಲಿಂಗಪೆದ್ದಿಗಳು ತಮ್ಮ ವಚನದಲ್ಲಿ ಸುಂದರ ಕಥಾ ಪ್ರಸಂಗದ ಮೂಲಕ ವರ್ಣಿಸಿರುವರು.

ಘನಕ್ಕೆ ಘನ ಮಹಿಮೆಯ ಪಡೆವರೆಲ್ಲರು ರುದ್ರಾಕ್ಷಿಯ ಧರಿಸಿಪ್ಪರು,
ಆ ಮನುಜರು ಮರ್ತ್ಯರಲ್ಲ ನೋಡಿರೆ.
ಮುನ್ನೊಬ್ಬ ವ್ಯಾಧನು ಶ್ವಾನನ ಕೊರಳಲ್ಲಿ ರುದ್ರಾಕ್ಷಿಯ ಕಟ್ಟಲು
ಆ ಶ್ವಾನವೂ ರುದ್ರಲೋಕಕ್ಕೆ ಐದಿತೆಂಬುದು ಪುರಾಣಸಿದ್ಧ ನೋಡಿರೆ।
ಅದು ಕಾರಣ, ಶಿಖೆಯಲ್ಲಿ ಒಂದು, ಶಿರದಲ್ಲಿ ಮೂವತ್ತಾರು
ಗಳದಲ್ಲಿ ಮೂವತ್ತೆರಡು, ಕರ್ಣದ್ವಯದಲ್ಲೆರಡು
ಹಾರದಲ್ಲಿ ನೂರೆಂಟು, ತೋಳಿನಲ್ಲಿ ಹದಿನಾರು
ಕರದಲ್ಲಿ ಹನ್ನೆರಡು, ಜಪದಲ್ಲಿ ಇಪ್ಪತ್ತೆಂಟು
ಈ ಕ್ರಮವರಿದು ರುದ್ರಾಕ್ಷಿಯ ಧರಿಸಿದಾತನೆ ರುದ್ರನು,
ಆತನೇ ಸದ್ಯೋನ್ಮುಕ್ತನು, ಆತನೇ ಇಹಲೋಕ ಪರಲೋಕ ಪೂಜ್ಯನು,[೧೯]

ಹೀಗೆ ರುದ್ರಾಕ್ಷಧಾರಣೆಯಿಂದ ಶ್ವಾನವೂ ರುದ್ರಲೋಕಕ್ಕೆ ಹೋಯಿತೆಂದು ತಿಳಿಸುತ್ತಾ ರುದ್ರಾಕ್ಷಿಯ ಧರಿಸಿದಾತನು ಸಾಕ್ಷಾತ್ ರುದ್ರನಾಗಿ, ಇಹಲೋಕ ಪರಲೋಕ ಪೂಜ್ಯನಾಗುವನು ಎಂದು ತಿಳಿಸಿದ್ದಾರೆ.

---

೧೮. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ. ೬, ವಚನ ಸಂಖ್ಯೆ ೧೯೫, ಪುಟ ೬೨
೧೯. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ. ೧, ವಚನ ಸಂಖ್ಯೆ ೧೩೭೮, ಪುಟ ೪೬೪

ರುದ್ರಾಕ್ಷಮಾಲೆ ತಯಾರಿಸುವ ಕ್ರಮ:

ರೇಷ್ಮೆಯ ಅಥವಾ ಹತ್ತಿಯ ಮೂರೆಳೆಯ ಸೂತ್ರದಲ್ಲಿ ರುದ್ರಾಕ್ಷಗಳನ್ನು ಮುಖಕ್ಕೆ ಮುಖ, ಬೆನ್ನಿಗೆ ಬೆನ್ನು ಹೊಂದಿಸಿ ಪೋಣಿಸಬೇಕು. ಮಣಿ–ಮಣಿಗಳ ನಡುವೆ ಗಂಟುಗಳನ್ನು ಹಾಕಬೇಕು. ಮಣಿ–ಮಣಿಗೆ ಪರಸ್ಪರ ಘರ್ಷಣೆಯಾಗದಂತೆ ಪೋಣಿಸಬೇಕು. ಮಣಿಗಳು ಪರಸ್ಪರ ಘರ್ಷಣೆಯಾದರೆ ಜಪದ ಫಲವು ನಾಶವಾಗುತ್ತದೆ. ಜಪಮಾಲೆಯ ಎರಡೂ ಎಳೆಗಳನ್ನು ಜೋಡಿಸಿ, ಎರಡರ ಮಧ್ಯದಲ್ಲಿ 'ಮೇರು' ಎಂಬ ಹೆಸರಿನ ತಲೆಮಣಿಯೊಂದನ್ನು ಇರಿಸಬೇಕು. ಪ್ರದಕ್ಷಿಣ ಪರಿಕ್ರಮದಂತೆ ಮೇರು ಮಣಿಯನ್ನು ಸುತ್ತಿ ಪುನಶ್ಚರಣ ಮಾಡಬೇಕು.[೨೦]

ರುದ್ರಾಕ್ಷಗಳ ಈ ಮಾಲೆಯನ್ನು ಹೆಣೆಯುವಾಗ ಅವುಗಳೊಂದಿಗೆ "ಮುಕ್ತಾಪ್ರವಾಲ ಸ್ಫಟಿಕರೌಪ್ಯ ವೈಡೂರ್ಯಕಾಂಚನ್ಯೈಃ ಧಾರಯೇದ್ಯಸ್ತು ರುದ್ರಾಕ್ಷನ್ ಸ ರುದ್ರೋ ನಾತ್ರ ಸಂಶಯಃ"[೨೧] ಎಂಬ ಚಂದ್ರಜ್ಞಾನಾಗಮೋಕ್ತಿಯಂತೆ ಹವಳ ಸ್ಫಟಿಕ ವೈಡೂರ್ಯ ಬೆಳ್ಳಿ ಅಥವಾ ಬಂಗಾರಗಳನ್ನು ಸೇರಿಸಿಯೇ ಧರಿಸಕೊಳ್ಳಬಹುದು. ಇಲ್ಲವೇ ರುದ್ರಾಕ್ಷಗಳನ್ನು ಮಾತ್ರ ಧರಿಸಬಹುದು.

ಈ ವಿಧವಾಗಿ ರುದ್ರಾಕ್ಷಗಳನ್ನು ಆಯಾ ಸ್ಥಾನದಲ್ಲಿ ಧರಿಸಿಕೊಂಡ ಸಾಧಕನು ಸದಾಚಾರ ಪಾರಾಯಣನಾಗಿಯೇ ಕಾಲ ಕಳೆಯುತ್ತಿರಬೇಕೆಂದು ಅಂಬಿಗರ ಚೌಡಯ್ಯನವರು–

> ಮಸ್ತಕದಲ್ಲಿ ರುದ್ರಾಕ್ಷಿಯಂ ಧರಿಸಿ ಅನ್ಯದೈವದ ಗುಡಿಯ ಹೋಗಲಾಗದು ಶರಣ,
> ಕರಣಂಗಗಳಲ್ಲಿ ರುದ್ರಾಕ್ಷಿಯಂ ಧರಿಸಿ
> ಹರನಿಂದೆ, ಗುರುನಿಂದೆಯ ಕೇಳಲಾಗದು ಶರಣ,
> ತೋಳುಗಳಲ್ಲಿ ರುದ್ರಾಕ್ಷಿಯಂ ಧರಿಸಿ ಪರಸತಿಯನಪ್ಪಲಾಗದು ಶರಣ.
> ಮುಂಗೈಯಲ್ಲಿ ರುದ್ರಾಕ್ಷಿಯಂ ಧರಿಸಿ ಅನ್ಯರಿಗೆ ಕೈ ಮುಗಿಯಲಾಗದು ಶರಣ.
> ಇದನರಿದು ಧರಿಸಿದಡೆ ಶ್ರೀ ರುದ್ರಾಕ್ಷಿಯಹುದು. ಅಂತಲ್ಲದಿರ್ದಡೆ
> (ಡ)ಂಬ ಹಗರಣವ ಹೊತ್ತು ಬಂದಂತೆ ಎಂದಾತನಂಬಿಗರ ಚೌಡಯ್ಯ [೨೨]

ಎಂಬುದಾಗಿ ಮಸ್ತಕ ಕಿವಿ, ತೋಳು, ಮುಂಗೈ ಮುಂತಾದ ಅವಯವಗಳಲ್ಲಿ ರುದ್ರಾಕ್ಷವನ್ನು ಧರಿಸುವ ಶಿವಭಕ್ತನು ಆಯಾ ಅವಯವಗಳಿಂದುಂಟಾಗುವ ದುರಾಚಾರಗಳಿಂದ ದೂರವಾಗಿರಬೇಕು ಎಂದು ಹೇಳಿದ್ದಾರೆ. ಕಾರಣ ಬಾಹ್ಯವಾಗಿ ರುದ್ರಾಕ್ಷಿ ಧರಿಸುವದು ಆಡಂಬರಕ್ಕಾಗಲೀ, ಪ್ರದರ್ಶನಕ್ಕಾಗಲೀ ಇರದೇ ಅಂತರಂಗದ ಅರಿವನ್ನು ಜಾಗೃತಗೊಳಿಸುವ ಸಾಧನವಾಗಬೇಕು. ಹೀಗೆ ಬಾಹ್ಯ ಮತ್ತು ಆಂತರಿಕವೆರಡರಿಂದಲೂ ಸಾಧಕನು ಪವಿತ್ರನಾಗಬೇಕೆಂದು ತಿಳಿಸಿದ್ದಾರೆ.

---

೨೦. ಸೂ.ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೬೩–೬೭.

೨೧. ಚಂ. ಆ. ಕ್ರಿ. ಪಾ. ಪಟಲ ೭, ಶ್ಲೋಕ ಸಂಖ್ಯೆ ೪೩

೨೨. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ. ೧, ವಚನ ಸಂಖ್ಯೆ ೨೨೬, ಪುಟ ೭೩

ರುದ್ರಾಕ್ಷಧಾರಣೆಯ ಫಲ:

ಶ್ರೋತ್ರಿಯಾಯ ಸವತ್ಸಾಯಾ ಧೇನೋರ್ದಾನೇನ ಯತ್ಫಲಮ್।
ತತ್ಫಲಂ ಲಕ್ಷಗುಣಿತಂ ದರ್ಶನಾಲ್ಲಭತೇ ನರಃ॥
ಪುನಸ್ತು ಕೋಟಿಗುಣಿತಂ ಫಲಂ ತತ್‌ಸ್ಪರ್ಶನಾದ್ ಭ್ಬವೇತ್।
ತಸ್ಯ ಕೋಟಿಶತಂ ಪುಣ್ಯಂ ಲಭತೇ ಧಾರಣಾನ್ನರಃ॥ [23]

ಎಂದು ರುದ್ರಾಕ್ಷಧಾರಣೆಯಿಂದ ಉಂಟಾಗುವ ಪುಣ್ಯಪ್ರಾಪ್ತಿಯನ್ನು ವರ್ಣಿಸುತ್ತ – ಬ್ರಹ್ಮಜ್ಞಾನಿಯಾದವನಿಗೆ ಕರು ಸಮೇತವಾದ ಗೋವಿನ ದಾನ ಮಾಡುವುದರಿಂದ ಯಾವ ಫಲವು ದೊರೆಯುವುದೋ ಅದರ ಲಕ್ಷ ಪಟ್ಟು ಫಲವು ರುದ್ರಾಕ್ಷ ದರ್ಶನದಿಂದ ದೊರೆಯುವುದು. ಮತ್ತೆ ಅದರ ಲಕ್ಷ ಕೋಟಿ ಪಟ್ಟು ಫಲವು ರುದ್ರಾಕ್ಷ ಸ್ಪರ್ಶದಿಂದ, ಹಾಗೂ ಅದರ ನೂರುಕೋಟಿ ಪಟ್ಟು ಪುಣ್ಯವು ರುದ್ರಾಕ್ಷ ಧಾರಣೆಯಿಂದ ಪ್ರಾಪ್ತವಾಗುವುದಲ್ಲದೇ ಮಹಾಪಾತಕಗಳ ಮತ್ತು ಪಾಪಕೃತ್ಯಗಳ ದೋಷವು ಪರಿಹಾರವಾಗಿ ಅನಂತಪುಣ್ಯದ ಪ್ರಾಪ್ತಿಯಾಗುವುದು ಎಂದು ತಿಳಿಸಲಾಗಿದೆ. ಕಾರಣ ರುದ್ರನ ನೇತ್ರದಿಂದ ಉತ್ಪನ್ನವಾದ ರುದ್ರಾಕ್ಷಗಳ ಧಾರಣೆಯಿಂದ ಸಾಧಕನಿಗೆ ರುದ್ರನ ಕರುಣೆಯು ಪ್ರಾಪ್ತವಾಗಿ ಸ್ವಸ್ವರೂಪದ ಅಂದರೆ ನಿಗೂಢವಾದ ಆತ್ಮಸ್ವರೂಪದ ಜ್ಞಾನವುಂಟಾಗಿ ಆ ಆತ್ಮರೂಪವಾದ ರುದ್ರನನ್ನೇ ಸರ್ವತ್ರ ನೋಡುವ ರುದ್ರದೃಷ್ಟಿಯು ಪ್ರಾಪ್ತವಾಗುತ್ತದೆ. ಹೀಗೆ ತಾತ್ವಿಕ ರುದ್ರಾಕ್ಷಿಯ ಪ್ರತೀಕವಾದ ಭೌತಿಕ ರುದ್ರಾಕ್ಷಗಳನ್ನು ಧರಿಸಿದಾಗ ಮಹಾಪಾಪಗಳ ನಾಶವೂ, ಕೋಟಿ ಗೋದಾನಗಳ ಪುಣ್ಯಪ್ರಾಪ್ತಿಯೂ ಕೊನೆಗೆ ಮೋಕ್ಷಲಾಭವೂ ಉಂಟಾಗುವುದು. ಅಂತೆಯೇ ಶ್ರೀ ಬಸವಣ್ಣನವರು ಈ ರುದ್ರಾಕ್ಷಧಾರಣೆಯ ಫಲವನ್ನು ಕುರಿತು.

ಅಯ್ಯಾ, ರುದ್ರಾಕ್ಷಿಯಿಂದ ಹರಿದೆನು ಭವಪಾಶಂಗಳ,
ಅಯ್ಯಾ, ರುದ್ರಾಕ್ಷಿಯಿಂದ ಮುರಿದೆನು ತನುಗುಣಾದಿಗಳ,
ಅಯ್ಯಾ, ರುದ್ರಾಕ್ಷಿಯಿಂದ ಒರೆಸಿದೆನು ಮಹಾಮಾಯೆಯ,
ಅಯ್ಯಾ, ರುದ್ರಾಕ್ಷಿಯಿಂದ ಕಳೆದೆನು ಪಂಚಮಹಾಪಾತಕವ.
ಅಯ್ಯಾ ಕೂಡಲಸಂಗಮದೇವಾ,
ಶ್ರೀಮಹಾರುದ್ರಾಕ್ಷಿಯಿಂದ ಗೆಲಿದೆನಯ್ಯಾ ಸಕಲದುರಿತಂಗಳನು॥ [24]

ಈ ವಿಧವಾಗಿ ರುದ್ರಾಕ್ಷ ಮಹಿಮೆಯನ್ನು ಕೊಂಡಾಡಿ ಅದರ ಧಾರಣೆಯಿಂದ ದುರಿತಗಳ ನಿವೃತ್ತಿ, ಪುಣ್ಯ ಮತ್ತು ಮೋಕ್ಷದಪ್ರಾಪ್ತಿಯೆಂಬುದನ್ನು ತಿಳಿಸಿದ್ದಾರೆ.

ರುದ್ರಾಕ್ಷಧಾರಣೆಯಿಂದ ವೈಜ್ಞಾನಿಕ ಲಾಭ

ಆಯುರ್ವೇದ ಶಾಸ್ತ್ರದಲ್ಲಿ ಈ ರುದ್ರಾಕ್ಷವನ್ನು ವಿವಿಧ ವನಸ್ಪತಿಗಳೊಂದಿಗೆ ಉಪಯೋಗಿಸುವುದರಿಂದ ಅನೇಕ ರೋಗಗಳ ನಿವಾರಣೆಯಾಗುವವು ಎಂಬುದಾಗಿ ಆಯುರ್ವೇದ ವಿಶಾರದರಾದ ಶ್ರೀ ಗುರುದೇವ ಶಿವಾಚಾರ್ಯರು ಪ್ರತಿಪಾದಿಸಿದ್ದಾರೆ.

೨೩. ಚಂ. ಆ. ಕ್ರಿ. ಪಾ. ಪಟಲ ೭, ಶ್ಲೋಕ ಸಂಖ್ಯೆ ೬,೭
೨೪. ಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೧, ವಚನ ಸಂಖ್ಯೆ ೧೦೦೫, ಪುಟ ೨೭೦

ರುದ್ರಾಕ್ಷವನ್ನು ತೊಳೆದ ನೀರಿನಲ್ಲಿ ಉಪ್ಪು ಮಿಶ್ರಣ ಮಾಡಿ ನೀರಿನಿಂದ ಬಾಯಿಮುಕ್ಕಳಿಸುವುದರಿಂದ ಮುಖಶುದ್ಧಿಯೂ, ರುದ್ರಾಕ್ಷಿದಿಂದ ತೇಯಲ್ಪಟ್ಟ ಗಂಧದಲ್ಲಿ ಜೇನುತುಪ್ಪ ಸೇರಿಸಿ ಅದನ್ನು ಸೇವಿಸುವುದರಿಂದ ಕಫಜ್ವರ ಬಾಧೆಯ ನಿವಾರಣೆಯೂ ಆಗುವುದು ಎಂದು ತಿಳಿಸಿದ್ದಾರೆ.[೨೫]

ಶ್ರೀ ಶಂಕರಗೌಡ ಬಿರಾದಾರ್ ಅವರು ಬರೆದ 'ರುದ್ರಾಕ್ಷಿ' ಎಂಬ ಗ್ರಂಥದಲ್ಲಿ ಚರ್ಮರೋಗ, ತಲೆನೋವು, ಮಡಿಬಕ್ಕೆಗಳು, ಮುಖದಲ್ಲಿಯ ಕಲೆಗಳು, ಶರೀರದ ದುರ್ಗಂಧ, ಕೂದಲು ಉದುರುವಿಕೆ, ಕೂದಲು ಬಿಳುಪಾಗುವಿಕೆ ಮುಂತಾದ ಅನೇಕ ರೋಗಗಳ ಉಪಶಮನಕ್ಕೆ ರುದ್ರಾಕ್ಷ ಸಂಬಂಧವಾದ ಅನೇಕ ಔಷಧಗಳನ್ನು ಪ್ರತಿಪಾದಿಸಿರುವರು.[೨೬] ಇದಲ್ಲದೆ ಆಧುನಿಕ ವಿಜ್ಞಾನಿಗಳು ಕೂಡ ರುದ್ರಾಕ್ಷ ಧಾರಣೆಯಿಂದ ಹೃದಯ ದೌರ್ಬಲ್ಯತೆಯನ್ನು, ರಕ್ತದ ಒತ್ತಡವನ್ನು ತಡೆಗಟ್ಟ ಬಹುದೆಂಬುದನ್ನು ಸಂಶೋಧಿಸಿರುವರು. ಇದರಿಂದ ರುದ್ರಾಕ್ಷವು ಕೇವಲ ಒಂದು ಧರ್ಮದ ಚಿಹ್ನವಾಗಿರದೆ ಅನೇಕ ರೋಗಗಳ ನಿವಾರಣೆಗೆ ಉತ್ತಮ ಔಷಧಿ ಕೂಡ ಆಗಿದೆ ಎಂಬುದು ತಿಳಿದುಬರುತ್ತದೆ. ಕಾರಣ ಬಾಹ್ಯವಾಗಿ ರುದ್ರಾಕ್ಷಿ ಧರಿಸುವದು ಆಡಂಬರಕ್ಕಾಗಲೀ, ಪ್ರದರ್ಶನಕ್ಕಾಗಲೀ ಇರದೇ ಔಷಧಿ ಸತ್ವವುಳ್ಳದ್ದು ಹಾಗೂ ಅಂತರಂಗದ ಅರಿವನ್ನು ಜಾಗೃತಗೊಳಿಸುವ ಸಾಧನವೂ ಆಗಿದೆ.

ಒಟ್ಟಿನಲ್ಲಿ ರುದ್ರಾಕ್ಷಗಳ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ತಿಳಿದುಬರುವ ವಿಷಯವೇನೆಂದರೆ ರುದ್ರಾಕ್ಷದ ಉತ್ಪತ್ತಿ, ರುದ್ರಾಕ್ಷಿಗಳ ಮಹಿಮೆ, ರುದ್ರಾಕ್ಷಗಳನ್ನು ಶರೀರದ ಯಾವ ಯಾವ ಸ್ಥಾನದಲ್ಲಿ ಎಷ್ಟೆಷ್ಟು ಸಂಖ್ಯೆಯಲ್ಲಿ ಧರಿಸಬೇಕು ಹಾಗೂ ರುದ್ರಾಕ್ಷಗಳನ್ನು ಧರಿಸುವ ಮುನ್ನ ಅವುಗಳ ಪೂರ್ವಾಶ್ರಯವನ್ನು ಗುರುಗಳಿಂದ ಕಳೆಯಬೇಕು ಎಂಬ ವಿಷಯಗಳಲ್ಲಿ ಶಿವಾಗಮ ಮತ್ತು ವಚನಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಆದರೆ ಧರಿಸಲು ಯೋಗ್ಯವಾದ ರುದ್ರಾಕ್ಷಿಗಳ ವರ್ಣನೆ, ರುದ್ರಾಕ್ಷಿಗಳ ಮುಖಗಳ ಭೇದ, ಅವುಗಳ ಸ್ವರೂಪ ದೇವತೆ ಮತ್ತು ಫಲಗಳು ಶಿವಾಗಮದಲ್ಲಿ ವರ್ಣಿಸಲಾಗಿದ್ದು ವಚನಗಳಲ್ಲಿ ಈ ವಿವರಣೆ ಕಂಡುಬರುವುದಿಲ್ಲ. ಆದರೆ ಯಾವ ಯಾವ ಮುಖದ ರುದ್ರಾಕ್ಷಗಳನ್ನು ಶರೀರದ ಯಾವ ಯಾವ ಸ್ಥಾನದಲ್ಲಿ ಧರಿಸಬೇಕು ಎಂಬ ವಿಷಯವು ವಚನಗಳಲ್ಲಿ ವರ್ಣಿತವಾಗಿದ್ದು, ಲಭ್ಯವಿರುವ ಶಿವಾಗಮಗಳಲ್ಲಿ ಉಲ್ಲೇಖಿಸಲ್ಪಟ್ಟಿಲ್ಲ. ಅಲ್ಲದೇ ಬಾಹ್ಯ ರುದ್ರಾಕ್ಷಧಾರಣೆಯ ಬಗ್ಗೆ ಹೆಚ್ಚಿನ ವಿವರಣೆಯನ್ನು ಶಿವಾಗಮಗಳಲ್ಲಿ ಮಾಡಿದ್ದರೆ, ತಾತ್ವಿಕ ರುದ್ರಾಕ್ಷಧಾರಣೆಯ ಬಗ್ಗೆ ಹೆಚ್ಚಿನ ವರ್ಣನೆಯನ್ನು ವಚನಗಳಲ್ಲಿ ಮಾಡಲಾಗಿದೆ. ಹೀಗೆ ರುದ್ರಾಕ್ಷದ ವಿಷಯವನ್ನು ಪ್ರತಿಪಾದಿಸುವಲ್ಲಿ ಶಿವಾಗಮ ಮತ್ತು ವಚನಸಾಹಿತ್ಯಗಳು ಕೆಲವು ಸ್ಥೂಲವಾದ ವ್ಯತ್ಯಾಸಗಳನ್ನು ಹೊಂದಿರುವುದನ್ನು ಕಾಣುತ್ತೇವೆ.

---

೨೫. ಶಿ. ತ. ದ. ಪುಟ ೮೫

೨೬. ರುದ್ರಾಕ್ಷಿ. ಪುಟ ೫೫–೬೯ (ಅನ್ನದಾನೀಶ್ವರ ಪ್ರಕಾಶನ ಮುಂಡರಗಿ, ೧೯೯೨)

೫.೧.೮ ಮಂತ್ರ

ಎಲ್ಲಾ ಧರ್ಮದವರಲ್ಲಿಯೂ ಮಂತ್ರಕ್ಕೆ ಮಹತ್ವದ ಸ್ಥಾನವಿದೆ. ಸಾಧಕನು ಪರಿಪೂರ್ಣತೆಯ ಕಡೆಗೆ ಸಾಗುವಲ್ಲಿ ಮಂತ್ರಶಕ್ತಿಯು ಪೂರಕವಾಗಿ ನಿಲ್ಲುತ್ತದೆ. ಹಾಗಾಗಿ ಮಂತ್ರದ ಮಹತ್ವವನ್ನು ಎಲ್ಲ ಧರ್ಮಗಳೂ ಒಂದಲ್ಲ ಒಂದು ರೂಪದಲ್ಲಿ ಎತ್ತಿ ಹಿಡಿದಿವೆ. ಮಂತ್ರಶಕ್ತಿಯಿಂದ ಪಡೆಯಬಹುದಾದ ಅಲ್ಪಶಕ್ತಿಯ ಸಿದ್ಧಿಗಳಿಂದ ಹಿಡಿದು, ಅಂತರಂಗದ ಅನ್ವೇಷಣೆಗೆ ದಾರಿದೀಪವಾಗುವ ಮಹಾನ್ ಉದ್ದೇಶದವರೆಗೂ ಬೆಳೆದು ಬಂದಿರುವ ಮಂತ್ರಗಳ ಶಕ್ತಿಯ ಕುರಿತು ಬಹುಸೂಕ್ಷ್ಮವಾದ ಹಾಗೂ ವಿವರವಾದ ವಿವೇಚನೆ ನಮ್ಮ ಧರ್ಮಗ್ರಂಥಗಳಲ್ಲಿ ಬೆಳೆದುಬಂದಿದೆ.

ವೀರಶೈವ ಧಾರ್ಮಿಕ ಆಚರಣೆಗಳಲ್ಲಿಯೂ ಮಂತ್ರದ ಪಾತ್ರ ಪ್ರಧಾನವಾಗಿದೆ. ಅಷ್ಟಾವರಣಗಳಲ್ಲಿ ಮಂತ್ರವನ್ನು ಕೊನೆಗೆ ತೆಗೆದುಕೊಂಡರೂ ಸಹ ಅದು ಮೊದಲಿನಿಂದ ಕೊನೆಯವರೆಗೂ ಎಲ್ಲ ಹಂತಗಳಲ್ಲಿಯೂ ಕಂಡುಬರುವ ವ್ಯಾಪಕವಾದ ಶಕ್ತಿಯಾಗಿದೆ. ಗುರುವಿನ ಮೂಲಕ ಲಿಂಗ ಲಭಿಸುವುದು ಮಂತ್ರ ಪೂರ್ವಕವಾಗಿಯೇ; ಉಪಾಸನೆಯ ಮಾರ್ಗವೂ ಮಂತ್ರಮೂಲಕವಾಗಿಯೇ; ಹಾಗೆಯೇ ವಿಭೂತಿ ರುದ್ರಾಕ್ಷಿಗಳ ಧಾರಣೆಯಲ್ಲಿ, ಪಾದೋದಕ ಪ್ರಸಾದಗಳ ನಿರ್ವಹಣೆಯಲ್ಲಿ, ಷಟ್‌ಸ್ಥಲ ಸಾಧನೆಯಲ್ಲಿ ಮಂತ್ರವೇ ಪ್ರೇರಕ ಶಕ್ತಿಯಾಗಿ ನಿಲ್ಲುತ್ತದೆ.

ಮಂತ್ರ ಲಕ್ಷಣ, ಮಂತ್ರ ಸ್ವರೂಪ, ಮಂತ್ರಪಠಣದ ವಿಧಾನ ಹಾಗೂ ಮಂತ್ರಮಹಿಮೆಯನ್ನು ಕುರಿತು ವಾತುಲಾಗಮ, ಸೂಕ್ಷ್ಮಾಗಮ, ಪಾರಮೇಶ್ವರಾಗಮ, ಚಂದ್ರಜ್ಞಾನಾಗಮಗಳು ಸಾಕಷ್ಟು ನಿರೂಪಿಸಿವೆ. ಆದರೂ ಮಂತ್ರ ಮಹಾತ್ಮೆ ತೀರುವಂತಿಲ್ಲ ಎಂದು ಪಾರಮೇಶ್ವರಾಗಮವು ತನ್ನ ಹನ್ನೊಂದನೆಯ ಪಟಲದಲ್ಲಿ –

ಪಂಚಾಕ್ಷರಸ್ಯ ಮಹಾತ್ಮ್ಯಂ ವರ್ಷಕೋಟಿಶತೈರಪಿ।
ನ ಶಕ್ಯಂ ವಿಸ್ತರಾದ್ ವಕ್ತುಂ ತಸ್ಮಾತ್ ಸಂಕ್ಷೇಪತಃ ಶೃಣು॥[೧]

ಅರ್ಥಾತ್ ಶತಕೋಟಿ ವರ್ಷವಾದರೂ ಮಂತ್ರದ ಮಹಾತ್ಮೆಯನ್ನು ನಿರೂಪಿಸಲು ಸಾಧ್ಯವಿಲ್ಲ ಎಂದು ಪರಶಿವನು ಪಾರ್ವತಿಗೆ ಹೇಳಿದ್ದಾನೆ. ಇಂಥ ಮಹತ್ವಪೂರ್ಣವಾದ ಮಂತ್ರವು ಆಗಮ ಮತ್ತು ವಚನಗಳಲ್ಲಿ ಪ್ರತಿಪಾದಿತಗೊಂಡ ಬಗೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಮಂತ್ರದ ಶಾಬ್ದಿಕ ಅರ್ಥ:

"ಮಂತ್ರ್ಯತೇ ಗುಪ್ತಂ ಪರಿಭಾಷ್ಯತೇ" ಅಥವಾ "ಮಂತ್ರಯತೇ ಗುಪ್ತಂ ಭಾಷತ ಇತಿ ಮಂತ್ರಃ" ಎಂಬ ವ್ಯುತ್ಪತ್ತಿಯಂತೆ ಶ್ರೀಗುರುವು ಶಿಷ್ಯನಿಗೆ ರಹಸ್ಯವಾಗಿ ಉಪದೇಶಿಸುವ ಇಷ್ಟದೇವತೆಯ ಹೆಸರೇ ಮಂತ್ರವೆಂದು ಕರೆಯಲ್ಪಡುತ್ತದೆ.

---

೧. ಪಾ.ಆ. ಪಟಲ ೧೧ ಶ್ಲೋಕ ಸಂಖ್ಯೆ ೩

'ಮನನಾತ್ ತ್ರಾಯತೇ ಇತಿ ಮಂತ್ರಃ' ಎಂಬ ವ್ಯುತ್ಪತ್ತಿಯಂತೆ ಯಾವುದನ್ನು ಮನನ ಮಾಡುವುದರಿಂದ ಸಮರಸ ಉಂಟಾಗುವುದೋ ಅದೇ ಮಂತ್ರವೆಂದು ಕರೆಯಲ್ಪಡುತ್ತದೆ.

ವಾತುಲ ಶುದ್ಧಾಗಮದಲ್ಲಿ ಮಂತ್ರ ಶಬ್ದದ ಅರ್ಥವನ್ನು ಅತ್ಯಂತ ಸರಳವಾಗಿ ಮನೋಜ್ಞವಾಗಿ ಹೀಗೆ ವಿವರಿಸಲಾಗಿದೆ.

ಮನನಂ ಸರ್ವಪಕ್ಷೇಷು ತ್ರಾಣಂ ಸಂಸಾರಸಾಗರಾತ್।
ಮನನತ್ರಾಣಧರ್ಮಿತ್ವಾತ್ ಮಂತ್ರ ಇತ್ಯಭಿಧೀಯತೇ॥
ಯಥಾದರಃ ಸ್ವನಾಮ್ನಾ ತು ಜನಃ ಸನ್ನಿಹಿತೋ ಭವೇತ್।
ತಥಾ ಮಂತ್ರಪ್ರಯೋಗೇಣ ತತ್ರ ಸನ್ನಿಹಿತಃ ಶಿವಃ॥[1]

"ಮಂತ್ರವು ಶಿವನ ನೆನಹನ್ನು(ಮನನ) ಉಂಟುಮಾಡುತ್ತದೆ ಮತ್ತು ಸಂಸಾರಸಾಗರದಿಂದ ರಕ್ಷಣೆ(ತ್ರಾಣ) ನೀಡುತ್ತದೆ. ಹೀಗೆ ಮನನ ಮತ್ತು ತ್ರಾಣಗಳೆಂಬ ಈ ಎರಡು ಧರ್ಮಗಳಿಂದ ಇದು ಮಂತ್ರವೆನಿಸುತ್ತದೆ. ಲೋಕದಲ್ಲಿ ಜನರು ತಮ್ಮ ಹೆಸರನ್ನು ಹಿಡಿದು ಕೂಗಿದಾಗ ಪ್ರೀತಿಯಿಂದ ಹೇಗೆ ಹತ್ತಿರ ಬರುವರೋ, ಹಾಗೆ ಮಂತ್ರಪ್ರಯೋಗದಿಂದ ಶಿವನು ಹತ್ತಿರನಾಗುತ್ತಾನೆ." ಎಂದು ಮಂತ್ರದ ಅರ್ಥ ಮತ್ತು ಮಹಿಮೆಯನ್ನು ಅತ್ಯಂತ ಸರಳವಾಗಿ ವಿವರಿಸಿದೆ. ಒಟ್ಟಿನಲ್ಲಿ ಯಾವುದನ್ನು ಮನನ ಮಾಡುವುದರಿಂದ ಇಷ್ಟದೇವರೊಂದಿಗೆ ಸಮರಸ ಉಂಟಾಗುವುದೋ ಅದೇ ಮಂತ್ರ.

ಮಂತ್ರಗಳ ಸಂಖ್ಯೆ:

ಹಿಂದೂ ಸಮಾಜದಲ್ಲಿ ದೇವತೆಗಳು ಹೆಚ್ಚು ಹೆಚ್ಚಾಗಿರುವ ಕಾರಣ ಮಂತ್ರಗಳೂ ಹೆಚ್ಚಾಗಿದ್ದು, ಏಳು ಕೋಟಿ ಮಂತ್ರಗಳು ನಿರೂಪಿತವಾಗಿವೆ.

ಪಾರ್ವತಿ ಮತ್ತು ಮಹೇಶ್ವರರ ಸಂವಾದರೂಪದಲ್ಲಿರುವ ಸೂಕ್ಷ್ಮಾಗಮದಲ್ಲಿ ಪಾರ್ವತಿಯು ಕೇಳುವ–

ಮಂತ್ರಾಃ ಕತಿ ವಿಧಾ ಲೋಕೇ ಸಾಧಕಾನಾಂ ಫಲಪ್ರದಾಃ।
ತೇಷು ಪ್ರಶಸ್ತಾ ದೇವೇಶ ಯಾವಂತಃ ಪ್ರಚರಂತಿ ವೈ॥[2]

ಅರ್ಥಾತ್ "ಈ ಲೋಕದಲ್ಲಿ ಸಾಧಕರಿಗೆ ಫಲವನ್ನು ಕೊಡುವ ಎಷ್ಟು ಬಗೆಯ ಮಂತ್ರಗಳಿವೆ? ಅವುಗಳಲ್ಲಿ ಅತ್ಯಂತ ಪ್ರಶಸ್ತವಾದ ಮಂತ್ರಗಳಾವವು?" ಎಂಬ ಪ್ರಶ್ನೆಗೆ ಉತ್ತರವಾಗಿ ಮಹೇಶ್ವರನು ಮಂತ್ರಗಳಿಗೆ ಸಂಬಂಧಿಸಿದ ವಿಚಾರವನ್ನು ವಿಸ್ತಾರವಾಗಿ ಹೇಳುತ್ತಾನೆ. ಅದರಂತೆ –

---

೧. ವಾತುಲಶುದ್ಧಾಗಮ, ಪಟಲ ೫, ಶ್ಲೋಕ ಸಂಖ್ಯೆ ೮–೯
೨. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೧

ಸಪ್ತಕೋಟಿಮಹಾಮಂತ್ರಾಃ ವಿದ್ಯಂತೇ ಲೋಕಪಾವನಾಃ।
ಕೇಚಿನ್ಮಂತ್ರಾ ವೈಷ್ಣವಾಶ್ಚ ಕೇಚಿಚ್ಛಕ್ತ್ಯಧಿದೇವತಾಃ।
ಕೇಚಿದ್ವೈ ಕ್ಷುದ್ರದೈವತ್ಯಾಃ ಕೇಚಿನ್ಮತ್ಪ್ರತಿಪಾದಕಾಃ॥[೪]

"ಈ ಲೋಕದಲ್ಲಿ ಏಳು ಕೋಟಿ ಮಂತ್ರಗಳಿವೆ. ಅವುಗಳಲ್ಲಿ ಕೆಲವು ಮಂತ್ರಗಳು ವಿಷ್ಣುವಿಗೆ, ಮತ್ತೆ ಕೆಲವು ಮಂತ್ರಗಳು ಶಕ್ತಿದೇವತೆಗೆ, ಮತ್ತೆ ಕೆಲವು ಮಂತ್ರಗಳು ಕ್ಷುದ್ರದೇವತೆಗಳಿಗೆ ಸಂಬಂಧಿಸಿವೆ. ಇದೇ ರೀತಿಯಾಗಿ ಕೆಲವು ಮಂತ್ರಗಳು ನನಗೆ (ಶಿವನಿಗೆ) ಸಂಬಂಧಿಸಿವೆ." ಎಂದು ಉತ್ತರಿಸಿ –

ನಗಾನಾಂ ಹಿ ಯಥಾ ಮೇರುಃ ಸರಸಾಂ ಸಾಗರೋಯಥಾ।
ಸರಿತಾಂ ಚ ಯಥಾ ಗಂಗಾ ಪಶೂನಾಂ ಗೌರ್ಯಥಾ ವರಾ॥
ಮಣೀನಾಂ ಕೌಸ್ತುಭೋ ಯದ್ವಲ್ಲೋಹಾನಾಂ ಕಾಂಚನಂ ಯಥಾ।
ತಥಾ ಷಡಕ್ಷರಪರೋ ಮನುಷೇಷು ವರಃ ಪ್ರಿಯೇ॥[೫]

"ಪರ್ವತಗಳಲ್ಲಿ ಮೇರು, ಸರೋವರಗಳಲ್ಲಿ ಸಾಗರ, ನದಿಗಳಲ್ಲಿ ಗಂಗೆ, ಪ್ರಾಣಿಗಳಲ್ಲಿ ಹಸು, ಮಣಿಗಳಲ್ಲಿ ಕೌಸ್ತುಭ, ಲೋಹಗಳಲ್ಲಿ ಚಿನ್ನ ಹೇಗೆ ಶ್ರೇಷ್ಠವೋ ಹಾಗೆ ಮಂತ್ರಗಳಲ್ಲಿ ಷಡಕ್ಷರ ಮಂತ್ರವು ಶ್ರೇಷ್ಠವಾಗಿದೆ. ಇಂತಹ ಶ್ರೇಷ್ಠವಾದ ಷಡಕ್ಷರ ಮಂತ್ರವನ್ನು ಜಪಿಸುವವನು ಮಾನವರಲ್ಲಿ ಶ್ರೇಷ್ಠನು. ಆದ್ದರಿಂದ ಬುದ್ಧಿವಂತರು ನಿತ್ಯವೂ ಶ್ರೇಷ್ಠವಾದ ಷಡಕ್ಷರ ಮಹಾಮಂತ್ರ ಜಪದಲ್ಲಿ ನಿರತರಾಗಿರುತ್ತಾರೆ." ಎಂದು ಹೇಳುವ ಮೂಲಕ ಮಂತ್ರಗಳಲ್ಲಿ ಷಡಕ್ಷರ ಮಂತ್ರವೇ ಅತ್ಯಂತ ಶ್ರೇಷ್ಠ ಎಂದು ತಿಳಿಸುತ್ತಾ –

ವೇದಾಃ ಸಾಂಗಾಃ ಪುರಾಣಾನಿ ಮಂತ್ರಾಶ್ಚ ಬಹವಸ್ತಥಾ।
ಆಗಮಾ ವಿವಿಧಾ ದೇವಿ ವಿದ್ಯಾಸ್ಥಾನಾನಿ ಯಾನಿ ಚ।
ಪಂಚಾಕ್ಷರೇ ಪ್ರಲೀಯಂತೇ ನಿರ್ಗಚ್ಛಂತಿ ಪುನಸ್ತತಃ॥[೬]

"ವೇದ (ಋಕ್, ಯಜುಸ್, ಸಾಮ ಮತ್ತು ಅಥರ್ವ), ವೇದಾಂಗಗಳು(ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷ್ಯ) ಪುರಾಣಗಳು(ಹದಿನೆಂಟು ಪುರಾಣಗಳು), ಉಪಪುರಾಣಗಳು, ನಾನಾ ಬಗೆಯ ಮಂತ್ರಗಳು, ವಿವಿಧಾಗಮಗಳು, ನಾನಾ ವಿದ್ಯೆಗಳು ಇವೆಯೋ ಅವೆಲ್ಲವೂ ಪಂಚಾಕ್ಷರ ಮಂತ್ರದಲ್ಲಿ ಲೀನವಾಗಿವೆ (ಅಡಗಿವೆ) ಮತ್ತು ಅದರಿಂದಲೇ ಮರಳಿ ಉದಯಿಸುತ್ತವೆ." ಆದ್ದರಿಂದ ಪಂಚಾಕ್ಷರ ಮಂತ್ರವೊಂದನ್ನು ಜಪಿಸಿದರೆ ವೇದ–ವೇದಾಂಗಗಳನ್ನು, ಪುರಾಣ–ಉಪಪುರಾಣಗಳನ್ನು, ಎಲ್ಲ ಆಗಮಗಳನ್ನು ಅಧ್ಯಯನ ಮಾಡಿದ ಫಲವುಂಟಾಗುತ್ತದೆ ಎಂದು ಮಂತ್ರದ ಮಹಿಮೆಯನ್ನು ತಿಳಿಸಿ, ಈ ಪ್ರಣವಸಹಿತ ಪಂಚಾಕ್ಷರ(ಷಡಕ್ಷರ)ಮಂತ್ರ

---

೪. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೨.
೫. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೪೨–೪೩
೬ ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೭೫;

ಉದ್ಧಾರದ ಕ್ರಮವನ್ನು ಮಹೇಶ್ವರನು ಪಾರ್ವತಿಗೆ ಸೂಕ್ಷ್ಮಾಗಮ ಕ್ರಿಯಾಪಾದದ ತೃತೀಯ ಪಟಲದಲ್ಲಿ ಹೀಗೆ ಹೇಳುತ್ತಾನೆ:

ನಮಃ ಪದಂ ವದೇತ್ಪೂರ್ವಂ ಯಾಂತಂ ಶಿವಪದಂ ತತಃ।
ಪ್ರಣವೇನ ಸಮಾಯುಕ್ತಂ ಷಡಕ್ಷರಮಿತಿ ಸ್ಮೃತಮ್॥
ವೇದಾಗಮೇಷು ಸರ್ವೇಷು ಸಂಸ್ಥಿತೋಽಯಂ ಮಹಾಮನುಃ।
ಸಮಸ್ತಫಲದಸ್ತಸ್ಮಾಜ್ಜ್ಞೇಯೋ ವೈದಿಕತಾಂತ್ರಿಕೈಃ॥
ಯಾವಂತಃ ಶಿವಮಂತ್ರಾಃ ಸ್ಯುಃ ಪರಾರ್ಥೈಕಪರಾಃ ಪ್ರಿಯೇ।
ಷಡಕ್ಷರಸ್ಯ ತೇ ಸರ್ವೇಽಪ್ಯರ್ಥಸ್ಯೈವ ಪ್ರಕಾಶಕಾಃ॥
ಪ್ರಮಾಣಭೂತಃ ಸರ್ವೇಷಾಂ ವೇದೋಕ್ತತ್ವಾದ್ವಿಶೇಷತಃ।
ಪ್ರಣವೇನಯುತೋ ದೇವಿ ಮಂತ್ರರಾಜಃ ಪ್ರಕೀರ್ತಿತಃ॥[೭]

ಮೊದಲು 'ನಮಃ' ಪದವನ್ನು ಉಚ್ಚರಿಸಿ, ತರುವಾಯ 'ಶಿವಾಯ' ಪದವನ್ನು ಉಚ್ಚರಿಸಬೇಕು. ಈ ಮಂತ್ರದಲ್ಲಿ "ನಮಃ ಶಿವಾಯ" ಎಂಬ ಐದು ಅಕ್ಷರಗಳಿರುವುದರಿಂದ ಈ ಮಂತ್ರಕ್ಕೆ ಪಂಚಾಕ್ಷರ ಮಂತ್ರವೆಂದು ಹೆಸರು. ಇದೇ ಪಂಚಾಕ್ಷರೀ ಮಂತ್ರಕ್ಕೆ 'ಓಂ' ಎಂಬ ಪ್ರಣವವನ್ನು ಸೇರಿಸಿದರೆ ಅದು ಷಡಕ್ಷರಮಂತ್ರವೆನಿಸುತ್ತದೆ.

ಪಂಚಾಕ್ಷರ ಮಂತ್ರದಿಂದ ಪರಶಿವನ ಸಕಲರೂಪವಾದ ಪಂಚಬ್ರಹ್ಮ ಸ್ವರೂಪವು ಮತ್ತು ಷಡಕ್ಷರ ಮಂತ್ರದಲ್ಲಿರುವ ಓಂಕಾರದಿಂದ ಪರಶಿವನ ನಿಷ್ಕಲ ಸ್ವರೂಪವು ವ್ಯಕ್ತವಾಗುತ್ತದೆ. ಆದುದರಿಂದ ಷಡಕ್ಷರ ಮಂತ್ರದಿಂದ ಪರಶಿವನ ಸಕಲ ನಿಷ್ಕಲಗಳೆಂಬ ಉಭಯರೂಪಗಳು ಪ್ರತಿಪಾದಿಸಲ್ಪಡುತ್ತವೆ. ಕಾರಣ ಈ ಮಹಾಮಂತ್ರವು ಸಮಸ್ತ ವೇದಾಗಮಗಳಲ್ಲಿ ನಿರೂಪಿತವಾಗಿದ್ದು, ಎಲ್ಲ ಬಗೆಯ ಫಲಗಳನ್ನು ಕೊಡುತ್ತದೆ. ಎಷ್ಟೇ ಬಗೆಯ ಶಿವಮಂತ್ರಗಳಿರಲಿ, ಅವು ಬೇರೆ ಬೇರೆ ಅರ್ಥಗಳನ್ನು ಪ್ರತಿಪಾದಿಸಲಿ ಅವುಗಳೆಲ್ಲ ಷಡಕ್ಷರ ಮಂತ್ರದ ಅರ್ಥವನ್ನೇ ಹೇಳುತ್ತವೆ. 'ಓಂ' ಎಂಬ ಪ್ರಣವ ಸಹಿತವಾದ ಈ ಮಹಾಮಂತ್ರವು "ಮಂತ್ರರಾಜ" ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ ಎಂದು ಪ್ರಣವ ಸಹಿತವಾದ ಪಂಚಾಕ್ಷರ (ಷಡಕ್ಷರ) ಮಂತ್ರದ ಉದ್ಧಾರದ ಕ್ರಮವನ್ನು ವಿವರಿಸಲಾಗಿದೆ.

ವಚನದಲ್ಲಿಯೂ ಸಹ ಮಂತ್ರಗಳಲ್ಲಿ ಅತ್ಯಂತ ಶ್ರೇಷ್ಠವಾದ ಮಂತ್ರ ಯಾವುದು? ಎಂಬ ಬಗ್ಗೆ ಚರ್ಚಿಸಲಾಗಿದ್ದು, ಏಳು ಕೋಟಿ ಮಹಾಮಂತ್ರ, ಉಪಮಂತ್ರಗಳನ್ನು ಚಿತ್ತವ್ಯಾಕುಲವಾಗಿ ಭಜಿಸದಿರಿ ಎನ್ನುತ್ತಾ ಷಣ್ಮುಖಸ್ವಾಮಿಗಳು –

ಏಳುಕೋಟಿ ಮಹಾಮಂತ್ರಗಳ, ಉಪಮಂತ್ರ ಕೋಟ್ಯಾನುಕೋಟಿಗಳ
ಕಲಿತು ತೊಳಲಿ ಬಳಲುವುದೇಕೋ?
ಭಾಳಾಕ್ಷನ ಮೂಲಮಂತ್ರ ಒಂದೇ ಸಾಲದೇ?

---

೭. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೧೩–೧೬.

ಸಕಲವೇದಂಗಳ ಮೂಲವಿದು; ಸಕಲಶಾಸ್ತ್ರಂಗಳ ಸಾರವಿದು
ಸಕಲಾಗಮಂಗಳ ಅರುಹಿದು; ಸಕಲ ಮಂತ್ರಂಗಳ ಮಾತೆಯಿದು
ಇಂತಪ್ಪ ಶಿವಮಂತ್ರವೆಂಬ ಸಂಜೀವನವು ಎನ್ನಂಗಕ್ಕೆ ಸ್ವಂಗಿಸಲಾಗಿ
ಎನಗೆ ಮರಣದ ಭಯ ಹಿಂಗಿತಯ್ಯ ಅಖಂಡೇಶ್ವರಾ

ಎಂದಿದ್ದಾರೆ. ಬಸವಣ್ಣನವರು "ಅಕಟಕಟಾ ಬೆಡಗು ಬಿನ್ನಾಣವೆಂಬುದೇನೋ? ಓಂ ನಮಃಶಿವಾಯ ಎಂಬುದೇ ಮಂತ್ರ; ಓಂ ನಮಃಶಿವಾಯ ಎಂಬುದೇ ತಂತ್ರ; ನಮ್ಮ ಕೂಡಲಸಂಗಮ ದೇವರ ನೆನೆವುದೇ ಮಂತ್ರ"[9] ಎನ್ನುತ್ತಾರೆ.

"ಓಂ ನಮಃ ಶಿವಾಯ ಎಂಬುದೇ ವೇದ,
ಓಂ ನಮಃ ಶಿವಾಯ ಎಂಬುದೇ ಶಾಸ್ತ್ರ,
ಓಂನಮಃಶಿವಾಯ ಎಂಬುದೇ ಪುರಾಣ,
ಓಂ ನಮಃ ಶಿವಾಯ ಎಂಬುದೇ ಆಗಮ,
ಓಂ ನಮಃ ಶಿವಾಯ ಎಂಬುದೇ ಸಕಲಕಲೆ
ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎಂದೆನಲು ಸರ್ವಜ್ಞ,
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ"[10]

ಎಂದು ಹೇಳಿ ಸಕಲ ವೇದಗಳಿಗೂ ಶಾಸ್ತ್ರಗಳಿಗೂ, ಆಗಮಗಳಿಗೂ ಮಾತೆಯನಿಸಿದ 'ಓಂ ನಮಃ ಶಿವಾಯ' ಮಂತ್ರದ ಹಿರಿಮೆ ಮತ್ತು ಮಹತ್ವವನ್ನು ಸ್ಪಷ್ಟಪಡಿಸಿದ್ದಾರೆ. ಹೀಗೆ ಮಂತ್ರಗಳಲ್ಲಿ ಪ್ರಣವಸಹಿತ ಪಂಚಾಕ್ಷರಿ ಮಂತ್ರವು ಅತ್ಯಂತ ಶ್ರೇಷ್ಠ ಎಂದು ವಚನಗಳಲ್ಲಿಯೂ ಪ್ರತಿಪಾದಿಸಲಾಗಿದೆ.

ಪಂಚಾಕ್ಷರ ಮಂತ್ರಕ್ಕಿರುವ ಪರ್ಯಾಯ ನಾಮಗಳು

ಪಂಚಾಕ್ಷರ ಮಂತ್ರಕ್ಕೆ ಮೂಲ, ವಿದ್ಯೆ, ಶಿವ, ಶೈವಸೂತ್ರ ಮತ್ತು ಪಂಚಾಕ್ಷರ ಎಂಬ ಐದು ಪರ್ಯಾಯ ಹೆಸರುಗಳನ್ನು ಚಂದ್ರಜ್ಞಾನಾಗಮವು ನಿರೂಪಿಸುತ್ತದೆ. ಪ್ರಪಂಚದ ಉತ್ಪತ್ತಿಗೆ ಹಾಗೂ ಎಲ್ಲ ಮಂತ್ರಗಳ ಪ್ರಾದುರ್ಭಾವ-ವಿಲಯಗಳಿಗೆ ಈ ಮಂತ್ರವೇ ಮೂಲವಾದ್ದರಿಂದ "ಮೂಲಂ" ಎಂಬ ನಾಮವೂ, ಹಾಗೂ ಈ ಮಹಾಮಂತ್ರವನ್ನು ವಿಧಿವತ್ತಾಗಿ ಜಪಮಾಡುವದರಿಂದ ಶಿವ-ಜೀವರ ಐಕ್ಯಬೋಧಕವಾದ ಶುದ್ಧವಿದ್ಯೆಯು ಉದಯವಾಗುತ್ತದೆ. ಇಂತಹ ವಿದ್ಯೆಯ ಉದಯಕ್ಕೆ ಕಾರಣವಾದ ಮಂತ್ರಕ್ಕೆ 'ವಿದ್ಯಾ' ಎಂಬುದಾಗಿಯೂ, ಅಲ್ಲದೇ ಈ ಮಂತ್ರದ ಮನನದಿಂದ ಅನೇಕ ಕಲ್ಯಾಣ ಪರಂಪರೆಯು ಪ್ರಾಪ್ತವಾಗುವುದರಿಂದ ಇದಕ್ಕೆ 'ಶಿವ'(ಮಂಗಳಕರ) ಎಂದೂ, ಶಿವನ ಸಂಬಂಧಿಯಾದ ಸರ್ವ ವಿಷಯವು ಈ

೮.ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವಚನ ಸಂಪುಟ ೯,ವಚನ ಸಂಖ್ಯೆ ೩೩೯ ಪು.೨೦೧
೯.ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೭೭, ಪುಟ ೨೨.
೧೦.ಸಮಗ್ರ ವಚನ ಸಂಪುಟ ೬, ಸಂಕೀರ್ಣ ವಚನ ಸಂ. ೧, ವಚನ ಸಂಖ್ಯೆ ೧೩೫೨, ಪು.೪೪೨.

ಮಂತ್ರದಲ್ಲಿ ಸೂಕ್ಷ್ಮವಾಗಿ ನಿರೂಪಿತವಾಗಿರುವ ಕಾರಣ ಇದಕ್ಕೆ "ಶೈವ ಸೂತ್ರ" ಎಂಬ ನಾಮವು ಪ್ರಾಪ್ತವಾಗಿದೆ ಎಂದು ವಿವರಿಸುತ್ತದೆ.[೧೧]

ಪ್ರಪಂಚವೆಲ್ಲವೂ ಪಂಚಾಕ್ಷರಮಯವಾಗಿದೆ

ಪಂಚಾಕ್ಷರಗಳು ಲೋಕದಲ್ಲಿ ಪ್ರಸಿದ್ಧವಾಗಿರುವ ಎಲ್ಲ ಪಂಚಕಗಳ ಸ್ವರೂಪವಾಗಿದೆ ಎಂಬುದನ್ನು ಸೂಕ್ಷ್ಮಾಗಮದ ನಾಲ್ಕನೆಯ ಪಟಲದಲ್ಲಿ ನಿರೂಪಿಸಲಾಗಿದೆ-

ಸರ್ವಾಣಿ ಪಂಚಭೂತಾನಿ ತನ್ಮಾತ್ರಾಣಾಂ ಚ ಪಂಚಕಮ್।
ಜ್ಞಾನೇಂದ್ರಿಯಾಣಿ ಪಂಚಾಪಿ ತಥಾ ಕರ್ಮೇಂದ್ರಿಯಾಣಿ ಚ॥
ಪಂಚಬ್ರಹ್ಮಾಣಿ ಕೃತ್ಯಾನಿ ಪಂಚಪಂಚಾತ್ಮಕಾನಿ ಚ ।
ತಾನಿ ಸರ್ವಾಣಿ ಬೋಧ್ಯಾನಿ ಪಂಚವರ್ಣೈರ್ಮಹಾಮನೋಃ॥
ಲೋಕೇ ಹಿ ಪಂಚಧಾ ಯಾನಿ ಪ್ರಸಿದ್ಧಾನಿ ವಿಶೇಷತಃ।
ಜ್ಞೇಯಾನಿ ತಾನಿ ಸರ್ವಾಣಿ ಪಂಚಾಕ್ಷರಮಯಾನಿ ಹಿ॥
ಏವಂ ಪಂಚಾತ್ಮಕಂ ಸರ್ವಂ ಸುಸೂಕ್ಷ್ಮಂ ಕಥಿತಂ ಶಿವೇ।
ಧ್ಯೇಯೋ ಮುಮುಕ್ಷುಭಿರ್ನಿತ್ಯಮನೇನ ಮನುನಾ ಶಿವಃ॥[೧೨]

"ಪಂಚ ಮಹಾಭೂತಗಳು (ಭೂಮಿ, ನೀರು, ಅಗ್ನಿ, ವಾಯು, ಆಕಾಶ), ಪಂಚತನ್ಮಾತ್ರಗಳು (ಗಂಧ, ರಸ, ರೂಪ, ಸ್ಪರ್ಶ, ಶಬ್ದ), ಪಂಚಜ್ಞಾನೇಂದ್ರಿಯಗಳು (ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮ), ಪಂಚಕರ್ಮೇಂದ್ರಿಯಗಳು (ವಾಕ್, ಪಾದ, ಪಾಣಿ, ಪಾಯು, ಉಪಸ್ಥ), ಪಂಚಬ್ರಹ್ಮ ಮಂತ್ರಗಳು (ಸದ್ಯೋಜಾತಂ ಪ್ರಪದ್ಯಾಮಿ, ವಾಮದೇವಾಯ ನಮೋ, ಅಘೋರೇಭ್ಯೋಥಘೋರೇಭ್ಯೋ, ತತ್ಪುರುಷಾಯವಿದ್ಮಹೇ ಮತ್ತು ಈಶಾನಸ್ಸರ್ವವಿದ್ಯಾನಾಂ.....), ಪಂಚಕೃತ್ಯಗಳು (ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹ) ಹೀಗೆ ಲೋಕದಲ್ಲಿ ಪ್ರಸಿದ್ಧವಾದ ಪಂಚಕ್ಷರಗಳು ಯಾವುವು ಇರುವವೋ ಅವೆಲ್ಲವೂ ಪಂಚಾಕ್ಷರಮಯಗಳಾಗಿವೆ. ಅರ್ಥಾತ್ ಪಂಚಾಕ್ಷರ ಮಂತ್ರದ ಸ್ವರೂಪವೇ ಆಗಿವೆ. ಮೋಕ್ಷಾಪೇಕ್ಷಿಗಳು ಈ ಮಂತ್ರದಿಂದ ಶಿವನನ್ನು ನಿತ್ಯವೂ ಧ್ಯಾನಿಸಬೇಕು ಎಂದು ತಿಳಿಸಲಾಗಿದೆ.

ವಚನಗಳಲ್ಲಿಯೂ ಸಹ ಪ್ರಣವ ಸಹಿತವಾದ ಪಂಚಾಕ್ಷರ ಮಂತ್ರದಿಂದಲೇ ಪ್ರಪಂಚವು ರೂಪುಗೊಂಡಿರುವುದಾಗಿ ನಿರೂಪಿಸಲಾಗಿದೆ. ಸಿದ್ಧರಾಮರು ತಮ್ಮ ವಚನದಲ್ಲಿ :

ನಿನ್ನ ನೀ ತಿಳಿದು ನೋಡಿದರೆ ಶಿವಮಯ ಜಗತ್ತು ನೋಡಾ.
ಓಂಕಾರ ಪ್ರಣವವೆ ಪ್ರಕೃತಿಯಾಗಿ ನಿಂದಿತ್ತು.
ನಕಾರ ಪ್ರಣವವೇ ಪೃಥ್ವಿಯಾಗಿ ನಿಂದಿತ್ತು.
ಮಕಾರ ಪ್ರಣವವೇ ಉದಕವಾಗಿ ನಿಂದಿತ್ತು.

---

೧೧. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೧೭
೧೨. ಸೂ.ಆ. ಕ್ರಿಪಾ, ಪಟಲ ೪, ಶ್ಲೋಕ ಸಂಖ್ಯೆ ೫೮-೬೧.

ಶಿಕಾರ ಪ್ರಣವವೇ ಅಗ್ನಿಯಾಗಿ ನಿಂದಿತ್ತು.
ವಕಾರ ಪ್ರಣವವೇ ವಾಯುವಾಗಿ ನಿಂದಿತ್ತು.
ಯಕಾರ ಪ್ರಣವವೇ ಸರ್ವವಸ್ತು ಆಚರಿಸುವುದಕ್ಕೆ ಆಕಾಶವಾಗಿ ನಿಂದಿತ್ತು.
ನೆನೆನೆನೆದು ಸುಖಿಯಾದೆನು ಸುಖಿಯಾದೆನು ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವೇ[೧೩]

ಎಂದು ಮಂತ್ರದ ಸ್ವರೂಪವನ್ನು ವರ್ಣಿಸಿದ್ದಾರೆ. ಇದನ್ನೇ ಉರಿಲಿಂಗಪೆದ್ದಿಗಳು ತಮ್ಮ ವಚನದಲ್ಲಿ ಅಲಂಕಾರಿಕವಾಗಿ ಹೀಗೆ ಹೇಳಿದ್ದಾರೆ :

ಓಂಕಾರವೆಂಬ ವೃಕ್ಷದಲ್ಲಿ ಋಗ್ವೇದ ಯಜುರ್ವೇದ ಸಾಮವೇದ
ಅಥರ್ವಣ ವೇದಗಳೆಂಬ ನಾಲ್ಕು ಶಾಖೆಗಳು.
ಅನಂತವೈ ಉಪವೇದಂಗಳೆಂಬ ಉಪಶಾಖೆಗಳು,
ಶಾಸ್ತ್ರಗಳೆಂಬ ಅಂಕುರ ಪಲ್ಲವ,
ಪುರಾಣಂಗಳೆಂಬ ಪುಷ್ಪಗಳು, ಆಗಮಗಳೆಂಬ ಕಾಯಿ ಬಲಿದು
ಶ್ರೀ ಪಂಚಾಕ್ಷರಿಯೆಂಬ ಮಧುರಪಣ್ಣುಗಳು
ಅಗಣಿತ ಫಲವನ್ನು ಅನಂತಕಾಲ ಭೋಗಿಸಲು
ಮತ್ತಂ ಜಿಹ್ವೆಯೊಳಗೆ ಬಂದಿರಲು ಭೋಗಿಸಿ ಸುಖಿಯಹುವುದಲ್ಲದೆ,
ಇತರ ವಿದ್ಯೆಗಳೆಂಬ ಸಸಿಯ ಸಾಕ್ಕಿ ಸಲಹಲುಂಟೇ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.[೧೪]

ಪಂಚಾಕ್ಷರಿ ಮಂತ್ರ ಎಲ್ಲಾ ಶಾಸ್ತ್ರಗಳ ಸಾರ: ಮಧುರಸದ ಹಣ್ಣು, ಅದನ್ನು ಭೋಗಿಸಿ ಸುಖಿಯಾದರೆ ಅದರ ಮುಂದೆ ಉಳಿದುದೆಲ್ಲಾ ಅಲ್ಪ ಎಂದು ಮಂತ್ರದ ಸ್ವರೂಪವನ್ನು ಆಗಮದಲ್ಲಿ ಪ್ರತಿಪಾದಿತಗೊಂಡಂತೆಯೇ ವಚನದಲ್ಲಿಯೂ ವರ್ಣಿಸಲಾಗಿದೆ.

ಪಂಚಾಕ್ಷರೀ ಮಂತ್ರದ ಋಷಿ, ದೇವತೆ, ಛಂದಸ್ಸು

ಶಿವಾಗಮಗಳಲ್ಲಿ ಪಂಚಾಕ್ಷರೀ ಮಂತ್ರದ ಋಷಿ, ದೇವತೆ, ಛಂದಸ್ಸು, ಸ್ವರ, ಮುಖಾದಿಗಳ ವಿವರಣೆಯನ್ನು ಮಾಡಲಾಗಿದೆ. ಸೂಕ್ಷ್ಮಾಗಮದಲ್ಲಿ –

ವಾಮದೇವ ಋಷಿಃ ಪಂಕ್ತಿಶ್ಛಂದೋ ದೇವಃ ಶಿವಃ ಪ್ರಭುಃ॥
ಬೀಜಂ ಪ್ರಣವ ಏವ ಸ್ಯಾನ್ನಮಃ ಶಕ್ತಿರುದಾಹೃತಾಃ।
ಶಿವಾಯ ಕೀಲಕಂ ಮೋಕ್ಷೇ ವಿನಿಯೋಗಃ ಪ್ರಕೀರ್ತಿತಃ॥[೧೫]

ಸಂಸಾರ ಸಾಗರದ ಭಯವನ್ನು ನಿವಾರಿಸುವ ಈ ಪಂಚಾಕ್ಷರ ಮಹಾಮಂತ್ರಕ್ಕೆ

೧೩. ಸಮಗ್ರ ವಚನ ಸಂಪುಟ ೪, ವಚನ ಸಂಖ್ಯೆ ೧೭೪೪, ಪುಟ ೪೯೭
೧೪. ಸಮಗ್ರ ವಚನ ಸಂಪುಟ ೬,ಸಂಕೀರ್ಣ ವಚನ ಸಂ.೧,ವಚನ ಸಂಖ್ಯೆ ೧೩೪೬, ಪುಟ ೪೪೦
೧೫. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೨೩–೨೪

ವಾಮದೇವನೇ ಋಷಿ, ಪಂಕ್ತಿಯೇ ಛಂದಸ್ಸು, ಶ್ರೀ ಸದಾಶಿವನೇ ದೇವತೆ, ಓಂಕಾರವೇ ಬೀಜ, ಉಮೆಯೇ ಶಕ್ತಿ ಮತ್ತು ಶಿವನೇ ಕೀಲಕ ಎಂದು ತಿಳಿಯತಕ್ಕದ್ದು ಎಂದು ಹೇಳಿ ಮೋಕ್ಷಪ್ರಾಪ್ತಿಗಾಗಿ ಈ ಮಂತ್ರದ ವಿನಿಯೋಗ ಎಂಬುದಾಗಿ ಪ್ರತಿಪಾದಿಸಿ, ಸೂಕ್ಷ್ಮಾಗಮ, ಚಂದ್ರಜ್ಞಾನಾಗಮ, ಪಾರಮೇಶ್ವರಾಗಮಗಳು ಈ ಪಂಚಾಕ್ಷರೀ ಮಂತ್ರದ ಪ್ರತಿ ಅಕ್ಷರದ ಋಷ್ಯಾದಿ ವಿಷಯಗಳನ್ನೂ ನಿರೂಪಿಸಿವೆ. ಸೂಕ್ಷ್ಮಾಗಮದಲ್ಲಿ ಪಂಚಾಕ್ಷರೀ ಮಂತ್ರದ ಋಷಿ, ದೇವತೆ, ಛಂದಸ್ಸು ಮುಂತಾದವುಗಳನ್ನು ಕುರಿತು ಹೀಗೆ ಹೇಳಲಾಗಿದೆ.-

ನಕಾರದ ಋಷಿ ಮುಂತಾದವು: ಈ ವರ್ಣದ ಋಷಿ ಗೌತಮ, ದೇವತೆ ನಂದಿ, ಗಾಯತ್ರಿ ಛಂದಸ್ಸು, ಸ್ವರ ಉದಾತ್ತ, ಹಳದಿ ಬಣ್ಣ, ಪೂರ್ವ ಮುಖ.[೧೬]

ಮಕಾರದ ಋಷಿ ಮುಂತಾದುವು: ಋಷಿ ಅತ್ರಿ, ಛಂದಸ್ಸು ಉಷ್ಣಿಕ್, ದೇವತೆ ರುದ್ರ, ಕೃಷ್ಣ ವರ್ಣ, ಸ್ವರ ಅನುದಾತ್ತ, ದಕ್ಷಿಣ ಮುಖ.[೧೭]

ಶಿಕಾರದ ಋಷಿ ಮುಂತಾದುವು: ಋಷಿ ವಿಶ್ವಾಮಿತ್ರ, ಛಂದಸ್ಸು ಅನುಷ್ಟುಪ್, ದೇವತೆ ವಿಷ್ಣು, ದೂಮ್ರವರ್ಣ, ಸ್ವರ ಉದಾತ್ತ ಮತ್ತು ಪಶ್ಚಿಮ ಮುಖ.[೧೮]

ವಾಕಾರದ ಋಷಿ ಮುಂತಾದುವು: ಋಷಿ ಅಂಗೀರಸ್, ಛಂದಸ್ಸು ಬೃಹತೀ, ದೇವತೆ ಬ್ರಹ್ಮ, ಸ್ವರ ಪ್ರಚಯ, ಸ್ವರ್ಣ ವರ್ಣ ಮತ್ತು ಉತ್ತರಮುಖ. [೧೯]

ಯಕಾರದ ಋಷಿ ಮುಂತಾದುವು: ಋಷಿ ಭಾರದ್ವಾಜ, ಛಂದಸ್ಸು ವಿರಾಟ್, ದೇವತೆ ಸ್ಕಂದ, ಸ್ವರ ಸ್ವರಿತ, ರಕ್ತವರ್ಣ ಮತ್ತು ಊರ್ಧ್ವ ಮುಖ. [೨೦]

ಎಂದು ಸೂಕ್ಷ್ಮಾಗಮದಲ್ಲಿ ಪ್ರತಿಪಾದಿಸಿದರೆ ಚಂದ್ರಜ್ಞಾನಾಗಮದಲ್ಲಿ ಪಂಚಾಕ್ಷರೀ ಮಂತ್ರದ ಋಷಿ, ದೇವತೆ, ಛಂದಸ್ಸು ಮುಂತಾದ ಷೋಡಶರೂಪಗಳ ಬಗ್ಗೆ ಹೀಗೆ ಪ್ರತಿಪಾದಿಸಲಾಗಿದೆ.

ನಕಾರದ ಷೋಡಶರೂಪಗಳು: ಇದರ ವರ್ಣವು ಪೀತ (ಹಳದಿ), ಚತುರ್ಮುಖ ಬ್ರಹ್ಮನು ಇದರ ದೇವತೆ, ಸಾವಿತ್ರಿ ಇದರ ಶಕ್ತಿ, ಪೃಥ್ವಿ ಇದರ ಆಧಾರ, ಇದರ ಛಂದ ಅನುಷ್ಟುಪ್ ಮತ್ತು ಋಷಿ ವಶಿಷ್ಠ, ಪಶ್ಚಿಮ ಮುಖವು ಇದರ ಸ್ಥಾನ ಮತ್ತು ಸದ್ಯೋಜಾತನು ಬ್ರಹ್ಮನಾಗಿದ್ದಾನೆ. ವಜ್ರವು ಆಯುಧ, ನಿವೃತ್ತಿ ಕಲೆಯು ಮತ್ತು ಗುಣವು ಕಠಿಣ, ಚತುರಾಕಾರ ಚಕ್ರ, ಉರಿಯುವ ಅಗ್ನಿಯಂತೆ ಇದರ ಪ್ರಕಾಶವು, ಮನವೆ ಕರಣ ಮತ್ತು ವಾಯು ಪ್ರಾಣವಾಗಿದೆ. ಜ್ಞಾನೇಂದ್ರಿಯವು ಘ್ರಾಣವಾಗಿದೆ.[೨೧]

ಮಕಾರದ ಷೋಡಶರೂಪಗಳು: ನೀರಿನಂತೆ ಶ್ವೇತವರ್ಣವು, ವಿಷ್ಣು ದೇವತೆ,

---

೧೬. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೨೬.
೧೭. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೨೭
೧೮. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೨೮
೧೯. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೨೯
೨೦. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೩೦
೨೧. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೨೨-೨೫

ಶಕ್ತಿ ಲಕ್ಷ್ಮಿಯು ಮತ್ತು ಜಲವೇ ಆಧಾರ, ಛಂದ ತ್ರಿಷ್ಟುಪ್, ಋಷಿ ವಿಶ್ವಾಮಿತ್ರ, ಸ್ಥಾನ ಉತ್ತರ ವಕ್ತ್ರ ಮತ್ತು ವಾಮದೇವ ಬ್ರಹ್ಮ, ಪದ್ಮ ಆಯುಧ, ಪ್ರತಿಷ್ಠಾ ಕಲೆಯು, ದ್ರವ ಸ್ವಭಾವವೇ ಗುಣ ಮತ್ತು ಅರ್ಧಚಂದ್ರಾಕೃತಿಯೆ ಚಕ್ರವು. ಚಂದ್ರನಂತಹ ಪ್ರಕಾಶವು, ಬುದ್ಧಿಯು ಕಾರಣ ಮತ್ತು ಅಪಾನವಾಯು ಮತ್ತು ಜೀಹ್ವೆ ಜ್ಞಾನೇಂದ್ರಿಯವಾಗಿದೆ.[೨೨]

ಶಿಕಾರದ ಷೋಡಶರೂಪಗಳು: ಜಿಂಕೆಯಂತಹ ರಕ್ತವರ್ಣ, ರುದ್ರ ದೇವತೆ, ಗೌರೀಶಕ್ತಿ ಮತ್ತು ಆಧಾರ ಅಗ್ನಿ, ಛಂದ ಉಷ್ಣಿಕ, ಋಷಿ ಜಮದಗ್ನಿ, ಸ್ಥಾನ ದಕ್ಷಿಣ ವಕ್ತ್ರ ಮತ್ತು ಅಘೋರ, ಸ್ವಸ್ತಿಕ ಆಯುಧ, ವಿದ್ಯಾಕಲೆಯು, ಗುಣದೀಪ್ತಿ ಸಂವಲಿತ, ತ್ರಿಕೋಣಾಕಾರ ಚಕ್ರ, ವಿದ್ಯುತ್ತಿನಂತಹ ಪ್ರಕಾಶವು, ಅಹಂಕಾರ ಕರಣ, ವ್ಯಾನವಾಯು ಮತ್ತು ನೇತ್ರ ಜ್ಞಾನೇಂದ್ರಿಯವಾಗಿದೆ. [೨೩]

ವಾಕಾರದ ಷೋಡಶರೂಪಗಳು: ವಾಯುವಿನಂತೆ ಹರಿತ (ಹಸಿರು) ವರ್ಣ, ಈಶ್ವರ ದೇವತೆ, ಅಂಬಿಕೆ ಮಹಾಶಕ್ತಿ ಮತ್ತು ವಾಯು ಆಧಾರ, ಛಂದ ಬೃಹತಿ, ಋಷಿ ಕಶ್ಯಪ, ಸ್ಥಾನ ಪೂರ್ವ ವಕ್ತ್ರ ಮತ್ತು ಬ್ರಹ್ಮ ತತ್ಪುರುಷ, ಬಿಂದುಸ್ವರೂಪ ಆಯುಧ, ಕಲೆ ಶಾಂತಿ ಮತ್ತು ಗುಣ ಸ್ಪರ್ಶ, ಚಕ್ರ ಷಡಾಕಾರ, ಇಂದ್ರನೀಲ ಮಣಿಯಂತಹ ಪ್ರಕಾಶ, ಚಿತ್ತಕರಣ, ಉದಾನ ವಾಯು ಮತ್ತು ಸ್ಪರ್ಶ ಜ್ಞಾನೇಂದ್ರಿಯ.[೨೪]

ಯಕಾರದ ಷೋಡಶರೂಪಗಳು: ಆಕಾಶದಂತೆ ನೀಲವರ್ಣ, ಸದಾಶಿವ ದೇವತೆ, ಉನ್ಮನೀ ಶಕ್ತಿ ಮತ್ತು ಆಕಾಶವೇ ಆಧಾರ, ಛಂದ ಜಗತಿ, ಋಷಿ ಭರದ್ವಾಜ, ಸ್ಥಾನ ಊರ್ಧ್ವಮುಖ ಮತ್ತು ಈಶಾನ ಬ್ರಹ್ಮ, ಆಯುಧ ತ್ರಿಶೂಲ, ಶಾಂತ್ಯಾತೀತ ಕಲೆ ಮತ್ತು ಗುಣಶೂನ್ಯ, ಚಂದ್ರಮಣಿಯಂಥ ಪ್ರಕಾಶ, ಪ್ರಕೃತಿ ಕರಣ, ಸಮಾನವಾಯು, ಶ್ರೋತ್ರವು ಜ್ಞಾನೇಂದ್ರಿಯ.[೨೫] ಹೀಗೆ ಪಂಚಾಕ್ಷರದ ಷೋಡಶರೂಪಗಳನ್ನು ಚಂದ್ರಜ್ಞಾನಾಗಮ ವರ್ಣಿಸಿದೆ.

ಚಂದ್ರಜ್ಞಾನಾಗಮ ಮತ್ತು ಸೂಕ್ಷ್ಮಾಗಮಗಳಲ್ಲಿ ನಿರೂಪಿತವಾಗಿರುವ "ನಮಃ ಶಿವಾಯ" ಎಂಬ ಪಂಚಾಕ್ಷರಗಳ ಋಷಿ, ದೇವತೆ, ಛಂದಸ್ಸು ಇತ್ಯಾದಿಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸವು ಕಂಡುಬರುತ್ತದೆ. ಇಂತಹ ವ್ಯತ್ಯಾಸಗಳಿಗೆ ಕಾರಣವೇನೆಂಬುದು ಸ್ಪಷ್ಟವಾಗಿಲ್ಲ. ಆದರೆ ಇವುಗಳನ್ನು ಅಧ್ಯಯನ ಮಾಡಿದ ಸಾಧಕರಿಗೆ ಯಾವ ಆಗಮದ ಅಬಿಪ್ರಾಯವನ್ನು ಅನುಸರಿಸಬೇಕೆಂಬ ವಿಷಯದಲ್ಲಿ ಸಂದೇಹ ಬರುವದು ಸಹಜ. ಅಂತಹ ಸಂದರ್ಭದಲ್ಲಿ ಸಾಧಕರು ಯಾವುದೇ ಗೊಂದಲಕ್ಕೂ ಒಳಗಾಗದೆ ಯಾವುದಾದರೂ ಒಂದು ಆಗಮದ ಅಭಿಪ್ರಾಯವನ್ನು ನಿಷ್ಠೆಯಿಂದ ಅನುಸರಿಸುವುದು ಒಳ್ಳೆಯದು.

---

೨೨. ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೨೬–೨೯
೨೩. ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೩೦–೩೩.
೨೪. ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೩೪–೩೭
೨೫. ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೩೮–೪೧

ವಚನಕಾರರೂ ಸಹ ಓಂಕಾರ ಸಹಿತವಾದ ಪಂಚಾಕ್ಷರಗಳಿಂದ ಕೂಡಿದ ಈ ಮಹಾಮಂತ್ರದಲ್ಲಿ ಬ್ರಹ್ಮ, ವಿಷ್ಣು, ರುದ್ರ, ಶಕ್ತಿ, ಶಿವ ಎಂಬ ಅಧಿದೇವತೆಗಳೂ, ಪಂಚಭೂತಗಳೂ, ನಾಸಿಕ, ಜಿಹ್ವಾ, ನೇತ್ರ, ಶ್ರವಣ, ತ್ವಚೆ ಎಂಬ ಜ್ಞಾನೇಂದ್ರಿಯಗಳೂ, ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಈಶಾನಗಳೆಂಬ ಪಂಚಬ್ರಹ್ಮರೂ ಅಂತರ್ಗತವಾಗಿರುವುದನ್ನು ತಮ್ಮ ಸುದೀರ್ಘವಾದ ವಚನಗಳಲ್ಲಿ ವರ್ಣಿಸಿದ್ದಾರೆ.

ನಕಾರವೆ ಪೃಥ್ವಿ: ಮಃಕಾರವೆ ಅಪ್ಪು, ಶಿಕಾರವೆ ಅಗ್ನಿ, ವಾಕಾರವೆ ವಾಯು,
ಯಕಾರವೆ ಆಕಾಶ, ಓಂಕಾರವೆ ಆತ್ಮಸ್ವರೂಪ ನೋಡ, ಮತ್ತೆ
ನಕಾರವೆ ಬ್ರಹ್ಮ, ಮಃಕಾರವೆ ವಿಷ್ಣು, ಶಿಕಾರವೆ ರುದ್ರ, ವಾಕಾರವೆ ಈಶ,
ಯಕಾರವೆ ಸದಾಶಿವ, ಓಂಕಾರವೆ ಮಹಾತ್ಮನು ನೋಡ.ಮತ್ತೆ
ಅಂತರ್ಯಾಮಿಯೆ ನಕಾರ, ಚೈತನ್ಯನೆ ಮಃಕಾರ, ಭಾವನೆ ಶಿಕಾರ,
ಕರ್ತಾರನೆ ವಾಕಾರ, ಕ್ಷೇತ್ರಜ್ಞನೆ ಯಕಾರ, ಶಿವನೆ ಓಂಕಾರ ನೋಡ.[೨೬]

ಎಂದು ಈ ಮಹಾಮಂತ್ರದಲ್ಲಿ ದೇವಾಧಿದೇವತೆಗಳು ಅಂತರ್ಗತವಾಗಿರುವುದನ್ನು ತಮ್ಮ ಸುದೀರ್ಘವಾದ ವಚನಗಳಲ್ಲಿ ವರ್ಣಿಸಿದ್ದಾರೆ. ಹೀಗೆ ಪಂಚಾಕ್ಷರಮಂತ್ರದ ಸ್ವರೂಪ, ಋಷಿ, ದೇವತೆ, ಛಂದಸ್ಸು, ಸ್ವರ ಮತ್ತು ಮುಖಾದಿಗಳ ವಿವರಣೆಯನ್ನು ಮಾಡಿದ ನಂತರ ಪ್ರಣವದ ಸ್ವರೂಪವನ್ನು ಪ್ರತ್ಯೇಕವಾಗಿ ಆಗಮಗಳಲ್ಲಿ ವರ್ಣಿಸಲಾಗಿದೆ.

ಓಂಕಾರದ ಸ್ವರೂಪ

ಅಕಾರೋ ದಕ್ಷಿಣೋ ಜ್ಞೇಯೋ ವಾಮಗಃ ಸ್ಯಾದುಕಾರಕಃ ॥
ಮಕಾರೋ ಮಧ್ಯಗಃ ಪ್ರೋಕ್ತಸ್ತ್ರಿವರ್ಣಃ ಪ್ರಣವೋ ಭವೇತ್
ತನ್ಮಧ್ಯೇ ತು ಹಕಾರಃ ಸ್ಯಾತ್ ಸಾಕ್ಷಾನ್ಮೋಕ್ಷಪ್ರದಃ ಶಿವಃ ॥
ಅಕಾರೋ ಬ್ರಹ್ಮಬೀಜಂ ಸ್ಯಾದುಕಾರೋ ವಿಷ್ಣುಬೀಜಕಂ।
ಮಕಾರೋ ರುದ್ರಬೀಜಂ ಚ ತೇಷಾಂ ದೇಹತ್ಮಕಃ ಶಿವಃ ॥
ಅಕಾರಃ ಪ್ರಕೃತಿಶ್ಚೈವಮುಕಾರಃ ಪುರುಷಾತ್ಮಕಃ।
ತನ್ನಿಯಂತಾ ಮಕಾರಃ ಸ್ಯಾನ್ನಾದಃ ಸಾಕ್ಷಾತ್ಸದಾಶಿವಃ ॥
ಇಚ್ಛಾಶಕ್ತಿರಕಾರಃ ಸ್ಯಾತ್ ಕ್ರಿಯಾಶಕ್ತಿರುಕಾರಕಃ।
ಜ್ಞಾನಶಕ್ತಿರ್ಮಕಾರಃ ಸ್ಯಾತ್ ನಾದಃ ಸಾಕ್ಷಾತ್ಪರಃ ಶಿವಃ ॥
ಅಕಾರೊ ರಕ್ತವರ್ಣಶ್ಚ ಶ್ಯಾಮಲಃ ಸ್ಯಾದುಕಾರಕಃ।
ಮಕಾರಃ ಸ್ಪಟಿಕಾಭಃ ಸ್ಯಾದ್ವರ್ಣಾತೀತಃ ಶಿವಾಕ್ಷರಃ ॥
ಅಕಾರೋ ರಾಜಸಃ ಪ್ರೋಕ್ತ ಉಕಾರಸ್ತಾಮಸಾತ್ಮಕಃ।
ಮಕಾರಃ ಸಾತ್ತ್ವಿಕೋ ಜ್ಞೇಯೋ ನಾದಃ ಸ್ಯಾತ್ತ್ರಿಗುಣಾತ್ಮಕಃ ॥
ಅಕಾರೋ ಬ್ರಹ್ಮರೂಪಃ ಸ್ಯಾದುಕಾರೋ ವಿಷ್ಣುರೂಪಕಃ।

೨೬.ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವಚನ ಸಂ. ೬, ವಚನ ಸಂಖ್ಯೆ ೨೦೧, ಪುಟ ೯೭

ರುದ್ರಾತ್ಮಕೋ ಮಕಾರಃ ಸ್ಯಾದೋಂಕಾರಸ್ತು ಸದಾಶಿವಃ।
ನಾದಃ ಪರಶಿವೋ ಜ್ಞೇಯಃ ಪಂಚದೇವಾತ್ಮಕಃ ಸ್ಮೃತಃ ॥
ಅಕಾರಃ ಬಿಂದುರೂಪಂ ಚ ಜಾಗ್ರತ್ಸ್ಥಮಿತಿ ಭಾವಯೇತ್।
ಸ್ವಪ್ನಸ್ಥಮಥ ಜಾನೀಯಾದುಕಾರಂ ನಾದರೂಪಕಮ್ ॥
ಸುಷುಪ್ತಿಸ್ಥಂ ಮಕಾರಂ ಚ ಕಲಾರೂಪಂ ವರಾನನೇ।
ಓಂಕಾರಂ ಶಕ್ತಿರೂಪಂ ಚ ತುರ್ಯಸ್ಥಮಿತಿ ಭಾವಯೇತ್ ॥
ತುರ್ಯಾತೀತಸ್ಥಿತಂ ವಿದ್ಯಾಚ್ಛಿವಂ ಸರ್ವಾತ್ಮಕಂ ಪರಮ್।
ಯೋಗಿನಾಂ ಸಾಧನಮಿದಮೋಮಿತ್ಯೇಕಾಕ್ಷರಂ ಪರಮ್॥ [೨೭]

ಬಲದ 'ಅ'ಕಾರ, ಎಡದ 'ಉ'ಕಾರ, ಮಧ್ಯದ 'ಮ'ಕಾರ (ಅ.ಉ.ಮ) ಸೇರಿ ಓಂಕಾರ ಪ್ರಣವವಾಗುತ್ತದೆ. ಅದರ ನಡುವೆ 'ಹ' ಕಾರ. ಹೀಗೆ ಪ್ರಣವಮಂತ್ರ ವರ್ಣಾತ್ಮಕವಾಗಿದ್ದು, ಸಾಕ್ಷಾತ್ ಮೋಕ್ಷಪ್ರದವೂ ಮಂಗಳಕರವು ಆಗಿದೆ. 'ಅ' ಕಾರವೇ ಬ್ರಹ್ಮಬೀಜ, 'ಉ' ಕಾರವೇ ವಿಷ್ಣುಬೀಜ ಮತ್ತು 'ಮ' ಕಾರವೇ ರುದ್ರಬೀಜವಾಗುಳ್ಳ ಈ ವರ್ಣಗಳಿಗೆ ಶಿವನು ದೇಹಾತ್ಮಕನಾಗಿದ್ದಾನೆ. 'ಅ' ಕಾರ ಪ್ರಕೃತಿ, 'ಉ'ಕಾರ ಪುರುಷ; ಇವೆರಡರ ನಿಯಂತೃ 'ಮ' ಕಾರ ಹೀಗೆ 'ಓಂ' ಕಾರವೇ ಸಾಕ್ಷಾತ್ ಸದಾಶಿವನು. ಇಚ್ಛಾಶಕ್ತಿಯೇ 'ಅ'ಕಾರ, ಕ್ರಿಯಾಶಕ್ತಿಯೇ 'ಉ'ಕಾರ; ಜ್ಞಾನಶಕ್ತಿಯೆ 'ಮ'ಕಾರ; 'ನಾದ'ವೇ ಸಾಕ್ಷಾತ್ ಪರಶಿವನು. 'ಅ'ಕಾರ ರಕ್ತವರ್ಣ, 'ಉ' ಕಾರವು ಕೃಷ್ಣವರ್ಣ; 'ಮ' ಕಾರವು ಸ್ಫಟಿಕವರ್ಣ; ಶಿವಾಕ್ಷರವು ವರ್ಣಾತೀತವಾಗಿದೆ. 'ಅ'ಕಾರ ರಾಜಸ, 'ಉ'ಕಾರ ತಾಮಸ, 'ಮ'ಕಾರ ಸಾತ್ವಿಕ, 'ನಾದ'ವು ತ್ರಿಗುಣಾತ್ಮಕವಾಗಿದೆ. ಬ್ರಹ್ಮರೂಪ 'ಅ' ಕಾರ, ವಿಷ್ಣುರೂಪ 'ಉ'ಕಾರ; ರುದ್ರರೂಪ 'ಮ'ಕಾರ; ಓಂಕಾರವು ಸದಾಶಿವಸ್ವರೂಪವಾದವು. ಹೀಗೆ ಪ್ರಣವವು ಪಂಚದೇವತಾಮಯವಾಗಿದೆ ಎಂದು ತಿಳಿಯಬೇಕು. ಜಾಗ್ರತಾವಸ್ಥೆಯಲ್ಲಿ 'ಅ' ಕಾರವು ಬಿಂದುರೂಪ, ಸ್ವಪ್ನಾವಸ್ಥೆಯಲ್ಲಿ 'ಉ'ಕಾರವು ನಾದರೂಪದಲ್ಲಿರುವುದೆಂದು ಭಾವಿಸಬೇಕು. ಸುಷುಪ್ತಿಯ ಅವಸ್ಥೆಯಲ್ಲಿ 'ಮ'ಕಾರವು ಕಲಾರೂಪದಲ್ಲಿ ಮತ್ತು ತುರ್ಯಾವಸ್ಥೆಯಲ್ಲಿ ಓಂಕಾರವು ಶಕ್ತಿರೂಪದಲ್ಲಿ ಇರುವದೆಂದು ಭಾವಿಸಬೇಕು. ಸರ್ವಾತ್ಮಕವಾದ ಪರಶಿವವಸ್ತು ತುರ್ಯಾತೀತ ಸ್ಥಿತಿಯಲ್ಲಿರುವುದು. 'ಓಂ'ಕಾರವೆಂಬ ಒಂದಕ್ಷರವು (ಪ್ರಣವ) ಯೋಗಿಗಳಿಗೆ 'ಧ್ಯಾನ'ದ ಶ್ರೇಷ್ಠವಾದ ಸಾಧನವಾಗಿದೆ ಎಂದು ಆಗಮದಲ್ಲಿ 'ಓಂ'ಕಾರದ ಸ್ವರೂಪವನ್ನು ವರ್ಣಿಸಲಾಗಿದೆ.

ವಚನಗಳಲ್ಲಿಯೂ ಈ 'ಓಂ' ಕಾರದ ಉತ್ಪತ್ತಿ ಮತ್ತು ಅದರ ವ್ಯಾಪ್ತಿಯನ್ನು ಕುರಿತು ಶರಣರು ಇದೇ ಬಗೆಯಾಗಿಯೇ ವಿವೇಚಿಸಿದ್ದಾರೆ –

"ನಾಮರೂಪು ಕ್ರಿಯೆಗಳೇನುಯೇನೂ ಇಲ್ಲದ ನಿತ್ಯನಿರಂಜನ ಪರವಸ್ತು ತಾನೇ ನಿರಂಜನ ಪ್ರಣವ ನೋಡಾ. ಆ ನಿರಂಜನ ಪರವಸ್ತುವಿನಲ್ಲಿ ಪರಮ ಚಿತ್ಕಳೆಯು ಉದಯವಾಗಿ, ಅ ಚಿದ್ರೂಪ ಕಲೆಯೇ ಶುದ್ಧ ಪ್ರಣವವೆನಿಸಿತ್ತು ನೋಡಾ.

---

೨೭. ಸೂ.ಆ. ಕ್ರಿಪಾ, ಪಟಲ ೪, ಶ್ಲೋಕ ಸಂಖ್ಯೆ ೭–೧೪

ಆ ಶುದ್ಧ ಪ್ರಣವದಲ್ಲಿ ಚಿತ್ತು, ಆ ಚಿತ್ತೇ ಸಚ್ಚಿದಾನಂದ ಸ್ವರೂಪವುಳ್ಳದಾಗಿ, ಚಿತ್‌ಪ್ರಣವವೆನಿಸಿತ್ತು ನೋಡಾ ಅ ಚಿತ್ ಪ್ರಣವ ಸ್ವರೂಪವಪ್ಪ ಪರತತ್ವದಲ್ಲಿ ಪರಶಕ್ತಿ ಉದಯವಾಯಿತ್ತು, ಆ ಪರಾಶಕ್ತಿಯಿಂದ ನಾದಬಿಂದು ಕಳೆಗಳು ಆದವಯ್ಯ. ಅಕಾರವೇ ನಾದ, ಉಕಾರವೇ ಬಿಂದು ಮಕಾರವೇ ಕಳೆ–ಇಂತೀ ಮೂರಕ್ಕೆ ಪರಾಶಕ್ತಿಯೇ ತಾಯಿ. ಇಂತೀ ನಾಲ್ಕು ಒಂದಾದಲ್ಲಿ ಪ್ರಣವವಾಯಿತ್ತಯ್ಯ. ಆ ಪ್ರಣಮವೇ ಪಂಚಲಕ್ಷಣವಾಯಿತು. ಅದೆಂತೆಂದೊಡೆ ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧ ಚಂದ್ರಾಕೃತಿ, ಬಿಂದ್ವಾಕೃತಿ ಇಂತೀ ಪಂಚ ಆಕೃತಿಯಾಯಿತ್ತಯ್ಯ ತಾರಕಾಕೃತಿಯಲ್ಲಿ ನಕಾರ ಜನನ, ದಂಡಕಾಕೃತಿಯಲ್ಲಿ ಮಕಾರ ಜನನ, ಕುಂಡಲಾಕೃತಿಯಲ್ಲಿ ಶಿಕಾರ ಜನನ, ಅರ್ಧ ಚಂದ್ರಾಕೃತಿಯಲ್ಲಿ ವಕಾರ ಜನನ, ಬಿಂದ್ವಾಕೃತಿಯಲ್ಲಿ ಯಕಾರ ಜನನ –ಇಂತೀ ಪಂಚ ಪ್ರಣವದಿಂದ ಪಂಚಾಕ್ಷರಂಗಳು ಉತ್ಪತ್ಯವಾದವಯ್ಯ, ಪ್ರಣವವೇ ಕೂಡಿ, ಪಂಚಾಕ್ಷರವೆಂದು ಹೇಳಲ್ಪಟ್ಟಿತ್ತಯ್ಯ ಮಹಾಲಿಂಗ ಗುರುಸಿದ್ಧೇಶ್ವರ ಪ್ರಭುವೇ"[೨೮] ಎಂದು ಪ್ರಣವದ ಉತ್ಪತ್ತಿ ಮತ್ತು ಪ್ರಣವದಲ್ಲಿ ಪಂಚಾಕ್ಷರಿಯ ಜನನವಾಯಿತೆಂದು ನಿರೂಪಣೆ ಮಾಡಿದ್ದಾರೆ.

ಹೀಗೆ ಸಾಕ್ಷಾತ್ ಪರಶಿವ ಸ್ವರೂಪವಾದ ಪ್ರಣವದಿಂದ ಕೂಡಿದ ಪಂಚಾಕ್ಷರಮಂತ್ರವು (ಷಡಕ್ಷರಮಂತ್ರ) ಎಲ್ಲಾ ವಿದ್ಯೆಗಳ, ಎಲ್ಲಾ ತತ್ವಗಳ, ಎಲ್ಲಾ ಶಕ್ತಿಗಳ ಸ್ವರೂಪವಾಗಿದೆ ಎಂದು ಆಗಮ ಮತ್ತು ವಚನಗಳಲ್ಲಿ ಪ್ರತಿಪಾದಿಸಲಾಗಿದೆ.

ಷಡಕ್ಷರ ಮಂತ್ರದ ಸ್ವರೂಪ

ಷಡಕ್ಷರ ಮಂತ್ರವು ಎಲ್ಲಾ ವಿದ್ಯೆಗಳಿಗೆ, ಎಲ್ಲಾ ಮಂತ್ರಗಳಿಗೆ ಆದಿ ಬೀಜವಾಗಿದೆ. ವಟ ಬೀಜದಂತೆ ಅತೀ ಸೂಕ್ಷ್ಮವಾಗಿದ್ದರೂ ಮಹಾನ್ ಅರ್ಥವುಳ್ಳದ್ದಾಗಿದೆ ಎಂದು ಷಡಕ್ಷರ ಮಂತ್ರ ಸ್ವರೂಪವನ್ನು ಸೂಕ್ಷ್ಮಾಗಮದಲ್ಲಿ ವಿಲೋಮವಾಗಿ ವಿವರಿಸಲಾಗಿದೆ.

'ಯ'ಕಾರವು ಪರಾಶಕ್ತಿಯ ಸ್ವರೂಪ, 'ವಾ'ಕಾರವು ಆದಿಶಕ್ತಿಯ ಸ್ವರೂಪ, 'ಶಿ'ಕಾರವು ಇಚ್ಛಾಶಕ್ತಿಯ ಸ್ವರೂಪ, 'ಮ' ಕಾರವು ಜ್ಞಾನಶಕ್ತಿಯ ಸ್ವರೂಪ, 'ನ'ಕಾರವು ಕ್ರಿಯಾಶಕ್ತಿಯ ಸ್ವರೂಪ, ಮತ್ತು 'ಓಂ'ಕಾರವು ಚಿತ್‌ಶಕ್ತಿಯ ಸ್ವರೂಪದ್ದಾಗಿದೆ.[೨೯]

'ಯ'ಕಾರವು ಶಿವಸಾದಾಖ್ಯ, 'ವಾ'ಕಾರವು ಅಮೂರ್ತಸಾದಾಖ್ಯ, 'ಶಿ'ಕಾರವು ಮೂರ್ತಸಾದಾಖ್ಯ 'ಮ'ಕಾರವು ಕರ್ತೃಸಾದಾಖ್ಯ, 'ನ'ಕಾರವು ಕರ್ಮಸಾದಾಖ್ಯ, ಓಂಕಾರವು ಮಹಾಸಾದಾಖ್ಯ, ಸ್ವರೂಪವಾಗಿದೆ.[೩೦] 'ಯ'ಕಾರವು ಪ್ರಸಾದಲಿಂಗ; 'ವಾ'ಕಾರವು ಚರಲಿಂಗ; 'ಶಿ'ಕಾರವು ಶಿವಲಿಂಗ; 'ಮ'ಕಾರವು ಗುರುಲಿಂಗ; 'ನ'ಕಾರವು ಆಚಾರಲಿಂಗ; ಮತ್ತು ಓಂಕಾರವು ಮಹಾಲಿಂಗವಾಗಿದೆ.[೩೧]

---

೨೮. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವಚನ ಸಂ. ೬, ವಚನ ಸಂಖ್ಯೆ ೧೯೮, ಪುಟ ೯೪

೨೯. ಸೂ.ಆ. ಕ್ರಿಪಾ, ಪಟಲ ೪, ಶ್ಲೋಕ ಸಂಖ್ಯೆ ೪೧

೩೦. ಸೂ.ಆ. ಕ್ರಿಪಾ, ಪಟಲ ೪, ಶ್ಲೋಕ ಸಂಖ್ಯೆ ೪೨, ೪೩

೩೧. ಸೂ.ಆ. ಕ್ರಿಪಾ, ಪಟಲ ೪, ಶ್ಲೋಕ ಸಂಖ್ಯೆ ೪೪

ಷಡಕ್ಷರ ಮಂತ್ರವು ಐಕ್ಯ, ಶರಣ, ಪ್ರಾಣಲಿಂಗಿ, ಪ್ರಸಾದಿ, ಮಹೇಶ್ವರ, ಭಕ್ತ- ಹೀಗೆ ಷಟಸ್ಥಲಾತ್ಮಕವಾಗಿದೆ.[೩೨]

ಭಾವ, ಜ್ಞಾನ, ಮನಸ್, ನಿರಹಂಕಾರ, ಬುದ್ಧಿ, ಚಿತ್ತಗಳೆಂಬ ಭಾವಾದಿಗಳು ಷಡಕ್ಷರ ಮಂತ್ರದ ಸ್ವರೂಪವಾಗಿವೆ[೩೩] ಎಂದು ಷಡಕ್ಷರ ಮಂತ್ರದ ಸ್ವರೂಪವನ್ನು ವರ್ಣಿಸಲಾಗಿದೆ. ಇದೇ ವಿವರಣೆಯನ್ನು ವಚನಗಳೂ ಒಳಗೊಂಡಿದ್ದು –

ನಕಾರವೆ ಕ್ರಿಯಾಶಕ್ತಿ, ಮಕಾರವೆ ಜ್ಞಾನಶಕ್ತಿ, ಶಿಕಾರವೆ ಇಚ್ಛಾಶಕ್ತಿ,
ವಾಕಾರವೇ ಆದಿಶಕ್ತಿ, ಯಕಾರವೆ ಪರಶಕ್ತಿ, ಓಂಕಾರವೆ ಚಿಚ್ಛಕ್ತಿ,
ಇಂತಿವು ಮಂತ್ರಶಕ್ತಿಸ್ವರೂಪವೆಂದರಿವುದು ನೋಡ. ಮತ್ತೆ,
ನಕಾರವೆ ಕರ್ಮಸಾದಾಖ್ಯ,ಮಃಕಾರವೆ ಕರ್ತೃಸಾದಾಖ್ಯ, ಶಿಕಾರವೆ ಮೂರ್ತಸಾದಾಖ್ಯ
ವಾಕಾರವೆ ಅಮೂರ್ತಸಾದಾಖ್ಯ, ಯಕಾರವೆ ಶಿವಸಾದಾಖ್ಯ,
ಓಂಕಾರವೆ ಮಹಾಸಾದಾಖ್ಯ ನೋಡಾ
ಮತ್ತೆ, ನಕಾರವೆ ಪೀತವರ್ಣ, ಮಃಕಾರವೆ ನೀಲವರ್ಣ, ಶಿಕಾರವೆ ಕುಂಕುಮವರ್ಣ,
ವಾಕಾರವೆ ಶ್ವೇತವರ್ಣ, ಯಕಾರವೆ ಸ್ಫಟಿಕವರ್ಣ,
ಓಂಕಾರವೆ ಜ್ಯೋತಿರ್ಮಯ ಸ್ವರೂಪ ನೋಡಾ.
ಇಂತಿವು ಮಂತ್ರಮೂರ್ತಿಯ ವರ್ಣಭೇದವೆಂದರಿವುದಯ್ಯ. ಮತ್ತೆ,
ನಕಾರವೆ ಸದ್ಯೋಜಾತಮಂತ್ರಮೂರ್ತಿ, ಮಃಕಾರವೆ ವಾಮದೇವ ಮಂತ್ರಮೂರ್ತಿ,
ಶಿಕಾರವೆ ಅಘೋರಮಂತ್ರಮೂರ್ತಿ, ವಾಕಾರವೆ ತತ್ಪುರುಷ ಮಂತ್ರಮೂರ್ತಿ,
ಯಕಾರವೆ ಈಶಾನ್ಯ ಮಂತ್ರಮೂರ್ತಿ, ಓಂಕಾರವೆ ಮಹಾಮಂತ್ರಮೂರ್ತಿ ನೋಡಾ,
ಇಂತಿವು ಮಂತ್ರಮೂರ್ತಿಯ ವದನಭೇದವೆಂದರಿವುದು ನೋಡ.
ಮತ್ತೆ, ನಕಾರವೆ ಸತ್ತು, ಮಃಕಾರವೆ ಚಿತ್ತು, ಶಿಕಾರವೆ ಆನಂದ,
ವಾಕಾರವೆ ನಿತ್ಯ, ಯಕಾರವೆ ಪರಿಪೂರ್ಣ,
ಓಂಕಾರವೆ ನಿರಂಜನ ಸ್ವರೂಪವೆಂದರಿವುದಯ್ಯ.
ಮತ್ತೆ, ನಕಾರವೆ ಆಚಾರಲಿಂಗ, ಮಃಕಾರವೆ ಗುರುಲಿಂಗ, ಶಿಕಾರವೆ ಶಿವಲಿಂಗ,
ವಾಕಾರವೆ ಜಂಗಮಲಿಂಗ, ಯಕಾರವೆ ಪ್ರಸಾದಲಿಂಗ, ಓಂಕಾರವೆ ಮಹಾಲಿಂಗ
ಇಂತಿವು ಷಡಕ್ಷರ ಮಂತ್ರಲಿಂಗವೆಂದರಿವುದಯ್ಯ.[೩೪]

ಎಂದಿದ್ದಾರೆ. ಇದನ್ನೇ ತಮ್ಮ ಇನ್ನೊಂದು ವಚನದಲ್ಲಿ ತೋಂಟದ ಸಿದ್ಧಲಿಂಗಯತಿಗಳು –

ಕರ್ಮಾಂಗ ಸ್ವರೂಪನಪ್ಪ ಭಕ್ತನೆ ನಕಾರ.
ವಿದ್ಯಾಂಗ ಸ್ವರೂಪನಪ್ಪ ಮಾಹೇಶ್ವರನೆ ಮಃಕಾರ.

---

೩೨. ಸೂ.ಆ. ಕ್ರಿಪಾ, ಪಟಲ ೪, ಶ್ಲೋಕ ಸಂಖ್ಯೆ ೪೫
೩೩. ಸೂ.ಆ. ಕ್ರಿಪಾ, ಪಟಲ ೪, ಶ್ಲೋಕ ಸಂಖ್ಯೆ ೪೬
೩೪. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವಚನ ಸಂ. ೬, ವಚನ ಸಂಖ್ಯೆ ೨೦೦, ಪುಟ೯೬

ಕಾಮಾಂಗ ಸ್ವರೂಪನಪ್ಪ ಪ್ರಸಾದಿಯೇ ಶಿಕಾರ.
ಯೋಗಾಂಗ ಸ್ವರೂಪನಪ್ಪ ಪ್ರಾಣಲಿಂಗಿಯೆ ವಾಕಾರ.
ಭೂತಾಂಗ ಸ್ವರೂಪನಪ್ಪ ಶರಣನೆ ಯಕಾರ.
ಶಿವಾಂಗ ಸ್ವರೂಪನಪ್ಪ ಐಕ್ಯನೆ ಓಂಕಾರ ನೋಡ,ಮತ್ತೆ
ನಕಾರವೆ ಸದ್ಭಕ್ತಿ, ಮಃಕಾರವ ನೈಷ್ಠಿಕಾಭಕ್ತಿ, ಶಿಕಾರವೆ ಅವಧಾನಭಕ್ತಿ
ವಾಕಾರವೆ ಅನುಭಾವಭಕ್ತಿ, ಯಕ್ಕಾರವೇ ಆನಂದಭಕ್ತಿ,
ಓಂಕಾರವೆ ಸಮರಸಭಕ್ತಿ ನೋಡ.[೩೫]

ಎಂದು ಆಗಮದಲ್ಲಿ ಪ್ರತಿಪಾದಿತವಾದ ಷಡಕ್ಷರ ಮಂತ್ರ ಸ್ವರೂಪವನ್ನೇ ವಚನಗಳಲ್ಲಿಯೂ ಪ್ರತಿಪಾದಿಸಲಾಗಿದೆ. ಅಲ್ಲದೇ ಇಂಥ ಮಹಿಮಾನ್ವಿತವಾದ ಮಹಾಮಂತ್ರವನ್ನು ಸತತವಾಗಿ ಪಠಿಸಬೇಕೆಂದು ತಿಳಿಸುತ್ತಾ ಈ ಮಹಾಮಂತ್ರವನ್ನು ಶ್ರೀಗುರುವಿನಿಂದ ಪಡೆದರೆ ಮಾತ್ರ ಅದು ಸಿದ್ಧಿದಾಯಕವಾಗುವುದೆಂದು ಆಗಮ ಮತ್ತು ವಚನಗಳೆರಡೂ ಪ್ರತಿಪಾದಿಸಿವೆ.

ಶ್ರೀಗುರುವಿನಿಂದ ಪಡೆದ ಮಂತ್ರವೇ ಎಲ್ಲ ಸಾಧನೆ, ಸಿದ್ಧಿಗೂ ಮೂಲ

ಗುರುವಿನ ಅನುಗ್ರಹವಿಲ್ಲದೇ ಮಂತ್ರ ನಿಷ್ಫಲ. ಅದರಲ್ಲಿ ಚೈತನ್ಯವಿರದು, ಮಂತ್ರತ್ವವಿರದು. ಅದು ಕೇವಲ ಅಕ್ಷರಗಳ ಸಮೂಹವಾಗಿರುವುದು. ಆದರೆ ಅದೇ ಗುರುವಿನಿಂದ ಬಂದರೆ ಮಾತ್ರ ಮಂತ್ರವಾಗಿ ಸಫಲವಾಗುವದು.

"ಸಮಾಹಿತ ಮನಸ್ಸುಳ್ಳ ಸಾಧಕನು ದೀಕ್ಷೆಯ ನಂತರದಲ್ಲಿ ಗುರುವಿನ ಅಪ್ಪಣೆಯ ಮೇರೆಗೆ ವಿಧಿಪೂರ್ವಕವಾಗಿ ಸಂಕಲ್ಪ ಮಾಡಿ ಪ್ರತಿನಿತ್ಯವೂ ಮಂತ್ರವನ್ನು ಜಪಿಸಬೇಕು"[೩೬] ಎಂಬ ಚಂದ್ರಜ್ಞಾನಾಗಮದ ಉಕ್ತಿಯಂತೆ ಮಂತ್ರದೀಕ್ಷೆಯಾಗದ ಯಾರೂ ಸಹ ಮಂತ್ರವನ್ನು ಜಪಿಸಲು ಅರ್ಹರಲ್ಲ. ಆದುದರಿಂದ ಮಂತ್ರವನ್ನು ಜಪಿಸುವುದಕ್ಕೆ ಮೊದಲು ಪ್ರತಿಯೊಬ್ಬರೂ ಗುರುವಿನಿಂದ ಮಂತ್ರದೀಕ್ಷೆಯನ್ನು ಪಡೆದಿರಲೇಬೇಕು ಎಂದು ಪ್ರತಿಪಾದಿಸಿದೆ.

ತೋಂಟದ ಸಿದ್ಧಲಿಂಗಯತಿಗಳು ಇದನ್ನೇ ಸಮರ್ಥಿಸಿ ಶ್ರೀಗುರುವಿನಿಂದ ಪಡೆದ ಶಿವಮಂತ್ರವೇ ಎಲ್ಲ ಸಾಧನೆಗೂ ಹಾಗೂ ಸಿದ್ಧಿಗೂ ಮೂಲವೆಂದು ಹೇಳುತ್ತಾ'..... ಶಿವಮಂತ್ರೋಪದೇಶವಿಲ್ಲದಾತನು ಪ್ರಕೃತಿಕಾಯನೆನಸಿಕೊಂಬನಯ್ಯಾ, ಇದು ಕಾರಣ, ಪ್ರಕೃತಿಕಾಯವೆಂದು ಜ್ಞಾನಕಾಯವೆಂದು ಎರಡು ಭೇದವಾಗಿಪ್ಪುದಯ್ಯ. ಶಿವಮಂತ್ರ ದೀಕ್ಷೋಪದೇಶವಾಗಲಾಗಿ ಪ್ರಕೃತಿಕಾಯ ಹೋಗಿ ಜ್ಞಾನಕಾಯವಪ್ಪುದು ತಪ್ಪದಯ್ಯ'[೩೭] ಎನ್ನುತ್ತಾರೆ. ಆದುದರಿಂದ ಮಂತ್ರಸಿದ್ಧಿಯಾಗಬೇಕಾದರೆ ಗುರುಗಳಿಂದ ಮಂತ್ರದೀಕ್ಷೆಯನ್ನು ಪಡೆದು ಮಂತ್ರದ ಅನುಷ್ಠಾನ ಮಾಡಬೇಕು.

---

೩೫. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವಚನ ಸಂಪುಟ ೬, ವಚನ ಸಂಖ್ಯೆ ೨೦೧,ಪುಟ೯೭
೩೬. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೪೮
೩೭. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವಚನ ಸಂ. ೬, ವಚನ ಸಂಖ್ಯೆ ೧೯೭, ಪುಟ೪

ಮಂತ್ರೋಪದೇಶಕ್ಕೆ ಅರ್ಹರು-ಅನರ್ಹರು

ಪ್ರಣವ ಸಹಿತವಾದ ಈ ಮಹಾಮಂತ್ರೋಪದೇಶಕ್ಕೆ ಯಾರು ಅರ್ಹರು? ಯಾರು ಅನರ್ಹರು? ಎಂಬುದನ್ನು ಸೂಕ್ಷ್ಮಾಗಮವು ನಿರೂಪಿಸಿದೆ.

ಕಾಂತಾಃ ಸುಶೀಲಾ ಧರ್ಮಿಷ್ಠಾಃ ಸತ್ಯವ್ರತಪರಾಯಣಾಃ।
ವೇದಮಂತ್ರೈಕನಿರತಾಸ್ತೇಷಾಂ ಧ್ಯೇಯಃ ಷಡಕ್ಷರಃ॥
ಮದೇಕಶರಣಾ ಯೇ ಚ ಮದಾರಾಧನತತ್ಪರಾಃ।
ಅಪಿ ವೇದವಿರುದ್ಧಾಶ್ಚ ತ ಏವಾತ್ರಾಧಿಕಾರಿಣಃ॥
ಯೇಷು ಯೇಷು ಮಹಾದೇವಿ ಭಕ್ತಿರವ್ಯಾಭಿಚಾರಿಣೀ।
ಯೋಗ್ಯಾಸ್ತ ಏವ ಮಂತ್ರಸ್ಯ ಭಕ್ತಿರೇವಾತ್ರ ಕಾರಣಮ್॥[೩೮]

"ಶಾಂತಸ್ವಭಾವದವರು, ಉತ್ತಮಶೀಲವುಳ್ಳವರು, ಧರ್ಮಿಷ್ಠರು, ಸತ್ಯಪರಾಯಣರು, ವೇದಮಂತ್ರಗಳಲ್ಲಿ ವಿಶ್ವಾಸವುಳ್ಳವರು, ಈ ಷಡಕ್ಷರ ಮಂತ್ರೋಪದೇಶಕ್ಕೆ ಅರ್ಹರು. ಶಿವನಿಗೆ ಶರಣಾಗತರಾಗಿ, ಶಿವನ ಪೂಜೆಯಲ್ಲಿ ನಿರತರಾದವರು ವೇದವಿರೋಧಿಗಳಾದರೂ (ವೇದದ ಕರ್ಮಕಾಂಡವನ್ನು ಅಲ್ಲಗಳೆದರೂ) ಈ ಮಂತ್ರೋಪದೇಶಕ್ಕೆ ಅಧಿಕಾರಿಗಳು. ಷಡಕ್ಷರ ಮಂತ್ರೋಪಾಸನೆಗೆ ಶಿವನಲ್ಲಿ ನಿಷ್ಠಾಭಕ್ತಿಯಿಂದಿರುವುದೇ ಕಾರಣವಾದ್ದರಿಂದ, ಶಿವನಲ್ಲಿ ಅಚಲವಾದ ಭಕ್ತಿಯುಳ್ಳವರೂ ಈ ಮಂತ್ರೋಪದೇಶಕ್ಕೆ ಅರ್ಹರು." ಎಂದು ತಿಳಿಸಲಾಗಿದೆ.

ಮಂತ್ರೋಪದೇಶಕ್ಕೆ ಅನರ್ಹರು

ಕೃತಘ್ನಾಃ ಪಾಪಿನೋ ಯೇ ಚ ವೇದಮಂತ್ರಬಹಿಷ್ಕೃತಾಃ।
ಶ್ರದ್ಧಾಮತಿವಿಹೀನಾಶ್ಚ ದೇಯಸ್ತೇಷಾಂ ನ ಜಾತುಚಿತ್॥
ವೈದಿಕಾ ಅಪ್ಯಭಕ್ತಾಶ್ಚೇದನ್ಯದೇವಾರ್ಚನಾಪರಾಃ।
ಅನ್ಯಲಾಂಛನಯುಕ್ತಾಶ್ಚ ತೇ ತು ನಾತ್ರಾಧಿಕಾರಿಣಃ॥[೩೯]

"ಕೃತಘ್ನರು, ಪಾಪಿಗಳು, ಶ್ರದ್ಧೆಯಿಲ್ಲದವರು, ವೈದಿಕರಾದರೂ (ವೇದಧರ್ಮವನ್ನು ಪಾಲಿಸಿದರೂ) ಶಿವಭಕ್ತರಲ್ಲದವರು, ಶಿವನ ಹೊರತು ಇತರ ದೇವತೆಗಳ ಉಪಾಸನೆ ಮಾಡುವವರು, ವೀರಶೈವ ಧರ್ಮಕ್ಕೆ ಹೊರತಾದ ಲಾಂಛನಗಳನ್ನು ಧರಿಸುವವರು ಇವರೆಲ್ಲರೂ ಈ ಪಂಚಾಕ್ಷರ ಮಹಾಮಂತ್ರೋಪದೇಶಕ್ಕೆ ಅನರ್ಹರು" ಎಂದು ಬೋಧಿಸುತ್ತದೆ ಸೂಕ್ಷ್ಮಾಗಮ. ಇದಲ್ಲದೆ ಈ ಮಹಾಮಂತ್ರವನ್ನು ಪ್ರಣವ ರಹಿತವಾಗಿ ಸ್ತ್ರೀ-ಶೂದ್ರರಿಗೆ ಉಪದೇಶಿಸಬೇಕು. ಒಂದು ವೇಳೆ ಇವರಿಗೆ ಪ್ರಣವಸಹಿತವಾಗಿ ಮಂತ್ರೋಪದೇಶ ಮಾಡಿದರೆ ಮಂತ್ರೋಪದೇಶ ಮಾಡಿದವರೂ ಹಾಗೂ

---

೩೮. ಸೂ.ಆ. ಕ್ರಿ.ಪಾ, ಪಟಲ ೩, ಶ್ಲೋಕ ಸಂಖ್ಯೆ ೧೭,೧೯,೨೧
೩೯. ಸೂ.ಆ. ಕ್ರಿ.ಪಾ, ಪಟಲ ೩, ಶ್ಲೋಕ ಸಂಖ್ಯೆ ೧೮, ೨೦

ಪಡೆದುಕೊಂಡವರಿಬ್ಬರೂ ನಾಶಹೊಂದುತ್ತಾರೆಂಬ[೪೦] ಎಚ್ಚರಿಕೆಯ ಮಾತುಗಳನ್ನು ಆಡಿದೆ. ಇದನ್ನೇ ಚಂದ್ರಜ್ಞಾನಾಗಮದಲ್ಲಿಯೂ ಪ್ರತಿಪಾದಿಸಲಾಗಿದೆ.[೪೧]

ಪ್ರಣವ ಸಹಿತ ಪಂಚಾಕ್ಷರ ಮಂತ್ರೋಪದೇಶಕ್ಕೆ ಸ್ತ್ರೀ ಶೂದ್ರರು ಅನರ್ಹರು ಎಂಬ ಸೂಕ್ಷ್ಮಾಗಮದ ಇಂತಹ ಬೋಧನೆಗೆ ಬಹುಶಃ ಶೈವಧರ್ಮದ ಪ್ರಭಾವವಿರಬಹುದು. ಶೈವಧರ್ಮದ ಪ್ರಕಾರ ಸ್ತ್ರೀ–ಶೂದ್ರರು ದೀಕ್ಷೆಗೆ ಅನರ್ಹರು. ದೀಕ್ಷೆಗೆ ಅನರ್ಹರಾದ ಸ್ತ್ರೀ–ಶೂದ್ರರಿಗೆ ಒಮ್ಮೆಲೆ ಪ್ರಣವ ಸಹಿತ ಮಂತ್ರೋಪದೇಶವನ್ನು ಮಾಡುವುದು ಸರಿಯಲ್ಲವೆಂಬ ಅಭಿಪ್ರಾಯವು ಶೈವಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಬಂದಿರಬಹುದು, ಆದ್ದರಿಂದ ವೀರಶೈವರಲ್ಲಿ ಸ್ತ್ರೀ–ಪುರುಷರೆಲ್ಲರೂ ದೀಕ್ಷೆಗೆ ಅರ್ಹರಾದರೂ ಸ್ತ್ರೀಯರಿಗೆ ಪ್ರಣವರಹಿತ ಪಂಚಾಕ್ಷರ ಮಂತ್ರೋಪದೇಶವನ್ನು ಮಾತ್ರ ಮಾಡಬೇಕೆಂದು ಸೂಕ್ಷ್ಮಾಗಮವು ವ್ಯತ್ಯಾಸವನ್ನು ಮಾಡಿದೆ. ಚಂದ್ರಜ್ಞಾನಾಗಮದಲ್ಲಿಯೂ ಇದೇ ಅಭಿಪ್ರಾಯವು ವ್ಯಕ್ತವಾಗಿದೆ. ಆದರೆ ಪಾರಮೇಶ್ವರಾಗಮದಲ್ಲಿ ಈ ಅಭಿಪ್ರಾಯವು ಬದಲಾಗಿರುವದು ಸ್ಪಷ್ಟವಾಗಿ ಕಂಡುಬರುತ್ತದೆ.

ಯೇನೋಂ ನಮಃ ಶಿವಾಯೇತಿ ಮಂತ್ರಾಭ್ಯಾಸಃ ಸ್ಥಿರೀಕೃತಃ॥
ನಮಸ್ಕಾರಾದಿಸಂಯುಕ್ತಂ ಶಿವಾಯೇತ್ಯಕ್ಷರತ್ರಯಮ್।
ಜಿಹ್ವಾಗ್ರೇ ವರ್ತತೇ ಯಸ್ಯ ಸಫಲಂ ತಸ್ಯ ಜೀವಿತಮ್॥
ಅಂತ್ಯಜೋ ವಾಽಧಮೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ।
ಪಂಚಾಕ್ಷರಜಪೇ ನಿಷ್ಠೋ ಮುಚ್ಯತೇ ಪಾಶಬಂಧನಾತ್॥[೪೨]
ತಸ್ಮಾತ್ ಷಡಕ್ಷರೋ ಮಂತ್ರಃ ಸರ್ವಸಿದ್ಧಿಪ್ರದಾಯಕಃ॥

"ಯಾರಿಂದ 'ಓಂ ನಮಃ ಶಿವಾಯ' ಎಂಬ ಮಂತ್ರದ ಅಭ್ಯಾಸವು ಸ್ಥಿರಗೊಳಿಸಲ್ಪಟ್ಟಿದೆಯೋ ಅವನಿಂದ ಎಲ್ಲವೂ ಕಲಿತಂತಾಯಿತು ಮತ್ತು ಕೇಳಿದಂತಾಯಿತು. 'ನಮಃ' ಎಂಬ ಪದದಿಂದ ಕೂಡಿದ 'ಶಿವಾಯ' ಎಂಬ ಮೂರಕ್ಷರವು ಯಾರ ನಾಲಿಗೆಯ ತುದಿಯಲ್ಲಿರುವುದೋ ಅವನ ಜೀವನವು ಸಫಲವಾಗುವುದು. ಅಂತ್ಯಜನಿರಲಿ, ಅಧಮನಿರಲಿ, ಮೂರ್ಖನಿರಲಿ ಅಥವಾ ಪಂಡಿತನಿರಲಿ ಮಂತ್ರ ಜಪದಲ್ಲಿ ನಿಷ್ಠನಾದವನು ಎಲ್ಲ ಬಗೆಯ ಪಾಶಬಂಧನಗಳಿಂದ ಮುಕ್ತನಾಗುವನು. ಆದ್ದರಿಂದ ಷಡಕ್ಷರ ಮಂತ್ರವು ಎಲ್ಲ ಬಗೆಯ ಸಿದ್ಧಿಗಳನ್ನು ಕೊಡುವಂತಹದು" ಅರ್ಥಾತ್ ಷಡಕ್ಷರ ಮಂತ್ರೋಪದೇಶಕ್ಕೆ ಅಂತ್ಯಜ, ಅಧಮ, ಸ್ತ್ರೀ–ಶೂದ್ರರೆಂಬ ಭೇದವಿರುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ಈ ಸರ್ವಸಮತಾ ದೃಷ್ಟಿಯನ್ನೇ ವಚನಗಳು ಸ್ವೀಕರಿಸಿದ್ದುದರಿಂದ ವಚನ ಸಾಹಿತ್ಯದಲ್ಲಿಯೂ 'ಅಂತ್ಯಜನಾಗಲೀ, ಅಗ್ರಜನಾಗಲೀ; ಮೂರ್ಖನಾಗಲಿ ಪಂಡಿತನಾಗಲಿ, ಜಪಿಸುವುದು ಶ್ರೀಪಂಚಾಕ್ಷರಿಯ, ಆ ಜಪದಿಂದ

---

೪೦. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೨೨
೪೧. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೧೦
೪೨. ಪಾ.ಆ. ಪಟಲ ೧೧, ಶ್ಲೋಕ ಸಂಖ್ಯೆ ೨೪–೨೭

ರುದ್ರನಪ್ಪುದು ತಪ್ಪದು'[೪೩] ಎಂದು ಉರಿಲಿಂಗ ಪೆದ್ದಿಗಳು ಹೇಳುವ ಮೂಲಕ ಷಡಕ್ಷರ ಮಂತ್ರೋಪದೇಶಕ್ಕೆ ಯಾವುದೇ ಭೇದವಿರುವುದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

ಮಂತ್ರೋಪದೇಶವನ್ನು ಪಡೆದ ಬಳಿಕ ಆ ಮಂತ್ರವನ್ನು ಸತತವಾಗಿ ಪಠಿಸುವುದರಿಂದ ಅಂಗಾಂಗಶುದ್ಧಿ ಹಾಗೂ ಮನಶುದ್ಧಿ ಉಂಟಾಗುತ್ತದೆ. ಈ ಶುದ್ಧಿಗಳಾಗಬೇಕಾದರೆ ಮೊದಲು ಮಂತ್ರ ಸಿದ್ಧಿಯಾಗಬೇಕು. ಶ್ರೀಗುರುವು ಉಪದೇಶಿಸಿದ ಮಂತ್ರವನ್ನು ಪುರಶ್ಚರಣ ಮಾಡದೆ, ಜಪಮಾಡಿದರೆ ಮಂತ್ರದ ಸಿದ್ಧಿಯಾಗುವುದಿಲ್ಲ. ಆದ್ದರಿಂದ ಚಂದ್ರಜ್ಞಾನಾಗಮವು –

ದೀಕ್ಷಾಪೂರ್ವಂ ಗುರೋರ್ಲಬ್ಧ್ವಾ ಮಂತ್ರಮಾಜ್ಞಾಂ ಸಮಾಹಿತಃ।
ಸಂಕಲ್ಪ್ಯ ಚ ಜಪೇನ್ನಿತ್ಯಂ ಪುರಶ್ಚರಣಪೂರ್ವಕಮ್॥[೪೪]

ಎಂದು ಹೇಳಿದೆ. ಅರ್ಥಾತ್ ಗುರುವಿನಿಂದ ದೀಕ್ಷೆ ಪಡೆದು ಮಂತ್ರ ಹಾಗೂ ಅದರ ಉಪಯೋಗದ ಆಜ್ಞೆ ಪಡೆದ ಸಾಧಕನು ಪುರಶ್ಚರಣ ಪೂರ್ವಕವಾಗಿ ಸಂಕಲ್ಪ ಮಾಡಿ ಪ್ರತಿನಿತ್ಯವೂ ಜಪ ಮಾಡಬೇಕೆಂದು ಬೋಧಿಸಿದೆ. ಕಾರಣ ಪುನಶ್ಚರಣವಿಧಿಯ ಸಂಕ್ಷಿಪ್ತವಾದ ನಿರೂಪಣೆಯನ್ನು ಚಂದ್ರಜ್ಞಾನಾಗಮ, ಪಾರಮೇಶ್ವರಾಗಮ, ಸೂಕ್ಷ್ಮಾಗಮಗಳಲ್ಲಿ ನೋಡಬಹುದು.

ಪುರಶ್ಚರಣ ವಿಧಿ

"ಪುರೋಽಗ್ರತಶ್ಚರಣಂ ಪುರಶ್ಚರಣಮ್" (ದೇವರ ನಾಮವನ್ನು ಮತ್ತೆ ಮತ್ತೆ ಹಾಡುವುದು) ಎಂಬ ವ್ಯುತ್ಪತ್ತಿಯ ಮೇರೆಗೆ ತನ್ನ ಇಷ್ಟದೇವತೆಯ ಮಂತ್ರದ ಸಿದ್ಧಿಗಾಗಿ ಆ ದೇವತೆಯ ಪೂಜೆಯೇ ಮೊದಲ್ಗೊಂಡು ನಿಗದಿತವಾದ ಸಂಖ್ಯೆಯಲ್ಲಿ ಆ ಮಂತ್ರದ ಜಪ, ಹೋಮ, ತರ್ಪಣ, ಅಭಿಷೇಕ ಮತ್ತು ಮಾಹೇಶ್ವರರಿಗೆ ಭೋಜನ ರೂಪದ ಪಂಚ ಅಂಗಕರ್ಮಗಳ ಆಚರಣೆಯೇ ಪುರಶ್ಚರಣ.

ಯಸ್ಯ ಯಾವಾನ್ ಜಪಃ ಪ್ರೋಕ್ತಸ್ತದ್ದಶಾಂಶಮನುಕ್ರಮಾತ್।
ತತ್ತದ್ ವ್ಯೈರ್ಜಪಸ್ಯಾಂತೇ ಹೋಮಂ ಕುರ್ಯಾತ್ ದಿನೇದಿನೇ॥[೪೫]

'ಆಯಾ ಮಂತ್ರಕ್ಕೆ ನಿರ್ದಿಷ್ಟವಾಗಿರುವ ಎಷ್ಟು ಜಪವಿದೆಯೋ ಅದರ ದಶಾಂಶದಷ್ಟು ಹೋಮ, ಅದರ ದಶಾಂಶದಷ್ಟು ಹಾಲುಮಿಶ್ರಿತ ನೀರಿನಲ್ಲಿ ತರ್ಪಣ, ಅದರ ದಶಾಂಶದಷ್ಟು ಅಭಿಷೇಕ, ಅದರ ದಶಾಂಶದಷ್ಟು ಮಾಹೇಶ್ವರರಿಗೆ ಭೋಜನ ಮಾಡಿಸಬೇಕು. ಇದೇ ಪುರಶ್ಚರಣವಿಧಿ.' ಎಂದು ತಿಳಿಸಲಾಗಿದೆ. ಅರ್ಥಾತ್ ಇಷ್ಟಮಂತ್ರದ ಪುನಶ್ಚರಣಕ್ಕಾಗಿ ಒಂದು ಲಕ್ಷ ಜಪ ಮಾಡುತ್ತಿದ್ದರೆ, ಅದರ ಸಮಾಪ್ತಿಯ ನಂತರ ಆ ಮಂತ್ರದ ಜಪದೊಂದಿಗೆ ೧೦೦೦೦ ಸಲ ತುಪ್ಪದ ಆಹುತಿಯೊಡನೆ ಹೋಮ,

೪೩. ಸಮಗ್ರ ವಚನ ಸಂಪುಟ ೬,ಸಂಕೀರ್ಣ ವಚನ ಸಂ.೧, ವಚನ ಸಂಖ್ಯೆ ೧೨೭೨, ಪುಟ ೪೦೦
೪೪. ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೪೮.
೪೫. ಹಿಂದೀ ವಿಶ್ವಕೋಶ, ಪು ೧೭೬

೧೦೦೦೦ ಸಲ ಹಾಲುಮಿಶ್ರಿತ ನೀರಿನಲ್ಲಿ ತರ್ಪಣ, ೧೦೦ ಸಲ ಮಾರ್ಜನ, ನಂತರ ಶಾಂತರೂ, ಸ್ವಧರ್ಮ ನಿರತರೂ, ಶಿವವ್ರತ ಪಾಲಕರೂ, ಸದಾಚಾರಿಗಳೂ ಆದ ೧೦ ಜನ ಮಾಹೇಶ್ವರರಿಗೆ ಪಾಯಸ, ಸಕ್ಕರೆ ಮೊದಲಾದ ಮೃಷ್ಟಾನ್ನಗಳಿಂದ ಭೋಜನ ಮಾಡಿಸಿದ ನಂತರ ಆ ವಿಧಿಯು ಸಮಾಪ್ತವಾಗುತ್ತದೆ. ಇದು ಶಾಸ್ತ್ರ ನಿಯಮ ಎಂದು ತಿಳಿಸಿದೆ.[೪೬] ಚಂದ್ರಜ್ಞಾನಾಗಮದಲ್ಲಿ –

ಜಪೇದಕ್ಷರಲಕ್ಷಂ ವೈ ಚತುರ್ಗುಣಿತಮಾದರಾತ್।
ಯುಕ್ತಾಶೀ ಸಂಯಮೀ ಯಃ ಸ ಪೌರಶ್ಚರಣಿಕಃ ಸ್ಮೃತಃ॥[೪೭]

"ಯಾರು ಒಂದು ಅಕ್ಷರಕ್ಕೆ ಒಂದು ಲಕ್ಷದಂತೆ ನಾಲ್ಕರ ಗುಣನಕ್ರಮದಲ್ಲಿ ಆದರದಿಂದ ಜಪಿಸುತ್ತಾನೋ ಅಂತಹ ಸಂಯಮಿಯಾದ ಸಾಧಕನೇ ಪೌರಶ್ಚರಣಿಕ" ಎಂದು ತಿಳಿಸಿದೆ. ಅದರಂತೆ ಪಂಚಾಕ್ಷರಮಂತ್ರದಲ್ಲಿ ಐದು ಅಕ್ಷರಗಳಿವೆ. ಆದ್ದರಿಂದ ಐದು ಲಕ್ಷ ಜಪವಾಗುತ್ತದೆ. ಮತ್ತೆ ಅದನ್ನು ನಾಲ್ಕರಿಂದ ಗುಣಿಸಿದಾಗ ಜಪವು ಇಪ್ಪತ್ತು ಲಕ್ಷವಾಗುತ್ತದೆ. ಈ ಪ್ರಕಾರವಾಗಿ ಗುರುವಿನಿಂದ ದೀಕ್ಷಿತನಾದ ಸಾಧಕನು ಇಪ್ಪತ್ತು ಲಕ್ಷ ಸಲ ಜಪಾಭ್ಯಾಸವನ್ನು ಮಾಡಬೇಕು. ಜಪ ಮುಗಿದ ನಂತರದಲ್ಲಿ ಆಯಾ ದಶಾಂಶದಲ್ಲಿ ಕ್ರಮವಾಗಿ ಹೋಮ, ತರ್ಪಣ, ಅಭಿಷೇಕ ಮತ್ತು ಭೋಜನಾದಿಗಳನ್ನು ಪೂರೈಸಬೇಕು.

ಕಾರಣ "ಯಾರು ಪುರಶ್ಚರಣ ಮಾಡಿ ನಿತ್ಯವೂ ಜಪಮಾಡುತ್ತಾನೋ ಅವರಿಗೆ ಲೋಕದಲ್ಲಿ ಸಮನಾದವನು ಯಾರು ಇಲ್ಲ. ಅವನು ಸಿದ್ಧನು ಮತ್ತು ಇತರರಿಗೆ ಸಿದ್ಧಿಯನ್ನು ಅನುಗ್ರಹಿಸುವನು"

ಯಃ ಪುರಶ್ಚರಣಂ ಕೃತ್ವಾ ನಿತ್ಯಾಜಾಪೀ ಭವೇತ್ ಪುನಃ।
ತಸ್ಯ ನಾಸ್ತಿ ಸಮೋ ಲೋಕೇ ಸ ಸಿದ್ಧಃ ಸಿದ್ಧಿದೋ ಭವೇತ್॥[೪೮]

ಎಂಬ ಚಂದ್ರಜ್ಞಾನಾಗಮದ ಉಕ್ತಿಯ ಮೇರೆಗೆ ವಿದ್ಯುಕ್ತವಾಗಿ ಪುರಶ್ಚರಣವನ್ನು ಅನುಷ್ಠಾನ ಮಾಡಿ ಮಂತ್ರವನ್ನು ಸಿದ್ಧಿ ಮಾಡಿಕೊಂಡು ಪ್ರತಿನಿತ್ಯವೂ ಜಪವನ್ನು ಮಾಡಬೇಕು ಎಂದು ತಿಳಿಸಿದೆ.

ಶಾಸ್ತ್ರೋಕ್ತ ಸಂಪ್ರದಾಯವನ್ನು ಅನುಸರಿಸಿ ಮಾಡುವ ಪುನಶ್ಚರಣ ವಿಧಿಯ ಉದ್ದೇಶವು ಸಾಧಕನಿಗೆ ಏಕಾಗ್ರತೆಯನ್ನು ಸಾಧಿಸಿಕೊಡಬೇಕೆಂಬುದೇ ಆಗಿದೆ. ಆದರೆ ಈ ಪುರಶ್ಚರಣೆಯ ಜಪಾನುಷ್ಠಾನವು ಕೇವಲ ಕರ್ಮಾಚರಣೆಯಾಗದೇ ಭಕ್ತಿಯುತವಾಗಿರಬೇಕೆಂದು ತಿಳಿಸುತ್ತಾ

ಬಾಹ್ಯಮಾಭ್ಯಂತರಂ ಚೈವ ಭಜನಂ ಭಾವಪೂರ್ವಕಮ್।
ನ ಭಾವರಹಿತಂ ಗ್ರಾಹ್ಯಂ ವಿಪ್ರಲಂಭೈಕಕಾರಣಮ್ ॥

---

೪೬. ಚಂ.ಆ,ಸಂ.ವ್ರಜವಲ್ಲಭದ್ವಿವೇದಿ,ಹಿಂದೀಪ್ರಸ್ತಾವನೆ,ಪು.೧೬-೧೭,ವಾರಾಣಸೀ ಆವೃತ್ತಿ, ೧೯೯೪.
೪೭. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೩೦
೪೮. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೩೧

ಕೃತಕೃತ್ಯಸ್ಯ ತೃಪ್ತಸ್ಯ ಶಿವಸ್ಯ ಪರಮೇಷ್ಠಿನಃ।
ನ ಕೈಃ ಕಿಂ ಕ್ರಿಯತೇ ಕರ್ಮ ಭಾವಮಾತ್ರಂ ಹಿ ಗೃಹ್ಯತೇ ॥[೪೯]

ಬಾಹ್ಯ ಮತ್ತು ಆಂತರಿಕ ಆರಾಧನೆಯು ಶ್ರದ್ಧೆ–ಭಕ್ತಿ–ಭಾವಪೂರ್ವಕವಾಗಿರಬೇಕು; ಭಾವರಹಿತವಾದದ್ದು ಗ್ರಹಿಸಲು ಯೋಗ್ಯವಲ್ಲ; ಏಕೆಂದರೆ ಅದು ವಂಚನೆಗೆ ಕಾರಣವಾಗುತ್ತದೆ. ಕೃತಕೃತ್ಯನಾದ, ತೃಪ್ತನಾದ ಎಲ್ಲರ ಸ್ವಾಮಿಯಾದ ಶಿವನಿಗೆ ಯಾರಿಂದ ಯಾವ ಕರ್ಮವು ಬೇಕಾಗಿಲ್ಲ. ಅವನಿಗೆ ಬೇಕಾದುದು ಭಕ್ತಿಭಾವವು ಮಾತ್ರ ಎಂದು ಪಾರಮೇಶ್ವರಾಗಮವು ತಿಳಿಸುತ್ತದೆ. ಹೀಗೆ ಭಕ್ತಿಭಾವದಿಂದ ಮಂತ್ರ ಪಠಿಸುವ ವಿಧಾನವನ್ನು ಕಾರಣಾಗಮವು ತಿಳಿಸುತ್ತಾ –

ಶಬ್ದಬ್ರಹ್ಮಾನಂದಮಯೋ ಮದಾನಂದಾಮೃತಪ್ಲುತಃ।
ನಿಮಜ್ಜನ್ನಿವ ಸಂತುಷ್ಟೋ ನಿಃಸಂಜ್ಞ ಇವ ತತ್ಪರಃ ॥
ಯಃ ಸಕೃದ್ವಾಽಸಕೃದ್ವಾಪಿ ಮಾಮರ್ಚಯತಿ ಯಃ ಸ್ವಯಮ್।
ಸ ಧನ್ಯಃ ಸರ್ವಲೋಕಾನಾಂ ವಂದ್ಯೋ ಭಕ್ತೋತ್ತಮೋತ್ತಮಃ॥[೫೦]

ಶಬ್ದ ಬ್ರಹ್ಮದ ಆನಂದದಲ್ಲಿ ಮುಳುಗಿ, ಶಿವಾನಂದರೂಪಿ ಅಮೃತದಿಂದ ಸಿಕ್ತನಾಗಿ, ಅದರಲ್ಲಿ ಮುಳುಗಿರುವನೋ ಏನೋ ಎಂಬಂತೆ ಸಂತುಷ್ಟನಾಗಿ, ಎಚ್ಚರವಿಲ್ಲದವನಂತೆ ಆ ಆನಂದದಲ್ಲಿಯೇ ಮಗ್ನನಾಗಿ ಯಾವ ಭಕ್ತನು ಸ್ವಯಂ ಶಿವಪೂಜೆ ಮಾಡುತ್ತಾನೆಯೋ ಅವನೇ ಧನ್ಯನು, ಭಕ್ತರಲ್ಲಿ ಸರ್ವೋತ್ತಮನು ಮತ್ತು ಸರ್ವರಿಗೂ ವಂದನೀಯನಾಗಿದ್ದಾನೆಂದು ಆಗಮಗಳು ತಿಳಿಸಿವೆ. ಕಾರಣ ಮಂತ್ರ ಪಠಣವನ್ನು ಸರ್ವಕಾಲದಲ್ಲಿಯೂ ಭಕ್ತಿಭಾವದೊಂದಿಗೆ ಮಾಡಬೇಕೆಂದು ತಿಳಿಸುತ್ತಾ ಪಾರಮೇಶ್ವರಾಗಮವು –

ಜಪೇತ್ ಪಂಚಾಕ್ಷರಂ ಶೈವಂ ಭುಕ್ತಿಮುಕ್ತಿಫಲಪ್ರದಮ್।
ಸರ್ವಧರ್ಮಾನ್ ಪರಿತ್ಯಜ್ಯ ಶೈವಂ ಪಂಚಾಕ್ಷರಂ ಜಪೇತ್ ॥
ತಿಷ್ಠನ್ ಭುಂಜನ್ ಸ್ವಪನ್ ಗಚ್ಛನ್ ಜಾಗ್ರನ್ನಪಿ ಹಸನ್ನಪಿ।
ಉಪವಿಶನ್ ಪ್ರಬುದ್ಧ್ಯನ್ ವಾ ಶೈವಂ ಪಂಚಾಕ್ಷರಂ ಜಪೇತ್ ॥
ಸ್ವಸ್ಥಃ ಪರವಶೋ ವಾಽಪಿ ಕ್ಷುತಪ್ರಸ್ಖಲನಾದಿಷು।
ವ್ಯಾಜೇನಾಖಿಲಭೇದೇನ ಶೈವಂ ಪಂಚಾಕ್ಷರಂ ಜಪೇತ್ ॥
ಶಾಂತೋ ವಾ ಕುಪಿತೋ ವಾಽಪಿ ಶುದ್ಧೋ ವಾಽಶುದ್ಧ ಏವ ವಾ ।
ವಿಧಿನಾಽಪಿ ವಿನಾವಾಽಪಿ ಶೈವಂ ಪಂಚಾಕ್ಷರಂ ಜಪೇತ್ ॥
ಸರ್ವವೇದೇಷು ಸರ್ವತ್ರ ಸರ್ವಲೋಕೇಷು ಸರ್ವಶಃ।
ಸರ್ವದಾ ಸರ್ವದಂದೇವಿ ಶೈವಂ ಪಂಚಾಕ್ಷರಂ ಜಪೇತ್ ॥

---

೪೯. ಪಾ.ಆ. ಪಟಲ ೧೨ ಶ್ಲೋಕ ಸಂಖ್ಯೆ ೨೩–೨೪
೫೦. ಕಾ.ಆ. ಪಟಲ ೫, ಶ್ಲೋ. ಸಂ ೮೬–೮೭

ಭೋಗ-ಮೋಕ್ಷಗಳನ್ನು ಕೊಡುವ ಶಿವಪಂಚಾಕ್ಷರೀ ಮಂತ್ರವನ್ನು ಯಾವಾಗಲೂ ಜಪಿಸಬೇಕು. ಎಲ್ಲಾ ಧಾರ್ಮಿಕ ಆಚರಣೆಗಳನ್ನು ಬಿಟ್ಟು ಶಿವಪಂಚಾಕ್ಷರಿಯನ್ನು ಜಪಿಸಬೇಕು. ನಿಂತಾಗ, ಊಟ ಮಾಡುತ್ತಾ, ಮಲಗುವಾಗ, ಎಚ್ಚರವಿದ್ದಾಗ, ನಗುವಾಗ, ಕುಳಿತಾಗ, ಎಚ್ಚರಗೊಳ್ಳುವಾಗ, ಯಾವಾಗಲೂ ಶಿವಪಂಚಾಕ್ಷರಿಯನ್ನು ಜಪಿಸಬೇಕು. ಸ್ವತಂತ್ರನಿದ್ದಾಗ, ಪರಾಧೀನನಾಗಿದ್ದಾಗ, ಜಾರಿಬೀಳುವುದು ಮುಂತಾದ ಸಂದರ್ಭಗಳಲ್ಲಿ, ಎಲ್ಲಾ ಪ್ರಕಾರದ ವಿಪರೀತ ಪರಿಸ್ಥಿತಿಗಳಲ್ಲಿ ಶಿವಪಂಚಾಕ್ಷರಿಯನ್ನು ಜಪಿಸಬೇಕು. ಶಾಂತನಾಗಿರಲಿ, ಕುಪಿತನಾಗಿರಲಿ, ಶುದ್ಧನಾಗಿರಲಿ, ಅಶುದ್ಧನಾಗಿರಲಿ, ವಿಧಿಯುಕ್ತವಾಗಿ ಅಥವಾ ಅದು ಇಲ್ಲದೆ ಹಾಗೆಯಾಗಲಿ ಶಿವಪಂಚಾಕ್ಷರಿಯನ್ನು ಜಪಿಸಬೇಕು. ಎಲ್ಲಾ ಕಾಲಗಳಲ್ಲಿ, ಎಲ್ಲೆಡೆಯಲ್ಲಿ, ಎಲ್ಲದರಲ್ಲಿ, ಯಾವಾಗಲೂ ಎಲ್ಲವನ್ನೂ ಕೊಡುವ ಶಿವಪಂಚಾಕ್ಷರಿಯನ್ನು ಜಪಿಸಬೇಕು[೫೧] ಎಂದು ತಿಳಿಸಿದೆ. ತೋಂಟದ ಸಿದ್ಧಲಿಂಗ ಶಿವಯೋಗಿಗಳೂ ಸಹ ತಮ್ಮ ವಚನದಲ್ಲಿ ಇದೇ ಅಭಿಪ್ರಾಯವನ್ನು ಅರುಹಿರುವರು.

ಶಿವಶಿವಾಯೆಂಬುದು ಭವದುರಿತದೋಟ ಕಂಡಯ್ಯ.
ಹರಹರಾಯೆಂಬುದು ಹರಣದ ತೊಡಕಿನ ಮರಣವ
ಪರಿಹರಿಸುವುದು ನೋಡ, ಇದು ಕಾರಣ,
ನಡೆವುತ್ತ ನುಡಿವುತ್ತ ಸರ್ವಾವಸ್ಥೆಯಲ್ಲಿಯೂ
'ಓಂ ನಮಃ ಶಿವಾಯ' 'ಓಂ ನಮಃ ಶಿವಾಯ' 'ಓಂ ನಮಃ ಶಿವಾಯ'
ಎಂಬ ಪ್ರಣವ ಪಂಚಾಕ್ಷರಿಯನೇ ಸ್ಮರಿಸುತ್ತಿರ್ದೆನು ಕಾಣಾ[೫೨]

ಎಂದಿದ್ದಾರೆ. ಹೀಗೆ ಎಲ್ಲಾ ಕಾಲಗಳಲ್ಲಿ, ಎಲ್ಲೆಡೆಯಲ್ಲಿ, ಶಿವಪಂಚಾಕ್ಷರಿಯನ್ನು ಜಪಿಸಬೇಕು ಎಂದು ತಿಳಿಸಿದ್ದರೂ ಸಹ ಮಂತ್ರದ ನಾದ, ಲಯ, ಮಂತ್ರದ ವ್ಯಾಪಕತ್ವ, ಊರ್ಧ್ವಮುಖವಾಗಿ ಮಂತ್ರದ ಚಲನೆಯಿಂದ ದೇಹವೆಲ್ಲ ಮಂತ್ರಮಯ ವಾಗುವಿಕೆಯನ್ನು ಅನುಭವಿಸಬೇಕಾದರೆ ಶಾಸ್ತ್ರೋಕ್ತವಿಧಿಯನ್ನು ಅವಶ್ಯವಾಗಿ ಅನುಸರಿಸಲೇಬೇಕು. ಜಪಾನುಷ್ಠಾನವನ್ನು ಮಾಡುವಾಗ ಶಾಸ್ತ್ರೋಕ್ತವಿಧಿಯನ್ನು ಬಿಟ್ಟು ಮನಸ್ಸಿಗೆ ತೋರಿದಂತೆ ಆಚರಿಸಿದರೆ ಸಮುಚಿತವಾದ ಪ್ರಯೋಜನವು ಸಿದ್ಧಿಸುವುದಿಲ್ಲ ಎನ್ನುವ ಕಾರಣದಿಂದ ಆಗಮಾದಿ ಶಾಸ್ತ್ರಗಳಲ್ಲಿ ಸ್ಥಾನ, ಆಸನ, ದಿಕ್ಕು, ಪ್ರಾಣಾಯಾಮ, ನ್ಯಾಸ ಮತ್ತು ದೇವತಾದಿಗಳ ವಿವರಣೆಯು ನಿರೂಪಿಸಲ್ಪಟ್ಟಿದೆ.

ಜಪಯೋಗ್ಯ ಸ್ಥಾನಗಳು:

ಜಪಕ್ಕೆ ಯೋಗ್ಯವಾದ ಸ್ಥಾನದ ವಿಷಯವಾಗಿ ಸೂಕ್ಷ್ಮಾಗಮದಲ್ಲಿ ದೋಷವಿಲ್ಲದ, ನಿರ್ಭಯವಾದ, ಯಾವುದೇ ತೊಂದರೆಗಳಿಲ್ಲದ ನದಿಯ ದಡ, ಪರ್ವತಗಳ ಮೇಲೆ, ದೇವಾಲಯದಲ್ಲಿ (ಇವುಗಳಲ್ಲೊಂದರಲ್ಲಿ) ಏಕಾಂತದಲ್ಲಿ ನಾಚಿಕೆ, ಹೆದರಿಕೆ,

---

೫೧. ಪಾ.ಆ. ಪಟಲ ೧೦ ಶ್ಲೋಕ ಸಂಖ್ಯೆ ೮೪-೮೮

೫೨. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವಚನ ಸಂ. ೬, ವಚನ ಸಂಖ್ಯೆ೨೦೫, ಪುಟ೯

ಸೋಮಾರಿತನಗಳನ್ನು ಬಿಟ್ಟು ಜಪ ಮಾಡಬೇಕೆಂದು ಬೋಧಿಸಲಾಗಿದೆ.

ನದೀತೀರೇ ಪರ್ವತಾಗ್ರೇ ದೇವಾಗಾರೇ ವಿಶೇಷತಃ।
ವಿವಿಕ್ತದೇಶೇ ನಿರ್ದೋಷೇ ನಿರ್ಭಯೇ ನಿರುಪದ್ರವೇ ॥
ಪದ್ಮಾಸನೇ ಸಮಾಸೀನಃ ಪ್ರಾಙ್ಮುಖೋದಙ್ಮುಖೋಽಪಿವಾ।
ಸಮಕಾಯಶಿರೋಗ್ರೀವಸ್ತ್ರಪಾಲಸ್ಯಾದಿವರ್ಜಿತಃ॥
ಶಿವಂ ಧ್ಯಾಯನ್ ಜಪೇದ್ದೇವಿ ಜೀವನ್ಮುಕ್ತೋ ನ ಸಂಶಯಃ॥[೫೩]

ಚಂದ್ರಜ್ಞಾನಾಗಮವೂ ಜಪ ಮಾಡಲು ಅನೇಕ ಸ್ಥಾನಗಳನ್ನು ಪ್ರತಿಪಾದಿಸಿದೆ. ಅವುಗಳೆಂದರೆ– ಮನೆ, ಕೊಟ್ಟಿಗೆ, ಪುಣ್ಯಾರಣ್ಯ, ಉದ್ಯಾನ, ಸುಂದರವಾದ ಪರ್ವತ, ನದೀತೀರ, ದೇವಾಲಯ, ಅವುಗಳಲ್ಲಿಯೂ ಸೂರ್ಯ, ಅಗ್ನಿ, ಗುರು, ಚಂದ್ರ, ದೀಪ, ನೀರು, ಬ್ರಾಹ್ಮಣ ಮತ್ತು ಗೋವುಗಳ ಸಾನ್ನಿಧ್ಯದಲ್ಲಿ ಮಾಡುವ ಜಪವು ಕ್ರಮವಾಗಿ (ಉತ್ತರೋತ್ತರವಾಗಿ) ನೂರು, ಸಾವಿರ, ಹತ್ತು ಸಾವಿರ, ಲಕ್ಷ ದಶಲಕ್ಷ ಹಾಗೂ ಕೋಟಿ ಹೆಚ್ಚಿನ ಫಲದಾಯಕಗಳಾಗುತ್ತವೆ[೫೪] ಎಂದು ತಿಳಿಸಿದ್ದರೂ ಪುನಃ ಅಲ್ಲಿಯೇ–

ಯದಿಷ್ಟಲಿಂಗಂ ಸಂಪಶ್ಯನ್ ವಾಮಹಸ್ತಸ್ಥಿತಂ ಪರಮ್।
ಜಪತೇ ತತ್ಫಲಂ ವಕ್ತುಂ ನ ಮಯಾ ಶಕ್ಯತೇ ಗುರೋ॥[೫೫]

ಎಂದು ನಿರೂಪಿಸಿರುವ ಕಾರಣ ಹೇಳಿದ ಯಾವುದೇ ಸ್ಥಾನದಲ್ಲಿ ಕುಳಿತರೂ ತಮ್ಮ ವಾಮಹಸ್ತ ಪೀಠದಲ್ಲಿರುವ ಇಷ್ಟಲಿಂಗದ ಸಾಕ್ಷಿಯಲ್ಲಿ ಮಾಡಿದ ಜಪವು ಅನಂತ ಫಲದಾಯಕವೆಂದು ತಿಳಿಯಬೇಕು. ಆದುದರಿಂದ ವೀರಶೈವರು ಯಾವಾಗಲೂ ಇಷ್ಟಲಿಂಗದ ಸಾಕ್ಷಿಯಲ್ಲಿ ಜಪಮಾಡಬೇಕು.

ಜಪಕ್ಕೆ ಉಪಯುಕ್ತವಾದ ಆಸನ ಮತ್ತು ದಿಕ್ಕುಗಳು

ಮೇಲೆ ಹೇಳಿದ ಯಾವುದಾದರೊಂದು ಸ್ಥಾನದಲ್ಲಿ ಕೃಷ್ಣಾಜಿನ, ವ್ಯಾಘ್ರಚರ್ಮ, ಕುಶಾಸನ ಮತ್ತು ಕಂಬಲಾಸನ ಪೈಕಿ ಯಾವುದಾದರೊಂದು ಆಸನವನ್ನು ಹಾಸಿ,[೫೬] ಅದರ ಮೇಲೆ ಸುಖಾಸನ ಅಥವಾ ಸಿದ್ಧಾಸನದಲ್ಲಿ ಪೂರ್ವ ಅಥವಾ ಉತ್ತರ ದಿಕ್ಕಿಗೆ ಮುಖಮಾಡಿಕೊಂಡು[೫೭] ಕುಳಿತು ಜಪಾಭ್ಯಾಸವನ್ನು ಮಾಡಬೇಕೆಂದು ತಿಳಿಸಿದೆ.

---

೫೩. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೩೯–೪೦
೫೪. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೭೨–೭೫
೫೫. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೭೪
೫೬. ಪಾ.ಆ. ಪಟಲ ೧೦ ಶ್ಲೋಕ ಸಂಖ್ಯೆ ೨೦–೨೧
೫೭. ಪ್ರಾಙ್ಮುಖೋದಙ್ಮುಖೋ ವಾಪಿ ಮೌನೀ ಚೈಕಾಗ್ರಮಾನಸಃ।
– ಚಂ.ಆ. ಕ್ರಿಪಾ. ಪಟಲ ೮.ಶ್ಲೋಕ ಸಂಖ್ಯೆ ೫೩

ಜಪಕ್ಕೆ ಉಪಯೋಗಿಸುವ ಮಾಲೆಗಳು

ಪಂಚಾಕ್ಷರ ಮಹಾಮಂತ್ರದ ಜಪಾಭ್ಯಾಸಕ್ಕಾಗಿ ಅಂಗುಲಿರೇಖಾ (ಬೆರಳಿನ ರೇಖೆಗಳು), ಪುತ್ರಜೀವ, ಶಂಖಮಣಿ, ಹವಳ, ಸ್ಫಟಿಕ, ಮುತ್ತು, ಪದ್ಮಾಕ್ಷ (ತಾವರೆ ಬೀಜ), ಸುವರ್ಣಮಣಿ, ಕುಶಗ್ರಂಥಿ (ದರ್ಬೆಯ ಗಂಟು) ಮತ್ತು ರುದ್ರಾಕ್ಷಗಳ ಮಾಲೆಗಳು ಪ್ರಶಸ್ತವಾದವುಗಳು.[೫೮] ಇವುಗಳಲ್ಲಿಯೂ ಹಿಂದು ಹಿಂದಿನಕ್ಕಿಂತಲೂ ಮುಂದಿನ ಮಾಲೆಗಳು ಶ್ರೇಷ್ಠವಾದವುಗಳು. ಅನಂತಫಲದಾಯಕವಾದ ಕಾರಣ ರುದ್ರಾಕ್ಷಮಾಲೆಯು ಸರ್ವಶ್ರೇಷ್ಠವಾದುದು. ರುದ್ರಾಕ್ಷಮಾಲೆಗಳ ಪೈಕಿ ಮೂವತ್ತು ರುದ್ರಾಕ್ಷಗಳ ಮಾಲೆಯಿಂದ ಧನಪ್ರಾಪ್ತಿ, ಇಪ್ಪತ್ತೇಳು ರುದ್ರಾಕ್ಷಗಳ ಮಾಲೆಯಿಂದ ಪುಷ್ಟಿ ವೃದ್ಧಿ, ಇಪ್ಪತ್ತೈದು ಮಣಿಗಳ ಮಾಲೆಯಿಂದ ಮೋಕ್ಷಪ್ರಾಪ್ತಿ ಹಾಗೂ ಹದಿನೈದು ಮಣಿಗಳ ಮಾಲೆಯಿಂದ ಅಭಿಚಾರದ ಫಲಪ್ರಾಪ್ತಿಯಾಗುತ್ತದೆ.[೫೯]

ಈ ರೀತಿಯಾಗಿ ಮೇಲೆ ನಿರೂಪಿಸಿದ ಯಾವುದಾದರೂ ಒಂದು ಅಕ್ಷಮಾಲೆಯಿಂದ ಜಪವನ್ನು ಮಾಡುವಾಗ ಅಂಗುಷ್ಠದಿಂದ ಜಪ ಮಾಡಿದರೆ ಮೋಕ್ಷಪ್ರಾಪ್ತಿ, ತರ್ಜನಿಯಿಂದ ಶತ್ರುನಾಶ, ಮಧ್ಯಮಾದಿಂದ ಧನಪ್ರಾಪ್ತಿ, ಅನಾಮಿಕದಿಂದ ಶಾಂತಿಪ್ರಾಪ್ತಿ ಮತ್ತು ಕನಿಷ್ಠಿಕಾದಿಂದ ಆಕರ್ಷಣವು ಉಂಟಾಗುತ್ತದೆ.[೬೦] ಆ ಕಾರಣ ಆಯಾ ಫಲಗಳನ್ನು ಅರಿತು ಶ್ರೇಯೋಕಾಂಕ್ಷಿಗಳು ತಮಗೆ ಹೆಚ್ಚು ಪ್ರಯೋಜನವಾಗುವ ಮಾಲೆಯಿಂದ ಹಾಗೂ ಬೆರಳಿನಿಂದ ಜಪವನ್ನು ಮಾಡಬೇಕು.

ಜಪ ಮಾಡುವಾಗ ವರ್ಜಿಸಬೇಕಾದ ಸಂಗತಿಗಳು –

ಜಪಾಭ್ಯಾಸವನ್ನು ಮಾಡುವ ಸಾಧಕನು ಶರೀರದ ಮೇಲೆ ರುಮಾಲು ಅಂಗಿಗಳನ್ನು ಧರಿಸಿಕೊಂಡು, ಬೆತ್ತಲೆಯಾಗಿ, ಕೂದಲನ್ನು ಇಳಿಬಿಟ್ಟುಕೊಂಡು, ಮುಖವನ್ನು ಮುಚ್ಚಿಕೊಂಡು, ಅಪವಿತ್ರನಾಗಿ, ಅಶುದ್ಧಿಯಿಂದ ಮತ್ತು ಮಾತನಾಡುತ್ತಾ ಎಂದೂ ಜಪವನ್ನು ಮಾಡಬಾರದು. ಹಾಗೂ ಜಪಮಾಡುವಾಗ ಕಾಮ, ಕ್ರೋಧ, ಮದ, ಹಸಿವು, ಆಲಸ್ಯ, ಉಗುಳುವುದು, ಆಕಳಿಸುವುದನ್ನು ವರ್ಜಿಸಬೇಕು. ಅಕಸ್ಮಾತ್ ಮೇಲೆ ಹೇಳಿದ ದೋಷಗಳು ಉಂಟಾದರೆ ಅದರ ಶಾಂತಿಗಾಗಿ ಆಚಮನ ಮಾಡಿ ಶಿವನನ್ನು ಸ್ಮರಿಸಿ, ಸೂರ್ಯನ ದರ್ಶನ ಹಾಗೂ ಪ್ರಾಣಾಯಾಮವನ್ನು ಮಾಡಬೇಕು. ಇದಲ್ಲದೆ ಊಟ ಮಾಡುತ್ತಾ, ಮಲಗಿ, ಹೋಗುತ್ತಾ, ಮೇಲೇಳುತ್ತಾ ಮತ್ತು ಅಮಂಗಳಕರವಾದ ಸ್ಥಾನದಲ್ಲಿದ್ದಾಗ ಎಂದೂ ಜಪವನ್ನು ಮಾಡಬಾರದು. ಅಂತೆಯೇ ಕಾಲುಚಾಚಿದ್ದಾಗ, ರತಿಕ್ರೀಡೆಯಲ್ಲಿ ತೊಡಗಿದ್ದಾಗ ಹಾಗೂ ಚಿಂತಾಮಗ್ನನಾಗಿದ್ದಾಗ ಜಪವನ್ನು ಮಾಡಬಾರದು[೬೧] ಎಂದು ತಿಳಿಸಿದೆ.

---

೫೮. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೬೫ – ೬೭
೫೯. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೬೮ – ೬೯
೬೦. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೭೦
೬೧. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೭೭–೮೧

ಜಪಾನುಷ್ಠಾನದ ವಿಧಾನ

ಪ್ರಾತಃಕಾಲದಲ್ಲಿ ಶೌಚಾದಿಗಳನ್ನು ಪೂರೈಸಿಕೊಂಡ ಬಳಿಕ ವೀರಶೈವನು ಸ್ನಾನದ ನೀರನ್ನು ಪವಿತ್ರ ಶಿವತೀರ್ಥವೆಂದು ಮನದಲ್ಲಿ ಭಾವಿಸಿ ಸಂಕಲ್ಪ, ಮಂತ್ರಪಠಣ, ಮಾರ್ಜನ, ಅಘಮರ್ಷಣ ಮತ್ತು ದೇವತಾರ್ಪಣ ಎಂಬ ಪಂಚಾಂಗ ಸ್ನಾನವನ್ನು ಮಾಡಬೇಕೆಂದು ಆಗಮಗಳು ತಿಳಿಸುತ್ತವೆ. ಏಕೆಂದರೆ ಸ್ನಾನವು ಕೇವಲ ಶರೀರಶುದ್ಧಿಗೋಸ್ಕರವಾದ ಬಹಿರಂಗ ಕ್ರಿಯೆಯಾಗದೇ ಅಂತರಂಗಶುದ್ಧಿಗೋಸ್ಕರವೂ ಪ್ರಯೋಜನಕಾರಿಯಾಗಬೇಕೆಂದು ಪಾರಮೇಶ್ವರಾಗಮವು –

ಶೌಚಮಾಭ್ಯಂತರಂ ಕುರ್ಯಾನ್ನ ಬಾಹ್ಯ ಶೌಚಮುಚ್ಯತೇ ।
ತತಃ ಶೌಚವಿಮುಕ್ತಾತ್ಮಾ ಶುಚಿರಪ್ಯಶುಚಿರ್ಯತಃ ॥[೬೨]

ಮೊದಲು ಆಂತರಿಕ ಶುದ್ಧಿಯನ್ನು ಸಂಪಾದಿಸಬೇಕು; ಬಾಹ್ಯ ಶುದ್ಧಿಯು ಶುದ್ಧಿಯೇ ಅಲ್ಲ; ಏಕೆಂದರೆ ಆಂತರಿಕವಾಗಿ ಶುದ್ಧಿಯಿಲ್ಲದವನು ಶುದ್ಧನಾಗಿದ್ದರೂ ಶುದ್ಧನಲ್ಲ ಎಂದು ಪ್ರತಿಪಾದಿಸಿದೆ. ಕಾರಣ ಸಾಧಕನು ಮೊದಲು ನಿರ್ಮಲ ಚಿತ್ತನಾಗಿ ನಂತರ –

ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ।
ತಾರಕ್ಷವಂ ವಾ ಮಾರ್ಗಂ ಚರ್ಮಾಸ್ತೀರ್ಯ ತಥೋಪರಿ ॥
ಆಸ್ತೀರ್ಯ ಕಂಬಲಂ ಕೃಷ್ಣಂ ವಸ್ತ್ರಂ ಕಾಷಾಯಮಾಸ್ತರೇತ್।
ಅಭ್ಯಸೇದಾಸನಂ ಚಾದಾವುಪವಿಶ್ಯ ಯಥಾಸುಖಮ್ ॥[೬೩]

ಸ್ನಾನವನ್ನು ಮಾಡಿ ಶುಚಿಯಾದ ಭೂಮಿಯ ಮೇಲೆ ಸ್ಥಿರವಾದ (ಮಣೆ ಮುಂತಾದ) ಆಸನವನ್ನು ಹಾಕಿ, ಅದರ ಮೇಲೆ ಶಿವಂಗಿ ಅಥವಾ ಜಿಂಕೆಯ ಚರ್ಮವನ್ನು ಹರಡಿ ಅದರ ಮೇಲೆ ಕಪ್ಪು ಕಂಬಳಿಯನ್ನು ಹಾಸಿ ಮತ್ತೆ ಕಾವಿವಸ್ತ್ರವನ್ನು ಹಾಸಬೇಕು. ಆರಂಭದಲ್ಲಿ ಯಾವುದೇ ಕ್ಲೇಶವಿಲ್ಲದಂತೆ ಕುಳಿತು ಆಸನವನ್ನು ಅಭ್ಯಾಸ ಮಾಡಬೇಕು. ನಂತರ

ಶಿವಭಕ್ತ್ಯಾ ಶಿವಂ ಧ್ಯಾತ್ವಾ ಸ್ವಗುರೋಃ ಸನ್ನಿಧೌ ಹೃದಿ।
ಉದಙ್ಮುಖಃ ಪ್ರಾಙ್ಮುಖೋ ವಾ ಮೌನೀ ಚೈಕಾಗ್ರಮಾನಸಃ ॥[೬೪]

ಶಿವಭಕ್ತಿಯಿಂದ ಶಿವನನ್ನು ಧ್ಯಾನಿಸುತ್ತಾ ತನ್ನ ಗುರುವಿನ ಸಮ್ಮುಖದಲ್ಲಿ ಉತ್ತರಾಭಿಮುಖನಾಗಿ ಅಥವಾ ಪೂರ್ವಾಭಿಮುಖನಾಗಿ ಕುಳಿತು ಮೌನ ಧರಿಸಿ ಏಕಾಗ್ರಚಿತ್ತನಾಗಿ,

---

೬೨. ಪಾ.ಆ. ಪಟಲ ೧೨ ಶ್ಲೋಕ ಸಂಖ್ಯೆ ೨೨
೬೩. ಪಾ.ಆ. ಪಟಲ ೧೦ ಶ್ಲೋಕ ಸಂಖ್ಯೆ ೨೦-೨೧
೬೪. ಪಾ.ಆ. ಪಟಲ ೧೧ ಶ್ಲೋಕ ಸಂಖ್ಯೆ ೮೦

ಆತಿಷ್ಠೇತ್ ಸ್ಥಾಣುವತ್ ಸ್ವಸ್ಥೋ ಯಥಾ ದೀಪೋ ನಿವಾತಗಃ।
ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಮ್ ॥[೬೫]

ತನ್ನ ಶರೀರ, ತಲೆ ಮತ್ತು ಕತ್ತುಗಳನ್ನು ಚಲಿಸದಂತೆ ಸ್ಥಿರವಾಗಿ ನೆಟ್ಟಗೆ ಇಟ್ಟುಕೊಂಡು, ಸ್ವಸ್ಥನಾಗಿ ಕಂಬದಂತೆ ಗಾಳಿಯಿಲ್ಲದ ದೀಪದಂತೆ ಕುಳಿತುಕೊಳ್ಳಬೇಕು. ನಂತರ ದಹನ, ಆಪ್ಲಾವನ ಮುಂತಾದವುಗಳಿಂದ ತನ್ನ ಶರೀರದಲ್ಲಿರುವ ಪಂಚತತ್ವಗ್ಗಳನ್ನು ಶುದ್ಧಿಗೊಳಿಸಿಕೊಳ್ಳಬೇಕೆಂದು ತಿಳಿಸಿದೆ. ಹೀಗೆ ಶರೀರದಲ್ಲಿರುವ ಪಂಚತತ್ವಗಳನ್ನು ಶುದ್ಧೀಕರಣಗೊಳಿಸಿಕೊಂಡ ಬಳಿಕ ಮಂತ್ರನ್ಯಾಸವನ್ನು ಮಾಡಬೇಕು. ವಿದ್ಯೆಯ ಉತ್ಪತ್ತಿಸ್ಥಾನ, ಸ್ವರೂಪ, ಋಷಿ, ಛಂದಸ್ಸು, ದೈವ, ಬೀಜ, ಶಕ್ತಿ, ವಾಚ್ಯಸ್ವರೂಪಗಳನ್ನು ಸ್ಮರಿಸಿ ಪಂಚಾಕ್ಷರ ಮಂತ್ರವನ್ನು ಜಪಿಸಬೇಕು ಎಂದು ತಿಳಿಸುತ್ತಾ ಜಪಕ್ಕಿಂತ ಪೂರ್ವದಲ್ಲಿ ಆಚರಿಸುವ ನ್ಯಾಸಕ್ರಮವನ್ನು ವಿವರಿಸಿವೆ.

ನ್ಯಾಸ ವಿಧಿ

ಪಂಚಾಕ್ಷರೀ ಮಹಾಮಂತ್ರ ಜಪವನ್ನು ಪ್ರಾರಂಭಿಸುವುದಕ್ಕೆ ಮೊದಲು ಋಷ್ಯಾದಿಗಳನ್ನು ತನ್ನ ಶರೀರದಲ್ಲಿ ಭಾವನೆಯಿಂದ ನ್ಯಾಸ ಮಾಡಿಕೊಳ್ಳಬೇಕಾಗುತ್ತದೆ. "ಮಸ್ತಕದಲ್ಲಿ ಋಷಿಯನ್ನು, ಮುಖದಲ್ಲಿ ಛಂದಸ್ಸನ್ನು, ಹೃದಯದಲ್ಲಿ ದೇವತೆಯನ್ನು, ನಾಭಿಯಲ್ಲಿ ಬೀಜವನ್ನು, ಗುಹ್ಯದಲ್ಲಿ ಶಕ್ತಿಯನ್ನು, ಪಾದಗಳಲ್ಲಿ ಕೀಲಕವನ್ನು ಭಾವನಾತ್ಮಕವಾಗಿ ಶರೀರದ ನಾನಾ ಸ್ಥಾನಗಳಲ್ಲಿ ಸ್ಥಾಪನೆ ಮಾಡುವುದೇ ನ್ಯಾಸ." ಸೂಕ್ಷ್ಮಾಗಮವು ನ್ಯಾಸವಿಧಿಯನ್ನು ಹೀಗೆ ನಿರೂಪಿಸಿದೆ–

ನಕರಾದ್ಯೈರ್ಬಿಂದುಯುತೈಃ ಪಂಚಭಿರ್ಬ್ರಹ್ಮಭಿಃ ಸಹ।
ಚತುರ್ಥ್ಯಂತೈಃ ಕನಿಷ್ಠಾದಿಷ್ವಂಗುಲೀಷು ಕ್ರಮಾನ್ನ್ಯಸೇತ್॥
ಏವಂ ಕೃತ್ವಾ ಕರನ್ಯಾಸಮಂಗನ್ಯಾಸಮಥಾಚರೇತ್।
ಮುಖಹೃತ್ಪಾದಯುಗಲಗುಹ್ಯಶೀರ್ಷೇಷು ಚ ಕ್ರಮಾತ್॥
ಚತುರ್ಥ್ಯಂತೈರನಂತಾದಿಶಕ್ತಿಧಾಮಾದಿಭಿಃ ಸಹ।
ಷಡ್ವರ್ಗಪೂರ್ವಕೈರ್ನ್ಯಸ್ಯೇತ್ ಷಡಂಗಾನಿ ಯಥಾಕ್ರಮಮ್।
ನ್ಯಾಸಮೇವಂ ಕ್ರಮಾತ್ ಕೃತ್ವಾತತೋ ಧ್ಯಾಯೇತಮಾಂಶಿವಮ್॥[೬೭]

"ಬಿಂದು ಸಹಿತವಾದ ನಕಾರಾದಿ ಪಂಚ ಅಕ್ಷರಗಳಿಗೆ ಸದ್ಯೋಜಾತಾದಿ ಪಂಚಬ್ರಹ್ಮವಾಚಕ ಪದಗಳನ್ನು ಸೇರಿಸಿ, ಕಿರುಬೆರಳು ಮೊದಲ್ಗೊಂಡು ಹೆಬ್ಬೆರಳಿನವರೆಗೆ ಕ್ರಮವಾಗಿ ನ್ಯಾಸ ಮಾಡುವುದು ಕರನ್ಯಾಸ. ಮುಖ, ಹೃದಯ, ಚರಣದ್ವಯ, ಗುಹ್ಯ ಹಾಗೂ ಶಿರಸ್ಸು ಈ ಅಂಗನ್ಯಾಸವನ್ನು ಮಾಡಬೇಕು. ಅನಂತಧಾಮವೇ ಮೊದಲ್ಗೊಂಡು ಚತುರ್ಥ್ಯಂತಗಳಾದ ಪದಗಳೊಂದಿಗೆ ಷಡಕ್ಷರಗಳನ್ನು ಪರಿವಿಡಿದು ಷಡಂಗಗಳಲ್ಲಿ ನ್ಯಾಸ ಮಾಡಬೇಕು."

---

೬೫. ಪಾ.ಆ. ಪಟಲ ೧೦ ಶ್ಲೋಕ ಸಂಖ್ಯೆ ೨೩

೬೭. ಸೂ.ಆ. ಕ್ರಿಪಾ. ಪಟಲ ೩, ಶ್ಲೋಕ ಸಂಖ್ಯೆ ೩೧,೩೩

ಕಾರಣ ಸಾಧಕನು ತನ್ನ ಬಲಗೈ ಮುಷ್ಟಿಯನ್ನು ಬಿಗಿದು ಅದರ ಅಂಗುಷ್ಠದಿಂದ ಮಸ್ತಕವನ್ನು ಮುಟ್ಟಿ ಅಲ್ಲಿ ಋಷಿಯನ್ನೂ, ಮುಷ್ಟಿಯನ್ನು ಬಿಚ್ಚಿ ಅಂಗುಷ್ಠ ಹಾಗೂ ತರ್ಜನಿ ಬೆರಳುಗಳಿಂದ ಮುಖ (ಬಾಯಿ) ವನ್ನು ಮುಟ್ಟಿ ಛಂದಸ್ಸನ್ನು, ಅಂಗುಷ್ಠ ಹಾಗೂ ಮಧ್ಯಮಾ ಬೆರಳುಗಳಿಂದ ಹೃದಯವನ್ನು ಸ್ಪರ್ಶಿಸಿ ಅಲ್ಲಿ ದೇವತೆಯನ್ನು, ಅಂಗುಷ್ಠ ಮತ್ತು ಅನಾಮಿಕೆಗಳಿಂದ ನಾಭಿಯನ್ನು ಸ್ಪರ್ಶಿಸಿ ಅಲ್ಲಿ ಬೀಜವನ್ನು, ಅಂಗುಷ್ಠ ಮತ್ತು ಕನಿಷ್ಠೆಗಳಿಂದ ಗುಹ್ಯವನ್ನು ಸ್ಪರ್ಶಿಸಿ ಅಲ್ಲಿ ಶಕ್ತಿಯನ್ನೂ ಮತ್ತು ಎರಡೂ ಕೈಗಳ ತರ್ಜನಿ ಬೆರಳುಗಳನ್ನು ಹೊರತುಪಡಿಸಿ ಕಟ್ಟಿದ ಮುಷ್ಟಿಗಳಿಂದ ಕ್ರಮವಾಗಿ ಬಲಮುಷ್ಟಿಯನ್ನು ಎಡದಿಂದ ಬಲಕ್ಕೆ, ಎಡಮುಷ್ಟಿಯನ್ನು ಬಲದಿಂದ ಎಡಕ್ಕೆ ಮಸ್ತಕದ ಪರಿಕ್ರಮವನ್ನು ಮಾಡಿ ಬಲ ತರ್ಜನಿಯಿಂದ ಬಲಪಾದದ ಅಂಗುಷ್ಠವನ್ನು ಕೀಲಕದ ನ್ಯಾಸವನ್ನು ಮಾಡಬೇಕು.

ನ್ಯಾಸ ವಿಧಿಯು ಕರನ್ಯಾಸ, ಅಂಗನ್ಯಾಸ ಮತ್ತು ಷಡಂಗನ್ಯಾಸ ಅಥವಾ ದೇಹನ್ಯಾಸವೆಂದು ಮೂರು ವಿಧವಾಗಿದೆ. ಅದು ಮತ್ತೆ ಸೃಷ್ಟಿನ್ಯಾಸ, ಸ್ಥಿತಿನ್ಯಾಸ ಮತ್ತು ಸಂಹಾರನ್ಯಾಸವೆಂದು ಪ್ರಭೇದಗೊಂಡಿದೆ. ಗೃಹಸ್ಥರಿಗೆ ಸೃಷ್ಟಿನ್ಯಾಸ, ಬ್ರಹ್ಮಚಾರಿಗಳಿಗೆ ಸ್ಥಿತಿನ್ಯಾಸ ಮತ್ತು ಸಂನ್ಯಾಸಿಗಳಿಗೆ ಸಂಹಾರನ್ಯಾಸವೆಂದು ಯೋಜಿಸಲಾಗಿದೆ.[೧೮] ಆದರೆ ವೀರಶೈವ ಸಿದ್ಧಾಂತದಲ್ಲಿ ಆಶ್ರಮಭೇದದಿಂದ ನ್ಯಾಸಭೇದಕ್ಕೆ ಸಮ್ಮತಿ ಇರುವುದಿಲ್ಲ. ತಮ್ಮ ಇಚ್ಛಾನುಸಾರ ಯಾವುದಾದರೊಂದು ನ್ಯಾಸಪದ್ಧತಿಯನ್ನು ಸ್ವೀಕರಿಸಬೇಕೆಂದು ನೀಲಕಂಠ ಶಿವಾಚಾರ್ಯರು ತಮ್ಮ 'ಕ್ರಿಯಾಸಾರ' ಎಂಬ ಗ್ರಂಥದಲ್ಲಿ ಹೇಳಿರುವ ವಿಚಾರವನ್ನು ಬಿಜಾಪೂರದ ಲಿಂ. ಶ್ರೀ ಷ. ಬ್ರ. ಶಂಭುಲಿಂಗ ಶಿವಾಚಾರ್ಯರು ತಮ್ಮ 'ಅಷ್ಟಾವರಣ ವಿವೇಕ' ದಲ್ಲಿ ಪ್ರತಿಪಾದಿಸಿದ್ದಾರೆ.[೧೯]

ಹೀಗೆ ಋಷ್ಯಾದಿಗಳನ್ನು ತನ್ನ ಶರೀರದಲ್ಲಿ ಭಾವನೆಯಿಂದ ನ್ಯಾಸ ಮಾಡಿಕೊಂಡ ಬಳಿಕ ಪಂಚಾಕ್ಷರೀ ಮಹಾಮಂತ್ರ ಜಪವನ್ನು ಪ್ರಾರಂಭಿಸಬೇಕು ಎಂದು ತಿಳಿಸುತ್ತಾ ಜಪಕ್ಕೆ ರುದ್ರಾಕ್ಷಿಯನ್ನಾಗಲೀ, ಬೆರಳುಗಳನ್ನಾಗಲೀ ಬಳಸಿ ಜಪಿಸಬೇಕೆಂದು ತಿಳಿಸುತ್ತಾ, ಜಪದಲ್ಲಿ ಯಾವ ಬೆರಳುಗಳ ಉಪಯೋಗ ಉತ್ತಮವೆಂದು ವಿವರಿಸಿದೆ.

ಅಂಗುಷ್ಠಂ ಮೋಕ್ಷದಂ ವಿದ್ಯಾತ್ತರ್ಜನೀ ಶತ್ರುನಾಶಿನೀ।
ಮಧ್ಯಮಾ ಧನದಾ ಶಾಂತಿಂ ಕರೋತ್ಯೇವ ಹ್ಯನಾಮಿಕಾ॥
ಕನಿಷ್ಠಾಕರ್ಷಣೀ ಪ್ರೋಕ್ತಾ ಜಪಕರ್ಮಣಿ ಗೀಷ್ಪತೇ ॥
ಅಂಗುಷ್ಠೇನ ಜಪೇಜ್ಜಪ್ಯಮನ್ಯೈ ರಂಗುಲಿಭಿಃ ಸಹ।
ಅಂಗುಷ್ಠೇನ ವಿನಾ ಜಪ್ಯಂ ಕೃತಂ ತದಫಲಂ ಯತಃ ॥[೨೦]

---

೧೮. ವಾರಣಾಸಿಯ ಜಂಗಮವಾಡಿಯ ಮಠದಿಂದ ಪ್ರಕಾಶಗೊಂಡಿರುವ ಚಂದ್ರಜ್ಞಾನಾಗಮದ 'ಪರಿಶಿಷ್ಟಾನಿ' ಭಾಗದಲ್ಲಿ ವಿವರವಾಗಿ ನ್ಯಾಸಕ್ರಮವನ್ನು ತಿಳಿಸಲಾಗಿದೆ.
೧೯. ಚಂದ್ರಜ್ಞಾನಾಗಮ ವಿಚಾರರಶ್ಮಿ, ಪು. ೯೫.
೨೦. ಚಂ.ಆ. ಕ್ರಿಪಾ. ಪಟಲ ೮. ಶ್ಲೋಕ ಸಂಖ್ಯೆ ೨೦-೨೧

ಜಪ ಕರ್ಮದಲ್ಲಿ ಅಂಗುಷ್ಠದ ಪ್ರಯೋಗವು ಮೋಕ್ಷಪ್ರದ; ತರ್ಜನೀ ಬೆರಳಿನ ಪ್ರಯೋಗ ಶತ್ರುಗಳ ನಾಶಕ; ಮಧ್ಯ ಬೆರಳಿನ ಪ್ರಯೋಗ ಧನಪ್ರದ; ಅನಾಮಿಕ ಬೆರಳಿನ ಪ್ರಯೋಗ ಶಾಂತಿಯನ್ನು ನೀಡುತ್ತದೆ; ಕನಿಷ್ಠ ಬೆರಳಿನ ಪ್ರಯೋಗ ಆಕರ್ಷಣೆಯನ್ನು ಮಾಡುತ್ತದೆಯೆಂದು ಹೇಳಲ್ಪಟ್ಟಿದೆ. ಬೇರೆ ಬೆರಳುಗಳ ಮೂಲಕ ಜಪ ಮಾಡುವಾಗ ಅವುಗಳೊಂದಿಗೆ ಅಂಗುಷ್ಠವನ್ನು (ಹೆಬ್ಬೆರಳನ್ನು) ಉಪಯೋಗಿಸಿ ಜಪಿಸಬೇಕು. ಅಂಗುಷ್ಠವನ್ನು ಉಪಯೋಗಿಸದೆ ಜಪಿಸಿದುದು ಫಲರಹಿತವಾದುದು ಎಂದು ಆಗಮಗಳಲ್ಲಿ ಪ್ರತಿಪಾದಿಸಲಾಗಿದೆ.

ಆದರೆ ಚೆನ್ನಬಸವಣ್ಣನವರು ಈ ನ್ಯಾಸ ಪದ್ಧತಿಯನ್ನು ಕುರಿತು "......ಭವಿಶೈವ ಭಿನ್ನಕರ್ಮಿಗಳಂತೆ ಅಂಗನ್ಯಾಸ ಕರನ್ಯಾಸ ಪಂಚಮಶುದ್ಧಿ ಪಂಚಾಮೃತಾಭಿಷೇಕ ಶ್ರೀರುದ್ರ ಪಂಚಬ್ರಹ್ಮಸ್ಥಲಾದಿ ಶೈವಪಂಚಪಂಚಾಕ್ಷರ ಭೂತಾದಿ ದೇವತಾದಿ ಗಣಿಕಾಜನನಿಕರ ಗಣನಾಕೃತ ಪರಿಪೂರಿತ ಅಕ್ಷಮಣಿ ಭವಮಾಲಿಕಾ ಜಪೋಪಚರಿಯಂಗಳಾದಿಯಾದ ಶೈವ ಪಾಷಂಡಕೃತ ಕರ್ಮಮಯವಪ್ಪ ಭವಿಮಾಟಕೂಟಂಗಳನುಪದೇಶಿಸಿ ಭವಹರನಪ್ಪ ಘನವೀರಶೈವಲಿಂಗದಲ್ಲಿ ಮಾಡಿ ಕೂಡಿ ನಡೆಸಿಹನೆಂಬ ಕಡುಸ್ವಾಮಿದ್ರೋಹಿಗೆ ಆ ನಿಜದೀಕ್ಷೆಗೆಟ್ಟು ಗುರುಶಿಷ್ಯರಿರ್ವರೂ ನರಕಭಾಜನರಪ್ಪುದು ತಪ್ಪದು.....'[೨೧] ಎಂದು ನ್ಯಾಸ ಪದ್ಧತಿಯನ್ನು ಶೈವಕರ್ಮವೆಂದು ವಿರೋಧಿಸಿದ್ದಾರೆ.

ಆದರೆ ಆಗಮಗಳಲ್ಲಿ ನ್ಯಾಸ ಪದ್ಧತಿಯನ್ನು ವಿವರಿಸಿದರೂ ಸಹ ಷಟಸ್ಥಲ ಕ್ರಮದಂತೆ ದೇಹದ ಷಟ್ ಚಕ್ರಗಳನ್ನು ಮಂತ್ರ ಪಠಣದಿಂದ ಸಂಬಂಧಗೊಳಿಸುವ ಮಂತ್ರ ಜಪದ ಕ್ರಮವನ್ನು ವಿವರಿಸಿವೆ.

ಮಂತ್ರ ಜಪದ ಕ್ರಮ:

ಸಾಧನೆಯಲ್ಲಿ ಅತ್ಯಗತ್ಯವಾದ ಏಕಾಗ್ರತೆಯನ್ನು ಸಾಧಿಸಿಕೊಡಲು ಮಂತ್ರಜಪ ಮುಖ್ಯ ಕಾರಣವಾಗುತ್ತದೆ. ಈ ಜಪದಲ್ಲಿ ವಾಚಿಕ, ಉಪಾಂಶು ಮತ್ತು ಮಾನಸವೆಂದು ಮೂರು ಬಗೆಗಳುಂಟು:

ಸ ಜಪಸ್ತ್ರಿವಿಧಃ ಪ್ರೋಕ್ತೋ ವಾಚಿಕೋಪಾಂಶುಮಾನಸ್ಯೈಃ[೨೨]

ತಾಲ್ವಾದಿಗಳ (ಹಲ್ಲಿನ ಮೇಲಿನ ಪಂಕ್ತಿಯ ಹಿಂಭಾಗ) ಸ್ಪರ್ಶದಿಂದ ಉಚ್ಚಸ್ವರದಲ್ಲಿ ಸ್ಪಷ್ಟವಾದ ಅಕ್ಷರಗಳಿಂದ, ಕಿವಿಗೆ ಕೇಳುವಂತೆ ಜಪಿಸಿದರೆ ಅದು ವಾಚಿಕ ಜಪವೆನಿಸುತ್ತದೆ.[೨೩]

ಮೆಲ್ಲನೆ ತಾಲ್ವಾದಿ ಸ್ಪರ್ಶದಿಂದ ಸ್ವಲ್ಪ ಸ್ಪಷ್ಟವಾದ ಅಕ್ಷರಗಳಿಂದ ಸ್ವಲ್ಪ ಮಟ್ಟಿಗೆ ಕಿವಿಗೆ ಕೇಳುವಂತೆ ಜಪಿಸಿದರೆ ಅದು ಉಪಾಂಶು ಜಪವೆನಿಸುತ್ತದೆ. ಅರ್ಥಾತ್ ಜಪ ಮಾಡುವಾಗ ನಾಲಿಗೆ ಮಾತ್ರ ಅಲುಗಾಡುತ್ತಿದ್ದು ಮಂತ್ರಾಕ್ಷರಗಳ ಉಚ್ಚಾರವು

---

೨೧. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೮೬೫, ಪು.೨೫೮

೨೨. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೪೧

೨೩. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೪೧,

ನಿಧಾನವಾಗಿದ್ದು ಬೇರೆಯವರಿಗೆ ಕೇಳದಂತಿದ್ದು, ಜಪ ಮಾಡುವವನಿಗೆ ಮಾತ್ರ ಕೇಳಿಸುವಂತಿದ್ದರೆ ಉಪಾಂಶುಜಪವೆನಿಸುತ್ತದೆ.[೭೪].

ಮಂತ್ರಾರ್ಥವನ್ನು ಮನಸ್ಸಿನಲ್ಲಿಯೇ ಧ್ಯಾನಿಸುತ್ತಾ ವರ್ಣದಿಂದ ವರ್ಣವನ್ನು, ಪದದಿಂದ ಪದವನ್ನು ಆವೃತ್ತಗೊಳಿಸಿ ಎಣಿಕೆ ಮಾಡುವ ಮುನ್ನ ಜಪಿಸಿದಲ್ಲಿ ಅದು ಮಾನಸಜಪವೆನಿಸುತ್ತದೆ.[೭೫]

ಈ ಮೂರು ವಿಧ ಜಪಗಳಲ್ಲಿ ಉತ್ತರೋತ್ತರ ಜಪ ಶ್ರೇಷ್ಠವಾಗಿದೆ.[೭೬] ಅರ್ಥಾತ್ ವಾಚಿಕಕ್ಕಿಂತ ಉಪಾಂಶು, ಉಪಾಂಶುಗಿಂತ ಮಾನಸಜಪ ಶ್ರೇಷ್ಠವಾಗಿದೆ. ಚಂದ್ರಜ್ಞಾನಾಗಮವು ಇವುಗಳನ್ನು ಕ್ರಮವಾಗಿ ಕನಿಷ್ಠ, ಮಧ್ಯಮ ಮತ್ತು ಉತ್ತಮವೆಂದು ಹೇಳಿದೆ.

ಉತ್ತಮೋ ಮಾನಸಃ ಪ್ರೋಕ್ತ ಉಪಾಂಶುರ್ಮಧ್ಯಮಸ್ತಥಾ।[೭೭]
ಅಧಮೋ ವಾಚಿಕಃ ಪ್ರೋಕ್ತ ಇತ್ಯೇತಚ್ಛಿವಶಾಸನಮ್॥

ಇದನ್ನು ಸಮರ್ಥಿಸುತ್ತಾ ಪಾರಮೇಶ್ವರಾಗಮವು ಬಾಹ್ಯಕ್ಕಿಂತ ಆಂತರಿಕವಾದ ಜಪವೇ ಶ್ರೇಷ್ಠ ಎಂದು ಹೀಗೆ ತಿಳಿಸುತ್ತದೆ –

ಬಾಹ್ಯಾದಾಭ್ಯಂತರಂ ಶ್ರೇಷ್ಠಂ ಭವೇಚ್ಛತಗುಣಾಧಿಕಮ್।
ಅಸಂಕಟತ್ವಾದ್ದುಷ್ಟಾನಾಂ ದೋಷಾಣಾಮಪ್ಯಸಂಭವಾತ್ ॥[೭೮]

ಬಾಹ್ಯ ಆರಾಧನೆಗಿಂತ ಆಂತರಿಕ (ಮಾನಸ) ಆರಾಧನೆಯು ನೂರು ಗುಣದಷ್ಟು ಶ್ರೇಷ್ಠ; ಏಕೆಂದರೆ ಅದರಲ್ಲಿ ದುಷ್ಟಜನರ ಸಂಕಟಗಳಿರುವುದಿಲ್ಲ ಮತ್ತು ಯಾವುದೇ ದೋಷದ ಸಂಭಾವನೆಯಿಲ್ಲ. ಆದ್ದರಿಂದ ಮಂತ್ರಶಕ್ತಿ ಮೈಗೂಡಬೇಕಾದರೆ ಮಾನಸಿಕ ಜಪವನ್ನೇ ಮಾಡಬೇಕು. ಇದುವೇ ಉತ್ತಮ ಜಪ. ಇದರಿಂದ ಮಾಂಸಪಿಂಡ ಮಂತ್ರಮಯವಾಗುತ್ತದೆ. ಪ್ರಾಣ ಚೈತನ್ಯ ಹೆಚ್ಚುತ್ತದೆ. ಮಾನಸಿಕ ಜಪದಲ್ಲಿ ಶಬ್ದಾರ್ಥ, ಚಿಂತನಕ್ಕೆ ಅತ್ಯಧಿಕ ಅವಕಾಶವಿದೆ ಎಂದು ಆಗಮಗಳು ಪ್ರತಿಪಾದಿಸುತ್ತವೆ.

ವಚನಗಳಲ್ಲಿಯೂ ಸಹ ಇದೇ ಅಭಿಪ್ರಾಯ ಮೂಡಿ ಬಂದಿದೆ. – 'ಮಾನಸ, ವಾಚಕ, ಉಪಾಂಸಿಕವೆಂದು ಪ್ರಣಮ ಪಂಚಾಕ್ಷರಿಯ ಜಪ ಮೂರು ತೆರನಾಗಿಪ್ಪುದು. ಮನಸ್ಸಿನಲ್ಲಿಯೇ ಪ್ರಣವ ಜಪಿಸುವುದು ಮಾನಸ. ವಾಕ್ಯದಿಂದ ಶಿವಾಯ ಹರಾಯ ಭವಾಯ ಮೃಡಾಯ ಶರಣೆಂಬುದು ವಾಚಕ. ಕ್ರಿಯಾಕಾಲದಲ್ಲಿ ಈ ತೆರನಾಗಿ ಒಬ್ಬರೂ ಕೇಳದ ಹಾಗೆ ತನ್ನ ಕಿವಿ ಕೇಳುವ ಹಾಗೆ ಶಿವಮಂತ್ರದಲ್ಲಿ ಸುಯಿಧಾನಿಯಾಗಿ

---

೭೪. ಸೂ.ಆ. ಕ್ರಿ.ಪಾ, ಪಟಲ ೩, ಶ್ಲೋಕ ಸಂಖ್ಯೆ ೪೨. ಹಾಗೂ ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೩೮

೭೫. ಸೂ.ಆ. ಕ್ರಿ.ಪಾ, ಪಟಲ ೩, ಶ್ಲೋಕ ಸಂಖ್ಯೆ ೪೩

೭೬. ತ್ರಯಾಣಾಮಪಿ ಚೈತೇಷಾಂ ವರಂ ಸ್ಯಾದುತ್ತರೋತ್ತರಮ್॥ ಸೂ.ಆ. ಕ್ರಿ.ಪಾ, ಪಟಲ ೩, ಶ್ಲೋಕ ಸಂಖ್ಯೆ ೪೩.

೭೭. ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೩೬

೭೮. ಪಾ.ಆ. ಪಟಲ ೧೨ ಶ್ಲೋಕ ಸಂಖ್ಯೆ ೨೧

ಪುನಶ್ಚರಣೆಯಾಗಿ, ತ್ರಿಸಂಧ್ಯೆಯಲ್ಲಿ ಬಿಡದೆ ಉಚ್ಚರಿಸುವುದೀಗ ಉಪಾಂಸಿಕ ಈ ಮೂರು ಪ್ರಕಾರವಾಗಿ ಶಿವಮಂತ್ರವ ಜಪಿಸಬೇಕು ಕಾಣಾ[೭೯] ಎನ್ನುತ್ತಾರೆ ತೋಂಟದಸಿದ್ಧಲಿಂಗಯತಿಗಳು. ಹೀಗೆ ಜಪವು ಯಾವುದೇ ಬಗೆಯಾಗಲೀ ಏಕಾಗ್ರತೆಯನ್ನು ಸಾಧಿಸಿಕೊಡುವುದಕ್ಕೆ ಅದು ಕಾರಣವಾಗಬೇಕೆಂಬುದೇ ಅತೀ ಮುಖ್ಯವಾದ ಅಂಶವಾಗಿದೆ.

ವಾಚಿಕ, ಉಪಾಂಶು ಮತ್ತು ಮಾನಸಿಕ ಎಂಬ ಮೂರು ಬಗೆಯ ಜಪಗಳು ಮತ್ತೆ ಅಗರ್ಭ, ಸಗರ್ಭ ಮತ್ತು ಸಧ್ಯಾನ ಎಂದು ಮೂರು ವಿಧವಾಗುತ್ತವೆ. ಅವುಗಳಲ್ಲಿ

ಕುಂಭಕೇನ ಸಮಾಯುಕ್ತಃ ಸಗರ್ಭೋ ಜಪ ಉಚ್ಯತೇ ॥
ಆದ್ಯಂತಯೋರಗರ್ಭೋಽಪಿ ಪ್ರಣಾಯಾಮಃ ಪ್ರಶಸ್ಯತೇ ।
ಚತ್ವಾರಿಂಶತ್ಸಮಾವೃತ್ತಿಃ ಪ್ರಾಣಾನಾಯಮ್ಯ ಸಂಸ್ಮರೇತ್ ॥
ಮಂತ್ರಂ ಮಂತ್ರಾರ್ಥವಿದ್ಧೀಮಾನ್ ಶಕ್ತಃ ಶಕ್ತಿಮತೋ ಜಪೇತ್ ॥[೮೦]

ಕುಂಭಕ ಪ್ರಾಣಾಯಾಮದೊಂದಿಗೆ ಮಾಡುವ ಜಪವು ಸಗರ್ಭವೆಂದೂ, ಆದಿ(ಪೂರಕ) ಮತ್ತು ಅಂತ್ಯ(ರೇಚಕ)ಗಳೊಂದಿಗೆ ಮಾಡುವ ಜಪವು ಅಗರ್ಭವೆಂದೂ ಮತ್ತು ಶಿವಧ್ಯಾನ ಸಹಿತವಾದದ್ದು ಸಧ್ಯಾನ ಜಪವೆಂದು ಹೇಳಲ್ಪಡುತ್ತದೆ. ಹೀಗೆ ಪ್ರಾಣಾಯಾಮ ರಹಿತವಾದದ್ದು ಅಗರ್ಭ[೮೧], ಪ್ರಾಣಾಯಾಮಸಹಿತವಾದದ್ದು ಸಗರ್ಭ[೮೨] ಎಂದು ತಿಳಿಯಬೇಕು. ಸಗರ್ಭ ಜಪಾಭ್ಯಾಸ ಮಾಡುವಾಗ ನಲವತ್ತು ಸಲ, ಐದು ಸಲ ಅಥವಾ ಮೂರು ಸಲ ಪ್ರಾಣಾಯಾಮವನ್ನು ಮಾಡಬೇಕು.[೮೩] ಇವುಗಳಲ್ಲಿ ಉತ್ತರೋತ್ತರವಾದದ್ದು ಶ್ರೇಷ್ಠವಾದದ್ದು. ಅದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸುತ್ತದೆ.

ಅಗರ್ಭಂ ವಾ ಸಗರ್ಭಂ ವಾ ಸಗರ್ಭಸ್ತು ಪ್ರಶಸ್ಯತೇ।
ಸಗರ್ಭಾದಪಿ ಸಾಹಸ್ರಂ ಸಧ್ಯಾನೋ ಜಪ ಉಚ್ಯತೇ॥[೮೪]

"ಅಗರ್ಭ ಜಪಕ್ಕಿಂತಲೂ ಸಗರ್ಭವು ಶ್ರೇಷ್ಠವಾದದ್ದು. ಸಗರ್ಭಕ್ಕಿಂತಲೂ ಸಧ್ಯಾನ

---

೭೯. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವಚನ ಸಂ.೬, ವಚನ ಸಂಖ್ಯೆ ೨೧೦, ಪು. ೧೦೨

೮೦. ಪಾ.ಆ. ಪಟಲ ೧೧ ಶ್ಲೋಕ ಸಂಖ್ಯೆ ೮೯–೯೧

೮೧. ಪ್ರಾಣಾಯಾಮೇನ ರಹಿತೋ ಹ್ಯಗರ್ಭೋ ಜಪ ಉಚ್ಯತೇ।
– ಚಂ.ಜ್ಞಾ.ಕ್ರಿ.ಪ್ರಾ, ಪಟಲ ಚಿಲ, ಶ್ಲೋಕ. ಸಂ. ೬೧

೮೨. ಪ್ರಾಣಾಯಾಮ ಸಮಾಯುಕ್ತಃ ಸಗರ್ಭೋ ಜಪ ಉಚ್ಯತೇ॥
– ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೬೧

೮೩. ಚತ್ವಾರಿಂಶತ್ಸಮಾವೃತ್ತಿಂ ಪ್ರಾಣಾಯಾಮಂ ತು ಸಂಸ್ಮರೇತ್।
ಮಂತ್ರಂ ಮಂತ್ರಾರ್ಥವಿಧಿಮಾನಶಕ್ತಃ। ಶಕ್ತಿತೋ ಜಪೇತ್।
ಪಂಚಕಂ ತ್ರಿಕಮೇಕಂ ವಾ ಪ್ರಾಣಾಯಾಮಂ ಸಮಾಚರೇತ್॥
– ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೬೨–೬೩

೮೪. ಚಂ.ಆ. ಕ್ರಿ.ಪಾ. ಪಟಲ ೮, ಶ್ಲೋಕ ಸಂಖ್ಯೆ ೬೩–೬೪

ಜಪವು ಸಾವಿರ ಪಾಲು ಶ್ರೇಷ್ಠವೆಂದು ಹೇಳಲ್ಪಟ್ಟಿದೆ." ಆದುದರಿಂದ ಸಗರ್ಭ ಮತ್ತು ಸಧ್ಯಾನ ಜಪವನ್ನು ಅಭ್ಯಾಸಮಾಡಬೇಕು.

ಕಾರಣ ಮಂತ್ರ ಮತ್ತು ಮಂತ್ರಾರ್ಥವನ್ನು ತಿಳಿದ ಧೀಮಂತನು ಮಂತ್ರವನ್ನು ಅಗರ್ಭವಾಗಿಯಾಗಲಿ ಸಗರ್ಭವಾಗಿಯಾಗಲಿ ಜಪಿಸಿ ಪ್ರಾಣಾಯಾಮವನ್ನು ಮಾಡಿ ಮಂತ್ರದ ಆವೃತ್ತಿಯನ್ನು ಮಾಡಬೇಕು ಎಂದು ಜಪದ ಉಚ್ಚಾರಣಾ ಕ್ರಮವನ್ನು ಆಗಮಗಳಲ್ಲಿ ಕೆಳಗಿನಂತೆ ವಿವರಿಸಲಾಗಿದೆ.

ದೇಹದ ಸಕಲೀಕರಣವನ್ನು ಮಾಡಿ, ಪ್ರಾಣ–ಅಪಾನ–ವಾಯುಗಳನ್ನು ನಿಯಂತ್ರಿಸಿ (ಪ್ರಾಣಾಯಾಮದ ಮೂಲಕ ಶ್ವಾಸೋಚ್ಛ್ವಾಸಗಳನ್ನು ನಿರೋಧಿಸಿ), ಶಿವ–ಶಕ್ತಿಯರ ಸ್ವರೂಪಗಳನ್ನು ಧ್ಯಾನಿಸಬೇಕು.

ಹೃತ್ಪುಂಡರೀಕೇ ನಾಭ್ಯಾಂ ವಾ ಸ್ವಾಧಿಷ್ಠಾನೇಽಪಿ ಮೂಲಕೇ ।
ವಿಶುದ್ಧೌ ಚಾಪಿ ಚಾಜ್ಞಾಯಾಂ ಸಹಸ್ರಾರೇಽಪಿ ನಾ ಶಿವೇ ॥
ಬ್ರಹ್ಮರಂಧ್ರೇ ಶಿಖಾಗ್ರೇ ವಾ ದ್ವಾದಶಾಂತೇ ಚಿದಾತ್ಮನಿ।
ಏತದನ್ಯತಮಸ್ಥಾನೇ ಧ್ಯಾಯೇನ್ಮಾಂ ಪರಮೇಶ್ವರಮ್ ॥[೮೫]

ಅನಂತರ ಪರಮೇಶ್ವರನನ್ನು ಹೃದಯಕಮಲ, ನಾಭಿ, ಸ್ವಾಧಿಷ್ಠಾನ, ಮೂಲಾಧಾರ, ವಿಶುದ್ಧ, ಆಜ್ಞಾ, ಸಹಸ್ರಾರ, ಬ್ರಹ್ಮರಂಧ್ರ, ಶಿಖಾಗ್ರ, ದ್ವಾದಶಾಂತ (ಪಶ್ಚಿಮಶಿಖಾ), ಚಿದಾತ್ಮ ಇವುಗಳಲ್ಲಿ ಯಾವುದಾದರೂ ಒಂದು ಸ್ಥಾನದಲ್ಲಿ ಧ್ಯಾನಿಸಬೇಕೆಂದು ಆಗಮಗಳು ತಿಳಿಸುತ್ತವೆ.

ಹೀಗೆ ಶರೀರಕ್ಕೆ ಮಂತ್ರಗಳ ಸಂಬಂಧದ ವಿವರಗಳನ್ನು ಶಾಸ್ತ್ರೀಯವಾದ ಹಿನ್ನಲೆಯಲ್ಲಿ ಶರಣರು ಹೀಗೆ ವಿವರಿಸಿದ್ದಾರೆ.

ಆಧಾರಚಕ್ರದಲ್ಲಿ ನಕಾರ ಸ್ವಾಯತ. ಸ್ವಾಧಿಷ್ಠಾನಚಕ್ರದಲ್ಲಿ ಮಃಕಾರ ಸ್ವಾಯತ.
ಮಣಿಪೂರಕಚಕ್ರದಲ್ಲಿ ಶಿಕಾರ ಸ್ವಾಯತ. ಅನಾಹತಚಕ್ರದಲ್ಲಿ ವಾಕಾರ ಸ್ವಾಯತ.
ವಿಶುದ್ಧಿಚಕ್ರದಲ್ಲಿ ಯಕಾರ ಸ್ವಾಯತ. ಆಜ್ಞಾಚಕ್ರದಲ್ಲಿ ಓಂಕಾರ ಸ್ವಾಯತ.
ಇದು ಕಾರಣ, ಶರಣನ ಕಾಯವೇ ಷಡಕ್ಷರಮಂತ್ರಶರೀರವಾಗಿ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.[೮೬]

ಎಂದು ಮಂತ್ರಗಳಿಗೂ ಶರೀರದ ವಿವಿಧಭಾಗಗಳಗೂ ಷಟ್ ಚಕ್ರಗಳಿಗೂ ಇರುವ ಸಂಬಂಧವನ್ನು ತಿಳಿಸಿ, ಮಂತ್ರಶಕ್ತಿಯಿಂದ ತಾವೇ ಮಂತ್ರಶರೀರಿಗಳಾದ ಅನುಭಾವವನ್ನು ಶರಣರು ವ್ಯಕ್ತಗೊಳಿಸಿದ್ದಾರೆ. ಹೀಗೆ ಮಂತ್ರಶರೀರಿಗಳಾಗುವ ಬಗೆಯನ್ನು ಆಗಮಗಳು ಈ ಬಗೆಯಾಗಿ ವಿವರಿಸಿವೆ.

---

೮೫. ಪಾ.ಆ.೧೦ ನೇ ಪಟಲ, ಶ್ಲೋ. ಸಂ, ೨೪–೨೫

೮೬. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವಚನ ಸಂ. ೬, ವಚನ ಸಂ. ೨೦೨, ಪುಟ ೯೮

ಪ್ರಾಣವಾಯುಂ ನಿರುದ್ಧ್ಯಾಥ ಗುಣಸಂಖ್ಯಾನುಸಾರತಃ।
ಭೂತಗ್ರಂಥಿಂ ತತಶ್ಛಿಂದ್ಯಾದಸ್ತ್ರೇಣೈವಾಸ್ತ್ರಮುದ್ರಯಾ ॥
ನಾಡ್ಯಾ ಸುಷುಮ್ನಯಾऽತ್ಮಾನಂ ಪ್ರೇರಿತಂ ಪ್ರಾಣವಾಯುನಾ।
ನಿರ್ಗತಂ ಬ್ರಹ್ಮರಂಧ್ರೇಣ ಯೋಜಯೇಚ್ಛಿವತೇಜಸಾ॥
ವಾಯುನಾ ಚ ವಿಶೋಷ್ಯೈವ ದೇಹಂ ಕಾಲಾಗ್ನಿನಾ ದಹೇತ್ ॥
ಅಮೃತಪ್ಲಾವನಂ ಕೃತ್ವಾ ಭಸ್ಮೀಭೂತಸ್ಯ ತಸ್ಯ ವೈ।
ತತೋ ವಿದ್ಯಾಮಯಂ ದೇಹಂ ಸಂಭೂತಮಿತಿ ಭಾವಯೇತ್ ॥
ತತೋ ವಿದ್ಯಾಮಯೇ ತಸ್ಮಿನ್ ದೇಹೇ ದೀಪಶಿಖಾಕೃತಿಮ್।
ಶಿವಾನ್ನಿರ್ಗತಮಾತ್ಮಾನಂ ಬ್ರಹ್ಮರಂಧ್ರೇಣ ಯೋಜಯೇತ್ ॥
ಅಂತರ್ದೇಹಂ ಪ್ರವಿಷ್ಟಂ ತಂ ಧ್ಯಾತ್ವಾ ಹೃದಯಪಂಕಜೇ।
ಪುನಶ್ಚಾಮೃತವರ್ಷೇಣ ಸಿಂಚೇದ್ವಿದ್ಯಾಮಯಂ ವಪುಃ ॥
ಏವಂ ಸಮಾಸರೂಪೇಣ ಕೃತ್ವಾ ದೇಹಾತ್ಮಶೋಧನಮ್।[೮೭]
ಶಿವಭಾವಮುಪಾಗಮ್ಯ ಶೈವಪಂಚಾಕ್ಷರಂ ಜಪೇತ್ ॥

ಪ್ರಾಣಾಯಾಮದ ಮೂಲಕ ಪ್ರಾಣವಾಯುವನ್ನು ನಿರುದ್ಧಗೊಳಿಸಿ ಗುಣಗಳ ಸಂಖ್ಯೆಗೆ ಅನುಸಾರವಾಗಿ ಅಸ್ತ್ರಮಂತ್ರದ ಜಪವನ್ನು ಮಾಡುತ್ತಾ ಮತ್ತು ಅಸ್ತ್ರ ಮುದ್ರೆಗಳನ್ನು ಪ್ರದರ್ಶಿಸುತ್ತಾ (ಪಂಚ) ಭೂತಗಳ ಗ್ರಂಥಿಗಳನ್ನು ಭೇದಿಸಬೇಕು. ಪ್ರಾಣಾವಾಯುವಿನ ಮೂಲಕ ಪ್ರೇರಿತವಾದ ತನ್ನ ಆತ್ಮವನ್ನು ಸುಷಮ್ನಾ ನಾಡಿಯ ಸಹಾಯದಿಂದ ಬ್ರಹ್ಮರಂಧ್ರದಿಂದ ಹೊರಗೆ ತಂದು ಶಿವನ ತೇಜಸ್ಸಿನೊಂದಿಗೆ ಸಂಯೋಜಿಸಬೇಕು. ಅಲ್ಲಿ ತನ್ನ ಪಾಪಮಯ ಶರೀರವನ್ನು ವಾಯುವಿನಿಂದ ಒಣಗಿಸಿ ಕಾಲಾಗ್ನಿಯಿಂದ ಅದನ್ನು ಭಸ್ಮವಾಗಿಸಿದಂತೆ ಭಾವಿಸಿಬೇಕು. ಅನಂತರ ಕಾಲಾಗ್ನಿಯಿಂದ ಭಸ್ಮೀಭೂತವಾದ ಆ ಭೌತಿಕ ಶರೀರವನ್ನು ಅಮೃತದಿಂದ ಆಪ್ಯಾಯಿತಗೊಳಿಸಿ ಭಾವಿಸಬೇಕು. ಶಿವನಿಂದ ಹೊಮ್ಮಿದ ದೀಪದ ಶಿಖೆಯಂತೆ ಹೊಳೆಯುವ ಆತ್ಮವನ್ನು ಬ್ರಹ್ಮರಂಧ್ರದ ಮೂಲಕ ಪ್ರವೇಶಿಸುವಂತೆ ಮಾಡಿ ಆ ವಿದ್ಯಾಮಯ ಶರೀರದಲ್ಲಿ ಯೋಜಿಸಬೇಕು. ತನ್ನ ದೇಹವನ್ನು ಪ್ರವೇಶಿಸಿದ (ಶಿವತೇಜಾಂಶವಾದ) ಆತ್ಮವನ್ನು ಹೃದಯ ಕಮಲದಲ್ಲಿ ಧ್ಯಾನಿಸಬೇಕು. ಮತ್ತೆ ಆ ವಿದ್ಯಾಮಯ ಶರೀರವನ್ನು ಅಮೃತವರ್ಷದಿಂದ ಆಪ್ಯಾಯಿತಗೊಳಿಸಬೇಕು. ಹೀಗೆ ದೇಹ ಮತ್ತು ಆತ್ಮಗಳನ್ನು ಶುದ್ಧಗೊಳಿಸಿ ಶಿವಭಾವವನ್ನು ಹೊಂದಿ ಪಂಚಾಕ್ಷರ ಮಂತ್ರವನ್ನು ಜಪಿಸಬೇಕೆಂದು ಜಪೋಚ್ಚಾರಣೆಯ ಬಗೆಯನ್ನು ತಿಳಿಸುತ್ತವೆ.

ಇದನ್ನೇ ಅನುಭವದ ದೃಷ್ಟಿಯಿಂದ ತೋಂಟದ ಸಿದ್ಧಲಿಂಗಯತಿಗಳು ಹೀಗೆ ವಿವರಿಸಿದ್ದಾರೆ

'ಎನ್ನ ರೇಚಕಪೂರಕ ಕುಂಭಕವೆಲ್ಲವು ಶಿವಮಂತ್ರಮಯವಾಗಿ ಸಂಚರಿಸುತಿಪ್ಪವು, ಎನ್ನ ಪೂರಕವೇ ಓಂ ಎಂಬ ಪ್ರಣಮ ಸ್ವರೂಪವಾಗಿಪ್ಪುದು; ನೊಡ.

---

೮೭. ಚಂ.ಆ. ಕ್ರಿಪಾ. ಪಟಲ ೧೧, ಶ್ಲೋಕ ಸಂಖ್ಯೆ ೨೭-೩೪

ಎನ್ನ ರೇಚಕವೇ ನಮಃಶಿವಾಯ ನಮಃಶಿವಾಯ ಎನುತಿಪ್ಪುದು ನೋಡಾ,
ಎನ್ನ ಕುಂಭಕವೇ ಪರಮಶಕ್ತಿಮಯವಾಗಿ ಪರಂಜ್ಯೋತಿ ಸ್ವರೂಪವಾಗಿ
ಪರಮಚಿದ್ಬ್ರಾಂಡ ಸ್ಥಾನವಾಗಿಪ್ಪುದು ನೋಡಾ[೮೮]

ಎಂದಿದ್ದಾರೆ. ಹೀಗೆ ದೇಹದ ಷಟ್ ಚಕ್ರಗಳನ್ನು ಮಂತ್ರ ಪಠಣದಿಂದ ಸಂಬಂಧಗೊಳಿಸುವ ಮಂತ್ರ ಜಪದ ಕ್ರಮವನ್ನು ಆಗಮಗಳಲ್ಲಿ ನಿರೂಪಿಸಿದಂತೆ ವಚನಗಳಲ್ಲಿಯೂ ಪ್ರತಿಪಾದಿಸಲಾಗಿದೆ.

ವಿಧಿಲೋಪವಾದರೂ ಮಂತ್ರವು ನಿಷ್ಫಲವಲ್ಲ

ಜಪಾಭ್ಯಾಸ ಮಾಡುವಾಗ ಸಾಧಕನು ಅನುಷ್ಠಾನ ಮಾಡಬೇಕಾದ ನಿಯಮಗಳ ವಿಶ್ಲೇಷಣೆಯನ್ನು ಆಗಮಗಳು ಮಾಡಿದರೂ ಸಹ ಯಾವುದೇ ನಿಯಮವೂ ಇಲ್ಲದೆ ಪಂಚಾಕ್ಷರ ಮಂತ್ರದ ಜಪಮಾಡಿದರೂ ಅದು ನಿಷ್ಫಲವಾಗುವುದಿಲ್ಲ. ಅದು ಸಮುಚಿತವಾದ ಫಲವನ್ನು ನೀಡುತ್ತದೆ ಎಂದು ಚಂದ್ರಜ್ಞಾನಾಗಮದಲ್ಲಿ–

ಗಚ್ಛತಸ್ತಿಷ್ಠತೋ ವಾಪಿ ಸ್ವೇಚ್ಛಯಾ ಕರ್ಮ ಕುರ್ವತಃ।
ಅಶುಚೇರ್ವಾ ಶುಚೇರ್ವಾಪಿ ಮಂತ್ರೋಽಯಂ ನ ಚ ನಿಷ್ಫಲಃ॥[೮೯]

"ಪ್ರಯಾಣ ಮಾಡುವಾಗ, ನಿಂತಿರುವಾಗ, ಯಾವುದೇ ಕೆಲಸವನ್ನು ಮಾಡುತ್ತಿರುವಾಗ ಅಥವಾ ಶುಚಿಯಾಗಿರುವಾಗಲಿ ಮತ್ತು ಅಶುಚಿಯಾಗಿರಲಿ ಈ ಮಂತ್ರವು ನಿಷ್ಫಲವಾಗುವದಿಲ್ಲ"– ಎಂದು ತಿಳಿಸಲಾಗಿದೆ. ಅಲ್ಲದೇ ಗುರುವು ಉಪದೇಶ ಮಾಡಿದ ಮಂತ್ರವು ಯಾವಾಗಲೂ ಗೋಪನೀಯವಾಗಿದ್ದು ಎಲ್ಲಿಯೂ ಯಾರಿಗೂ ಅದನ್ನು ಹೇಳಬಾರದು.[೯೦] ಜಪಮಾಡುವಾಗ ಅಕ್ಷರ ಲೋಪವುಂಟಾಗದಂತೆ ಎಚ್ಚರಿಕೆ ವಹಿಸಿ, ಶುದ್ಧವಾದ ಉಚ್ಚಾರಣೆಯಿಂದ ಪಂಚಾಕ್ಷರ ಮಂತ್ರವನ್ನು ಜಪಿಸಬೇಕೆಂದು ತಿಳಿಸುವುದರೊಂದಿಗೆ ಪ್ರಣವ ಸಹಿತವಾದ ಪಂಚಾಕ್ಷರೀ ಮಹಾ ಮಂತ್ರವು ಅತ್ಯಂತ ಮಹಿಮೆಯುಳ್ಳದೆಂದು ಆಗಮ ಹಾಗೂ ವಚನಗಳಲ್ಲಿ ಬಣ್ಣಿಸಲಾಗಿದೆ.

ಪಂಚಾಕ್ಷರೀ ಮಂತ್ರ ಮಹಿಮೆ

ಪಂಚಾಕ್ಷರೀಜಾಪಕೋ ಹಿ ಯತ್ರ ತಿಷ್ಠತಿ ಪಾರ್ವತಿ।
ಸಾದರಂ ತತ್ರ ತಿಷ್ಠಾಮಿ ಮಮ ಪ್ರಿಯತರೋ ಯತಃ।
ತಸ್ಮಾತ್‌ಸರ್ವಂ ಪರಿತ್ಯಜ್ಯ ಜಪೇತ್ ಪಂಚಾಕ್ಷರಂಶುಭಮ್॥[೯೧]

"ಪಂಚಾಕ್ಷರ ಮಂತ್ರವನ್ನು ಜಪಿಸುವ ಸಾಧಕನು ಎಲ್ಲಿರುತ್ತಾನೆಯೋ ಅಲ್ಲಿ ಶಿವನು ಸಂತೋಷವಾಗಿರುತ್ತಾನೆ. ಕಾರಣ ಅಂತಹ ವ್ಯಕ್ತಿ ಶಿವನಿಗೆ ಅತ್ಯಂತ

೮೮. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವಚನ ಸಂ. ೬, ವಚನ ಸಂಖ್ಯೆ೨೦೮, ಪುಟ೧೦೦
೮೯. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೮೪
೯೦. ಚಂ.ಆ. ಕ್ರಿಪಾ. ಪಟಲ ೮, ಶ್ಲೋಕ ಸಂಖ್ಯೆ ೮೨
೯೧. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೭೪

ಪ್ರಿಯನಾದವನು. ಆದ್ದರಿಂದ ಎಲ್ಲವನ್ನೂ ಬಿಟ್ಟು (ಅರ್ಥಾತ್ ಬೇರಲ್ಲ ಮಂತ್ರಗಳನ್ನು ಜಪಿಸದೆ) ಶುಭದಾಯಕವಾದ ಪಂಚಾಕ್ಷರ ಮಂತ್ರವನ್ನು ಜಪಿಸಬೇಕು" ಎಂಬ ಪೀಠಿಕೆಯೊಂದಿಗೆ ಸೂಕ್ಷ್ಮಾಗಮವು ಪಂಚಾಕ್ಷರ ಮಹಾಮಂತ್ರದ ಮಹಿಮೆಯನ್ನು ಈ ರೀತಿಯಾಗಿ ನಿರೂಪಿಸುತ್ತದೆ –

ಇದಂ ರಹಸ್ಯಂ ಪಾಪಘ್ನಮಾತ್ಮ ಜ್ಞಾನಪ್ರಕಾಶಕಮ್।
ಸಾರಾತ್ಸಾರತರಂ ದಧ್ನೋ ನವನೀತಮಿವೋದ್ಧೃತಮ್॥ [೯೨]

ರಹಸ್ಯವಾದ ಈ ಮಂತ್ರವು ಪಾಪನಾಶಕವೂ, ಆತ್ಮಜ್ಞಾನ ಪ್ರಕಾಶಕವೂ ಆಗಿದೆ. ಮೊಸರು ಕಡೆದು ಬೆಣ್ಣೆಯನ್ನು ತೆಗೆಯುವಂತೆ, ಷಡಕ್ಷರ ಮಂತ್ರ ಜ್ಞಾನದಿಂದ ಸಕಲಶಾಸ್ತ್ರಗಳ ಜ್ಞಾನವುಂಟಾಗುತ್ತದೆ.

ಏತಾವದ್ದಿ ಶಿವಾಜ್ಞಾನಮೇತಾವತ್ಪರಮಂ ಪದಮ್।
ಯಸ್ಯೋನ್ನಮಃ ಶಿವಾಯೇತಿ ಸದಾ ವಾಚಿ ಪ್ರವರ್ತತೇ॥
ಸಕೃತ್ ಪ್ರಸನ್ನಾನ್ಮೋಹಾದ್ವಾ ಶಿವಾಯೇತ್ಯಕ್ಷರತ್ರಯಮ್।
ಉಚ್ಚರೇದ್ಯಸ್ತಸ್ಯ ವಿಘ್ನಾಃ ಸರ್ವೇ ಶಾಂತಿಂ ಪ್ರಯಾಂತಿ ಹಿ।
ಪ್ರಣವಾದಿನಮೋಂತಂ ಚೇತ್ ಕಿಂ ಪುನಃ ಸರ್ವಸಿದ್ಧಿದಂ॥ [೯೩]

ಯಾರ ವಾಣಿಯಲ್ಲಿ ಪ್ರಣವ ಸಹಿತ "ನಮಃ ಶಿವಾಯ" ಎಂಬ ಷಡಕ್ಷರ ಮಂತ್ರ ಸದಾ ಉಚ್ಚರಿಸಲ್ಪಡುವುದೋ ಇದೇ ಶಿವಜ್ಞಾನ. ಇದೇ ಪರಮ ಪದವಿಯ ಪ್ರಾಪ್ತಿ. ಪ್ರಸನ್ನತೆಯಿಂದಲೋ ಅಥವಾ ಪ್ರಮಾದದಿಂದಲೋ ಒಂದು ಸಲ 'ಶಿವಾಯ' ಎಂಬ ಮೂರು ಅಕ್ಷರಗಳ ಮಂತ್ರವನ್ನು ಉಚ್ಚರಿಸಿದರೆ ಸಾಕು, ಅಂಥವನ ಎಲ್ಲ ವಿಘ್ನಗಳೂ ನಿವಾರಣೆಯಾಗಿ ಶಾಂತಿ ಉಂಟಾಗುತ್ತದೆ. ಇನ್ನು ಪ್ರಣವದಿಂದ ಮೊದಲ್ಗೊಂಡು 'ನಮಃ' ದಲ್ಲಿ ಅಂತ್ಯವಾಗುವ ಈ ಷಡಕ್ಷರೀ ಮಂತ್ರವನ್ನು ಉಚ್ಚಾರ ಮಾಡಿದರೆ ಎಲ್ಲ ಸಿದ್ಧಿಗಳೂ ಲಭಿಸುತ್ತವೆ. ಈ ರೀತಿಯಾಗಿ ಈ ಮಂತ್ರದ ಮಹಿಮೆ ಅದ್ಭುತವಾಗಿದೆ ಎಂದು ಆಗಮಗಳು ತಿಳಿಸುತ್ತಾ –

ಮುಮುಕ್ಷೂಣಾಂ ಯಥಾ ಶಂಭುಃ ಸಂಸಾರಭಯಮೋಚಕಃ।
ತಥಾ ಷಡಕ್ಷರೋ ಮಂತ್ರಃ ಸಂಸಾರಭಯನಾಶಕಃ॥ [೯೪]

"ಮುಮುಕ್ಷುಗಳಿಗೆ ಶಿವನು ಸಂಸಾರದ ಎಲ್ಲ ಭಯಗಳನ್ನು ಪರಿಹರಿಸುವಂತೆ ಷಡಕ್ಷರ ಮಂತ್ರವೂ ಸಹ ಸಂಸಾರದ ಎಲ್ಲ ಭಯಗಳನ್ನು ನಾಶಪಡಿಸುತ್ತದೆ ಎಂದು ಮಂತ್ರದ ಮಹತ್ವವನ್ನು ಅರುಹಿದೆ. ಅಲ್ಲದೇ–

ಏತಾಂ ಪಂಚಾಕ್ಷರೀಂ ವಿದ್ಯಾಂ ಹೃದ್ಯಾಂ ಮಮ ಸಮಾಶ್ರಿತಾಃ।

---

೯೨. ಸೂ.ಆ. ಕ್ರಿಪಾ, ಪಟಲ ೪, ಶ್ಲೋಕ ಸಂಖ್ಯೆ ೬೮
೯೩. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೮೫–೮೬
೯೪. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೫೪

ಕಲಾವಪಿ ಪ್ರಮುಚ್ಯಂತೇ ಮಹಾತ್ಮಾನೋ ದೃಢವ್ರತಾಃ॥
ಪಂಚಾಕ್ಷರೇ ಮಹಾಮಂತ್ರೇ ಸ್ಥಿತೇಽಪಿ ಕಲಿಜಾ ನರಾಃ।
ಪತಂತಿ ನರಕೇ ಮೂಢಾ ಮಾಯಯಾ ಪರಿಮೋಹಿತಾಃ॥[೯೫]

"ಹೃದ್ಯವಾದ ಶಿವಪಂಚಾಕ್ಷರೀ ವಿದ್ಯೆಯನ್ನು ಆಶ್ರಯಿಸಿದ, ದೃಢವ್ರತರಾದ ಮಹಾತ್ಮರು ಕಲಿಯುಗದಲ್ಲಿಯೂ ಭವಬಂಧನಗಳಿಂದ ಮುಕ್ತರಾಗುತ್ತಾರೆ. ಪಂಚಾಕ್ಷರ ಮಹಾಮಂತ್ರವು ಇದ್ದರೂ ಅದನ್ನು ಜಪಿಸದೆ ಕಲಿಯುಗದ ಮೂಢ ಮಾನವರು ಮಾಯಾಪಾಶದಲ್ಲಿ ಸಿಲುಕಿ, ನರಕದಲ್ಲಿ ಬೀಳುತ್ತಾರೆ." ಇದರ ಅರ್ಥವೇನೆಂದರೆ ಕಲಿಯುಗದಲ್ಲಿಯೂ ಈ ಮಹಾಮಂತ್ರವು ತನ್ನ ಮಹಿಮೆಯನ್ನು ಉಳಿಸಿಕೊಂಡಿದೆ. ಇದನ್ನು ಅರಿತಿರುವ ಮಹಾತ್ಮರು ಶಿವಪಂಚಾಕ್ಷರೀ ಮಂತ್ರವನ್ನು ಜಪಿಸುವದರ ಮೂಲಕ ಭವ ಬಂಧನಗಳಿಂದ ಮುಕ್ತರಾದರೆ, ಅದನ್ನು ಅರಿಯದ ಮೂಢರು ಈ ಮಂತ್ರವನ್ನು ಜಪಿಸದೆ ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತಾರೆ ಎಂದು ತಿಳಿಸಿದೆ. ಇದನ್ನೇ ಷಣ್ಮುಖ ಶಿವಯೋಗಿಗಳು–

ಅರಿಯದೇ ಒಂದು ವೇಳೆ 'ಓಂ ನಮಃ ಶಿವಾಯ' ಎಂದಡೆ
ಮರೆದು ಮಾಡಿದ ಹಿಂದೇಳುಜನ್ಮದ
ಕರ್ಮದ ಕಟ್ಟು ಹರಿದು ಹೋಯಿತ್ತು ನೋಡಾ !
ಅರಿದೊಂದು ವೇಳೆ 'ಓಂ ನಮಃ ಶಿವಾಯ' ಎಂದಡೆ[೯೬]
ದುರಿತಸಂಕುಳವೆಲ್ಲ ದೂರಾಗಿಹವು ನೋಡಾ !

ಎಂದಿದ್ದಾರೆ. ಮಂತ್ರದ ವಿಷಯದಲ್ಲಿ ಶ್ರದ್ಧೆಯುಳ್ಳವರಿಗೆ ಅದರ ಮಹಿಮೆಯ ಅನುಭವವುಂಟಾಗುತ್ತದೆ. ಬಸವಣ್ಣನವರು ಹೇಳುವಂತೆ –

ಕರಿಯಂಜುವುದು ಅಂಕುಶಕ್ಕೆ, ಗಿರಿಯಂಜುವುದು ವಜ್ರಕ್ಕೆ;
ತಮಂಧವಂಜುವುದು ಜ್ಯೋತಿಗೆ; ಕಾನನವಂಜುವುದು ಬೇಗ್ಗೆಗೆ,[೯೭]
ಪಂಚ ಮಹಾಪಾತಕವಂಜುವುದು ಕೂಡಲಸಂಗನನಾಮಕ್ಕೆ.

ಎಂಬಂತೆ ಶಿವ ನಾಮಸ್ಮರಣೆಯಿಂದ ಪಂಚ ಮಹಾಪಾತಕಗಳು ಅಂಜುತ್ತವೆ. ಆದುದರಿಂದ ಧ್ಯಾನದಲ್ಲಿ ಪೂಜೆಯಲ್ಲಿ ಆಚರಣೆಯಲ್ಲಿ ನಿತ್ಯದ ನಡೆಯಲ್ಲಿ ಕುಳಿತಲ್ಲಿ ಎಲ್ಲೆಲ್ಲಿಯೂ ಮತ್ತು ಯಾವಾಗಲೂ ಮಂತ್ರವನ್ನು ಜಪಿಸಿದರೆ ಅಮಂಗಳಕರವಾದ ಶಕ್ತಿಗಳು ಆತನ ಬಳಿ ಸಾರಲು ಅಂಜುತ್ತವೆ. ಕಾರಣ ಮಂತ್ರವನ್ನು ಮನನ ಮಾಡುವುದರಿಂದ ಜನನ–ಮರಣಗಳೆಂಬ ಸಂಸಾರ ಸಾಗರದಿಂದ ಸಾಧಕನು ರಕ್ಷಿಸಲ್ಪಡುತ್ತಾನೆ ಎಂದು –

"ಎನ್ನ ಜನನಮರಣಗಳೆಲ್ಲಾ ಜಾರಿಹೋದುವಯ್ಯಾ ನಿಮ್ಮ ನೆನಹಿನ ಬಲದಿಂದೆ.

---

೯೫. ಸೂ.ಆ. ಕ್ರಿಪಾ, ಪಟಲ ೩, ಶ್ಲೋಕ ಸಂಖ್ಯೆ ೭೬–೭೭
೯೬. ಸಮಗ್ರ ವಚನ ಸಂಪುಟ ೧೪,ಸಂಕೀರ್ಣ ವಚನ ಸಂ. ೯, ವಚನ ಸಂಖ್ಯೆ ೩೪೫, ಪುಟ೨೦೩
೯೭. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂ. ೧, ವಚನ ಸಂಖ್ಯೆ ೭೫, ಪುಟ ೨೨.

ಎನ್ನ ಪುಣ್ಯಪಾಪಂಗಳೆಲ್ಲ ಪಲ್ಲಟವಾದುವಯ್ಯಾ ನಿಮ್ಮ ನೆನಹಿನ ಬಲದಿಂದೆ
ಎನ್ನ ಕಾಲಕಲ್ಪಿತಂಗಳೆಲ್ಲ ಕರಿಹೋದವಯ್ಯಾ ನಿಮ್ಮ ನೆನಹಿನ ಬಲದಿಂದೆ
ಎನ್ನಪಂಚೇಂದ್ರಿಯಸಪ್ತವ್ಯಸನಂಗಳೆಲ್ಲ ಸಣ್ಣಿಸಿಹೋದುವಯ್ಯಾ ನಿಮ್ಮನೆನಹಿನ ಬಲದಿಂದೆ
ಎನ್ನ ಅಷ್ಟಮದ ಅರಿಷಡ್ವರ್ಗಂಗಳೆಲ್ಲ ನಷ್ಟವಾದುವಯ್ಯಾ ನಿಮ್ಮ ನೆನಹಿನ ಬಲದಿಂದೆ.
ಎನ್ನ ತನುಕರಣೇಂದ್ರಿಯಂಗಳೆಲ್ಲ ತರಹರವಾದುವಯ್ಯಾ ನಿಮ್ಮ ನೆನಹಿನ ಬಲದಿಂದೆ.
ಎನ್ನ ಮನ ಪ್ರಾಣ ಭಾವಂಗಳೆಲ್ಲ ಬರಿದಾಗಿ ಹೋದುವಯ್ಯಾ
ನಿಮ್ಮ ನೆನಹಿನ ಬಲದಿಂದೆ ಅಖಂಡೇಶ್ವರಾ.[೯೮]

ಎಂದು ಶರಣರು ಮಂತ್ರದ ಮಹತ್ವವನ್ನು ಬಹು ಮಾರ್ಮಿಕವಾಗಿ ವಿವೇಚಿಸಿದ್ದಾರೆ. ಇದನ್ನೇ ಇನ್ನೊಂದು ವಚನದಲ್ಲಿ –

"ಶಿವಮಂತ್ರವೆನಗೆ ಕಾಮಧೇನುವಯ್ಯಾ। ಶಿವಮಂತ್ರವೆನಗೆ ಕಲ್ಪವೃಕ್ಷವಯ್ಯಾ
ಶಿವಮಂತ್ರವೆನಗೆ ಚಿಂತಾಮಣಿಯಯ್ಯಾ। ಶಿವಮಂತ್ರವೆನಗೆ ಪರುಷದ ಖಣಿಯಯ್ಯಾ।
ಶಿವಮಂತ್ರವೆನಗೆ ಪುನಃ ಪ್ರಾಣಮಾಲಿಕೆಯಯ್ಯಾ ಅಖಂಡೇಶ್ವರಾ"।[೯೯]

ಎಂದು 'ಓಂ ನಮಃಶಿವಾಯ' ಎಂಬ ಶಿವಷಡಕ್ಷರ ಮಂತ್ರವು ಇಷ್ಟಾರ್ಥಗಳನ್ನೆಲ್ಲಾ ಪೂರೈಸುವಂತಹುದಾಗಿದೆ ಎಂದು ವರ್ಣಿಸುವುದರೊಂದಿಗೆ –

"ಪಂಚಾಕ್ಷರವೆಂದಡೆ ಪರಬ್ರಹ್ಮ. ಪಂಚಾಕ್ಷರವೆಂದಡೆ ಪರಶಿವ,
ಪಂಚಾಕ್ಷರವೆಂದಡೆ ಪರವಸ್ತುವಿನ ನಾಮ,
ಪಂಚಾಕ್ಷರವೆಂದಡೆ ಭವದುರಿತ ಬಿಟ್ಟೋಡುವುದು,
ಪಂಚಾಕ್ಷರವೆಂದಡೆ ಬಹುಜನ್ಮದ ದೋಷ ಪರಿಹಾರವಾಗುವುದು,
ಪಂಚಾಕ್ಷರವೆಂದಡೆ ಸಕಲ ತೀರ್ಥ ಕ್ಷೇತ್ರ ಯಾತ್ರೆಯಾದ
ಪುಣ್ಯಫಲ ಪ್ರಾಪ್ತಿಯಾಗುವದು.
ಪಂಚಾಕ್ಷರವೆಂದಡೆ ಅಷ್ಟಮಹಾಸಿದ್ಧಿ ನವಮಹಾಸಿದ್ಧಿ
ಅಷ್ಟಾಂಗಯೋಗದ ಫಲ ಅಷ್ಟೈಶ್ವರ್ಯ ಸಂಪತ್ತು ದೊರಕೊಳ್ಳುವುದು ನೋಡಾ.
ಇಂತಪ್ಪ ಪಂಚಾಕ್ಷರೀ ಮಂತ್ರದ ಮಹತ್ವವ ಕಂಡು ಮನ ಕರಗಿ, ತನು ಉಬ್ಬಿ,
ಪಂಚಾಕ್ಷರಿ, ಪಂಚಾಕ್ಷರಿಯೆಂದು ನೆನೆನೆನೆದು,
ಭವ ಹರಿದು ಪರಶಿವಲಿಂಗವ ಕೂಡಿ, ಸುಖಿಯಾಗಿರ್ದೆನಯ್ಯಾ
ಕಾಡಿನೊಳಗಾದ ಶಂಕರ ಪ್ರಿಯ ಚೆನ್ನ ಕದಂಬಲಿಂಗ ನಿರ್ಮಾಯ ಪ್ರಭುವೇ."[೧೦೦]

ಎಂದು ಮಂತ್ರದ ವ್ಯಾಪಕ ಶಕ್ತಿಯನ್ನು ವಚನಕಾರರು ಅರುಹಿದ್ದಾರೆ. ಕಾರಣ ಬಸವಣ್ಣನವರು, 'ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯ ಓಂ ನಮಃ ಶಿವಾಯ,

---

೯೮.ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವಚನ ಸಂ. ೯, ವಚನ ಸಂಖ್ಯೆ ೪೮೪, ಪುಟ೨೪೨
೯೯.ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವಚನ ಸಂ. ೯, ವಚನ ಸಂಖ್ಯೆ ೩೪೦, ಪುಟ೨೦೨
೧೦೦.ಸಮಗ್ರ ವಚನ ಸಂಪುಟ ೧೦, ಸಂಕೀರ್ಣ ವಚನ ಸಂ. ೫, ವಚನ ಸಂಖ್ಯೆ ೭೮, ಪುಟ ೫೩

ಓಂ ನಮಃ ಶಿವಾಯ ಎನುತಿರ್ದೆ'[೧೦೧] ಎಂದಿದ್ದಾರೆ: ಮತ್ತು ಎಲ್ಲ ಶಕ್ತಿಗಳಿಗಿಂತ ಈ ಮಂತ್ರ ಶಕ್ತಿ ಮಿಗಿಲಾದುದೆಂಬುದನ್ನು ಈ ಕೆಳಗಿನ ವಚನದಲ್ಲಿ ಹೀಗೆ ಹೇಳಿದ್ದಾರೆ:

ವಶ್ಯವ ಬಲ್ಲೆವೆಂದೆಂಬಿರಯ್ಯ–ಬುದ್ಧಿಯನರಿಯದ ಜನರು ಕೇಳಿರಯ್ಯ:
ವಶ್ಯನಾವುದೆಂದರಿಯದೆ ಮರುಳುಗೊಂಬಿರೆಲೆ ಗಾವಿಲ ಮನುಜರಿರಾ।
ಓಂ ನಮಃ ಶಿವಾಯ' ಎಂಬ ಮಂತ್ರ; ಸರ್ವಜನವಶ್ಯ ಕೂಡಲ ಸಂಗಮದೇವಾ.[೧೦೨]

ಸರ್ವಜನ ವಶ್ಯವಾದದ್ದು ಈ ಮಂತ್ರ; ಮತ್ತು ಎಲ್ಲ ವಶ್ಯಶಕ್ತಿಗಳಿಗಿಂತ ಮಿಗಿಲಾದದ್ದು. ಏಕೆಂದರೆ ಇದು ನೆನೆದವನನ್ನು ತನ್ನಂತೆ ಮಾಡುತ್ತದೆ; ಮಂತ್ರರೂಪಿಯನ್ನಾಗಿ ಮಾಡುತ್ತದೆ; ಶಿವಸ್ವರೂಪಿಯನ್ನಾಗಿ ಮಾಡುತ್ತದೆ. ಹೀಗೆ ಶಿವನ ನೆನೆಹಿನ ನಾದರೂಪಿಯಾದ ಈ ಮಂತ್ರದಿಂದ ಅಂಗದಲ್ಲಿ ಲಿಂಗಶಕ್ತಿಗಳು ಜಾಗೃತಗೊಳ್ಳುತ್ತವೆ; ಲಿಂಗಾಂಗ ಸಾಮರಸ್ಯಕ್ಕೆ ಕಾರಣವಾಗುತ್ತವೆ. ಇದನ್ನೇ ಆಗಮಗಳು –

ನಾಶಿವಃ ಶಿವಮಭ್ಯಸ್ಯೇನ್ನಾಶಿವಃ ಶಿವಮರ್ಚಯೇತ್।
ನಾಶಿವಸ್ತು ಶಿವಂ ಧ್ಯಾಯೇನ್ನಾಶಿವಃ ಶಿವಮಾಪ್ನುಯಾತ್ ॥ [೧೦೩]

ಶಿವನಾಗದೆ ಶಿವಮಂತ್ರದ ಅಭ್ಯಾಸವನ್ನು ಮಾಡಲಾಗದು, ಶಿವನಾಗದೆ ಶಿವನ ಪೂಜೆ ಮಾಡಲಾಗದು, ಶಿವನಾಗದೆ ಶಿವನ ಧ್ಯಾನ ಮಾಡಲಾಗದು ಮತ್ತು ಶಿವನಾಗದೆ ಶಿವನನ್ನು ಹೊಂದಲಾಗದು ಎಂದು ಪರಮ ಪವಿತ್ರವಾದ ಶಿವಪಂಚಾಕ್ಷರಿ ಜಪಿಸಿ ಲಿಂಗಾಂಗಸಾಮರಸ್ಯ ಹೊಂದುವ ಬಗೆಯನ್ನು ತಿಳಿಸಿವೆ.

ಒಟ್ಟಿನಲ್ಲಿ ಮಂತ್ರದ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ತಿಳಿದುಬರುವ ವಿಷಯವೇನೆಂದರೆ ಶಿವಾಗಮಗಳಲ್ಲಿ ಮಂತ್ರದ ನಿಷ್ಪತ್ತಿ, ಮಂತ್ರದ ಸ್ವರೂಪ, ಮಂತ್ರದ ಋಷಿ–ದೇವತೆ–ಛಂದಸ್ಸು, ಮಂತ್ರೋಪದೇಶಕ್ಕೆ ಅರ್ಹರು–ಅನರ್ಹರು, ಪುನಶ್ಚರಣ ವಿಧಾನ, ಜಪಕ್ಕೆ ಯೋಗ್ಯ ಸ್ಥಳ, ನ್ಯಾಸ ಕ್ರಮ, ಜಪದ ವಿಧಾನ, ಮಂತ್ರದ ಮಹಾತ್ಮೆ ಮುಂತಾದವುಗಳ ವಿಸ್ತೃತ ವಿವರಣೆ ಮೂಡಿಬಂದಿದೆ. ಆದರೆ ವಚನಗಳಲ್ಲಿ ಮಂತ್ರದ ನ್ಯಾಸ ಕ್ರಮವನ್ನು ಶೈವಕರ್ಮವೆಂದು ವಿರೋಧಿಸಿರುವರು. ಅಲ್ಲದೇ ಪುನಶ್ಚರಣ ವಿಧಾನಗಳನ್ನು ವಚನಗಳಲ್ಲಿ ಕೈಬಿಟ್ಟಿರುವದು ಕಂಡುಬರುತ್ತದೆ. ಉಳಿದಂತೆ ಎಲ್ಲ ಅಂಶಗಳ ವಿವರಣೆಯಲ್ಲಿ ಶಿವಾಗಮ ಮತ್ತು ವಚನಗಳಲ್ಲಿ ಏಕರೂಪದ ಸಾಮ್ಯತೆ ಕಂಡುಬರುತ್ತದೆ. ಸಾಧಕರ ಅನುಕೂಲತೆಗಾಗಿ ಕೆಲವೇ ಕೆಲವು ವ್ಯತ್ಯಾಸಗಳು ಮಾಡಿಕೊಂಡರೂ ವಚನಗಳು ಶಿವಾಗಮಗಳ ಮೂಲ ಜಾಡನ್ನು ಬಿಡದೆ ತಮ್ಮ ಅನುಭವವನ್ನು ಅದರಲ್ಲಿ ಮಿಶ್ರಣಗೊಳಿಸಿ ವಿಷಯ ವಸ್ತುವನ್ನು ಪ್ರತಿಪಾದಿಸಿವೆ.

೧೦೧.ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೮೦, ಪುಟ ೨೩
೧೦೨.ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೭೮, ಪುಟ ೨೨
೧೦೩.ಚಂ.ಆ. ಕ್ರಿಪಾ. ಪಟಲ ೧೧, ಶ್ಲೋಕ ಸಂಖ್ಯೆ ೩೮

೫.೨ ಪಂಚಾಚಾರ

ಆಚಾರ: ಪರಮೋ ಧರ್ಮ: ಎಂಬ ಅಭಿಪ್ರಾಯದಂತೆ ಆಚಾರವೇ ಧರ್ಮದ ಜೀವಾಳವಾಗಿದೆ. ಆಚಾರವಿಲ್ಲದ ಧರ್ಮವಾಗಲಿ, ಧರ್ಮವಿಲ್ಲದ ಆಚಾರವಾಗಲಿ ಸಾರ್ಥಕವಾಗಲಾರವು. ಅದಕ್ಕಾಗಿ ಯಾವುದೇ ಧರ್ಮ ಕೇವಲ ಸೈದ್ಧಾಂತಿಕವಾಗಿ ಉಳಿದರೆ ಸಾಲದು ಅದು ಪ್ರತ್ಯಕ್ಷ ಆಚರಣೆಯಲ್ಲಿ ಬರಬೇಕು.

ಆಚಾರವೆಂದರೆ ಕೇವಲ ಧಾರ್ಮಿಕ ನೀತಿನಿಯಮಗಳ ಪಾಲನೆ ಅಥವಾ ಶರೀರ ಶುದ್ಧಿಗಾಗಿ ಮಾಡುವ ಸ್ನಾನಾದಿ ಕ್ರಿಯೆಗಳು ಅಥವಾ ಉದರ ನಿರ್ವಹಣೆಗಾಗಿ ಮಾಡುವ ಉದ್ಯೋಗಗಳಲ್ಲ. ಇವುಗಳ ಜೊತೆಗೆ ಮನಸ್ಸು ಹಾಗೂ ಆತ್ಮಗಳ ಮಾಲಿನ್ಯವನ್ನು ಕಳೆಯುವ ಅರಿವಿನ ಸತ್‌ಕ್ರಿಯೆಯಾಗಿದೆ.

ಆಚಾರ ಪದದ ಶಾಬ್ದಿಕ ಮತ್ತು ತಾತ್ವಿಕ ವಿವೇಚನೆ –

ಆಚಾರ ಎಂಬ ಪದವು 'ಅಜ್' ಉಪಸರ್ಗ ಪೂರ್ವಕ ಗತಿ, ಲಕ್ಷಣಾರ್ಥವಾದ 'ಚರ' ಎಂಬ ಧಾತುವಿನಿಂದ ನಿಷ್ಪನ್ನಗೊಂಡಿದೆ. ಈ 'ಚರ' ಧಾತುವಿಗೆ 'ಎಲ್ಲಾ ಗತ್ಯರ್ಥಕ ಧಾತುಗಳೂ ಜ್ಞಾನ ವಾಚಕವಾಗಿರುತ್ತವೆ' ಎಂಬ ವ್ಯಾಕರಣ ನಿಯಮಾನುಸಾರ ಜ್ಞಾನ ಮತ್ತು ಕ್ರಿಯೆಗಳೆಂಬ ಎರಡರ್ಥಗಳನ್ನು ಹೊಂದಿದೆ. ಕಾರಣ 'ಆಚಾರ' ಎಂಬ ಪದವೇ ಜ್ಞಾನ ಕ್ರಿಯಾತ್ಮಕವಾಗಿದ್ದು. ಇದು ಉದಾತ್ತ ಜೀವನ ಮೌಲ್ಯಗಳನ್ನೊಳಗೊಂಡ ಕ್ರಿಯೆಯಾಗಿದೆ.

ಕ್ರಿಯೆ, ಕರ್ಮ, ಮಾಟ ಮೊದಲಾದವುಗಳನ್ನು ಆಚಾರಕ್ಕೆ ಸಂವಾದಿಯಾಗಿ ವಚನಗಳಲ್ಲಿ ಬಳಸಿದ್ದರೂ ಸಹ ಆಚಾರವೆಂಬುದು ಅವುಗಳಿಗಿಂತ ವಿಶಾಲಾರ್ಥವನ್ನು ಹೊಂದಿದ್ದು ಅದು ವ್ಯಕ್ತಿಯ ಅಂತರಂಗ ಮತ್ತು ಬಹಿರಂಗಗಳೆರಡನ್ನೂ ಶುದ್ಧೀಕರಿಸುವ ಸೂತ್ರವಾಗಿದೆ. ಆದ್ದರಿಂದ ದಾರ್ಶನಿಕ ಕ್ಷೇತ್ರದಲ್ಲಿ ಆಚಾರಕ್ಕೆ ಬಹು ಮಹತ್ವದ ಸ್ಥಾನವನ್ನು ನೀಡಲಾಗಿದೆ. ಚಂದ್ರಜ್ಞಾನಾಗಮವು ಆಚಾರದ ಮಹತ್ವವನ್ನು ಹೀಗೆ ನಿರೂಪಿಸುತ್ತದೆ.

ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪತೇ ।
ಆಚಾರಹೀನಃ ಪುರುಷೋ ಲೋಕೇ ಭವತಿ ನಿಂದಿತಃ॥
ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಾತ್॥
ಆಚಾರಃ ಪರಮೋ ಧರ್ಮಃ ಆಚಾರಃ ಪರಮಂ ಧನಮ್।
ಜ್ಞಾನಮಾಚಾರಹೀನಂ ಚೇನ್ನ ತದ್ಭವತಿ ಸಿದ್ಧಯೇ॥[1]

"ಆಚಾರವೇ ಎಲ್ಲರಿಗೂ ಭೂಷಣ. ಆಚಾರಹೀನನಾದ ವ್ಯಕ್ತಿಯು ಲೋಕದಲ್ಲಿ ನಿಂದೆಗೆ ಒಳಗಾಗುತ್ತಾನೆ. ಆಚಾರಸಹಿತವಾದ ಜ್ಞಾನದಿಂದ ಮಹೇಶ್ವರನ ಅನುಗ್ರಹ

---

೧. ಚಂ.ಆ.ಕ್ರಿ.ಪಾ. ಪಟಲ ೯, ಶ್ಲೋಕ ಸಂಖ್ಯೆ ೧೬–೧೯

ಪ್ರಾಪ್ತವಾಗುತ್ತದೆ. ಆದುದರಿಂದ ದೇಹ ಬಿದ್ದುಹೋಗುವವರೆಗೆ ಆಚಾರಯುಕ್ತನಾದ ಜ್ಞಾನಿಯಾಗಿರಬೇಕು. ಆಚಾರವೇ ಶ್ರೇಷ್ಠವಾದ ಧರ್ಮ, ಆಚಾರವೇ ಶ್ರೇಷ್ಠ ಸಂಪತ್ತು. ಜ್ಞಾನವು ಆಚಾರ ರಹಿತವಾಗಿದ್ದರೆ ಅದು ಸಿದ್ಧಿಗೆ ಒದಗುವುದಿಲ್ಲ" ಕಾರಣ ಶಿವಾನುಗ್ರಹಾಕಾಂಕ್ಷಿಗಳಾದ ಜ್ಞಾನಿಗಳು ಪ್ರಾಣವಿರುವವರೆಗೂ ಆಚಾರವಂತರಾಗಿರಬೇಕೆಂದು ತಿಳಿಸಿ ಲೌಕಿಕ ಮತ್ತು ಪಾರಮಾರ್ಥಿಕ ಜೀವನದಲ್ಲಿ ಆಚಾರದ ಅವಶ್ಯಕತೆಯನ್ನು ಅರುಹಿದೆ. ಆಚಾರದಿಂದ ವ್ಯಕ್ತಿಯ ಅಂತರಾತ್ಮವು ಸದಾ ಪ್ರಸನ್ನವಾಗಿರುತ್ತದೆ, ದೇಹದ ಸ್ವಾಸ್ಥ್ಯವು ವೃದ್ಧಿಸುತ್ತದೆ ಹಾಗೂ ದೀರ್ಘಾಯುವಾಗುತ್ತಾರೆ. ಆಚಾರವು ಮಾನವನ ಉತ್ಕೃಷ್ಟವಾದ ಅಲೌಕಿಕ ಆಭರಣವಾಗಿದೆ. ವಸ್ತ್ರ ಆಭರಣಗಳಿಗಿಂತಲೂ ಆಚಾರವಂತರಾಗಿರುವುದೇ ಉತ್ತಮವಾದುದು. ವಸ್ತ್ರಾದಿಗಳಿಂದ ಅಲಂಕೃತನಾಗಿದ್ದರೂ ಆಚಾರವಿಲ್ಲದ ಮನುಷ್ಯನು ಪ್ರಪಂಚದಲ್ಲಿ ನಿಂದಿತನಾಗುತ್ತಾನೆ. "ಆಚಾರವೇ ಭಕ್ತಂಗೆ ಅಲಂಕಾರವು. ಆಚಾರವೇ ಭಕ್ತಂಗೆ ಸರ್ವಪೂಜ್ಯವು. ಇಂತೀ ಆಚಾರವುಳ್ಳವನೇ ಭಕ್ತನು. ಆಚಾರವುಳ್ಳವನೇ ಯುಕ್ತನು. ಆಚಾರವುಳ್ಳವನೇ ಮುಕ್ತನಯ್ಯ" ಎನ್ನುವಂತೆ ಆಚಾರವೆಂದರೆ ಯಾಂತ್ರಿಕವಾದ ನೀತಿ ನಿಯಮಗಳ ಪರಿಪಾಲನೆಯಲ್ಲ; ಅಂಗಕ್ರಿಯೆಗಳನ್ನು ಲಿಂಗಕ್ರಿಯೆಗಳನ್ನಾಗಿ ಪರಿವರ್ತಿಸುವ ಕ್ರಿಯಾ ಕಲಾಪ. ಅಂತರಂಗದ ಅರಿವು ಮತ್ತು ಅರಿವಿನ ಆಚರಣೆ ಇವೆರಡರಿಂದ ಅದು ಸಿದ್ಧಿಸುತ್ತದೆ. "ಆಚಾರವಿಲ್ಲದವರಿಗೆ ಜ್ಞಾನವಿಲ್ಲ, ಜ್ಞಾನವಿಲ್ಲದವರಿಗೆ ಭಾವ ಶುದ್ಧವಿಲ್ಲ. ಭಾವ ಶುದ್ಧವಿಲ್ಲದವನಿಗೆ ಧ್ಯಾನವಿಲ್ಲ, ಧ್ಯಾನವಿಲ್ಲದವನಿಗೆ ಪ್ರಸಾದವಿಲ್ಲ, ಪ್ರಸಾದವಿಲ್ಲದವನಿಗೆ ಮುಕ್ತಿ ಇಲ್ಲ." ಎಂಬ ಮಾತು ಆಚಾರಕ್ಕೆ ಕೊಟ್ಟ ವ್ಯಾಪಕ ಸ್ವರೂಪವನ್ನು ಸೂಚಿಸುತ್ತದೆ. ಆಚಾರಗಳ ಮೂಲಕ ದುರ್ಗುಣಗಳನ್ನೂ, ದೌರ್ಬಲ್ಯಗಳನ್ನೂ, ದೋಷಗಳನ್ನೂ ಸಾಧಕ ಕಳೆದುಕೊಳ್ಳಬೇಕು; ಶಿವಪರವಾದ ಗುಣಗಳನ್ನು ಸಂಪಾದಿಸಿಕೊಳ್ಳಬೇಕು. ಇದು ಸುಲಭವಾದುದಲ್ಲ; ನಿರಂತರ ಜಾಗ್ರತಿಯಿಂದ ಸಾಧಿಸಬೇಕಾದುದು.

ಕಾರಣ ಪ್ರತಿಯೊಂದು ಧರ್ಮವೂ ತನ್ನ ಸೈದ್ಧಾಂತಿಕ ತತ್ವಗಳಿಗನುಗುಣವಾಗಿ ವಿಶಿಷ್ಟವಾದ ಆಚಾರಗಳನ್ನು ಹೊಂದಿವೆ. ಇವು ಬಾಹ್ಯದಲ್ಲಿ ಭಿನ್ನವಾಗಿದ್ದರೂ ಆಚರಣೆಗಳ ಗುರಿಯೆಲ್ಲಾ ಒಂದೇ ಆಗಿರುತ್ತದೆ. ಬಾಹ್ಯ ಆಚಾರಗಳು ಕಾಲಕಾಲಕ್ಕೆ ರೂಪಾಂತರಗೊಳ್ಳುತ್ತವೆ. ಆದರೆ ಆಂತರಿಕ ಆಚಾರಗಳು ನಿರ್ದಿಷ್ಟವಾಗಿರುತ್ತವೆ. ಎಲ್ಲ ಧರ್ಮಗಳೂ ಬಾಹ್ಯ ಮತ್ತು ಆಂತರಿಕ ಆಚಾರಗಳನ್ನು ಸಮನ್ವಯಗೊಳಿಸಿ ಅವುಗಳಿಗೆ ಸೈದ್ಧಾಂತಿಕ ಸ್ವರೂಪವನ್ನು ಕೊಟ್ಟಿವೆ.

ವೀರಶೈವ ಧರ್ಮವೂ ಸಹ ಜಗತ್ತಿನ ಇತರ ದರ್ಶನಗಳಂತೆ ಸ್ವತಂತ್ರವಾಗಿ ತಾತ್ವಿಕ ಚಿಂತನೆಗೈದ ದರ್ಶನವಾಗಿದ್ದು ಜೀವಾತ್ಮ ಮತ್ತು ಪರಮಾತ್ಮರ ಸಾಮರಸ್ಯವನ್ನೇ ಮುಖ್ಯ ಧ್ಯೇಯವನ್ನಾಗಿಸಿಕೊಂಡಿದೆ. ಕಾರಣ ಈ ಧಾರ್ಮಿಕ ಧ್ಯೇಯಸಾಧನೆಗೆ ಪೂರಕವಾದ ಮತ್ತು ಪ್ರೇರಕವಾದ ನೈತಿಕ ನಿಯಮಗಳನ್ನು ವೀರಶೈವ ದಾರ್ಶನಿಕರು ನಿರೂಪಿಸಿದ್ದು, ಅವು 'ಪಂಚಾಚಾರ'ಗಳೆಂದು ಕರೆಯಲ್ಪಡುತ್ತವೆ. ವೀರಶೈವ ಧರ್ಮವು

ಸರ್ವರಿಗೂ ಸಾಧ್ಯವಾಗಬಹುದಾದ ವ್ಯಾವಹಾರಿಕ ಧರ್ಮ; ಕೇವಲ ಬೌದ್ಧಿಕ ಸಿದ್ಧಾಂತ ಪ್ರಧಾನವಾದ ಧರ್ಮವಲ್ಲ. ಸಿದ್ಧಾಂತಗಳೇನಿದ್ದರೂ ಆಚಾರದಲ್ಲಿ ಪರ್ಯವಸಾನವಾದಾಗ ಮಾತ್ರ ಸಾರ್ಥಕ. ಪಂಚಾಚಾರಗಳು ವ್ಯಕ್ತಿ ಹಾಗೂ ಸಮಾಜಗಳಲ್ಲಿನ ಸುಮಧುರ ಬಾಂಧವ್ಯ ಸಾಧ್ಯವಾಗುತ್ತದೆ. ವೀರಶೈವನೂ ಸಹ ಸಮಾಜದ ಅವಿಭಾಜ್ಯ ಅಂಗವಾಗಿರುವುದರಿಂದಾಗಿ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ಅವನು ಯಾವ ರೀತಿ ನಡೆದರೆ ಪರಧರ್ಮ ಸಹಿಷ್ಣುತೆಯ ಜೊತೆಗೆ ಸ್ವಧರ್ಮ ನಿಷ್ಠೆಯಿಂದ ಕೂಡಿಕೊಂಡು ಲಿಂಗಾಂಗ ಸಾಮರಸ್ಯ ರೂಪದ ಮುಕ್ತಿಯನ್ನು ಪಡೆಯಲು ಸಮರ್ಥನಾಗುತ್ತಾನೆಂಬುದು ಪಂಚಾಚಾರಗಳಿಂದ ವ್ಯಕ್ತವಾಗುತ್ತದೆ. ಅಂಗಕ್ರಿಯೆಗಳನ್ನು ಲಿಂಗ ಕ್ರಿಯೆಗಳನ್ನಾಗಿಸುವಂತಹ ಕ್ರಿಯೆ ಮತ್ತು ಜ್ಞಾನಗಳೆರಡನ್ನು ಹೊಂದಿದ ಈ ಪಂಚಾಚಾರಗಳು ವೀರಶೈವನಿಗೆ ಪ್ರಾಣವೆಂದು ಪರಿಗಣಿಸಲ್ಪಡುತ್ತವೆ. ಜೀವನವನ್ನು ನಿರ್ಮಲ ಹಾಗೂ ಉದಾತ್ತಗೊಳಿಸುವದೇ ಪಂಚಾಚಾರಗಳ ಗುರಿಯಾಗಿದ್ದು, ಅವು ಅಷ್ಟಾವರಣ ಮತ್ತು ಷಟಸ್ಥಲಗಳನ್ನು ಸೇರಿಸುವ ಕೊಂಡಿಯಾಗಿವೆ.

ಪಂಚಾಚಾರದ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ ಶಿವಾಗಮಗಳಲ್ಲಿ ಪಂಚಾಚಾರಗಳನ್ನು ಕುರಿತು ಪ್ರತ್ಯೇಕ ಪಟಲದಲ್ಲಿ ವ್ಯವಸ್ಥಿತವಾಗಿ ನಿರೂಪಣೆ ಮಾಡಲಾಗಿದೆ. ಆದರೆ ವಚನಸಾಹಿತ್ಯದಲ್ಲಿ ಸ್ಥಲನಿರೂಪಣೆಯ ಕೆಲ ಪ್ರಸಂಗಗಳಲ್ಲಿ ಮಾತ್ರ ಪಂಚಾಚಾರಗಳ ಬಗ್ಗೆ ಹೇಳಲಾಗಿದೆ. ಅಲ್ಲದೇ ಚೆನ್ನಬಸವಣ್ಣನವರಷ್ಟು ನಿರ್ದಿಷ್ಟವಾಗಿ ಮತ್ತು ನಿಖರವಾಗಿ ಬೇರೆ ಯಾವ ಶರಣರೂ ಪಂಚಾಚಾರಗಳ ಬಗ್ಗೆ ಹೇಳಿರುವದಿಲ್ಲ. ಆದರೆ ಚೆನ್ನಬಸವಣ್ಣನವರ ವಚನಗಳಲ್ಲಿ ಪಂಚಾಚಾರಗಳ ಜೊತೆಗೆ ತ್ರಿವಿಧಾಚಾರಗಳನ್ನು (ಸದಾಚಾರ, ಶಿವಾಚಾರ, ಸಮಯಾಚಾರ), ಸಪ್ತಾಚಾರಗಳನ್ನು (ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ, ಸರ್ವಾಚಾರ), ದ್ವಾದಶಾಚಾರಗಳನ್ನು (ಪಂಚಾಚಾರ ಮತ್ತು ಸಪ್ತಾಚಾರಗಳನ್ನು ಸೇರಿಸಿ) ಹಾಗೂ ಸಿದ್ಧರಾಮನನ್ನು ಉದ್ದೇಶಿಸಿ ಹೇಳಿದ ವಚನದಲ್ಲಿ ಐವತ್ತು ಆಚಾರಗಳನ್ನು ಹೆಸರಿಸಿರುವರು. ಹಾಗೂ ಷಟಸ್ಥಲ ಮತ್ತು ಅಷ್ಟಾವರಣಗಳ ಆಚರಣೆಗೂ 'ಆಚಾರ' ವೆಂದೇ ಕರೆದಿದ್ದು, ಪಂಚಾಚಾರ, ಷಟಸ್ಥಲ ಮತ್ತು ಅಷ್ಟಾವರಣ ಈ ಮೂರರ ಆಚರಣೆಯನ್ನು ಒಟ್ಟಾಗಿ 'ಸರ್ವಾಚಾರ ಸಂಪತ್ತು' ಎಂದು ಕರೆದಿರುವರು. ಹೀಗೆ ವಿವಿಧ ರೀತಿಯಲ್ಲಿ ಆಚಾರಗಳ ವಿಂಗಡಣೆ ಮತ್ತು ವಿವರಗಳು ಚೆನ್ನಬಸವಣ್ಣನವರ ವಚನದಲ್ಲಿ ಕಂಡು ಬರುತ್ತವಾದರೂ ಅವುಗಳೆಲ್ಲ ಪಂಚಾಚಾರಗಳಲ್ಲಿಯೇ ಸಮಾವೇಶವಾಗುತ್ತವೆ. ಕಾರಣ ಪಂಚಾಚಾರಗಳಿಗೇ ವೀರಶೈವ ದರ್ಶನದಲ್ಲಿ ಹೆಚ್ಚು ಒತ್ತು ಕೊಡಲಾಗಿದೆ.

ಪಂಚಾಚಾರಗಳ ಉಲ್ಲೇಖ ಹಾಗೂ ನಿರೂಪಣೆ

ಚಂದ್ರಜ್ಞಾನಾಗಮದ ಕ್ರಿಯಾಪಾದ ನವಮ ಪಟಲದಲ್ಲಿ ಪಂಚಾಚಾರಗಳ ಉಲ್ಲೇಖ ಹಾಗೂ ನಿರೂಪಣೆ ಮಾಡಲಾಗಿದ್ದು ಅದು ಈ ರೀತಿಯಾಗಿದೆ.

ಲಿಂಗಾಚಾರಃ ಸದಾಚಾರಃ ಶಿವಾಚಾರಸ್ತಥೈವ ಚ ।
ಭೃತ್ಯಾಚಾರೋ ಗಣಾಚಾರಃ ಪಂಚಾಚಾರಾಃ ಪ್ರಕೀರ್ತಿತಾಃ॥
ಗುರುಣಾ ದತ್ತಲಿಂಗಾದ್ವೈ ನಾಸ್ತಿ ದೈವಂ ಮಹೀತಲೇ ।
ಇತಿ ಭಾವಾನುಸಂಧಾನಂ ಲಿಂಗಾಚಾರಃ ಸ ಉಚ್ಯತೇ॥
ಧರ್ಮಾರ್ಜಿತೇನ ದ್ರವ್ಯೇಣ ಯತ್ ಸಂತರ್ಪಣಮನ್ವಹಮ್ ।
ಗುರುಲಿಂಗಜಂಗಮಾನಾಂ ಸದಾಚಾರ ಇತಿ ಸ್ಮೃತಃ॥
ಶಿವ ಏವ ಪರಂ ಬ್ರಹ್ಮ ಪಂಚಕೃತ್ಯಪರಾಯಣಮ್।
ನ ತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ॥
ಶಿವಸ್ಯ ಶಿವಭಕ್ತಸ್ಯ ಶಿವಧರ್ಮಾದಿಕಸ್ಯ ಚ॥
ನ ಶೃಣೋತಿ ಚ ಯನ್ನಿಂದಾಂ ಚ ಗಣಾಚಾರ ಉಚ್ಯತೇ॥
ಶಿವಭಕ್ತಜನಾಃ ಸರ್ವೇ ವರಿಷ್ಠಾಃ ಪೃಥಿವೀತಲೇ।
ತೇಷಾಂ ಭೃತ್ಯೋಽಹಮಿತಿ ಯದ್ ಭೃತ್ಯಾಚಾರ ಇತಿ ಸ್ಮೃತಃ॥[1]

ಅರ್ಥಾತ್ ಗುರುವು ದಯಪಾಲಿಸಿದ (ಇಷ್ಟ)ಲಿಂಗವನ್ನು ಬಿಟ್ಟು ಈ ಭೂಮಿಯಲ್ಲಿ ಬೇರೊಂದು ದೈವವಿಲ್ಲವೆಂಬ ಭಾವಾನುಸಂಧಾನವೇ ಲಿಂಗಾಚಾರ. ಧರ್ಮಮಾರ್ಗದಿಂದ ಗಳಿಸಿದ ದ್ರವ್ಯದಿಂದ ಗುರು-ಲಿಂಗ-ಜಂಗಮರ ನಿತ್ಯಾರಾಧನೆಯೇ ಸದಾಚಾರ. ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹವೆಂಬ ಐದು ಕೃತ್ಯಗಳಿಂದ ಕೂಡಿದ ಶಿವನೇ ಪರಬ್ರಹ್ಮನಾಗಿದ್ದು ಅವನನ್ನುಳಿದ ಬೇರೆ ಗತಿಯಿಲ್ಲವೆಂದು ಭಾವಿಸಿ ನಡೆಯುವುದೇ ಶಿವಾಚಾರ. ಶಿವನ, ಶಿವಭಕ್ತನ ಮತ್ತು ಶಿವಧರ್ಮದ ನಿಂದೆಯನ್ನು ಕೇಳದಿರುವುದೇ ಗಣಾಚಾರ. ಈ ಜಗತ್ತಿನಲ್ಲಿ ಶಿವಭಕ್ತರೆಲ್ಲಾ ಶ್ರೇಷ್ಠರಾಗಿದ್ದು ನಾನು ಅವರ ಸೇವಕನಾಗಿದ್ದೇನೆಂದು ಭಾವಿಸುವುದೇ ಭೃತ್ಯಾಚಾರ ಎಂದು ಪಂಚಾಚಾರಗಳ ಲಕ್ಷಣಗಳನ್ನು ವಿವರಿಸಲಾಗಿದೆ.

ಚೆನ್ನಬಸವಣ್ಣನವರ ವಚನದಲ್ಲಿಯೂ ಪಂಚಾಚಾರಗಳ ಬಗ್ಗೆ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ.[2]

"ಲಿಂಗಾಚಾರ ಸದಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ
ಪಂಚಾಚಾರದ ಆಚರಣೆಯೆಂತೆಂದಡೆ:
ಲಿಂಗವನಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ,
ಸಜ್ಜನ ಕಾಯಕದಲ್ಲಿ ತಂದು
ಗುರುಲಿಂಗಜಂಗಮಕ್ಕೆ ನೀಡಿ ಸತ್ಯಶುದ್ಧನಾಗಿಹುದೆ ಸದಾಚಾರ
ಶಿವಭಕ್ತರಲ್ಲಿ ಕುಲ ಗೋತ್ರ ಜಾತಿ ವರ್ಣಾಶ್ರಮವನರಸದೆ

೧. ಚಂ.ಆ.ಕ್ರಿ.ಪಾ. ಪಟಲ ೯, ಶ್ಲೋಕ ಸಂಖ್ಯೆ ೪-೯
೨. ಚೆನ್ನಬಸವಣ್ಣನವರ ವ.ಸಂಪುಟ. ಸಮಗ್ರ ವಚನಸಂಪುಟ ೩, ವ.ಸಂ. ೧೫೪೪, ಪುಟ ೫೬೧

ಅವರೊಕ್ಕುದ ಕೊಂಬುದೆ ಶಿವಾಚಾರ,
ಶಿವಾಚಾರದ ನಿಂದೆಯ ಕೇಳದಿಹುದೇ ಗಣಾಚಾರ,
ಶಿವಶರಣರೆ ಹಿರಿಯರಾಗಿ ತಾನೆ ಕಿರಿಯನಾಗಿ
ಭಯಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ
ಇಂತೀ ಪಂಚಾಚಾರವುಳ್ಳ ಪರಮ ಸದ್ಭಕ್ತರ ಒಕ್ಕುದನಿಕ್ಕಿ
ಸಲಹಯ್ಯಾ ಪ್ರಭುವೇ, ಕೂಡಲ ಚೆನ್ನಸಂಗಮದೇವ"

ಎಂದು ಪಂಚಾಚಾರಗಳ ಬಗ್ಗೆ ನಿರೂಪಿಸಲಾಗಿದೆ. ಇದೇ ಬಗೆಯಾದ ಅರ್ಥವಿಶ್ಲೇಷಣೆಯನ್ನು ಅಕ್ಕಮಹಾದೇವಿಯವರ ವಚನದಲ್ಲಿಯೂ ಕಾಣಬಹುದು.

"..............ಲಿಂಗಾಚಾರವೆಂದು, ಸದಾಚಾರವೆಂದು, ಶಿವಾಚಾರವೆಂದು,
ಭೃತ್ಯಾಚಾರವೆಂದು, ಗಣಾಚಾರವೆಂದು ಶಿವಾಚಾರವು
ಐದುತೆರನಾಗಿಪ್ಪುದು ನೋಡಯ್ಯಾ.
ಶ್ರೀ ಗುರು ಕರುಣಿಸಿಕೊಟ್ಟ ಲಿಂಗವನಲ್ಲದೆ
ಅನ್ಯ ದೈವಂಗಳಿಗೆರಗದಿಹುದೇ ಲಿಂಗಾಚಾರ ನೋಡಯ್ಯ.
ತಾ ಮಾಡುವ ಸತ್ಯ ಕಾಯಕದಿಂದ ಬಂದ ಅರ್ಥಾದಿಗಳಿಂದ
ತನ್ನ ಕುಟುಂಬ ರಕ್ಷಣೆಗೊಂಬ ತೆರದಿ
ಗುರುಲಿಂಗಜಂಗಮ ದಾಸೋಹಿಯಾಗಿಪ್ಪುದೇ ಸದಾಚಾರ ನೋಡಯ್ಯ
ಶಿವಭಕ್ತರಾದ ಲಿಂಗಾಂಗಿಗಳಲ್ಲಿ ಪೂರ್ವದ ಜಾತಿಸೂತಕಾದಿಗಳನ್ನು
ವಿಚಾರಿಸದೆ ಅವರ ಮನೆಯಲ್ಲಿ ತಾ ಹೊಕ್ಕು
ಒಕ್ಕು ಮಿಕ್ಕ ಪ್ರಸಾದವ ಕೊಂಬುದೇ ಶಿವಾಚಾರ ನೋಡಯ್ಯ
ಲಿಂಗಾಂಗಿಗಳಾದ ಶಿವಭಕ್ತರೇ ಮರ್ತ್ಯದಲ್ಲಿ ಮಿಗಿಲಹರೆಂದು
ತಾನು ಅವರ ಭೃತ್ಯನೆಂದರಿದು ಅಂತಪ್ಪ ನಿಜಲಿಂಗಾಂಗಿಗಳ ಚಮ್ಮಾವುಗೆಯ
ಕಾಯ್ದಿಪ್ಪುದೇ ಭೃತ್ಯಾಚಾರ ನೋಡಯ್ಯ,
ಗುರುಲಿಂಗಜಂಗಮ ಪಾದೋದಕ ಪ್ರಸಾದ
ರುದ್ರಾಕ್ಷಿ ಮಂತ್ರಗಳೆಂಬಷ್ಟಾವರಣಂಗಳು
ತನ್ನ ಪ್ರಾಣ ಸ್ವರೂಪವಾಗಿ ಅವುಗಳ ನಿಂದೆಯನ್ನು ಕೇಳಿ ಸೈರಿಸದೆ
ಶಿಕ್ಷಿಸುವೆನೆಂಬ ನಿಷ್ಠೆಗೊಂಡುದೇ ಗಣಾಚಾರ ನೋಡಯ್ಯಾ......."[೪]

ಎಂದು ಪಂಚಾಚಾರಗಳ ಸ್ವರೂಪವನ್ನು ನಿರೂಪಿಸಲಾಗಿದೆ. ಕಾರಣ ಪಂಚಾಚಾರಗಳ ನಾಮೋಲ್ಲೇಖ ಹಾಗೂ ನಿರೂಪಣೆ ಶಿವಾಗಮಗಳಲ್ಲಿ ಹಾಗೂ ವಚನಗಳಲ್ಲಿ ಒಂದೇ ಬಗೆಯಾಗಿದ್ದರೂ ಶಿವಾಚಾರದ ವ್ಯಾಖ್ಯಾನದಲ್ಲಿ ಮಾತ್ರ ವ್ಯತ್ಯಾಸವಿದೆ.

---

೪. ಶಿವಶರಣೆಯರ ವ.ಸಂ. ಸಮಗ್ರ ವಚನ ಸಂಪುಟ ೫, ವ.ಸಂ. ೩೧೪, ಪುಟ ೯೩

೫.೨.೧ ಲಿಂಗಾಚಾರ

ಗುರುವಿನ ಅನುಗ್ರಹದಿಂದ ದೀಕ್ಷಿತನಾದ ವೀರಶೈವನಿಗೆ ಈ ಆಚಾರವು ಪ್ರಾಣಸ್ವರೂಪವಾಗಿದೆ. ಇಷ್ಟಲಿಂಗದಲ್ಲಿ ಅತ್ಯಂತ ನಿಷ್ಠೆಯನ್ನಿಟ್ಟು ಅದರ ಹೊರತು ಅನ್ಯದೈವವಿಲ್ಲೆಂದು ಅರಿತು ಆಚರಿಸುವುದೇ ಲಿಂಗಾಚಾರ.

ಲಿಂಗಾಚಾರದ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅವುಗಳ ವಿವೇಚನೆ ಇಂತಿದೆ –

ಲಿಂಗಾಚಾರದ ಅರ್ಥ –

ಲಿಂಗಾಚಾರದ ವ್ಯಾಖ್ಯಾನವನ್ನು ಚಂದ್ರಜ್ಞಾನಾಗಮ ಹೀಗೆ ನಿರೂಪಿಸುತ್ತದೆ.

"ಗುರುಣಾ ದತ್ತಲಿಂಗಾದ್ವೈ ನಾಸ್ತಿ ದೈವಂ ಮಹೀತಲೇ।
ಇತಿ ಭಾವಾನುಸಂಧಾನಂ ಲಿಂಗಾಚಾರಃ ಸ ಉಚ್ಯತೇ"॥[೧]

ಅಂದರೆ, ಗುರುವಿನಿಂದ ಪ್ರಾಪ್ತವಾದ ಇಷ್ಟಲಿಂಗವನ್ನು ಅಂಗದ ಮೇಲೆ ಸದಾ ಧರಿಸಿಕೊಂಡು, ಆ ಇಷ್ಟಲಿಂಗಕ್ಕಿಂತ ಅಧಿಕವಾದ ದೈವವು ಈ ಪೃಥ್ವಿಯ ಮೇಲೆ ಇನ್ನೊಂದಿಲ್ಲವೆಂದು ಭಾವಿಸಿ ಲಿಂಗಾನುಸಂಧಾನ ಮಾಡುವದೇ ಲಿಂಗಾಚಾರ. ಕಾರಣ ಲಿಂಗಾಚಾರದಲ್ಲಿ ಪ್ರಮುಖವಾಗಿ ಎರಡು ವಿಚಾರಧಾರೆಗಳನ್ನು ಕಾಣುತ್ತೇವೆ.

ಅ. ಇಷ್ಟಲಿಂಗದಲ್ಲಿ ಅಪಾರವಾದ ನಿಷ್ಠೆ
ಬ. ಲಿಂಗವನ್ನುಳಿದು ಅನ್ಯದೈವಕ್ಕೆರಗದಿರುವುದು

ಲಿಂಗಾಚಾರದ ಪ್ರಥಮ ಆಶಯವೆಂದರೆ ಇಷ್ಟಲಿಂಗದಲ್ಲಿ ಅಪಾರವಾದ ನಿಷ್ಠೆ

ನಂಬಬಲ್ಲ ಪತಿವ್ರತೆಗೆ ಗಂಡನೊಬ್ಬನೇ ಆಗಿರುವಂತೆ ವೀರಶೈವನಿಗೆ ಲಿಂಗವೇ ಪರದೈವವಾಗಿದೆ. ಇಷ್ಟಲಿಂಗ ನಿಷ್ಠೆಯನ್ನು ಕುರಿತು ಪಾರಮೇಶ್ವರಾಗಮದಲ್ಲಿ–

ಸಜ್ಜಿಕಾಗುಣಲಿಂಗಾದೌ ಯನ್ನಷ್ಟಂ ತತ್ತದಾಚರೇತ್
ಯಲ್ಲಿಂಗಮಾದಿತೋ ಲಬ್ಧಂ ಯಾವಜ್ಜೀವಂ ತದೇವ ಹಿ
ನಾನ್ಯಲಿಂಗಂ ಭವೇನ್ಮಧ್ಯೇ ಯದಿ ಸ್ಯಾತ್ ಸ ತು ಪಾತಕೀ[೨]

ಅರ್ಥಾತ್ ದೀಕ್ಷಾಕಾಲದಲ್ಲಿ ಗುರುವಿನಿಂದ ಹಸ್ತಮಸ್ತಕ ಸಂಯೋಗದಿಂದ ಪ್ರಾಪ್ತವಾದ ಲಿಂಗವನ್ನೇ ಯಾವಜ್ಜೀವಂ ಪೂಜಿಸಬೇಕು. ನಡುವೆ ಬೇರೆ ಯಾವ ಲಿಂಗವೂ ಬರಕೂಡದು. ಹಾಗೆ ಬಂದರೆ ಆತನು ಪಾತಕಿಯು. ಅವನಿಗೆ ರೌರವನರಕ ಪ್ರಾಪ್ತವಾಗುತ್ತದೆ. ಗುರುಕರುಣಿಸಿದ ಲಿಂಗವೇ ಪ್ರಾಣಲಿಂಗವೆಂದು ಹೇಳಲಾಗಿದೆ. ಸೂಕ್ಷ್ಮಾಗಮವು ಲಿಂಗನಿಷ್ಠೆಯನ್ನು ಕುರಿತು ಹೇಳುತ್ತಾ –

---

೧. ಚಂ.ಆ. ಕ್ರಿ. ಪಾ. ಪಟಲ ೯, ಶ್ಲೋಕ ಸಂಖ್ಯೆ ೫
೨. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೧೦೦–೧೦೧

ಲಿಂಗಭಕ್ತಿರ್ಲಿಂಗಪೂಜಾ ಲಿಂಗಸೇವಾ ತಥಾ ಶಿವೇ।
ಲಿಂಗಧ್ಯಾನಂ ಲಿಂಗಮನೋ ಲಿಂಗಚರ್ಯಾಪರೌ ಕರೌ ॥
ಲಿಂಗಶ್ರುತಿಪರೇ ಶ್ರೋತ್ರೇ ಲಿಂಗಾರ್ಪಿತರಸಾದಯಃ।
ಲಿಂಗನಿರ್ಮಾಲ್ಯಸುರಭಿಲಾಭೋ ಘ್ರಾಣಸ್ಯ ಪಾರ್ವತಿ ॥
ಲಿಂಗಾಲಂಕಾರಸಂದರ್ಶನಾಸಕ್ತೇ ಲೋಚನೇಽಪಿ ಚ ।
ಲಿಂಗಪ್ರದಕ್ಷಿಣಪರೌ ಪಾದೌ ಚ ಗಿರಿಸಂಭವೇ ॥
ಲಿಂಗಸ್ಯ ಪುರತೋ ನಿತ್ಯಂ ತದರ್ಥಂ ಚಾಂಗಚೇಷ್ಟನಮ್।
ಲಿಂಗಾರ್ಥಂ ದತ್ತಸರ್ವಸ್ವಂ ಲಿಂಗನಿಷ್ಠೇತಿ ಗೀಯತೇ ॥

ವೀರಶೈವನು ಲಿಂಗದಲ್ಲಿ ಭಕ್ತಿ, ಲಿಂಗಪೂಜೆ, ಲಿಂಗಸೇವೆ, ಲಿಂಗಧ್ಯಾನ, ಲಿಂಗದಲ್ಲಿ ಮನವುಳ್ಳವನಾಗಿರಬೇಕು. ಕೈಗಳೆರಡೂ ಲಿಂಗೋಪಚಾರದಲ್ಲಿರಬೇಕು. ಅವನ ಕಿವಿಗಳೆರಡು ಲಿಂಗದ ಗುಣಗಾನ ಶ್ರವಣದಲ್ಲಿ ತತ್ಪರವಾಗಿರಬೇಕು. ನಾಲಿಗೆ ಲಿಂಗಾರ್ಪಿತವಾದ ರಸಸ್ವಾದದಲ್ಲಿ ನಿರತವಾಗಿರಬೇಕು. ಮೂಗು (ನಾಸಿಕ) ಲಿಂಗಾರ್ಪಿತವಾದ ಪುಷ್ಪ-ಪರಿಮಳ ಲಾಭವನ್ನು ಪಡೆಯಬೇಕು. ಕಣ್ಣುಗಳು ಲಿಂಗಕ್ಕೆ ಮಾಡಿರುವ ಅಲಂಕಾರಗಳನ್ನು ನೋಡಲು ಆಸಕ್ತವಾಗಿರಬೇಕು. ಕಾಲುಗಳು ಲಿಂಗಪ್ರದಕ್ಷಿಣೆಯನ್ನು ಮಾಡುತ್ತಿರಬೇಕು. ಸರ್ವಸ್ವವೂ ಲಿಂಗಕ್ಕಾಗಿ ಸಮರ್ಪಿತ ವಾಗಿರಬೇಕು ಎಂದು ತಿಳಿಸಿದೆ.

ಪಾರಮೇಶ್ವರಾಗಮವು ಪವಿತ್ರವಾದ ಇಷ್ಟಲಿಂಗವನ್ನು ಸದಾಕಾಲ ಧರಿಸಬೇಕೆಂದು ತಿಳಿಸುತ್ತಾ ಸೂತಕದಲ್ಲಾಗಲೀ, ರತಿಕಾಲದಲ್ಲಿಯಾಗಲೀ, ಅಶೌಚದ ಸ್ಥಿತಿಯಲ್ಲಾಗಲಿ, ನಿದ್ರೆ ಮುಂತಾದವುಗಳ ಸಮಯದಲ್ಲಾಗಲೀ, ಯುದ್ಧದಲ್ಲಾಗಲೀ, ಜಾಗ್ರತ್, ಸ್ವಪ್ನ, ಸುಷುಪ್ತಿ ಅವಸ್ಥೆಗಳಲ್ಲಾಗಲೀ ಕ್ರಿಯೆ-ಮನಸ್ಸು-ಮಾತುಗಳಿಂದ ಲಿಂಗವನ್ನು ದೇಹದಿಂದ ಬೇರ್ಪಡಿಸುವ ವಿಚಾರ ಮಾಡಬಾರದು. ಪ್ರಾಣ ಹೋಗುವಂತಿದ್ದರೂ, ಕುಲವೇ ನಾಶವಾಗುತ್ತದೆ ಎಂಬಷ್ಟು ಮಟ್ಟಿಗೆ ಉತ್ಕಟ ಸಂಕಟ ಬಂದಾಗಲೂ ಇಷ್ಟಲಿಂಗ ಪೂಜೆಯನ್ನು ಬಿಡಬಾರದೆಂದು ಆದೇಶಿಸಿದೆ.[೪] ಅಲ್ಲದೇ ನಡೆಯುತ್ತಾ, ನಿಂತುಕೊಂಡು, ನಿದ್ರೆ ಮಾಡುತ್ತಾ, ಭೋಗಗಳನ್ನು ಅನುಭವಿಸುತ್ತಾ, ಎಚ್ಚರವಾಗಿ, ನಗುತ್ತಾ, ಊಟ ಮಾಡುತ್ತಾ, ನೀರು ಕುಡಿಯುತ್ತಾ ಲಿಂಗಪೂಜೆಯನ್ನು ಸದಾಕಾಲ ಮಾಡಬೇಕೆಂದು ತಿಳಿಸಿದೆ.[೫]

ಚಂದ್ರಜ್ಞಾನಾಗಮವು ಇಷ್ಟಲಿಂಗದಲ್ಲಿ ಏಕೈಕನಿಷ್ಠೆಯನ್ನು ಹಾಗೂ ಲಿಂಗಾಂಗ ಸಾಮರಸ್ಯದ ವಿಧಾನವನ್ನು ಬೋಧನೆಗೈಯುವ ಇಪ್ಪತ್ತೊಂದು ವಿಧದ ದೀಕ್ಷೆಗಳು ಲಿಂಗಾಚಾರದಲ್ಲಿ ಅಂತರ್ಗತವಾಗುತ್ತವೆಂದು ತಿಳಿಸುತ್ತದೆ.[೬] – ಇಷ್ಟಲಿಂಗವೇ

---

೩. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೪೮-೫೧
೪. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೧೮-೨೦
೫. ಪಾ.ಆ. ಪಟಲ ೨, ಶ್ಲೋಕ ಸಂಖ್ಯೆ ೨೮,೨೯
೬ ಚಂ.ಆ. ಕ್ರಿ. ಪಾ. ಪಟಲ ೯, ಶ್ಲೋಕ ಸಂಖ್ಯೆ ೧೧

ಪರವಸ್ತುವೆಂಬ ಅರಿವು ಮೂಡಿಸುವುದು **ಏಕಾಗ್ರಮತಿದೀಕ್ಷೆ**. ದೇಹವಿರುವವರೆಗೆ ಹಿಡಿದ ವ್ರತಗಳನ್ನು ಬಿಡದಿರುವುದು **ದೃಢವ್ರತದೀಕ್ಷೆ**. ತಾನೇ ಸತಿ ಲಿಂಗವೇ ಪತಿ ಎಂಬ ಮನೋಭಾವದಿಂದ ತನು ಮನ, ಭಾವಗಳನ್ನು ಇಷ್ಟ, ಪ್ರಾಣ ಭಾವಲಿಂಗಗಳಲ್ಲಿ ಸಮನ್ವಯಗೊಳಿಸುವ ಸಾಧನೆಯ ಮಾರ್ಗವೇ **ಪಂಚೇಂದ್ರಿಯಾರ್ಪಣದೀಕ್ಷೆ**. ಎಲ್ಲ ಪ್ರಾಣಿಗಳಲ್ಲೂ ಜೀವಾತ್ಮನಿದ್ದಾನೆ. ಅದರಂತೆ ಪ್ರಾಣಿಗಳೂ ನಮ್ಮಂತೆ ಬದುಕಲು ಅವಕಾಶವಿರಬೇಕು. ಆದುದರಿಂದ ಪ್ರಾಣಿಹಿಂಸೆ ಮಾಡಬಾರದೆಂಬುದೇ **ಅಹಿಂಸಾದೀಕ್ಷೆ**. ಆದಿ ಮಧ್ಯ ಅಂತ್ಯಗಳಿಲ್ಲದ ಪರಬ್ರಹ್ಮ ಸ್ವರೂಪವಾದ ಲಿಂಗದಲ್ಲಿ ನಿಷ್ಠೆಯಿಂದಿರುವುದೇ **ಲಿಂಗನಿಷ್ಠಾದೀಕ್ಷೆ**. 'ಇಷ್ಟಲಿಂಗದ ಧ್ಯಾನವನ್ನು ಮಾಡುವಾಗ ಸಂಕಲ್ಪ ವಿಕಲ್ಪರಹಿತ (ಅಮನಸ್ಕ)ನಾಗುವುದೇ' **ಮನೋಲಯದೀಕ್ಷೆ** ಪರವಸ್ತು ಪ್ರತೀಕವಾದ ಲಿಂಗವನ್ನು ಧಾರಣೆ ಮಾಡಿಕೊಂಡು ಅದರಲ್ಲಿ ಮನಮಗ್ನವಾಗಿ ಅನ್ಯ ವಿಷಯಗಳಿಂದ ಮುಕ್ತನಾಗುವುದೇ **ಸದ್ಯೋಮುಕ್ತಿದೀಕ್ಷೆ**. ದೇಹ, ಇಂದ್ರಿಯ ಹಾಗೂ ಸಂಸಾರಗಳ ಸಂಗದಲ್ಲೆ ಸಂಲಗ್ನನಾಗಿರದೆ ಇವು ಆತ್ಮ ಸಾಕ್ಷಾತ್ಕಾರದ ಸಾಧನಗಳೆಂಬ ಭಾವನೆಯಿಂದೊಡಗೂಡಿ ಸರ್ವಕಾರ್ಯವೂ, ಸಂಸಾರ ವ್ಯವಹಾರವೂ ಲಿಂಗಾನುಸಂಧಾನಕ್ಕೆ ನೆರವಾಗುವಂತೆ ಮಾಡಿಕೊಳ್ಳುವುದು **ನಿಃಸಂಸಾರದೀಕ್ಷೆ**. ಆಣವ, ಮಾಯೀಯ ಮತ್ತು ಕಾರ್ಮಿಕ ಎಂಬ ಮಲತ್ರಯಗಳಿಗೆ ತುತ್ತಾಗದೆ ಮನವನ್ನು ಲಿಂಗಮಯವಾಗಿ ಮಾಡಿಕೊಳ್ಳುವುದೇ **ನಿರ್ವಾಣದೀಕ್ಷೆ**. ಶಿವಜೀವೈಕ್ಯದ ಅಂದರೆ ಲಿಂಗ ಮತ್ತು ಅಂಗದ ತತ್ವಗಳನ್ನರಿತು ಅವುಗಳಲ್ಲಿ ಸಮರಸ ಸಾಧಿಸಬೇಕೆಂಬ ಉಪದೇಶ ಕ್ರಿಯೆಯೇ **ತತ್ವದೀಕ್ಷೆ**. ಅಂಗದಲ್ಲಿರುವ ಪ್ರಾಣವನ್ನು ಸ್ಮರಿಸಿ ಅಲ್ಲಿ ಲಿಂಗಭಾವನೆಯನ್ನು ಮೂಡಿಸಿಕೊಂಡು ಅಂಗ ಮತ್ತು ಲಿಂಗ ಸಮನ್ವಯ ಸಾಧಿಸುವ ಅಂದರೆ ಪ್ರಾಣಲಿಂಗಿ ಸ್ಥಿತಿಗೇರುವ ದರ್ಶನವೇ **ಆಧ್ಯಾತ್ಮದೀಕ್ಷೆ**. ಶಬ್ದ, ರೂಪ, ರಸ, ಗಂಧ, ಸ್ಪರ್ಶ ಇವು ಪಂಚೇಂದ್ರಿಯದ ವಿಷಯಗಳು. ಇವುಗಳನ್ನು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗವೆಂಬ ಆರು ಲಿಂಗಗಳಿಗೆ ಸಮರ್ಪಿಸಿ ಮನವನ್ನು ಶಿವಮಯವಾಗಿ ಮಾಡಿಕೊಳ್ಳುವ ಮಾರ್ಗದರ್ಶನವೇ **ತತ್ವ ಸಂಶೋಧನಾದೀಕ್ಷೆ**. ಪರಾತ್ಪರವಸ್ತುಪ್ರತೀಕವಾದ ಲಿಂಗವನ್ನು ತಾನೇ ಎಂದು ಭಾವಿಸಿ, ಶಿವೋಹಂ ಭಾವದ ಉಪಾಸನೆಯ ಮಾರ್ಗದರ್ಶನವೇ **ತತ್ವಬೋಧದೀಕ್ಷೆ**.[೭]

ಹೀಗೆ ದೀಕ್ಷಾಕಾಲದಲ್ಲಿ ಗುರುವಿನ ಅನುಗ್ರಹ ಹಾಗೂ ಉಪದೇಶದ ಮೂಲಕ ಪ್ರಾಪ್ತವಾದ ಇಷ್ಟಲಿಂಗವನ್ನು ಸಾಧಕನು ಏಕೈಕನಿಷ್ಠೆಯಿಂದ ಪೂಜೆಗೈದು ಲಿಂಗಾಂಗ ಸಾಮರಸ್ಯರೂಪದ ಗುರಿಯನ್ನು ಮುಟ್ಟಲು ಶಕ್ತನಾಗುವುದೇ ಲಿಂಗಾಚಾರವಾಗಿದೆಯೆಂದು ಆಗಮಗಳಲ್ಲಿ ಪ್ರತಿಪಾದಿಸಲಾಗಿದೆ.

ವಚನ ಸಾಹಿತ್ಯದಲ್ಲಿಯೂ ಇದೇ ಮನೋಭಾವನೆಯೇ ಪ್ರತಿಪಾದಿತವಾಗಿದ್ದು ಶರಣರು ಲಿಂಗದಲ್ಲಿಯೇ ಸಾಧನೆಯ ಸರ್ವಸ್ವವನ್ನು ಕಂಡುಕೊಂಡಿದ್ದಾರೆ.

"ಲಿಂಗವಿಲ್ಲದೆ ನಡೆವವರ, ಲಿಂಗವಿಲ್ಲದೆ ನುಡಿವವರ
ಲಿಂಗವಿಲ್ಲದೆ ಉಗುಳು ನುಂಗಿದಡೆ

---

೭. ಕಾ.ಆ. ಪಟಲ ೧, ಶ್ಲೋಕ ಸಂಖ್ಯೆ ೧೦೨-೧೦೪, ೧೧೨-೧೧೭

ಅಂದಂದಿಗೆ ಕಿಲ್ಬಿಷವಯ್ಯಾ"[೮]

ಎಂದಿದ್ದಾರೆ. ಅಲ್ಲದೇ " ಲಿಂಗದ ಮೇಲೆ ನಿಷ್ಠೆ ಇಲ್ಲದ ಭಕ್ತ ಇದ್ದಡೇನೊ ಶಿವಶಿವ ಹೋದಡೇನೋ?"[೯] ಎನ್ನುತ್ತಾ ಇಷ್ಟಲಿಂಗದಲ್ಲಿ ನಿಷ್ಠೆಯನ್ನಿಟ್ಟು ಅದರ ಹೊರತು ಅನ್ಯದೈವವಿಲ್ಲವೆಂದು ಹೇಳಿದ್ದಾರೆ. ಬಸವಣ್ಣನವರು–

"ಲಿಂಗವಲ್ಲದನ್ಯವನರಿಯೆ, ಶಿವಲಿಂಗವಲ್ಲದನ್ಯವ ನೆನೆಯೆ,
..... ಕೂಡಲಸಂಗಮದೇವರು ಸಾಕ್ಷಿಯಾಗಿ
ನಾನಾವ ತೀರ್ಥಯಾತ್ರೆಗಳನರಿಯೇ"[೧೦]

ಎಂದು ಲಿಂಗಾಚಾರದ ಮಹತ್ವವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೇ ಲಿಂಗಕ್ಕೆ ತನ್ನನ್ನೇ ಅರ್ಪಿಸಿಕೊಳ್ಳುತ್ತ–

ಲಿಂಗಕ್ಕೆಂದೇ ನೆನೆವೆ, ಲಿಂಗಕ್ಕೆಂದೇ ಮಾಡುವೆ
ಲಿಂಗಕ್ಕೆಂದೇ ಕೊಡುವೆನು ನಾನಯ್ಯ.
ಸಕಲ ಪದಾರ್ಥಂಗಳ ಲಿಂಗಕ್ಕೆಂದೇ ಭಾವಿಸುವೆ;
ಅಂಗಗುಣಂಗಳನರಿಯೆನಯ್ಯ
ಲಿಂಗಕ್ಕೆಂದೇ ಕಾಮಿಸುವೆನು ನಿಃಕಾಮಿಯಾಗಿ.
ಎನ್ನ ದೇಹೇಂದ್ರಿಯ ಮನ ಪ್ರಾಣಾದಿಗಳು ಲಿಂಗದ ಸತಿಯರಾಗಿ,
ಲಿಂಗಕ್ಕೆಂದೇ ಬಯಸಿ ಲಿಂಗ ಪ್ರಾಣಿಗಳಾದ ಕಾರಣ,
ಲಿಂಗಕ್ಕೆಂದೇ ಕೈ ಕೊಂಬೆನು.
ಅನರ್ಪಿತವನರಿಯೆ ಕೂಡಲ ಸಂಗಮದೇವಾ[೧೧]

ಎಂದು ಸರ್ವವನ್ನೂ ಲಿಂಗಕ್ಕೆ ಅರ್ಪಿಸುವ ತನ್ಮಯತೆಯ ಈ ಮನೋಭಾವವೇ ಲಿಂಗಾಚಾರವಾಗಿದೆ.

ಲಿಂಗಾಚಾರದ ಇನ್ನೊಂದು ಪ್ರಮುಖ ಆಶಯವೆಂದರೆ ಲಿಂಗವನ್ನುಳಿದು ಅನ್ಯದೈವಕ್ಕೆರಗದಿರುವುದು

ಲಿಂಗಧಾರಿಯು ತನ್ನ ಆತ್ಮಸ್ವರೂಪವಾದ ಲಿಂಗವನ್ನುಳಿದು ಅನ್ಯದೈವಕ್ಕೆರಗುವುದು ಪಾಪವೆಂಬ ಅಭಿಪ್ರಾಯ ಆಗಮೋಕ್ತಿಯಿಂದ ಸ್ಪಷ್ಟವಾಗುತ್ತದೆ. ಸೂಕ್ಷ್ಮಾಗಮದಲ್ಲಿ ಪರಶಿವನು ಪಾರ್ವತಿಗೆ –

ವೀರಶೈವಃ ಪರೋ ಯಸ್ತು ಯತ್ರ ತಿಷ್ಠತಿ ಪಾರ್ವತಿ।

---

೮. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ. ೧, ವ.ಸಂ. ೬೮೯, ಪುಟ ೧೩೨
೯. ಬಸವಣ್ಣನವರ ವ.ಸಂ.. ಸಮಗ್ರ ವಚನ ಸಂಪುಟ. ೧, ವ.ಸಂ. ೧೮೯, ಪುಟ ೩೦
೧೦. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ. ೧, ವ.ಸಂ. ೧೩೪೦, ಪುಟ ೩೬೯
೧೧. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ (ಸನ್೧೯೨೩) ವಚನಸಂಖ್ಯೆ ೯, ಪುಟ ೩೪೮

ತತ್ತೀರ್ಥಂ ತತ್ತಪಃ ಶಾಂತಿಸ್ತತ್ರ ತಿಷ್ಠಾಮಿ ಸರ್ವದಾ ॥
ತೀರ್ಥಯಾತ್ರಾದಿಕಂ ತೇಷಾಂ ನಾಸ್ತಿ ಚಾನ್ಯತ್ರ ಪಾರ್ವತಿ।
ಕೈಲಾಸಾದಿಪದಾಪೇಕ್ಷಾಂ ತ್ಯಜೇಲ್ಲಿಂಗಾಂಗಯೋಗಭಾಕ್ ॥
ಯಾತ್ರಾನ್ಯದೇವತಾಪೂಜಾ ತತ್ಸ್ಥಾನಂ ಪರಿವರ್ಜಯೇತ್॥[೧೨]

ಹೇ ಪಾರ್ವತಿ! ವೀರಶೈವನು ವಾಸ ಮಾಡುವ ನೆಲೆಯೇ ತೀರ್ಥಕ್ಷೇತ್ರ, ತಪೋಭೂಮಿ, ಶಾಂತಿಸದನ. ಅಲ್ಲಿ ಶಿವನು ಸದಾ ಇರುತ್ತಾನೆ. ಅವರು ಬೇರೆ ತೀರ್ಥಯಾತ್ರಾದಿಗಳಿಗೆ ಹೋಗಬೇಕಾಗಿಲ್ಲ. ಲಿಂಗಾಂಗಯೋಗ ಉಳ್ಳವನು ಕೈಲಾಸಾದಿ ಸ್ಥಾನ-ಮಾನಗಳನ್ನು ಅಪೇಕ್ಷೆ ಮಾಡಬಾರದು. ಎಲ್ಲಿ ಬೇರೆ ದೇವರ ಪೂಜೆ ನಡೆಯುತ್ತದೆಯೋ ಅಲ್ಲಿಗೆ ಹೋಗಬಾರದೆಂದು ತಿಳಿಸಿದೆ. ವೀರಾಗಮವಂತೂ ಸ್ಥಾವರಲಿಂಗ ಪೂಜೆಯನ್ನು ಅತ್ಯಂತ ಕಠೋರವಾಗಿ ವಿರೋಧಿಸಿ, ದೇವಾಲಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಮೂರ್ತಿಗಳಿಗೆ ಪ್ರೇತಲಿಂಗಗಳೆಂದು ಸಂಬೋಧಿಸುತ್ತದೆ. ಅಲ್ಲದೇ-

ಪ್ರಾಣಲಿಂಗಂ ಪರಿತ್ಯಜ್ಯ ತಾಂತ್ರ್ಯಶೈವ ಸಮನ್ವಿತಂ।
ಪ್ರೇತಲಿಂಗಂ ಸದಾ ಭಕ್ತ್ಯಾನಮಃ ಕುರ್ವಂತಿ ಮಾನವಾಃ॥
ಶ್ವಾನಯೋನಿಶತಂ ಗತ್ವಾ ಚಾಂಡಾಲಃ ಕೋಟಿ ಜನ್ಮಸು ।
ಜಾಯಂತೇ ತೇನ ಪಾಪೇನ ಶ್ರುಣು ತ್ವಂ ಭಕ್ತವತ್ಸಲೇ ॥[೧೩]

ಗುರುವಿನಿಂದ ಅನುಗ್ರಹಪೂರ್ವಕವಾಗಿ ದಯಪಾಲಿಸಿದ ಇಷ್ಟಲಿಂಗ (ಪ್ರಾಣಲಿಂಗ)ವನ್ನು ತ್ಯಜಿಸಿ ಶೈವದ ತಾಂತ್ರಿಕ ವಿಧಾನದಿಂದ ಸ್ಥಾಪಿಸಲ್ಪಟ್ಟ ಸ್ಥಾವರಲಿಂಗಕ್ಕೆ ಭಕ್ತಿಯಿಂದ ನಮಸ್ಕರಿಸುವಂತಹ ಮಾನವರು ಶ್ವಾನಯೋನಿಯಲ್ಲಿ ನೂರುಸಲ ಇಲ್ಲವೇ ಚಾಂಡಾಲನಾಗಿ ಕೋಟಿಸಲ ಜನಿಸುವರೆಂದು ಎಚ್ಚರಿಸಿದೆ. ಅಲ್ಲದೇ

ಪ್ರೇತಲಿಂಗಾರ್ಚನರತಂ ಮಾನವಂ ನರದಾನವಂ ॥[೧೪]

ಇಷ್ಟಲಿಂಗವನ್ನು ತ್ಯಜಿಸಿ ಸ್ಥಾವರಲಿಂಗಕ್ಕೆ ಭಕ್ತಿಯಿಂದ ಅರ್ಚಿಸುವ ಮತ್ತು ಪೂಜಿಸುವ ವ್ಯಕ್ತಿಯು ಸಾಕ್ಷಾತ್ ನರರೂಪದ ರಕ್ಕಸನೆಂದು ವೀರಾಗಮ ಸಾರುತ್ತದೆ.

ಯೇ ಭರ್ಜಯಂತಿ ಮತ್ಪ್ರೀತ್ಯಾತೇ ಯಾಂತಿ ಮಮಮಂದಿರಂ ।
ಪ್ರೇತಲಿಂಗಂ ನಮಸ್ಕೃತ್ವಾ ಪ್ರಾಣಲಿಂಗಸ್ಯ ಹೇ ಪ್ರಿಯೇ ।
ಪೂಜಾಂ ಕರೋತಿ ಮತ್ಪ್ರೀತ್ಯಾ ಸಾ ಪೂಜಾ ನಿಷ್ಫಲಾ ಭವೇತ್ ।
ತಸ್ಮಾತ್ ತ್ವಂ ಪ್ರೇತಲಿಂಗಸ್ಯ ತ್ಯಜ ಪೂಜಾಂ ಮಹೇಶ್ವರಿ ॥[೧೫]

---

೧೨. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೮೧-೮೩
೧೩. ವೀರಾಗಮ, ಪಟಲ ೧, ಶ್ಲೋ.ಸಂ. ೬೫-೬೬, ಪುಟ ೧೫,
೧೪. ವೀರಾಗಮ, ಪಟಲ ೧, ಶ್ಲೋ.ಸಂ. ೭೦, ಪುಟ ೧೬,
೧೫. ವೀರಾಗಮ, ಪಟಲ ೧, ಶ್ಲೋ.ಸಂ. ೭೧-೭೨, ಪುಟ ೧೬,

ಯಾರು ಸ್ಥಾವರ ಪೂಜೆಯನ್ನು ತ್ಯಜಿಸಿ ಭಕ್ತಿಯಿಂದ ಕೇವಲ ಇಷ್ಟಲಿಂಗವನ್ನು ಮಾತ್ರ ಪೂಜಿಸುವನೋ ಆ ಭಕ್ತನು ನನ್ನ (ಶಿವನ) ಸಾನಿಧ್ಯವನ್ನು ಹೊಂದುವನು. ಒಂದು ವೇಳೆ ಗುರುವಿತ್ತ ಪ್ರಾಣಲಿಂಗವನ್ನೂ ಹಾಗೂ ಸ್ಥಾವರಲಿಂಗಳೆರಡನ್ನೂ ಪೂಜೆಗೈದರೆ ಆತನ ಪೂಜೆಯು ನಿಷ್ಫಲಗೊಳ್ಳುವುದು. ಕಾರಣ ಇಷ್ಟಲಿಂಗಧಾರಿಯು ಸ್ಥಾವರಲಿಂಗವನ್ನು ಪೂಜಿಸಬಾರದೆಂದು ಆದೇಶಿಸಿದೆ. ಹಾಗೂ

"ಪ್ರೇತಲಿಂಗಸ್ಯ ನೈವೇದ್ಯಂ ಮಲತೀರ್ಥಂ ತು ಮೂತ್ರಿಕಂ"[೧೬]

ಸ್ಥಾವರಲಿಂಗಕ್ಕೆ ತೋರಿದ ನೈವೇದ್ಯ ಮಲವು, ಹಾಗೂ ತೀರ್ಥವು ಮೂತ್ರಕ್ಕೆ ಸಮಾನವಾದುದು. ಕಾರಣ –

"ಪ್ರೇತಲಿಂಗ ನೈವೇದ್ಯಂ ಯೋ ನ ಕಾಂಕ್ಷತಿ ।
ಸ ಭಕ್ತೋ ಭಗವಾನ್ ಶ್ರೀಮಾನ್ ಪೂಜ್ಯೋ ಭವತಿ ಪಾರ್ವತಿ॥"[೧೭]

ಯಾವ ಲಿಂಗಧಾರಿ ಭಕ್ತನು ಪ್ರೇತಲಿಂಗಕ್ಕೆ (ಸ್ಥಾವರಲಿಂಗಕ್ಕೆ) ಅರ್ಪಿಸಿದ ನೈವೇದ್ಯವನ್ನು ಬಯಸುವುದಿಲ್ಲವೋ ಅವನು ಷಡ್ಗುಣೈಶ್ವರ್ಯವುಳ್ಳ ಸಿರಿವಂತನಾಗಿ ವಂದನೀಯನಾಗುವನು ಎಂದು ಅರುಹಿದೆ.

ವಚನಗಳಲ್ಲಿ ಕೂಡಾ ಇದೇ ಮನೋಭಾವನೆ ಪ್ರತಿಪಾದಿತವಾಗಿದ್ದು ಶರಣರು ತನ್ನ ಉಪಾಸನೆಯ ದೈವವನ್ನು ಕುರಿತು ಉಗ್ರನಿಷ್ಠೆಯನ್ನು ಹೊಂದಿರಬೇಕೆಂದು ತಿಳಿಸಿ, ಸ್ಥಾವರಲಿಂಗಗಳಿಗೆ ಎರಗುವದನ್ನು ಖಂಡಿಸಿದ್ದಾರೆ. ಬಸವಣ್ಣನವರು "ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣಿರೋ ನಂಬಬಲ್ಲ ಭಕ್ತಂಗೆ ದೇವನೊಬ್ಬನೇ ಕಾಣಿರೋ, ಬೇಡ ಬೇಡ, ಅನ್ಯದೈವದ ಸಂಗ ಹೊಲ್ಲ. ಅನ್ಯದೈವವೆಂಬುದು ಹಾದರ ಕಾಣಿರೋ. ಕೂಡಲಸಂಗಮದೇವರು ಕಂಡರೆ, ಮೂಗ ಕೊಯ್ಯುವ ಕಾಣಿರೋ."ಎಂದು ಸ್ವಲ್ಪ ಕಟುವಾಗಿಯೇ ಹೇಳಿದ್ದಾರೆ.[೧೮]

ಅಂಬಿಗರ ಚೌಡಯ್ಯನು,"ಒಬ್ಬ ತಂದೆಯ ಬಸಿರಲ್ಲಿ ಒಂಬತ್ತು ಮಕ್ಕಳು ಹುಟ್ಟಿದರೇನಯ್ಯ? ಅವರೊಳಗೆ ಶರಗವ ಒಬ್ಬಗೆ ಕಟ್ಟಿ ಮದುವೆಯ ಮಾಡಿದ ಬಳಿಕ, ಆತಂಗೆ ತನ್ನ ಅಂಗದ ಸುಖವನ್ನು ಒಪ್ಪಿಸಬೇಕಲ್ಲದೆ, ಉಳಿದಾದ ಭಾವ ಮೈದುನರಿಗೆ ಅವನ ಮಕ್ಕಳೆಂದು ಅವರಿಗೆ ತನ್ನ ಶರಗು ಹಾಕಿದವಳನ್ನು ಒಪ್ಪುವರೇ ಲೋಕದೊಳಗೆ? ಪರಮೇಶ್ವರನೆಂಬ ಶಿವಂಗೆ ಹುಟ್ಟದಾತ ವಿನಾಯಕ, ಆತಂಗೆ ಸಾಕಾರವಾಗಿ ಹುಟ್ಟಿದಾತ ವೀರಭದ್ರ, ಇವರೆಲ್ಲರು ಶಿವನ ಮಕ್ಕಳು. ಆದರೆ ತನಗೊಂದು ಪ್ರಾಣಲಿಂಗವೆಂದು ಕಂಕಣವಕಟ್ಟಿ ಕರಸ್ಥಲದಲ್ಲಿ ಪಡೆದ ಬಳಿಕ, ಅದೇನೆಂದರೆ ಅನ್ಯದೈವಕ್ಕೆರಗಿದಾತಂಗೆ ನಾಯಕ ನರಕ ತಪ್ಪದು" ಎನ್ನುತ್ತಾ ವಚನಕಾರರು

---

೧೬. ವೀರಾಗಮ, ಪಟಲ ೧, ಶ್ಲೋ.ಸಂ. ೭೪, ಪುಟ ೧೭,
೧೭. ವೀರಾಗಮ, ಪಟಲ ೧, ಶ್ಲೋ.ಸಂ. ೮೧, ಪುಟ ೧೮,
೧೮. ವಚನ ಶಾಸ್ತ್ರಸಾರ–ಫ.ಗು.ಹಳಕಟ್ಟಿ(ಸನ್೧೯೨೩)– ವಚನಸಂಖ್ಯೆ ೧೭, ಪುಟ೨೮೩

ಬಹುದೇವತಾ ಆರಾಧನೆಯನ್ನು ಅತ್ಯಂತ ಉಗ್ರವಾಗಿ ಖಂಡಿಸಿದ್ದಾರೆ.[೧೯]

ಹೀಗೆ ಗುರುವಿನ ಅನುಗ್ರಹ ಹಾಗೂ ಉಪದೇಶದ ಮೂಲಕ ಪ್ರಾಪ್ತವಾದ ಇಷ್ಟಲಿಂಗವನ್ನುಳಿದು ಅನ್ಯ ಸ್ಥಾವರಲಿಂಗಗಳನ್ನಾಗಲೀ, ಅನ್ಯದೈವವನ್ನಾಗಲೀ ಸೇವಿಸದೇ ಇರುವುದು ಲಿಂಗಾಚಾರವಾಗಿದೆ.

ಒಟ್ಟಿನಲ್ಲಿ ಲಿಂಗಾಚಾರದ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ, 'ಗುರುವಿನ ಮೂಲಕ ಧಾರಣ ಮಾಡಿದ ಇಷ್ಟಲಿಂಗವನ್ನುಳಿದು ಅಧಿಕವಾದ ದೈವವು ಈ ಪೃಥ್ವಿಯ ಮೇಲೆ ಇನ್ನೊಂದಿಲ್ಲವೆಂದು ಭಾವಿಸಿ ಲಿಂಗಾನುಸಂಧಾನ ಮಾಡುವದೇ ಲಿಂಗಾಚಾರ' ಎಂಬ ಶಿವಾಗಮದ ವ್ಯಾಖ್ಯೆಯನ್ನೇ ವಚನ ಸಾಹಿತ್ಯದಲ್ಲಿಯೂ ಅಂಗೀಕರಿಸಲಾಗಿದೆ.

ಗುರುವಿನ ಅನುಗ್ರಹ ಹಾಗೂ ಉಪದೇಶದ ಮೂಲಕ ಪ್ರಾಪ್ತವಾದ ಲಿಂಗವೇ ಪ್ರಾಣಲಿಂಗವೆಂದು ಹೇಳಿ, ಇಷ್ಟಲಿಂಗವನ್ನು ಸಾಧಕನು ಏಕೈಕನಿಷ್ಠೆಯಿಂದ ಪೂಜೆಗೈದು ಲಿಂಗಾಂಗಸಾಮರಸ್ಯರೂಪದ ಗುರಿಯನ್ನು ಮುಟ್ಟಬೇಕೆಂದು ಆಗಮಗಳು ಪ್ರತಿಪಾದಿಸಿವೆ. ಹಾಗೂ ಲಿಂಗಧಾರಿಯು ತನ್ನ ಆತ್ಮಸ್ವರೂಪವಾದ ಲಿಂಗವನ್ನುಳಿದು ಅನ್ಯದೈವಕ್ಕೆರಗುವುದು ಪಾಪವೆಂಬ ಅಭಿಪ್ರಾಯ ಆಗಮೋಕ್ತಿಗಳಿಂದ ಸ್ಪಷ್ಟವಾಗುತ್ತದೆ.

ವೀರಶೈವನು ವಾಸ ಮಾಡುವ ನೆಲೆಯೇ ತೀರ್ಥಕ್ಷೇತ್ರ, ತಪೋಭೂಮಿ, ಶಾಂತಿಸದನ. ಅಲ್ಲಿ ಶಿವನು ಸದಾ ಇರುತ್ತಾನೆ. ಅವರು ಬೇರೆ ತೀರ್ಥಯಾತ್ರಾದಿಗಳಿಗೆ ಹೋಗಬೇಕಾಗಿಲ್ಲ. ಲಿಂಗಾಂಗಯೋಗ ಉಳ್ಳವನು ಕೈಲಾಸಾದಿ ಸ್ಥಾನ-ಮಾನಗಳನ್ನು ಅಪೇಕ್ಷೆ ಮಾಡಬಾರದು. ಎಲ್ಲಿ ಬೇರೆ ದೇವರ ಪೂಜೆ ನಡೆಯುತ್ತದೆಯೋ ಅಲ್ಲಿಗೆ ಹೋಗಬಾರದೆಂದು ತಿಳಿಸಿದೆ. ವೀರಾಗಮವಂತೂ ಸ್ಥಾವರಲಿಂಗ ಪೂಜೆಯನ್ನು ಅತ್ಯಂತ ಕಠೋರವಾಗಿ ವಿರೋಧಿಸಿ, ದೇವಾಲಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಮೂರ್ತಿಗಳಿಗೆ ಪ್ರೇತಲಿಂಗಗಳೆಂದು ಸಂಬೋಧಿಸುತ್ತದೆ. ಇಷ್ಟಲಿಂಗವನ್ನು ತ್ಯಜಿಸಿ ಸ್ಥಾವರಲಿಂಗಕ್ಕೆ ಭಕ್ತಿಯಿಂದ ಅರ್ಚಿಸುವ ಮತ್ತು ಪೂಜಿಸುವ ವ್ಯಕ್ತಿಯು ಸಾಕ್ಷಾತ್ ನರರೂಪದ ರಕ್ಕಸನೆಂದು ವೀರಾಗಮ ಸಾರುತ್ತದೆ. ಗುರುವಿತ್ತ ಪ್ರಾಣಲಿಂಗವನ್ನೂ ಹಾಗೂ ಸ್ಥಾವರಲಿಂಗಳೆರಡನ್ನೂ ಪೂಜೆಗೈದರೆ ಆತನ ಪೂಜೆಯು ನಿಷ್ಫಲಗೊಳ್ಳುವುದು. ಕಾರಣ ಇಷ್ಟಲಿಂಗಧಾರಿಯು ಸ್ಥಾವರಲಿಂಗವನ್ನು ಪೂಜಿಸಬಾರದೆಂದು ಆದೇಶಿಸಿದೆ. ಯಾವ ಲಿಂಗಧಾರಿ ಭಕ್ತನು ಪ್ರೇತಲಿಂಗಕ್ಕೆ (ಸ್ಥಾವರಲಿಂಗಕ್ಕೆ) ಅರ್ಪಿಸಿದ ನೈವೇದ್ಯವನ್ನು ಬಯಸುವುದಿಲ್ಲವೋ ಅವನು ಷಡ್ಗುಣೈಶ್ವರ್ಯವುಳ್ಳ ಸಿರಿವಂತನಾಗಿ ವಂದನೀಯನಾಗುವನು ಎಂದು ಅರುಹಿದೆ. ಕಾರಣ ಆಗಮ ಪ್ರತಿಪಾದಿತವಾದ ಇಷ್ಟಲಿಂಗದ ಬಗ್ಗೆ ಏಕೈಕ ನಿಷ್ಠೆಯನ್ನು ವಚನಕಾರರು ಪುರಸ್ಕರಿಸಿ ಬಹುದೇವತೋಪಾಸನೆಯನ್ನು ತಮ್ಮ ಆಡು ಮಾತಿನ ಶೈಲಿಯಲ್ಲಿ ಅತ್ಯಂತ ಉಗ್ರವಾಗಿ ಖಂಡಿಸಿದ್ದಾರೆ.

---

೧೯. ವಚನ ಶಾಸ್ತ್ರಸಾರ-ಫ.ಗು.ಹಳಕಟ್ಟಿ(ಸನ್೧೯೨೩) ವಚನಸಂಖ್ಯೆ ೬, ಪುಟ ೨೮೮

೫.೨.೨ ಸದಾಚಾರ

ಪಂಚಾಚಾರಗಳಲ್ಲಿ ಸದಾಚಾರ ಬಹಳ ವ್ಯಾಪಕವಾದದ್ದು; ಮಾನವನ ಪರಿಶುದ್ಧವಾದ ಸಾತ್ವಿಕ ಜೀವನಕ್ಕೆ ಆಧಾರಭೂತವಾದದ್ದು. ಪರರ ಸಂಪತ್ತಿಗೆ ಆಶೆಪಡದೇ ಸತ್ಯಶುದ್ಧ ಮಾರ್ಗದಿಂದ ಸಂಪಾದಿಸಿದ ಹಣದಿಂದ ಗುರು–ಲಿಂಗ–ಜಂಗಮರನ್ನು ತೃಪ್ತಿಪಡಿಸುವುದೇ ಸದಾಚಾರ.

ಸದಾಚಾರದ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅವುಗಳ ವಿವೇಚನೆ ಇಂತಿದೆ –

ಸದಾಚಾರದ ಅರ್ಥ

ಸದಾಚಾರವನ್ನು ಸೂಕ್ಷ್ಮಾಗಮವು ಈ ರೀತಿ ವ್ಯಾಖ್ಯಾನಿಸಿದೆ –

ಸಜ್ಜನಃ ಶಿವಭಕ್ತಶ್ಚ ಯೇನಮಾರ್ಗೇಣ ಸರ್ವದಾ।
ತೋಷ್ಯತೇ ಚ ಮಹಾದೇವಿ ಸದಾಚಾರಃ ಸ ವೈ ಸ್ಮೃತಃ॥[೧]

'ಸಜ್ಜನರಾದ ಶಿವಭಕ್ತರನ್ನು ಸದಾ ಸಂತೋಷಗೊಳಿಸುವ ಆಚಾರವೇ ಸದಾಚಾರ'ವೆಂದು ಕರೆಯಲಾಗಿದೆ. ಸಜ್ಜನರಿಗೆ ಸಂತಸವನ್ನುಂಟು ಮಾಡುವ ಇದರ ಸ್ವರೂಪವನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸಿದೆ –

ಧರ್ಮಾರ್ಜಿತೇನ ದ್ರವ್ಯೇಣ ಯತ್ಸಂತರ್ಪಣಮನ್ವಹಮ್।
ಗುರುಲಿಂಗಜಂಗಮಾನಾಂ ಸದಾಚಾರ ಇತಿ ಸ್ಮೃತಃ॥[೨]

'ಧರ್ಮಮಾರ್ಗದಿಂದ ಗಳಿಸಿದ ದ್ರವ್ಯದಿಂದ ಗುರು–ಲಿಂಗ–ಜಂಗಮರ ನಿತ್ಯಾರಾಧನೆಯೇ ಸದಾಚಾರ'ವೆಂದು ತಿಳಿಸಿದೆ. ಕಾರಣ ಸದಾಚಾರವು ಎರಡು ಪ್ರಮುಖವಾದ ಸಂಗತಿಗಳನ್ನು ಒಳಗೊಂಡಿದೆ.

೧. ಸತ್ಯಶುದ್ಧವಾದ ವೃತ್ತಿಯಿಂದಲೇ ಜೀವನವನ್ನು ನಿರ್ವಹಿಸಬೇಕು.

೨. ಅತಿಥಿಗಳನ್ನು ಸಾಕ್ಷಾತ್ ಶಿವಸ್ವರೂಪರೆಂದು ಭಾವಿಸಿ ಅವರ ಸೇವೆಗೈದು ಅವರನ್ನು ಸಂತೃಪ್ತಿಗೊಳಿಸಬೇಕೆಂಬುದಾಗಿದೆ.

'ಏಕಮೂರ್ತೇಸ್ತ್ರಯೋ ಭಾಗಾ ಗುರುರ್ಲಿಂಗಂ ಚ ಜಂಗಮಃ'[೩] ಎಂಬ ಆಗಮಗಳ ಪ್ರತಿಪಾದನೆಯಂತೆ ವೀರಶೈವ ಧರ್ಮವು ಗುರು, ಲಿಂಗ, ಜಂಗಮರನ್ನು ಪರಶಿವನ ಮೂರು ರೂಪಗಳು ಹಾಗೂ ಪೂಜ್ಯವಸ್ತುಗಳೆಂದು ಪರಿಗಣಿಸಿದೆ. ಆದುದರಿಂದ ಶಿವಭಕ್ತನಾದ ಸಾಧಕನು ಅವರ ಅನುಗ್ರಹವನ್ನು ಸಂಪಾದಿಸಲು ಸತ್ಯ ಶುದ್ಧ ಕಾಯಕದಿಂದ ಅರ್ಥಾತ್ ಧರ್ಮಮಾರ್ಗದಿಂದ ಹಣವನ್ನು ಸಂಪಾದಿಸಿ ತನ್ನ ಶಕ್ತ್ಯಾನುಸಾರ ಗುರು, ಲಿಂಗ, ಜಂಗಮರಿಗೆ ಸಲ್ಲಿಸಿ ಸೇವೆಗೈಯುವುದೇ

---

೧. ಸೂ.ಆ. ಪಟಲ ೮, ಶ್ಲೋಕ ಸಂಖ್ಯೆ ೭

೨. ಚಂ.ಆ. ಕ್ರಿಪಾ. ಪಟಲ ೯ ಶ್ಲೋಕ ಸಂಖ್ಯೆ ೬

೩. ಚಂ.ಆ. ಕ್ರಿಪಾ. ಪಟಲ ೫ ಶ್ಲೋಕ ಸಂಖ್ಯೆ ೧೫

ಸದಾಚಾರವೆಂದು ಚಂದ್ರಜ್ಞಾನಾಗಮವು ವಿಶ್ಲೇಷಿಸಿದೆ. ಈ ಸೇವೆಯು ಅನ್ನ, ವಸ್ತ್ರ, ಧನಾದಿಗಳನ್ನು ದಾನ ಮಾಡುವ ರೂಪದಲ್ಲಿರುತ್ತದೆ.

ಈ ಅಭಿಪ್ರಾಯವನ್ನೇ ಸಮರ್ಥಿಸುತ್ತ ಚೆನ್ನಬಸವಣ್ಣನವರ ವಚನವೊಂದರಲ್ಲಿ 'ಸಜ್ಜನ ಕಾಯಕದಲ್ಲಿ ತಂದು ಗುರು -ಲಿಂಗ- ಜಂಗಮಕ್ಕೆ ನೀಡಿ ಸತ್ಯಶುದ್ಧನಾಗಿಹುದೇ ಸದಾಚಾರ.'[೪] ಎಂದು ವ್ಯಾಖ್ಯಾನಿಸಿದ್ದಾರೆ. ಈ ಸತ್ಯಶುದ್ಧ ಕ್ರಿಯೆಯನ್ನು ಶಿವಶರಣರು ಕಾಯಕವೆಂದು ಕರೆದು ಅದೇ ಕೈಲಾಸವೆಂದು ಕರೆದಿದ್ದಾರೆ.

ಬಸವಣ್ಣನವರು 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೇ ಸತ್ಪಾತ್ರಕ್ಕೆ ಸಲ್ಲದೆಂದು' ನಿಷ್ಠುರವಾಗಿ ಹೇಳಿ ಧರ್ಮಮಾರ್ಗದಿಂದ ಗಳಿಸಿದ ಸಂಪತ್ತೇ ಶಿವಲಿಂಗಾದಿ ಪೂಜೆಗೆ ಯೋಗ್ಯವೆಂದು ಸದಾಚಾರದ ಪರಿಚಯವನ್ನು ಬಹುಮಾರ್ಮಿಕವಾಗಿ ಮಾಡಿಕೊಟ್ಟಿದ್ದಾರೆ. ಸೂಕ್ಷ್ಮಾಗಮದಲ್ಲಿ -

ಯೇನ ಕೇನಾಪಿ ಮಾರ್ಗೇಣ। ಯೇನ ಕೇನ ಚ ಕರ್ಮಣಾ।
ಶಿವೈಕನಿಷ್ಠಮನಸೋ ಭಕ್ತಾಸ್ತೇ ಚೋತ್ತಮೋತ್ತಮಾಃ॥[೫]

ಉದ್ಯೋಗಗಳು ಬೇರೆ ಬೇರೆ ಆದರೂ, ಅವುಗಳನ್ನು ದೈವಸಾಕ್ಷಿಯಾಗಿ ಮಾಡಬೇಕು. ಹಾಗೆ ನಿಷ್ಠೆಯಿಂದ ಉದ್ಯೋಗ ಮಾಡುವವರು ಉತ್ತಮೋತ್ತಮ ಭಕ್ತರು ಎಂದು ವೃತ್ತಿ ಗೌರವವನ್ನು ವ್ಯಕ್ತಪಡಿಸಿದೆ. ಆದರೆ ಪಾರಮೇಶ್ವರಾಗಮವು ವೀರಶೈವನು ನೀಚವೃತ್ತಿಗಳನ್ನು ಕೈಗೊಳ್ಳಬಾರದು ಎಂದು ಎಚ್ಚರಿಸುತ್ತದೆ -

ದೀಕ್ಷಿತೋ ವೀರಶೈವಾನಾಂ ದೀಕ್ಷಾಯಾಂ ಧೃತಲಿಂಗಕಃ।
ನ ನೀಚಮಾಚರೇತ್ ಕರ್ಮ ನಾಯಾಸಂ ನಾಪಿ ಕುತ್ಸಿತಮ್।[೬]

ವೀರಶೈವನು ವೃತ್ತಿಗಳೆಂದು, ನೀಚವೃತ್ತಿಗಳನ್ನು ಕೈಗೊಳ್ಳಬಾರದು. ಅಂದರೆ ಚೋರಕರ್ಮ, ವಿಟಕರ್ಮ, ವೇಶ್ಯಾಕರ್ಮ ಇತ್ಯಾದಿಗಳನ್ನು ಮಾಡಬಾರದು. ಸಮಾಜದಲ್ಲಿ ಇವು ಹೀನ ವೃತ್ತಿಗಳೆಂದು ಪಾರಮೇಶ್ವರಾಗಮ ತಿಳಿಸುತ್ತದೆ. ಸಮಾಜದಲ್ಲಿರುವ ಇಂಥ ಹೀನ ವೃತ್ತಿಗಳನ್ನು ಕುತ್ಸಿತ ವೃತ್ತಿಗಳೆಂದು ಅದು ಕರೆಯುತ್ತದೆ. ಕಾರಣ ಲೋಕಕಂಟಕವಾದ, ಪರರ ಅಹಿತಕ್ಕೆ ಕಾರಣವಾದ ವೃತ್ತಿಗಳನ್ನು ವೀರಶೈವರು ಕೈಕೊಳ್ಳಕೂಡದೆಂದು ಎಚ್ಚರಿಸುತ್ತದೆ.

ಶುದ್ಧ ಕಾಯಕದಿಂದ ದೊರೆತ ಫಲವು ಕೇವಲ ಸ್ವಾರ್ಥಕ್ಕಾಗಿ ಬಳಕೆಯಾಗದೇ ಪರಹಿತಾರ್ಥವಾಗಿರಬೇಕು. ಪರರ ಹಿತದಲ್ಲಿಯೇ ಪರಮಾನಂದವನ್ನು ಪಡೆಯಬೇಕೆಂದು ಆಗಮಗಳು ಅರುಹುತ್ತವೆ. ಕಾರಣ ಮನೆಯಲ್ಲಿ ತಯಾರಿಸಿದ ಅನ್ನ-ಪಾನಾದಿಗಳನ್ನು ನಾವೇ ಸ್ವತಃ ತಿಂದು ಸಂತೋಷಪಡಕೂಡದು. ಅದನ್ನು ಇತರರಿಗೂ ಸಮರ್ಪಿಸಿ ತೃಪ್ತಿಪಡಿಸಬೇಕೆಂದು ಪಾರಮೇಶ್ವರಾಗಮವು-

---

೪. ಚೆನ್ನಬಸವಣ್ಣನವರ ವ.ಸಂಪುಟ. ಸಮಗ್ರ ವಚನಸಂಪುಟ ೩, ವ.ಸಂ.೧೫೪೪ ಪುಟ ೫೬೨
೫. ಸೂ.ಆ. ಪಟಲ ೯, ಶ್ಲೋಕ ಸಂಖ್ಯೆ ೧೨
೬ ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೬೭

ನಾತ್ಮಾರ್ಥಂ ಪಾಚಯೇದನ್ನಂ ನಾದ್ಯಾನ್ನಾತಿಥ್ಯರ್ನರ್ಪಿತಮ್।
ಶಕ್ತ್ಯಾ ಸಂಪೂಜಯೇಲ್ಲೋಕೇ ಜಂಗಮಂ ಗೃಹಮಾಗತಮ್ ॥[೭]

ವೀರಶೈವನು ತನಗೋಸ್ಕರ ಅನ್ನವನ್ನು ಬೇಯಿಸಬಾರದು. ಅತಿಥಿಗೆ ಅರ್ಪಿಸದೆ ಊಟ ಮಾಡಬಾರದು. ಶಕ್ತಿಗೆ ಅನುಗುಣವಾಗಿ ಮನೆಗೆ ಬಂದ ಜಂಗಮನಿಗೆ ಪೂಜೋಪಚಾರಗಳನ್ನು ಮಾಡಬೇಕು ಎಂದು ಆದೇಶಿಸಿದೆ. ಈ ಸಮರ್ಪಣೆಯ ಸತ್‌ಕ್ರಮವು ಕೇವಲ ಎಂದಾದರೊಂದು ದಿನಕ್ಕೆ ಸೀಮಿತಗೊಳ್ಳದೇ ದಿನನಿತ್ಯವೂ ಅತಿಥಿಗಳನ್ನು ಸತ್ಕರಿಸಬೇಕೆಂದು ಆಗಮಗಳು ವೀರಶೈವನ ದೈನಂದಿನ ಆಚರಣೆಯಲ್ಲಿ ಇದನ್ನು ಕಡ್ಡಾಯಗೊಳಿಸಿವೆ.

ಅಲ್ಲದೇ ಚಂದ್ರಜ್ಞಾನಾಗಮದಲ್ಲಿ ವೀರಶೈವನು ಧರ್ಮಮಾರ್ಗದಿಂದ ಸಂಪಾದಿಸಿದ ಹಣವನ್ನು ಗುರುವಿಗೆ ದಾನ ಮಾಡಬೇಕೆಂದು ವಿಧಿಸಿದೆ.

ತಸ್ಮಾದ್ಧನಾನಿ ರತ್ನಾನಿ ಕ್ಷೇತ್ರಾಣಿ ಚ ಗೃಹಾಣಿ ಚ।
ಭೂಷಣಾನಿ ಚ ವಾಸಾಂಸಿ ಯಾನಶಯ್ಯಾಸನಾನಿ ಚ ॥
ಏತಾನಿ ಗುರುವೇ ದದ್ಯಾದ್ ಭಕ್ತ್ಯಾ ವಿತ್ತಾನುಸಾರತಃ।
ವಿತ್ತಶಾಠ್ಯಂ ನ ಕುರ್ವೀತ ಯದೀಚ್ಛೇತ್ ಪರಮಾಂ ಗತಿಮ್॥[೮]

ವಿವಿಧ ಸಂಪತ್ತು, ರತ್ನಗಳು, ಕ್ಷೇತ್ರಗಳು, ಮನೆಗಳು, ಭೂಷಣಗಳು, ಬಟ್ಟೆ-ಬರೆಗಳು, ವಾಹನ, ಶಯನ ಸಾಮಗ್ರಿಗಳು ಮುಂತಾದವುಗಳನ್ನು ಭಕ್ತನು ತನ್ನ ಶಕ್ತ್ಯಾನುಸಾರ ಗುರುವಿಗೆ ದಾನಮಾಡಬೇಕು. ಪರಮಗತಿಯನ್ನು ಹೊಂದುವ ಇಚ್ಛೆಯಿದ್ದರೆ ಭಕ್ತನು ತನ್ನ ಸಂಪತ್ತಿನ ಬಗ್ಗೆ ವಂಚನೆ ಮಾಡಬಾರದು ಎಂದು ತಿಳಿಸುವುದರ ಜೊತೆಗೆ ಜಂಗಮರೂ ಸಹ ಭಕ್ತರಿಂದ ದೊರೆತ ಧನ-ಧಾನ್ಯ ವಸ್ತುಗಳನ್ನು ಎಂದೂ ಸಂಗ್ರಹ ಮಾಡಬಾರದು. ಸಂಗ್ರಹ ವೃತ್ತಿ ಸೂಕ್ತವಲ್ಲವೆಂದು ಸೂಕ್ಷ್ಮಾಗಮ ಸೂಚನೆ ನೀಡುತ್ತದೆ-

ನ ವಸ್ತುಸಂಗ್ರಹಂ ಕುರ್ಯಾದ್ಯತ್ರ ಕುತ್ರಾಪಿ ಜಂಗಮಃ ।
ದತ್ತಂ ದದ್ಯಾಚ್ಚ ಭಕ್ತೇಭ್ಯೋ । ದರಿದ್ರೇಭ್ಯೋ, ದಯಾನ್ವಿತಃ॥[೯]

ಸಮಾಜದಲ್ಲಿ ಜಂಗಮರು, ಸಂಗ್ರಹ ಪ್ರವೃತ್ತಿಗೆ ತೊಡಗಬಾರದು. ತಮಗೆ ಭಕ್ತರಿಂದ ಬಂದ ಧನವನ್ನು ಭಕ್ತರಿಗೂ, ಬಡವರಿಗೂ, ಅಸಹಾಯಕರಿಗೂ ಸಹಾಯ ಮಾಡಬೇಕೆಂಬುದನ್ನು ಸೂಚಿಸುತ್ತದೆ. ಕಾರಣ ಗುರುವಾಗಲಿ ಜಂಗಮನಾಗಲಿ ಅವರು ಸಮಾಜದ ಆರಾಧ್ಯದೇವತಾಸ್ವರೂಪರು. ಅವರಿಗೆ ಕೊಡುವ ದಾನವು ಸಮಾಜಕ್ಕೆ ಹಿತವನ್ನುಂಟು ಮಾಡಲು ಬಳಸಲಾಗುತ್ತದೆಯೆಂದು ಇಲ್ಲಿ ತಿಳಿಯಬೇಕು.

ಚಂದ್ರಜ್ಞಾನಾಗಮದ ಪ್ರಕಾರ ಸದಾಚಾರದಲ್ಲಿ ಅಷ್ಟವಿಧಶೀಲವಿರುತ್ತದೆ. ಅದರ ನಿರೂಪಣೆ ಈ ಬಗೆಯಾಗಿದೆ –

---

೭. ಪಾ.ಆ. ಪಟಲ ೭, ಶ್ಲೋಕ ಸಂಖ್ಯೆ ೪೧

೮. ಚಂ.ಆ. ಕ್ರಿಪಾ. ಪಟಲ ೨ ಶ್ಲೋಕ ಸಂಖ್ಯೆ ೭೦-೭೧

೯. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೭೨

ಅಂಕುರಂ ಪ್ರಥಮಂ ಜ್ಞೇಯಮುತ್ಪನ್ನಂ ಚ ದ್ವಿತೀಯಕಮ್।
ದ್ವಿದಲಂ ಚ ತೃತೀಯಂ ಸ್ಯಾತ್ ಪ್ರವೃದ್ಧಂ ಚ ಚತುರ್ಥಕಮ್॥
ಸಪ್ರಕಾಂಡಂ ಪಂಚಮಂ ಸ್ಯಾತ್ ಸಶಾಖಂ ಷಷ್ಠಮುಚ್ಯತೇ॥
ಸಪುಷ್ಪಂ ಸಪ್ತಮಂ ಜ್ಞೇಯಂ ಸಫಲಂ ಚಾಷ್ಟಮಂ ಭವೇತ್॥
ಸದಾಚಾರೋಽಷ್ಟಶೀಲಾಢ್ಯಃ ಸೇವಿತಃ ಕಲ್ಪಪಾದಪಃ।
ಸದ್ಭಕ್ತಾನಾಂ ಸುಮನಸಾಂ ದದಾತೀಷ್ಟಫಲಂ ಮಹತ್॥[೧೦]

ಅಂದರೆ ಸದಾಚಾರದಲ್ಲಿ ಅಂಕುರ, ಉತ್ಪನ್ನ, ದ್ವಿದಲ, ಪ್ರವೃದ್ಧ, ಸಪ್ರಕಾಂಡ, ಸಶಾಖ, ಸಪುಷ್ಪ ಮತ್ತು ಸಫಲವೆಂಬ ಎಂಟು ಶೀಲಗಳಿರುತ್ತವೆ. ಅಂಕುರಾದಿ ಅಷ್ಟಶೀಲಗಳ ವಿವರಣೆ ಹೀಗಿದೆ

೧) ಶ್ರೀಗುರುವಿನ ಅನುಗ್ರಹದಿಂದ ಪ್ರಾಪ್ತವಾದ ವೇಧಾದೀಕ್ಷೆ, ಮಂತ್ರದೀಕ್ಷೆ ಮತ್ತು ಕ್ರಿಯಾದೀಕ್ಷೆಗಳಿಂದ ಕ್ರಮವಾಗಿ ಯೋಗಾಂಗ-ಭೋಗಾಂಗ-ತ್ಯಾಗಾಂಗಳೆಂಬ ಪರ್ಯಾಯ ನಾಮಗಳುಳ್ಳ ಕಾರಣ-ಸೂಕ್ಷ್ಮ-ಸ್ಥೂಲಗಳೆಂಬ ಮೂರು ಶರೀರಗಳನ್ನು ಶುದ್ಧಿಗೊಳಿಸಿದ ಕಾರಣದಿಂದ ತನ್ನನ್ನು ಅಪ್ರಾಕೃತನೆಂದು ತಿಳಿದು, ಶ್ರೀಗುರುವಿನ ಉಪದೇಶದಂತೆ ಪ್ರತಿನಿತ್ಯವೂ ತನ್ನ ಇಷ್ಟಲಿಂಗದ ಪೂಜಾದಿಗಳನ್ನು ಮಾಡುವುದೇ 'ಅಂಕುರಶೀಲ' ವೆನಿಸಿದೆ. ಸದಾಚಾರದಲ್ಲಿ ನಿರತನಾದವನಿಗೆ ಈ ಸ್ಥಿತಿಯು ಮೊದಲನೆಯದಾದ ಕಾರಣ ಇದನ್ನು ಅಂಕುರಶೀಲವೆಂದು ಕರೆಯಲಾಗಿದೆ.[೧೧]

೨) ತಾನು ದೀಕ್ಷೆಯಿಂದ ಪರಿಶುದ್ಧನಾದಂತೆ ಹೆಂಡತಿ, ಮಗ, ಮೊಮ್ಮಕ್ಕಳನ್ನು ಸಹ ತಮ್ಮ ಕುಲಗುರುವಿನ ಮೂಲಕ ದೀಕ್ಷಾಸಂಸ್ಕಾರದಿಂದ ಶುದ್ಧಿಗೊಳಿಸುವುದು, ದೀಕ್ಷಾಸಂಸ್ಕಾರದಿಂದ ಪಾವನರಾದ ಪತ್ನಿ-ಪುತ್ರ-ಪೌತ್ರಾದಿಗಳೊಂದಿಗೆ ವಾಸಿಸುವುದು 'ಉತ್ಪನ್ನಶೀಲ'ವೆನಿಸಿದೆ.[೧೨]

೩) ಯಾವಾಗಲೂ ಶರೀರದ ಮೇಲೆ ಧರಿಸಲೇಬೇಕಾಗಿರುವ ಇಷ್ಟಲಿಂಗ, ಭಸ್ಮ, ರುದ್ರಾಕ್ಷಾದಿ ವೀರಶೈವರ ಲಾಂಛನಗಳನ್ನು ಎಚ್ಚರಿಕೆಯಿಂದ ಎಲ್ಲ ಸಂದರ್ಭದಲ್ಲಿಯೂ ಧಾರಣೆಮಾಡುವು 'ದ್ವಿದಲಶೀಲ'.[೧೩]

೪) ಶಿವನ ಮಹಾತ್ಮೆಯನ್ನು ಪ್ರತಿದಿನವು ಶ್ರವಣ ಮಾಡುವುದು, ಶ್ರವಣ ಮಾಡಿದ ಶಿವಮಹಾತ್ಮೆಯನ್ನು ಸದಾ ಮನಸ್ಸಿನಲ್ಲಿ ಮನನ -ನಿದಿಧ್ಯಾಸ ಮಾಡುವುದು ಹಾಗೂ ಶಿವತತ್ವದಲ್ಲಿ ಅಚಲ ಶ್ರದ್ಧೆಯನ್ನಿಟ್ಟಿರುವದೇ 'ಪ್ರವೃದ್ಧಶೀಲ' ವೆನಿಸಿದೆ. ಈ ಬಗೆಯ ಮನನಾದಿಗಳು ಶಿವನ ವಿಷಯದಲ್ಲಿನ ಭಕ್ತಿಯು ವೃದ್ಧಿಯಾಗಲು ಸಹಾಯಕವಾಗುತ್ತದೆ ಎನ್ನುವ ಕಾರಣದಿಂದ 'ಪ್ರವೃದ್ಧಶೀಲ'ವೆಂಬ ಹೆಸರು ಬಂದಿರುತ್ತದೆ.[೧೪]

---

೧೦. ಚಂ.ಆ. ಕ್ರಿಪಾ. ಪಟಲ ೯ ಶ್ಲೋಕ ಸಂಖ್ಯೆ ೨೦-೨೨
೧೧. ಚಂ.ಆ. ಕ್ರಿಪಾ. ಪಟಲ ೯ ಶ್ಲೋಕ ಸಂಖ್ಯೆ ೨೩
೧೨. ಚಂ.ಆ. ಕ್ರಿಪಾ. ಪಟಲ ೯ ಶ್ಲೋಕ ಸಂಖ್ಯೆ ೨೪
೧೩. ಚಂ.ಆ. ಕ್ರಿಪಾ. ಪಟಲ ೯ ಶ್ಲೋಕ ಸಂಖ್ಯೆ ೨೫
೧೪. ಚಂ.ಆ. ಕ್ರಿಪಾ. ಪಟಲ ೯ ಶ್ಲೋಕ ಸಂಖ್ಯೆ ೨೬

೫) ವೀರಶೈವರ ನಿತ್ಯಕರ್ಮವಾದ ಇಷ್ಟಲಿಂಗ ಪೂಜೆ ಇಲ್ಲದೆ ಅನ್ನ[೧೫]-ಪಾನಾದಿಗಳನ್ನು ಸ್ವೀಕಾರಮಾಡದಿರುವುದು 'ಸಪ್ರಕಾಂಡಶೀಲ' ವೆನಿಸುತ್ತದೆ.

೬) ಇಷ್ಟಲಿಂಗಕ್ಕೆ ನೈವೇದ್ಯ ಮಾಡದಿರುವ ಭಕ್ಷ್ಯ-ಭೋಜ್ಯಾದಿಗಳನ್ನು ಸ್ವೀಕಾರ ಮಾಡದಿರುವುದು 'ಸಶಾಖಶೀಲ'ವೆನಿಸಿದೆ. ಆದುದರಿಂದ ವೀರಶೈವರು ಯಾವಾಗಲೂ[೧೬] ಇಷ್ಟಲಿಂಗಕ್ಕೆ ನೈವೇದ್ಯ ಮಾಡಿದ ಪದಾರ್ಥಗಳನ್ನು ಮಾತ್ರ ಸ್ವೀಕರಿಸಬೇಕು.

೭) ಇಷ್ಟಲಿಂಗಕ್ಕೆ ಅರ್ಪಿತವಾದ ಪ್ರಸಾದ ರೂಪವಾದ ಭಕ್ಷ್ಯಾದಿ ಪದಾರ್ಥಗಳನ್ನು ತ್ಯಾಗಮಾಡದಿರುವುದು 'ಸಪುಷ್ಪಶೀಲ'ವೆನಿಸುತ್ತದೆ. ಇಷ್ಟಲಿಂಗದ ವಿಷಯದಲ್ಲಿ ನಿಷ್ಠರಾದ ಭಕ್ತರು ಶಿ[೧೭]ವಪ್ರಸಾದವನ್ನು ಎಂದಿಗೂ ತಿರಸ್ಕಾರಮಾಡಬಾರದೆಂಬುದು ಇದರ ತಾತ್ಪರ್ಯ.

೮) ವೀರಶೈವ ಸಿದ್ಧಾಂತದಲ್ಲಿ ಪೂಜಾರ್ಹವಾದವುಗಳೆಂದು ಅಂಗೀಕರಿಸಿರುವ ಗುರು-ಲಿಂಗ-ಜಂಗಮದ ವಿಷಯದಲ್ಲಿ ಭೇದವನ್ನು ಮಾಡದೆ ಮೂರನ್ನೂ[೧೮] ಸಹ ಶಿವನ ಸ್ವರೂಪವೆಂಬ ಭಾವನೆಯಿಂದ ಪೂಜಿಸುವುದೇ 'ಸಫಲ ಶೀಲ'

ಹೀಗೆ ಅಷ್ಟಶೀಲವುಳ್ಳ ಸದಾಚಾರವು ಕಲ್ಪವೃಕ್ಷವಾಗಿದ್ದು, ಸದ್ಭಕ್ತರಿಗೆ ಮನೋವಾಂಛಿತ ಫಲವೂ ಹಾಗೂ ಶಿವಾನುಗ್ರಹವೂ ಪ್ರಾಪ್ತವಾಗುತ್ತದೆ ಎಂದು ಆಗಮಗಳು ಅರುಹುತ್ತವೆ.

ಒಟ್ಟಿನಲ್ಲಿ ಸದಾಚಾರವು ಎರಡು ಪ್ರಮುಖವಾದ ಸಂಗತಿಗಳನ್ನು ಒಳಗೊಂಡಿದ್ದು, ಮೊದಲನೇಯದು ಸತ್ಯಶುದ್ಧವಾದ ವೃತ್ತಿಯಿಂದಲೇ ಜೀವನವನ್ನು ನಿರ್ವಹಿಸಬೇಕು ಎಂಬುವದು, ಎರಡನೇಯದು ಅತಿಥಿಗಳನ್ನು ಸಾಕ್ಷಾತ್ ಶಿವಸ್ವರೂಪರೆಂದು ಭಾವಿಸಿ ಅವರ ಸೇವೆಗೈದು ಅವರನ್ನು ಸಂತೃಪ್ತಿಗೊಳಿಸಬೇಕೆಂಬುದಾಗಿದೆ. ಶಿವಾಗಮದಲ್ಲಿ ಪ್ರತಿಪಾದಿಸಲಾದ ಸದಾಚಾರದ ಈ ಅರ್ಥವಿಶ್ಲೇಷಣೆಯನ್ನೇ ವಚನ ಸಾಹಿತ್ಯವೂ ಅಂಗೀಕರಿಸಿದ್ದರಿಂದ ಸದಾಚಾರದ ವಿಷಯ ಪ್ರತಿಪಾದನೆಯಲ್ಲಿ ಶಿವಾಗಮ ಮತ್ತು ವಚನ ಸಾಹಿತ್ಯದಲ್ಲಿ ಸಾಮ್ಯತೆಯನ್ನು ಕಾಣಬಹುದಾಗಿದೆ. ಮತ್ತು ಸತ್ಯಶುದ್ಧವಾದ ವೃತ್ತಿಯು ವಚನದಲ್ಲಿ ಕಾಯಕವೆಂದು ಅತೀ ಸತ್ವಯುತವಾಗಿ ಪ್ರತಿಪಾದನೆಗೊಂಡಿದೆ. ಆದರೆ ಶಿವಾಗಮದಲ್ಲಿ ಸದಾಚಾರದ ಅಂತರ್ಗತವಾಗಿ ಪ್ರತಿಪಾದನೆಗೊಂಡ ಅಂಕುರ, ಉತ್ಪನ್ನ, ದ್ವಿದಲ, ಪ್ರವೃದ್ಧ, ಸಪ್ರಕಾಂಡ, ಸಶಾಖ, ಸಪುಷ್ಪ ಮತ್ತು ಸಫಲವೆಂಬ ಎಂಟು ಶೀಲಗಳು ವಚನಗಳಲ್ಲಿ ಪ್ರತಿಪಾದನೆಗೊಂಡಿಲ್ಲ. ಆದರೆ ಚೆನ್ನಬಸವಣ್ಣನವರ ಒಂದು ವಚನದಲ್ಲಿಯ ಐವತ್ತು ಬಗೆಯ ಶೀಲಗಳಲ್ಲಿ 'ಉತ್ಪನ್ನಶೀಲ'ವನ್ನು ಹೊರತುಪಡಿಸಿ ಉಳಿದವುಗಳು ಉಲ್ಲೇಖಗೊಂಡಿವೆ.

---

೧೫. ಚಂ.ಆ. ಕ್ರಿಪಾ. ಪಟಲ ೯ ಶ್ಲೋಕ ಸಂಖ್ಯೆ ೨೭

೧೬. ಚಂ.ಆ. ಕ್ರಿಪಾ. ಪಟಲ ೯ ಶ್ಲೋಕ ಸಂಖ್ಯೆ ೨೮

೧೭. ಚಂ.ಆ. ಕ್ರಿಪಾ. ಪಟಲ ೨ ಶ್ಲೋಕ ಸಂಖ್ಯೆ ೨೯

೧೮. ಚಂ.ಆ. ಕ್ರಿಪಾ. ಪಟಲ ೨ ಶ್ಲೋಕ ಸಂಖ್ಯೆ ೩೦

೫.೨.೩ ಶಿವಾಚಾರ

ಶಿವಭಕ್ತಿಪಾರಮ್ಯವನ್ನು ಅಂಗೀಕರಿಸಿ, ಶಿವನೇ ಪರಬ್ರಹ್ಮನು, ಜಗನ್ನಿಯಾಮಕನು, ಸಕಲ ಚರಾಚರ ಜಗತ್ತನ್ನೆಲ್ಲಾ ಪರಶಿವನೇ ವ್ಯಾಪಿಸಿರುವನು, ಈ ಜಗತ್ತೆಲ್ಲ ಅವನ ಪ್ರಸಾದವೆಂದು ತಿಳಿದು ಶಿವಲಾಂಛನಧಾರಿಗಳೆಲ್ಲ ಸಾಕ್ಷಾತ್ ಶಿವಸ್ವರೂಪರೆಂದು ತಿಳಿದು ಸಮಭಾವದಿಂದ ಸರ್ವರನ್ನು ಕಾಣುವುದೇ ಶಿವಾಚಾರವಾಗಿದೆ.

ಶಿವಾಚಾರದ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅವುಗಳ ವಿವೇಚನೆ ಇಂತಿದೆ –

ಶಿವಾಚಾರದ ಅರ್ಥವಿಶ್ಲೇಷಣೆ –

ಶಿವ ಏವ ಪರಂ ಬ್ರಹ್ಮ ಪಂಚಕೃತ್ಯಪರಾಯಣಮ್।
ನ ತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ॥[೧]

ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹವೆಂಬ ಐದು ಕೃತ್ಯಗಳಿಂದ ಕೂಡಿದ ಶಿವನೇ ಪರಬ್ರಹ್ಮನಾಗಿದ್ದು ಅವನನ್ನುಳಿದು ಬೇರೆ ಗತಿಯಿಲ್ಲವೆಂದು ಭಾವಿಸಿ ನಡೆಯುವುದೇ ಶಿವಾಚಾರವೆಂದು ಚಂದ್ರಜ್ಞಾನಾಗಮವು ವ್ಯಾಖ್ಯಾನಿಸುತ್ತದೆ. ಶಿವನೇ ಸರ್ವಸ್ವನೆಂದು ಪರಿಭಾವಿಸಿ, ಅನನ್ಯಭಕ್ತಿಯಿಂದ ಸಂಪೂರ್ಣವಾಗಿ ಶಿವನಿಗೆ ಶರಣಾಗತನಾಗುವುದರಿಂದ ಭಕ್ತನಲ್ಲಿ ಶಿವಭಾವವು ದೃಢವಾಗುತ್ತದೆ ಮತ್ತು ಎಲ್ಲೆಡೆಯೂ ಶಿವದೃಷ್ಟಿಯುಂಟಾಗುತ್ತದೆ. ಸೂಕ್ಷ್ಮಾಗಮವು ಹೇಳುವಂತೆ –

ಸರ್ವಂ ಶಿವಮಯಂ ಪಶ್ಯೇದನ್ಯಬಾವೋ ನ ವಿದ್ಯತೇ।
ಲಿಂಗಾಂಗಸಂಬಂಧಪದಾರ್ಥಜ್ಞಾನಂ ಮೋಕ್ಷಸಾಧನಮ್॥[೨]

ವೀರಶೈವನು ಈ ಜಗತ್ತನ್ನು ಶಿವಮಯವೆಂದು ತಿಳಿಯಬೇಕು. ಬೇರೆ ಭಾವದಿಂದಲ್ಲ. ಲಿಂಗಾಂಗ ಸಂಬಂಧವಾದ ಲಿಂಗಾಂಗ ಸಾಮರಸ್ಯದ ಜ್ಞಾನವೇ ಮೋಕ್ಷಸಾಧನವಾಗುತ್ತದೆ ಎಂಬಂತೆ 'ಸರ್ವಂ ಶಿವಮಯಂ ಜಗತ್' ಎಂದು ಪರಿಭಾವಿಸುವುದರಿಂದ ಎಲ್ಲೆಲ್ಲಿಯೂ, ಎಲ್ಲರಲ್ಲಿಯೂ ಶಿವಸ್ವರೂಪವನ್ನೆ ಕಂಡು ಶಿವನೇ ಸರ್ವೋತ್ತಮ ಎಂಬ ಭಾವನೆಯುಳ್ಳವನಾಗಿ ತಾನು ಶಿವಸ್ವರೂಪನೆಂಬುದು ಮಾತ್ರವಲ್ಲ; ಸಚರಾಚರ ಜಗತ್ತನ್ನೆಲ್ಲಾ ಅವನ ಪ್ರಸಾದ; ಅವನ ಪ್ರತೀಕ; ಅವನ ಪ್ರಭೆ ಎಂದು ಪರಿಭಾವಿಸತೊಡಗುತ್ತಾನೆ. ಇದರಿಂದ ಸಂಕುಚಿತ ಮನೋಭಾವನೆಯು ನಾಶವಾಗಿ, ಸಾಮಾಜಿಕವಾದ ಮೇಲು ಕೀಳುಗಳೂ ತಾರತಮ್ಯಗಳೂ ಇಲ್ಲವಾಗುತ್ತವೆ. ಸಾಮಾಜಿಕ ಸಮಾನತೆ ಸಂಪೂರ್ಣವಾಗಿ ಸಾಧಿತವಾಗಬೇಕಾದರೆ ಅದು ಕೇವಲ ಬೌದ್ಧಿಕ ನಿರೂಪಣೆಗಳಿಂದ ಪ್ರತಿಪಾದನೆಗಳಿಂದ ಆಗಲಾರದು. ವೈಯಕ್ತಿಕವಾದ ವಿಕಾಸದಿಂದ ಅದು ನಡೆನುಡಿಗಳಲ್ಲಿ ಅಳವಡಬೇಕು; ಆಧ್ಯಾತ್ಮಿಕವಾದ ಅನುಭವದ

---

೧. ಚಂ.ಆ.ಕ್ರಿಪಾ. ಪಟಲ ೯.ಶ್ಲೋಕ ಸಂಖ್ಯೆ ೭

೨. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೮೫

ಆಧಾರದ ಮೇಲೆ ಬೆಳೆದು ಬರಬೇಕು. ಎಲ್ಲರಲ್ಲೂ ಶಿವನ ಅಂಶವನ್ನೇ ಕಂಡ ಶರಣರು–

ಶ್ವಪಚನಾದರೇನು? ಲಿಂಗಭಕ್ತನೇ ಕುಲಜನು
ನಂಬಿ ನಂಬದಿದ್ದರೆ ಸಂದೇಹಿ ನೋಡಾ!
ಕಟ್ಟಿದರೇನು, ಮುಟ್ಟಿದರೇನು, ಪೂಸಿದರೇನು
ಮನಮುಟ್ಟದನ್ನಕ್ಕ?
ಭಾವ ಶುದ್ಧವಿಲ್ಲದವರಿಗೆ ಭಕ್ತಿ ನೊಲೆಗೊಳ್ಳದು
ಕೂಡಲಸಂಗಯ್ಯನೊಲಿದಂಗಲ್ಲದೆ.

ಎನ್ನುತ್ತಾರೆ ಬಸವಣ್ಣನವರು. ಭಾವಶುದ್ಧಿಯಿಂದ ಭಕ್ತಿನೆಲೆಗೊಂಡು ಶಿವನ ಕರುಣೆಯನ್ನು ಪಡೆದವರೆಲ್ಲರೂ ಶಿವಸ್ವರೂಪರು. 'ಅವರ ನಡೆಯೊಂದು ನುಡಿಯೊಂದಾದರೆ ಶಿವಾಚಾರಕ್ಕವರು ಸಲ್ಲರು.'

ಶಿವಾಚಾರವೆಂಬುದು ಬಾಳ ಬಾಯ ಧಾರೆ;
ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು,
ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು !
ಬಿಚ್ಚಿಬೇರಾದರೆ ಮೆಚ್ಚುವನೆ ನಮ್ಮ ಕೂಡಲಸಂಗಮದೇವಾ?

ಎಂಬ ಮಾತಿನಲ್ಲಿ ಬಸವಣ್ಣನವರು ಶಿವಾಚಾರದ ರಹಸ್ಯವನ್ನು ಹೇಳಿದ್ದಾರೆ. ಲಿಂಗ ಜಂಗಮ ಮೆಚ್ಚುವಂತೆ ನಡೆದು, ಪ್ರಸಾದವನ್ನು ಸ್ವಾಯತ ಮಾಡಿಕೊಂಡವರೇ ಶಿವಾಚಾರಿಗಳು. ಅವರು ಸಾಕ್ಷಾತ್ ಶಿವಸ್ವರೂಪರು; ಎಲ್ಲೆಲ್ಲಿಯೂ ಶಿವಸ್ವರೂಪವನ್ನೇ ಕಾಣಬಲ್ಲ ಶಿವಯೋಗಿಗಳು. ಕಾರಣ ಆಗಮಗಳು ಅತಿವರ್ಣಾಶ್ರಮ ಧರ್ಮವೆಂದು ಪ್ರಖ್ಯಾತವಾದ ವೀರಶೈವದಲ್ಲಿ ಲಿಂಗದೀಕ್ಷಾ ಪವಿತ್ರನಾದ ವ್ಯಕ್ತಿಯಲ್ಲಿ ಪೂರ್ವಾಶ್ರಮವನ್ನು ಪರಿಗಣಿಸಕೂಡದೆಂದು ತಿಳಿಸುತ್ತಾ–

ನ ಸ್ತ್ರಿಭೇದೋ ನ ಪುಂಭೇದೋ ಜಾತಿ–ವರ್ಣಾಶ್ರಮಾದಿಕಮ್
ಸರ್ವಾತೀತಮಿದಂ ವಿದ್ಧಿ ವೀರಶೈವಮತಂ ಮಮ ॥
ಯದನಾಯಾಸತೋ ದೇವಿ ಭೋಗಮೋಕ್ಷೌ ಕರಸ್ಥಿತೌ[೩]
ಧಾರಣಾನ್ಮಮ ಲಿಂಗಸ್ಯ ಪೂಜನಾಚ್ಚ ನಿರಂತರಮ್ ॥

ವೀರಶೈವ ಮತವು ಸರ್ವಾತೀತವಾದದ್ದು. ಏಕೆಂದರೆ, ಭೋಗ–ಮೋಕ್ಷಗಳನ್ನು ನೀಡುವ ಇಷ್ಟಲಿಂಗವನ್ನು ಧರಿಸುವುದರಿಂದ ಮತ್ತು ನಿರಂತರ ಪೂಜಿಸುವುದರಿಂದ ಸ್ತ್ರೀ–ಪುರುಷರೆಂಬ ಭೇದವಾಗಲೀ, ಜಾತಿ–ವರ್ಣ–ಆಶ್ರಮ ಮುಂತಾದ ಯಾವುದೇ ಭೇದಗಳಾಗಲೀ ವೀರಶೈವರಲ್ಲಿ ಇಲ್ಲ ಎಂದು ಸ್ಪಷ್ಟವಾಗಿ ನಿರ್ದೇಶಿಸಲಾಗಿದೆ.

---

೩. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೪೧ –೪೨

ಇದನ್ನೇ ವಚನಗಳಲ್ಲಿ 'ಪಟ್ಟವಕಟ್ಟಿದ ಬಳಿಕ ಲಕ್ಷಣವನರಸುವರೇ? ಆವಕುಲದವನಾದಡೇನು ಲಿಂಗವಿದ್ದವನೆ ಕುಲಜ...'[೪] ಎಂದು ಬಸವಣ್ಣನವರು ಶಿವಾಚಾರದ ಕಾವ್ಯಮಯ ನಿರೂಪಣೆ ಮಾಡಿದ್ದರೆ, ಅದನ್ನೇ ಚೆನ್ನಬಸವಣ್ಣನವರು ಶಾಸ್ತ್ರೀಯವಾಗಿ ಹೀಗೆ ನಿರ್ದೇಶಿಸಿದ್ದಾರೆ –

ಗುರುಮಾರ್ಗಾಚಾರದಲ್ಲಿ ನಿಂದ ಶಿವಲಾಂಛನಧಾರಿಗಳೆಲ್ಲಾ
ಪರಶಿವಲಿಂಗವೆಂದು ಭಾವಿಸಿ,
ಅರ್ಥ ಪ್ರಾಣಾಭಿಮಾನವನರ್ಪಿಸುವುದೇ ಶಿವಾಚಾರವೆಂಬೆನಯ್ಯಾ[೫]

ಎಂದು ಶಿವಾಚಾರದ ಬಗ್ಗೆ ನಿರೂಪಿಸಿದ್ದಾರೆ. ಇದೇ ಬಗೆಯಾದ ಅರ್ಥವಿಶ್ಲೇಷಣೆಯನ್ನು ಅಕ್ಕಮಹಾದೇವಿಯವರ ವಚನದಲ್ಲಿಯೂ ಕಾಣಬಹುದು.

ಶಿವಭಕ್ತರಾದ ಲಿಂಗಾಂಗಿಗಳಲ್ಲಿ ಪೂರ್ವದ ಜಾತಿಸೂತಕಾದಿಗಳನ್ನೂ
ವಿಚಾರಿಸದೆ ಅವರ ಮನೆಯಲ್ಲಿ ತಾ ಹೊಕ್ಕು
ಒಕ್ಕು ಮಿಕ್ಕ ಪ್ರಸಾದವ ಕೊಂಬುದೇ ಶಿವಾಚಾರ ನೋಡಯ್ಯ[೬]

ಎಂದಿದ್ದಾರೆ. 'ಹೊಲೆಯುಂಟೆ ಲಿಂಗವಿದ್ದೆಡೆ' ಎಂದು ಪ್ರಶ್ನಿಸುವ ಮೂಲಕ ಸಮಾಜದ ಮೇಲು-ಕೀಳು, ಉಚ್ಚ, ನೀಚ, ಎಂಬ ಭಾವನೆಯನ್ನು ತೊಡೆದು ಹಾಕಲು ಕಲ್ಯಾಣದಲ್ಲಿ ಕ್ರಾಂತಿಯನ್ನೆಸಗಿದ ಶಿವಶರಣರು ಸಮತಾವಾದದ ಹರಿಕಾರರೆನಿಸಿದರೂ ಶಿವಾಗಮಗಳ ವಿಶಾಲ ವಿಚಾರಸರಣಿಯಿಂದ ಪ್ರಭಾವಿತರಾಗಿರುವುದನ್ನು ಮರೆಯುವಂತಿಲ್ಲ. 'ಉದಾರಚರಿತಾನಾಂ ತು ವಸುದೈವ ಕುಟುಂಬಕಂ' ಎಂಬ ವಿಶ್ವಕುಟುಂಬ ಕಲ್ಪನೆಯ ಬೀಜವನ್ನು ಶಿವಾಚಾರದಲ್ಲಿಯೇ ಕಾಣುತ್ತೇವೆಂದರೆ ತಪ್ಪಾಗಲಾರದು.

ಭಾವಶುದ್ಧಿಯಾಗದೇ ಶಿವಾಚಾರವು ಸಂಭವಿಸುವುದಿಲ್ಲ ಎನ್ನುವ ಕಾರಣದಿಂದ ಭಾವಶುದ್ಧಿಗೋಸ್ಕರ ಭೋಗ್ಯವಸ್ತುಗಳ ಶುದ್ಧಿಯು ಅವಶ್ಯಕ. ಆದುದರಿಂದ ಶಿವಾಚಾರದಲ್ಲಿ ದ್ರವ್ಯ, ಕ್ಷೇತ್ರ, ಗೃಹ ಮೊದಲಾದ ಹದಿನಾರು ಪದಾರ್ಥಗಳನ್ನು ಶಾಸ್ತ್ರೋಕ್ತವಿಧಿಯಿಂದ ಶುದ್ಧಗೊಳಿಸುವ ಪ್ರಕ್ರಿಯೆಯನ್ನು ಚಂದ್ರಜ್ಞಾನಾಗಮವು ನಿರೂಪಿಸುತ್ತದೆ.

ದ್ರವ್ಯಕ್ಷೇತ್ರಗೃಹಾದೀನಾಂ ಷೋಡಶಾನಾಂ ವಿಶೋಧನಮ್।
ಶಿವಶಾಸ್ತ್ರೋಕ್ತಮಾರ್ಗೇಣ ಶಿವಾಚಾರ ಇತಿ ಸ್ಮೃತಃ॥[೭]

ಆ ಷೋಡಶಶುದ್ಧಿಗಳು ಈ ರೀತಿಯಾಗಿವೆ: ೧. ದ್ರವ್ಯಶುದ್ಧಿ ೨. ಕ್ಷೇತ್ರಶುದ್ಧಿ **೩. ಗೃಹಶುದ್ಧಿ ೪. ಭಾಂಡಶುದ್ಧಿ ೫. ತೃಣಶುದ್ಧಿ ೬. ಕಾಷ್ಠಶುದ್ಧಿ ೭. ಏಟಿಕಾಶುದ್ಧಿ ೮. ಪಾಕಶುದ್ಧಿ ೯. ರಸಶುದ್ಧಿ ೧೦. ಭವಶುದ್ಧಿ ೧೧. ಭೂತಶುದ್ಧಿ ೧೨. ಭಾವಶುದ್ಧಿ**

---

೪. ಬಸವಣ್ಣನವರ ವ.ಸಂಪುಟ. ಸಮಗ್ರ ವಚನಸಂಪುಟ ೧, ವಚನ ಸಂಖ್ಯೆ ೧೩೮. ಪು.೩೭
೫. ಚೆನ್ನಬಸವಣ್ಣನವರ ವ.ಸಂಪುಟ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೯೩೦. ಪು.೨೯೩
೬. ಶಿವಶರಣೆಯರ ವ.ಸಂ. ಸಮಗ್ರ ವಚನ ಸಂಪುಟ ೫, ವ.ಸಂ ೩೧೪. ಪು.೯೪
೭ ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೩೨

೧೩. ಮಾರ್ಗಶುದ್ಧಿ ೧೪. ಕಾಲಶುದ್ಧಿ ೧೫. ವಾಕ್‌ಶುದ್ಧಿ ಮತ್ತು ೧೬. ಜನಶುದ್ಧಿ

ಇವುಗಳ ಲಕ್ಷಣವನ್ನು ಚಂದ್ರಜ್ಞಾನಾಗಮವು ಈ ರೀತಿಯಾಗಿ ವಿವರಿಸಿದೆ –

೧. **ದ್ರವ್ಯಶುದ್ಧಿ** – ಶಿವಭಕ್ತನಿಂದ ಪ್ರಾಪ್ತವಾಗುವ ಫಲ–ಮೂಲಾದಿಗಳ ಸ್ವೀಕಾರ ಅಥವಾ ಬೇರೆಯವರಿಂದ ಪ್ರಾಪ್ತವಾಗುವ ಫಲ–ಮೂಲಾದಿಗಳನ್ನು ಮಂತ್ರ ಸಹಿತವಾಗಿ ಭಸ್ಮವನ್ನು ಪ್ರೋಕ್ಷಣೆ ಮಾಡುತ್ತಾ ಶುದ್ಧಿಗೊಳಿಸುವುದು ದ್ರವ್ಯಶುದ್ಧಿ.[೮]

೨. **ಕ್ಷೇತ್ರಶುದ್ಧಿ** – ಭೂಮಿಯ ನಾಲ್ಕೂ ಮೂಲೆಗಳಲ್ಲಿ ನಂದಿಯ ಮುದ್ರೆಯುಳ್ಳ ಶಿಲಾನ್ಯಾಸ ಮಾಡುವುದು ಕ್ಷೇತ್ರಶುದ್ಧಿ.[೯]

೩. **ಗೃಹಶುದ್ಧಿ** – ಶಿವಭಕ್ತರಿಂದ ನಿರ್ಮಿತವಾದ ಅಥವಾ ಮಹಾದ್ವಾರದಲ್ಲಿ ಶಿವಲಿಂಗದ ಚಿಹ್ನೆಯುಳ್ಳ ಮನೆಯನ್ನು ಪಡೆಯುವುದು[೧೦] ಹಾಗೂ ಶಿವಲಿಂಗಾಂಕಿತವಾದ ಮನೆಯಲ್ಲಿ ವಾಸಿಸುವುದೇ ಗೃಹಶುದ್ಧಿ.

೪. **ಭಾಂಡಶುದ್ಧಿ** – ಶಿವಭಕ್ತರಿಂದ ನಿರ್ಮಿತವಾದ ಅಥವಾ ಶಿವ[೧೧]ಲಿಂಗದ ಚಿಹ್ನೆಯುಳ್ಳ ಪಾತ್ರೆಯ ಸ್ವೀಕಾರ ಹಾಗೂ ಬಳಕೆಯೇ ಭಾಂಡಶುದ್ಧಿ.

೫. **ಕಾಷ್ಠಶುದ್ಧಿ** – ಶಿವಭಕ್ತನಿಂದ ತರಲ್ಪಟ್ಟ ಕಟ್ಟಿಗೆಯನ್ನು ಅಥವಾ ವಿಭೂತಿಯಿ[೧೨]ಂದ ಸಂಸ್ಕರಿಸಲ್ಪಟ್ಟ ಕಟ್ಟಿಗೆಗಳನ್ನು ಮಾತ್ರ ಉಪಯೋಗಿಸುವುದೇ ಕಾಷ್ಠಶುದ್ಧಿ.

೬. **ತೃಣಶುದ್ಧಿ** – ಶಿವಭಕ್ತನು ತಂದಂತಹ ಹುಲ್ಲನ್ನು ಸ್ವೀಕರಿಸುವದು ಅಥವಾ ಬೇರೆಯವರು[೧೩] ತಂದ ಹುಲ್ಲನ್ನು ಭಸ್ಮ ಪ್ರೋಕ್ಷಣೆಯಿಂದ ಶುದ್ಧಿಗೊಳಿಸುವುದು ತೃಣಶುದ್ಧಿ.

೭. **ವೀಟಿಕಾಶುದ್ಧಿ** – ಶಿವಭಕ್ತರು ಸಿದ್ಧಗೊಳಿಸಿದ ತಾಂಬೂಲವನ್ನು ಅಥವಾ ಭಸ್ಮದಿಂದ ಸಂಸ್ಕರಿಸಲ್ಪಟ್ಟ ವೀಳೆಯ ಎಲೆ, ಅಡಿಕೆ ಮತ್ತು[೧೪] ಸುಣ್ಣದಿಂದ ಕೂಡಿದ ತಾಂಬೂಲವನ್ನು ಸೇವಿಸುವುದೇ ವೀಟಿಕಾಶುದ್ಧಿ.

೮. **ಪಾಕಶುದ್ಧಿ** – ಶಿವದೀಕ್ಷಾ ಸಂಪನ್ನರಿಂದ ಬೇಯಿಸಿದ, ಶಿವ[೧೫]ಭಕ್ತರಲ್ಲದವರು ನೋಡದಿರುವ ಭಕ್ಷ್ಯ–ಭೋಜ್ಯಗಳ ಸ್ವೀಕಾರವು ಪಾಕಶುದ್ಧಿ.

೯. **ರಸಶುದ್ಧಿ** – ಎಮ್ಮೆ, ಕುರಿ, ಆಡು ಮೊದಲಾದ ಪ್ರಾಣಿಗಳ ಹಾಲು, ಮೊಸರು, ಮಜ್ಜಿಗೆ, ತುಪ್ಪ ಮೊದಲಾದವುಗಳನ್ನು ತ್ಯಜಿಸಿ ಸದಾ ಹಸುವಿನ ಉತ್ಪನ್ನಗಳನ್ನು

---

೮. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೩೩
೯. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೩೪
೧೦. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೩೫
೧೧. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೩೬
೧೨. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೩೭
೧೩. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೩೮
೧೪. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೩೯–೪೦
೧೫. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೪೧

ಮಾತ್ರ ಸ್ವೀಕಾರ ಮಾಡುವುದು ರಸಶುದ್ಧಿ.[೧೬]

೧೦. **ಭವಶುದ್ಧಿ** – ಕಾಮ್ಯಕರ್ಮಗಳ ತ್ಯಾಗದಿಂದ ನಿಷ್ಕಾಮಕರ್ಮದ ಮೂಲಕ ಅಂತಃಕರಣದ ನಿರ್ಮಲತ್ವವನ್ನು ಪಡೆದು ತತ್ತ್ವಜ್ಞಾನದ ಪ್ರಾಪ್ತಿಯಿಂದ ಪುನರ್ಜನ್ಮವಿಲ್ಲದಿರುವಿಕೆಯ ಸ್ಥಿತಿಯ ಸಂಪಾದನೆಯೇ ಭವಶುದ್ಧಿ.[೧೭]

೧೧. **ಭೂತಶುದ್ಧಿ**– ಸಕಲ ಪ್ರಾಣಿಗಳಲ್ಲಿ ದಯಾ ಮನೋಭಾವನೆಯನ್ನು ಹೊಂದಿ, ಪಂಚಭೂತಗಳಿಂದಾದ ಪದಾರ್ಥಗಳಿಗೆ ಸಂಸ್ಕಾರವನ್ನು ನೀಡಿ, ಪಂಚಮಹಾ ಭೂತಗಳಲ್ಲಿ ದೋಷಗಳನ್ನು ನಿವಾರಿಸುವುದೇ ಭೂತಶುದ್ಧಿಯಾಗಿದೆ.[೧೮]

೧೨. **ಭಾವಶುದ್ಧಿ** – ಎಲ್ಲ ಆಸೆಗಳನ್ನು, ಬಯಕೆಗಳನ್ನು ದೂರಮಾಡಿ ಮನಸ್ಸಿನಲ್ಲಿ ಸರ್ವದಾ ಶಿವಭಾವನೆಯಿಂದ ಕೂಡಿಕೊಳ್ಳುವುದೇ ಭಾವಶುದ್ಧಿ.[೧೯]

೧೩. **ಮಾರ್ಗಶುದ್ಧಿ**– ಮಾರ್ಗದಲ್ಲಿಯ ಇರುವೆ ಮೊದಲಾದ ಕ್ಷುದ್ರ ಕ್ರಿಮಿಗಳಿಗೆ ಪಾದಗಳಿಂದ ಹಿಂಸೆಯಾಗದಂತೆ ಎಚ್ಚರಿಕೆಯಿಂದ ಸಾವಧಾನವಾಗಿ ಸಂಚರಿಸುವುದೇ ಮಾರ್ಗಶುದ್ಧಿ.[೨೦]

೧೪. **ಕಾಲಶುದ್ಧಿ**–ಶಾಸ್ತ್ರಗಳಲ್ಲಿ ಪ್ರಶಂಸೆಮಾಡಿರುವ ಶಾಂತವೂ, ನಿರ್ಮಲವೂ, ಮನೋಹರವೂ ಆದ ಪ್ರಾತಃಕಾಲ ಹಾಗೂ ಸಾಯಂಕಾಲದ ಸಮಯದಲ್ಲಿ ಇಷ್ಟಲಿಂಗಪೂಜೆ ಮಾಡುವುದೇ ಕಾಲಶುದ್ಧಿ.[೨೧]

೧೫. **ವಾಕ್‌ಶುದ್ಧಿ**– ಅಸತ್ಯ, ಕಠೋರ, ಬೀಭತ್ಸ, ಡಾಂಭಿಕ ಮುಂತಾದವುಗಳಿಂದ ಕೂಡಿದ ಮಾತುಗಳನ್ನು ಆಡದಿರುವುದೇ ವಾಕ್‌ಶುದ್ಧಿ.[೨೨]

'ನುಡಿದರೆ ಮುತ್ತಿನ ಹಾರದಂತಿರಬೇಕು...' ಎಂಬ ಬಸವಣ್ಣನವರ ವಚನ ವಾಕ್‌ಶುದ್ಧಿಗೆ ಬರೆದ ಕಾವ್ಯಮಯ ವ್ಯಾಖ್ಯಾನವಾಗಿದೆ ಎಂದರೆ ತಪ್ಪಾಗದು.

೧೬. **ಜನಶುದ್ಧಿ**–ಕುಳಿತುಕೊಂಡಿರುವಾಗ, ಮಲಗಿರುವಾಗ, ಪ್ರಯಾಣದ ಕಾಲದಲ್ಲಿ, ವಿದ್ವದ್ಗೋಷ್ಠಿಗಳಲ್ಲಿ ಹೀಗೆ ಸರ್ವತ್ರ ಸರ್ವದಾ ಸದ್ಭಕ್ತ ಜನರ ಸಹವಾಸವು ಜನಶುದ್ಧಿ.[೨೩]

ಇದೇ ಅಭಿಪ್ರಾಯದ ಚೆನ್ನಬಸವಣ್ಣನವರ ವಚನವೊಂದರಲ್ಲಿ 'ನಾನು ಮೆಟ್ಟುವ ಭೂಮಿಯ ಭಕ್ತನ ಮಾಡಿದಲ್ಲದೆ ಮೆಟ್ಟೆನಯ್ಯಾ. ನಾನು ನೋಡುತಿಹ ಆಕಾಶದ ಚಂದ್ರ ಸೂರ್ಯರ ಭಕ್ತರ ಮಾಡಿದಲ್ಲದೆ ನೋಡೆನಯ್ಯಾ. ನಾನು ಬಳಸುವ

---

೧೬. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೪೨
೧೭. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೪೩
೧೮. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೪೪
೧೯. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೪೫
೨೦. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೪೬
೨೧. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೪೭
೨೨. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೪೮
೨೩. ಚಂ.ಆ.ಕ್ರಿ.ಪಾ. ಪಟಲ ೯.ಶ್ಲೋಕ ಸಂಖ್ಯೆ ೪೯

ಜಲವ ಭಕ್ತನ ಮಾಡಿದಲ್ಲದೆ ಬಳಸೆನಯ್ಯಾ, ನಾನು ಕೊಂಬ ಹದಿನೆಂಟು ಧಾನ್ಯವ ಭಕ್ತನ ಮಾಡಿದಲ್ಲದೆ ಕೊಳ್ಳೆನು ಕೂಡಲ ಚೆನ್ನಸಂಗಾ ನಿಮ್ಮಾಣೆ'[೨೪] ಎಂಬ ದೃಢನಿಷ್ಠೆಯಿಂದ ನುಡಿದಿದ್ದಾರೆ. ಕಾರಣ ವೀರಶೈವನು ಪ್ರತಿಯೊಂದು ಭೋಗ್ಯವಸ್ತುಗಳನ್ನು ಶಿವಭಕ್ತರ ಮುಖೇನ ಇಲ್ಲವೇ ಶಿವಚಿಹ್ನಾಂಕಿತಗೊಳಿಸಿ ಬಳಸಬೇಕೆಂಬುದನ್ನು ಸೂಕ್ಷ್ಮಾಗಮವು –

> ಆದಾತೃದಾತೃದೇಯಾನಾಂ ಶಿವಚಿಹ್ನಂ ಸುಶೋಭನಮ್।
> ಶಿವಚಿಹ್ನಾಂಕಿತಂ ಗ್ರಾಹ್ಯಮನ್ಯಚ್ಚಂಡಾಲವಿಟ್ಸಮಮ್ ॥[೨೫]

ದಾನ ಕೊಡುವವನು, ದಾನ ಸ್ವೀಕರಿಸುವವನು, ಕೊಡುವ ವಸ್ತುಗಳು ಶಿವ ಚಿಹ್ನೆಗಳಿಂದ ಶೋಭಿಸಬೇಕು. ಶಿವ ಚಿಹ್ನಗಳಿರುವ ವಸ್ತುಗಳನ್ನು ಮಾತ್ರ ಸ್ವೀಕರಿಸಬೇಕು. ಬೇರೆ ವಸ್ತುಗಳನ್ನು ಸ್ವೀಕರಿಸಿದರೆ ಅದು ಚಾಂಡಾಲನ ಮಲಕ್ಕೆ ಸಮಾನ ಎಂದು ಕಠೋರವಾಗಿ ನುಡಿದಿದೆ. ಹೀಗೆ ಪ್ರತಿಯೊಬ್ಬರಲ್ಲಿಯೂ, ಪ್ರತಿಯೊಂದರಲ್ಲಿಯೂ ಶಿವಸ್ವರೂಪವನ್ನೇ ಕಾಣುತ್ತಾ ಸಾಧನೆಯಲ್ಲಿ ಮುಂದುವರೆದ ಭಕ್ತ ಕೊನೆಯಲ್ಲಿ ಶಿವಾಚಾರದ ಶಿವದೃಷ್ಟಿಯನ್ನು ಪಡೆಯುತ್ತಾನೆ.

ಒಟ್ಟಿನಲ್ಲಿ "ಶಿವನೇ ನನ್ನ ಸರ್ವಸ್ವನೆಂದು ಪರಿಭಾವಿಸಿ, ಅನನ್ಯಭಕ್ತಿಯಿಂದ ಸಂಪೂರ್ಣವಾಗಿ ಶಿವನಿಗೆ ಶರಣಾಗತನಾಗಿ, ಶಿವನನ್ನುಳಿದು ಬೇರೆ ಗತಿಯಿಲ್ಲವೆಂದು ಪರಿಭಾವಿಸಿ ನಡೆಯುವುದೇ ಶಿವಾಚಾರ." ಎಂದು ಶಿವಾಗಮಗಳು ವ್ಯಾಖ್ಯಾನಿಸಿದ್ದರೆ, "ಲಿಂಗಧಾರಿಗಳಾದ ಶಿವಭಕ್ತರನ್ನೆಲ್ಲ ಸಾಕ್ಷಾತ್ ಶಿವಸ್ವರೂಪರೆಂದು ಪರಿಭಾವಿಸಿ, ಅವರ ಪೂರ್ವದ ಜಾತಿಸೂತಕಾದಿಗಳನ್ನೂ ವಿಚಾರಿಸದೆ, ಅವರ ಮನೆಯಲ್ಲಿ ಪ್ರಸಾದವ ಕೊಂಬುದೇ ಶಿವಾಚಾರ." ಎಂದು ವಚನಗಳು ವ್ಯಾಖ್ಯಾನಿಸಿವೆ. ಬಾಹ್ಯನೋಟಕ್ಕೆ ಈ ಎರಡೂ ವ್ಯಾಖ್ಯಾನಗಳು ಬೇರೆ ಬೇರೆಯಾಗಿ ಕಂಡರೂ, ಶಿವನೇ ಸರ್ವೋತ್ತಮ ಎಂಬ ಭಾವನೆಯುಳ್ಳವನಾಗಿ 'ಸರ್ವಂ ಶಿವಮಯಂ ಜಗತ್' ಎಂದು ಪರಿಭಾವಿಸುವುದರಿಂದ ಎಲ್ಲೆಡೆ ಶಿವಭಾವ, ಶಿವದೃಷ್ಟಿ ಉಂಟಾಗಿ, ವ್ಯಕ್ತಿಯು ದೃಷ್ಟಿ ವೈಶಾಲ್ಯವನ್ನು ಹೊಂದುವುದರಿಂದ ಸಂಕುಚಿತ ಮನೋಭಾವನೆಯು ನಾಶವಾಗಿ, ಸಾಮಾಜಿಕವಾದ ಮೇಲು ಕೀಳುಗಳೂ ತಾರತಮ್ಯಗಳೂ ಇಲ್ಲವಾಗುತ್ತವೆ. ಹೀಗಾಗಿ ಸ್ತ್ರೀ–ಪುರುಷರೆಂಬ ಭೇದವಾಗಲೀ, ಜಾತಿ–ವರ್ಣ–ಆಶ್ರಮ ಮುಂತಾದ ಯಾವುದೇ ಭೇದಗಳಾಗಲೀ, ಪರಸ್ಪರ ದ್ವೇಷಾಸೂಯೆ, ಜಿಗುಪ್ಸೆಯ ವಿಷಮತೆಯಾಗಲೀ ನಶಿಸಿ, ಸಮಾಜದಲ್ಲಿ ಸಮತೆಯ ಪ್ರತಿಷ್ಠಾಪನೆಯಾಗುವದು. ಕಾರಣ ಶಿವಾಗಮ ಮತ್ತು ವಚನಗಳಲ್ಲಿ ವ್ಯಾಖ್ಯಾನದ ಭಿನ್ನತೆಯಿದ್ದರೂ ವ್ಯಕ್ತಿಯಲ್ಲಿ ಹೃದಯ ವೈಶಾಲ್ಯತೆಯನ್ನೂ ಹಾಗೂ ದೃಷ್ಟಿ ವೈಶಾಲ್ಯತೆಯನ್ನೂ ಬೆಳೆಸುವುದರ ಮೂಲಕ ಸಮಾಜದಲ್ಲಿ ಸಮತೆಯನ್ನು ತರುವುದೇ ಶಿವಾಚಾರದ ಅಂತರಾರ್ಥವಾಗಿದ್ದು ಇದನ್ನು ಇವೆರಡರ ವ್ಯಾಖ್ಯಾನಗಳ ವಿಶ್ಲೇಷಣೆಗಳಲ್ಲಿ ಕಾಣಬಹುದಾಗಿದೆ.

---

೨೪. ಚೆನ್ನಬಸವಣ್ಣನವರ ವ.ಸಂಪುಟ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೮೭ ಪುಟ ೨೫

೨೫. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೮೪

೫.೨.೪ ಗಣಾಚಾರ

ಪರಧರ್ಮ ಸಹಿಷ್ಣುತೆಯಿಂದ ಕೂಡಿದ ಸ್ವಧರ್ಮನಿಷ್ಠೆ ವೀರಶೈವದಲ್ಲಿ ವಿಶಿಷ್ಟವಾಗಿದ್ದರೂ ಸಮಾಜದಲ್ಲಿಯ ಸಮಾಜಘಾತುಕ ಶಕ್ತಿಗಳು ಕೆಲವೊಮ್ಮೆ ಶಿವಧರ್ಮ, ಶಿವಲಾಂಛನಗಳ ಮೇಲೆ ಆಕ್ರಮಣ ಮಾಡಿದಾಗ ಇಲ್ಲವೇ ನಿಂದನೆಯನ್ನು ಮಾಡಿದಾಗ ಅದಕ್ಕೆ ಪ್ರತಿಕಾರವನ್ನು ಮಾಡುವುದೇ ಗಣಾಚಾರ. ಗಣಾಚಾರದ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅವುಗಳ ವಿವೇಚನೆ ಇಂತಿದೆ –

ಗಣಾಚಾರದ ಅರ್ಥ

ಗಣಾಚಾರವನ್ನು ಕುರಿತು ಚಂದ್ರಜ್ಞಾನಾಗಮವು –

ಶಿವಸ್ಯ ಶಿವಭಕ್ತಸ್ಯ ಶಿವಧರ್ಮಾದಿಕಸ್ಯ ಚ ।
ನ ಶ್ರುಣೋತಿ ಚ ಯನ್ನಿಂದಾಂ ಚ ಗಣಾಚಾರ ಉಚ್ಯತೇ॥[೧]

ಅರ್ಥಾತ್ ಶಿವನ, ಶಿವಭಕ್ತನ, ಶಿವಧರ್ಮ ಮುಂತಾದವುಗಳ ನಿಂದೆಯನ್ನು ಕೇಳದಿರುವುದೇ ಗಣಾಚಾರವೆಂದು ವ್ಯಾಖ್ಯಾನಿಸಿದೆ. ಸೂಕ್ಷ್ಮಾಗಮವು ಇನ್ನೂ ಮುಂದುವರೆದು –

ಗುರುಲಿಂಗಾದಿವಿಷಯೇ ನ ಶ್ರಾವ್ಯಂ ದೂಷಣಂ ಯದಿ।
ಶ್ರುತಂ ತಾನ್ ಶಿಕ್ಷಯಾಮೀತಿ ಗಣಾಚಾರಃ ಸ ಹಿ ಸ್ಮೃತಃ॥[೨]

ಅಂದರೆ ಗುರು–ಲಿಂಗ–ಜಂಗಮರ ನಿಂದೆಯನ್ನು ಕೇಳುವುದೇ ಮಹಾದೋಷ. ಕಾರಣ ಯಾರು ಶಿವನಿಂದೆ ಮಾಡುತ್ತಾರೋ ಅಂತಹ ಶಿವನಿಂದಕನನ್ನು ಘಾತಿಸುತ್ತೇನೆಂದು ಮನಸ್ಸು ಮಾಡುವುದೇ ಗಣಾಚಾರವೆಂದು ತಿಳಿಸಿದೆ. ಇಲ್ಲಿ ಶಿವನಿಂದೆ ಮಾಡುವವನಷ್ಟೇ ಕೇಳುವವನು ಪಾಪಿಯಾಗುತ್ತಾನೆಂಬ ಮಾತು ಅರ್ಥಪೂರ್ಣವಾದುದು. ಯಾರು ಶಿವನಿಂದೆ ಮಾಡುತ್ತಾರೋ ಅಂತಹ ಶಿವನಿಂದಕನನ್ನು ಘಾತಿಸಬೇಕು ಇಲ್ಲವೇ ಶಪಿಸಬೇಕೆಂದು ಆಗಮಗಳು ಅರುಹುತ್ತವೆ. ಅಲ್ಲದೇ ಸೂಕ್ಷ್ಮಾಗಮವು –

ಮಮಾವರಾವತಾರಾಣಾಂ ಲಿಂಗಾಂಗಾನಾಂ ವಿಶೇಷತಃ ।
ನಿಂದಾಂ ಕುರ್ವಂತಿ ಯೇ ಮೋಹಾತ್ತೇಷಾಂ ತು ನಿರಯೋ ಗತಿಃ ॥
ಶಕ್ತಶ್ಚೇದಸತಾಂ ಜಿಹ್ವಾಂ ಛಿಂದ್ಯಾದ್ಯಃ ಸ್ವಯಮೇವ ಹಿ ।
ನ ತಸ್ಯ ದೋಷಲೇಶೋಽಸ್ತಿ ಶಿವಲೋಕಂ ಸ ಗಚ್ಛತಿ ॥
ಅಶಕ್ತಶ್ಚೇತ್ತದಾಽನ್ಯತ್ರ ಗಚ್ಛೇತ್ತತ್ರ ನ ಸಂವಸೇತ್ ।

---

೧. ಚಂ.ಆ. ಕ್ರಿ. ಪ್ರಾ. ಪಟಲ ೯ , ಶ್ಲೋಕ ಸಂಖ್ಯೆ ೮
೨. ಸೂ.ಆ. ಪಟಲ ೮, ಶ್ಲೋಕ ಸಂಖ್ಯೆ ೯

ತತ್ಸಂಸರ್ಗಾನ್ಮಹಾದೋಷಂ ಪ್ರಾಪ್ನೋತಿ ಹಿ ನ ಸಂಶಯಃ ॥
ಶಿವನಿಂದಾ ಭಕ್ತನಿಂದಾ ನಿಂದಾ ರುದ್ರಾಕ್ಷಭಸ್ಮನೋಃ।
ಯತ್ರ ಪ್ರವರ್ತತೇ ದೇವಿ ನ ತತ್ರ ದಿವಸಂ ವಸೇತ್ ॥
ಯದ್ಗೃಹೇ ಭವಿಸಂಸರ್ಗಸ್ತದ್ಗೃಹಂ ಪರಿವರ್ಜಯೇತ್ ।
ಯತ್ರಾನ್ಯದೇವಪೂಜಾ ಸ್ಯಾನ್ನ ತಿಷ್ಠೇತ್ತತ್ರ ಭಕ್ತಿಮಾನ್ ॥[೩]

ಶಿವನ ಆಪರಾವತಾರಿಗಳಾದ ಲಿಂಗಾಂಗಿಗಳನ್ನು ಅಜ್ಞಾನದಿಂದ ನಿಂದಿಸುವವರಿಗೆ ನರಕವೇ ಗತಿ. ಸಮರ್ಥರಾದರೆ ಅಜ್ಞಾನಿಗಳ (ನಿಂದಿಸುವವರ) ನಾಲಿಗೆಗಳನ್ನು ತಾನೇ ಸ್ವತಃ ಸೀಳಿದರೂ ಅವನಿಗೆ ಯಾವ ದೋಷವೂ ಉಂಟಾಗುವುದಿಲ್ಲ; ಪ್ರತಿಯಾಗಿ ಶಿವಲೋಕ ಪ್ರಾಪ್ತವಾಗುತ್ತದೆ. ಅಸಮರ್ಥರಾದರೆ ನಿಂದಕರಿಂದ ದೂರ ಹೋಗಬೇಕು, ಅವರಿರುವಲ್ಲಿ ವಾಸ ಮಾಡಬಾರದು. ಅವರ ಸಹವಾಸದಿಂದ ಮಹಾದೋಷ ಉಂಟಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಶಿವನ ನಿಂದೆ, ಭಕ್ತನ ನಿಂದೆ, ವಿಭೂತಿ-ರುದ್ರಾಕ್ಷಗಳ ನಿಂದೆ ನಡೆಯುವ ಸ್ಥಳದಲ್ಲಿ ಒಂದು ದಿನವೂ ಇರಬಾರದು. ಯಾವ ಮನೆಯಲ್ಲಿ ಭವಿಗಳ ಸಂಬಂಧವಿರುವುದೋ ಆ ಮನೆಯಲ್ಲಿ ಶಿವಭಕ್ತರು ಇರಬಾರದು. ಮತ್ತೆ ಯಾರ ಮನೆಯಲ್ಲಿ ಇತರ ದೇವತೆಗಳ ಪೂಜೆ ನಡೆಯುತ್ತದೆಯೋ ಅಲ್ಲಿ ಶಿವಭಕ್ತನು ನಿಲ್ಲಬಾರದು ಎಂದು ತಿಳಿಸುತ್ತದೆ.

ವಚನಗಳೂ ಗಣಾಚಾರದ ಬಗ್ಗೆ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು 'ಶಿವನಿಂದೆ ಕೇಳದಿಹುದೇ ಗಣಾಚಾರ'[೪], 'ಅಷ್ಟಾವರಣಂಗಳ ಮೇಲೆ ಅನ್ಯರಿಂದ ಕುಂದುನಿಂದೆಗಳು ಬಂದು ತಟ್ಟಿದಲ್ಲಿ ಗಣಸಮೂಹನೊಡಗೂಡಿ ಆ ಸ್ಥಲವ ತ್ಯಜಿಸುವುದೇ ಗಣಾಚಾರವೆಂಬೆನಯ್ಯಾ'[೫] ಎಂದು ವ್ಯಾಖ್ಯಾನಿಸುವುದಷ್ಟೆ ಅಲ್ಲದೆ ಇನ್ನೂ ಉಗ್ರವಾಗಿ '.... ಭಕ್ತನಿಂದೆ ಹರನಿಂದೆ ಆಚಾರನಿಂದೆಯ ಮಾಳ್ಪ ಮಾಯಾವಾದಿಗಳ ಇತರ ಮತಂಗಳಂ, ಪರದೈವಂಗಳ ನಿಷ್ಠೆಯಂ ಶಿವಾಚಾರದ ವ್ರತಂಗಳಂ ಕೆಡಿಸುವ ಜೈನ ಬೌದ್ಧ ಚಾರ್ವಾಕ ಮಾಯಾವಾದಿಗಳು ಪ್ರಾಣಲಿಂಗ ಸಂಬಂಧಿಗಳಪ್ಪ ಭಕ್ತರ ವ್ರತಂಗಳ ಕೆಡಿಸುವ ಪ್ರಯತ್ನದ ಸಮಯದಲ್ಲಿ ಪರವಾದಿಗಳ ಕಾಣುತಾಕ್ಷಣವೇ ಹಸ್ತಖಡ್ಗದಿಂದ ಅವರ ಪ್ರಾಣ ತ್ಯಾಗಮಂ ಮಾಡುವುದು, ಅಲ್ಲದೊಡೆ ಶಪಿಸುವುದು, ಹಾಗಾಗದ ಪಕ್ಷ ಆ ಸ್ಥಾನಗಳ ತೊಲಗಿ ಹೋಗುವುದು, ಇಂತಿಷ್ಟು ಆಗದ ಪಕ್ಷಕ್ಕೆ ತನ್ನ ಪ್ರಾಣವಾದರೂ ತ್ಯಾಗಮಾಡುವುದು, ಹಾಗಾಗದಿರ್ದೊಡೆ ಆ ದೇಶತ್ಯಾಗವ ಮಾಡುವುದು, ಇಂತೀ ಪ್ರಕಾರದಲ್ಲಿ ತನ್ನ ಗಣಾಚಾರವನ್ನುಂಟು ಮಾಡುವುದೇ ಗಣಾಚಾರ'[೬] ಎಂದು ವ್ಯಾಖ್ಯಾನಿಸಿದ್ದುಂಟು. ಇದಕ್ಕೆ ಬಹುಶಃ ಆ ಕಾಲದ ಧಾರ್ಮಿಕ ಜೀವನದಲ್ಲಿ ಕಂಡುಬರುತ್ತಿದ್ದ ಪರಸ್ಪರ ಸ್ಪರ್ಧೆ ತಿಕ್ಕಾಟಗಳೇ ಕಾರಣವಾಗಿರಬಹುದು. ಆದರೆ ಆಧುನಿಕ ಕಾಲದಲ್ಲಿ ಘಾತಿಸುವುದು

---

೩. ಸೂ.ಆ. ಪಟಲ ೬, ಶ್ಲೋಕ ಸಂಖ್ಯೆ ೬೭ – ೭೧
೪. ವಚನಗಳಲ್ಲಿ ವೀರಶೈವಧರ್ಮ, –ಡಾ. ಎಚ್.ತಿಪ್ಪೇರುದ್ರಸ್ವಾಮಿ, ಪುಟ ೨೬೬
೫. ಚೆನ್ನಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂ. ೩. ವಚನ ಸಂಖ್ಯೆ ೯೩೦, ಪುಟ ೨೯೩
೬. ವಚನಗಳಲ್ಲಿ ವೀರಶೈವಧರ್ಮ, –ಡಾ. ಎಚ್.ತಿಪ್ಪೇರುದ್ರಸ್ವಾಮಿ, ಪುಟ ೨೬೬

ಅಪರಾಧವಾಗುತ್ತದೆ. ಕಾರಣ ಇಲ್ಲಿ 'ಘಾತನ' ಶಬ್ದಕ್ಕೆ 'ಶರೀರಘಾತನ' ಎಂಬ ಅರ್ಥವನ್ನು ಗೌಣವಾಗಿಸಿ, 'ಬುದ್ಧಿಘಾತನ'ವೆಂಬ ಅರ್ಥವನ್ನು ಗ್ರಹಿಸಬೇಕು. ಏಕೆಂದರೆ ಕೇವಲ ಶರೀರಘಾತನದಿಂದ ವ್ಯಕ್ತಿಯ ಮನಸ್ಸು ಬುದ್ಧಿಗಳ ಶುದ್ಧಿಯಾಗುವುದಿಲ್ಲ. ಆದುದರಿಂದ ಶಿವನಿಂದೆಯನ್ನು ವಿರೋಧಿಸಿ, ಆ ಶಿವನಿಂದಕನಿಗೆ ಧರ್ಮದ ಆಚರಣೆಗಳ ಅಂತರಾರ್ಥವನ್ನರುಹಿ ಆತನ ದುರ್ಬುದ್ಧಿಯನ್ನು ಘಾತನಗೊಳಿಸಿ, ಸಮಾಜದಲ್ಲಿಯ ಮೂಢಾಚರಣೆ, ಕುಹಕ, ಕುತ್ಸಿತ, ಕುಬುದ್ಧಿಗಳನ್ನು ದಿಟ್ಟತನದಿಂದ ಖಂಡಿಸಿ ಅದನ್ನು ತಡೆಯಲು ಪ್ರಯತ್ನಿಸುವುದೇ ಗಣಾಚಾರವೆನ್ನಬಹುದು.

ಈ ಗಣಾಚಾರದಲ್ಲಿ ೬೪ ಶೀಲಗಳಿರುತ್ತವೆಂದು ಚಂದ್ರಜ್ಞಾನಾಗಮವು ನಿರೂಪಿಸುತ್ತದೆ.

ಸರ್ವೋತ್ತಮೇ ಗಣಾಚಾರೇ ಸದ್ಯಃ ಸಿದ್ಧಿಕರೇ ಪರೇ।
ಶೀಲಾನಿ ತು ಚತುಃಷಷ್ಟಿರ್ವರ್ತಂತೇ ತಾನಿ ಸಂಶೃಣು॥[೭]

೬೪ ಶೀಲಗಳ ದೀರ್ಘ ನಿರೂಪಣೆಯನ್ನು ಚಂದ್ರಜ್ಞಾನಾಗಮದ ನವಮ ಪಟಲದಲ್ಲಿ ಮಾಡಲಾಗಿದ್ದು, ಅವುಗಳನ್ನು ಈ ರೀತಿಯಾಗಿವೆ.

ಸಪ್ತ ವಾಕ್ ಶೀಲಗಳು:[೮]

೧. ಸತ್ಯವನ್ನೇ ನುಡಿಯುವುದು,
೨. ಪ್ರಿಯವಾದ ಸತ್ಯವನ್ನೇ ಮಾತನಾಡುವುದು,
೩. ವೇದ, ಆಗಮ, ಪುರಾಣ ಮುಂತಾದ ಸದ್‌ಗ್ರಂಥಗಳ ಅಭ್ಯಾಸ,
೪. ಶಿವ-ಶಿವಭಕ್ತರ ಹಾಗೂ ಗುರುವಿನ ಅವಿಶ್ರಾಂತ ಪ್ರಶಂಸೆ,
೫. ಶಿವೇತರ ದೇವತೆಗಳ ಹಾಗೂ ಮಾನವರ ಸ್ತುತಿಯ ಪರಿತ್ಯಾಗ,
೬. ಆತ್ಮಪ್ರಶಂಸೆಯ ತ್ಯಾಗ ಮತ್ತು
೭. ಯಾವುದೇ ದೇವರ ಅಥವಾ ವ್ಯಕ್ತಿಯ ನಿಂದೆಯನ್ನು ಮಾಡದಿರುವುದು

ಪಂಚವಿಧ ಪಾಣಿಗತ (ಕೈಯಿಂದ ಮಾಡುವ) ಶೀಲಗಳು:[೯]

೧. ಗುರು-ಲಿಂಗ-ಜಂಗಮರಿಗೆ ಶ್ರದ್ಧಾಪೂರ್ವಕ ಪ್ರಣಾಮ.
೨. ಹಗಲು-ಇರುಳು ಪೂಜಾಸಾಮಗ್ರಿ ಕೂಡಿಸುವುದು.
೩. ಪ್ರತಿದಿನ ನಿಯಮಾನುಸಾರ ಜಪಮಾಲೆ ಹಿಡಿದು ಮೂಲ ಪಂಚಾಕ್ಷರ ಮಂತ್ರ ಜಪ ಮಾಡುವುದು.
೪. ಗುರು-ಲಿಂಗ-ಜಂಗಮರ ಆರಾಧನೆ.

---

೭. ಚಂ.ಆ. ಕ್ರಿ. ಪ್ರಾ. ಪಟಲ ೯ , ಶ್ಲೋಕ ಸಂಖ್ಯೆ ೫೨
೮. ಚಂ.ಆ. ಕ್ರಿ. ಪ್ರಾ. ಪಟಲ ೯ , ಶ್ಲೋಕ ಸಂಖ್ಯೆ ೫೩-೬೦
೯. ಚಂ.ಆ. ಕ್ರಿ. ಪ್ರಾ. ಪಟಲ ೯ , ಶ್ಲೋಕ ಸಂಖ್ಯೆ ೬೧-೬೬

೫. ಗುರು-ಜಂಗಮರಿಗೆ ಶಿವಧರ್ಮರಕ್ಷಣೆಗಾಗಿ ಯಥಾಶಕ್ತಿ ಭಕ್ತಿಪೂರ್ವಕ ದಾನ ಮಾಡುವದು.

ಚತುರ್ವಿಧ ಪಾದಗತ ಶೀಲಗಳು :[೧೦]

೧. ಗುರು-ಮಾಹೇಶ್ವರರ ದರ್ಶನಕ್ಕಾಗಿ ಭಕ್ತಿಪೂರ್ವಕವಾಗಿ ಹೋಗುವುದು.

೨. ಗುರು-ಲಿಂಗ-ಜಂಗಮರ ಪ್ರದಕ್ಷಿಣೆ

೩. ಸತ್ಕಾರ್ಯಕ್ಕಾಗಿ ಹಾಗೂ ಪೂಜಾಸಾಮಗ್ರಿಯನ್ನು ಕೂಡಿಸಲು ಸಂಚರಿಸುವುದು.

೪. ಗುರು ಹಾಗೂ ಇಷ್ಟಲಿಂಗದ ಪೂಜೆಗಾಗಿ ಸ್ಥಿರವಾದ ಮನಸ್ಕತೆಯಿಂದ ಕುಳಿತುಕೊಳ್ಳುವುದು.

ದ್ವಿವಿಧ ತ್ವಕ್ ಸಂಬಂದಿತ ಶೀಲಗಳು :[೧೧]

೧. ಇಷ್ಟಲಿಂಗವನ್ನು ತನ್ನ ಶರೀರದಿಂದ ಸ್ವಲ್ಪವೂ ಅಗಲದೆ ನಿತ್ಯಸ್ಪರ್ಶ ಮಾಡುವುದು.

೨. ಇಷ್ಟಲಿಂಗ ಸ್ಪರ್ಶದಿಂದ ಉಂಟಾಗುವ ರೋಮಾಂಚನ.

ದ್ವಿವಿಧ ಚಕ್ಷು ಸಂಬಂದಿತ ಶೀಲಗಳು:[೧೨]

೧. ನಿರಂತರವಾಗಿ, ಅನುರಾಗಪೂರ್ವಕವಾಗಿ ಇಷ್ಟಲಿಂಗಾವಲೋಕನ.

೨. ಇಷ್ಟಲಿಂಗವನ್ನು ನಿರಂತರ ಅವಲೋಕನಗೈದು ಆನಂದಾಶ್ರುಗಳನ್ನು ಸುರಿಸುವದು.

ಜಿಹ್ವಾಗತ ಶೀಲ:[೧೩]

೧. ಇಷ್ಟಲಿಂಗಕ್ಕೆ ಸಮರ್ಪಿತವಾದ ಪ್ರಸಾದವನ್ನು ಆಸ್ವಾದಿಸುವುದು.

ಘ್ರಾಣಗತ ಶೀಲ:[೧೪]

೧. ಶಿವಾರ್ಪಿತ ಗಂಧ-ಪುಷ್ಪಾದಿಗಳ ಸುಗಂಧವನ್ನು ಆಘ್ರಾಣಿಸುವುದು.

ಶ್ರೋತೃಗತ ಶೀಲಗಳು:[೧೫]

೧. ಗುರು-ಲಿಂಗ-ಜಂಗಮರ ಹಾಗೂ ಶಿವಭಕ್ತರ ಸ್ತೋತ್ರಗಳನ್ನು ಪ್ರತಿದಿನ ಶ್ರವಣ ಮಾಡುವುದು

೨. ಗುರು-ಲಿಂಗ-ಜಂಗಮರ ಹಾಗೂ ಶಿವಭಕ್ತರ ನಿಂದೆಯನ್ನು ಕೇಳದಿರುವುದು.

---

೧೦. ಚಂ.ಆ. ಕ್ರಿ ಪ್ರಾ. ಪಟಲ ೯, ಶ್ಲೋಕ ಸಂಖ್ಯೆ ೬೭-೭೦
೧೧. ಚಂ.ಆ. ಕ್ರಿ ಪ್ರಾ. ಪಟಲ ೯, ಶ್ಲೋಕ ಸಂಖ್ಯೆ ೭೨-೭೪
೧೨. ಚಂ.ಆ. ಕ್ರಿ ಪ್ರಾ. ಪಟಲ ೯, ಶ್ಲೋಕ ಸಂಖ್ಯೆ ೭೫-೭೭
೧೩. ಚಂ.ಆ. ಕ್ರಿ ಪ್ರಾ. ಪಟಲ ೯, ಶ್ಲೋಕ ಸಂಖ್ಯೆ ೭೮
೧೪. ಚಂ.ಆ. ಕ್ರಿ ಪ್ರಾ. ಪಟಲ ೯, ಶ್ಲೋಕ ಸಂಖ್ಯೆ ೭೯
೧೫. ಚಂ.ಆ. ಕ್ರಿ ಪ್ರಾ. ಪಟಲ ೯, ಶ್ಲೋಕ ಸಂಖ್ಯೆ ೮೦-೮೧

ಕಾಯಿಕ ಶೀಲಗಳು :[೧೬]

೧. ಗುರು, ಲಿಂಗ, ಜಂಗಮ ಪ್ರಸಾದದಿಂದ ಶರೀರಶುದ್ಧೀಕರಣ.

೨. ನಿಷಿದ್ಧ ವಿಷಯಗಳಿಂದ ಇಂದ್ರಿಯ ನಿಗ್ರಹ.

೩. ಅಸ್ಪರ್ಶವಾದ ವಸ್ತು ಸ್ಪರ್ಶದಿಂದ ಉಂಟಾಗುವ ದೋಷವನ್ನು ಜಲ ಅಥವಾ ಭಸ್ಮ ಸ್ನಾನದಿಂದ ಪರಿಹರಿಸುವುದು.

೪. ಆಸನ, ಶಯ್ಯಾ, ಗೋಷ್ಠಿ ಮುಂತಾದವುಗಳಲ್ಲಿ ಭವಿ ಸಂಪರ್ಕವನ್ನು ದೂರಮಾಡುವುದು.

೫. ಭಸ್ಮ-ರುದ್ರಾಕ್ಷ-ಲಿಂಗಗಳನ್ನು ಸದಾ ಶರೀರದ ಮೇಲೆ ಧರಿಸುವುದು.

ಮಾನಸಿಕ ಶೀಲಗಳು :[೧೭]

೧. ಬ್ರಹ್ಮಚರ್ಯ.

೨. ಶಿವಭಕ್ತಿಯ ಹೊರತಾಗಿ ಇತರ ವಿಷಯಗಳ ಕಾಮನೆಯ ತ್ಯಾಗ.

೩. ಅಧರ್ಮದ ಬಗ್ಗೆ ಕ್ರೋಧಗೊಳ್ಳುವುದು ವಿನಃ ಶತ್ರುವಿನಲ್ಲಿ ಅಲ್ಲ(ಅಕ್ರೋಧಶೀಲ)

೪. ಧನಾದಿವಿಷಯಗಳ ಲೋಭ ಬಿಟ್ಟು ಶಿವಾರಾಧನೆಯಲ್ಲಿ ಲೋಭ (ಅಲೋಭಶೀಲ)

೫. ಭಕ್ತರ ವಿಷಯದಲ್ಲಿ ಮೋಹವನ್ನಿರಿಸಿ ಹೆಂಡತಿ-ಮಕ್ಕಳಾದಿಗಳ ವಿಷಯಗಳಲ್ಲಿ ಅಮೋಹ. (ಅಮೋಹಶೀಲ).

೬. ತನ್ನ ಇಂದ್ರಿಯಗಳ ವಿಷಯದ ಬಗ್ಗೆ ಮಾತ್ಸರ್ಯವನ್ನಿರಿಸುವುದು ವಿನಃ ವ್ಯಕ್ತಿಗಳಲ್ಲಿ ಅಲ್ಲ. (ಅಮಾತ್ಸರ್ಯಶೀಲ)

೭. ಮಾಯೆಯನ್ನು ಗೆದ್ದ ವಿಷಯದಲ್ಲಿ ಮದವೇ ವಿನಃ ಧನಾರ್ಜನೆಯಿಂದ ಉಂಟಾಗುವ ಮದವಲ್ಲ. (ಅಮದಶೀಲ)

೮. ಗುರು- ಜಂಗಮರಲ್ಲಿ ದೋಷವೆನಿಸದಿರುವದು.

೯. ಅಹಿಂಸೆ

೧೦. ದಯೆ

೧೧. ತನ್ನ ಸ್ತುತಿಗೈಯುವಲ್ಲಿ ಹಾಗೂ ಪರನಿಂದೆ ವಿಷಯದಲ್ಲಿ ಸಂಕೋಚ (ಲಜ್ಜೆಯೆಂಬ ಶೀಲ)

೧೨. ಶತ್ರುವಿನಲ್ಲಾಗಲೀ, ಪುತ್ರನಲ್ಲಾಗಲೀ ದ್ವೇಷಭಾವದ ಪರಿತ್ಯಾಗ (ಅರ್ಜವಶೀಲ)

೧೩. ನಿಗಮಾಗಮ ವಿಷಯದಲ್ಲಿ ವಿಶ್ವಾಸ (ಶ್ರದ್ಧಾಶೀಲ)

೧೪. ಆಪತ್ಕಾಲದಲ್ಲಿಯೂ ಧರ್ಮಪಾಲನೆ (ಧೃತಿಶೀಲ)

---

೧೬. ಚಂ.ಆ. ಕ್ರಿ. ಪ್ರಾ. ಪಟಲ ೯ , ಶ್ಲೋಕ ಸಂಖ್ಯೆ ೮೨-೮೬

೧೭. ಚಂ.ಆ. ಕ್ರಿ. ಪ್ರಾ. ಪಟಲ ೯ , ಶ್ಲೋಕ ಸಂಖ್ಯೆ ೮೮-೧೨೨

೧೫. ಅಪಕಾರಿಗಳಾದ ಶತ್ರುಗಳ ಬಗ್ಗೆಯೂ ದೋಷ ದೃಷ್ಟಿಯನ್ನಿರಿಸದೇ ಇರುವ ಕ್ಷಮಾಶೀಲ.

೧೬. ಭೋಗಾಸಕ್ತಿಯನ್ನು ತ್ಯಜಿಸುವಿಕೆ (ಭೋಗಾಸಕ್ತಿಚ್ಯುತಿ ಶೀಲ)

೧೭. ಯಾವುದೇ ಕಾರ್ಯವನ್ನು ಮಾಡುವಲ್ಲಿ ಅಥವಾ ವಚನಪರಿಪಾಲನೆಯಲ್ಲಿ ಪ್ರಮಾದವಿಲ್ಲದಿರುವಿಕೆ.

೧೮. ಶಿವನನ್ನು ಬಿಟ್ಟು ಬೇರೆ ಯಾವುದೇ ವಸ್ತುವನ್ನು ಆಶಿಸದೇ ಇರುವದು. (ದಮವೆಂಬ ಶೀಲ)

೧೯. ಇತರರ ವಸ್ತುವನ್ನು ಕದಿಯದಿರುವದು. (ಅಸ್ತೇಯಶೀಲ)

೨೦. ದೊರೆಯದಿರುವ ವಸ್ತುವಿನ ಬಗ್ಗೆ ಚಿಂತಿಸದೇ ಇದ್ದುದರಲ್ಲಿಯೇ ತೃಪ್ತಿಪಡುವದು. (ಸಂತುಷ್ಟಿಶೀಲ)

೨೧. ಪರಮೇಶ್ವರನ ನಾಮ ಮತ್ತು ರೂಪಗಳ ಸ್ಮರಣ.

೨೨. ಶಿವನ ನಾಮ ಹಾಗೂ ಗುಣಾದಿಗಳ ಎಡಬಿಡದ ಚಿಂತನ.

೨೩. ಗುರು–ಹಿರಿಯರ–ಜಂಗಮರ ಪಾದಸೇವೆ(ಪಾದಸೇವನಶೀಲ)

೨೪. ಶಿವನನ್ನು ಸದಾಕಾಲ ಮಾನಸಿಕವಾಗಿ ಪೂಜೆಗೈಯುವದು.

೨೫. ಗುರು–ಲಿಂಗ–ಜಂಗಮರ ಚರಣಕಮಲಗಳಿಗೆ ನಿತ್ಯವೂ ಮನಸ್ಸಿನಲ್ಲಿಯೇ ಪ್ರಣಾಮ ಮಾಡುವುದು.

೨೬. ಶಂಭುವಿನ ಕೈಂಕರ್ಯವನ್ನು ಮನಸಾ ಮಾಡುವದು (ದಾಸ್ಯಶೀಲ)

೨೭. ಶಿವನಲ್ಲಿ ಸಖ್ಯ(ಸಖ್ಯಶೀಲ)

೨೮. ಬಂಧ–ಮೋಕ್ಷಗಳ ಸರ್ವಹೊಣೆಯನ್ನು ಶಿವನಿಗೆ ಬಿಡುವುದು (ಆತ್ಮಾರ್ಪಣಶೀಲ)

೨೯. ಪಂಚಾಕ್ಷರ ಮಂತ್ರದ ಮಾನಸಿಕ ಜಪ.

೩೦. ಶಿವನ ದಿವ್ಯರೂಪದ ಅನುಸಂಧಾನ. (ಧ್ಯಾನಶೀಲ)

೩೧. ಮನಸ್ಸಿನಲ್ಲಿ ಶಿವ ಸ್ವರೂಪವನ್ನು ಸದಾ ಧರಿಸಿಕೊಳ್ಳುವದು. (ಧಾರಣಾಶೀಲ)

೩೨. ಶಿವಧ್ಯಾನದಲ್ಲಿ ನಿಶ್ಚಲವಾದ ಚಿತ್ತವನ್ನಿರಿಸುವದು.(ಸಮಾಧಿಶೀಲ)

೩೩. ಶಿವೋऽಹಂ ಭಾವದಿಂದ ಶಿವಧ್ಯಾನವನ್ನು ಮಾಡುತ್ತ ತಾನು ಮಾಡಿದ್ದೆಲ್ಲಕ್ಕೂ ಭಗವಂತನೇ ಕಾರಣವೆಂದು ಭಾವಿಸಿ ಆಚರಿಸುವುದು.

೩೪. ಶಿವನ ಸರ್ವವ್ಯಾಪಕತ್ವದ ಅನುಸಂಧಾನ.

೩೫. ಶಿವನ ಅನಂತ ರೂಪಗಳನ್ನು ತನ್ನ ರೂಪಗಳೆಂದು ಭಾವಿಸಿ ಶಿವಾನಂದ ಪರವಶನಾಗುವದು.

ಈ ರೀತಿ ೬೪ ಶೀಲಗಳನ್ನು ಸಾಧಕನು ಮೈಗೂಡಿಸಿಕೊಳ್ಳುತ್ತಾ ಹೋದಂತೆಲ್ಲ

ಶಿವನೊಂದಿಗಿನ ದ್ವೈತ ಮನೋಭಾವನೆಯು ತೊಲಗಿ ಅದ್ವೈತ ಭಾವ ನೆಲೆಗೊಂಡು ತಾನೇ ಸ್ವಯಂ ಶಿವನಾಗಿ ಶಿವಸಾಯುಜ್ಯವನ್ನು ಪಡೆಯುತ್ತಾನೆ.

ಯಶ್ಚತುಃಷಷ್ಟಿಶೀಲಾಢ್ಯಃ ಶಿವ ಏವ ನ ಚಾಪರಃ।
ಏತದಭ್ಯಾಸಯೋಗೇನ ಶಿವಸಾಯುಜ್ಯಮಶ್ನುತೇ॥[೧೮]

ಗಣಾಚಾರನಿಷ್ಠನಾದವನು ಶಿವನಲ್ಲದೆ ಬೇರಲ್ಲ. ಈ ೬೪ ಶೀಲಗಳನ್ನು ಆಚರಿಸುವ ವ್ಯಕ್ತಿಯಲ್ಲಿ ಶಿವನ ಕುರಿತಾದ ನಿಷ್ಠೆ ಬಲವಾಗುತ್ತವೆ. ಅದರಿಂದಾಗಿ ಶಿವ, ಶಿವಭಕ್ತ, ಶಿವಧರ್ಮಗಳ ಬಗ್ಗೆ ನಿಂದೆಯನ್ನು ಕೇಳದಿರುವ ಛಲ ಅವನಲ್ಲಿ ಉದಯಿಸುತ್ತದೆ.

ಚೆನ್ನಬಸವಣ್ಣನವರ "ಆಚಾರವೆಂಬುದು ಕೂರಲಗು, ತಪ್ಪಿ ಬಂದಡೆ ಪ್ರಾಣವ ತಗಲುವುದು. ಅದು ಕಾರಣ, ಅರಿದರಿದು ಆಚರಿಸಬೇಕು"[೧೯] ಎಂಬ ವಚನದಲ್ಲಿ ಆಚಾರಗಳೆಂಬ ಹೆಸರಿನಲ್ಲಿ ೫೦ ಶೀಲಗಳನ್ನು ಹೇಳಿದ್ದಾರೆ. ಅವುಗಳಿಗೂ ಚಂದ್ರಜ್ಞಾನಾಗಮದ ೬೪ ಶೀಲಗಳಿಗೂ ಪರಸ್ಪರ ಹೋಲಿಕೆಯನ್ನು ಕಾಣಬಹುದು. ಚೆನ್ನಬಸವಣ್ಣನವರು ಹೇಳಿದ ಆಚಾರಗಳು ಹೀಗಿವೆ.

೧. ಪರರ ಹೆಣ್ಣಿಗೆ ಕಣ್ಣಿಡದಿರುವದು,

೨. ಪರರ ದ್ರವ್ಯವ ಅಪಹರಣ ಮಾಡದಿರುವುದು,

೩. ಸುಳ್ಳಾಡದಿರುವುದು,

೪. ವಿಶ್ವಾಸಘಾತವ ಮಾಡದಿರುವದು,

೫. ಪ್ರಾಣಿಹಿಂಸೆಯ ಮಾಡದಿರುವದು,

೬. ಸಕಲ ಶಿವಶರಣರ್ಗೆ ಸಂತೋಷಮಂ ಪುಟ್ಟಿಸುವುದು,

೭. ಸ್ವೀಕರಿಸಿದ ನೇಮವ ಪ್ರಾಣಾಂತ್ಯವಾಗಿ ಬಿಡದಿರುವದು

೮, ಷಟ್‌ಸ್ಥಲದವರ ಧಿಕ್ಕರಿಸುವ ಜನರ ಸೀಳುವೆನೆಂಬುವ ವ್ರತ,

೯. ಕೆಟ್ಟಜನರ ಸಹವಾಸ ಮಾಡದಿರುವದು

೧೦.ಸಜ್ಜನರ ಸಂಗ ಬಿಡದಿರುವದು,

೧೧.ಅನ್ಯದೇವತಾ ಭಜನೆಗೆ ವಿಮುಖನಾಗುವುದು,

೧೨.ಶಿವನೇ ಸರ್ವದೇವ ಶಿಖಾಮಣಿಯೆಂದು ಮನದಲ್ಲಿ ಅಚ್ಚೊತ್ತಿಪ್ಪುದು,

೧೩.ಶಿವನಿಗೆ ಶಿವಗಣಂಗಳಿಗೆ ಭೇದವ ಮಾಡದಿರುವದು,

೧೪.ಸಕಲ ಜೀವಿಗಳಿಗೆ ಹಿತವ ಬಯಸುವುದು,

---

೧೮. ಚಂ.ಆ. ಕ್ರಿ ಪ್ರಾ. ಪಟಲ ೯ , ಶ್ಲೋಕ ಸಂಖ್ಯೆ ೧೨೩

೧೯. ಚೆನ್ನಬಸವಣ್ಣನವರ ವ.ಸಂ, ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೯೭೧ , ಪುಟ ೩೧೧

೧೫. ಸರ್ವರಿಗೆ ಹಿತವ ಮಾಡುವುದು

೧೬. ಕಡ್ಡಿಯ ಲಿಂಗಕ್ಕೆ ತೋರಿ ದಂತಧಾವನೆಯ ಮಾಡುವುದು,

೧೭. ಸರ್ವಾಯವಗಳನ್ನು ಸ್ವಚ್ಛ ಪ್ರಕ್ಷಾಳಿಸುವುದು,

೧೮. ಲಿಂಗಮುದ್ರೆಯಿಲ್ಲದ ಗುಡಿಯಲ್ಲಿ ಪಾಕವ ಮಾಡದಿರುವದು,

೧೯. ಪ್ರಣವ ಮುದ್ರೆಯಿಲ್ಲದ ವಸ್ತ್ರವ ಹೊದೆಯದಿರುವದು,

೨೦. ಹುಟ್ಟಿದ ಶಿಶುವಿಗೆ ಲಿಂಗಧಾರಣವ ಮಾಡದೇ, ತಾಯ ಮೊಲೆ ಹಾಲು ಜೇನುತುಪ್ಪ ಮುಟ್ಟಿಸದಿರುವದು,

೨೧. ಆಡಿದ ಭಾಷೆಯ ಕಡೆಪೂರೈಸುವುದು,

೨೨. ಸತ್ಯವ ನುಡಿದು ತಪ್ಪದಿರುವದು,

೨೩. ತುರುಗಳ ಕಟ್ಟಿ ರಕ್ಷಿಸುವುದು,

೨೪. ತುರುಗಳಿಗೆ ಲಿಂಗಮುದ್ರೆಯಿಕ್ಕಿ ಹಾಲು ಕರೆವುದು,

೨೫. ಮಂತ್ರಸಹಿತ ಗೋಮಯವ ಹಿಡಿದು, ಮಂತ್ರಸಹಿತ ಪುಟ್ಟವಿಕ್ಕಿ ಭಸ್ಮದ ರಾಶಿಯ ಮಾಡುವುದು,

೨೬. ಆ ಭಸ್ಮದ ರಾಶಿಯ ಪಾದೋದಕದೊಡನೆ ಉಂಡಿಯ ಕಟ್ಟುವುದು,

೨೭. ವಿಧಿಯರಿತು ಸ್ಥಾನವರಿತು ರುದ್ರಾಕ್ಷಗಳ ಧರಿಸುವುದು,

೨೮. ಶಿವಾನುಭವ ಶಾಸ್ತ್ರವ ವಿಚಾರಿಸುವುದು,

೨೯. ಮನವ ನೋಯಿಸಿ ಮಾತನಾಡದಿರುವದು,

೩೦. ಲಿಂಗದ ಕಲೆಯರಿತು ಲಿಂಗವ ಪೂಜಿಸುವುದು,

೩೧. ಗುರುಮುಖದಿಂದ 'ತಾನಾರು' ತನ್ನ ನಿಜವೇನೆಂದು ಬೆಸಗೊಳ್ಳುವುದು,

೩೨. ಷಡ್ವರ್ಗಂಗಳ ಮೆಟ್ಟಿ ಷಟ್‌ಸ್ಥಲವ ನಿಂಬುಗೊಂಡುದು,

೩೩. ಅವಿಚ್ಛಿನ್ನವಾಗಿ ಅಂಗತ್ರಯದಲ್ಲಿ ಮನ ಓಕರಿಸಿಕೊಂಡುದು,

೩೪. ಲಿಂಗದಲ್ಲಿ ಶಿಲೆಯ ಭಾವವನರಸದಿರುವುದು,

೩೫. ಜಂಗಮನಲ್ಲಿ ಕುಲವನರಸದಿಹುದು,

೩೬. ವಿಭೂತಿಯ ಮಾಣ್ಬದಿಹುದು,

೩೭. ರುದ್ರಾಕ್ಷಿಯ ಶುದ್ಧವ ಮಾಡಿ ಮಣಿಗಳ ಅರಸುವುದು,

೩೮. ಪಾದೋದಕದಲ್ಲಿ ಉಚ್ಛಿಷ್ಟವಳಿದುದು,

೩೯. ಪ್ರಸಾದದಲ್ಲಿ ರುಚಿಯ ನೋಡದಿಹುದು,

೪೦. ಮಂತ್ರದಲ್ಲಿ ಕುತ್ಸಿತ ಕಲ್ಪನೆಯ ಮಾಡದಿಹುದು,

೪೧. ಲಿಂಗಾರ್ಚನವಿರಹಿತ ಭೋಜನ ಮಾಡದಿಹುದು,

೪೨. ಐಕ್ಯರ ಸಮಾಧಿಗೊಳಿಸಿ ತಾನು ಲಿಂಗಪೂಜೆಯ ಮಾಡುವುದು,

೪೩. ಲಿಂಗದ್ರೋಹವ ಕೇಳಿ ತಾನು ಪ್ರಾಣಬಿಡುವುದು,

೪೪. ಜಂಗಮದ್ರೋಹವ ಕೇಳಿ ತಾನು ಐಕ್ಯನಾಗುವುದು,

೪೫. ಲಿಂಗದ್ರೋಹವ ಮಾಡಿದವನ ಪ್ರಾಣವ ಭೇದಿಸುವುದು,

೪೬. ಜಂಗಮದ್ರೋಹ ಮಾಡಿದವನ ಶಿರವನೀಡಾಡುವುದು,

೪೭. ಅಷ್ಟಾವರಣ ಸಂಗವ ಮಾಡುವ ಭೇದವ ತಿಳಿವುದು,

೪೮. ತಾನಾರು ಲಿಂಗವಾರು ಎಂಬ ಭೇದವು ತಿಲಮಾತ್ರ ಇಲ್ಲದಿರುವುದು,

೪೯. ತನ್ನ ನಿಜ ವಿಚಾರವ ತಾ ಮರೆಯದೆ ಷಟ್‌ಸ್ಥಲದವರಿಗೆ ಅರುಹಿ ತನ್ನಂತೆ ಮಾಡುವುದು

೫೦. ಇಂತಿಷ್ಟು ಆಚಾರಂಗಳ ಕಡೆ ಮುಟ್ಟಿಸುವುದು.

ಈ ಶೀಲಗಳನ್ನು ಸಾಧಕನು ಮೈಗೂಡಿಸಿಕೊಳ್ಳುತ್ತಾ ಹೋದಂತೆಲ್ಲ ಶಿವನ ಕುರಿತಾದ ನಿಷ್ಠೆ ಬಲವಾಗುತ್ತವೆ. ಅದರಿಂದಾಗಿ ಶಿವ, ಶಿವಭಕ್ತ, ಶಿವಧರ್ಮಗಳ ಬಗ್ಗೆ ನಿಂದೆಯನ್ನು ಕೇಳದಿರುವ ಛಲ ಅವನಲ್ಲಿ ಉದಯಿಸುತ್ತದೆ. ಕಾರಣ ಯಾರು ಶಿವನಿಂದೆ ಮಾಡುತ್ತಾರೋ ಅಂತಹ ಶಿವನಿಂದಕನನ್ನು ಘಾತಿಸುತ್ತೇನೆಂದು ಮನಸ್ಸು ಮಾಡುವುದು ಸಹಜ. ಆದರೆ ತನ್ನದೊಂದೇ ಶ್ರೇಷ್ಠವೆಂಬ ಹಠ, ಅಂಧಾಭಿಮಾನಗಳು ಗಣಾಚಾರವೆಂದರ್ಥವಲ್ಲ. ಅದಕ್ಕೆ ಬದಲಾಗಿ ಕುಟಿಲ, ಕುಹಕ, ಕುತ್ಸಿತ, ಕುಬುದ್ಧಿಗಳನ್ನು ದಿಟ್ಟತನದಿಂದ ಖಂಡಿಸಿ ಅದನ್ನು ತಡೆಯಲು ಪ್ರಯತ್ನಿಸುವ ಜೊತೆಗೆ ಶ್ರೇಷ್ಠವಾದ ಸತ್ಯವನ್ನು ಮಾತ್ರ ಅಂಗೀಕರಿಸುತ್ತೇನೆಂಬ ದೃಢನಿಷ್ಠೆಯಾಗಿದೆ. ಆದುದರಿಂದ ಭಕ್ತಿ ಭಂಡಾರಿ ಬಸವಣ್ಣನವರು ಸಹ 'ನ್ಯಾಯ ನಿಷ್ಠುರಿ; ದಾಕ್ಷಿಣ್ಯಪರನು ನಾನಲ್ಲ' ಎಂದಿದ್ದಾರೆ.

ಒಟ್ಟಿನಲ್ಲಿ ಶಿವಾಗಮ ಮತ್ತು ವಚನ ಸಾಹಿತ್ಯಗಳೆರಡರಲ್ಲಿಯೂ 'ಶಿವನ, ಶಿವಭಕ್ತನ, ಹಾಗೂ ಅಷ್ಟಾವರಣದ ನಿಂದೆಯನ್ನು ಕೇಳದಿರುವುದು ಹಾಗೂ ಯಾರು ಶಿವಧರ್ಮದ ನಿಂದೆ ಮಾಡುತ್ತಾರೋ ಅಂತಹ ನಿಂದಕನನ್ನು ಘಾತಿಸುತ್ತೇನೆಂದು ಮನಸ್ಸು ಮಾಡುವುದೇ ಗಣಾಚಾರ'ವೆಂದು ವಿವರಿಸಲಾಗಿದೆ. ಆದರೆ ಘಾತಿಸಬೇಕೆನ್ನುವ ಈ ಮನೋಭಾವವು ಅಹಂಕಾರ ಅಸೂಯಾದಿಗಳ ತಾಮಸವೃತ್ತಿಯಿಂದ ಪ್ರೇರಿತವಾಗಿದ್ದಲ್ಲ; ಬದಲಾಗಿ ಸಮಾಜದಲ್ಲಿಯ ಕುಹಕ, ಕುತ್ಸಿತ, ಕುಬುದ್ಧಿಗಳನ್ನು ದಿಟ್ಟತನದಿಂದ ಖಂಡಿಸಿ ಅದನ್ನು ತಡೆಯಲು ಪ್ರಯತ್ನಿಸಬೇಕೆನ್ನುವುದೇ ಶಿವಾಗಮ ಮತ್ತು ವಚನ ಸಾಹಿತ್ಯಗಳ ಅಭಿಪ್ರಾಯವಾಗಿದೆ.

೫.೨.೫ ಭೃತ್ಯಾಚಾರ

'ನಾನು ಶಿವಭಕ್ತರೆಲ್ಲರ ಭೃತ್ಯ(ಸೇವಕ)ನೆಂದು ಪರಿಭಾವಿಸಿ ನಡೆಯುವುದೇ ಭೃತ್ಯಾಚಾರ'ವಾಗಿದೆ. ಇದು ವ್ಯಕ್ತಿಯಲ್ಲಿ ಕಿಂಕರತ್ವವನ್ನು ಹಾಗೂ ವಿನಮ್ರವಾದ ಸಮರ್ಪಣಾ ಮನೋಭಾವನೆಯನ್ನು ಪ್ರತಿಪಾದಿಸುವದರಿಂದ ಪಂಚಾಚಾರಗಳಲ್ಲಿ ಭೃತ್ಯಾಚಾರಕ್ಕೆ ವಿಶಿಷ್ಟ ಪ್ರಾಧಾನ್ಯತೆಯಿದೆ.

ಭೃತ್ಯಾಚಾರದ ಬಗ್ಗೆ ಶಿವಾಗಮಗಳಲ್ಲಿ ಹಾಗೂ ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅವುಗಳ ವಿವೇಚನೆ ಇಂತಿದೆ –

ಭೃತ್ಯಾಚಾರದ ಅರ್ಥ :

ಭೃತ್ಯಾಚಾರದ ವ್ಯಾಖ್ಯಾನವನ್ನು ಚಂದ್ರಜ್ಞಾನಾಗಮ ಹೀಗೆ ನಿರೂಪಿಸುತ್ತದೆ–

ಶಿವಭಕ್ತಜನಾಃ ಸರ್ವೇ ವರಿಷ್ಠಾಃ ಪೃಥಿವೀತಲೇ।
ತೇಷಾಂ ಭೃತ್ಯೋಽಹಮಿತಿ ಯದ್ ಭೃತ್ಯಾಚಾರ ಇತಿ ಸ್ಮೃತಃ॥[೧]

ಅರ್ಥಾತ್ ಈ ಜಗತ್ತಿನಲ್ಲಿ ಎಲ್ಲ ಶಿವಭಕ್ತರು ಶ್ರೇಷ್ಠರಾಗಿದ್ದು, ನಾನವರ ಸೇವಕನೆಂದು ಭಾವಿಸಿ ವರ್ತಿಸುವುದೇ ಭೃತ್ಯಾಚಾರವೆನಿಸುತ್ತದೆ. ವ್ಯಕ್ತಿಯು ತನ್ನಲ್ಲಿಯ ಸಂಕುಚಿತ 'ಅಹಂ'ಭಾವವನ್ನು ತೊಡೆದು ಗುರು, ಜಂಗಮ, ಶಿವಭಕ್ತರಲ್ಲಿ ಸದಾ ಭಕ್ತಿಭಾವದಿಂದ ಸೇವೆ ಮಾಡುವ ಮನೋಭಾವನೆಯೇ ಭೃತ್ಯಾಚಾರವಾಗಿದೆ. ಪಾರಮೇಶ್ವರಾಗಮದ ಉಲ್ಲೇಖದಂತೆ–

ಕೃತಕೃತ್ಯಸ್ಯ ತೃಪ್ತಸ್ಯ ಶಿವಸ್ಯ ಪರಮೇಷ್ಠಿನಃ।
ನ ಕೈಃ ಕಿಂ ಕ್ರಿಯತೇ ಕರ್ಮ ಭಾವಮಾತ್ರಂ ಹಿ ಗೃಹ್ಯತೇ ॥[೨]

ಕೃತಕತ್ಯನಾದ, ತೃಪ್ತನಾದ, ಎಲ್ಲರ ಸ್ವಾಮಿಯಾದ ಶಿವನಿಗೆ ಯಾರಿಂದ ಯಾವ ಕರ್ಮವು ಬೇಕಾಗಿಲ್ಲ. ಅವನಿಗೆ ಬೇಕಾದುದು ಭಕ್ತಿಭಾವವು ಮಾತ್ರ ಎಂಬಂತೆ ಸದೃಢ ಭಕ್ತಿಯಿಲ್ಲದೆ ಕೇವಲ ಧರ್ಮಾಚರಣೆಯ ಮೂಲಕ ಶಿವನನ್ನು ಸಾಕ್ಷಾತ್ಕರಿಸಿ ಕೊಳ್ಳಲು ಸಾಧ್ಯವಿಲ್ಲ. ಕಾರಣ ನಮ್ಮ ಕಾರ್ಯಗಳು, ಆಚರಣೆಗಳು ಡಾಂಬಿಕ ಆಚರಣೆಗಳಾಗದೇ ನಿರಪೇಕ್ಷ ಹಾಗೂ ಸದೃಢಭಕ್ತಿಯಿಂದ ಕೂಡಿದ ವಿನಮ್ರ ಆಚರಣೆಗಳಾಗಿರಬೇಕು. ಇಂಥ ಭಕ್ತಿಭಾವವು ಉದಯಿಸಬೇಕಾದರೆ ಮೊದಲು ಅಹಂಕಾರವನ್ನು ಬದಿಗಿರಿಸಬೇಕಾಗುತ್ತದೆ. ಏಕೆಂದರೆ ವಿನಯಗುಣವಾಗಲಿ, ವಿನಮ್ರ ಭಾವವಾಗಲಿ ಅಹಂಕಾರಿ ಮನುಷ್ಯನಿಗೆ ಅಳವಡಲು ಸಾಧ್ಯವಿಲ್ಲ. 'ಅಹಂ' ಭಾವವನ್ನು ಬದಿಗೊತ್ತಿ 'ಸರ್ವಂ ಶಿವಮಯಂ' ಭಾವನೆಯನ್ನು ತಳೆದಾಗ ಮಾತ್ರ ಪರಶಿವನ ಒಲುಮೆ ಸಾಧ್ಯ. ಇದನ್ನೇ ಅಲ್ಲಮಪ್ರಭುಗಳು ಅಲಂಕಾರಿಕವಾಗಿ :

.......ಅಹಂಕಾರವೆಂಬ ಅಲಗ ಹಿಡಿದು ಮಾಡುವ ಭಕ್ತಿ ತನ್ನನೆ ಇರಿವುದು
ಗುಹೇಶ್ವರನೆಂಬ ಹಗೆಯ ಗೆಲುವಡೆ,

---

೧. ಚಂ. ಆ. ಕ್ರಿ. ಪಾ. ಪಟಲ ೯, ಶ್ಲೋಕ ಸಂಖ್ಯೆ ೯
೨. ಪಾ.ಆ. ಪಟಲ ೧೨, ಶ್ಲೋಕ ಸಂಖ್ಯೆ ೨೪

ಅರಿವೆಂಬ ಅಲಗ ಅವಧಾನ ತಪ್ಪದೆ ಹಿಡಿಯಬೇಕು ನೋಡಾ ಸಂಗನಬಸವಣ್ಣಾ.[೩]

ಎಂದು ಅರ್ಥಪೂರ್ಣವಾಗಿ ನುಡಿದಿದ್ದಾರೆ. ಕಾರಣ ಪಂಚಾಚಾರಗಳಲ್ಲಿ 'ಅಹಂ'ನ್ನು ಮೆಟ್ಟಿ ಹಾಕುವ, ಸೇವಾ ಮನೋಭಾವನೆಯನ್ನು ಪ್ರತಿಪಾದಿಸುವ ಭೃತ್ಯಾಚಾರಕ್ಕೆ ವಿಶಿಷ್ಟ ಪ್ರಾಧಾನ್ಯತೆಯಿದೆ. ಕಾರಣ ಪಾರಮೇಶ್ವರಾಗಮವು–

ಮಲ್ಲಿಂಗಲಿಂಗಚಿಹ್ನಾನಾಂ ದರ್ಶನೇ ಮಯಿ ಭಕ್ತಿತಃ।
ಅಮಾಯಯಾಽನಪೇಕ್ಷಾತಃ ಸಾಷ್ಟಾಂಗಮಭಿವಾದನಮ್ ॥[೪]

ಇಷ್ಟಲಿಂಗ ಹಾಗೂ ಅದರ ಅಂಕಿತದ ವ್ಯಕ್ತಿಗಳನ್ನು ಕಂಡಾಗ ಸಾಕ್ಷಾತ್ ಶಿವದರ್ಶನವಾದಂತೆ ನಿರಪೇಕ್ಷ, ನಿಷ್ಕಪಟತನದಿಂದ ಸಾಷ್ಟಾಂಗ ನಮಸ್ಕರಿಸಬೇಕೆಂದು ಆಗಮಗಳು ತಿಳಿಸುತ್ತವೆ. ಏಕೆಂದರೆ

ಭಕ್ತಸ್ತು ತಾದೃಶೋ ಯತ್ರ ದೇಶೇ ವಸತಿ ಪೂತಧೀಃ।
ನಿತ್ಯಂ ವಸಾಮಿತತ್ತ್ವವ ಸಗುಣೋಽಹಂ ತ್ವಯಾ ಸಹ ॥
ಭಕ್ತೋ ಹಿ ಮಾಂ ವಶೀಕರ್ತುಂ ಸಮರ್ಥಃ ಖಲು ಭಾಮಿನಿ।
ಯತೋ ಭಕ್ತಪರಾಧೀನೋ ಭಕ್ತ್ಯಾಹಂ ವಿವಶೀಕೃತಃ ॥
ತತೋಽಹಂ ನಹಿ ಕೈಲಾಸೇ ನ ಮೇರೌ ನ ಚ ಮಂದರೇ।
ಯತ್ರ ತಿಷ್ಠಂತಿ ಮದ್ಭಕ್ತಾಸ್ತತ್ರ ತಿಷ್ಠಾಮಿ ಪಾರ್ವತಿ
ತಸ್ಮಾತ್ಸರ್ವಾಣಿ ತೀರ್ಥಾನಿ ಪುಣ್ಯಕ್ಷೇತ್ರಾಣಿ ಪರ್ವತಾನ್।
ಭೌತಿಕಾನಿ ಚ ಸಂತ್ಯಜ್ಯ ಭಕ್ತಮೇವ ಭಜೇತ್ಸುಧೀಃ ॥[೫]

ಪವಿತ್ರ ಬುದ್ಧಿಯುಳ್ಳ ಶಿವಭಕ್ತರು ಎಲ್ಲಿ ಇರುವರೋ ಅಲ್ಲಿ ಸಗುಣಸ್ವರೂಪನಾದ ಶಿವನು ಅಲ್ಲಿಯೇ ನಿತ್ಯವೂ ವಾಸಮಾಡುತ್ತಾನೆ. ಶಿವನು ಭಕ್ತರ ಭಕ್ತಿಗೆ ಪರವಶನಾಗಿ ಭಕ್ತ ಪರಾಧೀನನಾಗುತ್ತಾನೆ. ಆದ್ದರಿಂದ ಶಿವನು ಕೈಲಾಸದಲ್ಲಾಗಲಿ, ಮೇರುಪರ್ವತದಲ್ಲಾಗಲೀ ಮಂದಾರ ಪರ್ವತದಲ್ಲಾದಲೀ ಅಥವಾ ದೇವಾಲಯದಲ್ಲಾಗಲೀ ಇರದೇ, ಶಿವಭಕ್ತರಿರುವಲ್ಲಿ ಇರುತ್ತಾನೆ. ಈ ಕಾರಣದಿಂದಾಗಿ, ಬುದ್ಧಿವಂತನು ಸರ್ವತೀರ್ಥಗಳನ್ನು ಪುಣ್ಯಕ್ಷೇತ್ರಗಳನ್ನು ಮತ್ತು ಪರ್ವತಗಳನ್ನು ಹಾಗೂ ಇತರ ಪವಿತ್ರವಾದ ಭೌತಿಕ ಸ್ಥಾನಗಳನ್ನು ನಿರಾಕರಿಸಿ, ಶಿವಭಕ್ತನನ್ನು ಆಶ್ರಯಿಸಬೇಕೆಂದು ಆಗಮಗಳು ಅರುಹುತ್ತವೆ. ಆದುದರಿಂದ ಲಿಂಗಧಾರಿಗಳನ್ನು, ವಿಭೂತಿ ರುದ್ರಾಕ್ಷಿ ಉಳ್ಳವರನ್ನು ಹಾಗೂ ಶಿವಭಕ್ತರನ್ನು ಕಂಡೊಡನೆ ಸಂತೋಷದಿಂದ ನಮಸ್ಕರಿಸಬೇಕು, ಉಪಚರಿಸಬೇಕು ಹಾಗೂ ಯಥಾಶಕ್ತಿ ಅರ್ಚಿಸಬೇಕೆಂದು ತಿಳಿಸಿ, ಶಿವಯೋಗಿಗಳನ್ನು ಸತ್ಕರಿಸುವ ಬಗೆಯನ್ನು ವಿವರಿಸಿವೆ.

ಯಥಾಶಕ್ತ್ಯರ್ಚಯೇದನ್ನೈರತಿಥೀನ್ ಶಿವಯೋಗಿನಃ ॥
ತೋಷಯೇತ್ ಸರ್ವಯತ್ನೇನ ಯದ್ಯತ್ಕಾಲೇ ಸಮಾಗತಮ್।
ಪ್ರತ್ಯುತ್ಥಾಯಭಿಗಮನಂ ವಂದನಂ ಪ್ರಿಯಭಾಷಣಮ್ ॥

---

೩. ಅಲ್ಲಮಪ್ರಭುದೇವರ ವ.ಸಂಪುಟ. ಸಮಗ್ರ ವಚನಸಂಪುಟ ೨, ವಚನಸಂಖ್ಯೆ ೧೪೯೭, ಪುಟ೪೪೫
೪. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೩೬
೫. ಸೂ.ಆ. ಪಟಲ ೯, ಶ್ಲೋಕ ಸಂಖ್ಯೆ ೩೪ – ೩೭

ಆಸನಂ ಚಾನ್ನಪಾನಾದಿ ಯಥಾಶಕ್ತ್ಯರ್ಚಯೇಚ್ಛಿವೇ।
ಸರ್ವಾಭಾವೇಽಪ್ಯಶಕ್ತೋ ವಾ ವಿನಯಾದಿಭಿರರ್ಚಯೇತ್ ॥
ಕಲ್ಯಾಣೀಂ ವಾ ವದೇದ್ ವಾಣೀಂಪ್ರಮಾದಃ ಸ್ಯಾದಥಾನ್ಯಥಾ॥[೬]

ಶಿವಯೋಗಿಗಳಾದ ಅತಿಥಿಗಳನ್ನು ಶಕ್ತ್ಯಾನುಸಾರ ಆಹಾರಗಳಿಂದ ಸತ್ಕರಿಸಬೇಕು. ಯಾವ ಯಾವ ಕಾಲದಲ್ಲಿ ಯಾವುದು ಲಭ್ಯವೋ ಅದನ್ನಿತ್ತು ಎಲ್ಲಾ ಯತ್ನಗಳಿಂದ ಅವನನ್ನು ಸಂತೋಷಗೊಳಿಸಬೇಕು. ಎದ್ದು ನಿಲ್ಲುವುದು, ಎದುರುಗೊಳ್ಳುವುದು, ವಂದಿಸುವುದು, ಪ್ರಿಯವಾಗಿ ಮಾತನಾಡುವುದು, ಆಸನವನ್ನು ನೀಡುವುದು, ಅನ್ನಪಾನಾದಿಗಳನ್ನು ಅರ್ಪಿಸುವುದು, ಇತ್ಯಾದಿಗಳಿಂದ ಅವನನ್ನು ಗೌರವಿಸಬೇಕು. ಏನೂ ಇಲ್ಲದಿದ್ದರೆ ಅಥವಾ ಅಶಕ್ತನಾಗಿದ್ದರೆ ವಿನಯಾದಿಗಳಿಂದ ಸೇವೆ ಮಾಡಬೇಕು. ಮಂಗಲಕರವಾದ ಮಾತುಗಳನ್ನು ಆಡಬೇಕು.ಹಾಗೆ ಮಾಡದಿದ್ದರೆ ಪ್ರಮಾದವಾಗುತ್ತದೆ ಎಂದು ಎಚ್ಚರಿಸುತ್ತವೆ.

ಈ ಅಭಿಪ್ರಾಯವನ್ನೇ ಸಮರ್ಥಿಸುತ್ತ ಅಕ್ಕಮ್ಮನೆಂಬ ವಚನಗಾರ್ತಿಯು 'ಭಕ್ತರ ಮನೆಗೆ ಸತ್ಯ ಶರಣರು ಬಂದಲ್ಲಿಯೆ, ಮದುವೆಯ ಉತ್ಸಾಹಕ್ಕಿಂದ ವೆಗ್ಗಳವೆಂದು ಕಂಡು, ತನುಕರಗಿ, ಮನಬೆರೆಸಿ, ಕಂಗಳು ತುಂಬಿ ಪುಳುಕಿತವಾಗಿ, ವಂಚನೆ ಸಂಕಲ್ಪವೆಂಬ ಶಂಕೆದೋರದೆ, ನಿಶ್ಶಂಕನಾಗಿ ಮಾಡುವ ಭಕ್ತನ ವಂಕದ ಬಾಗಿಲೆ ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗದ ಮಸ್ತಕ.'[೭] ಎಂದು ಭಕ್ತಿಪೂರ್ವಕವಾಗಿ ಶಿವಭಕ್ತರನ್ನು ಸತ್ಕರಿಸುವವನ ಮನೆಯ ಬಾಗಿಲೇ ಪರಶಿವನ ಸದನವೆಂದು ಹೇಳಿದ್ದಾರೆ.

ಹೀಗೆ ನಿರಪೇಕ್ಷ ಮನೋಭಾವದಿಂದ ಸತ್ಕರಿಸುವಾಗ ಶಿವಭಕ್ತರಲ್ಲಿ ಯಾವುದೇ ಬಗೆಯ ಭೇದಭಾವವನ್ನು ಮಾಡಬಾರದೆಂದು ಆಗಮಗಳು ತಿಳಿಸುತ್ತಾ –

ನ ಬಾಲಯುವವೃದ್ಧಾದಿ ತಾರತಮ್ಯಧಿಯಾ ಭಜೇತ್ ॥
ಪ್ರತ್ಯುತ್ತಿಷ್ಠೇತ್ ತದಾನ್ಯೋನ್ಯಂ ದೃಷ್ಟಮಾತ್ರೇಣ ಲಿಂಗಿನಃ ॥
ಅಭಿವಂದೇತ್ ತದಾನ್ಯೋನ್ಯಂ ನ ಭೇದೋ ಲಿಂಗಧಾರಿಣಾಮ್॥[೮]

ಲಿಂಗಧಾರಿಯಾದ ಶಿವಯೋಗಿಯನ್ನು ಬಾಲಕ, ತರುಣ, ವೃದ್ಧನೆಂದು ತಾರತಮ್ಯ ಮಾಡದೇ ಸೇವೆ ಮಾಡಬೇಕು. ಲಿಂಗಧಾರಿಗಳು ಪರಸ್ಪರರಿಗೆ ವಂದಿಸಬೇಕು ಎಂಬ ಪಾರಮೇಶ್ವರಾಗಮದ ಮಾತು ಭೃತ್ಯಾಚಾರವನ್ನು ಪುಷ್ಟೀಕರಿಸುತ್ತದೆ. ಶರಣರ ವಚನದಲ್ಲಿಯೂ ಇದೇ ಮನೋಧರ್ಮ ವ್ಯಕ್ತವಾಗಿದೆ.

ಶರಣ ಶರಣನ ಕಂಡು, 'ಶರಣು' ಎಂದು ಕರವ ಮುಗಿವುದೆ ಭಕ್ತಿ ಲಕ್ಷಣ.
ಶರಣ ಶರಣನ ಕಂಡು, ಪಾದವಿಡಿದು ವಂದಿಸುವುದೆ ಭಕ್ತಿ ಲಕ್ಷಣ.
ಶರಣ ಚರಣವ ಪಿಡಿಯದೆ ಕಂಡೂ ಕಾಣದೆ ಪೋದನಾದಡೆ
ಕೂಡಲಚೆನ್ನಸಂಗನ ಶರಣರು ಮನ್ನಿಸರಯ್ಯಾ.[೯]

೬. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೮೧ – ೮೪
೭. ಶಿವಶರಣೆಯರ ವ.ಸಂ., ಸಮಗ್ರ ವಚನ ಸಂಪುಟ ೫, ವಚನಸಂಖ್ಯೆ ೫೩೧, ಪುಟ ೧೬೫
೮. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೪೮–೪೯
೯. ಚೆನ್ನಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೩,ವಚನಸಂಖ್ಯೆ ೧೫೮೨. ಪುಟ೫೭೫

ಎಂದು 'ಇತರ ಭಕ್ತರಿಗೆ ವಂದಿಸುವಾತನೇ, ಪೂಜಿಸುವಾತನೇ ಭಕ್ತ' ನೆಂದು ವಚನಕಾರರೂ ಅರುಹಿದ್ದಾರೆ. ಷಣ್ಮುಖ ಶಿವಯೋಗಿಗಳು "ಇದಿರಿನಲ್ಲಿ ಜಂಗಮವು ಬರುವುದು ಕಂಡು ಸದರನಿಳಿದು ನಡೆದು ಹೋಗಿ, ಚರಣಕ್ಕೆರಗುವುದೇ ಉತ್ತಮ ಭಕ್ತಿ ಎನಿಸಿತ್ತು. ಇದ್ದ ಸ್ಥಾನದಲ್ಲಿಯೇ ಎದ್ದು ನಿಲ್ಲುವುದೇ ಮಧ್ಯಮ ಭಕ್ತಿ ಎನಿಸಿತ್ತು. ಕುಳಿತಲ್ಲಿಯೇ ಕರಮುಗಿಯುವುದೇ ಕನಿಷ್ಠ ಭಕ್ತಿ ಎನಿಸಿತ್ತು. ಈ ಮೂರು ತೆರದ ಭಕ್ತಿ ಇಲ್ಲದೆ ಗರ್ವದಿಂದ ಬೆರೆತುಕೊಂಡು ಕುಳಿತರೆ ಮುಂದೆ ಹಿರಿಯ ಶೂಲದ ಮುಂದೆ ಕುಳ್ಳಿರಿಸುವನು ನೋಡಾ ನಮ್ಮ ಅಖಂಡೇಶ್ವರಾ"[೧೦] ಎಂದು ಅತ್ಯಂತ ಮನೋಜ್ಞವಾಗಿ ನುಡಿದಿದ್ದಾರೆ. ಕಾರಣ –

ಯೇ ಪೂಜಯತಿ ತಾನ್ನಿತ್ಯಂ ಮನೋವಾಕ್ಕಾಯಕರ್ಮಭಿಃ।
ತೇಷಾಮಹಂ ಸಮುದ್ಧರ್ತಾ ಸಂಸಾರಭವಸಾಗರಾತ್
ಯೇ ಪೋಷಯಂತಿ ತಾನ್ ಭಕ್ತ್ಯಾ ಭೋಜನಾಚ್ಛಾದನಾದಿಭಿಃ।
ತೇ ವೈ ಮಮ ಪ್ರಿಯಕರಾಸ್ತವ ಚಾಪಿ ಮಹೇಶ್ವರಿ॥

ಯಾರು, ಸದ್ಭಕ್ತರನ್ನು ಕಾಯಾ–ವಾಚಾ–ಮನಸಾ ನಿತ್ಯವೂ ಪೂಜಿಸುತ್ತಾರೋ, ಅವರನ್ನು ಶಿವನು ಈ ಸಂಸಾರವೆಂಬ ಭವಸಾಗರದಿಂದ ದಾಟಿಸುವ ಮೂಲಕ ಉದ್ಧರಿಸುವನು. ಯಾರು ಸದ್ಭಕ್ತರಿಗೆ ಭೋಜನ, ಹೊದಿಕೆ ಮೊದಲಾದುವನ್ನು ನೀಡಿ ಭಕ್ತಿಭಾವದಿಂದ ಪೋಷಣೆ ಮಾಡುತ್ತಾರೋ ಅವರು ಶಿವನಿಗೆ ಪ್ರಿಯರಾಗುತ್ತಾರೆ ಎನ್ನುವ ಮೂಲಕ ಆಗಮವು ಭೃತ್ಯಾಚಾರಕ್ಕೆ ಪ್ರಾಶಸ್ತ್ಯ ನೀಡಿದೆ.

ಚಂದ್ರಜ್ಞಾನಾಗಮವು ಭೃತ್ಯಾಚಾರದಲ್ಲಿ ಭೃತ್ಯಭಾವ ಹಾಗೂ ವೀರಭೃತ್ಯಭಾವವೆಂದು ಎರಡು ವಿಧಗಳನ್ನು ಮಾಡಿದೆ.

ಭೃತ್ಯತ್ವಂ ವೀರಭೃತ್ಯತ್ವಂ ಭೃತ್ಯಾಚಾರೋ ದ್ವಿಧಾ ಮತಃ।
ಗುರುಲಿಂಗಜಂಗಮಾನಾಂ ಕೈಂಕರ್ಯಾಚರಣಂ ಹಿ ಯತ್॥
ಭೃತ್ಯತ್ವಮಿತಿ ನಿರ್ದಿಷ್ಟಂ ದೇವದೇವೇನ ಶಂಭುನಾ॥
ದೇಶಿಕಾಯ ತನುಂ ಚಿತ್ತಂ ಶಂಭವೇ ಚ ಧನಂ ತಥಾ।
ಜಂಗಮಾಯ ಸಮರ್ಪ್ಯೈವಂ ಮಹೋತ್ಸಾಹಸಮನ್ವಿತಃ॥
ಮುಕ್ತಿಮೇವ ಪರಾಂ ಕಾಂಕ್ಷಮಾಣೋ ಯದವತಿಷ್ಠತೇ।
ತನ್ಮತಂ ವೀರಭೃತ್ಯತ್ವಂ ಶಿವಾನುಗ್ರಹಸಾಧನಮ್॥

ಕಿಂಕರಭಾವದಿಂದ ಗುರು, ಲಿಂಗ, ಜಂಗಮರಿಗೆ ಸದಾನಿಷ್ಠನಾಗಿ ಭಕ್ತಿಭಾವದಿಂದ ನಿತ್ಯಸೇವೆ ಮಾಡುವುದೇ ಭೃತ್ಯತ್ವವಾಗಿದೆ. ಹಾಗೂ ಆ ಕಿಂಕರಭಾವವೇ ಬಲಿದು ಅತ್ಯಂತ ವಿನಮ್ರತೆಯಿಂದ ಗುರುವಿಗೆ ತನುವನ್ನು, ಲಿಂಗಕ್ಕೆ ಮನವನ್ನು ಹಾಗೂ ಜಂಗಮಕ್ಕೆ ಧನವನ್ನು ಸಮರ್ಪಿಸಿ, ಇಹಲೋಕದ ಯಾವ ಸುಖವನ್ನೂ ಅಪೇಕ್ಷಿಸದೇ, ಮುಕ್ತಿಯ ಕಾಮನೆಯಿಂದ ಮಾತ್ರ ಶರೀರ ಧಾರಣೆ ಮಾಡುವ ಹಾಗೂ ಶಿವಾನುಗ್ರಹಕ್ಕೆ ಪಾತ್ರವಾಗುವ ಸ್ಥಿತಿಯೇ ವೀರಭೃತ್ಯತ್ವವಾಗಿದೆ ಎಂದು ತಿಳಿಸಿದೆ.

---

೧೦. ಸಮಗ್ರ ವಚನ ಸಂಪುಟ ೧೪, ಸಂಕೀರ್ಣ ವ.ಸಂ ೯, ವಚನಸಂಖ್ಯೆ ೩೭೭, ಪುಟ ೨೧೩
೧೧. ಸೂ.ಆ. ಪಟಲ ೯, ಶ್ಲೋಕ ಸಂಖ್ಯೆ ೨೫ – ೨೬
೧೨. ಚಂ. ಆ. ಕ್ರಿ. ಪಾ. ಪಟಲ ೯, ಶ್ಲೋಕ ಸಂಖ್ಯೆ ೧೨೪ –೧೨೬

ಕಾರಣ ಈ ದೇಹದ ಮೇಲಿನ ಮಮಕಾರವನ್ನು ತ್ಯಜಿಸಿ, ಗುರು, ಲಿಂಗ, ಜಂಗಮರಿಗೆ ನಿಷ್ಠನಾಗಿ ಭಕ್ತಿಭಾವದಿಂದ ನಿತ್ಯಸೇವೆ ಮಾಡುವುದು ಮಾತ್ರವಲ್ಲದೇ ಸರ್ವವನ್ನೂ ಅವರಿಗೆ ಸಮರ್ಪಿಸಿ, ವಿನಯಶೀಲನಾಗಿ, ಶಿವಭಕ್ತರಲ್ಲಿ ತಾರತಮ್ಯವೆಸಗದೇ ಅವರ ಸೇವೆಯಲ್ಲಿಯೇ ಆ ಪರಶಿವನನ್ನು ಕಂಡು ಆನಂದಿಸುವ ಸ್ಥಿತಿಯೇ ನಿಜವಾದ ಭೃತ್ಯತ್ವವೆಂದು ಆಗಮಗಳು ಅರುಹುತ್ತವೆ.

ಭೃತ್ಯಾಚಾರದ ಈ ಬಗೆಯ ಮನೋಭಾವವನ್ನು ಬಸವಣ್ಣನವರ 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ವಚನದಲ್ಲಿಯೂ ಹಾಗೂ 'ಮುಗಿದ ಕರ, ಬಾಗಿದ ಶಿರ'ದ ಅವರ ಜೀವನದಲ್ಲಿಯೂ ಕಾಣಬಹುದು. 'ಸದುವಿನಯವೇ ಸದಾಶಿವನ ಒಲುಮೆ ಎಂದು ಭಾವಿಸಿ ಅದನ್ನು ಜೀವನದಲ್ಲಿ ಸಾಧಿಸಿ ತೋರಿಸಿದ ಬಸವಣ್ಣನವರು ಭೃತ್ಯಾಚಾರಕ್ಕೆ ಶ್ರೇಷ್ಠ ನಿದರ್ಶನವಾಗಿದ್ದಾರೆ. ಇದೇ ಮನೋಭಾವವನ್ನೇ ವ್ಯಕ್ತಪಡಿಸುತ್ತಾ ಅಕ್ಕಮಹಾದೇವಿಯು 'ಆಯತ ಸ್ವಾಯತ ಅನುಭಾವವ ನಾನೆತ್ತ ಬಲ್ಲೆನಯ್ಯಾ? ಗುರುಲಿಂಗ ಜಂಗಮಕ್ಕೆ ಅರ್ಥ ಪ್ರಾಣಾಭಿಮಾನವಂ ಸಮರ್ಪಿಸಿ, ಅಹಂಕಾರವಳಿದಿಹಂತಹ ಪುರಾತನರ ಮನೆಯಲ್ಲಿ ಭೃತ್ಯರ ಭೃತ್ಯಳಾಗಿಪ್ಪೆನಯ್ಯಾ'[೧೩] ಎಂದಿದ್ದಾರೆ. ಜೇಡರದಾಸಿಮಯ್ಯನವರು 'ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ; ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲು ಕಾಯ್ದಿಪ್ಪ ಸೊಣಗನಪ್ಪೆ. ಕರ್ತಾರ! ನಿನಗೆ ಕರವೆತ್ತಿ ಹೊಡೆವಡುವ ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನಯ್ಯಾ, ರಾಮನಾಥಾ!'[೧೪] ಎಂದು ತಮ್ಮ ಭೃತ್ಯಭಾವವನ್ನು ತೋರ್ಪಡಿಸಿದ್ದಾರೆ.

ಹೀಗೆ ಭೃತ್ಯಾಚಾರವು ವಿನಯ ಗುಣವನ್ನೇ ಪ್ರಧಾನವಾಗಿ ಹೊಂದಿ ನಿರಹಂಕಾರತ್ವವನ್ನು ಪ್ರತಿಪಾದಿಸುತ್ತದೆ. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರಗಳನ್ನು ಪರಿಪೂರ್ಣವಾಗಿ ಸಾಧಿಸಿದ ವ್ಯಕ್ತಿಯಲ್ಲೂ ಸಹ ಒಮ್ಮೆ ಅಹಂಕಾರ, ಅಭಿಮಾನ ಮೂಡಿದರೆ ಆ ವ್ಯಕ್ತಿಯ ಆಧ್ಯಾತ್ಮಿಕ ಸಾಧನೆ ನಿಶ್ಚಿತವಾಗಿಯೂ ಪತನವಾಗುತ್ತದೆ. ಕಾರಣ ಭೃತ್ಯಭಾವವೇ ಎಲ್ಲ ಆಚಾರಗಳ ಫಲಪ್ರಾಪ್ತಿಗೆ ಕಾರಣವಾಗಿದೆ. ಅಲ್ಲದೇ ಈ ಭೃತ್ಯಭಾವವು ವ್ಯಕ್ತಿಯ ಆಧ್ಯಾತ್ಮಿಕ ಸಾಧನೆಯ ಆರಂಭಿಕ ಹಂತದಿಂದ ಹಿಡಿದು ಅಂತಿಮ ಹಂತದವರೆಗೂ ಅತೀ ಅವಶ್ಯಕವಾಗಿದೆ.

ಒಟ್ಟಿನಲ್ಲಿ ಭೃತ್ಯಾಚಾರದ ವಿಷಯ ಪ್ರತಿಪಾದನೆಯನ್ನು ಶಿವಾಗಮ ಮತ್ತು ವಚನ ಸಾಹಿತ್ಯದ ಹಿನ್ನಲೆಯಲ್ಲಿ ಸಮಾಲೋಚಿಸಲಾಗಿ, 'ಈ ಜಗತ್ತಿನಲ್ಲಿ ಎಲ್ಲ ಶಿವಭಕ್ತರು ಶ್ರೇಷ್ಠರಾಗಿದ್ದು, ನಾನವರ ಸೇವಕನೆಂದು ಭಾವಿಸಿ ವರ್ತಿಸುವುದೇ ಭೃತ್ಯಾಚಾರ' ಎಂಬ ಶಿವಾಗಮದ ಅರ್ಥವಿಶ್ಲೇಷಣೆಯನ್ನೇ ವಚನ ಸಾಹಿತ್ಯದಲ್ಲಿಯೂ ಅದೇ ಬಗೆಯಾಗಿ ಪ್ರತಿಪಾದಿಸುವುದರ ಜೊತೆಗೆ ಪ್ರತ್ಯಕ್ಷವಾಗಿ ಆಚರಿಸಿ ತೋರಿಸಲಾಗಿದೆ.

ಒಟ್ಟಾರೆ ಪಂಚಾಚಾರಗಳು ವೀರಶೈವ ಧರ್ಮ–ದರ್ಶನಗಳ ದರ್ಪಣವಾಗಿದ್ದು, ಅಂಗಕ್ರಿಯೆಗಳನ್ನು ಲಿಂಗ ಕ್ರಿಯೆಗಳನ್ನಾಗಿಸುವಂತಹ ಕ್ರಿಯೆ ಮತ್ತು ಜ್ಞಾನಗಳೆರಡನ್ನು ಹೊಂದಿವೆ. ಈ ಪಂಚಾಚಾರಗಳಲ್ಲಿಯ ಪ್ರತಿಯೊಂದು ಆಚಾರದಲ್ಲಿಯೂ ಇನ್ನುಳಿದ

೧೩. ಶಿವಶರಣೆಯರ ವ.ಸಂ., ಸಮಗ್ರ ವಚನ ಸಂಪುಟ ೫, ವಚನಸಂಖ್ಯೆ ೬೨, ಪುಟ ೨೪

೧೪. ಸಮಗ್ರ ವಚನ ಸಂಪುಟ ೭, ಸಂಕೀರ್ಣ ವ.ಸಂ ೨. ವಚನಸಂಖ್ಯೆ ೭೪೬, ಪುಟ ೨೩೭

ಆಚಾರಗಳು ಅಡಗಿರುವುದನ್ನು ನೋಡಬಹುದು. ಉದಾಹರಣೆಗೆ ಲಿಂಗಾಚಾರದಲ್ಲಿ ಲಿಂಗನಿಷ್ಠೆಯಿಂದ ಕೂಡಿದ ಭಕ್ತನು ಶಿವನೇ ಸರ್ವೋತ್ತಮ ಭಾವನೆಯಿಂದ ಕೂಡಿಕೊಂಡು ಶಿವಾಚಾರದ ಸಾಧನೆ ಮಾಡುತ್ತಾನೆ. ಲಿಂಗಪೂಜೆಗೆ ಅವಶ್ಯವಾದ ಧನಾರ್ಜನೆಗೆ ಸದಾಚಾರವನ್ನವಲಂಬಿಸುತ್ತಾನೆ. ತನ್ನ ಶಿವಪೂಜಾದಿ ಧರ್ಮಾಚರಣೆಗೆ ಉಂಟಾಗುವ ಅಡ್ಡಿಆತಂಕಗಳ ನಿವಾರಣೆಗೆ ಗಣಾಚಾರಿಯಾಗಲೇಬೇಕಾಗುತ್ತದೆ. ಅದೇ ರೀತಿ ಶಿವನ ಮೂರು ರೂಪಗಳಾದ ಗುರು-ಲಿಂಗ-ಜಂಗಮಗಳ ವಿಷಯದಲ್ಲಿ ಸೇವಾವೃತ್ತಿಯಿಂದಾಗಿ ಭೃತ್ಯಾಚಾರ ಸ್ವಾಭಾವಿಕವಾಗಿ ಸಿದ್ಧಿಸುತ್ತದೆ. ಹೀಗೆ ವೀರಶೈವಧರ್ಮದ ನೈತಿಕ ಹಾಗೂ ಧಾರ್ಮಿಕ ಮೌಲ್ಯವನ್ನು ಪಂಚಾಚಾರಗಳಲ್ಲಿ ಕಾಣಬಹುದಾಗಿದೆ. ಆದರೆ ಈ ಮೌಲ್ಯಗಳಿಗೆ ಸಾರ್ಥಕತೆ ಹಾಗೂ ಸಶಕ್ತತೆ ದೊರಕುವದು ಇವುಗಳನ್ನು ಆಚರಿಸಿ ತೋರಿಸಿದಾಗ ಮಾತ್ರ.

ಇಲ್ಲಿ ಗಮನಿಸುವ ಇನ್ನೊಂದು ಮಹತ್ವಪೂರ್ಣ ಸಂಗತಿಯೆಂದರೆ ಪಂಚಾಚಾರಗಳು ವೈಯಕ್ತಿಕ ಹಿತಸಾಧನೆಯ ಜೊತೆಗೆ ಸಾಮಾಜಿಕ ಹಿತಸಾಧನೆಯ ದೃಷ್ಟಿಯನ್ನೂ ಹೊಂದಿವೆ. ಲಿಂಗಾಚಾರ ವ್ಯಕ್ತಿಯಲ್ಲಿ ಲಿಂಗಗುಣಗಳನ್ನು ಬೆಳಸುವುದರ ಜೊತೆಗೆ ಸಮಾಜದಲ್ಲಿ ಏಕದೇವೋಪಾಸನೆಯನ್ನು ಕೈಕೊಂಡು ಭಗವಂತನಲ್ಲಿ ಏಕೈಕ ನಿಷ್ಠೆಯನ್ನು ಪ್ರೇರೇಪಿಸುತ್ತದೆ. ಸದಾಚಾರದಿಂದ ವ್ಯಕ್ತಿಯ ಸದ್ಗುಣ, ಶೀಲ ಸಂಪತ್ತು ಬೆಳೆವುದಲ್ಲದೆ ಸಮಾಜದಲ್ಲಿ ಸಚ್ಚಾರಿತ್ರ್ಯ ಉದ್ಯೋಗಶೀಲತೆಗಳೂ ಬೆಳೆಯುತ್ತವೆ. ಗಣಾಚಾರದ ಏಕೈಕ ನಿಷ್ಠೆಯು ವ್ಯಕ್ತಿಯ ಸಾಧನೆಗೆ ರಕ್ಷೆಯನ್ನೀಯುವುದರ ಜೊತೆಗೆ ಸಾಮಾಜಿಕವಾಗಿ ಧರ್ಮಾಭಿವೃದ್ಧಿಯನ್ನು ಸಾಧಿಸುತ್ತದೆ. ಶಿವಾಚಾರ ವೈಯಕ್ತಿಕವಾಗಿ ಸರ್ವಸಮತೆಯ ಶಿವದೃಷ್ಟಿಯನ್ನು ತಂದುಕೊಡುತ್ತದೆ ಹಾಗೂ ಸಾಮಾಜಿಕವಾಗಿ ವಿಷಮತೆಯ ತಾರತಮ್ಯಗಳನ್ನು ಹೋಗಲಾಡಿಸುತ್ತದೆ. ಭೃತ್ಯಾಚಾರ ವ್ಯಕ್ತಿಯ ಅಹಂಕಾರವನ್ನು ನಿರಸನಗೊಳಿಸಿ ವಿಕಾಸಕ್ಕೆ ಕಾರಣವಾಗುತ್ತದೆ ಮತ್ತು ಸಮಾಜದ ಸೇವೆಯನ್ನು ಕೈಕೊಂಡು ಸರ್ವತೋಮುಖ ಅಭಿವೃದ್ಧಿಗೆ ಸಾಧನವಾಗುತ್ತದೆ.

ಒಟ್ಟಿನಲ್ಲಿ ಶಿವಾಗಮದಲ್ಲಿ ಪ್ರತಿಪಾದನೆಗೊಂಡ ಈ ಪಂಚಾಚಾರಗಳಲ್ಲಿ ಏಕದೇವೋಪಾಸನೆ, ಶುದ್ಧ ಕಾಯಕದಿಂದ ಗಳಿಸಿದ ದ್ರವ್ಯಾದಿಗಳಿಂದ ಅತಿಥಿಸೇವೆ, ದೃಷ್ಟಿ ವೈಶಾಲ್ಯತೆ, ದುರ್ಗುಣಗಳನ್ನು ದೂರಗೊಳಿಸುವಿಕೆ, ನಿರಹಂಕಾರತ್ವದ ತತ್ವಗಳು ಪ್ರತಿಪಾದನೆಗೊಂಡಿದ್ದು, ಇವು ವ್ಯಕ್ತಿ ಮತ್ತು ಸಮಾಜದ ಅಭ್ಯುದಯಗಳೆರಡನ್ನೂ ಸುಂದರವಾಗಿ ಸಮನ್ವಯಗೊಳಿಸಿರುವುದರಿಂದ ವಚನಕಾರರು ಇವುಗಳನ್ನು ಸ್ವೀಕರಿಸಿದ್ದಲ್ಲದೇ ಪ್ರತ್ಯಕ್ಷವಾಗಿ ಆಚರಿಸಿ, ತಮ್ಮ ವಚನಸಾಹಿತ್ಯದ ಆಡುಮಾತಿನ ಧಾಟಿ, ತಿಳಿಯಾದ ಭಾಷೆ, ನೇರ ನಿರೂಪಣೆ ಮೂಲಕ ಪಂಚಾಚಾರಗಳಿಗೆ ಹೆಚ್ಚಿನ ಜೀವಂತಿಕೆಯನ್ನು ತಂದುಕೊಟ್ಟರು. ಅಲ್ಲದೇ ಸಮಾಜದಲ್ಲಿಯ ಧನಿಕ-ದರಿದ್ರ, ಹೆಣ್ಣು-ಗಂಡು, ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಎಂಬ ಭೇದ-ಭಾವ, ನೈತಿಕ ಅಧಃಪತನ ಹಾಗೂ ಆರ್ಥಿಕ ಅಸಮಾನತೆಯನ್ನು ತೊಡೆದು ಹಾಕಲು ಇವುಗಳನ್ನು ಪ್ರಮುಖ ಆಯುಧಗಳನ್ನಾಗಿ ಬಳಸಿಕೊಂಡು, ಪರಿಶುದ್ಧವಾದ ಬಾಳನ್ನು ರೂಪಿಸಿಕೊಳ್ಳಲು ಪ್ರೇರೇಪಿಸಿದರು.

೫.೩ ಷಟಸ್ಥಲ

ಭಾರತೀಯ ಧರ್ಮಗಳಲ್ಲಿ ವೀರಶೈವ ಸಿದ್ಧಾಂತವು ಅತ್ಯಂತ ವಿಶಿಷ್ಟವಾಗಿದೆ. ಬಹುತೇಕವಾಗಿ ಎಲ್ಲ ಧರ್ಮಗಳು ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಮಟ್ಟಿಗೆ ಪ್ರಯತ್ನಿಸಿದರೆ ವೀರಶೈವ ಧರ್ಮವು ನಿತ್ಯದಲ್ಲಿ ಆತನೊಡನೆ ಸಾಮರಸ್ಯವನ್ನು ಅನುಭವಿಸುತ್ತದೆ. ವೀರಶೈವ ಸಿದ್ಧಾಂತವು ಕೇವಲ ಅರಿವು ಪಡೆಯುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಅರಿವನ್ನು ಆಚರಣೆಯಲ್ಲಿ ಅಳವಡಿಸುವುದೇ ಇದರ ಪ್ರಮುಖ ಗುರಿಯಾಗಿದೆ.

ಈ ಲಿಂಗಾಂಗ ಸಮರಸವನ್ನು ಸಾಧಿಸುವ ಕ್ರಮವು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಆರು ಸ್ಥಲಗಳಿಂದ ವಿಶಿಷ್ಟವಾಗಿರುವುದರಿಂದ ಇದಕ್ಕೆ ಷಟ್‌ಸ್ಥಲ ಸಿದ್ಧಾಂತವೆಂದು ಕರೆಯುವರು. ಜೀವವು ದೇವನತ್ತ ಸಾಗುವ ತನ್ನ ಯಾತ್ರೆಯ ಮಾರ್ಗದಲ್ಲಿ ಏರಬೇಕಾದ ಆರು ಮೆಟ್ಟಿಲುಗಳೇ ಈ ಷಟ್‌ಸ್ಥಲಗಳು. ತನ್ನ ನಿಜಸ್ವರೂಪವನ್ನು ಮರೆತು ತಾನು ದುಃಖಿ ಎಂದು ತಲ್ಲಣಗೊಳ್ಳುವ ಭಕ್ತನ ಮನಸ್ಸಿನ ತಳಮಳದಿಂದ ಹಿಡಿದು ವಿಶ್ವವನ್ನೆಲ್ಲಾ ವ್ಯಾಪಿಸಿರುವ ಚೈತನ್ಯಸ್ವರೂಪ ಶಕ್ತಿಯೇ ತಾನೆಂಬ ಮುಕ್ತಿಯ ಶಾಂತಭಾವದವರೆಗಿನ ಎಲ್ಲ ಮನೋಧರ್ಮಗಳನ್ನೂ ಷಟ್‌ಸ್ಥಲಗಳಲ್ಲಿ ಕಾಣುತ್ತೇವೆ. ಷಟ್‌ಸ್ಥಲ ಮಾರ್ಗದಲ್ಲಿ ಭಕ್ತಿ, ಕರ್ಮ, ಜ್ಞಾನ–ಇವೆಲ್ಲಕ್ಕೂ ಪ್ರಾಮುಖ್ಯವಿದೆ. ಇವೆಲ್ಲವುಗಳ ಸಮನ್ವಯವೇ ಈ ಮಾರ್ಗದ ವೈಶಿಷ್ಟ್ಯವಾಗಿದೆ.

೫.೩.೧ ಸ್ಥಲದ ಅರ್ಥ

'ಸ್ಥಲ'ವೆಂಬ ಶಬ್ದ ವೀರಶೈವದ ಅತೀ ಮಹತ್ವದ ಪರಿಭಾಷೆ. ಸಾಮಾನ್ಯ ಅರ್ಥದಲ್ಲಿ ಸ್ಥಲವೆಂದರೆ ನೆಲ, ಭೂಮಿ, ಸ್ಥಲ, ಜಮೀನು, ಹೊಲ, ಗ್ರಂಥದ ಒಂದು ಭಾಗ, ಪರಿಚ್ಛೇದ, ಮೆಟ್ಟಲು, ಹಂತ, ಸ್ಥಲಾಂತರ ಎಂಬ ಅರ್ಥಗಳಿವೆ. ಆದರೆ ವೀರಶೈವ ಧಾರ್ಮಿಕ ಪ್ರಕ್ರಿಯೆಯಲ್ಲಿ 'ಸ್ಥಲ' ಶಬ್ದಕ್ಕೆ ಮೇಲಿನ ಅರ್ಥಗಳು ಅನ್ವಯಿಸುವುದಿಲ್ಲ. ಸ್ಥಲವೆಂದರೆ ಮೆಟ್ಟಲು, ಹಂತವೆಂಬ ಅರ್ಥಗಳು ಕೆಲ ಮಟ್ಟಿಗೆ ಸಮಂಜಸವೆನ್ನಬಹುದು.

'ಸ್ಥಲ'ಎಂಬಲ್ಲಿ ಎರಡಕ್ಷರಗಳಿವೆ. 'ಸ್ಥ'ಎಂಬ ವರ್ಣವು ಸ್ಥಾನವಾಚಕವೆನಿಸಿ 'ಲ'ಕಾರವು ಲಯವಾಚಕವೂ ಆಗಿದೆ. ಅಂದರೆ ಸೃಷ್ಟಿಯ ಸ್ಥಿತಿ–ಲಯಗಳಿಗೆ ಯಾವುದು ಕಾರಣವೋ ಅದು 'ಸ್ಥಲ'ವೆನಿಸಿದೆ. ಸೂಕ್ಷ್ಮಾಗಮ ಮತ್ತು ಪಾರಮೇಶ್ವರಾಗಮದಲ್ಲಿ "ಚರಾಚರಾತ್ಮಕವಾದ ಈ ಜಗತ್ತೆಲ್ಲವೂ ಯಾವ ವಸ್ತುವಿನಲ್ಲಿಯೇ ಅಡಗಿದ್ದು, ಸಂರಕ್ಷಣೆ ಹೊಂದಿ ಸೃಷ್ಟಿಯ ರೂಪದಲ್ಲಿ ಹೊರಬಂದು ಕಡೆಗೆ ಯಾವ ವಸ್ತುವಿನಲ್ಲಿಯೇ ಲೀನವಾಗುತ್ತದೋ ಆ ಪರಾತ್ಪರ ವಸ್ತುವೇ 'ಸ್ಥಲ'ವೆನಿಸುತ್ತದೆ." ಎಂದು ಅರ್ಥೈಸಲಾಗಿದೆ. ಹೀಗೆ ಚೇತನಾಚೇತನವಾದ ಈ ಜಗತ್ತು ಮೊದಲು ಸ್ಥಿತಿಯನ್ನು ನಂತರ ಲಯವನ್ನು ಯಾವ ತತ್ತ್ವದಲ್ಲಿ ಹೊಂದುವುದೋ ಅದೇ ಸ್ಥಲವೆಂದು ಹೇಳಲ್ಪಡುತ್ತದೆ. ಕಾರಣ 'ಲಿಂಗ' ಪದಕ್ಕಿದ್ದ ಅರ್ಥವೆಲ್ಲವೂ 'ಸ್ಥಲ'ಕ್ಕೆ ಇದೆ. 'ಲಿ' ಕಾರವು ಲಯವನ್ನು (ಜೀವರ

ಐಕ್ಯವನ್ನೂ,), 'ಂ' (ಬಿಂದುವು) ಸ್ಥಿತಿಯನ್ನೂ, 'ಗ' ಕಾರವು ಸೃಷ್ಟಿಯನ್ನೂ ಸೂಚಿಸುತ್ತದೆ. ಅಂತೆಯೇ ಪರಶಿವತತ್ವಕ್ಕೆ 'ಲಿಂಗ'ವೆಂದೂ, 'ಸ್ಥಲ'ವೆಂದೂ ಹೆಸರು ಅನ್ವರ್ಥವಾಗಿದೆ. ಕಾರಣ 'ಸ್ಥಲ' ಪದವು ಪರಶಿವನನ್ನು ಸಾಂಕೇತಿಸಿದೆ. ಅಲ್ಲದೆ ಸ್ಥಲವು ನೆಲೆ–ಸೋಪಾನ–ಹಂತಗಳೆಂಬ ಅರ್ಥದಲ್ಲಿಯೂ ಬಳಕೆಯಾಗುತ್ತದೆ. ಒಟ್ಟಿನ ಮೇಲೆ ಸಮಸ್ತವಾದ ಪಂಚಭೂತಗಳಿಗೂ, ಸಕಲ ಲೋಕಗಳಿಗೂ, ಸರ್ವಸಂಪದಗಳಿಗೂ ಯಾವುದು ಆಶ್ರಯ ಸ್ವರೂಪವೋ ಅದೇ ಸ್ಥಲವೆನಿಸಿದೆ ಮತ್ತು ಜಗತ್ತಿನ ಅಂತಿಮ ವಿಶ್ರಾಂತಿ ಸ್ಥಾನವೂ ಇದುವೇ ಆಗಿದೆ.

೫.೩.೨ ಸ್ಥಲ ವಿಭಾಗ ಕ್ರಮ

ವೀರಶೈವ ದರ್ಶನದಲ್ಲಿ ಸ್ಥಲವೆಂದು ವ್ಯವಹರಿಸಲ್ಪಡುವ ಪರಶಿವ ಚೈತನ್ಯವು ಶಕ್ತಿವಿಶಿಷ್ಟವಾಗಿದ್ದು, ಆ ಶಕ್ತಿಯು ಶಿವನಲ್ಲಿ ಅವಿನಾಭಾವ ಸಂಬಂಧದಿಂದ ಬೆರೆತುಕೊಂಡಿರುತ್ತದೆ. ಸರ್ವಶೂನ್ಯ ನಿರಾಲಂಬನೆನೆಸಿದ ಪರಬ್ರಹ್ಮಕ್ಕೆ ಸೃಜಿಸಬೇಕೆಂಬ ಸಂಕಲ್ಪ ಉಂಟಾದಾಗ ಅದು ಕ್ಷುಭಿತವಾಯಿತು. ಅದಕ್ಕೆ ತನ್ನನ್ನು ತಾನು ಅರ್ಚಿಸಿಕೊಳ್ಳುವ ಬಯಕೆ ಉಂಟಾಗಿ ಉಪಾಸ್ಯ ಮತ್ತು ಉಪಾಸಕ ಭೇದದಿಂದ ಲಿಂಗ ಅಂಗವೆಂಬುದಾಗಿ ಎರಡು ವಿಧವಾಯಿತು.

ಉಪಾಸ್ಯೋಪಾಸಕತ್ವೇನ ಸ್ವಯಮೇವ ದ್ವಿಧಾ ಭವೇತ್।
ಲಿಂಗಸ್ಥಲಮುಪಾಸ್ಯಂ ಸ್ಯಾತ್ ಅಂಗಸ್ಥಲಮುಪಾಸಕಮ್॥
ಉಪಾಸ್ಯತ್ವಂ ತಥೋಪಾಸಕತ್ವಂ ಚ ಪರಮಶ್ಶಿವಃ।[೧]

ಲಿಂಗವು ಉಪಾಸ್ಯವಾದರೆ ಅಂಗವು ಉಪಾಸಕ. ಅದೇ ಮುಂದೆ ಲಿಂಗಸ್ಥಲ ಮತ್ತು ಅಂಗಸ್ಥಲವೆನಿಸಿತು ಎಂದು ಆಗಮಗಳು ನಿರೂಪಿಸುತ್ತವೆ. ಇದನ್ನೇ ಸಿದ್ಧಲಿಂಗಯತಿಗಳು

ಆ ನಿಃಕಲ ಶಿವತತ್ವ ತಾನೊಂದೆ ತನ್ನ ಶಕ್ತಿಯ
ಚಲನೆ ಮಾತ್ರದಿಂದ ಒಂದೆರಡಾಯಿತ್ತು ನೋಡಾ.
ಅದರೊಳಗೆ ಒಂದು ಲಿಂಗಸ್ಥಲ, ಮತ್ತೊಂದು ಅಂಗಸ್ಥಲ
ಹೀಗೆ ಅಂಗಲಿಂಗವೆಂದು, ಉಪಾಸ್ಯ–ಉಪಾಸಕವೆಂದು
ವರ್ತಿಸುತ್ತಿಹುದು ನೋಡಾ'[೨]

ಎಂದು ಸ್ಥಲ ವಿಕಾಸ ಕ್ರಮವನ್ನು ಅತ್ಯಂತ ಸರಳವಾಗಿ, ವಿವರವಾಗಿ ಪ್ರತಿಪಾದಿಸಿದ್ದಾರೆ.

ಲಿಂಗಸ್ಥಲ ವಿವೇಚನೆ

ಲಿಂಗಸ್ಥಲವೆಂದರೆ ಪರಶಿವಸ್ಥಲ. ಯಾವ ಮಹಾಲಿಂಗದಿಂದ ಜಗತ್ತು

---

೧. 'ತಂತ್ರೋತ್ತರ ಪ್ರದೀಪ', ಸ್ಥಲನಿರ್ದೇಶಾಧಿಕರಣ ಪಟಲ ೨, ಶ್ಲೋಕ ಸಂಖ್ಯೆ ೧೩–೧೪
೨. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ. ೬. ವಚನಸಂಖ್ಯೆ ೩೯ ಪುಟ ೧೯

ಜನಿಸುವುದೋ, ಯಾವ ಮಹಾಲಿಂಗದ ತಾದ್ರೂಪವನ್ನು ಹೊಂದಿ ಜಗತ್ತು ಇರುವುದೋ ಮತ್ತು ಯಾವ ಮಹಾಲಿಂಗದಲ್ಲಿ ಈ ಜಗತ್ತು ಲೀನವಾಗುವುದೋ ಆ ಮಹಾಲಿಂಗವು ಭಕ್ತರ ಅನುಗ್ರಹಕ್ಕಾಗಿ ಮೂರು ರೂಪಗಳನ್ನು ಧರಿಸಿತು. ಮೊದಲನೆಯದು ಭಾವಲಿಂಗ, ಎರಡನೆಯದು ಪ್ರಾಣಲಿಂಗ ಮತ್ತು ಮೂರನೆಯದು ಇಷ್ಟಲಿಂಗ[೩] ಎನ್ನುತ್ತ ಆ ತ್ರಿವಿಧ ಲಿಂಗಗಳ ಸ್ವರೂಪವನ್ನು ಹೀಗೆ ವರ್ಣಿಸಲಾಗಿದೆ :

ನಿಷ್ಕಲಂ ಭಾವಲಿಂಗಂ ಸ್ಯಾದ್ ಭಾವಗ್ರಾಹ್ಯಂ ಪರಾತ್ಪರಮ್॥
ಪ್ರಾಣಲಿಂಗಂ ಮನೋಗ್ರಾಹ್ಯಂ ಭವೇತ್ ಸಕಲನಿಷ್ಕಲಮ್॥
ಸಕಲಂ ದೃಕ್ಕಲಾಗ್ರಾಹ್ಯಮಿಷ್ಟಲಿಂಗಂ ಪ್ರಕೀರ್ತಿತಮ್।
ಇಷ್ಟಸಿದ್ಧಿಕರಂ ಸಮ್ಯಗನಿಷ್ಟಪರಿಹಾರಕಮ್॥

ಇಷ್ಟಲಿಂಗವು ಸ್ಥೂಲ ಶರೀರಕ್ಕೆ, ಪ್ರಾಣಲಿಂಗವು ಸೂಕ್ಷ್ಮ ಶರೀರಕ್ಕೆ ಮತ್ತು ಭಾವ ಲಿಂಗವು ಕಾರಣ ಶರೀರಕ್ಕೆ. ಹೀಗೆ ಶರೀರಗಳಿಗೆ ಮೂರು ಲಿಂಗಗಳು ಸಲ್ಲುತ್ತವೆ ಎಂದು ಆಗಮಗಳು ವಿವರಿಸಿವೆ. ಚೆನ್ನಬಸವಣ್ಣನವರು ಇದನ್ನೇ ಪ್ರತಿಪಾದಿಸುತ್ತ

"ಸ್ಥೂಲತನು, ಸೂಕ್ಷ್ಮತನು, ಕಾರಣತನು: ಸ್ಥೂಲತನುವಿನಲ್ಲಿ ಇಷ್ಟಲಿಂಗಪ್ರತಿಷ್ಠೆ;
ಸೂಕ್ಷ್ಮತನುವಿನಲ್ಲಿ ಪ್ರಾಣಲಿಂಗಪ್ರತಿಷ್ಠೆ; ಕಾರಣತನುವಿನಲ್ಲಿ ತೃಪ್ತಿಲಿಂಗಪ್ರತಿಷ್ಠೆ ;
ಇಂತೀ ಸ್ಥೂಲಸೂಕ್ಷ್ಮ ಕಾರಣವು ಮಹವು
ಮಹದುದಯ ಹೃದಯದಲ್ಲಿ ಕೊನೆದೋರುತಿಪ್ಪ ಪರಂಜ್ಯೋತಿ
ನಿಮ್ಮ ಶರಣನ ಸರ್ವಾಂಗದಲುಂಟು ಕೂಡಲಚೆನ್ನಸಂಗಮದೇವಾ"[೫]

ಎಂದು ಮೂರು ಲಿಂಗಗಳಿಂದ ಮೂರು ಶರೀರಗಳು ಮಹಾಲಿಂಗಯುಕ್ತವಾದವು ಮತ್ತು ಹೃದಯದಲ್ಲಿ ಪರಂಜ್ಯೋತಿ ಕಂಡಿತೆಂದು ವರ್ಣಿಸುತ್ತಾರೆ. ಈ ಮೂರು ಲಿಂಗಗಳು ಆರಾದ ಬಗೆಯನ್ನು ಶಿವಾಗಮಗಳು ವರ್ಣಿಸುತ್ತವೆ –

ಭಾವಾದಿಲಿಂಗತ್ರಿತಯಂ ದ್ವಿವಿಧಂ ದ್ವಿವಿಧಂ ಭವೇತ್।
ಭಾವಲಿಂಗಂ ಮಹಾಲಿಂಗಪ್ರಸಾದಾಭಿಖ್ಯಕಂ ದ್ವಯಮ್॥
ಪ್ರಾಣಲಿಂಗಂ ತಥಾ ಚರಶಿವಲಿಂಗದ್ವಯಂ ಭವೇತ್।
ಇಷ್ಟಂತು ಗುರುಲಿಂಗಾಖ್ಯಮಾಚಾರಾಖ್ಯಂ ದ್ವಯಂ ಭವೇತ್॥
ಆಚಾರಲಿಂಗಮಾಖ್ಯಾತಂ ಸದ್ಯೋಜಾತಮುಖಾತ್ಮಕಮ್।
ಗುರುಲಿಂಗಂ ತಥಾ ವಾಮದೇವ ವಕ್ತ್ರಾತ್ಮಕಂ ಭವೇತ್॥
ಶಿವಲಿಂಗಂ ತಥಾಽಘೋರಮುಖರೂಪಂ ಭವೇತ್ ಪುನಃ॥
ಚರಲಿಂಗಂ ಭವತ್ಯೇವ ತತ್ಪುರುಷಮುಖಾತ್ಮಕಮ್॥
ಪ್ರಸಾದಲಿಂಗಂ ಕಥಿತಮೀಶಾನಮುಖಸಂಜ್ಞಕಮ್।

೩. ಚಂ.ಆ., ಕ್ರಿಪಾ. ಪಟಲ ೩ ಶ್ಲೋಕ ಸಂಖ್ಯೆ ೨೩
೪. ಚಂ.ಆ., ಕ್ರಿಪ್ರಾ. ಪಟಲ ೩ ಶ್ಲೋಕ ಸಂಖ್ಯೆ ೨೪–೨೫
೫. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೧೬೬೯ ಪುಟ ೬೧೦

ಮಹಾಲಿಂಗಂ ತಥಾಽಖಂಡಶಿವರೂಪಂ ಪ್ರಕೀರ್ತಿತಮ್॥[೬]

ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳು ಒಂದೊಂದು ಎರಡೆರಡಾದವು. ಭಾವಲಿಂಗವು ಮಹಾಲಿಂಗ ಮತ್ತು ಪ್ರಸಾದಲಿಂಗವೆಂದು ಎರಡು, ಪ್ರಾಣಲಿಂಗವು ಚರಲಿಂಗ (ಜಂಗಮಲಿಂಗ) ಮತ್ತು ಶಿವಲಿಂಗವೆಂದು ಎರಡು ಮತ್ತು ಇಷ್ಟಲಿಂಗವು ಗುರುಲಿಂಗ ಮತ್ತು ಆಚಾರಲಿಂಗವೆಂದು ಎರಡು, ಹೀಗೆ ಮೂರು ಲಿಂಗಗಳು ಆರು ಲಿಂಗಗಳಾದವು. ಅವುಗಳಲ್ಲಿ ಆಚಾರಲಿಂಗವು ಸದ್ಯೋಜಾತಮುಖಸ್ವರೂಪವುಳ್ಳದ್ದು, ಗುರುಲಿಂಗವು ವಾಮದೇವ ಮುಖಸ್ವರೂಪವುಳ್ಳದ್ದು, ಶಿವಲಿಂಗವು ಅಘೋರಮುಖ ಸ್ವರೂಪವುಳ್ಳದ್ದು, ಚರಲಿಂಗವು ತತ್ಪುರುಷಮುಖಸ್ವರೂಪವುಳ್ಳದ್ದು, ಪ್ರಸಾದ ಲಿಂಗವು ಈಶಾನಮುಖಸಂಜ್ಞೆಯುಳ್ಳದ್ದು ಮತ್ತು ಮಹಾಲಿಂಗವು ಅಖಂಡ ಶಿವ ಸ್ವರೂಪವುಳ್ಳದ್ದು ಮಹಾಲಿಂಗವು ಹೀಗೆ ಮೂರಾಗಿ ಆರಾದದ್ದು ಅಖಂಡ ಶಿವ ಸ್ವರೂಪವುಳ್ಳದ್ದು. ಮಹಾಲಿಂಗವು ಹೀಗೆ ಮೂರಾಗಿ ಆರಾದದ್ದು ಸುಜನರನ್ನು ಅನುಗ್ರಹಿಸುವ ಸಲುವಾಗಿ (ಸುಜನಾನುಜಿಘೃಕ್ಷಯಾ). "ಯೋಗಿನಾಮುಪಕಾರಾಯ"[೭] ಎಂಬ ಆಗಮೋಕ್ತಿಯಂತೆ ಧ್ಯಾನದ ಮೂಲಕ ಹೊಮ್ಮಿದ ಸೃಷ್ಟಿಯ ಉದ್ದೇಶವು ಜೀವರುಗಳನ್ನು ಪಾಶಗಳಿಂದ ವಿಮೋಚನೆಗೊಳಿಸುವುದಲ್ಲದೆ ಬೇರೇನೂ ಅಲ್ಲವೆಂಬುದು ಸ್ಪಷ್ಟವಾಗುತ್ತದೆ. ಪರಮಾತ್ಮನು (ಮಹಾಲಿಂಗವು) ಭಕ್ತಾನುಗ್ರಹಕ್ಕಾಗಿ ಇಷ್ಟ–ಪ್ರಾಣ–ಭಾವಲಿಂಗಗಳಾಗಿ ಮತ್ತೆ ಮೂರುಲಿಂಗಗಳು ಒಂದೊಂದು ಎರಡಾಗಿ ಕ್ರಮವಾಗಿ ಆಚಾರಲಿಂಗ– ಗುರುಲಿಂಗ, ಶಿವಲಿಂಗ– ಚರಲಿಂಗ ಮತ್ತು ಪ್ರಸಾದ ಲಿಂಗ– ಮಹಾಲಿಂಗ ಎಂಬ ಆರು ಲಿಂಗಗಳಾಗಿ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಸ್ಥಲಗಳಲ್ಲಿ ಪೂಜೆಗೊಳ್ಳುತ್ತವೆ ಎಂಬುದನ್ನು ಶಿವಾಗಮಗಳು ನಿರೂಪಿಸುತ್ತವೆ.

ಅಂಗ ಸ್ಥಲ ವಿವೇಚನೆ

ಲಿಂಗಸ್ಥಲವು ಮೂರಾಗುವಂತೆ ಅಂಗ ಸ್ಥಲವೂ ತ್ಯಾಗಾಂಗ (ಸ್ಥೂಲ ಶರೀರ), ಭೋಗಾಂಗ (ಸೂಕ್ಷ್ಮ ಶರೀರ) ಮತ್ತು ಯೋಗಾಂಗ (ಕಾರಣ ಶರೀರ)ವೆಂದು ಮೂರು ವಿಭಾಗವಾಗುತ್ತದೆ. ಈ ತ್ಯಾಗಂಗ, ಭೋಗಾಂಗ ಮತ್ತು ಯೋಗಾಂಗಗಳಿಗೆ ಚಂದ್ರಜ್ಞಾನಾಗಮದಲ್ಲಿ ಬಾಹ್ಯಾಂಗ, ಅಂತರಾಂಗ, ಮತ್ತು ಆತ್ಮಾಂಗವೆಂದು ಕರೆಯಲಾಗಿದೆ.

ಇಷ್ಟಲಿಂಗಂ ತು ಬಾಹ್ಯಾಂಗೇ ಪ್ರಾಣಲಿಂಗಂ ತಥಾಂತರೇ।
ಭಾವಲಿಂಗಂ ತಥೈವಾಸ್ಮಿನ್ನಾತ್ಮಾಂಗೇ ಸುಪ್ರತಿಷ್ಠಿತಮ್॥[೮]

ಇಷ್ಟ–ಪ್ರಾಣ–ಭಾವಲಿಂಗಗಳು ಕ್ರಮವಾಗಿ ಸ್ಥೂಲ–ಸೂಕ್ಷ್ಮ–ಕಾರಣ ಶರೀರಗಳಿಗೆ ಎಂಬಂತೆ ಅವು ಕ್ರಮವಾಗಿ ಬಾಹ್ಯಾಂಗ, ಅಂತರಾಂಗ ಮತ್ತು ಆತ್ಮಾಂಗಗಳಿಗೆ ಎಂದೂ

---

೬. ಚಂ.ಆ., ಕ್ರಿಪಾ. ಪಟಲ ೩ ಶ್ಲೋಕ ಸಂಖ್ಯೆ ೨೬–೩೦

೭. ಸೂ.ಅ., ಪಟಲ ೧, ಶ್ಲೋಕ ಸಂಖ್ಯೆ ೧೯

೮. ಚಂ.ಆ., ಚ.ಪಾ. ಪಟಲ ೨ ಶ್ಲೋಕ ಸಂಖ್ಯೆ ೧೫

ಹೇಳಬಹುದು. ಇನ್ನು ತ್ಯಾಗಾಂಗವು ಭಕ್ತಸ್ಥಲ, ಮಾಹೇಶ್ವರಸ್ಥಲವೆಂದೂ, ಭೋಗಾಂಗವು ಪ್ರಸಾದಿಸ್ಥಲ ಪ್ರಾಣಲಿಂಗಿಸ್ಥಲವೆಂದು, ಯೋಗಾಂಗವು ಶರಣಸ್ಥಲ ಮತ್ತು ಐಕ್ಯಸ್ಥಲವೆಂದೂ ವಿಭಾಗ ಹೊಂದಿ ಅಂಗಸ್ಥಲಗಳು ಆರಾಗುತ್ತದೆ.

ಪರಮಾತ್ಮನಲ್ಲಿ ಆರು ಅಂಗಗಳಿವೆ. ಅವುಗಳ ಹೆಸರುಗಳು ಹೀಗಿವೆ:

ಸರ್ವಜ್ಞತಾ ತೃಪಿರನಾದಿಬೋಧಃ ಸ್ವತಂತ್ರತಾ ನಿತ್ಯಮಲುಪ್ತ ಶಕ್ತಿಃ।
ಅನಂತಶಕ್ತಿಶ್ಚ ವಿಭೋರ್ವಿಧಿಜ್ಞಾಃ ಷಡಾಹುರಂಗಾನಿ ಮಹೇಶ್ವರಸ್ಯ॥[೯]

ಈ ಐದು ಪರಮಾತ್ಮನ ಅಂಗಗಳನ್ನೇ ಆಧಾರವಾಗಿಟ್ಟುಕೊಂಡು ಆರು ಅಂಗಸ್ಥಲಗಳನ್ನು ಕಲ್ಪಿಸಲಾಗಿದೆ:

ಯದ್ಭಕ್ತಸ್ಥಲಮಿತ್ಯಾಹುಸ್ತತ್ ಸರ್ವಜ್ಞತ್ವಮುಚ್ಯತೇ।
ಯನ್ಮಹೇಶ್ವರಕಂ ನಾಮ ಸಾ ತೃಪ್ತಿರ್ಮಮ ಶಾಂಕರಿ॥
ಯತ್ ಪ್ರಸಾದಾಭಿಧಂ ಸ್ಥಾನಂ ತದ್ಬೋಧೋ ಮೇ ನಿರಂಕುಶಃ।
ಯತ್ ಪ್ರಾಣಲಿಂಗಕಂ ನಾಮ ತತ್‌ಸ್ವಾತಂತ್ರ್ಯ ಮುದಾಹೃತಮ್॥
ಯದಸ್ತಿಶರಣಜ್ಞಾನಮಲುಪ್ತಾ ಶಕ್ತಿರುಚ್ಯತೇ।
ಯದೈಕ್ಯಸ್ಥಾನಮೂರ್ಧ್ವಸ್ಥಂ ಶಕ್ತ್ಯನಂತೇಶಿತಾ ಮಮ॥[೧೦]

ಭಕ್ತಸ್ಥಲವೆಂದು ಕರೆಯುವುದೇ ಸರ್ವಜ್ಞತ್ವ, ಮಾಹೇಶ್ವರ ಸ್ಥಲವು ಶಿವನ ತೃಪ್ತಿ, ಪ್ರಸಾದಿಸ್ಥಲವು ಅನಾದಿಬೋಧ, ಪ್ರಾಣಲಿಂಗಿಸ್ಥಲವು ಸ್ವತಂತ್ರತ್ವ, ಶರಣಸ್ಥಲವು ಅಲುಪ್ತಶಕ್ತಿ ಮತ್ತು ಐಕ್ಯಸ್ಥಲವು ಅನಂತಶಕ್ತಿ. ಹೀಗೆ ಪರಮಾತ್ಮನ ಆರು ಅಂಗಗಳೇ ಆರು ಅಂಗಸ್ಥಲಗಳು. ಆಯಾಯ ಸ್ಥಲಕ್ಕೆ ಸರ್ವಜ್ಞತಾ ಮುಂತಾದ ಶಕ್ತಿಗಳನ್ನು ಪರಿಗಣಿಸಿ ಅಕ್ಕಮಹಾದೇವಿಯವರು ಆಯಾಯ ಸ್ಥಲಗಳಿಗೆ ಸಂಬಂಧಿಸಿದಂತೆ ಅವುಗಳ ಅರ್ಥವನ್ನೂ ಸಮರ್ಥನೆಯನ್ನೂ ಒಂದು ದೀರ್ಘವಾದ ವಚನದಲ್ಲಿ ನೀಡಿದ್ದಾರೆ.

"ಚರಚರಾತ್ಮಕ ಪ್ರಪಂಚವೆಲ್ಲ ಶಿವನ ಚಿದ್ಗರ್ಭದಿಂದುದಯಿಸಿಪ್ಪವೆಂದು,
ಶಿವಾಭಿನ್ನತ್ವದಿಂ ಸಕಲಪ್ರಾಣಿಗಳಲ್ಲಿ ತನ್ನಾತ್ಮಚೇತನವ
ತನ್ನಲ್ಲಿ ಸಕಲ ಪ್ರಾಣಿಗಳ ಆತ್ಮಚೇತನವ ಕಂಡು,
ದಯಾಪರತ್ವವನುಳ್ಳ ಸರ್ವಜ್ಞತಾ ಶಕ್ತಿಯನು ಭಕ್ತಿಸ್ಥಲದಲ್ಲಿ ಪಡೆವುದು ನೋಡಾ.
ತನಗೆ ಬಂದ ಅಪವಾದ ನಿಂದೆ ಎಡರಾಪತ್ತುಗಳಲ್ಲಿ ಎದೆಗುಂದದೆ
ಬಪ್ಪ ಸುಖ ದುಃಖ ಖೇದ ಹರ್ಷಾದಿಗಳು ಶಿವಾಜ್ಞೆಯಹುದೆಂದು ಪರಿಣಿತನಪ್ಪ
ತೃಪ್ತಿಯ ಶಕ್ತಿಯನು ಮಾಹೇಶ್ವರ ಸ್ಥಲದಲ್ಲಿ ಪಡೆವುದು ನೋಡಾ.
ದೇಹಾದಿ ಆದಿ ಪ್ರಪಂಚಕ್ಕೆ ಮೂಲಿಗನಾದ

---

೯. ಪಾ.ಆ., ಪಟಲ ೬. ಶ್ಲೋಕ ಸಂಖ್ಯೆ ೩೩

೧೦. ಪಾ.ಆ., ಪಟಲ ೬. ಶ್ಲೋಕ ಸಂಖ್ಯೆ ೩೪-೩೬

ಅನಾದಿ ಪರಶಿವನು ಪ್ರಸನ್ನತ್ವವನ್ನುಂಟು ಮಾಡುವ
ಅನಾದಿಬೋಧಶಕ್ತಿಯನು ಪ್ರಸಾದಿ ಸ್ಥಲದಲ್ಲಿ ಪಡೆವುದು ನೋಡಾ
ಅಂತಪ್ಪ ದೇಹಾದಿ ಪ್ರಪಂಚದ ಚಲನವಲನವು ತನ್ನಾಶ್ರಯದಲ್ಲಿ
ನಡೆದು ತಾನು ಆವುದನ್ನೂ ಆಶ್ರಯಿಸದೆ
ಸರ್ವ ಸ್ವತಂತ್ರ ತಾನೆಂಬರಿವನುಂಟು ಮಾಡುವ
ಸ್ವತಂತ್ರ ಶಕ್ತಿಯನು ಪ್ರಾಣಲಿಂಗಿಸ್ಥಲದಲ್ಲಿ ಪಡೆವುದು ನೋಡಾ.
ತನ್ನಾಶ್ರಯವ ಪಡೆದ ದೃಶ್ಯಮಾನ ದೇಹಾದಿ ಜಗವೆಲ್ಲ ಅನಿತ್ಯವೆಂಬ
ಆ ದೃಶ್ಯಮಾನ ದೇಹಾದಿಗಳ ಮೂಲೋತ್ಪತ್ತಿಗಳಿಗೆ ಕಾರಣನಪ್ಪ
ಪತಿಪರಶಿವಲಿಂಗವೇ ನಿತ್ಯವೆಂಬರಿವನುಂಟು ಮಾಡುವ ಅಲುಪ್ತಶಕ್ತಿಯನು
ಶರಣ ಸ್ಥಲದಲ್ಲಿ ಪಡೆವುದು ನೋಡಾ.
ಅಂಗಲಿಂಗಗಳ ಸಂಯೋಗವ ತೋರಿ, ಅಖಂಡ ಪರಶಿವಲಿಂಗೈಕ್ಯವನುಂಟು
ಮಾಡಿ ಕೊಡುವ ಅನಂತ ಶಕ್ತಿಯನು ಐಕ್ಯಸ್ಥಲದಲ್ಲಿ ಪಡೆವುದು ನೋಡಾ."[೧೧]

ಹೀಗೆ ಆಯಾಯ ಸ್ಥಲಗಳಿಗೆ ಸಂಬಂಧಿಸಿದಂತೆ ಅವುಗಳ ಅರ್ಥವನ್ನೂ ಸಮರ್ಥನೆಯನ್ನೂ ಅತ್ಯಂತ ಮನೋಜ್ಞವಾಗಿ ನಿರೂಪಿಸಿದ್ದಾರೆ.

ಶಕ್ತಿ–ಭಕ್ತಿಗಳ ವಿವೇಚನೆ

ಲಿಂಗಸ್ಥಲ ಮತ್ತು ಅಂಗಸ್ಥಲಗಳ ಹಾಗೂ ಅವುಗಳಲ್ಲಿ ಅವಿನಾಭಾವ ಸಂಬಂಧದಿಂದ ಅಡಗಿರುವ ಶಕ್ತಿ ಮತ್ತು ಭಕ್ತಿಗಳ ಸ್ವರೂಪವನ್ನು ವಾತುಲಾಗಮದ ಉಪಾಗಮವಾದ 'ತಂತ್ರೋತ್ತರ ಪ್ರದೀಪ' ದಲ್ಲಿ ಅತ್ಯಂತ ಸುಂದರವಾಗಿ ನಿರೂಪಿಸಲಾಗಿದೆ.

ಅಂಗ–ಲಿಂಗವೆಂಬುದಾಗಿ ಎರಡು ಭಾಗವಾದಾಗ ಅದರಲ್ಲಿ ನೆಲಿಸಿರುವ ಶಕ್ತಿಯು ಸಹ ಕಲಾ ಮತ್ತು ಭಕ್ತಿವೆಂಬುದಾಗಿ ಎರಡು ವಿಧವಾಗುತ್ತದೆ. ಲಿಂಗಸ್ಥಲವನ್ನು ಆಶ್ರಯಿಸಿಕೊಂಡ ಶಕ್ತಿಗೆ ಕಲೆಯೆಂತಲೂ, ಅಂಗಸ್ಥಲವನ್ನಾಶ್ರಯಿಸಿಕೊಂಡ ಶಕ್ತಿಗೆ ಭಕ್ತಿಯೆಂತಲೂ ಕರೆಯಲಾಗುತ್ತದೆ. ಮೂಲತಃ ಸ್ಥಲತತ್ವದಲ್ಲಿ ಅವಿನಾಭಾವ ಸಂಬಂಧದಿಂದ ನೆಲೆಸಿದ ಶಕ್ತಿಯು ಒಂದೇ ಆಗಿದ್ದರೂ ಸ್ಥಲತತ್ವದ ವಿಕಾಸಕ್ಕೆ ಸಹಕಾರಿಯಾಗಿ ಕಲೆಯಾಗುತ್ತದೆ. ವಿಕಾಸಗೊಂಡ ಸ್ಥಲತತ್ವದ ವಿಭಾಗಗಳನ್ನು ಪುನಃ ಒಂದಾಗಿಸಲು ಸಹಕಾರಿಯಾಗಿ ಭಕ್ತಿಯಾಗುತ್ತದೆ ಎನ್ನುತ್ತ ಶಕ್ತಿ ಮತ್ತು ಭಕ್ತಿಗಿರುವ ಅಂತರವನ್ನು ಈ ಬಗೆಯಾಗಿ ವಿಶ್ಲೇಷಿಸಿದೆ –

ಸಾ ಶಕ್ತಿರ್ದ್ವಿವಿಧಾ ಭೂತಾ ಸ್ವಸ್ವಾತಂತ್ರ್ಯ ಬಲೇನ ತು ।
ಸಮಾನ ಧರ್ಮಿಣೀತ್ವೇನ ವಿಭಕ್ತಾ ಭಕ್ತವತ್ಸಲಾ ॥

---

೧೧. ಶಿವಶರಣೆಯರ ವ.ಸಂ., ಸಮಗ್ರ ವಚನ ಸಂಪುಟ ೫, ವಚನಸಂಖ್ಯೆ ೨೧೯ ಪುಟ ೬೧

ಲಿಂಗಸ್ಥಲಾಶ್ರಯಾ ಕಾಚಿತ್ಕಾಚಿದಂಗಸ್ಥಲಾಶ್ರಯಾ ।
ಲಿಂಗಸ್ಥಲಾಶ್ರಯಾ ಶಕ್ತಿಃ ಕಲಾರೂಪಾ ಪ್ರಕೀತೀತಾ ॥
ಅಂಗಸ್ಥಲಾಶ್ರಯಾ ಶಕ್ತಿಃ ಭಕ್ತಿರೂಪಾ ಭವಾಪಹಾ ।
ಯಥಾ ಮಹಾನಲಜ್ವಾಲಾ ವಿಭಕ್ತಾ ದೀಪಿಕಾಕೃತಿಃ ॥
ತಥಾ ಮಾಹೇಶ್ವರೀ ಶಕ್ತಿರ್ವಿಭಕ್ತಾ ಭಕ್ತಿರೂಪಿಣೀ ।
ಜ್ವಾಲಾ ತಮಸ್ವಿನೀ ಯಸ್ಮಾತ್ ದೀಪೀಕಾ ಸುಪ್ರಕಾಶಿನೀ ॥
ತಸ್ಮಾತ್ ಸವಾಸನಾಶಕ್ತಿರ್ಭಕ್ತಿರ್ನಿರ್ವಾಸನಾ ಮತಾ ।
ಭಕ್ತಿರ್ಮಹತ್ತರಾ ಶುದ್ಧಾಸು ಸೂಕ್ಷ್ಮಾ ಶೋಭನಾ ಪರಾ ॥
ಸಚ್ಚಿದಾನಂದರೂಪಾ ಸ್ಯಾತ್ ಭುಕ್ತಿಮುಕ್ತಿಫಲಪ್ರದಾ ।
ಶಕ್ತಿ ರೇವ ಸ್ಮೃತಾ ಭಕ್ತಿರ್ಭಕ್ತಿರೇವ ಹಿ ಸಾ ಸದಾ
ಶಕ್ತಿಭಕ್ತ್ಯೋರ್ನಭೇದೋಸ್ತಿ ಪರಮಾರ್ಥನಿರೂಪಣೇ ।
ಶಕ್ತಿಃ ಪ್ರವೃತ್ತಿರಾಖ್ಯಾತಾ ನಿವೃತ್ತಿರ್ಭಕ್ತಿರೀರಿತಾ ॥
ಶಕ್ತ್ಯಾ ಪ್ರಪಂಚಸೃಷ್ಟಿಸ್ಯಾತ್ ಭಕ್ತ್ಯಾ ತದ್ವಿಲಯೋ ಮತಃ ।
ಶಕ್ತಿವೈಚಿತ್ರ್ಯತೋ ರೂಪಂ ನೀರೂಪಮಪಿ ಯಾತಿ ಹಿ ॥
ಭಕ್ತಿವೈಚಿತ್ರ್ಯತೋ ರೂಪಮಪಿ ನೀರೂಪತಾಮಿಯಾತ್ ।
ಪ್ರಪಂಚ ವೃದ್ಧ್ಯಪೇಕ್ಷಾ ಹಿ ಶಕ್ತೇಃ ಸ್ವಾಭಾವಿಕೋ ಗುಣಃ ॥
ಪ್ರಪಂಚ ಸಂಕ್ಷಯಾಪೇಕ್ಷಾ ಭಕ್ತೇಃ ಸ್ವಭಾವಿಕೋ ಗುಣಃ ।
ಅಧೋಮುಖೀ ಭವೇತ್‌ಶಕ್ತಿಃ ಭಕ್ತಿರೂರ್ಧ್ವಮುಖೀ ಭವೇತ್ ॥
ಸಮಾಯಾ ಶಕ್ತಿರಾಖ್ಯಾತಾ ನಿರ್ಮಾಯಾ ಭಕ್ತಿರೀರಿತಾ ।
ಅಪಿ ತರ್ಕಪ್ರಮಾಣಾಭ್ಯಾಂ ಶಕ್ತೇಭಕ್ತಿರ್ಗರೀಯಸೀ ॥
ಉಪಾಸ್ಯತ್ವಂ ಭವೇತ್ ಶಕ್ತ್ಯಾ ಭಕ್ತ್ಯೋಪಾಸಕತಾ ಭವೇತ್ ।
ತಸ್ಮಾಲ್ಲಿಂಗಸ್ಥಲೇ ಶಕ್ತಿಃ ಭಕ್ತಿರಂಗಸ್ಥಲೇ ಸ್ಥಿತಾ ॥
ಲಿಂಗಸ್ಥಲಂ ಶಿವಃ ಸಾಕ್ಷಾತ್ ಜೀವಾತ್ಮಾಂಗಸ್ಥಲಂ ಭವೇತ್ ।
ಲಿಂಗಾಂಗಸ್ಥಲಯೋರೈಕ್ಯಂ ಶಿವಜೀವೈಕ್ಯಮೇವ ಹಿ ॥[೧೨]

ಎಂಬ ನಿರೂಪಣೆಯು ಅತ್ಯಂತ ವೈಶಿಷ್ಟ್ಯ ಪೂರ್ಣವಾಗಿದ್ದು, ಇಲ್ಲಿ ವಿಶ್ಲೇಷಿಸಿರುವ ಶಕ್ತಿ ಮತ್ತು ಭಕ್ತಿಗಳಿಗಿರುವ ಅಂತರವನ್ನು ಹೀಗೆ ವಿಭಾಗಿಸಿ ಸೂಚಿಸಬಹುದು.

---

೧೨. 'ತಂತ್ರೋತ್ತರ ಪ್ರದೀಪ', ಸ್ಥಲನಿರ್ದೇಶಾಧಿಕರಣ ಪಟಲ ೨ ಶ್ಲೋಕ ಸಂಖ್ಯೆ ೨೧–೩೩

ಶಕ್ತಿ		ಭಕ್ತಿ
೧.	ಜ್ವಾಲೆ ಹೊಗೆಯಿಂದ ಕೂಡಿದೆ	ದೀಪದಂತೆ ಸುಪ್ರಕಾಶವುಳ್ಳದ್ದು.
೨.	ಲಿಂಗಗತವಾದ ಶಕ್ತಿಯಲ್ಲಿ ಹೊಗೆ ಎಂಬ ವಾಸನೆ ಇದೆ.	ಭಕ್ತಿಯಲ್ಲಿ ಆ ವಾಸನೆ ಇಲ್ಲ. ಮೇಲಾಗಿ ಭಕ್ತಿಯು ಮಹತ್ತರ, ಶುದ್ಧ, ಸೂಕ್ಷ್ಮ, ಸಚ್ಚಿದಾನಂದ ರೂಪವಾಗಿದ್ದು ಅಂಗನಿಗೆ ಭೋಗ– ಮೋಕ್ಷಗಳನ್ನು ಕರುಣಿಸುತ್ತದೆ.
೩.	ಶಕ್ತಿಯು ಪ್ರವೃತ್ತಿ ಪರ	ಭಕ್ತಿಯು ನಿವೃತ್ತಿ ಪರ
೪.	ಶಕ್ತಿಯಿಂದ ಪ್ರಪಂಚ ಸೃಷ್ಟಿ	ಭಕ್ತಿಯಿಂದ ಪ್ರಪಂಚ ಲಯ
೫.	ಶಕ್ತಿ ವೈಚಿತ್ಯದಿಂದ ರೂಪವಿಲ್ಲದ್ದೂ ರೂಪುತಳೆಯುತ್ತದೆ.	ಭಕ್ತಿ ವೈಚಿತ್ರದಿಂದ ರೂಪವೂ ರೂಪರಹಿತವಾಗುತ್ತದೆ.
೬.	ಶಕ್ತಿಗೆ ಪ್ರಪಂಚ ವೃದ್ಧಿಯ ಅಪೇಕ್ಷೆ	ಭಕ್ತಿಗೆ ಪ್ರಪಂಚ ಕ್ಷಯಾಪೇಕ್ಷೆ
೭.	ಶಕ್ತಿಯು ಅಧೋಮುಖಿ	ಭಕ್ತಿಯು ಊರ್ಧ್ವಮುಖಿ
೮.	ಶಕ್ತಿ ಸಮಾಯೆ	ಭಕ್ತಿಯು ನಿರ್ಮಾಯೆ
೯.	ಲಿಂಗಸ್ಥಲಗಳಲ್ಲಿ ಶಕ್ತಿ	ಅಂಗಸ್ಥಲದಲ್ಲಿ ಭಕ್ತಿ

ಹೀಗೆ ಶಕ್ತಿ ಮತ್ತು ಭಕ್ತಿಗಳಿಗಿರುವ ಅಂತರವು ಅತ್ಯಂತ ಮನೋಜ್ಞವಾಗಿ 'ತಂತ್ರೋತ್ತರ ಪ್ರದೀಪ' ದಲ್ಲಿ ಮೂಡಿಬಂದಿದೆ.

ಈ ಶಕ್ತಿ–ಭಕ್ತಿಗಳ ಕುರಿತು ಸಿದ್ಧಲಿಂಗಯತಿಗಳು –


ಆ ಪರಶಿವನ ಚಿಚ್ಛಕ್ತಿ ತಾನೆ ಎರಡು ತೆರನಾಯಿತ್ತು.
ಲಿಂಗಸ್ಥಲವನಾಶ್ರಯಿಸಿ ಶಕ್ತಿಯೆನಿಸಿತ್ತು
ಅಂಗಸ್ಥಲವನಾಶ್ರಯಿಸಿ ಭಕ್ತಿಯೆನಿಸಿತ್ತು
ಶಕ್ತಿಯೆ ಪ್ರವೃತ್ತಿಯೆನಿಸಿತ್ತು. ಭಕ್ತಿಯೇ ನಿವೃತ್ತಿಯೆನಿಸಿತ್ತು.[೧೩]


ಎಂದು ಅತ್ಯಂತ ಸರಳವಾಗಿ ವಿವರವಾಗಿ ಪ್ರತಿಪಾದಿಸಿದ್ದಾರೆ.

ಹೀಗೆ ಸ್ಥಲವು ಮಹಾಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ, ಗುರುಲಿಂಗ ಮತ್ತು ಆಚಾರಲಿಂಗವೆಂಬುದಾಗಿ ಕ್ರಮವಾಗಿ ಆರು ಭೇದಗಳನ್ನು ಹಾಗೂ ಅಂಗಸ್ಥಲವು ಭಕ್ತಸ್ಥಲ, ಮಾಹೇಶ್ವರ ಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯ ಸ್ಥಲವೆಂದೂ ಆರು ವಿಭಾಗ ಹೊಂದುವುದರಿಂದ ಅವುಗಳನ್ನಾಶ್ರಯಿಸಿಕೊಂಡ ಭಕ್ತಿ ಹಾಗೂ ಕಲೆಗಳು ಸಹ ಆರು ವಿಧವಾಗಬೇಕಾಗುತ್ತದೆ. ಲಿಂಗಸ್ಥಲವನಾಶ್ರಯಿಸಿಕೊಂಡ ಕಲೆಯು ಶಾಂತ್ಯತೀತೋತ್ತರಾ ಕಲಾ, ಶಾಂತ್ಯತೀತ ಕಲಾ, ಶಾಂತಿ ಕಲಾ, ವಿದ್ಯಾಕಲಾ, ಪ್ರತಿಷ್ಠಾಕಲಾ ಮತ್ತು ನಿವೃತ್ತಿ ಕಲಾ ಎಂಬುದಾಗಿ

೧೩. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ. ೬. ವಚನಸಂಖ್ಯೆ ೩೯ ಪುಟ ೧೯

ಆರು ವಿಧವಾಗುತ್ತದೆ. ಉಪಾಸಕವಾದ ಅಂಗಸ್ಥಲವನ್ನು ಆಶ್ರಯಿಸಿಕೊಂಡ ಭಕ್ತಿಯು ಸಮರಸ ಭಕ್ತಿ, ಆನಂದ ಭಕ್ತಿ, ಅನುಭವ ಭಕ್ತಿ, ಅವಧಾನ ಭಕ್ತಿ, ನಿಷ್ಠಾ ಭಕ್ತಿ ಮತ್ತು ಶ್ರದ್ಧಾಭಕ್ತಿಯೆಂಬುದಾಗಿ ಆರು ಭೇದಗಳನ್ನು ಹೊಂದುತ್ತದೆ. ಅಂದರೆ ಮಹಾಲಿಂಗವು ಶಾಂತ್ಯತಿತೋತ್ತರಾ ಕಲೆಯಿಂದ, ಪ್ರಸಾದ ಲಿಂಗವು ಶಾಂತ್ಯತೀತ ಕಲೆಯಿಂದ, ಜಂಗಮಲಿಂಗವು ಶಾಂತಿ ಕಲೆಯಿಂದ, ಶಿವಲಿಂಗವು ವಿದ್ಯಾಕಲೆಯಿಂದ, ಗುರುಲಿಂಗವು ಪ್ರತಿಷ್ಠಾಕಲೆಯಿಂದ ಮತ್ತು ಆಚಾರಲಿಂಗವು ನಿವೃತ್ತಿಕಲೆಯಿಂದ ಕೂಡಿಕೊಂಡಿರುತ್ತದೆ. ಇದರಂತೆಯೇ ಐಕ್ಯಸ್ಥಲದಲ್ಲಿ ಸಮರಸ ಭಕ್ತಿಯು, ಶರಣಸ್ಥಲದಲ್ಲಿ ಆನಂದ ಭಕ್ತಿಯು, ಪ್ರಾಣಲಿಂಗಿಸ್ಥಲದಲ್ಲಿ ಅನುಭವ ಭಕ್ತಿಯು, ಪ್ರಸಾದಿ ಸ್ಥಲದಲ್ಲಿ ಅವಧಾನ ಭಕ್ತಿಯು, ಮಾಹೇಶ್ವರ ಸ್ಥಲದಲ್ಲಿ ನಿಷ್ಠಾಭಕ್ತಿ ಮತ್ತು ಭಕ್ತ ಸ್ಥಲದಲ್ಲಿ ಶ್ರದ್ಧಾಭಕ್ತಿ ನೆಲೆಸಿರುತ್ತವೆ. ಇದನ್ನು ಹೀಗೆ ಚಿತ್ರಿಸಬಹುದು.





ಶಕ್ತಿಯೇ ಕಲೆಯಾಗಿ ಜೀವಿಗಳನ್ನು ಪರಮಾತ್ಮನಿಂದ ಬೇರ್ಪಡಿಸಿದರೆ ಭಕ್ತಿಯಾಗಿ ಪುನಃ ಅವರಿಗೆ ಪರಮಾತ್ಮನನ್ನು ಪರಿಚಯಿಸುವುದರ ಮೂಲಕ ಅವನಲ್ಲಿ ಸಾಮರಸ್ಯ ಹೊಂದಲು ಸಹಕಾರಿಯಾಗುತ್ತಾಳೆ. ಈ ಶಕ್ತಿಯ ಸಹಾಯದಿಂದಲೇ ಸ್ಥಲತತ್ವ ಅಂಗಲಿಂಗಗಳ ರೂಪದಿಂದ ಭೇದವಾಗಿ ಪುನಃ ಅವುಗಳಲ್ಲಿ ಆರು ಆರು ಭೇದಗಳನ್ನು ಹೊಂದಿ ವಿಕಾಸವಾಗುತ್ತದೆ. ಇದಕ್ಕೆ ನಾವು ಸ್ಥಲತತ್ವದ ವಿಕಾಸ ಇಲ್ಲವೆ ಅವರೋಹಣಕ್ರಮವೆಂದು ಹೆಸರಿಸಬಹುದು. ಪರಮಾತ್ಮನೇ ಅವರೋಹಣ ಕ್ರಮದಲ್ಲಿ ಇಳಿದು ಬಂದು ಜೀವಾತ್ಮವಾಗುತ್ತಾನೆ. ಪುನಃ ಪರಮಾತ್ಮ ಸ್ವರೂಪವನ್ನು ಹೊಂದಲು ಅವರೋಹಣ ಕ್ರಮದಲ್ಲಿ ಆಗಮಿಸಿದ ಮಾರ್ಗವನ್ನೇ ಆಶ್ರಯಿಸಿಕೊಂಡು ಕ್ರಮವಾಗಿ ಆರೋಹಣ ಮಾಡುತ್ತಾ ಅಂದರೆ ಹಂತಹಂತವಾಗಿ ತನ್ನ ಆಂತರಿಕ ಸಾಧನೆಯ ಮೂಲಕ ಮೇಲೇರುತ್ತಾ ಹೋಗಬೇಕಾಗುತ್ತದೆ. ಇದುವೇ ಷಟ್‌ಸ್ಥಲ ಸಾಧನೆ ಅಥವಾ ಷಟ್‌ಸ್ಥಲ ಸೋಪಾನವೆಂದು ಕರೆಯಲ್ಪಡುತ್ತದೆ.

ಹೀಗೆ ಪ್ರವೃತ್ತಿ ಮಾರ್ಗದಲ್ಲಿ ಶಕ್ತಿಯು ಮಹಾಲಿಂಗ, ಪ್ರಸಾದಲಿಂಗ, ಜಂಗಮ ಲಿಂಗ, ಶಿವಲಿಂಗ, ಗುರುಲಿಂಗ ಮತ್ತು ಆಚಾರಲಿಂಗಗಳಲ್ಲಿ ಕ್ರಮವಾಗಿ ಚಿತ್‌ಶಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಯಾಗಿ ಶಾಂತ್ಯತೀತೋತ್ತರ, ಶಾಂತ್ಯತೀತ, ಶಾಂತಿ, ವಿದ್ಯಾ, ಪ್ರತಿಷ್ಠಾ, ನಿವೃತ್ತಿ, ಕಲೆಗಳೆನಿಸಿ ಜಗತ್‌ಸೃಷ್ಟಿಗೆ ಕಾರಣವಾಗಿದೆ. ಭಕ್ತರನ್ನು ಉದ್ಧರಿಸಲು ಭಕ್ತಿಯಾಗಿ ಪರಿಣಮಿಸಿದ ಅದೇ ಶಕ್ತಿಯು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಅಂಗನ ಆರು ಸ್ಥಲಗಳಲ್ಲಿ ಕ್ರಮವಾಗಿ ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ ಮತ್ತು ಸಮರಸ ಭಕ್ತಿಯೆನಿಸಿ ನಿವೃತ್ತಿ ಮಾರ್ಗದಲ್ಲಿ ಅಂಗನನ್ನು ಮೇಲೆ ಒಯ್ದು ಪರಶಿವನಲ್ಲಿ ಸಮರಸಗೊಳಿಸಿ ಲಿಂಗಾಂಗಸಾಮರಸ್ಯ ಭಾವವನ್ನುಂಟು ಮಾಡುವದೇ ಷಟ್‌ಸ್ಥಲ ನಿರ್ಣಯ.

ಹೀಗೆ ಅಂಗಸ್ಥಲಗಳ ಮತ್ತು ಲಿಂಗಸ್ಥಲಗಳ ವಿಚಾರದಲ್ಲಿ ಶಿವಾಗಮಗಳಿಗೂ ವಚನ ಸಾಹಿತ್ಯಕ್ಕೂ ನಿಕಟವಾದ ಸಂಬಂಧವಿರುವುದನ್ನು ಕಾಣಬಹುದು. ಹಾಗೆಯೇ ಆಚಾರಾದಿ ಲಿಂಗಸ್ಥಲಗಳಲ್ಲಿ ಒಂದೊಂದು ಮೂರು ಮೂರಾಗಿ ಹದಿನೆಂಟು ಲಿಂಗ ಸ್ಥಲಗಳು ಮತ್ತು ಭಕ್ತಾದಿ ಅಂಗಸ್ಥಲಗಳಲ್ಲಿ ಒಂದೊಂದು ಮೂರು ಮೂರಾಗಿ ಹದಿನೆಂಟು ಅಂಗಸ್ಥಲಗಳು ಸೇರಿ ಒಟ್ಟು ಮೂವತ್ತಾರು ಸ್ಥಲಗಳಾಗುವ ಪ್ರಕ್ರಿಯೆಯಲ್ಲಿಯೂ ಶಿವಾಗಮಗಳಿಗೂ ಮತ್ತು ವಚನ ಸಾಹಿತ್ಯಕ್ಕೂ ನಿಕಟವಾದ ಸಂಬಂಧವಿರುವುದನ್ನು ಗಮನಿಸಬಹುದು.

೧೮ ಲಿಂಗಸ್ಥಲಗಳು ಮತ್ತು ೧೮ ಅಂಗಸ್ಥಲಗಳ ವಿಭಾಗ ಕ್ರಮ

ಸೂಕ್ಷ್ಮಾಗಮವು ಲಿಂಗಸ್ಥಲಗಳನ್ನು ಮತ್ತೆ ಮೂರು ತೆರನಾಗಿ ವಿಂಗಡಿಸಿ ಲಿಂಗಸ್ಥಲದಲ್ಲಿ ಹದಿನೆಂಟು ವಿಧವಾಗಿ ವಿಂಗಡಿಸಿದೆ.

ಆಚಾರಲಿಂಗಸ್ಥಲವು ಸದಾಚಾರ, ನಿಯತಾಚಾರ ಮತ್ತು ಗಣಾಚಾರಸ್ಥಲವೆಂದು ಮೂರು ವಿಧ:[೧೪] ಯಾವ ಮಾರ್ಗದಿಂದ ಸಜ್ಜನ ಶಿವಭಕ್ತನನ್ನು ಸದಾ ಸಂತುಷ್ಟನನ್ನಾಗಿ ಮಾಡಬಹುದೋ ಅದು **ಸದಾಚಾರ ಸ್ಥಲ**. ತಾನು ಸ್ವೀಕರಿಸಿದ ಆಚಾರವನ್ನು ಎಂದೂ ಬಿಡದೆ, ಎಂತಹ ಸಂಕಟ ಬಂದರೂ ಪ್ರಾಣವನ್ನೂ ಲೆಕ್ಕಿಸದೆ ಯಾವ ವ್ಯಕ್ತಿ ಆಚರಿಸುತ್ತಾನೋ ಅಂಥವನ ಆಚಾರ **ನಿಯತಾಚಾರ ಸ್ಥಲ**. ಗುರು-ಲಿಂಗ-ಜಂಗಮರ ವಿಷಯದಲ್ಲಿ ಯಾವುದೇ ಪ್ರಕಾರದ ನಿಂದೆಯನ್ನು ಕೇಳುವುದಿಲ್ಲ; ಅಂತಹ ನಿಂದಕನನ್ನು ಶಿಕ್ಷಿಸುತ್ತೇನೆ, ಇಂತಹ ಸಂಕಲ್ಪವೇ **ಗಣಾಚಾರ ಸ್ಥಲ**.[೧೫]

ಗುರುಲಿಂಗಸ್ಥಲವು ದೀಕ್ಷಾಗುರು, ಶಿಕ್ಷಾಗುರು, ಅನುಭಾವಗುರುಸ್ಥಲವೆಂದು ಮೂರು ವಿಧ [೧೬]: ಕುಂಡ ಮಂಡಲಗಳನ್ನು ಸಿದ್ಧಗೊಳಿಸಿಕೊಂಡು, ಹೋಮ, ಷಡಧ್ವಸಿದ್ಧಿ, ಶಿವಕಲೆಯನ್ನು ಶಿಷ್ಯನಲ್ಲಿ ಸಮಾವೇಶಗೊಳಿಸುವುದು, ಮಂತ್ರೋಪದೇಶ ಮುಂತಾದ ಕ್ರಿಯೆಗಳಿಂದ ವಿಶಿಷ್ಟವಾದ ದೀಕ್ಷೆಯನ್ನು ಮಾಡುವ ಗುರು ದೀಕ್ಷಾಗುರು, ಆ ಕ್ರಿಯೆಯನ್ನು ನಡೆಸುವುದು **ದೀಕ್ಷಾಗುರುಸ್ಥಲ**. ಗುರುಲಿಂಗಜಂಗಮರು ಏಕರೂಪರು ಎಂಬ ಜ್ಞಾನವನ್ನು ಕೊಡುವ ಗುರುವಿನ ಸ್ಥಲವೇ **ಶಿಕ್ಷಾಗುರುಸ್ಥಲ**. ಹಿಂದಿನ ಜನ್ಮದ ಸಂಸ್ಕಾರದಿಂದ, ಈಗ ಗಳಿಸಿದ ಸುಕೃತದಿಂದ ಯಾವ ಹೆಚ್ಚಿನ ಜ್ಞಾನ ದೊರೆಯುವುದೋ ಅದು ಸ್ವಾನುಭಾವ. ಆ ಜ್ಞಾನಯುಕ್ತ ಗುರುಸ್ಥಲವೇ **ಅನುಭಾವಗುರುಸ್ಥಲ**. ಇದಕ್ಕೆ ಜ್ಞಾನಗುರು ಸ್ಥಲವೆಂದೂ ಹೆಸರು.[೧೭]

ಶಿವಲಿಂಗ ಸ್ಥಲವು ಇಷ್ಟಲಿಂಗಸ್ಥಲ, ಪ್ರಾಣಲಿಂಗಸ್ಥಲ, ಭಾವಲಿಂಗಸ್ಥಲವೆಂದು ಮೂರು ವಿಧ :[೧೮] ಗುರುವು ಮಂತ್ರೋಪದೇಶ ಸಹಿತವಾಗಿ ದೀಕ್ಷೆಯ ಮೂಲಕ ಅನುಗ್ರಹಿಸಿದ ಲಿಂಗದ ವಿಚಾರವನ್ನು ತಿಳಿಯುವುದು **ಇಷ್ಟಲಿಂಗಸ್ಥಲ**. ದೇಹ ಇಂದ್ರಿಯಗಳ ಗುಣಗಳನ್ನು ಬಿಟ್ಟು ತನ್ನ ಅಂತರಾತ್ಮವನ್ನು ಶಿವನಿಗೆ ಅರ್ಪಿಸಿ, ಶಿವನನ್ನು ಮನಸ್ಸಿನಲ್ಲಿ ಲೀನಗೊಳಿಸಿಕೊಂಡ ಸ್ಥಿತಿ **ಪ್ರಾಣಲಿಂಗಸ್ಥಲ**. ಜಾಗ್ರತ್, ಸ್ವಪ್ನ, ಸುಷುಪ್ತಿಗಳಲ್ಲಿ ಮನಸ್ಸನ್ನು ಜ್ಯೋತಿರ್ಲಿಂಗದಲ್ಲಿ ಐಕ್ಯಗೊಳಿಸಿಕೊಂಡ ನೆಲೆ **ಭಾವಲಿಂಗ ಸ್ಥಲ**[೧೯]

ಚರಲಿಂಗವು ಸ್ವಯಜಂಗಮ, ಚರಜಂಗಮ ಮತ್ತು ಪರಜಂಗಮಸ್ಥಲವೆಂದು ಮೂರು ವಿಧ:[೨೦] ಲಿಂಗದ ಚಿಹ್ನೆಯಿಂದ ಕೂಡಿದ, ಬಾಹ್ಯ ಕರ್ಮವನ್ನು ತ್ಯಜಿಸಿದ, ಕೇವಲಾನಂದಯುಕ್ತನಾದವನ ನೆಲೆ **ಸ್ವಯಂಜಂಗಮ ಸ್ಥಲ**. ಸ್ವತಂತ್ರನೂ, ತನಗಿಂತ ಭಿನ್ನವಲ್ಲದ ಲಿಂಗವನ್ನು ಧರಿಸಿದವನೂ, ನಿರಾಕುಲನೂ, ಭೇದಭ್ರಾಂತಿಯಿಲ್ಲದವನೂ

---

೧೪. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೬
೧೫. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೭-೯
೧೬. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೧೦.
೧೭. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೧೦-೧೩
೧೮. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೧೪.
೧೯. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೧೫-೧೭.
೨೦. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೧೮.

ಆದವನ ಸ್ಥಿತಿ **ಚರಜಂಗಮ ಸ್ಥಲ**. ದ್ವಂದ್ವವಿಲ್ಲದ ಸದಾ ಶಿವಸ್ವರೂಪನಾದ ಗಮನಾಗಮನ ವಿಲ್ಲದ ಜ್ಯೋತಿರ್ಲಿಂಗ ಸ್ವರೂಪನ ನೆಲೆಯು **ಪರಜಂಗಮಸ್ಥಲ**.[೨೧]

ಪ್ರಸಾದಲಿಂಗವು ಶುದ್ಧಪ್ರಸಾದ, ಸಿದ್ಧಪ್ರಸಾದ ಮತ್ತು ಪ್ರಸಿದ್ಧ ಪ್ರಸಾದಸ್ಥಲವೆಂದು ಮೂರು ವಿಧ:[೨೨] ಹಿಂದಿನ ಎಲ್ಲಾ ಗುಣಗಳನ್ನು ಬಿಟ್ಟು, ಕಾಮಕ್ರೋಧಾದಿಗಳನ್ನು ತ್ಯಜಿಸಿದ ಗುರುಭಕ್ತನು ಗುರುವಿನಿಂದ ಪಡೆದು ಸ್ವೀಕರಿಸಿದ ಪ್ರಸಾದಕ್ಕೆ ಸಂಬಂಧಿಸಿದ್ದು **ಶುದ್ಧಪ್ರಸಾದ ಸ್ಥಲ**. ಲಿಂಗತ್ರಯವನ್ನು ಸರಿಯಾಗಿ ತಿಳಿದು ಅವುಗಳ ಏಕತ್ವವನ್ನು ಅರಿತು ಲಿಂಗದಿಂದ ಪಡೆಯುವ ಪ್ರಸಾದಕ್ಕೆ ಸಂಬಂಧಿಸಿದುದು **ಸಿದ್ಧಪ್ರಸಾದಸ್ಥಲ**. ಶಿವೋಹಂ ಭಾವನೆಯಿಂದ ಕೂಡಿದ ನಿಶ್ಚಲವಾದ ಮನಸ್ಸಿನಿಂದ ಯುಕ್ತನಾದವನು ಜಂಗಮನಿಂದ ಪಡೆಯುವ ಪ್ರಸಾದಕ್ಕೆ ಸಂಬಂಧಪಟ್ಟುದು **ಪ್ರಸಿದ್ಧಪ್ರಸಾದ ಸ್ಥಲ**.[೨೩]

ಮಹಾಲಿಂಗ ಸ್ಥಲವು ಪಿಂಡಜಸ್ಥಲ, ಅಂಡಜಸ್ಥಲ, ಬಿಂದ್ವಾಕಾಶಸ್ಥಲವೆಂದು ಮೂರು ವಿಧ :[೨೪] ದೇಹವೇ ದೇಗುಲ ಜೀವನೇ ಸದಾಶಿವನು ಎಂಬ ನಿಶ್ಚಿತ ಸದ್ಭಾವವುಳ್ಳ ನೆಲೆಯು **ಪಿಂಡಜ ಸ್ಥಲ**. ಭೂಮಿಯೇ ಪೀಠಿಕೆ, ಸೃಷ್ಟಿಕಾರಣವಾದ ಲಿಂಗವೇ ಆಕಾಶವೆಂಬ ನಿಶ್ಚಿತಜ್ಞಾನದ ಸ್ಥಿತಿಯೇ **ಅಂಡಜಸ್ಥಲ**. ಆತ್ಮನನ್ನು ಆಕಾಶದಲ್ಲೂ, ಆಕಾಶವನ್ನು ಆತ್ಮನಲ್ಲೂ ಧ್ಯಾನಿಸಿ ಆತ್ಮಾಕಾಶ ಸ್ವರೂಪದ ಲಿಂಗವನ್ನು ಅರಿತ ನೆಲೆಯು **ಬಿಂದ್ವಾಕಾಶಸ್ಥಲ**.[೨೫]

ಎಂದು ಸೂಕ್ಷ್ಮಾಗಮವು ಲಿಂಗಸ್ಥಲಗಳನ್ನು ಹದಿನೆಂಟು ವಿಧಗಳಾಗಿ ವಿಂಗಡಿಸಿದೆ. ಈ ಹದಿನೆಂಟು ಲಿಂಗಸ್ಥಲಗಳ ಭೇದವನ್ನು ಚೆನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಯಥಾವತ್ತಾಗಿ ನಿರೂಪಿಸಿದ್ದಾರೆ.

"ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗವೆಂದಿಂತು ಲಿಂಗಸ್ಥಲವಾರಕ್ಕಂ ವಿವರ :
ಆಚಾರಲಿಂಗಸ್ಥಲ ತ್ರಿವಿಧ ; ಸದಾಚಾರ ನಿಯತಾಚಾರ, ಗಣಾಚಾರ,
ಇದಕ್ಕೆ ವಿವರ : ಎಲ್ಲ ಜನವಹುದೆಂಬುದೆ ಸದಾಚಾರ.
ಹಿಡಿದ ವ್ರತನಿಯಮವ ಬಿಡದಿಹುದೆ ನಿಯತಾಚಾರ.
ಶಿವನಿಂದೆಯ ಕೇಳದಿಹುದೆ ಗಣಾಚಾರ.
ಗುರುಲಿಂಗಸ್ಥಲ ತ್ರಿವಿಧ : ದೀಕ್ಷೆ, ಶಿಕ್ಷೆ, ಸ್ವಾನುಭಾವ
ಇದಕ್ಕೆ ವಿವರ : ದೀಕ್ಷೆಯೆಂದಡೆ ಗುರು, ಶಿಕ್ಷೆಯೆಂದಡೆ ಜಂಗಮ,
ಸ್ವಾನುಭಾವವೆಂದಡೆ ತನ್ನಿಂದ ತಾನರಿವುದು.
ಶಿವಲಿಂಗ ಸ್ಥಲ ತ್ರಿವಿಧ : ಇಷ್ಟಲಿಂಗ, ಪ್ರಾಣಲಿಂಗ, ತೃಪ್ತಿಲಿಂಗ

---

೨೧. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೧೯–೨೧.
೨೨. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೨೨
೨೩. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೨೩–೨೫
೨೪. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೨೬
೨೫. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೨೭–೨೯

ಇದಕ್ಕೆ ವಿವರ : ಶ್ರೀಗುರು ಕರಸ್ಥಲದಲ್ಲಿ ಅನುಗ್ರಹವ ಮಾಡಿಕೊಟ್ಟದೀಗ ಇಷ್ಟಲಿಂಗ.
ತನುಗುಣ ನಾಸ್ತಿಯಾದುದೇ ಪ್ರಾಣಲಿಂಗ.
ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ಲಿಂಗವಲ್ಲದೆ ಪೆರತೊಂದನರಿಯದಿಪ್ಪುದೆ ತೃಪ್ತಿಲಿಂಗ
ಜಂಗಮಲಿಂಗಸ್ಥಲ ತ್ರಿವಿಧ : ಸ್ವಯ, ಚರ, ಪರ,
ಇದಕ್ಕೆ ವಿವರ : ಸ್ವಯಂವೆಂದಡೆ ತನು.
ಚರವೆಂದಡೆ ಲಾಂಛನ ಮುಂತಾಗಿ ಚರಿಸುವುದು
ಪರವೆಂದಡೆ ಅರಿವು ಮುಂತಾಗಿ ಚರಿಸುವುದು
ಪ್ರಸಾದಲಿಂಗಸ್ಥಲ ತ್ರಿವಿಧ : ಶುದ್ಧ, ಸಿದ್ಧ, ಪ್ರಸಿದ್ಧ. ಇದಕ್ಕೆ ವಿವರ :
ಶುದ್ಧವೆಂದಡೆ ಗುರುಮುಖದಿಂದ ಮಲತ್ರಯವ ಕಳೆದುಳಿದ ಶೇಷ
ಸಿದ್ಧವೆಂದಡೆ ಲಿಂಗಮುಖದಿಂದ ಕರಣ ಮಥನಂಗಳ ಕಳೆದುಳಿದ ಶೇಷ
ಪ್ರಸಿದ್ಧವೆಂದಡೆ ಜಂಗಮಮುಖದಿಂದ ಸರ್ವಚೈತನ್ಯಾತ್ಮಕ
ತಾನೆಯಾಗಿ ಖಂಡಿತವಳಿದುಳಿದ ಶೇಷ.
ಮಹಾಲಿಂಗಸ್ಥಲ ತ್ರಿವಿಧ : ಪಿಂಡಜ, ಅಂಡಜ ಬಿಂದುಜ,
ಇದಕ್ಕೆ ವಿವರ : ಪಿಂಡಜವೆಂದಡೆ ಘಟಾಕಾಶ, ಅಂಡಜವೆಂದಡೆ ಬ್ರಹ್ಮಾಂಡ.
ಬಿಂದುಜವೆಂದಡೆ ಮಹಾಕಾಶ
ಇಂತು ಲಿಂಗಸ್ಥಲ ಆರಕ್ಕಂ ಹದಿನೆಂಟು ಸ್ಥಲವಾಯಿತ್ತು"[26]

ಎಂದು ತದ್ರೂಪವಾದ ೧೮ ಲಿಂಗಸ್ಥಲಗಳ ವಿವರಣೆಯನ್ನು ನೀಡಿದ್ದಾರೆ. ಇನ್ನು ೧೮ ಲಿಂಗಸ್ಥಲಗಳಿಗೆ ಅನುಗುಣವಾಗಿ ೧೮ ಅಂಗಸ್ಥಲಗಳಲ್ಲಿ ಕೇವಲ ಭಕ್ತಸ್ಥಲದ ಮೂರು ವಿಧಗಳಾದ : ಗುರುಭಕ್ತ, ಲಿಂಗಭಕ್ತ, ಜಂಗಮಭಕ್ತ (ಗುರುಭಕ್ತೋ ಲಿಂಗಭಕ್ತಶ್ಚರ ಭಕ್ತಸ್ಥಥೈವ ಚ । ಏವಂ ಭೇದ ಸಮಾಯುಕ್ತೋ ಭಕ್ತಸ್ತುತ್ರಿವಿಧೋ ಭವೇತ್॥)[27] ಎಂಬ ವಿವರವನ್ನು ಬಿಟ್ಟರೆ, ಮುಂದಿನ ಐದು ಸ್ಥಲಗಳ ವಿವರ ಈಗ ಉಪಲಬ್ಧವಿರುವ ಶಿವಾಗಮ ಭಾಗಗಳಲ್ಲಿ ದೊರೆಯುತ್ತಿಲ್ಲ. ಆದರೆ ಚೆನ್ನಬಸವಣ್ಣನವರು ಎಲ್ಲಾ ೧೮ ಅಂಗಸ್ಥಲಗಳ ವಿವರವನ್ನು ತಮ್ಮ ವಚನದಲ್ಲಿ ಕೊಟ್ಟಿದ್ದು "ಭಕ್ತಸ್ಥಲದಲ್ಲಿ ಗುರುಭಕ್ತ, ಲಿಂಗಭಕ್ತ, ಜಂಗಮಭಕ್ತ ಎಂದು, ಮಾಹೇಶ್ವರಸ್ಥಲದಲ್ಲಿ ಇಹಲೋಕವೀರ, ಪರಲೋಕವೀರ, ಲಿಂಗವೀರ ಎಂದೂ, ಪ್ರಸಾದಿಸ್ಥಲದಲ್ಲಿ ಅರ್ಪಿತ ಪ್ರಸಾದಿ, ಅವಧಾನ ಪ್ರಸಾದಿ, ಪರಿಣಾಮ ಪ್ರಸಾದಿ ಎಂದೂ, ಪ್ರಾಣಲಿಂಗಿಸ್ಥಲದಲ್ಲಿ ಆಚಾರಪ್ರಾಣಿ, ಲಿಂಗಪ್ರಾಣಿ, ಜಂಗಮಪ್ರಾಣಿ ಎಂದೂ, ಶರಣಸ್ಥಲದಲ್ಲಿ ಇಷ್ಟಲಿಂಗಾರ್ಚಕ, ಪ್ರಾಣಲಿಂಗಾರ್ಚಕ, ತೃಪ್ತಿಲಿಂಗಾರ್ಚಕ ಎಂದೂ, ಐಕ್ಯಸ್ಥಲದಲ್ಲಿ ಕಾಯಲಿಂಗೈಕ್ಯ, ಜೀವಲಿಂಗೈಕ್ಯ, ಭಾವಲಿಂಗೈಕ್ಯ ಸ್ಥಲವೆಂದು ತಿಳಿಸಿ, ಇಂತಿ ಅಂಗಸ್ಥಲ ಆರಕ್ಕಂ ಹದಿನೆಂಟು ಸ್ಥಲವಾಯಿತ್ತು ಉಭಯಸ್ಥಲ ಮೂವತ್ತಾರರೊಳಗಾದ ಸರ್ವಾಚಾರ ಸಂಪತ್ತನು ಕೂಡಲಚೆನ್ನಸಂಗಯ್ಯನಲ್ಲಿ ಬಸವಣ್ಣನೆ ಬಲ್ಲ."[28] ಎಂದು ವಿವರಿಸಿದ್ದಾರೆ.

೨೬. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೭೨೦ ಪುಟ ೨೧೫
೨೭. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೩೬
೨೮. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ೭೨೦ ಪುಟ ೨೧೫

ಹೀಗೆ ಆಚಾರಾದಿ ಲಿಂಗಸ್ಥಲಗಳಲ್ಲಿ ಒಂದೊಂದು ಮೂರು ಮೂರಾಗಿ ಹದಿನೆಂಟು ಲಿಂಗ ಸ್ಥಲಗಳು ಮತ್ತು ಭಕ್ತಾದಿ ಅಂಗಸ್ಥಲಗಳಲ್ಲಿ ಒಂದೊಂದು ಮೂರು ಮೂರಾಗಿ ಹದಿನೆಂಟು ಅಂಗಸ್ಥಲಗಳು ಸೇರಿ ಒಟ್ಟು ಮೂವತ್ತಾರು ಸ್ಥಲಗಳಾಗುವ ಪ್ರಕ್ರಿಯೆಯಲ್ಲಿಯೂ ಶಿವಾಗಮಗಳಿಗೂ ಮತ್ತು ವಚನ ಸಾಹಿತ್ಯಕ್ಕೂ ನಿಕಟವಾದ ಸಂಬಂಧವಿರುವುದನ್ನು ಗಮನಿಸಬಹುದು. ಇನ್ನು ಅಂಗಲಿಂಗ ಸಂಯೋಗದಿಂದ ಒಂದೊಂದೂ ೩೬+೩೬ ಸ್ಥಲಗಳಾಗುವ ರೀತಿಯಲ್ಲಿಯೂ ಶಿವಾಗಮಗಳಿಗೂ ಮತ್ತು ವಚನ ಸಾಹಿತ್ಯಕ್ಕೂ ಸಾಮ್ಯತೆ ಇರುವುದನ್ನು ನೋಡಬಹುದು.

೩೬ ಲಿಂಗಸ್ಥಲಗಳು ಮತ್ತು ೩೬ ಅಂಗಸ್ಥಲಗಳ ವಿಭಾಗ ಕ್ರಮ

ಲಿಂಗಸ್ಥಲ ಮತ್ತು ಅಂಗಸ್ಥಲಗಳು ಪ್ರತ್ಯೇಕವಾಗಿ ೧೮+೧೮ ಸ್ಥಲಗಳಾಗಿ, ಮುಂದೆ ಅಂಗಲಿಂಗ ಸಂಯೋಗದಿಂದ ಒಂದೊಂದೂ ೩೬+೩೬ ಸ್ಥಲಗಳಾಗುವವು. (ಸೂಕ್ಷ್ಮಾಗಮ, ೮.೭೬) ಆಚಾರಾದಿ ಲಿಂಗಸ್ಥಲಗಳಾದರೂ ಒಂದೊಂದೂ ಮೋಹೀ, ಭಕ್ತ, ಪೂಜಕ, ವೀರ, ಪ್ರಸಾದಿ, ಪ್ರಾಣಿ ಎಂಬ ಅಂಗನ ಗುಣಗಳ ಸಂಯೋಗದಿಂದ ಆರಾರು ವಿಭಾಗಗಳಾಗಿ ಪರಿಣಮಿಸಿ ೩೬ ಲಿಂಗಸ್ಥಲಗಳಾಗುತ್ತವೆ. ಈ ೩೬ ಸ್ಥಲಗಳನ್ನು ಹೀಗೆ ರೇಖಿಸಬಹುದು.

ಆಚಾರಲಿಂಗಸ್ಥಲ : ಆಚಾರಲಿಂಗಮೋಹೀ, ಆಚಾರಲಿಂಗಭಕ್ತ, ಆಚಾರ ಲಿಂಗಪೂಜಕ, ಆಚಾರಲಿಂಗವೀರ, ಆಚಾರಲಿಂಗಪ್ರಸಾದಿ, ಆಚಾರಲಿಂಗಪ್ರಾಣೀ

ಗುರುಲಿಂಗಸ್ಥಲ: ಗುರುಲಿಂಗಮೋಹೀ, ಗುರುಲಿಂಗಭಕ್ತ, ಗುರುಲಿಂಗಪೂಜಕ, ಗುರುಲಿಂಗವೀರ, ಗುರುಲಿಂಗಪ್ರಸಾದಿ, ಗುರುಲಿಂಗಪ್ರಾಣಿ

ಶಿವಲಿಂಗಸ್ಥಲ : ಶಿವಲಿಂಗಮೋಹೀ, ಶಿವಲಿಂಗಭಕ್ತ, ಶಿವಲಿಂಗಪೂಜಕ, ಶಿವಲಿಂಗವೀರ, ಶಿವಲಿಂಗಪ್ರಸಾದಿ, ಶಿವಲಿಂಗಪ್ರಾಣಿ

ಪ್ರಸಾದಲಿಂಗಸ್ಥಲ : ಪ್ರಸಾದಲಿಂಗಮೋಹೀ, ಪ್ರಸಾದಲಿಂಗಭಕ್ತ ಪ್ರಸಾದಲಿಂಗಪೂಜಕ, ಪ್ರಸಾದಲಿಂಗವೀರ, ಪ್ರಸಾದಲಿಂಗಪ್ರಸಾದಿ, ಪ್ರಸಾದಲಿಂಗಪ್ರಾಣಿ

ಮಹಾಲಿಂಗಸ್ಥಲ: ಮಹಾಲಿಂಗಮೋಹೀ, ಮಹಾಲಿಂಗಭಕ್ತ, ಮಹಾಲಿಂಗಪೂಜಕ, ಮಹಾಲಿಂಗವೀರ, ಮಹಾಲಿಂಗಪ್ರಸಾದಿ, ಮಹಾಲಿಂಗಪ್ರಾಣಿ

ಪ್ರಸ್ತುತ ೩೬ ಸ್ಥಲಗಳ ಲಕ್ಷಣವನ್ನು ಷಡ್ವಿಧ ಆಚಾರಲಿಂಗ ಭಕ್ತ, ಷಡ್ವಿಧ ಗುರುಲಿಂಗ ಭಕ್ತ, ಷಡ್ವಿಧ ಶಿವಲಿಂಗ ಭಕ್ತ, ಷಡ್ವಿಧ ಚರಲಿಂಗ ಭಕ್ತ, ಷಡ್ವಿಧ ಪ್ರಸಾದಲಿಂಗ ಭಕ್ತ, ಷಡ್ವಿಧ ಮಹಾಲಿಂಗ ಭಕ್ತ–ಎಂಬ ವಿಭಾಗದಡಿಯಲ್ಲಿ ಶಿವಾಗಮಗಳು ವಿವರಿಸಿದ್ದು[೨೯], ಈ ಶ್ಲೋಕಗಳ ಯಥಾವತ್ತಾದ ಅನುವಾದವನ್ನು ಚೆನ್ನಬಸವಣ್ಣನವರ ೬ ವಚನಗಳಲ್ಲಿ ಮನಗಾಣಬಹುದಾಗಿದೆ.

೧. ಆಚಾರಲಿಂಗ ಮೋಹೀ: ಶಿವಾಚಾರವಿರುದ್ಧಾನ್ ಸುತಾದಿಕಾನ್ ತ್ಯಕ್ತಃ।

೨. ಆಚಾರಲಿಂಗ ಭಕ್ತಃ: ಪೂರ್ವಾಚಾರಂ ಪರಿತ್ಯಜ್ಯ ಶಿವಾಚಾರಸಮಾಶ್ರಿತಃ।

---

೨೯. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೨೬

೩. ಆಚಾರಲಿಂಗ ಪೂಜಕಃ: ಅನ್ಯಪೂಜಾಂ ಪರಿತ್ಯಜ್ಯ ಲಿಂಗಪೂಜ್ಯೈಕತತ್ಪರಃ।

೪. ಆಚಾರಲಿಂಗ ವೀರಃ: ಅಪಿ ಪ್ರಾಣಾತ್ಯಯೇ ಸ್ವಾಚಾರಂ ನ ಪರಿತ್ಯಕ್ತಃ।

೫. ಆಚಾರಲಿಂಗ ಪ್ರಸಾದೀ: ಶುಚಿತ್ವಮರುಚಿತ್ವಂ ಚೇತ್ಯಾದಿ ಸಂದೇಹವರ್ಜಿತಃ।

೬. ಆಚಾರಲಿಂಗ ಪ್ರಾಣೀ: ಪರ್ಯೈಃಕೃತಾಂ ಈಶನಿಂದಾಂ ನ ಶ್ರುತಃ।[೩೦]

ಇದಕ್ಕೆ ಯಥಾವತ್ತಾದ ಅನುವಾದವಿರುವ ಚೆನ್ನಬಸವಣ್ಣನವರ ವಚನ –

ಆಚಾರಲಿಂಗ ಮೋಹಿತನಾದಡೆ ಸಖಿ ಸಹೋದರ ಮೋಹವ ಮರೆಯಬೇಕು.
ಆಚಾರಲಿಂಗ ಭಕ್ತನಾದಡೆ ಪೂರ್ವಾಚಾರವ ನಡೆಯಲಾಗದು.
ಆಚಾರಲಿಂಗ ಪೂಜಕನಾದಡೆ ಅನ್ಯಪೂಜೆಯ ಮಾಡಲಾಗದು.
ಆಚಾರಲಿಂಗ ವೀರನಾದಡೆ ಹಿಡಿದ ವ್ರತನೇಮವ ಬಿಡಲಾಗದು.
ಆಚಾರಲಿಂಗ ಪ್ರಸಾದಿಯಾದಡೆ ಅಶುಚಿಯಾಗಿರಲಾಗದು.
ಆಚಾರಲಿಂಗ ಪ್ರಾಣಿಯಾದಡೆ ಭಕ್ತನಿಂದೆಯ ಕೇಳಲಾಗದು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಈ ಆರು ಸಹಿತ ಆಚಾರ ಲಿಂಗಭಕ್ತಿ.[೩೧]

೭. ಗುರುಲಿಂಗ ಮೋಹೀ: ತ್ಯಕ್ತ ಪಿತ್ರಾದಿಮೋಹಃ।

೮. ಗುರುಲಿಂಗ ಭಕ್ತಃ: ಲೌಕಿಕಾನ್ ಬಾಂಧವಾನ್ ತ್ಯಕ್ತಃ।

೯. ಗುರುಲಿಂಗ ಪೂಜಕಃ: ಪೂಜಾಂ ಅನ್ಯಾಂ ಪರಿತ್ಯಕ್ತಃ।

೧೦. ಗುರುಲಿಂಗ ವೀರಃ: ಗುರೂಪದಿಷ್ಟಮೇವ ಸಮಾಚರಣಯುಕ್ತಃ।

೧೧. ಗುರುಲಿಂಗ ಪ್ರಸಾದಿ: ಗುರುಶಾಸನಂ ನ ಲಂಘಿತಃ।

೧೨.ಗುಥುಲಿಂಗ ಪ್ರಾಣೀ: ಗುರುಲಿಂಗೈಕ ಸೇವಕಃ।[೩೨]

ಇದಕ್ಕೆ ಯಥಾವತ್ತಾದ ಅನುವಾದವಿರುವ ಚೆನ್ನಬಸವಣ್ಣನವರ ವಚನ –

ಗುರುಲಿಂಗ ಮೋಹಿತನಾದಡೆ ಮಾತಾಪಿತರ ಮೋಹವ ಮರೆಯಬೇಕು.
ಗುರುಲಿಂಗ ಭಕ್ತನಾದಡೆ ಪೂರ್ವಬಂಧು ಪ್ರೇಮವ ಮಾಡಲಾಗದು.
ಗುರುಲಿಂಗ ಪೂಜಕನಾದಡೆ ಅನ್ಯಪೂಜೆಯ ಮಾಡಲಾಗದು.
ಗುರುಲಿಂಗ ವೀರನಾದಡೆ ಗುರುಲಿಂಗಾಚಾರದಲ್ಲಿ ನಡೆಯಬೇಕು.
ಗುರುಲಿಂಗ ಪ್ರಸಾದಿಯಾದಡೆ ಗುರ್ವಾಜ್ಞೆಯ ಮೀರಬಾರದು.
ಗುರುಲಿಂಗ ಪ್ರಾಣಿಯಾದಡೆ ಮಾನವರ ಸೇವೆ ಮಾಡಲಾಗದು.
ಇದುಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಈ ಆರು ಸಹಿತ ಗುರುಲಿಂಗಭಕ್ತಿ.[೩೩]

೧೩. ಶಿವಲಿಂಗಸ್ಥಲ ಮೋಹೀ: ಅನ್ಯಮೋಹವಿವರ್ಜಿತಃ।

೧೪. ಶಿವಲಿಂಗಸ್ಥಲ ಭಕ್ತಃ : ಅನ್ಯಭಕ್ತಿವಿವರ್ಜಿತಃ।

---

೩೦. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೩೭–೪೪

೩೧. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೯೬೮. ಪುಟ ೩೧೦

೩೨. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೪೫–೫೧

೩೩. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೧೧೭೩ ಪುಟ೪೦೪

೧೫. ಶಿವಲಿಂಗ ಪೂಜಕಃ : ಅನನ್ಯದೇವಪೂಜಕಃ।

೧೬. ಶಿವಲಿಂಗಸ್ಥಲ ವೀರಃ: ಪುಣ್ಯಕ್ಷೇತ್ರಾದಿನಿಸ್ಪೃಹಃ।

೧೭. ಶಿವಲಿಂಗಸ್ಥಲ ಪ್ರಸಾದಿ : ಸುಖ ದುಃಖ ವಿವರ್ಜಿತಃ।

೧೮. ಶಿವಲಿಂಗಸ್ಥಲ ಪ್ರಾಣೀ: ಸ್ತ್ರೀಭೋಗ ವರ್ಜಿತಃ।[೩೪]

ಇದಕ್ಕೆ ಯಥಾವತ್ತಾದ ಅನುವಾದವಿರುವ ಚೆನ್ನಬಸವಣ್ಣನವರ ವಚನ –

ಶಿವಲಿಂಗ ಮೋಹಿತನಾದಡೆ ಅನ್ಯಮೋಹದ ಮರೆಯಬೇಕು.
ಶಿವಲಿಂಗ ಭಕ್ತನಾದಡೆ ಅನ್ಯದೈವದ ಭಜನೆ ಮಾಡಲಾಗದು.
ಶಿವಲಿಂಗ ಪೂಜಕನಾದಡೆ ಅನ್ಯದೈವದ ಪೂಜಿಸಲಾಗದು.
ಶಿವಲಿಂಗ ವೀರನಾದಡೆ ಪುಣ್ಯಕ್ಷೇತ್ರಂಗಳ ಕುರಿತು ಹೋಗಲಾಗದು.
ಶಿವಲಿಂಗ ಪ್ರಸಾದಿಯಾದಡೆ ಅಂಗಭೋಗವ ಮರೆಯಬೇಕು.
ಶಿವಲಿಂಗ ಪ್ರಾಣಿಯಾದಡೆ ಪರಸತಿಸಂಗವ ಮಾಡಲಾಗದು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಈ ಆರು ಸಹಿತ ಶಿವಲಿಂಗಭಕ್ತಿ.[೩೫]

೧೯. ಚರಲಿಂಗಸ್ಥಲ ಮೋಹೀ: ಚರಲಿಂಗಮೇವ ಸರ್ವಸ್ವಮಿತಿ ಭಾವಯನ್।

೨೦. ಚರಲಿಂಗಸ್ಥಲ ಭಕ್ತಃ: ಜಂಗಮೈಕಾಭಿಮಾನವಾನ್।

೨೧. ಚರಲಿಂಗಸ್ಥಲ ಪೂಜಕಃ: ಅನ್ಯಪೂಜಾಂ ಪರಿತ್ಯಕ್ತಃ।

೨೨. ಚರಲಿಂಗಸ್ಥಲ ವೀರಃ: ಅರ್ಥಪ್ರಾಣಾದಿಕಂ ಸರ್ವಂ ಚರಾರ್ಪಿತವಾನ್।

೨೩. ಚರಲಿಂಗಸ್ಥಲ ಪ್ರಸಾದೀ: ಚರಪ್ರಸಾದೈಕಲೋಲುಪಃ।

೨೪. ಚರಲಿಂಗಸ್ಥಲ ಪ್ರಾಣೀ: ಶಿವರೂಪಾನ್ ಚರಾನ್ ಪೂಜ್ಯಾನ್ ಪ್ರಾಣವತ್ ಪರಿಭಾವಯನ್[೩೬]

ಇದಕ್ಕೆ ಯಥಾವತ್ತಾದ ಅನುವಾದವಿರುವ ಚೆನ್ನಬಸವಣ್ಣನವರ ವಚನ –

ಜಂಗಮಲಿಂಗ ಮೋಹಿತನಾದಡೆ ತನ್ನಕುಲಗೋತ್ರ ಮೋಹವ ಮರೆಯಬೇಕು.
ಜಂಗಮಲಿಂಗ ಭಕ್ತನಾದಡೆ ಪೂರ್ವಕುಲವ ಬೆರಸಲಾಗದು.
ಜಂಗಮಲಿಂಗ ಪೂಜಕನಾದಡೆ ಮಾನವರನು ಉಪಥಾವಿಸಲಾಗದು.
ಜಂಗಮಲಿಂಗ ವೀರನಾದಡೆ ಅರ್ಥವ ಕಟ್ಟಲಾಗದು.
ಜಂಗಮಲಿಂಗ ಪ್ರಸಾದಿಯಾದಡೆ ಬೇಡಿದಡೆ ಇಲ್ಲೆನ್ನಲಾಗದು.
ಜಂಗಮಲಿಂಗ ಪ್ರಾಣಿಯಾದಡೆ ಲಾಂಛನದ ನಿಂದೆಯ ಕೇಳಲಾಗದು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ

---

೩೪. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೫೨–೫೫

೩೫. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೧೫೯೪. ಪುಟ೫೪೦

೩೬. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೫೬–೬೨

ಈ ಆರು ಸಹಿತ ಜಂಗಮ ಲಿಂಗದ ಭಕ್ತಿ.[೩೭]

೨೫. ಪ್ರಸಾದಲಿಂಗಸ್ಥಲ ಮೋಹೀ: ಅನ್ಯದ್ರವ್ಯ ರುಚಿಂ ತ್ಯಕ್ತಃ।

೨೬. ಪ್ರಸಾದಲಿಂಗಸ್ಥಲ ಭಕ್ತಃ: ಪೂರ್ವಾಹಾರ ನಿರಾಸಕ್ತಃ।

೨೭. ಪ್ರಸಾದಲಿಂಗಸ್ಥಲ ಪೂಜಕಃ: ಪರಮೈತ್ಯಾದಿವರ್ಜಿತಃ।

೨೮. ಪ್ರಸಾದಲಿಂಗಸ್ಥಲ ವೀರಃ: ಕರೇಣ ಪರವಿತ್ತಂ ನ ಸಂಸ್ಪೃಷ್ಟಃ।

೨೯. ಪ್ರಸಾದಲಿಂಗಸ್ಥಲ ಪ್ರಸಾದೀ: ಜೀವಹಿಂಸಾ ತ್ಯಕ್ತಃ।

೩೦. ಪ್ರಸಾದಲಿಂಗಸ್ಥಲ ಪ್ರಾಣೀ: ಆತ್ಮಬೋಧಕಃ।[೩೮]

ಇದಕ್ಕೆ ಯಥಾವತ್ತಾದ ಅನುವಾದವಿರುವ ಚೆನ್ನಬಸವಣ್ಣನವರ ವಚನ –

ಪ್ರಸಾದಲಿಂಗಮೋಹಿತನಾದಡೆ ಅನ್ಯರುಚಿಗೆ ಇಚ್ಛೈಸಲಾಗದು.
ಪ್ರಸಾದಲಿಂಗ ಭಕ್ತನಾದಡೆ ಪೂರ್ವಾಹಾರವ ಕೈಗೊಳ್ಳಲಾಗದು.
ಪ್ರಸಾದಲಿಂಗ ಪೂಜಕನಾದಡೆ ಅಪ್ರಸಾದಿಗೆ ಉಣಲಿಕ್ಕಲಾಗದು.
ಪ್ರಸಾದಲಿಂಗ ವೀರನಾದಡೆ ಅನ್ಯರಿಗೆ ಕೈಯಾನಲಾಗದು.
ಪ್ರಸಾದಲಿಂಗ ಪ್ರಸಾದಿಯಾದಡೆ ಜೀವಹಿಂಸೆಯ ಮಾಡಲಾಗದು.
ಪ್ರಸಾದಲಿಂಗ ಪ್ರಾಣಿಯಾದಡೆ ಆತ್ಮನಿಗ್ರಹವ ಮಾಡಲಾಗದು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಈ ಆರು ಸಹಿತ ಪ್ರಸಾದಲಿಂಗಭಕ್ತಿ.[೩೯]

೩೧. ಮಹಾಲಿಂಗಸ್ಥಲ ಮೋಹೀ: ತ್ಯಕ್ತಲೋಕಾಚಾರಃ ಲಿಂಗನಿಷ್ಠೈಕಮಾನಸಃ।

೩೨. ಮಹಾಲಿಂಗಸ್ಥಲ ಭಕ್ತಃ: ಪೂರ್ವಕರ್ಮಾದಿ ವರ್ಜಿತಃ।

೩೩. ಮಹಾಲಿಂಗಸ್ಥಲ ಪೂಜಕ: ಸಂಸರ್ಗಮಜ್ಞಾಂ ಭಾಷಣಾದಿಕಂ ತ್ಯಕ್ತಃ।

೩೪. ಮಹಾಲಿಂಗಸ್ಥಲ ವೀರಃ: ಸೃಷ್ಟಿಸ್ಥಿತಿಲಯಾದ್ಯಂ ಜೀವಕೃತ್ಯಂ ನ ಸ್ಮೃತಃ।

೩೫. ಮಹಾಲಿಂಗಸ್ಥಲ ಪ್ರಸಾದೀ: ಪೂರ್ವಾಕರ್ಮಾದಿಕಾನ್ ಅಂತರ್ಲಿಂಗೇ ವೇದಕಃ।

೩೬. ಮಹಾಲಿಂಗಸ್ಥಲ ಪ್ರಾಣೀ: ಬಾಹ್ಯಾರ್ಚನಾದಿಕಂ ಸಂತ್ಯಜ್ಯ ಭವೇದಾಂತರ ಪೂಜಕಃಆತ್ಮಾರ್ಪಕಃ।[೪೦]

ಇದಕ್ಕೆ ಯಥಾವತ್ತಾದ ಅನುವಾದವಿರುವ ಚೆನ್ನಬಸವಣ್ಣನವರ ವಚನ –

ಮಹಾಲಿಂಗಮೋಹಿತನಾದಡೆ ಲೋಕದ ಮೋಹವ ಮರೆಯಬೇಕು.

---

೩೭. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೧೨೨೦ ಪುಟ೪೨೩

೩೮. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೬೩–೬೮

೩೯. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೧೩೬೫ ಪುಟ೪೮೪

೪೦. ಸೂ.ಅ., ಪಟಲ ೮, ಶ್ಲೋಕ ಸಂಖ್ಯೆ ೬೯–೭೫

ಮಹಾಲಿಂಗ ಭಕ್ತನಾದಡೆ ಪೂರ್ವಭಕ್ತಿಯ ಮಾಡಲಾಗದು.
ಮಹಾಲಿಂಗಪೂಜಕನಾದಡೆ ಅಜ್ಞಾನಿಗಳ ಕೂಡೆ
ಸಂಗ ಸಂಭಾಷಣೆಯ ಮಾಡಲಾಗದು.
ಮಹಾಲಿಂಗ ವೀರನಾದಡೆ ಪ್ರಳಯಾದಿಗಳಿಗೆ ಅಂಜಲಾಗದು.
ಮಹಾಲಿಂಗ ಪ್ರಸಾದಿಯಾದಡೆ ಸಮತೆ ನೆಲೆಗೊಳ್ಳಬೇಕು.
ಮಹಾಲಿಂಗ ಪ್ರಾಣಿಯಾದಡೆ ಮನದ ಕೊನೆಯಲ್ಲಿ
ಲಿಂಗದ ನೆನಹು ಹಿಂಗಲಾಗದು.
ಇದುಕಾರಣ ಕೂಡಲಚೆನ್ನಸಂಗಯ್ಯನಲ್ಲಿ ಈ ಆರುಸಹಿತ ಮಹಾಲಿಂಗಭಕ್ತಿ.[೪೧]

ಸಮಸಮುಚ್ಚಯತ್ತ್ವದಿಂದ ಅಂಗಸ್ಥಲವೂ-೩೬ ಭೇದಗಳಾಗುತ್ತವೆ. ಭಕ್ತಾದಿ ಅಂಗಸ್ಥಲವೊಂದೊಂದೂ ಆರಾರು ಸ್ಥಲಗಳಾಗುತ್ತವೆ.

ಭಕ್ತಸ್ಥಲ : ಭಕ್ತನಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ, ಭಕ್ತನ ಐಕ್ಯ

ಮಹೇಶಸ್ಥಲ : ಮಹೇಶನ ಮಹೇಶ, ಮಹೇಶನ ಭಕ್ತ, ಮಹೇಶನ ಪ್ರಸಾದಿ, ಮಹೇಶನ ಪ್ರಾಣಲಿಂಗಿ, ಮಹೇಶನ ಶರಣ, ಮಹೇಶನ ಐಕ್ಯ

ಪ್ರಸಾದಿಸ್ಥಲ : ಪ್ರಸಾದಿಯ ಪ್ರಸಾದಿ, ಪ್ರಸಾದಿ ಭಕ್ತ, ಪ್ರಸಾದಿಯ ಮಹೇಶ, ಪ್ರಸಾದಿಯ ಪ್ರಾಣಲಿಂಗಿ, ಪ್ರಸಾದಿಯ ಶರಣ, ಪ್ರಸಾದಿಯ ಐಕ್ಯ

ಶರಣಸ್ಥಲ : ಶರಣನ ಶರಣ, ಶರಣನ ಭಕ್ತ, ಶರಣನ ಮಹೇಶ, ಶರಣನ ಪ್ರಸಾದಿ, ಶರಣನ ಪ್ರಾಣಲಿಂಗಿ, ಶರಣನ ಐಕ್ಯ

ಐಕ್ಯಸ್ಥಲ : ಐಕ್ಯನ ಐಕ್ಯ, ಐಕ್ಯನ ಭಕ್ತ, ಐಕ್ಯನ ಮಹೇಶ, ಐಕ್ಯನ ಪ್ರಸಾದಿ, ಐಕ್ಯನ ಪ್ರಾಣಲಿಂಗಿ, ಐಕ್ಯನ ಶರಣ

ಈ ಮೂವತ್ತಾರು ಸ್ಥಲಗಳ ವಿಭಾಗಕ್ರಮ ವಚನಗಳಲ್ಲಿ ವಿಪುಲವಾಗಿ ಬರುತ್ತಿದ್ದು, ಇದರ ಹಿಂದಿರುವ ತತ್ವ ಗಮನಾರ್ಹವಾದುದು. ಭಕ್ತಸ್ಥಲದಿಂದ ಮಹೇಶ್ವರ ಸ್ಥಲಕ್ಕೆ ಮತ್ತು ಅಲ್ಲಿಂದ ಮುಂದೆ ಇತರ ಸ್ಥಲಗಳಿಗೆ ಸಾದಕ ಮುನ್ನಡೆಯುತ್ತಿರುವಾಗ ಗೆರೆ ಕೊರೆದಂತೆ ಅದನ್ನು ವಿಭಜಿಸಿ ಆತನನ್ನು ಯಾವುದೇ ಒಂದು ಸ್ಥಲಕ್ಕೆ ಮಾತ್ರ ಸೀಮಿತಗೊಳಿಸಲಾಗುವುದಿಲ್ಲ. ಭಕ್ತಸ್ಥಲದಲ್ಲಿರುವಾಗಲೇ ಮಹೇಶನ ಅಂಶಗಳು ಗೋಚರವಾಗಬಹುದು; ಪ್ರಸಾದ ಪ್ರಾಣಲಿಂಗಿಗಳು ಕಾಣಬಹುದು. ಅಂತೆಯೇ ಮುಂದಿನ ಸ್ಥಲಕ್ಕೆ ಹೋದ ಮೇಲೆ ಹಿಂದಿನದು ಬಿಟ್ಟು ಹೋಗುತ್ತದೆಂದೂ ಹೇಳುವಂತಿಲ್ಲ. ಮಹೇಶನ ಸ್ಥಲದಲ್ಲಿ ಭಕ್ತಸ್ಥಲವೂ ಅಡಕವಾಗಿರುತ್ತದೆ, ಅಂತೆಯೇ ಇತರ ಸ್ಥಲಗಳು. ಈ ತಾತ್ವಿಕ ದೃಷ್ಟಿಯಿಂದ ಆರು ಸ್ಥಲಗಳಲ್ಲಿ ಒಂದೊಂದನ್ನು ಮತ್ತೆ ಆರು ಆರು

೪೧. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೧೪೭೦ ಪುಟ೫೩೭

ಸ್ಥಲಗಳನ್ನಾಗಿ ವಿಭಾಗಿಸಲಾಗಿದೆ.

ಇದೇ ಕ್ರಮವನ್ನು ಇನ್ನೂ ಮುಂದುವರಿಸಿ ೩೬ ಸ್ಥಲಗಳಲ್ಲಿ ಒಂದೊಂದರಲ್ಲಿಯೂ ಮತ್ತೆ ಆರು ಭಾಗಗಳನ್ನು ಮಾಡುವ ಪ್ರಯತ್ನವೂ ಕಂಡುಬರುತ್ತದೆ. ಅದರ ಪ್ರಕಾರ 'ಭಕ್ತನ ಭಕ್ತನ ಭಕ್ತ', 'ಭಕ್ತನ ಮಹೇಶನ ಭಕ್ತ' 'ಭಕ್ತನ ಪ್ರಸಾದಿಯ ಭಕ್ತ' ಇತ್ಯಾದಿಯಾಗಿ ಒಟ್ಟು ಇನ್ನೂರ ಹದಿನಾರು ಸ್ಥಲಗಳಾಗುತ್ತವೆ. ಆದರೆ ಈ ಪ್ರಯತ್ನ ಹೆಚ್ಚು ಅನುಸರಣೆಯಾಗಲಿಲ್ಲ. ಮೂವತ್ತಾರು ಸ್ಥಲಗಳ ಕ್ರಮ ಹೆಚ್ಚು ಪ್ರಚಲಿತವಾಯಿತು. ಶಿವಶರಣರ ವಚನದಲ್ಲಿ ಹೆಚ್ಚು ಪಾಲು ಈ ಕ್ರಮದಲ್ಲಿಯೇ ಅಳವಟ್ಟಿವೆ. ಇದರ ಜೊತೆಗೆ ಏಕೋತ್ತರ ಶತಸ್ಥಲದ ಕೆಲವು ಸ್ಥಲಗಳೂ ಅಲ್ಲಿ ಸೇರಿರುವುದು ಕಂಡುಬರುತ್ತದೆ.

'ಏಕೋತ್ತರ ಶತಸ್ಥಲ' ಎಂಬುದು ಬಹಳ ಪ್ರಮುಖವಾದ ವಿಭಾಗ ಕ್ರಮವಾಗಿದ್ದು, ಸಿದ್ಧಾಂತಶಿಖಾಮಣಿ ಈ ನೂರೊಂದು ಸ್ಥಲಗಳ ನಿರೂಪಣೆಗೆ ಮೀಸಲಾಗಿದೆ. ಪ್ರಾರಂಭದ ಪ್ರಾಸ್ತಾವಿಕ ಅಧ್ಯಾಯಗಳನ್ನು ಬಿಟ್ಟರೆ ಉಳಿದ ಸಿದ್ಧಾಂತ ನಿರೂಪಣೆಯ ಭಾಗವೆಲ್ಲಾ ನೂರೊಂದು ಸ್ಥಲಗಳಲ್ಲಿ ಅಡಕವಾಗಿದೆ. 'ಏಕೋತ್ತರ ಶತಸ್ಥಲ'ದಲ್ಲಿ **ಅಂಗಷಟ್‌ಸ್ಥಲ, ಲಿಂಗಷಟ್‌ಸ್ಥಲ** ಎಂಬ ವಿಷಯ ವಿಭಾಗಗಳಿರುವುವು. **ಅಂಗಸ್ಥಲದ ವಿಭಾಗದಲ್ಲಿ –**

ಭಕ್ತಸ್ಥಲದಲ್ಲಿ – ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕಾರುಣ್ಯಸ್ಥಲ, ಲಿಂಗಧಾರಣಸ್ಥಲ, ಭಸ್ಮಧಾರಣಸ್ಥಲ, ರುದ್ರಾಕ್ಷಧಾರಣಸ್ಥಲ, ಪಂಚಾಕ್ಷರಿಯ ಜಪಸ್ಥಲ, ಭಕ್ತಮಾರ್ಗಕ್ರಿಯಾಸ್ಥಲ, ಉಭಯಸ್ಥಲ, ತ್ರಿವಿಧಸಂಪತ್ತಿಸ್ಥಲ, ಪ್ರಸಾದಸ್ವೀಕಾರಸ್ಥಲ, ಸೋಪಾಧಿದಾನ ಸ್ಥಲ, ನಿರುಪಾಧಿದಾನಸ್ಥಲ, ಸಹಜದಾನಸ್ಥಲ ಎಂದು ೧೫ ಸ್ಥಲಗಳು, **ಮಹೇಶ್ವರಸ್ಥಲದಲ್ಲಿ** ಮಾಹೇಶ್ವರಪ್ರಶಂಸಾಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯನಿರಸನಸ್ಥಲ, ವಾಗಾದ್ವೈತನಿರಸನಸ್ಥಲ, ಆಹ್ವಾನನಿರಸನಸ್ಥಲ, ಅಷ್ಟತನುಮೂರ್ತಿನಿರಸನಸ್ಥಲ, ಸರ್ವಗತನಿರಸನಸ್ಥಲ, ಶಿವಜಗನ್ಮಯಸ್ಥಲ ಮತ್ತು ಭಕ್ತದೇಹಿಕಲಿಂಗಸ್ಥಲಗಳೆಂಬ ೯ ಅವಾಂತರ ಸ್ಥಲಗಳಿವೆ. **ಪ್ರಸಾದಿಸ್ಥಲದಲ್ಲಿ** ಪ್ರಸಾದಿಸ್ಥಲ, ಗುರುಮಾಹಾತ್ಮ್ಯಸ್ಥಲ, ಲಿಂಗಮಹಾತ್ಮ್ಯಸ್ಥಲ, ಶರಣಮಹಾತ್ಮ್ಯಸ್ಥಲ, ಜಂಗಮ ಮಹಾತ್ಮ್ಯಸ್ಥಲ, ಮತ್ತು ಪ್ರಸಾದಮಹಾತ್ಮ್ಯಸ್ಥಲಗಳೆಂಬ ೭ ಅವಾಂತರಸ್ಥಲಗಳಿವೆ. **ಪ್ರಾಣಲಿಂಗಿಸ್ಥಲದಲ್ಲಿ** ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನಸ್ಥಲ, ಶಿವಯೋಗಸಮಾಧಿಸ್ಥಲ, ಲಿಂಗನಿಜಸ್ಥಲ ಮತ್ತು ಅಂಗಲಿಂಗ ಸ್ಥಲಗಳೆಂಬ ೫ ಅವಾಂತರಸ್ಥಲಗಳಿವೆ. **ಶರಣಸ್ಥಲದಲ್ಲಿ** ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ ಮತ್ತು ಶೀಲಸಂಪಾದನಸ್ಥಲಗಳೆಂಬ ೪ ಅವಾಂತರಸ್ಥಲಗಳಿವೆ. **ಐಕ್ಯಸ್ಥಲದಲ್ಲಿ** ಐಕ್ಯಸ್ಥಲ, ಸರ್ವಾಚಾರ ಸಂಪತ್ತಿಸ್ಥಲ, ಏಕಭಾಜನಸ್ಥಲ ಮತ್ತು ಸಹಭಾಜನಸ್ಥಲಗಳೆಂಬ ೪ ಅವಾಂತರಸ್ಥಲಗಳಿವೆ. ಅಂತು ಒಟ್ಟು ೪೪ ಅವಾಂತರಸ್ಥಲಗಳಿವೆ.

ಇನ್ನು ಲಿಂಗಸ್ಥಲದ – ಆಚಾರಲಿಂಗದಲ್ಲಿ ೯, ಗುರುಲಿಂಗದಲ್ಲಿ ೯, ಶಿವಲಿಂಗದಲ್ಲಿ ೯, ಜಂಗಮಲಿಂಗದಲ್ಲಿ ೯, ಪ್ರಸಾದಲಿಂಗದಲ್ಲಿ ೧೨, ಮಹಾಲಿಂಗದಲ್ಲಿ ೯ = ಒಟ್ಟು ೫೭ ಆವಾಂತರ ಸ್ಥಲಗಳಿವೆ. ಈ ತೆರನಾಗಿ ಅಂಗಸ್ಥಲಗಳು ಮತ್ತು ಲಿಂಗಸ್ಥಲಗಳು

ಕೂಡಿ ನೂರೊಂದು ಸ್ಥಲಗಳೆಂದು ಹೇಳಲ್ಪಟ್ಟಿವೆ. ಅಲ್ಲಿ ಉಕ್ತವಾದ ನೂರೊಂದು ಸ್ಥಲಗಳಿಗೂ ಶರಣರು ಪ್ರತಿಪಾದಿಸಿದ ಏಕೋತ್ತರ ಶತಸ್ಥಲಕ್ಕೂ ಸಂಪೂರ್ಣ ಸಾಮ್ಯ ಕಂಡುಬರುತ್ತದೆ. ಈ ನೂರೊಂದು ಸ್ಥಲಗಳ ವಿಭಾಗ ಕ್ರಮದಲ್ಲಿ ಒಂದು ವ್ಯವಸ್ಥೆ ಕಂಡುಬರುತ್ತದೆ. ಮತ್ತು ಅವುಗಳಲ್ಲಿ ಒಂದು ಆಧ್ಯಾತ್ಮಿಕ ವಿಕಾಸದ ಆಶಯ ವ್ಯಕ್ತವಾಗುತ್ತದೆ.

ಈ 'ಏಕೋತ್ತರ ಷಟ್‌ಸ್ಥಲ' ಎಂಬ ಪದದ ಉಲ್ಲೇಖ ವೀರಾಗಮದಲ್ಲಿ ಅನೇಕ ಸಲ ಬಂದಿದೆ. ಆದರೆ ಆ ಏಕೋತ್ತರ ಷಟ್‌ಸ್ಥಲಗಳನ್ನು ನಿರೂಪಿಸುವ ಆಗಮಗಳು ಈಗ ಉಪಲಬ್ಧವಿಲ್ಲ. ಆದರೂ ಈ 'ಏಕೋತ್ತರ ಷಟ್‌ಸ್ಥಲ'ದ ಪರಿಕಲ್ಪನೆ ಆಗಮಕಾಲದಿಂದಲೇ ಬಂದಿದ್ದು ಎಂಬುದು ಸುಸ್ಪಷ್ಟ.

ಚೆನ್ನಬಸವಣ್ಣನವರ ವಚನದಲ್ಲಿ ಅಂಗಸ್ಥಲದ ಸಂಪೂರ್ಣ ವಿವರಗಳು ದೊರೆಯುತ್ತಿಲ್ಲ. ಕೇವಲ ೫೭ ಲಿಂಗಸ್ಥಲಗಳ ಹೆಸರುಗಳು ಮಾತ್ರ ದೊರೆಯುತ್ತವೆ. ಆದರೆ ಅವುಗಳ ಸ್ವರೂಪವನ್ನು ಆಯಾ ಸ್ಥಲದ ಹೆಸರನ್ನಿತ್ತು ಎಲ್ಲಿಯೂ ವಿವರಿಸಿಲ್ಲ.

ಇನ್ನು ಬಸವಣ್ಣನವರ ವಚನದಲ್ಲಿ ಸ್ಥಲ ನಿರ್ದೇಶ ಹೀಗಿದೆ – ಮೊದಲನೆಯದು ಭಕ್ತಸ್ಥಲದಲ್ಲಿ : ಪಿಂಡ ಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯ ಸ್ಥಲ, ಗುರುಕರುಣಸ್ಥಲ, ವಿಭೂತಿಸ್ಥಲ, ಪಂಚಾಕ್ಷರಿಯ ಸ್ಥಲ, ಲಿಂಗಾಧಾರಣ ಸ್ಥಲ, ತಾಮಸ ನಿರಸನ ಸ್ಥಲ ಭಕ್ತನ ಜ್ಞಾನಿಸ್ಥಲ, ಭಕ್ತನ ಭಕ್ತಸ್ಥಲ, ಭಕ್ತನ ಮಹೇಶ ಸ್ಥಲ, ಭಕ್ತನ ಪ್ರಸಾದಿ ಸ್ಥಲ, ಭಕ್ತನ ಪ್ರಾಣಲಿಂಗಿಸ್ಥಲ, ಭಕ್ತನ ಶರಣಸ್ಥಲ, ಭಕ್ತನ ಐಕ್ಯಸ್ಥಲಗಳು ಬರುತ್ತವೆ. ಮಹೇಶ್ವರ ಸ್ಥಲದಲ್ಲಿಯೂ ಮೊದಲು ಮಹೇಶ್ವರನ ಜ್ಞಾನಿ ಸ್ಥಲ. ಮಹೇಶ್ವರನ ಮಹೇಶ್ವರ, ಮಹೇಶ್ವರನ ಭಕ್ತ, ಮಹೇಶ್ವರನ ಪ್ರಸಾದಿ, ಮಹೇಶ್ವರನ ಪ್ರಾಣಲಿಂಗಿ, ಮಹೇಶ್ವರನ ಶರಣ, ಮಹೇಶ್ವರನ ಐಕ್ಯ ಇತ್ಯಾದಿ ಸ್ಥಲಗಳಿದ್ದು ಇದೇ ಕ್ರಮ ಇತರ ಪ್ರಸಾದಿ ಪ್ರಾಣಲಿಂಗ ಶರಣ ಐಕ್ಯ ಸ್ಥಲಗಳಲ್ಲೂ ಮುಂದುವರಿದು ಮತ್ತೆ ೩೬ ಸ್ಥಲವಿಭಾಗಕ್ರಮ ಇಲ್ಲಿ ಕಂಡುಬರುತ್ತದೆ.

ಇನ್ನು ಚೆನ್ನಬಸವಣ್ಣನ ವಚನಗಳಲ್ಲಿಯೂ ಈ ನೂರೊಂದು ಸ್ಥಲಗಳು ಕ್ರಮವಾಗಿಲ್ಲ. ಅವರ ವಚನಗಳಲ್ಲಿ ಈಗ ಕಂಡು ಬರುವ ಸ್ಥಲನಿರೂಪಣೆಯ ಕ್ರಮ ಹೀಗಿದೆ – ಮೊದಲನೆಯದಾದ ಭಕ್ತಸ್ಥಲದಲ್ಲಿ ಪಿಂಡ, ಪಿಂಡಜ್ಞಾನ, ಸಂಸಾರಹೇಯ, ಗುರುಕಾರುಣ್ಯ ಸ್ಥಲ, ಭಕ್ತನ ಜ್ಞಾನಿಸ್ಥಲ, ಭಕ್ತನ ಭಕ್ತಸ್ಥಲ, ಭಕ್ತನ ಮಹೇಶ ಸ್ಥಲ, ಭಕ್ತನ ಪ್ರಸಾದಿ ಸ್ಥಲ, ಭಕ್ತನ ಪ್ರಾಣಲಿಂಗಿಸ್ಥಲ, ಭಕ್ತನ ಶರಣಸ್ಥಲ, ಭಕ್ತನ ಐಕ್ಯಸ್ಥಲಗಳು ಬರುತ್ತವೆ. ಮಹೇಶ್ವರ ಸ್ಥಲದಲ್ಲಿಯೂ ಮೊದಲು ಮಹೇಶ್ವರನ ಜ್ಞಾನಿ ಸ್ಥಲ. ಮಹೇಶ್ವರನ ಮಹೇಶ್ವರ, ಮಹೇಶ್ವರನ ಭಕ್ತ, ಮಹೇಶ್ವರನ ಪ್ರಸಾದಿ, ಮಹೇಶ್ವರನ ಪ್ರಾಣಲಿಂಗಿ, ಮಹೇಶ್ವರನ ಶರಣ, ಮಹೇಶ್ವರನ ಐಕ್ಯ ಇತ್ಯಾದಿ ಸ್ಥಲಗಳಿದ್ದು ಇದೇ ಕ್ರಮ ಇತರ ಪ್ರಸಾದಿ ಪ್ರಾಣಲಿಂಗ ಶರಣ ಐಕ್ಯ ಸ್ಥಲಗಳಲ್ಲೂ ಮುಂದುವರಿದು ಮತ್ತೆ ೩೬ ಸ್ಥಲವಿಭಾಗಕ್ರಮ ಇಲ್ಲಿ ಕಂಡುಬರುತ್ತದೆ. ಅಲ್ಲಮಪ್ರಭುದೇವರ, ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳಲ್ಲಿಯೂ ಈ ಸ್ಥಲಗಳು ಕ್ರಮವಾಗಿಲ್ಲ.

ಕಾರಣ ಸ್ಥಲವಿವೇಚನೆಯ ವಿವರಗಳಲ್ಲಿ ವಿಭಾಗ ಕ್ರಮದಲ್ಲಿ ಏಕರೂಪತೆ ಇಲ್ಲವೆಂಬುದು ಮನದಟ್ಟಾಗುತ್ತದೆ. ಆದರೆ ಒಟ್ಟಿನಲ್ಲಿ ಷಟ್‌ಸ್ಥಲಗಳ ಚೌಕಟ್ಟನ್ನು ಇವೆಲ್ಲವೂ ಒಂದೊಂದು ರೀತಿಯಲ್ಲಿ ಸಮರ್ಥಿಸುತ್ತವೆನ್ನಬಹುದು. ಒಟ್ಟಿನಲ್ಲಿ ಈ ವಿಭಾಗ ಕ್ರಮಗಳು ಭಕ್ತಸ್ಥಲದಿಂದ ಐಕ್ಯ ಸ್ಥಲದವರೆಗೆ ಏರುವ ಆಧ್ಯಾತ್ಮಿಕ ಯಾತ್ರೆಯ ಮುನ್ನಡೆಯನ್ನೂ ಅದಕ್ಕೆ ಅವಶ್ಯಕವಾದ ಉಪಾಸನಾವಿಧಾನ, ಲಿಂಗಸ್ವರೂಪ, ಶಕ್ತಿ ಭಕ್ತಿಗಳ ಕಲ್ಪನೆಯನ್ನೂ ಬಹಳ ಅರ್ಥವತ್ತಾದ ರೀತಿಯಲ್ಲಿ ಮೂಡಿಸಿದೆ.

ಹೀಗೆ ೧, ೨, ೩, ೬, ೧೮, ೩೬, ೧೦೧ ಇತ್ಯಾದಿ ಸಂಖ್ಯೆಯಲ್ಲಿ ಸ್ಥಲಭೇದವಿದ್ದರೂ 'ಷಟ್‌ಸ್ಥಲ' ಎಂಬುದೇ ರೂಢಿಯಲ್ಲಿದೆ ಇದಕ್ಕೆ ಕಾರಣವೆಂದರೆ–

೧. ಎಲ್ಲಾ ೩೬ ತತ್ತ್ವಗಳೂ ೬ ಸ್ಥಲಗಳಲ್ಲಿ ಪರಿಣಮಿಸುವವು.
೨. ಎಲ್ಲಾ ಅವಾಂತರ ಸ್ಥಲಗಳೂ ಈ ೬ ಸ್ಥಲಗಳಲ್ಲಿಯೇ ಅಂತರ್ಭಾವವನ್ನು ಹೊಂದುವವು.
೩. ಎಲ್ಲಾ ಸ್ಥಲಗಳೂ ೬ ಅಂಗಗಳಲ್ಲಿಯೇ ಸಂಯೋಗ–ಸಂಸ್ಥಿತಿಯನ್ನು ಪಡೆಯುವವು.

ಅದೂ ಅಲ್ಲದೇ ಷಟ್‌ಸ್ಥಲ ಎಂಬ ಪದದಲ್ಲಿ ಷಡ್ಲಿಂಗ+ಷಟ್‌ಶಕ್ತಿ+ ಷಡಂಗ+ ಷಟ್‌ಭಕ್ತಿ ಇವುಗಳ ಸಂಬಂಧಜ್ಞಾನ ಮತ್ತು ಇವುಗಳ ಸಂಯೋಗಕ್ಕೆ ರೂಢಿಯಲ್ಲಿ ಷಟ್ಸ್ಥಲ ಎಂದು ವ್ಯವಹಾರವಿರುತ್ತದೆ.

ಇಷ್ಟಾದರೂ ಚೆನ್ನಬಸವಣ್ಣನವರು ಸ್ಥಲಕ್ಕೆ ಗಣಿತವುಂಟೇ? ಎಂದು ಪ್ರಶ್ನಿಸುತ್ತಾರೆ.

ಹೃದಯದೊಳಿಪ್ಪ ಮಹಾಲಿಂಗಜ್ಯೋತಿಯ ಬೆಳಗು
ಪಂಚೇಂದ್ರಿಯಂಗಳಲ್ಲಿ ಪ್ರಭಾವಿಸಿ ತೋರುವ ಬೆಳಗು ಒಂದೇ ಕಾಣಿಭೋ।
ಒಂದು ಮೂರಾಗಿ ಮೂರು ತಾನಾರಾಗಿ
ಆರು ಮುವತ್ತಾರಾಗಿ ಮುವತ್ತಾರು ಇನ್ನೂರ ಹದಿನಾರಾಗಿ
ಬೇರುವರಿದು ವಿಸ್ತಾರವ ಪಡೆದವಲ್ಲಾ।
ವಿಶ್ವಾಸದಿ ಬೆಳಗುವ ಬ್ರಹ್ಮಕ್ಕೂ ಗಣಿತವುಂಟೇ?
ಅಗಣಿತವೆಂದು ಅಗೋಚರವೆಂದು ಹೇಳುವರಲ್ಲದೆ
ದೃಶ್ಯವಾಗಿ ಕಾಂಬವರುಂಟೇ?
ದೃಗುದೃಶ್ಯವಲ್ಲ ಮಹಾದಾನಿ ಕೂಡಲಚೆನ್ನಸಂಗಮದೇವಾ॥[೪೨]

ಎಂದಿದ್ದಾರೆ. ಕಾರಣ ಇಷ್ಟೆಲ್ಲಾ ಲಿಂಗಾಂಗ ಸ್ವರೂಪ ಪ್ರಭೇದ–ಸಂಬಂಧಾದಿಗಳ ವಿಚಾರವನ್ನು ಶಿವಾಗಮಗಳು ಹಾಗೂ ವಚನಸಾಹಿತ್ಯ ನಿರೂಪಿಸಿದರೂ ಸಹ ಷಟ್‌ಸ್ಥಲಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ಶ್ರೀ ಗುರುವಿನ ಅನುಗ್ರಹದಿಂದ ಷಟ್‌ಸ್ಥಲ ಜ್ಞಾನವನ್ನು ಸಂಪಾದಿಸಿ ಲಿಂಗಸ್ವರೂಪಿಯಾದ ಶಿವನನ್ನು ಪೂಜಿಸಬೇಕು ಎಂದು ಆಗಮಗಳು ತಿಳಿಸುತ್ತವೆ.

---

೪೨. ಚೆನ್ನಬಸವಣ್ಣನವರ ವ.ಸಂ., ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೧೬೯೫ ಪುಟ೬೨೫

೫.೩.೩ ಭಕ್ತಸ್ಥಲ

ಷಟ್‌ಸ್ಥಲದ ಅನುಭಾವ ಮಾರ್ಗದಲ್ಲಿ ಭಕ್ತಸ್ಥಲವೇ ಮೊದಲ ಮೆಟ್ಟಲು. ಈ ಭಕ್ತಸ್ಥಲದಲ್ಲಿ ಭಕ್ತನೇ ಆಧಾರ, ಭಕ್ತಿಯೇ ಆಶ್ರಯವಾಗಿರುತ್ತದೆ. ಈ ಸ್ಥಲದಲ್ಲಿ ಮುಖ್ಯವಾಗಿ ಸಂಸಾರವು ಅನಿತ್ಯವೆಂದೂ, ಆ ಪರಶಿವಶಕ್ತಿಯೊಂದೇ ನಿತ್ಯಶಾಶ್ವತವೆಂದು ಅರಿತುಕೊಂಡು, ಶ್ರದ್ಧಾಭಕ್ತಿಯುತನಾಗಿ ತನ್ನನ್ನೇ ಆ ಪರಶಿವನ ಮೂರು ರೂಪಗಳಾದ ಗುರು–ಲಿಂಗ–ಜಂಗಮಕ್ಕೆ ಪ್ರೇಮರೂಪದಿಂದ ಸಮರ್ಪಿಸಿಕೊಳ್ಳುತ್ತಾನೆ. ಇಂಥ ಭಕ್ತನ ಆಚರಣೆಯನ್ನು ಹೇಳುವುದೇ ಭಕ್ತಸ್ಥಲವಾಗಿದೆ. ಇಲ್ಲಿ ಪೂಜ್ಯ ಪೂಜಕ ಭಾವವಿದೆ. ಶಿವಶಕ್ತಿ–ಭಕ್ತಿಗಳ ಕಲ್ಪನೆಯಿದೆ.

ಪ್ರಸ್ತುತ ಇಲ್ಲಿ ಭಕ್ತ ಎಂದರೆ ಯಾರು? ಭಕ್ತನು ಹೊಂದಿರಬೇಕಾದ ಗುಣಲಕ್ಷಣ ಗಳೇನು? ಭಕ್ತಸ್ಥಲದ ವೈಶಿಷ್ಟ್ಯತೆಗಳೇನು? ಹಾಗೂ ಭಕ್ತಸ್ಥಲದ ಆಂತರಿಕಪೂಜಾ ಕ್ರಮವನ್ನು ಕುರಿತು ಆಗಮ ಮತ್ತು ವಚನಗಳ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ.

ಭಕ್ತ ಪದದ ಅರ್ಥ

ಭಕ್ತ ಎಂಬ ಪದದ ಅರ್ಥವನ್ನು ಸೂಕ್ಷ್ಮಾಗಮದಲ್ಲಿ ಹೀಗೆ ಹೇಳಿದೆ.

ಭಕಾರಾದ್ಭವ ಇತ್ಯುಕ್ತಃ ಕಕಾರಾತ್ ಕಲುಷಂ ಭವೇತ್।
ತತಃ ಸಂತ್ರಾಯತೇ ತಸ್ಮಾದ್ಭಕ್ತಾ ಇತ್ಯುಚ್ಯತೇ ಬುಧೈಃ ॥[೧]

'ಭ' ಕಾರವೆಂದರೆ ಭವ; 'ಕ' ಕಾರವೆಂದರೆ ಕಾಲುಷ್ಯ; 'ತ' ಕಾರವೆಂದರೆ ತ್ರಾಯತೆ (ಕಾಪಾಡು) ಎಂದರ್ಥ. ಅಂದರೆ ಜನನ–ಮರಣ ರೂಪಿ ಸಂಸಾರ ಹಾಗೂ ಅದರ ಕಾಲುಷ್ಯದಿಂದ ಯಾವನು ತನ್ನನ್ನು ತಾನು ಕಾಪಾಡಿಕೊಳ್ಳುತ್ತಾನೋ ಅವನೇ ಭಕ್ತ ಎಂದು ತಿಳಿಸುತ್ತದೆ.

ಅವಿದ್ಯಾರೂಪ ಮಾಯಾಶಕ್ತಿಯ ಸ್ಪಂದದಿಂದ ಪರಶಿವನ ಬೇರ್ಪಟ್ಟ ಅಂಶಗಳಾದ ಜೀವರು ಅವಿದ್ಯೆಯಿಂದ ಮೋಹಿತರಾಗಿ ಜನನ–ಮರಣ ರೂಪ ಸಂಸಾರಚಕ್ರದಲ್ಲಿ ಸಿಲುಕಿ, ನಾನಾ ಬಗೆಯ ದುಃಖಗಳನ್ನು ಅನುಭವಿಸುತ್ತಾರೆ. ಇಂಥ ಭವದುಃಖದಿಂದ ಪಾರಾಗಬೇಕಾದರೆ ಜೀವನು ಭಕ್ತಿಯನ್ನು ಆಶ್ರಯಿಸಬೇಕೆಂದು ಆಗಮಗಳು ತಿಳಿಸುತ್ತ –

ದುಃಖತಿತೀರ್ಷೋರ್ಮೇ ಭಕ್ತಿಲಾಭಃ ಪರಃ ಶಿವೇ॥[೨]

ಎಂದು ಸಂಸಾರದುಃಖದಿಂದ ಪಾರಾಗಬಯಸುವವರಿಗೆ ಶಿವಭಕ್ತಿಯೇ ಸರ್ವ ಶ್ರೇಷ್ಠ ಸಾಧನವು ಎಂದು ಪರಶಿವನು ಪಾರ್ವತಿಗೆ ಉಪದೇಶಿಸುತ್ತಾನೆ. ಅಲ್ಲದೇ –

ಭಕ್ತಿರ್ಮಾತಾ ಪಿತಾ ವಿತ್ತಂ ಬಂಧುರಾಪದಿ ಸೋದರಃ।
ಗುರುರ್ಮಿತ್ರಂ ಸುಹೃದ್ ಭೋಗೋ ಮೋಕ್ಷಶ್ಚ ಪುರುಷಾರ್ಥರಾಟ್

---

೧. ಸೂ.ಆ. ಪಟಲ ೯, ಶ್ಲೋಕ ಸಂಖ್ಯೆ ೪೦
೨. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೪೯

ಅಚಲಭಕ್ತಿಯೇ ಮನುಷ್ಯನ ತಂದೆ, ತಾಯಿ, ಐಶ್ವರ್ಯ, ಬಂಧು, ಪೂಜ್ಯವ್ಯಕ್ತಿ, ಸಹೋದರ, ಗುರು, ಗೆಳೆಯ, ಸನ್ಮಿತ್ರ ಮತ್ತು ಭೋಗವಷ್ಟೇ ಅಲ್ಲದೇ ಸಾಕ್ಷಾತ್ ಮೋಕ್ಷರೂಪಿ ಪರಮ ಪುರುಷಾರ್ಥವೇ ಆಗಿದೆ[3] ಎನ್ನುತ್ತ ಸದ್ಭಕ್ತಿಯನ್ನು ಆಶ್ರಯಿಸಿದ ಭಕ್ತನು ಹೇಗಿರಬೇಕೆಂಬುದನ್ನು ಪರಶಿವನು ವಿವರಿಸುತ್ತಾನೆ–

ಭಕ್ತನ ಲಕ್ಷಣಗಳು :

ಕರ್ಮಣಾ ಮನಸಾ ವಾಚಾ ಜಾಗ್ರತ್ಸ್ವಪ್ನಸುಷುಪ್ತಿಷು।
ಮದನುಸ್ಮರಣಂ ಧ್ಯಾನಂ ಸ್ತುತಿಃ ಪೂಜಾ ರತಿಃ ಸದಾ ॥
ಮಲ್ಲಿಂಗಧಾರಣಂ ಭಕ್ತಪೂಜನಂ ಲಿಂಗಪೂಜನಮ್।
ಅಹಿಂಸಾ ಸರ್ವಭೂತೇಷು ದಯಾ ಮದನುವೀಕ್ಷಣಮ್ ॥
ಮಲ್ಲಿಂಗಲಿಂಗಚಿಹ್ನಾನಾಂ ದರ್ಶನೇ ಮಯಿ ಭಕ್ತಿತಃ।
ಅಮಾಯಯಾಽನಪೇಕ್ಷಾತಃ ಸಾಷ್ಟಾಂಗಮಭಿವಾದನಮ್ ॥
ಗತಿಂ ಪ್ರದಕ್ಷಿಣಂ ಸರ್ವಾಂ ಮಮ ಸರ್ವತ್ರ ಸರ್ವದಾ।
ಭಾವಯೇಚ್ಛಯನಂ ಸುಭ್ರು ಪ್ರಣಾಮಂ ಮಯಿ ಸರ್ವಶಃ ॥
ಉಚ್ಚಾರಣಂ ಚಾಕ್ಷರಣಾಂ ಮನ್ನಾಮಸ್ಮರಣಂ ತ್ವಿತಿ।
ಭುಕ್ತಪೀತಾದಿಕಂ ಸರ್ವಂ ಮತ್ಪ್ರಸಾದಧಿಯಾಶ್ನುತೇ ॥
ಸರ್ವಾಮೈಂದ್ರಿಯಕೀಂ ವೃತ್ತಿಂ ಮತ್ಸೇವಾಯೈ ನಿಯೋಜಯೇತ್।
ಸಂಪ್ರಾಪ್ತಮಖಿಲಂ ಭೋಗಂ ಮದರ್ಥಮಿತಿ ಚಾರ್ಪಯೇತ್ ॥
ಕೃಚ್ಛ್ರೇಽಪಿ ಮನಸಿ ಕ್ಲೇಶಂ ನ ಸಂಪ್ರಾಪ್ತಮನುಸ್ಮರೇತ್।[4]

ಮನೋವಾಕ್ಕಾಯದಿಂದ ಜಾಗ್ರತ, ಸ್ವಪ್ನ, ಸುಷುಪ್ತಿ ಮೊದಲಾದ ಎಲ್ಲ ಅವಸ್ಥೆಗಳಲ್ಲಿ, ಸದಾಕಾಲವೂ ಶಿವಸ್ಮರಣೆ, ಶಿವಧ್ಯಾನ, ಶಿವಸ್ತುತಿ ಮತ್ತು ಶಿವಪೂಜೆಯನ್ನು ಮಾಡುವದು, ಶಿವನೆಡೆಗೆ ಅನುರಾಗವನ್ನು ವ್ಯಕ್ತಪಡಿಸುವದು, ಇಷ್ಟಲಿಂಗಧಾರಣೆ, ಶಿವಭಕ್ತರ ಹಾಗೂ ಇಷ್ಟಲಿಂಗದ ಪೂಜೆ, ಅಹಿಂಸೆ, ಸರ್ವಭೂತಗಳಲ್ಲಿ ದಯೆ ತೋರುವದು ಹಾಗೂ ಅವುಗಳಲ್ಲಿ ಶಿವಸ್ವರೂಪವನ್ನು ಕಾಣುವದು. ಇಷ್ಟಲಿಂಗ, ಶಿವಲಿಂಗ ಹಾಗೂ ಅದರ ಅಂಕಿತದ ವಸ್ತುಗಳನ್ನು ವ್ಯಕ್ತಿಗಳನ್ನು ಕಂಡಾಗ ಸಾಕ್ಷಾತ್ ಶಿವದರ್ಶನವಾದಂತೆ ನಿರಪೇಕ್ಷ, ನಿಷ್ಕಪಟತನದಿಂದ ಸಾಷ್ಟಾಂಗ ನಮಸ್ಕರಿಸುವುದು. ರಾತ್ರಿ ಮಲಗುವಾಗ ಸರ್ವತ್ರ ನನ್ನನ್ನು ಭಾವಿಸಿಕೊಂಡು ನನಗೆ ನಮಸ್ಕಾರ ಸಲ್ಲಿಸುವದು. ಅಕ್ಷರಗಳ ಉಚ್ಚಾರಣೆಯೆಲ್ಲ ಶಿವನಾಮದ ಸ್ಮರಣೆ, ಭುಂಜಿಸುವ ಪ್ರತಿ ಪದಾರ್ಥವನ್ನು ಶಿವಪ್ರಸಾದವೆಂದು ಸ್ವೀಕರಿಸುವುದು, ಎಲ್ಲ ಇಂದ್ರಿಯಗಳ ವೃತ್ತಿಗಳನ್ನೂ ಶಿವನ ಸೇವೆಗೆ ಮೀಸಲಾಗಿರಿಸುವುದು, ತನಗೆ ಲಭ್ಯವಾದ ಭೋಗವನ್ನೆಲ್ಲ ಶಿವನಿಗೆ ಸಮರ್ಪಿಸುವುದು, ಸಂಕಷ್ಟದ ಸ್ಥಿತಿಯಲ್ಲಿ ಕೂಡ ಮನಸ್ಸಿನ ಶಾಂತತೆಯನ್ನು ಕಳೆದುಕೊಳ್ಳದೇ

---

೩. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೧೧
೪. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೩೪–೪೦

ಶಾಂತನಾಗಿರುವದು ಇವೆಲ್ಲ ಭಕ್ತನ ಲಕ್ಷಣಗಳು ಎಂದು ಪರಶಿವನು ಪಾರ್ವತಿಗೆ ತಿಳಿಸುತ್ತಾನೆ.

"ತ್ಯಕ್ತಾಭಿಮಾನೋ ದೇಹಾದೌ ಭಕ್ತ ಇತ್ಯುಚ್ಯತೇ ಬುಧೈಃ"[೫] ಎನ್ನುತ್ತ ಭಕ್ತನಾದವನು ದೇಹಾದಿಗಳಲ್ಲಿ ಅಭಿಮಾನವನ್ನು ಬಿಡಬೇಕು ಎಂದು ಆಗಮಗಳು ಅರುಹುತ್ತವೆ. ದೇಹಾದಿಗಳಲ್ಲಿ ಅಭಿಮಾನ ದೂರವಾಗಬೇಕಾದರೆ ಮೊದಲು ಅಹಂಕಾರ ಮತ್ತು ಮಮಕಾರ ಎಂಬ ಎರಡು ಗುಣಗಳನ್ನು ಬದಿಗಿರಿಸಬೇಕಾಗುತ್ತದೆ. ಅಹಂಕಾರವೆಂದರೆ ಅಂತಃಕರಣದ ಅಭಿಮಾನಾತ್ಮಕ ಚಿತ್ತವೃತ್ತಿ. ಇದು ಭಕ್ತಸ್ಥಲದ ಸತ್ಪಥಕ್ಕೆ ಮೊದಲನೇ ಅಡಚಣೆ.

'ಅಹಂ' ದಿಂದ ಯಾವುದು ರಹಿತವಾಗಿದೆಯೋ, ಚಿನ್ಮಾತ್ರವು ಯಾವುದರಿಂದ ಸ್ಫುರಣವಾಗುತ್ತದೆಯೊ ಮತ್ತು ಯಾವುದು ಅದ್ವೈತ ತತ್ವವೋ ಆ ಜ್ಞಾನವೇ ಮುಕ್ತಿಯ ಮಾರ್ಗವಾಗಿದೆ. ಈ ಜ್ಞಾನವೇ ಸಾಧಕನನ್ನು ಶ್ರೇಷ್ಠವಾದ ಯೋಗದ ಕಡೆಗೆ ಪ್ರವೃತ್ತನಾಗುವಂತೆ ಮಾಡುತ್ತದೆ.[೬] ಕಾರಣ ಭಕ್ತನಾದವನು–

ಅತಿಮಾನುಷಸಂಪತ್ತಾವಪ್ಯುಪಸರ್ಪೇತ ನ ಕ್ವಚಿತ್ ॥[೭]

ಸಾಮಾನ್ಯರಿಗೆ ಲಭ್ಯವಾಗದ ಶಕ್ತಿ, ಸಂಪತ್ತುಗಳು ಆತನ ವಶವಾದರೂ ಅವುಗಳಿಂದ ಅಹಂಕಾರವನ್ನು ಹೊಂದಬಾರದು ಎಂದು ಎಚ್ಚರಿಸುತ್ತವೆ. ಅಲ್ಲದೇ ವಿನಯಗುಣ ವಾಗಲಿ, ಕೈಮುಗಿಯುವ ವಿನಮ್ರ ಭಾವವಾಗಲಿ ಅಹಂಕಾರಿ ಮನುಷ್ಯನಿಗೆ ಅಳವಡುವುದಕ್ಕೆ ಸಾಧ್ಯವಿಲ್ಲ. ವಿನಯ ಗುಣವಿಲ್ಲದ ಮತ್ತು ಕೈಮುಗಿಯಲಾರದ ಮನುಷ್ಯ ಭಕ್ತನಾಗಲಾರನು. ಕಾರಣ ಭಕ್ತನಾಗಬೇಕಾದರೆ ವಿನಮ್ರ ಭಾವ, ಬಾಗಿದ ತಲೆ ಮುಗಿದ ಕೈಗಳನ್ನು ಹೊಂದಿರಬೇಕಾಗುತ್ತದೆ. ಭೃತ್ಯಭಾವವೇ ಭಕ್ತನ ವ್ಯಕ್ತಿತ್ವದ ಮೆರಗು ಎನ್ನುತ್ತ ಪಾರಮೇಶ್ವರಾಗಮವು –

ನ ಬಾಲಯುವವೃದ್ಧಾದಿ ತಾರತಮ್ಯಧಿಯಾ ಭಜೇತ್ ॥
ಪ್ರತ್ಯುತ್ತಿಷ್ಠೇತ್ ತದಾನ್ಯೋನ್ಯಂ ದೃಷ್ಟಮಾತ್ರೇಣ ಲಿಂಗಿನಃ ॥
ಅಭಿವಂದೇತ್ ತದಾನ್ಯೋನ್ಯಂ ನ ಭೇದೋ ಲಿಂಗಧಾರಿಣಾಮ್॥[೮]

ಲಿಂಗಧಾರಿಯಾದ ಶಿವಯೋಗಿಯನ್ನು ಬಾಲಕ, ತರುಣ, ವೃದ್ಧನೆಂದು ತಾರತಮ್ಯ ಮಾಡದೇ ಸೇವೆ ಮಾಡಬೇಕು. ಲಿಂಗಧಾರಿಗಳು ಪರಸ್ಪರರಿಗೆ ವಂದಿಸಬೇಕು ಎಂದು ತಿಳಿಸುತ್ತದೆ.

ಭೃತ್ಯಾಚಾರದ ಪ್ರತಿಮೂರ್ತಿಗಳಾಗಿದ್ದ ಬಸವಣ್ಣನವರ ವಚನಗಳಲ್ಲಿಯೂ ಇದೇ ಅಭಿಪ್ರಾಯವನ್ನೇ ಕಾಣಬಹುದು.

---

೫. ಸೂ.ಆ. ಪಟಲ ೮, ಶ್ಲೋಕ ಸಂಖ್ಯೆ ೩೩
೬ ದೇವಿ ಕಾಲೋತ್ತರಾಗಮ, ಶ್ಲೋ. ಸಂ. ೧೫
೭. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೪೦
೮. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೪೮–೪೯

ಕಂಡ ಭಕ್ತರಿಗೆ ಕೈಮುಗಿಯುವಾತನೆ ಭಕ್ತ,
ಮೃದುವಚನವೆ ಸಕಲ ಜಪಂಗಳಯ್ಯಾ,
ಮೃದುವಚನವೆ ಸಕಲ ತಪಂಗಳಯ್ಯಾ
ಸದುವಿನಯವೆ ಸದಾಶಿವನ ಒಲುಮೆಯ್ಯಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ॥[9]

ಎಂದು ಲಿಂಗಧಾರಿ ಶಿವಭಕ್ತನು ಲಿಂಗಧಾರಿ ಭಕ್ತರನ್ನು ಕಂಡಾಗ ಕೈಮುಗಿಯಲೇ ಬೇಕು. ವ್ಯಕ್ತಿ ಗೌರವ ನೀಡುವುದೇ ಭಕ್ತನ ಆದ್ಯ ಕರ್ತವ್ಯ. ಇಲ್ಲಿ ಬಡವ ಬಲ್ಲಿದರೆಂಬ ಭೇದ ಇರುವುದಿಲ್ಲ. ನಯವಾದ ಮಾತುಗಳಿಂದ ಅವರ ಯೋಗಕ್ಷೇಮವನ್ನು ವಿಚಾರಿಸಬೇಕು. ಅದುವೆ ಜಪ-ತಪಂಗಳು ಎಂದಿದ್ದಾರೆ. ಕಾರಣ ಭಕ್ತನಾದವನು ಮೊದಲು ಅಹಂಕಾರದಿಂದ ಮುಕ್ತನಾಗಬೇಕೆಂದು ಆಗಮ ಮತ್ತು ವಚನಗಳು ಅರುಹುತ್ತವೆ.

ಇನ್ನು ಅಹಂಕಾರದಂತೆ ಮಮಕಾರವು ಕೂಡಾ ಭಕ್ತಸ್ಥಲದ ಸತ್ಪಥಕ್ಕೆ ಮಹಾನ್ ಶತ್ರುವೇ ಆಗಿದೆ. ಮಮಕಾರವೆಂದರೆ ಕ್ಷಣಿಕ ಸುಖ ನೀಡುವ ಭೋಗವಸ್ತುಗಳಲ್ಲಿರುವ ಆಸಕ್ತ ಭಾವ. ಬಾಹ್ಯವಸ್ತುಗಳಲ್ಲಿ ಆಸಕ್ತನಾದ ಮನುಷ್ಯನು ಭಗವಂತನೆಡೆಗೆ ಸುಳಿಯಲಾರ. ಅಕಸ್ಮಾತ್ ಭಗವಂತನ ಬಳಿಗೆ ಬಂದರೂ ಅವನಿಗೆ ವಿಷಯ ವಸ್ತುಗಳನ್ನು ಸಂಪಾದಿಸಬೇಕೆಂಬ ಉದ್ದೇಶದಿಂದಲೇ ಬರುತ್ತಾನೆ. ಸಂಸಾರದಲ್ಲಿ ಆಸಕ್ತನಾದ ಮನುಷ್ಯನು ತಾನು ಪಡೆಯಬೇಕಾಗಿರುವ ವಿಷಯಗಳಿಗೆ ಮಾಧ್ಯಮದ ರೂಪದಲ್ಲಿ ದೇವರನ್ನು ಬಳಿಸಿಕೊಳ್ಳುತ್ತಾನೆ. ಅವನಿಗೆ ದೇವರು ಮುಖ್ಯವಲ್ಲ. ವಿಷಯಗಳು ಮುಖ್ಯ ವಿಷಯಗಳು ಅವನಿಗೆ ಧ್ಯೇಯವಾಗಿರುತ್ತವೆ. ದೇವರು ಆ ವಿಷಯಗಳನ್ನು ಸಂಪಾದಿಸುವುದಕ್ಕೆ ಸಾಧನ ಮಾತ್ರ. ಆದರೆ ದೇವರನ್ನೇ ಧ್ಯೇಯವನ್ನಾಗಿಸಿಕೊಂಡು ಸಾಂಸಾರಿಕ ವಿಷಯ ವಸ್ತುಗಳನ್ನು ಆ ಧ್ಯೇಯ ಸಾಧನೆಗೆ ಪೂರಕವಾಗಿ ಸಾಧನವಾಗಿ ಬಳಸಿಕೊಳ್ಳುವವನು ಮಾತ್ರ ನಿಜವಾದ ಭಕ್ತ. ಮಮಕಾರ ಭಾವ ಹೊಂದಿದ ಮನುಷ್ಯನು ಭಕ್ತನಾಗಲು ಸಾಧ್ಯವಿಲ್ಲ. ಕಾರಣ ಭಕ್ತನಾದವನು ಸಾಂಸಾರಿಕ ವ್ಯಾಮೋಹಗಳನ್ನು ತ್ಯಜಿಸಬೇಕೆಂದು ತಿಳಿಸುತ್ತ-

ಪುತ್ರದಾರಧನಾಧೀನಾಂ ಸಂಗಮಃ ಪಾಂಥಸಂಗಮಃ।
ಅನುದೇಹಂ ನಿಯಂತ್ಯೇತೇ ಸ್ವಪ್ನೋ ನಿದ್ರಾನುಗೋ ಯಥಾ
ನೇಹಾಮುತ್ರ ಫಲಂ ಕಿಂಚಿದಿಚ್ಛೇದ್ ಭಕ್ತೋ ಮಮ ಪ್ರಿಯೇ [10]

ಪುತ್ರ, ಪತ್ನಿ, ಧನಾದಿ ಐಶ್ವರ್ಯಗಳು ಪ್ರಯಾಣಕಾಲದಲ್ಲಿ ಭೇಟಿಯಾಗುವ ಸಹಪ್ರಯಾಣಿಕನಂತೆ ಕ್ಷಣಿಕರೆಂದು ತಿಳಿಯುವುದು ಹಾಗೂ (ಪ್ರತಿಜನ್ಮದ) ದೇಹದೊಂದಿಗಿನ ಇವರ ಸಂಬಂಧವು ನಿದ್ರೆಯ ಕನಸಿನಂತೆ ತೋರಿಕೆಯದ್ದೆಂದು ಭಾವಿಸುವುದು ಇವೆಲ್ಲ ನನ್ನ ಭಕ್ತನ ಲಕ್ಷಣಗಳು ಎಂದು ಪಾರಮೇಶ್ವರಾಗಮವು

೯. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೨೪೪, ಪುಟ ೬೧
೧೦. ಪಾ.ಆ. ಪಟಲ ೨೨, ಶ್ಲೋಕ ಸಂಖ್ಯೆ ೪೧-೪೨

ತಿಳಿಸುತ್ತದೆ.

ಇದೇ ಭಾವವನ್ನು ವಚನಗಳಲ್ಲಿಯೂ ಕಾಣಬಹುದು. ಪತ್ನೀ–ಪುತ್ರರು ಕೇವಲ ಲೌಕಿಕ ಉನ್ನತಿಗೆ ಸಹಾಯರಾಗಬಲ್ಲರೆ ಹೊರತು ಆತ್ಮೋನ್ನತಿಗಲ್ಲ ಎನ್ನುತ್ತ –

ಮಡದಿ ಮಕ್ಕಳು, ಪಡೆದ ದ್ರವ್ಯವು ಎನ್ನೊಡವೆ ಎಂದು
ನಚ್ಚಬೇಡಿರೋ ಎಲೆ ಹುಚ್ಚು ಮಾನವರಿರಾ! ಅವು ನಿಮ್ಮೊಡವೆಯಾದರೆ,
ನೀವು ಮಡಿದು ಹೋಗುವಾಗ ನಿಮ್ಮೊಡನೆ ಬಪ್ಪವೇ ಹೇಳಿರೋ?
ಅಸ್ಥಿರ ಜೀವನಂ ಲೋಕೇ ಅಸ್ಥಿರಂ ಧನಯೌವನಂ।
ಅಸ್ಥಿರಾಃ ಪುತ್ರದಾರಾಶ್ಚ ಸತ್ಯಧರ್ಮಃ ಪುನಃ ಸ್ಥಿರಃ॥
ಇದನರಿತು ತಡೆಯದೆ ಮೃಡನ ಸೇವೆಯ ಮಾಡಿದರೆ
ಕಡೆ ಮೊದಲಿಲ್ಲದ ಪದವು ದೊರೆಕೊಂಬುದು ನೋಡಿರೋ
ನಮ್ಮ ಅಖಂಡೇಶ್ವರಲಿಂಗದಲ್ಲಿ.[೧೧]

ಎಂದು ವಚನಕಾರರು ಮನೋಜ್ಞವಾಗಿ ಹೇಳುತ್ತಾರೆ. ಕಾರಣ ಪತ್ನೀ–ಪುತ್ರರು ಕೇವಲ ಲೌಕಿಕ ಉನ್ನತಿಗೆ ಸಹಾಯಕರಾಗಬಲ್ಲರೆ ಹೊರತು ಆತ್ಮೋನ್ನತಿಗಲ್ಲ. ಸಂಸಾರದಲ್ಲಿ ಆಸಕ್ತನಾದ ಮನಸ್ಸು ಭಗವಂತನೆಡೆಗೆ ಹೇಗೆ ಹರಿದಿತ್ತು? ಹಡಕೆಗೆ ನೆಚ್ಚಿದ ಸೊನಗ ಅಮೃತದ ಸವಿಯ ಬಲ್ಲುದೆ! ಈ ಕಾರಣಕ್ಕಾಗಿಯೇ ಮಹಾದೇವಿಯಕ್ಕನವರು–

ಒಳಗಣ ಗಂಡನಯ್ಯಾ, ಹೊರಗನ ಮಿಂಡನಯ್ಯಾ,
ಎರಡನೂ ನಡೆಸಲು ಬಾರದಯ್ಯಾ.
ಲೌಕಿಕ ಪಾರಮಾರ್ಥವೆಂಬೆರಡನೂ ನಡೆಸಲು ಬಾರದಯ್ಯಾ ಚೆನ್ನಮಲ್ಲಿ[೧೨]ಕಾರ್ಜುನಯ್ಯಾ
ಬಿಲ್ವ ಬೆಳವಲಕಾಯಿ ಒಂದಾಗಿ ಹಿಡಿಯಲು ಬಾರದಯ್ಯ.

ಎಂದಿದ್ದಾರೆ. ಇದರ ಅರ್ಥ ಭಕ್ತನಾದವನು ಮದುವೆಯಾಗಬಾರದು, ಮನೆ ಕಟ್ಟಬಾರದು, ಮಕ್ಕಳ ಹೆರಬಾರದು, ಎಲ್ಲವನ್ನು ತೊರೆದು ಕಾಡಿಗೆ ತೆರಳಬೇಕು ಎಂದಲ್ಲ. ಮನೆ, ಮಡದಿ, ಮಕ್ಕಳು, ಇದ್ದರೂ ಸಹ ಅವರಲ್ಲಿಯೆ ಅತಿಯಾದ ಆಸಕ್ತಿಯನ್ನು ಬೆಳೆಸಿಕೊಂಡು ಅವರೇ ಜೀವನದ ಗುರಿಯಾಗಬಾರದು. ಮಡದಿ ಮಕ್ಕಳ ಮೇಲೆ ಇರುವ ಆಸಕ್ತಿಯನ್ನು ತೊರೆಯುವುದೇ ಮಮಕಾರ ತ್ಯಾಗ ಮತ್ತು ವಿರಾಗ ಭಾವ. ಆಸಕ್ತಿ ಎನ್ನುವುದು ಮನದಲ್ಲಿ ತುಂಬಿಕೊಂಡ ಒಂದು ಭಾವದೆಶೆ. ಇದನ್ನು ಮನದಲ್ಲಿ ತುಂಬಿಕೊಂಡು ಮಡದಿ ಮಕ್ಕಳ ತೊರೆದು ಅರಣ್ಯಕ್ಕೆ ಹೋದರೂ ಯಾವ ಪ್ರಯೋಜನವಾಗಲಾರದು. ಮನೆ ಮಕ್ಕಳ ತೊರೆದು ಅರಣ್ಯಕ್ಕೆ ಹೋದ ಮಾತ್ರಕ್ಕೆ ಅವರ ಮೇಲಿನ ಆಸಕ್ತಿ ಇಲ್ಲವಾಗುತ್ತದೆಂದು ಹೇಳಲು ಸಾಧ್ಯವಿಲ್ಲ. ಆಸಕ್ತಿ ಭಾವ ಹೊಂದಿದ ಮನುಷ್ಯನು ನಾಡು ತೊರೆದು ಕಾಡಿಗೆ ಹೋದರೂ ಅಲ್ಲಿಯೂ.

೧೧. ಸಮಗ್ರ ವ.ಸಂ. ೧೪, ಸಂಕೀರ್ಣ ವ.ಸಂ.೯. ವಚನ ಸಂಖ್ಯೆ ೩೬೫, ಪುಟ ೨೧೦
೧೨. ಸಮಗ್ರ ವ.ಸಂ. ೫, ವಚನ ಸಂಖ್ಯೆ ೧೩೨, ಪುಟ ೪೨

ಅವನಿಂದ ದೋಷಗಳುಂಟಾಗುತ್ತವೆ. ಕಾರಣ ಆಸಕ್ತಿಭಾವವನ್ನು ಕಳೆದುಕೊಂಡು, ತನ್ನ ಪಾಲಿನ ಕರ್ತವ್ಯಗಳನ್ನು ನಿರ್ವಹಿಸುತ್ತಾ ಸತಿಸುತರೊಡನೆ ಪ್ರಪಂಚದಲ್ಲಿ ಬದುಕುವ ಕಲೆಯನ್ನು ರೂಢಿಸಿಕೊಳ್ಳಬೇಕು. ಅದುವೇ ಮಮಕಾರ ರಹಿತ ಭಕ್ತನ ಬದುಕು. ಹೀಗೆ ಅಹಂಕಾರ ಮತ್ತು ಮಮಕಾರ ಇವೆರಡು ಭಕ್ತನ ಸಾಧನೆಗೆ ಪ್ರತಿಬಂಧಕಗಳು. ಇವೆರಡರಿಂದ ಮನಸ್ಸನ್ನು ಬಿಡಿಸಿಕೊಂಡು ಮುಂದುವರೆದಾಗಲೇ ಸಾಧನೆಯ ನೌಕೆ ಸಾಗುವುದು.

ಕಾರಣ ಷಟ್‌ಸ್ಥಲ ಸಾಧನೆಯಲ್ಲಿ ಭಕ್ತಿಯ ನೌಕೆ ಮುಂದುವರೆಯಬೇಕಾದರೆ ಅಹಂಕಾರ ಮತ್ತು ಮಮಕಾರವೆಂಬ ಗೂಟಕ್ಕೆ ಕಟ್ಟಿದ ಹಗ್ಗವನ್ನು ಸಡಿಲಿಸಿಕೊಳ್ಳಬೇಕು; ಬಿಚ್ಚಿಕೊಳ್ಳಬೇಕು. ಈ ಹಗ್ಗ ಬಿಚ್ಚದೇ ಅದೆಷ್ಟು ವರ್ಷ ಸಾಧನೆ ಮಾಡಿದರೂ, ಪೂಜೆ ಮಾಡಿದರೂ ಸಹ ಸಾಧನೆಯಲ್ಲಿ ಪ್ರಗತಿ ಇರುವುದಿಲ್ಲ. ಅದಕ್ಕಾಗಿ ಷಟ್‌ಸ್ಥಲ ಸಾಧನೆಯ ಮೊದಲನೆಯ ಸೋಪಾನವಾದ ಭಕ್ತಸ್ಥಲವನ್ನು ಪ್ರವೇಶಿಸುವ ಮುನ್ನ ಅಹಂ-ಮಮಗಳನ್ನು ಸರಿಸುತ್ತಾ ಹೋದಾಗಲೆ ವಾಸ್ತವಿಕ ಭಕ್ತನಾಗಲು ಸಾಧ್ಯ. ಕಾರಣ –

ಶಿವಭಕ್ತಮಹಾತ್ಮಾನಃ ಕಾಮಾದಿಗುಣವರ್ಜಿತಾಃ।
ತ್ಯಕ್ತಲೋಕಸಮಾಚಾರಾ ನಿರಸ್ತಭವಬಂಧನಾಃ
ನಿರ್ಮಾಯಾ ನಿರಹಂಕಾರ ಶಾಂತಾಃ ಸರ್ವತ್ರ ಪೂಜಿತಾಃ।
ರಾಗಾದಿಗುಣನಿರ್ಮುಕ್ತಾ ನ ವಾಕ್ಪಾಣಿವಶಂಗತಾಃ ॥
ನ ಚಕ್ಷುಶ್ರೋತ್ರವಶಗಾಃ ಕ್ಷುತ್ತೃಡ್ಭಯವಿವರ್ಜಿತಾಃ।
ತತ್ತ್ವನಿಷ್ಠಾಃ ಸದಾ ದಾಂತಾಃ ಪುತ್ರದಾರಾದಿನಿಸ್ಪೃಹಾಃ।
ಶಿವಜ್ಞಾನರತಾ ನಿತ್ಯಂ ಶಿವಜ್ಞಾನೈಕತತ್ಪರಾಃ।
ಶಿವಧರ್ಮರತಾಃ ಕರ್ಮನಿಷ್ಠಾಃ ಶಿವಪರಾಯಣಾಃ ॥
ಶಿವಾಶ್ರಿತೇಷು ಮರ್ತ್ಯೇಷು ಶಿವಜ್ಞಾನೇ ಶಿವವ್ರತೇ।
ಶಿವಾಚಾರೇ ಚ ಸರ್ವತ್ರ ಶಿವೋತ್ಸವಪರೇಷು ಚ ॥
ಮಮ ಲಿಂಗಾಂಗಸಂಗೇಷು ಚರೇಷು ಚ ವಿಶೇಷತಃ।
ಭಕ್ತಾಃ ಕೃತಾಭಿಮಾನಾಶ್ಚ ಕೃತಕೃತ್ಯಾ ನಿರಾಕುಲಾಃ।
ಅವ್ಯಗ್ರಾಃ ಸತ್ವಸಂಪನ್ನಾ ಅಧಿಜ್ಞಾನಾಶ್ಚ ಸರ್ವಶಃ।
ಸತ್ಯವಾಕ್ಯರತಾ ನಿತ್ಯಂ ಸದಾಚಾರವ್ರತಾಃ ಶುಭಾಃ ॥
ಸರ್ವತ್ರ ಸತ್ಯಸಂಕಲ್ಪಾ ದುರಾಚಾರವಿರೋಧಿನಃ।
ನಿರ್ದ್ವಂದ್ವಾ ನಿರ್ಮಲಾ ನಿತ್ಯಾ ನಿರಾನಂದಾಭಿಕಾಂಕ್ಷಿಣಃ ॥
ಸ್ವದಾರನಿರತಾ ನಿತ್ಯಂ ಭೂತಿರುದ್ರಾಕ್ಷಸಂಯುತಾಃ।

ಮಹಾತ್ಮರಾದ ಶಿವಭಕ್ತರು ಕಾಮಾದಿಗುಣರಹಿತರೂ, ಲೋಕದ ಸಮಾಚಾರವನ್ನು ಬಿಟ್ಟವರೂ, ಭವಬಂಧನವಿಲ್ಲದವರು. ಅಜ್ಞಾನ-ಅಹಂಕಾರವಿಲ್ಲದವರು, ಶಾಂತರೂ, ಸರ್ವತ್ರಪೂಜಿತರು, ರಾಗದ್ವೇಷಾದಿ ಗುಣಮುಕ್ತರೂ, ಮಾತು-ಕೈ-ಕಾಲು ಮೊದಲಾದ ಇಂದ್ರಿಯಗಳ ವಶದಲ್ಲಿ ಇಲ್ಲದವರು. ಕಣ್ಣು-ಕಿವಿ-ಇಂದ್ರಿಯಗಳಿಗೆ ವಶರಾಗದವರು,

---

೧೩. ಸೂ.ಆ. ಪಟಲ ೯, ಶ್ಲೋಕ ಸಂಖ್ಯೆ ೧೪-೨೨

ಹಸಿವು, ಬಾಯಾರಿಕೆ, ಹೆದರಿಕೆಗಳಿಗೆ ಒಳಗಾಗದವರು, ತತ್ವನಿಷ್ಠರು, ಇಂದ್ರಿಯನಿಗ್ರಹ ಉಳ್ಳವರು, ಹೆಂಡತಿ–ಮಕ್ಕಳಲ್ಲಿ ನಿಸ್ಪೃಹರು. ಶಿವಜ್ಞಾನದಲ್ಲಿ ಮಗ್ನರು, ಶಿವಜ್ಞಾನವನ್ನು ಪಡೆಯುವುದರಲ್ಲಿ ಪ್ರಯತ್ನಶೀಲರು, ಶಿವಧರ್ಮದ ಆಚರಣೆಯಲ್ಲಿ ತೊಡಗಿದವರು, ಶಿವಪಾರಾಯಣರು, ನಿತ್ಯ ಕ್ರಿಯಾನಿರತರು. ಶಿವಭಕ್ತರ ಸಹವಾಸದಲ್ಲಿರುವವರು, ಶಿವಜ್ಞಾನ, ಶಿವವ್ರತ, ಶಿವಾಚಾರ, ಎಲ್ಲ ಕಡೆಗೂ ನಡೆವ ಶಿವಸಂಬಂಧ ಉತ್ಸವಗಳಲ್ಲಿ ನಿರತರು, ಜಂಗಮರಲ್ಲಿ ವಿಶೇಷ ಅಭಿಮಾನ ಉಳ್ಳವರು, ಶಿವಭಕ್ತರು, ಶಿವಾಭಿಮಾನಿಗಳು, ಚಿಂತಾರಹಿತರು, ಕೃತಕೃತ್ಯರು, ಕೃತಾರ್ಥರು. ಕೋಪವಿಲ್ಲದವರು, ಸತ್ತ್ವಸಂಪನ್ನರು, ಎಲ್ಲ ಪ್ರಕಾರದ ಜ್ಞಾನಸಂಪನ್ನರು, ಸತ್ಯವಾಕ್ಯರತರು, ನಿತ್ಯ ಸದಾಚಾರ ವ್ರತಿಗಳು, ಸಕಲರಿಗೂ ಒಳಿತನ್ನು ಮಾಡುವವರು. ಎಲ್ಲೆಡೆಯೂ ಸತ್ಯಸಂಕಲ್ಪ ಉಳ್ಳವರು, ದುರಾಚಾರವಿರೋಧಿಗಳು, ಸುಖದುಃಖಾದಿ ದ್ವಂದ್ವಾತೀತರು, ನಿರ್ಮಲಚಿತ್ತರು. ನಿತ್ಯಭಕ್ತರು ಅಲೌಕಿಕ ಆನಂದದಲ್ಲಿರುವವರು, ಸುಖಾಪೇಕ್ಷೆ ಇಲ್ಲದವರು, ಸ್ವಪತ್ನೀ ವ್ರತಸ್ಥರು, ನಿತ್ಯವೂ ವಿಭೂತಿ–ರುದ್ರಾಕ್ಷಗಳನ್ನು ಧರಿಸುವವರಾಗಿರಬೇಕು ಎಂದು ಸೂಕ್ಷ್ಮಾಗಮವು ಅರುಹುತ್ತದೆ.

ಈ ಎಲ್ಲ ಲಕ್ಷಣಗಳನ್ನು ಚೆನ್ನಬಸವಣ್ಣನ ಒಂದು ಸುಂದರ ವಚನದಲ್ಲಿ ನೋಡಬಹುದು.

ಭಕ್ತ ಶಾಂತನಾಗಿರಬೇಕು, ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು,
ಭೂತಹಿತವಹ ವಚನವ ನುಡಿಯಬೇಕು,
ಗುರುಲಿಂಗ ಜಂಗಮದಲ್ಲಿ ನಿಂದೆಯಿಲ್ಲದಿರಬೇಕು
ಸಕಲ ಪ್ರಾಣಿಗಳ ತನ್ನಂತೆ ಭಾವಿಸೂದು ಮಾಡಬೇಕು.
ತನುಮನಧನವ ಗುರುಲಿಂಗ ಜಂಗಮಕ್ಕೆ ಸವೆಸಲೇಬೇಕು
ಅಪಾತ್ರದಾನವ ಮಾಡಲಾಗದು. ಸಕಲೇಂದ್ರಿಯಗಳ ತನ್ನ ವಶವ ಮಾಡಬೇಕು.
ಇದೇ ಮೊದಲಲ್ಲಿ ಬೇಹ ಶೌಚ ನೋಡಾ.
ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಎನಗಿದೇಸಾಧನ,
ಕೂಡಲಚೆನ್ನಸಂಗಮದೇವಾ![೧೪]

ಎಂದಿದ್ದಾರೆ. ಅಲ್ಲದೇ ಭಕ್ತನ ಇನ್ನೊಂದು ಪ್ರಮುಖ ಲಕ್ಷಣವೆಂದರೆ ಆತನು ಕಾಯಕನಿಷ್ಠನಾಗಿ ದಾಸೋಹಂಭಾವವುಳ್ಳವನಾಗಿರಬೇಕು. ಕಾಯಕವಿಲ್ಲದ ಕೈ ಲಿಂಗವನ್ನು ಪೂಜಿಸಲು ಯೋಗ್ಯವಾಗುವುದಿಲ್ಲ. ಅಂತೆಯೇ ಪಾರಮೇಶ್ವರಾಗಮವು–

ತ್ರಿಕಾಲಮರ್ಚಯೇಲ್ಲಿಂಗಂ ನ್ಯಾಯಾರ್ಜಿತಧನಾದಿಭಿಃ॥[೧೫]

ಅರ್ಥಾತ್ ಲಿಂಗವನ್ನು ತ್ರಿಕಾಲದಲ್ಲಿ ನ್ಯಾಯವಾಗಿ ಗಳಿಸಿದ ಧನ ಮುಂತಾದವುಗಳಿಂದ ಪೂಜಿಸಬೇಕು ಎಂದು ತಿಳಿಸುತ್ತಾ ಈ ಧರ್ಮಮಾರ್ಗದಿಂದ ಗಳಿಸಿದ ದ್ರವ್ಯದಿಂದ ಗುರು–ಲಿಂಗ–ಜಂಗಮರ ನಿತ್ಯಾರಾಧನೆ ಮಾಡುವುದೇ ಭಕ್ತನು ಅನುಸರಿಸುವ ಸದಾಚಾರ ಎನ್ನುತ್ತ –

೧೪. ಚೆನ್ನಬಸವಣ್ಣನವರ ವ.ಸಂಪುಟ. ಸಮಗ್ರ ವಚನಸಂಪುಟ ೩, ವಚನಸಂಖ್ಯೆ ೬೪, ಪುಟ ೧೯
೧೫. ಪಾ.ಆ. ಪಟಲ ೫ ಶ್ಲೋಕ ಸಂಖ್ಯೆ ೩೬

ಧರ್ಮಾರ್ಜಿತೇನ ದ್ರವ್ಯೇಣ ಯತ್ಸಂತರ್ಪಣಮನ್ವಹಮ್।
ಗುರುಲಿಂಗಜಂಗಮಾನಾಂ ಸದಾಚಾರ ಇತಿ ಸ್ಮೃತಃ॥[೧೬]

ಎಂದು ತಿಳಿಸಿದೆ. 'ಏಕಮೂರ್ತೇಸ್ತ್ರಯೋ ಭಾಗಾ ಗುರುರ್ಲಿಂಗಂ ಚ ಜಂಗಮಃ'[೧೭] ಎಂಬ ಆಗಮಗಳ ಪ್ರತಿಪಾದನೆಯಂತೆ ವೀರಶೈವ ಧರ್ಮವು ಗುರು, ಲಿಂಗ, ಜಂಗಮರನ್ನು ಪರಶಿವನ ಮೂರು ರೂಪಗಳು ಹಾಗೂ ಪೂಜ್ಯವಸ್ತುಗಳೆಂದು ಪರಿಗಣಿಸಿದೆ. ಆದುದರಿಂದ ಶಿವಭಕ್ತನಾದ ಸಾಧಕನು ಅವರ ಅನುಗ್ರಹವನ್ನು ಸಂಪಾದಿಸಲು ಸತ್ಯ ಶುದ್ಧ ಕಾಯಕದಿಂದ ಅರ್ಥಾತ್ ಧರ್ಮಮಾರ್ಗದಿಂದ ಹಣವನ್ನು ಸಂಪಾದಿಸಿ ತನ್ನ ಶಕ್ತ್ಯಾನುಸಾರ ಗುರು, ಲಿಂಗ, ಜಂಗಮರಿಗೆ ಸಲ್ಲಿಸಿ ಸೇವೆಗೈಯಬೇಕೆಂದು ವಿಶ್ಲೇಷಿಸಿದೆ.

ಬಸವಣ್ಣನವರು ಸಹ ಇದನ್ನೇ ಪ್ರತಿಪಾದಿಸುತ್ತ 'ಮಾಡುವ ನೀಡುವ ಭಕ್ತ'ನೆಂದು ಭಕ್ತನ ಲಕ್ಷಣ ಹೇಳಿದ್ದಾರೆ. ಲಿಂಗವನ್ನು ಪೂಜಿಸಲು ಕಾಯಕ ಮಾಡುವುದು, ಕಾಯಕ ಮುಗಿದ ಬಳಿಕ ಲಿಂಗಪೂಜೆಯನ್ನು ಮಾಡಬೇಕು. ಲಿಂಗವನ್ನು ಪೂಜಿಸಿದರೆ ಭಕ್ತನ ಕರ್ತವ್ಯ ಮುಗಿಯಲಿಲ್ಲ. ಲಿಂಗವನ್ನು ಪೂಜಿಸುವುದು ಗುರು-ಜಂಗಮರ ಬರುವಿಕೆಯಾಗಿ ಇರುವುದರಿಂದ ಗುರು-ಜಂಗಮನನ್ನು ಬರಮಾಡಿಕೊಂಡು ಅವರಿಗೆ ದಾನ ನೀಡಬೇಕು. "ಮಾಡುವ-ನೀಡುವ ಗುಣವುಳ್ಳವನೇ ಭಕ್ತ" ಎಂದು ತಿಳಿಸುತ್ತ ಆಗಮದ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ.

ಗುರೌ ಚ ಜಂಗಮೇ ಲಿಂಗೇ ತಾರತಮ್ಯಾವಿಶೇಷತಃ।
ಪೂಜಯೇತ್ ತ್ರಿವಿಧಂ ರೂಪಂ ತದ್ಭಕ್ತಸ್ಥಲಮುಚ್ಯತೇ ॥[೧೮]

ಗುರು, ಜಂಗಮ, ಲಿಂಗಗಳಲ್ಲಿ ತಾರತಮ್ಯ (ಹೆಚ್ಚು ಕಡಿಮೆಯೆಂಬ) ವಿಶೇಷವಿಲ್ಲದೆ ಮೂರು ವಿಧವಾದ (ನನ್ನ)ರೂಪವನ್ನು ಪೂಜಿಸಬೇಕು.ಅದೇ ಭಕ್ತಸ್ಥಲವೆಂದು ಕರೆಯಲ್ಪಡುತ್ತದೆ ಎಂದು ಪಾರಮೇಶ್ವರಾಗಮವು ಭಕ್ತಸ್ಥಲದ ವೈಶಿಷ್ಟ್ಯತೆಯನ್ನರುಹಿದೆ.

ಕಾರಣ ಭಕ್ತನಾದವನು ಅಂತರಂಗ ಬಹಿರಂಗ ಶುದ್ಧನಾಗಿ ಗುರುಸೇವೆಯೊಂದಿಗೆ, ಕಿಂಕರತನದಿಂದ ಗುರುಲಿಂಗ-ಚರಲಿಂಗಗಳಲ್ಲಿ ಭಿನ್ನಭಾವ ತಾಳದೆ ಕಾಯಕ ಮಾಡುತ್ತ ಸತ್ಯಸದಾಚಾರದಿಂದ ಜಂಗಮ ದಾಸೋಹ ಮಾಡಬೇಕು. ಇದುವೆ ಭಕ್ತಸ್ಥಲದ ಸನ್ನಡತೆಯಾಗಿದೆ ಎಂದು ಆಗಮಗಳು ಅರುಹುತ್ತವೆ.

ಅಲ್ಲದೇ ಭಕ್ತಸ್ಥಲದ ಸಾಧಕನ ಭಕ್ತಿಯನ್ನು ಶ್ರದ್ಧಾಭಕ್ತಿಯೆಂದು ಕರೆಯಲಾಗುತ್ತದೆ. ಭಗವಂತನ ಸಾಕ್ಷಾತ್ಕಾರಕ್ಕೆ ಶ್ರದ್ಧೆಯು ಅತೀ ಅವಶ್ಯಕ ಎಂದು ಅರುಹುತ್ತ ಪಾರಮೇಶ್ವರಾಗಮವು –

ನ ಕರ್ಮಣಾ ನ ತಪಸಾ ನ ಜಪೈರ್ನ ಸಮಾಧಿಭಿಃ ॥

---

೧೬. ಚಂ.ಆ., ಕ್ರಿಪಾ., ಪಟಲ ೯, ಶ್ಲೋಕ ಸಂಖ್ಯೆ ೬
೧೭. ಚಂ.ಆ., ಕ್ರಿಪಾ., ಪಟಲ ೫, ಶ್ಲೋಕ ಸಂಖ್ಯೆ ೧೫
೧೮. ಪಾ.ಆ. ಪಟಲ ೬, ಶ್ಲೋಕ ಸಂಖ್ಯೆ ೯

ನ ದಾನೇನ ನ ಚಾನ್ನೇನ ವಶ್ಯೋಽಹಂ ಶ್ರದ್ಧಯಾ ವಿನಾ।
ಯಸ್ಯ ಶ್ರದ್ಧಾಸ್ತಿ ದೇವೇಶಿ ಯೇನ ಕೇನಾಪಿ ಹೇತುನಾ ॥[೧೯]

ನನ್ನನ್ನು (ಶಿವನನ್ನು) ಒಲಿಸಿಕೊಳ್ಳುವುದು ಕರ್ಮದಿಂದ (ನಾನಾ ಬಗೆಯ ಯಜ್ಞ-ಯಾಗಾದಿಗಳಿಂದ) ಸಾಧ್ಯವಿಲ್ಲ, ತಪಸ್ಸಿನಿಂದಲ್ಲ, ಜಪದಿಂದಲ್ಲ, ಯೋಗ-ಸಮಾಧಿಗಳಿಂದ ಸಾಧ್ಯವಿಲ್ಲ, ದಾನದಿಂದ ಆಗದು; ಶ್ರದ್ಧೆಯಿಲ್ಲದ ವಿನಹ ಯಾವುದರಿಂದಲೂ ಸಾಧ್ಯವಿಲ್ಲ. ದೇವೇಶ್ವರಿ, ಯಾವ ವ್ಯಕ್ತಿಗೆ ಶ್ರದ್ಧೆಯಿದೆಯೋ ಅವನಿಗೆ ನಾನು ವಶನಾಗಿರುತ್ತೇನೆ ಎಂದು ಹೇಳುವ ಮೂಲಕ ಭಕ್ತನಾದವನಿಗೆ ಶ್ರದ್ಧಾಭಕ್ತಿ ಅವಶ್ಯಕ ಎಂದು ಆಗಮಗಳು ತಿಳಿಸುತ್ತ,

ಭಕ್ತಃ ಸರ್ವೋತ್ತಮೋ ದೇವಿ ನಿರಪೇಕ್ಷೋ ಹ್ಯಕಿಂಚನಃ।
ಅಪ್ಯುತ್ಕಟೇಭ್ಯಃ ಕರ್ಮಭ್ಯೋ ಮಹಾದಾದಿಭ್ಯ ಏವ ಚ ॥
ಯಥಾ ನದೀಷು ಮಂದಾಕಿನ್ಯಮರೇಷು ಶಚೀಪತಿಃ।
ಭವತೀ ಗಿರಿಜಾ ಸ್ತ್ರೀಷು ಪುರುಷೇಶ್ವಹಮೀಶ್ವರಃ ॥
ಸರ್ವಾಸಾಂ ಮದ್ವಿಭೂತೀನಾಂ ಭಕ್ತ ಏವ ತಥಾ ಪರಃ।
ನ ಬಿಭೇಮಿ ಕುತಶ್ಚಾಪಿ ಯಥಾ ಭಕ್ತಾದಹಂ ಪ್ರಿಯೇ ॥[೨೦]

ಹಲವು ವಿಧವಾದ ತೀವ್ರತರವಾದ ತಪಸ್ಸು, ಯಜ್ಞ, ಯಾಗಗಳನ್ನು ಆಚರಿಸುವ ಕರ್ಮಮಾರ್ಗಿಗಳಿಗಿಂತ, ಮಹತ್ ಮೊದಲಾದ ತತ್ತ್ವಪ್ರತಿಪಾದಕ ಸಾಂಖ್ಯ ಮೊದಲಾದ ಮಾರ್ಗಾವಲಂಬಿಗಳಿಗಿಂತ ಇಚ್ಛಾರಹಿತನೂ, ಸರ್ವಸಂಗ ಪರಿತ್ಯಾಗಿಯೂ ಆದ ಶಿವಭಕ್ತನೇ ಶ್ರೇಷ್ಠನು. ನದಿಗಳಲ್ಲಿ ಗಂಗೆಯೂ, ದೇವತೆಗಳಲ್ಲಿ ಇಂದ್ರನೂ, ಸ್ತ್ರೀಯರಲ್ಲಿ ಗಿರಿಜೆ ಅಂದರೆ ನೀನು, ಪುರುಷರಲ್ಲಿ ನಾನು ಹೇಗೆ ಶ್ರೇಷ್ಠನೋ ಹಾಗೆಯೇ ಹೇ ಪ್ರಿಯೇ! ನನ್ನ ಎಲ್ಲ ವಿಭೂತಿಗಳಲ್ಲಿ ಭಕ್ತನೇ ಸರ್ವಶ್ರೇಷ್ಠನು. ಯಾವುದಕ್ಕೂ ಹೆದರದಿರುವ ನಾನು ಸದ್ಭಕ್ತನ ಭಕ್ತಿಗೆ ಭಯಪಡುತ್ತೇನೆ. ಎಂದು ತಿಳಿಸಿದ್ದಾನೆ.

ಒಟ್ಟಾರೆ ಭಕ್ತಸ್ಥಲದ ಲಕ್ಷಣಗಳನ್ನು ಸಕಲಾಗಮ ಶಿಖಾಮಣಿ ಬಾಲಸಂಗಯ್ಯನವರು ಆಗಮದ ಉಲ್ಲೇಖದೊಂದಿಗೆ –

ಸದಾಚಾರದಲ್ಲಿ ನಡಹ, ಶಿವನಲ್ಲಿ ಭಕ್ತಿಯಾಗಿಹ,
ಲಿಂಗಜಂಗಮ ಒಂದೆಯೆಂಬ ಬುದ್ಧಿಯಾಗಿಹ,
ಲಾಂಛನಧಾರಿಗಳ ಕಂಡಡೆ ಒಂದಿಸುವುದೀಗ ಭಕ್ತಸ್ಥಲ ನೋಡಾ.
ಇದಕ್ಕೆ ಈಶ್ವರೋಽವಾಚ :
"ಸದಾಚಾರಂ ಶಿವೇ ಭಕ್ತಿಃ ಲಿಂಗಜಂಗಮೇ ರತಿಃ ।
ಲಾಂಛನಂ ಚ ಶರಣ್ಯಂ ಚ ಭಕ್ತಿಸ್ಥಲಸುಬುದ್ಧಿಮಾನ್ ॥[೨೧]

---

೧೯. ಪಾ.ಆ. ಪಟಲ ೧೨ ಶ್ಲೋಕ ಸಂಖ್ಯೆ ೮೬-೮೭
೨೦. ಪಾ.ಆ. ಪಟಲ ೨೨ ಶ್ಲೋಕ ಸಂಖ್ಯೆ ೬-೮
೨೧. ಸಮಗ್ರ ವ.ಸಂ. ೧೩, ಸಂಕೀರ್ಣ ವ.ಸಂ.೮. ವಚನ ಸಂಖ್ಯೆ ೩೬೫, ಪುಟ ೧೬೬

ಎಂದು ಭಕ್ತಸ್ಥಲದ ಲಕ್ಷಣಗಳನ್ನು ಸಂಗ್ರಹಿಸಿದ್ದಾರೆ. ಆಗಮದಲ್ಲಿ ಪ್ರತಿಪಾದನೆಗೊಂಡ ಈ ಭಕ್ತಸ್ಥಲದಲ್ಲಿಯ ಭಕ್ತನ ಲಕ್ಷಣಗಳನ್ನೇ ಸಮಗ್ರವಾಗಿ ತೋಂಟದಸಿದ್ಧಲಿಂಗ ಶಿವಯೋಗಿಗಳು –

"ಸದಾಚಾರದಲ್ಲಿ ನಡೆವವನ, ಶಿವನಲ್ಲಿ ಭಕ್ತಿಯಾಗಿಪ್ಪವನ, ಶಿವಲಾಂಛನವ ಕಂಡಲ್ಲಿ ವಂದನೆಗೈವುತಿಪ್ಪವನ, ಲಿಂಗ ಜಂಗಮವ ಒಂದೇ ಭಾವದಲ್ಲಿ ಕಂಡು ಭೃತ್ಯಾಚಾರ ಸದಾಚಾರಯುಕ್ತನಾಗಿರಬಲ್ಲರೆ ಭಕ್ತನ ಸ್ಥಲವಿದೆಂಬೆನಯ್ಯ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ."[೨೨]

ಎನ್ನುತ್ತ ಭಕ್ತಸ್ಥಲದ ಮುಖ್ಯಲಕ್ಷಣಗಳನ್ನು ಸಮಗ್ರವಾಗಿ ಸುಂದರವಾಗಿ ತಿಳಿಸಿದ್ದಾರೆ.

ಭಕ್ತಸ್ಥಲದ ಸಾಧಕನ ಆಂತರಿಕ ಪೂಜಾಕ್ರಮ –

ಭಕ್ತಸ್ಥಲದ ಸಾಧಕನ ಆಂತರಿಕ ಪೂಜಾಕ್ರಮವನ್ನು ಹಾಗೂ ಆತನ ಯೌಗಿಕ ಅನುಸಂಧಾನವನ್ನು ಆಗಮಗಳು ಅರುಹುತ್ತಾ –

ಭಕ್ತಸ್ಥಲೇ ಕ್ರಿಯಾಶಕ್ತಿಯುತೇ ವೈ ನಾಸಿಕಾಂಗಗೇ।
ಆಚಾರಲಿಂಗಸಂಜ್ಞೇಽಸ್ಮಿನ್ ಸದ್ಯೋಜಾತಮುಖಾತ್ಮಕೇ।
ಗಂಧಪ್ರಸಾದಂ ಸದ್ಭಕ್ತ್ಯಾ ಚಿತ್ತಹಸ್ತೇನ ಚಾರ್ಪಯೇತ್ ॥[೨೩]

'ಭಕ್ತಸ್ಥಲದಲ್ಲಿ ಕ್ರಿಯಾಶಕ್ತಿಯಿಂದ ಯುಕ್ತವಾದ ಸದ್ಯೋಜಾತ ಮುಖ ಸ್ವರೂಪದ ಆಚಾರ ಲಿಂಗಕ್ಕೆ ಶ್ರದ್ಧಾಭಕ್ತಿಯಿಂದ, ಸುಚಿತ್ತವೆಂಬ ಹಸ್ತದಿಂದ 'ನ' ಕಾರ ಮಂತ್ರವನ್ನು ಉಚ್ಚರಿಸುತ್ತಾ ಗಂಧ ಪದಾರ್ಥವನ್ನು ಮೂಗಿನ ಮೂಲಕ ಅರ್ಪಿಸಬೇಕು ಎಂಬ ಕಾರಣಾಗಮದ ಉಕ್ತಿಯನ್ನೇ ಚೆನ್ನಬಸವಣ್ಣನವರು ಯಥಾವತ್ತಾಗಿ–

'ಭಕ್ತಂಗೆ ಪೃಥ್ವಿಯೆ ಅಂಗ, ಆ ಅಂಗಕ್ಕೆ ಸುಚಿತ್ತವೆ ಹಸ್ತ,
ಆ ಹಸ್ತಕ್ಕೆ ಕರ್ಮಸಾದಾಖ್ಯ, ಆ ಸಾದಾಖ್ಯಕ್ಕೆ ಕ್ರಿಯಾಶಕ್ತಿ,
ಆ ಶಕ್ತಿಗೆ ಆಚಾರವೇ ಲಿಂಗ, ಆ ಲಿಂಗಕ್ಕೆ ನಿವೃತ್ತಿಯೆ ಕಲೆ,
ಆ ಕಲೆಗೆ ಘ್ರಾಣೇಂದ್ರಿಯವೆ ಮುಖ,
ಆ ಮುಖಕ್ಕೆ ಸುಪರಿಮಳದ್ರವ್ಯಂಗಳನು
ರುಚಿತೃಪ್ತಿಯನರಿದು ಸದ್ಭಕ್ತಿಯಿಂದರ್ಪಿಸಿ
ಸುಗಂಧಪ್ರಸಾದವ ಭೋಗಿಸಿ ಸುಖಿಸುತ್ತಿಹನು
ಕೂಡಲಚೆನ್ನಸಂಗಾ ನಿಮ್ಮ ಭಕ್ತನು"[೨೪]

---

೨೨. ಸಮಗ್ರ ವ.ಸಂ. ೧೧, ಸಂಕೀರ್ಣ ವ.ಸಂ.೬. ವಚನ ಸಂಖ್ಯೆ ೨೧೨, ಪುಟ ೧೦೪
೨೩. ಕಾ.ಆ. ಪಟಲ ೭ ಶ್ಲೋಕ ಸಂಖ್ಯೆ ೬೦
೨೪. ಚೆನ್ನಬಸವಣ್ಣನವರ ವ.ಸಂಪುಟ.ಸಮಗ್ರ ವಚನಸಂಪುಟ ೩, ವಚನಸಂಖ್ಯೆ ೧೪೦೫, ಪುಟ೫೦೧

ಎಂದು ಭಕ್ತಸ್ಥಲದ ಸಾಧಕನ ಆಂತರಿಕ ಪೂಜಾಕ್ರಮವನ್ನು ನಿರೂಪಿಸಿದ್ದಾರೆ. ಭಕ್ತನಿಗೆ ಪೃಥ್ವಿಯೇ ಮೂಲದ್ರವ್ಯ. ಪೃಥ್ವಿಯಲ್ಲಿ ಸಹನಶೀಲತೆ, ಕ್ಷಮಾಶೀಲತೆಗಳಿರುವಂತೆ ಭಕ್ತನಲ್ಲಿ ಈ ಗುಣಗಳು ಮುಖ್ಯವಾಗಿರಬೇಕು. ಪೃಥ್ವ್ಯಂಗನಾದ ಭಕ್ತನು ಆಚಾರ ಲಿಂಗದ ಪೂಜಕನು. ಭಕ್ತನಿಗೆ ಆಚರಣೆಯೇ ಮುಖ್ಯವಾಗಬೇಕು. ಅಷ್ಟಾವರಣ ಸಂಪನ್ನನೂ, ಪಂಚಾಚಾರ ಪರಾಯಣನಾದ ಭಕ್ತನು ಸತ್ಕ್ರಿಯಾವಂತನಾದರೆ ನಿವೃತ್ತಿಯ ಪಥ ಲಭಿಸುತ್ತದೆ. ಶ್ರದ್ಧಾಭಕ್ತಿಯಿಂದ ನಿವೃತ್ತಿ ಕಲಾಪೂರ್ಣ ಆಚಾರಲಿಂಗವನ್ನು ಪೂಜಿಸಲು ಬರಿ ಕೈಗಳು ಕಾರಣವಲ್ಲ. ಅವನ ಚಿತ್ತ ಸುಚಿತ್ತವಾಗಬೇಕಾಗುವದು. ಆಚಾರಲಿಂಗಕ್ಕೆ ಸುಚಿತ್ತ ಹಸ್ತದಿಂದ ಘ್ರಾಣಮುಖದಲ್ಲಿ ಗಂಧಪದಾರ್ಥವನ್ನು ಸುಗಂಧ ಪ್ರಸಾದವಾಗಿ ಸಮರ್ಪಿಸಿದರೆ ಆಚಾರಲಿಂಗಕ್ಕೆ ಸಲ್ಲುತ್ತದೆ. ಆಚಾರಲಿಂಗದ ಅರ್ಚನೆಯಿಂದ ಈ ನಿವೃತ್ತಿ ಪಥವು ಸುಗಮವಾಗುವುದು. ಅಲ್ಲದೆ ಕರ್ಮಸಾದಾಖ್ಯವೇ ಆಚಾರ ಲಿಂಗದ ಪ್ರಕಾಶವೆನಿಸಿದ್ದು ಅದುವೇ ಪರಶಿವನ ಸದ್ಯೋಜಾತ ಮುಖವೆನಿಸಿದೆ. ಅದರಿಂದಲೇ 'ನ' ಕಾರ ಪ್ರಣವದ ಉತ್ಪತ್ತಿಯಾಗಿದೆ ಮತ್ತು ನಿವೃತ್ತಿ ಕಲೆಯಿಂದಲೆ ಕ್ರಿಯಾಶಕ್ತಿಯು ಹುಟ್ಟುತ್ತದೆ. ಅದಕ್ಕಾಗಿ ಆಚಾರಲಿಂಗವು ಸತ್ಕ್ರಿಯಾ ಲಿಂಗವೂ ಎನಿಸಿದೆ. ಅದನ್ನು ಆಧಾರಚಕ್ರದಲ್ಲಿ ಅರ್ಚಿಸಬೇಕಾಗುತ್ತದೆ. ಇಲ್ಲಿ ಯೌಗಿಕ ಸಾಧನೆಯೂ ನಡೆದು ಭಕ್ತನು ಆಚಾರಲಿಂಗವನ್ನು ಅನುಸಂಧಾನ ಮಾಡುತ್ತಾನೆ. ತನ್ನ ಯೋಗ ಬಲದಿಂದ ಪ್ರಾಣಾಯಾಮ ಪ್ರಕ್ರಿಯೆಯ ಮೂಲಕ ಊರ್ಧ್ವಮುಖವಾಗಿ ಹರಿಯುವ ಅಪಾನ ವಾಯುವನ್ನು ಮೇಲ್ಮುಖವಾಗಿಸುತ್ತಾನೆ. ಆಗ ಅವೆರಡರ ಸಂಘರ್ಷಣೆಯಿಂದ ಮೂಲಾಧಾರ ಚಕ್ರದಲ್ಲಿ ಒಂದು ಜ್ಯೋತಿ ಉತ್ಪನ್ನವಾಗುತ್ತದೆ. ಯೋಗ ಸಾಧಕರಿಗೆ ಮಾತ್ರ ಗೋಚರಿಸುವ ಈ ಜ್ಯೋತಿಯನ್ನು ವೀರಶೈವ ಶಿವಯೋಗಿಗಳು ಆಚಾರಲಿಂಗವೆಂದು ಕರೆದಿದ್ದಾರೆ. ಭಕ್ತಸ್ಥಲದ ಸಾಧಕನು ಈ ಆಚಾರಲಿಂಗವನ್ನು ಮೂಲಾಧಾರ ಚಕ್ರದಲ್ಲಿ ಕಂಡುಕೊಂಡು ಅದನ್ನು ಅನುಸಂಧಾನ ಮಾಡುತ್ತಾನೆ. ಇನ್ನೊಂದು ಅರ್ಥದಲ್ಲಿ ಆಚಾರಲಿಂಗದ ಅನುಸಂಧಾನವೆಂದರೆ ತನ್ನಲ್ಲಿ ಬೆಳೆದುಕೊಂಡು ಬಂದಿರುವ ಸದಾಚಾರಗಳನ್ನು ಈ ಸ್ಥಲದ ಸಾಧಕನು ಲಿಂಗದಂತೆ ಪ್ರೀತಿಸುತ್ತಾನೆ ಈ ಕಾರಣಕ್ಕಾಗಿಯೇ ಈ ಸ್ಥಲದ ಸಾಧಕನನ್ನು ಆಚಾರಲಿಂಗೋಪಾಸಕನೆಂದು ಕರೆಯುವರು ಎಂತಲೂ ಭಾವಿಸಬಹುದು.

ಒಟ್ಟಿನಲ್ಲಿ ಭಕ್ತಸ್ಥಲದ ಸಾಧಕನು ಅಹಂ ಮಮಗಳನ್ನು ಬದಿಗಿರಿಸಿ ತನಗಿಂತ ಅಧಿಕ ಪ್ರೀತಿ ರೂಪವಾದ ಭಕ್ತಿಯನ್ನು ಪರಶಿವನಲ್ಲಿರಿಸಿ ಗುರುಲಿಂಗಜಂಗಮರನ್ನು ಪೂಜಿಸುತ್ತಾ, ಗುರುವಿನಲ್ಲಿ ಶರಣಾಗಿ ತ್ರಿವಿಧ ದೀಕ್ಷೆಗಳಿಂದ ಇಷ್ಟಲಿಂಗ–ಪ್ರಾಣಲಿಂಗ–ಭಾವಲಿಂಗಗಳೆಂಬ ಲಿಂಗತ್ರಯಗಳನ್ನು ಪಡೆದವನಾಗಿ ಆಚಾರಲಿಂಗದ ಅನುಸಂಧಾನ ಮಾಡುತ್ತಾನೆ ಎಂಬ ಆಗಮದ ಪ್ರತಿಪಾದನೆಯನ್ನೇ ವಚನಗಳು ತಮ್ಮ ಅನುಭವಪೂರ್ಣವಾದ ತಾತ್ವಿಕ ನುಡಿಯೊಂದಿಗೆ ಸತ್ವಯುತವಾಗಿ ಪ್ರತಿಪಾದಿಸುವುದರ ಜೊತೆಗೆ ತಮ್ಮ ಸಾಧನಾ ಪಥದಲ್ಲಿ ಅಳವಡಿಸಿ ತೋರಿಸಿದ್ದಾರೆ.

೫.೩.೪ ಮಾಹೇಶ್ವರ ಸ್ಥಲ

ಇದು ಷಟ್‌ಸ್ಥಲದ ಎರಡನೆಯ ಮೆಟ್ಟಿಲು. ಭಕ್ತಸ್ಥಲದಲ್ಲಿ ಎಚ್ಚರಗೊಂಡ ಮನಸ್ಸಿನ ಜಾಗ್ರತ ಸ್ಥಿತಿಯನ್ನು ಏಕೈಕ ನಿಷ್ಠೆಯಿಂದ ಮುಂದುವರಿಸಿಕೊಂಡು ಹೋಗುವ ಸತತ ಪ್ರಯತ್ನ ಇಲ್ಲಿ ನಡೆಯುತ್ತದೆ. ಸಾಧಕ ತನಗೇನೇ ಕಷ್ಟಬಂದರೂ ಅವುಗಳನ್ನು ಎದುರಿಸಿ, ಭಕ್ತಿಯ ಆವೇಶದಲ್ಲಿ ಕೊಚ್ಚಿಕೊಂಡು ಹೋಗದೆ ವಿಚಾರದ ಒರೆಗಲ್ಲಿನ ಮೇಲೆ ನಿಲ್ಲುತ್ತಾನೆ. ಜಲಾಂಗನಾದ ಮಾಹೇಶ್ವರನು ಜಲತತ್ತ್ವದಂತೆ ಪರಿಶುದ್ಧತೆಯನ್ನು ಮತ್ತು ಸಚ್ಚಾರಿತ್ರ್ಯವನ್ನು ತನ್ನದನ್ನಾಗಿಸಿಕೊಳ್ಳುವನು.

ಶಿವಾಗಮ ಮತ್ತು ವಚನ ಸಾಹಿತ್ಯದಲ್ಲಿ ಪ್ರತಿಪಾದನೆಗೊಂಡ ಈ ಮಹೇಶಸ್ಥಲದ ಲಕ್ಷಣಗಳ ವಿವೇಚನೆ ಇಂತಿದೆ –

ಮಹೇಶಸ್ಥಲದ ಅರ್ಥ

"ಮಾಹೇಶ್ವರಸ್ಯ ಅಯಂ ಮಾಹೇಶ್ವರಃ" ಎಂಬ ಉತ್ಪತ್ತಿಯ ಮೇರೆಗೆ ಈ ಸ್ಥಲದ ಸಾಧಕನು ತಾನು ಆರಾಧಿಸುವ ಪರಶಿವನನ್ನು ತನ್ನ ಸಂಬಂಧಿ ಎಂದು ಭಾವಿಸಿಕೊಂಡು ತಾನು ಅವನಿಗೆ ಅತ್ಯಂತ ಸಮೀಪದವನೆಂಬ ನಿಷ್ಠಾ ಭಕ್ತಿಯನ್ನು ಹೊಂದಿ ಗುರುಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುವವನೇ ಮಹೇಶ್ವರ ಎಂದು ಕರೆಯಲ್ಪಡುತ್ತಾರೆ.

ಭಕ್ತಸ್ಥಲದಲ್ಲಿ ಪಡೆದ ಅನುಭವದ ಪರಿಪಾಕದಿಂದ ಶಿವಪೂಜೆಯ ಸಾರ್ಥಕ್ಯದ ಬಗ್ಗೆ ವಿಶ್ವಾಸ ಮತ್ತು ಇಷ್ಟಲಿಂಗನಿಷ್ಠೆ ಬೆಳೆದು ಎಲ್ಲಾ ರೀತಿಯ ವಿಕಲ್ಪಗಳಿಂದ ದೂರವಾದಾಗ ಮನಸ್ಸು ಪರಿಶುದ್ಧವಾಗುತ್ತದೆ. ಭಕ್ತಸ್ಥಲದಲ್ಲಿನ ಸದ್ಭಕ್ತಿ(ಶ್ರದ್ಧಾಭಕ್ತಿ)ಯು ಬೆಳೆದು ನಿಷ್ಠಾಭಕ್ತಿಯಾಗಿ ಪರಿಣಮಿಸಿದಾಗ ಮಾಹೇಶ್ವರ ಸ್ಥಲ. ಅದೇ ಮಾಹೇಶ್ವರ ಸ್ಥಲದ ವೈಶಿಷ್ಟ್ಯ.

ಮಾಹೇಶ್ವರಸ್ಥಲದ ಲಕ್ಷಣ

ಯೋ ಗುರೂಕ್ತೇನ ಮಾರ್ಗೇಣ ಲಿಂಗಪೂಜಾರತಃ ಸದಾ।
ಜಂಗಮಾನರ್ಚಯೇಚ್ಛಕ್ತ್ಯಾ ಸ ಹಿ ಮಾಹೇಶ್ವರ ಸ್ಮೃತಃ ॥
ತ್ರಿಕಾಲಮರ್ಚಯೇಲ್ಲಿಂಗಂ ಮಮ ಭಕ್ತೇಷು ಭಕ್ತಿಮ್ಮಾನ್।
ಸ್ವಮತಾಚಾರನಿರತಃ ಸ ವೈ ಮಾಹೇಶ್ವರಃ ಪ್ರಿಯೇ ॥[1]

'ಯಾರು ಗುರುವಿನಿಂದ ಉಪದೇಶಿಸಲ್ಪಟ್ಟ ಮಾರ್ಗದಂತೆ ಲಿಂಗಪೂಜೆಯಲ್ಲಿ ಸದಾ ನಿರತನಾಗಿರುವನೋ, ಶಕ್ತಿಗನುಗುಣವಾಗಿ ಜಂಗಮನನ್ನು ಅರ್ಚಿಸುವನೋ ಅವನು ಮಾಹೇಶ್ವರನು. ಯಾರು ನನ್ನ ಭಕ್ತರಲ್ಲಿ ಭಕ್ತಿಯುಳ್ಳವನಾಗಿ ಮೂರು ಕಾಲಗಳಲ್ಲಿ ಲಿಂಗವನ್ನು ಪೂಜಿಸುವನೋ ತನ್ನ ಮತಾಚರಣೆಯಲ್ಲಿ ನಿರತನೋ ಅವನೇ ಮಾಹೇಶ್ವರನು.' ಎಂದು ಆಗಮದಲ್ಲಿ ಪರಶಿವನು ಮಾಹೇಶ್ವರ ಸ್ಥಲದ ಲಕ್ಷಣಗಳನ್ನು ವಿವರಿಸಿದ್ದಾನೆ.

---

೧. ಪಾ.ಆ. ಪಟಲ ೬, ಶ್ಲೋಕ ಸಂಖ್ಯೆ ೧೩–೧೪

ವೀರಶೈವನಾದವನು ಲಿಂಗದಲ್ಲಿಯೇ ಪರಮನಿಷ್ಠೆಯನ್ನಿರಿಸಿ ಬದುಕಬೇಕು. ನಮ್ಮೆಲ್ಲ ಇಷ್ಟಾರ್ಥಗಳನ್ನು ಈಡೇರಿಸುವ ಸಾಮರ್ಥ್ಯ ಇಷ್ಟಲಿಂಗದಲ್ಲಿ ನೆಲೆಸಿದೆ. ಇಂತಹ ಇಷ್ಟಲಿಂಗವನ್ನು ಬದಿಗಿರಿಸಿ ವಿವಿಧ ದೇವರ ಬೀದಿ ಬೀದಿ ತಿರುಗುವವರನ್ನು ಕಂಡು ಅಂಬಿಗರ ಚೌಡಯ್ಯನವರು–

> "ಕಟ್ಟಿದ ಲಿಂಗವ ಕಿರಿದು ಮಾಡಿ
> ಬೆಟ್ಟದ ಲಿಂಗವ ಹಿರಿದು ಮಾಡುವ ಪರಿಯ ನೋಡ!
> ಇಂತಪ್ಪ ಲೊಟ್ಟಿಮೂಳರ ಕಂಡರೆ
> ಗಟ್ಟಿವುಳ್ಳ ಪಾದರಕ್ಷೆಯ ತೆಗೆದುಕೊಂಡು
> ಲೊಟಲೊಟನೆ ಹೊಡೆಯೆಂದ್ದಾತ
> ನಮ್ಮ ಅಂಬಿಗರ ಚೌಡಯ್ಯ.[೨]

ಇಂತಹ ಕಟ್ಟು ನಿಟ್ಟಿನ ನಿಲುವು ನೆಲೆಗೊಂಡ ಭಕ್ತ ಮಾಹೇಶ್ವರನಾಗುತ್ತಾನೆ. ಯಾವುದೇ ದೇವರ ಬಗ್ಗೆಯಾಗಲಿ ಹೃದಯದಲ್ಲಿ ಪರಮನಿಷ್ಠೆ ಒಡಮೂಡಬೇಕಾದರೆ ಆ ದೇವರೇ ಪರಮೋತ್ಕೃಷ್ಟ ಮತ್ತು ಸರ್ವಶಕ್ತಿಮಾನ್ ಆಗಿರುವನೆಂಬ ಭಾವ ಇರಬೇಕಾಗುತ್ತದೆ. ಕಾರಣ ಮಾಹೇಶ್ವರಸ್ಥಲದ ಸಾಧಕನಲ್ಲಿ ಶಿವನೇ ಸರ್ವೋತ್ತಮ ಮತ್ತು ಸರ್ವಶಕ್ತಿಯುಕ್ತನೆಂಬ ಮತ್ತು ಶಿವಸ್ವರೂಪರಾದ ಗುರು–ಲಿಂಗ–ಜಂಗಮರೇ ಈ ಭೂಮಿಯಲ್ಲಿ ಪರಮಪೂಜ್ಯರು ಎಂಬ ನಂಬಿಗೆ ಇಂಬುಗೊಂಡಿರುತ್ತದೆ. ಈ ನಂಬಿಗೆಯೇ ಅವನ ನಿಶ್ಚಲ ನಿಷ್ಠೆಯ ನಿಲುವಿಗೆ ಕಾರಣ.

> ಜಲತತ್ತ್ವಮಿದಂ ದೇವಿ ತನುರನ್ಯತಮಾ ಮಮ।[೩]

ಎಂಬ ಪಾರಮೇಶ್ವರಾಗಮದ ಉಕ್ತಿಯಂತೆ ಮಾಹೇಶ್ವರ ಸ್ಥಲವು ಜಲತತ್ತ್ವವಾಗಿದೆ. ಜಲಾಂಗನಾದ ಮಾಹೇಶ್ವರನು ಜಲತತ್ತ್ವದಂತೆ ಪರಿಶುದ್ಧತೆಯನ್ನು ಮತ್ತು ಸಚ್ಚಾರಿತ್ರ್ಯವನ್ನು ತನ್ನದನ್ನಾಗಿಸಿಕೊಳ್ಳುವನು. ಇಲ್ಲಿ ಸದಾಚಾರ–ಸುವಿಚಾರಗಳು ಪ್ರಾಮುಖ್ಯವಾಗುವವು. ಕಾರಣ ಆಗಮಗಳು "ತಚ್ಚಿತ್ತಮಮಲಂ ಯಸ್ಯ ಸ ವೈ ಮಾಹೇಶ್ವರಃ ಸ್ಮೃತಃ"[೪] ಎಂದು ಮಾಹೇಶ್ವರನ ಲಕ್ಷಣವನ್ನು ವಿವರಿಸಿವೆ. ಯಾರ ಚಿತ್ತವು ನಿರ್ಮಲವಾಗಿದೆಯೊ ಅವನು ಮಾಹೇಶ್ವರ ಎಂದು ವ್ಯಾಖ್ಯಾನಿಸಿವೆ.

ಜಲದಂತೆ ಜಲಾಂಗನಾದ ಮಾಹೇಶ್ವರನು ಪರಿಶುದ್ಧನಾಗಬೇಕಾಗುವುದು. ಅದಕ್ಕಾಗಿಯೇ ಪರಸ್ತ್ರೀಯರ ವ್ಯಾಮೋಹವನ್ನು ಬಿಡಬೇಕು. ಪರನಿಂದೆಯನ್ನು ಮಾಡುವುದನ್ನು ತೊರೆಯಬೇಕು. ನಿಂದೆ ಎಲ್ಲ ಪಾಪಗಳಿಗಿಂತ ಮಿಗಿಲಾದುದು. ಪ್ರಾಣಿಗಳಿಗೆ ಹಿಂಸೆ ಮಾಡಬಾರದು. ತನ್ನದಲ್ಲದ ಅನ್ಯರ ದ್ರವ್ಯವನ್ನು ಬಯಸಬಾರದು ಎಂದು ಆಗಮಗಳು ಪ್ರತಿಪಾದಿಸುತ್ತ–

> "ಪರಸ್ತ್ರಿಯಂ ಪರಾರ್ಥಂ ಚ ವರ್ಜಿತ್ವಾಭವ ಶುದ್ಧಿಮಾನ್ ।

---

೨. ಸಮಗ್ರ ವಚನ ಸಂಪುಟ ೬, ಸಂಕೀರ್ಣ ವ.ಸಂ.೧, ವಚನ.ಸಂ ೯೩. ಪುಟ ೩೨
೩. ಪಾ.ಆ. ಪಟಲ ೬, ಶ್ಲೋಕ ಸಂಖ್ಯೆ ೧೫
೪. ಸೂ.ಆ. ಪಟಲ ೮, ಶ್ಲೋಕ ಸಂಖ್ಯೆ ೩೪

ಲಿಂಗನಿಷ್ಠಾನಿಯುಕ್ತಾ ಚ ಮಾಹೇಶ್ವರಸ್ಥಲಮುತ್ತಮಂ ॥"[೫]

ಎಂದು ಪರಸ್ತ್ರೀ ಪರಧನದಾಸೆಯ ಬಿಟ್ಟು, ಶುದ್ಧನಾಗಿ, ಲಿಂಗನಿಷ್ಠೆಯುಳ್ಳವ ನಾಗಿರುವದೇ ಮಾಹೇಶ್ವರಸ್ಥಲ ಎಂದು ವಿಶ್ಲೇಷಿಸಿದೆ. ಆಗಮದ ಈ ನಿರೂಪಣೆಯನ್ನೇ ತೋಂಟದ ಸಿದ್ಧಲಿಂಗಯತಿಗಳೂ ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ.

ಅನೃತ, ಅನಾಚಾರ, ಅನ್ಯಹಿಂಸೆ
ಪರಧನ, ಪರಸ್ತ್ರೀ, ಪರನಿಂದ್ಯವ ಬಿಟ್ಟು,
ಲಿಂಗನಿಷ್ಠೆಯಿಂದ ಶುದ್ಧಾತ್ಮನಾಗಿರಬಲ್ಲರೆ,
ಮಾಹೇಶ್ವರಸ್ಥಲವಿದೆಂಬೆನಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ[೬]

ಎಂದು ಆರು ಪಾತಕಗಳನ್ನು ತ್ಯಜಿಸಲು ಹೇಳಿದ್ದಾರೆ. ಮಹಾಜ್ಞಾನಿ ಚೆನ್ನಬಸವಣ್ಣನವರು–

ಪರಧನ, ಪರಸತಿ, ಪರವಾರ್ತೆಯ ತೊರೆಯದನ್ನಕ್ಕರ
ಎಂತು ಮಾಹೇಶ್ವರನಪ್ಪನಯ್ಯಾ?
ಲಿಂಗಪೂಜೆಯಲ್ಲಿ ಲೀಯವಾಗಿ, ಅಂಗಗುಣವಿರೋಧಿಯಾಗದನ್ನಕ್ಕ
ಎಂತು ಮಾಹೇಶ್ವರನಪ್ಪನಯ್ಯಾ ?
ಗುರುಪ್ರಸಾದದಲ್ಲಿ ನಿಹಿತಾವಧಾನಿಯಾಗದನ್ನಕ್ಕ
ಎಂತು ಮಾಹೇಶ್ವರನಪ್ಪನಯ್ಯಾ? ಕೂಡಲಚೆನ್ನಸಂಗಯ್ಯನಲ್ಲಿ
ಮಾಹೇಶ್ವರನೆನಿಸಿಕೊಂಬುದು ಸಾಮಾನ್ಯವೆ ಅಯ್ಯಾ?[೭]

ಎಂದು ಮಾಹೇಶ್ವರಸ್ಥಲವನ್ನು ಪ್ರವೇಶಿಸುವ ಬಗೆಯನ್ನು ತಿಳಿಯುವಂತೆ ಬಿತ್ತರಿಸಿದ್ದಾರೆ. ಪರಧನ, ಪರಸತಿಯರನ್ನು ತೊರೆದಂತೆ ಪರಚಿಂತೆಯನ್ನೂ ಸಹ ಬಿಡಬೇಕು. ಲಿಂಗಪೂಜೆಯಲ್ಲಿ ತಲ್ಲೀನನಾಗಿ ಅಂಗ ಗುಣಗಳನ್ನು ನಾಶಗೊಳಿಸಿಕೊಳ್ಳಬೇಕು. ಮಾಹೇಶ್ವರನಾದವನು ಗುರು ಜಂಗಮ ಪ್ರಸಾದದಲ್ಲಿ ನಿಷ್ಠನಾಗಿ ಎಚ್ಚರವುಳ್ಳವ ನಾಗಬೇಕಾಗುವದು ಎಂದು ಆಗಮ ಅಭಿಪ್ರಾಯವನ್ನು ಮನ್ನಿಸಿದ್ದಾರೆ.

ಮಾಹೇಶ್ವರಸ್ಥಲದ ಆಂತರಿಕಪೂಜಾಕ್ರಮ

ಮಾಹೇಶ್ವರಸ್ಥಲೇ ಜ್ಞಾನಶಕ್ತಿಕೇ ರಸನಾಂಗಗೇ।
ಗುರುಲಿಂಗಭಿಧೇ ವಾಮದೇವವಕ್ತ್ರೇ ವಿಶೇಷತಃ।
ಬುದ್ಧಿಹಸ್ತೇನ ತು ರುಚಿಂ ನಿಷ್ಠಾಭಕ್ತ್ಯಾ ಸಮರ್ಪಯೇತ್[೮]

ಮಾಹೇಶ್ವರ ಸ್ಥಲದಲ್ಲಿ ಜ್ಞಾನಶಕ್ತಿಯಿಂದ ಕೂಡಿದ ವಾಮದೇವ ಮುಖ ಸ್ವರೂಪದ ಗುರುಲಿಂಗಕ್ಕೆ ನಿಷ್ಠಾಭಕ್ತಿಯಿಂದ ಸುಬುದ್ಧಿಯೆಂಬ ಹಸ್ತದಿಂದ 'ಮಃ'ಕಾರವನ್ನು

೫. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ.ಸಂ ೩೬೬. ಪುಟ ೧೬೬
೬ ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ.೬, ವಚನ.ಸಂ ೨೬೪. ಪುಟ ೧೨೮
೭. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವ. ಸಂ. ೧೩೩೪. ಪುಟ ೪೭೧
೮. ಕಾ.ಆ. ಪಟಲ ೭, ಶ್ಲೋಕ ಸಂಖ್ಯೆ ೬೧

ಉಚ್ಚರಿಸುತ್ತಾ ರುಚಿ (ರಸ) ಪದಾರ್ಥವನ್ನು ನಾಲಿಗೆಯ ಮೂಲಕ ಸಮರ್ಪಿಸಬೇಕು. ಮಾಹೇಶ್ವರ ಸ್ಥಲಕ್ಕೆ ಜಲವೇ ಪ್ರಧಾನ ಅಂಗ. ನೀರು ಪರಿಶುದ್ಧವಾದುದು. ಜೀವನಾಧಾರ ಹೇತುವಾದುದು. ತಾನು ಪವಿತ್ರವಾಗಿದ್ದಲ್ಲದೇ ತನ್ನ ಸಮೀಪಕ್ಕೆ ಬಂದವುಗಳನ್ನು ಪರಿಶುದ್ಧಗೊಳಿಸುವ ಶಕ್ತಿ ನೀರಿಗಿದೆ. ನಿರ್ಮಲತೆಯನ್ನು ಕಾಯ್ದುಕೊಳ್ಳುವಲ್ಲಿ ಸುಬುದ್ಧಿ ಅತ್ಯಾವಶ್ಯಕ. ಸದ್ಬುದ್ಧಿಯುಳ್ಳ ವ್ಯಕ್ತಿ ತಾನು ಪವಿತ್ರನಾಗಿರುವ ಜೊತೆಗೆ ತನ್ನ ಪರಿಸರದವರನ್ನೂ ಪಾವನಗೊಳಿಸುತ್ತಾನೆ. ಸುಬುದ್ಧಿ ಹಸ್ತಕ್ಕೆ ಕರ್ತೃತ್ವ ಕಲೆಯು ಕರಗತವಾದರೆ ಮಾಡುವ ಕಾರ್ಯ ಹಸನಾಗುತ್ತದೆ. ಅರ್ಥಾತ್ ಅದು ಸಕಲ ಲೇಸಿಗೆ ಕಾರಣವಾಗುತ್ತದೆ. ಸುಬುದ್ಧಿಯುಳ್ಳ ವ್ಯಕ್ತಿಯಲ್ಲಿ ಕರ್ತೃತ್ವವು ಜಾಗ್ರತವಾದರೆ ಸ್ವಾರ್ಥ ಮನೆಮಾಡುವುದಿಲ್ಲ. ಸುಬುದ್ಧಿಯಿಂದ ಮಾಡಲ್ಪಡುವ ಕಾರ್ಯವೆ ಧಾರ್ಮಿಕ ಕಾರ್ಯ. ಅದು ಅವನ ಧರ್ಮವೆನಿಸುತ್ತದೆ. ಕರ್ತೃತ್ವದೊಂದಿಗೆ ಜ್ಞಾನ ಶಕ್ತಿಯು ಸಮ್ಮಿಲಿತವಾದರೆ ಆತನ ಪ್ರತಿಭೆಯು ಪ್ರಖರವೆನಿಸುತ್ತದೆ. ಕರ್ತೃತ್ವ ಹಾಗೂ ಜ್ಞಾನ ಶಕ್ತಿಯ ಸಮ್ಮಿಲನದಲ್ಲಿ ಪ್ರತಿಷ್ಠಾ ಕಲಾಭರಿತವಾದ ಗುರುಲಿಂಗವು ಮೈದೋರುತ್ತದೆ. ಮಾಹೇಶ್ವರನು ಇಂಥ ಗುರುಲಿಂಗವನ್ನು ಆರಾಧಿಸುತ್ತಾನೆ. ಕರ್ತೃತ್ವತನದಲ್ಲಿ ಜ್ಞಾನಶಕ್ತಿ ಮೈಗೂಡಿದಾಗ ಅರಿವೆ ಗುರುವೆನಿಸುತ್ತದೆ.

ಜಲಾಂಗನಾದ ಮಹೇಶ್ವರನು ನಿಷ್ಠಾಭಕ್ತಿಯುಕ್ತನಾಗಿ ಜ್ಞಾನಶಕ್ತಿಯೊಡಗೂಡಿದ ಗುರುಲಿಂಗವನ್ನು ಪೂಜಿಸುವನು. ಇದರಿಂದ ಅವನ ಬುದ್ಧಿ ಸುಬುದ್ಧಿಯಾಗುತ್ತದೆ. ಸುಬುದ್ಧಿಯೆಂಬ ಹಸ್ತದಿಂದ ಮಹೇಶ್ವರನು ರಸಪದಾರ್ಥವನ್ನು ಗ್ರಹಿಸಿ ಜಿಹ್ವಾ ಮುಖದಲ್ಲಿ ಗುರುಲಿಂಗಕ್ಕೆ ಅರ್ಪಿಸುವನು. ಇಲ್ಲಿ ರಸ ಪದಾರ್ಥ ಪ್ರಸಾದವಾಗುತ್ತದೆ.

ಭಕ್ತಸ್ಥಲದಲ್ಲಿ ಭಕ್ತ ಎಂದು ಕರೆಯಲ್ಪಡುವ ಸಾಧಕನಿಗೆ ತನ್ನ ಇಷ್ಟಲಿಂಗಾದಿಗಳಲ್ಲಿರುವ ಶ್ರದ್ಧೆಯು ಸಲಿಲಮುಕ್ತಾ (ನೀರು ಮತ್ತು ಮುತ್ತಿನ) ನ್ಯಾಯದಂತೆ ಅರ್ಥಾತ್ ಸ್ವಾತಿಮಳೆಯ ನೀರು ಸಾಗರದಲ್ಲಿರುವ ಚಿಪ್ಪಿನಲ್ಲಿ ಬಿದ್ದಾಗ ಅದು ಘನೀಭೂತವಾಗಿ ಹೇಗೆ ಮುತ್ತಾಗುತ್ತದೆಯೋ ಹಾಗೆಯೇ ಶ್ರದ್ಧಾಭಕ್ತಿಯು ದೃಢೀಭೂತವಾಗಿ ಯಾವಾಗ ನಿಷ್ಠಾರೂಪವನ್ನು ಪಡೆಯುತ್ತದೆಯೋ ಆಗ ಆ ಭಕ್ತನೇ 'ಮಾಹೇಶ್ವರ' ಎಂದು ಕರೆಯಲ್ಪಡುತ್ತಾನೆ. ಈ ಸಾಧಕನು ಭಕ್ತಿಯ ಸಮುತ್ಕರ್ಷ ಮತ್ತು ದೃಢವೈರಾಗ್ಯದಿಂದ ಮಹೇಶ್ವರ(ಶಿವ)ನಲ್ಲಿ ಹೆಚ್ಚು ನಿಷ್ಠಾಸಂಪನ್ನ ನಾಗುತ್ತಾನಾದ್ದರಿಂದ ಮಾಹೇಶ್ವರ ಎಂದು ಕರೆಯಲ್ಪಡುತ್ತಾನೆ.

ಮಾಹೇಶ್ವರಸ್ಥಲದ ಯೌಗಿಕ ವಿಕಾಸ

ಮಾಹೇಶ್ವರನು ನಿಷ್ಠಾಭಕ್ತಿಯಿಂದ ಕೂಡಿಕೊಂಡವನಾಗಿ ಗುರುಲಿಂಗದ ಅನುಸಂಧಾನ ಮಾಡುತ್ತಾನೆ. ಸ್ವಾಧಿಷ್ಠಾನಚಕ್ರದಲ್ಲಿ ಶಿವಯೋಗ ಸಾಧಕನಿಗೆ ಗೋಚರಿಸುವ ಜ್ಯೋತಿಯನ್ನೇ ವೀರಶೈವ ದರ್ಶನದಲ್ಲಿ ಗುರುಲಿಂಗವೆಂದು ಹೆಸರಿಸಲಾಗಿದೆ. ವೀರಶೈವ ಷಟ್‌ಸ್ಥಲ ಸಾಧಕನು ಸ್ನಾನಮಾಡಿ ಶುಚಿರ್ಭೂತನಾಗಿ ನಿರ್ಮಲವಾದ ಸ್ಥಾನದಲ್ಲಿ ಪೂರ್ವ ಇಲ್ಲವೆ ಉತ್ತರ ದಿಕ್ಕಿಗೆ ಮುಖ ಮಾಡಿ ಪೂಜೆಗೆ ಯೋಗ್ಯವಾದ ಆಸನದ ಮೇಲೆ ಶಾಸ್ತ್ರಸಮ್ಮತವಾದ ಆಸನ (ಪದ್ಮಾಸನ,

ಸ್ವಸ್ತಿಕಾಸನ, ಸಿದ್ಧಾಸನ ಅಥವಾ ಸುಖಾಸನ)ದಲ್ಲಿ ಕುಳಿತು ನಾಡೀಶುದ್ಧಿ ಪ್ರಾಣಾಯಾಮಾದಿಗಳನ್ನು ಮಾಡಿ ತನ್ನ ಇಷ್ಟಲಿಂಗದಲ್ಲಿ ನೆಟ್ಟ ದೃಷ್ಟಿಯುಳ್ಳವನಾಗಿ ನಿರ್ನಿಮೇಷ ದೃಷ್ಟಿಯಿಂದ (ಕಣ್ಣು ಪಿಳಕಿಸದೆ) ಅದನ್ನು ನಿರೀಕ್ಷಿಸಬೇಕು ಜೊತೆಗೆ "ಆಲಿ ನಿಂದೊಡೆ ಸುಳಿದು ಸೂಸುವ ಗಾಳಿ ನಿಲುವುದು ಗಾಳಿ ನಿಲುವೊಡೆ ಮನ ಮೇಲೆ ನಿಲುವುದು" ಎಂಬ ಉಕ್ತಿಯಂತೆ ದೃಷ್ಟಿಯಲ್ಲಿ ಏಕಾಗ್ರತೆಯೊಡಗೂಡಿದಾಕ್ಷಣವೆ ನಮ್ಮ ಪ್ರಾಣವಾಯುವಿನ ಮೇಲೆ ಹಿಡಿತ ಸಾಧಿಸುವುದು. ತನ್ನ ಹತೋಟಿಯಲ್ಲಿ ಬಂದ ಪ್ರಾಣವಾಯುವನ್ನು ಮೂಲಾಧಾರದಲ್ಲಿರುವ ಅಪಾನವಾಯುವಿನ ಜೊತೆಗೆ ಸಂಘಟನೆಗೊಳಿಸುವುದರಿಂದ ಅಲ್ಲಿ ಜ್ಯೋತಿ ಉತ್ಪನ್ನವಾಗುವುದು. ಈ ಜ್ಯೋತಿಯನ್ನು ವೀರಶೈವ ಶಿವಯೋಗಿಗಳು ಆಚಾರಲಿಂಗವೆಂದು ಕರೆಯುವರು ಈ ಜ್ಯೋತಿಯನ್ನು ಅನುಸಂಧಾನ ಮಾಡುವ ಭಕ್ತಸ್ಥಲದ ಸಾಧಕ ತನ್ನ ಯೌಗಿಕ ಸಾಧನೆಯಲ್ಲಿ ಪ್ರಗತಿಯನ್ನು ಸಾಧಿಸಿ, ಆ ಜ್ಯೋತಿಯನ್ನು ಊರ್ಧ್ವಮುಖಗೊಳಿಸಿ ಸುಷುಮ್ನಾ ಮಾರ್ಗವಾಗಿ ಅದನ್ನು ಮೇಲೆ ತರುವನು. ಅದು ಮೇಲ್ಮುಖವಾಗಿ ಬಂಧು ಗುಹ್ಯದಲ್ಲಿರುವ ಸ್ವಾಧಿಷ್ಠಾನ ಚಕ್ರದಲ್ಲಿ ನಿಲ್ಲುವುದು. ಈ ಜ್ಯೋತಿಯನ್ನು ವೀರಶೈವ ಯೌಗಿಕ ಪರಿಭಾಷೆಯಲ್ಲಿ ಗುರುಲಿಂಗವೆಂದು ಕರೆಯಲಾಗಿದೆ. ಮಾಹೇಶ್ವರ ಸ್ಥಲದ ಸಾಧಕ ಸ್ವಾಧಿಷ್ಠಾನ ಚಕ್ರದಲ್ಲಿ ನೆಲೆನಿಂತ ಜ್ಯೋತಿರೂಪವಾದ ಈ ಗುರುಲಿಂಗವನ್ನು ಅನುಸಂಧಾನ ಮಾಡುವನು. ಇದು ಮಾಹೇಶ್ವರ ಸ್ಥಲದ ಆಂತರಿಕ ಯೌಗಿಕ ವಿಕಾಸ. ಜಲತತ್ವದಿಂದಾಗುವ ರಸ, ರಕ್ತ, ಮೂತ್ರ, ಸ್ವೇದ ಮತ್ತು ಶುಕ್ಲಗಳು ಮಾಹೇಶ್ವರ ಸ್ಥಲದಲ್ಲಿ ಶುದ್ಧವಾಗುತ್ತದೆ.

ಒಟ್ಟಿನಲ್ಲಿ ಮಾಹೇಶ್ವರ ಸ್ಥಲವನ್ನು ಆಗಮ ಮತ್ತು ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಅವಲೋಕಿಸಲಾಗಿ ಶಿವಾಗಮಗಳಲ್ಲಿ ಮಾಹೇಶ್ವರ ಸ್ಥಲದ ಅರ್ಥ, ಸ್ವರೂಪ, ಲಕ್ಷಣ, ಆಂತರಿಕ ಪೂಜಾಕ್ರಮ ನಿರೂಪಿತವಾಗಿದ್ದು, ಲಿಂಗದಲ್ಲಿಯೇ ಪರಮನಿಷ್ಠೆಯನ್ನಿರಿಸಿ ಶಿವಸ್ವರೂಪರಾದ ಗುರು–ಲಿಂಗ–ಜಂಗಮರೇ ಈ ಭೂಮಿಯಲ್ಲಿ ಪರಮಪೂಜ್ಯರು ಎಂಬ ನಿಶ್ಚಲ ನಂಬಿಗೆಯು ಇಂಬುಗೊಂಡ ಸ್ಥಲವೇ ಮಾಹೇಶ್ವರ ಸ್ಥಲ. ಇಲ್ಲಿ ಸದಾಚಾರ–ಸುವಿಚಾರಗಳು ಪ್ರಾಮುಖ್ಯವಾಗುವವು. ಕಾರಣ ಆಗಮಗಳು "ತಚ್ಚಿತ್ತ ಮಮಲಂ ಯಸ್ಯ ಸ ವೈ ಮಾಹೇಶ್ವರಃ ಸ್ಮೃತಃ" ಎಂದು ಯಾರ ಚಿತ್ತವು ನಿರ್ಮಲ ವಾಗಿದೆಯೊ ಅವನು ಮಾಹೇಶ್ವರ ಎಂದು ವ್ಯಾಖ್ಯಾನಿಸಿವೆ. ಅಲ್ಲದೆ ಜಲದಂತೆ ಜಲಾಂಗನಾದ ಮಾಹೇಶ್ವರನು ಪರಿಶುದ್ಧನಾಗಬೇಕಾಗುವುದು, ತನ್ನದಲ್ಲದ ಅನ್ಯರ ದ್ರವ್ಯವನ್ನು ಬಯಸಬಾರದು. ಪರಧನ, ಪರಸತಿಯರನ್ನು ತೊರೆದಂತೆ ಪರಚಿಂತೆಯನ್ನೂ ಸಹ ಬಿಡಬೇಕು. ಲಿಂಗಪೂಜೆಯಲ್ಲಿ ತಲ್ಲೀನನಾಗಿ ಅಂಗ ಗುಣಗಳನ್ನು ನಾಶಗೊಳಿಸಿ ಕೊಳ್ಳಬೇಕು. ಮಾಹೇಶ್ವರನಾದವನು ಗುರು ಜಂಗಮ ಪ್ರಸಾದದಲ್ಲಿ ನಿಷ್ಠನಾಗಿ ಎಚ್ಚರವುಳ್ಳವನಾಗಬೇಕಾಗುವದು ಎಂದು ವಿವರಿಸಿವೆ. ಈ ನಿರೂಪಣೆಯನ್ನೇ ವಚನಕಾರರು ತಮ್ಮ ಅನುಭಾವದ ನೆಲೆಯಲ್ಲಿ ಕಂಡು ತಮ್ಮ ವಚನಗಳಲ್ಲಿ ಪ್ರತಿಪಾದಿಸಿದ್ದಾರೆ.

೫.೩.೫ ಪ್ರಸಾದಿಸ್ಥಲ

ಶಿವನಲ್ಲಿ ಅತ್ಯಂತ ನಿಷ್ಠೆಯುಳ್ಳವನಾಗಿ ಅವನಿಗೆ ಸಮರ್ಪಿಸಿದ ಅನ್ನವನ್ನೇ ಸೇವಿಸುತ್ತಾ ಶಿವಕೃಪೆಗೆ ಪಾತ್ರನಾಗಿ ಅವನ ಅನುಗ್ರಹದ ಬಲದಿಂದ ಮಾನಸಿಕ ಪ್ರಸನ್ನತೆಯನ್ನು ಪಡೆದ ಸಾಧಕನಿಗೆ 'ಪ್ರಸಾದಿ' ಎಂದು ಕರೆಯಲಾಗುವುದು.

ಪ್ರಸಾದಿ ಸ್ಥಲದ ಲಕ್ಷಣ

"ಲಿಂಗಾರ್ಪಿತಪದಾರ್ಥಂ ಚ ಸುಭೋಗಿ ಲಿಂಗಸಂಯುಕ್ತ ಃ ।
ಅನರ್ಪಿತಂ ವಿವರ್ಜಂ ಚ ಪ್ರಸಾದಿಸ್ಥಲಮುತ್ತಮಂ॥"[1]

ಲಿಂಗಪ್ರಸಾದವ ಲಿಂಗನೆನಹಿನಿಂದ ಭೋಗಿಸುವುದು, ಹಾಗೂ ಅನರ್ಪಿತವ ಬಿಡುವುದೇ ಪ್ರಸಾದಿಸ್ಥಲದ ಲಕ್ಷಣವೆಂದು ಸಕಲಾಗಮ ಶಿಖಾಮಣಿ ಬಾಲಸಂಗಯ್ಯನವರು ತಮ್ಮ ವಚನದಲ್ಲಿ ಆಗಮದ ಉಲ್ಲೇಖದೊಂದಿಗೆ ಪ್ರಸಾದಿ ಸ್ಥಲದ ಲಕ್ಷಣವನ್ನು ವಿವರಿಸಿದ್ದಾರೆ. ಪಾರಮೇಶ್ವರಾಗಮವು ಇದೇ ಲಕ್ಷಣವನ್ನು ಪ್ರತಿಪಾದಿಸುತ್ತಾ–

ಯೋಽನರ್ಪಿತಂ ಮಹೇಶಾನಿ ನಾರ್ಚಯಿತ್ವಾಪಿ ಜಂಗಮಾನ್।
ನಾಶ್ನಾತಿ ನ ತ್ಯಜೇನ್ಮಹ್ಯಮರ್ಪಿತಂ ಕೃಚ್ಛ್ರಗೋಽಪಿ ವಾ॥
ಸೋಽಯಂ ಪ್ರಸಾದೀ ಕಥಿತ: ಸೋಽಹಮೇವ ನ ಸಂಶಯಃ॥[2]

ಅರ್ಥಾತ್ ಗುರು–ಲಿಂಗ–ಜಂಗಮರ ಪೂಜೆಯನ್ನು ಮಾಡದೇ ಮತ್ತು ಭಗವಂತನಿಗೆ ನೈವೇದ್ಯ ತೋರಿಸದೆ (ಅರ್ಪಿಸದೆ) ಯಾರು ಊಟ ಮಾಡುವುದಿಲ್ಲವೋ ಹಾಗೂ ಭಗವಂತನಿಗೆ ಅರ್ಪಿಸಲ್ಪಟ್ಟ ಅನ್ನದಲ್ಲಿ (ಪ್ರಸಾದದಲ್ಲಿ) ಸ್ವಲ್ಪೂ ಸಹ ಬಿಡದೇ ಎಲ್ಲವನ್ನು ಸೇವಿಸುವವರೋ ಅವರು ಪ್ರಸಾದಿ ಎಂಬುದಾಗಿ ಪ್ರಸಾದಿಸ್ಥಲದ ಸಾಧಕನ ಆಚರಣೆಯನ್ನು ತಿಳಿಸಲಾಗಿದೆ. ಅಂದರೆ ಪ್ರಸಾದಿ ಸ್ಥಲದ ಸಾಧಕನು ತಾನು ಉಪಯೋಗಿಸಬೇಕಾದ ಎಲ್ಲ ವಸ್ತುವನ್ನೂ ಮೊದಲು ಲಿಂಗಕ್ಕೆ ಸಮರ್ಪಿಸಿ ನಂತರ ಲಿಂಗದ ಪ್ರಸಾದ ರೂಪದಲ್ಲಿ ಅದನ್ನು ಸೇವಿಸುವನು.

ವೀರಶೈವ ಧರ್ಮದ ಸಾಧನೆಯ ಪಥದಲ್ಲಿ ಸ್ತ್ರೀಪುರುಷರಿಗೆ ಸಮಾನವಾದ ಅಧಿಕಾರವುಂಟು. ಪುರುಷನಂತೆ ಸ್ತ್ರೀ ಕೂಡಾ ಷಟಸ್ಥಲ ಪಥದಲ್ಲಿ ಕ್ರಮಿಸಬಹುದು. ಭಕ್ತ ಮಾಹೇಶ್ವರ, ಪ್ರಸಾದಿ ಸ್ಥಲಕ್ಕೆ ಬಂದಾಗ ಮಹಿಳೆ ಸಹ ಶಿವಪ್ರಸಾದವನ್ನೇ ಸೇವಿಸಬೇಕಾಗುತ್ತದೆ.

ಷಟ್‌ಸ್ಥಲ ಪಥಕ್ಕನುಗುಣವಾಗಿ ಸಾಧನೆಯಲ್ಲಿ ತೊಡಗಿದ ಮಹಿಳೆಯು ಪ್ರಸಾದಿ ಸ್ಥಲಕ್ಕೆ ಬಂದಾಗ ಎದುರಾಗುವ ಕೆಲವು ತೊಡಕುಗಳನ್ನು ಮತ್ತು ಅವುಗಳಿಗೆ ಪರಿಹಾರವನ್ನು ಕಾರಣಾಗಮದ ಒಂಭತ್ತನೇ ಪಟಲದಲ್ಲಿ ಮನೋಜ್ಞವಾಗಿ

---

೧. ಸಮಗ್ರ ವ.ಸಂ. ೧೩, ಸಂಕೀರ್ಣ ವ.ಸಂ.೮. ವಚನ ಸಂಖ್ಯೆ ೩೬೭, ಪುಟ ೧೬೬
೨. ಪಾ.ಆ. ಪಟಲ ೬, ಶ್ಲೋಕ ಸಂಖ್ಯೆ ೧೭–೧೮

ನಿರೂಪಿಸಲಾಗಿದೆ. ಪಾರಮೇಶ್ವರಾಗಮದಲ್ಲಿ ಪ್ರಸಾದಿಸ್ಥಲದ ವಿವರಣೆಯನ್ನು ನೀಡುತ್ತ ಪ್ರಸಾದಿ ಸ್ಥಲದ ಸಾಧಕನು ಶಿವಲಿಂಗದ ಪ್ರಸಾದವನ್ನಲ್ಲದೇ ಬೇರೆನನ್ನೂ ಸ್ವೀಕರಿಸುವುದಿಲ್ಲ ಮತ್ತು ಪ್ರಸಾದವನ್ನು ಎಂದೂ ಬಿಡುವುದಿಲ್ಲ. ಇದು ಪ್ರಸಾದಿಸ್ಥಲದ ನಿಯಮ ಎಂದು ತಿಳಿಸಿದೆ. ಈ ಸ್ಥಲಕ್ಕೆ ಬಂದ ಮೇಲೆ ಮಹಿಳೆ ಕೂಡ ಈ ನಿಯಮವನ್ನು ಪಾಲಿಸಬೇಕಾಗುವುದು ಅನಿವಾರ್ಯ. ಅಂದರೆ ಪ್ರಸಾದಿ ಸ್ಥಲಕ್ಕೆ ಬಂದ ಮಹಿಳೆಯೂ ಸಹ ತಾನು ಸೇವಿಸುವ ಪ್ರತಿಯೊಂದು ಪದಾರ್ಥವನ್ನು ಇಷ್ಟಲಿಂಗಕ್ಕೆ ಸಮರ್ಪಿಸಿಯೇ ಸ್ವೀಕರಿಸಬೇಕು.

ಈ ಪ್ರಸಂಗದಲ್ಲಿ ಕಾರಣಾಗಮದಲ್ಲಿ ಪಾರ್ವತಿಯು ಪರಮೇಶ್ವರನನ್ನು ಕುರಿತು "ಧರ್ಮಶಾಸ್ತ್ರದಲ್ಲಿ ವಿವಾಹದ ನಂತರ ಮಹಿಳೆಯು ತನ್ನ ಪತಿವ್ರತಾ ಧರ್ಮಕ್ಕನುಸಾರವಾಗಿ ಪತಿಯು ಸೇವಿಸಿ ಬಿಟ್ಟ ಅನ್ನವನ್ನು (ಭರ್ತೃಶೇಷ) ಸ್ವೀಕರಿಸಲು ಹೇಳಲಾಗಿದೆ. ಪ್ರಸಾದಿಸ್ಥಲದ ಸಾಧಕಳಾದ ವಿವಾಹಿತ ಮಹಿಳೆಯೂ ಈ ನಿಯಮಕ್ಕೆ ಹೊರತಾದವಳಲ್ಲ. ಅವಳೂ ಸಹ ಭರ್ತೃಶೇಷವನ್ನು ಸ್ವೀಕರಿಸಬೇಕು. ಆದರೆ ಪ್ರಸಾದಿ ಸ್ಥಲದ ನಿಯಮಕ್ಕನುಸಾರವಾಗಿ ಲಿಂಗಕ್ಕೆ ಸಮರ್ಪಿಸದೇ ಏನನ್ನೂ ಸ್ವೀಕರಿಸಲಾಗದು ಎಂಬ ನಿಯಮವನ್ನೂ ಅವಳು ಪಾಲಿಸಬೇಕಾಗುತ್ತದೆ. ಹೀಗಾದಾಗ ಭರ್ತೃಶೇಷ (ಪತಿಯು ಸೇವಿಸಿ ಬಿಟ್ಟ ಅನ್ನ) ವನ್ನೂ ಲಿಂಗಕ್ಕೆ ಸಮರ್ಪಿಸದೇ ಸ್ವೀಕರಿಸಲು ಬರುವುದಿಲ್ಲ. ಅದು ಪತಿಯ ಎಂಜಲಾದರಿಂದ ಸಮರ್ಪಿಸುವುದೂ ಯೋಗ್ಯವಲ್ಲ. ಭರ್ತೃಶೇಷವನ್ನು ಸೇವಿಸುವುದನ್ನೇ ಬಿಟ್ಟರೆ ಅದು ಪತಿವ್ರತಾ ಧರ್ಮಕ್ಕೆ ಅಪಚಾರ. ಇನ್ನು ಸಮರ್ಪಿಸದೆ ಸ್ವೀಕರಿಸಿದರೆ ಅದು ಪ್ರಸಾದಿಸ್ಥಲದ ಸಾಧನೆಯ ನಿಯಮಕ್ಕೆ ಭಂಗ. ಪತಿಯಿಂದ ಉಚ್ಛಿಷ್ಟವಾದದ್ದನ್ನು ಲಿಂಗಕ್ಕೆ ಸಮರ್ಪಿಸುವುದೂ ಸೂಕ್ತವಲ್ಲ. ಹಾಗಾದರೆ ಏನು ಮಾಡಬೇಕು? ಎಂದು ಪಾರ್ವತಿ ಮಹಿಳೆಯರ ಪರವಾಗಿ ಪ್ರಶ್ನೆ ಮಾಡುತ್ತಾಳೆ. ಇದಕ್ಕೆ ಉತ್ತರವಾಗಿ ಪರಮಾತ್ಮನು –

ನಿವೇದನೇ ವಿಶೇಷೋಽಸ್ತಿ ವಕ್ಷ್ಯಾಮ್ಯವಹಿತಾ ಭವ।
ಲಿಂಗಭೋಗಸ್ವರೂಪಂ ಚಾನುಜ್ಞಾರೂಪಮಿತಿ ದ್ವಿಧಾ॥
ಭರ್ತೃಶೇಷಾದಿರೂಪಸ್ಯ ಪ್ರಸಾದಸ್ಯ ಗುರೋರ್ಮಮ।
ತೀರ್ಥಸ್ಯ ಚಾರ್ಪಣಂ ಪ್ರೋಕ್ತಮನುಜ್ಞಾರೂಪಮೇವ ಹಿ॥
ಇಷ್ಟಾನಿಷ್ಟಪ್ರಭೇದೇನ ದೇಹಿನಾಂ ಕರ್ಮಯೋಗತಃ।
ಲಭತೇ ಹ್ಯನಿಶಂ ಭೋಗಾಸ್ತೇಷು ತೇಷ್ವಪಿ ಮದ್ವ್ರತೀ॥
ಇಷ್ಟೇ ತು ಭೋಗರೂಪಂ ಚಾನ್ಯಜ್ಞಾರೂಪಮನಿಷ್ಟಕೇ।
ನಿವೇದನಂ ಪ್ರಕುರ್ವೀತ ಗ್ರಾಮ್ಯಧರ್ಮಾದಿಕೇ ತಥಾ॥[೩]

ಎಂದು ಉಪದೇಶಿಸಿರುವನು. ಅರ್ಥಾತ್ ಇಷ್ಟಲಿಂಗಕ್ಕೆ ತೋರಿಸುವ ನೈವೇದ್ಯವು ಎರಡು ಪ್ರಕಾರ – ೧) ಲಿಂಗ ಭೋಗರೂಪ ನೈವೇದ್ಯ,
೨) ಅನುಜ್ಞಾರೂಪ ನೈವೇದ್ಯ.

೩. ಕಾ.ಆ. ಪಟಲ ೯, ಶ್ಲೋಕ ಸಂಖ್ಯೆ ೧೨–೧೫

"ಭಗವಂತನೇ! ಈ ಪದಾರ್ಥಗಳನ್ನು ನೀನು ಸ್ವೀಕರಿಸಿ ನನ್ನನ್ನು ಅನುಗ್ರಹಿಸು" ಎಂಬ ಭಾವದಿಂದ ಲಿಂಗಕ್ಕೆ ಸಮರ್ಪಿಸುವುದು ಭೋಗರೂಪ ನೈವೇದ್ಯ.

"ಭಗವಂತನೇ! ಈ ಪದಾರ್ಥಗಳನ್ನು (ವಸ್ತುಗಳನ್ನು) ನಾನು ಸ್ವೀಕರಿಸಲಿರುವೆನು. ಅದಕ್ಕೆ ನಿನ್ನ ಅನುಗ್ರಹವಿರಲಿ ನನಗೆ ಈ ಪದಾರ್ಥಗಳನ್ನು ಸ್ವೀಕರಿಸಲು ಅಪ್ಪಣೆಯನ್ನು ದಯಪಾಲಿಸು" ಎಂಬ ಭಾವದಿಂದ ಲಿಂಗಕ್ಕೆ ಸಮರ್ಪಿಸುವುದು ಅನುಜ್ಞಾ ರೂಪ ನೈವೇದ್ಯ.

ವಿವಾಹಿತ ಮಹಿಳೆಯು ಪತಿವ್ರತಾ ಧರ್ಮಕ್ಕನುಗುಣವಾಗಿ ಪತಿಯ ಶೇಷಾನ್ನವನ್ನು ಸೇವಿಸುವ ಸಂದರ್ಭದಲ್ಲಿ ಇಷ್ಟಲಿಂಗಕ್ಕೆ ಅನುಜ್ಞಾರೂಪ ನೈವೇದ್ಯವನ್ನು ಸಮರ್ಪಿಸಿ ಸ್ವೀಕರಿಸಬೇಕು. ಮತ್ತು ನೇರವಾಗಿ ತಾಜಾ ಆಹಾರವನ್ನು ಸೇವಿಸುವ ಸಂದರ್ಭದಲ್ಲಿ ಲಿಂಗಭೋಗರೂಪ ನೈವೇದ್ಯವನ್ನು ಸಮರ್ಪಿಸಬೇಕು. ಇದರಿಂದ ಪತಿವ್ರತಾ ಧರ್ಮಕ್ಕೂ ಭಂಗ ಬರುವುದಿಲ್ಲ ಮತ್ತು ಪ್ರಸಾದಿಸ್ಥಲದ ಸಾಧನೆಯ ಆಚರಣೆಯೂ ಅಪಚಾರವಾಗುವುದಿಲ್ಲ ಎಂದು ಹೇಳಿ ಪ್ರಸಾದಿಸ್ಥಲದ ಆಚರಣೆಗೈಯುವಾಗ ಸ್ತ್ರೀಯರಿಗೆ ಉಂಟಾಗುವ ಸಮಸ್ಯೆಯನ್ನು ಅತ್ಯಂತ ಮನೋಜ್ಞವಾಗಿ ಪರಿಹರಿಸಲಾಗಿದೆ.

ಪ್ರಸಾದಿ ಸ್ಥಲದ ಸಾಧಕನು ಕೇವಲ ಉಣ್ಣುವ ಅನ್ನವನ್ನು ಮಾತ್ರ ಲಿಂಗಕ್ಕೆ ಸಮರ್ಪಿಸದೇ ಶಬ್ದ ಸ್ಪರ್ಶಾದಿ ಎಲ್ಲ ವಿಷಯಗಳನ್ನು ಲಿಂಗಕ್ಕೆ ಸಮರ್ಪಿಸಿ ಪ್ರಸಾದರೂಪದಲ್ಲಿ ಅನುಭವಿಸುತ್ತಾನೆ.

ದೃಷ್ಟಂ ಶ್ರುತಂ ಚ ಸಂಸ್ಪೃಷ್ಟಮಘ್ರಾತಂ ಸ್ವಾದಿತಂ ಕೃತಮ್।
ಸರ್ವಂ ಶಿವಾತ್ಮಕಂ ಧ್ಯಾಯೇದ್ .....[೪]

ನೋಡಿದ್ದು, ಕೇಳಿದ್ದು, ಮುಟ್ಟಿದ್ದು, ಮೂಸಿದ್ದು, ರುಚಿ ನೋಡಿದ್ದು, ಮಾಡಿದ್ದು ಎಲ್ಲವೂ ಶಿವಾತ್ಮಕವೆಂದು ಧ್ಯಾನ ಮಾಡಬೇಕೆಂದು ಆಗಮಗಳು ಪ್ರತಿಪಾದಿಸಿವೆ.

ವೀರಶೈವ ಧರ್ಮದಲ್ಲಿ ಪ್ರತಿಯೊಂದು ಇಂದ್ರಿಯಕ್ಕೂ ಒಂದೊಂದು ಲಿಂಗವನ್ನು ಸಂಯೋಜಿಸಿ ಆ ಲಿಂಗವು ಆ ಇಂದ್ರಿಯದ ಅಧಿಷ್ಠಾತೃ ದೇವತೆಯೆಂದು ಪರಿಗಣಿಸಲಾಗುತ್ತದೆ. ದೀಕ್ಷೆಯ ಸಂದರ್ಭದಲ್ಲಿ ಶ್ರೀ ಗುರುವು ಶಿಷ್ಯನ ದೇಹದ ಎಲ್ಲ ಇಂದ್ರಿಯಗಳಲ್ಲೂ ಲಿಂಗ ಸಂಯೋಜನೆ ಮಾಡುವ ಮೂಲಕವೇ ಅವನ ಮಾಂಸಮಯ ಶರೀರವನ್ನು ಮಂತ್ರಮಯವನ್ನಾಗಿ ಪರಿವರ್ತಿಸುತ್ತಾನೆ. ನಾಸಿಕದಲ್ಲಿ ಆಚಾರಲಿಂಗ, ಜಿಹ್ವೆಯಲ್ಲಿ ಗುರುಲಿಂಗ, ಚಕ್ಷುವಿನಲ್ಲಿ ಶಿವಲಿಂಗ, ಚರ್ಮದಲ್ಲಿ ಜಂಗಮಲಿಂಗ, ಕರ್ಣದಲ್ಲಿ ಪ್ರಸಾದಲಿಂಗ, ಮತ್ತು ಆತ್ಮದಲ್ಲಿ ಮಹಾಲಿಂಗವನ್ನು ಸಂಯೋಜಿಸಲಾಗಿರುತ್ತದೆ.

ಪ್ರಸಾದಿ ಸ್ಥಲದ ಸಾಧಕನು ಆಚಾರಲಿಂಗಕ್ಕೆ ಗಂಧವನ್ನು ಸಮರ್ಪಿಸಿ ಅದನ್ನು

---

೪. ಪಾ.ಆ. ಪಟಲ ೧೦, ಶ್ಲೋಕ ಸಂಖ್ಯೆ ೫೮

ಆಚಾರಲಿಂಗದ ಪ್ರಸಾದವನ್ನಾಗಿ, ಗುರುಲಿಂಗಕ್ಕೆ ರುಚಿ(ರಸ)ಯನ್ನು ಸಮರ್ಪಿಸಿ ಅದನ್ನು ಗುರುಲಿಂಗದ ಪ್ರಸಾದವನ್ನಾಗಿ, ಶಿವಲಿಂಗಕ್ಕೆ ರೂಪವನ್ನು ಸಮರ್ಪಿಸಿ ಅದನ್ನು ಶಿವಲಿಂಗದ ಪ್ರಸಾದವನ್ನಾಗಿ ಜಂಗಮಲಿಂಗಕ್ಕೆ ಸ್ಪರ್ಶವನ್ನು ಅರ್ಪಿಸಿ ಅದನ್ನು ಜಂಗಮಲಿಂಗದ ಪ್ರಸಾದವನ್ನಾಗಿ, ಪ್ರಸಾದಲಿಂಗಕ್ಕೆ ಶಬ್ದವನ್ನು ಸಮರ್ಪಿಸಿ ಅದನ್ನು ಪ್ರಸಾದಲಿಂಗದ ಪ್ರಸಾದವನ್ನಾಗಿ ಮತ್ತು ಮಹಾಲಿಂಗಕ್ಕೆ ತೃಪ್ತಿಯನ್ನು ಅರ್ಪಿಸಿ ಅದನ್ನು ಮಹಾಲಿಂಗದ ಪ್ರಸಾದವನ್ನಾಗಿ ಭಾವಿಸಿ ಆಯಾ ಇಂದ್ರಿಯಗಳ ಮೂಲಕ ಅದನ್ನು ಅನುಭವಿಸುತ್ತಾನೆ.

ಯಾವೊಂದು ವಿಷಯವನ್ನು ಉಪಭೋಗಿಸುವಾಗಲೂ ಇದು ಉತ್ತಮ, ಇದು ಕನಿಷ್ಠ ಎಂಬ ದ್ವಂದ್ವಭಾವವಿದ್ದು, ಮನಸ್ಸು ಉತ್ತಮವಾದುದನ್ನು ಆಶಿಸಿ ಅದರಲ್ಲಿ ಆಸಕ್ತಗೊಳ್ಳುತ್ತದೆ ಮತ್ತು ಕನಿಷ್ಠವಾದುದನ್ನು ದ್ವೇಷಿಸಿ ಅದನ್ನು ತಿರಸ್ಕರಿಸುತ್ತದೆ. ಆದರೆ ಅದೇ ವಿಷಯ ಪ್ರಸಾದವೆಂಬ ಭಾವ ಬಂದರೆ ಈ ಭೇದ ದೂರಾಗಿ ಪ್ರಸನ್ನತೆಯಿಂದ ಅದನ್ನು ಉಪಯೋಗಿಸಲು ಸಹಾಯಕವಾಗುತ್ತದೆ.

ಸುಸ್ವರ–ಅಪಸ್ವರ, ಇಂಪು–ಕರ್ಕಶ, ಸ್ತುತಿ–ನಿಂದೆ ಇವೆಲ್ಲ ಶಬ್ದದಲ್ಲಿ ತೋರುವ ಭೇದಗಳು, ಸುಸ್ವರ ಸಂಗೀತ, ಇಂಪು ಧ್ವನಿ ಹಾಗೂ ಸ್ತುತಿಪರ ಶಬ್ದಗಳನ್ನು ಕೇಳಲು ತವಕಿಸುವ ಮನಸ್ಸು ಅಪಸ್ವರ ಸಂಗೀತ, ಕರ್ಕಶ ಧ್ವನಿ ಮತ್ತು ನಿಂದೆಗಳು ಕಿವಿಯ ಸಮೀಪ ಬಂದರೆ ವ್ಯಗ್ರಗೊಳ್ಳುತ್ತದೆ ಮತ್ತು ಉದ್ವಿಗ್ನಗೊಳ್ಳುತ್ತದೆ. ಶಬ್ದ ವಿಷಯದಲ್ಲಿ ಮನುಷ್ಯನ ಮನಸ್ಸು ಕಲ್ಪಿಸಿಕೊಂಡ ತರತಮ ಭೇದ ಬುದ್ಧಿಯೇ ಇದಕ್ಕೆ ಕಾರಣ. ಆ ಶಬ್ದ ವಿಷಯವನ್ನು ಕರ್ಣದಲ್ಲಿ ಸಂಯೋಜಿಸಲಾದ ಪ್ರಸಾದ ಲಿಂಗಕ್ಕೆ ಸಮರ್ಪಿಸಿ ಇದು ಪ್ರಸಾದಲಿಂಗದ ಪ್ರಸಾದವೆಂಬ ಭಾವದಿಂದ ಕೇಳಿದಾಗ ಈ ಭೇದ ಬುದ್ಧಿ ದೂರಾಗುತ್ತದೆ. ಪ್ರಸಾದಿ ಸ್ಥಲದ ಸಾಧಕ ಹೀಗೆ ಶಬ್ದವನ್ನು ಪ್ರಸಾದಲಿಂಗದ ಪ್ರಸಾದವನ್ನಾಗಿ ಭಾವಿಸಿ ಕೇಳುವುದರಿಂದ ಅವನಲ್ಲಿ ಸ್ತುತಿ ಬಂದರೂ ಅದು ಶಿವ ಪ್ರಸಾದ, ನಿಂದೆ ಬಂದರೂ ಅದು ಶಿವಪ್ರಸಾದವೆಂಬ ಭಾವ ನೆಲೆಗೊಳ್ಳುತ್ತದೆ. ಇದರಿಂದ ಸ್ತುತಿ ಬಂದಾಗ ಹಿಗ್ಗುವಿಕೆ ಮತ್ತು ನಿಂದೆಗಳು ಬಂದಾಗ ಕುಗ್ಗುವಿಕೆ ಅವನಲ್ಲಿ ಘಟಿಸುವುದಿಲ್ಲ. ಅವನು ಎರಡನ್ನು ಸಹಜವಾಗಿ ಸ್ವೀಕರಿಸುವನು.

ಕಠೋರ–ಮೃದು ಇವು ಸ್ಪರ್ಶದಲ್ಲಿಯ ಭೇದಗಳು. ಕಠೋರ ಸ್ಪರ್ಶ ಚರ್ಮಕ್ಕೆ ದುಃಖವೆನಿಸಿದರೆ, ಮೃದುಸ್ಪರ್ಶ ಹಿತವೆನಿಸುತ್ತದೆ. ಸ್ಪರ್ಶವನ್ನು ಚರ್ಮದಲ್ಲಿ ಸಂಯೋಜಿಸಲಾದ ಜಂಗಮಲಿಂಗಕ್ಕೆ ಸಮರ್ಪಿಸಿ ಜಂಗಮಲಿಂಗದ ಪ್ರಸಾದವನ್ನಾಗಿ ಭಾವಿಸಿ ಅನುಭವಿಸುವುದರಿಂದ ಈ ಭೇದ ದೂರಾಗಿ ಪ್ರಸಾದ ಭಾವ ಅಳವಡುತ್ತದೆ. ಪ್ರಸಾದಿಸ್ಥಲದ ಸಾಧಕ ಹೀಗೆ ಸ್ಪರ್ಶವನ್ನು ಜಂಗಮಲಿಂಗದ ಪ್ರಸಾದವೆಂದು ಭಾವಿಸಿ ಸ್ವೀಕರಿಸುವುದರಿಂದ ಅವನಿಗೆ ಕಠೋರ ಸ್ಪರ್ಶದಿಂದ ದುಃಖವಾಗಲಿ, ಮೃದು ಸ್ಪರ್ಶದಿಂದ ಹಿತವಾಗಲಿ ಎನಿಸುವುದಿಲ್ಲ.

ಕುರೂಪ–ಸುಂದರ ಇವು ರೂಪದಲ್ಲಿಯ ಭೇದಗಳು. ಕುರೂಪ ಕಂಡಾಗ

ಬೇಸರಿಸಿಕೊಳ್ಳುವ ಕಣ್ಣು ಸುಂದರ ರೂಪ ಕಂಡಾಗ ಅದರೆಡೆ ಧಾವಿಸಿ ಆಸಕ್ತಗೊಳ್ಳುತ್ತದೆ. ರೂಪವನ್ನು ಅರ್ಪಿಸುವುದರಿಂದ ಇದು ಕುರೂಪ, ಇದು ಸ್ಫುರದ್ರೂಪವೆಂಬ ಭಾವವಳಿದು, ತೋರುವುದೆಲ್ಲ ಶಿವಲಿಂಗದ ಪ್ರಸಾದ, ಅದೆಲ್ಲ ಶಿವರೂಪವೆಂಬ ಶಿವಮಯಭಾವ ಅಳವಡುತ್ತದೆ. ಪ್ರಸಾದಿ ಸ್ಥಲದ ಸಾಧಕ ಹೀಗೆ ರೂಪವನ್ನು ಶಿವಲಿಂಗದ ಪ್ರಸಾದವನ್ನಾಗಿ ಭಾವಿಸಿ ಅನುಭವಿಸುವುದರಿಂದ ಸೌಂದರ್ಯಕ್ಕೆ ಮರುಳಾಗಿ ಮೋಹಿತನಾಗದೆ ಮತ್ತು ಕುರೂಪವನ್ನು ತಿರಸ್ಕರಿಸದೆ ತೋರುವುದೆಲ್ಲ ಶಿವರೂಪವೆಂಬ ಉನ್ನತಭಾವದ ಬದುಕು ಅವನದಾಗಿರುತ್ತದೆ.

ಸಿಹಿ, ಕಹಿ, ಖಾರ, ಒಗರು ಮತ್ತು ಉಪ್ಪು ಎಂಬ ಆರು ವಿಧವಾದ ರಸಗಳು ಹಿತಮಿತವಾಗಿ ಒಂದನ್ನೊಂದು ಕೂಡಿದಾಗ ಉಂಟಾಗುವ ರುಚಿ ಪದಾರ್ಥ ದೊರಕಿದಾಗ ಆನಂದಿಸಿದರೆ, ಅರುಚಿ ಪದಾರ್ಥವನ್ನು ಸೇವಿಸಿದಾಗ ಖಿನ್ನಗೊಳ್ಳುತ್ತದೆ. ನಾಲಿಗೆಯಲ್ಲಿ ಸಂಯೋಜಿಸಲಾದ ಗುರುಲಿಂಗಕ್ಕೆ ರಸವನ್ನು ಸಮರ್ಪಿಸಿದಾಗ ರುಚಿ–ಅರುಚಿ ಎಂಬ ಭೇದವಳಿದು ಪ್ರಸಾದಭಾವ ಅಳವಡುತ್ತದೆ. ಪ್ರಸಾದಿ ಸ್ಥಲದ ಸಾಧಕ ರಸವನ್ನು ಗುರುಲಿಂಗದ ಪ್ರಸಾದವೆಂಬುದಾಗಿ ಭಾವಿಸಿ ಸ್ವೀಕರಿಸುವುದರಿಂದ ಅವನು ನಾಲಿಗೆಯ ಚಪಲತೆಗೆ ಒಳಗಾಗದೆ ತನಗೆ ದೊರೆತುದರಲ್ಲಿಯೇ ತೃಪ್ತಭಾವ ತಾಳುವ ಮೂಲಕ ಪ್ರಸನ್ನನಾಗಿರುತ್ತಾನೆ.

ಸುಗಂಧ, ದುರ್ಗಂಧ ಇವು ಗಂಧದಲ್ಲಿಯ ಭೇದಗಳು. ಸುಗಂಧ ಮೂಗಿಗೆ ಸುಖ ಕೊಟ್ಟರೆ, ದುರ್ಗಂಧ ದುಃಖಕೊಡುತ್ತದೆ. ನಾಸಿಕದಲ್ಲಿ ಸಂಯೋಜಿಸಲಾದ ಆಚಾರಲಿಂಗಕ್ಕೆ ಗಂಧ ವಿಷಯವನ್ನು ಅರ್ಪಿಸಿದರೆ. ಅದರಲ್ಲಿಯ ಸುಗಂಧ–ದುರ್ಗಂಧವೆಂಬ ಭೇದವಳಿದು ಪ್ರಸಾದ ಭಾವ ಅಳವಡುತ್ತದೆ. ಪ್ರಸಾದಿ ಸ್ಥಲದ ಸಾಧಕ ತಾನು ಆಘ್ರಾಣಿಸುವ ಎಲ್ಲ ವಿಧದ ಗಂಧವನ್ನು ಸದಾ ಆಚಾರಲಿಂಗದ ಪ್ರಸಾದವನ್ನಾಗಿ ಭಾವಿಸಿ ಆಘ್ರಾಣಿಸುವುದರಿಂದ ಅವನನ್ನು ಯಾವ ಗಂಧವೂ ಖಿನ್ನಗೊಳಿಸಲಾರವು. ಸುಗಂಧವೂ ಪ್ರಸಾದ, ದುರ್ಗಂಧವೂ ಪ್ರಸಾದವೆಂಬ ಭಾವ ಅವನಲ್ಲಿ ಅಳಟ್ಟಿರುವುದರಿಂದ ಅವನು ನಿತ್ಯ ಪ್ರಸನ್ನ. ಕಾರಣ ದೇವಿ ಕಾಲೋತ್ತರಾಗಮವು –

ನಿವೃತ್ತೋ ವಿಷಯಜ್ಞಾನಾದ್ ನಿಷ್ಕಲಜ್ಞಾನ ತತ್ಪರಃ।
ಅನಿಚ್ಛನ್ನಪಿ ಮೇಧಾವಿ ಲಭತೇ ಮೋಕ್ಷಮಕ್ಷಯಂ ॥[೫]

ವಿಷಯಗಳ ಜ್ಞಾನದಿಂದ ನಿವೃತ್ತರಾಗಿ ಯಾರು ನಿಷ್ಕಾಮ ತತ್ವವನ್ನು ಅರಿಯುತ್ತಾರೋ ಆ ವ್ಯಕ್ತಿಯು ಅಕ್ಷಯವಾದ ಮೋಕ್ಷವನ್ನು ಪ್ರಾಪ್ತಿ ಮಾಡಿಕೊಳ್ಳುವನು ಎಂದು ತಿಳಿಸಿದೆ.

ಬಹಿರಾಹಿತಚಿತ್ತಾನಾಂ ಜಾಯಂತೆ ಬಂಧಹೇತವಃ ।
ಬಹಿಶ್ಚಿತಂ ನಿವಾರ್ಯೈವ ವಿಂದನ್ ಲೋಕೇ ನ ಸೀದತಿ ॥[೬]

---

೫. ದೇವಿ ಕಾಲೋತ್ತರಾಗಮ, ಶ್ಲೋ. ಸಂ. ೧೨
೬. ದೇವಿ ಕಾಲೋತ್ತರಾಗಮ, ಶ್ಲೋ. ಸಂ. ೧೯

ಬಾಹ್ಯ ವಸ್ತುಗಳೆಡೆಗೆ ಯಾವ ಯೋಗಿಯು ತನ್ನ ಚಿತ್ತವನ್ನು ತೊಡಗಿಸುವನೋ ಅದು ಬಂಧನಕ್ಕೆ ಕಾರಣವಾಗುವದು. ಆದುದರಿಂದ ಲೌಕಿಕ ವಿಷಯಗಳೆಡೆಗೆ ಯಾರು ಚಿತ್ತವನ್ನು ವಿಮುಖಗೊಳಿಸುವರೋ ಅವರೇ ಮುಕ್ತರಾಗುವರು.

ಹೀಗೆ ಪ್ರಸಾದಿ ಸ್ಥಲದ ಸಾಧಕ ಎಲ್ಲ ವಿಷಯಗಳನ್ನು ಪ್ರಸಾದ ರೂಪದಲ್ಲೇ ಸ್ವೀಕರಿಸುವುದರಿಂದ, ಭಗವಂತನ ಪ್ರಸಾದವನ್ನಲ್ಲದೇ ಬೇರೇನನ್ನೂ ಸ್ವೀಕರಿಸದಿರುವುದರಿಂದ ಮತ್ತು ಪ್ರಸಾದದಲ್ಲಿ ಎಳ್ಳಷ್ಟನ್ನೂ ಬಿಡದೇ ಪೂಜ್ಯಭಾವದಿಂದ ಸ್ವೀಕರಿಸುವುದರಿಂದ ಕ್ರಮೇಣ ಅವನ ಮನಸ್ಸು ನಿರ್ಮಲಗೊಂಡು ಶಾಶ್ವತವಾದ ಚಿತ್ತ ಪ್ರಸನ್ನತೆ ಲಭಿಸುತ್ತದೆ. ಇದರಿಂದ ಬದುಕಿನ ಯಾವ ಘಟನೆಗಳೂ ದುರ್ಜನರ ಯಾವ ನಿಂದೆಗಳು, ಇವರ ಪ್ರಸನ್ನತೆಯನ್ನು ಕೆಡಿಸಲಾರವು.

ದೇವಿಕಾಲೋತ್ತರಾಗಮ ಇದನ್ನೇ ಪ್ರತಿಪಾದಿಸುತ್ತಾ "ಶಿವಯೋಗಿಯು ಶತ್ರು ಮಿತ್ರರೊಂದಿಗೆ ಸಮಾನ ವ್ಯವಹಾರವನ್ನು ಮಾಡಬೇಕು. ಬಂಗಾರ, ಮಣ್ಣು ಇವುಗಳನ್ನು ಸಮಾನದೃಷ್ಟಿಯಿಂದ ನೋಡಬೇಕು. ಇಂದ್ರಿಯ ಸುಖಕ್ಕಾಗಿ ಎಂದೂ ಆಶಿಸಬಾರದು."[೭] ಎಂದು ತಿಳಿಸಿದೆ. ಅಲ್ಲದೆ "ಶಿವಯೋಗಿಯಾದವನು ನಿಂದೆ ಮತ್ತು ಪ್ರಶಂಸೆಗಳನ್ನು ಸಮಾನ ದೃಷ್ಟಿಯಿಂದ ನೊಡಬೇಕು. ಎಲ್ಲಾ ಪ್ರಾಣಿಗಳನ್ನು ಸಮದೃಷ್ಟಿಯಿಂದ ನೊಡಬೇಕು.[೮] ಎಂದು ಪ್ರತಿಪಾದಿಸಿದೆ. ಇದನ್ನೇ

"ಚಿತ್ತಂ ಸ್ಥಿರಂ ಭವೇದ್ಯಸ್ಯ ಸ ಪ್ರಸಾದೀ ಭವತ್ಯಸೌ"[೯]

ಎಂಬುದು ಪ್ರಸಾದಿಯ ಲಕ್ಷಣ ಎನ್ನುತ್ತಾ ಎಂಥಹ ಸಂದರ್ಭ ಬಂದರೂ ಯಾರ ಚಿತ್ತವು ಸ್ಥಿರವಾಗಿದೆಯೋ ಅವನು ಪ್ರಸಾದಿಯೆಂದು ಕರೆಯಲ್ಪಡುತ್ತಾನೆ ಎಂದು ಆಗಮಗಳು ಪ್ರತಿಪಾದಿಸಿವೆ.

ಇದನ್ನೇ ವಚನಗಳೂ ಅಂಗೀಕರಿಸುತ್ತ "ದುಃಖ ಬಂದರೆ ಪಾಪದ ಫಲವೆನ್ನೆನು; ಸುಖ ಬಂದರೆ ಪುಣ್ಯದ ಫಲವೆನ್ನೆನು; ನೀ ಮಾಡಿದರೆ ಆಯಿತ್ತೆಂಬೆನು, ನೀ ಮಾಡದೊಡೆ ಆಗದೆಂಬೆನು" ಎಂದು ಅತ್ಯಂತ ಮಾರ್ಮಿಕವಾಗಿ ನುಡಿದಿದ್ದಾರೆ. ಏಕೆಂದರೆ ತನುಮನಕ್ಕೆ ಕೇವಲ ಸುಖಸೌಖ್ಯ ಪದಾರ್ಥಗಳೇ ಪ್ರಸಾದವಾಗಿ ಬರುತ್ತವೆಂದರ್ಥವಲ್ಲ; ಅನಿಷ್ಟವಾದರೂ ಬರುತ್ತವೆ. ಪೂರ್ವಕರ್ಮಕ್ಕನುಸರಿಸಿ ಸುಖ ಬಂದರೆ ಕರೆದು ಸನ್ಮಾನಿಸಿ ಪ್ರಸಾದವೆಂದು ಗ್ರಹಿಸಿ ದುಃಖ ಬಂದರೆ ದೂಡಿ ಅಯ್ಯೋ ಪಾಪವೆಂದು ಪೇಚಾಡಿದರೆ ಪ್ರಸಾದಿಯಲ್ಲ. ಎಲ್ಲವೂ ದೇವರ ಪ್ರಸಾದವೆಂದು ಸಮಚಿತ್ತದಿಂದ ಸ್ವೀಕರಿಸುವವನೇ ಪ್ರಸಾದಿ. ಕಾರಣ –

"ಎನ್ನ ಆಧಿವ್ಯಾಧಿಗಳೆಲ್ಲ ಪ್ರಸಾದವಯ್ಯಾ, ಎನ್ನ ಆಗುಹೋಗುಗಳೆಲ್ಲ ಪ್ರಸಾದವಯ್ಯಾ, ಎನ್ನ ತಾಗುನಿರೋಧಗಳೆಲ್ಲ ಪ್ರಸಾದವಯ್ಯಾ, ಎನ್ನ ಅರುಹುಮರುಹುಗಳೆಲ್ಲ ಪ್ರಸಾದವಯ್ಯಾ

---

೭. ದೇವಿ ಕಾಲೋತ್ತರಾಗಮ, ಶ್ಲೋ. ಸಂ. ೭೩
೮. ದೇವಿ ಕಾಲೋತ್ತರಾಗಮ, ಶ್ಲೋ. ಸಂ. ೭೪
೯. ಸೂ.ಆ. ಪಟಲ ೮, ಶ್ಲೋಕ ಸಂಖ್ಯೆ ೩೪

ಎನ್ನ ಸುಖ ದುಃಖಗಳೆಲ್ಲ ಪ್ರಸಾದವಯ್ಯಾ, ಎನ್ನ ಮಾನಾಪಮಾನಂಗಳೆಲ್ಲ ಪ್ರಸಾದವಯ್ಯಾ,
ಎನ್ನ ಹಾನಿವೃದ್ಧಿಗಳೆಲ್ಲ ಪ್ರಸಾದವಯ್ಯಾ, ಎನ್ನ ಭಯ ಭೀತಿಗಳೆಲ್ಲ ಪ್ರಸಾದವಯ್ಯಾ,
ಎನ್ನ ಲಜ್ಜೆ ಮೋಹಗಳೆಲ್ಲ ಪ್ರಸಾದವಯ್ಯಾ, ಎನ್ನ ಸಜ್ಜನ ಸಮತೆಗಳೆಲ್ಲ ಪ್ರಸಾದವಯ್ಯಾ,
ಎನ್ನ ಸುಳಹು ಸಂಚಾರಗಳೆಲ್ಲ ಪ್ರಸಾದವಯ್ಯಾ, ಎನ್ನ ಚಿತ್ತ ಸುಚಿತ್ತುಗಳೆಲ್ಲ ಪ್ರಸಾದವಯ್ಯಾ,
ಎನ್ನಬುದ್ಧಿಸುಬುದ್ಧಿಗಳೆಲ್ಲ ಪ್ರಸಾದವಯ್ಯಾ, ಎನ್ನಅಹಂಕಾರನಿರಹಂಕಾರಗಳೆಲ್ಲ ಪ್ರಸಾದವಯ್ಯಾ
ಎನ್ನ ಸುಮನ ವ್ಯಾಕುಲಗಳೆಲ್ಲ ಪ್ರಸಾದವಯ್ಯಾ, ಎನ್ನ ಜ್ಞಾನ ಸುಜ್ಞಾನಗಳೆಲ್ಲ ಪ್ರಸಾದವಯ್ಯಾ,
ಎನ್ನ ಭಾವ ಸದ್ಭಾವಗಳೆಲ್ಲ ಪ್ರಸಾದವಯ್ಯಾ, ಎನ್ನ ತತ್ವ ತೋರಿಕೆಗಳೆಲ್ಲ ಪ್ರಸಾದವಯ್ಯಾ,
ಎನ್ನ ಕರಣೇಂದ್ರಿಯಗಳೆಲ್ಲ ಪ್ರಸಾದವಯ್ಯಾ, ಎನ್ನ ಒಳಹೊರಗುಗಳೆಲ್ಲ ಪ್ರಸಾದವಯ್ಯಾ,
ಎನ್ನ ಕೀಳು ಮೇಲುಗಳೆಲ್ಲ ಪ್ರಸಾದವಯ್ಯಾ, ಎನ್ನ ಎಡಬಲಂಗಳೆಲ್ಲ ಪ್ರಸಾದವಯ್ಯಾ,
ಇಂತಾಗಿ ಅಖಂಡೇಶ್ವರಾ, ನೀನೆಂಬ ಪ್ರಸಾದಶರಧಿಯೊಳಗೆ[೧೦]
ನಾನೆಂಬುದು ಮುಳುಗಿ ನೆಲೆದಪ್ಪಿ ಹೋದೆನಯ್ಯಾ.

ಎಂದು ಸರ್ವವನ್ನೂ ಪರಶಿವನಿಗೇ ಸಮರ್ಪಿಸಿ ಸ್ಥಿರಚಿತ್ತವನ್ನು ಹೊಂದುವವನೇ ಪ್ರಸಾದಿ ಎಂದು ವಚನಗಳಲ್ಲಿಯೂ ಪ್ರತಿಪಾದಿಸಲಾಗಿದೆ. ಹೀಗೆ ಮಾಹೇಶ್ವರಸ್ಥಲದಲ್ಲಿ ನಿಷ್ಠಾಭಕ್ತಿಯುಕ್ತವಾದ ಪೂಜೆಯ ಪರಿಪಾಕದಿಂದ ಲಿಂಗ ನಿಷ್ಠೆಯು ಮತ್ತಷ್ಟು ಹೆಚ್ಚಿ ಎಲ್ಲವೂ ಶಿವನ ಪ್ರಸಾದವೆಂಬ ಭಾವ ಬಲಿತಾಗ ಮಾಹೇಶ್ವರನೇ ಪ್ರಸಾದಿಯಾಗುತ್ತಾನೆ.

ಪ್ರಸಾದಿಯ ಅರ್ಪಣ ಕ್ರಮ –

ಸ್ಥಲೇ ಪ್ರಸಾದಿಸಂಜ್ಞೇಽಸ್ಮಿನ್ನಿಚ್ಛಾಶಕ್ತಿಸಮನ್ವಿತೇ।
ದೃಗಂಗಕೇಽಘೋರಮುಖೇ ಶಿವಲಿಂಗಾಭಿಧೇ ಪುನಃ।
ಭಕ್ತ್ಯಾಽವಧಾನಯಾ ರೂಪಮಹಂಕಾರೇಣ ಚಾರ್ಪಯೇತ್ ॥[೧೧]

ಪ್ರಸಾದಿಸ್ಥಲದಲ್ಲಿ ಇಚ್ಛಾಶಕ್ತಿಯಿಂದ ಕೂಡಿಕೊಂಡಿರುವ ಅಘೋರ ಮುಖ ಸ್ವರೂಪದ ಶಿವಲಿಂಗಕ್ಕೆ ಸಾವಧಾನ ಭಕ್ತಿಯಿಂದ ನಿರಹಂಕಾರವೆಂಬ ಹಸ್ತದಿಂದ 'ಶಿ' ಕಾರ ಮಂತ್ರವನ್ನು ಜಪಿಸುತ್ತಾ ಕಣ್ಣಿನ ಮೂಲಕ ರೂಪ ಪದಾರ್ಥವನ್ನು ಸಮರ್ಪಿಸಬೇಕು. ಎಂದು ಪ್ರಸಾದಿಯ ಆಂತರಿಕ ಪೂಜಾಕ್ರಮವನ್ನು ಆಗಮಗಳು ಪ್ರತಿಪಾದಿಸಿವೆ.

ಪ್ರಸಾದಿಸ್ಥಲದ ಯೌಗಿಕ ವಿಕಾಸ

ಪ್ರಸಾದಿ ಸ್ಥಲದ ಸಾಧಕ ಅವಧಾನ ಭಕ್ತಿಯುಳ್ಳವನಾಗಿರುತ್ತಾನೆ. ಅರ್ಥಾತ್ ಪ್ರಸಾದಿಯು ತನ್ನ ಬದುಕಿನಲ್ಲಿ ಎಚ್ಚರಗೊಳ್ಳುತ್ತಾನೆ ಮತ್ತು ಸಾಧನೆಯಲ್ಲಿ ತೀವ್ರತೆಯನ್ನು ಕಂಡುಕೊಳ್ಳುತ್ತಾನೆ ಎಂದರ್ಥ. ಶಿವಲಿಂಗವು ನೇತ್ರೇಂದ್ರಿಯವನ್ನು ಆಶ್ರಯಿಸಿದೆ. ಅದಕ್ಕಾಗಿ ಪ್ರಸಾದಿಯು ಶಿವಲಿಂಗಕ್ಕೆ(ಕಣ್ಣು) ಕಾಣಿಸಿದ ರೂಪಪದಾರ್ಥವನ್ನು ಮೊದಲು ಶಿವರೂಪವನ್ನಾಗಿ ಕಾಣಬೇಕು. ನೋಡಿದ ವಸ್ತುಗಳಿಗಾಗಿ ಮನಸ್ಸು ಆಶಿಸಬಾರದು, ಮೋಹಿಸಬಾರದು. ಇದನ್ನು ಹೋಗಲಾಡಿಸಿಕೊಳ್ಳಲು ಪ್ರಸಾದಿಯು ರೂಪವನ್ನು

೧೦. ಸಮಗ್ರ ವ.ಸಂ. ೧೪, ಸಂಕೀರ್ಣ ವ.ಸಂ.೯. ವಚನ ಸಂಖ್ಯೆ ೬೭೦, ಪುಟ ೩೦೫
೧೧. ಕಾ.ಆ. ಪಟಲ ೭, ಶ್ಲೋಕ ಸಂಖ್ಯೆ ೬೨

ಸುರೂಪ ಪ್ರಸಾದವಾಗಿಸಿಕೊಳ್ಳಬೇಕು. ಲಿಂಗಪ್ರಸಾದವನ್ನಾಗಿ ಅನುಭವಿಸಬೇಕು.

ಈ ಸ್ಥಲದ ಸಾಧಕ ಶಿವಲಿಂಗದ ಅನುಸಂಧಾನ ಮಾಡುತ್ತಾನೆ. ಶಿವಯೋಗ ಪ್ರಕ್ರಿಯೆಯನ್ನನುಸರಿಸಿ ದೃಢಸಂಕಲ್ಪದಿಂದ ಸಾಧಕನು ತನ್ನ ಮನೋವೃತ್ತಿಯನ್ನು ಮಣಿಪೂರಕ ಚಕ್ರದಲ್ಲಿ ಸ್ಥಿರಗೊಳಿದಾಗ ಅಲ್ಲಿ ಜ್ಯೋತಿಯ ಸಾಕ್ಷಾತ್ಕಾರವಾಗುತ್ತದೆ. ಈ ಜ್ಯೋತಿಯನ್ನು ಶಿವಲಿಂಗವೆಂದು ವೀರಶೈವ ಶಿವಯೋಗಿಗಳು ಹೆಸರಿಸಿರುವರು. ಇದನ್ನು ಅನುಸಂಧಾನಿಸುತ್ತ ಈ ಸ್ಥಲದ ಸಾಧಕ ಅಂತರಂಗದ ಆತ್ಮಿಕ ವಿಕಾಸ ಮಾಡಿಕೊಂಡು, ಪ್ರಪಂಚದ ವಸ್ತುಗಳಲ್ಲಿ ಶಿವಭಾವ ತಾಳಿ ವಿಷಯ–ವಸ್ತುಗಳನ್ನು ಆ ಶಿವನ ಪ್ರಸಾದವೆಂದು ಭಾವಿಸಿ ಸ್ವೀಕರಿಸುತ್ತ ಲಿಂಗಭೋಗೋಪಭೋಗಿಯಾಗುತ್ತಾನೆ.

ಒಟ್ಟಿನಲ್ಲಿ ಪ್ರಸಾದಿ ಸ್ಥಲದ ವಿವೇಚನೆಯನ್ನು ಶಿವಾಗಮಗಳು ಮತ್ತು ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಅವಲೋಕಿಸಲಾಗಿ ಶಿವಾಗಮಗಳು "ಯಾವ ಸಾಧಕನು ಪ್ರತಿದಿನವೂ ಪ್ರಸಾದವನ್ನೇ ಸ್ವೀಕರಿಸುತ್ತಾ ಲಿಂಗಭೋಗೋಪಭೋಗಿಯಾಗಿರುವನೋ ಅವನೆ ಪ್ರಸಾದಿ ಎಂದು ಪ್ರತಿಪಾದಿಸಿವೆ. ಮನದ ನಿರ್ಮಾಣಕ್ಕೆ ಕಾರಣಿಭೂತವಾದ ಅನ್ನವನ್ನು ಗುರು–ಲಿಂಗ ಜಂಗಮಕ್ಕೆ ಸಮರ್ಪಿಸುವ ಮೂಲಕ ಪವಿತ್ರ ಪ್ರಸಾದವನ್ನಾಗಿ ಮಾಡಿ ಉಪಭೋಗಿಸಿ, ಶಿವನ ಅನುಗ್ರಹ ಪಡೆದು, ದೇಹೇಂದ್ರಿಯಗಳಲ್ಲಿ ನೆಲೆಗೊಳಿಸಲಾದ ಲಿಂಗಗಳಿಗೆ ತಾನು ಉಪಭೋಗಿಸುವ ವಿಷಯಗಳನ್ನೆಲ್ಲ ಸಮರ್ಪಿಸಿ ಅವುಗಳ ಪ್ರಸಾದವೆಂದು ಭಾವಿಸಿ, ಅದನ್ನು ಸ್ವೀಕರಿಸುತ್ತ ನಿತ್ಯ ಪ್ರಸನ್ನತೆಯನ್ನು ಚಿತ್ತದಲ್ಲಿ ಅಳವಡಿಸಿಕೊಂಡು ಅವಧಾನ ಭಕ್ತಿಯಿಂದ ಶಿವಲಿಂಗವನ್ನು ಅನುಸಂಧಾನ ಮಾಡುವ ಸಾಧಕನೇ ಪ್ರಸಾದಿಯೆಂದೂ, ಆತನು ಇಚ್ಛಾಶಕ್ತಿಯಿಂದ ಕೂಡಿಕೊಂಡಿರುವ ಅಘೋರ ಮುಖ ಸ್ವರೂಪದ ಶಿವಲಿಂಗಕ್ಕೆ ಸಾವಧಾನ ಭಕ್ತಿಯಿಂದ ನಿರಹಂಕಾರವೆಂಬ ಹಸ್ತದಿಂದ 'ಶಿ' ಕಾರ ಮಂತ್ರವನ್ನು ಜಪಿಸುತ್ತಾ ಕಣ್ಣಿನ ಮೂಲಕ ರೂಪ ಪದಾರ್ಥವನ್ನು ಸಮರ್ಪಿಸುವನು ಎಂದು ಪ್ರಸಾದಿಯ ಆಂತರಿಕ ಪೂಜಾಕ್ರಮವನ್ನು ಆಗಮಗಳು ಪ್ರತಿಪಾದಿಸಿವೆ.

ವಚನಗಳು ಸಹ ಶಿವಾಗಮಗಳಲ್ಲಿ ಪ್ರತಿಪಾದನೆಗೊಂಡ ಪ್ರಸಾದಿಯ ಇದೇ ಲಕ್ಷಣಗಳನ್ನು ತಮ್ಮ ಅನುಭವದ ನುಡಿಗಳಲ್ಲಿ ಅತ್ಯಂತ ಸತ್ವಯುತವಾಗಿ, ಮನೋಜ್ಞವಾಗಿ ಪ್ರತಿಪಾದಿಸಿವೆ.

ಆದರೆ ವಿವಾಹಿತ ಮಹಿಳೆಯು ಪತಿವ್ರತಾ ಧರ್ಮಕ್ಕನುಗುಣವಾಗಿ ಪತಿಯ ಶೇಷಾನ್ನವನ್ನು ಸೇವಿಸುವ ಸಂದರ್ಭದಲ್ಲಿ ಇಷ್ಟಲಿಂಗಕ್ಕೆ ಅನುಜ್ಞಾರೂಪ ನೈವೇದ್ಯವನ್ನು ಸಮರ್ಪಿಸಿ ಸ್ವೀಕರಿಸಬೇಕು. ಮತ್ತು ನೇರವಾಗಿ ತಾಜಾ ಆಹಾರವನ್ನು ಸೇವಿಸುವ ಸಂದರ್ಭದಲ್ಲಿ ಲಿಂಗಭೋಗರೂಪ ನೈವೇದ್ಯವನ್ನು ಸಮರ್ಪಿಸಬೇಕು. ಇದರಿಂದ ಪತಿವ್ರತಾ ಧರ್ಮಕ್ಕೂ ಭಂಗ ಬರುವುದಿಲ್ಲ ಮತ್ತು ಪ್ರಸಾದಿಸ್ಥಲದ ಸಾಧನೆಯ ಆಚರಣೆಯೂ ಅಪಚಾರವಾಗುವುದಿಲ್ಲ ಎಂದು ಹೇಳಿ ಪ್ರಸಾದಿಸ್ಥಲದ ಆಚರಣೆಗೈಯುವಾಗ ಸ್ತ್ರೀಯರಿಗೆ ಉಂಟಾಗುವ ಸಮಸ್ಯೆಯನ್ನು ಆಗಮಗಳಲ್ಲಿ ಅತ್ಯಂತ ಮನೋಜ್ಞವಾಗಿ ಪರಿಹರಿಸಿ ಷಟಸ್ಥಲ ಸಾಧನೆಯಲ್ಲಿ ಮಹಿಳೆಯೂ ಮುನ್ನೆಡೆಯಲು ಆಗಮಗಳು ಅವಕಾಶವಿತ್ತಿರುವುದು ಅತ್ಯಂತ ವಿಶಿಷ್ಟವಾದ ಮಹಿಳಾ ಪರ ಚಿಂತನೆಯಾಗಿದೆ.

೫.೩.೬ ಪ್ರಾಣಲಿಂಗಿ ಸ್ಥಲ

ಷಟ್‌ಸ್ಥಲ ಸಾಧನೆಯ ನಾಲ್ಕನೆಯ ಸೋಪಾನವೇ ಪ್ರಾಣಲಿಂಗಿ ಸ್ಥಲ. "ಪ್ರಾಣ ಲಿಂಗಮಸ್ತ ಅಸ್ತೀತಿ ಪ್ರಾಣಲಿಂಗೀ" ಪ್ರಾಣಲಿಂಗವನ್ನು ಹೊಂದಿದವನು ಪ್ರಾಣಲಿಂಗಿ ಎಂಬುದು ಪ್ರಾಣಲಿಂಗಿ ಶಬ್ದದ ವ್ಯುತ್ಪತ್ತಿಯಾಗಿದೆ. ಪ್ರಾಣಲಿಂಗದ ಸ್ವರೂಪ ಹಾಗೂ ನೆಲೆಕಲೆಗಳನ್ನರಿತು ಅದರ ಅನುಸಂಧಾನ ನಿರತನಾಗುವುದರ ಜೊತೆಗೆ ತನ್ನ ಇಷ್ಟಲಿಂಗವನ್ನು ಪ್ರಾಣದಂತೆ ಪ್ರಾಣಲಿಂಗಿಸ್ಥಲದ ಸಾಧಕನು ಪ್ರೀತಿಸುವನು. ಪ್ರಾಣಲಿಂಗದ ಅನುಸಂಧಾನದ ವಿಧಾನವು ವೀರಶೈವ ಸಿದ್ಧಾಂತದಲ್ಲಿ ಅತ್ಯಂತ ವೈಶಿಷ್ಟ್ಯಪೂರ್ಣವಾಗಿ ನಿರೂಪಿಸಲ್ಪಟ್ಟಿದೆ.

ಪ್ರಾಣಲಿಂಗಿ ಸ್ಥಲದ ಲಕ್ಷಣ

"ತ್ಯಕ್ತ್ವಾ ಜೀವಭ್ರಮಂ ಭೂಯೋ ಲಿಂಗಾತ್ಮಾ ಪ್ರಾಣಲಿಂಗಕಃ"[೧] ಎಂಬುದು ಪ್ರಾಣಲಿಂಗಿಯ ಲಕ್ಷಣ. ಲಿಂಗವೇ ಪ್ರಾಣವಾಗಿ, ಪ್ರಾಣವೇ ಲಿಂಗವಾಗಿ ಭಕ್ತನು ಪ್ರಾಣಲಿಂಗಿಯೆನಿಸುವನು.

ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುವ ಆಗಮದ ಉಲ್ಲೇಖದೊಂದಿಗೆ ಸಕಲಾಗಮ ಶಿಖಾಮಣಿ ಬಾಲಸಂಗಯ್ಯನವರು –

" ತಥಾ ಪ್ರಾಣೇ ಗುಣೇ ಲಿಂಗೇ ಲಿಂಗಪ್ರಾಣಸಮಾಹಿತಃ ।
ಸುಖದುಃಖೇ ಭಯಂ ನಾಸ್ತಿ ಪ್ರಾಣಲಿಂಗಿಸ್ಥಲಂ ಭವೇತ್ ॥"[೨]

ಎಂದು ಪ್ರಾಣವೆ ಲಿಂಗವಾಗಿ, ಲಿಂಗವೆ ಪ್ರಾಣವಾಗಿ, ಸುಖ ದುಃಖಗಳ ಭಯವನ್ನು ಮೀರಿ ನಿಂತವನೇ ಪ್ರಾಣಲಿಂಗಿ ಎಂದು ವಿವರಿಸಿದ್ದಾನೆ. ಈ ಸ್ಥಲದ ಸಾಧಕನು ಆಂತರಿಕವಾಗಿ ಪ್ರಾಣಲಿಂಗದ ಅನುಸಂಧಾನದಲ್ಲಿ ತೊಡಗುವುದರ ಜೊತೆಗೆ ಈ ಪ್ರಾಣಲಿಂಗದ ಸಾಕ್ಷಾತ್ಕಾರಕ್ಕೆ ಸಾಧನವಾದ ಇಷ್ಟಲಿಂಗದಲ್ಲಿ ಉತ್ಕಟ ಪ್ರೇಮವನ್ನು ಇರಿಸಿಕೊಳ್ಳುವನು. ಆಂತರಿಕ ಪ್ರಾಣಲಿಂಗವನ್ನು ಅನುಸಂಧಾನಿಸುವುದು ಈ ಸ್ಥಲದ ಆಂತರಿಕ ಆಯಾಮ. ಇಷ್ಟಲಿಂಗವನ್ನು ತನ್ನ ಪ್ರಾಣಕ್ಕೆ ಸಮನಾಗಿ ಪ್ರೀತಿಸುವುದು ಬಾಹ್ಯ ಅವಸ್ಥೆ. ಪ್ರಾಣಲಿಂಗಿ ಸ್ಥಲದ ಸ್ವರೂಪವನ್ನು ಪಾರಮೇಶ್ವರಾಗಮವು

ಯಥಾ ಪ್ರಾಣೇ ತಥಾ ಲಿಂಗೇ ಯಥಾ ಲಿಂಗೇ ತಥಾ ಶಿವೇ।
ಪ್ರಾಣ–ಲಿಂಗ–ಶಿವೇಷ್ವೇಕ–ಬುದ್ಧಿಮಾನ್ ಪ್ರಾಣಲಿಂಗಿಕಃ॥[೩]

ಎಂದು ಅರ್ಥೈಸಿದೆ. ತನ್ನ ಪ್ರಾಣದಂತೆಯೇ ಲಿಂಗವನ್ನು ಹಾಗೆಯೇ ಲಿಂಗದಂತೆ ಶಿವನನ್ನು ಪ್ರೀತಿಸುತ್ತ, ಪ್ರಾಣ–ಲಿಂಗ–ಶಿವರಲ್ಲಿ ಸಮಾನುಭೂತಿಯನ್ನು ಮೈಗೂಡಿಸಿ

---

೧. ಸೂ.ಆ., ಪಟಲ ೮, ಶ್ಲೋಕಸಂಖ್ಯೆ ೩೫
೨. ಸಮಗ್ರ ವಚನ ಸಂಪುಟ ೧೩, ಸಂಕೀರ್ಣವ.ಸಂ. ೮, ವಚನ ಸಂಖ್ಯೆ ೩೬೮, ಪುಟ ೧೬೭
೩. ಪಾ.ಆ., ಪಟಲ ೬, ಶ್ಲೋಕಸಂಖ್ಯೆ ೨೦

ಕೊಂಡ ಸಾಧಕನೇ ಪ್ರಾಣಲಿಂಗಿ ಎಂಬ ಮಾತು ಈ ಸ್ಥಲದ ಸಾಧಕನ ಲಿಂಗನಿಷ್ಠೆಯನ್ನು ಅಭಿವ್ಯಕ್ತಗೊಳಿಸುತ್ತದೆ. ಈ ವ್ಯವಸ್ಥೆಯನ್ನು ಕುರಿತು ವಚನಕಾರರು

ಪ್ರಾಣಲಿಂಗ ಪ್ರತಿಗ್ರಾಹಕನಾದ ಬಳಿಕ
ಲಿಂಗವಿರಹಿತನಾಗಿ ನಡೆವ ಪರಿಯಂತೊ?
ಲಿಂಗವಿರಹಿತನಾಗಿ ನುಡಿವ ಪರಿಯಂತೊ?
ಪಂಚೇಂದ್ರಿಯ ಸುಖವನು ಲಿಂಗವಿರಹಿತನಾಗಿ ಭುಂಜಿಸಲಾಗದು
ಲಿಂಗವಿರಹಿತನಾಗಿ ಉಗುಳ ನುಂಗಲಾಗದು
ಇಂತೆಂದುದು ಕೂಡಲಸಂಗನ ವಚನ.[೪]

ಪ್ರಾಣಲಿಂಗಿ ಸ್ಥಲದ ಅವಸ್ಥೆಗೆ ಬಂದಾಗ ಸಾಧಕನಿಗೆ ಈ ಸ್ಥಿತಿ ಅಳವಡುತ್ತದೆ. ಆಗಮಗಳು ಧರಿಸಿದ ಇಷ್ಟಲಿಂಗ ದೇಹದಿಂದ ವಿಯೋಗವಾದಾಗ ಪ್ರಾಣ ಬಿಡಬೇಕು ಎಂದು ಉಪದೇಶಿಸುತ್ತವೆ. ಇದರ ಉದ್ದೇಶ ನಾವು ಆ ಲಿಂಗವನ್ನು ಅಷ್ಟು ಪ್ರಗಾಢವಾಗಿ ಪ್ರೀತಿಸಬೇಕೆಂಬುದಾಗಿದೆ. ಲಿಂಗದ ನಿಷ್ಠೆ ಪ್ರಗಾಢವಾಗಿದ್ದರೆ ಲಿಂಗ ಅಗಲಿದಾಕ್ಷಣವೇ ಪ್ರಾಣ ತನ್ನಷ್ಟಕ್ಕೆ ತಾನೇ ಹೋಗುತ್ತದೆ. ಕಾರಣ ಲಿಂಗವನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಬೇಕೆಂಬ ಉದ್ದೇಶದಿಂದ ವೀರಶೈವ ದರ್ಶನದಲ್ಲಿ ಲಿಂಗದ ವಿಷಯದಲ್ಲಿ ಇಂಥ ಮಾತುಗಳನ್ನು ಉಪದೇಶಿಸಲಾಗುತ್ತದೆ.

ತನ್ನ ದೇಹದ ಪ್ರಾಣಚೈತನ್ಯಶಕ್ತಿಯೆ ಪ್ರಾಣಲಿಂಗ. ಇದೇ ಮೂರ್ತಗೊಂಡು ಇಷ್ಟಲಿಂಗವಾಗಿ ಕರಸ್ಥಲಕ್ಕೆ ಬಂದಿದೆ. ಈ ಇಷ್ಟಲಿಂಗದ ಅನುಸಂಧಾನದಿಂದ ಪ್ರಾಣಲಿಂಗ ಅನುಸಂಧಾನಕ್ಕೆ ಕರೆದೊಯ್ಯಬೇಕು. ಇದನ್ನು ಸ್ವತಂತ್ರ ಸಿದ್ಧಲಿಂಗೇಶ್ವರರು ಸುಂದರವಾಗಿ ಹೇಳಿದ್ದಾರೆ –

“ಲಿಂಗದಲ್ಲಿ ಪ್ರಾಣವನಿರಿಸಿ, ಪ್ರಾಣದಲ್ಲಿ ಲಿಂಗವನಿರಿಸಿ
ನೆನವುತ್ತಿದ್ದ ಕಾರಣ, ಪ್ರಾಣಲಿಂಗವಾಯಿತ್ತು.
ಆ ಲಿಂಗ ಸರ್ವಕರಣಂಗಳ ಭೇಧಿಸಿ ಕರಣಂಗಳು ಲಿಂಗ ಕಿರಣಂಗಳಾದ ಕಾರಣ
ಒಳಗೆ ಕರತಳಾಮಳಕದಂತೆ ಲಿಂಗನೆಲೆಗೊಂಡಿತ್ತಾಗಿ ಹೊರಗೇನೆಂದೂ ಅರಿಯನು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ, ನೀವು ಪ್ರಾಣಲಿಂಗವಾಗಿ.”[೫]

ಎನ್ನುತ್ತ ಭಕ್ತನು ಬಹಿರ್ಮುಖನಾಗಿ ಶ್ರದ್ಧಾಭಕ್ತಿಯಿಂದ ಇಷ್ಟಲಿಂಗದ ಉಪಾಸನೆ ಮಾಡುವಂತೆ ಅಂತರ್ಮುಖನಾಗಿ ಅನುಭಾವಭಕ್ತಿಯಿಂದ ಪ್ರಾಣಲಿಂಗಾನುಸಂಧಾನವನ್ನು ಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

ಪ್ರಾಣಲಿಂಗದ ಸ್ವರೂಪ ಮತ್ತು ಉಪಾಸನೆ

ಚಂದ್ರಜ್ಞಾನಾಗಮವು ಜ್ಯೋತಿರ್ಮಯವಾದ ಪ್ರಾಣಲಿಂಗವು ಹೃದಯಕಮಲದಲ್ಲಿ ಪ್ರತಿಷ್ಠಿತವಾಗಿದೆ. ಈ ಪ್ರಾಣಲಿಂಗದ ಅನುಸಂಧಾನ ಮತ್ತು ಪೂಜೆಗಳು ಸಾಧಕನಿಗೆ

---

೪. ಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೧, ವಚನ ಸಂಖ್ಯೆ ೭೯೬, ಪುಟ ೨೦೫
೫. ಸಮಗ್ರ ವಚನ ಸಂಪುಟ ೧೧, ಸಂಕೀರ್ಣವ.ಸಂ. ೬, ವಚನ ಸಂಖ್ಯೆ ೧೦೩೫, ಪುಟ ೪೯೯

ಅತ್ಯಂತ ಫಲಪ್ರದವೆಂದು ಪ್ರಾಣಲಿಂಗದ ಸ್ವರೂಪ, ಸಾಕ್ಷಾತ್ಕಾರ ಮತ್ತು ಉಪಾಸನೆಗಳನ್ನು ವರ್ಣಿಸಿದೆ.

ಆಧಾರೇ ಕನಕಮುಖ್ಯಂ ಹೃದಯೇ ವಿದ್ರುಮಪ್ರಭಮ್।
ಭ್ರೂಮಧ್ಯೇ ದೀಪಸಂಕಾಶಂ ಪ್ರಾಣಲಿಂಗಂ ಪ್ರಕೀರ್ತಿತಮ್॥
ಜ್ಯೋತಿರ್ಲಿಂಗಂ ವಿದ್ವನ್ ಧ್ಯಾನಸ್ಥಾನಂ ಮಹೇಶಿತುಃ।
ಜ್ಯೋತಿರ್ಲಿಂಗಮಿದಂ ವಿಭಾವ್ಯೈವ ತತ್ರ ಧ್ಯೇಯಃ ಪರಃ ಶಿವಃ॥
ಪ್ರಾಣೇಷ್ವಂತರ್ಮನಃ ಸ್ಥಾನಂ ಹೃದಯಾಬ್ಜಗತಂ ಶಿವಮ್।
ಲಿಂಗಂ ಯತ್ ತದಿಹ ಗ್ರಾಹ್ಯಂ ಪ್ರಾಣಲಿಂಗಸಮಾಹ್ವಯಮ್॥
ಜ್ಯೋತೀರೂಪಂ ತದೇವ ಸ್ಯಾತ್ ಸ್ಥಾನಂ ಮುಖ್ಯಂ ಮಹೇಶಿತುಃ।
ತತ್ರ ನಿಧ್ಯಾಯಮಾನಂ ತು ಶಂಭುರ್ಮೋಚಯತೇಽಚಿರಾತ್ ॥[೧]

"ಮೂಲಧಾರ ಸ್ಥಾನದಲ್ಲಿ ಚಿನ್ನದ ಪ್ರಕಾಶದಂತೆ, ಹೃದಯದಲ್ಲಿ ಹವಳದ ಕಾಂತಿಯಂತೆ, ಹುಬ್ಬುಗಳ ಮಧ್ಯಭಾಗದಲ್ಲಿ ದೀಪಪ್ರಕಾಶದಂತೆ ಪ್ರಾಣಲಿಂಗವಿದೆಯೆಂದು ಹೇಳುತ್ತಾರೆ. ಇದನ್ನು ಜ್ಯೋತಿರ್ಲಿಂಗವೆಂದು ತಿಳಿದು, ಅದೇ ಮಹೇಶ್ವರನ ಧ್ಯಾನದ ಸ್ಥಾನವೆಂದು ಅರಿತು, ಜ್ಯೋತಿರ್ಲಿಂಗವನ್ನು ಭಾವಿಸಿ ಅಲ್ಲಿ ಪರಶಿವನನ್ನು ಧ್ಯಾನಿಸಬೇಕು. ಹೃದಯದಲ್ಲಿರುವ ಕಮಲದಲ್ಲಿ ಪ್ರಾಣಗಳ ಒಳಗಿನ ಮನಸ್ಸಿನ ಸ್ಥಾನದಲ್ಲಿ ಯಾವ ಜ್ಯೋತಿರ್ಮಯ ಲಿಂಗವಿದೆಯೋ ಅದೇ ಪ್ರಾಣಲಿಂಗ. ಜ್ಯೋತಿರ್ಮಯವಾದ ಈ ಸ್ಥಾನವನ್ನೇ ಮುಖ್ಯಸ್ಥಾನವೆಂದು ಪರಿಗಣಿಸುತ್ತಾರೆ. ಅಲ್ಲಿಯೇ ಶಂಭುವನ್ನು ಭಾವಿಸಿ ಧ್ಯಾನ ಮಾಡುವುದರಿಂದ ಮುಕ್ತಿಯು ಪ್ರಾಪ್ತವಾಗುತ್ತದೆ ಎಂದು ಆಗಮಗಳು ನಿರೂಪಿಸುತ್ತವೆ. ಈ ಪ್ರಾಣಲಿಂಗದ ಉಪಾಸನೆಯನ್ನೇ ಚೆನ್ನಬಸವಣ್ಣವರು ತಮ್ಮ ವಚನದಲ್ಲಿ –

ಪಶ್ಚಿಮಪದ್ಮಾಸನದಲ್ಲಿ ಕುಳ್ಳಿರ್ದು, ನಿಟ್ಟೆಲುವ ನೆಟ್ಟನೆ ಮಾಡಿ,
ಅಧೋಮುಖ ಕಮಲವ ಬಲಿದು, ಊರ್ಧ್ವಮುಖವ ಮಾಡಿ,
ಇಂದ್ರಿಯಂಗಳನು ಏಕಮುಖವ ಮಾಡಿ, ಚಂದ್ರ ಸೂರ್ಯರನೊಂದೆ ಠಾವಿನಲ್ಲಿರಿಸಿ,
ಅತ್ತಿತ್ತ ಮಿಸುಕದೆ ನಡುಗೀರ ಜ್ಯೋತಿಯ ದೃಢವಾಗಿ ಹಿಡಿದು,
ಪರಮಾನಂದದ ಮಠದೊಳಗೆ, ಪ್ರಾಣಲಿಂಗಾರ್ಚನೆಯ ಮಾಡುವ
ಮಹಾಮಹಿಮರ ತೋರಿ ಬದುಕಿಸಾ, ಕೂಡಲಚೆನ್ನಸಂಗಯ್ಯಾ[೨]

ಎಂದು ಆಗಮದಲ್ಲಿ ಪ್ರತಿಪಾದಿತಗೊಂಡ ಪ್ರಾಣಲಿಂಗದ ಉಪಾಸನೆಯ ಕ್ರಮವನ್ನೇ ಅತ್ಯಂತ ಸರಳವಾಗಿ, ಮನೋಜ್ಞವಾಗಿ ನಿರೂಪಿಸಿದ್ದಾರೆ. ಪಾಶುಪತಾಗಮವು ಈ ಪ್ರಾಣಲಿಂಗದ ಸ್ವರೂಪವನ್ನು ವಿವರಿಸುತ್ತ –

ಚಿದೇವ ದಿವ್ಯಮೂರ್ತಿಃ ಸ್ಯಾಚ್ಚಿತ್ಪ್ರಾಣಶ್ಚ ತಥೈವ ಚ ।

---

೧. ಚಂ. ಆ. ಕ್ರಿ. ಪಾ. ಪಟಲ ೩, ಶ್ಲೋಕ ಸಂಖ್ಯೆ ೩೩–೩೬

೨. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೧೩೪೩ ಪುಟ ೪೭೪

ಆನಂದ ಏವ ಲಾವಣ್ಯಂ ಪ್ರಾಣಲಿಂಗಸ್ಯ ಚೋದಿತಮ್ ॥
ಷಟ್‌ತ್ರಿಂಶತ್ ತತ್ತ್ವಜಾತೀಷು ಭಾಸಮಾನಂ ಮುದಾನ್ವಿತಮ್ ।
ಸ್ಫಟಿಕಾಂತರ್ದೀಪಮಿವ ಬಾಹ್ಯೇ ಚಾಭ್ಯಂತರೇ ತಥಾ ॥
ಏವಂ ವಿಧೇ ಪ್ರಾಣಲಿಂಗೇ ಚೇಷ್ಟಲಿಂಗಂ ವಿಭಾವಯೇತ್ ।
ಸರ್ವವ್ಯಾಪೀಶ್ವರಶ್ಚೇತಿ ಮತಿರಾಹ್ವಾನಮೇವ ಚ ॥

ಸತ್ತು ಆ ದಿವ್ಯ ಲಿಂಗದ ಮೂರ್ತಿ, ಚಿತ್ತು ಅದರ ಪ್ರಾಣ, ಆನಂದವು ಅದರ ಲಾವಣ್ಯ, ಮೂವತ್ತಾರು ತತ್ತ್ವಗಳಲ್ಲಿ ಬೆಳಗುತ್ತಿರುವ ಸ್ಫಟಿಕದ ಪಾತ್ರೆಯಲ್ಲಿರುವ ಆ ದೀಪವು ಪಾತ್ರೆಯ ಒಳಗೂ ಹೊರಗೂ ಪ್ರಕಾಶದಿಂದ ತುಂಬಿರುತ್ತದೆ. ಈ ಬಗೆಯ ಪ್ರಾಣಲಿಂಗದಲ್ಲಿ ಇಷ್ಟಲಿಂಗವನ್ನು ಅಂತರ್ಭಾವ ಮಾಡಬೇಕೆಂದು ವಿವರಿಸುತ್ತದೆ.

ಪ್ರಾಣಲಿಂಗಿ ಸ್ಥಲದ ಆಂತರಿಕಪೂಜಾಕ್ರಮ

ಪ್ರಾಣಲಿಂಗದ ಪೂಜೆಗೆ ಬಾಹ್ಯಪದಾರ್ಥಗಳು ನಿರುಪಯೋಗಿಗಳು. ಕಾರಣ ಆಂತರಿಕ ಭಾವ ವಸ್ತುಗಳಿಂದಲೇ ಅದನ್ನು ಪೂಜಿಸಬೇಕೆಂದು ಸೂಚಿಸಲಾಗಿದೆ. ಸಾಮಾನ್ಯವಾಗಿ ಸಾಧಕನು ಇಷ್ಟಲಿಂಗವನ್ನು ಜಲ, ಭಸ್ಮ, ಹೂ, ಪತ್ರಿ, ಧೂಪ, ದೀಪ ಮುಂತಾದ ಉಪಚಾರಗಳಿಂದ ಪೂಜಿಸುತ್ತಾನೆ. ಆದರೆ ಈ ಪ್ರಾಣಲಿಂಗದ ಪೂಜೆಗೆ ಆಂತರಿಕ ಸದ್ಗುಣಗಳನ್ನು ಉಪಚಾರಗಳ ರೂಪದಲ್ಲಿ ಉಪಯೋಗಿಸಿ ಕೊಳ್ಳಬೇಕಾಗುತ್ತದೆ. ಅವನ ಪೂಜಾವೈಭವ ಅಮೋಘವನ್ನು ಸುಪ್ರಭೇದಾಗಮವು ವಿವರಿಸುತ್ತ –

ಸ್ನಾನಂ ಸುಚಿತ್ತಸಲಿಲೇನ ಹಿ ಪೂರ್ಣಭಾವಂ ।
ವಸ್ತ್ರಂ ತ್ರಿಶಕ್ತಿಗುಣಸಂಯುತ ಯಜ್ಞಸೂತ್ರಂ ।
ವಿದ್ಯಾ ಸುಗಂಧಮಿವ ಭೂತದಯಾಕ್ಷತಾಂಶ್ಚ ।
ಶಬ್ದಾದಿಪುಷ್ಪಚಯಮರ್ಪಯ ನಿತ್ಯಮಂಗ ॥

ಶುದ್ಧವಾದ ಮನಸ್ಸೇ ನೀರು, ಪರಿಪೂರ್ಣ ಭಾವವೇ ವಸ್ತ್ರ, ಇಚ್ಛಾ–ಜ್ಞಾನ–ಕ್ರಿಯಾ ಎಂಬ ಮೂರು ಶಕ್ತಿಗಳೆಂಬುವೇ ಮೂರೆಳೆಯ ಯಜ್ಞೋಪವೀತ, ವಿದ್ಯೆಯೇ ಗಂಧ, ಭೂತದಯೆಯೇ ಅಕ್ಷತೆ, ಪಂಚೇಂದ್ರಿಯಗಳ ವಿಷಯಗಳೇ ಪತ್ರ–ಪುಷ್ಪಗಳು. ಮನಸ್ಸು, ಬುದ್ಧಿ, ಚಿತ್ತ ಅಹಂಕಾರಗಳೇ ಧೂಪ, ಪಂಚಜ್ಞಾನೇಂದ್ರಿಯಗಳೇ ದೀಪ. ಈ ಇಂದ್ರಿಯಗಳ ವಾಸನೆಯೆಂಬ ಎಣ್ಣೆಯನ್ನು ಉರಿಸಬೇಕು. ಸುಖದುಃಖ ಸಮರ್ಪಣವೇ ನೈವೇದ್ಯ, ಸತ್ವ–ರಜಃ–ತಮಸ್ಸೆಂಬ ಮೂರು ಗುಣಗಳೇ ತಾಂಬೂಲ. ಪ್ರಾಣಾರ್ಪಣವೇ ನಮಸ್ಕಾರ, ಶಾಂತಿಯೇ ಪುಷ್ಪಾಂಜಲಿ, ಲಿಂಗಾಂಗಗಳ ಏಕೀಭಾವವೇ ವಿಸರ್ಜನೆ ಎಂದು ಮಾನಸಿಕವಾದ ಪ್ರಾಣಲಿಂಗ ಪೂಜೆಯಲ್ಲಿಯ ಉಪಚಾರಗಳನ್ನು ಅತ್ಯಂತ ಮನೋಜ್ಞವಾಗಿ ವರ್ಣಿಸಿದೆ. ಪ್ರಾಣಲಿಂಗಕ್ಕೆ ಭಾವಪುಷ್ಪಗಳಿಂದ ಪೂಜೆ ಸಲ್ಲಿಸುವ ವಿಧಾನವನ್ನು ಸೂಕ್ಷ್ಮಾಗಮವು ತಿಳಿಸುತ್ತ–

---

೮. ಪಾಶುಪತಾಗಮ, ಪಟಲ ೧, ಶ್ಲೋಕಸಂಖ್ಯೆ ೧೦೩–೧೦೫

೯. ಸುಪ್ರಭೇದಾಗಮ ೭ ನೇ ಪಟಲ ೬೩–೬೫

ಅಹಿಂಸಾ ಇಂದ್ರಿಯಜಯಃ ಸರ್ವಭೂತದಯಾ ಪರಾ।
ಕ್ಷಮಾ ಧ್ಯಾನಂ ತಪೋ ಜ್ಞಾನಂ ಸತ್ಯಂ ಚೈವ ತಥಾ ಪರಮ್॥
ಏಭಿಃ ಪುಷ್ಪೈರಹಿಂಸಾದ್ಯೈರ್ಮಾನಸೈಃ ಶಿವಮರ್ಚಯೇತ್॥[೧೦]

ಅಹಿಂಸೆ, ಇಂದ್ರಿಯನಿಗ್ರಹ, ಸರ್ವಪ್ರಾಣಿಗಳಲ್ಲಿ ದಯೆ, ಕ್ಷಮೆ, ಧ್ಯಾನ, ತಪಸ್ಸು, ಜ್ಞಾನ, ಸತ್ಯ ಮುಂತಾದ ಮಾನಸ ಪುಷ್ಪಗಳಿಂದ ಶಿವನನ್ನು ಪೂಜಿಸುವುದು ಪ್ರಾಣಲಿಂಗಿ ಆಂತರಿಕ ಪೂಜೆ ಎಂದು ವಿವರಿಸಿದೆ. ಪಾಶುಪತಾಗಮವೂ ಸಹ ಪ್ರಾಣಲಿಂಗದ ಆಂತರಿಕ ಪೂಜಾಕ್ರಮವನ್ನು ತಿಳಿಸುತ್ತ

ಜಗಚ್ಛಿವಪದವ್ಯಾಪ್ತಮಿತಿ ಪ್ರಜ್ಞೈವ ಪಾದ್ಯಕಂ ।
ಈಶಃ ಸುಖಾಬ್ಧಿರೇವೇತಿ ಮತಿರರ್ಘ್ಯಂಪ್ರಕೀರ್ತಿತಂ ॥
ಪವಿತ್ರ ಜ್ಞಾನಮೇವಾಭೂದಾಚಮಾನಂ ಪ್ರಕೀರ್ತಿತಂ ।
ನಿತ್ಯನಿರ್ಮಲರೂಪಂ ತತ್ ಸ್ನಾನಮಾಹುರ್ಮನೀಷಿಣಃ ॥
ಅತಿಕ್ರಮ್ಯ ಜಗತ್ಸರ್ವಮಿತಿ ವಿದ್ಯೈವ ವಾಸಸೀ ।
ತ್ರಿಗುಣಾತೀತವಿಜ್ಞಾನಂ ಯಜ್ಞ ಸೂತ್ರಂ ವಿದುರ್ಬುಧಾಃ ॥
ಆಕಲ್ಪಕಂ ತು ಚೈತನ್ಯಮಲಂಕಾರಪ್ರಭಾ ಮತಾ ।
ಶೃಂಗಾರಃ ಪ್ರತಿಭಾ ತಸ್ಯ ಚಿಚ್ಛಕ್ತಿರನುಲೇಪನಂ ॥
ಕಾರುಣ್ಯಮಕ್ಷತಾ ತಸ್ಯ ಪುಷ್ಪಂ ತತ್ಪ್ರಣವಾತ್ಮಕಮ್ ।
ವಿಷಯೇಷು ಚ ವೈರಾಗ್ಯಂ ಧೂಪಮಿತ್ಯಭಿಧೀಯತೇ ॥
ಪರಂಜ್ಯೋತಿಃ ಸ್ವರೂಪಂ ತದ್ದೀಪಮಿತ್ಯಭಿಧಿಯತೇ ।
ನಿತ್ಯ ತೃಪ್ತಸ್ಯ ಸಂವಿದ್ಯತ್ತನ್ನೈವೇದ್ಯಮುದೀರಿತಮ್ ॥
ಷಟ್‌ತ್ರಿಂಶತ್ ತತ್ತ್ವ ವಿಜ್ಞಾನಂ ನಮಸ್ಕಾರಕ್ರಿಯೋಚ್ಯತೇ ।
ಸೋಽಹಂ ಬ್ರಹ್ಮೇತಿ ವಿಜ್ಞಾನಂ ಪ್ರದಕ್ಷಿಣಮುದಾಹೃತಂ ॥
ಅಂತರಾತ್ಮಜ್ಞಪ್ತಿರೇವ ತಾಂಬೂಲಮಿತಿ ಕಥ್ಯತೇ ।
ಇತಿ ಮಾನಸಪೂಜಾದ್ಯೈಃ ಪೂಜಿತಂ ಚೇಷ್ಟಲಿಂಗಕಮ್ ॥
ಹೃತ್ಕರ್ಣಿಕಾಮಧ್ಯದೇಶೇ ಶೂನ್ಯಸಿಂಹಾಸನೇ ತಥಾ ।
ಪೂವಾಚಾರ್ಯೈರ್ದತ್ತಮಿಷ್ಟಲಿಂಗಂ ಪ್ರಾಣೇ ವಿಭಾವಯೇತ್ ॥[೧೧]

ಜಗತ್ತು ಶಿವಮಯವೆಂದು ತಿಳಿವುದೇ ಪಾದ್ಯ. ಈಶ್ವರನು ಸುಖಸಾಗರನೆಂದು ಬಗೆವುದೇ ಅರ್ಘ್ಯ, ಪವಿತ್ರ ದಾನವೇ ಆಚಮನ, ಆ ಪ್ರಾಣಲಿಂಗವು ನಾಶವಿಲ್ಲದೆ ನಿಷ್ಕಳಂಕ ರೂಪವೆಂದರಿವುದೇ ಅದರ ಸ್ನಾನ, ಆ ಪ್ರಾಣಲಿಂಗವು ಎಲ್ಲವನ್ನೂ ಮೀರಿದ್ದು ಎಂಬ ವಿದ್ಯೆಯೇ ಆ ಲಿಂಗಕ್ಕೆ ಧರಿಸುವ ವಸ್ತ್ರ, ಕಲ್ಪಾಂತ್ಯದವರೆಗೂ ಚೈತನ್ಯಮಯವೆಂದರಿವುದೇ ಗಂಧಾನುಲೇಪನ, ಕಾರುಣ್ಯವೇ ಅಕ್ಷತೆ, ಪ್ರಣವವೇ

---

೧೦. ಸೂ.ಆ., ಪಟಲ ೬, ಶ್ಲೋಕಸಂಖ್ಯೆ ೨೫

೧೧. ಪಾಶುಪತಾಗಮ, ಪಟಲ ೧, ಶ್ಲೋಕಸಂಖ್ಯೆ ೧೦೬–೧೧೪

ಪುಷ್ಪ, ವಿಷಯ ವೈರಾಗ್ಯವೇ ಧೂಪ, ಪರಂಜ್ಯೋತಿ ಸ್ವರೂಪವೇ ದೀಪ, ಶಿವನು ನಿತ್ಯ ತೃಪ್ತನೆಂದರಿವುದೇ ನೈವೇದ್ಯ. ಮೂವತ್ತಾರು ತತ್ವಗಳ ಪರಿಜ್ಞಾನವೇ ನಮಸ್ಕಾರ, ಅವನೇ ನಾನು (ಸೋಽಹಂ) ಎಂಬ ಪರಿಜ್ಞಾನವೇ ಪ್ರದಕ್ಷಿಣೆ, ಅಂತರಾತ್ಮ ಜ್ಞಾನವೇ ತಾಂಬೂಲ ಮುಂತಾಗಿ ಮಾನಸ ಉಪಕರಣಗಳಿಂದ ಪೂಜಿಸಿದ ಇಷ್ಟಲಿಂಗವನ್ನು ಹೃದಯ ಕಮಲದ ಶೂನ್ಯ ಸಿಂಹಾಸನದಲ್ಲಿ ಪೂರ್ವಾಚಾರ್ಯರಿಂದ ಕೊಡಲ್ಪಟ್ಟ ಇಷ್ಟಲಿಂಗವನ್ನು ಪ್ರಾಣಲಿಂಗದಲ್ಲಿ ಭಾವಿಸಬೇಕು ಎಂದು ಪ್ರಾಣಲಿಂಗದ ಆಂತರಿಕ ಪೂಜಾಕ್ರಮವನ್ನು ವಿವರಿಸಲಾಗಿದೆ.

ಈ ಭಾವವನ್ನೇ ಯೋಗ ಜ್ಞಾನಗಳ ಸಂಗಮವಾದ ಅಲ್ಲಮಪ್ರಭುಗಳು ತಮ್ಮ ಅನುಭವಾಮೃತದಲ್ಲಿ ಅಭಿವ್ಯಕ್ತಪಡಿಸುತ್ತ –

> ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ
> ಹೂವಿಲ್ಲದ ಪರಿಮಳದ ಪೂಜೆ ಹೃದಯ ಕಮಳದಲ್ಲಿ 'ಶಿವ ಶಿವಾ' ಎಂಬ ಶಬ್ದ
> ಇದು ಅದ್ವೈತ ಕಾಣಾ ಗುಹೇಶ್ವರಾ.[೧೨]

ಎನ್ನುವಂತೆ ಶಿವಮಾನಸ ಪೂಜಾ ವಿಧಾನವು ವೀರಶೈವ ಸಾಧಕನ ಪ್ರಾಣಲಿಂಗಿ ಅವಸ್ಥೆಯಲ್ಲಿ ಸಕ್ರಮವಾಗಿ ಜರುಗುತ್ತದೆ. ಅಲ್ಲದೇ "ಗಗನವೇ ಗುಂಡಿಗೆ, ಆಕಾಶವೇ ಅಗ್ಘವಣಿ ಚಂದ್ರಸೂರ್ಯರಿಬ್ಬರು ಪುಷ್ಪ, ಬ್ರಹ್ಮ ಧೂಪ, ವಿಷ್ಣು ದೀಪ, ರುದ್ರನೋಗರ, ಸುಯಿಧಾನ ನೋಡಾ, ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ!"[೧೩] ಎಂದು ಅತ್ಯಂತ ಮನೋಜ್ಞವಾಗಿ ಪ್ರಾಣಲಿಂಗದ ಪೂಜೆಯನ್ನು ವರ್ಣಿಸಿದ್ದಾರೆ.

ಪ್ರಾಣಲಿಂಗಿ ಸ್ಥಲದ ಯೌಗಿಕ ವಿಕಾಸ

ಪ್ರಾಣಲಿಂಗಿಸ್ಥಲದ ಯೌಗಿಕ ಅನುಸಂಧಾನವನ್ನು ಕುರಿತು ಕಾರಣಾಗಮವು

> ಪ್ರಾಣಲಿಂಗಿಸ್ಥಲೇ ತ್ವಾದಿಶಕ್ತಿಯುಕ್ತೇ ತ್ವಗಂಗಕೇ।
> ಚರಲಿಂಗಾಽಭಿಧೇ ತತ್ಪೂರುಷವಕ್ತ್ರೇ ದೃಢವ್ರತಃ।
> ಭಕ್ತ್ಯಾಽನುಭವಯಾ ಮನೋಹಸ್ತೇನ ಸ್ಪರ್ಶಮರ್ಪಯೇತ್ ॥[೧೪]

ಪ್ರಾಣಲಿಂಗಿ ಸ್ಥಲದಲ್ಲಿ ಆದಿಶಕ್ತಿಯಿಂದ ಕೂಡಿದ ತತ್ಪುರುಷಮುಖ ಸ್ವರೂಪದ ಚರಲಿಂಗಕ್ಕೆ ಅನುಭವ ಭಕ್ತಿಯಿಂದ ಸುಮನಸ್ಸೆಂಬ ಹಸ್ತದಿಂದ ಸ್ಪರ್ಶ ಪದಾರ್ಥವನ್ನು 'ವಾ'ಕಾರ ಜಪಮಾಡುತ್ತಾ ಚರ್ಮದ ಮೂಲಕ ಅರ್ಪಿಸಬೇಕೆಂದು ತಿಳಿಸುತ್ತದೆ. 'ಜಂಗಮಲಿಂಗ ಪೂಜೆಗೆ ಪ್ರಾಣತ್ರಯವೆ ಮಡಿ. ಶಾಂತಿ ಜಲದ ಮಜ್ಜನ. ವಾಯು ನಿವೃತ್ತಿ ಗಂಧ. ಮನ ಸುಮನವಾದಕ್ಷತೆ. ದ್ವಾದಶ ದಳಗಳ ಪುಷ್ಪಮಾಲೆ. ಅಲ್ಲಿಯ ಕಮಲವಾಸನೆಯ ಧೂಪ, ಮಾಂಜಿಷ್ಟವರ್ಣದ ಕರ್ಪೂರ ಜ್ಯೋತಿ. ತೂರ‍್ಯಾವಸ್ಥೆಯ

---

೧೨. ಅಲ್ಲಮಪ್ರಭುದೇವರ ವ.ಸಂ. ಸಮಗ್ರ ವಚನಸಂಪುಟ ೨, ವಚನ ಸಂಖ್ಯೆ ೯೯೮, ಪುಟ ೬೩

೧೩. ಅಲ್ಲಮಪ್ರಭುದೇವರ ವ.ಸಂ. ಸಮಗ್ರ ವಚನಸಂಪುಟ ೨, ವಚನ ಸಂಖ್ಯೆ ೪೧೫, ಪುಟ

೧೪. ಕಾ.ಆ., ಪಟಲ ೭, ಶ್ಲೋಕಸಂಖ್ಯೆ ೬೩

ವಸ್ತ್ರ, ನಿರ್ಲೇಪವೆಂಬಾಭರಣ, ಸುಸ್ಪರ್ಶನ ನೈವೇದ್ಯ, ಅನುಭಾವವೆಂಬ ತಾಂಬೂಲಗಳೆಂಬ ಅಷ್ಟವಿಧದ ಉಪಚಾರಗಳನ್ನು ಪ್ರಾಣಲಿಂಗಿಯು ಸಲ್ಲಿಸುತ್ತಾನೆ.'

ಈ ಸ್ಥಲದಲ್ಲಿ ಆತನು ತ್ವಗಿಂದ್ರಿಯದಲ್ಲಿ ನೆಲೆಗೊಂಡಿದ್ದ ಆದಿಶಕ್ತಿಸಮೇತವಾದ ಜಂಗಮಲಿಂಗವನ್ನು ಅನುಭಾವಭಕ್ತಿಯಿಂದ ಆರಾಧಿಸುವನು. ಇದರ ಪರಿಣಾಮವಾಗಿ ಆತನ ಮನಸ್ಸು ಸುಮನಸ್ಸಾಗುವುದು. ಸುಮನೋಹಸ್ತದಿಂದ ಸ್ಪರ್ಶ ಪದಾರ್ಥವನ್ನು ಕೈಕೊಂಡು ತ್ವಗಿಂದ್ರಿಯಮುಖದಲ್ಲಿ ಜಂಗಮಲಿಂಗಕ್ಕೆ ಅರ್ಪಿಸುವನು. ಈ ಪ್ರಾಣಲಿಂಗದ ಅನುಸಂಧಾನದಲ್ಲಿ ಶರಣರ ಯೋಗಸಾಧನೆಯನ್ನು ಮತ್ತು ಎಲ್ಲ ಯೋಗಗಳನ್ನು ಒಳಗೊಂಡ ಶಿವಯೋಗದ ಸಾಧನೆಯನ್ನು ಇಲ್ಲಿ ಕಾಣಬಹುದು. ಹೃದಯದಲ್ಲಿ ದ್ವಾದಶ ಕಮಲವಿದ್ದು ನಾಲ್ಕು ದಳಗಳ ಊರ್ಧ್ವ ಮುಖವಾಗಿಯೂ ಅಷ್ಟದಳಗಳು ಅಧೋಮುಖವಾಗಿರುತ್ತವೆ. ಮೇಲ್ಮುಖದಲ್ಲಿ ಪರಮಾತ್ಮನು, ಅಧೋಮುಖದಲ್ಲಿ ಜೀವಾತ್ಮನಿರುತ್ತಾನೆ. ವಾಯುಮಯವಾದ ಪ್ರಾಣವನ್ನು ಲಿಂಗಮಯಗೊಳಿಸುವುದೇ ಪ್ರಾಣಲಿಂಗಿಯ ಪರಮ ಗುರಿಯಾಗಿದೆ. ಶರೀರದಲ್ಲಿಯ ಪ್ರಾಣಾದಿ ಹತ್ತು ವಾಯುಗಳನ್ನು ಸ್ಥಿರೀಕರಿಸಿ ಪ್ರಾಣವನ್ನು ಲಿಂಗದಲ್ಲಿರಿಸಿ, ಸಾರವಸ್ತುವಾಗಲಿ, ಕಸವಾಗಲಿ, ಸುಖವಾಗಲಿ, ದುಃಖವಾಗಲಿ ಎಲ್ಲದರಲ್ಲಿ ಸಮತ್ವವನ್ನು ಸಾಧಿಸಿದವನೇ ಪ್ರಾಣಲಿಂಗಿಯೆನಿಸುವನು. ಯೋಗ ಸಾಧನೆಯಿಂದ ಪ್ರಕಾಶಿಸುವ ವಿಶುದ್ಧಿ ಚಕ್ರದಲ್ಲಿಯ ಜ್ಯೋತಿಯಲ್ಲಿ ಅಡಕವಾಗಿರುವ ಪ್ರಾಣವು ನಿತ್ಯ ಗತಿಯನ್ನು ಹೊಂದಿರುವುದರಿಂದ ಇದಕ್ಕೆ ಜಂಗಮಲಿಂಗವೆಂದು ಇನ್ನೊಂದು ಹೆಸರು. ಆಂತರಿಕ ಈ ಲಿಂಗದಲ್ಲಿ ಶಾಂತಿಕಲೆ ನೆಲೆಗೊಂಡಿದ್ದು ಇದನ್ನು ಅನುಸಂಧಾನಿಸುವ ಸಾಧಕನಿಗೆ ಶಾಂತಿ ಸಮನಿಸುತ್ತದೆ.

ಒಟ್ಟಿನಲ್ಲಿ ಪ್ರಾಣಲಿಂಗಿ ಸ್ಥಲದ ವಿವೇಚನೆಯನ್ನು ಶಿವಾಗಮಗಳು ಮತ್ತು ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಅವಲೋಕಿಸಲಾಗಿ "ಶಿವಯೋಗ ಸಾಧನೆಯ ಕೈಗನ್ನಡಿಯಾದ ಇಷ್ಟಲಿಂಗವನ್ನು ತನ್ನ ಪ್ರಾಣವೆಂದು ತಿಳಿದು ಆಂತರಿಕವಾದ ಪ್ರಾಣಲಿಂಗವನ್ನು ಅನುಭಾವ ಭಕ್ತಿಯ ಮೂಲಕ ಅನುಸಂಧಾನಿಸಿ ಆತ್ಮಶಾಂತಿಯನ್ನು ಸಾಧಿಸುವ ಸಾಧಕ ಪ್ರಾಣಲಿಂಗಿ" ಎಂದು ಶಿವಾಗಮಗಳು ಪ್ರತಿಪಾದಿಸಿವೆ. ಜ್ಯೋತಿರ್ಮಯವಾದ ಪ್ರಾಣಲಿಂಗವು ಹೃದಯಕಮಲದಲ್ಲಿ ಪ್ರತಿಷ್ಠಿತವಾಗಿದ್ದು ಈ ಪ್ರಾಣಲಿಂಗದ ಪೂಜೆಗೆ ಬಾಹ್ಯಪದಾರ್ಥಗಳು ನಿರುಪಯೋಗಿಗಳು. ಕಾರಣ ಆಂತರಿಕ ಸದ್ಗುಣಗಳನ್ನು ಉಪಚಾರಗಳ ರೂಪದಲ್ಲಿ ಉಪಯೋಗಿಸಿ ಆ ಭಾವವಸ್ತುಗಳಿಂದಲೇ ಪ್ರಾಣಲಿಂಗವನ್ನು ಪೂಜಿಸಬೇಕೆಂದು ಸೂಚಿಸಲಾಗಿದೆ. ಭಕ್ತನು ಬಹಿರ್ಮುಖನಾಗಿ ಶ್ರದ್ಧಾಭಕ್ತಿಯಿಂದ ಇಷ್ಟಲಿಂಗದ ಉಪಾಸನೆ ಮಾಡುವಂತೆ ಅಂತರ್ಮುಖನಾಗಿ ಅನುಭಾವಭಕ್ತಿಯಿಂದ ಪ್ರಾಣಲಿಂಗಾನುಸಂಧಾನವನ್ನು ಕೈಗೊಳ್ಳಬೇಕೆಂದು ಆಗಮಗಳು ಪ್ರತಿಪಾದಿಸಿವೆ.

ವಚನಗಳು ಸಹ ಶಿವಾಗಮಗಳಲ್ಲಿ ಪ್ರತಿಪಾದನೆಗೊಂಡ ಪ್ರಾಣಲಿಂಗಿಸ್ಥಲದ ಇದೇ ಲಕ್ಷಣಗಳನ್ನು ತಮ್ಮ ಅನುಭವದ ನುಡಿಗಳಲ್ಲಿ ಅತ್ಯಂತ ಮನೋಜ್ಞವಾಗಿ ಪ್ರತಿಪಾದಿಸಿವೆ.

೫.೩.೭ ಶರಣಸ್ಥಲ

ಶರಣ ಸ್ಥಲವು ಷಟ್‌ಸ್ಥಲ ಸೋಪಾನದಲ್ಲಿ ಐದನೆಯ ಸ್ಥಲ. ಸಂಪೂರ್ಣವಾಗಿ ಶಿವನನ್ನೇ ಶರಣು ಹೋದ ಸಾಧಕನಿಗೆ 'ಶರಣ' ಎಂದು ಕರೆಯಲಾಗುತ್ತದೆ. ಶರಣಾಗತಿಯೇ ಈ ಸ್ಥಲದ ಜೀವಾಳ. ತನ್ನ ಎಲ್ಲ ಜವಾಬ್ದಾರಿಯನ್ನು ಭಗವಂತನಿಗೆ ಸಮರ್ಪಿಸಿ ತಾನು ನೆಮ್ಮದಿಯಿಂದ ಬದುಕುವವನೇ ಶರಣ.

ಶರಣಪದದ ಅರ್ಥ –

ಶಾಬ್ದಿಕ ಅರ್ಥದಲ್ಲಿ 'ಶರಣ' ಎಂದರೆ ರಕ್ಷಣೆ, ರಕ್ಷಕ, ಮನೆ, ಮೊರೆ, ಕಾಪಾಡುವವನು, ಆಶ್ರಯವನ್ನು ಬಯಸಿದವನು. ಮೊರೆಹೊಕ್ಕವನು ಎಂದಾಗುತ್ತದೆ. ಆದರೆ ಷಟ್‌ಸ್ಥಲಾಂತರ್ಗತ ಶರಣ ಶಬ್ದಕ್ಕೆ ಲಿಂಗಪತಿಗೆ ಶರಣುಹೋದವನು. ಲಿಂಗಕ್ಕೆ ಮೊರೆಹೊಕ್ಕವನು ಎಂದಾಗುತ್ತದೆ.

ಆಗಮಗಳು "ಶಿವನಿತ್ಯತ್ವ ನಿಶ್ಚಿಂತಃ ಸ್ವಾನಂದಃ ಶರಣೋ ಭವೇತ್"[೧] ಎಂದು ಶರಣ ಪದದ ಅರ್ಥವನ್ನು ವಿಶ್ಲೇಷಿಸಿವೆ. ಶಿವನು ನಿತ್ಯವು ತನ್ನಲ್ಲಿಯೇ ಇದ್ದಾನೆ ಎಂಬ ಶಿವಭಾವವನ್ನು ಸ್ಥಿರವಾಗಿ ಹೊಂದಿ ನಿಶ್ಚಿಂತನಾದ, ಆನಂದಭಕ್ತಿ ತುಂದಿಲನೇ ಶರಣ.

ಈ ಸ್ಥಲದ ಸಾಧಕನಿಗೆ ಆನಂದ ಭಕ್ತಿ ಇರುತ್ತದೆ. ಆನಂದಕ್ಕೂ ಸುಖಕ್ಕೂ ಸೂಕ್ಷ್ಮ ವ್ಯತ್ಯಾಸವಿದೆ. ಸುಖ ಕ್ಷಣಿಕವಾಗಿದ್ದು ಇದು ಬಾಹ್ಯವಸ್ತುಗಳನ್ನು ಅವಲಂಬಿಸಿರುವುದು. ಆದರೆ ಆನಂದವು ಯಾವ ಬಾಹ್ಯವಸ್ತುವಿನ ಅವಲಂಬನೆ ಇಲ್ಲದೆ ಆಂತರಿಕವಾಗಿ ಆತ್ಮಜನ್ಯವಾಗಿರುತ್ತದೆ. ಕಾರಣ ಶರಣನು ಬಾಹ್ಯ ವಸ್ತುಗಳ ಬಗ್ಗೆ ಅನಾಸಕ್ತಿ ಹೊಂದಿ ಸಂಪೂರ್ಣ ಸಮರ್ಪಣ ಮನೋಭಾವನೆಯಿಂದ ಶಿವನಿಗೆ ಶರಣಾಗತನಾಗಿ ತನ್ನೆಲ್ಲಾ ಹೊಣೆಯನ್ನು ಶಿವನಿಗೆ ಅರ್ಪಿಸಿ ನಿಶ್ಚಿಂತನಾಗಿರುವನು. ಕಾರಣ ಪಾರಮೇಶ್ವರಾಗಮವು–

ಈಷಣಾತ್ರಯನಿರ್ಮುಕ್ತೋ ನಿತ್ಯಮೇಕಾಂತಸೇವನಃ।
ಮಮ ಧ್ಯಾನರತೋ ನಿತ್ಯಂ ಶರಣಃ ಪರಿಕೀರ್ತಿತಃ ॥
ಶರಣತ್ವಾಧಿಕಾರೀ ಯಃ ಸ ದೇಹಾಂತೇ ಶಿವೋ ಭವೇತ್।
ಶರಣಾಖ್ಯಸ್ಥಲಮಿದಂ ಮಮ ಚಾತಿಪ್ರಿಯಂ ಶಿವೇ ॥

"ಮೂರು ವಿಧದ ಈಷಣೆ (ಪುತ್ರೇಷಣಾ, ವಿತ್ತೇಷಣಾ ಮತ್ತು ಪ್ರತಿಷ್ಠೇಷಣಾ) ಗಳಿಂದ ಮುಕ್ತನಾದವನು, ಸದಾ ಏಕಾಂತದಲ್ಲಿರುವವನು ಮತ್ತು ಸದಾ ಶಿವನ ಧ್ಯಾನದಲ್ಲಿರುವವನು ಶರಣನೆಂದು ಪ್ರಶಂಸಿಸಲ್ಪಡುತ್ತಾನೆ" ಎಂದು ವಿವರಿಸಿದೆ.

ಶರಣಸ್ಥಲದ ಲಕ್ಷಣ

ಶಿವಾಗಮಗಳು ಶರಣಸ್ಥಲದ ಲಕ್ಷಣವನ್ನು ತಿಳಿಸುತ್ತಾ ಲಿಂಗವೇ ಪತಿಯಾಗಿ, ತಾನು ಸತಿಯೆಂಬ ಭಾವದಿಂದ ಪಂಚೇಂದ್ರಿಯಗಳ ಸುಖವನ್ನು ತ್ಯಜಿಸಿದವನೇ ಶರಣಸ್ಥಲ ಎಂದು ವ್ಯಾಖ್ಯಾನಿಸಿವೆ.

---

೧. ಸೂ.ಆ. ಪಟಲ ೮, ಶ್ಲೋಕ ಸಂಖ್ಯೆ ೩೫

೨. ಪಾ.ಆ. ಪಟಲ ೬, ಶ್ಲೋಕ ಸಂಖ್ಯೆ ೨೩–೨೪

"ಪತಿರ್ಲಿಂಗಂ ಸತಿ ಭಾರ್ಯಾವಾಮಿತಿ ಯುಕ್ತಂ ಸದಾ ತಥಾ ।
ಪಂಚೇಂದ್ರಿಯಸುಖಂ ನಾಸ್ತಿ ಶರಣಸ್ಥಲಮುತ್ತಮಂ ॥"
ಲಿಂಗವೇ ಪತಿಯಾಗಿ, ತಾನು ಸತಿಯೆಂಬ ಭಾವದಲ್ಲಿ ಆಚರಿಸಿ,
ಪಂಚೇಂದ್ರಿಯಸುಖಂಗಳ ಬಯಸದಿಹುದೀಗ ಶರಣಸ್ಥಲ ನೋಡಾ.[೩]

ಎಂದು ಆಗಮದ ಉಲ್ಲೇಖದೊಂದಿಗೆ ವಚನದಲ್ಲಿ ಶರಣಸ್ಥಲದ ಲಕ್ಷಣವನ್ನು ವಿವರಿಸಿದ್ದಾರೆ. ಇಲ್ಲಿ ಶರಣನು ಎಲ್ಲವನ್ನು ಭಗವಂತನಿಗೆ ಸಮರ್ಪಿಸಿರುತ್ತಾನೆ. ಭಗವಂತನೆ ಅವನ ಎಲ್ಲ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ. ಇದರಿಂದ ಈ ಶರಣನಿಗೆ ಯಾವುದೇ ಬಾಧೆಗಳು ಕಾಡಲಾರವು. ಅವನು ಎಲ್ಲವನ್ನು ಭಗವಂತನಿಗೆ ಹೊರಿಸಿ ತಾನು ನಿಶ್ಚಿಂತನಾಗಿರುತ್ತಾನೆ. ಸತತ ಸಂತುಷ್ಟನಾಗಿರುತ್ತಾನೆ. ಇದನ್ನೇ ವಚನಗಳಲ್ಲಿ ಅಭಿವ್ಯಕ್ತಪಡಿಸುತ್ತ

ಎನ್ನ ವಾಮ ಕ್ಷೇಮ ನಿಮ್ಮದಯ್ಯಾ, ಎನ್ನ ಹಾನಿ ವೃದ್ಧಿ ನಿಮ್ಮದಯ್ಯಾ,
ಎನ್ನ ಮಾನಾಪಮಾನವೂ ನಿಮ್ಮದಯ್ಯಾ
ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವಾ[೪]

ಎಂದು ಪ್ರತಿಪಾದಿಸಿದ್ದಾರೆ. ಹೀಗೆ ಈ ಸ್ಥಲದ ಸಾಧಕನು "ಲಿಂಗಂ ಪತಿಃ ಸತೀ ಚಾಹಂ ಭಾವೋಽಯಂ ವೀರಶೈವಿನಾಮ್"[೫] ಎಂಬುದು ವಿಶೇಷವಾಗಿ ಶರಣಸ್ಥಲದ ನೆಲೆಯಲ್ಲಿರುವ ಭಕ್ತನಿಗೆ ಅನ್ವಯಿಸುತ್ತದೆ. ಲಿಂಗದಲ್ಲಿ ಭಕ್ತಿ, ಲಿಂಗದ ಸೇವೆ, ಲಿಂಗ ಪೂಜೆ, ಲಿಂಗದ ಧ್ಯಾನ, ಲಿಂಗದಲ್ಲಿ ಮನಸ್ಸು; ಲಿಂಗಪೂಜೆಯಲ್ಲಿ ನಿರತವಾದ ಕೈಗಳು; ಲಿಂಗಸ್ತುತಿಯನ್ನು ಕೇಳುವ ಅಭಿಲಾಷೆಯುಳ್ಳ ಕಿವಿಗಳು; ಲಿಂಗಾರ್ಪಿತ ರಸವನ್ನು ಸ್ವೀಕರಿಸುವ ರಸನೆ; ಲಿಂಗಕ್ಕೆ ಧರಿಸಿದ ಹೂವುಗಳನ್ನು ಮೂಸಿನೋಡುವ ನಾಸಿಕ; ಲಿಂಗಕ್ಕೆ ಮಾಡಿದ ಅಲಂಕಾರವನ್ನು ನೋಡುವ ಆಸಕ್ತಿಯುಳ್ಳ ಕಣ್ಣುಗಳು; ಲಿಂಗಪ್ರದಕ್ಷಿಣೆಗಾಗಿಯೇ ಇರುವ ಪಾದಗಳು,[೬] ಹೀಗೆ ಶರಣನ ಎಲ್ಲ ಕ್ರಿಯೆಗಳು ಲಿಂಗಮುಖವಾಗಿಯೆ ನಡೆದು ಶರಣನ ಸರ್ವಾರ್ಪಣಭಾವವನ್ನು ನಾವು ಇಲ್ಲಿ ಕಾಣುತ್ತೇವೆ. ಇದೇ ಮಾತನ್ನು ಸ್ಪಷ್ಟಪಡಿಸುತ್ತ –

ಲಿಂಗ ಮುಂತಾಗಿಯೇ ನಡೆವನು ಶರಣನು
ಲಿಂಗ ಮುಂತಾಗಿಯೇ ನುಡಿವನು ಶರಣನು
ಲಿಂಗ ಮುಂತಾಗಿಯೇ ತೃಪ್ತನು ಶರಣನು
ಲಿಂಗಕಾಯ ಶರಣ. ಶರಣಕಾಯ ಲಿಂಗ
ಇದು ಕಾರಣ ಕೂಡಲಚೆನ್ನಸಂಗಯ್ಯಾ ನಿಮ್ಮ ಶರಣ ಸರ್ವಾಂಗಲಿಂಗಿ.[೭]

ಎಂದು ಲಿಂಗದ ಕಾಯ ಶರಣನಾದರೆ, ಶರಣನ ಕಾಯ ಲಿಂಗವೆನಿಸುವುದರಿಂದ

೩. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ. ೮, ವಚನ ಸಂಖ್ಯೆ ೩೬೯, ಪುಟ ೧೬೭
೪. ಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೬೦, ಪುಟ ೧೮
೫. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೫೨
೬. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೪೮–೫೧
೭. ಚೆನ್ನಬಸವಣ್ಣನವರ ವ.ಸಂ. ಸಮಗ್ರ ವಚನ ಸಂಪುಟ ೩, ವಚನ ಸಂಖ್ಯೆ ೪೬೮, ಪುಟ ೧೪೪

ಶರಣ ಸರ್ವಾಂಗಲಿಂಗಿಯಾಗುವನು. ಕಾರಣ ಶಿವನಲ್ಲಿ ಒಂದಾಗುವ ಐಕ್ಯಸ್ಥಲದ ಸಮೀಪವಿರುವ ಈ ಶರಣಸ್ಥಲದ ಯೋಗಿಯಲ್ಲಿ ಸಾಗರದ ಸಮೀಪ ಬಂದ ನದಿಯಲ್ಲಿ ಸಾಗರದ ಉಪ್ಪಿನಾಂಶ ಮುಂತಾದ ಗುಣಗಳು ಸೇರಿಕೊಳ್ಳುವಂತೆ ಶಿವಗುಣಗಳು ಅಧಿಕವಾಗುತ್ತ ಬರುತ್ತವೆ. 'ಶಿವೋऽಹಂ' ಭಾವವು ಬಲಿಯುತ್ತ ಶಿವನನ್ನು ಸೇರುವ ತೀವ್ರತೆ ಎದ್ದು ತೋರುತ್ತದೆ ಎಂದು ಆಂತರಿಕ ಪೂಜಾ ಕ್ರಮವನ್ನು ವಿವರಿಸಿದ್ದಾರೆ.

ಶರಣಸ್ಥಲದ ಆಂತರಿಕಪೂಜಾಕ್ರಮ

> ಶರಣಸ್ಥಲೇ ತು ಪರಯಾ ಶಕ್ತ್ಯಾ ಯುಕ್ತೇ ಶ್ರವೋಂಗಗೇ।
> ಪ್ರಸಾದಲಿಂಗೇ ತ್ವೀಶಾನಮುಖೇ ಶಬ್ದಪ್ರಸಾದಕಮ್।
> ಆನಂದಭಕ್ತ್ಯಾ ಸುಜ್ಞಾನಹಸ್ತೇನೈವ ಸಮರ್ಪಯೇತ್ ॥[೮]

ಶರಣ ಸ್ಥಲದಲ್ಲಿ ಪರಾಶಕ್ತಿಯುಕ್ತವಾದ ಈಶಾನ ಮುಖ ಸ್ವರೂಪದ ಪ್ರಸಾದಲಿಂಗಕ್ಕೆ ಆನಂದ ಭಕ್ತಿಯಿಂದ ಸುಜ್ಞಾನವೆಂಬ ಹಸ್ತದಿಂದ ಶಬ್ದಪದಾರ್ಥವನ್ನು 'ಯ'ಕಾರ ಜಪಮಾಡುತ್ತಾ ಕಿವಿಯ ಮೂಲಕ ಸಮರ್ಪಿಸಬೇಕು ಎಂದು ಶರಣನ ಸಮರ್ಪಣಾ ಕ್ರಮವನ್ನು ಆಗಮಗಳು ವಿವರಿಸಿವೆ. ಶರಣಸ್ಥಲದ ಯೋಗಿಯು ಎಲ್ಲವನ್ನು ಶಿವನಿಗೆ ಸಮರ್ಪಿಸುವುದರಿಂದಲೇ ಸದಾ ಆನಂದದಿಂದ ಇರುತ್ತಾನೆ. ಈ ಆನಂದವೇ ಅವನ ಭಕ್ತಿಯಾಗಿರುತ್ತದೆ. ಈ ಆನಂದ ಭಕ್ತಿಯಿಂದ ಅವನು ಪ್ರಸಾದಲಿಂಗದ ಅನುಸಂಧಾನ ಮಾಡುತ್ತಾನೆ.

ಶರಣಸ್ಥಲದ ಯೌಗಿಕ ವಿಕಾಸ

ಶಿವಯೋಗ ಸಾಧನೆಯ ಮೂಲಕ ವಿಶುದ್ಧಿಚಕ್ರದಲ್ಲಿ ತೋರುವ ಜ್ಯೋತಿಯನ್ನೇ ಆಗಮಗಳಲ್ಲಿ ಪ್ರಸಾದಲಿಂಗವೆಂದು ಕರೆದಿರುವರು. ಕಂಠಸ್ಥಾನದ ವಿಶುದ್ಧಿ ಚಕ್ರದಲ್ಲಿ ತೋರುವ ಈ ಜ್ಯೋತಿಯನ್ನು ಅನುಸಂಧಾನಗೈಯುವ ಸಾಧಕನಿಗೆ ನಿತ್ಯ ಪ್ರಸನ್ನತೆ ಲಭಿಸುವುದರಿಂದ ಇದಕ್ಕೆ ಪ್ರಸಾದಲಿಂಗವೆಂದು ಕರೆಯುವರು. ಈ ಪ್ರಸಾದಲಿಂಗದಲ್ಲಿ ಶಾಂತ್ಯಾತೀತ ಕಲೆಯು ನೆಲೆಗೊಂಡಿರುತ್ತದೆ. ಎಲ್ಲ ದುಃಖಗಳು ದೂರಾಗಿ ಆತ್ಮಿಕ ಶಾಂತಿ ಸ್ಥಿರವಾದಾಗ ಅದು ಶಾಂತ್ಯಾತೀತ ಕಲೆಯೆನಿಸುವುದು. ಪ್ರಸಾದಲಿಂಗದ ಅನುಸಂಧಾನಗೈಯುವ ಸಾಧಕನಿಗೆ ಇಂತಹ ಶಾಂತ್ಯಾತೀತ ಕಲೆಯು ನೆಲೆಗೊಳ್ಳುವುದು. ಅವನು ಅನುಭವಿಸುವ ಶಾಂತಿಯಲ್ಲಿ ಹೊಯ್ದಾಟವಿರುವುದಿಲ್ಲ. ಒಟ್ಟಿನಲ್ಲಿ ಶರಣನು ಆನಂದಭಕ್ತಿಯಿಂದ ಶಾಂತ್ಯಾತೀತ ಕಲೆಯಿಂದ ಕೂಡಿದ ಪ್ರಸಾದಲಿಂಗವನ್ನು ಅನುಸಂಧಾನ ಮಾಡುತ್ತಾನೆ.

ಒಟ್ಟಿನಲ್ಲಿ ಶರಣಸ್ಥಲದ ಸಾಧಕನು ಸಂಪೂರ್ಣವಾಗಿ ತನ್ನ ಎಲ್ಲ ಜವಾಬ್ದಾರಿಯನ್ನು ಭಗವಂತನಿಗೆ ಸಮರ್ಪಿಸಿ ತಾನು ನೆಮ್ಮದಿಯಿಂದ ಬದುಕುವವನೇ ಶರಣನೆಂದು ಆಗಮಗಳು ಪ್ರತಿಪಾದಸಿವೆ. ವಚನಗಳೂ ಸಹ ತಮ್ಮ ಅನುಭವಪೂರ್ಣವಾದ ತಾತ್ವಿಕ ನುಡಿಯೊಂದಿಗೆ ಇದೇ ಅಭಿಪ್ರಾಯವನ್ನು ಸತ್ವಯುತವಾಗಿ ಪ್ರತಿಪಾದಿಸುವುದರ ಜೊತೆಗೆ ತಮ್ಮ ಸಾಧನಾ ಪಥದಲ್ಲಿ ಅಳವಡಿಸಿ ತೋರಿದ್ದಾರೆ.

---

೮. ಕಾ.ಆ. ಪಟಲ ೭, ಶ್ಲೋಕ ಸಂಖ್ಯೆ ೭೪

೫.೩.೮ ಐಕ್ಯಸ್ಥಲ

ಷಟ್‌ಸ್ಥಲ ಸೋಪಾನಗಳಲ್ಲಿ ಆರನೆಯ ಸೋಪಾನವೇ ಐಕ್ಯಸ್ಥಲ. ಮಹಾಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧಕನಿಗೆ ಐಕ್ಯನೆಂದು ಹೆಸರು. ಮನದ ಸಾಂಸಾರಿಕ ವಾಸನೆ ಅಳಿದು ಶಿವೋಹಂ ಭಾವ ಬಲಿದು ನಿಜದಲ್ಲಿ ನಿಂದ ಮಹಾತ್ಮನೇ ಐಕ್ಯಸ್ಥಲದ ಶಿವಯೋಗಿ. ಮೈಮನ ಭಾವಗಳೆಲ್ಲ ಶಿವಮಯವಾಗಿ ಎಲ್ಲೆಡೆ ಶಿವನೇ ತುಂಬಿದ ಮೇಲೆ ಎಲ್ಲ ಕಾಮನೆಗಳು ಎಲ್ಲ ಭಾವನೆಗಳು ಇಲ್ಲವಾಗುತ್ತವೆ. ಎಲ್ಲ ಇದ್ದು ತಾನೆ ಇಲ್ಲವಾಗುವ ಮತ್ತು ಎಲ್ಲಾ ಆಗುವ ಈ ಅವಸ್ಥೆಯೇ ಷಟಸ್ಥಲದ ಅಂತಿಮ ನಿಲುವು.

ಇಲ್ಲಿ ಐಕ್ಯಸ್ಥಲದ ಸ್ವರೂಪವನ್ನು ಶಿವಾಗಮ ಮತ್ತು ವಚನಸಾಹಿತ್ಯದಲ್ಲಿ ಚರ್ಚಿಸಲಾಗಿದ್ದು ಅವುಗಳ ವಿವೇಚನೆ ಇಂತಿದೆ –

ಐಕ್ಯಸ್ಥಲದ ಅರ್ಥ ಮತ್ತು ಲಕ್ಷಣ :

'ಏಕಸ್ಯ ಭಾವಃ ಐಕ್ಯಂ' ಎಂಬ ವ್ಯುತ್ಪತ್ತಿಯಂತೆ ಜೀವಾತ್ಮನು ಪರಮಾತ್ಮನಲ್ಲಿ ಬೆರೆತು ಒಂದಾಗುವ ಸಾಮರಸ್ಯದ ಸ್ಥಿತಿಯೇ ಐಕ್ಯಸ್ಥಲವಾಗಿದೆ. ಪರಾತ್ಪರ ವಸ್ತುವಾದ ಸ್ಥಲತತ್ವದಿಂದ ಬೇರ್ಪಟ್ಟ ಜೀವಿಗಳು ಸಾಧನೆಯ ಮೂಲಕ ಪುನಃ ಅದರಲ್ಲಿ ಸಮರಸ ಹೊಂದುವ ಅವಸ್ಥೆಯೆ ಐಕ್ಯಸ್ಥಲ. ಸೂಕ್ಷ್ಮಾಗಮವು ಐಕ್ಯಸ್ಥಲವನ್ನು ಹೀಗೆ ವ್ಯಾಖ್ಯಾನಿಸುತ್ತದೆ –

"ಶಿವಜೀವೋಭಯಭ್ರಾಂತಿರಹಿತಶ್ಚೈಕ್ಯ ಉಚ್ಯತೇ"[೧]

ಅರ್ಥಾತ್ ಶಿವ–ಜೀವ ಎಂಬ ಉಭಯಭೇದದ ಭ್ರಾಂತಿಯಿಲ್ಲದವನೇ ಐಕ್ಯನು. ಶರಣಸ್ಥಲದಲ್ಲಿ ಅನುಭವಕ್ಕೆ ಬಂದ ಶಿವನ ಸಖ್ಯವು ಗಾಢವಾಗಿ ಅಭೇದದಲ್ಲಿ ಒಂದಾಗಿ ನಿಲ್ಲುವುದೇ ಶಿವೈಕ್ಯಸ್ಥಿತಿ.

ಐಕ್ಯಸ್ಥಲದ ಸಾಧಕನಲ್ಲಿ ಪಶುಪತಿಗಳ ಭಾವವಾಗಲಿ, ಸತಿಪತಿಭಾವವಾಗಲಿ ಇಲ್ಲವಾಗಿ ಕೇವಲ ಶಿವೋಹಂ ಭಾವ ಮಾತ್ರ ಉಳಿದುಕೊಳ್ಳುತ್ತದೆ. ಭಕ್ತಸ್ಥಲದಲ್ಲಿ ಭಗವಂತನೊಂದಿಗೆ ಪಶುಪತಿಭಾವ ಬೆಳೆದು ಮಾಹೇಶ್ವರ ಸ್ಥಲದಲ್ಲಿ ಈ ಭಾವವೇ ಪೂರ್ಣಗೊಳ್ಳುತ್ತದೆ. ಪ್ರಸಾದಿ ಸ್ಥಲದಲ್ಲಿ ಸತಿಪತಿ ಭಾವವು ಪ್ರಾರಂಭವಾಗಿ ಶರಣ ಸ್ಥಲದಲ್ಲಿ ಬಂದು ಪೂರ್ಣಗೊಳ್ಳುತ್ತದೆ. ಈ ಎರಡು ಭಾವನೆಗಳು ಐಕ್ಯಸ್ಥಲದಲ್ಲಿ ವಿಲೀನಗೊಂಡು ಶಿವೋಹಂ ಎಂಬ ಭಾವ ಜಾಗ್ರತಗೊಳ್ಳುತ್ತದೆ. ಇದನ್ನೇ –

ಅಹಂತಾಭಾವನಾಧೀರಃ ಶಿವಲಿಂಗೈಕ್ಯ–ಸಂಜ್ಞಕಃ॥[೨]

ಎಂದು ಪಾರಮೇಶ್ವರಾಗಮವು ವಿವರಿಸಿದೆ. ಅರ್ಥಾತ್ 'ನಾನೇ ಶಿವಸ್ವರೂಪ'ನೆಂಬ ದೃಢಬುದ್ಧಿಯುಳ್ಳವನೇ ಶಿವಲಿಂಗೈಕ್ಯನು. ಸಂಪೂರ್ಣ ವಿಕಾಸಗೊಂಡ ಈ ಶಿವೋಹಂ

೧. ಸೂ.ಆ, ಪಟಲ ೮, ಶ್ಲೋಕ ಸಂಖ್ಯೆ ೩೫
೨. ಪಾ.ಆ, ಪಟಲ ೬, ಶ್ಲೋಕ ಸಂಖ್ಯೆ ೨೬

ಭಾವನೆಯು ಅದ್ವೈತವನ್ನು ಪ್ರತಿಬಿಂಬಿಸುತ್ತದೆ. ಆದರೆ ಈ ಶಿವೋಹಂ ಭಾವವು ಕೂಡಾ ಐಕ್ಯಸ್ಥಲದ ಪ್ರಾರಂಭಿಕ ಸ್ಥಿತಿ. ಏಕೆಂದರೆ ಶಿವೋಹಂ ಎಂಬ ಭಾವದಲ್ಲಿಯೂ ಅತ್ಯಂತ ಸೂಕ್ಷ್ಮವಾದ 'ಅಹಂ' ಉಳಿದುಕೊಂಡಿರುತ್ತದೆ. ಶಿವೋಹಂ ಎಂದರೆ 'ನಾನು ಶಿವನು' ಎಂದರ್ಥ. 'ನಾನು ಶಿವನು' ಎಂಬುವ ಶಬ್ದದಲ್ಲಿಯೂ 'ನಾನು' ಎಂಬ ಅಹಂ ಉಳಿದುಕೊಂಡಿರುವುದನ್ನು ಕಾಣಬಹುದು. ಆದರೆ ಐಕ್ಯಸ್ಥಲದ ಸಾಧಕ ಸಾಧನೆಯ ಪ್ರಗಾಢತೆಯಲ್ಲಿ ಪ್ರವೇಶಗೊಂಡಾಗ ಈ ಭಾವವು ಕೂಡಾ ನಿಲ್ಲಲಾರದು. ಅದನ್ನು ಮಕುಟಾಗಮದಲ್ಲಿ ಹೀಗೆ ವರ್ಣಿಸಲಾಗಿದೆ.

> ಗುರುದೀಕ್ಷಾಪರಿಪ್ರಾಪ್ತಶಿವಲಿಂಗಾಂಗಯೋಗತಃ।
> ದ್ವಿರೇಫಕೀಟನ್ಯಾಯೇನ ಶಿವೈಕ್ಯಂ ಪ್ರಾಪ್ತವಾನ್ ದ್ವಿಜಃ॥[೩]

ಅರ್ಥಾತ್ ಗುರುಕೊಟ್ಟ ದೀಕ್ಷೆಯ ಮೂಲಕ ಪಡೆದ ಲಿಂಗ ಮತ್ತು ಅಂಗಗಳ ಸಂಬಂಧವು (ಶಿವ-ಜೀವರ ಯೋಗವು) ಹಂತಹಂತಕ್ಕೂ ಹದಗೊಂಡು ದುಂಬಿ-ಕೀಟನ್ಯಾಯದಂತೆ ಶಿವಭಕ್ತನು ಶಿವೈಕ್ಯವನ್ನು ಹೊಂದುತ್ತಾನೆ. ಕೀಟವು ದುಂಬಿಯನ್ನು ನೆನೆದು ನೆನೆದು ದುಂಬಿಯೇ ಆಗಿ ಪರಿಣಮಿಸುವಂತೆ ಜೀವನು ಶಿವನನ್ನು ನಿರಂತರವಾಗಿ ಧ್ಯಾನಿಸಿ ಶಿವನಾಗಿ ಪರಿಣಮಿಸುತ್ತಾನೆ. ಈ ಸಮರಸ ಭಕ್ತಿಯ ನೆಲೆಯೇ ಜೀವನ್ಮುಕ್ತಿ ಎಂದು ಆಗಮದಲ್ಲಿ ವಿವರಿಸಲಾಗಿದೆ.

ವಚನಗಳಲ್ಲಿಯೂ ಸಹ ಆಗಮದ ಅಭಿಪ್ರಾಯವನ್ನೇ ಪ್ರತಿಪಾದಿಸಲಾಗಿದ್ದು –

> ... ಆತ್ಮಗುಣವನ್ನು ಜ್ಞಾನಮುಖದಿಂ ಗ್ರಹಿಸಿ,
> ಗುರುದತ್ತಲಿಂಗವೂ ಆತ್ಮನೂ ಏಕಮೆಂದು ತಿಳಿದು, ತೂರ್ಯಭಾವದಲ್ಲಿ ಸ್ವಭಾವಮಾಗಿ,
> ನಿಜಾನಂದ ತೂರ್ಯಾತೀತದಲ್ಲಿ ಎರಕವೆರದಿರ್ಪುದೇ ಲಿಂಗೈಕ್ಯ ಕಾಣಾ
> ಮಹಾಘನ ದೊಡ್ಡದೇಶಿಕಾರ್ಯ ಗುರುಪ್ರಭುವೆ.[೪]

ಎಂದಿದ್ದಾರೆ. ಈ ಐಕ್ಯಸ್ಥಲದ ಇದೇ ಬಗೆಯ ಲಕ್ಷಣವನ್ನು ತೋಂಟದ ಸಿದ್ಧಲಿಂಗಯತಿಗಳು

> ಕರ್ಪುರ ಅಗ್ನಿಸಂಯೋಗವಾಗಿ, ಕರ್ಪುರದ ಗುಣವಳಿದು ಅಗ್ನಿಯಾದಂತೆ
> ಲಿಂಗವ ನೆನನೆನದು ಲಿಂಗವೇ ತಾನಾಗಿಪ್ಪುದೀಗ ನಿಜಲ್ಲಿಂಗೈಕ್ಯಸ್ಥಲ
> ವೆಂದೆಂಬೆನಯ್ಯ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ[೫]

ಎಂದು ಕರ್ಪುರ ಹಾಗೂ ಅಗ್ನಿಯ ಸಂಬಂಧದೊಂದಿಗೆ ವಿವರಿಸಿದ್ದಾರೆ. ಇದನ್ನೇ ಬಸವಣ್ಣನವರು– "ಲಿಂಗವ ಪೂಜಿಸಿ ಫಲವೇನಯ್ಯಾ, ಸಮರತಿ ಸಮಕಳೆ ಸಮಸುಖ ವನರಿಯದನ್ನಕ್ಕ? ಲಿಂಗವ ಪೂಜಿಸ ಫಲವೇನಯ್ಯಾ, ಕೂಡಲಸಂಗಮದೇವರ ಪೂಜಿಸಿ ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?[೬] " ಎಂದು ಲಿಂಗೈಕ್ಯನ ನಿಲವು

---

೩. ಮ.ಆ,. ಚ.ಪಾ,. ಪಟಲ ೭, ಶ್ಲೋಕ ಸಂಖ್ಯೆ ೩
೪. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೧೦೫೫, ಪುಟ ೫೧೨
೫. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ.೬, ವಚನ ಸಂಖ್ಯೆ ೫೭೭, ಪುಟ ೨೬೪
೬ ಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೯೩೦, ಪುಟ ೨೪೫

ನದಿಯೊಳಗೆ ನದಿ ಬೆರಸಿದಂತಾಗಬೇಕು. ಅಂದರೆ ಮಾತ್ರ ಲಿಂಗವನ್ನು ಪೂಜಿಸಿ ಲಿಂಗೈಕ್ಯಸ್ಥಿತಿಗೇರಿದ ಪರಿಣಾಮ ಲಭಿಸಿದಂತಾಗುವುದು. ಮಹಾಲಿಂಗವನ್ನು ಪೂಜಿಸಿದ ಬಳಿಕ ಸಮರತಿ, ಸಮಕಳೆ, ಸಮಸುಖಗಳನ್ನು ಸಂಪಾದಿಸಿಕೊಳ್ಳಬೇಕು. ಇದುವೆ ನಿಜವಾದ ನಿಜೈಕ್ಯನ ನಿಲವು ಎಂದು ಆಗಮ ಮತ್ತು ವಚನಗಳಲ್ಲಿ ಪ್ರತಿಪಾದಿಸಲಾಗಿದೆ. ಅಂತೆಯೇ ಐಕ್ಯಸ್ಥಲದ ಸಾಧಕನು ಸಮರಸಭಕ್ತಿಯಿಂದ ಮಹಾಲಿಂಗದ ಅನುಸಂಧಾನ ಮಾಡುತ್ತಾನೆಂದು ಆಗಮಗಳಲ್ಲಿ ನಿರೂಪಿಸಲಾಗಿದೆ. ಹೀಗೆ ಮನದ ಸಾಂಸಾರಿಕ ವಾಸನೆ ಅಳಿದು ಶಿವೋಹಂ ಭಾವ ಬಲಿದು ನಿಜದಲ್ಲಿ ನಿಂದ ಮಹಾತ್ಮನೇ ಐಕ್ಯಸ್ಥಲದ ಶಿವಯೋಗಿ.

ಚಂದ್ರಜ್ಞಾನಾಗಮದಲ್ಲಿ ಹೇಳಿದ ಅರವತ್ನಾಲ್ಕು ಶೀಲಗಳ ಪೈಕಿ ಕಡೆಯ ಮೂರು ಶೀಲಗಳ ನಿರೂಪಣೆಯಲ್ಲಿ ಸೋಽಹಂಭಾವದಿಂದ ವಿಶ್ವೇಶನ ಧ್ಯಾನ, ನಿರಂತರ ಶಿವರೂಪಾನುಸಂಧಾನ ಮತ್ತು ಶಿವನ ಅನಂತರೂಪಗಳನ್ನು ನಿಜರೂಪದಲ್ಲಿ ಗ್ರಹಿಸುವುದು – ಇವುಗಳನ್ನು ಹೇಳಲಾಗಿದೆ. ಸಖ್ಯ, ಆತ್ಮಾರ್ಪಣ, ಮಂತ್ರರೂಪಧಾರಣೆ, ಧ್ಯಾನ, ಧಾರಣ, ಮತ್ತು ಸಮಾಧಿಗಳೆಂಬ ಹಿಂದಿನ ಆರು ಶೀಲಗಳಿಂದ ಬೆಳೆದು ಬಂದವುಗಳಾದ ಅವು ಶಿವಜೀವೈಕ್ಯ ಸ್ವರೂಪದ ಮುಕ್ತಿಯ ಸ್ಥಿತಿಯನ್ನು ಹೃದಯಂಗಮವಾಗಿ ಚಿತ್ರಿಸುತ್ತವೆ. ಕಡೆಯ ಶೀಲದ ನಿರೂಪಣೆ ಲಿಂಗೈಕ್ಯದ ಸ್ವರೂಪವನ್ನು ಹೀಗೆ ಬಿಂಬಿಸುತ್ತದೆ.

ಅನಂತರೂಪಂ ದೇವಸ್ಯ ಭಾವಯನ್ನಿಜರೂಪತಃ।
ಶಿವಾನಂದವಶಾದ್ವಿಶ್ವಮಾತ್ಮಾನಂ ವಿಸ್ಮರನ್ನಪಿ॥
ಯಸ್ತಿಷ್ಠತ್ಯಚಲಃ ಶೀಲಂ ಚತುಃಷಷ್ಟಿಕಮೀರಿತಮ್॥ [೭]

ಪರಮಾತ್ಮನ ಅನಂತರೂಪವನ್ನು ತನ್ನ ನಿಜರೂಪದಲ್ಲಿ ಭಾವಿಸಿ, ಶಿವಾನಂದದ ಕಾರಣದಿಂದ ತನ್ನನ್ನು ಮರೆತು, ವಿಶ್ವವನ್ನು ಕೂಡ ಹಾಗೆಯೇ ಭಾವಿಸಿ ಯಾರು ಸ್ಥಿರವಾಗಿರುವನೋ ಅವನ ಶೀಲವೇ ಅರವತ್ನಾಲ್ಕನೆಯ ಶೀಲವೆಂದು ತಿಳಿಸುತ್ತ ಐಕ್ಯನ ಲಕ್ಷಣವನ್ನು ಪ್ರತಿಪಾದಿಸಿದೆ. ಇದನ್ನೇ ಪಾರಮೇಶ್ವರಾಗಮವು ವಿವರಿಸುತ್ತ –

ಯಸ್ಯಾಸ್ತಿ ನಿರ್ಮಲಾ ಬುದ್ಧಿರಧೀಶೆ ಮಯಿ ಶಂಕರೇ। [೮]
ಸ ಮಾಮುಪೈತಿ ಭ್ರಮರ–ಕೀಟನ್ಯಾಯೇನ ಸುಂದರಿ ॥

ಯಾರ ನಿರ್ಮಲವಾದ ಬುದ್ಧಿಯು ಶಂಕರನಲ್ಲಿ ನೆಲೆಯಾಗಿರುವುದೋ ಅದು ಭ್ರಮರ ಕೀಟನ್ಯಾಯದಂತೆ ಶಿವನಲ್ಲಿ ಒಂದಾಗುತ್ತದೆ ಎಂದು ತಿಳಿಸಿದೆ. ಇದನ್ನೇ ಚೆನ್ನಬಸವಣ್ಣನವರು ತಮ್ಮ ವಚನವೊಂದರಲ್ಲಿ –

"ಅಂಗವು ಲಿಂಗದಲ್ಲಿ ಸಂಬಂಧವಾದವರ ಲಿಂಗವೆಂದೇ ಕಾಂಬುದು,
'ಕೀಟೋಽಪಿ ಭ್ರಮರಾಯತೇ' ಎಂಬ ನ್ಯಾಯದಂತೆ

೭. ಚಂ.ಆ.,ಕ್ರಿಪಾ.. ಪಟಲ ೯, ಶ್ಲೋಕ ಸಂಖ್ಯೆ ೧೨೨
೮. ಪಾ.ಆ, ಪಟಲ ೭, ಶ್ಲೋಕ ಸಂಖ್ಯೆ ೫೦

ಅಂಗವು ಲಿಂಗ ಸೋಂಕಿ ಲಿಂಗವಾಯಿತ್ತಾಗಿ ಲಿಂಗವೆಂದೇ ಕಾಂಬುದು
ಅಂಗೇಂದ್ರಿಯಂಗಳೆಂಬುವಿಲ್ಲ, ಅವೆಲ್ಲವೂ ಲಿಂಗೇಂದ್ರಿಯಂಗಳಾದ ಕಾರಣ
ಲಿಂಗವೆಂದೇ ಕಾಂಬುದು.
ಸರ್ಪದಷ್ಟಸ್ಯ ಯದ್ದೇಹಂ ತದ್ದೇಹಂ ವಿಷದೇಹವತ್ ।
ಲಿಂಗದಷ್ಟಸ್ಯ ಯದ್ದೇಹಂ ತದ್ದೇಹಂ ಲಿಂಗದೇಹವತ್॥ ಎಂದುದಾಗಿ
ಸರ್ವಾಂಗಲಿಂಗಿ, ಕೂಡಲಚೆನ್ನಸಂಗಾ ನಿಮ್ಮ ಶರಣ!”[೯]

ಎಂದು ಅಂಗಲಿಂಗದ ಸಂಬಂಧವನ್ನು “ಭ್ರಮರ ಕೀಟನ್ಯಾಯದಂತೆ” ಹಾಗೂ “ಹಾವು ಕಡಿದವನ ದೇಹವು ವಿಷದೇಹವಾಗುವಂತೆ, ಲಿಂಗವನ್ನು ಸಮರಸ ಭಕ್ತಿಯಿಂದ ಆರಾಧಿಸಿದವನ ದೇಹ(ಅಂಗ)ವೂ ಲಿಂಗ ದೇಹವಾಗುವುದೆಂದು ಚೆನ್ನಬಸವಣ್ಣನವರು ಇನ್ನೊಂದು ಶೈವಾಗಮದ ದೃಷ್ಟಾಂತದಿಂದ ಬಿಂಬಿಸಿದ್ದಾರೆ.

ಈ ಐಕ್ಯಸ್ಥಲದ ಸಮಗ್ರ ಲಕ್ಷಣವನ್ನು ಆಗಮದ ಉಲ್ಲೇಖದೊಂದಿಗೆ ಬಾಲಸಂಗಯ್ಯನೆಂಬ ವಚನಕಾರರು ತಮ್ಮ ವಚನದಲ್ಲಿ –

ಕ್ಷುತ್ಪಿಪಾಸೆ ಶೋಕ ಮೋಹ ಜನನ ಮರಣ
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳಂ ಬಿಟ್ಟು
ಅಷ್ಟವಿಧಾರ್ಚನೆ, ಷೋಡಶೋಪಚಾರವಿಲ್ಲದಿರುವ
ಕ್ಷೀರದೊಳಗಣ ಘೃತದಂತೆ, ತಿಲದೊಳಗಣ ತೈಲದಂತೆ,
ಪುಷ್ಪದೊಳಗಣ ಪರಿಮಳದಂತೆ, ಉಪ್ಪು ಉದಕವ ಕೂಡಿದಂತೆ,
ವಾರಿಕಲ್ಲು ವಾರಿಯ ಕೂಡಿದಂತೆ, ಕರ್ಪುರವು ಜ್ಯೋತಿಯ ಕೂಡಿದಂತೆ,
ಮನ ಲಿಂಗದಲ್ಲಿ ಲೀಯವಾಗಿಹುದೀಗ ಐಕ್ಯಸ್ಥಲ ನೋಡಾ,
ಇದಕ್ಕೆ ಈಶ್ವರೋಽವಾಚ :
“ಷಡೂರ್ಮಯಶ್ಚ ಷಡ್ವರ್ಗೋ ನಾಸ್ತಿ ಅಷ್ಟವಿಧಾರ್ಚನಂ ।
ನಿರ್ಭಾವಂ ಶಿವಲಿಂಗೈಕ್ಯಂ ಶಿಖಿಕರ್ಪೂರಯೋಗವತ್ ॥”[೧೦]

ಎಂದು ಷಡ್ ಊರ್ಮಿಗಳಾದ ಕ್ಷುತ್, ಪಿಪಾಸೆ, ಶೋಕ, ಮೋಹ, ಜನನ, ಮರಣಗಳನ್ನು, ಹಾಗೂ ಅರಿಷಡ್ವೈರಿಗಳಾದ ಕಾಮ ಕ್ರೋಧ ಲೊಭ ಮೋಹ ಮದ ಮಾತ್ಸರ್ಯಗಳನ್ನು ಬಿಟ್ಟು, ನಿರ್ಭಾವಯುತನಾಗಿ, ಅಷ್ಟವಿಧಾರ್ಚನೆ, ಷೋಡಶೋಪಚಾರ ವಿಲ್ಲದಿರುವ ಆ ಶಿವತತ್ವದಲ್ಲಿ ಕರ್ಪುರವು ಜ್ಯೋತಿಯ ಕೂಡಿದಂತೆ ಲೀನನಾಗುವುದೇ ಐಕ್ಯಸ್ಥಲವೆಂದು ವಿವರಿಸಿದ್ದಾರೆ. ಆಗಮದಲ್ಲಿಯ ಈ ಲಕ್ಷಣವನ್ನೇ ತೋಂಟದ ಸಿದ್ಧಲಿಂಗಯತಿಗಳು –

ಕ್ಷುತ್ತು, ಪಿಪಾಸೆ, ಶೋಕ, ಮೋಹ, ಜರಾ, ಮರಣವೆಂಬ

---

೯. ಚೆನ್ನಬಸವಣ್ಣನವರ ವ.ಸಂಪುಟ. ಸಮಗ್ರ ವಚನಸಂಪುಟ ೩, ವಚನ ಸಂಖ್ಯೆ ೮೭೧, ಪುಟ೨೬೨
೧೦. ಸಮಗ್ರ ವಚನ ಸಂಪುಟ ೧೩, ಸಂಕೀರ್ಣ ವ.ಸಂ.೮, ವಚನ ಸಂಖ್ಯೆ ೩೭೦, ಪುಟ ೧೬೭

ಷಡೂರ್ಮಿಗಳಿಲ್ಲದೆಯಿಪ್ಪನು.
ಕಾಮ ಕ್ರೋಧ ಲೋಭ ಮದ ಮತ್ಸರವೆಂಬ
ಷಡ್ವರ್ಗಂಗಳು ಇಲ್ಲದೆ ಇರುತಿರ್ಪನು.
ನಾಹಂ ಕೋಹಂ ಸೋಹಂ ಎಂಬ ಭಾವವಿರಹಿನಾಗಿರ್ಪನು.
ಅಷ್ಟವಿಧಾರ್ಚನೆ, ಷೋಡಶೋಪಚಾರ ರಹಿತವಾಗಿರ್ಪನು.[೧೧]

ಎಂದು ನಿಜೈಕ್ಯನಲ್ಲಿ ಹಸಿವು ನೀರಡಕೆ ಮೊದಲಾದ ಷಡೂರ್ಮಿಗಳು, ಕಾಮಕ್ರೋಧಾದಿ ಷಡ್ವೈರಿಗಳು ದೂರಾಗುತ್ತವೆ. 'ನಾನು' ಎಂಬ ಭೇದಜ್ಞಾನವಳಿದು 'ಅವನೇ ನಾನು' ಎಂಬ ಸುಜ್ಞಾನ ಮನೆಮಾಡಿ ಸದ್ಭಾವ ಆವರಿಸುತ್ತದೆ. ಬಾಹ್ಯವೆನಿಸಿದ ಷಡ್ವಿಧ, ಷೋಡಶ ಉಪಚಾರಗಳು ಸಹಜವಾಗಿ ನಿಲ್ಲುತ್ತವೆ. ಸದಾಕಾಲದಲ್ಲಿ ಲಿಂಗವನ್ನು ಭಾವದಲ್ಲಿ ಧ್ಯಾನಿಸಿ ತಾನೂ ಲಿಂಗ ಸ್ವರೂಪವೇ ಆಗುತ್ತಾನೆ. ಇಂಥ ಸಾಧನೆಯೇ ನಿಜವಾದ ಲಿಂಗೈಕ್ಯಸ್ಥಿತಿ ಎಂದಿದ್ದಾರೆ. ಕಾರಣ ಐಕ್ಯಸ್ಥಲದ ಸಾಧಕನಿಗೆ ಸಾಧನೆಯ ಯಾವ ಮಾಧ್ಯಮಗಳ ಅವಶ್ಯಕತೆಯಿಲ್ಲ. ಪೂಜೆ-ಜಪ-ಧ್ಯಾನ-ದಾನಗಳ ಗೊಡವೆಯಿಲ್ಲ. ಅಂತೆಯೇ ಪಾರಮೇಶ್ವರಾಗಮವು ಐಕ್ಯಸ್ಥಲದ ಲಕ್ಷಣವನ್ನು ಪ್ರತಿಪಾದಿಸುತ್ತ

ನ ಪೂಜಾ ನೈವ ಚ ಧ್ಯಾನಂ ನ ಯೋಗಕರಣಾಧಿಕಮ್।[೧೨]

ಅರ್ಥಾತ್ ಪೂಜೆ, ಧ್ಯಾನ, ಯೋಗ ಹಾಗೂ ಕರಣಾದಿಗಳ ಅವಶ್ಯಕತೆಗಳನ್ನು ಮೀರಿದ ಸಾಧಕನೇ ಐಕ್ಯನು ಎಂದು ನಿರೂಪಿಸುತ್ತದೆ. ಏಕೆಂದರೆ –

ತತ್ಸಿದ್ಧಸ್ಯ ವೃಥಾ ಕರ್ಮ ನೀರೋಗಿಣ ಇವೌಷಧಮ್ ॥[೧೩]

ರೋಗಮುಕ್ತ ವ್ಯಕ್ತಿಗೆ ಹೇಗೆ ಔಷಧದಿಂದ ಪ್ರಯೋಜನವಿಲ್ಲವೊ ಹಾಗೆಯೇ ಮುಕ್ತಾತ್ಮನಿಗೆ ಕರ್ಮಾಚರಣೆಯ ನಿರರ್ಥಕವಾದುದು ಎಂದು ತಿಳಿಸಿದೆ. ಆದರೆ ಪೂಜಾದಿಗಳನ್ನು ಬಿಟ್ಟವನೇ ಐಕ್ಯಸ್ಥಲಿ ಎಂದು ಅರ್ಥೈಸಬಾರದು. ಏಕೆಂದರೆ –

ನಾತ್ರ ಪೂಜಾ ನಮಸ್ಕಾರೋ ನ ಜಪೋ ಧ್ಯಾನಮೇವ ಚ
ಕೇವಲಂ ಜ್ಞೇಯ(ಜ್ಞಾನ)ಮಿತ್ಯುಕ್ತಂ ವೇದಿತವ್ಯಂ ನ ಕಿಞ್ಚನ ॥[೧೪]

ಜೀವನ್ಮುಕ್ತ ಸ್ಥಿತಿಯಲ್ಲಿ ಪೂಜಾ, ನಮಸ್ಕಾರ, ಜಪ, ಧ್ಯಾನ ಇತ್ಯಾದಿ ಬಾಹ್ಯ ಕ್ರಿಯೆಗಳಿಗೆ ಯಾವ ಸ್ಥಾನವೂ ಇಲ್ಲ. ಅಲ್ಲಿ ಕೇವಲ ಪರಮತತ್ವವೇ ಉಳಿದುಬಿಡುತ್ತದೆ. ಈ ಪರತತ್ವವನ್ನು ತಿಳಿದ ಬಳಿಕ ಯಾವದನ್ನೂ ತಿಳಿಯುವ ಅಗತ್ಯವೇ ಉಳಿಯದು ಎಂದು ದೇವಿ ಕಾಲೋತ್ತರಾಗಮವು ಪ್ರತಿಪಾದಿಸುತ್ತದೆ. ಶಿವೋಹಂ ಭಾವನೆಯು

---

೧೧. ಸಮಗ್ರ ವಚನ ಸಂಪುಟ ೧೧, ಸಂಕೀರ್ಣ ವ.ಸಂ.೬, ವಚನ ಸಂಖ್ಯೆ ೫೭೭, ಪುಟ ೨೬೪
೧೨. ಪಾ.ಆ, ಪಟಲ ೬, ಶ್ಲೋಕ ಸಂಖ್ಯೆ ೨೬
೧೩. ಪಾ.ಆ, ಪಟಲ ೨೨, ಶ್ಲೋಕ ಸಂಖ್ಯೆ ೮೧
೧೪. ದೇವಿ ಕಾಲೋತ್ತರಾಗಮ, ಶ್ಲೋಕ ಸಂಖ್ಯೆ ೧೮

ಸಂಪೂರ್ಣ ವಿಕಾಸಗೊಂಡು ಎಲ್ಲವೂ ಶಿವಸ್ವರೂಪವೇ ಎಂದು ಕಾಣುವುದರಿಂದ ಬಾಹ್ಯವೆನಿಸಿದ ಪೂಜೆ, ಧ್ಯಾನ, ಯೋಗ ಉಪಚಾರಗಳು ಸಹಜವಾಗಿ ನಿಂತು ಸರ್ವಾತ್ಮಭಾವದಿಂದ ಮಹಾಲಿಂಗ ಸ್ವರೂಪವೇ ತಾನಾಗುತ್ತಾನೆ ಎಂದು ಆಗಮಗಳು ಪ್ರತಿಪಾದಿಸಿವೆ. ಇದನ್ನೇ ಬಸವಣ್ಣನವರು –

ಕಂಗಳು ತುಂಬಿದ ಬಳಿಕ ನೋಡಲಿಲ್ಲ ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ[೧೫] ಮನ ತುಂಬಿದ ಬಳಿಕ ನೆನೆಯಲಿಲ್ಲ
ಮಹಾಂತ ಕೂಡಲಸಂಗಮದೇವನ.

ಎಂದು ಐಕ್ಯನ ಅವಸ್ಥೆಯನ್ನು ಅತ್ಯಂತ ಮನೋಜ್ಞವಾಗಿ ಸೆರೆಹಿಡಿದಿದ್ದಾರೆ. ಮೈಮನ ಭಾವಗಳೆಲ್ಲ ಶಿವಮಯವಾಗಿ ಎಲ್ಲೆಡೆ ಶಿವನೇ ತುಂಬಿದ ಮಹಾಲಿಂಗವೇ ತಾನಾಗುವನು. ಇಲ್ಲಿ ಪೂಜೆಯ ವಿಧಾನವು ಉಳಿಯುವುದಿಲ್ಲ. ಮಹಾಲಿಂಗವೇ ತಾನಾದ ಬಳಿಕ ಪೂಜಿಸುವುದಾದರೂ ಏನನ್ನು? ಆದ್ದರಿಂದ ಐಕ್ಯನು ಸದಾನಿಶ್ಚಿಂತನು ಎಂದಿದ್ದಾರೆ.

ಕಾರಣ 'ನಿಜ ಸಂವಿತ್ಸರೂಪದಲ್ಲಿ ಪ್ರತಿಷ್ಠಿತವಾದ ವ್ಯಕ್ತಿಗೆ ಹೊರಗೆ, ಒಳಗೆ, ಮಧ್ಯ, ಕೆಳಗೆ ಎಂಬ ವ್ಯವಹಾರಗಳು ಸಮಾಪ್ತಿಗೊಳ್ಳುತ್ತವೆ ಮತ್ತು ಅವನು ತನ್ನ ಸರ್ವಾಕಾರ ಅಥವಾ ನಿರಾಕಾರ ಸ್ವರೂಪದಲ್ಲಿಯೇ ಲೀನವಾಗಿ ಬಿಡುವನು' ಎಂದು ದೇವಿ ಕಾಲೋತ್ತರಾಗವು ಪ್ರತಿಪಾದಿಸಿದೆ.[೧೬] ಇದೇ ಭಾವವನ್ನೇ ಮಹಾದೇವಿಯಕ್ಕನವರು ಅನುಪಮವಾಗಿ –

ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವೆನ್ನೆ, ಸಮರಸವೆನ್ನೆ
ಆಯಿತೆನ್ನೆ ಆಗದೆನ್ನೆ ನೀನೆನ್ನೆ ನಾನೆನ್ನೆ
ಚೆನ್ನಮಲ್ಲಿಕಾರ್ಜುನಯ್ಯಾ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ[೧೭]

ಎಂದು ಕ್ಷೀರ ಕ್ಷೀರ ಬೆರೆತಂತೆ, ನೀರು ನೀರ ಸೇರಿದಂತೆ ಜ್ಯೋತಿ ಜ್ಯೋತಿಯ ಕೂಡಿದಂತೆ ಬಯಲು ಬಯಲ ಬೆರೆತಂತೆ ಅಂಗಲಿಂಗ ಸಮರಸವಾದ ಲಿಂಗೈಕ್ಯನಿರವು. ಹೀಗೆ ಐಕ್ಯನಿಗೆ ಅವಿರಳತೆ ಅಳವಡುವುದು. ಅವಿರಳತೆ ಅಳವಟ್ಟರೆ ಭಾವ ನಿರ್ಭಾವವಾಗುವುದು. ಅಂತೆಯೇ ಐಕ್ಯನು ಮರಣವ ಗೆಲಿದ ಮಹಾಂತನು ಎಂದಿದ್ದಾರೆ.

ತಮ್ಮ ಅದ್ಭುತ ವೈರಾಗ್ಯ ಸಾಧನೆಯಿಂದ ಶಿವಾದ್ವೈತದ ಚರಮ ಸೀಮೆಯನ್ನೂ ಕಂಡ ಅಲ್ಲಮಪ್ರಭುಗಳಂತೂ ಅದ್ವಿತೀಯವಾಗಿ ಅಷ್ಟೇ ಪ್ರಭಾವಶಾಲಿಯಾದ ರೀತಿಯಲ್ಲಿ ತಮ್ಮ ವಚನಗಳಲ್ಲಿ ಐಕ್ಯಸ್ಥಿತಿಯನ್ನು ವರ್ಣಿಸಿದ್ದಾರೆ –

"ಮರನೊಳಗಣ ಕಿಚ್ಚು ಮರನ ಸುಟ್ಟಂತಾದೆನಯ್ಯಾ,
ಬಯಲ ಗಾಳಿಯ ಪರಿಮಳ ನಾಸಿಕವನಪ್ಪಿದಂತಾದೆನಯ್ಯಾ

---

೧೫. ಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೮೫೩, ಪುಟ ೨೯೯
೧೬. ದೇವಿ ಕಾಲೋತ್ತರಾಗಮ, ಶ್ಲೋಕ ಸಂಖ್ಯೆ ೨೦
೧೭. ಶಿವಶರಣೆಯರ ವ.ಸಂ. ಸಮಗ್ರ ವಚನ ಸಂಪುಟ ೫. ವಚನ ಸಂಖ್ಯೆ ೩೫೬, ಪುಟ ೧೦೫

ಕರುವಿನ ಬೊಂಬೆಯನುರಿಯುಂಡಂತಾದೆನಯ್ಯಾ,
ಗುಹೇಶ್ವರನೆಂಬ ಲಿಂಗವ ಪೂಜಿಸಿ ಭವಗೆಟ್ಟೆನಯ್ಯಾ"[೧೮] ಎಂದಿದ್ದಾರೆ.

ತಮ್ಮ ಮತ್ತೊಂದು ವಚನದಲ್ಲಿ " ಮನವೇ ಲಿಂಗವಾದ ಬಳಿಕ ಇನ್ನಾರ ನೆನೆವುದಯ್ಯಾ? ಭಾವವೇ ಐಕ್ಯವಾದ ಬಳಿಕ ಬಯಸುವುದಿನ್ನಾರನು? ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ ಅರಿವುದಿನ್ನಾರನು ಗುಹೇಶ್ವರಾ?[೧೯] ಎಂದು ಮನೋಜ್ಞವಾಗಿ ವಿವರಿಸಿದ್ದಾರೆ.

ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯಾ.
ಬಯಲ ಜೀವನ, ಬಯಲ ಭಾವನೆ.
ಬಯಲು ಬಯಲಾಗಿ ಬಯಲಾಯಿತ್ತಯ್ಯಾ
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದ್ದರು
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ.[೨೦]

ಎಂಬಂತೆ ಸಾಧಕನು ಕೊನೆಯ ಅವಸ್ಥೆಯನ್ನು ತಲುಪಿದಾಗ ಯಾವ ಭಾವನೆಯ ಅಗತ್ಯವಿಲ್ಲವೆಂದು ತಿಳಿಸಿ ಐಕ್ಯಸ್ಥಲದ ಸಾಧಕನ ಆಂತರಿಕ ಪೂಜಾಕ್ರಮವನ್ನು ಆಗಮ ಮತ್ತು ವಚನಗಳಲ್ಲಿ ವಿವರಿಸಲಾಗಿದೆ.

ಐಕ್ಯಸ್ಥಲದ ಆಂತರಿಕಪೂಜಾಕ್ರಮ

ಐಕ್ಯಸ್ಥಲೇ ತು ಚಿಚ್ಛಕ್ತಿಯುತೇ ವೈ ಮಾನಸಾಂಗಗೇ।
ಮಹಾಲಿಂಗೇ ಪರಶಿವಮುಖೇ ಸಂಕಲ್ಪಮರ್ಪಯೇತ್।
ಸದ್ಭಾವಾಭಿಖ್ಯಹಸ್ತೇನ ಭಕ್ತ್ಯಾ ಸಮರಸಾಖ್ಯಯಾ ॥[೨೧]

ಐಕ್ಯಸ್ಥಲದಲ್ಲಿ ಚಿಚ್ಛಕ್ತಿಯುಕ್ತವಾದ ಪರಶಿವ ಮುಖ ಸ್ವರೂಪದ ಮಹಾಲಿಂಗಕ್ಕೆ ಸಮರಸ ಭಕ್ತಿಯಿಂದ ಸದ್ಭಾವವೆಂಬ ಹಸ್ತದಿಂದ ಸಂಕಲ್ಪವೆಂಬ ಪದಾರ್ಥವನ್ನು ಮನಸ್ಸಿನ ಮೂಲಕ ಸಮರ್ಪಿಸುತ್ತಾನೆ. ಆಗ ಸಾಧಕನ ಯೌಗಿಕ ಅನುಸಂಧಾನವೂ ಜರಗುವುದು.

ಐಕ್ಯಸ್ಥಲದ ಸಾಧಕನು ಸಮರಸ ಭಕ್ತಿಯ ಮೂಲಕ ಶಾಂತ್ಯತೀತೋತ್ತರಾ ಕಲೆಯಿಂದ ಕೂಡಿಕೊಂಡಿರುವ ಮಹಾಲಿಂಗದ ಅನುಸಂಧಾನ ಮಾಡುತ್ತಾನೆ. ಶಿವಯೋಗ ಸಾಧನೆಯ ಬಲದಿಂದ ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದವರೆಗೆ ಬಂದು ಅಲ್ಲಿ ಮಾಣಿಕ್ಯ ವರ್ಣದಿಂದ ಹೊಳೆಯುವ ಜ್ಯೋತಿಯನ್ನು ಶಿವಯೋಗಿಯು

---

೧೮. ಅಲ್ಲಮಪ್ರಭುದೇವರ ವ.ಸಂಪುಟ. ಸಮಗ್ರ ವಚನಸಂಪುಟ ೨, ವಚನಸಂಖ್ಯೆ ೩೯೬, ಪುಟ೧೧೩
೧೯. ಅಲ್ಲಮಪ್ರಭುದೇವರ ವ.ಸಂಪುಟ. ಸಮಗ್ರ ವಚನಸಂಪುಟ ೨, ವಚನಸಂಖ್ಯೆ ೪೨೧, ಪುಟ೧೧೯
೨೦. ಅಲ್ಲಮಪ್ರಭುದೇವರ ವ.ಸಂಪುಟ. ಸಮಗ್ರ ವಚನಸಂಪುಟ ೨, ವಚನಸಂಖ್ಯೆ ೬೩೯, ಪುಟ೧೭೨
೨೧. ಕಾ.ಆ, ಪಟಲ ೭, ಶ್ಲೋಕ ಸಂಖ್ಯೆ ೬೫.

ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಈ ಅನುಸಂಧಾನ ಮಾಡುವ ಐಕ್ಯಸ್ಥಲದ ಶಿವಯೋಗಿಯಲ್ಲಿ ನಿಶ್ಚಲವಾದ ಶಾಂತಿಯು ನೆಲೆಸುತ್ತದೆ. ಅಂದರೆ ಈ ಶಿವಯೋಗಿಯು ಎಲ್ಲ ಭಾವಗಳನ್ನು ಬದಿಗಿರಿಸಿ ತಾನು ಬಯಲೊಳಗೆ ಬಯಲಾಗಿ ನಿರ್ಬಯಲಾನಂದವನ್ನು ತನ್ನದಾಗಿಸಿಕೊಳ್ಳುತ್ತಾನೆ.

ಒಟ್ಟಿನಲ್ಲಿ ಐಕ್ಯಸ್ಥಲದ ಸ್ವರೂಪವನ್ನು ಆಗಮ ಮತ್ತು ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ಅವಲೋಕಿಸಲಾಗಿ ಶಿವಾಗಮಗಳಲ್ಲಿ, "ಶಿವ–ಜೀವ ಎಂಬ ಉಭಯಭೇದದ ಭ್ರಾಂತಿಯಿಲ್ಲದವನೇ ಐಕ್ಯನು" ಎಂದು ವ್ಯಾಖ್ಯಾನಿಸಿದ್ದು, ಜೀವಾತ್ಮನು ಪರಮಾತ್ಮನಲ್ಲಿ ಬೆರೆತು ಒಂದಾಗುವ ಸಾಮರಸ್ಯದ ಸ್ಥಿತಿಯೇ ಐಕ್ಯಸ್ಥಲವಾಗಿದೆ. ಗುರುಕೊಟ್ಟ ದೀಕ್ಷೆಯ ಮೂಲಕ ಪಡೆದ ಲಿಂಗ ಮತ್ತು ಅಂಗಗಳ ಸಂಬಂಧವು (ಶಿವ–ಜೀವರ ಯೋಗವು) ಹಂತಹಂತಕ್ಕೂ ಹದಗೊಂಡು ದುಂಬಿ–ಕೀಟನ್ಯಾಯದಂತೆ ಶಿವಭಕ್ತನು ಶಿವೈಕ್ಯವನ್ನು ಹೊಂದುತ್ತಾನೆ. ಕೀಟವು ದುಂಬಿಯನ್ನು ನೆನೆದು ನೆನೆದು ದುಂಬಿಯೇ ಆಗಿ ಪರಿಣಮಿಸುವಂತೆ ಜೀವನು ಶಿವನನ್ನು ನಿರಂತರವಾಗಿ ಧ್ಯಾನಿಸಿ ಶಿವನಾಗಿ ಪರಿಣಮಿಸುತ್ತಾನೆ. ಈ ಸಮರಸ ಭಕ್ತಿಯ ನೆಲೆಯೇ ಜೀವನ್ಮುಕ್ತಿ ಎಂದು ಆಗಮದಲ್ಲಿ ವಿವರಿಸಲಾಗಿದೆ.

ಮನದ ಸಾಂಸಾರಿಕ ವಾಸನೆ ಅಳಿದು ಶಿವೋಹಂ ಭಾವ ಬಲಿದ ನಿಜೈಕ್ಯನಲ್ಲಿ ಹಸಿವು ನೀರಡಿಕೆ ಮೊದಲಾದ ಷಡೂರ್ಮಿಗಳು, ಕಾಮಕ್ರೋಧಾದಿ ಷಡ್ವೈರಿಗಳು ದೂರಾಗುತ್ತವೆ. 'ನಾನು' ಎಂಬ ಭೇದಜ್ಞಾನವಳಿದು 'ಅವನೇ ನಾನು' ಎಂಬ ಸುಜ್ಞಾನ ಮನೆಮಾಡಿ ಸದ್ಭಾವ ಆವರಿಸುತ್ತದೆ. ಬಾಹ್ಯವೆನಿಸಿದ ಷಡ್ವಿಧ, ಷೋಡಶ ಉಪಚಾರಗಳು ಸಹಜವಾಗಿ ನಿಲ್ಲುತ್ತವೆ. ಸದಾಕಾಲದಲ್ಲಿ ಲಿಂಗವನ್ನು ಭಾವದಲ್ಲಿ ಧ್ಯಾನಿಸಿ ತಾನೂ ಲಿಂಗ ಸ್ವರೂಪವೇ ಆಗುತ್ತಾನೆ. ಇಂಥ ಸಾಧನೆಯೇ ನಿಜವಾದ ಲಿಂಗೈಕ್ಯಸ್ಥಿತಿ ಎಂದು ವಿವರಿಸಲಾಗಿದೆ. ಕಾರಣ ಐಕ್ಯಸ್ಥಲದ ಸಾಧಕನಿಗೆ ಸಾಧನೆಯ ಯಾವ ಮಾಧ್ಯಮಗಳ ಅವಶ್ಯಕತೆಯಿಲ್ಲ. ಪೂಜೆ–ಜಪ–ಧ್ಯಾನ–ದಾನಗಳ ಗೊಡವೆಯಿಲ್ಲ. ನಿಜ ಸಂವಿತ್ಸರೂಪದಲ್ಲಿ ಪ್ರತಿಷ್ಠಿತವಾದ ವ್ಯಕ್ತಿಗೆ ಹೊರಗೆ, ಒಳಗೆ, ಮಧ್ಯ, ಕೆಳಗೆ ಎಂಬ ವ್ಯವಹಾರಗಳು ಸಮಾಪ್ತಿಗೊಳ್ಳುತ್ತವೆ ಮತ್ತು ಅವನು ತನ್ನ ಸರ್ವಾಕಾರ ಅಥವಾ ನಿರಾಕಾರ ಸ್ವರೂಪದಲ್ಲಿಯೇ ಲೀನವಾಗಿ ಬಿಡುವನು. ಕಾರಣ ಐಕ್ಯಸ್ಥಲದ ಸಾಧಕನು ಸಮರಸ ಭಕ್ತಿಯ ಮೂಲಕ ಶಾಂತ್ಯತೀತೋತ್ತರಾ ಕಲೆಯಿಂದ ಕೂಡಿಕೊಂಡಿರುವ ಮಹಾಲಿಂಗದ ಅನುಸಂಧಾನ ಮಾಡುತ್ತಾನೆ ಎಂದು ಆಗಮಗಳಲ್ಲಿ ವಿವರಿಸಲಾಗಿದೆ.

ಐಕ್ಯಸ್ಥಲದ ಈ ಸ್ವರೂಪ ಮತ್ತು ಲಕ್ಷಣಗಳೇ ವಚನದಲ್ಲಿ ಮೂಡಿಬಂದಿದ್ದು ವಚನಕಾರರು ಈ ಐಕ್ಯಸ್ಥಲದ ಲಕ್ಷಣವನ್ನು ಕ್ಷೀರ ಕ್ಷೀರ ಬೆರೆತಂತೆ, ನೀರು ನೀರ ಸೇರಿದಂತೆ, ಜ್ಯೋತಿ ಜ್ಯೋತಿಯ ಕೂಡಿದಂತೆ, ಬಯಲು ಬಯಲ ಬೆರೆತಂತೆ ಅಂಗಲಿಂಗ ಸಮರಸವಾದ ಲಿಂಗೈಕ್ಯನಿರವು ಎಂದು ಮನೋಜ್ಞವಾಗಿ ತಮ್ಮ ಅನುಭವದ ಪರಿಪಾಕದಿಂದ, ಮಹಾಬಯಲಿನಲ್ಲಿ ಒಂದಾಗುವ ಪರಿಯನ್ನು ಮನೋಹರವಾಗಿ ವರ್ಣಿಸಿದ್ದಾರೆ.

ಅಧ್ಯಾಯ – ೬

ಶಿವಾಗಮಗಳು ಮತ್ತು ವಚನ ಸಾಹಿತ್ಯ: ಸಾಮಾಜಿಕ ಚಿಂತನ

- ಜಾತಿಭೇದ ನಿರಾಕರಣೆ
- ಸಮಾನ ಗೌರವ, ಭ್ರಾತೃತ್ವ ಮನೋಭಾವ ಹಾಗೂ ಶಾಂತಿಯುತ ಸಹಬಾಳ್ವೆ
- ದಾನ
- ದಾಸೋಹ
- ಕಾಯಕ
- ಅತಿಥಿ ಸತ್ಕಾರ
- ಅನಾಥರ ಪೋಷಣೆ
- ಲೋಕಹಿತ ಕಾರ್ಯ
- ಅಹಿಂಸೆ
- ಸಾರ್ಥಕ ಬದುಕು

ಅಧ್ಯಾಯ – ೬

ಶಿವಾಗಮಗಳು ಮತ್ತು ವಚನ ಸಾಹಿತ್ಯ: ಸಾಮಾಜಿಕ ಚಿಂತನ

ವ್ಯಕ್ತಿ ಮತ್ತು ಸಮಾಜ ಬೇರೆಯಲ್ಲ. ಇವೆರಡೂ ಪರಸ್ಪರ ಅವಲಂಬಿಗಳು. ವ್ಯಕ್ತಿ ಕೇವಲ ತನ್ನ ಉದ್ಧಾರವನ್ನು ಮಾತ್ರ ಪರಿಗಣಿಸಿ ಸಮಾಜವನ್ನು ಕಡೆಗಣಿಸಿದರೆ ಆತ ಅಪೂರ್ಣ. ಸಮಾಜದ ಹಿತವೇ ಮುಖ್ಯವೆಂದು ತನ್ನ ವಿಕಾಸವನ್ನೇ ಮರೆತರೆ ಅದೂ ಯೋಗ್ಯವಲ್ಲ. ಸಮಾಜ ಮತ್ತು ವ್ಯಕ್ತಿ ಇವೆರಡು ಜೊತೆ ಜೊತೆಯಲ್ಲಿಯೇ ಬೆಳೆಯಬೇಕು. ವ್ಯಕ್ತಿಯ ಉದ್ಧಾರವು ಸಮಾಜದ ಉದ್ಧಾರವನ್ನು ಅವಲಂಬಿಸಿದೆ. ಅಂತೆಯೇ ಸಮಾಜದ ಹಿತಸಾಧನೆಗಾಗಿ ವ್ಯಕ್ತಿ ತನ್ನನ್ನು ತಾನು ಅರ್ಪಿಸಿಕೊಳ್ಳಬೇಕು. ಕಾರಣ ವೈಯಕ್ತಿಕ ಹಾಗೂ ಸಾಮಾಜಿಕ ಹಿತಗಳೆರಡನ್ನು ಸಮನ್ವಯಗೊಳಿಸುವ ಧರ್ಮವೇ ಪರಿಪೂರ್ಣ ಧರ್ಮವೆನಿಸುವದು. ಆದುದರಿಂದ ಸಮಾಜದ ಶ್ರೇಯಸ್ಸಿಗೆ ಕಾರಣವಾಗುವ, ಸಮಾಜದ ಸ್ವಾಸ್ಥವನ್ನು ಕಾಪಾಡುವ ಹಾಗೂ ಸಾಮಾಜಿಕ ಚಿಂತನೆಯ ಮೌಲ್ಯಗಳು ವೀರಶೈವ ಧರ್ಮದಲ್ಲಿ ಹಾಸು ಹೊಕ್ಕಾಗಿವೆ. ಸಮಾಜದಲ್ಲಿ ಮೇಲು-ಕೀಳು ಭಾವನೆಗಳಿಲ್ಲದಿರುವುದು, ಸ್ಪೃಶ್ಯ-ಅಸ್ಪೃಶ್ಯ ಎಂಬ ತಾರತಮ್ಯಗಳಿಲ್ಲದಿರುವುದು, ಧಾರ್ಮಿಕ ಆಚಾರ-ವಿಚಾರಗಳಲ್ಲಿ ಸಮಾನ ಹಕ್ಕು-ಬಾಧ್ಯತೆ, ಹಿಂದುಳಿದವರು ಮತ್ತು ಮಹಿಳೆಯರ ಬಗ್ಗೆ ಗೌರವ, ಆರ್ಥಿಕವಾಗಿ ಹಿಂದುಳಿದವರ ಬಗ್ಗೆ ಕಾಳಜಿ, ಕಾಯಕ, ದಾಸೋಹ, ವೃತ್ತಿ ಗೌರವ ಮುಂತಾದ ಆದರ್ಶ ಸಾಮಾಜಿಕ ಮೌಲ್ಯಗಳ ವಿಶ್ಲೇಷಣೆ ಶಿವಾಗಮ ಮತ್ತು ವಚನಗಳಲ್ಲಿ ಅತ್ಯಂತ ಮನೋಜ್ಞವಾಗಿ ಮೂಡಿ ಬಂದಿದ್ದು ಅವುಗಳನ್ನಿಲ್ಲಿ ವಿವೇಚಿಸಲಾಗಿದೆ.

ಜಾತಿಭೇದ ನಿರಾಕರಣೆ

ವೀರಶೈವ ಸಾಧನಮಾರ್ಗಕ್ಕೆ ಶಿವದೀಕ್ಷೆಯೇ ಆರಂಭ. ಆ ದೀಕ್ಷೆಗೆ ಎಲ್ಲರಿಗೂ ಮುಕ್ತದ್ವಾರ. ಅದರಲ್ಲಿ ವರ್ಣಭೇದವಾಗಲಿ, ಆಶ್ರಮಭೇದವಾಗಲಿ, ಲಿಂಗಭೇದವಾಗಲಿ ಇಲ್ಲ ಎನ್ನುತ್ತ ಪಾರಮೇಶ್ವರಾಗಮವು

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಯೇ ಚಾನ್ಯಜಾತಯಃ।
ಲಿಂಗಧಾರಣಮಾತ್ರೇಣ ಶಿವಾ ಏವ ನ ಸಂಶಯಃ॥[೧]

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಮತ್ತು ಅನ್ಯ ಜಾತಿಯವರು ಯಾರೇ ಆಗಿರಲಿ ಅವರೆಲ್ಲ ಲಿಂಗಧಾರಣ ಮಾತ್ರದಿಂದ ಶಿವಸ್ವರೂಪರು. ವೀರಶೈವರಿಗೆ

೧. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೫೮,

ಜಾತಿಭೇದವಿಲ್ಲ, ಪರಸ್ಪರ ಶೌಚಾಶೌಚ ಭಾವನೆಗಳಿಲ್ಲ, ಸ್ಪೃಶ್ಯಾಸ್ಪೃಶ್ಯ ನಡಾವಳಿಗಳಿಲ್ಲ, ಶುದ್ಧಾಶುದ್ಧ ಕಲ್ಪನೆಗಳಿಲ್ಲ ಏಕೆಂದರೆ ಎಲ್ಲವೂ ಶಿವಮಯವಾದ್ದರಿಂದ ಎಂದು ತಿಳಿಸುತ್ತದೆ. ಕಾರಣ ವರ್ಣಾಶ್ರಮ ವ್ಯವಸ್ಥೆಯನ್ನು ಅನುಸರಿಸಿ ಮೇಲ್ವರ್ಗದವರಿಗಷ್ಟೇ ಶಿಕ್ಷಣ ಉಪನಯನಾದಿ ಸಂಸ್ಕಾರಗಳನ್ನು ನೀಡಿ ಅವರಿಗೆ ಮೋಕ್ಷದ ಮಾರ್ಗವನ್ನು ಉಪದೇಶಿಸುವ ಸಾಮಾಜಿಕ ವ್ಯವಸ್ಥೆಯನ್ನು ಆಗಮಗಳು ಖಂಡಿಸಿ ಎಲ್ಲರಿಗೂ ಮೋಕ್ಷದ ಮಾರ್ಗವನ್ನು ತೆರೆದಿಟ್ಟವು. ತನ್ಮೂಲಕ ವೀರಶೈವರು ಪ್ರಾಕೃತ ವರ್ಣಾಶ್ರಮ ಧರ್ಮವನ್ನು ಮನ್ನಿಸುವುದಿಲ್ಲ. ಆದ್ದರಿಂದ ಅವರು ಅಪ್ರಾಕೃತರು ಎಂದು ಪ್ರತಿಪಾದಿಸಿವೆ.

ಇದೇ ಅಭಿಪ್ರಾಯ ವಚನಗಳಲ್ಲಿಯೂ ಕೂಡಾ ವ್ಯಕ್ತವಾಗಿದೆ. ಆಗಮದ ಉಲ್ಲೇಖದೊಂದಿಗೆ ಚೆನ್ನಬಸವಣ್ಣನವರು ತಮ್ಮ ವಚನದಲ್ಲಿ –

ಗುರುಹಸ್ತದೊಳು ಪುನರ್ಜಾತನಾದ ಭಕ್ತನಲ್ಲಿ
ಆವ ಜನ್ಮಜಾತಿಯ ಬೆದಕಲಪ್ಪುದು?
ಅವೆಲ್ಲ ಪ್ರಾಕೃತರಿಗಲ್ಲದೆ ಅಪ್ರಾಕೃತರಿಗುಂಟೆ ಹೇಳಾ?
"ಅಪ್ರಾಕೃತಸ್ಯ ಭಕ್ತಸ್ಯ ಗುರುಹಸ್ತಾಮಲಾಂಬುಜಾತ್॥
ಪುನರ್ಜಾತಸ್ಯಾತ್ಮಜನ್ಮ ಜಾತ್ಯಾದೀನ್ನ ಚ ಕಲ್ಪಯೇತ್।"
ಎಂಬ ಆಗಮವನರಿಯದೆ,
ನಿಮ್ಮ ಶರಣರಲ್ಲಿ ಜಾತಿಯ ಹುಡುಕುವ
ಕಡುಪಾತಕಿಗಳ ಎನ್ನತ್ತ ತೋರದಿರಯ್ಯಾ
ಕೂಡಲಚೆನ್ನಸಂಗಮದೇವಾ.[೨]

ಎಂದಿದ್ದಾರೆ. ಇದೇ ಅಭಿಪ್ರಾಯವನ್ನು ಬಸವಣ್ಣನವರು ತಮ್ಮ ವಚನದಲ್ಲಿ

ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು
ಶಿವನೆಂದು ವಂದಿಸಿ, ಪೂಜಿಸಿ,ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ.
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ ಪಂಚಮಹಾಪಾತಕ
ನರಕ ಕಾಣಾ, ಕೂಡಲಸಂಗಮದೇವಾ[೩]

ಎಂದಿದ್ದಾರೆ. ಕಾರಣ ದೀಕ್ಷೆಯಿಂದ ಬ್ರಾಹ್ಮಣರು ತಮ್ಮ ಬ್ರಾಹ್ಮಣತ್ವವನ್ನು ಹಾಗೂ ಶೂದ್ರರು ತಮ್ಮ ಶೂದ್ರತ್ವವನ್ನು ಕಳೆದುಕೊಂಡು ಪರಮ ಪವಿತ್ರವಾದ ಶಿವತ್ತ್ವವನ್ನು ಹೊಂದುವರು. ಹೇಗೆ ಬೆಳ್ಳಿ, ತಾಮ್ರ ಮೊದಲಾದ ಲೋಹಗಳು ತಜ್ಞನಿಂದ ತಯಾರಿಸಲ್ಪಟ್ಟ ವಿಶೇಷ ರಸ ಸಂಪರ್ಕದಿಂದ ಹೇಗೆ ಸುವರ್ಣವಾಗಿ ಪರಿವರ್ತನಗೊಳ್ಳುತ್ತವೆಯೋ ಅಂತೆಯೇ ಪರಮಗುರುವಿನಿಂದ ಉಪದೇಶಿಸಲ್ಪಡುವ ಶಿವಜ್ಞಾನವೆಂಬ ರಸದಿಂದ ವಿವಿಧ ವರ್ಗದ ಮಾನವರು ಕುಲ-ಜಾತಿ-ಅಂತಸ್ತುಗಳ ತಾರತಮ್ಯವಿಲ್ಲದೇ

---

೨. ಚೆನ್ನಬಸವಣ್ಣನವರ ವ.ಸಂಪುಟ.ಸಮಗ್ರ ವಚನ ಸಂಪುಟ ೩, ವಚನಸಂಖ್ಯೆ ೧೨೦೧, ಪುಟ೪೧೫
೩. ಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೧೨೧೫, ಪುಟ೩೩೪

ಶಿವಚೈತನ್ಯವನ್ನು ಹೊಂದುವರು. ಇದನ್ನೇ 'ಚತುರ್ವರ್ಣಿಯಾದಡೇನು, ಚತುರ್ವರ್ಣಾತೀತನೆ ವೀರಶೈವ ನೋಡಾ' ಎಂದು ಹೇಳಿ ವೀರಶೈವರಲ್ಲಿ ಜಾತಿಭೇದ ವಿಲ್ಲವೆಂದು ಬಿಂಬಿಸಿದ್ದಾರೆ. ಅನುಭವ ಮಂಟಪಲದಲ್ಲಿ ಜಾತಿಭೇದವಿಲ್ಲದೆ ಶರಣ-ಶರಣೆಯರು ಭಾಗವಹಿಸುತ್ತಿದ್ದುದು, ವೀರಶೈವದ ದಾರ್ಶನಿಕ ತತ್ತ್ವ ವಿಚಾರಗಳ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದುದು ಪ್ರಸಿದ್ಧವಾದ ವಿಷಯ. ಇವೆಲ್ಲವುಗಳ ಪೂರ್ವಸೂಚನೆ ಶಿವಾಗಮಗಳಲ್ಲಿ ಕಂಡುಬರುತ್ತದೆ.

ಸಮಾನ ಗೌರವ, ಸಹೋದರ ಭಾವನೆ (ಭ್ರಾತೃತ್ವ ಮನೋಭಾವ) ಹಾಗೂ ಶಾಂತಿಯುತ ಸಹಬಾಳ್ವೆ

ವೀರಶೈವ ಸಮಾಜದಲ್ಲಿ ಎಲ್ಲರಿಗೂ ಸಮಾನ ಗೌರವವೆಂಬ ಅಂಶ ಶಿವಾಗಮಗಳಲ್ಲಿ ಮೂಡಿಬಂದಿದೆ. ಸೂಕ್ಷ್ಮಾಗಮವು

ಜಂಗಮೋ ಜಂಗಮಂ ದೃಷ್ಟ್ವಾನ ಪ್ರಣಾಮಂ ಕರೋತಿ ಯಃ।
ಸ ಏವ ಜಂಗಮದ್ರೋಹೀ ಮದ್‌ದ್ರೋಹೀ ಚ ನ ಸಂಶಯಃ॥[೪]

ಜಂಗಮನು ಇನ್ನೊಬ್ಬ ಜಂಗಮನನ್ನು ಕಂಡು ನಮಸ್ಕಾರ ಮಾಡದಿದ್ದರೆ ಜಂಗಮದ್ರೋಹಿ ಮತ್ತು ನಿಃಸಂಶಯವಾಗಿ ಶಿವದ್ರೋಹಿ ಎಂದು ಹೇಳಿದ್ದರೆ, ಪಾರಮೇಶ್ವರಾಗಮವು –

ಅಭಿವಂದೇತ್ ತದಾನ್ಯೋನ್ಯಂ ನ ಭೇದೋ ಲಿಂಗಧಾರಿಣಾಮ್ ।
ನ ಬ್ರಹ್ಮಚರ್ಯನಿಯಮೋ ನ ವಾನಪ್ರಸ್ಥಲಕ್ಷಣಮ್॥[೫]

ಲಿಂಗಧಾರಿಗಳ ಮಧ್ಯದಲ್ಲಿ ಭೇದವಿಲ್ಲ. ಅವರು ಪರಸ್ಪರರಿಗೆ ಅನ್ಯೋನ್ಯವಾಗಿ ಅಭಿವಂದಿಸಬೇಕು. ಇಲ್ಲಿ ಬ್ರಹ್ಮಚರ್ಯ ನಿಯಮವಾಗಲಿ ವಾನಪ್ರಸ್ಥಲಕ್ಷಣವಾಗಲಿ ಅಡ್ಡಬರುವುದಿಲ್ಲ ಎಂದು ಹೇಳಿ ವೀರಶೈವರು ಎಲ್ಲರಿಗೂ ಸಮಾನ ಗೌರವ ನೀಡಬೇಕೆಂದು ಪ್ರತಿಪಾದಿಸುತ್ತದೆ. ವೀರಶೈವರ ಶಿವಾಚಾರ ಮತ್ತು ಭೃತ್ಯಾಚಾರಗಳಲ್ಲಿ ಎಲ್ಲರನ್ನೂ ಗೌರವ ಹಾಗೂ ಭಕ್ತಿಯಿಂದ ಕಾಣಬೇಕೆಂಬ ವಿಚಾರವನ್ನು ಅಭಿವ್ಯಕ್ತಗೊಳಿಸಲಾಗಿದೆ. ಇನ್ನು ಇದೇ ಅಭಿಪ್ರಾಯವನ್ನು ಚೆನ್ನಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ.

ಶರಣ ಶರಣನ ಕಂಡು ಶರಣೆಂದು ಕರಮುಗಿವುದೆ ಭಕ್ತಿಲಕ್ಷಣ
ಶರಣ ಶರಣನ ಕಂಡು ಪಾದವಿಡಿದು ವಂದಿಸುವುದೆ ಭಕ್ತಿ ಲಕ್ಷಣ
ಶರಣ ಚರಣವ ಪಿಡಿಯದೆ ಕಂಡು ಕಾಣದೆ ಪೋದನಾದಡೆ
ಕೂಡಲಚೆನ್ನಸಂಗನ ಶರಣರು ಮನ್ನಿಸರಯ್ಯಾ ಸಿದ್ಧರಾಮಯ್ಯಾ[೬]

೪. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೭೭
೫. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೪೯
೬. ಚೆನ್ನಬಸವಣ್ಣನವರ ವ.ಸಂಪುಟ.ಸಮಗ್ರ ವಚನ ಸಂಪುಟ ३, ವಚನಸಂಖ್ಯೆ ೧೫೮೨, ಪುಟ೫೭೫

ಎಂದಿದ್ದಾರೆ. ಅಲ್ಲದೇ 'ವಸುದೈವ ಕುಟುಂಬಕಂ' ಎಂಬ ಭಾವವನ್ನು ಆಗಮಗಳು ಪ್ರತಿಪಾದಿಸುತ್ತ

ಯೇ ಸಂತಿ ಜಾತಿಭೇದಾಸ್ತಾನೇಕವಚ್ಛಿವಯೋಗಿನಃ ।
ಪಶ್ಯೇದಖಿಲಜಾತಿಸ್ಥಾನೇಕಮಾತೃಸಹೋದರಾನ್ ॥[೭]

ನಾನಾ ಪ್ರಕಾರದ ಯಾವ ಜಾತಿಭೇದಗಳಿವೆಯೋ ಅವೆಲ್ಲವೂ ಶಿವಯೋಗಿಗೆ (ಶಿವನೊಂದಿಗೆ ಒಂದಾದ ವೀರಶೈವನಿಗೆ) ಒಂದೇ ಇದ್ದಂತೆ (ಸಮಾನ). ಅವನು ಬೇರೆ ಬೇರೆ ಜಾತಿಯಲ್ಲಿರುವವರನ್ನು ಒಬ್ಬಳೇ ತಾಯಿಯ ಮಕ್ಕಳಾದ ಸಹೋದರರಂತೆ ನೋಡಬೇಕು ಎನ್ನುವ ಆದರ್ಶ ವಿಚಾರವನ್ನು ಬಿಂಬಿಸಿವೆ. ಅಲ್ಲದೇ

ನೋದಾಸೀನಂ ನ ಚ ದ್ವೇಷಂ ನ ಹಿಂಸಾಂ ನಾಪಿ ವಂಚನಮ್।
ಕುರ್ವೀತ ಲಿಂಗೀ ಯತ್ನೇನ ವಿಮತೇಷ್ವಪ್ಯಲಿಂಗಿಷು ॥[೮]

ಲಿಂಗಧಾರಿಯು ಬೇರೆ ಮತದವರಾದ ಅಲಿಂಗಿಗಳ ವಿಷಯದಲ್ಲಿ ಪ್ರಯತ್ನಪೂರ್ವಕವಾಗಿ ತಿರಸ್ಕಾರವನ್ನು ತೋರಬಾರದು, ದ್ವೇಷ ಮಾಡಬಾರದು, ಹಿಂಸೆಯನ್ನು ಆಚರಿಸಬಾರದು ಮತ್ತು ವಂಚನೆ ಮಾಡಬಾರದು ಎಂದು ಅರುಹುತ್ತವೆ. ಅಲ್ಲದೇ

ನ ಕಾರ್ಯಃ ಕಲಹೋ ದೇವಿ ಅನ್ಯೋನ್ಯಂ ಶಿವಯೋಗಿಭಿಃ ॥
ನ ಪೈಶುನ್ಯಂ ನ ಮಾತ್ಸರ್ಯಂ ನ ದ್ರೋಹಂ ನಾಪಿ ಪೀಡನಮ್।
ನ ಸ್ಪೃಶೇದಾಯುಧಂ ಕ್ವಾಪಿ ಪ್ರಾಣೈಃ ಕಂಠಗತೈರಪಿ ॥[೯]

ಪರಸ್ಪರ ಜಗಳವಾಡಬಾರದು. ಪರಸ್ಪರ ಸಣ್ಣತನ, ಹೊಟ್ಟೆಕಿಚ್ಚು, ದ್ರೋಹ, ಪೀಡೆ ಇರಬಾರದು. ಪ್ರಾಣವು ಕಂಠಕ್ಕೆ ಬಂದರೂ ಎಲ್ಲಿಯೂ ಶಸ್ತ್ರವನ್ನು ಸ್ಪರ್ಶಿಸಬಾರದು ಎನ್ನುತ್ತ –

ಅದ್ವೇಷ್ಟಾರೋಽಧಿಕೇ ಸ್ವಸ್ಮಾತ್ ಸ್ವಸಮೇಷ್ವನಸೂಯವಃ।
ಅತಿರಸ್ಕಾರಿಣೋ ನ್ಯೂನೇ ವೀರಾಸ್ತೇ ಶಿವಯೋಗಿನಃ ॥
ಸ್ಪರ್ಧಾಸೂಯಾತಿರಸ್ಕಾರರ್ಜಿತಾಃ ಶಾಂತಚೇತಸಃ।[೧೦]

ತನಗಿಂತ ಅಧಿಕರಲ್ಲಿ ದ್ವೇಷವಿಲ್ಲದವರೂ, ತನಗೆ ಸಮಾನರಲ್ಲಿ ಅಸೂಯೆಯಿಲ್ಲದವರೂ, ತನಗಿಂತ ಕಡಿಮೆಯಾದವರಲ್ಲಿ ತಿರಸ್ಕಾರವಿಲ್ಲದವರೂ, ಸ್ಪರ್ಧೆ, ಅಸೂಯೆ ಮತ್ತು ತಿರಸ್ಕಾರ ರಹಿತವಾದ, ಶಾಂತಚಿತ್ತರಾದ, ನಿತ್ಯ ಶಿವಧ್ಯಾನಪರ

---

೭. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೪೦
೮. ಪಾ.ಆ. ಪಟಲ ೭, ಶ್ಲೋಕ ಸಂಖ್ಯೆ ೪೩
೯. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೯೦–೯೧
೧೦. ಪಾ.ಆ. ಪಟಲ ೮, ಶ್ಲೋಕ ಸಂಖ್ಯೆ ೧೯–೨೦

ರಾದ ಶುದ್ಧರೇ ವೀರಶೈವರು ಎನ್ನುತ್ತ ವೀರಶೈವನಾದವನು ಎಲ್ಲರಿಗೂ ಸಮಾನ ಗೌರವ ನೀಡುತ್ತ ಭಾತೃತ್ವ ಮನೋಭಾವನೆಯನ್ನು ಹೊಂದಿ ಶಾಂತಿಯುತ ಸಹಬಾಳ್ವೆ ನಡೆಸಬೇಕೆಂಬ ಆದರ್ಶ ಮೌಲ್ಯವನ್ನು ಪ್ರತಿಪಾದಿಸಿವೆ.

ದಾನ

ಶಿವಾಗಮಗಳಲ್ಲಿ ದಾನದ ಕಲ್ಪನೆಯು ಅತ್ಯಂತ ಮನೋಜ್ಞವಾಗಿ ಮೂಡಿಬಂದಿದೆ. ಗುರುವಾಗಲಿ ಜಂಗಮನಾಗಲಿ ಅವರು ಸಮಾಜದ ಆರಾಧ್ಯದೇವತಾಸ್ವರೂಪರು. ಅವರಿಗೆ ಕೊಡುವ ದಾನವು ಸಮಾಜಕ್ಕೆ ಹಿತವನ್ನುಂಟು ಮಾಡಲು ಬಳಸಲಾಗುತ್ತದೆ. ಕಾರಣ ಗುರು–ಜಂಗಮಕ್ಕೆ ದಾಸೋಹ ಬುದ್ಧಿಯಿಂದ ಮಾಡಿದ ದಾನ ವ್ಯಕ್ತಿಗತವಾಗಿ ಭಕ್ತನಿಗೆ ಆತ್ಮೋನ್ನತಿಯನ್ನು ನೀಡುವುದಲ್ಲದೆ ಗುರು–ಜಂಗಮರ ಮೂಲಕ ಅದರ ಫಲವು ಇಡೀ ಸಮಾಜದ ಉನ್ನತಿಗೆ ಕಾರಣವಾಗುತ್ತದೆ ಎಂಬ ಮನೋಭಾವ ಆಗಮಗಳಲ್ಲಿ ಅಭಿವ್ಯಕ್ತಗೊಂಡಿದೆ. ಕಾರಣ ಚಂದ್ರಜ್ಞಾನಾಗಮದಲ್ಲಿ ಗುರುವಿಗೆ ದಾನ ಮಾಡಬೇಕೆಂದು ವಿಧಿಸಿದೆ.

ತಸ್ಮಾದ್ಧನಾನಿ ರತ್ನಾನಿ ಕ್ಷೇತ್ರಾಣಿ ಚ ಗೃಹಾಣಿ ಚ।
ಭೂಷಣಾನಿ ಚ ವಾಸಾಂಸಿ ಯಾನಶಯ್ಯಾ ಸನಾನಿ ಚ ॥
ಏತಾನಿ ಗುರುವೇ ದದ್ಯಾದ್ ಭಕ್ತ್ಯಾ ವಿತ್ತಾನುಸಾರತಃ।
ವಿತ್ತಶಾಠ್ಯಂ ನಕುರ್ವೀತ ಯದೀಚ್ಛೇತ್ ಪರಮಾಂ ಗತಿಮ್॥[೧೧]

ವಿವಿಧ ಸಂಪತ್ತು, ರತ್ನಗಳು, ಕ್ಷೇತ್ರಗಳು, ಮನೆಗಳು, ಭೂಷಣಗಳು, ಬಟ್ಟೆ-ಬರೆಗಳು, ವಾಹನ, ಶಯನ ಸಾಮಗ್ರಿಗಳು ಮುಂತಾದವುಗಳನ್ನು ಭಕ್ತನು ತನ್ನ ಗುರುವಿಗೆ ದಾನಮಾಡಬೇಕು. ಪರಮಗತಿಯನ್ನು ಹೊಂದುವ ಇಚ್ಛೆಯಿದ್ದರೆ ಭಕ್ತನು ತನ್ನ ಸಂಪತ್ತಿನ ಬಗ್ಗೆ ವಂಚನೆ ಮಾಡಬಾರದು ಎಂದು ತಿಳಿಸಿದೆ. ಅಲ್ಲದೇ ಜಂಗಮರು ಸಹ ಎಂದೂ ಧನ–ಧಾನ್ಯ–ವಸ್ತು ಸಂಗ್ರಹ ಮಾಡಬಾರದು. ಸಂಗ್ರಹ ವೃತ್ತಿ ಸೂಕ್ತವಲ್ಲವೆಂದು ಸೂಕ್ಷ್ಮಾಗಮ ಆದೇಶಿಸುತ್ತದೆ.

ನ ವಸ್ತು ಸಂಗ್ರಹಂ ಕುರ್ಯಾದ್ಯತ್ರ ಕುತ್ರಾಪಿ ಜಂಗಮಃ ।
ದತ್ತಂ ದದ್ಯಾಚ್ಚ ಭಕ್ತೇಭ್ಯೋ । ದರಿದ್ರೇಭ್ಯೋ, ದಯಾನ್ವಿತಃ॥[೧೨]

ಸಮಾಜದಲ್ಲಿ ಜಂಗಮರು ಸಂಗ್ರಹ ಪ್ರವೃತ್ತಿಗೆ ತೊಡಗಬಾರದು. ತಮಗೆ ಭಕ್ತರಿಂದ ಬಂದ ಧನವನ್ನು ಭಕ್ತರಿಗೂ, ಬಡವರಿಗೂ, ಅಸಹಾಯಕರಿಗೂ ಸಹಾಯ ಮಾಡಬೇಕೆಂಬುದನ್ನು ಸೂಚಿಸುತ್ತದೆ.

---

೧೧. ಚಂ.ಆ.ಕ್ರಿ. ಪಾ. ಪಟಲ ೨, ಶ್ಲೋಕ ಸಂಖ್ಯೆ ೭೦–೭೧
೧೨. ಸೂ.ಆ. ಪಟಲ ೭, ಶ್ಲೋಕ ಸಂಖ್ಯೆ ೭೨

ದಾಸೋಹ

ದಾಸೋಹ ವಿಚಾರವೂ ಆಗಮಗಳಲ್ಲಿ ಅಲ್ಲಲ್ಲಿ ಉಲ್ಲೇಖವಾಗಿದೆ. ವೀರಾಗಮ ದಾಸೋಹ ಕಲ್ಪನೆಯನ್ನು ಅರ್ಥಪೂರ್ಣವಾಗಿ ಪ್ರತಿಪಾದಿಸುತ್ತದೆ.

ದಾಸೋಹಂ ಪ್ರಥಮಾ ಮೋಕ್ಷಂ[೧೩]
ವದಂತೀತಿ ನ ಸಂಶಯ ॥

ಇಲ್ಲಿ ಪ್ರಥಮಾ ಎಂದರೆ ಗುರು ಲಿಂಗ ಜಂಗಮವೆಂದು ಅರ್ಥವಿದೆ. ಗುರು, ಲಿಂಗ, ಜಂಗಮರಿಗೆ, ತನು, ಮನ, ಧನದಿಂದ ಮಾಡುವ ದಾಸೋಹ ಮೋಕ್ಷಕ್ಕೆ ಕಾರಣವಾಗುತ್ತದೆ. ಇದರಲ್ಲಿ ಸಂಶಯವಿಲ್ಲವೆಂದು ಹೇಳಿ, ದಾಸೋಹದ ಪಾವಿತ್ರ್ಯವನ್ನು ಸೂತ್ರ ರೂಪದಲ್ಲಿ ಪ್ರತಿಪಾದಿಸುತ್ತದೆ. ದಾನವೇ ಆಗಲಿ, ದಾಸೋಹವೇ ಆಗಲಿ, ಇವುಗಳ ಆಚರಣೆಯಲ್ಲಿ ಭೇದವಿರಬಹುದೇ ವಿನಾ ದಾನ, ದಾಸೋಹ ಮಾಡುವ ವ್ಯಕ್ತಿ ನಿರಹಂಕಾರಿಯಾಗಿ, ಕೊಡುವ ನೀಡುವ ವಸ್ತು ದೈವಸ್ವರೂಪದ್ದು, ತನ್ನದಲ್ಲ ಎಂದು ಭಾವಿಸಿ ಕೊಡುವುದು ಅಥವಾ ಮಾಡುವುದು ನಿಜವಾದ ದಾನ-ದಾಸೋಹವಾಗುತ್ತದೆ ಎನ್ನುವ ಉದಾತ್ತ ತತ್ವವನ್ನು ಆಗಮಗಳು ಪ್ರತಿಪಾದಿಸುತ್ತವೆ.

ಇಲ್ಲಿ ದಾಸೋಹ ಎಂಬ ಮಾತೇ ವಿಶಿಷ್ಟವಾದುದು. ಒಂದು ಮಹತ್ವಪೂರ್ಣವಾದ ಶಕ್ತಿ. 'ಶಿವೋಹಂ' ಅಥವಾ 'ಸೋಹಂ' ಎಂಬ ಮಾತುಗಳು ಅಹಂಕಾರಕ್ಕೆ ಮೂಲವಾಗಬಹುದು; ಆದರೆ 'ದಾಸೋಹಂ' ಎಂಬುದು ಅಹಂಕಾರದ ಗೋಡೆಗಳನ್ನು ಕೆಡವಿ ಸಮಾಜಕ್ಕೆ ನಾನು ಸೇವಕ ಎಂಬ ಕರ್ತವ್ಯ ಪ್ರಜ್ಞೆಯನ್ನು ಸದಾ ಜಾಗೃತವಾಗಿಟ್ಟಿರುತ್ತದೆ. ದಾಸೋಹದ ಕಲ್ಪನೆ ವಚನಗಳಲ್ಲಿ ಅತ್ಯಂತ ಸತ್ವಯುತವಾಗಿ ಮೂಡಿಬಂದಿದ್ದು, 'ಸೋಹಂ ಎಂದೆನಿಸದಿರಯ್ಯ; ದಾಸೋಹಂ ಎಂದೆನಿಸಯ್ಯ' ಎಂದು ಬಸವಣ್ಣನವರು ಪ್ರಾರ್ಥಿಸಿದ್ದಾರೆ.

'ಸೋಹಂ' ಎಂಬುದದು ಅಂತರಂಗದ ಮದ ನೋಡಯ್ಯಾ,
'ಶಿವೋಹಂ' ಎಂಬುದದು ಬಹಿರಂಗದ ಮದ ನೋಡಯ್ಯಾ.
ಈ ದ್ವಂದ್ವವನಳಿದು 'ದಾಸೋಹಂ' ಎಂದೆನಿಸಯ್ಯಾ[೧೪]
ಕಪಿಲಸಿದ್ಧ ಮಲ್ಲಿಕಾರ್ಜುನಾ.

ಎಂದಿದ್ದಾರೆ. 'ದಾಸೋಹ' ಎಂಬ ಮಾತಿನಲ್ಲಿಯೇ ಅಹಂಕಾರವನ್ನಳಿದ ಕಿಂಕರತೆ ವ್ಯಕ್ತವಾಗುತ್ತದೆ. ಅರ್ಥಪ್ರಾಣ ಅಭಿಮಾನಗಳನ್ನು ದಾಸೋಹ ಶುದ್ಧ ಮಾಡುತ್ತದೆ. ಗುರು, ಲಿಂಗ, ಜಂಗಮಗಳಿಗೆ ತನು ಮನ ಧನಗಳನ್ನರ್ಪಿಸಬೇಕೆಂಬ ತ್ರಿವಿಧ ದಾಸೋಹದ ಕಲ್ಪನೆ ವಚನಗಳಲ್ಲಿ ಬಹಳ ಅರ್ಥವತ್ತಾಗಿ ಮೂಡಿಬಂದಿದೆ. ಈ ದಾನವೇ ಆಗಲಿ, ದಾಸೋಹವೇ ಆಗಲಿ, ಸತ್ಯಶುದ್ಧವಾದ ಕಾಯಕದಿಂದ ಅರ್ಜಿಸಿದ ಧನದಿಂದಲೇ ಕೈಕೊಳ್ಳಬೇಕೆಂದು ಆಗಮ ಹಾಗೂ ವಚನಗಳು ಪ್ರತಿಪಾದಿಸುತ್ತವೆ.

---

೧೩. ವೀ.ಆ. ಪಟಲ ೧, ಶ್ಲೋಕ ಸಂಖ್ಯೆ ೩೬೬
೧೪. ಸಿದ್ಧರಾಮೇಶ್ವರ ವ.ಸಂಪುಟ.ಸಮಗ್ರ ವಚನ ಸಂಪುಟ ೪, ವಚನ ಸಂಖ್ಯೆ ೧೪೮೭, ಪುಟ೪.೨೯

ಕಾಯಕ

ಶಿವಾಗಮಗಳು ಪಂಚಾಚಾರಗಳ ವರ್ಣನೆಗೈಯುತ್ತ ಧರ್ಮಾರ್ಜಿತವಾದ ಧನದಿಂದ ಗುರು-ಲಿಂಗ-ಜಂಗಮ ದಾಸೋಹ ಮಾಡಬೇಕೆಂದು ಹೇಳಿದೆ -

ಧರ್ಮಾರ್ಜಿತೇನ ದ್ರವ್ಯೇಣಯತ್ ಸಂತರ್ಪಣಮನ್ವಹಮ್।[೧೫]
ಗುರುಲಿಂಗಜಂಗಮಾನಾಂ ಸದಾಚಾರ ಇತಿಸ್ಮೃತಃ॥

ಗುರುಲಿಂಗ ಜಂಗಮಕ್ಕೆ ದಾಸೋಹವನ್ನು ಮಾಡಬೇಕಾದರೆ ಸತ್ಯ ಶುದ್ಧ ಕಾಯಕದಿಂದ ಕಾಯವನ್ನು ಬಳಲಿಸಬೇಕು. ದೇಹಶ್ರಮದ ದುಡಿಮೆಯಿಂದ ತಂದುದಲ್ಲದೆ ಇತರ ಆಡಂಬರದ ವಸ್ತುಗಳು ಲಿಂಗಕ್ಕೆ ಅರ್ಪಿತವಾಗವು ಎಂಬುದೇ ಕಾಯಕದ ಕಲ್ಪನೆ. ಈ ಕಲ್ಪನೆಯು ವಚನ ಸಾಹಿತ್ಯದಲ್ಲಿ ಬಹುವಾಗಿ ಮೂಡಿಬಂದಿದ್ದು ಪ್ರಾಯೋಗಿಕ ಮಹತ್ತ್ವವನ್ನು ಪಡೆದಿದೆ. 'ಕರೆಯ ಸೊಪ್ಪಾದರು ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ ದುರಾಸೆಯಿಂ ಬಂದುದು ಅನರ್ಪಿತ' ಎಂಬ ಚಂದಯ್ಯನವರ ಮಾತು ಮನನೀಯವಾದುದು. ದುಡಿಮೆ ಕೇವಲ ಹೊಟ್ಟೆಪಾಡಿಗಲ್ಲ. ಅದು ಸಮಾಜ ಮತ್ತು ವ್ಯಕ್ತಿ, ಇಹ ಮತ್ತು ಪರಗಳೆರಡನ್ನೂ ಸಮನ್ವಯಗೊಳಿಸುವಂತಿರಬೇಕು.

ಭಾವಶುದ್ಧವಾಗಿ ಮಾಡುವ ಕಾಯಕದಿಂದ ಆಂತರಿಕ ಶಾಂತಿ ಮತ್ತು ಸಮಾಜದ ಸ್ವಯಂಪೂರ್ಣತೆ ಎರಡೂ ಸಿದ್ಧಿಸುತ್ತವೆ. ಅಪರಿಗ್ರಹ ಮತ್ತು ಅಸಂಗ್ರಹ ತತ್ವಗಳೆರಡೂ ಇಲ್ಲಿ ಅಡಕವಾಗಿವೆ. ಇನ್ನೊಬ್ಬರ ಶ್ರಮದ ಫಲವನ್ನು ಪಡೆಯದಿರುವುದು; ಅಂದಂದಿನ ಕಾಯಕವನ್ನು ಅಂದಂದು ಮಾಡಿ ಶುದ್ಧರಾಗುವುದು ಈ ನಿಯಮಗಳಲ್ಲಿ ಅದನ್ನು ಕಾಣುತ್ತೇವೆ. ಅರುಹಿನ ಕುರುಹನ್ನು ಕರಸ್ಥಲದಲ್ಲಿಟ್ಟು ಪೂಜಿಸುವಾತ ಮಾಡುವ ಕಾಯಕವೆಲ್ಲಾ ಆ ಪೂಜೆಯ ಅಂಗವಾಗುತ್ತದೆ. ಕಾರಣ ಬಸವಣ್ಣನವರು 'ಕಾಯಕವೇ ಕೈಲಾಸ' ವೆಂದು ಹೇಳಿ ಕಾಯಕದ ಮಹತ್ತ್ವವನ್ನು ಅದರ ಪಾವಿತ್ರ್ಯವನ್ನೂ ಬಿಂಬಿಸಿದ್ದಾರೆ.

ಸತ್ಯಶುದ್ಧ ಕಾಯಕದಿಂದ ಬಂದುದನ್ನು ಗುರು ಲಿಂಗ ಜಂಗಮರ ತ್ರಿವಿಧ ದಾಸೋಹಕ್ಕೆ ವಿನಿಯೋಗಿಸಬೇಕು. ಕಾಯಕದಲ್ಲಿ ಮೇಲು ಕೀಳೆಂಬುದಿಲ್ಲ ಎನ್ನುತ್ತ ಆಗಮಗಳಲ್ಲಿ ವೃತ್ತಿ ಗೌರವವನ್ನು ಎತ್ತಿ ಹಿಡಿಯುವ ವಿಚಾರಗಳು ಉಲ್ಲೇಖವಾಗಿವೆ. ಸೂಕ್ಷ್ಮಾಗಮದಲ್ಲಿ -

ಯೇನ ಕೇನಾಪಿ ಮಾರ್ಗೇಣ। ಯೇನ ಕೇನ ಚ ಕರ್ಮಣಾಃ
ಶಿವೈಕನಿಷ್ಠಮನಸೋ ಭಕ್ತಾಸ್ತೇ ಚೋತ್ತ ಮೋತ್ತಮಾಃ॥[೧೬]

ಉದ್ಯೋಗಗಳು ಬೇರೆ ಬೇರೆ ಆದರೂ, ಅವುಗಳನ್ನು ದೈವಸಾಕ್ಷಿಯಾಗಿ ಮಾಡಬೇಕು

---

೧೫. ಚಂ.ಆ.ಕ್ರಿ ಪಾ. ಪಟಲ ೯, ಶ್ಲೋಕ ಸಂಖ್ಯೆ ೬
೧೬. ಸೂ.ಆ. ಪಟಲ ೯, ಶ್ಲೋಕ ಸಂಖ್ಯೆ ೧೨

ಹಾಗೆ ನಿಷ್ಠೆಯಿಂದ ಉದ್ಯೋಗ ಮಾಡುವವರು ಉತ್ತಮೋತ್ತಮ ಭಕ್ತರು ಎಂದು ವೃತ್ತಿ ಗೌರವವನ್ನು ವ್ಯಕ್ತಪಡಿಸಿದೆ. ಪರಮೇಶ್ವರಾಗಮವು–

ದೀಕ್ಷಿತೋ ವೀರಶೈವಾನಾಂ ದೀಕ್ಷಾಯಾಂ ಧೃತಲಿಂಗಕಃ।
ನ ನೀಚಮಾಚರೇತ್ ಕರ್ಮ ನಾಯಾಸಂ ನಾಪಿ ಕುತ್ಸಿತಮ್।[೧೭]

ವೀರಶೈವನು ವೃತ್ತಿಗಳೆಂದು ನೀಚವೃತ್ತಿಗಳನ್ನು ಕೈಗೊಳ್ಳಬಾರದು. ಅಂದರೆ ಚೋರಕರ್ಮ, ವಿಟಕರ್ಮ, ವೇಶ್ಯಾಕರ್ಮ ಇತ್ಯಾದಿಗಳನ್ನು ಮಾಡಬಾರದು. ಸಮಾಜದಲ್ಲಿ ಇವು ಹೀನ ವೃತ್ತಿಗಳೆಂದು ಪರಮೇಶ್ವರಾಗಮ ತಿಳಿಸುತ್ತದೆ. ಸಮಾಜದಲ್ಲಿರುವ ಇಂಥ ಹೀನ ವೃತ್ತಿಗಳನ್ನು ಕುತ್ಸಿತ ವೃತ್ತಿಗಳೆಂದು ಅದು ಕರೆಯುತ್ತದೆ. ಕಾರಣ ಕಾಯಕವು ಶುದ್ಧವಾಗಿದ್ದು ಸಮಾಜದ ಹಿತಕ್ಕೆ ಪೂರಕವಾಗಿರಬೇಕು ಎಂದು ಪ್ರತಿಪಾದಿಸಿದೆ.

ಅತಿಥಿ ಸತ್ಕಾರ

ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ 'ಅತಿಥಿ ದೇವೋಭವ' ಎಂದು ಅತಿಥಿಯನ್ನು ದೈವ ಸಮಾನವೆಂದು ಗೌರವಿಸಿದರೆ, ಆಗಮ ಸಾಹಿತ್ಯವೂ ಅಷ್ಟೇ ಮಹತ್ವವನ್ನು ನೀಡಿ ಗೌರವಿಸುತ್ತದೆ.

ಸ್ತ್ರಿಯೋ ವಾ ಪುರುಷಾ ವಾಪಿ ಸರ್ವತ್ರಾತಿಥಿಪೂಜನೇ।
ಪುಂಭಿಃ ಪುಂಸಾಂ ಸ್ತ್ರಿಯಾಂ ಸ್ತ್ರೀಭಿರ್ದೇಯ ಗಂಧಾದಿಕಂ ಕರೇ ॥[೧೮]

ಸ್ತ್ರೀಯರೇ ಆಗಲಿ, ಪುರುಷರೇ ಆಗಲಿ, ಅತಿಥಿಗಳನ್ನು ಗೌರವಿಸಲೇಬೇಕು. ಸಮಾನ ದೃಷ್ಟಿಯಿಂದ ಪುರುಷರು ಪುರುಷರನ್ನು, ಸ್ತ್ರೀಯರು ಸ್ತ್ರೀಯರನ್ನು ಫಲ ಪುಷ್ಪ ಗಂಧಾದಿಗಳಿಂದ ಗೌರವಿಸಬೇಕೆಂದು ಆದೇಶ ನೀಡುತ್ತದೆ.

ಗೃಹಮಾಯಾಂತಮಾಲೋಕ್ಯ ಗುರುಂ ವಾಽಗುರುಮೇವ ವಾ।
ಯೋ ಗೃಹೀ ಭವತೇ ನಮ್ರಃ ಸ ಗುರುರ್ನೇತರಃ ಕ್ವಚಿತ್॥
ತದಾಗತಂ ಗೃಹೇ ವೀಕ್ಷ್ಯ ಪ್ರತ್ಯುತ್ಥಾಯಾಭಿವಾದಯೇತ್।
ಶ್ರಮಾಪನೋದನಂ ಕುರ್ಯಾದ್ ವ್ಯಜ ನಾದಿಭಿರಾದರಾತ್ ॥
ಪ್ರಣಮ್ಯ ಸ್ವಾಗತಂ ಬ್ರೂಯಾತ್ ಪಾದಪ್ರಕ್ಷಾಲನಂ ಚರೇತ್।
ಪ್ರಥಮಂ ಪೂಜಯೇದ್ ಗಂಧಪುಷ್ಪೈಃ ಸಂಕ್ಷಾಲಯೇತ್ತತಃ ॥[೧೯]

ಮನೆಗೆ ಬಂದ ಜಂಗಮ (ಶಿವಯೋಗಿ) (ವಯಸ್ಸಿನಲ್ಲಿ) ಹಿರಿಯನಾಗಿರಲಿ ಕಿರಿಯನಾಗಿರಲಿ ಅವನನ್ನು ನೋಡಿ ಯಾವ ಗೃಹಸ್ಥನು ನಮ್ರನಾಗುತ್ತಾನೋ ಅವನು

---

೧೭. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೬೭
೧೮. ಪಾ.ಆ. ಪಟಲ ೭, ಶ್ಲೋಕ ಸಂಖ್ಯೆ ೫೨
೧೯. ಪಾ.ಆ. ಪಟಲ ೭, ಶ್ಲೋಕ ಸಂಖ್ಯೆ ೪೫–೪೭

ಶ್ರೇಷ್ಠ. ಹಾಗೆ ಮನೆಗೆ ಬಂದ ಅತಿಥಿಯನ್ನು ನೋಡಿ ಎದ್ದು ನಿಂತು ನಮಸ್ಕರಿಸಬೇಕು. ಆದರ ಪೂರ್ವಕವಾಗಿ ಬೀಸಣಿಗೆ ಮುಂತಾದವುಗಳಿಂದ ಸೇವೆ ಮಾಡಿ ಅವನ ಶ್ರಮಪರಿಹಾರವನ್ನು ಮಾಡಬೇಕು. ನಮಸ್ಕರಿಸಿ ಸ್ವಾಗತವನ್ನು ಹೇಳಬೇಕು ಎಂದು ಅತಿಥಿ ಸತ್ಕಾರ ಮಾಡುವ ಬಗೆಯನ್ನು ವಿವರಿಸುತ್ತದೆ.

ಇದೇ ಭಾವವನ್ನೇ ಅಕ್ಕಮ್ಮನವರು ಅಭಿವ್ಯಕ್ತಗೊಳಿಸುತ್ತ 'ಭಕ್ತರ ಮನೆಗೆ ಸತ್ಯ ಶರಣರು ಬಂದಲ್ಲಿಯೆ, ಮದುವೆಯ ಉತ್ಸಾಹಕ್ಕಿಂದ ವೆಗ್ಗಳವೆಂದು ಕಂಡು ತನುಕರಗಿ, ಮನಬೆರೆಸಿ, ಕಂಗಳು ತುಂಬಿ ಪುಳುಕಿತವಾಗಿ, ವಂಚನೆ ಸಂಕಲ್ಪವೆಂಬ ಶಂಕೆದೋರದೆ, ನಿಶ್ಯಂಕನಾಗಿ ಮಾಡುವ ಭಕ್ತನ ವಂಕದ ಬಾಗಿಲೆ ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗದ ಮಸ್ತಕ.'[೨೦] ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ಕಾರಣಾಗಮವು ಅತಿಥಿಯು ಯಾರೇ ಆಗಿರಲಿ ಆತನು ಸಾಕ್ಷಾತ್ ಶಿವ ಸ್ವರೂಪನೆಂದು ವರ್ಣಿಸುತ್ತ ಪಂಡಿತನಾಗಲೀ, ಮೂರ್ಖನಾಗಲಿ, ಪ್ರಿಯನಾಗಲೀ, ದ್ವೇಷಕ್ಕೆ ಯೋಗ್ಯನಾಗಿರಲೀ, ಯಾರೇ ಬರಲಿ, ಅವನು ಶಿವನೇ ಆಗಿರುತ್ತಾನೆ ಎಂದು ತಿಳಿಸುತ್ತದೆ.[೨೧] ಕಾರಣ

ಯಥಾಶಕ್ತ್ಯರ್ಚಯೇದನ್ನೈರತಿಥೀನ್ ಶಿವಯೋಗಿನಃ ॥
ತೋಷಯೇತ್ ಸರ್ವಯತ್ನೇನ ಯದ್ಯತ್ಕಾಲೇ ಸಮಾಗತಮ್।
ಪ್ರತ್ಯುತ್ಥಾಯಭಿಗಮನಂ ವಂದನಂ ಪ್ರಿಯಭಾಷಣಮ್ ॥
ಆಸನಂ ಚಾನ್ನಪಾನಾದಿ ಯಥಾಶಕ್ತ್ಯರ್ಚಯೇಚ್ಛಿವೇ।
ಸರ್ವಾಭಾವೇಽಪ್ಯಶಕ್ತೊ ವಾ ವಿನಯಾದಿಭಿರರ್ಚಯೇತ್ ॥
ಕಲ್ಯಾಣೀಂ ವಾ ವದೇದ್ ವಾಣೀಂಪ್ರಮಾದಃ ಸ್ಯಾದಥಾನ್ಯಥಾ।[೨೨]

ಶಕ್ತ್ಯಾನುಸಾರ ಆಹಾರಗಳಿಂದ ಶಿವಯೋಗಿಗಳಾದ ಅತಿಥಿಗಳನ್ನು ಸತ್ಕರಿಸಬೇಕು. ಯಾವ ಯಾವ ಕಾಲದಲ್ಲಿ ಯಾವುದು ಲಭ್ಯವೋ ಅದನ್ನಿತ್ತು ಎಲ್ಲಾ ಯತ್ನಗಳಿಂದ ಅವನನ್ನು ಸಂತೋಷಗೊಳಿಸಬೇಕು. ಎದ್ದು ನಿಲ್ಲುವುದು, ಎದುರುಗೊಳ್ಳುವುದು, ವಂದಿಸುವುದು, ಪ್ರಿಯವಾಗಿ ಮಾತನಾಡುವುದು, ಆಸನವನ್ನು ನೀಡುವುದು, ಅನ್ನಪಾನಾದಿಗಳನ್ನು ಅರ್ಪಿಸುವುದು ಇತ್ಯಾದಿಗಳಿಂದ ಅವರನ್ನು ಗೌರವಿಸಬೇಕು. ಏನೂ ಇಲ್ಲದಿದ್ದರೆ ಅಥವಾ ಅಶಕ್ತನಾಗಿದ್ದರೆ ವಿನಯಾದಿಗಳಿಂದ ಸೇವೆ ಮಾಡಬೇಕು. ಮಂಗಲಕರವಾದ ಮಾತುಗಳನ್ನು ಆಡಬೇಕು. ಹಾಗೆ ಮಾಡದಿದ್ದರೆ ಪ್ರಮಾದವಾಗುತ್ತದೆ ಎನ್ನುತ್ತ –

ಯದಿ ಚೇದವಮಾನೇನ ನಿರಾಶೋ ನಿರ್ಗತೋಽತಿಥಿಃ ॥

---

೨೦. ಶಿವಶರಣೆಯರ ವ. ಸಂಪುಟ. ಸಮಗ್ರ ವಚನ ಸಂಪುಟ ೫,ವಚನ ಸಂಖ್ಯೆ ೫೩೧, ಪುಟ೧೬೫
೨೧. ಕಾ.ಆ. ಪಟಲ ೩, ಶ್ಲೋಕ ಸಂಖ್ಯೆ ೭೩
೨೨. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೮೧–೮೩

ಇಷ್ಟಂ ಪೂರ್ತಂ ಹುತಂ ದತ್ತಂ ಸರ್ವಮಾದಾಯ ಗಚ್ಛತಿ ।[೨೩]

ಒಂದು ಪಕ್ಷ ಅವಮಾನದಿಂದ ಅತಿಥಿಯು ನಿರಾಶನಾಗಿ ಹೋದರೆ, ಅವನು ಇಷ್ಟ, ಪೂರ್ತ, ಹೋಮ, ದಾನಗಳಿಂದ ಗಳಿಸಿದ್ದ ಎಲ್ಲಾ ಪುಣ್ಯವನ್ನು ತನ್ನೊಂದಿಗೆ ಸೆಳೆದುಕೊಂಡು ಹೋಗುತ್ತಾನೆ. ಆ ಮನೆಯ ಸಂಪತ್ತೆಲ್ಲ ನಾಶವಾಗುತ್ತದೆ ಎನ್ನುವ ಎಚ್ಚರಿಕೆಯ ಸಂದೇಶವೂ ಇದೆ. ಅಲ್ಲದೇ ಪಾರಮೇಶ್ವರಾಗಮದಲ್ಲಿ ಪರಶಿವನು–

ತಸ್ಯ ಪೂಜಾ ಮಮ ಶಿವೇ ತನ್ನಿಂದಾ ಚ ಮಮೈವ ಹಿ।
ಯದ್ಯಸ್ತಿ ಮಯಿ ಸದ್ಭಕ್ತಿರರ್ಚಯೇಚ್ಛಿವಯೋಗಿನಮ್॥[೨೪]

ಶಿವಯೋಗಿಯ ಪೂಜೆಯೇ ನನ್ನ ಪೂಜೆ, ಅವನ ನಿಂದೆ ನನ್ನದೇ ನಿಂದೆ, ನನ್ನಲ್ಲಿ ಭಕ್ತಿ ಇದ್ದಿದ್ದಾದರೆ ಶಿವಯೋಗಿಯನ್ನು ಪೂಜಿಸಬೇಕು ಎನ್ನುತ್ತ –

ನಿಮಿಷಂ ನಿಮಿಷಾರ್ಧಂ ವಾ ಯತ್ರ ಸ್ಯುಃ ಶಿವಯೋಗಿನಃ।
ತತ್ಕೈಲಾಸಂ ಪರಂ ವಿದ್ಧಿ ತತ್ರ ಕಾಶೀ ಶಿವೋಽಪ್ಯಹಮ್॥[೨೫]

ಒಂದು ನಿಮಿಷ ಅಥವಾ ಅರ್ಧನಿಮಿಷ ಶಿವಯೋಗಿಗಳು ಎಲ್ಲಿ ಇರುತ್ತಾರೆಯೋ ಅದೇ ಶ್ರೇಷ್ಠ ಕೈಲಾಸ, ಅಲ್ಲಿಯೇ ಕಾಶಿ ಎಂದು ವರ್ಣಿಸಲಾಗಿದೆ. ಆಗಮಗಳು ಸಮಾಜದಲ್ಲಿ ಅತಿಥಿಗೆ ನೀಡಿದ ಆದ್ಯತೆಯನ್ನು ಅನುಲಕ್ಷಿಸಿದಾಗ ಇಂಥ ವಿಚಾರಗಳು ಇಂದಿಗೂ, ಎಂದೆಂದಿಗೂ ಮನುಕುಲಕ್ಕೆ ಪ್ರಸ್ತುತವೆನಿಸುತ್ತವೆ.

ಅನಾಥರ ಪೋಷಣೆ

ಸಾಕ್ಷಾನ್ಮ ದ್ರೂಪ್ರಮೀಶಾನಿ ಶಯನಾಸನಭೋಜನೈಃ।
ಅನಾಥಂ ರೋಗಿಣಂ ದೀನಂ ಮೂಕಂ ಬಧಿರಮೇವ ಚ ॥[೨೬]

ಅನಾಥ, ರೋಗಿ, ದೀನ, ಮೂಕ, ಕಿವುಡ, ಕುಂಟರನ್ನು ಸಾಕ್ಷಾತ್ ನನ್ನ ರೂಪ ಎಂಬ ಭಾವನೆಯಿಂದ, ಹಾಸಿಗೆ, ಆಸನ, ಊಟಗಳಿಂದ ಸತ್ಕರಿಸಬೇಕು ಎಂಬ ಉದಾತ್ತ ಚಿಂತನೆಯನ್ನು ಆಗಮಗಳು ಅಭಿವ್ಯಕ್ತ ಪಡಿಸಿವೆ.

ಲೋಕಹಿತ ಕಾರ್ಯ –

ಪಾರಮೇಶ್ವರಾಗಮದಲ್ಲಿ ವಿಶೇಷವಾಗಿ ಲಿಂಗೈಕ್ಯರ ಸಮಾಧಿ ಮಾಡಿದ ಅಕ್ಕಪಕ್ಕದ ಜಮೀನನ್ನು ಅಭಿವೃದ್ಧಿಗೊಳಿಸಿ ಲೋಕೋಪಕಾರ ಕೆಲಸವನ್ನು ಮಾಡುವ ಬಗೆಯನ್ನು ತಿಳಿಸಲಾಗಿದೆ –

---

೨೩. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೮೪
೨೪. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೫೨
೨೫. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೫೩
೨೬. ಪಾ.ಆ. ಪಟಲ ೫, ಶ್ಲೋಕ ಸಂಖ್ಯೆ ೮೯

ವಿಶೋಧ್ಯ ಪರಿತೋ ಭೂಮಿಂ ಗುಣಾವರ್ತನಮಾಚರೇತ್।
ಕಾರಯೇನ್ಮಂಡಪಮಥ ಶಿಲಾದಾರುತೃಣಾದಿಭಿಃ॥
ಪರಿತಃ ಕಾರಯೇದ್ ರಮ್ಯಾಣ್ಯುದ್ಯಾನಾನಿ ಮಹೀರುಹೈಃ।
ವಾಪೀಕೂಪತಡಾಗಾದಿಪ್ರಪಾದ್ಯಾಃ ಪುಷ್ಪವಾಟಿಕಾಃ॥
ಗೋಶಾಲಾऽऽರೋಗ್ಯಶಾಲಾऽಪಿ ಹ್ಯನಾಥಶಯನಾರ್ಥಕಮ್।
ರೋಗಿಣಾಂ ದುರ್ಬಲಾನಾಂ ಚ ವಾಸಾರ್ಥಂ ಪಶುಪಕ್ಷಿಣಾಮ್.[೨೭]

ಲಿಂಗೈಕ್ಯರ ಸಮಾಧಿಯ ಸುತ್ತಲೂ ಇರುವ ಭೂಮಿಯನ್ನು ಸ್ವಚ್ಛಗೊಳಿಸಿ ಸಮತಟ್ಟಾಗಿ ಮಾಡಿಸಬೇಕು. ಶಿಲೆ, ಕಟ್ಟಿಗೆ ಅಥವಾ ಹುಲ್ಲಿನಿಂದ ಮಂಟಪವನ್ನು ರಚಿಸಬೇಕು. ಮತ್ತೆ ಸುತ್ತಲೂ ಮರಗಳುಳ್ಳ ರಮ್ಯ ಉದ್ಯಾನಗಳನ್ನು, ಬಾವಿ, ಹೊಂಡ, ಕೆರೆ, ಮುಂತಾದವುಗಳನ್ನು, ಪುಷ್ಪವಾಟಿಕೆಗಳನ್ನು, ಗೋಶಾಲೆ-ಆರೋಗ್ಯಶಾಲೆ-ಅನಾಥಾಲಯಗಳನ್ನು ನಿರ್ಮಿಸಬೇಕು. ರೋಗಿಗಳು-ದುರ್ಬಲರು-ಪಶುಪಕ್ಷಿಗಳಿಗೆ ಆಶ್ರಯಧಾಮಗಳನ್ನು ನಿರ್ಮಿಸಬೇಕು. ಹೀಗೆ ಈ ಲೋಕಹಿತದ ಚಿತ್ರ ಶಿವಾಗಮಗಳಲ್ಲಿ ಚೆನ್ನಾಗಿ ಮೂಡಿ ಬಂದಿದೆ.

ಅಹಿಂಸೆ

'ಅಹಿಂಸಾ ಪರಮೋ ಧರ್ಮಃ' ಎಂದು ಎಲ್ಲ ಧರ್ಮಗ್ರಂಥಗಳೂ ಅಹಿಂಸೆಯ ಮಹತ್ವವನ್ನು ಸಾರಿವೆ. ಆಗಮಗಳೂ ಸಹ ವೀರಶೈವನಾದವನು ಕೃತಿಯಿಂದಾಗಲೀ, ಮನಸ್ಸಿನಿಂದಾಗಲೀ ಮತ್ತು ಮಾತಿನಿಂದಾಗಲೀ ಹಿಂಸೆಯನ್ನು ಮಾಡಕೂಡದೆಂದು ಅರುಹುತ್ತ –

ವೀರಶೈವಮತಂ ಪ್ರಾಪ್ಯ ಯಃ ಕುರ್ಯಾತ್ ಪ್ರಾಣಿಹಿಂಸನಮ್।
ಕರ್ಮಣಾ ಮನಸಾ ವಾಚಾ ಸ ವಸೇದ್ ರೌರವೇ ಚಿರಮ್॥
ವೀರಶೈವವ್ರತಂ ಪ್ರಾಪ್ಯ ಯಃ ಕುರ್ಯಾತ್ ಪರಪೀಡನಮ್।
......ಸ ಕೋಟಿಜನ್ಮಸು ಶ್ವಾ ವೈ ಚಾಂಡಾಲೋ ಭುವಿ ಜಾಯತೇ।[೨೮]

ವೀರಶೈವ ಮತವನ್ನು ಸ್ವೀಕರಿಸಿ ಯಾರು ಪ್ರಾಣಿಹಿಂಸೆಯನ್ನು ಕೃತಿಯಿಂದ, ಮನಸ್ಸಿನಿಂದ ಮತ್ತು ಮಾತಿನಿಂದ ಮಾಡುವನೋ ಅವನು ರೌರವ ನರಕದಲ್ಲಿ ಬಹುಕಾಲ ನೆಲೆಸುವನು. ವೀರಶೈವವ್ರತವನ್ನು ಹಿಡಿದು ಯಾರು ಪರಪೀಡೆಯನ್ನು ಮಾಡುತ್ತಾನೋ ಅವನು ಕೋಟಿ ಜನ್ಮಗಳಲ್ಲಿ ನಾಯಿಯಾಗಿಯೋ ಚಾಂಡಾಲನಾಗಿಯೋ ಭೂಮಿಯಲ್ಲಿ ಹುಟ್ಟುತ್ತಾನೆ ಎಂದು ಎಚ್ಚರಿಸಿವೆ. ಕಾರಣ ಬಸವಣ್ಣನವರು "ದಯವಿಲ್ಲದ ಧರ್ಮವಾವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯಾ"[೨೯] ಎಂದು ಅರುಹಿದ್ದಾರೆ.

---

೨೭. ಪಾ.ಆ. ಪಟಲ ೧೯, ಶ್ಲೋಕ ಸಂಖ್ಯೆ ೩೦, ೩೨, ೩೩
೨೮. ಪಾ.ಆ. ಪಟಲ ೯, ಶ್ಲೋಕ ಸಂಖ್ಯೆ ೨೪, ೨೫, ೨೭
೨೯. ಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೨೪೭, ಪುಟ ೬೧

ಸಾರ್ಥಕ ಬದುಕು

ಸೂಕ್ಷ್ಮಾಗಮ ಇಡೀ ಮನುಕುಲಕ್ಕೆ ಒಂದು ಸುಂದರ ಸಂದೇಶ ನೀಡುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ಜನನ ಮರಣಗಳು ಆಕಸ್ಮಿಕ ಹಾಗೂ ಅನಿವಾರ್ಯ. ಜನನ, ಮರಣಗಳ ಅವಧಿಯ ನಡುವೆ ನಮ್ಮ ಬದುಕು ಸಾಗುತ್ತದೆ. ಈ ಲೋಕದಲ್ಲಿ ಎಷ್ಟು ದಿನ, ಎಷ್ಟು ವರ್ಷ ಬದುಕಿದೆವು ಎನ್ನುವುದಕ್ಕಿಂತ ಹೇಗೆ ಬದುಕಿದೆವು? ಎನ್ನುವುದೇ ಮುಖ್ಯ ಎನ್ನುತ್ತ –

ಜೀವಿತಂ ಶಿವಭಕ್ತಾನಾಂ। ವರಂ ಪಂಚ ದಿನಾನಿ ಚ।
ಅಜಕಲ್ಪ ಸಹಸ್ರೇಭ್ಯೋ। ಭಕ್ತಿಹೀನಸ್ಯ ಶಾಂಕರೀ॥

'ಸಾರ್ಥಕವಾಗಿ ಈ ಲೋಕದಲ್ಲಿ ಲೇಸೆನಿಸಿಕೊಂಡು ಐದುದಿನ ಬದುಕಿದರೆ ಸಾಕು. ಲೇಸೆನಿಸಿಕೊಳ್ಳದೆ ಸಾವಿರ ವರ್ಷ ಬದುಕಿದರೂ ವ್ಯರ್ಥ.' ಎಂದು ಅತ್ಯಂತ ಮೌಲಿಕ ವಿಚಾರವನ್ನು ಆಗಮ ಪ್ರತಿಪಾದಿಸುವುದಷ್ಟೇ ಅಲ್ಲ ನಮ್ಮ ಇಡೀ ಬದುಕಿನ ಮೌಲ್ಯವನ್ನು, ಬದುಕಿನ ಅಸ್ತಿತ್ವವನ್ನೇ ಪ್ರಶ್ನೆ ಮಾಡುತ್ತದೆ.

ಬಸವಣ್ಣನವರು ಮೇಲಿನ ಶ್ಲೋಕವನ್ನು ಉಲ್ಲೇಖಿಸುತ್ತ –

"ಲೇಸೆನಿಸಿಕೊಂಡು ಅಯ್ದು ದಿವಸ ಬದುಕಿದಡೇನು?
ಲೇಸೆನಿಸಿಕೊಂಡು ನಾಲ್ಕು ದಿವಸ ಬದುಕಿದಡೇನು?
ಲೇಸೆನಿಸಿಕೊಂಡು ಮೂರು ದಿವಸ ಬದುಕಿದಡೇನು?
ಲೇಸೆನಿಸಿಕೊಂಡು ಎರಡು ದಿವಸ ಬದುಕಿದಡೇನು?
ಜೀವಿತಂ ಶಿವಭಕ್ತಾನಾಂ। ವರಂ ಪಂಚ ದಿನಾನಿ ಚ।
ನಾಜಕಲ್ಪ ಸಹಸ್ರಾಣಿ। ಭಕ್ತಿಹೀನಸ್ಯ ಶಾಂಕರೀ॥
ಎಂದುದಾಗಿ ಕೂಡಲ ಸಂಗನ ಶರಣರ ವಚನದಲ್ಲಿ[೩೦]
ಲೇಸೆನಿಸಿಕೊಂಡು ಒಂದು ದಿವಸ ಬದುಕಿದಡೇನು!

ಎಂದು ಈ ಲೋಕದಲ್ಲಿ ಎಷ್ಟು ದಿನ, ಎಷ್ಟು ವರ್ಷ ಬದುಕಿದೆವು ಎನ್ನುವುದಕ್ಕಿಂತ ಹೇಗೆ ಬದುಕಿದೆವು? ಎನ್ನುವುದೇ ಮುಖ್ಯ ಎಂದು ಆಗಮದ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ. ಒಟ್ಟಿನಲ್ಲಿ ಶಿವಾಗಮದಲ್ಲಿ ವ್ಯಕ್ತಿ ಮತ್ತು ಸಮಾಜದ ಅಭ್ಯುದಯಗಳೆರಡನ್ನೂ ಸುಂದರವಾಗಿ ಸಮನ್ವಯಗೊಳಿಸಿರುವುದರಿಂದ ವಚನಕಾರರು ಇವುಗಳನ್ನು ಸ್ವೀಕರಿಸಿದ್ದಲ್ಲದೇ ಪ್ರತ್ಯಕ್ಷವಾಗಿ ಆಚರಿಸಿ, ತಮ್ಮ ವಚನಸಾಹಿತ್ಯದ ಆಡುಮಾತಿನ ದಾಟಿ, ತಿಳಿಯಾದ ಭಾಷೆ, ನೇರ ನಿರೂಪಣೆ ಮೂಲಕ ಅವುಗಳಿಗೆ ಹೆಚ್ಚಿನ ಜೀವಂತಿಕೆಯನ್ನು ತಂದುಕೊಟ್ಟರು. ಅಲ್ಲದೇ ಸಮಾಜದಲ್ಲಿಯ ಧನಿಕ–ದರಿದ್ರ, ಹೆಣ್ಣು–ಗಂಡು, ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಎಂಬ ಭೇದ–ಭಾವ, ನೈತಿಕ ಅಧಃಪತನ ಹಾಗೂ ಆರ್ಥಿಕ ಅಸಮಾನತೆಯನ್ನು ತೊಡೆದು ಹಾಕಲು, ಪರಿಶುದ್ಧವಾದ ಬಾಳನ್ನು ರೂಪಿಸಿಕೊಳ್ಳಲು ಪ್ರೇರೇಪಿಸಿದರು.

---

೩೦. ಬಸವಣ್ಣನವರ ವ.ಸಂಪುಟ. ಸಮಗ್ರ ವಚನ ಸಂಪುಟ ೧, ವಚನ ಸಂಖ್ಯೆ ೧೫೪, ಪುಟ ೪೦

ಅಧ್ಯಾಯ - ೭

ಶಿವಾಗಮಗಳು ಮತ್ತು ವಚನ ಸಾಹಿತ್ಯ : ಸ್ತ್ರೀಪರ ಚಿಂತನ

- ಧಾರ್ಮಿಕ ಆಚರಣೆಗಳಲ್ಲಿ ಮಹಿಳೆ
- ಷಟಸ್ಥಲ ಸಾಧನೆಯಲ್ಲಿ ಮಹಿಳೆ
- ಧರ್ಮಾಚರಣೆಗೆ ಸೂತಕಗಳು ಬಾಧಕವಲ್ಲ
- ಸಾಮಾಜಿಕ ಕ್ಷೇತ್ರಗಳಲ್ಲಿ ಮಹಿಳೆ

ಅಧ್ಯಾಯ – ೭

ಶಿವಾಗಮಗಳು ಮತ್ತು ವಚನ ಸಾಹಿತ್ಯ : ಸ್ತ್ರೀಪರ ಚಿಂತನ

ಮಾನವನ ಜೀವನವನ್ನು ಸಂಸ್ಕೃತೀಕರಣಗೊಳಿಸಲು ಉಗಮವಾದ ಪ್ರಪಂಚದ ವಿವಿಧ ಧರ್ಮಗಳಲ್ಲಿ ಮಹಿಳೆಯ ಕುರಿತು ವಿಭಿನ್ನ ನಿಲುವು ಹೊಂದಿರುವುದನ್ನು ಕಾಣುತ್ತೇವೆ. ಜೋರಾಷ್ಟ್ರಿಯನ್ ಧರ್ಮದಲ್ಲಿ ಹೆಣ್ಣನ್ನು ಪತ್ನಿ ಮತ್ತು ಮಾತೆಯಾಗಿ ಮಾತ್ರ ಗೌರವಿಸಿದೆಯೇ ವಿನಃ ಧಾರ್ಮಿಕ ನೆಲೆಯಲ್ಲಿ ಆಕೆಯನ್ನು 'ಕೇಡುಕಿನ ಮೂಲ' ಎಂದು ಗುರುತಿಸಲಾಗಿದೆ. ಯಹೂದಿ ಧರ್ಮದಲ್ಲಿ ಹೆಣ್ಣನ್ನು ಮಹಾಮಾತೆ ಎಂದು ಗೌರವಿಸಿದ್ದರೂ ಗಂಡಿನ ಸೇವಕಿ ಎಂದು ಪರಿಗಣಿಸಲಾಗಿದೆ. ಚೀನಾದ ಕನ್‌ಫ್ಯೂಶಿಯಸ್ ಮತ್ತು ತಾವೋ ಸಿದ್ಧಾಂತಗಳಲ್ಲಿ ಹೆಣ್ಣು ಅವೈಚಾರಿಕಳು, ವಿವೇಚನೆ ಸಾಮರ್ಥ್ಯವಿಲ್ಲದವಳೆಂದು ಪರಿಗಣಿಸಿ ಧರ್ಮದಿಂದ ಹೊರಗಿಡಲಾಗಿದೆ.

ಕ್ರೈಸ್ತ ಧರ್ಮದಲ್ಲಿ ಮೊದಲ ಹೆಣ್ಣು 'ಈವ್' ಭೂಮಿಗೆ ಪಾಪವನ್ನು ತಂದವಳಾಗಿದ್ದು ದೇವರ ಅವಕೃಪೆಗೆ ಒಳಗಾದವಳಾಗಿದ್ದಾಳೆ. 'ಜಗತ್ತಿನ ಬರ್ಬರ ಜಂತುಗಳಲ್ಲಿ ಮಹಿಳೆಯರಷ್ಟು ಹಾನಿಕಾರಕವಾದುದು ಇನ್ನಾವುದೂ ಇಲ್ಲ. ಕಾರಣ ಸ್ತ್ರೀಯರ ಬಗೆಗೆ ಎಚ್ಚರಿಕೆಯಿಂದ ಇರಬೇಕು' ಎಂದು ಹಲವು ಸಲ ಎಚ್ಚರಿಸಲಾಗಿದೆ. ಆದರೆ ಧಾರ್ಮಿಕ ಸಮಾವೇಶದಲ್ಲಿ ಪಾಲ್ಗೊಳ್ಳಲು, ಅದರ ಮುಖ್ಯ ಕಾರ್ಯನಿರ್ವಹಿಸಲು ಅವಕಾಶ ಕೊಟ್ಟು ಸ್ತ್ರೀ ತತ್ವವನ್ನು ನಿರಾಕರಿಸಿಲ್ಲವಾದರೂ ಹೆಣ್ಣಿನ ಸ್ಥಾನ ಗಂಡಿಗೆ ಅಧೀನವಾಗಿಯೇ ಇದೆ. ಆದರೆ ಮಾತೃ ಸ್ಥಾನಕ್ಕೆ ಮಾತ್ರ ಅಪಾರ ಗೌರವವಿದೆ.

ಇಸ್ಲಾಂ ಧರ್ಮದಲ್ಲಿ ಮಹಿಳೆಗೆ ಧಾರ್ಮಿಕ ದೀಕ್ಷೆ ಇಲ್ಲದಿದ್ದರೂ ದೇವರ ಆರಾಧನೆ ಮಾಡುವುದನ್ನು ಕಸಿದುಕೊಂಡಿಲ್ಲ. ಆದರೆ ಹೆಂಗಸರನ್ನು ಪ್ರತ್ಯೇಕಿಸಿ ಪರದೆಯೊಳಗೆ ಇರಿಸಿ ಆಕೆಯನ್ನು ದ್ವಿತೀಯ ದರ್ಜೆಯ ಪ್ರಜೆಯಂತೆ ನಡೆಸಿಕೊಂಡಿದೆ. 'ತಲಾಕ್' ಕೊಡುವ ಮೂಲಕ ಬಹುಪತ್ನಿತ್ವದ ವಿವಾಹಕ್ಕೆ ಅವಕಾಶವಿರುವುದರಿಂದ ಸ್ತ್ರೀಯರ ಮೇಲೆ ಕ್ರೌರ್ಯಕ್ಕೆ ಅವಕಾಶ ನೀಡಿದಂತಾಗಿದೆ.

ಬೌದ್ಧ ಧರ್ಮದಲ್ಲಿ ಮಹಿಳೆಯರು ಧರ್ಮಾನುಯಾಯಿಯಾಗಿರಲು ಅವಕಾಶ ಮಾಡಿಕೊಟ್ಟು ಧರ್ಮ ಪ್ರಚಾರಕ್ಕೆ ಕಳುಹಿಸಿ ಭಿಕ್ಷುಗಳೆಂದು ಗುರುತಿಸಿದರೂ ಸಹ ಸ್ವತಃ ಬುದ್ಧನೇ ಬ್ರಹ್ಮಚಾರಕ್ಕೆ ಹೆಣ್ಣು ತೊಡಕು ಎಂದು ಹೇಳಿ ಪತ್ನಿಯನ್ನು ನಿರಾಕರಿಸಿದನು. ಜೈನ ಧರ್ಮವೂ ಸಹ ಧರ್ಮದ ಸಾಧನಾಮಾರ್ಗದಲ್ಲಿ ಹೆಣ್ಣನ್ನು ಕಡೆಗಣಿಸಿದೆ.

ಇನ್ನು ಹಿಂದು ಸಂಸ್ಕೃತಿಯಲ್ಲಿ ಕಾಲಕಾಲಕ್ಕೆ ಮಹಿಳೆಯರ ಸ್ಥಾನಮಾನಗಳಲ್ಲಿ ಪರಸ್ಪರ ವಿರುದ್ಧವಾದ ಧೋರಣೆ, ದೃಷ್ಟಿಕೋನಗಳನ್ನು ಕಾಣುತ್ತೇವೆ. ಶಕ್ತಿಯಾಗಿ, ಮಾತೃದೇವತೆಯಾಗಿ ಪೂಜಿಸಲ್ಪಟ್ಟ ಸ್ತ್ರೀ ಕಾಲಾಂತರದಲ್ಲಿ ಗೃಹಬಂಧಿಯಾಗಿ ಕೌಟುಂಬಿಕ

ದಾಸ್ಯ ಮತ್ತು ಸಾಮಾಜಿಕ ಉಪೇಕ್ಷೆಗೆ ಒಳಗಾಗಿ ಮೋಕ್ಷಾಧಿಕಾರದ ಆತ್ಮಜ್ಞಾನಕ್ಕೆ ಅನರ್ಹಳೆಂದು ಪರಿಗಣಿಸಲ್ಪಟ್ಟಳು.

ಲೋಪಾಮುದ್ರಾ, ವಿಶ್ವಾವರ, ಘೋಷಾ ಮುಂತಾದ ಸ್ತ್ರೀಯರು ವೇದಗಳಲ್ಲಿಯ ಹಲವಾರು ಸೂಕ್ತಗಳನ್ನು ರಚಿಸಿದ ಉಲ್ಲೇಖ ದೊರೆಯುತ್ತದೆ. ಉಪನಿಷತ್ತುಗಳಲ್ಲೂ ಮಹಿಳೆ ಪುರುಷನಿಗೆ ಸಮನಾಗಿ ಚಿತ್ರಿತಗೊಂಡಿದ್ದಾಳೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ, ಮೈತ್ರೇಯಿ ಮತ್ತು ಕಾತ್ಯಾಯಿನಿಯರ ಕಥೆ ಬಂದಿದೆ. ಯಾಜ್ಞವಲ್ಕ್ಯರು ವಿದ್ವತ್ ಸಂನ್ಯಾಸವನ್ನು ಸ್ವೀಕರಿಸುವ ಸಂದರ್ಭದಲ್ಲಿ ಅವರ ಭೌತಿಕ ಸಂಪತ್ತಿಗೆ ಕಾತ್ಯಾಯಿನಿ ವಾರಸುದಾರಳಾಗಿ ಉಳಿದರೆ, ಮೈತ್ರೇಯಿ ಅವರ ಆಧ್ಯಾತ್ಮಿಕ ಜ್ಞಾನ ಸಂಪತ್ತಿಗೆ ವಾರಸುದಾರಳಾಗಿ ನಿಲ್ಲುತ್ತಾಳೆ. ಇಡೀ ಛಾಂದೋಗ್ಯ ಉಪನಿಷತ್ತಿನ ತುಂಬೆಲ್ಲ ಯಾಜ್ಞವಲ್ಕ್ಯರು ಮೈತ್ರೇಯಿಗೆ ಮಾಡಿದ ಉಪದೇಶವೇ ತುಂಬಿಕೊಂಡಿದೆ. ಕಾರಣ ವೇದವು ಸ್ತ್ರೀ ಸ್ವಾತಂತ್ರ್ಯ ಪರವಾದ ಧೋರಣೆ ಹೊಂದಿದೆ ಎಂದೆನಿಸಿದರೂ ಇನ್ನೊಂದೆಡೆಗೆ "ಸ್ತ್ರೀ-ಶೂದ್ರರು ವೇದಾಧ್ಯಯನ ಮಾಡಬಾರದು" ಎಂದು ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವನ್ನು ವಿರೋಧಿಸುವುದರಿಂದ ಮತ್ತು ಉಪನಯನಾದಿ ಧಾರ್ಮಿಕ ಸಂಸ್ಕಾರಗಳಿಂದ ವಂಚಿತರನ್ನಾಗಿಸುವುದರಿಂದ ಮಹಿಳಾ ಸ್ವಾತಂತ್ರ್ಯ ವಿರೋಧ ಧೋರಣೆಯೂ ಕಂಡು ಬರುತ್ತದೆ. ಹೀಗೆ ಮಹಿಳೆಯ ವಿಷಯದಲ್ಲಿ ವೇದವು ದ್ವಂದ್ವ ನಿಲುವು ತಾಳಿದೆಯೆನಿಸುತ್ತದೆ.

ಆದರೆ ವೀರಶೈವ ಧರ್ಮದಲ್ಲಿ ಸಂಪೂರ್ಣವಾಗಿ ಸ್ತ್ರೀ ಪರವಾದ ಧ್ವನಿ ಎದ್ದು ಕಾಣುತ್ತದೆ. ಶಿವಾಗಮಗಳನ್ನು ಮೊದಲುಗೊಂಡು ವಚನ ಸಾಹಿತ್ಯದವರೆಗಿನ ಎಲ್ಲಾ ವೀರಶೈವ ಸಾಹಿತ್ಯದಲ್ಲಿ ಮಹಿಳೆಗೆ ಧಾರ್ಮಿಕವಾಗಿ ಅಷ್ಟೇ ಅಲ್ಲದೇ ಸಾಮಾಜಿಕವಾಗಿ ಪ್ರಾಧಾನ್ಯತೆಯನ್ನು ಹಾಗೂ ಸಮಾನ ಸ್ಥಾನಮಾನವನ್ನೂ ನೀಡಿ ಮಹಿಳಾಪರ ಚಿಂತನೆಗೈದಿವೆ. ಪ್ರಸ್ತುತ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಶಿವಾಗಮಗಳು ಹಾಗೂ ವಚನ ಸಾಹಿತ್ಯದಲ್ಲಿ ಮೂಡಿಬಂದಿರುವ ಸ್ತ್ರೀ ಚಿಂತನೆಗಳನ್ನಿಲ್ಲಿ ವಿವೇಚಿಸಲಾಗಿದೆ.

ಶಿವಾಗಮಗಳು ಮಹಿಳಾ ಸ್ವಾತಂತ್ರ್ಯವನ್ನು ಮತ್ತು ಅವಳಿಗೆ ಪೂರ್ಣರೀತಿಯ ಧಾರ್ಮಿಕ ಅಧಿಕಾರವನ್ನು ಪ್ರತಿಪಾದಿಸಿವೆ. ಶಿವಾಗಮಗಳು ಮಹಿಳೆಯರಿಗೆ ನೀಡಿರುವ ಸ್ಥಾನಮಾನಗಳನ್ನು ಪ್ರತಿನಿಧಿಸುವ ಮಹತ್ವಪೂರ್ಣವಾದ ಪುರಾವೆ ಎಂದರೆ ಶಿವಾಗಮಗಳು ಶಿವ-ಪಾರ್ವತಿಯರ ಸಂವಾದ ರೂಪದಲ್ಲಿವೆ. ಶಿವಾಗಮಗಳನ್ನು ಶಿವನು ಉಪದೇಶಿಸಿದ್ದು ಯಾವುದೇ ಪುರುಷ ದೇವತೆಗಳಿಗಲ್ಲ; ಪಾರ್ವತಿಗೆ. ಅಂತೆಯೇ ಆಗಮ ಶಬ್ದದ ವ್ಯುತ್ಪತ್ತಿಯನ್ನು ಹೇಳುವ ಶ್ಲೋಕವು-

ಆಗತಂ ಪಂಚವಕ್ತ್ರಾತ್ತು ಗತಂ ಚ ಗಿರಿಜಾನನೇ
ಮತಂ ಚ ವಾಸುದೇವಸ್ಯ ತಸ್ಮಾದಾಗಮಮುಚ್ಯತೇ॥[೧]

೧. ತಂತ್ರಸಮುಚ್ಚಯ ಭಾಗ-೧, ಪೀಠಿಕೆ, ಪುಟ-೨ Trivendrum Sanskrit Series No-151. Trivendrum

ಅರ್ಥಾತ್ ಶಿವನು ಪಾರ್ವತಿಗೆ ಉಪದೇಶ ನೀಡಿದ ಶಾಸ್ತ್ರವೇ ಆಗಮ. ಇದಕ್ಕೆ ವಿಷ್ಣುವಿನ ಸಮ್ಮತಿ ಕೂಡ ಇದೆ . ಇದರಿಂದ ಶಿವಾಗಮಗಳು ಮಹಿಳೆಯ ಸ್ಥಾನಮಾನವನ್ನು ಎತ್ತಿ ಹಿಡಿದದ್ದು ತಿಳಿದು ಬರುತ್ತದೆ. ಅಲ್ಲದೇ –

ನೈವ ಸ್ತ್ರೀ ನ ಪುಮಾನೇಷ ಸೈವ ಚಾಯಂ ನಪುಂಸಕಃ।
ಯದ್ಯಚ್ಛರೀರಮಾಧತ್ತೇ ತೇನ ತೇನ ಸ ಲಿಪ್ಯತೇ ॥[೨]
ನಾರೀತ್ವಮೈಹಿಕಂ ವಾಽಪಿ ಭಾರ್ಯತ್ವಂ ಕಲ್ಪಿತಂ ತಥಾ॥[೩]
ಪತಿಪತ್ನೀತ್ವಸಂಬಂಧೋ ನ ನಿತ್ಯಃ ಕಲ್ಪಿತೋ ಹಿ ಸಃ।
ನಾರೀನರತ್ವಾದಿಕಮಪ್ಯೈಹಜನ್ಮಿಕಮೀರಿತಮ್ ॥[೪]
ನಿರುಂಧತಃ ಕಥಂ ತನ್ವ್ಯಾಃ ಪಂಥಾನಂ ಮೋಕ್ಷಗಾಮಿನಮ್ ॥[೫]

ಈ ಆತ್ಮವು ಸ್ತ್ರೀಯಲ್ಲ, ಪುರುಷನಲ್ಲ ಮತ್ತು ನಪುಂಸಕನಲ್ಲ. ಯಾವ ಯಾವ ಶರೀರವನ್ನು ಧರಿಸುತ್ತದೆಯೋ ಆಯಾಯ ಶರೀರ ಲೇಪವನ್ನು ಹೊಂದುತ್ತದೆ. ಕಾರಣ ಸ್ತ್ರೀಯಾಗುವುದು ಈ ಜನ್ಮದ ವಿಷಯವಾಗಿರುವಂತೆ ಪತ್ನಿಯಾಗುವುದು ಸಹ ಕಲ್ಪಿತವಾಗಿದೆ. ಆದ್ದರಿಂದ ಪತಿ ಪತ್ನೀ ಸಂಬಂಧ ನಿತ್ಯವಾಗಿರದೇ ಕಲ್ಪಿತವಾಗಿದೆ. ಏಕೆಂದರೆ ಪತ್ನಿ ಮತ್ತು ಪತಿ ಎಂಬುದು ಈ ಜನ್ಮಕ್ಕೆ ಸಂಬಂಧಿಸಿದ ವಿಷಯ. ತತ್ಪರಿಣಾಮವಾಗಿ ನಾರೀತ್ವ ಮತ್ತು ಪತ್ನೀತ್ವ ಎಂಬ ಈ ಎರಡು ವಿಷಯಗಳು ಸ್ತ್ರೀಯನ್ನು ಮೋಕ್ಷ ಮಾರ್ಗದಿಂದ ತಡೆ ಹಿಡಿಯಲಾರವು ಎಂದು ಕಾರಣಾಗಮವು ಪ್ರತಿಪಾದಿಸುವ ಮೂಲಕ ಸ್ತ್ರೀಯರಿಗೆ ಸಮಾನ ಸ್ಥಾನಮಾನವನ್ನು ನೀಡಿವೆ.

ವಚನಗಳಲ್ಲಿಯೂ ಇದೇ ಮನೋಭಾವನೆ ಅಭಿವ್ಯಕ್ತಗೊಂಡಿದ್ದು ಶಿವಶರಣರು ಸ್ತ್ರೀಯನ್ನು ಪುರುಷನ ಹಾಗೆ ಸಮಾನ ದೃಷ್ಟಿಯಿಂದ ನೋಡಿದ್ದಾರೆ. ಗಂಡು–ಹೆಣ್ಣೆಂಬ ಭೇದ ಕೇವಲ ಬಾಹ್ಯದೇಹದಿಂದ ಮಾತ್ರ ಎನ್ನುತ್ತ, "ಮೊಲೆ ಮುಡಿ ಬಂದರೆ ಹೆಣ್ಣೆಂಬರು. ಗಡ್ಡಮೀಸೆ ಬಂದಡೆ ಗಂಡೆಂಬರು. ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ! ರಾಮನಾಥ."[೬] ಎಂದಿದ್ದಾರೆ. ಅಂಬಿಗರ ಚೌಡಯ್ಯನವರು, "ಶುಕ್ಲ ಶೋಣಿತ ಪಿಂಡೈಕ್ಯನ ಚಿತ್ತವಾಯು ಆರು ದಳದ ಪದ್ಮದಲ್ಲಿಹುದು. ಮೊಲೆಮುಡಿ ಬಂದರೆ ಆ ಪಿಂಡವನು ಹೆಣ್ಣೆಂಬರು. ಗಡ್ಡಮೀಸೆಗಳು ಬಂದರೆ ಆ ಪಿಂಡವನು ಗಂಡೆಂಬರು, ಆ ಇಬ್ಬರ ನಡುವೆ ಸುಳಿವಾತ್ಮನು ಹೆಣ್ಣಲ್ಲ ಗಂಡಲ್ಲ[೭] ಎಂದಿದ್ದಾರೆ. ಶಿವಶರಣರಷ್ಟೇ ಅಲ್ಲದೆ ಶಿವಶರಣೆಯರೂ ಸಹ ಈ ತತ್ವವನ್ನು

---

೨. ಕಾ.ಆ. ಕ್ರಿ. ಪಾ. ಪಟಲ ೨, ಶ್ಲೋಕ ಸಂಖ್ಯೆ ೬೩
೩. ಕಾ.ಆ. ಕ್ರಿ. ಪಾ. ಪಟಲ ೨, ಶ್ಲೋಕ ಸಂಖ್ಯೆ ೬೪
೪. ಕಾ.ಆ. ಕ್ರಿ. ಪಾ. ಪಟಲ ೨, ಶ್ಲೋಕ ಸಂಖ್ಯೆ ೬೨
೫. ಕಾ.ಆ. ಕ್ರಿ. ಪಾ. ಪಟಲ ೨, ಶ್ಲೋಕ ಸಂಖ್ಯೆ ೬೪
೬ ಸಮಗ್ರ ವ.ಸಂ.೭ ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ ೮೪೫. ಪುಟ ೨೫೯
೭. ಸಮಗ್ರ ವ.ಸಂ.೬ ಸಂಕೀರ್ಣ ವಚನ ಸಂಪುಟ ೧, ವಚನ ಸಂಖ್ಯೆ ೨೬೩. ಪುಟ ೮೫

ಸಮರ್ಥಿಸಿಕೊಂಡಿದ್ದು 'ಗೊಗ್ಗವ್ವೆ' ಎಂಬ ವಚನಕಾರ್ತಿಯು, "ಮೊಲೆ ಮುಡಿ ಬಂದಡೆ ಹೆಣ್ಣೆಂಬರು. ಮೀಸೆಕಾಸೆ ಬಂದಡೆ ಗಂಡೆಂಬರು. ಈ ಉಭಯದ ಜ್ಞಾನ ಹೆಣ್ಣೋ ಗಂಡೋ ನಾಸ್ತಿನಾಥ?[೮] ಎಂದಿದ್ದಾರೆ. ಕಾರಣ ಸ್ತ್ರೀ-ಪುರುಷವೆಂಬ ಬದಲಾವಣೆ ಕೇವಲ ದೇಹದಿಂದ ಮಾತ್ರ, ನಡುವೆ ಸುಳಿಯುವ ಅತ್ಮ ಎಲ್ಲರಲ್ಲೂ ಒಂದೇ ಎಂಬ ಆಗಮ ಪ್ರತಿಪಾದಿತ ತತ್ವವೇ ವಚನಗಳಲ್ಲಿ ಮೂಡಿಬಂದಿದೆ.

ಧಾರ್ಮಿಕ ಆಚರಣೆಗಳಲ್ಲಿ ಮಹಿಳೆ

ಶಿವಾಗಮಗಳನ್ನು ಅಧ್ಯಯನ ಮಾಡುವುದರಲ್ಲಾಗಲಿ, ಶಿವಾಗಮಗಳಲ್ಲಿ ಪ್ರತಿಪಾದಿತವಾದ ಲಿಂಗಧಾರಣ ಮುಂತಾದ ಸಂಸ್ಕಾರಗಳನ್ನು ಪಡೆದು ಕೊಳ್ಳುವುದರಲ್ಲಾಗಲಿ ಮತ್ತು ಅಲ್ಲಿಯ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಲ್ಲಾಗಲಿ ಸ್ತ್ರೀ-ಪುರುಷವೆಂಬ ಭೇದವೇ ಶಿವಾಗಮಗಳಲ್ಲಿ ಹೇಳಲ್ಪಟ್ಟಿಲ್ಲ. ಇಲ್ಲಿ ಸರ್ವರಿಗೂ ಸಮಾನ ಅಧಿಕಾರ. ಕಾರಣಾಗಮವು –

ಸರ್ವೇಷಾಮಧಿಕಾರೋಽಸ್ತಿ ತಾಂತ್ರಿಕೇಷು ವರಾನನೇ।
ವೈದಿಕಾನಾಂ ತಥಾನ್ಯೇಷಾಂ ಸ್ತ್ರೀಣಾಂ ಪುಂಸಾಂ ಚ ಸುವ್ರತೇ॥ [೯]

ವೈದಿಕರಿರಲಿ ಅಥವಾ ವೈದಿಕರಲ್ಲದವರಿರಲಿ, ಸ್ತ್ರೀಯೇ ಆಗಿರಲಿ ಅಥವಾ ಪುರುಷನೇ ಆಗಿರಲಿ ತಂತ್ರ ಶಾಸ್ತ್ರದ ಅಂದರೆ ಶಿವಾಗಮ ಶಾಸ್ತ್ರದ ಅಧ್ಯಯನ ಮತ್ತು ಆಚರಣೆಯಲ್ಲಿ ಎಲ್ಲರಿಗೂ ಅಧಿಕಾರವಿದೆ ಎಂದು ತಿಳಿಸಿದೆ. ಆದರೆ ಇದೇ ಕಾರಣಾಗಮದಲ್ಲಿಯ ಶ್ಲೋಕವೊಂದರಲ್ಲಿ[೧೦] ವೇದಗಳಲ್ಲಿ ನಿರೂಪಿಸಲಾದ ಸ್ವರ್ಗೀಯ ಕರ್ಮಗಳಲ್ಲಿ ಮಹಿಳೆಗೆ ಅಧಿಕಾರವಿರದಿದ್ದರೂ ಇತರ ಎಲ್ಲ ಇಹಲೋಕದ ವ್ಯವಹಾರಗಳಲ್ಲಿ, ಧಾರ್ಮಿಕ ಕ್ರಿಯೆಗಳಲ್ಲಿ ಮತ್ತು ಮೋಕ್ಷದ ವಿಷಯದಲ್ಲಿ ಅವಳಿಗೆ ಅಧಿಕಾರವಿರುವುದನ್ನು ತಿಳಿಸುತ್ತದೆ. ಆದುದರಿಂದ ಸ್ತ್ರೀಯರಿಗೆ ಅವಶ್ಯಕವಾಗಿ ದೀಕ್ಷೆಯನ್ನು ಕೊಡಬೇಕೆಂದು ತಿಳಿಸಿದೆ.

ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋ ಯತಿಸ್ತು ವಾ।
ಯೋಷಿದ್ವಾ ಪರಿಗೃಹ್ಣೀಯಾತ್ ಸದ್ಯೋಮುಕ್ತಿಂ ಯದೀಚ್ಛತಿ ॥ [೧೧]
ಬ್ರಾಹ್ಮಣಃ ಕ್ಷತ್ರಿಯೋ ವಾಽಥ ವೈಶ್ಯಃ ಶೂದ್ರೋಂತ್ಯಜೋಽಪಿ ವಾ।
ಪುಮಾನ್ ನಾರ್ಯಥವಾ ಕ್ಲಿಬಃ ಸರ್ವೇ ಮೋಕ್ಷಾಧಿಕಾರಿಣಃ॥ [೧೨]

ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಯತಿ ಅಥವಾ ಮಹಿಳೆ ಇವರಲ್ಲಿ ಯಾರಾದರೂ

೮. ಶಿವಶರಣೆಯರ ವ.ಸಂ. ಸಮಗ್ರ ವಚನ ಸಂಪುಟ ೫, ವಚನ ಸಂಖ್ಯೆ ೭೭೪. ಪುಟ ೨೪೬
೯. ಕಾ.ಆ. ಕ್ರಿ ಪಾ. ಪಟಲ ೮, ಶ್ಲೋಕ ಸಂಖ್ಯೆ ೧೦
೧೦. ಕಾ.ಆ. ಕ್ರಿ ಪಾ. ಪಟಲ ೨, ಶ್ಲೋಕ ಸಂಖ್ಯೆ ೭೦
೧೧. ಕಾ.ಆ. ಕ್ರಿ ಪಾ. ಪಟಲ ೧, ಶ್ಲೋಕ ಸಂಖ್ಯೆ ೫
೧೨. ಕಾ.ಆ. ಕ್ರ ಪಾ. ಪಟಲ ೨, ಶ್ಲೋಕ ಸಂಖ್ಯೆ ೩೨

ಸರಿ ಶೀಘ್ರವೇ ಮುಕ್ತಿಯನ್ನು ಪಡೆಯಬೇಕೆನಿಸಿದರೆ ಎಲ್ಲರೂ ಲಿಂಗಧಾರಣೆಯನ್ನು ಪಡೆದುಕೊಳ್ಳಬೇಕು. ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ ವೈಶ್ಯನಾಗಲಿ, ಶೂದ್ರನಾಗಲಿ ಅಥವಾ ಅಂತ್ಯಜನಾಗಿರಲಿ ಮತ್ತು ಪುರುಷನೇ ಆಗಿರಲಿ ಸ್ತ್ರೀಯೇ ಆಗಿರಲಿ ಅಥವಾ ನಪುಂಸಕನೇ ಆಗಿರಲಿ ಎಲ್ಲರಿಗೂ ಮೋಕ್ಷವನ್ನು ಪಡೆದುಕೊಳ್ಳುವ ಅಧಿಕಾರವಿದೆ. ಎಲ್ಲರೂ ಮೋಕ್ಷಕ್ಕೆ ಮುಕ್ತ ಅಧಿಕಾರಿಗಳು ಎಂದು ಪ್ರತಿಪಾದಿಸಲಾಗಿದೆ. ಈ ಮೂಲಕ ಶಿವಾಗಮ ಶಾಸ್ತ್ರದ ಅಧ್ಯಯನ ಗೈಯಲು, ಅಲ್ಲಿ ಹೇಳಲಾದ ಲಿಂಗಧಾರಣ ಮುಂತಾದ ಸಂಸ್ಕಾರ ಪಡೆಯಲು, ಧಾರ್ಮಿಕ ಎಲ್ಲ ಕ್ರಿಯಾ-ಕಲಾಪಗಳಲ್ಲಿ ಪಾಲ್ಗೊಳ್ಳಲು ಮತ್ತು ಇವೆಲ್ಲವುಗಳ ಅಂತಿಮಗುರಿಯಾದ ಕೈವಲ್ಯ ಸಾಧಿಸಲು ಶಿವಾಗಮಗಳು ಸರ್ವರಿಗೂ ಮುಕ್ತ ಅವಕಾಶವನ್ನು ಕಲ್ಪಿಸಿಕೊಡುತ್ತವೆ ಮತ್ತು ಈ ವಿಷಯದಲ್ಲಿ ಬ್ರಾಹ್ಮಣ, ಕ್ಷತ್ರಿಯ ಮುಂತಾದ ವರ್ಣಭೇದವನ್ನು, ಬ್ರಹ್ಮಚಾರಿ, ಗ್ರಹಸ್ಥ ಮುಂತಾದ ಆಶ್ರಮಭೇದವನ್ನು ನಿರಾಕರಿಸುವುದರ ಜೊತೆಗೆ ಸ್ತ್ರೀ-ಪುರುಷರೆಂಬ ಲಿಂಗಭೇದವನ್ನು ಅಲ್ಲಗಳೆಯುತ್ತವೆ. ಈ ಮೂಲಕ ಮಹಿಳಾ ಸ್ವಾತಂತ್ರ್ಯಕ್ಕೆ ಪ್ರಾಶಸ್ತ್ಯವಿತ್ತಿವೆ. ಪಾರಮೇಶ್ವರಾಗಮವು ಇನ್ನಷ್ಟು ಮುಂದುವರೆದು –

ನ ಬಾಲವೃದ್ಧಭೇದೋಽಸ್ತಿ ನಮಸ್ಕಾರಾದಿಪೂಜನೇ।
ಸರ್ವೇಽಪಿ ವಂದನೀಯಾ ಹಿ ವಿಧವಾಪುಷ್ಪಿಣೀಮುಖಾಃ॥ [೧೩]

ನಮಸ್ಕಾರ-ಪೂಜೆ ಮುಂತಾದ ವಿಷಯದಲ್ಲಿ ಬಾಲಕ-ಮುದುಕನೆಂಬ ಭೇದಭಾವವನ್ನಾಗಲಿ ಅಥವಾ ವಿಧವೆ-ಪುಷ್ಪಿಣೀ ಎಂಬ ತಾರತಮ್ಯವನ್ನಾಗಲಿ ಮಾಡದೇ ಸರ್ವರನ್ನು ವಂದಿಸಬೇಕೆಂದು ಹೇಳುವ ಮೂಲಕ ಮಹಿಳೆಯರಲ್ಲಿಯೇ ಭಾವಿಸಲಾಗುವ ವಿಧವೆ-ಪುಷ್ಪಿಣೀ ಎಂಬ ಭೇದವನ್ನು ಕೂಡ ತಳ್ಳಿಹಾಕುತ್ತದೆ. ಪುಷ್ಪಿಣಿಯಂತೆಯೇ ವಿಧವೆಗೂ ಧಾರ್ಮಿಕ ವ್ಯವಸ್ಥೆಯಲ್ಲಿ ಸಮಾನ ಅವಕಾಶವನ್ನು ನೀಡುವ ಮೂಲಕ ಶಿವಾಗಮಗಳು ಅಂದೇ ವಿಧವಾ ವಿಮೋಚನೆ ಚಳುವಳಿಯನ್ನು ಪ್ರಾರಂಭಿಸಿದ್ದವೆನ್ನುವುದು ತಿಳಿದು ಬರುತ್ತದೆ.

ವೀರಶೈವ ಧರ್ಮ ಸ್ತ್ರೀಯನ್ನು ಶಕ್ತಿರೂಪಿಣಿ ಎಂದು ಗೌರವಿಸಿದೆ. ದೀಕ್ಷೆ ಹೊಂದಿದ ಮಹಿಳೆಯರನ್ನು ಮಹೇಶ್ವರಿಯರು, ಶಿವಾಚಾರಿಣಿಯರು ಎಂದು ಗೌರವದಿಂದ ಸಂಬೋಧಿಸುತ್ತಿದ್ದರೆಂಬ ವಿಚಾರವನ್ನು ವೀರಾಗಮ ಉಲ್ಲೇಖಿಸುತ್ತದೆ.[೧೪]

ಆದೀಕ್ಷಾಸಂಸ್ಕೃತಾ ನಾರೀ ದೀಕ್ಷಿತಸ್ಯ ನಿಜೇಶಿತುಃ।
ನ ಯೋಗ್ಯಾ ಪರಿಚರ್ಯಾಯೈ ದೀಕ್ಷಣೀಯಾ ಸತಿಃ ತತಃ॥
ಆದೀಕ್ಷಾಸಂಸ್ಕೃತಾ ನಾರೀ ಯಂ ಯಂ ಪಾಕಂ ಕರೋತಿ ಚ।
ಸ ಸ ನೈವಾರ್ಹತಿ ಕಿಲ ಪಾಕೋ ಮಹ್ಯಂ ನಿವೇದಿತುಮ್॥ [೧೫]

---

೧೩. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೬೧
೧೪. ಜಗದ್ಗುರು ಆದಿ ರೇಣುಕರು, ವೀರಾಗಮ ಸಂಶೋಧಿತ ಕೃತಿ, ಜ.ಚ.ನಿ. ಪುಟ-೩೮, ೧೯೮೩
೧೫. ಕಾ.ಆ. ಕ್ರಿ. ಪಾ. ಪಟಲ ೨, ಶ್ಲೋಕ ಸಂಖ್ಯೆ ೬೭-೬೮

ದೀಕ್ಷಾ ಸಂಸ್ಕಾರವಿಲ್ಲದ ಹೆಂಡತಿ, ದೀಕ್ಷಾ ಸಂಸ್ಕಾರವುಳ್ಳ ಗಂಡನ ಸೇವೆಗೆ ಯೋಗ್ಯಳಲ್ಲ ಅಷ್ಟೇ ಅಲ್ಲ. ಅವಳು ಮಾಡಿದ ಅಡಿಗೆ ನೈವೇದ್ಯಕ್ಕೆ ಸಲ್ಲದು ಎಂದು ಕಾರಣಾಗಮ ಸ್ತ್ರೀಯರಿಗೂ ದೀಕ್ಷೆಯ ಅಗತ್ಯವನ್ನು ತಿಳಿಸಿ, ಧಾರ್ಮಿಕ ಸಮಾನತೆ ಹಾಗೂ ಸ್ವಾತಂತ್ರ್ಯವನ್ನು ತಿಳಿಸುತ್ತದೆ. ಆಗಮಗಳಲ್ಲಿ ಭಕ್ತ (ಸಾಧಕ)ನಿಗೆ ಹೇಳಿದ ಸಂಗತಿಗಳೆಲ್ಲ, ಭಕ್ತಳಿಗೂ ಅನ್ವಯವಾಗುತ್ತದೆ ಎನ್ನುವ ಸಂಗತಿಯನ್ನು ಅವಶ್ಯವಾಗಿ ಗ್ರಹಿಸಬೇಕಾಗುತ್ತದೆ.

ಕಾರಣಾಗಮದಲ್ಲಿ ಜಗನ್ಮಾತೆ ಪಾರ್ವತಿಯು ಪರಮೇಶ್ವರನನ್ನು ಕುರಿತು ಮಹಿಳೆಯ ಧಾರ್ಮಿಕ ಅಧಿಕಾರ ಮತ್ತು ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಹಲವಾರು ವಿಚಾರಗಳ ಚರ್ಚೆಯನ್ನು ಮಾಡಿದ್ದಾಳೆ. ಈ ಪ್ರಸಂಗ ಅತ್ಯಂತ ಸ್ವಾರಸ್ಯಕರವಾಗಿ ಮೂಡಿ ಬಂದಿದೆ. ವೀರಶೈವ ಧರ್ಮದ ಶಿವದೀಕ್ಷೆ ಮತ್ತು ಅದನ್ನು ಪಡೆದ ತರುವಾಯ ಅಳವಡಿಸಿಕೊಳ್ಳುವ ಆಚರಣೆ ಇವುಗಳನ್ನು ಇಲ್ಲಿ ಶಾಂಭವ ವ್ರತವೆಂಬ ಹೆಸರಿನಿಂದ ಕರೆದು ಆ ಶಾಂಭವ ವ್ರತದ ವಿಚಾರವನ್ನು ಚರ್ಚಿಸುವ ಸಂದರ್ಭದಲ್ಲಿ ಮಹಿಳೆಯ ವಿಷಯಕವಾದ ಬಹಳಷ್ಟು ವಿಚಾರಗಳನ್ನು ಚರ್ಚಿಸಲಾಗಿದೆ. ಅವು –

ಮಹಿಳೆಯರಿಂದ ಈ ಶಾಂಭವ ವ್ರತವನ್ನು ಆಚರಿಸುವುದು ಹೇಗೆ ಸಾಧ್ಯವಾಗುವುದು? ವಿವಾಹದ ನಂತರ ಅವಳು ಈ ವ್ರತದಲ್ಲಿ ಪಾಲ್ಗೊಳ್ಳಬೇಕೋ ಅಥವಾ ವಿವಾಹವಾಗುವುದಕ್ಕಿಂತ ಮೊದಲೋ? ವಿವಾಹದ ನಂತರ ದೀಕ್ಷೆ ಪಡೆಯಬೇಕಾದರೆ ಮಹಿಳೆಯು ತನ್ನ ಪತಿಯಿಂದ ದೀಕ್ಷೆಯನ್ನು ಪಡೆದುಕೊಳ್ಳಬೇಕೋ ಅಥವಾ ಬೇರೆ ಯಾರಿಂದಲಾದರೂ ಪಡೆದುಕೊಳ್ಳಬೇಕೋ? ಏಕೆಂದರೆ ಪತಿಯಿಂದ ದೀಕ್ಷೆಯನ್ನು ಸ್ವೀಕರಿಸಿದರೆ ಪತಿ ಗುರುವಾಗುತ್ತಾನೆ. ಗುರುವೆಂದರೆ ತಂದೆಗೆ ಸಮಾನನಾಗುವುದರಿಂದ ಮುಂದೆ ಅವರಿಬ್ಬರಲ್ಲಿ ಪತಿ–ಪತ್ನಿ ಸಂಬಂಧ ಉಳಿಯುವುದಿಲ್ಲ. ಪತಿಯನ್ನು ಬಿಟ್ಟು ಬೇರೆಯವರಿಂದ ದೀಕ್ಷೆಯನ್ನು ಸ್ವೀಕರಿಸಿದರೆ ಆಗ ಅವಳು ಅನ್ಯಶೇಷಳಾಗುವಳು (ಅನ್ಯಸ್ಪರ್ಶಿಯಾಗುವಳು). ದೀಕ್ಷೆಯನ್ನು ಪಡೆದುಕೊಂಡ ವಿವಾಹಿತ ಮಹಿಳೆಯು ಗುರುವಿನ ಆಜ್ಞೆಯನ್ನು ಪಾಲಿಸಬೇಕೋ ಅಥವಾ ಪತಿಯ ಆಜ್ಞೆಯನ್ನು ಪಾಲಿಸಬೇಕೋ? ಈ ತೆರನಾಗಿ ಮಹಿಳೆಗೆ ಸಂಬಂಧಿಸಿದ ಅನೇಕ ಸಂದೇಹಗಳನ್ನು ಪಾರ್ವತಿಯು ಪರಮೇಶ್ವರನ ಮುಂದಿರಿಸಿದಾಗ ಅವನು ಇವೆಲ್ಲ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ –

ವ್ರತಮಾವಶ್ಯಕಮಿದಂ ಕಥ್ಯತೇ ಯೋಷಿತಾಮಪಿ।
ಅನುಷ್ಠೇಯಂ ಪರಸ್ತಾದ್ವೈ ನಿಯತಂ ಪಾಣಿಪೀಡನಾತ್ ॥ [೧೬]

ಸ್ತ್ರೀಯರಿಗೂ ಕೂಡ ಈ ವ್ರತವು ಅತ್ಯಂತ ಅವಶ್ಯಕವಿದೆ. ವಿವಾಹದ ನಂತರ

೧೬. ಕಾ.ಆ. ಕ್ರಿ. ಪಾ. ಪಟಲ ೨, ಶ್ಲೋಕ ಸಂಖ್ಯೆ ೫೨

ಈ ವ್ರತವನ್ನು ಆಚರಿಸುವುದು ಉತ್ತಮ ಎಂದು ತಿಳಿಸಿ, ಪತಿಯು ಸದ್ಗುಣ ಸಂಪನ್ನನೂ ಬ್ರಹ್ಮಜ್ಞನೂ ಆಗಿದ್ದರೆ ಅವನಿಂದಲೇ ದೀಕ್ಷೆಯನ್ನು ಪಡೆದುಕೊಳ್ಳಬಹುದು. ಪತಿಯು ಈ ದೀಕ್ಷೆಯನ್ನು ನೀಡಲು ಅಸಮರ್ಥನಾಗಿದ್ದರೆ ಬೇರೆ ಗುರುಗಳಿಂದಲೂ ದೀಕ್ಷೆಯನ್ನು ಪಡೆದುಕೊಳ್ಳಬಹುದು.

ಪತಿಯನ್ನು ಹೊರತು ಪಡಿಸಿ ಬೇರೆಯವರಿಂದ ದೀಕ್ಷೆಯನ್ನು ಪಡೆದುಕೊಂಡಾಗ ಮಹಿಳೆಯು ಅನ್ಯಶೇಷ(ಅನ್ಯಸ್ಪರ್ಶಿಣಿ)ಳಾಗುವುದಿಲ್ಲ. ಬೇರೆಯವರೊಂದಿಗೆ ದೇಹಸಂಬಂಧ ಬೆಳಸಿದಾಗ ಅವಳು ಅನ್ಯಶೇಷಳಾಗುವಳೇ ಹೊರತು ಗುರುವಿನಿಂದ ದೀಕ್ಷೆಪಡೆದಾಗ ಅಲ್ಲ!

ಇನ್ನು ಪತಿಯಲ್ಲಿಯೇ ಯೋಗ್ಯತೆಯಿದ್ದರೆ ಅವನಿಂದಲೇ ದೀಕ್ಷೆಯನ್ನು ಸ್ವೀಕರಿಸಬಹುದು. ಪತಿಯಿಂದ ದೀಕ್ಷೆ ಪಡೆದರೆ ಸತಿ ಪತಿ ಸಂಬಂಧ ಉಳಿಯಲಾರದೆಂಬ ಶಂಕೆಯೂ ಉಚಿತವಲ್ಲ. ಏಕೆಂದರೆ ಸತಿಗೆ ದೀಕ್ಷೆಯನ್ನು ಕೊಟ್ಟು ಪತಿಯು ಗುರುವಾಗುವುದರಿಂದ ತಂದೆಯ ಸಮಾನನಾಗುವನೆಂಬ ಮಾತು ಗೌಣವಾದುದೇ ವಿನಹ ಮುಖ್ಯವಲ್ಲ. "ಕಾರ್ಯೇಷು ಮಂತ್ರೀ ಕರಣೇಷು ದಾಸೀ। ಭೋಜ್ಯೇಷು ಮಾತಾ ಶಯನೇಷು ರಂಭಾ" ಎಂಬ ಸುಭಾಷಿತದಂತೆ ಕೈಹಿಡಿದ ಮಡದಿಯೇ ಬೇರೆ ಬೇರೆ ಪ್ರಸಂಗಗಳಲ್ಲಿ ಮಂತ್ರಿಯಾಗಿ, ದಾಸಿಯಾಗಿ, ತಾಯಿಯಾಗಿ, ರಂಭೆಯಾಗಿ ವ್ಯವಹರಿಸುವುದರಿಂದ ಪತಿ–ಪತ್ನಿ ಸಂಬಂಧ ಹೇಗೆ ಬಾಧಿತವಾಗುವುದಿಲ್ಲವೋ ಹಾಗೆಯೇ ದೀಕ್ಷೆಯನ್ನು ಕೊಟ್ಟು ಪತಿಯು ಅವಳ ಗುರುವಾಗಿ ತಂದೆಗೆ ಸಮನಾಗುವನೆಂದು ಹೇಳುವುದರಿಂದ ಅವರ ಪತಿ–ಪತ್ನಿ ಸಂಬಂಧವು ಬಾಧಿತವಾಗುವದಿಲ್ಲ.

ಶಿವಾಗಮಗಳಲ್ಲಿ ಹೀಗೆ ಹೇಳಲ್ಪಟ್ಟಿದ್ದರೂ ಲೋಕದಲ್ಲಿ ಮಾತ್ರ ಅವರ ಮನೆತನದ ಗುರುಗಳಿಂದಲೇ ಸತಿ–ಪತಿಗಳೀರ್ವರೂ ದೀಕ್ಷೆಯನ್ನು ಪಡೆದುಕೊಳ್ಳುವ ಪದ್ಧತಿ ರೂಢಿಯಲ್ಲಿದೆ. ಮೇಲೆ ಚರ್ಚಿಸಿದ ಎಲ್ಲ ಗೊಂದಲಗಳಿಂದ ಪಾರಾಗಲು ಒಂದು ರೀತಿಯಿಂದ ಇದೇ ಸೂಕ್ತ ಉಪಾಯವಾದ್ದರಿಂದ ಇದು ರೂಢಿಯಲ್ಲಿದೆ. ಇದರಿಂದ ದೀಕ್ಷೆ ದಯಪಾಲಿಸುವ ಗುರು ಸ್ಥಾನದ ಗೌರವ ರಕ್ಷಣೆಯೂ ಆಗುತ್ತದೆ. ಪತಿಯೊಂದಿಗಿನ ವ್ಯವಹಾರದಲ್ಲೂ ಸಂಕೋಚ ಬರುವುದಿಲ್ಲ. ಕಾರಣ ಈ ರೂಢಿಯೇ ಸರ್ವರಿಗೂ ಯೋಗ್ಯವಾದುದು. "ಯದ್ಯಪಿ ಸಿದ್ಧಂ ಲೋಕವಿರುದ್ಧಂ ನಾಚರಣೀಯಂ ನಾಚರಣೀಯಂ" ಎಂತಲೋ ಮತ್ತು "ಯೋಗಾದ್ ರೂಢಿರ್ಬಲೀಯಸೀ" ಎಂತಲೂ ಹೇಳುವ ಮೂಲಕ ಶಾಸ್ತ್ರ ಹಾಗೂ ರೂಢಿಗತ ಆಚರಣೆಯಲ್ಲಿ ಪರಸ್ಪರ ವಿರೋಧ ಬಂದಾಗ ರೂಢಿಯಲ್ಲಿರುವದನ್ನೇ ಅಳವಡಿಸಿಕೊಳ್ಳಬೇಕೆಂದು ತಿಳಿಸಲಾಗಿದೆ. ಕಾರಣ ಮನೆತನದ ಗುರುಗಳಿಂದಲೇ ಸತಿ–ಪತಿಗಳೀರ್ವರೂ ದೀಕ್ಷೆಯನ್ನು ಪಡೆದುಕೊಳ್ಳುವುದೇ ಸೂಕ್ತ ಕ್ರಮವಾಗಿದೆ.

ವಚನಕಾಲದ ಸ್ತ್ರೀಯರೂ ಸಹ ಗುರುಗಳಿಂದ ದೀಕ್ಷೆ ಪಡೆದುಕೊಂಡು ಅಷ್ಟಾವರಣ

ಪಂಚಾಚಾರಗಳ ಆಚರಣೆಯಿಂದ ಷಟಸ್ಥಲಮಾರ್ಗವನ್ನು ಅನುಸರಿಸಿ ಪಾರಮಾರ್ಥಿಕ ಸಂಪತ್ತನ್ನು ಸಂಪಾದಿಸಿದ್ದಾರೆ. ಈ ನಿಟ್ಟಿನಲ್ಲಿ ಸಾಗಿದ ಮಹಿಳೆಯರೆಂದರೆ ಅಕ್ಕಮಹಾದೇವಿ, ಮುಕ್ತಾಯಕ್ಕ, ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಅಕ್ಕಮ್ಮ, ಆಯ್ದಕ್ಕಿ ಲಕ್ಕಮ್ಮ, ದುಗ್ಗವ್ವೆ, ಬೊಂತಾದೇವಿ, ಮಸಣಮ್ಮ, ರೇಮ್ಮವ್ವೆ ಮುಂತಾದ ಒಟ್ಟು ಮೂವತ್ತೂರು ಶಿವಶರಣೆಯರನ್ನು ಉದಾಹರಿಸಬಹುದು. ನಾಗದೇವಯ್ಯನ ಸತಿ ಮಸಣಮ್ಮ 'ನಿಜಗುಣೇಶ್ವರ'ವೆಂಬ ಗುರುವಿನಿಂದ ಉಪದೇಶವನ್ನು ಪಡೆದು ಆತನ ಹೆಸರನ್ನೇ (ನಿಜಗುಣೇಶ್ವರೆಂದು) ಅಂಕಿತವನ್ನಾಗಿ ಇಟ್ಟುಕೊಂಡಿದ್ದಾಳೆ. ಮತ್ತು ರಾಯಸದ ಮಂಚಣ್ಣನವರ ಪತ್ನಿ ರಾಯಮ್ಮ ಇವಳೂ ಸಹ ತನ್ನ ಗುರುವಾದ 'ಅಮುಗೇಶ್ವರನ' ಹೆಸರನ್ನೇ ಇಟ್ಟುಕೊಂಡಿದ್ದನ್ನು ಕಾಣಬಹುದು.

ಷಟಸ್ಥಲ ಸಾಧನೆಯಲ್ಲಿ ಮಹಿಳೆ –

ದೀಕ್ಷೆಯನ್ನು ಪಡೆದುಕೊಂಡ ಬಳಿಕ ಅಷ್ಟಾವರಣವೇ ಅಂಗವಾಗಿ ಪಂಚಾಚಾರವೇ ಪ್ರಾಣವಾಗಿ ಷಟ್‌ಸ್ಥಲವೇ ಆತ್ಮವಾಗಿ ಬದುಕುವುದು ವೀರಶೈವ ಸಾಧನಪದ್ಧತಿ. ಅದರಲ್ಲೂ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಗಳೆಂಬ ಈ ಷಟ್‌ಸ್ಥಲಗಳು ವೀರಶೈವ ಸಾಧನೆಯ ಪ್ರಮುಖ ಪಥ. ಪುರುಷನಂತೆಯೇ ಮಹಿಳೆಯೂ ಕೂಡ ಲಿಂಗದೀಕ್ಷೆಗೆ ಮತ್ತು ಆ ಸಾಧನೆಗೆ ಅಧಿಕಾರಿಯಾಗಿರುವುದರಿಂದ ಅವಳು ಪುರುಷನಂತೆಯೇ ಈ ಷಟ್‌ಸ್ಥಲ ಪಥವನ್ನು ಕ್ರಮಿಸಿಯೇ ಲಿಂಗಾಂಗ ಸಾಮರಸ್ಯವನ್ನು ಸಾಧಿಸಬೇಕೆಂಬುದು ಶಿವಾಗಮಗಳ ಅಭಿಮತ. ಅಂದರೆ ಮಹಿಳೆಯೂ ಸಹ ಭಕ್ತಳಾಗಬಲ್ಲಳು ಮಾಹೇಶ್ವರಳಾಗಬಲ್ಲಳು ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯಳಾಗಬಲ್ಲಳು.

ಈ ಷಟ್‌ಸ್ಥಲ ಪಥಕ್ಕನುಗುಣವಾಗಿ ಸಾಧನೆಯಲ್ಲಿ ತೊಡಗಿದ ಮಹಿಳೆಯು ಪ್ರಸಾದಿ ಸ್ಥಲಕ್ಕೆ ಬಂದಾಗ ಎದುರಾಗುವ ಕೆಲವು ತೊಡಕುಗಳನ್ನು ಮತ್ತು ಅವುಗಳಿಗೆ ಪರಿಹಾರವನ್ನು ಕಾರಣಾಗಮದ ಒಂಭತ್ತನೇ ಪಟಲದಲ್ಲಿ ಮನೋಜ್ಞವಾಗಿ ನಿರೂಪಿಸಲಾಗಿದೆ. ಪಾರಮೇಶ್ವರಾಗಮದಲ್ಲಿ ಪ್ರಸಾದಿಸ್ಥಲದ ವಿವರಣೆಯನ್ನು ನೀಡುತ್ತ

ಯೋಽನರ್ಪಿತಂ ಮಹೇಶಾನಿ ನಾರ್ಚಯಿತ್ವಾಪಿ ಜಂಗಮಾನ್।
ನಾಶ್ನಾತಿ ನ ತ್ಯಜೇನ್ಮಹ್ಯಮರ್ಪಿತಂ ಕೃಚ್ಛ್ರಗೋಽಪಿ ವಾ॥
ಸೋಽಯಂ ಪ್ರಸಾದೀ ಕಥಿತಃ ಸೋಽಹಮೇವ ನ ಸಂಶಯಃ ॥ [೧೭]

ಯಾರು ಗುರುಲಿಂಗ ಜಂಗಮ ಪೂಜೆಯನ್ನು ಮಾಡದೇ ಎಂದಿಗೂ ಭೋಜನ ಮಾಡುವುದಿಲ್ಲವೋ ಮತ್ತು ಲಿಂಗಕ್ಕೆ ಸಮರ್ಪಿಸಿದ ಭೋಜನವನ್ನು ಪರಿತ್ಯಾಗ ಮಾಡುವುದಿಲ್ಲವೋ ಅವರು ಪ್ರಸಾದಿ ಎಂದು ಪ್ರತಿಪಾದಿಸಲಾಗಿದೆ. ಅರ್ಥಾತ್ ಪ್ರಸಾದಿ ಸ್ಥಲದ ಸಾಧಕನು ಶಿವಲಿಂಗದ ಪ್ರಸಾದವನ್ನಲ್ಲದೇ ಬೇರೆನನ್ನೂ ಸ್ವೀಕರಿಸುವುದಿಲ್ಲ ಮತ್ತು ಪ್ರಸಾದವನ್ನು ಎಂದೂ ಬಿಡುವುದಿಲ್ಲ. ಇದು ಪ್ರಸಾದಿಸ್ಥಲದ ನಿಯಮ. ಈ

೧೭. ಪಾ.ಆ. ಪಟಲ ೬, ಶ್ಲೋಕ ಸಂಖ್ಯೆ ೧೭-೧೮

ಸ್ಥಲಕ್ಕೆ ಬಂದ ಮೇಲೆ ಮಹಿಳೆ ಕೂಡ ಈ ನಿಯಮವನ್ನು ಪಾಲಿಸಬೇಕಾಗುವುದು ಅನಿವಾರ್ಯ. ಅಂದರೆ ಪ್ರಸಾದಿ ಸ್ಥಲಕ್ಕೆ ಬಂದ ಮಹಿಳೆಯೂ ಸಹ ತಾನು ಸೇವಿಸುವ ಪ್ರತಿಯೊಂದು ಪದಾರ್ಥವನ್ನು ಇಷ್ಟಲಿಂಗಕ್ಕೆ ಸಮರ್ಪಿಸಿಯೇ ಸ್ವೀಕರಿಸಬೇಕು.

ಈ ಪ್ರಸಂಗದಲ್ಲಿ ಎದುರಾಗುವ ಸಮಸ್ಯೆಯನ್ನು ಕುರಿತು ಕಾರಣಾಗಮದಲ್ಲಿ ಪಾರ್ವತಿಯು ಪರಮೇಶ್ವರನನ್ನು ಕುರಿತು ಚರ್ಚಿಸುತ್ತಾ,"ಧರ್ಮಶಾಸ್ತ್ರದಲ್ಲಿ ವಿವಾಹದ ನಂತರ ಮಹಿಳೆಯು ತನ್ನ ಪತಿವ್ರತಾ ಧರ್ಮಕ್ಕನುಸಾರವಾಗಿ ಪತಿಯು ಸೇವಿಸಿ ಬಿಟ್ಟ ಅನ್ನವನ್ನು (ಭರ್ತೃಶೇಷ) ಸ್ವೀಕರಿಸಲು ಹೇಳಲಾಗಿದೆ. ಪ್ರಸಾದಿಸ್ಥಲದ ಸಾಧಕಳಾದ ವಿವಾಹಿತ ಮಹಿಳೆಯೂ ಈ ನಿಯಮಕ್ಕೆ ಹೊರತಾದವಳಲ್ಲ. ಅವಳೂ ಸಹ ಭರ್ತೃಶೇಷವನ್ನು ಸ್ವೀಕರಿಸಬೇಕು. ಆದರೆ ಪ್ರಸಾದಿ ಸ್ಥಲದ ನಿಯಮಕ್ಕನುಸಾರವಾಗಿ ಲಿಂಗಕ್ಕೆ ಸಮರ್ಪಿಸದೇ ಏನನ್ನೂ ಸ್ವೀಕರಿಸಲಾಗದು ಎಂಬ ನಿಯಮವನ್ನೂ ಅವಳು ಪಾಲಿಸಬೇಕಾಗುತ್ತದೆ. ಹೀಗಾದಾಗ (ಭರ್ತೃಶೇಷ) ಪತಿಯು ಸೇವಿಸಿ ಬಿಟ್ಟ ಅನ್ನವನ್ನು ಲಿಂಗಕ್ಕೆ ಸಮರ್ಪಿಸದೇ ಸ್ವೀಕರಿಸಲು ಬರುವುದಿಲ್ಲ. ಅದು ಪತಿಯ ಎಂಜಲಾದರಿಂದ ಸಮರ್ಪಿಸುವುದೂ ಯೋಗ್ಯವಲ್ಲ. ಭರ್ತೃಶೇಷವನ್ನು ಸೇವಿಸುವುದನ್ನೇ ಬಿಟ್ಟರೆ ಅದು ಪತಿವ್ರತಾ ಧರ್ಮಕ್ಕೆ ಅಪಚಾರ. ಇನ್ನು ಸಮರ್ಪಿಸದೆ ಸ್ವೀಕರಿಸಿದರೆ ಅದು ಪ್ರಸಾದಿಸ್ಥಲದ ಸಾಧನೆಯ ನಿಯಮಕ್ಕೆ ಭಂಗ. ಪತಿಯಿಂದ ಉಚ್ಛಿಷ್ಟವಾದದ್ದನ್ನು ಲಿಂಗಕ್ಕೆ ಸಮರ್ಪಿಸುವುದೂ ಸೂಕ್ತವಲ್ಲ. ಹಾಗಾದರೆ ಏನು ಮಾಡಬೇಕು? ಎಂದು ಪಾರ್ವತಿ ಮಹಿಳೆಯರ ಪರವಾಗಿ ಪ್ರಶ್ನೆ ಮಾಡುತ್ತಾಳೆ. ಇದಕ್ಕೆ ಉತ್ತರವಾಗಿ ಪರಮಾತ್ಮನು

> ನಿವೇದನೇ ವಿಶೇಷೋऽಸ್ತಿ ವಕ್ಷ್ಯಾಮ್ಯವಹಿತಾ ಭವ।
> ಲಿಂಗಭೋಗಸ್ವರೂಪಂ ಚಾನುಜ್ಞಾರೂಪಮಿತಿ ದ್ವಿಧಾ॥
> ಭರ್ತೃಶೇಷಾದಿರೂಪಸ್ಯ ಪ್ರಸಾದಸ್ಯ ಗುರೋರ್ಮಮ।
> ತೀರ್ಥಸ್ಯ ಚಾರ್ಪಣಂ ಪ್ರೋಕ್ತಮನುಜ್ಞಾರೂಪಮೇವ ಹಿ॥
> ಇಷ್ಟಾನಿಷ್ಟಪ್ರಭೇದೇನ ದೇಹಿನಾಂ ಕರ್ಮಯೋಗತಃ।
> ಲಭಂತೇ ಹ್ಯನಿಶಂ ಭೋಗಾಸ್ತೇಷು ತೇಷ್ವಪಿ ಮದ್ವ್ರತೀ॥
> ಇಷ್ಟೇ ತು ಭೋಗರೂಪಂ ಚಾನುಜ್ಞಾರೂಪಮನಿಷ್ಟಕೇ।
> ನಿವೇದನಂ ಪ್ರಕುರ್ವೀತ ಗ್ರಾಮ್ಯಧರ್ಮಾದಿಕೇ ತಥಾ॥ [೧೮]

ಎಂದು ಉಪದೇಶಿಸಿರುವನು. ಅರ್ಥಾತ್ ಇಷ್ಟಲಿಂಗಕ್ಕೆ ತೋರಿಸುವ ನೈವೇದ್ಯವು ೧) ಲಿಂಗ ಭೋಗರೂಪ ನೈವೇದ್ಯ ೨) ಅನುಜ್ಞಾರೂಪ ನೈವೇದ್ಯ ಎಂದು ಎರಡು ಪ್ರಕಾರವಾಗಿದೆ. "ಭಗವಂತನೇ! ಈ ಪದಾರ್ಥಗಳನ್ನು ನೀನು ಸ್ವೀಕರಿಸಿ ನನ್ನನ್ನು ಅನುಗ್ರಹಿಸು" ಎಂಬ ಭಾವದಿಂದ ಲಿಂಗಕ್ಕೆ ಸಮರ್ಪಿಸುವುದು ಭೋಗರೂಪ ನೈವೇದ್ಯ. "ಭಗವಂತನೇ! ಈ ಪದಾರ್ಥಗಳನ್ನು (ವಸ್ತುಗಳನ್ನು) ನಾನು ಸ್ವೀಕರಿಸಲಿರುವೆನು.

---

೧೮. ಕಾ.ಆ. ಕ್ರಿ. ಪಾ. ಪಟಲ ೯, ಶ್ಲೋಕ ಸಂಖ್ಯೆ ೧೨-೧೫

ಅದಕ್ಕೆ ನಿನ್ನ ಅನುಗ್ರಹವಿರಲಿ ನನಗೆ ಈ ಪದಾರ್ಥಗಳನ್ನು ಸ್ವೀಕರಿಸಲು ಅಪ್ಪಣೆಯನ್ನು ದಯಪಾಲಿಸು" ಎಂಬ ಭಾವದಿಂದ ಲಿಂಗಕ್ಕೆ ಸಮರ್ಪಿಸುವುದು ಅನುಜ್ಞಾ ರೂಪ ನೈವೇದ್ಯ. ವಿವಾಹಿತ ಮಹಿಳೆಯ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ಪತಿವ್ರತಾಧರ್ಮಕ್ಕನುಗುಣವಾಗಿ ಪತಿಯ ಶೇಷಾನ್ನವನ್ನು ಸೇವಿಸುವ ಸಂದರ್ಭದಲ್ಲಿ ಇಷ್ಟಲಿಂಗಕ್ಕೆ ಅನುಜ್ಞಾರೂಪ ನೈವೇದ್ಯವನ್ನು ಸಮರ್ಪಿಸಿ ಸ್ವೀಕರಿಸಬೇಕು. ಮತ್ತು ನೇರವಾಗಿ ತಾಜಾ ಆಹಾರವನ್ನು ಸೇವಿಸುವ ಸಂದರ್ಭದಲ್ಲಿ ಲಿಂಗಭೋಗರೂಪ ನೈವೇದ್ಯವನ್ನು ಸಮರ್ಪಿಸಬೇಕು. ಇದರಿಂದ ಪತಿವ್ರತಾ ಧರ್ಮಕ್ಕೂ ಭಂಗ ಬರುವುದಿಲ್ಲ. ಮತ್ತು ಪ್ರಸಾದಿಸ್ಥಲದ ಸಾಧನೆಯ ಆಚರಣೆಯೂ ಅಪಚಾರವಾಗುವುದಿಲ್ಲ.

ಸಾಮಾನ್ಯವಾಗಿ ಮನುಷ್ಯನಿಗೆ ಅವನ ಪ್ರಾರಬ್ಧ ಕರ್ಮಕ್ಕನುಗುಣವಾಗಿ ಇಷ್ಟವಾದ ಭೋಗಗಳು ಮತ್ತು ಅನಿಷ್ಟವಾದ ಭೋಗಗಳು ಬಂದೊದಗುತ್ತವೆ. ಇಷ್ಟವಾದ ಭೋಗಗಳನ್ನು ಉಪಭೋಗಿಸುವಾಗ ಭೋಗರೂಪ ನೈವೇದ್ಯವನ್ನು ಮತ್ತು ಅನಿಷ್ಟವಾದ ಭೋಗಗಳನ್ನು ಉಪಭೋಗಿಸುವ ಪ್ರಸಂಗದಲ್ಲಿ ಅನುಜ್ಞಾರೂಪ ನೈವೇದ್ಯವನ್ನು ಅರ್ಪಿಸಬೇಕು. ಇದೇ ರೀತಿಯಾಗಿ ನೈಸರ್ಗಿಕವಾಗಿರುವ ಕಾಮಭೋಗದಲ್ಲಿ ಕೂಡ ಅನುಜ್ಞಾರೂಪ ನೈವೇದ್ಯವನ್ನು ಉಪಯೋಗಿಸಬೇಕು. ಹೀಗೆ ಸ್ತ್ರೀಯರಿಗೆ ಸಂಬಂಧಿಸಿದ ಹಲವಾರು ಕುತೂಹಲಕಾರಿಯಾದ ಧಾರ್ಮಿಕ ಆಚರಣೆಗಳ ವಿಚಾರವನ್ನು ಆಗಮಗಳಲ್ಲಿ ನಿರೂಪಿಸಲಾಗಿದೆ.

ಭರ್ತೃಶೇಷವನ್ನು ಸೇವಿಸುವ ವಿಷಯವಾಗಿ ಚರ್ಚಿಸಿದ ವಿಚಾರಗಳನ್ನು ಅವಲೋಕಿಸಿದಾಗ ಆಗಮಗಳು ಪುರುಷ ಪ್ರಧಾನ ವ್ಯವಸ್ಥೆಯನ್ನು ಮತ್ತು ಸ್ತ್ರೀಶೋಷಣೆಯನ್ನು ಒಪ್ಪಿಕೊಳ್ಳುತ್ತವೆ ಎಂದು ಭಾವಿಸಕೂಡದು. ಏಕೆಂದರೆ ಪತಿಯಲ್ಲಿ ಆ ತೆರನಾದ ಯೋಗ್ಯತೆಯಿದ್ದಾಗ ಮಾತ್ರ ಇದನೆಲ್ಲ ಮಹಿಳೆ ಆಚರಿಸಬೇಕೆಂಬುದು ಆಗಮದ ಅಭಿಪ್ರಾಯ. ಅಲ್ಲದೇ ಪತಿಭಕ್ತಿಪರಾಯಿಣಿಯಾದ ಮಹಿಳೆಗೆ ಆಗಮ ನಿರೂಪಿತ ವೀರಶೈವ ಧರ್ಮದ ಆಚರಣೆಗಳು ಅಡ್ಡಿಯಾಗಬಾರದು ಹಾಗೂ ಧರ್ಮಪರಾಯಿಣಿಯಾದ ಮಹಿಳೆಗೆ ಪತಿ-ಪತ್ನಿಧರ್ಮದ ಶ್ರದ್ಧೆಯು ಅಡ್ಡಿಯಾಗಬಾರದೆಂಬ ಉದ್ದೇಶದಿಂದ ಈ ವಿಚಾರಗಳು ಇಲ್ಲಿ ಪ್ರತಿಪಾದಿಸಲಾಗಿವೆಯೇ ಹೊರತು ಬೇರೆ ಉದ್ದೇಶದಿಂದಲ್ಲ.

ಅಲ್ಲದೆ 'ಮಹಿಳೆಗೆ ಪತಿಯೇ ಪರದೈವ ಅವನ ಸೇವೆಯೇ ಅವಳಿಗೆ ಸರ್ವಸ್ವ. ಅವನು ಹೇಗೆ ಇರಲಿ ಅವನನ್ನೇ ತನ್ನ ಪಾಲಿನ ದೇವರೆಂದು ಭಾವಿಸಬೇಕು ಅದರಿಂದ ಮೋಕ್ಷ ದೊರೆಯುವುದು' ಎಂಬ ಪುರುಷ ಪ್ರಧಾನ ವ್ಯವಸ್ಥೆಯ ಪ್ರಚಾರವನ್ನು ಶಿವಾಗಮಗಳು ವಿರೋಧಿಸುತ್ತವೆ. ಕಾರಣಾಗಮದ ಈ ಉಕ್ತಿಯಂತೆ -

ಸಂಸರನ್ ಭವಕಾಂತಾರೇ ನಿಮಜ್ಜನ್ ದುಃಖವಾರಿಧೌ।
ಅತೀರ್ಣಸ್ತು ಸ್ವಯಂ ಮುರ್ಖಸ್ತಾರಯೇತ್ ಸ ಕಥಂ ಸತೀಮ್ ॥

ತಸ್ಮಾದವಶ್ಯಂ ನಾರೀಣಾಮನುಷ್ಠೇಯಂ ವ್ರತಂ ಭವೇತ್ ॥ [೧೯]

ಭವಬಂಧನವೆಂಬ ಅರಣ್ಯದಲ್ಲಿ ಬಿದ್ದು ತಾನೇ ಅನೇಕ ಪ್ರಕಾರದ ದುಃಖ ಸಾಗರದಲ್ಲಿ ಮುಳುಗಿ ಭವಸಾಗರವನ್ನು ದಾಟಲಾರದೇ ಬಳಲುತ್ತಿರುವ ಮೂರ್ಖವ್ಯಕ್ತಿಯು ಹೇಗೆ ತಾನೆ ತನ್ನನ್ನು ಅವಲಂಬಿಸಿದ ಮಡದಿಯನ್ನು ಪಾರುಮಾಡುವನು! ಹೇಗೆ ತಾನೆ ಮುಕ್ತಿ ನೀಡುವನು? ಅದು ಸಾಧ್ಯವಿಲ್ಲ. ಆದುದರಿಂದ ಮಹಿಳೆಯು ತಾನು ಸ್ವತಃ ಯೋಗ್ಯ ಗುರುವಿನಿಂದ ದೀಕ್ಷೆಯನ್ನು ಪಡೆದು ಶಾಂಭವ ವ್ರತವನ್ನು ಆಚರಿಸಬೇಕು. ಶಿವಾಗಮದ ಈ ಮಾತು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಮತ್ತು ಸ್ತ್ರೀಪರವಾಗಿ ಎತ್ತಿದ ಮೊದಲ ಧ್ವನಿಯಾಗಿದೆ.

ಇನ್ನು ವಚನಕಾಲದಲ್ಲಿಯೂ ಸಹ ಪುರುಷರನ್ನು ಮೀರಿ, ಉನ್ನತ ಜ್ಞಾನ ಹೊಂದಿ, ಮಾರ್ಗತಪ್ಪಿದ ಪತಿಯನ್ನು ಸಹ ತಿದ್ದಿ, ಸೂಕ್ಷ್ಮತತ್ತ್ವಗಳನ್ನು ಅರುಹಿದ ಮಹಿಳೆಯರು ಸಿಗುತ್ತಾರೆ. ನಿದರ್ಶನಕ್ಕೆ ಆಯ್ದಕ್ಕಿ ಮಾರಯ್ಯನ ಹೆಂಡತಿ 'ಲಕ್ಕಮ್ಮ' ಪತಿಗಿಂತಲೂ ಜ್ಞಾನದಲ್ಲಿ ಒಂದು ಪಟ್ಟು ಮೇಲಾಗಿದ್ದಳು. ಒಂದು ದಿನ ಮಾರಯ್ಯ ಅಕ್ಕಿಯನ್ನು ಆಸೆಯಿಂದ ಹೆಚ್ಚಿಗೆ ತಂದಾಗ ಅದನ್ನು ನೋಡಿ 'ಲಕ್ಕಮ್ಮ' ಆಡುವ ಮಾತು ಪತಿಯನ್ನೇ ಜ್ಞಾನಮಟ್ಟದಲ್ಲಿ ಮೀರಿಸುತ್ತಿದೆ. "ಆಸೆಯೆಂಬುದು ಅರಸಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯ? ರೋಷವೆಂಬುದು ಯಮಧೂತರಿಗಲ್ಲದೆ, ಅಜಾತರಿಗುಂಟೆ ಅಯ್ಯ? ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ. ಮಾರಯ್ಯಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರು ಮಾರಯ್ಯ"[೨೦] ಎಂದು ಅಕ್ಕಿಯನ್ನು ಮರಳಿ ಅಲ್ಲಿಯೇ ಚೆಲ್ಲಿಬರಲು ಹೇಳುತ್ತಾಳೆ. ಆಗ ಮಾರಯ್ಯ ಬಡತನದಿಂದ ಇರುವ ನಮಗೆ ಈಸಕ್ಕಿ ಹೆಚ್ಚಾದರೇನಾಯಿತು. ಜಂಗಮದಾಸೋಹ ಮಾಡಿದರಾಯಿತೆಂಬ ಆಸೆಯಿಂದ ತಂದೆ ಎಂದಾಗ, ಲಕ್ಕಮ್ಮ "ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?" [೨೧] ಹೀಗೆ ಪತಿಯ ಸಂಗಡ ವಾದ ಮಾಡುತ್ತ ಲೌಕಿಕತೆಯಿಂದ ಅಲೌಕಿಕ ಮಟ್ಟಕ್ಕೇರಿ, ಪತಿಯ ತಪ್ಪನ್ನು ಅರುಹಿ ಅಷ್ಟೇ ಅಕ್ಕಿಯಲ್ಲಿ ಸಾವಿರಾರು ಜಂಗಮರನ್ನು ಉಣಬಡಿಸಿ ಪವಾಡ ಸದೃಶಳಾಗುತ್ತಾಳೆ. ಈ ಹಿನ್ನೆಲೆಯಲ್ಲಿ ಸ್ತ್ರೀಯು ಸಾಮಾಜಿಕ ಜೀವನದಲ್ಲಿದ್ದುಕೊಂಡೇ ಪಾರಮಾರ್ಥಿಕ ಸಾಧನೆ ಮಾಡಿ ಪುರುಷನಿಗಿಂತಲೂ ಮೇಲ್ಮಟ್ಟಕ್ಕೆ ಹೋಗಿ, ಆ ಪರಶಿವನ ಕೃಪೆಗೆ ಪಾತ್ರಳಾಗಿದ್ದಾಳೆ.

ಧರ್ಮಾಚರಣೆಗೆ ಸೂತಕಗಳು ಬಾಧಕವಲ್ಲ

ವೀರಶೈವ ಸಿದ್ಧಾಂತದಲ್ಲಿ ಪ್ರತಿಪಾದಿಸಲಾದ ಶಿವದೀಕ್ಷೆಯಲ್ಲಿ ಮತ್ತು ಆ ದೀಕ್ಷೆಯಲ್ಲಿ ಪ್ರಾಪ್ತವಾಗುವ ಇಷ್ಟಲಿಂಗಧಾರಣೆ ಹಾಗೂ ಇಷ್ಟಲಿಂಗ ಪೂಜೆಯಲ್ಲಿ ಮಹಿಳೆಯರಿಗೂ ಪುರುಷರಷ್ಟೇ ಅಧಿಕಾರವಿದೆಯೆಂದು ಶಿವಾಗಮಗಳು ಹೇಳುತ್ತವೆ. ಲಿಂಗಧಾರಣ ಮತ್ತು ಲಿಂಗ ಪೂಜೆ ಇವು ನಿತ್ಯಕರ್ಮವಾದುದರಿಂದ ಇದನ್ನು ಜೀವವಿರುವವರೆಗೆ

೧೯. ಕಾ.ಆ. ಕ್ರಿ. ಪಾ. ಪಟಲ ೨, ಶ್ಲೋಕ ಸಂಖ್ಯೆ ೬೬

೨೦. ಶಿವಶರಣೆಯರ ವ.ಸಂ. ಸಮಗ್ರ ವಚನ ಸಂಪುಟ ೫, ವಚನ ಸಂಖ್ಯೆ ೭೧೦. ಪುಟ ೨೨೦

೨೧. ಶಿವಶರಣೆಯರ ವ.ಸಂ. ಸಮಗ್ರ ವಚನ ಸಂಪುಟ ೫, ವಚನ ಸಂಖ್ಯೆ ೭೦೫ ಪುಟ ೨೧೯

ಮಾಡುತ್ತಲೇ ಇರಬೇಕಾಗುತ್ತದೆ. ಕಾರಣ ದೀಕ್ಷೆ ಪಡೆದುಕೊಂಡ ಬಳಿಕ ಸ್ತ್ರೀಯು ಇಷ್ಟಲಿಂಗ ಪೂಜೆ ಹಾಗೂ ನಿಷ್ಠೆಯನ್ನು ಮರೆಯಬಾರದೆಂದು ಪರಶಿವನು ಕಾರಣಾಗಮದಲ್ಲಿ –

ಲಿಂಗನಿಷ್ಠಾವಿರೋಧೇನ ಸ್ವಕೃತ್ಯಾನ್ಯನುಪಾಲಯೇತ್ ।
ನ ದುಷ್ಯತೇ ತತೋ ನಾರೀ ಭರ್ತೃಶುಶ್ರೂಷಣಾದಿಷು ॥
ಪತಿಂ ಪರಿಚರಂತೀ ಚ ಶ್ವಶ್ವಾದೀನ್ ಪೋಷಯಂತ್ಯಪಿ।
ಪಾಲಯಂತ್ಯಪಿ ಪುತ್ರಾದೀನ್ ಲಿಂಗನಿಷ್ಠಾಂ ನ ವಿಸ್ಮರೇತ್ ॥
ಯಥೈವ ಬಾಲಪತ್ಯಾಯಾಃ ಕುರ್ವಂತ್ಯಾ ಭವನಕ್ರಿಯಾಃ।
ಬಾಲಾಯತ್ತಂ ಯಥಾ ಚಿತ್ತಂ ದೀಕ್ಷಿತಾಯಾಸ್ತಥೋಚಿತಮ್।
ತತೋ ನ ಗೃಹಕೃತ್ಯಾನಿ ಬಾಧಂತೇ ಮದುಪಾಸನಾಮ್ ॥
ಲಿಂಗನಿಷ್ಠಾಪರಾ ಭೂತ್ವಾ ಮನ್ನಿಷ್ಠಾಯುಕ್ತಚೇತಸಾ।
ಪತ್ಯುಃ ಸಂಸೇವನಾದ್ ಭರ್ತ್ರಾ ಮತ್ಸಾಯುಜ್ಯಂ ಗಮಿಷ್ಯತಿ॥ [೨೨]

ಲಿಂಗನಿಷ್ಠೆಗೆ ವಿರೋಧವಿಲ್ಲದೆ ಸ್ತ್ರೀಯು ತನ್ನ ಕರ್ತವ್ಯಗಳನ್ನು ನಿರ್ವಹಿಸಬೇಕು. ಪತಿಯ ಸೇವೆ ಮುಂತಾದ ಕ್ರಿಯೆಗಳಿಂದ ಸ್ತ್ರೀಯು ದೂಷಿತವಾಗುವುದಿಲ್ಲ. ಪತಿ ಸೇವೆ, ಅತ್ತೆ ಮಾವಂದಿರ ಪೋಷಣೆ, ಮಕ್ಕಳ ಪಾಲನೆ ಮಾಡುತ್ತಲೇ ಸ್ತ್ರೀಯು ಇಷ್ಟಲಿಂಗ ನಿಷ್ಠೆಯನ್ನು ಮರೆಯಬಾರದು. ಚಿಕ್ಕ ಮಕ್ಕಳುಳ್ಳ ಸ್ತ್ರೀ ಮನೆಗೆಲಸವನ್ನು ಮಾಡುತ್ತಿದ್ದರೂ ಸಹ ಅವಳ ಮನಸ್ಸು ತನ್ನ ಮಕ್ಕಳ ಮೇಲಿರುವಂತೆ ದೀಕ್ಷಿತಳಾದ ಸ್ತ್ರೀಯು ಅದೇ ರೀತಿ ಇರುವುದು ಉಚಿತ. ಅವಳು ಮಾಡುವ ಗೃಹಕೃತ್ಯಗಳು ಲಿಂಗೋಪಾಸನೆಗೆ ಅಡ್ಡಬರುವುದಿಲ್ಲ. ಅಲ್ಲದೇ ಲಿಂಗನಿಷ್ಠೆಯಲ್ಲಿ ತೊಡಗಿದ ಮನಸ್ಸುಳ್ಳವಳಾಗಿ ಪತಿಯನ್ನು ಸೇವಿಸುತ್ತಿದ್ದರೆ ಪತಿಯ ಜೊತೆಯೇ ಶಿವಸಾಯುಜ್ಯ ಹೊಂದುವಳು ಎಂದು ತಿಳಿಸಿತ್ತಾನೆ. ಕಾರಣ ಸ್ತ್ರೀ ಪ್ರತಿನಿತ್ಯ ಲಿಂಗಪೂಜೆಯನ್ನು ಮಾಡುವ ವ್ರತವನ್ನು ಪರಿಪಾಲಿಸಬೇಕೆಂದು ಕಾರಣಾಗಮವು ತಿಳಿಸುತ್ತದೆ.

ಧರ್ಮಶಾಸ್ತ್ರದಲ್ಲಿ ಮಹಿಳೆಯು ಮಗುವಿಗೆ ಜನ್ಮ ನೀಡಿದ ಸಮಯದಲ್ಲಿ ಮತ್ತು ಮಾಸಿಕ ಧರ್ಮಕ್ಕನುಸಾರವಾಗಿ ರಜಸ್ವಲೆಯಾದ ಸಮಯದಲ್ಲಿ ಸೂತಕ ಪ್ರಾಪ್ತಿಯಾಗಿ ಅವಳಿಗೆ ಅಶೌಚವುಂಟಾಗುತ್ತದೆಯೆಂದು ಹೇಳಲಾಗಿದೆ. ಹೀಗಾದಾಗ ಈ ಸಂದರ್ಭದಲ್ಲಿ ಶಿವದೀಕ್ಷೆಯನ್ನು ಪಡೆದು ಲಿಂಗಧಾರಿಗಳಾದ ವೀರಶೈವ ಮಹಿಳೆಯರು ಅವರ ನಿತ್ಯಕರ್ಮರೂಪವಾದ ಲಿಂಗಧಾರಣ ಮತ್ತು ಪೂಜೆಗಳನ್ನು ಹೇಗೆ ಆಚರಿಸಲು ಸಾಧ್ಯವಾಗುವುದು? ಈ ವಿಧವಾದ ಸಂದೇಹಗಳಿಗೆ ಶಿವಾಗಮಗಳಲ್ಲಿ ಸ್ಪಷ್ಟವಾದ ಉತ್ತರಗಳು ದೊರೆಯುತ್ತವೆ. ಪಾರಮೇಶ್ವರಾಗಮದಲ್ಲಿ –

ನ ಪುಷ್ಪಿಣೀ ತ್ಯಜೇತ್‌ಪೂಜಾಂ ನ ಭುಕ್ತ್ವಾ ನಾಶುಚಿಸ್ತ್ವಪಿ।
ಯದ್ಯೈವ ಪೂಜಯೇಲ್ಲಿಂಗಂ ತದಾನುಗ್ರಾಹಕೋ ಹ್ಯಹಮ್॥ [೨೩]

---

೨೨. ಕಾ.ಆ. ಕ್ರಿ. ಪಾ. ಪಟಲ ೨, ಶ್ಲೋಕ ಸಂಖ್ಯೆ ೭೧-೭೪

೨೩. ಪಾ.ಆ. ಪಟಲ ೧, ಶ್ಲೋಕ ಸಂಖ್ಯೆ ೧೦೦

ಅರ್ಥಾತ್ ರಜಸ್ವಲೆಯಾದ ಸ್ತ್ರೀಯೂ ಇಷ್ಟಲಿಂಗ ಪೂಜೆಯನ್ನು ತ್ಯಜಿಸಬಾರದು. ಹಾಗೆಯೇ ಭೋಜನ ಮಾಡಿದ ಮೇಲಾಗಲಿ ಮತ್ತು ಅಶೌಚದ ಸ್ಥಿತಿಯಲ್ಲಾಗಲಿ ಪೂಜೆಯನ್ನು ಬಿಡಬಾರದು. ಇಷ್ಟಲಿಂಗವನ್ನು ಪೂಜಿಸಿದಾಗಲೇ ಶಿವನ ಅನುಗ್ರಹ. ಕಾರಣ ದೇಹದ ಅನುಕೂಲತೆಯಿದ್ದಾಗ ಯಾವುದೇ ಕಾರಣಕ್ಕೂ ಲಿಂಗಪೂಜೆಯನ್ನು ಬಿಡಬಾರದು.

ಶ್ರೀ ಗುರುವು ದೀಕ್ಷೆಯನ್ನು ದಯಪಾಲಿಸುವ ಸಂದರ್ಭದಲ್ಲಿ ಸ್ಥೂಲ ಸೂಕ್ಷ್ಮ ಮತ್ತು ಕಾರಣ ದೇಹಗಳನ್ನು ಪರಿಶೋಧಿಸಿ ಅವುಗಳನ್ನು ತ್ಯಾಗಾಂಗ ಭೋಗಾಂಗ ಮತ್ತು ಯೋಗಾಂಗಗಳನ್ನಾಗಿ ಮಾಡಿ ಪವಿತ್ರಗೊಳಿಸಿರುವುದರಿಂದ ಸ್ತ್ರೀಯರು ರಜಸ್ವಲೆಯಾದ ಸಂದರ್ಭದಲ್ಲಿ ಅಪವಿತ್ರಳಾಗುವುದಿಲ್ಲ. ಆದುದರಿಂದ ಸೂತಕಗಳ ಸಂದರ್ಭದಲ್ಲೂ ಅವಳು ಲಿಂಗಧಾರಣ ಹಾಗೂ ಲಿಂಗಪೂಜೆಗಳನ್ನು ಬಿಡಬಾರದು. ಇದಲ್ಲದೆ 'ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೆ" ಎಂಬುದಾಗಿ ವೇದಗಳಲ್ಲಿ ಇಷ್ಟಲಿಂಗವನ್ನು 'ಪವಿತ್ರ' ಎಂಬ ಹೆಸರಿನಿಂದ ಉಲ್ಲೇಖಿಸಲಾಗಿದೆ. ಲಿಂಗವು ಯಾವುದೇ ಕಾರಣದಿಂದ ಅಪವಿತ್ರವಾಗದೇ ಸದಾ ಸರ್ವದಾ ಪವಿತ್ರವೇ ಆಗಿರುವುದರಿಂದ ಅದನ್ನು ವೇದವು ಪವಿತ್ರವೆಂದು ಹೆಸರಿಸಿದೆ.

ನಿಜವಾದ ಅರ್ಥದಲ್ಲಿ ಪವಿತ್ರವೆಂದರೆ ಯಾವುದು? "ಯಾವುದು ಎಂತಹದೇ ಅಪವಿತ್ರ ಪ್ರಸಂಗವಿದ್ದರೂ, ಅಪವಿತ್ರ ಸ್ಥಾನದಲ್ಲಿದ್ದರೂ, ಅಪವಿತ್ರ ವಸ್ತುಗಳಿಂದ ಸುತ್ತುವರೆಯಲ್ಪಟ್ಟಿದ್ದರೂ ತನ್ನ ಪಾವಿತ್ರ್ಯವನ್ನು ಕಳೆದುಕೊಳ್ಳದೆ ನಿತ್ಯ ಪವಿತ್ರವಾಗಿರುವುದೋ ಅದು ನಿಜಕ್ಕೂ ಪವಿತ್ರವಾದುದು." ಇಂತಹ ಪವಿತ್ರತೆ ಶಿವನಲ್ಲಿ ನೆಲೆಸಿದೆ. ಅಂತೆಯೇ ಶಿವಮಹಿಮೆಯ ಸ್ತೋತ್ರದಲ್ಲಿ –

ಸ್ಮಶಾನೇಷ್ವಾಕ್ರೀಡಾ ಸ್ಮರಹರ ಪಿಶಾಚಾಃ ಸಹಚರಾಃ। ಚಿತಾಭಸ್ಮಾಲೇಪಃ.........
ಅಮಾಂಗಲ್ಯ ಶೀಲಂ ತವ ಭವತು ನಾಮ್ಯೆವಮಖಿಳಂ।
ತಥಾಪಿ ಸ್ಮರ್ತೄಣಾಂ ಪರಮಂ ಮಂಗಲಮಸಿ॥

"ಹೇ ಪರಮಾತ್ಮನೇ! ಸ್ಮಶಾನದಲ್ಲಿ ನಿನ್ನ ವಾಸ, ನಿನ್ನ ಎಲ್ಲ ಲೀಲೆಗಳೂ ಸಹ ಅಲ್ಲಿಯೇ. ಭೂತ ಪಿಶಾಚಿಗಳೇ ನಿನ್ನ ಸಹಚರರು. ದೇಹಕಾಂತಿಯನ್ನು ಹೆಚ್ಚಿಸಿಕೊಳ್ಳಲು ನೀನು ಬಳಸುವ ಸೌಂದರ್ಯವರ್ಧಕ ವಸ್ತುವೆಂದರೆ ಚಿತಾಭಸ್ಮ. ಹೀಗೆ ನೀನು ಬಳಸುವ ಮತ್ತು ನಿನ್ನ ಸುತ್ತಲಿರುವ ವಸ್ತುಗಳೆಲ್ಲ ಅಮಂಗಲವೇ; ಅಪವಿತ್ರವೇ. ಆದರೂ ನೀನು ಮಾತ್ರ ಸದಾ ಪವಿತ್ರನಾಗಿದ್ದು ನಿನ್ನನ್ನು ಸ್ಮರಿಸುವವರಿಗೆ ಮಂಗಲವನ್ನುಂಟು ಮಾಡುವಿ! ಎಂದು ಪುಷ್ಪವಂತನು ಮನೋಹರವಾಗಿ ಶಿವನ ಪಾವಿತ್ರ್ಯವನ್ನು ಬಣ್ಣಿಸಿದ್ದಾನೆ.

ಇಂತಹ ಶಿವನ ನಿರಾಕಾರರೂಪವೇ ಲಿಂಗವಾಗಿರುವುದರಿಂದ ಅದು ಸದಾ ಪವಿತ್ರವೇ ಆಗಿರುತ್ತದೆ. ಯಾವುದೇ ಅಪವಿತ್ರ ಪ್ರಸಂಗಗಳಲ್ಲಿ ಅದು ಅಪವಿತ್ರವಾಗಲಾರದು. ಅದಕ್ಕೆ ಬದಲಾಗಿ ಆ ಅಪವಿತ್ರ ಪ್ರಸಂಗಗಳನ್ನೇ ತನ್ನಲ್ಲಿರುವ ಪಾವಿತ್ರ್ಯತೆಯಿಂದ ಪವಿತ್ರಗೊಳಿಸುತ್ತದೆ. ಆದುದರಿಂದಲೇ ಕಾರಣಾಗಮವು ಸ್ತ್ರೀಯರು ಸೂತಕ ಸಂದರ್ಭಗಳಲ್ಲಿ ಪ್ರಯತ್ನ ಪೂರ್ವಕವಾಗಿ ಲಿಂಗಧಾರಣ ಮತ್ತು ಪೂಜೆಗಳನ್ನು ಮಾಡಬೇಕೆಂದು ತಿಳಿಸಿದೆ.

ದೀಕ್ಷಾಪವಿತ್ರಿತಾಂಗತ್ವಾದ್ ಲಿಂಗಸ್ಪರ್ಶೋ ನ ದುಷ್ಯತೇ।
ರಜೋವತ್ತ್ವಾದಿಕಾಲೇಷು ಕಾರ್ಯಾ ಪೂಜಾ ಪ್ರಯತ್ನತಃ॥ [೨೪]

ಇದೇ ಸಂದರ್ಭದಲ್ಲಿ ಕಾರಣಾಗಮವು ಇನ್ನೊಂದು ಮಾತನ್ನು ಸ್ಪಷ್ಟಪಡಿಸುತ್ತದೆ. ಹೆಣ್ಣು ಮಕ್ಕಳು ಮಗುವಿಗೆ ಜನ್ಮಕೊಡುವ ಸಂದರ್ಭದಲ್ಲಿ ಏನಾದರೂ ತೊಂದರೆಯುಂಟಾಗಿ ಲಿಂಗಪೂಜೆಯನ್ನು ಮಾಡಲು ಅಸಾಧ್ಯವಾದರೆ, ಅದರಿಂದ ಯಾವ ದೋಷ ಉಂಟಾಗಲಾರದೆಂದು ಕೂಡ "ಪ್ರಸವಪ್ರಮುಖಾಪತ್ಸು ಪೂಜಾಭಂಗೋ ನ ದೋಷದ"[೨೫] ಎಂಬ ಉಕ್ತಿಯ ಮೂಲಕ ತಿಳಿಸುತ್ತದೆ.

ಹೀಗೆ ಶಿವಾಗಮಗಳು ಧಾರ್ಮಿಕ ಆಚರಣೆಯನ್ನು ನಿರೂಪಿಸುವ ಸಂದರ್ಭದಲ್ಲಿ ಸ್ತ್ರೀಯರಿಗೆ ಸೂತಕಗಳ ಅಡಚಣೆಯಿಲ್ಲವೆಂದು ಘೋಷಿಸುತ್ತವೆ.

ಸಾಮಾಜಿಕ ಕ್ಷೇತ್ರಗಳಲ್ಲಿ ಮಹಿಳೆ

ಮಹಿಳೆಯರು ಧಾರ್ಮಿಕವಾಗಿ ಎಲ್ಲ ಅಧಿಕಾರ ಹೊಂದಿರುವುದನ್ನು ಹೇಳುವಂತೆ ಸಾಮಾಜಿಕವಾಗಿಯೂ ಅವಳ ಉತ್ಕರ್ಷವನ್ನು ಶಿವಾಗಮಗಳು ಪ್ರತಿಪಾದಿಸುತ್ತವೆ. ವೀರಾಗಮದಲ್ಲಿ ಮಹಿಳೆಯ ಸಾಮಾಜಿಕ ಉತ್ಕರ್ಷಕ್ಕೆ ಸಂಬಂಧಿಸಿದಂತೆ ಕೆಲ ವಿಚಾರಗಳನ್ನು ಚರಿತ್ರಕ ರೂಪದಲ್ಲಿ ತಿಳಿಸಲಾಗಿದೆ.

ಮಣಿಭದ್ರಸ್ಯ ನೃಪತೇಶ್ವರಾಧರ್ಮಸಮನ್ವಿತಾ।
ಅಪಾಂಶುಪಾತಾ ಮತಿವತಿ ಧಮಯಂತೀತಿ ಮಿಶ್ರುತಾ॥
ತಾಂ ರೇಣುಕೋ ಮುನಿಶ್ರೇಷ್ಠೋ ದೀಕ್ಷಾ ಪೂರ್ವಾ ಪುರಾತನೀ।
ಸ ಚಕ್ರೇ ಧುರಿ ನಾರೀಣಾಂ ಕೀರ್ತನೀಯಾಂ ಕರೋತಿ ಹೇ॥ [೨೬]

ವೀರಾಗಮದ ಈ ಮಾತುಗಳನ್ನು ಆಧಾರವಾಗಿ ನೀಡುತ್ತ ಶ್ರೀ ಡಾ॥ ಜ.ಚ.ನಿ.ಯವರು ವೀರಾಗಮದ ಪ್ರಸ್ತಾವನೆಯಲ್ಲಿ "ಮಣಿಭದ್ರ ಮಹಾಭೂಪಾಲನ ಮಹಾರಾಣಿಯಾದ ದಮಯಂತಿಯನ್ನು ಶ್ರೀ ರೇಣುಕ ಭಗವತ್ಪಾದರು ಮಹಿಳೆಯರ ಮಹಾಮಂಡಳಿಯ ಅಧ್ಯಕ್ಷಿಣಿಯನ್ನಾಗಿ ಏರ್ಪಡಿಸಿ ಅನುಗ್ರಹಿಸಿದರು" ಎಂದು ನಿರೂಪಿಸುತ್ತಾರೆ. ರೇಣುಕ ಭಗವತ್ಪಾದರು ಮಹಿಳಾ ಮಂಡಳವನ್ನು ಮಾಡಿ ದಮಯಂತಿಯನ್ನು ಅದರ ಅಧ್ಯಕ್ಷಿಣಿಯನ್ನಾಗಿ ಮಾಡಿದ ಈ ವಿಚಾರ ಮಹಿಳೆಯು ಶಿವಾಗಮಗಳ ಕಾಲದಲ್ಲಿಯೇ ಸಾಮಾಜಿಕವಾಗಿ ಸಂಘಟನೆಗೊಳ್ಳುವತ್ತ ದಾಪುಗಾಲು ಹಾಕಿದ್ದಳೆಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಶಿವಾಗಮಗಳು ಮತ್ತು ಅವುಗಳ ಪ್ರಚಾರವನ್ನು ಗೈದ ರೇಣುಕ ಭಗವತ್ಪಾದರು ಇದಕ್ಕೆ ಪೂರಕವಾಗಿ ಕೆಲಸ ಮಾಡಿದ್ದು ಇದರಿಂದ ತಿಳಿದು ಬರುತ್ತದೆ.

---

೨೪. ಕಾ.ಆ. ಕ್ರಿ ಪಾ. ಪಟಲ ೨, ಶ್ಲೋಕ ಸಂಖ್ಯೆ ೭೭
೨೫. ಕಾ.ಆ. ಕ್ರಿ ಪಾ. ಪಟಲ ೨, ಶ್ಲೋಕ ಸಂಖ್ಯೆ ೭೭
೨೬. ವೀರಾಗಮ ಪ್ರಸ್ಥಾವನೆ ಪುಟ ೮೩, ಜ.ಚ.ನಿ.

ಇನ್ನು ವಚನಕಾಲವನ್ನು ಅವಲೋಕಿಸಲಾಗಿ ಶಿವಶರಣರ ಕಾಲದ ಸ್ತ್ರೀಯು ಕೇವಲ ತನ್ನ ಕೌಟುಂಬಿಕ ಜೀವನಕ್ಕೆ ಅಷ್ಟೇ ಮೀಸಲಾಗಿರದೆ, ಆಕೆ ಸ್ವತಂತ್ರವಾಗಿ ಸಾಮಾಜಿಕ ಜೀವನದ ಸಾರ್ವತ್ರಿಕ ಕಾರ್ಯಕಲಾಪಗಳಲ್ಲಿ ಪುರುಷನ ಸಮವಾಗಿ ಪಾಲುದಾರಳಾಗಬಹುದಿತ್ತು. ಅಕ್ಕ ನಾಗಮ್ಮ, ಬಸವಣ್ಣನವರ ಪತ್ನಿಯರಾದ ಗಂಗಾಂಬಿಕಾ ಮತ್ತು ನೀಲಾಂಬಿಕೆಯರು ಅಂದಿನ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಕ್ರಾಂತಿಗೆ ಆಧಾರ ಸ್ತಂಭಗಳಾಗಿ ನಿಂತರು. ಹಾಗೂ ಆಯ್ದಕ್ಕಿ ಮಾರಯ್ಯನ ಸತಿ 'ಲಕ್ಕಮ್ಮ', ಹರಳಯ್ಯನ ಸತಿ 'ಕಲ್ಯಾಣಿ', ಉರಿಲಿಂಗಪೆದ್ದಿಯ ಸತಿ 'ಕಾಳವ್ವೆ' ಯಂಥವರು ಮಹಾಜ್ಞಾನಿಗಳಾಗಿ ಪತಿಗೆ ಪ್ರೇರಣೆ ಮತ್ತು ಉನ್ನತ ಸಲಹೆ ನೀಡಿ ಸ್ತ್ರೀ ಕುಲಕ್ಕೆ ಒಂದು ಒಳ್ಳೆಯ ಗೌರವವನ್ನು ತಂದುಕೊಟ್ಟಿದ್ದಾರೆ.

ಒಟ್ಟಿನಲ್ಲಿ ಶಿವಾಗಮಗಳು ಮಹಿಳೆಯ ವಿಷಯದಲ್ಲಿ ಸಕಾರಾತ್ಮಕವಾದ ಹಾಗೂ ಪ್ರೇರಣಾತ್ಮಕವಾದ ಧೋರಣೆಯನ್ನು ತಾಳಿವೆ. ಗಂಡು ಹೆಣ್ಣು ಎಂಬುದು ಅವರವರ ಕರ್ಮಾನುಸಾರವಾಗಿ ಬಂದ ಭೌತಿಕ ರೂಪ (ದೇಹ). ಕಾರಣ ಆತ್ಮಸಾಕ್ಷಾತ್ಕಾರಕ್ಕೆ ಗಂಡು ಹೆಣ್ಣುಗಳೆಂದು ಭೇದವಿಲ್ಲವೆಂದು ತಿಳಿಸಿ, ಸ್ತ್ರೀಯರೂ ಸಹ ಪುರುಷರಂತೆ ಅಷ್ಟಾವರಣ ಪಂಚಾಚಾರಗಳ ಆಚರಣೆಗಳಿಂದ ಷಟಸ್ಥಲಮಾರ್ಗಗಳನ್ನು ಅನುಸರಿಸಿ ಪಾರಮಾರ್ಥಿಕ ಸಂಪತ್ತನ್ನು ಸಂಪಾದಿಸಬಹುದೆಂದು ಸಾರಿವೆ. ಅಲ್ಲದೇ ದೀಕ್ಷೆಯನ್ನು ಹೊಂದಿ ಲಿಂಗಧಾರಿಗಳಾಗಿರುವುದರಿಂದ ಸ್ತ್ರೀಯರಿಗೆ ಸೂತಕಗಳ ಅಡಚಣೆಯಿಲ್ಲವೆಂದು ಘೋಷಿಸುತ್ತವೆ. ಮಹಿಳೆಗೆ ಧಾರ್ಮಿಕವಾಗಿ ಅಷ್ಟೇ ಅಲ್ಲದೇ ಸಾಮಾಜಿಕವಾಗಿ ಪ್ರಾಧಾನ್ಯತೆಯನ್ನು ನೀಡಿ ಮಹಿಳಾಪರ ಚಿಂತನೆಗೈದಿವೆ. ಶಿವಾಗಮಗಳಲ್ಲಿಯ ಈ ಸ್ತ್ರೀಪರವಾದ ವೈಚಾರಿಕ ಧೋರಣೆಯೇ ವಚನಕಾರರ ಮಹಿಳಾ ಸಮಾನತಾಂದೋಲನಕ್ಕೆ ಪ್ರೇರಕವಾಗಿದೆ.

***

ಅಧ್ಯಾಯ – ೮

ಸಮಾರೋಪ

ಭಾರತೀಯ ಸಂಸ್ಕೃತಿ ಹಾಗೂ ತತ್ವಶಾಸ್ತ್ರದ ಪ್ರಾಚೀನ ಗ್ರಂಥಗಳಾದ ಶಿವಾಗಮಗಳನ್ನು ಮತ್ತು ಕನ್ನಡ ಸಾಹಿತ್ಯದ ಜೀವರತ್ನಗಳಾದ ವಚನ ಸಾಹಿತ್ಯವನ್ನು ವೀರಶೈವ ಧರ್ಮದ ಹಿನ್ನಲೆಯಲ್ಲಿ ದಾರ್ಶನಿಕವಾಗಿ, ಧಾರ್ಮಿಕವಾಗಿ, ತಾತ್ವಿಕವಾಗಿ ಹಾಗೂ ಸಾಮಾಜಿಕವಾಗಿ ಅಧ್ಯಯನ ಕೈಕೊಂಡ ಈ ಮಹಾಪ್ರಬಂಧದಲ್ಲಿ ಅಭಿವ್ಯಕ್ತವಾದ ಮುಖ್ಯಾಂಶಗಳನ್ನು ಈ ಬಗೆಯಾಗಿ ಸಂಕ್ಷೇಪಿಸಬಹುದು.

ಶಿವಾಗಮಗಳು ಪ್ರಗತಿಪರ ಸಾಹಿತ್ಯವಾಗಿದ್ದು, ತಮ್ಮ ಸತ್ವಪೂರ್ಣವಾದ ಮೌಲಿಕ ವಿಚಾರಗಳಿಂದ ಶತಶತಮಾನಗಳಿಂದ ಪರಿಷ್ಕೃತವಾಗಿ ಸಾಗಿಬಂದ ಜ್ಞಾನರಾಶಿಗಳಾಗಿವೆ. ಕಾಮಿಕಾದಿ ವಾತುಲಾಂತ ೨೮ ಶಿವಾಗಮಗಳು ದಿವ್ಯಾಗಮಗಳೆಂದೂ, ಸಿದ್ಧಾಂತಾಗಮಗಳೆಂದೂ ಸುಪ್ರಸಿದ್ಧವಾಗಿವೆ. ವೀರಶೈವ ಕೌಸ್ತುಭದಲ್ಲಿ ೨೮ ಶಿವಾಗಮಗಳಿಗೆ ೩೦೮ ಉಪಾಗಮಗಳಿರುವುದನ್ನು ಉಲ್ಲೇಖಿಸಲಾಗಿದೆ. ಇದರಿಂದ ಶಿವಾಗಮ ಸಾಹಿತ್ಯದ ವ್ಯಾಪ್ತಿ ಹಾಗೂ ಗಾತ್ರಗಳ ಕಲ್ಪನೆ ಉಂಟಾಗುತ್ತದೆ. ಆದರೆ ಶಿವಾಗಮಗಳ ಪ್ರತಿಗಳನ್ನು ವೇದಗಳಷ್ಟು ಶ್ರದ್ಧೆಯಿಂದ ಸಂರಕ್ಷಣೆ ಮಾಡಿಕೊಂಡು ಬರುವುದಾಗಲಿಲ್ಲ. ಹಾಗಾಗಿ ಕೆಲವು ಮೂಲ ಆಗಮಗಳು ಮತ್ತು ಉಪಾಗಮಗಳು ಉಪಲಬ್ಧವಾಗಿವೆ. ಅವು ಕೂಡಾ ಸಮಗ್ರವಾಗಿ ದೊರೆಯುವುದಿಲ್ಲ.

ಶಿವಾಗಮಗಳಲ್ಲಿಯ ವಿಷಯ ವಿಭಾಗವು ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಮತ್ತು ಜ್ಞಾನಪಾದವೆಂಬ ವ್ಯವಸ್ಥೆಯನ್ನು ಆಧರಿಸಿದೆ. ಶಿವಾಗಮಗಳಲ್ಲಿ ಶೈವ, ವೀರಶೈವ ಎರಡೂ ಸಂಸ್ಕೃತಿಗಳ ವಿಚಾರಧಾರೆಯನ್ನು ಕಾಣುತ್ತೇವೆ. ಪೂರ್ವಭಾಗದಲ್ಲಿ ದೇವಾಲಯದ ಸಂಸ್ಕೃತಿ, ಉತ್ತರ ಭಾಗದಲ್ಲಿ ಇಷ್ಟಲಿಂಗ ಸಂಸ್ಕೃತಿಗಳನ್ನು ಕಾಣುತ್ತೇವೆ.

ಶಿವಾಗಮಗಳ ರಚನಾ ಕಾಲವನ್ನು ಭಾಷೆಯ ದೃಷ್ಟಿಯಿಂದ ಅವಲೋಕಿಸಲಾಗಿ ಪಾಣಿನಿಯ (ಕ್ರಿ. ಪೂ ೭೦೦) ಅನಂತರದ ಕಾಲಕ್ಕೆ ಸೇರಿದವುಗಳು. ಆದರೆ ಕ್ರಿ ಪೂ ೨೦೦ ಕ್ಕೆ ಸೇರಿದ್ದವೆಂದು ತಿಳಿದ ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟ ಪಾಂಚರಾತ್ರಗಮೋಕ್ತ ಪೂಜಾ ಪದ್ಧತಿ ಆಗಮಾರಂಭ ಕಾಲವನ್ನು ಸೂಚಿಸುತ್ತದೆ. ಅಲ್ಲದೇ ಪಾಂಚರಾತ್ರಾಗಮಗಳಲ್ಲಿ ಶಿವಾಗಮಗಳ ಪ್ರಸ್ತಾಪವಿರುವದು. ಆದರೆ ವೈಷ್ಣವಾಗಮಗಳ ಉಲ್ಲೇಖವು ಶಿವಾಗಮಗಳಲ್ಲಿ ಇಲ್ಲದಿರುವುದರಿಂದ ಶಿವಾಗಮಗಳು ವೈಷ್ಣವಾಗಮಗಳಿಗಿಂತ ಹಿಂದಿನವು ಎಂಬ ಅಭಿಪ್ರಾಯವಿದೆ. ಆದರೆ ೨೮ ಶಿವಾಗಮಗಳು ಏಕಕಾಲದಲ್ಲಿ ರಚಿತವಾದವು ಎಂದು ಹೇಳಲು ಸಾಧ್ಯವಿಲ್ಲ. ಶ್ರೀಕರಭಾಷ್ಯ, ಸಿದ್ಧಾಂತಶಿಖಾಮಣಿ ಹಾಗೂ ವಚನ ಸಾಹಿತ್ಯದ ಆಧಾರದಿಂದ ಶಿವಾಗಮಗಳ

ಉತ್ತರ ಭಾಗಗಳ ಸೀಮೆಯನ್ನು ಕ್ರಿ.ಶ. ೮ನೇ ಶತಮಾನವೆಂದು ಇಟ್ಟುಕೊಳ್ಳಬಹುದು.

ಶಿವಾಗಮಗಳಲ್ಲಿ ಶಿವನನ್ನೇ ಉಪದೇಶಕನನ್ನಾಗಿ ಮಾಡಿ ಪಾರ್ವತಿ ಸ್ಕಂದರು ಶ್ರೋತೃಗಳಾಗಿದ್ದಾರೆ. ಆದರೆ ಶಿವಾಗಮಗಳಲ್ಲಿ ಬರುವ ಶಿವನು ಪಾರ್ವತಿಗೆ, ಕುಮಾರನಿಗೆ ಬೋಧಿಸಿದ ವಿಚಾರವನ್ನು ತಾತ್ವಿಕ ಸಂಕೇತವೆಂದು ಭಾವಿಸಬೇಕು. ಏಕೆಂದರೆ ಇದು ಶಿವಾಗಮಗಳ ಪೌರಾಣಿಕ ನಿರೂಪಣಾ ಶೈಲಿಯಾಗಿದೆಯೇ ಹೊರತು ಇಲ್ಲಿ ಪ್ರಾಧಾನ್ಯವಿರುವದು ಪರಮಾತ್ಮನ ಆಧ್ಯಾತ್ಮಿಕ ಸ್ವರೂಪ ನಿರೂಪಣೆಗೆ. ಶಿವಾಗಮಗಳಲ್ಲಿ ಇಂಥ ಅನೇಕ ಸಂಕೇತಗಳಿವೆ. ಅವುಗಳಿಗೆ ವಿಶಿಷ್ಟವಾದ ಅರ್ಥಗಳಿವೆ.

ಇನ್ನು ಶಿವಾಗಮಗಳು ಮತ್ತು ವಚನ ಸಾಹಿತ್ಯದ ತೌಲನಿಕ ಅಧ್ಯಯನವನ್ನು ಈ ಬಗೆಯಾಗಿ ವಿಶ್ಲೇಷಿಸಬಹುದು–

ಶಿವಾಗಮಗಳು ಮತ್ತು ವಚನ ಸಾಹಿತ್ಯದಲ್ಲಿಯ ಸಾಮ್ಯತೆಯ ವಿಚಾರಗಳು

ಸೃಷ್ಟಿಯ ಉಗಮ

- ಶಿವತತ್ವವೊಂದೇ ಶಾಶ್ವತವಾದದ್ದು ಸರ್ವ ಶಕ್ತವಾದದ್ದು. ಅದರಿಂದ ಜಗತ್ತುಗಳು ಹುಟ್ಟುತ್ತವೆ, ಜೀವಿಗಳು ಮೈತಾಳುತ್ತವೆ; ಮತ್ತೆ ಅಲ್ಲಿಯೇ ಅಡಗುತ್ತವೆ;
- ಈ ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಇಂದ್ರ, ಬ್ರಹ್ಮ, ವಿಶ್ವ, ನಕ್ಷತ್ರ ಮುಂತಾದವುಗಳು ಯಾವುದೂ ಇಲ್ಲದ ಮುನ್ನ ಪರಶಿವನು ಸರ್ವಶೂನ್ಯ ನಿರಾಲಂಬ ಸ್ಥಿತಿಯಲ್ಲಿದ್ದ.
- ಪರಶಿವನು ಶೂನ್ಯ–ಮಹಾಶೂನ್ಯ ಸ್ವರೂಪನು.
- ಪರಮೇಶ್ವರನು ಸ್ವಲೀಲೆಯಿಂದ ಜಗತ್ತುಗಳಿಗೆಲ್ಲ ಕಾರಣವಾದ ತತ್ವಗಳನ್ನು ಸೃಷ್ಟಿ ಮಾಡಬೇಕೆಂಬ ಸಂಕಲ್ಪ ಹೊಂದಲು, ಆ ಧ್ಯಾನದಿಂದ ಅವನಲ್ಲಿ ಅವಿನಾಭಾವ ಸಂಬಂಧದಿಂದಿದ್ದ ಶಕ್ತಿಯು ಸ್ಪಂದವಾಗಿ ಅದರಿಂದ ವಿವಿಧ ಶಕ್ತಿಗಳ ಉಗಮವಾಯಿತು ಮತ್ತು ಅವುಗಳಿಂದ ವೈವಿಧ್ಯಮಯ ಸೃಷ್ಟಿಯ ಆರಂಭವಾಯಿತು.
- ಶಿವ–ಶಕ್ತಿಯ ಮಿಲನದಿಂದ ಶಿವ ಸಾದಾಖ್ಯ, ಅಮೂರ್ತ ಸಾದಾಖ್ಯ, ಮೂರ್ತ ಸಾದಾಖ್ಯ, ಕರ್ತೃ ಸಾದಾಖ್ಯ ಹಾಗೂ ಕರ್ಮ ಸಾದಾಖ್ಯ ಎಂಬ ಐದು ಸಾದಾಖ್ಯ ತತ್ತ್ವಗಳು ಉತ್ಪತ್ತಿಯಾದವು. ಈ ಐದು ಸಾದಾಖ್ಯಗಳು ನಿವೃತ್ತಿಕಲಾ, ಪ್ರತಿಷ್ಠಾಕಲಾ, ವಿದ್ಯಾಕಲಾ, ಶಾಂತಿಕಲಾ ಮತ್ತು ಶಾಂತ್ಯತೀತಕಲಾ ಎಂಬ ಐದು ಕಲೆಗಳಿಂದ ಯುಕ್ತವಾಗಿವೆ.
- ಭೌತಪ್ರಪಂಚ ಮತ್ತು ಚೇತನಾತ್ಮಕವಾದ ಜೀವರುಗಳು, ಈ ಎಲ್ಲವನ್ನೂ ಮಹಾಕರ್ತ ತನ್ನ ಶಕ್ತಿಯ ವಿನೋದಕ್ಕೆ ಸೃಷ್ಟಿಸಿದ್ದಾನೆ.

- ಪರಮಾತ್ಮನು ಮೂವತ್ತಾರು ತತ್ತ್ವಗಳಿಂದಾದ ಜಗತ್ತಿನ ರೂಪದಲ್ಲಿ ಪರಿಣಮಿಸುವನು.
- ಶಕ್ತಿಯು ಅವ್ಯಕ್ತವಾಗಿ ಶಿವನಲ್ಲಿ ಒಂದಾಗಿದ್ದರೆ ಆ ಸ್ಥಿತಿಗೆ ಪ್ರಳಯವೆಂತಲೂ, ಅದೇ ಶಕ್ತಿ ವ್ಯಕ್ತವಾಗಿ ವಿಕಾಸವಾದರೆ ಸೃಷ್ಟಿಯೆಂತಲೂ ಹೆಸರು. ಈ ವಿಕಸನ ಮತ್ತು ಆಕುಂಚನಗಳು ನಿರಂತರವಾಗಿ ನಡೆಯುವ ಕ್ರಿಯೆಗಳು.

ಶಿವ–ಜೀವ–ಶಕ್ತಿ (ಪಶು–ಪತಿ–ಪಾಶತತ್ವ)

- ಪರಶಿವನು ಸತ್–ಚಿತ್–ಆನಂದ ಸ್ವರೂಪನು, ನಿತ್ಯ–ನಿರಂಜನ–ಶುದ್ಧ–ನಿರ್ಮಲನು, ಕ್ಲೇಶರಹಿತನು, ನಿರ್ಗುಣನು, ನಿತ್ಯಪರಿಪೂರ್ಣನು, ಮಾಯಾರಹಿತನು, ಉಪಾಧಿರಹಿತನು, ಶರೀರವಿಲ್ಲದವನು, ಏಕೈಕನು, ಪರಂಜ್ಯೋತಿ ಸ್ವರೂಪನು, ಸನಾತನನು, ಶಾಶ್ವತನು ವಿಶ್ವಾಧಿಪತಿಯಾಗಿದ್ದಾನೆ.
- ಲಿಂಗವೇ ಪರಶಿವಬ್ರಹ್ಮ.
- ಜೀವಾತ್ಮ–ಪರಮಾತ್ಮರಲ್ಲಿ ಭೇದವಿಲ್ಲ. ಪರಮಾತ್ಮನೇ ಜೀವತ್ವವನ್ನು, ಅನೇಕತ್ವವನ್ನೂ ಹೊಂದುತ್ತಾನೆ.
- ಪರಶಿವನು ಸಕಲ ಪದಾರ್ಥಗಳಲ್ಲಿ, ಸಕಲ ಜೀವಿಗಳಲ್ಲಿ ಚೈತನ್ಯಾತ್ಮಕವಾಗಿ ವ್ಯಾಪಿಸಿದ್ದರೂ ಅವೆಲ್ಲಕ್ಕೂ ಅತೀತನಾಗಿ ವಿಶ್ವದ ಗುಣಗಳನ್ನು ಹೊದ್ದದಂತಿರುತ್ತಾನೆ.
- ಮಾಯೆಯಿಂದ ಮೋಹಿತನಾದ ಜೀವನು ತನ್ನನ್ನು ಬೇರೆಯಾಗಿ ನೋಡುತ್ತಾನೆ.
- ವಿಷಯಗಳಿಂದ ಬಂಧಿತರಾದ ಜೀವಿಗಳು ವಿಷಯೋಪಭೋಗಗಳನ್ನು ತ್ಯಜಿಸಲು ಅಸಮರ್ಥರಾಗಿರುವರು. ಅವಿದ್ಯಾಮೋಹದ ಪ್ರಭಾವದಿಂದ ಜೀವರು ದುಃಖಭಾಜನರಾಗುತ್ತಾರೆ.
- ಭಕ್ತಿಯೇ ಮುಕ್ತಿಯ ಸಾಧನ.
- ಭವಪಾಶದಿಂದ ಬೇಸತ್ತು ಅದರಿಂದ ಮುಕ್ತಿಯನ್ನು ಬಯಸಿ ಶ್ರೀಗುರುವಿನ ಬಳಿ ಭಕ್ತಿಯಿಂದ ಶರಣಾಗತನಾಗಿ ಬಂದ ಜೀವನಿಗೆ ಶ್ರೀಗುರುವು ತ್ರಿವಿಧ ದೀಕ್ಷೆಯನ್ನು ಅನುಗ್ರಹಿಸಿ, ಅಷ್ಟಾವರಣ ಸಂಪನ್ನವೂ, ಪಂಚಾಚಾರ ವಿಶಿಷ್ಟವೂ ಆದ ಷಟ್‌ಸ್ಥಲಾತ್ಮಕ ಸಾಧನ ಮಾರ್ಗವನ್ನು ಬೋಧಿಸುವನು. ಆ ಮಾರ್ಗದರ್ಶನದಂತೆ ಮುನ್ನಡೆದ ಸಾಧಕನು ಭಕ್ತಿಮಾರ್ಗದಲ್ಲಿ ಮುನ್ನಡೆದು ಶಿವಯೋಗದ ಮೂಲಕ ಮುಕ್ತಿಯನ್ನು ಹೊಂದುವನು.
- ಶಿವನ ವಿಶ್ವಲೀಲೆಯ ಅಂಗವಾಗಿ ಶಕ್ತಿಯೇ ಅವಿದ್ಯಾಮಾಯೆಯಾಗಿ ಜೀವರನ್ನು ಸಂಸಾರಿಗಳಾಗುವಂತೆ ಮಾಡಿ ಸುಖ–ದುಃಖಗಳ ಅನುಭವಕ್ಕೆ ಪಕ್ಕಾಗಿಸಿದರೆ, ಭಕ್ತಿಯಾಗಿ ಮುಮುಕ್ಷುಗಳಾದ ಜೀವರನ್ನು ಮುಕ್ತಿಯೆಡೆಗೆ ಕೊಂಡೊಯ್ಯುತ್ತಾಳೆ.

ದೈನಂದಿನ ಆಚರಣೆಗಳು

- ವೀರಶೈವನು ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಇಷ್ಟಲಿಂಗವನ್ನು ಕಣ್ಣುಗಳಿಗೆ ಸ್ಪರ್ಶಿಸಿ ಶಿವನಾಮ ಸ್ಮರಣೆಗೈಯಬೇಕು.
- ದೈನಂದಿನ ಆಚರಣೆಗಳು ಡಾಂಬಿಕ ಆಚರಣೆಗಳಾಗದೇ ನಿರಪೇಕ್ಷ ಹಾಗೂ ಸದ್ಧೃಢಭಕ್ತಿಯಿಂದ ಕೂಡಿದ ಆಚರಣೆಗಳಾಗಿರಬೇಕು.

ದೀಕ್ಷಾ ಸಂಸ್ಕಾರ

- ಜೀವಭಾವವಳಿದು ಶಿವಭಾವ ಸಮಾವೇಶಗೊಳ್ಳಲು ಶಿವದೀಕ್ಷೆ ಅತ್ಯಗತ್ಯ.
- ಕುಲ-ಜಾತಿ-ಲಿಂಗಗಳ ತಾರತಮ್ಯವಿಲ್ಲದೆ ಸರ್ವರೂ ಪವಿತ್ರವಾದ ದೀಕ್ಷಾಸಂಸ್ಕಾರವನ್ನು ಪಡೆಯಬಹುದು. ಆದರೆ ಅಮೂಲ್ಯವಾದ ದೀಕ್ಷಾ ಸಂಸ್ಕಾರವನ್ನು ದುರಾಚಾರಿಗೆ, ಅಳಿಮನದವನಿಗೆ, ಸದ್ಗುಣ ಹೀನನಿಗೆ ನೀಡಕೂಡದು.
- ವೀರಶೈವ ದೀಕ್ಷಾಸಂಸ್ಕಾರವು ಕ್ರಿಯಾದೀಕ್ಷೆ, ವೇಧಾದೀಕ್ಷೆ, ಮಂತ್ರದೀಕ್ಷೆ ಎಂಬ ಮೂರು ವಿಧವಾದ ದೀಕ್ಷೆಯನ್ನು ಒಳಗೊಂಡಿದ್ದು, ಶಿವದೀಕ್ಷೆಯ ಅಂಗವಾಗಿ ಷಡಧ್ವಶುದ್ಧಿಯಿಂದ ಸಂಸ್ಕರಿಸಿದ ಲಿಂಗವನ್ನು ಶಿಷ್ಯನ ಹಸ್ತದಲ್ಲಿ ಸ್ಥಾಪಿಸುವುದು **'ಕ್ರಿಯಾದೀಕ್ಷೆ'**. ಕಾರುಣ್ಯನಿಧಿಯಾದ ಪರಮಗುರುವು ಶಿಷ್ಯನನ್ನು ಕೃಪಾದೃಷ್ಟಿಯಿಂದ ನೋಡಿ, ಆತನ ಮಸ್ತಕದ ಮೇಲೆ ಹಸ್ತವನ್ನಿಟ್ಟು, ಆತನಲ್ಲಿ ಶಿವಕಲೆಯನ್ನು ಜಾಗೃತಗೊಳಿಸಿ, ಕಾರಣ ತನುವಿನಲ್ಲಿ ಭಾವಲಿಂಗವನ್ನು ನೆಲೆಗೊಳಿಸುವುದು **'ವೇಧಾದೀಕ್ಷೆ'**. ಮಂತ್ರಗಳಲ್ಲಿ ಅತ್ಯಂತ ಶ್ರೇಷ್ಠವೂ ಪರಮಪವಿತ್ರವೂ ಆದ ಪಂಚಾಕ್ಷರೀ ಮಹಾಮಂತ್ರವನ್ನು ಶ್ರೀಗುರುವು ಶಿಷ್ಯನಿಗುಪದೇಶಿಸಿ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಮಾರ್ಪಡಿಸಿ, ಪ್ರಾಣಲಿಂಗವನ್ನು ಸೂಕ್ಷ್ಮದೇಹದಲ್ಲಿ ನೆಲೆಗೊಳಿಸುವ ವಿಧಾನವೇ **'ಮಂತ್ರದೀಕ್ಷೆ'** ಯಾಗಿದೆ. ಕ್ರಿಯಾದೀಕ್ಷೆಯಲ್ಲಿ ಸ್ಥೂಲತನುವಿನ ಕಾರ್ಮಿಕ ಮಲವಳಿದು ಇಷ್ಟಲಿಂಗ ಸಂಬಂಧ, ವೇಧಾದೀಕ್ಷೆಯಲ್ಲಿ ಕಾರಣ ತನುವಿನ ಆಣವ ಮಲವಳಿದು ಭಾವಲಿಂಗ ಸಂಬಂಧ, ಮಂತ್ರದೀಕ್ಷೆಯಲ್ಲಿ ಸೂಕ್ಮತನುವಿನ ಮಾಯೀಯ ಮಲವಳಿದು ಪ್ರಾಣಲಿಂಗ ಸಂಬಂಧವಾಗುವದು. ಈ ತ್ರಿವಿಧ ದೀಕ್ಷೆಗಳಲ್ಲಿ ಪ್ರತಿಯೊಂದೂ ಏಳೇಳು ದೀಕ್ಷೆಗಳನ್ನು ಒಳಗೊಂಡಿದ್ದು, ಈ ಇಪ್ಪತ್ತೊಂದು ದೀಕ್ಷೆಗಳು ಭಕ್ತಿ-ಜ್ಞಾನ-ಕ್ರಿಯಾಸಮನ್ವಯವನ್ನು ಹೊಂದಿವೆ.

ಶಿವಮೇಧ ವಿಧಿ (ಅಂತ್ಯೇಷ್ಟಿವಿಧಿ)

- ಶಿವಲಿಂಗಧಾರಿಗಳಾದವರು ಗೃಹಸ್ಥರಾಗಿರಲಿ, ಯತಿಗಳಾಗಿರಲಿ ಅವರು ಪುನರಾವೃತ್ತಿ ರಹಿತರಾದ್ದರಿಂದ ಖನನ (ಸಮಾಧಿ) ಮಾಡಬೇಕೇ ಹೊರತು ದಹನ ಮಾಡಬಾರದು.
- ಉತ್ಕ್ರಮಣೇಚ್ಛನಾದ ಮನುಷ್ಯನು ತನಗೆ ಮರಣ ಸಮೀಪಿಸುತ್ತಿರುವುದನ್ನು

ತಿಳಿದು ದೇಹ, ಪುತ್ರ, ಧನಾದಿ ವ್ಯಾಮೋಹರೂಪ ಲೌಕಿಕ ದೃಷ್ಟಿಯನ್ನು ಬಿಟ್ಟು, ಭೋಗದ ಆಶೆಯನ್ನು ತ್ಯಜಿಸಿ ನಿರಂತರವಾದ ಪ್ರಣವಪಂಚಾಕ್ಷರ ಜಪಮಾಡುತ್ತಾ ಮನಸ್ಸನ್ನು ಪರಶಿವನಲ್ಲಿ ನೆಲೆಗೊಳಿಸಬೇಕು. ನಂತರ ಭಕ್ತಿಯ ಲೋಪದಿಂದ ಉಂಟಾಗಿರಬಹುದಾದ ದೋಷಗಳ ನಿವೃತ್ತಿಗಾಗಿ ಹಾಗೂ ಶಿವಸಾಯುಜ್ಯವನ್ನು ಪಡೆಯಲು ಗುರು–ಜಂಗಮರನ್ನು ಪೂಜಿಸಿ ಅವರ ಪಾದೋದಕವನ್ನು ಸ್ವೀಕಾರ ಮಾಡಬೇಕು. ತದನಂತರ ಶಿವನಾಮವನ್ನು ಪಠಿಸುತ್ತಾ ತನ್ನ ಸರ್ವೇಂದ್ರಿಯಗಳಲ್ಲಿ ಮಹಾಲಿಂಗವನ್ನು ಭಾವಿಸಿಕೊಂಡು ಪರಶಿವನಲ್ಲಿ ಲೀನವಾಗುವುದಕ್ಕಾಗಿ 'ಪ್ರಾಯೋಪವೇಶ' ಎಂಬ ವ್ರತವನ್ನು ಕೈಗೊಳ್ಳಬೇಕು.

ಗುರು

- ಶಿವಜ್ಞಾನದ ಬೆಳಕಿನಿಂದ ಶಿಷ್ಯನ ಮೋಹಾಂಧಕಾರವನ್ನು ತೊಲಗಿಸುವ ಜ್ಞಾನ ಭಾಸ್ಕರನೇ 'ಗುರು'
- ಗುರುವನ್ನು ಸಾಕ್ಷಾತ್ ಪರಬ್ರಹ್ಮಸ್ವರೂಪನೆಂದು ಭಾವಿಸಬೇಕಲ್ಲದೆ, ಬೇರೆ ರೀತಿಯಾಗಿ ಭಾವಿಸಬಾರದು.
- ಹರನಿಗಿಂತ ಗುರು ಅಧಿಕ
- ಎಲ್ಲ ಆಧ್ಯಾತ್ಮಿಕ ಸಾಧನೆ ಸಿದ್ಧಿಗೆ ಗುರುವೇ ಮೂಲ
- ಯಾರ ಸಂಪರ್ಕದಿಂದ ಅರಿವಿನ ಆನಂದವು ಉಂಟಾಗುವುದೋ ಹಾಗೂ ಯಾರ ಬುದ್ಧಿಯು ತತ್ವದಲ್ಲಿ ನೆಲೆಗೊಂಡಿದ್ದು ಅದರ ಸಾಕ್ಷಾತ್ಕಾರ ಹೊಂದುವ ಸಾಮರ್ಥ ಹೊಂದಿದೆಯೋ ಅವರೇ ನಿಜವಾದ ಗುರು.
- ಶಿಷ್ಯನಿಗೆ ಗುರುವು ದೀಕ್ಷೆಯನ್ನು ಕೊಡಲು ಮನಸ್ಸು ಮಾಡಿದರೆ, ಆ ಶಿಷ್ಯನನ್ನು ಪರೀಕ್ಷಿಸಿಯೇ ಅವನಿಗೆ ದೀಕ್ಷೆಯನ್ನು ಕೊಡಬೇಕು.
- ತನು, ಮನ, ಪ್ರಾಣಕ್ಕೆ ಸಂಸ್ಕಾರಗೈಯುವುದರ ಮೂಲಕ ದೀಕ್ಷೆಯನ್ನು, ಶಿಕ್ಷಣವನ್ನು ಮತ್ತು ಜ್ಞಾನವನ್ನು ನೀಡುವ ದೃಷ್ಟಿಯಿಂದ ಗುರುವಿನಲ್ಲಿಯೂ ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಗುರುವೆಂದು ಮೂರು ಹಂತಗಳನ್ನು ಮಾಡಲಾಗಿದೆ. ಒಬ್ಬರಿಂದಲೂ ಈ ಮೂರು ಕ್ರಿಯೆಗಳೂ ನಡೆಯಬಹುದು.
- ಆತ್ಮೋನ್ನತಿಗೆ ಕಾರಣವಾಗಬಲ್ಲ ಒಬ್ಬ ಗುರುವನ್ನೇ ಶಿಷ್ಯನ ಕುಟುಂಬದವರೆಲ್ಲ ಆಶ್ರಯಿಸಬೇಕು.

ಲಿಂಗ

- ಸಕಲ ಚರಾಚರ ಜಗತ್ತು ಲಿಂಗದಲ್ಲಿಯೇ ಅಡಕವಾಗಿದ್ದು, ಲಿಂಗದಿಂದಲೇ ಸಕಲ ದೇವಾನುದೇವತೆಗಳ ಸೃಷ್ಟಿಯಾಯಿತು.

- ನಿಷ್ಕಲ, ನಿರವದ್ಯ, ಶಾಂತ, ನಿರಂಜನ ಸ್ವರೂಪದ ಮಹಾಲಿಂಗವು ಸತ್-ಚಿತ್-ಆನಂದ ಸ್ವರೂಪವಾಗಿದ್ದು ಆ ಮಹಾಲಿಂಗವೇ ಸುಜನರ ಅನುಗ್ರಹಕ್ಕಾಗಿ, ಸಾಧಕರ ಉಪಾಸನೆಗಾಗಿ ಸ್ವಮಾಯೆಯಿಂದ ಭಾವಲಿಂಗ, ಪ್ರಾಣಲಿಂಗ, ಮತ್ತು ಇಷ್ಟಲಿಂಗವೆಂದು ಮೂರು ವಿಧವಾಯಿತು.
- ಭಾವಲಿಂಗವು ನಿಷ್ಕಲವಾಗಿದೆ. ಅದು ಕೇವಲ ಭಾವಗೋಚರ. ಅದೇ ಪರಾತ್ಪರ ಲಿಂಗ. ಪ್ರಾಣಲಿಂಗವು ಸಕಲ-ನಿಷ್ಕಲ. ಅದು ಮನೋಗೋಚರ. ಇಷ್ಟಲಿಂಗವು ಸಕಲ. ಕಣ್ಣಿಗೆ ಗೋಚರ. ಅದು ಇಷ್ಟಸಿದ್ಧಿಯನ್ನು ಕೊಡುವಂತಹದು ಮತ್ತು ಅನಿಷ್ಟವಾದುದನ್ನು ಪರಿಹರಿಸುವಂತಹುದು.
- ಮೂಲತಃ ಲಿಂಗಗಳು ಮೂರಾದರೂ ಅವೆಲ್ಲ ಒಂದೇ ಮಹಾಲಿಂಗದ ಮೂರು ರೂಪಗಳು. ಇಷ್ಟಲಿಂಗವನ್ನು ಪೂಜೆಗೈಯುತ್ತ ಭಾವಲಿಂಗ ಮತ್ತು ಪ್ರಾಣಲಿಂಗವನ್ನು ಅರ್ಚಿಸಬೇಕು. ಇದು ದ್ವೈತದಿಂದ ಅದ್ವೈತದೆಡೆಗೆ ಸಾಗುವ ಸಾಧನಾ ಪಥವಾಗಿದೆ. ಕಾರಣ ಮೂರು ವಿಧವಾದ ಲಿಂಗಗಳನ್ನು ಏಕಸೂತ್ರಾನುಸಂಧಾನದಿಂದ ಪೂಜಿಸಬೇಕು.
- ಪ್ರಾಣಲಿಂಗ ಮತ್ತು ಭಾವಲಿಂಗಗಳ ಸ್ವರೂಪ ಸಾಕ್ಷಾತ್ಕಾರಕ್ಕಾಗಿ ಇಷ್ಟಲಿಂಗದ ಪೂಜೆ-ಧ್ಯಾನಗಳನ್ನು ಅತೀ ಅವಶ್ಯವಾಗಿ ಮಾಡಬೇಕು.
- ಆದ್ಯಂತರಹಿತನಾದ ಪರಶಿವನೇ ಭಕ್ತರ ಇಷ್ಟಾರ್ಥಸಿದ್ಧಿಗಾಗಿ ಇಷ್ಟಲಿಂಗ ರೂಪದಲ್ಲಿ ಕರಕಮಲದಲ್ಲಿ ನೆಲೆಸಿದ್ದಾನೆ.
- ಇಷ್ಟಲಿಂಗ ಧಾರಣೆಯು ಅತ್ಯಂತ ಪ್ರಾಚೀನ ಕಾಲದಿಂದಲೇ ಪ್ರಚಲಿತದಲ್ಲಿದೆ.
- ವೀರಶೈವನು ಪ್ರತಿ ದಿನವೂ ಇಷ್ಟಲಿಂಗವನ್ನು ಭಕ್ತಿಯಿಂದ ಪೂಜಿಸಬೇಕು.
- ಬಾಹ್ಯ ಪುಷ್ಪಗಳಿಗಿಂತ ಭಾವಪೂರ್ಣವಾದ ಪುಷ್ಪಗಳಿಂದ ಇಷ್ಟಲಿಂಗ ಪೂಜೆಯನ್ನು ವೀರಶೈವನು ಕೈಕೊಳ್ಳಬೇಕು.
- ಲಿಂಗಧಾರಣೆಯಿಂದ ಎಲ್ಲರೂ ಶಿವನ ಸ್ವರೂಪವನ್ನೇ ಹೊಂದುವುದರಿಂದ ಜಾತಿಭೇದಗಳಾಗಲೀ ಲಿಂಗಭೇದಗಳಾಗಲೀ ತೊಡೆದು ಹೋಗುತ್ತವೆ. ಗುರು ಕಾರುಣ್ಯದಿಂದ, ಲಿಂಗಧಾರಣೆಯಿಂದ ಜಾತಿ, ವರ್ಣ, ಆಶ್ರಮಗಳ ಭೇದವಾಗಲೀ; ಸ್ತ್ರೀ ಪುರುಷರೆಂಬ ಲಿಂಗ ಭೇದವಾಗಲಿ ಕಳಚಿಹೋಗುತ್ತವೆ.
- ಲಿಂಗಧಾರಿಗೆ ಎಲ್ಲವೂ ಶಿವಮಯವಾದ್ದರಿಂದ ಯಾವಾಗಲೂ ಅಶುದ್ಧಿಯಾಗಲಿ, ಅಶುಚಿಯಾಗಲಿ, ಸ್ಪರ್ಶದೋಷವಾಗಲಿ, ಸೂತಕಗಳಾಗಲಿ ಇಲ್ಲವೇ ಇಲ್ಲ.
- ಅಭಕ್ಷ ಭಕ್ಷಣ ಹಾಗೂ ಅಪೇಯ ಪಾನಗಳನ್ನು ಲಿಂಗಧಾರಿಯು ಮಾಡಕೂಡದು.
- ಲಿಂಗಧಾರಿಗಳು ಸದಾಚಾರಿಯಾಗಿರತಕ್ಕದ್ದು.

- ಲಿಂಗಧಾರಿಯು ತೀರ್ಥಯಾತ್ರೆಗಳಿಗೆ ಹೋಗಬೇಕಾಗಿಲ್ಲ.
- ಲಿಂಗಧಾರಿಯು ಇಷ್ಟಲಿಂಗದ ಹೊರತಾಗಿ ಅನ್ಯ ದೇವರ ಉಪಾಸನೆ ಮಾಡಕೂಡದು.

ಜಂಗಮ

- ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತ ವೀರಶೈವಧರ್ಮದ ತತ್ವ, ನೀತಿ, ಆಚಾರಗಳನ್ನು ಜನರಿಗೆ ಬೋಧಿಸುವ ಹಾಗೂ ವೀರಶೈವರ ಆಚಾರ ವಿಚಾರಗಳನ್ನು ಪರಿಶೀಲಿಸುವದೇ ಜಂಗಮನ ಹೊಣೆಯಾಗಿದೆ.
- ಗುರು, ಲಿಂಗ, ಜಂಗಮರು ಪರಶಿವನ ಮೂರು ರೂಪಗಳಾದರೂ ಸಹ ಈ ಮೂರೂ ರೂಪಗಳಲ್ಲಿ ಜಂಗಮವೇ ಶ್ರೇಷ್ಠ.
- ಜಂಗಮನ ಪಂಚಮುದ್ರೆಗಳೆಂದರೆ ಸಮತೆಯೇ ಜೋಳಿಗೆ, ಶಿವಜ್ಞಾನವೇ ದಂಡ, ದಯೆಯೇ ಕಮಂಡಲು, ವೈರಾಗ್ಯವೇ ಭಿಕ್ಷಾ ಪಾತ್ರೆ, ಕ್ಷಮೆಯೇ ಭಸ್ಮದ ಗಟ್ಟಿ.
- ನಿಸ್ಸಂಗತ್ವ, ನಿರಾಭಾರಿತ್ವ, ನಿಸ್ಸೀಮತ್ವ, ನಿರುಪಾಧಿಕತ್ವ, ನಿರ್ದೇಹತ್ವ, ನಿರ್ಮಲತ್ವ, ನಿತ್ಯತ್ವ – ಇವೇ ಜಂಗಮದ ಲಕ್ಷಣಗಳಾಗಿದ್ದು ಆ ನಿಲುವಿಗೇರಿದವರು ಯಾರೇ ಆಗಿರಲಿ ಅವನು ಶಿವಯೋಗಿ
- ಜಂಗಮನು ಎಲ್ಲ ಮೋಹಪಾಶ, ವಾಸನಾದಿಗಳಿಂದ ವಿಮುಕ್ತನಾಗಿರಬೇಕು. ಆಸೆಯ ಧಿಕ್ಕರಿಸಿ ನಿರಾಸೆಯನಿಂಬುಗೊಂಡವನೇ ಮಹಾಜಂಗಮ.
- ಜಂಗಮ ಸಾಕ್ಷಾತ್ ಶಿವಸ್ವರೂಪನಾಗಿರುವುದರಿಂದ ಆತನ ಉಪೇಕ್ಷೆ ಸಲ್ಲದು.
- ಜಂಗಮ ತೃಪ್ತಿಯೇ ಲಿಂಗ ತೃಪ್ತಿ.
- ಚರಲಿಂಗ ರೂಪಿ ಜಂಗಮನನ್ನು ತನ್ನ ಮನೆಗೆ ಭಕ್ತಿಯಿಂದ ಕರೆತಂದು ತನ್ನಲ್ಲಿಯ ಅಷ್ಟಮದಗಳನ್ನು ಬಿಟ್ಟು, ನಿರುಪಾಧಿಕನಾಗಿ, ನಿರಪೇಕ್ಷಿತನಾಗಿ, ಮನಃಶುದ್ಧಿಯಿಂದ, ಷೋಡಶೋಪಚಾರದಿಂದ ಪೂಜಿಸಬೇಕು.

ಪಾದೋದಕ

- ಪರಶಿವನ ಪರಮಾನಂದ ಸ್ವರೂಪದ ನಿರ್ಮಲ ಜ್ಞಾನವೇ ತಾತ್ವಿಕವಾದ 'ಪಾದೋದಕ' ಸೇವನೆಯಾಗಿದೆ.
- ಗುರುವಿನ ಪಾದಪೂಜೆಯಿಂದ ದೊರೆತದ್ದು ಗುರುಪಾದೋದಕವೆಂದೂ, ಜಂಗಮನ ಪಾದಪೂಜೆಯಿಂದ ಲಭ್ಯವಾದದ್ದು ಜಂಗಮ ಪಾದೋದಕವೆಂದೂ ಮತ್ತು ಇಷ್ಟಲಿಂಗದ ಪೂಜೆಯಿಂದ ಲಭ್ಯವಾದುದು ಲಿಂಗ ಪಾದೋದಕವೆಂದು ಮೂರುವಿಧ. ಈ ತ್ರಿವಿಧ ಪಾದೋದಕಗಳನ್ನು ಸಾಕ್ಷಾತ್ ಆಚಾರದಿಂದಲೋ

ಅಥವಾ ಸಂಬಂಧಾಚಾರದಿಂದಲೋ ಪ್ರತಿನಿತ್ಯ ಸೇವಿಸುವುದರಿಂದ ಸ್ಥೂಲ, ಸೂಕ್ಷ್ಮ ಮತ್ತು ಕಾರಣಶರೀರಗಳು ಪರಿಶುದ್ಧವಾಗುತ್ತವೆ.

ಪ್ರಸಾದ

- ಪ್ರಸನ್ನ ಚಿತ್ತತೆಯನ್ನುಂಟು ಮಾಡುವುದು ಯಾವುದೋ ಅದೇ ಪ್ರಸಾದ.
- ನಾವು ಸೇವಿಸುವ ಪದಾರ್ಥವನ್ನು ಗುರು–ಲಿಂಗ ಜಂಗಮಕ್ಕೆ ಸಮರ್ಪಿಸುವ ಮೂಲಕ ಪವಿತ್ರ ಪ್ರಸಾದವನ್ನಾಗಿ ಮಾಡಿ ಉಪಭೋಗಿಸಬೇಕು.
- ಇಷ್ಟಲಿಂಗಕ್ಕೆ ರೂಪವನ್ನೂ, ಪ್ರಾಣಲಿಂಗಕ್ಕೆ ರುಚಿಯನ್ನೂ ಭಾವಲಿಂಗಕ್ಕೆ ತೃಪ್ತಿಯನ್ನೂ ಅರ್ಪಿಸಿ ಗುರು–ಲಿಂಗ–ಜಂಗಮ ಪ್ರಸಾದವೆಂದು ಭಾವಿಸಿ ಭೋಗಿಸಬೇಕು.
- ಅರ್ಪಿಸಿದ ಆಹಾರವಷ್ಟೇ ಪ್ರಸಾದವಲ್ಲ. ಭೋಗಿಸುವ ಷಡ್ವಿಷಯ, ದೇಹೇಂದ್ರಿಯಗಳೂ ಪ್ರಸಾದವೆನಿಸುತ್ತವೆ. ಯಾವ ಯಾವ ಇಂದ್ರಿಯದಿಂದ ಯಾವ ಸುಖ ದೊರೆಯುತ್ತದೆಯೋ ಅದನ್ನು ಶಿವನಿಗೆ ಅರ್ಪಿಸಿ ಆಯಾಯ ಇಂದ್ರಿಯದ ಮೂಲಕ ಪ್ರಸಾದ ರೂಪದಲ್ಲಿ ಸ್ವೀಕರಿಸಬೇಕು. ಈ ಸಮರ್ಪಣೆಯು ಸ್ಥೂಲ ಮತ್ತು ಸೂಕ್ಷ್ಮವೆಂದು ಎರಡು ವಿಧವಾಗಿದೆ.

ವಿಭೂತಿ

- ತಾತ್ವಿಕ ಅರ್ಥದಲ್ಲಿ ಭಸ್ಮವು 'ಪರಶಿವನ ಪ್ರಕಾಶ', 'ಚಿದ್ಭಸ್ಮ' ಎಂದು ಕರೆಯಲ್ಪಟ್ಟರೆ, ಇನ್ನೊಂದು ಅರ್ಥದಲ್ಲಿ 'ಜ್ಞಾನವೆಂಬ ಅಗ್ನಿಯಲ್ಲಿ ಎಲ್ಲ ಸ್ವಾರ್ಥಪರ ಕಾಮ(ಆಸೆ)ಗಳನ್ನು ದಹಿಸುವುದೇ ನಿಜವಾದ ಭಸ್ಮಧಾರಣೆ.
- ತೇಜಸ್ವಿಯನ್ನಾಗಿ ಮಾಡುವುದರಿಂದ 'ಭಸಿತ', ಪಾಪಗಳನ್ನು ಭಕ್ಷಿಸುವುದರಿಂದ 'ಭಸ್ಮ', ಐಶ್ವರ್ಯದಾಯಕವಾದದ್ದರಿಂದ 'ಭೂತಿ' ಮತ್ತು ರಕ್ಷಿಸುವುದರಿಂದ 'ರಕ್ಷಾ' ಎಂದು ವಿಭೂತಿಗೆ ಪರ್ಯಾಯ ನಾಮಗಳಿವೆ.

ರುದ್ರಾಕ್ಷಿ

- ರುದ್ರಾಕ್ಷಿಗಳನ್ನು ಬಹಿರಂಗದಲ್ಲಿ ವಿದ್ಯುಕ್ತವಾಗಿ, ನಿಷ್ಠಾಪೂರ್ವಕವಾಗಿ ಧಾರಣ ಮಾಡುವುದರ ಜೊತೆಗೆ ಅಂತರಂಗದಲ್ಲಿ 'ಸರ್ವಂ ಶಿವಮಯಂ ಜಗತ್' ಎಂಬ ಶಿವಜ್ಞಾನ, ಶಿವದೃಷ್ಟಿಯನ್ನು ಹೊಂದುವುದೇ ರುದ್ರಾಕ್ಷಧಾರಣೆಯ ಉದ್ದೇಶವಾಗಿದೆ.
- ರುದ್ರನ ನೇತ್ರಗಳಿಂದ ನೆಲಕ್ಕೆ ಬಿದ್ದ ಆ ಜಲಬಿಂದುಗಳೇ ಭಕ್ತರ ಅನುಗ್ರಹಕ್ಕೋಸ್ಕರ ರುದ್ರಾಕ್ಷಿಗಳಾದವು.
- ರುದ್ರಾಕ್ಷಗಳನ್ನು ಧರಿಸಿಕೊಂಡ ಸಾಧಕನು ಸದಾಚಾರ ಪಾರಾಯಣನಾಗಿಯೇ ಕಾಲ ಕಳೆಯುತ್ತಿರಬೇಕು.
- ರುದ್ರಾಕ್ಷಿ ಧಾರಣೆಯಿಂದ ದುರಿತಗಳ ನಿವೃತ್ತಿ, ಪುಣ್ಯ ಮತ್ತು ಮೋಕ್ಷದ ಪ್ರಾಪ್ತಿ.

- ರುದ್ರಾಕ್ಷಿಗಳನ್ನು ಧರಿಸುವ ಮುನ್ನ ಅವುಗಳ ಪೂರ್ವಾಶ್ರಯವನ್ನು ಗುರುಗಳಿಂದ ಕಳೆಯಬೇಕು.

ಮಂತ್ರ

- ಪ್ರಣವ ಸಹಿತವಾದ ಪಂಚಾಕ್ಷರ ಮಂತ್ರದಿಂದಲೇ ಪ್ರಪಂಚವು ರೂಪುಗೊಂಡಿದೆ.
- ಸಾಕ್ಷಾತ್ ಪರಶಿವ ಸ್ವರೂಪವಾದ ಪ್ರಣವದಿಂದ ಕೂಡಿದ ಪಂಚಾಕ್ಷರಮಂತ್ರವು (ಷಡಕ್ಷರಮಂತ್ರ) ಎಲ್ಲಾ ವಿದ್ಯೆಗಳ, ಎಲ್ಲಾ ತತ್ವಗಳ, ಎಲ್ಲಾ ಶಕ್ತಿಗಳ ಸ್ವರೂಪವಾಗಿದೆ.
- ಗುರುವಿನ ಅನುಗ್ರಹವಿಲ್ಲದೇ ಮಂತ್ರ ನಿಷ್ಫಲ. ಅದರಲ್ಲಿ ಚೈತನ್ಯವಿರದು, ಮಂತ್ರತ್ವವಿರದು. ಅದು ಕೇವಲ ಅಕ್ಷರಗಳ ಸಮೂಹವಾಗಿರುವುದು. ಆದರೆ ಅದೇ ಗುರುವಿನಿಂದ ಬಂದರೆ ಮಾತ್ರ ಮಂತ್ರವಾಗಿ ಸಫಲವಾಗುವದು.
- ಎಲ್ಲಾ ಕಾಲಗಳಲ್ಲಿ, ಎಲ್ಲೆಡೆಯಲ್ಲಿ, ಶಿವಪಂಚಾಕ್ಷರಿಯನ್ನು ಜಪಿಸಬೇಕು.
- ಮಂತ್ರವು ಪಾಪನಾಶಕವೂ, ಆತ್ಮಜ್ಞಾನ ಪ್ರಕಾಶಕವೂ ಆಗಿದೆ.

ಪಂಚಾಚಾರ

- ಗುರುವಿನ ಮೂಲಕ ಧಾರಣ ಮಾಡಿದ ಇಷ್ಟಲಿಂಗವನ್ನುಳಿದು ಅಧಿಕವಾದ ದೈವವು ಈ ಪೃಥ್ವಿಯ ಮೇಲೆ ಇನ್ನೊಂದಿಲ್ಲವೆಂದು ಭಾವಿಸಿ ಲಿಂಗಾನುಸಂಧಾನ ಮಾಡುವದೇ ಲಿಂಗಾಚಾರ.
- ಸದಾಚಾರವು ಎರಡು ಪ್ರಮುಖವಾದ ಸಂಗತಿಗಳನ್ನು ಒಳಗೊಂಡಿದ್ದು, ಮೊದಲನೇಯದು ಸತ್ಯಶುದ್ಧವಾದ ವೃತ್ತಿಯಿಂದಲೇ ಜೀವನವನ್ನು ನಿರ್ವಹಿಸಬೇಕು ಎಂಬುವದು, ಎರಡನೇಯದು ಅತಿಥಿಗಳನ್ನು ಸಾಕ್ಷಾತ್ ಶಿವಸ್ವರೂಪರೆಂದು ಭಾವಿಸಿ ಅವರ ಸೇವೆಗೈದು ಅವರನ್ನು ಸಂತೃಪ್ತಿಗೊಳಿಸಬೇಕೆಂಬುದಾಗಿದೆ.
- ಶಿವನ, ಶಿವಭಕ್ತನ ಹಾಗೂ ಅಷ್ಟಾವರಣದ ನಿಂದೆಯನ್ನು ಕೇಳದಿರುವುದು ಹಾಗೂ ಯಾರು ಶಿವಧರ್ಮದ ನಿಂದೆ ಮಾಡುತ್ತಾರೋ ಅಂತಹ ನಿಂದಕರನ್ನು ಘಾತಿಸುತ್ತೇನೆಂದು ಮನಸ್ಸು ಮಾಡುವುದೇ ಗಣಾಚಾರ.
- ಈ ಜಗತ್ತಿನಲ್ಲಿ ಎಲ್ಲ ಶಿವಭಕ್ತರು ಶ್ರೇಷ್ಠರಾಗಿದ್ದು, ನಾನವರ ಸೇವಕನೆಂದು ಭಾವಿಸಿ ವರ್ತಿಸುವುದೇ ಭೃತ್ಯಾಚಾರ.

ಷಟ್‌ಸ್ಥಲಗಳು

- ಸಾಧಕ ಲಿಂಗಾಂಗ ಸಮರಸವನ್ನು ಸಾಧಿಸುವ ಕ್ರಮವು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಆರು ಸ್ಥಲಗಳಿಂದ ವಿಶಿಷ್ಟವಾಗಿರುವುದರಿಂದ ಇದಕ್ಕೆ ಷಟ್‌ಸ್ಥಲ ಸಿದ್ಧಾಂತವೆಂದು ಕರೆಯುವರು.

ಜೀವನು ದೇವನತ್ತ ಸಾಗುವ ತನ್ನ ಯಾತ್ರೆಯ ಮಾರ್ಗದಲ್ಲಿ ಏರಬೇಕಾದ ಆರು ಮೆಟ್ಟಿಲುಗಳೇ ಷಟ್‌ಸ್ಥಲಗಳು.

- ಭಕ್ತಸ್ಥಲದ ಸಾಧಕನು ಅಹಂ ಮಮಗಳನ್ನು ಬದಿಗಿರಿಸಿ ತನಗಿಂತ ಅಧಿಕ ಪ್ರೀತಿ ರೂಪವಾದ ಭಕ್ತಿಯನ್ನು ಪರಶಿವನಲ್ಲಿರಿಸಿ ಗುರು–ಲಿಂಗ–ಜಂಗಮರನ್ನು ಪೂಜಿಸುತ್ತಾ ಆಚಾರಲಿಂಗದ ಅನುಸಂಧಾನ ಮಾಡುತ್ತಾನೆ.
- ಲಿಂಗದಲ್ಲಿಯೇ ಪರಮನಿಷ್ಠೆಯನ್ನಿರಿಸಿ ಶಿವಸ್ವರೂಪರಾದ ಗುರು–ಲಿಂಗ–ಜಂಗಮರೆ ಈ ಭೂಮಿಯಲ್ಲಿ ಪರಮಪೂಜ್ಯರು ಎಂಬ ನಿಶ್ಚಲ ನಂಬಿಗೆಯು ಇಂಬುಗೊಂಡ ಸ್ಥಲವೇ ಮಾಹೇಶ್ವರ ಸ್ಥಲ.
- ಜಲದಂತೆ ಜಲಾಂಗನಾದ ಮಾಹೇಶ್ವರನು ಮಾನಸಿಕವಾಗಿ ಪರಿಶುದ್ಧನಾಗಿರಬೇಕು.
- ಮಾಹೇಶ್ವರ ಸ್ಥಲದ ಸಾಧಕ ಸ್ವಾಧಿಷ್ಠಾನ ಚಕ್ರದಲ್ಲಿ ನೆಲೆನಿಂತ ಜ್ಯೋತಿರೂಪವಾದ ಗುರುಲಿಂಗವನ್ನು ಅನುಸಂಧಾನ ಮಾಡುವನು. ಇದು ಮಾಹೇಶ್ವರ ಸ್ಥಲದ ಆಂತರಿಕ ಯೌಗಿಕ ವಿಕಾಸ.
- ದೇಹೇಂದ್ರಿಯಗಳಲ್ಲಿ ನೆಲೆಗೊಳಿಸಲಾದ ಲಿಂಗಗಳಿಗೆ ತಾನು ಉಪಭೋಗಿಸುವ ವಿಷಯಗಳನ್ನೆಲ್ಲ ಸಮರ್ಪಿಸಿ ಅವುಗಳ ಪ್ರಸಾದವೆಂದು ಭಾವಿಸಿ, ಅದನ್ನು ಸ್ವೀಕರಿಸುತ್ತ ನಿತ್ಯ ಪ್ರಸನ್ನತೆಯನ್ನು ಚಿತ್ತದಲ್ಲಿ ಅಳವಡಿಸಿಕೊಂಡು ಅವಧಾನ ಭಕ್ತಿಯಿಂದ ಶಿವಲಿಂಗವನ್ನು ಅನುಸಂಧಾನ ಮಾಡುವವನೇ ಪ್ರಸಾದಿ.
- ಇಚ್ಛಾಶಕ್ತಿಯಿಂದ ಕೂಡಿಕೊಂಡಿರುವ ಅಘೋರ ಮುಖ ಸ್ವರೂಪದ ಶಿವಲಿಂಗಕ್ಕೆ ಸಾವಧಾನ ಭಕ್ತಿಯಿಂದ ನಿರಹಂಕಾರವೆಂಬ ಹಸ್ತದಿಂದ 'ಶಿ' ಕಾರ ಮಂತ್ರವನ್ನು ಜಪಿಸುತ್ತಾ ಕಣ್ಣಿನ ಮೂಲಕ ರೂಪ ಪದಾರ್ಥವನ್ನು ಸಮರ್ಪಿಸುವದೇ ಪ್ರಸಾದಿಯ ಆಂತರಿಕ ಪೂಜಾಕ್ರಮ.
- ಪ್ರಾಣಲಿಂಗಿ ಸ್ಥಲದಲ್ಲಿ ಸಾಧಕನು ಬಹಿರ್ಮುಖನಾಗಿ ಶ್ರದ್ಧಾಭಕ್ತಿಯಿಂದ ಶಿವಯೋಗ ಸಾಧನೆಯ ಕೈಗನ್ನಡಿಯಾದ ಇಷ್ಟಲಿಂಗವನ್ನು ತನ್ನ ಪ್ರಾಣವೆಂದು ತಿಳಿದು ಆಂತರಿಕವಾದ ಪ್ರಾಣಲಿಂಗವನ್ನು ಅನುಭಾವ ಭಕ್ತಿಯ ಮೂಲಕ ಅನುಸಂಧಾನಿಸಿ ಆತ್ಮಶಾಂತಿಯನ್ನು ಸಾಧಿಸುತ್ತಾನೆ.
- ಸಂಪೂರ್ಣವಾಗಿ ತನ್ನ ಎಲ್ಲ ಜವಾಬ್ದಾರಿಯನ್ನು ಭಗವಂತನಿಗೆ ಸಮರ್ಪಿಸಿ ನೆಮ್ಮದಿಯಿಂದ ಬದುಕುವವನೇ ಶರಣ.
- ಜೀವಾತ್ಮನು ಪರಮಾತ್ಮನಲ್ಲಿ ಬೆರೆತು ಒಂದಾಗುವ ಸಾಮರಸ್ಯದ ಸ್ಥಿತಿಯೇ ಐಕ್ಯಸ್ಥಲವಾಗಿದೆ.
- ಐಕ್ಯಸ್ಥಲದಲ್ಲಿ ಸಾಧಕನು ಚಿಚ್ಛಕ್ತಿಯುಕ್ತವಾದ ಪರಶಿವ ಮುಖ ಸ್ವರೂಪದ

ಮಹಾಲಿಂಗಕ್ಕೆ ಸಮರಸ ಭಕ್ತಿಯಿಂದ ಸದ್ಭಾವವೆಂಬ ಹಸ್ತದಿಂದ ಸಂಕಲ್ಪವೆಂಬ ಪದಾರ್ಥವನ್ನು ಮನಸ್ಸಿನ ಮೂಲಕ ಸಮರ್ಪಿಸುತ್ತಾನೆ.

ಸಾಮಾಜಿಕ ಚಿಂತನ

- ಗುರು, ಲಿಂಗ, ಜಂಗಮರಿಗೆ, ತನು, ಮನ, ಧನದಿಂದ ಮಾಡುವ ದಾಸೋಹ ಮೋಕ್ಷಕ್ಕೆ ಕಾರಣವಾಗುತ್ತದೆ.
- ವೀರಶೈವ ಸಾಧನಮಾರ್ಗಕ್ಕೆ ಶಿವದೀಕ್ಷೆಯೇ ಆರಂಭ. ಆ ದೀಕ್ಷೆಗೆ ಎಲ್ಲರಿಗೂ ಮುಕ್ತದ್ವಾರ. ಅದರಲ್ಲಿ ವರ್ಣಭೇದವಾಗಲಿ, ಆಶ್ರಮ ಭೇದವಾಗಲಿ, ಲಿಂಗಭೇದವಾಗಲಿ ಇಲ್ಲ.
- ಲಿಂಗಧಾರಿಗಳ ಮಧ್ಯದಲ್ಲಿ ಭೇದವಿಲ್ಲ. ಅವರು ಪರಸ್ಪರರಿಗೆ ಅನ್ಯೋನ್ಯವಾಗಿ ಅಭಿವಂದಿಸಬೇಕು.
